UNIVERSAL
LIBRARY
OU_202089
UNIVERSAL
LIBRARY

OSMANIA UNIVERSITY
COLLEGE LIBRARY.

ಶ್ರೀಃ

ಶ್ರೀ ವಿಷ್ಣುಪುರಾಣ.

ಸಂಪುಟ ೧.

ವಿದ್ಯಾನಂದ ಗ್ರಂಥಮಾಲಾಸಂಖ್ಯೆ ೧೦

ಈವರಿವಿಗೆ ಟೀಕಾತಾತ್ಪರ್ಯ ಸಹಿತ
ಪ್ರೂರೈಸಿರುವ ಪುಸ್ತಕಗಳು

ಭಗವದ್ಗೀತಾ: ಪ್ರತ್ಯೇಕ ಪ್ರತ್ಯೇಕವಾಗಿ
ಮೂಲ, ಶ್ರುತಿಪದ ಟೀಕಾ, ತಾತ್ಪರ್ಯಸಹಿತ ಬೆಲೆ ೪—೦—೦

ಕನ್ನಡ ತಾತ್ಪರ್ಯಸಹಿತ ವಿಷ್ಣುಪುರಾಣ ಒಂದನೆಯ ಅಂಶ ೨—೮—೦

ಮುಕುಂದಮಾಲಾ ಸ್ತೋತ್ರ ೦—೪—೦

ವಿವೇಕಚೂಡಾಮಣಿ (ಟೀಕಾ ತಾತ್ಪರ್ಯಸಹಿತ) ೨—೪—೦

ಮಹಿಮ್ನಸ್ತೋತ್ರ ೦—೪—೦

ಚಮತ್ಕಾರ ಚಿಂತಾಮಣಿ ಕಥೆ ೦- ೧೦ -೦

ರಘುವಂಶ, ಶ್ಲೋಕ, ಪದವಿಭಾಗ, ಅರ್ಥ, ತಾತ್ಪರ್ಯ,
ಆ ಕಾಂಕ್ಷೆಶಬ್ದಸಮಾಸ ವಿಶೇಷವಿಷಯ ಸಹಿತ ೧ನೇಸರ್ಗ ೧—೦—೦

೨ನೇ ಸರ್ಗ ೧—೦- ೦

ಇದರಂತೆಯೇ ಇರುವ (ಭಾರವಿಕೃತ) ಕಿರಾತಾರ್ಜು
ನೀಯ ಕಾವ್ಯದ ೧ನೇಸರ್ಗ ೦—೪—೦

ಶ್ಯಾಮಕುಬ್ಜ ಕಥೆ ೦—೪—೦

ಇನ್ನೂ ನಮ್ಮಲ್ಲಿ ಅನೇಕ ಪುಸ್ತಕಗಳು ದೊರೆಯುವುದರಿಂದ ಬೇಕಾದವರು ನಮಿಗೆ ಬರೆದು ಮಾದರಿಯಪ್ರತಿಗಳು ಪುಸ್ತಕ ಪಟ್ಟಿ ಸಹ ಉಚಿತವಾಗಿ ಪಡೆಯಬಹುದು.

ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಶ್ರೀಃ

ಕನ್ನಡ ತಾತ್ಪರ್ಯ ಸಹಿತ

ಶ್ರೀ ವಿಷ್ಣು ಪುರಾಣ

CHECKED 1956

ಪಾನ್ಯಂ ಸುಂದರಶಾಸ್ತ್ರಿಯವರಿಂದ ಟೀಕಿಸಲ್ಪಟ್ಟು

ವಿದ್ಯಾನಂದ ಸಂಪಾದಕ

ಬಿ ಆದಿನಾರಾಯಣಶಾಸ್ತ್ರಿಯಿಂದ

ಪ್ರ ಕ ಟ ತ ಮಾ ದು ದು

ಬೆಂಗಳೂರು

೧೯೧೪.

ಬೆಲೆ ರೂ. ೩-೪-೦] [ಹಾಸಲು ೦-೪-೦

ರಿಜಿಸ್ಟರ್ಡ್ ಕಾಪಿರೈಟ್

Checked 1965

ಕೆ, ಎಸ್, ಕೃಷ್ಣಯ್ಯರ್ ಬಿ, ಎ, ಯವರ
"ಐರಿಷ್" ಪ್ರೆಸ್,
ಬೆಂಗಳೂರು ಶಿಟ.

ವಿಜ್ಞಾಪನೆ

ಅನೇಕ ದೊಡ್ಡ ದೊಡ್ಡ ಉತ್ತಮ ಗ್ರಂಥಗಳು ಸರ್ವರಿಗೂ ಸುಲಭವಾಗಿ ದೊರೆಯಲೆಂಬ ಉದ್ದೇಶದಿಂದಲೇ ಮೂರುತಿಂಗಳಿಗೆ ಬಂದಾವರ್ತಿ ಪುಸ್ತಕಗಳರೂಪ ಪ್ರಕಟಿಸಲು ಏರ್ಪಡಿಸಿರುತ್ತೇವೆ. ಇದಕ್ಕೆ ಚಂದಾದಾರ ರಾಗತಕ್ಕವರು (ನಮ್ಮ ಆನುಕೂಲ್ಯಕ್ಕಾಗಿ) ಬಂದು(೧—೦—೦) ರೂಪಾಯಿ ಮುಂಗಡಕೊಟ್ಟಿರಬೇಕು. ಈ ಮೊಬಲಗು ಗ್ರಾಹಕರು ಅಪೇಕ್ಷಿಪಡುವ ಗ್ರಂಥದ ಕಡೆಯ ಸಂಪುಟದ ಬೆಲೆಯಲ್ಲಿ ಉತ್ತಾರವಮಾಡಿಕೊಡುವೆವು. ಈ ರೀತಿಯಾಗಿ ಸೇರತಕ್ಕವರಿಗೆ ಮಾತ್ರ ಪ್ರತಿಯೊಂದು ಗ್ರಂಥವನ್ನೂ ಉತ್ತಮವಾದ ಬೈಂಡುಮಾಡಿಸಿ ಟಪಾಲು ಹಾಸಲು ಇಲ್ಲದೆನೇ ೧೦೦ ಪುಟಗಳಿಗೆ ೦—೬—೦ ಆರು ಆಣೆಯಂತೆ ಮಾತ್ರ ರವಾನಿಸಿಕೊಡುವೆವು. ದೊಡ್ಡ ಗ್ರಂಥಗಳಾದರೆ, ಗ್ರಂಥದ ಯೋಗ್ಯತೆಗನುಸಾರವಾಗಿ ೪೦೦-೫೦೦ ಪುಟಗಳಂತೆ ಪ್ರತ್ಯೇಕ ಪ್ರತ್ಯೇಕ ಸಂಪುಟಗಳಾಗಿ (೩-೪) ಮೂರು ಅಥವಾ ನಾಲ್ಕು ತಿಂಗಳಿಗೆ ಬಂದಾವರ್ತಿ ಪ್ರಕಟವಮಾಡುವೆವು. ಗ್ರಾಹಕರಿಗೆ ಪ್ರಕಟವಾಗುವ ಯಾವದಾದೆರೊಂದು ಗ್ರಂಥವಾಗಲಿ, ಎಲ್ಲಾ ಗ್ರಂಥಗಳೂ ಆಗಲಿ, ಅವರು ಅಪೇಕ್ಷಿಪಟ್ಟರೀತಿಯಿಂದಲೇ ರವಾನಿಸಿ ಕೊಡುವೆವು.

ಚಂದಾದಾರರಾಗತಕ್ಕವರು ಅಡ್ವಾನ್ಸು ೧—೧—೦ ರೂಪಾಯನ್ನು ಮಣಿಯಾರ್ಡರು ಮೂಲ್ಕವಾಗಲಿ, ಇತರ ಪುಸ್ತಕಗಳನ್ನು ತರಿಸಿ ಕೊಳ್ಳುವ ವಿ. ಪಿ. ಮೂಲಕವಾಗಲಿ, ನಮಗೆ ತಲಪಿಸಬಹುದು ಚಂದಾದಾರರಲ್ಲದವರಿಗೆ ಮೇಲ್ಕಂಡ ಬೆಲೆಯಂತೆ ದೊರಿಯುಲಾರದು.

ಚಂದಾದಾರರಿಗೆ ಪೋಸ್ಟೇಜು ಬೀಳುವುದಿಲ್ಲ. ಗ್ರಾಹಕರು ಅಪೇಕ್ಷಿಪಡುವ ಪುಸ್ತಕದೊಂದಿಗೆ ಇನ್ನುಮುಂದೆ ಸೇರತಕ್ಕ ಚಂದಾದಾರರಿಗೆ ಅಡ್ವಾನ್ಸು ಮೊಬಲಗು ಸೇರಿಸಿ ವಿ. ಪಿ. ಮಾಡುತ್ತೇವೆ.

—ಈಗ ಪ್ರಕಟವಾಗುತಲಿರುವ ಗ್ರಂಥಗಳು—

ಶ್ರೀ ವಿಷ್ಣುಪುರಾಣ—ಕನ್ನಡ ಟೀಕಾಸಹಿತ ಸಮೂಲ,
(ಒನೇ ಅಂಶ ಪೂರೈಸಿರುತ್ತೆ)

ಶ್ರೀ ಶಂಕರವಿಜಯ—ಮೂಲ, ಕನ್ನಡ ಟೀಕು, ವಿಶೇಷವಿಷಯಗಳಿಗೆ
ಟಿಪ್ಪಣಿಗಳಸಹಿತ

ಕಿರಾತಾರ್ಜುನೀಯ—ಸಂಸ್ಕೃತಾಭ್ಯಾಸಿಗಳಿಗಾಗಿ ಶ್ಲೋಕ, ಪದ,
ಶಬ್ದ, ಅನ್ವಯ, ಆರ್ಥ, ತಾತ್ಪರ್ಯ, ಆಕಾಂಕ್ಷೆ, ವಿಶೇಷ
ವಿಷಯಗಳೊಂದಿಗೆ,

ಉಪದೇಶಸಾಹಸ್ರೀ—ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ
ಗ್ರಂಥ, ಮೂಲ, ಪ್ರತಿಪದಾರ್ಥ ತಾತ್ಪರ್ಯಸಹಿತ.

ಶ್ರೀಮಚ್ಛಂಕರಾಚಾರ್ಯ ಕೃತ ಸ್ತೋತ್ರರತ್ನಾವಳಿ—ಟೀಕಾ
ತಾತ್ಪರ್ಯಸಹಿತ

ಮುಂದೆಯೂ ಈ ವಿಧವಾದ ಉತ್ತಮಗ್ರಂಥಗಳೇ ಟೀಕಾತಾತ್ಪ
ರ್ಯಗಳೊಂದಿಗೆ ಪ್ರಕಟಿಸಲ್ಪಡುವುವು

ಈ ರೀತಿ ಪ್ರಕಟವಾಗುತಲಿರುವುದರಿಂದ ಬೇಕಾದವರು ಇಷ್ಟ
ವಾದ ಗ್ರಂಥವನ್ನಾಗಲಿ, ಎಲ್ಲಾ ಗ್ರಂಥಗಳನ್ನಾಗಲಿ, ಚಂದಾದಾರರಾಗಿ
ಸೇರಿ ಪಡೆಯಬಹುದು.

ಬಿ. ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್, ಶಂಕರಪುರ,
ಬೆಂಗಳೂರು ಸಿಟಿ

ಶ್ರೀ

ಉಪೋದ್ಘಾತ

ಚರಾಚರ ರೂಪವಾದ ಈ ಪ್ರಪಂಚದಲ್ಲಿ ಮಾನುಷಜನ್ಮವು ಅತಿದುರ್ಲಭವಾದುದು. ಇಂತಹ ನರಜನ್ಮವಂ ಹೊಂದಿದ ಬಳಿಕ ಅದನ್ನು ಸಾರ್ಥಕಗೊಳಿಸಲು ವಿವೇಕಸಂಪಾದನೆಯು ಅತ್ಯಂತ ಆವಶ್ಯಕವಾಗಿರುವುದು. ಇಂತಹ ವಿವೇಕಸಂಪಾದನೆಯಂ ಮಾಡದಿದ್ದೊಡೆ

"ಪ್ರಾಪ್ಯಚಾ ಪ್ಯುತ್ತಮಂ ಜನ್ಮ ಲಬ್ಧ್ವಾ ಜೇಂದ್ರಿಯ ಸೌಷ್ಠವಂ।
ನವೇತ್ಯಾತ್ಮ ಹಿತಂ ಯಸ್ತು ಸಭವೇದಾತ್ಮ ಘಾತುಕಃ ॥

ಸರ್ವೋತ್ತಮವಾದ ನರಜನ್ಮವಂ ಹೊಂದಿ ಇಂದ್ರಿಯ ಸಾಮರ್ಥ್ಯಯುಕ್ತನಾದವನು ತನ್ನ ಹಿತವನ್ನೇ ತಾನರಿತಿಳಿಯದಿದ್ದೊಡೆ ಅಂತಹಮಾನುಷ ಪಶುವು ಆತ್ಮಘಾತುಕನೆನಿಸುವನು" ಎಂಬುದಾಗಿ ಮಹಾಭಾರತದ ಶಾಂತಿ ಪರ್ವಮೊದಲಾದವುಗಳಿಂದ ತಿಳಿದುಬರುತ್ತದೆ ಇಂತಹ ವಿವೇಕಸಂಪಾದನೆಗೆ ವೇದ,ಪುರಾಣ ಮೊದಲಾದುವುಗಳ,ಅರ್ಥವಿಚಾರವು ಅತ್ಯವಶ್ಯಕವಾದುದು. ಇದೇಅರ್ಥವನ್ನೇ ಮನಸ್ಸಿನಲ್ಲಿ ಭಾವಿಸಿ ಲೋಕಾನುಗ್ರಹ ತತ್ಪರರೆನಿಸಿದ ಪರಾಶರಮಹರ್ಷಿಗಳು ತಮ್ಮ ಶಿಷ್ಯರಾದ ಮೈತ್ರೇಯರೆಂಬ ಮುನಿವರ್ಯರಂ ನಿಮಿತ್ತಮಾಡಿಕೊಂಡು ಎಂಟುಸಾವಿರ ಗ್ರಂಥಪರಿಮಿತವಾದ ಈ ವಿಷ್ಣುಪುರಾಣವಂ ರಚಿಸಿ, ಲೋಕಕ್ಕೆ ಪರಮೋಪಕಾರವಂ ಮಾಡಿರುವರು. ಪುರಾಣಗಳು "ಪ್ರಪಂಚ,ಸೃಷ್ಟಿ, ಸ್ಥಿತಿ,ಲಯಗಳನ್ನೂ ಪ್ರಾಣಿಗಳ ವಂಶಾವಳಿ ಮೊದಲಾದ ಅನೇಕವರ್ಣನೆಗಳನ್ನೂ ಬಳಗೊಂಡಿದ್ದರೂ ಮುಖ್ಯವಾಗಿ ಪರಮಾತ್ಮ ತತ್ವವನ್ನೂ, ಆತನ ಮಹಿಮೆಯನ್ನೂ ವಿಶದಪಡಿಸುತ್ತವೆ. ಇಂತಹ ಪುರಾಣಗಳು ಬ್ರಾಹ್ಮ, ಪಾದ್ಮ,

ವೈಪಣ್ಣವ, ವಾಯು ಮೊದಲಾಗಿ ಹದಿನೆಂಟು ಬಗೆಗಳಾಗಿರುವುವು. ಈ ಪ್ರಪಂಚದ ಸೃಷ್ಟಿಕರ್ತೃವೆನಿಸಿದ ಚತುರ್ಮುಖನ ನಾಲ್ಕು ಮುಖಗಳಿಂದಲೂ ತಾವಾಗಿಯೇ ಹೊರಟುಬಂದ ವೇದ ಚತುಷ್ಟಯವನ್ನು ವಿಭಾಗಮಾಡುವುದಕ್ಕಿಂತಲೂ ಮುಂಚೆಯೇ ಪ್ರಣೀತಗಳಾದುದರಿಂದ ಇವುಗಳಿಗೆ ಪುರಾಣಗಳೆಂದು ಹೆಸರಾಯಿತು. ಇಂತಹ ಪುರಾಣಗಳನ್ನು ನಿರ್ಮಿಸಿದವರು ವ್ಯಾಸಮಹರ್ಷಿಗಳು; ಸಮುಷ್ಟಿರೂಪದಿಂದಿದ್ದ ವೇದಸಮುದಾಯವನ್ನು ನಾಲ್ಕು ಭಾಗವಾಗಿ ವಿಭಾಗವಮಾಡಿದ ಕಾರಣ ಅಂತಹ ವಿಭಾಗಮಾಡಿದವರಿಗೆ ವ್ಯಾಸರೆಂತಲೂ ವೇದ ವ್ಯಾಸರೆಂತಲೂ ವ್ಯವಹಾರವಿರುವುದು. ಇಂತಹ ವ್ಯಾಸರಿಗೆ ಬ್ರಹ್ಮ, ಮನು, ಶಕ್ರ, ಬೃಹಸ್ಪತಿ, ಸೂರ್ಯ ಮೊದಲಾಗಿ ಇಪ್ಪತ್ತೆಂಟು ಹೆಸರುಗಳಿರುವುವು. ಆ ಇಪ್ಪತ್ತೆಂಟು ಮಂದಿಯಲ್ಲಿ ಪರಾಶರರೆಂಬವರೂ ಒಬ್ಬರು. ಇವರು ವಸಿಷ್ಠ ಮಹರ್ಷಿಯ ಮೊಮ್ಮಕ್ಕಳು; ಇದರಮುಖ್ಯ ತತ್ವವೇನೆಂದರೆ—ಕಲ್ಪದ ಆದಿಭಾಗದಲ್ಲಿ ಮಹಾಮಹಿಮ ನೆನಿಸಿದ ಚತುರ್ಮುಖನು ವೇದಪ್ರಕಾಶನಕ್ಕಿಂತಲೂ ಮುಂಚೆಯೇ ಆ ವೇದಪ್ರತಿಪಾದಿತಗಳಾದ ಅರ್ಥಗಳನ್ನೇ ಸಂಗ್ರಹಿಸಿ ಸುಲಭವಾಗಿ ತಿಳಯುವುದಕ್ಕೋಸ್ಕರ ಶತಕೋಟಿ ಗ್ರಂಥಪರಿಮಿತವಾದ ಒಂದುಗ್ರಂಥವನ್ನು ರಚಿಸಿದನು. ಇದನ್ನೇ ಬ್ರಾಹ್ಮಪುರಾಣವೆನ್ನುವರು. ಆ ಬಳಿಕ ಯುಗಕ್ರಮಾನುಸಾರ ಜನಗಳಲ್ಲಿ ಬುದ್ಧಿಶಕ್ತಿಯು ಕಡಿಮೆಯಾದಹಾಗೆಲ್ಲಾ ಅದೇವೇದಾರ್ಥ ಮೊದಲಾದ ಅಂಶಗಳನ್ನೇ ಸಂಗ್ರಹಿಸಿ ಕಾಂಡ, ವರ್ಗ, ಅಧ್ಯಾಯ ಮೊದಲಾದ ಸಂಕೇತಗಳಿಂದ ಚಿಕ್ಕಚಿಕ್ಕ ಗ್ರಂಥಗಳಾಗಿ ಮನು, ವ್ಯಾಸ ಮೊದಲಾದವರು ವಿರಚಿಸಿದರು, ಅವುಗಳಲ್ಲಿಯೂ ಈ ವಿಷ್ಣುಪುರಾಣವು ಅತ್ಯುಪಯುಕ್ತವಾದುದು, ಅನೇಕ ಅಪೂರ್ವ ವಿಷಯಗಳನ್ನೂ ಬಳಗೊಂಡಿರುವುದು. ಆತ್ಮ ತತ್ವವನ್ನು

ಸೃಷ್ಟಿಸ್ಥಿತಿ ಮೊದಲಾದುವುಗಳನ್ನೂ ಚನ್ನಾಗಿತಿಳಿಯಬೇಕೆಂದು ಅಪೇಕ್ಷಿಸುವ ಮುಮುಕ್ಷುವಿಗೆ ಇದರಂತೆ ಸುಲಭವಾಗಿಯೂ, ವಿದವಾಗಿಯೂ ವಿಷಯಗಳನ್ನು ತಿಳಿಯಪಡಿಸುವಂತಹ ಪುರಾಣವು ಮತ್ತಾವದೂ ಇರುವುದಿಲ್ಲ. ಇಂತಹಪುರಾಣವನ್ನು ಕನ್ನಡದಲ್ಲಿ ಟೀಕಸಬೆಕಂಬದಾಗಿ ಅನೇಕ ಮಂದಿ ಆಪ್ತಮಿತ್ರರಿಂದಲೂ, ದೊಡ್ಡಮನುಷ್ಯರಿಂದಲೂ ಪ್ರೇರಿತನಾದನಾನು ಈ ಗ್ರಂಥವನ್ನು ನನ್ನಬುದ್ಧಿಶಕ್ತ್ಯನುಸಾರ ಟೀಕಿಸಿರುವೆನು. ಅದರಲ್ಲಿ ಗುಣಾಂಶಗಳೇನಾದರೂ ಇದ್ದಲ್ಲಿ ಸರ್ವಶಕ್ತನೆನಿಸಿದ ಆ ಭಗವತ್ಸ್ವರೂಪಿಯಾದ ನನ್ನಗುರುವಿಗೆ ಸಂಬಂಧ ಪಟ್ಟುವಲ್ಲದೆ ನನ್ನವಲ್ಲ; ದೋಷಜ್ಞರು ಇದರಲ್ಲಿರುವ ದೋಷಗಳನ್ನು ತಿಳಿಯಪಡಿಸಿದಲ್ಲಿ ಮುಂದಿನ ಮುದ್ರಣಲ್ಲಿ ಸರಿಪಡಿಸಿಕೊಳ್ಳುವೆನೆಂದು ವಿನಯಪೂರ್ವಕವಾಗಿ ಪಾರ್ಥಿಸುತ್ತೇನೆ—

ಇಂತು ವಿದ್ವದ್ವಿಧೇಯ ಪಿ. ಸುಂದರಶಾಸ್ತ್ರಿ
ಬೆಂಗಳೂರು ಸೈಂಟ್‌ಜೋಸಫ್‌ಕಾಲೇಜ್ ಪಂಡಿತ
ಶಂಕರಪುರ, ಬೆಂಗಳೂರು ಸಿಟಿ.

ಆನಂದ ಸಂವತ್ಸರ
ಜ್ಯೇಷ್ಠ ಶುಕ್ಲ
ಪ್ರತಿದಿಗ್ ಶುಕ್ರವಾರ



ಶ್ರೀ

ಶ್ರೀವಿಷ್ಣುಪುರಾಣ

ಆಂಶ ೧.

—ವಿಷಯಾನುಕ್ರಮಣಿಕೆ—

ಅಧ್ಯಾಯ.		ಪುಟ.
೧	ಮೈತ್ರೇಯನು ಪರಾಶರಮುನಿಯಂ ಕುರಿತು ಈ ಪ್ರಪಂಚದಸೃಷ್ಟಿ, ಸ್ಥಿತಿ, ಲಯ ಕ್ರಮಗಳನ್ನು ಪ್ರಶ್ನೆಮಾಡುವಿಕೆ, ಮತ್ತು ಈ ಪ್ರಶ್ನೆಗೆ ಉತ್ತರ	೩
೨	ಭಗವತ್ಸ್ವರೂಪನಿರೂಪಣ	೧೦
,,	ಪ್ರಳಯಸ್ವರೂಪ ನಿರೂಪಣ	೧೩
,,	ಕಾಲಸ್ವರೂಪ ನಿರೂಪಣ	೧೯
,,	ಮಹದಾದಿ ಸೃಷ್ಟಿಕ್ರಮ	೨೨
,,	ಬ್ರಹ್ಮಾಂಡ, ಚತುರ್ಮುಖ ಇವರ ಉತ್ಪತ್ತಿವರ್ಣನೆ,	೨೪
,,	ಸಂಕ್ಷೇಪವಾಗಿ ಜಗತ್ಸೃಷ್ಟಿಕ್ರಮವರ್ಣನೆ	೨೯
೩	ನಿತ್ಯನೆನಿಸಿದ ಚತುರ್ಮುಖನಿಗೆ ಉತ್ಪತ್ತಿವಿನಾಶಗಳನ್ನು ವಾರಣಮಾಡುವಿಕೆ	೩೪
,,	ಕಾಲಸ್ವರೂಪವರ್ಣನೆ	೩೫
,,	ಕಾಲವಿಭಾಗಕ್ರಮ	೩೬
,,	ಮನ್ವಂತರ ವರ್ಣನೆ	೩೮
,,	ಮನ್ವಂತರಪ್ರಮಾಣ	೪೯
,,	ಚತುರ್ಮುಖನ ಅಹೋರಾತ್ರ ಪ್ರಮಾಣವರ್ಣನೆ	೪೦

ಅಧ್ಯಾಯ.		ಪುಟ.
,,	ಮನುಷ್ಯರು, ಪಿತೃಗಳು, ದೇವತೆಗಳು ಚತುರ್ಮುಖ ಇವರುಗಳ ಆಯುಃಪರಿಮಾಣ ನಿರೂಪಣ; ಕೃತ, ತ್ರೇತಾ, ದ್ವಾಪರ, ಕಲಿಪ್ರಮಾಣ	೪೨
೪	ನಾರಾಯಣ ಶಬ್ದಾರ್ಥ ನಿರ್ವಚನ	೪೪
,,	ವರಾಹಾವತಾರನಿರೂಪಣ	೪೬
,,	ಭೂದೇವಿಯುನಂಹನಮೂರ್ತಿಯನ್ನುಹೊಗಳುವಿಕೆ	,,
,,	ಭೂಮ್ಯುದ್ಧಾರನಿರೂಪಣ	೪೯
೫	ಅವಿದ್ಯಾ (ಮಾಯಾ) ವರ್ಣನೆ	೬೫
,,	ತಿರ್ಯಕ್ಸೃಷ್ಟಿ ವರ್ಣನೆ	೬೬
,,	ಇಂದ್ರಿಯದೋಷನಿರೂಪಣ	೬೮
,,	ನವವಿಧತುಷ್ಟಿಗಳ ವರ್ಣನೆ	೬೯
,,	ಅಷ್ಟವಿಧಸಿದ್ಧಿನಿರೂಪಣ	೭೦
,,	ಇರ್ಪತ್ತೆಂಟುವಿಧ ಪಶುಜಾತಿನಿರೂಪಣ	೭೨
,,	ದೇವಸೃಷ್ಟಿನಿರೂಪಣ (ಸಂಗ್ರಹ)	೭೫
,,	ಮಾನುಷ ಸೃಷ್ಟಿವರ್ಣನೆ (ಸಂಗ್ರಹ)	೭೫
,,	ಪಂಚಭೂತಸೃಷ್ಟಿವರ್ಣನೆ	೭೫
,,	ರಾಕ್ಷಸಸೃಷ್ಟಿ ವರ್ಣನೆ	೭೯
,,	ಪಿತೃಸೃಷ್ಟಿಕ್ರಮ	೮೦
,,	ಮಾನುಷ ಸೃಷ್ಟಿ ಕಾಲನಿರೂಪಣ	೮೦
,,	ರಾಕ್ಷಸ, ಯಕ್ಷರ ಸೃಷ್ಟಿಕಾಲನಿರೂಪಣ	೮೨
,,	ಸರ್ಪಸೃಷ್ಟಿ ಸರ್ಪ ನಪುಂಸಕ ಶಬ್ದ ನಿರ್ವಚನ	೮೩
,,	ಪಶುಜಾತ್ಯುತ್ಪತ್ತಿ, ಕ್ರಮ	೮೪

ಅಧ್ಯಾಯ.		ಪುಟ
,,	ವೃಕ್ಷ, ಲತಾ, ಕಂದ ಮೂಲಗಳ ಉತ್ಪತ್ತಿ	,,
,,	ಗ್ರಾಮ್ಯಾರಣ್ಯ ಪಶುವಿಭಾಗಕ್ರಮ	೪೫
,,	ವೇದ, ಛಂದಸ್ಸು ಮೊದಲಾದವುಗಳ ಆವಿರ್ಭಾವನಿರೂಪಣ	,,
೬	ಚಾತುರ್ವರ್ಣ್ಯ ಸೃಷ್ಟ್ಯುದ್ಭವವರ್ಣನೆ	೬೨
,,	ಮಾನುಷ ಜನ್ಮದ ಉತ್ತಮತ್ವವರ್ಣನೆ	೬೭
,,	ದ್ವೇಷಾಸೂಯಾದಿಗಳ ಉತ್ಪತ್ತಿ	೬೪
,,	ಅಷ್ಟವಿಧ ಸಿದ್ಧಿಗಳು (ಪ್ರಕಾರಾಂತರ)	೬೯
,,	ಧಾನ್ಯವಿಭಾಗಕ್ರಮ	೧೦೧
,,	ಪಂಚಮಹಾಯಜ್ಞಾಚರಣ ಫಲವರ್ಣನೆ	೧೦೩
,,	ಚಾತುರ್ವರ್ಣ್ಯದವರಿಗೆ ಆ ಆ ಕರ್ಮಾಚರಣೆಯಿಂದುಂಟಾಗುವ ಫಲಗಳು	೧೦೪
೭	ಚತುರ್ಮುಖನು ಪ್ರಜಾವೃದ್ಧಿಗಾಗಿ ಭೃಗು ಮೊದಲಾದ ಬಂಬತ್ತು ಮಂದಿ ಬ್ರಹ್ಮರನ್ನೂ ಅವರ ಪತ್ನಿಯರನ್ನೂ ಸೃಷ್ಟಿಮಾಡಲು ಕಾರಣ	೧೦೯
,,	ಅರ್ಧನಾರೀಶ್ವರೋತ್ಪತ್ತಿ	೧೧೧
,,	ದಕ್ಷಬ್ರಹ್ಮನ ವಂಶವರ್ಣನೆ	೧೧೪
೮	ನೀಲಲೋಹಿತ ರುದ್ರಸೃಷ್ಟ್ಯುದ್ಭವವರ್ಣನೆ	೧೨೪
೮	ಅಷ್ಟಮೂರ್ತಿ ಸ್ವರೂಪನಿರೂಪಣ	೧೨೫
,,	ದಾಕ್ಷಾಯಣಿಯು ಪಾರ್ವತಿಯಾಗಿ ಜನಿಸುವಿಕೆ	೧೨೮
,,	ಭೃಗುವಂಶವರ್ಣನೆ	,,
,,	ಲಕ್ಷ್ಮೀ ನಾರಾಯಣರ ಸರ್ವಾತ್ಮಕತ್ವ ವರ್ಣನೆ	೧೩೯
೯	ದುರ್ವಾಸಮುನಿಯು ಲೋಕಸಂಚಾರ	೧೪೭

ಅಧ್ಯಾಯ.		ಪುಟ.
,,	ದುರ್ವಾಸಮುನಿಯು ಇಂದ್ರನಿಗೆ ಶಾಪಕೊಡುವಿಕೆ	೧೪೦
,,	ದೈತ್ಯದಾನವರಿಂದ ಇಂದ್ರನಿಗೆ ಪರಾಜಯ	೧೪೬
,,	ಪರಾಜಿತರಾದ ದೇವತೆಗಳು ಬ್ರಹ್ಮನನ್ನು ಮೊರೆಹೊಗುವಿಕೆ	,,
,,	ಬ್ರಹ್ಮಾದಿ ದೇವತೆಗಳು ಕ್ಷೀರಸಮುದ್ರವಂ ಸಾರ್ದು ವಿಷ್ಣುವನ್ನು ಸ್ತೋತ್ರಮಾಡುವಿಕೆ	೧೪೭
,,	ವಿಷ್ಣುವು ದೇವತೆಗಳನ್ನು ಕ್ಷೀರಸಮುದ್ರಮಥನಕ್ಕಾಗಿ ಪ್ರೇರಿಸುವಿಕೆ	೧೫೯
,,	ದೇವದಾನವರು ಕ್ಷೀರಸಮುದ್ರವಂ ಮಥನಮಾಡುವಿಕೆ	೧೬೧
,,	ಕೂರ್ಮಾವತಾರ ನಿರೂಪಣವು	೧೬೩
,,	ಕಾಮಧೇನು, ಲಕ್ಷ್ಮೀ, ಪಾರಿಜಾತ, ಅಪ್ಸರಸ್ತ್ರೀಯರು, ಚಂದ್ರ, ಕಾಲಕೂಟ, ಮೊದಲಾದವುಗಳ ಉತ್ಪತ್ತಿ	೧೬೪
,,	ದೇವ, ಋಷಿ, ಗಂಧರ್ವಾದಿಗಳು, ಶ್ರೀದೇವಿಯನ್ನು ಸ್ತೋತ್ರಮಾಡುವಿಕೆ	೧೬೭
,,	ವಿಷ್ಣುವು ಮಾಯಾರೂಪದಿಂದ ಅಮೃತವಂ ದೇವತೆಗಳಿಗೆ ಕೊಡುವಿಕೆ	೧೭೪
,,	ಇಂದ್ರನು ಮರಳಿ ಸ್ವರ್ಗಾಧಿಪತ್ಯವಂ ಹೊಂದಿದುದು	೧೮೯
,,	ಇಂದ್ರಕೃತ ಶ್ರೀಸ್ತುತಿ	೧೯೧
೧೦	ಭೃಗು ಕರ್ತೃಕಸೃಷ್ಟಿ	೧೯೫
೧೧	ಸ್ವಾಯಂಭುವ ಮನುವಂಶವರ್ಣನೆ	೧೯೮
,,	ಧ್ರುವೋಪಾಖ್ಯಾನ	೧೯೮
೧೨	ಪುರುಷಸೂಕ್ತಾನುಸಾರ ಧ್ರುವನು ವಿಷ್ಣುವನ್ನು ಸ್ತೋತ್ರಮಾಡುವಿಕೆ	೨೨೫

ಈ ಪುಸ್ತಕದ ಪ್ರತಿಗಳು

ಬೆಂಗಳೂರು ಶಂಕರಪುರದಲ್ಲಿರುವ

ವಿದ್ಯಾನಂದ ಆಫೀಸ್‌ನಲ್ಲಿ ದೊರೆಯುತ್ತವೆ.

ಶ್ರೀಃ.

ಓನ್ನಮಃ ಪರಮಾತ್ಮನೇ

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಪ್ರಥಮೋಧ್ಯಾಯಃ

ಶ್ಲೋ॥ ಯಸ್ಮಾ ದಿದಂ ಜಗ ದಜಾಯತ ಯತ್ರ ತಿಷ್ ಠ್ಯಂತೇ ಸಮಸ್ತ ಮಿದ ಮಸ್ತ ಮುಪೈತಿ ಯತ್ರ । ತಸ್ಮೈ ನಮ ಸ್ಸದಸ ದಾದಿ ವಿಕಲ್ಪಶೂನ್ಯ ಚೈತನ್ಯಮಾತ್ರ ವಪುಷೇ ಪುರುಷೋತ್ತ ಮಾ ಯ * ॥ ೧ ॥ ಅಂಶೈ ಷ್ಷಡ್ಭಿ ಸ್ಸಮಾಕೀರ್ಣ ಮಂಗೈ ರ್ವೇದ ಮಿವಾ ಪರಂ । ಪುರಾಣಂ ಮೈಷ್ಣವಂ ಚಕ್ರೇ ಯ ಸ್ತಂ ವಂದೇ

ಚರಾಚರರೂಪವಾದ ಈ ಪ್ರಪಂಚವು, ಆದಿಯಲ್ಲಿ ಯಾವನ ಸಾನ್ನಿಧ್ಯವಿಶೇಷದಿಂದ ಉತ್ಪತ್ತಿಯನ್ನು ಪಡೆಯಿತೋ, ಯಾವನಲ್ಲಿ ನೆಲೆ ಗೊಂಡು, ಯಾವನಿಂದಲೇ ಕಾಪಾಡಲ್ಪಡುತ್ತಿದೆಯೋ, ಕೊನೆಯಲ್ಲಿ ಯಾವನಲ್ಲಿ ಸೇರಿಹೋಗುತ್ತದೆಯೋ, ಅಂತಹ, ಸದಸದ್ವಿಲಕ್ಷಣನೂ, ಚಿತ್ಸ್ವರೂಪನೂ, ಸರ್ವಾಂತರ್ಯಾಮಿಯೂ ಆಗಿರುವ, ಪರಮಾತ್ಮ ತನ್ನು ನಮಸ್ಕರಿಸುತ್ತೇನೆ ॥೧॥ ಮತ್ತು, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರು ಅಂಗಗಳಿಂದ ಕೂಡಿರುವ ವೇದಗಳಂತೆ, ಆರು ಭಾಗಗಳಿಂದ ಕೂಡಿರುವುದಾಗಿಯೂ, ವಿಷ್ಣುವಿನ ಮಹಿಮೆಯನ್ನೂ, ಜೀವಾತ್ಮಪರಮಾತ್ಮಸ್ವರೂಪಗಳನ್ನೂ, ಮೋಕ್ಷ ಸ್ವರೂಪವನ್ನೂ, ಮೋಕ್ಷಸಾಧನೋಪಾಯಗಳನ್ನೂ ಪ್ರತಿಪಾದಿಸುವ, ಪುರಾಣಶ್ರೇಷ್ಠವೆನಿಸುವ ವಿಷ್ಣುಪುರಾಣವನ್ನು ರಚಿಸಿ, ಶಿಷ್ಯನಾದ ಮೈತ್ರೇಯನೆಂಬ ಋಷಿಕುಮಾರನನ್ನು ನಿಮಿತ್ತಮಾಡಿಕೊಂಡು, ಯಾ ವನು ಲೋಕಾನುಗ್ರಹಾರ್ಥವಾಗಿ ಪ್ರಕಾಶಪಡಿಸಿದನೋ, ಅಂತಹ, ಉ

---

* ಈ ಶ್ಲೋಕವು ಪೂರ್ವಾರ್ಧದಲ್ಲಿ ''ತಟಸ್ಥಲಕ್ಷಣ'' ದಿಂದ, ಪರಮಾತ್ಮನಿಗೆ ಜಗತ್ಕಾರಣತ್ವವನ್ನೂ, ಉತ್ತರಾರ್ಧದಲ್ಲಿ ''ಸ್ವರೂಪ ಲಕ್ಷಣ'' ದಿಂದ, ಆ ಪರಮಾತ್ಮನು ನಿರ್ವಿಕಲ್ಪಚೈತನ್ಯ ಮಾತ್ರನೆಂಬುದನ್ನೂ, ತಿಳಿಯ ಪಡಿಸುತ್ತದೆ.

ಪರಾಶರಂ * ॥ ೨ ॥ ತತ್ತ್ವೀನ ಯಃ ಶ್ಚಿದಚಿದೀಶ್ವರತತ್ಸ್ವಭಾವ
ಭೋಗಾಪವರ್ಗತದುಪಾಯಗತೀ ರುದಾರಃ । ಸಂದರ್ಶಯ ನ್ನಿ
ರ ಮಿಮೀತ ಪುರಾಣರತ್ನಂ ತಸ್ಮೈ ನಮೋ ಮುನಿವರಾಯ ಪರಾ
ಶರಾಯ ॥ ೩ ॥

ಪರಾಶರಂ ಮುನಿವರಂ ಕೃತಪೌರ್ವಾಹ್ಣಿಕಕ್ರಿಯಂ । ಮೈತ್ರೇ
ಯಃ ಪರಿಪಪ್ರಚ್ಛ ಪ್ರಣಿಪತ್ಯಾ ಭಿವಾದ್ಯ ಚ ॥ ೦ ॥ ತ್ವತ್ತೋಹಿ
ವೇದಾಧ್ಯಯನ ಮಧೀತ ಮಖಿಲಂ ಗುರೋ! । ಧರ್ಮಶಾಸ್ತ್ರಾಣಿ
ಸರ್ವಾಣಿ ತಥಾ ಜ್ಞಾನಿ ಯಥಾ ಕ್ರಮಂ ॥ ೪ ॥ ತ್ವತ್ಪ್ರಸಾದಾ
ನ್ಮುನಿಶ್ರೇಷ್ಠ ಮಾ ಮನ್ಯೇನಾ ಕೃತಶ್ರಮಂ । ವಕ್ಷ್ಯಂತಿ ಸರ್ವ
ಶಾಸ್ತ್ರೇಷು ಪ್ರಾಯಶೋ ಯೇ ಪಿ ತದ್ವಿದಃ ॥ ೫ ॥ ಸೋಹ ಮಿ

ದಾರಚಿತ್ತನೂ, ಬ್ರಹ್ಮಜ್ಞಾನಿಗಳಲ್ಲಿ ಅಗ್ರಗಣ್ಯನೂ ಆದ, ವಸಿಷ್ಠ ಮಹ
ರ್ಷಿಯ ಮೊಮ್ಮಗನಾದ ಪರಾಶರಮುನಿಯಂ ವಂದಿಸುವೆನು ॥ ೨-೫ ॥

ಪೂರ್ವಕಾಲದಲ್ಲಿ ಮೈತ್ರೇಯನೆಂಬ ಋಷಿಕುಮಾರನು, ಉಷಃ
ಕಾಲದಲ್ಲಿ ಎದ್ದು, ಸ್ನಾನವಂ ಮಾಡಿ, ವಿಧ್ಯುಕ್ತವಾಗಿ ತನ್ನ ನಿಯಮಗ
ಳನ್ನು ಸಿರವೇರಿಸಿ, ಆಸನದಲ್ಲಿ ಸುಖಾಸೀನನಾದ ಪರಾಶರಮುನಿಯಂ
ಕಂಡು, ದಂಡಾಕಾರವಾಗಿ ಸಾಷ್ಟಾಂಗಪ್ರಣಾಮವಂ ಗೈದು, ವಿಜ್ಞಾಪಿ
ಸಿಕೊಂಡುದೆಂತೆಂದರೆ ॥ ೦ ॥ ಎಲೌ ಗುರುವೇ! ನಾನು ನಿನ್ನ ಸನ್ನಿಧಿ
ಯಲ್ಲಿ ನಾಲ್ಕು ವೇದಗಳನ್ನೂ ಆರು ವೇದಾಂಗಗಳನ್ನೂ, ಸಕಲಧರ್ಮ
ಶಾಸ್ತ್ರಗಳನ್ನೂ, ನಿಯಮದಿಂದ ಅಧ್ಯಯನಮಾಡಿದೆನು ॥ ೪ ॥ ಸಾಮಾನ್ಯ
ವಾಗಿ ಶಾಸ್ತ್ರಜ್ಞರೆಲ್ಲರೂ, ನನ್ನನ್ನು ಸಕಲಶಾಸ್ತ್ರಗಳಲ್ಲಿಯೂ, ಸಂಪೂರ್ಣ
ವಾದ ಪರಿಶ್ರಮವುಳ್ಳವನೆಂದು ಹೇಳುತ್ತಾರೆ। ಇದೆಲ್ಲವೂ ತವ್ಕ ಚರಣಾ
ನುಗ್ರಹಫಲವೇಸರಿ ॥೫॥ ಎಲೌ ಸರ್ವಜ್ಞನೆನಿಸಿ, ಪರಮದಯಾಳುವಾದ
ಗುರುವೇ, ಈ ಪ್ರಪಂಚವು ಆದಿಯಲ್ಲಿ ಹುಟ್ಟಿದುದುಹೇಗೆ? ಸೃಷ್ಟಿಗಿಂ
ತಲೂ ಪೂರ್ವದಲ್ಲಿ ಯಾವರೀತಿಯಿಂದ ಇದ್ದಿತು? ಮುಂದೆ ಯಾವರೀತಿ

ಚ್ಛಾಮಿ ಸರ್ವಜ್ಞ ! ಶ್ರೋತುಂ ತ್ವತ್ತೋ ಽ ಯಥಾ ಜಗತ್ । ಬ
ಭೂವ ಭಗವಂಶ್ಚ ಯಥಾ ಮಹಾಭಾಗ ಭವಿಷ್ಯತಿ ॥ ೪ ॥ ಯ
ನ್ಮಯಂ ಚ ಜಗದ್ಬ್ರಹ್ಮನ್ । ಯತಶ್ಚೈತಚ್ಚರಾಚರಂ । ಲೀನ
ಮಾಸೀದ್ಯಥಾ ಯತ್ರ ಲಯಮೇಷ್ಯತಿ ಯತ್ರ ಚ ॥೫ ॥ ಯತ್ಪ್ರ
ಮಾಣಾನಿ ಭೂತಾನಿ ದೇವಾದೀನಾಂ ಚ ಸಂಭವಂ । ಸಮು
ದ್ರಪರ್ವತಾನಾಂ ಚ ಸಂಸ್ಥಾನಂ ಚ ತಥಾ ಭುವಃ ॥ ೬ ॥ ಸೂರ್ಯಾ
ದೀನಾಂ ಚ ಸಂಸ್ಥಾನಂ ಪ್ರಮಾಣಾಂ ಮುನಿಸತ್ತಮ । ದೇವಾದೀ
ನಾಂ ತಥಾ ವಂಶಾ ವಂಶಾನುಚರಿತಾನಿ ಚ ॥ ೭ ॥ ಕಲ್ಪಾ
ಕಲ್ಪವಿಭಾಗಾಂಶ್ಚ ಚತುರ್ಯುಗವಿಕಲ್ಪಿತಾನ್ । ಕಲ್ಪಾಂತಸ್ಯ ಸ್ವ
ರೂಪಂ ಚ ಯುಗಧರ್ಮಾಂಶ್ಚ ಕೃತ್ಸ್ನಶಃ ॥ ೮ ॥ ದೇವರ್ಷಿಪಾ

ಯಾಗಿ ಪರಿಣಮಿಸುವುದು ? ॥ ೪ ॥ ಈ ಜಗತ್ತಿನ ಸ್ವರೂಪವು ಎಂಥಾ
ದ್ದು ? ಯಾವಸ್ಥಿನ ಪ್ರಾಪ್ತಿಸ್ಥಿತು ? ಎಲ್ಲಿ ನೆಲಗೊಂಡಿದ್ದಿತು ? ಕೊನೆಗೆ ಎಲ್ಲಿ
(ಐಕ್ಯ) ಲಯವಾಗುವುದು ? ॥ ೫ ॥ ಈ ಸೃಷ್ಟಿಗೆ ಉಪಾದಾನ ಕಾರಣವು
ಯಾವುದು ? ನಿಮಿತ್ತ ಕಾರಣವು ಯಾವುದು ? ಯಾವ ಆಶ್ರಯದಿಂದಿರು
ವುದು ? ॥ ೬ ॥ ಭೂತಗಳ ಸ್ವರೂಪವು ಎಂಥಾದ್ದು ? ಇವುಗಳ ಪ್ರಮಾ
ಣವೇನು ? ದೇವತೆಗಳೂ, ಸಮುದ್ರಗಳೂ, ಪರ್ವತಗಳೂ, ಭೂಮಿಯೂ,
ಹೇಗೆ ಹುಟ್ಟಿದವು, ಇವುಗಳು ಯಾವ ಪ್ರಮಾಣದಲ್ಲಿ ಸಂಸ್ಥಿತವಿವೆ ? ॥ ೭ ॥
ಸೂರ್ಯಾದಿ ಮಂಡಲಗಳೂ, ಗ್ರಹಗಳೂ, ಯಾವ ಆಧಾರದಿಂದ ಎಲ್ಲಿ ಇವೆ ?
ಇವುಗಳಸ್ಪರೂಪ ಎಂಥಾದ್ದು ? ಇವುಗಳ ಪರಿಮಾಣವೆಷ್ಟು ? ದೇವತೆ
ಗಳೇ ಮೊದಲಾದವರ ವಂಶಾವಳಿಗಳನ್ನೂ, ಹದಿನಾಲ್ಕು ಮನುಗಳನ್ನೂ, ಮ
ನ್ವಂತರಗಳನ್ನೂ ॥ ೮ ॥ ಪ್ರಳಯಸ್ವರೂಪವನ್ನೂ, ಪ್ರಳಯ ವಿಭಾಗ
ಕ್ರಮಗಳನ್ನೂ, ಕೃತ, ತ್ರೇತಾ, ದ್ವಾಪರ,ಕಲಿಗಳೆನಿಸುವ ನಾಲ್ಕು ಯುಗ
ಗಳ ಸ್ವರೂಪ, ವಿಭಾಗಕ್ರಮಗಳನ್ನೂ, ಪ್ರಳಯವಾದ ತರುವಾಯ ಈ
ಜಗತ್ತು ಇರತಕ್ಕ ಸ್ಥಿತಿಯನ್ನೂ, ಆ ಆ ಯುಗಗಳಲ್ಲಿ ಆಚರಿಸಬೇಕಾದ

* ಕಾರ್ಯಕ್ಕೆ ಮುಂಚೆಯೇ ಉತ್ಪತ್ತಿಯಲ್ಲಿ ಅನುಭವಿತವು, ಬಂದು ಹುಟ್ಟುವುದೇ ಕಾರಣ, ಅದಕ್ಕೆ ಮೃತ್ತು, ಉಪಾದಾನ ಕಾರಣವೆಂತಲೂ, ಕುಂಬಾರನು ನಿಮಿತ್ತಕಾರಣವಂತಲೂ, ಪೃಥ್ವಿಯೇ ಆಧಾರವೆಂತಲೂ ತಿಳಿಯಬೇಕು.

ರ್ಥಿವಾನಾಂ ಚ ಚರಿತಂ ಯನ್ಮಹಾಮುನೇ! । ವೇದಶಾಖಾಪ್ರಣ
ಯನಂ ಯಥಾವದ್ವ್ಯಾಸಕರ್ತೃಕಂ ॥ ೯ ॥ ಧರ್ಮಾಂಶ್ಚ ಬ್ರಾಹ್ಮ
ಣಾದೀನಾಂ ತಥಾ ಚಾಶ್ರಮವಾಸಿನಾಂ । ಶ್ರೋತುಮಿಚ್ಛಾಮ್ಯ ಶೇ
ಷಂ ಸರ್ವಂ ತ್ವತ್ತೋ ವಾಸಿಷ್ಠನಂದನ! ॥೧೦ ॥ ಬ್ರಹ್ಮರ್ಷೇ! ಪ್ರ
ಸಾದಪ್ರವಣಂ ಕುರುಷ್ವ ಮಯಿ ಮಾನಸಂ । ಯೇನಾಹಮೇತ
ಜ್ಜಾನೀಯಾಂ ತ್ವತ್ಪ್ರಸಾದಾನ್ಮಹಾಮುನೇ! ॥೧೧॥ಶ್ರೀಪರಾಶರಃ॥
ಸಾಧು ಮೈತ್ರೇಯ! ಧರ್ಮಜ್ಞ ಸ್ಮಾರಿತೋಽಸ್ಮಿ ಪುರಾತನಂ। ಪಿ
ತುಃ ಪಿತಾ ಮೇ ಭಗವಾ೯ ವಸಿಷ್ಠೋ ಯದುವಾಚ ಹ ॥ ೧೨ ॥
ವಿಶ್ವಾಮಿತ್ರಪ್ರಯುಕ್ತೇನ ರಕ್ಷಸಾ ಭಕ್ಷಿತಃ ಪುರಾ । ಶ್ರು

ಧರ್ಮಗಳನ್ನೂ ॥ ೮ ॥ ದೇವತೆಗಳು, ಋಷಿಗಳು, ರಾಜರುಗಳು, ಇವ
ರುಗಳ ಚರಿತೆಗಳನ್ನೂ, ವ್ಯಾಸಮಹರ್ಷಿಯಿಂದ ಮಾಡಲ್ಪಟ್ಟ, ವೇದವಿ
ಭಾಗಕ್ರಮವನ್ನೂ ॥ ೯ ॥ ಬ್ರಾಹ್ಮ, ಕ್ಷತ್ರ, ವೈಶ್ಯ, ಶೂದ್ರರೆಂಬ, ನಾ
ಲ್ಕುವರ್ಣದವರು ಆಚರಿಸಬೇಕಾದ ಧರ್ಮಗಳನ್ನೂ, ಬಹ್ಮಚರ್ಯ, ಗಾ
ರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸಗಳೆಂಬ, ನಾಲ್ಕುವಿಧಗಳಾದ ಆಶ್ರಮಸ್ವ
ರೂಪಗಳನ್ನೂ, ಆ ಆ, ಆಶ್ರಮದವರು ಆಚರಿಸಬೇಕಾದ ಧರ್ಮಗಳ
ನ್ನೂ, ನಾನು ವಿಶದವಾಗಿ ನಿನ್ನಿಂದ ತಿಳಿದು ಕೊಳ್ಳಬೇಕೆಂಬ ಕುತೂಹ
ಲವು ನನಿಗೆ ಬಹಳವಾಗಿರುವುದು ॥ ೧೦ ॥ ಎಲಾ೨, ಬ್ರಹ್ಮಿಷ್ಠನಾದ ಪ
ರಾಶರ ಮುನಿಯೇ ! ಈ ವಿಧವಾದ ನನ್ನ ಕೋರಿಕೆಯಂ ನಿನ್ನ ಹೊರತು
ಮತ್ತಾ್ಯರೂ ಸಫಲಗೊಳಿಸಲಾರರು ! ಆದುದರಿಂದ ನನ್ನಲ್ಲಿ ಅನುಗ್ರಹ
ವನ್ನಿಟ್ಟು ಇವುಗಳೆಲ್ಲವಂ ವಿಶದವಾಗಿ ತಿಳುಹಬೇಕು ಎಂದು ವಿನಯ
ದಿಂದ ನಮ್ರನಾಗಿ ಕೈಮುಗಿದು ಕೊಂಡು ನಿಂತಿರುವ, ಶಿಷ್ಯನಾದ ಮೈ
ತ್ರೇಯನಂ ಕಂಡು, ಪರಮದಯಾಳುವೆನಿಸಿದ ಪರಾಶರಮುನಿಯು ಹೇಳಿ
ದುದೆಂತೆಂದರೆ ॥ ೧೧॥ ಅಯ್ಯಾ, ಧರ್ಮಜ್ಞನಾದ ಮೈತ್ರೇಯನೇ !
ಈ ರೀತಿಯಾದ ನಿನ್ನ ಪ್ರಶ್ನೆಯಿಂದ, ಪೂರ್ವದಲ್ಲಿ ನನ್ನ ತಾತನಾದ ವಸಿ
ಷ್ಠಮಹರ್ಷಿಯು ಹೇಳಿದ್ದ ಮಾತುಗಳೆಲ್ಲವೂ, ಈಗ ನನಿಗೆ ನೆನಪಿಗೆ
ಬಂದುವು ॥ ೧೨ ॥ ಪೂರ್ವದಲ್ಲಿ ವಿಶ್ವಾಮಿತ್ರಮಹರ್ಷಿಯಿಂದ ಪ್ರೇರಿತ
ನಾದ ಕಲ್ಮಾಷಪಾದನೆಂಬ ರಾಕ್ಷಸನು, ನನ್ನ ತಂದೆಯಾದ ಶಕ್ತಿಮಹ

ತಸ್ಯಾತ್ತಸ್ಯತಃ ಕ್ರೋದೋ ವೈತ್ರೇಯಾ ! ಸೀನ್ಮವಾತುಲಃ॥೧೫॥
ತತೋಽಹಂ ರಕ್ಷಸಾಂ ಸತ್ರಂ ವಿನಾಶಾಯ ಸಮಾರಭಂ । ಭಸ್ಮೀ
ಕೃತಾಶ್ಚ ಶತಶಸ್ತಸ್ಮಿ ಸತ್ರೇ ನಿಶಾಚರಾಃ ॥ ೧೪ ॥ ತತಸ್ಸಂ
ಕ್ಷೀಯಮಾಣೇಷು ತೇಷು ರಕ್ಷಸ್ವಶೇಷತಃ । ಮಾಮುವಾಚ ಮ
ಹಾಭಾಗೋ ವಸಿಷ್ಠೋ ಸ್ಮತ್ಪಿತಾಮಹಃ ॥ ೧೫ ॥ ಅಲಮತ್ಯಂತ
ಕೋಪೇನ ತಾತ ! ಮನ್ಯುವಿಮಂ ಜಹಿ । ರಾಕ್ಷಸಾ ನಾಪರಾ
ಧ್ಯಂತಿ ಪಿತುಸ್ತೇ ವಿಹಿತಂ ಹಿ ತತ್ ॥ ೧೬ ॥ ಮೂಢಾನಾಮೇವ
ಭವತಿ ಕ್ರೋಧೋ ಜ್ಞಾನವತಾಂ ಕುತಃ । ಹನ್ಯತೇ ತಾತ! ಕಃ
ಕೇನ ಯತಸ್ಸ್ವಕೃತಭುಕ್ಪುಮಾ ॥ ೧೭ ॥ ಸಂಚಿತಸ್ಯಾಪಿ ಮ

ಷಿಯನ್ನು ನುಂಗಿದನು ನಾನು ಆ ಸಮಾಚಾರವಂತಿಳಿದು, ಉಗ್ರವಾದ ಕೋಪವಂತಾಳಿ ॥ ೧೩ ॥ ರಾಕ್ಷಸರಂ ನಿರ್ಮೂಲಮಾಡುವುದಕ್ಕಾಗಿ, ಬಂದು ಯಜ್ಞವಂ ಮಾಡಲಾರಂಭಿಸಿದೆನು, ಆ ಯಜ್ಞದಲ್ಲಿ ನೂರಾರು ಮಂದಿ ರಾಕ್ಷಸರು ಸುಟ್ಟು ಬೂದಿಯಾದರು ॥ ೧೪ ॥ ಈ ರೀತಿಯಿಂದ ರಾಕ್ಷಸರೆಲ್ಲರೂ ಸಂಪೂರ್ಣವಾಗಿ ನಾಶಹೊಂದುತ್ತಿರಲಾಗಿ, ನನ್ನ ತಾತನಾದ, ಮಹಾಮಹಿಮೆಯುಳ್ಳ ವಸಿಷ್ಠನು, ನನ್ನ ಬಳಿಗೆಬಂದು ಹೇಳಿದುದೆಂತೆಂದರೆ॥೧೫॥ಅಯ್ಯಾ ಪರಾಶರನೇ, ಅತ್ಯುಗ್ರವಾದ ಈ ಕೋಪದಿಂದ ಫಲವೇನು ? ಸೈರಣೆಯಂಹೊಂದಿ, ಈ ಯಜ್ಞವನ್ನು ಇಲ್ಲಿಗೆ ನಿಲ್ಲಿಸು, ರಾಕ್ಷಸರು ಅಪರಾಧಿಗಳಲ್ಲಾ, ರಾಕ್ಷಸರು ನಿನ್ನ ತಂದೆಯನ್ನು ನುಂಗಿದುದು ಹಿಂದಿನ ಜನ್ಮದ ಪಾಪಫಲವೇ ಸರಿ ॥೧೬॥ ಕೋಪವು ಯುಕ್ತಾಯುಕ್ತವಿವೇಕಜ್ಞಾನರಹಿತರಾದ, ಮೂಢರಿಗೇ ಹೊರತು,ಜ್ಞಾನಿಗಳಿಗೆ ಎಲ್ಲಿಯದು? ಪರ್ಯಾಲೋಚಿಸಿದಲ್ಲಿ ಕೋಪಿಯೂ, ಕೋಪಕ್ಕೆ ಪಾತ್ರನೂ, ಇವರಿಬ್ಬರೂ ಪರಮಾತ್ಮರೂಪದಿಂದ ಬಂದಾಗಿಯೇ ಕಾಣುವರಲ್ಲದೆ, ಪರಸ್ಪರಭೇದವಿಲ್ಲಾ ಮತ್ತು ಮನುಷ್ಯನು, ತಾನು ಹಿಂದಿನಜನ್ಮದಲ್ಲಿ ಮಾಡಿದ ಸುಕೃತ, ದುಷ್ಕೃತಗಳನ್ನು ಈ ಜನ್ಮದಲ್ಲಿ ಸುಖದುಃಖರೂಪವಾಗಿ ಅನುಭವಿಸುತ್ತಾನೆಯೇ ಹೊರತು, ಬಬ್ಬನಿಂದ ಮತ್ತೊಬ್ಬನು ಯಾವವಿಧವಾದ ಸುಖದುಃಖಗಳನ್ನೂ ಪಡೆಯಲಾರನು. ಆ ಪರಮಾತ್ಮನೊಬ್ಬನೇ ಎಲ್ಲರಲ್ಲಿಯೂ,ಯಾವಾಗಲೂ ನೆಲೆಗೊಂಡಿರುವಕಾರಣ, ಕೊಲ್ಲುವನಾರು?

ಹತಾ ವತ್ಸ ! ಕ್ಲೇಶೇನ ಮಾನವೈಃ । ಯಶಸಸ್ತಪಸಶ್ಚೈವ ಕ್ರೋ
ಧೋ ನಾಶಕರಃ ಪರಂ ॥ ೧೪ ॥ ಸ್ವರ್ಗಾಪವರ್ಗವ್ಯಾಸೇಧಕಾ
ರಣಂ ಪರಮರ್ಷಯಃ । ವರ್ಜಯಂತಿ ಸದಾ ಕ್ರೋಧಂ ತಾತ !
ಮಾ ತದ್ವಶೋ ಭವ ॥ ೧೫ ॥ ಅಲಂ ನಿಶಾಚರೈರ್ದಗ್ಧೈರ್ದುರ್ಮೇ
ರ್ನಿರಪರಾಧಿಭಿಃ । ಸತ್ರಂ ತೇ ವಿರಮತ್ವೇತತ್ ಕ್ಷಮಾಸಾರಾ ಹಿ
ಸಾಧವಃ ॥ ೧೬ ॥ ಏವಂ ತಾತೇನ ತೇನಾಹಮನುನೀತೋ ಮ
ಹಾತ್ಮನಾ । ಉಪಸಂಹೃತವಾ ಸತ್ರಂ ಸದ್ಯಸ್ತದ್ವಾಕ್ಯಗೌರ
ವಾತ್ ॥ ೧೭ ॥ ತತಃ ಪ್ರೀತಸ್ಸಭಗವಾ ವಸಿಷ್ಠೋ ಮುನಿಸತ್ತ
ಮಃ । ಸಂಪ್ರಾಪ್ತಶ್ಚ ತದಾ ತತ್ರ ಪುಲಸ್ತ್ಯೋ ಬ್ರಹ್ಮಣಸ್ಸು
ತಃ ॥ ೧೮ ॥ ಪಿತಾಮಹೇನ ದತ್ತಾರ್ಘ್ಯಃ ಕೃತಾಸನಪರಿಗ್ರಹಃ ।

ಕೊಲ್ಲಿಸಿಕೊಳ್ಳುವನಾರು ? ॥ ೧೩ ॥ ಮನುಷ್ಯರು ಬಹಳವಾಗಿ ಮನೋ
ವಾಕ್ಕಾಯಕ್ಲೇಶಗಳಿಂದ ಸಂಪಾದಿಸಿದ, ಕೀರ್ತಿ, ತಪಸ್ಸು ಮೊದಲಾದ
ವುಗಳಿಗೆ ಕೋಪವು ದೊಡ್ಡಹಗೆಯಾಗಿ, ಅವುಗಳನ್ನು ನಾಶಗೊಳಿಸು
ವುದು ॥ ೧೪ ॥ ಬ್ರಹ್ಮರ್ಷಿಗಳಾದ ಮುನಿಗಳು, ಸ್ವರ್ಗಮೋಕ್ಷಗಳಿಗೆ ಪ್ರತಿ
ಬಂಧಕವಾದ ಕೋಪವನ್ನು ದೂರವಾಗಿ ತಳ್ಳಿಬಿಡುವರು ಆದುದರಿಂದ
ಅಂತಹ ಕೋಪಕ್ಕೆ ನೀನು ಬಳಗಾಗಬೇಡ ॥೧೫॥ ಸಜ್ಜನರು ಇತರರಿಂದ
ತಮಗೆ ಯಾವ ವಿಧವಾದ ದುಃಖಗಳುಂಟಾದರೂ, ಅವುಗಳೆಲ್ಲವನ್ನೂ, ಸಹಿ
ಸಿಕೊಂಡು, ಅವರ ಅಪರಾಧಗಳನ್ನು ಮನ್ನಿಸುವಂತೆ, ನೀನೂ, ನಿರಪರಾಧಿ
ಗಳಾದುದರಿಂದ, ದಯನೀಯರಾಗಿ, ಈವಿಧವಾದ ನಿನ್ನ ಶಿಕ್ಷೆಗೆ ಪಾತ್ರರ
ಲ್ಲದ, ಈ ರಾಕ್ಷಸವಂಶವನ್ನೇ ನಾಶಗೊಳಿಸುವ ಈಯಜ್ಞವನ್ನು ಇಲ್ಲಿಗೆ
ನಿಲ್ಲಿಸಿ, ಶಾಂತನಾಗು, ಎಂದು ವಸಿಷ್ಠನು ಹೇಳಲು, ॥೧೬॥ ತಂದೆಯಂತೆ
ಪೂಜ್ಯನೂ, ಮಹಾಮಹಿಮನೂ, ನನಗೆ ಪಿತಾಮಹನೂ ಆದ, ವಸಿಷ್ಠನ
ಸದುಪದೇಶವನ್ನು ಶಿರಸಾವಹಿಸಿ, ಕೂಡಲೇ ಯಜ್ಞವನ್ನು ನಿಲ್ಲಿಸಿದೆನು॥
ಪಿತಾಮಹನೆನಿಸಿದ ವಸಿಷ್ಠನು, ತನ್ನ ಮಾತನ್ನು ಉಲ್ಲಂಘಿಸದೆ, ನಾನು
ನಡೆಯಿಸಿದುದಕ್ಕಾಗಿ, ಸಂತೋಷಪಡುತ್ತಿರಲು, ಬ್ರಹ್ಮನ ಮಗನೆನಿ
ಸಿದ, ಪುಲಸ್ತ್ಯನಂಬಾತನು, ಆಕಾಲದೊಳಲ್ಲಿಗೆ ಬಂದನು ॥ ೧೭ ॥
ಆಗ ವಸಿಷ್ಠನಾತನಂ ಕಂಡು, ಹರ್ಷಿತನಾಗಿ, ಅರ್ಘ್ಯಾದಿಗಳಿಂದ ಸತ್ಕ

ಮಾಮುವಾಚ ಮಹಾಭಾಗೋ ಮೈತ್ರೇಯ! ಪುಲಹಾಗ್ರಜಃ ॥ ಪುಲಸ್ತ್ಯಃ ॥ ಮೈರೇ ಮಹತಿ ಯದ್ಯಾಕ್ಯಾದ್ಗುರೋರದ್ಯಾಶ್ರಿತಾಕ್ಷಮಾ । ತ್ವಯಾ ತಸ್ಮಾತ್ತಸ್ಮಮಸ್ತಾನಿ ಭವಾ೯ ಶಾಸ್ತ್ರಾಣಿ ವೇತ್ಸ್ಯತಿ ॥ ೨೪ ॥ ಸಂತತೇರ್ನ ಮಮ ಚ್ಛೇದಃ ಕ್ರುದ್ಧೇನಾಪಿ ಯತಃ ಕೃತಃ । ತ್ವಯಾ ತಸ್ಮಾನ್ಮಹಾಭಾಗ! ದದಾಮ್ಯನ್ಯಂ ಮಹಾವರಂ ॥ ೨೫ ॥ ಪುರಾಣಸಂಹಿತಾಕರ್ತಾ ಭವಾ೯ ಸತ್ಸ ಭವಿಷ್ಯತಿ । ದೇವತಾಪಾರಮಾರ್ಧ್ಯಂ ಚ ಯಥಾವದ್ವೇತ್ಸ್ಯತೇ ಭವಾ೯ ॥೨೬॥ * ಪ್ರವೃತ್ತೇ ಚ ನಿವೃತ್ತೇ ಚ ಕರ್ಮಣ್ಯಸ್ತಮಲಾ

ರಿಸಿ, ಕುಶಲಪ್ರಶ್ನೆಯಂ ಗೈದನು, ದಿವ್ಯವಾದ ಆಸನವನ್ನಿತ್ತನು, ಬಳಿಕ ಆಸನದೊಳ್ ಸುಖಾಸೀನನಾಗಿ, ಪುಲಹಸಿಗೆ ಅಗ್ರಜನಾದ ಪುಲಸ್ತ್ಯನು, ನನ್ನಂ ನೋಡಿ ಹೇಳಿದುದೆಂತೆಂದರೆ ॥ ೨೩ ॥ ಆಯ್ಯಾ! ರಾಕ್ಷಸರೊಡನ ಸಿನಗುಂಟಾಗಿದ್ದ ಈ ವೈರದಲ್ಲಿ ನೀನು ಗುರುವಿನ ಮಾತಿನಿಂದ ಸೈರಣೆಯಂ ತಂದುಕೊಂಡು, ರಾಕ್ಷಸನಾಶಕವಾದ ಯಜ್ಞವಂ ನಿಲ್ಲಿಸಿ, ನಿಮ್ಮ ತಾತನ ವಾಕ್ಯವಂ ಸಫಲಗೊಳಿಸಿದೆಯಾದುದರಿಂದ ನಿನಿಗ ಗುರೂಪದೇಶವಿಲ್ಲದೆಯೇ ಸಕಲಶಾಸ್ತ್ರಗಳೂ ಹೊಳೆಯಲಿ ॥ ೨೪ ॥ ನೀನಿಷ್ಟು ಕೋಪಿಸಿಕೊಂಡರೂ, ನನ್ನ ವಂಶವು ಸಂಪೂರ್ಣವಾಗಿ ಹಾಳಾಗದಂತೆ,ಉಳಿಸಿರುವಕಾರಣ, ನಾನು ನಿನಿಗ ಮತ್ತೊಂದು ಉತ್ತಮವಾದ ವರವನ್ನು ಕೂಡುವೆನು ॥ ೨೫॥ ವೇದಗಳಂತೆ ಗೂಢಗಳಾದ ಪುರಾಣಗಳನ್ನು ಲೋಕದ ಉಪಕಾರಕ್ಕಾಗಿ ರಚನಮಾಡತಕ್ಕ ಸಾಮರ್ಥ್ಯವು ಮಾತ್ರವಲ್ಲದೆ ದೇವತೆಗಳ ಪರಮಾರ್ಥಜ್ಞಾನವನ್ನೂ, ಆ ಆ, ದೇವತೆಗಳಿಗೆ ಉಚಿತಗಳಾದ ಮಹಿಮೆ, ರೂಪ, ಗುಣ, ಕರ್ಮ, ಸ್ವಭಾವಗಳೊಡನೆ ವಿಶದವಾಗಿ ತಿಳಿಯತಕ್ಕಜ್ಞಾನವೂ ನಿನಗುಂಟಾಗಲಿ ॥ ೨೬ ॥ ಎಲೈ ಮಗುವೇ!

---

* ಇಹಚಾಮುತ್ರಕಾಮ್ಯಾಯಂತ್, ಪ್ರವೃತ್ತಮಿತ್ಯುಚ್ಯತೇ, ವೈರಾಗ್ಯ ಜ್ಞಾನ ಪೂರ್ವಂಯನ್ನಿವೃತ್ತಮಿಷ್ಯತೇ, ಫಲಾಪೇಕ್ಷೆಯಿಂದ ಇಹಪರಗಳ ಸುಖಕ್ಕಾಗಿ, ಆಚರಿಸತಕ್ಕ ಧರ್ಮವೇ ಪ್ರವೃತ್ತಿಧರ್ಮವೆಂದೂ, ಫಲಾಭಿಸಂಧಿ ಇಲ್ಲದೆ ವೈರಾಗ್ಯ,ಮತ್ತು ಜ್ಞಾನ ಪೂರ್ವಕವಾಗಿ ಆಚರಿಸತಕ್ಕದ್ದೇ ನಿವೃತ್ತಿಧರ್ಮವೆಂದೂ, ಧರ್ಮಜ್ಞರು ಹೇಳುವರು

ಮತಿಃ ।ಮತ್ಪ್ರಸಾದಾದಸಂದಿಗ್ಧಾ ತವ ವತ್ಸ ! ಭವಿಷ್ಯತಿ॥೨೬॥
ತತಶ್ಚ ಪ್ರಾಹ ಭಗವಾ೯ ವಸಿಷ್ಠೋ ಮೇ ಪಿತಾಮಹಃ । ಪುಲ
ಸ್ತ್ಯೇನ ಯದುಕ್ತಂ ತೇ ಸರ್ವಮೇತದ್ಭವಿಷ್ಯತಿ ॥ ೨೪ ॥ ಇತಿ
ಪೂರ್ವಂ ವಸಿಷ್ಠೇನ ಪುಲಸ್ತ್ಯೇನ ಚ ಧೀಮತಾ । ಯದುಕ್ತಂ
ತತ್ಸಕೃತಂ ಯಾತಿ ತ್ವತ್ಪ್ರಸಾದಾದಖಿಲಂ ಮಮ ॥ ೨೫ ॥ ಸೋ
ಹಂ ವದಾಮ್ಯಶೇಷಂತೇ ಮೈತ್ರೇಯ ! ಪರಿಪೃಚ್ಛತೇ । ಪುರಾಣ
ಸಂಹಿತಾಂ ಸಮ್ಯಕ್ ತಾಂ ನಿಬೋಧ ಯಥಾತಥಂ ॥ ೩೦ ॥ ವಿ
ಷ್ಣೋಸ್ಸಕಾಶಾದುದ್ಭೂತಂ ಜಗದತ್ರೈವ ಚ ಸ್ಥಿತಂ । ಸ್ಥಿತಿಸಂ

---

*ಮೋಹಪೂರ್ವಕವಾಗಿ ಕಾಮ್ಯಗಳೆನಿಸುವ, ಪ್ರವೃತ್ತಿಧರ್ಮದಲ್ಲಿಯೂ, ಜ್ಞಾನದಿಂದೊಡಗೂಡಿ, ನಿಷ್ಕಾಮವೆನಿಸುವ, ನಿವೃತ್ತಿಮಾರ್ಗದಲ್ಲಿಯೂ, ನಿನ್ನ ಬುದ್ಧಿಯು, ನನ್ನ ಅನುಗ್ರಹದಿಂದ ಸಂದೇಹವಿಲ್ಲದ ಪ್ರತಿಭೆಯನ್ನು ಹೊಂದಲಿ, ಎಂಬದಾಗಿ ಪುಲಸ್ತ್ಯನು ವರವಂ ಕೊಡಲು ॥೨೩॥ ಆಬಳಿಕ ಷಡ್ಗುಣೈಶ್ವರ್ಯಸಂಪನ್ನನಾದ ವಸಿಷ್ಠಮಹರ್ಷಿಯು ನನ್ನಂ ನೋಡಿ, "ಅಯ್ಯಾ ಪರಾಶರನೇ ! ಪೂಜ್ಯನಾದ ಪುಲಸ್ತ್ಯನು ಕೊಟ್ಟ ವರಗಳೆಲ್ಲವೂ ನಿನಿಗೆ ಸಫಲಗಳಾಗಿ ಪರಿಣಮಿಸಲಿ" ಎಂಬದಾಗಿ ಪರಮಾನುಗ್ರಹವಂ ಮಾಡಿದನು ॥ ೨೪ ॥ ಎಲೌ ಮೈತ್ರೇಯನೇ ! ನೀನೀಗ ನನ್ನನ್ನು ಈರೀತಿಯಾಗಿ ಪ್ರಶ್ನೆಮಾಡಿದುದರಿಂದ ಪೂರ್ವದಲ್ಲಿ ಪರಮರ್ಷಿಎನಿಸಿದ ವಸಿಷ್ಠನೂ, ಪುಲಸ್ತ್ಯನೂ, ಹೇಳಿದುದೆಲ್ಲವೂ, ನನಗೆ ನನಪಿಗೆ ಬಂದುವು ॥ ೨೫ ॥ ಅಯ್ಯಾ ಶಿಷ್ಯನಾದ ಮೈತ್ರೇಯನೇ ! ನೀನು ಪ್ರಶ್ನೆಮಾಡಿದ ಸೃಷ್ಟ್ಯಾದಿಯೊದಲಾದ ಕ್ರಮಗಳನ್ನು ಗೂಢವಾಗಿ ತನ್ನಲ್ಲಿ ನೆಲಗೊಳಿಸಿಕೊಂಡಿರುವ,ವೇದಸದೃಶವಾದ ಪುರಾಣವನ್ನು ನಿನಗೀಗ ಸಂಪೂರ್ಣವಾಗಿ ಹೇಳುವೆನು,ಸಾವಧಾನದಿಂದ ಕೇಳೆಂದು ಹೇಳುತ್ತಿದ್ದನೆಂತೆಂದರೆ॥ ಈಪ್ರಪಂಚವು, ನಿರ್ಲಿಪ್ತನೂ, ಗುಣರಹಿತನೂ, ಚಿದ್ರೂಪಿಯೂ ಆಗಿ, ಸರ್ವವ್ಯಾಪಕನೆನಿಸಿರುವ, ಪರಮಾತ್ಮನ,ಚಿಚ್ಛಕ್ತಿ, ಅಥವಾ ಇಚ್ಛಾಶಕ್ತಿಗಳೆನಿಸುವ, ಕಟಾಕ್ಷಪಾತಮಾತ್ರದಿಂದ ಉದಯಿಸಿತು, * ಆತನಲ್ಲಿಯೇ

---

* ಶ್ರು॥ ಸಐಕ್ಷತ ಲೋಕಾನ್ನು ಸೃಜೇಯಾಇತಿ, ಸೋಕಾಮಯತ, , ಬಹು

ಯವ ಕರ್ತಾ ಸರ್ವಜಗತೋಽಸ್ಯ ಜಗಚ್ಚ ಸಃ ॥೪೧॥
ಇತಿ ಸರ್ವಪುರಾಣಾನಾಮಾದಿಭೂತೇ, ಬ್ರಹ್ಮಾಂಡಾಖ್ಯೇ,
ಮಹಾಪುರಾಣೇ ಉದ್ಧೃತಾಯಾಂ, ಪಾರಾಶರ್ಯಸಂಹಿತಾಯಾಂ,
ಶ್ರೀ ವಿಷ್ಣುಪುರಾಣೇ, ಪ್ರಥಮಾಂಶೇ, ಪ್ರಥಮೋಧ್ಯಾಯಃ

ನೆರವೇರಿಸಿಕೊಂಡಿರುವುದು, ಆತನಿಂದಲೇ ಕಾಪಾಡಲ್ಪಡುವುದು, ಆತನಲ್ಲಿಯೇ ಸೇರಿಹೋಗುವುದು ಸೃಷ್ಟಿ, ಸ್ಥಿತಿ, ಲಯಗಳೆಂಬ, ಮೂರುವಿಧವಾದ ಕಾರ್ಯಗಳಿಗೂ ಆತನೇ ಉಪಾದಾನ, ನಿಮಿತ್ತ ಕಾರಣಗಳೆನಿಸಿ, ತಾನೇ ಆಶ್ರಯನೂ, ಆಗಿರುವನು, ಆಕಾಶವೆಂಬುದು ಒಂದಾಗಿದ್ದರೂ, ಉಪಾಧಿ ಭೇದದಿಂದ, ಘಟಾಕಾಶ, ಮಠಾಕಾಶಗಳೆಂಬಂತಾಗಿ ಹಲವು ಬಗೆಯಿಂದ ತೋರಿ, ಉಪಾಧಿನಾಶವಾದ ನೇಲೆ, ಮಹಾಕಾಶವಾಗಿ ಮಾತ್ರವೇ ಕಾಣುವಂತೆ, ಈ ಪ್ರಪಂಚವೂ, ಆ ಪರಮಾತ್ಮನಿಂದಲೇ ಹುಟ್ಟಿ ಆತನಿಂದಲೇ ಕಾಪಾಡಲ್ಪಟ್ಟು, ಆತನಿಗಿಂತಲೂ ಬೇರೆ ಯಲ್ಲವಿದ್ದರೂ, ಬೇರೆಯಂತೆ ಕಾಣಿಸಿಕೊಳ್ಳುವುದೇ ಹೊರತು, ಯೋಚಿಸಿದಲ್ಲಿ ಯಾವ ವಿಧವಾದ ಭೇದವೂ ಕಾಣಲಾರದು ಸರ್ವವ್ಯಾಪಕನೆನಿಸಿಸುವ ಆ ಪರಮಾತ್ಮನೇ, ಈ ಜಗತ್ತಿನ ರೂಪದಿಂದ ಕಾಣುವನು, ಎಂಬುದಾಗಿ, ಪರಾಶರನು ಮೈತ್ರೇಯನಿಗ ಹೇಳುತ್ತಿದ್ದನೆಂಬಲ್ಲಿಗೆ, ಆದಿಪುರಾಣವೆನಿಸಿದ, ಬ್ರಹ್ಮಾಂಡ ಮಹಾಪುರಾಣದಿಂದ ಸಂಗೃಹೀತವಾದ, ಪಾರಾಶರ್ಯ ಸಂಹಿತೆ ಎಂಬ ವಿಷ್ಣುಪುರಾಣದಲ್ಲಿ,

ಪ್ರಥಮಾಂಶದೊಳ್, ಒಂದನೆಯ ಅಧ್ಯಾಯಂ ಮುಗಿದುದು
ಪ್ರಥಮಾಧ್ಯಾಯಂ ಸಮಾಪ್ತಂ

ಸ್ಯಾಂಪ್ರಜಾಯೇಯೇತಿ, ಇತ್ಯಾದಿ ಶ್ರುತಿಗಳು, ಪರಮಾತ್ಮನ ಚಿಚ್ಛಕ್ತಿಯಿಂದಲೇ ಈಪ್ರಪಂಚವು ಉದಯಿಸಿತು, ಎಂಬ ವಿಷಯದಲ್ಲಿ ಪ್ರಮಾಣಗಳಾಗಿರುವವು

ಮತಿಃ ।ಮತ್ಪ್ರಸಾದಾದಸಂದಿಗ್ಧಾ ತವ ವತ್ಸ ! ಭವಿಷ್ಯತಿ॥೨೬॥
ತತಶ್ಚ ಪ್ರಾಹ ಭಗವಾ೯ ವಸಿಷ್ಠೋ ಮೇ ಪಿತಾಮಹಃ । ಪುಲ
ಸ್ತ್ಯೇನ ಯದುಕ್ತಂ ತೇ ಸರ್ವಮೇತದ್ಭವಿಷ್ಯತಿ ॥ ೨೪ ॥ ಇತಿ
ಪೂರ್ವಂ ವಸಿಷ್ಠೇನ ಪುಲಸ್ತ್ಯೇನ ಚ ಧೀಮತಾ । ಯದುಕ್ತಂ
ತತ್ಸಮೃತಿಂ ಯಾತಿ ತ್ವತ್ಪ್ರಸಾದಾದಖಿಲಂ ಮಮ ॥ ೨೫ ॥ ಸೋ
ಹಂ ವದಾಮ್ಯಶೇಷಂತೇ ಮೈತ್ರೇಯ ! ಪರಿಪೃಚ್ಛತೇ । ಪುರಾಣ
ಸಂಹಿತಾಂ ಸಮ್ಯಕ್ ತಾಂ ನಿಬೋಧ ಯಥಾತಥಂ ॥ ೩೦ ॥ ವಿ
ಷ್ಣೋಸ್ಸಕಾಶಾದುದ್ಭೂತಂ ಜಗದತ್ರೈವ ಚ ಸ್ಥಿತಂ । ಸ್ಥಿತಿಸಂ

---

*ವೋಹಪೂರ್ವಕವಾಗಿ ಕಾಮ್ಯಗಳೆನಿಸುವ, ಪ್ರವೃತ್ತಿಧರ್ಮದಲ್ಲಿಯೂ, ಜ್ಞಾನದಿಂದೊಡಗೂಡಿ, ನಿಷ್ಕಾಮವೆನಿಸುವ, ನಿವೃತ್ತಿಮಾರ್ಗದಲ್ಲಿಯೂ, ನಿನ್ನ ಬುದ್ಧಿಯು, ನನ್ನ ಅನುಗ್ರಹದಿಂದ ಸಂದೇಹವಿಲ್ಲದ ಪ್ರತಿಭೆಯನ್ನು ಹೊಂದಲಿ, ಎಂಬದಾಗಿ ಪುಲಸ್ತ್ಯನು ವರವಂ ಕೊಡಲು ॥೨೬॥ ಆಬಳಿಕ ಷಡ್ಗುಣೈಶ್ವರ್ಯಸಂಪನ್ನನಾದ ವಸಿಷ್ಠಮಹರ್ಷಿಯು ನನ್ನಂ ನೋಡಿ, “ ಅಯ್ಯಾ ಪರಾಶರನೇ ! ಪೂಜ್ಯನಾದ ಪುಲಸ್ತ್ಯನು ಕೊಟ್ಟ ವರಗಳೆಲ್ಲವೂ ನಿನಿಗೆ ಸಫಲಗಳಾಗಿ ಪರಿಣಮಿಸಲಿ ” ಎಂಬದಾಗಿ ಪರಮಾನುಗ್ರಹವಂ ಮಾಡಿದನು ॥ ೨೪ ॥ ಎಲೌ ಮೈತ್ರೇಯನೇ ! ನೀನೀಗ ನನ್ನನ್ನು ಈರೀತಿಯಾಗಿ ಪ್ರಶ್ನೆಮಾಡಿದುದರಿಂದ ಪೂರ್ವದಲ್ಲಿ ಪರಮರ್ಷಿಎನಿಸಿದ ವಸಿಷ್ಠನೂ, ಪುಲಸ್ತ್ಯನೂ, ಹೇಳಿದುದೆಲ್ಲವೂ, ನನಗೆ ನೆನಪಿಗೆ ಬಂದುವು ॥ ೨೫ ॥ ಅಯ್ಯಾ ಶಿಷ್ಯನಾದ ಮೈತ್ರೇಯನೇ ! ನೀನು ಪ್ರಶ್ನೆಮಾಡಿದ ಸೃಷ್ಟ್ಯಾದಿಯೊದಲಾದ ಕ್ರಮಗಳನ್ನು ಗೂಢವಾಗಿ ತನ್ನಲ್ಲಿ ನೆಲೆಗೊಳಿಸಿಕೊಂಡಿರುವ,ವೇದಸದೃಶವಾದ ಪುರಾಣವನ್ನು ನಿನಗೀಗ ಸಂಪೂರ್ಣವಾಗಿ ಹೇಳುವೆನು,ಸಾವಧಾನದಿಂದ ಕೇಳೆಂದು ಹೇಳುತ್ತಿದ್ದನೆಂತೆಂದರೆ॥ ಈಪ್ರಪಂಚವು, ನಿರ್ಲಿಪ್ತನೂ, ಗುಣರಹಿತನೂ, ಚಿದ್ರೂಪಿಯೂ ಆಗಿ, ಸರ್ವವ್ಯಾಪಕನೆನಿಸಿರುವ, ಪರಮಾತ್ಮನ,ಚಿಚ್ಛಕ್ತಿ, ಅಥವಾ ಇಚ್ಛಾಶಕ್ತಿಗಳೆನಿಸುವ, ಕಟಾಕ್ಷಪಾತಮಾತ್ರದಿಂದ ಉದಯಿಸಿತು, * ಆತನಲ್ಲಿಯೇ

---

* ಶ್ರು॥ ಸಐಕ್ಷತ ಲೋಕಾನ್ನು ಸೃಜೇಯಾಇತಿ, ಸೋಕಾಮಯತ. , ಬಹು

ಯವು ಕರ್ತಾ ಸೌಜಗತೋ೨ಸ್ಯ ಜಗಚ್ಚ ಸಃ ॥೫೧॥

ಇತಿ ಸರ್ವಪುರಾಣಾನಾಮಾದಿಭೂತೇ, ಬ್ರಹ್ಮಾಂಡಾಖ್ಯೇ,
ಮಹಾಪುರಾಣೇ, ಉದ್ಧೃತಾಯಾಂ, ಪಾರಾಶರ್ಯಸಂಹಿತಾಯಾಂ,
ಶ್ರೀ ವಿಷ್ಣುಪುರಾಣೇ, ಪ್ರಥಮಾಂಶೇ, ಪ್ರಥಮೋಧ್ಯಾಯಃ.

ನೆಲೆಗೊಂಡಿರುವುದು, ಆತನಿಂದಲೇ ಕಾಪಾಡಲ್ಪಡುವುದು, ಆತನಲ್ಲಿಯೇ ಸೇರಿಹೋಗುವುದು. ಸೃಷ್ಟಿ, ಸ್ಥಿತಿ, ಲಯಗಳೆಂಬ, ಮೂರುವಿಧಗಳಾದ ಕಾರ್ಯಗಳಿಗೂ ಆತನೇ ಉಪಾದಾನ, ನಿಮಿತ್ತ ಕಾರಣಗಳೆನಿಸಿ, ತಾನೇ ಆಶ್ರಯನೂ, ಆಗಿರುವನು, ಆಕಾಶವೆಂಬುದು ಒಂದಾಗಿದ್ದರೂ, ಉಪಾಧಿ ಭೇದದಿಂದ, ಘಟಾಕಾಶ, ಮಠಾಕಾಶಗಳೆಂಬದಾಗಿ ಹಲವು ಬಗೆಯಿಂದ ತೋರಿ, ಉಪಾಧಿನಾಶವಾದ ಮೇಲೆ, ಮಹಾಕಾಶವಾಗಿ ಮಾತ್ರವೇ ಕಾಣುವಂತೆ, ಈ ಪ್ರಪಂಚವೂ, ಆ ಪರಮಾತ್ಮನಿಂದಲೇ ಹುಟ್ಟಿ, ಆತನಿಂದಲೇ ಕಾಪಾಡಲ್ಪಟ್ಟು, ಆತನಿಗಿಂತಲೂ ಬೇರೆ ಯಲ್ಲದಿದ್ದರೂ, ಬೇರೆಯಂತೆ ಕಾಣಿಸಿಕೊಳ್ಳುವುದೇ ಹೊರತು, ಯೋಚಿಸಿದಲ್ಲಿ ಯಾವ ವಿಧವಾದ ಭೇದವೂ ಕಾಣಲಾರದು. ಸರ್ವವ್ಯಾಪಕನೆನಿಸುವ ಆ ಪರಮಾತ್ಮನೇ, ಈ ಜಗತ್ತಿನ ರೂಪದಿಂದ ಕಾಣುವನು, ಎಂಬದಾಗಿ, ಪರಾಶರನು ಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ, ಆದಿಪುರಾಣವೆನಿಸಿದ, ಬ್ರಹ್ಮಾಂಡ ಮಹಾಪುರಾಣದಿಂದ ಸಂಗೃಹೀತವಾದ, ಪಾರಾಶರ್ಯ ಸಂಹಿತೆ ಎಂಬ ವಿಷ್ಣುಪುರಾಣದಲ್ಲಿ,

ಪ್ರಥಮಾಂಶದೊಳ್, ಒಂದನೆಯ ಅಧ್ಯಾಯಂ ಮುಗಿದುದು.

ಪ್ರಥಮಾಧ್ಯಾಯಂ ಸಮಾಪ್ತಂ.

ಸ್ಯಾಂಪ್ರಜಾಯೇಯೇತಿ, ಇತ್ಯಾದಿ ಶ್ರುತಿಗಳು, ಪರಮಾತ್ಮನ ಚಿಚ್ಛಕ್ತಿಯಿಂದಲೇ ಈಪ್ರಪಂಚವು ಉದಯಿಸಿತು, ಎಂಬ ವಿಷಯದಲ್ಲಿ ಪ್ರಮಾಣಗಳಾಗಿರುವುವು.

ಶ್ರೀ.

ಓನ್ನಮಃಪರಮಾತ್ಮನೆ.

ದ್ವಿತೀಯೋಧ್ಯಾಯಃ,



ಪರಾಶರಃ॥ ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ।
ಸದೈಕರೂಪ ರೂಪಾಯ ವಿಷ್ಣವೇ ಸರ್ವಜಿಷ್ಣವೇ॥೧॥ನಮೋ
ಹಿರಣ್ಯಗರ್ಭಾಯ ಹರಯೇ ಶಂಕರಾಯಚ । ವಾಸುದೇವಾಯ

ಎರಡನೆಯ ಅಧ್ಯಾಯವು

ಪರಾಶರನು ಹೇಳುತ್ತಾನೆ.—ಎಲೌ ಮೈತ್ರೇಯನೇ! ನೀನು ತಿಳು ಹಬೇಕೆಂದು ಪ್ರಶ್ನೆ ಮಾಡಿದ ಭಗವಂತನ ಸ್ವರೂಪವನ್ನು ಹೇಳುವೆನು. ಸಾವಧಾನದಿಂದ ಕೇಳು ಆ ಭಗವಂತನು ಸೃಷ್ಟಿ, ಸ್ಥಿತಿ, ಲಯಗಳಿಗೆ ಆಶ್ರಯನಾಗಿರುವನು. ಆದರೂ ನಿರ್ವಿಕಾರ ಚೈತನ್ಯ ಸ್ವರೂಪನು. ರಾಗ ದ್ವೇಷಾದಿಗಳಿಗೆ ಬಳಗಾಗದಿರುವವನು. ಅಹಂಕಾರ ಮಮಕಾರ ಗಳಿಲ್ಲದವನು. ಸುಖ ದುಃಖಗಳಿಗೆ ಬಳಗಾಗದಿರುವವನು. ಯಾವಾಗಲೂ ಶುದ್ಧ ಸ್ವಭಾವದಿಂದಿರುವನು ನಿಕ್ಯನೂ, ಮತ್ತೊಬ್ಬರ ಅಧಿಕಾರಕ್ಕೆ ಬಳಗಾಗದವನೂ, ಸರ್ವನಿಯಾಮಕನೂ ಆದುದರಿಂದ ಆತನನ್ನೇ ಪರ ಮಾತ್ಮನೆಂದು ಕರೆಯುವರು. ಪರಿಣಾಮ (ಬದಲಾವಣೆ) ರಹಿತನಾ ದುದರಿಂದ ವಿಕರೂಪನೆನಿಸಿ ಕೊಳ್ಳುವನು ಎಲ್ಲೆಲ್ಲಿಯೂ ತಾನೇ ನೆಲ ಸಿರುವ ಕಾರಣ ಅಚಿಂತ್ಯಮಹಿಮೆಯುಳ್ಳವನು. ಎಲ್ಲವೂ ಆತನ ಅಧಿಕಾ ರಕ್ಕೇ ಬಳಪಟ್ಟಿರುವುದರಿಂದ ಆತನಿಗಿಂತಲೂ ಶ್ರೇಷ್ಠವಾದ ಮತ್ತೊಂ ದು ವಸ್ತುವು ಇಲ್ಲ ॥೧॥ ಸರ್ವವ್ಯಾಪಕ ನೆನಿಸಿರುವ ಕಾರಣ ಬ್ರಹ್ಮ, ವಿಷ್ಣು, ಶಂಕರರೆಂಬ ತ್ರಿಮೂರ್ತಿ ಸ್ವರೂಪಗಳನ್ನು ಧರಿಸಿ, ಸೃಷ್ಟಿ, ಸ್ಥಿತಿ, ಲಯಗಳೆಂಬ ಕಾರ್ಯಗಳನ್ನು ನೆರವೇರಿಸುವವನೂ ಆತನೇ. ಭಕ್ತರ

ತಾರಾಯ ಸರ್ಗಸ್ಥಿತ್ಯಂತ ಕಾರಿಣೇ ॥ ೨ ॥ ವಿಕಾನೇಕಸ್ವರೂ
ಪಾಯ ಸ್ಥೂಲಸೂಕ್ಷ್ಮಾತ್ಮನೇನಮಃ । ಅವ್ಯಕ್ತವ್ಯಕ್ತರೂಪಾಯ
ವಿಷ್ಣವೇಮುಕ್ತಿಹೇತವೇ ॥ ೩ ॥ ಸರ್ಗಸ್ಥಿತಿವಿನಾಶಾನಾಂ ಜಗ
ತೋ ಯೋ ಜಗನ್ಮಯಃ । ಮೂಲಭೂತೊ ನಮಸ್ತಸ್ಮೈ ವಿಷ್ಣು
ವೇ ಪರಮಾತ್ಮನೇ ॥೪॥ಆಧಾರಭೂತಂ ವಿಶ್ವಸ್ಯಾZಪ್ಯಣೀಯಾಂಸ
ಮಣೀಯಸಾಂ । ಪ್ರಣಮ್ಯ ಸರ್ವಭೂತಸ್ಥಮಚ್ಯುತಂ ಪುರುಷೋ
ತ್ತಮಂ । ಜ್ಞಾನಸ್ವರೂಪ ಮತ್ಯಂತ ನಿರ್ಮಲಂ ಪರಮಾರ್ಥತಃ ।

ತೊಂದರೆಗಳನ್ನು ಪರಿಹರಿಸಿ, ಅವರಿಗೆ ಸುಖದಾಯ ಕನಾಗಿರುವನು ॥೨॥ ಸೃಷ್ಟಿ, ಸ್ಥಿತಿ, ಲಯಗಳೆಂಬ ಕಾರ್ಯಗಳಲ್ಲಿಯೂ, ಅವುಗಳಿಗೆ ಅಧಿಪತಿಗಳಾಗಿ ಕಾರಣಮೂರ್ತಿಗಳೆನಿಸಿದ ಬ್ರಹ್ಮ, ವಿಷ್ಣು, ಶಂಕರರಲ್ಲಿಯೂ, ತಾನೇ ನೆಲಸಿರುವನು ಹೀಗೆ ನೆಲಸಿದ್ದರೂ, ವ್ಯಕ್ತಗಳೆನಿಸುವ ಸೃಷ್ಟ್ಯಾದಿಗಳೆಂಬ ಕಾರ್ಯರೂಪದಿಂದ ಸ್ಥೂಲರೂಪನಂತೆಯೂ, ಅವ್ಯಕ್ತಗಳಾದ ಬ್ರಹ್ಮ, ವಿಷ್ಣು, ಶಂಕರರೆಂಬ ಕಾರಣರೂಪಗಳಿಂದ ಸೂಕ್ಷ್ಮರೂಪನಂತೆಯೂ ಕಾಣುವನು. ಸರ್ವಸ್ವರೂಪಿಯೂ, ಸರ್ವಾತ್ಮಕನೂ ಆಗಿರುವನು ಆದುದರಿಂದಲೇ ಉಪಾಸಕರು ತನ್ನನ್ನು ರಾಮ, ಕೃಷ್ಣ ಮೊದಲಾದ ಯಾವಯಾವರೂಪದಿಂದ ಭಜಿಸಿದರೂ, ಎಲ್ಲರಿಗೂ, ವಿಕರೂಪವೂ, ನಿರತಿಶಯಾನಂದ ಸ್ವರೂಪವೂ, ಎನಿಸುವ ಮೋಕ್ಷಪದವಿಯನ್ನೇಕೊಡುವನು ॥೩॥ ಈ ಲೋಕಗಳೆಲ್ಲವೂ ಆತನಿಂದಲೇ ಹುಟ್ಟಿದುವು, ಈ ಲೋಕಸ್ವರೂಪದಿಂದ ಕಾಣಿಸುವನೂ ಆತನೇ, ಲೋಕಗಳಿಗೂ, ಅವುಗಳ ಸೃಷ್ಟಿ, ಸ್ಥಿತಿ, ಲಯಗಳಿಗೂ ಆತನೇಮೂಲಕಾರಣವು॥೪॥ಆತನ ಮಹಿಮೆಯಿಂದಲೇ ಸಮಸ್ತ ಪ್ರಪಂಚಗಳೂ ನೆಲೆಸಿರುವುವು. ಸೂಕ್ಷ್ಮ ವಸ್ತುಗಳಲ್ಲಿ ಅವುಗಳಿಗಿಂತಲೂ ಸೂಕ್ಷ್ಮವಾಗಿಯೂ, ಸ್ಥೂಲವಸ್ತುಗಳಲ್ಲಿ ಅವುಗಳಿಗಿಂತಲೂ ಸ್ಥೂಲವಾಗಿಯೂ ಇರುವನು. ಎಲ್ಲ ಕಾಲಗಳಲ್ಲಿಯೂ, ಎಲ್ಲ ವಸ್ತುಗಳಲ್ಲಿಯೂ ಆತನೇ ವ್ಯಾಪಿಸಿಕೊಂಡಿರುವ ಕಾರಣ, ಸರ್ವವ್ಯಾಪಕನೆನಿಸುವನು. ನೆಲೆ, ಹುಟ್ಟು, ಬೆಳೆವಳಿಗೆ, ತಗ್ಗುಪಿಕೆ, ಬದಲಾವಣೆ, ಸಾವುಗಳೆಂಬ ಷಡ್ಭಾವ ವಿಕಾರಗಳು ಆತನಿಗಿಲ್ಲವು ॥೫॥ ಕೇವಲ ಜ್ಞಾನಸ್ವ

ತಮೇವಾರ್ಥ ಸ್ವರೂಪೇಣ ಭ್ರಾಂತಿದರ್ಶನತಸ್ಸ್ಥಿತಂ ॥ ೬ ॥ ವಿ
ಷ್ಣುಂ ಗ್ರಸಿಷ್ಣುಂ ವಿಶ್ವಸ್ಯ ಸ್ಥಿತಿಸರ್ಗೇ ತಥಾ ಪ್ರಭುಂ । ಪ್ರಣ
ಮ್ಯ ಜಗತಾಮಾಶ ಮಜನ್ಮಕ್ಷಯ ಮವ್ಯಯಂ ॥೭ ॥ ಕಥಯಾಮಿ
ಯಥಾಪೂರ್ವಂ ದಕ್ಷಾದ್ಯೈ ರ್ಮುನಿಸತ್ತಮೈಃ । ಪೃಷ್ಟಃ ಪ್ರೋ
ವಾಚ ಭಗವಾ ನಬ್ಜಯೋನಿಃ ಪಿತಾಮಹಃ॥೮॥ ತೈಶ್ಚೋಕ್ತಂ ಪು

ರೂಪದಿಂದಿರುವನು ಅಜ್ಞಾನವೂ, ತತ್ಪ್ರಯುಕ್ತವಾದ ದುಃಖವೂ, ಆತ
ನಿಗಿಲ್ಲ ಶರೀರಾದಿಗಳು ಆತನಿಗಿಲ್ಲದಿದ್ದರೂ, ಭ್ರಾಂತರಾದವರಿಗೆ ದೇ
ವತೆಗಳು, ಮನುಷ್ಯರು ಮೊದಲಾದ ನಾನಾ ರೂಪದಿಂದ ಕಾಣಿಸುವ
ನು ॥ ೬ ॥ ಸೃಷ್ಟಿ ಮೊದಲಾದ ಕರ್ಮಗಳಲ್ಲಿ ಮತ್ತೊಬ್ಬರ ಸಹಾಯ
ವಿಲ್ಲದೆ, ಅವುಗಳನ್ನು ಸ್ವೇಚ್ಛೆಯಾಗಿ ನಿರ್ವಾಹಮಾಡತಕ್ಕ ಸಾಮರ್ಥ್ಯ
ವುಳ್ಳವನು. ಪುಣ್ಯ, ಪಾಪಗಳೆಂಬ ಕರ್ಮಗಳಿಗೂ, ಆ ಕರ್ಮಾಧೀನ
ವಾದ ಜನ್ಮಕ್ಕೂ, ತತ್ಪ್ರಯುಕ್ತಗಳಾದ ಸುಖದುಃಖಗಳಿಗೂ, ಬಳಗಾ
ಗದಿರುವನು. ಇಂತಹ ಅನಂತ ಕಲ್ಯಾಣ ಗುಣ ಪರಿಪೂರ್ಣನಾದುದರಿಂದ
ಮಹಾಮಹಿಮನೆನಿಸಿ ಕೊಳ್ಳುವನು ॥೭॥ ಇನ್ನು ಮುಂದೆ ಪುರಾಣವನ್ನು
ವಿಸ್ತಾರವಾಗಿ ಹೇಳುವೆನು. ನಾನು ಆ ಭಗವಂತನ ಸ್ವರೂಪವನ್ನು ತಿಳಿ
ದುದು ಹೇಗೆಂದರೆ.—ಅಯ್ಯಾ ಮೈತ್ರೇಯನೇ ! ಪೂರ್ವದಲ್ಲಿ ದಕ್ಷನೇ
ಮೊದಲಾದ ಋಷಿಗಳು ಜ್ಞಾನವನ್ನು ಸಂಪಾದಿಸಬೇಕೆಂಬ ಕುತೂಹಲ
ವುಳ್ಳವರಾಗಿ, ವಿಷ್ಣುವಿನ ನಾಭಿಕಮಲದಲ್ಲಿ ಜನಿಸಿ, ಲೋಕಕ್ಕೆ ಪಿತಾಮ
ಹನೂ, ಷಡ್ಗುಣೈಶ್ವರ್ಯ ಸಂಪನ್ನನೂ, ಎನಿಸಿದ ಬ್ರಹ್ಮನ ಬಳಿಗೆ
ಬಂದು, "ಎಲೌ ಪರಮ ದಯಾಶಾಲಿಯಾದ ಪಿತಾಮಹನೆ ! ಲೋಕದಲ್ಲಿ
ನಿರಂತರವೂ ನಾವು ಮಾಡತಕ್ಕ ಕರ್ಮಗಳಿಂದುಂಟಾಗತಕ್ಕ ಫಲಗಳೆ
ಲ್ಲವೂ ಕೆಲವು ಕಾಲದ ಮೇಲೆ ಕ್ಷೀಣವಾಗಿ, ಪುನಃ ದುಃಖವೇ ಉಂಟಾ
ಗುವುದು ಆದುದರಿಂದ ನಾವು, ನಿರತಿಶಯಾನಂದ ವೆನಿಸುವ ಮೋಕ್ಷ
ಸುಖವನ್ನು ಸಂಪಾದಿಸಲು, ಮುಖ್ಯ ಸಾಧನವಾದ ಜ್ಞಾನವನ್ನು ನಿನ್ನಿಂದ
ಪಡೆಯಬೇಕೆಂದು ಬಂದಿರುವೆವು. ಅಂತಹ ಜ್ಞಾನವನ್ನು ನಮಗೆ ಉಪ
ದೇಶಮಾಡೆಂದು," ದಕ್ಷಾದಿಗಳು ಬ್ರಹ್ಮನನ್ನು ಪ್ರಾರ್ಥಿಸಲು, ಆಗ ಬ್ರ

ರುಕುತ್ಸಾಯ ಭೂಭುಜೆ ನರ್ಮದಾತಟೇ । ಸಾರಸ್ವತಾಯ ತೇ
ನಾಪಿ ಮುಕ್ತ್ಯಂಸಾರಸ್ವತೇನಚ ॥೯॥ ಪರಃಪರಾಣಾಂ ಪರಮಃ ಪ
ರಮಾತ್ಮಾZತ್ಮಸಂಸ್ಥಿತಃ । ರೂಪವರ್ಣಾದಿ ನಿರ್ದೇಶ ವಿಶೇಷಣ
ವಿವರ್ಜಿತಃ ॥೧೦॥ ಅಪಕ್ಷಯ ವಿನಾಶಾಭ್ಯಾಂ ಪರಿಣಾಮಾರ್ಧಿಜ

ಹ್ಮನು ಪರಮ ಸಂತೋಷಯುಕ್ತನಾಗಿ, ದಕ್ಷಾದಿಗಳಿಗೆ ಪರಮಾತ್ಮ ಸ್ವ
ರೂಪವನ್ನು ಉಪದೇಶವಾಡಿದನು ಆ ದಕ್ಷಾದಿಗಳು ನರ್ಮದಾ ನದಿ
ಯತೀರದಲ್ಲಿ, ಪುರುಕುತ್ಸ ಚಕ್ರವರ್ತಿಗೆ ಪರಮಪ್ರೀತಿಯಿಂದ ಉಪ
ದೇಶಮಾಡಿದರು. ತರುವಾಯ ಪುರುಕುತ್ಸ ಚಕ್ರವರ್ತಿಯು ಸಾರಸ್ವ
ತನಿಗೂ, ಆ ಸಾರಸ್ವತನು ನನಿಗೂ ಉಪದೇಶ ಮಾಡಿದನು ॥೯॥ * ಬಂ
ದಕ್ಕಿಂತಲೂ ಬಾದ. ಉತ್ತಮವೆನಿಸಿದ, ಇಂದ್ರಿಯಗಳು, ಅವುಗಳ ವಿಷ
ಯಗಳು, ಮನಸ್ಸು, ಬುದ್ಧಿ, ಅಹಂಕಾರ, ಅವ್ಯಕ್ತ, ಇವುಗಳೆಲ್ಲಕ್ಕಿಂತ
ಲೂ ಸರ್ವೋತ್ತಮ ವೆನಿಸಿದ ಪುರುಷಶಬ್ದದಿಂದ ಕರೆಯಿಸಿಕೊಳ್ಳುವ
ಆ ಪರಮಾತ್ಮನು ಸಕಲ ಪ್ರಾಣಿಗಳಲ್ಲಿಯೂ, ಸರ್ವದಾ ನಲೆಗೊಂಡು,
ಎಲ್ಲಕ್ಕೂ ಆಶ್ರಯನಾಗಿರುವನು. ಬಿಳುಪು, ಕೆಂಪು, ಕಪ್ಪು ಮೊದಲಾದ
ರೂಪಗಳಿಗಾಗಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣ
ಗಳಿಗಾಗಲಿ, ದೇವತೆಗಳು, ಮನುಷ್ಯರು, ಪಶುಗಳು ಮೊದಲಾದ ಜಾ
ತಿಗಳಿಗಾಗಲಿ, ಹೆಂಗಸು, ಗಂಡಸು ಮೊದಲಾದ ರೂಪಗಳಿಗಾಗಲಿ,ರಾಮ,
ಕೃಷ್ಣ ಮೊದಲಾದ ಹೆಸರುಗಳಿಗೇ ಆಗಲಿ ಆತನು ಬಳಪಟ್ಟರುವುದಿಲ್ಲಾ.
ಇಂತಹ ಗುಣಗಳಿಂದ ಕೂಡಿರುವ ಕಾರಣ ಆತನು ಎಲ್ಲ ವಸ್ತುಗಳ
ಲ್ಲಿಯೂ ನೆಲೆಸಿ, ಸರ್ವರಿಗೂ ಆತ್ಮ ಸ್ವರೂಪನಾಗಿ ಪ್ರತ್ಯಕ್ಷನಾಗಿ
ದ್ದರೂ, ಯಾರೂ ಆತನನ್ನು ಇತರರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಡ
ಲಾರರು ॥೧೦॥

---

* ಶ್ರು॥ ಇಂದ್ರಿಯೇಭ್ಯಃ ಪರಾಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ । ಮನ
ಸಸ್ತು ಪರಾಬುದ್ಧಿಃ ಬುದ್ಧೇರಾತ್ಮಾ ಮಹಾನ್ಪರಃ । ಮಹತಃ ಪರಮವ್ಯಕ್ತ ಮವ್ಯಕ್ತಾ
ತ್ಪುರುಷಃಪರಃ ॥ ಪುರುಷಾನ್ನಪರಂ ಕಿಂಚಿತ್, ಎಂಬ ಶ್ರುತಿಪ್ರಮಾಣದಿಂದ ಪರಮಾ
ತ್ಮನು ಸರ್ವೋತ್ತಮನೆಂದು ಹೇಳಬೇಕು.

ನ್ಮಭಿಃ । ವರ್ಜಿತಶ್ಚ ಕ್ಯತೇ ವಕ್ತುಂ ಯಸ್ಸದಾಽಸ್ತೀತಿಕೇವಲಂ॥ ಸರ್ವತ್ರಾಸೌ ಸಮಸ್ತಂಚ ವಸತ್ಯತ್ರೇತಿ ವೈ ಯತಃ । ತತಸ್ಸವಾಸುದೇವೇ (.) ತಿ ವಿದ್ವದ್ಭಿಃ ಪರಿಪಠ್ಯತೇ॥೧೨॥ತದ್ಬ್ರಹ್ಮಪರಮಂ

+ ಕೆಲವರು, ಶ್ರುತಿಪ್ರಮಾಣಗಳಿಂದ ಭಗವಂತನಿದ್ದಾನೆಂದು ಹೇಳುವುದರಿಂದ "ಇರುವಿಕೆ" ("ಸತ್ತಾ" ಅಥವಾ "ಅಸ್ತಿತ್ವ") ಎಂಬುವದು ಕೂಡ ಷಡ್ಭಾವವಿಕಾರಗಳಿಗೆ ಒಳಪಟ್ಟಿರುವ ಕಾರಣ, ಭಗವಂತನಿಗೆ*ಷಡ್ಭಾವವಿಕಾರಗಳಿಲ್ಲವೆಂದು ಹೇಳುವದು ಸರಿಯಲ್ಲವೆಂದು ಅಪೇಕ್ಷಿಸುವರು.

ಆದರೆ, ಜನ್ಮಾನಂತರ ಬದುಕಿರುವ ಕಾಲವನ್ನು ಬೋಧಿಸುವ "ನೆಲೆ" ಎಂಬುವುದೇ ಷಡ್ಭಾವ ವಿಕಾರಗಳಲ್ಲಿ ಸೇರುವುದೇ ಹೊರತು, ಯಾವಾಗಲೂ ನಾಶವಿಲ್ಲದ "ನೆಲೆ" ಎಂಬುವುದು ಷಡ್ಭಾವವಿಕಾರಗಳಿಗೆ ಒಳಗಾಗುವುದಿಲ್ಲವಾದುದರಿಂದ, ಅಪಕ್ಷಯ, ವಿನಾಶ, ಪರಿಣಾಮ, ಸತ್ತಾ, ವೃದ್ಧಿ, ಜನ್ಮಗಳೆಂಬ ಷಡ್ಭಾವವಿಕಾರಗಳು ಆ ಭಗವಂತನಿಗೆ ಇಲ್ಲವು ಆದುದರಿಂದಲೇ, ಆ ಪರಮಾತ್ಮನು ಯಾವಾಗಲೂ "ಇರುವಿಕೆ" ಎಂಬ ಅರ್ಥವುಳ್ಳ, ಸತ್ತಾ ಸ್ವರೂಪದಿಂದಿರುವನೆಂದು ಹೇಳತಕ್ಕದ್ದೂ ಆತನಿಗೆ ಷಡ್ಭಾವ ವಿಕಾರಗಳಿಲ್ಲವೆಂದು ಹೇಳುವುದೂ, ಯುಕ್ತವೇ ಸರಿ ॥ ೧೧ ॥ ಭೂತ ಸಮುದಾಯಗಳನ್ನೆಲ್ಲಾ ತನ್ನ ಲ್ಲಿಯೇ ನೆಲೆಗೊಳಿಸಿಕೊಂಡು, ಅವುಗಳಲ್ಲಿಯೂ ತಾನೇ ನೆಲಸಿರುವುದರಿಂದಲೂ, ಸರ್ವ ಪ್ರಕಾಶಕನಾಗಿ ಸರ್ವಮಯನಾಗಿರುವುದರಿಂದಲೂ ಆತನನ್ನು ಮಹಾ ಮಹಿಮ ಶಾಲಿಗಳಾದ ಜ್ಞಾನಿಗಳು "ವಾಸುದೇವ" ನೆಂದು ಹೇಳುವರು॥೧೨

( ) " ವಾಸುದೇವ ಇತಿ " ಎಂಬುದಾಗಿರಬೇಕು ಆದರೆ " ವಾಸುದೇವೇತಿ" ಎಂಬ ಪ್ರಯೋಗವು, ಆರ್ಷವಾದ್ದರಿಂದ ಸಾಧುವೆಂಬದಾಗಿ ತಿಳಿಯಬೇಕು.

+ ಶ್ರುತಿ ಅಸನ್ನೇವಸಭವತಿ । ಅಸದ್ಬ್ರಹ್ಮೇತಿ ವೇದಚೇತ್। ಅಸ್ತಿಬ್ರಹ್ಮೇತಿ ಚೇದ್ವೇದ । ಅಸ್ತೀತ್ಯೇವೋ ಪಲಬ್ಧವ್ಯಂ ಇದ್ಯಾದಿ ಶ್ರುತಿಗಳಿಂದ ಪರಮಾತ್ಮನು ಯಾವಾಗಲೂ ಸತ್ತಾರೂಪದಿಂದಿರುವನೆಂದು ತಿಳಿಯಬೇಕು.

* ೧ ಅಸ್ತಿ, ೨ ಜಾಯತೇ, ೩ ವರ್ಧತೇ, ೪ ಅಪಕ್ಷೀಯತೇ, ೫ ಪರಿಣಮತೇ, ೬ ವಿನಶ್ಯತಿ ॥ ೧ ನೆಲೆ, ೨ ಹುಟ್ಟು, ೩ ಬೆಳೆವಳಿ, ೪ ತಗ್ಗುವಿಕೆ, ೫ ಬದಲಾವಣೆ, ೬ ಸಾವು ಈ ಆರೂ ಷಡ್ಭಾವ ವಿಕಾರಗಳು.

ನಿತ್ಯ ಮಜ ಮಕ್ಷಯ ಮವ್ಯಯಂ । ಏಕಸ್ವರೂಪಂ ತುಸದಾ ಹೇಯಾಭಾವಾಚ್ಚ ನಿರ್ಮಲಂ ॥೧೪॥ ತದೇವ ಸರ್ವಮೇತಚ್ಚ ವ್ಯಕ್ತಾವ್ಯಕ್ತ ಸ್ವರೂಪವತ್। ತಥಾ ಪುರುಷರೂಪೇಣ ಕಾಲರೂಪೇಣಚಸ್ಥಿತಂ ॥ ೧೪ ॥ ಪರಸ್ಯೆಬ್ರಹ್ಮಣೋರೂಪಂ ಪುರುಷಃ ಪ್ರಥಮಂ ದ್ವಿಜ। । ವ್ಯಕ್ತಾZವ್ಯಕ್ತೇತಥೈವಾನ್ಯೇ ರೂಪೇಕಾಲಸ್ತೆಥಾ

ಇಂತಹ ನಿರತಿಶಯವಾದ ಪದಾರ್ಥವೇ, ವೇದಾಂತ ಶಾಸ್ತ್ರಾಭ್ಯಾಸದಿಂದ ಬಹಳ ಕಾಲದ ಮೇಲೆ ಪ್ರಸನ್ನವಾಗಿ ಕೈವಲ್ಯ ಪದವಿಯನ್ನು ಕೊಡತಕ್ಕ ಪರಬ್ರಹ್ಮ ವಸ್ತುವಾಗಿರುವುದು. ಆ ಪರಬ್ರಹ್ಮ ವಸ್ತು ವಿಗಿಂತಲೂ ನಿರತಿಶಯವಾದದ್ದೂ ಇಲ್ಲಾ. ದ್ವಿತೀಯ ವಸ್ತುವೂ ಇಲ್ಲ ಅಲ್ಲದೆ, ಕಪ್ಪೆಯ ಚಿಪ್ಪನ್ನು ನೋಡಿ ಬೆಳ್ಳಿ ಎಂಬ ತಿಳುವಳಿಕೆಯಂತೆಯೂ, ಹಗ್ಗವನ್ನು ನೋಡಿ ಹಾವೆಂಬ ತಿಳುವಳಿಕೆಯಂತೆಯೂ, ಶರೀರಾದಿಗಳನ್ನು ಆತ್ಮನೆಂದು ತಿಳಿದುಕೊಳ್ಳುವ ಯಾವ ಅಜ್ಞಾನವುಂಟೋ, ಇಂತಹ ಅಜ್ಞಾನದಿಂದುಂಟಾಗುವ, ತುಚ್ಛಗಳೆನಿಸಿದ * ಕಾಮ, ಕ್ರೋಧ, ಲೋಭ, ಮೋಹ, ಹರ್ಷ-ಅಭಿಮಾನ, ಮದ, ಚಿಂತೆ ಗಳೆಂಬ ಎಂಟು ವಿಧಗಳಾದ ಮಾನಸಿಕ ಕಲ್ಮಷಗಳೂ ಆತನಿಗಿಲ್ಲಾ ॥೧೪॥

ಸತ್ವ, ರಜಸ್ಸು,ತಮಸ್ಸುಗಳೆಂಬ ಪ್ರಕೃತಿ ಗುಣಗಳು ಆತನಿಗಿಲ್ಲ. ಪುರುಷ (ಪರಮಾತ್ಮ) ಪ್ರಧಾನ (ಮೂಲಪ್ರಕೃತಿ) ವ್ಯಕ್ತ [ಅಹಂಕಾರ ಅಥವಾ ಮಹತ್ತತ್ವ] ಕಾಲಗಳೆಂಬ ನಾಲ್ಕು ರೂಪಗಳಿಂದ, ಸಮಸ್ತ ಪ್ರಪಂಚಗಳನ್ನೂ ಆವರಿಸಿಕೊಂಡಿರುವವನೂ ಆಪರಮಾತ್ಮನೇ ॥೧೪॥ ಎಲೌ ಮೈತ್ರೇಯನೇ ! ಅಂತಹ ಪರಬ್ರಹ್ಮನಿಗೆ ಕರ್ತೃತ್ವ,ಭೋಕ್ತೃತ್ವ, ಚೈತನ್ಯಗಳಿಲ್ಲ ಪುರುಷರೂಪವು ಮೊದಲನೆಯ ರೂಪವೆಂತಲೂ, ಪ್ರಧಾನ ಅಥವಾ ಮೂಲಪ್ರಕೃತಿ ಎನಿಸುವ ಅವ್ಯಕ್ತವು ಎರಡನೆಯ ರೂಪವೆಂತಲೂ, ಮಹತ್ತತ್ವ ಅಥವಾ ಅಹಂಕಾರವೆನಿಸುವ ವ್ಯಕ್ತರೂಪವು ಮೂರನೆಯ ರೂಪವೆಂತಲೂ, ಎಲ್ಲವನ್ನೂ ಬದಲಾಯಿಸುವ ಕಾಲವೇ ನಾಲ್ಕ

---

* ಶ್ಲೋ॥ ಕಾಮಃ ಕ್ರೋಧಶ್ಚ ಮೋಹಶ್ಚ ಹರ್ಷೋಮಾನೋ ಮದೋಮತಿಃ ।
ವಿಷಾದಶ್ಚಾಷ್ಟಮಃ ಪ್ರೋಕ್ತ ಇತ್ಯೇತೇ ಮಾನಸಾಮಲಾಃ ॥
ಇವೇ ಮಾನಸಿಕ ಕಲ್ಮಷಗಳು.

ಪರಂ ॥೧೫॥ ಪ್ರಧಾನ ಪುರುಷ ವ್ಯಕ್ತ ಕಾಲಾನಾಂ ಪರಮಾ ಹಿ
ಯತ್ । ಪಶ್ಯಂತಿ ಸೂರಯ ಶುದ್ಧಂ ತದ್ವಿಷ್ಣೋಃ ಪರಮಂ
ಪದಂ ॥೧೬॥ ಪ್ರಧಾನ ಪುರುಷವ್ಯಕ್ತ ಕಾಲಾಸ್ತು ಪ್ರವಿಭಾಗಶಃ।
ರೂಪಾಣಿ ಸ್ಥಿತಿ ಸರ್ಗಾಂತ ವ್ಯಕ್ತಿ ಸ್ಸದ್ಭಾವಹೇತವಃ ॥೧೭॥ ವ್ಯ
ಕ್ತಂ ವಿಷ್ಣುಸ್ತಥಾ ವ್ಯಕ್ತಂ ಪುರುಷಃಕಾಲಏವಚ।* ಕ್ರೀಡತೋ
ಬಾಲಕಸ್ಯೇವ ಚೇಷ್ಟಾಂತ ಸ್ಯ ನಿಶಾಮಯ॥೧೮॥ ಅವ್ಯಕ್ತಂಕಾ
ರಣಂಯತ್ತ ತ್ಪ್ರಧಾನ ಮೃಷಿಸತ್ತಮೈಃ । ಪ್ರೋಚ್ಯತೇ ಪ್ರಕೃತಿ

ನೆಯ ರೂಪವೆಂತಲೂ, ಅಭಿಜ್ಞರು ಹೇಳುವರು ॥ ೧೫ ॥ ಮೇಲೆ ವಿವರಿ
ಸಿದ ಪುರುಷ, ಪ್ರಕೃತಿ, ಮಹತ್ತತ್ವ, ಕಾಲಗಳಿಗಿಂತಲೂ, ಅತ್ಯಂತ ವಿಲ
ಕ್ಷಣನೂ, ಶುದ್ಧಚೈತನ್ಯ ಸ್ವರೂಪನೂ, ಪರಮಾನಂದ ಪೂರ್ಣನೂ, ಆ
ಗಿರುವಪನೇ ಪರಮಾತ್ಮನೆನಿಸಿಕೊಳ್ಳುವನು. ಇಂತಹ ಪರಮಾತ್ಮ ಸ್ವರೂ
ಪವನ್ನು ವಿಚಾರಮಾಡಿ ತಿಳಿಯುವಿಕೆಯೇ ಮುಕ್ತಿ ಅಥವಾ ಮೋಕ್ಷ
ವೆನಿಸುವದು ॥೧೬॥ ಪುರುಷ, ಅವ್ಯಕ್ತ, ವ್ಯಕ್ತ, ಕಾಲಗಳೇ ಈ ಜಗತ್ತಿ
ನ ಸಕಲ ಭೂತಗಳ, ಸಂರಕ್ಷಣೆ, ಹುಟ್ಟು, ನಾಶ, ನೆಲೆ ಇವುಗಳಿಗೆ ಕಾ
ರಣಗಳಾಗಿರುವುವು ॥೧೭॥ ಆಪ್ತಕಾಮನೆನಿಸಿದ ಪರಮಾತ್ಮನಿಗೆ, ಇಂ
ತಹ ಸೃಷ್ಟ್ಯಾದಿಗಳಿಂದ ಯಾವವಿಧವಾದ ಪ್ರಯೋಜನವೂ ಇರುವುದಿಲ್ಲ
ಆದರೂ, ಆಟಗಾರನಾದ ಹುಡುಗನು ಯಾವ ಪ್ರಯೋಜನವಿಲ್ಲದಿದ್ದರೂ
ಮನೋವಿನೋದಕ್ಕಾಗಿ, ಆಟದ ಸಾಮಾನುಗಳನ್ನು ಕಲ್ಪಿಸಿಕೊಂಡ
ಎಂತು ಮನೋವಿನೋದವನ್ನು ಪಡೆಯುವನೋ, ಅಂತೆಯೇ ಆ ಪರಮಾ
ತ್ಮನಿಗೆ ಸೃಷ್ಟ್ಯಾದಿಗಳಿಲ್ಲವೂ ಲೀಲಾರೂಪಗಳೆನಿಸುವುವು ॥೧೮॥ ಪುರು
ಷ, ಪ್ರಧಾನ, ಮಹತ್ತತ್ವ, ಕಾಲಗಳಲ್ಲಿ, ಆ ಪರಮಾತ್ಮನ ಅವ್ಯಕ್ತವೆ
ನಿಸುವ ಎರಡನೆಯ ರೂಪವನ್ನು ಜ್ಞಾನಿಗಳು ಪ್ರಧಾನವೆಂದೂ, ಪ್ರಕೃತಿ
ಎಂದೂ ಹೇಳುವರು. ಮತ್ತು ಅದಕ್ಕೆ ವೃದ್ಧಿ, ಕ್ಷಯಗಳಿಲ್ಲದುದರಿ
ದ, ನಿತ್ಯವೆಂತಲೂ, ವಿಕರೂಪವೆಂತಲೂ, ಸದಸತ್ಸ್ವರೂಪವೆಂತಲೂ

---

* "ಕ್ರೀಡಾರ್ಥಂ ಸೃಷ್ಟಿರಿತ್ಯನ್ಯೇ" ಎಂಬ ಶ್ರುತಿಪ್ರಮಾಣದಿಂದ ಪರಮಾ
ನಿಗೆ ಸೃಷ್ಟ್ಯಾದಿವ್ಯಾಪಾರಗಳಲ್ಲಿ ಪ್ರವೃತ್ತಿಯು ಲೀಲಾ ರೂಪವೆಂದು ತಿಳಿಯಬೇಕು.

ಸ್ಸೂಕ್ಷ್ಮಾ ನಿತ್ಯಂ ಸದಸದಾತ್ಮಕಂ ॥ ೧೯ ॥ ಅಕ್ಷಯ್ಯಂ ನಾಸ್ಯ
ಡಾಧಾರ ಮನೇಯ ಮಜರಂ ಧ್ರುವಂ । ಶಬ್ದ ಸ್ಪರ್ಶ ವಿಹೀನಂ
ತದ್ರೂಪಾದಿಭಿ ರಸಂಯುತಂ ॥೨೦॥ ತ್ರಿಗುಣಾ ತಜ್ಜಗದ್ಯೋನಿ
ರನಾದಿ ಪ್ರಭವಾಪ್ಯಯಂ । ತೇನಾಗ್ರೇ ಸರ್ವಮೋವಾಸೀತ್
ವ್ಯಾಪ್ತಂ ವೈ * ಪ್ರಳಯಾದನು ॥ ೨೧ ॥ ವೇದವಾದವಿದೋ ವಿ

ಅತಿಸೂಕ್ಷ್ಮನೆಂತಲೂ ಹೇಳುವರು ॥೧೯॥ ಅದು ಮತ್ತೊಬ್ಬರಿಂದ ನಾಶ ಹೊಂದತಕ್ಕದ್ದಲ್ಲ ತಾನೇ ಎಲ್ಲಕ್ಕೂ ಮೂಲಕಾರಣವಾಗಿರುವುದರಿಂದ ಅದಕ್ಕೆ ಮತೊಂದು ವಸ್ತುವಿನ ಆಶ್ರಯವೂ ಇಲ್ಲ ದೇಶ, ಕಾಲ ಮೊದಲಾದ ಪರಿಮಾಣಗಳೂ ಅದಕ್ಕೆ ಇಲ್ಲ, ಚಲನಾದಿವ್ಯಾಪಾರಗಳೂ ಇಲ್ಲ, ಮತ್ತು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಶೇಷಗುಣಗಳೂ ಇಲ್ಲ ॥೨೦॥ಸಕಲಪ್ರಪಂಚಗಳ ಸೃಷ್ಟಿ,ಸ್ಥಿತಿ,ಲಯಗಳಿಗೆ ಕಾರಣಗಳೆನಿಸಿದ ಸತ್ವ, ರಜಸ್ಸು,ತಮಸ್ಸುಗಳೆಂಬ ಗುಣತ್ರಯಸ್ವರೂಪವುಳ್ಳ ಆ ಪರಬ್ರಹ್ಮನು, ಉತ್ಪತ್ತಿಶೂನ್ಯನಾದುದರಿಂದ "ಅನಾದಿ" ಎನಿಸಿಕೊಳ್ಳುವನು. ಎಲ್ಲ ಲೋಕಗಳಿಗೂ ಆಶ್ರಯನೂ, ಲಯಸ್ಥಾನವೂ ಕೂಡ ಆತನೇ ಆಗಿರುವನು ಸೃಷ್ಟಿಗಿಂತಲೂ ಮುಂಚೆ ಸಕಲ ಪ್ರಪಂಚಗಳೂ ಆತನಲ್ಲಿಯೇ ಅಡಗಿಕೊಂಡಿದ್ದವು. ಸೃಷ್ಟ್ಯನಂತರದಲ್ಲಿ ಅವೆಲ್ಲವನ್ನೂ ಆವರಿಸಿಕೊಂಡಿರುವವನೂ ಆತನೇ * ಪ್ರಾಕೃತಿಕಪ್ರಳಯದಲ್ಲಿ ಎಲ್ಲ

ಪ್ರಳಯವು (೧) ನಿತ್ಯ (೨) ನೈಮಿತ್ತಿಕ (೩) ಪ್ರಾಕೃತಿಕ (೪) ಅತ್ಯಂತಿಕ ಪ್ರಳಯಗಳೆಂಬುದಾಗಿ ನಾಲ್ಕುವಿಧ, (೧) ಪ್ರತಿದಿನದಲ್ಲಿಯೂ ಮನುಷ್ಯ ಪಶು ಪಕ್ಷಿ ಮೊದಲಾದ ಪ್ರಾಣಿಗಳ ಸುಷುಪ್ತಿ (ನಿದ್ರೆ) ಯು ನಿತ್ಯಪ್ರಳಯವೆನಿಸುವುದು (೨) ಕಾರಣಬ್ರಹ್ಮನಾದ ಚತುರ್ಮುಖನ ಹಗಲಿನಲ್ಲಿ ಚತುರ್ದಶ ಮನುಗಳು ಸಪ್ತರ್ಷಿಗಳು ಇಂದ್ರಾದಿದೇವತೆಗಳೂ ತಮ್ಮತಮ್ಮ ಅಧಿಕಾರಗಳನ್ನು ನೆರವೇರಿಸುತ್ತಿದ್ದು ಆ ಕಾರಣಬ್ರಹ್ಮನ ಹಗಲಿನ ಕೊನೆಯಲ್ಲಿ ನಾಶಹೊಂದುವರು. ಇದೇ "ನೈಮಿತ್ತಿಕಪ್ರಳಯ" ವು ಇದನ್ನೇ "ಅನಂತರಪ್ರಳಯ" ಅಥವಾ "ದೈನಂದಿನಪ್ರಳಯ" ವೆನ್ನುವರು. (೩) ಬ್ರಹ್ಮನಿಗೆ ನೂರು ವರ್ಷಗಳು ಸಂಪೂರ್ಣವಾದ ಬಳಿಕ ಮೂಲಪ್ರಕೃತಿಯು ಹೊರತು ಸಕಲಪ್ರಪಂಚಗಳಿಗೂ ಉಂಟಾಗುವ ನಾಶವೇ "ಪ್ರಾಕೃತಿಕಪ್ರಳಯ" ಅಥವಾ "ಮಹಾಪ್ರಳಯ" ವೆನಿಸುವುದು.

ದ್ವಕ್ ! ನಿಯತಾ ಬ್ರಹ್ಮವಾದಿನಃ । ಪರಂತಿ ಚೈತಮೇವಾರ್ಥಂ ಪ್ರಧಾನಪ್ರತಿಪಾದಕಂ ॥ ೨೨ ॥ ನಾಹೋ ನ ರಾತ್ರಿ ರ್ನನಭೋ ನ ಭೂಮಿ ರ್ನಾಸೀತ್ತಮೋ ಜ್ಯೋತಿ ರಭೂನ್ನ ಚಾನ್ಯತ್ । ಶ್ರೋತ್ರಾದಿಬುದ್ಧ್ಯಾ Zನುಪಲಭ್ಯೆ ಮೇಕಂ ಪ್ರಾಧಾನಿಕಂ ಬ್ರಹ್ಮ ಪುಮಾಂಸ್ತದಾಸೀತ್ ॥ ೨೩ ॥ ವಿಷ್ಣೋ ಸ್ಸ್ವರೂಪಾ ತ್ಪರತೋ * ದಿತೇ ದ್ವೇ ರೂಪೇ ಪ್ರಧಾನಂ ಪುರುಷಶ್ಚ ವಿಪ್ರ! । ತಸ್ಯೈವ ಯೇ* ನ್ಯೇ ನ ಧೃತೇ ವಿಯುಕ್ತೇ ರೂಪಾಂತರಂ ತದ್ವಿಷ್ಣು

ವನ್ನು ಲಯಗೊಳಿಸುವವನು ಆಪರಮಾತ್ಮನೇ ॥೨೧ ॥ಅಯ್ಯಾ ವಿದ್ವನ್ಮಣಿಎನಿಸಿದ ಮೈತ್ರೇಯನೇ ! ವೇದಾಧ್ಯಯನಸಂಪನ್ನರಾಗಿ, ಆ ವೇದಗಳಲ್ಲಿನ ಸಿದ್ಧಾನ್ತಾರ್ಥಗಳನ್ನು ತಿಳಿದು, ನಿರಂತರವೂ ವೇದಪ್ರವಚನದಲ್ಲಿಯೇ ನಿರತರಾದ ಅಭಿಜ್ಞರೂಕೂಡ,ಆಪರಬ್ರಹ್ಮವಸ್ತು ಬಂದುಮಾತ್ರ ಸೃಷ್ಟ್ಯಾದಿಕರ್ಮಗಳಲ್ಲಿ ಇತರಸಹಾಯನಿರಪೇಕ್ಷವಾಗಿ ಜಗತ್ಕಾರಣವಾಗಿರುವುದೆಂದು ಹೇಳುವರು ॥ ೨೨ ॥ ಅದೆಂತೆಂದರೆ·—ಪ್ರಾಕೃತಿಕಪ್ರಳಯಕಾಲದಲ್ಲಿ ಸೂರ್ಯಚಂದ್ರರಿಲ್ಲದುದರಿಂದ ಹಗಲುರಾತ್ರಿಗಳಿಲ್ಲ. ಅಂತಹ ಹಗಲುರಾತ್ರಿಗಳಿಲ್ಲದುದರಿಂದ ಬೆಳಕುಕತ್ತಲೆಗಳಿಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಶೇಷಗುಣಗಳಿಲ್ಲದುದರಿಂದ ಆಕಾಶಾದಿ ಭೂತಗಳಿಲ್ಲ. ಕಿವಿಯೇಮೊದಲಾದ ಇಂದ್ರಿಯಗಳಿಂದುಂಟಾಗುವ ಶಬ್ದ ಶ್ರವಣಮೊದಲಾದ ಜ್ಞಾನಕ್ಕೂ, ಮನಸ್ಸಿಗೂ ಸಹ ಅಗೋಚರವಾದ ಆ ಪರಬ್ರಹ್ಮವಸ್ತುವು,ಮೂಲಪ್ರಕೃತಿ,ಪುರುಷರೆಂಬ ಈ ಮೂರುವಸ್ತುಗಳ ಹೊರತು ಮಿಕ್ಕವಸ್ತುಗಳೆಲ್ಲವೂ ನಾಶಹೊಂದುವುವು ॥ ೨೩ ॥ ಅಯ್ಯಾ ಬ್ರಹ್ಮಿಷ್ಠನಾದ ಮೈತ್ರೇಯನೇ ! ಉಪಾಧಿರಹಿತನಾದ ಆಪರಮಾತ್ಮನ ಸ್ವರೂಪದಿಂದಲೇ ಮಾಯಾಮಯಗಳಾದ ಪ್ರಕೃತಿ,ಪುರುಷರೆಂಬ ಎರಡು ರೂಪಗಳುಂಟಾದುವು.

---

(೪)ಯೋಗಿಗಳಿಗೆ ಪರಬ್ರಹ್ಮಸಾಕ್ಷಾತ್ಕಾರ(ಜೀವಾತ್ಮಪರಮಾತ್ಮವಸ್ತುಗಳ ಐಕ್ಯಜ್ಞಾನ)ದಿಂದುಂಟಾಗುವ ಪ್ರಾಕೃತಿಕಪ್ರಪಂಚನಾಶವೇ '' ಆತ್ಯಂತಿಕಪ್ರಳಯ ''ವೆನಿಸುವುದು,

1 ಪರತೋದಿತೇ. ಇಲ್ಲಿ ಪರತ ಉದಿತೇ ಎಂದು ಇರಬೇಕು,

೧ ಯೋ ಅನ್ಯೇ ಎಂದು ಇರಬೇಕು ಈ ಎರಡುಕಡೆಗಳಲ್ಲಿಯೂ ಸಂಧಿಯು ಆರ್ಷ.

ಜ ! ಕಾಲಸಂಜ್ಞಂ ॥ ೨೪ ॥ ಪ್ರಕೃತೌ ಸಂಸ್ಥಿತಂ ವ್ಯಕ್ತ ಮತೀ
ತಪ್ರಳಯೇ ತು ಯತ್ । ತಸ್ಮಾತ್ಪ್ರಾಕೃತಸಂಜ್ಞೋZಯ ಮು
ಚ್ಯತೇ ಪ್ರತಿಸಂಚರಃ ॥ ೨೫ ॥ ಅನಾದಿ ರ್ಭಗವಾ ಕಾಲಃ ನಾಂ
ತೋZಸ್ಯ ದ್ವಿಜ ! ವಿದ್ಯತೇ।ಅವ್ಯೃಚ್ಛಿನ್ನಾ ಸ್ತತಸ್ತ್ವೇತೇ ಸ

ಆಪರಮಾತ್ಮನೇ ಅವುಗಳನ್ನು ಸೃಷ್ಟಿಕಾಲದಲ್ಲಿ ಉಂಟುಮಾಡಿ ಸೃಷ್ಟಿಕಾರ್ಯವು ನಿರವೇರಿದ ಬಳಿಕ ಪ್ರಳಯಕಾಲದಲ್ಲಿ ಪುನಃ ತಾನೇಲ ಯಗೊಳಿಸುವನು. ಸಮಗ್ರರೂಪದಿಂದ ಮೆರೆಯುತ್ತಿದ್ದ ಆ ಪರಮಾತ್ಮನು ಪ್ರಕೃತಿ, ಪುರುಷರೆಂಬ ಎರಡು ರೂಪಗಳನ್ನು ಧರಿಸಿದಾಗಲೇ ಕಾಲವು ಉಂಟಾಯಿತು. ಆದುದರಿಂದ ಎಂತು ಪ್ರಕೃತಿ ಪುರುಷರು ವಿಷ್ಣುವಿನಸ್ವ ರೂಪವೆಂದು ಕರೆಯಲ್ಪಡುವರೋ, ಅಂತೆಯೇ ಕಾಲವೂ ಕೂಡ, ಸರ್ವ ವ್ಯಾಪಕನೆನಿಸಿದ ಆ ಪರಮಾತ್ಮನ ಮೂರನೆಯ ರೂಪವೇ ಹೊರತು ಬೇ ರೆಯಲ್ಲ ॥ ೨೪ ॥ಆಪ್ರಕೃತಿ ಪುರುಷರು ಪರಸ್ಪರ ಬಬ್ಬರನ್ನೊಬ್ಬರು ಅಗ ಲದಿದ್ದಲ್ಲಿ ಪ್ರಳಯವೇ ಆಗದೇ ಹೋದೀತು. ಅದಕ್ಕಾಗಿಯೇ ಆಪರಮಾ ತ್ಮನು ಸೃಷ್ಟಿಕಾಲದಲ್ಲಿ ಆರೂಪಗಳನ್ನು ಧರಿಸಿ ಪ್ರಳಯ ಕಾಲದಲ್ಲಿ ತ ನ್ನಲ್ಲಿಯೇ ಉಪಸಂಹಾರ ಮಾಡಿಕೊಳ್ಳುವನು ಅಂತಹ ಉಪಸಂಹಾರಕಾ ಲದಲ್ಲಿ ಸಕಲಪ್ರಪಂಚಗಳೂ ಪ್ರಕೃತಿಯಲ್ಲಿಯೇ ಲಯವನ್ನು ಹೊಂದು ವವು ಆದುದರಿಂದ ಈ ಮಹಾಪ್ರಳಯವನ್ನು " ಪ್ರಾಕೃತಿಪ್ರಳಯ " ವೆಂದು ಕರೆಯುವರು ॥ ೨೫ ॥ ಅಯ್ಯಾ ದ್ವಿಜವರ್ಯನೇ ! ಕಾಲವು ಪ್ರಳ ಯಸಮಯದಲ್ಲಿಯೂ ನಾಶವಾಗತಕ್ಕುದಲ್ಲಾ. ಉತ್ಪತ್ತಿಶೂನ್ಯವಾದು ದರಿಂದ " ಅನಾದಿ " ಎಂತಲೂ, ನಾಶವಿಲ್ಲದುದರಿಂದ " ನಿತ್ಯ " ವೆಂತ ಲೂ ಕರೆಯಲ್ಪಡುವುದಲ್ಲದೆ, ಪ್ರಕೃತಿಪುರುಷರಿಗೆ ಪರಸ್ಪರ ಸಂಯೋ ಗವನ್ನುಂಟುಮಾಡಿ, ತದ್ದ್ವಾರಾ ಸೃಷ್ಟಿ ಕಾರ್ಯವನ್ನು ಮಾಡಿಸುತ್ತಾ, ತಾ ನು ಸೃಷ್ಟಿ, ಸ್ಥಿತಿ,ಲಯರೂಪವಾದ ಪ್ರವಾಹದಲ್ಲಿ ಕಾರಣವಾಗಿರುವುದು. ಹಗಲುರಾತ್ರಿಗಳಂತೆ ನಿರವಧಿಕಗಳೆನಿಸಿದ ಸೃಷ್ಟಿ, ಸ್ಥಿತಿ, ಲಯಗಳೂ ಆ ಕಾಲದಿಂದಲೇ ಉಂಟಾಗುವುವು. ಆದಕಾರಣ ಅಂತಹಕಾಲವು ಮು ತ್ತೊಂದು ವಸ್ತುವಿನಿಂದ ಉದಯಿಸಿದುದಲ್ಲಾ. ಮತ್ತೊಂದು ವಸ್ತುವಿನ

ರ್ಗ ಸ್ಥಿತ್ಯಂತ ಸಂಯಮಾಃ ॥ ೨೬ ॥ ಗುಣಸಾಮ್ಯೇ ತತಸ್ತಸ್ಮಿನ್
ಪೃಥಕ್ಸ್ಥಿತೇ ವ್ಯವಸ್ಥಿತೇ । * ಕಾಲಸ್ವರೂಪಂ ತದ್ವಿಷ್ಣೋಃ
ಮೈತ್ರೇಯ! ಪರಿವರ್ತತೇ ॥ ೨೭ ॥ ತತಶ್ಚ ತತ್ಪರಂ ಬ್ರಹ್ಮ
ಪರಮಾತ್ಮಾ ಜಗನ್ಮಯಃ । ಸರ್ವಗ ಸ್ಸರ್ವಭೂತೇಶ ಸ್ಸರ್ವಾ
ತ್ಮಾ ಪರಮೇಶ್ವರಃ ॥ ೨೮ ॥ ಪ್ರಧಾನಪುರುಷೌ ಚಾಪಿ ಪ್ರವಿಶ್ಯಾ

ಆಶ್ರಯವೂ ಅದಕ್ಕೆ ಇರುವುದಿಲ್ಲ. ಸರ್ವವ್ಯಾಪಕನಾದ ಆ ಪರಬ್ರಹ್ಮನ ಮೂರನೆಯ ರೂಪವೇ ಕಾಲವೆನಿಸುವುದು ॥ ೨೬ ॥ ಬೇರೆಬೇರೆಯಾಗಿ ದ್ದುಕೊಂಡು ಪರಸ್ಪರ ಸಂಯೋಗವನ್ನು ಪಡೆಯದಿರುವ ಪ್ರಕೃತಿಪುರುಷರನ್ನು ಧರಿಸುವುದಕ್ಕಾಗಿಯೇ ಆ ಕಾಲವು, ರಾತ್ರಿ, ಹಗಲು, ಮೊದಲಾದ ಪ್ರಭೇದಗಳಿಂದ ಚಕ್ರದಂತೆ ಅನವರತವೂ ಸುತ್ತುತಲಿರುವುದು. ಯಾವ ಪರಮಾತ್ಮನು ಪ್ರಳಯಕಾಲದಲ್ಲಿ ಪ್ರಕೃತಿಯನ್ನಾಗಲಿ ಸೃಷ್ಟ್ಯಾದಿವ್ಯಾಪಾರಗಳನ್ನು ತೊರೆದು, ಕೇವಲ ನಿರ್ಗುಣನೆನಿಸಿ ಸಚ್ಚಿದಾನಂದ ಸ್ವರೂಪನೆನ್ನಿಸಿಕೊಳ್ಳುವನೋ ಅಂತಹ ಪರಮಾತ್ಮನೇ ಸೃಷ್ಟಿಕಾಲದಲ್ಲಿ ಪ್ರಕೃತಿಯೊಡನೆ ಸೇರಿ ಸೃಷ್ಟ್ಯಾದಿಕಾರ್ಯಗಳನ್ನು ನೆರವೇರಿಸುತ್ತಾ "ಪುರುಷ" ಶಬ್ದದಿಂದ ಕರೆಯಿಸಿಕೊಳ್ಳುವನು ॥೨೭॥

ಪ್ರಳಯವಾದ ಬಳಿಕ ಪುನಃ ಸೃಷ್ಟಿಕಾಲದಲ್ಲಿ, ಜಗತ್ಸ್ವರೂಪನೂ, ಸರ್ವಾಂತರ್ಯಾಮಿಯೂ, ಸಕಲ ಭೂತಗಳಿಗೂ ಅಧಿಪತಿಯೂ, ನಿಖಿಲಶಕ್ತಿಸಂಪೂರ್ಣನೂ, ಸರ್ವಜ್ಞನೂ, ಸರ್ವೋತ್ತಮನೂ ಎನಿಸಿ, ಪರಬ್ರಹ್ಮ ಅಥವಾ ಪರಮಾತ್ಮ ಶಬ್ದದಿಂದ ಕರೆಯಲ್ಪಡುವ ಆವಿಷ್ಣುವು

---

1 ಪ್ರಳಯಕಾಲದಲ್ಲಿ ಸೂರ್ಯಚಂದ್ರರಿಲ್ಲದಿರುವಕಾರಣ ಹಗಲುರಾತ್ರಿಗಳಿಲ್ಲ. ಆದುದರಿಂದ ಕಾಲವೂ ಇಲ್ಲ. ಇಂತಿರಲು ಕಾಲವು ಅನಾದಿ ಎಂತಲೂ,ನಿತ್ಯವೆಂತಲೂ,ಹೇಳುವುದು ಸರಿಯಲ್ಲವೆಂದು ಆಕ್ಷೇಪಿಸುವಶ. ಆದರೆ ಪ್ರಳಯ ಸಮಯದಲ್ಲಿ ಸೂರ್ಯಚಂದ್ರಗತಿಯಿಂದುಂಟಾಗುವಅಹೋರಾತ್ರಿರೂಪವಾದ ಸ್ಥೂಲಕಾಲವಿಲ್ಲದಿದ್ದರೂ ಪ್ರಳಯವು ಸಂಪೂರ್ಣವಾಗುವವರೆಗೂ ಪ್ರಕೃತಿಪುರುಷಭೇದಕವಾದ ವಿಷ್ಣುವಿನ ಮೂರನೆಯ ರೂಪವೆನಿಸಿದ ಸೂಕ್ಷ್ಮಕಾಲವು ಇರ್ತ್ತಿಯಿದಾಗಿಯೇ ಹೇಳಬೇಕು, ಆದು ದ್ದರಿಂದಕಾಲಕ್ಕೆ ಅನಾದಿತ್ವ ನಿತ್ಯತ್ವಾದಿಗಳು ವಿರುದ್ಧಧರ್ಮಗಳಲ್ಲ,

ತ್ಮೇಚ್ಛಯಾ ಹರಿಃ । ಕ್ಷೋಭಯಾಮಾಸ ಸಂಪ್ರಾಪ್ತೇ ಸರ್ಗಕಾಲೇ ವ್ಯಯಾವ್ಯಯೌ ॥ ೨೯ ॥ ಯಥಾ ಸಂನಿಧಿಮಾತ್ರೇಣ ಗಂಧಃ ಕ್ಷೋಭಾಯ ಜಾಯತೇ । ಮನಸೋ ನೋಪಕರ್ತೃತ್ವಾ ತ್ತ ಥಾ ಽಸೌ ಪರಮೇಶ್ವರಃ ॥೩೦॥ ಸ ಏವ ಕ್ಷೋಭಕೋ ಬ್ರಹ್ಮನ್! ಕ್ಷೋಭ್ಯಶ್ಚ ಪುರುಷೋತ್ತಮಃ । ಸ ಸಂಕೋಚ ವಿಕಾಸಾಭ್ಯಾಂ ಪ್ರಧಾನತ್ವೇ ಽಪಿ ಚ ಸ್ಥಿತಃ ॥ ೩೧ ॥ ವಿಕಾಸಾಣುಸ್ವರೂಪೈಶ್ಚ

ತನ್ನ ಇಚ್ಛಾನುಸಾರ * ಪ್ರಕೃತಿ ಪುರುಷರನ್ನು ಪ್ರವೇಶಿಸಿ, ಪರಸ್ಪರವಾಗಿ ಕ್ಷೋಭೆಗೊಂಡು, ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವಂತೆ ಅವುಗಳಿಗೆ ಕ್ಷೋಭೆಯನ್ನುಂಟುಮಾಡುವನು ॥ ೨೮ ॥ ೨೯ ॥ ಗಂಧವು ತಾನು ವಿಕಾರಶೂನ್ಯವಾಗಿದ್ದರೂ, ಸುಖದುಃಖವಿಕಾರಗಳನ್ನುಂಟುಮಾಡುವ್ರದರಿಂದ ತನ್ನ ಸಮೀಪದಲ್ಲಿರತಕ್ಕವರ ಮನಸ್ಸಿಗೆ ಎಂತು ಕ್ಷೋಭಕರವೋ, ಅಂತೆಯೇ ಆ ಪರಮಾತ್ಮನು, ತಾನು ಕ್ರಿಯಾಶೂನ್ಯನಾಗಿ, ವಿಕಾರರಹಿತನಾಗಿ, ಸುಖದುಃಖವಿಕಾರಗಳಿಗೆ ಒಳಗಾಗದವನಾಗಿದ್ದರೂ ಪ್ರಕೃತಿಪುರಷರನ್ನು ಪ್ರವೇಶಮಾಡುವಿಕೆಯಿಂದ ಅವುಗಳಿಗೆ ಚಿತ್ತಕ್ಷೋಭೆಯನ್ನುಂಟುಮಾಡಿ, ಆ ಪ್ರಕೃತಿಪುರುಷರಿಂದ ಸಕಲವಾದ ಸೃಷ್ಟ್ಯಾದಿಕಾರ್ಯಗಳನ್ನೂ ನೆರವೇರಿಸುವನು ॥ ೩೦ ॥ ಅಯ್ಯಾ ಬ್ರಹ್ಮಿಷ್ಠನೆ! ಆ ಪರಮಾತ್ಮನು ಸರ್ವಸ್ವರೂಪನೂ, ಸರ್ವಾಂತರ್ಯಾಮಿಯೂ ಆದುದರಿಂದ ಕ್ಷೋಭೆಗೊಳಿಸಿ ವಿಕಾರವನ್ನುಂಟುಮಾಡತಕ್ಕವನೂ, ಕ್ಷೋಭೆಯನ್ನು ಪಡೆದು ವಿಕಾರವನ್ನು ಹೊಂದತಕ್ಕವನೂ ಆತನೇ ಆಗಿರುವನು ಪ್ರಕೃತಿಪುರುಷರೂಪದಿಂದಿರುವವನೂ ಆತನೇ ಸಂಕೋಚ (ವಿಕರೂಪತೆ) ವಿಕಾಸ (ಗುಣವಿಕಾಸ) ಗಳೆಂಬ ಎರಡು ಅವಸ್ಥೆಗಳನ್ನು ಪಡೆದು, ಪ್ರಕೃತಿ

* 1 "ಪ್ರಕೃತಿ" ಎಂದರೆ ಗುಣವೈಷಮ್ಯವನ್ನು ಪಡೆದು, ವಿನಾಶ, ಪರಿಣಾಮ ಯುಕ್ತವಾದದ್ದು

2 "ಪುರುಷ" ಎಂದರೆ, ಜ್ಞಾನವಿಕಾಸವನ್ನು ಹೊಂದಿ, ನಾಶರಹಿತನಾಗಿ ಪರಿಣಾಮರಹಿತನೆನಿಸಿ, ಕೂಟಸ್ಥ, ಕ್ಷೇತ್ರಜ್ಞ ಮೊದಲಾದ ಶಬ್ದಗಳಿಂದ ವ್ಯವಹರಿಸಲ್ಪಡತಕ್ಕವನು.

ಬ್ರಹ್ಮರೂಪಾದಿಭಿ ಸ್ತಥಾ । ವ್ಯಕ್ತಸ್ವರೂಪಶ್ಚ ತಥಾ ವಿಷ್ಣುಸ್ಸ
ರ್ವೇಶ್ವರೇಶ್ವರಃ ॥೫೩॥ ಗುಣಸಾಮ್ಯಾತ್ತ ತ ಸ್ತಸ್ಮಾತ್ ಕ್ಷೇತ್ರ
ಜ್ಞಾಧಿಷ್ಠಿತಾ ನ್ಮನೇ!। ಗುಣವ್ಯಂಜನ ಸಂ ಭೂತಿ ಸ್ಸರ್ಗಕಾಲೇ
ದ್ವಿಜೋತ್ತಮ ॥೫೪॥ ಪ್ರಧಾನತತ್ವ ಮುದ್ಭೂತಂ ಮಹಾಂತಂ ತ
ತ್ಸಮಾವೃಣೋತ್॥ ಸಾತ್ವಿಕೋ ರಾಜಸಶ್ಚೈವ ತಾಮಸ ಶ್ಚತ್ರಿ
ಧಾಮಹಾ ! ॥೫೪॥ ಪ್ರಧಾನತತ್ವೇನ ಸಮಂ ತ್ವಚಾಬೀಜಮಿ

ರೂಪದಲ್ಲಿರತಕ್ಕವನೂ ಆ ಪರಮಾತ್ಮನೇ ॥ ೫೦ ॥ ವಿಕಾಸವನ್ನು ಪಡೆ
ದಿರುವ ಮಹಾಭೂತ, ಮಹತ್ತತ್ವ ಮೊದಲಾದ ರೂಪಗಳಿಂದಲೂ,
ಸೂಕ್ಷ್ಮರೂಪವನ್ನು ಪಡೆದಿರುವ ಬ್ರಹ್ಮ, ಜೀವಾತ್ಮ ಮೊದಲಾದ ರೂಪ
ದಿಂದ ವ್ಯಕ್ತಸ್ವರೂಪನೆನಿಸಿ ಸಮಷ್ಟಿವ್ಯಷ್ಟಿರೂಪಗಳಿಂದ ಕಾಣುವ
ವನೂ ಆತನೇ ॥ ೫೨ ॥

ಅಯ್ಯಾ ಮನನಶೀಲನನಿಸಿ ಬ್ರಹ್ಮಣ್ಯಶ್ರೇಷ್ಠನಾದ ಮೈತ್ರೇ
ಯನೇ ! ಇನ್ನು ಮುಂದೆ ಮಹತ್ತತ್ವನೊದಲಾದ ಪ್ರಪಂಚಸೃಷ್ಟಿ
ಯನ್ನು ಕ್ರಮವಾಗಿ ಹೇಳುವೆನು ಅವಹಿತನಾಗಿ ಕೇಳು ಇಂತು ಪರ
ಬ್ರಹ್ಮನಿಂದ ಪ್ರಕೃತಿ ಪುರುಷರಿಬ್ಬರೂ ಕ್ಷೋಭೆಯನ್ನು ಪಡೆದ ಬಳಿಕ
ಸೃಷ್ಟಿಕಾಲದಲ್ಲಿ ಕ್ಷೇತ್ರಜ್ಞಶಬ್ದವಾಚ್ಯನಾದ ಪುರುಷನಿಂದ ಅಧಿಷ್ಠಿ
ತವಾದ ಪ್ರಕೃತಿಯು, ಸಾತ್ವಿಕ, ರಾಜಸ, ತಾಮಸಗುಣಗಳನ್ನು ಹೊರ
ಪಡಿಸುವ ಮಹತ್ತತ್ವವನ್ನು ಉಂಟುಮಾಡಿತು ॥ ೫೫ ॥ ಮೃತ್ತು, ಪಿಂಡ,
ಕಪಾಲಾದ್ಯಾಕಾರಗಳನ್ನು ಪಡೆದು ಘಟಕ್ಕೆ ಉಪಾದಾನಕಾರಣವೆನಿಸಿ,
ಘಟೋತ್ಪತ್ತ್ಯ ನಂತರದಲ್ಲಿ, ಘಟವು ನಷ್ಟವಾದಾಗ್ಯೂ ಪುನಃ "ಮೃ
ತ್ತು"ಎಂಬವ್ಯವಹಾರವನ್ನೇ ಎಂತು ಪಡೆಯುವುದೋ ಅಂತೆಯೇ ಈಶ್ವ
ರಾಧಿಷ್ಠಾನವನ್ನು ಪಡೆದ ಆ ಪ್ರಕೃತಿಯು ಮಹದಾದ್ಯವಾಂತರ ಕಾರ್ಯ
ಗಳಾಗಿ ಪರಿಣಮಿಸಿ, ಚರಮ ಕಾರ್ಯಗಳಾದ ದೇಹಾದಿಗಳಿಗೂ ತಾನೇ
ಉಪಾದಾನ ಕಾರಣವಾಗಿರುವುದು. ಅಂತೆಂದರೆ —ಈಶ್ವರಾಧಿಷ್ಠಿ
ತವಾದ ಆ ಪ್ರಧಾನ ತತ್ವವು ಕ್ಷೋಭೆಗೊಂಡು ಮಹತ್ತತ್ವವನ್ನು ಆವರಿ
ಸಿಕೊಂಡಿತು. ಇಂತಹ ಮಹತ್ತತ್ವವು ಸಾತ್ವಿಕ, ರಾಜಸ, ತಾಮಸಗ

ವಾವ್ಯಕಂ। ವೈಕಾರಿಕ ಸ್ತೈಜಸಶ್ಚ ಭೂತಾದಿ ಶ್ಚೈವತಾಮಸಃ।
॥೫೫॥ತ್ರಿವಿಧೋಽಯಮು ಹಂಕಾರೋ ಮಹತ್ತತ್ವಾ ದಜಾಯತ।
ಭೂತೇಂದ್ರಿಯಾಣಾಂ ಹೇತುಸ್ಸ ತ್ರಿಗುಣತ್ವಾನ್ಮಹಾಮುನೇ। ॥
ಯಥಾಪ್ರಧಾನೇನ ಮಹಾ೯ ಮಹತಾ ಸ ತಥಾವೃತಃ॥೫೬॥ಭೂತಾ
ದಿಸ್ತು ವಿಕುರ್ವಾಣ ಶ್ಶಬ್ದತನ್ಮಾತ್ರಕಂ ತತಃ। ಸಸರ್ಜ ಶಬ್ದತನ್ಮಾ
ತ್ರಾ ದಾಕಾಶಂ ಶಬ್ದಲಕ್ಷಣವ೯॥೫೭॥ ಶಬ್ದಮಾತ್ರಂ ತಥಾಽಕಾ
ಶಂ ಭೂತಾದಿ ಸ್ಸ ಸಮಾವೃಣೋತ್। ಆಕಾಶಸ್ತು ವಿಕುರ್ವಾಣ
ಸ್ಸ್ಪರ್ಶಮಾತ್ರಂ ಸಸರ್ಜ ಹ ॥೫೮॥ ಬಲವಾ ನಭವ ದ್ವಾಯು

ಳೆಂಬದಾಗಿ ಮೂರು ನಿಧವಾಗಿರುವುದು ॥ ೫೪ ॥ ಬೀಜದಮೇಲಿನ ಸಿಪ್ಪೆ
ಯು ಬೀಜವನ್ನು ಅನ್ಯೂನಾತಿ ರಿಕ್ತವಾಗಿ (ಹೆಚ್ಚು ಕಡಿಮೆ ಇಲ್ಲದೆಕ
ಸಂಪೂರ್ಣವಾಗಿ) ವ್ಯಾಪಿಸಿರುವಂತೆಯೇ ಆ ಪ್ರಧಾನತತ್ವವೂ, ಸಾತ್ವಿದ
(ವೈಕಾರಿಕ) ರಾಜಸ, (ತೈಜಸ) ತಾಮಸರೂಪವಾದ ಭೂತಾದಿಗಳ
ನ್ನೂ, ಸಮವಾಗಿ ವ್ಯಾಪಿಸಿಕೊಂಡಿತು ॥೫೫॥ ಅಯ್ಯಾ ಮುನಿವರ್ಯನಾದ
ಮೈತ್ರೇಯನೆ ! ಪಂಚಭೂತಗಳು, ಇಂದ್ರಿಯಗಳು, ದೇವತೆಗಳು ಮೊ
ದಲಾದವರ ಉತ್ಪತ್ತಿಗೆ ಕಾರಣವಾಗಿರುವುದರಿಂದ ತ್ರಿಗುಣಾತ್ಮಕವೆನಿ
ಸಿದ ಈ ಅಹಂಕಾರವು ಮಹತ್ತತ್ವದಿಂದುಂಟಾಯಿತು. ಪ್ರಧಾನತ
ತ್ವವು ಮಹತ್ತತ್ವವನ್ನು ಎಂತು ಆವರಿಸಿಕೊಂಡಿತೋ,ಅಂತೆಯೇ ಆ ಮ
ಹತ್ತತ್ವವೂ ಕೂಡ ಭೂತಾದಿಗಳನ್ನು ಆವರಿಸಿಕೊಂಡಿತು ॥೫೬॥ ಅಯ್ಯಾ
ಮುನಿಕುಲಾವತಂಸನಾದ ಮೈತ್ರೇಯನೆ ! ಇನ್ನು ತಾಮಸಾಹಂಕಾರ
ಕಾರ್ಯವನ್ನು ನಿರೂಪಿಸುವೆನು ಇಂತು ಕ್ಷೋಭೆಗೊಂಡ ಭೂತಾದಿಗಳು
ಶಬ್ದತನ್ಮಾತ್ರವೆಂಬ ಭೂತಸೂಕ್ಷ್ಮರೂಪವನ್ನು ವ್ಯಾಪಿಸಿದುವು. ಇಂತು
ವ್ಯಾಪಿಸಲ್ಪಟ್ಟ ಶಬ್ದತನ್ಮಾತ್ರದಿಂದ, ಶಬ್ದವೇ ವ್ಯಾವರ್ತಕಗುಣವಾಗಿ
ಉಳ್ಳ ಆಕಾಶವು ಉತ್ಪನ್ನವಾಯಿತು ॥೫೭॥ ಇಂತು ಆಕಾಶೋತ್ಪತ್ತಿ
ಯಾದ ಬಳಿಕ ಭೂತಾದಿಗಳು ಪುನಃ ಶಬ್ದತನ್ಮಾತ್ರವನ್ನೂ ಆಕಾಶ
ವನ್ನೂ ಕೂಡ ಆವರಿಸಿಕೊಂಡವು ಇದರಿಂದ ವಿಕಾರವನ್ನು ಪಡೆದ ಆ
ಕಾಶವು ಸ್ಪರ್ಶತನ್ಮಾತ್ರವನ್ನು ಉಂಟುಮಾಡಿತು ॥೫೮॥ ಇಂತಹ ಸ್ಪರ್ಶ

ಸ್ತಸ್ಯೈ ಸ್ಪರ್ಶೋ ಗುಣೋ ಮತಃ । ಆಕಾಶಂ ಶಬ್ದಮಾತ್ರಂ ತು
ಸ್ಪರ್ಶಮಾತ್ರಂ ಸಮಾವೃಣೋತ್ ॥ ೫೯ ॥ ತತೋ ವಾಯುರ್ವಿ
ಕುರ್ವಾಣೋ ರೂಪಮಾತ್ರಂ ಸಸರ್ಜಹ । ಜ್ಯೋತಿ ರುತ್ಪದ್ಯತೇ
ವಾಯೋ ಸ್ತದ್ರೂಪಗುಣ ಮುಚ್ಯತೇ ॥ ೬೦ ॥ ಸ್ಪರ್ಶಮಾತ್ರ
ಸ್ತು ವೈ ವಾಯೂ ರೂಪಮಾತ್ರಂ ಸಮಾವೃಣೋತ್ । ಜ್ಯೋತಿ
ಶ್ಚಾಪಿ ವಿಕುರ್ವಾಣಂ ರಸಮಾತ್ರಂ ಸಸರ್ಜಹ ॥ ೬೧ ॥ ಸಂಭ
ವಂತಿ ತತೋಂ S ಭಾಂಸಿ ರಸಾಧಾರಾಣಿ ತಾನಿ ತು । ರಸಮಾ
ತ್ರಾಣಿ ಚಾಂಭಾಂಸಿ ರೂಪಮಾತ್ರಂ ಸಮಾವೃಣೋತ್ ॥ ೬೨ ॥
ವಿಕುರ್ವಾಣಾನಿ ಚಾಂಭಾಂಸಿ ಗಂಧಮಾತ್ರಂ ಸಸರ್ಜಿರೇ । ಸಂ
ಘಾತೋ ಜಾಯ ತೇ ತಸ್ಮಾ ತ್ತಸ್ಯ ಗಂಧೋ ಗುಣೋ ಮತಃ ॥

ತನ್ಮಾತ್ರದಿಂದ ಮಹಾ ಬಲಿಷ್ಠವೆನಿಸಿ ಸ್ಪರ್ಶವೇವ್ಯಾವರ್ತಕಗುಣ (ವಿ
ಶೇಷಗುಣ)ವಾಗಿ ಉಳ್ಳ ವಾಯುವು ಉಂಟಾಯಿತು. ಅನಂತರದಲ್ಲಿ ಶಬ್ದ
ತನ್ಮಾತ್ರ, ಆಕಾಶಗಳೆರಡೂ ಸ್ಪರ್ಶತನ್ಮಾತ್ರವೆಂಬ ಭೂತಸೂಕ್ಷ್ಮರೂಪವ
ನ್ನು ಆವರಿಸಿಕೊಂಡವು ॥೫೯॥ ಆ ಬಳಿಕ ಶಬ್ದತನ್ಮಾತ್ರ ಆಕಾಶಗಳಿಂದ
ವಿಕಾರಗೊಂಡ ವಾಯುವು ರೂಪತನ್ಮಾತ್ರವೆಂಬ ಭೂತಸೂಕ್ಷ್ಮವನ್ನು
ಸೃಷ್ಟಿಮಾಡಿತು. ಇಂತು ರೂಪತನ್ಮಾತ್ರವು ಉದಯಿಸಿದಬಳಿಕ ಸ್ಪರ್ಶತ
ನ್ಮಾತ್ರರೂಪವಾದ ವಾಯುವಿನಿಂದ ರೂಪವೇ ವ್ಯಾವರ್ತಕಗುಣವಾಗಿ
ಉಳ್ಳ ಸ್ಥೂಲವಾದ ತೇಜಸ್ಸು ಉದಯಿಸಿತು ॥೬೦॥ ಅನಂತರ ಸ್ಪರ್ಶತ
ನ್ಮಾತ್ರವಾದ ವಾಯುವು ರೂಪತನ್ಮಾತ್ರವನ್ನು ಆವರಿಸಿಕೊಂಡಿತು ಬಳಿಕ
ವಿಕಾರವನ್ನು ಹೊಂದಿದ ಆ ಸ್ಥೂಲವಾದ ತೇಜಸ್ಸು ರಸತನ್ಮಾತ್ರವನ್ನು
ಉಂಟುಮಾಡಿತು ॥೬೧॥ಇಂತು ಉದಯಿಸಿದ ರಸತನ್ಮಾತ್ರವು ರಸಾಧಾ
ರಗಳೆನಿಸಿದ ಉದಕಗಳನ್ನು ಉಂಟುಮಾಡಿತು. ಆ ಬಳಿಕ ರೂಪತನ್ಮಾ
ತ್ರವು ರಸತನ್ಮಾತ್ರಗಳಾದ ಉದಕಗಳನ್ನು ಆವರಿಸಿಕೊಂಡಿತು ॥೬೨॥ ಅ
ನಂತರದಲ್ಲಿ ಇಂತು ವಿಕಾರವನ್ನು ಪಡೆದ ಉದಕಗಳು ಗಂಧತನ್ಮಾತ್ರವ
ನ್ನುಸೃಷ್ಟಿಮಾಡಿದವು. ಅಂತಹ ಗಂಧತನ್ಮಾತ್ರದಿಂದ ಸರ್ವಗುಣಸಮುದಾ
ಯರೂಪವಾದ ಪೃಥಿವಿಯು ಉದಯಿಸಿತು, ಇದಕ್ಕೆ ಗಂಧವೇ ವಿಶೇಷ

ತಸ್ಮಿಂ ಸ್ತಸ್ಮಿಂಶ್ಚ ತನ್ಮಾತ್ರಂ ತೇನ ತನ್ಮಾತ್ರತಾ ಸ್ಮೃತಾ ॥೪೪॥ ತನ್ಮಾತ್ರಾಣ್ಯವಿ ಶೇಷಾಣಿ ಅವಿಶೇಷಾಸ್ತತೋಽಹಮೇ ॥೪೫॥ ನಶಾಂತಾ ನಾಪಿ ಘೋರಾಸ್ತೇ ನಮೂಢಾ ಶ್ಚಾವಿಶೇಷಿಣಃ।ಭೂತ ತನ್ಮಾತ್ರಸರ್ಗೋಽಯಂ ಮಹಂಕಾರಾತ್ತು ತಾಮಸಾತ್ ॥೪೬॥ತೈಜಸಾನೀಂದ್ರಿಯಾಣ್ಯಾ ಹು*

ಗುಣವು ॥೪೫॥ ಆಕಾಶಾದಿ ಭೂತಗಳಲ್ಲಿ ವಿಶೇಷರಹಿತಗಳಾದ ಶಬ್ದ ಸ್ಪರ್ಶಾದಿ ಗುಣಗಳು ಮಾತ್ರವೇ ತೋರಿಬರುವಕಾರಣ ಆ ಆ ತತ್ವಗಳಲ್ಲಿನ ಆ ಆ ಗುಣಗಳು ತನ್ಮಾತ್ರಗಳೆನಿಸಿಕೊಳ್ಳುವುವು ॥೪೪॥ ಆ ಭೂತ ತನ್ಮಾತ್ರಗಳು ವಿಶೇಷ ಗುಣರಹಿತಗಳಾದುದರಿಂದಲೇ ಆ ಶಬ್ದಾದಿ ಗುಣಗಳನ್ನು ಸಾಂಖ್ಯಶಾಸ್ತ್ರಜ್ಞರು ಅವಿಶೇಷ ಶಬ್ದದಿಂದ ಕರೆಯುವರು॥೪೫॥ ಸತ್ವ, ರಜಸ್ತಮಸ್ಸುಗಳೆಂಬ ಮೂರು ವಿಧಗಳಾದ ಗುಣಗಳಿಂದುಂಟಾಗುವ ಶಾಂತಿ, ಕ್ರೌರ್ಯ, ಮೌಢ್ಯಗಳೆಂಬ ಮೂರು ವಿಧಗಳಾದ ಗುಣಗಳೂ ಆ ಭೂತತನ್ಮಾತ್ರಗಳಲ್ಲಿಲ್ಲ. ಆದುದರಿಂದಲೇ ಆ ಭೂತ ತನ್ಮಾತ್ರಗಳು (ನಿರ್ವಿಶೇಷ) ವಿಶೇಷರಹಿತಗಳೆನ್ನಲ್ಪಡುವವು. ಹಿಂದೆ ಹೇಳಿದ ಭೂತಗಳು ಅವುಗಳ ತನ್ಮಾತ್ರಗಳು ಇವುಗಳ ಉತ್ಪತ್ತಿಯು (ಸೃಷ್ಟಿಯು) ತಾಮಸಾಹಂಕಾರದಿಂದುಂಟಾಯಿತು ॥ ೪೬ ॥ ಬಳಿಕ ತೈಜಸಾಹಂಕಾರದಿಂದ(ರಾಜಸಾಹಂಕಾರ)ಚರ್ಮ, ಕಣ್ಣು,ಮೂಗು, ನಾಲಿಗೆ, ಕಿವಿಗಳೆಂಬ ಐದು ಜ್ಞಾನೇಂದ್ರಿಯಗಳೂ, ಪಾಯು, ಉಪಸ್ಥ, ಕೈಗಳು, ಕಾಲುಗಳು, ವಾಕ್ಕು ಎಂಬ ಐದು ಕರ್ಮೇಂದ್ರಿಯಗಳೂ ಸೇರಿ ಒಟ್ಟು ಹತ್ತು ಇಂದ್ರಿಯಗಳೂ ಹನ್ನೊಂದನೆಯ ಇಂದ್ರಿಯವಾದ ಮನಸ್ಸೂ, ಈ ಇಂದ್ರಿಯಗಳಿಗೆ ಅಭಿಮಾನಿಗಳಾದ ಇಂದ್ರ ಮೊದಲಾದ ದೇವತೆಗಳೂ ಉಂಟಾದರು ॥೪೭॥ ಅಯ್ಯಾ ಬ್ರಾಹ್ಮಣೋತ್ತಮನೆ ! ಆ ಹನ್ನೊಂದು ಇಂದ್ರಿಯಗಳಲ್ಲಿ ಚರ್ಮದಿಂದ ಸ್ಪರ್ಶವೂ, ಕಣ್ಣುಗಳಿಂದ ರೂಪವೂ, ಮೂಗಿನಿಂದ ಗಂಧವೂ, [ವಾಸನೆ] ನಾಲಗೆಯಿಂದ ರಸವೂ, (ರುಚಿಯೂ) ಕಿವಿಗಳಿಂದ ಶಬ್ದವೂ ತಿಳಿಯುವಕಾರಣ ಈ ಮೇಲೆ ಹೇ

---

* ದಿಗ್ವಾತಾರ್ಕ ಪ್ರಚೇತೋಶ್ವಿ ವಹ್ನೀಂದ್ರೋಪೇಂದ್ರ ಮಿತ್ರಕಾಃ।ದಿಕ್ಕುಗಳು, ವಾಯು, ಸೂರ್ಯ, ವರುಣ, ಅಶ್ವಿನೀದೇವತೆಗಳು, ವಸ್ಹ್ನಿ, ಇಂದ್ರ, ಉಪೇಂದ್ರ, ಮಿತ್ರ, ಚತುರ್ಮುಖನೆಂಬ ಈ ಹತ್ತು ಮಂದಿಯೂ ಇಂದ್ರಿಯಾಭಿಮಾನಿ ದೇವತೆಗಳು.

ರ್ದೇವಾ ವೈಕಾರಿಕಾದಶ। ಏಕಾದಶಂ (.) ಮನಶ್ಚಾತ್ರದೇವಾ ವೈಕಾರಿಕಾ ಸ್ಮೃತಾಃ ॥೪೬॥ ತ್ವಕ್ ಚಕ್ಷುರ್ನಾಸಿಕಾ ಜಿಹ್ವಾ ಶ್ರೋತ್ರಮತ್ರ ಚಪಂಚಮಂ । ಶಬ್ದಾದೀನಾ ಮವಾಪ್ತ್ಯರ್ಥಂ ಬುದ್ಧಿಯುಕ್ತಾನಿ ವೈದ್ವಿಜ! ॥೪೭॥ ಪಾಯೂಪಸ್ಥಿಕತಾ ಪಾದೌವಾಕ್ಚ ಮೈತ್ರೇಯ ! ಪಂಚಮಿಾ । ವಿಸರ್ಗ ಶಿಲ್ಪ ಗತ್ಯುಕ್ತಿ ಕರ್ಮತೇಷಾಂ ಚ ಕರ್ಮಧೃಕ್ ॥೪೮॥ ಆಕಾಶವಾಯು ತೇಜಾಂಸಿ ಸಲಿಲಂ ಪೃಥಿವೀ ತಥಾ । ಶಬ್ದಾದಿಭಿ ರ್ಗುಣೈ ಬ್ರ್ಯಹ್ಮ ! ಸಂಯುಕ್ತಾ*ನ್ಯುತ್ತರೋತ್ತರೈಃ॥೪೯॥ಶಾಂತಾ ಘೋರಾ

ಳಿದ ತ್ವಕ್, ಚಕ್ಷುಸ್ಸು, ನಾಸಿಕಾ, ಜಿಹ್ವಾ, ಶ್ರೋತ್ರಗಳೆಂಬ ಈ ಐದು ಇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳೆಂಬದಾಗಿ ಕರೆಯುವರು ॥೪೭॥ ಎಲೌ ಮೈತ್ರೇಯನೆ! ಮಿಕ್ಕ ಇಂದ್ರಿಯಗಳಲ್ಲಿ ಪಾಯುವಿನಿಂದ (ಗುದದಿಂದ) ಮಲವಿಸರ್ಜನೆಯೂ, ಉಪಸ್ಥ (ಸ್ತ್ರೀತ್ವ ಪುಂಸ್ತ್ವದ್ಯೋತಕವಾದ ಚಿಹ್ನವಿಶೇಷ) ದಿಂದ ಆನಂದವೂ, ಕೈಗಳಿಂದ ಚಿತ್ರಬರವಣಿಗೆ ಮೊದಲಾದ ಚಾತುರ್ಯವೂ, ಕಾಲುಗಳಿಂದ ಸಂಚಾರವೂ, ವಾಗಿಂದ್ರಿಯ (ಬಾಯಿ) ದಿಂದ ಮಾತನಾಡುವಿಕೆ, ಎಂಬ ವ್ಯಾಪಾರಗಳು ನಡೆಯುವ ಕಾರಣ ಈ ಮೇಲೆ ಹೇಳಿದ ಪಾಯು, ಉಪಸ್ಥ, ಪಾಣಿ [ಕೈ] ಪಾದ, ವಾಕ್ಕುಗಳು ಐದೂ ಕರ್ಮೇಂದ್ರಿಯಗಳೆಂಬದಾಗಿ ಕರೆಯಲ್ಪಡುವುವು. ಸುಖ, ದುಃಖಗಳನ್ನು ತಿಳಿಯುವಿಕೆಯೇ ಹನ್ನೊಂದನೆಯ ಇಂದ್ರಿಯವಾದ ಮನಸ್ಸಿನ ಕಾರ್ಯವು ॥ ೪೯ ॥ ಆಕಾಶ, ವಾಯು, ತೇಜಸ್ಸು,

( )ಮನಸ್ಸು, ಚೇತನ, ಅಹಂಕಾರ, ಸಂಕಲ್ಪ, ಅಧ್ಯವಸಾಯಗಳೆಂಬ ನಾಲ್ಕು ಭೇದಗಳುಳ್ಳದ್ದು ಆ ನಾಲ್ಕು ವಿಧಗಳಾದ ಮನೋವೃತ್ತಿಗಳಿಗೂ, ಕ್ಷೇತ್ರಜ್ಞ (ಪುರುಷ) ರುದ್ರ, ಚಂದ್ರ, ಚತುರ್ಮುಖರೆಂಬ ನಾಲ್ಕುವಂದಿ ಅಭಿಮಾನಿಗಳು. ಇವೆಲ್ಲವೂ ತೈಜಸಾಹಂಕಾರಕಾರ್ಯವು.

* ಆಕಾಶದಲ್ಲಿ ಶಬ್ದ ಹೊರತು ಮತ್ತಾವ ಕಾರಣಗುಣವೂ ಇಲ್ಲವಾದುದರಿಂದ ಶಬ್ದವು ಒಂದೇಗುಣವು ವಾಯುವಿನಲ್ಲಿ ತನಗೆ ಕಾರಣವಾದ ಆಕಾಶದ ಗುಣವಾದ ಶಬ್ದವೂ, ಸ್ವೀಯಗುಣವಾದ ಸ್ಪರ್ಶವೂ, ಎಂತು ಎರಡು ಗುಣಗಳೂ ಇಂತೆಯೇ ತೇಜಸ್ಸಿನಲ್ಲಿ ಶಬ್ದ, ಸ್ಪರ್ಶ, ರೂಪಗಳೆಂಬ ಮೂರು ಗುಣಗಳೂ ಜಲದಲ್ಲಿ ಶಬ್ದ, ಸ್ಪರ್ಶ ರೂಪ, ರಸಗಳೆಂಬ ನಾಲ್ಕು ಗುಣಗಳೂ ಪೃಥಿವಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ ಗಂಧಗಳೆಂಬ ಐದು ಗುಣಗಳು ಇವುಗಳಲ್ಲಿ ಕೊನೆಯದು ಸ್ವೀಯಗುಣವೆಂತಲೂ ಮಿಕ್ಕವುಗಳೆಲ್ಲವೂ ಸ್ವಕಾರಣಗಳಿಂದ ಭೂತಸಂಬಂಧಿ ಗುಣಗಳೆಂತಲೂ ಭಾವವು.

ರಾಶ್ಚ ಮೂಢಾಶ್ಚ ವಿಶೇಷಾಸ್ತೇನತೇ ಸ್ಮೃತಾಃ ॥೫೧॥ * ನಾನಾ ವೀ ರ್ಯಾಃಪೃಥಗ್ಭೂತಾಸ್ತತಸ್ತೇ ಸಂಹತಿಂ ವಿನಾ । ನಾಶಕ್ನು ವನ್ಪ್ರಜಾಸ್ಸೃ ಷ್ಟು ಮಸಮಾಗಮ್ಯ ಕೃತ್ಸ್ನಶಃ ॥೫೨॥ ಸಮೇತ್ಯಾನ್ಯೋನ್ಯ ಸಂಯೋ ಗಂ ಪರಸ್ಪರಸಮಾಶ್ರಯಾಃ । ಏಕಸಂಘಾತಲಕ್ಷ್ಯಾಶ್ಚ ಸಂಪ್ರಾಪ್ಯೈಕ್ಯ ಮಶೇಷತಃ ॥೫೩॥ ಪುರುಷಾಧಿಷ್ಠಿ ತತ್ವಾ ಚ್ಚಾ ಪ್ಯವ್ಯಕ್ತಾನುಗ್ರಹೇಣ

ಜಲ, ಪೃಥಿವಿಗಳೆಂಬ ಪಂಚಭೂತಗಳಲ್ಲಿಯೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳೂ ಕ್ರಮದಿಂದ ಒದೊಂದಾಂಗಿ ಹೆ ಚ್ಚುವುವು ॥೫೦॥ ಇಂತು ಗುಣವಿಶೇಷಗಳಿಂದ ಶಾಂತಸ್ವಭಾವವುಳ್ಳವುಗ ಳೂ, (ಸುಖಕರಗಳೂ) ಕ್ರೂರಸ್ವಭಾವವುಳ್ಳವುಗಳೂ, (ದುಃಖಕರಗ ಳೂ) ಮೂಢಸ್ವಭಾವವುಳ್ಳವುಗಳೂ, (ಮೋಹ ಅಥವ ಅಜ್ಞಾನಜನಕಗ ಳೂ,) ಆಗಿರುವುದರಿಂದಲೇ ಆಕಾಶಾದಿ ಭೂತಗಳು ' ವಿಶೇಷ, ಗಳೆಂದು ಕರೆಯಲ್ಪಡುವುವು॥೫೧॥ಅಯ್ಯಾ ಮೈತ್ರೇಯನೆ! ಇಂತು ಮಹದಾದಿಕಾ ರಣ ಸೃಷ್ಟಿಯನ್ನು ವಿವರಿಸಿದೆನು. ಇನ್ನು ಆ ಕಾರಣಸಮುದಾಯದಿಂ ದುಂಟಾಗುವ ಬ್ರಹ್ಮಾಂಡ ಸೃಷ್ಟಿಪ್ರಕಾರವನ್ನು ತಿಳಿಸುವೆನು --ಇಂತು ನಾನಾವಿಧ ಶಕ್ತಿಗಳುಳ್ಳ ಆ ಆಕಾಶಾದಿ ಪಂಚಭೂತಗಳು ಬಂದಾಗಿ ಸೇರಿ ಪರಸ್ಪರ ಸಹಾಯವನ್ನು ಪಡೆಯದಿರುವಕಾರಣ ನಾನಾವಿಧಗಳಾದ ಭೋಗಗಳನ್ನು ಅನುಭವಿಸುವಿಕೆಯಲ್ಲಿ ಸಾಧಕಗಳೆನಿಸಿದ ಶರೀರಾದಿಗ ಳನ್ನು ಸೃಷ್ಟಿಮಾಡಲು ಸಾಮರ್ಥ್ಯರಹಿತಗಳಾದುವು ॥೫೨॥ ಅಂತಹ ಭೋಗಾಯತನಗಳಾದ ಶರೀರಾದಿಗಳನ್ನು ಸೃಷ್ಟಿಮಾಡಲು ನಾನಾಶಕ್ತಿ ಯುಕ್ತಗಳಾದ ಆ ಪಂಚಭೂತಗಳು ಬಂದಾಗಿ ಸೇರಿ, ಪರಸ್ಪರ ಸಹಾ ಯವನ್ನು ಪಡೆಯುವುವು. ಆದುದರಿಂದ ಆ ಪಂಚಭೂತಗಳೂ ಪರಸ್ಪರ ವಾಗಿ ಆಶ್ರಯವನ್ನು ಹೊಂದಿ ಅನ್ಯೋನ್ಯಸಂಯುಕ್ತಗಳಾಗಿ ಐಕ್ಯವನ್ನು ಹೊಂದಿ ಅನಂತಗಳಾದ ಪ್ರಜೆಗಳಿಂದ ನಿಬಿಡವಾದ ಬ್ರಹ್ಮಾಂಡವನ್ನು ಉಂಟುಮಾಡುವಿಕೆಯಲ್ಲಿ ಆಸಕ್ತಿಯನ್ನು ವಹಿಸಿದುವು ॥೫೩॥ ಒಳಕ

---

* ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತ-ಳಲ್ಲಿ ಕ್ರಮವಾಗಿ, ಕಾಠಿಣ್ಯ. ದ್ರವ, ದಹನ, ಕೋಷಣ ಅವಕಾಶಗಳೆಂಬಶಕ್ತಿಗಳಿರುವವು.

ರ್ದೇವಾ ವೈಕಾರಿಕಾದಶ। ಏಕಾದಶಂ (.) ಮನಶ್ಚಾತ್ರದೇವಾ ವೈಕಾರಿಕಾ ಸ್ಮೃತಾಃ ॥೪೬॥ ತ್ವಕ್ ಚಕ್ಷುಸ್ ರ್ನಾಸಿಕಾ ಜಿಹ್ವಾ ಶ್ರೋತ್ರಮತ್ರ ಚಪಂಚಮಂ । ಶಬ್ದಾದೀನಾ ಮವಾಪ್ತ್ಯರ್ಥಂ ಬುದ್ಧಿಯು,ಕ್ತಾನಿ ವೈದ್ಯಿಜ! ॥೪೭॥ ಪಾಯೂಪಸ್ಥಿಕತಾ ಪಾದೌವಾಕ್ಚ ಮೈತ್ರೇಯ ! ಪಂಚಮಿಾ । ವಿಸರ್ಗ ಶಿಲ್ಪ ಗತ್ಯುಕ್ತಿ ಕರ್ಮತೇಷಾಂ ಚ ಕಥ್ಯತೇ ॥೪೯॥ ಆಕಾಶವಾಯು ತೇಜಾಂಸಿ ಸಲಿಲಂ ಪೃಥಿವೀ ತಥಾ । ಶಬ್ದಾದಿಭಿ ರ್ಗ್ರಸ್ಯೈ ಬ್ರ್ಯಹ್ಮಕ್ಷ ' ಸಂಯುಕ್ತಾ *ಸ್ಯುತ್ತರೋತ್ತರೈಃ॥೫೦॥ಶಾಂತಾ ಘೋ

ಳಿದ ತ್ವಕ್, ಚಕ್ಷುಸ್ಸು, ನಾಸಿಕಾ, ಜಿಹ್ವಾ,ಶ್ರೋತ್ರಗಳೆಂಬ ಈ ಐದು ಇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳೆಂಬದಾಗಿ ಕರೆಯುವರು ॥೪೮॥ ಎಲೌ ಮೈತ್ರೇಯನೆ! ಮಿಕ್ಕ ಇಂದ್ರಿಯಗಳಲ್ಲಿ ಪಾಯುವಿನಿಂದ (ಗುದದಿಂದ) ಮಲವಿಸರ್ಜನೆಯೂ, ಉಪಸ್ಥ (ಸ್ತ್ರೀತ್ವ ಪುಂಸ್ತ್ವದ್ಯೋತಕವಾದ ಚಿಹ್ನವಿಶೇಷ) ದಿಂದ ಆನಂದವೂ, ಕೈಗಳಿಂದ ಚಿತ್ರಬರವಣಿಗೆ ಮೊದಲಾದ ಚಾತುರ್ಯವೂ, ಕಾಲುಗಳಿಂದ ಸಂಚಾರವೂ, ವಾಗಿಂದ್ರಿಯ (ಬಾಯಿ) ದಿಂದ ಮಾತನಾಡುವಿಕೆ, ಎಂಬ ವ್ಯಾಪಾರಗಳು ನಡೆಯುವ ಕಾರಣ ಈ ಮೇಲೆ ಹೇಳಿದ ಪಾಯು, ಉಪಸ್ಥ, ಪಾಣಿ [ಕೈ] ಪಾದ, ವಾಕ್ಕುಗಳು ಐದೂ ಕರ್ಮೇಂದ್ರಿಯಗಳೆಂಬದಾಗಿ ಕರೆಯಲ್ಪಡುವುವು. ಸುಖ, ದುಃಖಗಳನ್ನು ತಿಳಿಯುವಿಕೆಯೇ ಹನ್ನೊಂದನೆಯ ಇಂದ್ರಿಯವಾದ ಮನಸ್ಸಿನ ಕಾರ್ಯವು ॥ ೪೯ ॥ ಆಕಾಶ, ವಾಯು, ತೇಜಸ್ಸು,

---

( )ಮನಸ್ಸು, ಚೇತನ, ಅಹಂಕಾರ, ಸಂಕಲ್ಪ, ಅಧ್ಯವಸಾಯಗಳೆಂಬ ನಾಲ್ಕು ಭೇದಗಳುಳ್ಳದ್ದು. ಆ ನಾಲ್ಕು ವಿಧಗಳಾದ ಮನೋವೃತ್ತಿಗಳಿಗೂ, ಕ್ಷೇತ್ರಜ್ಞ, ಪುರುಷ, ರುದ್ರ, ಚಂದ್ರ, ಚತುರ್ಮುಖರೆಂಬ ನಾಲ್ಕುವಂದಿ ಅಭಿಮಾನಿಗಳು. ಇವೆಲ್ಲವೂ ತೈಜಸಾಹಂಕಾರಕಾರ್ಯವು.

* ಆಕಾಶದಲ್ಲಿ ಶಬ್ದ ಹೊರತು ಮತ್ತಾವ ಕಾರಣಗುಣವೂ ಇಲ್ಲವಾದುದರಿಂದ ಶಬ್ದವು ಒಂದೇಗುಣವು ವಾಯುವಿನಲ್ಲಿ ತನಗೆ ಕಾರಣವಾದ ಆಕಾಶದ ಗುಣವಾದ ಶಬ್ದವೂ, ಸ್ವೀಯಗುಣವಾದ ಸ್ಪರ್ಶವೂ,ಅಂತು ಎರಡು ಗುಣಗಳೂ ಅಂತೆಯೇ ತೇಜಸ್ಸಿನಲ್ಲಿ ಶಬ್ದ, ಸ್ಪರ್ಶ, ರೂಪಗಳೆಂಬ ಮೂರು ಗುಣಗಳೂ ಜಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸಗಳೆಂಬ ನಾಲ್ಕು ಗುಣಗಳೂ ಪೃಥಿವಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳು. ಇವುಗಳಲ್ಲಿ ಕೊನೆಯದು ಸ್ವೀಯಗುಣವೆಂತಲೂ, ಮಿಕ್ಕವುಗಳೆಲ್ಲವೂ ಸ್ವಕಾರಣಗಳಿಂದ ಭೂತಸಂಬಂಧಿ ಗುಣಗಳೆಂತಲೂ ಭಾವವು.

ರಾಶ್ಚ ಮೂಢಾಶ್ಚ ವಿಶೇಷಾಸ್ತೇನತೇ ಸ್ಮೃತಾಃ ॥೫೧॥ * ನಾನಾ ವೀ ರ್ಯಾಃಪೃಥಗ್ಭೂತಾಸ್ತತಸ್ತೇ ಸಂಹತಿಂ ವಿನಾ । ನಾಶಕ್ನು ವನ್ಪ್ರಜಾಸ್ಸೃ ಷ್ಟು ಮಸಮಾಗಮ್ಯ ಕೃತ್ಸ್ನಶಃ ॥೫೨॥ ಸಮೇತ್ಯಾನ್ಯೋನ್ಯ ಸಂಯೋ ಗಂ ಪರಸ್ಪರಸಮಾಶ್ರಯಾಃ । ಏಕಸಂಘಾತಲಕ್ಷ್ಯಾಶ್ಚ ಸಂಪ್ರಾಪ್ಯೈಕ್ಯ ಮಶೇಷತಃ ॥೫೩॥ ಪುರುಷಾಧಿಷ್ಠಿ ತತ್ವಾ ಚ್ಚಾ ಪ್ಯವ್ಯಕ್ತಾನುಗ್ರಹೇಣ

ಜಲ, ಪೃಥಿವಿಗಳೆಂಬ ಪಂಚಭೂತಗಳಲ್ಲಿಯೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳೂ ಕ್ರಮದಿಂದ ಒದೊಂದಾಂಗಿ ಹೆ ಚ್ಚುವುವು ॥೫೦॥ ಇಂತು ಗುಣವಿಶೇಷಗಳಿಂದ ಶಾಂತಸ್ವಭಾವವುಳ್ಳವುಗ ಳೂ, (ಸುಖಕರಗಳೂ) ಕ್ರೂರಸ್ವಭಾವವುಳ್ಳವುಗಳೂ, (ದುಃಖಕರಗ ಳೂ) ಮೂಢಸ್ವಭಾವವುಳ್ಳವುಗಳೂ, (ಮೋಹ ಆಥವ ಅಜ್ಞಾನಜನಕಗ ಳೂ,) ಆಗಿರುವುದರಿಂದಲೇ ಆಕಾಶಾದಿ ಭೂತಗಳು ' ವಿಶೇಷ, ಗಳೆಂದು ಕರೆಯಲ್ಪಡುವುವು॥೫೧॥ಅಯ್ಯಾ ಮೈತ್ರೇಯನೆ! ಇಂತು ಮಹದಾದಿಕಾ ರಣ ಸೃಷ್ಟಿಯನ್ನು ವಿವರಿಸಿದೆನು. ಇನ್ನು ಆ ಕಾರಣಸಮುದಾಯದಿಂ ದುಂಟಾಗುವ ಬ್ರಹ್ಮಾಂಡ ಸೃಷ್ಟಿಪ್ರಕಾರವನ್ನು ತಿಳಿಸುವೆನು --ಇಂತು ನಾನಾವಿಧ ಶಕ್ತಿಗಳುಳ್ಳ ಆ ಆಕಾಶಾದಿ ಪಂಚಭೂತಗಳು ಬಂದಾಗಿ ಸೇರಿ ಪರಸ್ಪರ ಸಹಾಯವನ್ನು ಪಡೆಯದಿರುವಕಾರಣ ನಾನಾವಿಧಗಳಾದ ಭೋಗಗಳನ್ನು ಅನುಭವಿಸುವಿಕೆಯಲ್ಲಿ ಸಾಧಕಗಳೆನಿಸಿದ ಶರೀರಾದಿಗ ಳನ್ನು ಸೃಷ್ಟಿಮಾಡಲು ಸಾಮರ್ಥ್ಯರಹಿತಗಳಾದುವು ॥೫೨॥ ಅಂತಹ ಭೋಗಾಯತನಗಳಾದ ಶರೀರಾದಿಗಳನ್ನು ಸೃಷ್ಟಿಮಾಡಲು ನಾನಾಶಕ್ತಿ ಯುಕ್ತಗಳಾದ ಆ ಪಂಚಭೂತಗಳು ಬಂದಾಗಿ ಸೇರಿ, ಪರಸ್ಪರ ಸಹಾ ಯವನ್ನು ಪಡೆಯುವುವು. ಆದುದರಿಂದ ಆ ಪಂಚಭೂತಗಳೂ ಪರಸ್ಪರ ವಾಗಿ ಆಶ್ರಯವನ್ನು ಹೊಂದಿ ಅನ್ಯೋನ್ಯಸಂಯುಕ್ತಗಳಾಗಿ ಐಕ್ಯವನ್ನು ಹೊಂದಿ ಅನಂತಗಳಾದ ಪ್ರಜೆಗಳಿಂದ ನಿಬಿಡವಾದ ಬ್ರಹ್ಮಾಂಡವನ್ನು ಉಂಟುಮಾಡುವಿಕೆಯಲ್ಲಿ ಆಸಕ್ತಿಯನ್ನು ವಹಿಸಿದುವು ॥೫೩॥ ಒಳಕ

---

* ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳಲ್ಲಿ ಕ್ರಮವಾಗಿ, ಕಾಠಿಣ್ಯ, ದ್ರವ, ದಹನ, ಶೋಷಣ ಅವಕಾಶಗಳೆಂಬಶಕ್ತಿಗಳಿರುವವು.

ಚ । ನುಹದಾದಯೋ ವಿಶೇಷಾಂತಾ ಹ್ಯಂಡಮುತ್ಪಾದಯಂತಿ ತೇ॥೫೪॥ ತತ್ಕ್ರಮೇಣ ವಿವೃದ್ಧಂ ಸಜ್ಜಲ ಬುದ್ಬುದವತ್ಸ್ವಮಂ । ಭೂತೇಭ್ಯೋಂಡಂ ಮಹಾಬುದ್ಧೇ ! ಬೃಹತ್ತದುದಕೇಶಯಂ । ಪ್ರಾಕೃತಂ ಬ್ರಹ್ಮ ರೂಪಸ್ಯ ವಿಷ್ಣೋಃ ಸ್ಥಾನ ಮನುತ್ತಮಂ ॥೫೫॥ ತತ್ರಾವ್ಯಕ್ತ ಸ್ವರೂಪೇಣ ವ್ಯಕ್ತರೂಪೋಜಗತ್ಪತಿಃ। ವಿಷ್ಣು ರ್ಬ್ರಹ್ಮ ಸ್ವರೂಪೇಣ ಸ್ವಯ ಮೇವ ವ್ಯವಸ್ಥಿತಃ ॥೫೬॥ ಮೇರುರುಲ್ಬ ಮಭೂತ್ತಸ್ಯ ಜರಾಯುಶ್ಚ

ಮಹತ್ತತ್ತ್ವಾದಿ ವಿಶೇಷಾಂತಗಳಾದ ಆ ಭೂತಗಳೆಲ್ಲವೂ ಪುರುಷನ ಅಧಿಷ್ಠಾನವನ್ನು ಪಡೆದು ಪ್ರಕೃತಿಯು ಅನುಗ್ರಹವಿಶೇಷದಿಂದ ಮುಂದೆ ಹೇಳಲ್ಪಡುವ ಮಹಿಮೆಯಿಂದ ಕೂಡಿದ ಬ್ರಹ್ಮಾಂಡವನ್ನುಉಂಟುಮಾಡಿದುವು ॥೫೪॥ ಅಯ್ಯಾ ವಿದ್ವನ್ಮಣಿ ಎನಿಸಿದ ಮೈತ್ರೇಯನೆ ! ನೀರಿನಮೇಲೆ ತೇಲಾಡುತ್ತಿರುವ ಜಲಬುದ್ಬುದದಂತೆ ಸಮುವೃತ್ತವಾದ ಆಕಾರವನ್ನು ಪಡೆದಿರುವ ಆ ಅಂಡವು ಭೂತಗಳಿಂದಕ್ರಮವಾಗಿ ಅಭಿವೃದ್ಧಿಯನ್ನುಹೊಂದಿ ಸೃಷ್ಟಿಕಾರ್ಯಾರ್ಥವಾಗಿ ಬ್ರಹ್ಮರೂಪವನ್ನು ಪಡೆದಿರುವ ಶ್ರೀ ಮಹಾವಿಷ್ಣುವಿಗೆ ಅತ್ಯುತ್ತಮವಾದ ಸ್ಥಾನವೆನಿಸಿಕೊಂಡಿತು ॥೫೫॥ ಅಂತಹ ಬ್ರಹ್ಮಾಂಡದಲ್ಲಿ ಪ್ರಕೃತ್ಯಾದಿರೂಪಗಳಿಂದಲೂ ಮಹದಾದಿ ರೂಪಗಳಿಂದಲೂ ಕೂಡ ವ್ಯಕ್ತಾವ್ಯಕ್ತಸ್ವರೂಪನಂತೆಕಾಣುತ್ತಾ, ಸರ್ವವ್ಯಾಪಕನೆನಿಸಿಕೊಳ್ಳುವ ಆ ಪರಮಾತ್ಮನು. ಕಾರಣಬ್ರಹ್ಮನಾದ ಚತುರ್ಮುಖ ಸ್ವರೂಪವನ್ನು ಪಡೆದು ಸ್ವೇಚ್ಛೆಯಿಂದ ತಾನೇತಾನಾಗಿ ಮೆರೆಯುತ್ತಿದ್ದನು ॥೫೬॥ ಅಂತಹ ಮಹಾಮಹಿಮಯುಕ್ತವಾದ ಬ್ರಂಹ್ಮಾಂಡಕ್ಕೆ ಮೇರುಪರ್ವತವೇ ಗರ್ಭವೇಷ್ಟನಮಾಂಸವು ಇತರಗಳಾದ ಪರ್ವತಗಳೇ (ಜರಾಯು) ಗರ್ಭವೇಷ್ಟನಮಾರ್ಗವು (ಗರ್ಭದಮೇಲೆ ತೆಳುವಾದ ಚೀಲದಂತೆ ಸುತ್ತಿಕ್ಕೊಂಡಿರುವ ಚರ್ಮದ ಹೊದಿಕೆಯ ಪದರಗಳು) ಸಮುದ್ರಗಳೇ ಗರ್ಭದ ನಡುವೆ ಇರುವ ಗಭೋರ್ದಕವು ॥೫೭॥ ಅಯ್ಯಾ ಬ್ರಾಹ್ಮಣನೆ ! ಪರ್ವತಗಳೂ, ನದಿಗಳೂ, ದ್ವೀಪಗಳೂ, ಸಮುದ್ರಗಳೂ, ಸೂರ್ಯಾದಿ ಗ್ರಹಸಮುದಾಯಗಳೂ ನಾನಾವಿಧಗಳಾದ ಲೋಕಸಮುದಾಯಗಳೂ ಕೂಡ ಆ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟು ಆ ಬ್ರಂಹಾಂಡದ ಒಳಭಾಗದಲ್ಲಿ ಅಡಗಿಕ್ಕೊಂಡಿದ್ದವು

ವಮಹೀಧರಾಃ । ಗರ್ಭೋದಕಂ ಸಮುದ್ರಾಶ್ಚ ತಸ್ಯಾಸ್ತ ಸುಮಹಾತ್ಮನಃ ॥೫೬॥ ಸಾದ್ರಿದ್ವೀಪ ಸಮುದ್ರಾಶ್ಚ ಸಜ್ಯೋತಿರ್ಲೋಕ ಸಂಗ್ರಹಃ । ತಸ್ಮಿನ್ನಂ ಡೇಽಭವದ್ವಿಪ್ರ । ಸದೇವಾಸುರ ಮಾನುಷಃ ॥೫೭॥ ವಾರಿ ವಹ್ನ್ಯನಿಲಾಕಾಶೈಸ್ತತೋ ಭೂತಾದಿ ನಾಬಹಿಃ । ವೃತಂ ದಶಗುಣೈ ರಂಡಂ ಭೂತಾದಿ ರ್ಮಹತಾ ತಥಾ ॥೫೯॥ ಅವ್ಯಕ್ತೇನಾವೃತೋ ಬ್ರಹ್ಮನ್ । ತೈ ಸ್ಸರ್ವೈ ಸ್ಸಹಿತೋ ಮಹಾನ್ । ವಿಭಿರಾವರಣೈರಂಡಂ ಸಪ್ತಭಿಃ ಪ್ರಾಕೃತೈ ರ್ವೃತಂ ॥ ನಾರಿ ಕೇಳಫಲ ಸ್ಯಾಂತರ್ಬೀಜಾ ಬಾಹ್ಯದಳೈರಿವ ॥೬೦॥ ಜುಷ್ಟ ರಜೋ ಗುಣಂ ತತ್ರಸ್ವಯಂ ವಿಶ್ವೇಶ್ವರೋ

॥೫೮॥ ಬಳಿಕ ಇಂತಹ ಬ್ರಂಹಾಂಡವನ್ನು ಪೃಥಿವೀ, ಅಪ್ಪು, ತೇಜಸ್ಸು ವಾಯು, ಆಕಾಶಗಳೆಂಬ ಪಂಚಭೂತಗಳೂ, ಮಹತ್ತತ್ವವೂ, ಪ್ರಕೃತಿಯೂ ಸಹ * ಬಂದಕ್ಕಿಂತಲೂ ಬಂದು ಹತ್ತರಪಟ್ಟ ಹೆಚ್ಚಿರುವ ಕ್ರಮದಿಂದ ಆವರಿಸಿಕೊಂಡವು ಅಂತೆಯೇ ಆ ಭೂತಗಳನ್ನು ಮಹತತ್ವವೂ ಸಹ ಆವರಿಸಿಕೊಂಡಿತು ॥೫೯॥ ಅಯ್ಯಾ ಬ್ರಹ್ಮಷ್ಠನಾದ ಮೈತ್ರೇಯನೆ ! ತೆಂಗಿನಕಾಯಿನ ಮಧ್ಯದಲ್ಲಿರುವ ಕೊಬರಿಯು ಕರಟ (ಚಿಪ್ಪು) ಮೊದಲಾದ ಪದಾರ್ಥಗಳಿಂದ ಎಂತು ಆವರಿಸಲ್ಪಟ್ಟಿರುವುದೋ ಅಂತೆಯೇ ಮಹದಾವೃತಗಳಾದ ಪಂಚಭೂತಾವರಣಗಳನ್ನೂ, ಮಹದಾವರಣವನ್ನೂ ಸಹ ಪ್ರಕೃತಿಯು ವ್ಯಾಪಿಸಿಕೊಂಡಿತು ಇಂತು ಆ ಬ್ರಂಹಾಂಡವು ಪ್ರಕೃತಿಕಾರ್ಯಗಳಾದ ಪಂಚಭೂತಗಳು ಮಹತ್ತತ್ವಪ್ರಕೃತಿಗಳೆಂಬ ಏಳು ಆವರಣಗಳಿಂದ ವ್ಯಾಪಿಸಲ್ಪಟ್ಟಿತು ॥೬೦॥ ಅಯ್ಯಾ ಮೈತ್ರೇಯನೆ ! ಇಂತು ಪರಮಾತ್ಮನು ಬ್ರಹ್ಮಾಂಡವನ್ನು ಸೃಷ್ಟಿಮಾಡಿ ಆದರಲ್ಲಿಯೂ ತಾನೇನೆಲೆಗೊಂಡು, ಬಳಿಕ ನಾನಾವಿಧಗಳಾದ ಅಂತರಾಳಿಕ ಸೃ

* ಕೋಟಿಯೋಜನ ಪ್ರಮಾಣರೂಪವುಳ್ಳ ಕಟಾಹರೂಪವಾದ ಪೃಥಿವ್ಯಾವರಣಕ್ಕಿಂತಲೂ ಜಲಾವರಣವು ಹತ್ತರಪಟ್ಟು ಹೆಚ್ಚಾಗಿರುವುದು. ಅಂತಹ ಜಲಾವರಣಕ್ಕಿಂತಲೂ ವಹ್ನ್ಯಾವರಣವು ಹತ್ತರಪಟ್ಟು ಹೆಚ್ಚಾಗಿರುವುದು ಇಂತೆಯೇ ವಾಯು ಆಕಾಶ, ಮಹದಾವರಣಗಳು ಒಂದಕ್ಕಿಂತಲೂ ಒಂದು ಹತ್ತರಪಟ್ಟ ಕ್ರಮವಾಗಿ ಹೆಚ್ಚಿರುವುವು. ಕೊನೆಯ ಆವರಣವಾದ ಪ್ರಕೃತ್ಯಾವರಣವು ಅಪರಿಮಿತವಾದದ್ದೆಂದು ಭಾವವು.

ಹರಿಃ । ಬ್ರಹ್ಮಾ ಭೂತ್ವಾಽಸ್ಯ ಜಗತೋ ವಿಸೃಷ್ಟೌ ಸಂಪ್ರವರ್ತತೇ
ಸೃಷ್ಟ್ವಂಚಪಾತ್ಯನುಯುಗಂ ಯಾವತ್ಕಲ್ಪ ವಿಕಲ್ಪನಾ। ಸತ್ವಭೃದ್ಭಗವಾ
ವಿಷ್ಣು ರಪ್ರಮೇಯ ಪರಾಕ್ರಮಃ ॥೬೨॥ * ತಮೋದ್ರೇಕೇಚ ಕಲ್ಪಾಂ
ತೇ ರುದ್ರರೂಪೀ ಜನಾರ್ದನಃ ॥ ಮೈತ್ರೇಯಾ ! ಖಿಲಭೂತಾನಿ ಭಕ್ಷ
ಯತ್ಯತಿ ಭೀಷಣಃ ॥೬೩॥ ಸಂಭಕ್ಷ್ಯ ಸರ್ವಭೂತಾನಿ ಜಗತ್ಯೇ
ಕಾರ್ಣವೀಕೃತೇ । ನಾಗಪರ್ಯಂಕಶಯನೇ ಶೇತೇ ಽಸೌಪರ

ಷ್ಟ್ಯಾದಿ ವ್ಯಾಪಾರಗಳನ್ನೂ ಸಹ ತಾನೇನಿರವೇರಿಸುತ್ತಿರುವನು. ಅದೆಂ
ತೆಂದರೆ-ಸಕಲ ಪ್ರಪಂಚಗಳಿಗೂ ಒಡೆಯನಾದುದರಿಂದ ವಿಶ್ವೇಶ್ವರನೆಂಬ
ದಾಗಿಯೂ, ಭಕ್ತರ ದುರಿತಗಳವನ್ನು ಪರಿಹರಿಸುವುದರಿಂದ 'ಹರಿ' ಎಂ
ಬದಾಗಿಯೂ ಕರೆಯಿಸಿಕೊಳ್ಳುವ ಆ ಪರಮಾತ್ಮನು ಕಾರಣಬ್ರಹ್ಮನಾ
ದ ಚತುರ್ಮುಖನ ಸ್ವರೂಪವನ್ನು ಧರಿಸಿ, ರಜೋಗುಣ ಸಂಬಂಧವನ್ನು
ಪಡೆದು, ಈ ಪ್ರಪಂಚ ಸಂಬಂಧವಾದ ವಿವಿಧ ಚರಾಚರ ಸೃಷ್ಟಿಯಲ್ಲಿ
ಪ್ರವರ್ತಿಸುವನು ॥೬೧॥ ಷಡ್ಗುಣೈಶ್ವರ್ಯಸಂಪನ್ನನೂ, ಮಹಾಮಹಿ
ಮಕಾಲಿಯೂ ಆದ ಆ ಪರಮಾತ್ಮನು ಇಂತು ಕಾರಣಬ್ರಹ್ಮನಿಂದ ಸೃ
ಷ್ಟಿಸಲ್ಪಟ್ಟ ಈ ಪ್ರಪಂಚವನ್ನು ಕಾಪಾಡುವುದಕ್ಕೋಸ್ಕರ ಸತ್ವಗುಣಾ
ಧಿಷ್ಠಾನವನ್ನು ಪಡೆದು ಪ್ರತಿ ಯುಗದಲ್ಲಿಯೂ, ಆ ವಿಷ್ಣುವಿನ ಅವತಾರ
ವೆನಿಸಿದ ಮತ್ಸ್ಯಾದಿರೂಪಗಳಿಂದ ಅವತರಿಸಿ ಕಲ್ಪಾಂತದವರೆಗೂ (ಬ್ರ
ಹ್ಮಾದಿಗಳಿಗೂ ಸಹ ನಾಶಕರವಾದ ಮಹಾಪ್ರಳಯದವರೆಗೂ) ಕಾಪಾ
ಡುವನು ॥೬೨॥ ಅಯ್ಯಾ ಮೈತ್ರೇಯನೆ ! ಕಲ್ಪಾಂತದಲ್ಲಿ (ಪ್ರಳಯ
ಕಾಲದಲ್ಲಿ) ಅತಿ ಭಯಂಕರವಾದ ರುದ್ರ (ಈಶ್ವರ) ರೂಪವನ್ನು ಧರಿಸಿ
ತಮೋಗುಣ ಸಂಬಂಧವನ್ನು ಪಡೆದು, ಸಕಲ ಭೂತಸಮುದಾಯಗಳ
ನ್ನೂ ಕ್ಷೋಭೆಗೊಳಿಸಿ, ತನ್ನಲ್ಲಿಯೇ ಲಯಗೊಳಿಸುವವನೂ ಆ ಪರ
ಮಾತ್ಮನೇ ॥೬೩॥ ಇಂತು ಸಕಲ ಭೂತಗಳೂ ಲಯಗೊಂಡು ಪ್ರಪಂ
ಚವೆಲ್ಲವೂ ಜಲಮಯವಾಗಿ ಪರಿಣಮಿಸಿದ ಬಳಿಕ ಆ ಪರಮಾತ್ಮನು
ಅಂತಹ ಸಮುದ್ರ ಮಧ್ಯದಲ್ಲಿ ಮಂಚದಂತಿರುವ ಆದಿಶೇಷನಮೇಲೆ ಮ
ಲಗಿ ಸುಖನಿದ್ರೆಯಂಗೈಯ್ಯುತ್ತಿರುವನು ॥೬೪॥ ಇಂತು ನಿದ್ರೆಯು ಮು
ಗಿದು ಎಚ್ಚರವಾದ ಬಳಿಕ ಪುನಃ ಚತುರ್ಮುಖರೂಪವನ್ನು ಧರಿಸಿ

ಮೇಶ್ವರಃ ॥ ೬೪ ॥ ಪ್ರಬುದ್ಧಶ್ಚ ಪುನಃ ಸೃಷ್ಟ್ಯಂ ಕರೋತಿ ಬ್ರಹ್ಮ ರೂಪಧೃತ್ ॥೬೫॥ ಸೃಷ್ಟಿ ಸ್ಥಿತ್ಯಂತ ಕರಿಣೀಂ ಬ್ರಹ್ಮ ವಿಷ್ಣು ಶಿವಾ ತ್ಮಿಕಾಂ । ಸಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ॥೬೬॥ ಸೃಷ್ಟ್ವಾ ಸೃಜತಿ ಚಾತ್ಮಾನಂ ವಿಷ್ಣುಃ ಪಾಲ್ಯಂ ಚ ಪಾತಿಚ । ಉಪಸಂ ಹ್ರಿಯತೇ ಚಾಂತೇಸಂಹರ್ತಾಚ ಸ್ವಯಂ ಪ್ರಭುಃ ॥೬೭॥ ಪೃಥಿವ್ಯಾಪ ಸ್ತಥಾ ತೇಜೋ ವಾಯು ರಾಕಾಶ ಏವ ಚ । ಸರ್ವೇಂದ್ರಿಯಾಂತಃ ಕರ ಣಂ ಪುರುಷಾಖ್ಯಂ ಹಿ ಯಜ್ಜಗತ್ ॥೬೮॥ ಸಏವ ಸರ್ವ ಭೂತಾತ್ಮಾ ವಿ


ರಜೋಗುಣ ಸಂಬಂಧವನ್ನು ಪಡೆದು ಪುನಃ ಸೃಷ್ಟಿಕಾರ್ಯದಲ್ಲಿ ಪ್ರವ ರ್ತಿಸುವನು. ಸೃಷ್ಟಿ, ಸ್ಥಿತಿ, ನಾಶಗಳಿಗೆ ಕಾರಣರಾದ ಬ್ರಹ್ಮ, ವಿ ಷ್ಣು, ಶಂಕರರೆಂಬ ಸಂಜ್ಞೆಗಳನ್ನು ಪಡೆಯುವವನೂ ಆತನೇ ॥ ಸಕಲ ಶಕ್ತಿಯುಕ್ತನಾದ ಆ ಪರಮಾತ್ಮನು ಇಂತೆಯೇ ನಿರಂತರವೂ ಚತು ರ್ಮುಖ ರೂಪವನ್ನು ತಾಳಿ ಸೃಷ್ಟಿಕಾರ್ಯವನ್ನೂ, ವಿಷ್ಣು ಸ್ವರೂಪ ದಿಂದ ಸ್ಥಿತಿ (ಸಂರಕ್ಷಣೆ) ಕಾರ್ಯವನ್ನೂ, ಈಶ್ವರ ರೂಪವನ್ನು ಧರಿಸಿ ಲಯಕಾರ್ಯವನ್ನೂ ಸ್ವೇಚ್ಛೆಯಿಂದ ನಿರವೇರಿಸುತ್ತಿರುವನು ॥೬೫॥೬೬॥ ॥೬೭॥ ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚ ಭೂತಗಳೂ, ತ್ವಕ್ಕು, ಚಕ್ಷುಸ್ಸು, ನಾಶಿಕಾ, ಜಿಹ್ವಾ, ಶ್ರೋತ್ರಗಳೆಂಬ ಪಂಚಜ್ಞಾನೇಂದ್ರಿಯಗಳೂ, ವಾಕ್ಕು, ಪಾಣಿ, ಪಾದ, ಪಾಯು, ಉಪ ಸ್ಥಗಳೆಂಬ ಪಂಚಕರ್ಮೇಂದ್ರಿಯಗಳೂ, ಚೇತನ, ಅಹಂಕಾರ, ಸಂಕಲ್ಪ, ಅಧ್ಯವಸಾಯಗಳೆಂಬ ಚತುರ್ವಿಧಾಂತಃಕರಣಯುಕ್ತವಾದ ಮನಸ್ಸು, ಏತನ್ಮಯವಾದ ಈ ಪ್ರಪಂಚವೆಲ್ಲವೂ ಪುರುಷಶಬ್ದವಾಚ್ಯನಾದ ಆಪರ ಮಾತ್ಮಸ್ವರೂಪವೇ ಹೊರತು ಬೇರೆಯಲ್ಲ ॥೬೮॥

ಆ ಪರಮಾತ್ಮನು ಸರ್ವಾಂತರ್ಯಾಮಿಯೂ, ಸರ್ವಸ್ವರೂಪನೂ, ನಾಶರಹಿತನೂ ಆದುದರಿಂದ ಬ್ರಹ್ಮ, ವಿಷ್ಣು, ಶಂಕರರೆಂಬ ಭೂತನಿಷ್ಠ ಗಳಾದ ಸೃಷ್ಟಿ, ಸ್ಥಿತಿ, ಲಯ ಗಳೆಂಬ ಕಾರ್ಯಗಳು ಆತನಿಗೆ ಉಪಕಾರಿಗ ಳಾಗಿ, ಆತನ ಸಂಕಲ್ಪಾನುಸಾರವಾಗಿ ಕಾರ್ಯನಿರ್ವಾಹಕಗಳೇ ಹೊರ ತು ತಂತಮ್ಮ ಇಷ್ಟಾನುಸಾರವಾಗಿ ಕಾರ್ಯನಿರ್ವಾಹಕಸಾಮರ್ಥ್ಯವು

ಶ್ವರೂಪೋ ಯತೋಽವ್ಯಯಃ । ಸರ್ಗಾದಿಕಂ ತತೋಽಸ್ಯೈವ ಭೂತಸ್ಥ ಮುಪಕಾರಕಂ ॥೬೯॥ ಸ ಏವ ಸೃಜ್ಯ ಸ್ಸಚ ಸರ್ಗಕರ್ತಾ ಸ ಏವ ಪಾತ್ತ್ಯತ್ತಿಚ ಪಾಲ್ಯತೇಚ । ಬ್ರಹ್ಮಾದ್ಯೈವ ಸ್ಥಾಭಿ ರಶೇಷ ಮೂರ್ತಿ ರ್ವಿಷ್ಣು ರ್ವರಿಷ್ಠೋ ವರದೋ ವರೇಣ್ಯಃ ॥೭೦॥

ಇತಿ ಶ್ರೀ ವಿಷ್ಣು ಪುರಾಣೇ ಪ್ರಥಮೇಂಶೇ ದ್ವಿತೀಯೋಧ್ಯಾಯಃ.

ಆ ಭೂತಗಳಿಗೇ ಆಗಲಿ, ಅಥವಾ ಆ ಭೂತನಿಷ್ಠಗಳಾದ ಕಾರ್ಯಗಳಿಗೆ, ಆಗಲಿ, ಇರುವುದಿಲ್ಲ ॥೬೯॥ ಬ್ರಹ್ಮಾದಿ ತೃಣಾಂತಗಳಾದ ಸಕಲ ಪದಾರ್ಥಗಳಲ್ಲಿಯೂ ಆತನೇ ಸರ್ವಕಾಲದಲ್ಲಿಯೂ ನೆಲೆದಿರುವಕಾರಣ ವಿಷ್ಣುವೆಂತಲೂ, ಸರ್ವಶ್ರೇಷ್ಠನೆಂತಲೂ, ಸಕಲೇಷ್ಟಾರ್ಥ ದಾತೃವೆಂತಲೂ ಕರೆಯಿಸಿಕೊಳ್ಳುವ ಆ ಪರಮಾತ್ಮನೇ ಸೃಷ್ಟಿಕಾರ್ಯವು. ಸೃಷ್ಟಿಸಲ್ಪಡತಕ್ಕ ಪದಾರ್ಥವೂ ಆತನೇ ಕಾಪಾಡುವವನು, ಕಾಪಾಡಲ್ಪಡತಕ್ಕವನೂ ಕೂಡ ಆತನೇ ಹೊರತು ಆತನಿಗಿಂತಲೂ ಬೇರೆಯಾದ ಪದಾರ್ಥವು ಯಾವುದೂ ಇಲ್ಲವೆಂಬದಾಗಿ ಪರಾಶರನು ಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ ವಿಷ್ಣು ಪುರಾಣದಲ್ಲಿ ಪ್ರಥಮಾಂಶದೊಳ್ ಎರಡನೆಯ ಅಧ್ಯಾಯಂ ಮುಗಿದದು



ದ್ವಿತೀಯಾಧ್ಯಾಯಂ ಸಮಾಪ್ತಂ.

ಓನ್ನಮಃಪರಮಾತ್ಮನೆ

ಅಥ ತೃತೀಯೋಧ್ಯಾಯಃ



ಮೈತ್ರೇಯಃ ॥ ನಿರ್ಗುಣಸ್ಯಾ ಪ್ರಮೇಯಸ್ಯ ಶುದ್ಧಸ್ಯಾ ಪ್ಯಮಲಾತ್ಮನಃ । ಕಥಂ ಸರ್ಗಾದಿ ಕರ್ತೃತ್ವಂ ಬ್ರಹ್ಮಣೋZಭ್ಯುಪಪದ್ಯತೇ ॥೧॥ ಶ್ರೀಪರಾಶರಃ ॥ ಶಕ್ತಯಸ್ಸರ್ವ ಭಾವಾನಾ ಮಚಿಂತ್ಯ ಜ್ಞಾನಗೋಚರಾಃ । ಯತತೋ ಬ್ರಹ್ಮಣಸ್ತಾಸ್ತು ಸರ್ಗಾದ್ಯಾ ಭಾವಶಕ್ತಯಃ ॥ ಭವಂತಿ ತಪತಾಂ ಶ್ರೇಷ್ಠ ! ಪಾವಕ

ಮೈತ್ರೇಯನು ಪ್ರಶ್ನೆಮಾಡುತ್ತಾನೆ -ಎಲೈಪರಮದಯಾಕರನಾದ ಪರಾಶರಮುನಿಯೆ! ಲೋಕದಲ್ಲಿಘಟಾದಿನಿರ್ಮಾಣಕರ್ತೃತ್ವವೆಂಬುದು ರಾಗದ್ವೇಷ, ಸತ್ವಾದಿ ಗುಣಯುಕ್ತನೆನಿಸಿ, ಪುಣ್ಯಪಾಪರೂಪವಾದ ಕರ್ಮಕ್ಕೆ ಒಳಗಾಗಿ, ತತ್ತತ್ಕರ್ಮಾನುಸಾರವಾದ ಶರೀರವನ್ನು ಪಡೆದಿರುವ ಕುಲಾಲಾದಿಗಳಿಗೆ ಮಾತ್ರಸಿದ್ಧವಾಗಿರುವುದು. ಇಂತಿರಲು ಸತ್ವಾದಿಗುಣಶೂನ್ಯನೂ, ದೇಶಕಾಲ ರೂಪವಾದ ಪರಿಮಾಣಕ್ಕೆ ಒಳಗಾಗದವನೂ, ದೇಹರಹಿತನೂ, ಅದ್ವಿತೀಯನೂ, ಇತರಸಹಾಯಶೂನ್ಯನೂ, ಪುಣ್ಯಪಾಪ ಸಂಸ್ಕಾರರಹಿತನೂ, ರಾಗದ್ವೇಷಾದಿವಿಕಾರ ಶೂನ್ಯನೂಎನಿಸಿದ ಪರಬ್ರಹ್ಮನಿಗೆ ಜಗತ್ತಿನ ಸೃಷ್ಟ್ಯಾದಿ ಕರ್ತೃತ್ವವು ಎಂತು ಸಿದ್ಧಿಸುವುದು ? ॥೧॥ ಇಂತು ಪ್ರಶ್ನೆಮಾಡಿದ ಶಿಷ್ಯನ ಆಶಂಕೆಯನ್ನು ಪರಿಹರಿಸಲು ಪರಾಶರನು ಹೇಳುತ್ತಾನೆ:-ಅಯ್ಯಾ ತಪಸ್ವಿವರ್ಯನಾದ ಮೈತ್ರೇಯನೆ ? ಮಣಿ, ಮಂತ್ರ, ಮೊದಲಾದವುಗಳಲ್ಲಿನ ವಿವಿಧ ಶಕ್ತಿಗಳು ಎಂತು ಸ್ವಾಭಾವಿಕಗಳೋ, ಸಕಲವಸ್ತುಗಳನ್ನೂ ಸುಡತಕ್ಕ ಸಾಮರ್ಥ್ಯವುಳ್ಳ ಅಗ್ನಿಯಲ್ಲಿ ದಾಹಕತಾ ಶಕ್ತಿ ಎಂಬುದು ಎಂತುಸಹಜಸಿದ್ಧವೋ, ಅಂತೆಯೇಅಪ

ಸ್ಯ ಯಥೋಪಪನ್ನತಾ ॥೨॥ ತನ್ನಿಬೋಧ ಯಥಾಸರ್ಗೇ ಭಗವಾ೯ಂ
ಸಂಪ್ರವರ್ತತೇ । ನಾರಾಯಣಾಖ್ಯೋ ಭಗವಾ೯ ಬ್ರಹ್ಮಲೋ
ಕಪಿತಾಮಹಃ ॥೩॥ * ಉತ್ಪನ್ನಃ ಪ್ರೋಚ್ಯತೇವಿದ್ವ೯ ! ನಿತ್ಯಏ

ರ ಬ್ರಹ್ಮನಲ್ಲಿಯೂ § ಸೃಷ್ಟ್ಯಾದಿಕಾರಣ ಶಕ್ತಿಯು ಸ್ವಾಭಾವಿಕವಾ
ದುದು ॥೨॥ ನಿಖಿಲಶಕ್ತಿ ಸಂಪೂರ್ಣನೆನಿಸಿ ನಾರಾಯಣನೆಂದು ಕರೆಯಿಸಿ
ಕೊಳ್ಳುವ, ಷಡ್ಗುಣೈಶ್ವರ್ಯಸಂಪನ್ನನಾದ ಆಪರಮಾತ್ಮನು ಸೃಷ್ಟಿಕಾ
ಲದಲ್ಲಿ ಪ್ರಪಂಚಗಳಿಗೆ ಪಿತಾಮಹನೆನಿಸಿದ ಚತುರ್ಮುಖರೂಪವನ್ನುಧರಿ
ಸಿ ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವನು. ಈ ರೀತಿಯನ್ನೇ ವಿಶದವಾಗಿ
ತಿಳಿಸುವೆನು ॥೩॥ ಮೈತ್ರೇಯನು ಕೇಳುತ್ತಾನೆ.—ಸರ್ವವ್ಯಾಪಕನಾದ
ಆ ನಾರಾಯಣನೇ ಬ್ರಹ್ಮ ರೂಪವನ್ನು ಧರಿಸುವುದಾದರೆ ಶ್ರುತಿಗಳೆ
ಲ್ಲವೂ ಮೊದಲು ಬ್ರಹ್ಮನು ಹಿರಣ್ಯಗರ್ಭರೂಪದಿಂದ ಉತ್ಪನ್ನನಾದನೆಂ
ಬದಾಗಿ ಸಾರುತ್ತಿರುವುವು, ಇಂತಿರಲು ಆ ನಾರಾಯಣನೇ ಬ್ರಹ್ಮರೂ

---

* ಋ॥ ಹಿರಣ್ಯಗರ್ಭಸ್ಸಮವರ್ತತಾಗ್ರೇ, ಇತ್ಯಾದಿಶ್ರುತಿಪ್ರಮಾಣದಿಂದ ಕಾರಣ ಬ್ರಹ್ಮನು ಉತ್ಪನ್ನನಾದವನೆಂಬದಾಗಿ ತೋರುವುದು.

"ತತೋವತೀರ್ಯವಿಶ್ವಾತ್ಮಾ ದೇಹಮಾವಿಶ್ಯಚಕ್ರಿಣಃ । ಅವಾಪವೈಷ್ಣವೀಂನಿ
ದ್ರಾಮೇಕೀಭೂಯಾಥವಿಷ್ಣುನಾ" ॥ ಎಂಬ ಕೂರ್ಮಪುರಾಣವಚನದಿಂದ ಆತ
ನು ಉತ್ಪನ್ನನಲ್ಲ. ಆತನಿಗೆ ಉತ್ಪತ್ತಿಯು ಔಪಚಾರಿಕವೆಂಬದಾಗಿ ತಿಳಿಯಬರುವುದು.

¶ "ನತಸ್ಯಕಾರ್ಯಂ ಕರಣಂಚವಿದ್ಯತೇ ನತತ್ಸಮಶ್ಚಾಭ್ಯಧಿಕಶ್ಚದೃಶ್ಯತೇ ॥
ಪರಾಸ್ಯಶಕ್ತಿರ್ವಿವಿಧೈವಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾಚ ॥
"ಮಾಯಾಂತು ಪ್ರಕೃತಿಂವಿದ್ಯಾನ್ಮಾಯಿನಂತು ಮಹೇಶ್ವರಂ" ॥ "ಸವಾಯಅ
ಯಮಾತ್ಮಾ ಸರ್ವಸ್ಯವಶೀ ಸರ್ವಸ್ಯೇಶಾನ ಸ್ಸರ್ವಸ್ಯಾಧಿಪತಿಃ" ಆ ಪರಮಾತ್ಮನು
ಮತ್ತೊಂದುವಸ್ತುವಿನ ಆಶ್ರಯದಿಂದ ಉದಯಿಸಿದವನಲ್ಲ. ಆತನು ಮಾಡಬೇಕಾ
ದುದು ಯಾವುದೂಇಲ್ಲ. ಆತನಿಗೆ ಸಮನೇ ಆಗಲಿ, ಹೆಚ್ಚಾದವನೇ ಆಗಲಿ, ಇಲ್ಲ
ಆತನಿಗೆ ಜ್ಞಾನ, ಬಲ, ಮೊದಲಾದುವು ಸ್ವಾಭಾವಿಕಗಳು. ಎಲ್ಲರನ್ನೂ ಮೋಹಗೊಳಿ
ಸುವ ಮಾಯೆಯು ಆತನ ಅಧೀನವೇ ಹೊರತು, ಆತನು ಆ ಮಾಯೆಗೆ ಒಳಗಾದವ
ನಲ್ಲ. ಸ್ವತಂತ್ರನು, ನಿಖಿಲಶಕ್ತಿಸಂಪೂರ್ಣನು, ಎಂಬ ಅರ್ಥವುಳ್ಳ ಮೇಲೆಹೇಳಿದ ಶ್ರು
ತಿಗಳು ಪ್ರಮಾಣವಾಗಿರುವುವು.

ವೋಪಚಾರತಃ ॥೪॥ ನಿಜೇನ ತಸ್ಯ ಮಾನೇನ ಆಯು ರ್ವರ್ಷಶ
ತಂಸ್ಮೃತಂ । ತತ್ಪರಾಖ್ಯಂ ತದರ್ಧಂ ಚ ಪರಾರ್ಧ ಮಭಿಧೀಯ
ತೇ ॥೫॥ ಕಾಲಸ್ವರೂಪಂ ವಿಷ್ಣೋಶ್ಚ ಯನ್ಮಯೋಕ್ತಂ ತವಾ
ನಘ! । ತೇನ ತಸ್ಯ ನಿಬೋಧತ್ವಂ ಪರಿಮಾಣೋಪಪಾದನಂ॥೬॥
ಕಾಷ್ಠಾ ದಂಚದಶಾಖ್ಯಾತಾ * ನಿಮೇಷಾ ಮುನಿಸತ್ತಮ! । ಕಾ

ಪವನ್ನು ಧರಿಸಿದುದೆಂದು ಹೇಳುವುದೆಂತು? ಪರಾಶರನು ಹೇಳುತ್ತಾನೆ:- ಅಯ್ಯಾ ವಿದ್ವಾಂಸನೆ ! ಸ್ವೇಚ್ಛೆಯಿಂದ ಬೇಕಾದ ರೂಪಗಳನ್ನು ಧರಿಸು ವಿಕೆಯೂ ಕೂಡ "ಉತ್ಪತ್ತಿ"ಎಂಬದಾಗಿ ಹೇಳಬೇಕೇ ಹೊರತು ಬೇರೆ ಯಲ್ಲ. ಆದುದರಿಂದ ಉತ್ಪತ್ತಿ ನಾಶ ರಹಿತನಾದ ಆ ನಾರಾಯಣ ಮೂರ್ತಿಯ ಬೇರೆರೂಪವಾದ ಅಚತುರ್ಮುಖನಿಗೆ ಉತ್ಪತ್ತಿ ಎಂಬುದು ಔಪಚಾರಿಕವೇ ಹೊರತು ನಿಜವಾಗಿಯೂ ಆತನು ಉತ್ಪನ್ನನಾದವನಲ್ಲ ॥ ೪ ॥ ಇಂತಹ ಗುಣಸಮುದಾಯ ಭೂಷಿತನಾದ ಆಕಾರಣ ಬ್ರಹ್ಮನಿಗೆ ಮುಂದೆಹೇಳುವ ಬ್ರಾಹ್ಮ ಮಾನಪ್ರಕಾರ ಮನುಷ್ಯರಂತೆಯೇ ನೂರುಸಂವತ್ಸರಗಳು ಆಯುಃ ಪರಿಮಾಣವು. ಈ ಆಯುಃ ಪರಿಮಾಣವು ಎಲ್ಲವಿಧವಾದ ಜೀವಜಂತುಗಳ ಆಯುಃ ಪರಿಮಾಣವನ್ನೂ ಮೀರಿರುವ ಕಾರಣ ಆತನು ನೂರು ಸಂವತ್ಸರರೂಪವಾದ ಆಯುಃ ಪರಿಮಾಣಕ್ಕೆ ಪರವೆಂದು ಹೆಸರು. ಇಂತಹ ನೂರುವರ್ಷಗಳಲ್ಲಿ ಅರ್ಧವಾದ ಐವತ್ತು ಸಂವತ್ಸರಗಳಿಗೆ ಪರಾರ್ಧವೆಂಬದಾಗಿ ಹೆಸರು ॥ ೫ ॥ ಅಯ್ಯಾ ಪಾಪ ರಹಿತನಾದ ಮೈತ್ರೇಯನೆ ! ಇಂತಹ ಬ್ರಹ್ಮನ ನೂರುವರ್ಷಗಳ ಆಯುಃ ಪರಿಮಾಣವನ್ನು ಅನುಸರಿಸಿ ಚರ (ಜಂಗಮ) ಗಳಾದ ಜೀವಜಂತುಗಳಿಗೂ, ಸ್ಥಿರಗಳಾದ (ಸ್ಥಾವರಗಳಾದ) ಭೂಮಿ, ಪರ್ವತಗಳು, ಸಮುದ್ರಗಳು ನದಿಗಳು, ಮೊದಲಾದುವುಗಳ ಆಯುಃ ಪರಿಮಾಣವನ್ನು ಆಂತರಾಳಿಕ ಸೂಕ್ಷ್ಮ ಕಾಲಗಳೊಡನೆ ವಿಶದವಾಗಿ ತಿಳಿಸುವೆನು. ಅವಹಿತನಾಗಿ ಕೇಳು॥೬॥

* ಅಕ್ಷಿಪಕ್ಷ್ಮನಿಕ್ಷೇಪೋಪಲಕ್ಷಿತಃ ಕಾಲೋನಿಮೇಷಃ = ಕಣ್ಣರೆಪ್ಪೆ ಹಾಕುವಷ್ಟು ಹೊತ್ತಿಗೆ ನಿಮೇಷವೆಂದು ಶ್ರೀಧರೀಯ ವ್ಯಾಖ್ಯಾನದಲ್ಲಿದೆ.

ಲಘ್ವಕ್ಷರೋಚ್ಚಾರಮಾತ್ರೋನಿಮೇಷಃ = ಎಂದು ಲಘ್ವಕ್ಷರ-ವನ್ನು (ಅಕ್ಷರ) ಬಾಯಿಯಿಂದ ಹೇಳತಕ್ಕಷ್ಟು ಹೊತ್ತಿಗೆ ನಿಮೇಷವೆಂದೂ ವ್ಯವಹಾರವುಂಟು.

ಷ್ಮಾ ತ್ರಿಂಶತ್ಕಲಾ ತ್ರಿಂಶತ್ಕಲಾ ಮೌಹೂರ್ತಿಕೋವಿಧಿಃ ॥೪॥ ತಾ
ವತ್ಸಂಖ್ಯೈ ರಹೋರಾತ್ರಂ ಮುಹೂರ್ತೈರ್ಮಾನುಷಂ ಸ್ಮೃತಂ ।
ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ ॥೫॥
ತೈಷ್ಷಡ್ಭಿ ರಯನಂ ವರ್ಷಂ ¶ದ್ವೇಯನೇ ದಕ್ಷಿಣೋತ್ತರೇ ।
ಅಯನಂ ದಕ್ಷಿಣಂ ರಾತ್ರಿಃ ದೇವಾನಾ ಮುತ್ತರಂ ದಿನಂ ॥೦೦॥
ದಿವ್ಯೈರ್ವರ್ಷಸಹ ಸ್ರೈ ಸ್ತು ಕೃತತ್ರೇತಾದಿ ಸಂಜ್ಞಕಂ । ಚ
ತುರ್ಯುಗಂ ದ್ವಾದಶಭಿ ಸ್ತದ್ವಿಭಾಗಂ ನಿಬೋಧಮೇ॥೦೧॥ ಚತ್ವಾ

ಅಯ್ಯಾ ಮುನಿವರ್ಯನೆನಿಸಿದ ಮೈತ್ರೇಯನೆ ! ಹದಿನೈದು ನಿಮೇಷ ಗಳಿಗೆ ಬಂದು ಕಾಷ್ಠೆ ಎಂದುಹೆಸರು. ಮುವ್ವತ್ತು ಕಾಷ್ಠೆಗಳು ಬಂದು ಕಲೆ. ಮುವ್ವತ್ತು ಕಲೆಗಳು ಬಂದು ಮುಹೂರ್ತ ವೆನ್ನಲ್ಪಡುವುದು॥೪॥ ಮೂವತ್ತು ಮುಹೂರ್ತಗಳಿಗೆ ಬಂದು ದಿವಸ (ಬಂದು ಹಗಲು ಬಂದು ರಾತ್ರಿ ಎಂದರ್ಥ) ಮುವ್ವತ್ತು ಹಗಲು ರಾತ್ರಿಗಳು ಬಂದು ತಿಂಗಳು. ತಿಂಗಳಿಗೆ ಎರಡು ಪಕ್ಷಗಳು ॥೫॥ ಇಂತಹ ಆರು ಮಾಸಗಳಿಗೆ ಬಂದು ಅಯನ. ಈ ಅಯನವು ದಕ್ಷಿಣಾಯನ ವೆಂತಲೂ ಉತ್ತರಾಯಣ ವೆಂತಲೂ ಎರಡು ವಿಧ. ಇಂತಹ ಎರಡು ಅಯನಗಳಿಗೆ ಬಂದು ಸಂವತ್ಸರ ಇದೇ ಮಾನುಷ ಮಾನವು ಇನ್ನು ಮುಂದೆ ದೈವಮಾನ ಪ್ರಕಾರವನ್ನು ತಿಳಿಸುವೆನು. ದಕ್ಷಿಣಾಯನವೇ ದೇವತೆಗಳ ರಾತ್ರಿ. ದೇವತೆಗಳಹಗ ಲನ್ನೇ ಉತ್ತರಾಯಣ ವೆನ್ನುವರು ॥೦೦॥ಇಂತಹ ದೇವಮಾನ ಪ್ರಕಾರ ಹನ್ನೆರಡು ಸಾವಿರ ವರ್ಷಗಳಾದರೆ ಕೃತ, ತ್ರೇತಾ, ದ್ವಾಪರ ಕಲಿಗ ಳೆಂಬ ನಾಲ್ಕು ಯುಗಗಳಾಗುವುವು. ಅಯ್ಯಾ ಮೈತ್ರೇಯನೆ ! ಇನ್ನು ಮುಂದೆ ಈ ಯುಗ ವಿಭಾಗಕ್ರಮವನ್ನು ಹೇಳುವೆನು. ಈ ಹನ್ನೆರಡು ಸಾವಿರ ದೇವಮಾನ ವರ್ಷಗಳ ಕ್ರಮವೆಂತೆಂದರೆ—

ಕೃತಯುಗದಲ್ಲಿ ನಾಲ್ಕು ಸಾವಿರ ದೇವಮಾನ ಸಂವತ್ಸರಗಳೆಂತ ಲೂ, ತ್ರೇತಾಯುಗದಲ್ಲಿ ಮೂರು ಸಹಸ್ರ ದಿವ್ಯವರ್ಷಗಳೆಂತಲೂ, ದ್ವಾ

¶ ಇಲ್ಲಿ ದ್ವೇ ಅಯನೇ ಎಂದಿರಬೇಕು ಸಂಧಿಯು ಆರ್ಷ.

§ ಈ ಅಧ್ಯಾಯದಕಡೆಯಪುಟದಲ್ಲಿ ನೋಡಿರಿ

ರಿ ತ್ರೀಣಿದೇವಶ್ಯೈಕಂ ಕೃತಾದಿಷುಯಥಾಕ್ರಮಂ।ದಿವ್ಯಾಬ್ದಾನಾಂ
ಸಹಸ್ರಾಣಿ ಯುಗೇಷ್ವಾಹುಃ ಪುರಾವಿದಃ ॥೧೨॥ ತತ್ಪ್ರಮಾಣೈಶ್ಶ
ತೈಸ್ಸಂಧ್ಯಾ ಪೂರ್ವಾತತಾಭಿಧೀಯತೇ। ಸಂಧ್ಯಾಂಶ ಶ್ಚಾಪಿತತ್ತು
ಲ್ಯೋ ಯುಗಸ್ಯಾನಂತರೋಹಿಸಃ ॥೧೩॥ ಸಂಧ್ಯಾ ಸಂಧ್ಯಾಂಶ
ಯೋ ರಂತರ್ಯಃಕಾಲೋ ಮುನಿಸತ್ತಮ ! ಯುಗಾಖ್ಯಸ್ಸತು ವಿ
ಜ್ಞೇಯಃ ಕೃತ ತ್ರೇತಾದಿ ಸಂಜ್ಞಿತಃ ॥೧೪॥ ಕೃತಂ ತ್ರೇತಾ
ದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಂ। ಪ್ರೋಚ್ಯತೇ ತತ್ಸಹಸ್ರಂ
ಚ ಬ್ರಹ್ಮಣೋ ದಿವಸಂ ಮುನೇ ! ॥೧೫॥ ಬ್ರಹ್ಮಣೋ ದಿವ

ಪರಯುಗದಲ್ಲಿ ಎರಡು ಸಾವಿರ ದೇವಮಾನ ವರ್ಷಗಳಿಂತಲೂ, ಕಲಿ ಯುಗದಲ್ಲಿ ಒಂದು ಸಾವಿರ ದೇವಮಾನ ವರ್ಷಗಳೆಂತಲೂ, ಕಾಲಜ್ಞರಾದ ಪೂರ್ವಿಕರು ಹೇಳುವರು. ಅಂತು ಹತ್ತು ಸಾವಿರ ದೇವಮಾನ ವರ್ಷಗಳಾದುವು ॥೧೨॥ ಯುಗಕ್ಕೆ ಪೂರ್ವಭಾವಿಯಾವ ಸಂಧ್ಯಾಕಾಲವು ಹತ್ತು ನೂರು (ಸಾವಿರ) ವರ್ಷ ಪ್ರಮಾಣವುಳ್ಳದ್ದು. ಒಂದು ಯುಗವು ಪೂರ್ಣವಾದ ಬಳಿಕ ಮತ್ತೊಂದು ಯುಗವು ಪ್ರಾರಂಭವಾಗುವುದಕ್ಕಿಂತಲೂ ಹಿಂದೆ ನಡೆಯುವ ಕಾಲಕ್ಕೆ ಸಂಧ್ಯಾಂಶವೆಂದು ಹೆಸರು. ಇಂತಹ ಸಂಧ್ಯಾಂಶವೂ ಕೂಡ ಅಂತೆಯೇ ದೇವಮಾನ ಪ್ರಕಾರ ಸಾವಿರ ವರ್ಷ ಪರಿಮಾಣವುಳ್ಳದ್ದು. ಅಂತು ಹನ್ನೆರಡು ಸಾವಿರ ದಿವ್ಯಸಂವತ್ಸರಗಳಾದುವು ಈ ಹನ್ನೆರಡು ಸಾವಿರ ದಿವ್ಯಸಂವತ್ಸರಗಳಿಗೆ ಒಂದು ಚತುರ್ಯುಗವಾಗುವುದು ॥ ೧೩ ॥ ಅಯ್ಯಾಮುನಿಕುಲಾವತಂಸನೆ ! ಸಂಧ್ಯಾನಂತರ ಮತ್ತೊಂದು ಸಂಧ್ಯೆಯುಂಟಾಗುವವರಿಗೂ ನಡೆಯುವ, ಆ ಸಂಧ್ಯಾ ಸಂಧ್ಯಾಂಶಗಳ ಮಧ್ಯವರ್ತಿಯಾದ ಕಾಲಕ್ಕೇ ಯುಗವೆಂದು ಹೆಸರು ॥೧೪॥ ಕೃತ, ತ್ರೇತಾ, ದ್ವಾಪರ, ಕಲಿಗಳೆಂಬ ಈ ನಾಲ್ಕು ಯುಗಗಳು ಕ್ರಮವಾಗಿ ಒಂದು ಸಾವಿರ ಸಾರಿ ಸುತ್ತಿ, ಮರಳಿ ಯುಗಪ್ರಾರಂಭವಾದರೆ ಅಲ್ಲಿಗೆ ಚತುರ್ಮುಖನಾದ ಕಾರಣ ಬ್ರಹ್ಮನಿಗೆ ಒಂದು ಹಗಲು ॥೧೫॥ ಇಂತಹ ಬ್ರಹ್ಮನ ಹಗಲಿನಲ್ಲಿ ಹದಿನಾಲ್ಕನೆಯ ಒಂದೊಂದು ಭಾಗದಲ್ಲಿ ಒಬ್ಬೊಬ್ಬರಂತೆ ಹದಿನಾಲ್ಕು ಮಂದಿ

ಸೇ ಬ ಹ್ಮ ಣ ! ಮನವಸ್ತು ಚತುರ್ದಶ * । ಭವಂತಿಪರಿಣಾಮಂ
ಚ ತೇಷಾಂ ಕಾಲಕೃತಂ ಶೃಣು ॥೧೬॥ ಸಪ್ತರ್ಷಯ ಸ್ಸುರಾ
ಶ್ಚಕ್ರೋ ಮನುಸ್ತತ್ಸೂನವೋನೃಪಾಃ । ಏಕಕಾಲೇಹಿ ಸೃಜ್ಯಂ
ತೇ ಸಂಹ್ರಿಯಂತೇ ಚ ಪ್ರೂರ್ವವತ್ ॥೧೭॥ಚತುರ್ಯುಗಾನಾಂ ಸಂ
ಖ್ಯಾತಾ§ ಸಾಧಿಕಾಹ್ಯೇಕ ಸಪ್ತತಿಃ । ಮನ್ವಂತರಂ ಮನೋಃ

ಮನುಗಳೂ ಅಧಿಕಾರಿಗಳಾಗಿದ್ದುಕೊಂಡು ತಂತಮ್ಮ ಅಧಿಕಾರವು ನೆರೆ ವೇರಿದಬಳಿಕ ಅಧಿಕಾರರಹಿತರಾಗಿ ಮಾಡಲ್ಪಡುವರು. ಅಯ್ಯಾ ಮೈತ್ರೇಯನೆ ! ಆ ಹದಿನಾಲ್ಕುಮಂದಿ ಮನುಗಳಿಗೂ ಕಾಲಪರಿವರ್ತನದಿಂದುಂಟಾಗುವ ನಾಶರೂಪವಾದ ಪರಿಣಾಮವನ್ನುಹೇಳುವೆನುಕೇಳು॥೧೬॥ ಸಪ್ತರ್ಷಿಗಳು, ದೇವತೆಗಳು, ಮನು, ಆ ಮನುವಂಶೋತ್ಪನ್ನರಾದ ರಾಜರುಗಳು, ಇವರೆಲ್ಲರೂ ಏಕಕಾಲದಲ್ಲಿಯೇ ಸೃಷ್ಟಿಸಲ್ಪಟ್ಟು, ಅವರವರ ಅಧಿಕಾರಗಳಲ್ಲಿ ನಿಯಮಿಸಲ್ಪಡುವರು. ಅಂತೆಯೇ ಏಕಕಾಲದಲ್ಲಿಯೇ ಸಂಹೃತರಾಗುವರು. (ತಂತಮ್ಮ ಅಧಿಕಾರಗಳಿಂದ ರಹಿತರಾಗಿ ಮಾಡಲ್ಪಡುವರು.) ॥೧೭॥ ಅಯ್ಯಾ ವಿದ್ವನ್ಮಣಿ ಎನಿಸಿದ ಮೈತ್ರೇಯನೆ! ದೈವಯುಗಗಳು ಸ್ವಲ್ಪ ಅಧಿಕವಾಗಿ ಎಪ್ಪತ್ತೊಂದಾವರ್ತಿ ಸುತ್ತಿಬರುವ ಸಮಯಕ್ಕೆ ಬ್ರಹ್ಮನ ಹಗಲಿನಲ್ಲಿ ಹದಿನಾಲ್ಕನೆಯ ಒಂದುಭಾಗವಾಗುವುದು. ಈ ಕಾಲಕ್ಕೆ ಮೇಲೆಹೇಳಿದ ಇಂದ್ರ, ಮನು, ಮೊದಲಾದವರಿಗೆ

---

* 1 ಸ್ವಾಯಂಭುವ, 2 ಸ್ವಾರೋಚಿಷ, 3 ಉತ್ತಮ, 4 ತಾಮಸ, 5 ರೈವತ, 6 ಚಾಕ್ಷುಷ, 7 ವೈವಸ್ವತ, 8 ಸಾವರ್ಣಿ, 9 ದಕಸಾವರ್ಣಿ, 10 ಬಭ್ರುಸಾವರ್ಣಿ, 11 ಧರ್ಮಸಾವರ್ಣಿ, 12 ರುದ್ರಸಾವರ್ಣಿ, 13 ದೇವಸಾವರ್ಣಿ 14 ಇಂದ್ರಸಾವರ್ಣಿಗಳೆಂಬ ಈ ಹದಿನಾಲ್ಕುಮಂದಿಯೂ ಮನುಗಳು. ಇವರುಗಳಲ್ಲಿ 6 ಮಂದಿ ಹಿಂದೆಕಳೆದ ಬ್ರಹ್ಮನ ಐವತ್ತುವರ್ಷಗಳಲ್ಲಿ ರಾಜ್ಯಭಾರ ಮಾಡಿದರು. ಈಗ 7 ನೆಯವನಾದ ವೈವಸ್ವತಮನುವು ಅಧಿಕಾರಮಾಡುತ್ತಿರುವನು.

§ ಒಂದು ಮನ್ವಂತರಕ್ಕೆ ದೇವಮಾನರೀತ್ಯಾ ಐದುಸಾವಿರದ ನೂರನಲವತ್ತೆರಡು ಸಂವತ್ಸರಗಳು, ಹತ್ತುತಿಂಗಳು, ಎಂಟುದಿನ, ನಾಲ್ಕುಯಾಮ, ಎರಡುಮುಹೂರ್ತ, ಎಂಟುಕಲೆ, ಹದಿನೇಳು ಕಾಷ್ಠೆಗಳು, ಎರಡು ನಿಮೇಷಗಳು ಹೆಚ್ಚು ವುವು.

ಕಾಲಸ್ಸುರಾದೀನಾಂಚ ಸತ್ತಮ ! ॥೪೪॥ ಆಷ್ಟಾಶತಸಹಸ್ರಾಣಿ ದಿವ್ಯಯಾ ಸಂಖ್ಯಯಾ ಸ್ಮೃತಂ । ದ್ವಿಪಂಚಾಶ ತ್ತಥಾ ‡ ನ್ಯಾನಿ ಸಹಸ್ರಾಣ್ಯಧಿಕಾನಿತು ॥೪೫॥ ತ್ರಿಂಶತ್ಕೋಟ್ಯಸ್ತು ಸಂಪೂರ್ಣಾ ಸ್ಸಂಖ್ಯಾತಾ ಸ್ಸಂಖ್ಯಯಾ ದ್ವಿಜ ! । ಸಪ್ತಷಷ್ಟಿ ಸ್ತಥಾನ್ಯಾನಿ ನಿಯುತಾನಿ ಮಹಾಮುನೆ ! ॥೪೦॥ ವಿಂಶತಿಶ್ಚ ಸಹಸ್ರಾಣಿ ಕಾಲೋಯ * ಮಧಿಕಂವಿನಾ । ಮನ್ವಂತರಸ್ಯ ಸಂಖ್ಯೇಯಂ ಮಾನುಷೈರ್ವತ್ಸರೈರ್ದ್ವಿಜ! ॥೪೧॥ ಚತುರ್ದಶ ಗುಣೋಹ್ಯೇಷ ಕಾ

ತಮ್ಮ ಅಧಿಕಾರವಿಶ್ರಾಂತಿರೂಪವಾದ ಮನ್ವಂತರವೆಂದುಹೆಸರು ॥೪೪॥ ಅಯ್ಯಾ ಬ್ರಾಹ್ಮಣನೆ ! ದೇವಮಾನದಿಂದ ಬಂದು ಮನ್ವಂತರ ಪೂರೈಸುವಸಮಯಕ್ಕೆ ಆಗತಕ್ಕ ಸಂವತ್ಸರಸಂಖ್ಯೆಯನ್ನು ಹೇಳುವೆನು. ಎಂಟು ನೂರು ಐವತ್ತೆರಡುಸಾವಿರ (ಎಂಟುಲಕ್ಷ ಐವತ್ತೆರಡುಸಾವಿರ) ದೇವಮಾನವರ್ಷಗಳಾದರೆ ಬಂದುಮನ್ವಂತರವಾಗುವುದು ॥೪೫॥ ಮಾನುಷಮಾನರೀತ್ಯಾ ಸಂಧ್ಯಾಸಂಧ್ಯಾಂಶಗಳಲ್ಲಿ ಕಳೆದುಹೋಗುವ ಅಧಿಕಕಾಲವಲ್ಲದೆ ಬಂದು ಮನ್ವಂತರಕ್ಕೆ ಆಗುವ ಪರಿಮಾಣವನ್ನು ತಿಳಿಸುವೆನು. ಮೂವತ್ತುಕೋಟಿ ಅರವತ್ತೇಳುಲಕ್ಷ ಇಪ್ಪತ್ತುಸಾವಿರ ಮಾನುಷಸಂವತ್ಸರಗಳಿಗೆ ಬಂದು ಮನ್ವಂತರವಾಗುವುದು. ॥೪೬॥ ಇದರ ಹದಿನಾಲ್ಕ

---

* ಬಂದು ಮನ್ವಂತರಕ್ಕೆ ಮನುಷ್ಯಮಾನಪ್ರಕಾರ ಸಂಧ್ಯಾಸಂಧ್ಯಾಂಶಗಳಲ್ಲಿ ಕಳೆದುಹೋಗುವ ಕಾಲವೇ ಅಧಿಕವೆನಿಸುವುದು ಅದರ ಪ್ರಮಾಣವು ಎಂತೆಂದರೆ:- ಹದಿನೆಂಟುಲಕ್ಷ ಐವತ್ತೊಂದುಸಾವಿರದ ನಾಲ್ಕುನೂರ ಇಪ್ಪತ್ತೆಂಟು ವರ್ಷಗಳು ಆರುಮಾಸಗಳು, ಇಪ್ಪತ್ತೈದು ಅಹೋರಾತ್ರಗಳು, ಇಪ್ಪತ್ತೊಂದು ಮುಹೂರ್ತ, ಹನ್ನೆರಡುಕಲಾ, ಇಪ್ಪತ್ತೈದು ಕಾಷ್ಠಾ, ಹತ್ತುವರೆ ನಿಮೇಷಗಳಾಗುವುವು. ಅಂತ, ಬಂದು ಮನ್ವಂತರಕ್ಕೆ ಮಾನುಷಮಾನಪ್ರಕಾರ ಸಂಧ್ಯಾಸಂಧ್ಯಾಂಶಗಳಲ್ಲಿ ಕಳೆದು ಹೋಗುವ ಕಾಲವೂ ಸೇರಿ ಮುವತ್ತುಕೋಟಿ, ಎಂಬತ್ತೈದುಲಕ್ಷ, ಎಪ್ಪತ್ತೊಂದು ಸಾವಿರದ ನಾನೂರ ಇಪ್ಪತ್ತೆಂಟು (308,571,428) ಸಂವತ್ಸರಗಳು. ಇದನ್ನೂ ಮೇಲೆಹೇಳಿದ ತಿಂಗಳು, ದಿನ ಮೊದಲಾದ ಸೂಕ್ಷ್ಮಕಾಲವನ್ನೂ ಸಹ ಕೂಡಿಸಿ, ಹದಿನಾಲ್ಕರಿಂದ ಗುಣಿಸಿದಲ್ಲಿ ಬ್ರಹ್ಮನಿಗೆ ಬಂದುಹಗಲಿನ ಪ್ರಮಾಣದಷ್ಟು ವರ್ಷಗಳಾಗುವುವು. ಬ್ರಹ್ಮನ ಹಗಲಿನ ಪ್ರಮಾಣ (4,320,000,000) ಮಾನುಷವರ್ಷಗಳು.

ಲೋ ಬ್ರಾಹ್ಮಮಹಸ್ತ್ಯ ತಂ। ಬ್ರಾಹ್ಮೋನೈಮಿತ್ತಿಕೋ ನಾಮ ತಸ್ಯಾಂತೇ ಪ್ರತಿಸಂಚರಃ "೨೩॥ ತದಾಹಿದಹ್ಯತೇ ಸರ್ವಂ ತ್ರೈಲೋಕ್ಯಂ ಭೂರ್ಭುವಾದಿಕಂ । ಜನಂ ಪ್ರಯಾಂತಿ ತಾಪಾರ್ತಾ ಮಹರ್ಲೋಕನಿವಾಸಿನಃ ॥೨೪॥ ಏಕಾರ್ಣವೇ ತು ತ್ರೈಲೋಕ್ಯೇ ಬ್ರಹ್ಮಾ ನಾರಾಯಣಾತ್ಮಕಃ । ಭೋಗಿಶಯ್ಯಾಂ ಗತಶ್ಚೇತೇ ತ್ರೈಲೋಕ್ಯ ಗ್ರಾಸ ಬೃಂಹಿತಃ ॥೨೪॥ಜನಸ್ಥೈರ್ಯೋಗಿಭಿರ್ದೇವಃ ಚಿಂತ್ಯಮಾನೋ Z ಬ್ಜಸಂಭವಃ ।ತತ್ಪ್ರಮಾಣಾಂ ಹಿ ತಾಂ

ರಷ್ಟು ಪರಿಮಾಣವುಳ್ಳ ಕಾಲಕ್ಕೆ ಬ್ರಹ್ಮನಿಗೆ ಬಂದು ಹಗಲಾಗುವುದು. ಈ ಹಗಲಿನ ಕೊನೆಯಲ್ಲಿ ನೈಮಿತ್ತಿಕವೆಂಬ ಪ್ರಳಯವು ನಡೆಯುವುದು॥೨೩॥ಆಕಾಲದಲ್ಲಿ ಭೂರ್ಲೋಕ, ಭುವರ್ಲೋಕ, ಸ್ವರ್ಲೋಕಗಳೆಂಬ ಮೂರುಲೋಕಗಳೂ ಸುಟ್ಟುಹೋಗುವುವು. ಅಂತಹ ಸಮಯದಲ್ಲಿ ಹಿಂದೆಹೇಳಿದ ಈ ಮೂರುಲೋಕಗಳಿಗಿಂತಲೂ, ಮೇಲಿರತಕ್ಕ ಮಹರ್ಲೋಕದ ನಿವಾಸಿಗಳೆಲ್ಲರು ಈ ಜ್ವಾಲೆಯನ್ನು ಸಹಿಸಲಾರದೆ ಪೀಡಿತರಾಗಿ ಜನೋಲೋಕಕ್ಕೆ ತೆರಳುವರು ॥೨೪॥ ಭೋಜನದಲ್ಲಿ ಅತ್ಯಂತ ಆಸಕ್ತಿಯುಳ್ಳ ಮನುಷ್ಯನು ತನಗೆ ಬೇಕಾದಷ್ಟು ಭೋಜ್ಯವಸ್ತುಗಳನ್ನು ಸಂಪಾದಿಸಿ, ತನಗೆ ತೃಪ್ತಿಯಾಗುವವರೆಗೂ ಅವುಗಳನ್ನು ಭುಜಿಸಿ,ತರುವಾಯ ನಿಶ್ಚಿಂತೆಯಿಂದ ಎಂತುಸುಖವಾಗಿ ಮಲಗುವನೋ, ಅಂತೆಯೇ ಭೂರಾದಿ ಮೂರುಲೋಕಗಳೂ ಪ್ರಳಯದಿಂದ ನಾಶಹೊಂದಿ ಜಲಮಯವಾಗಿ ದೊಡ್ಡ ಸಮುದ್ರರೂಪದಿಂದ ಪರಿಣಮಿಸಲು, ಆಗ ಕಾರಣಬ್ರಹ್ಮನಾದ ಚತುರ್ಮುಖರೂಪಿಯಾದ ನಾರಾಯಣನು ಭೂರಾದಿ ಲೋಕತ್ರಯನಿವಾಸಿಗಳೆಂಬ ಕಬಳಗಳನ್ನು ಭುಜಿಸೋಣದರಿಂದ ತನ್ನ ಹೊಟ್ಟೆಯನ್ನು ತುಂಬಿಕೊಂಡು,ಅಂತಹ ಸಮುದ್ರಮಧ್ಯದಲ್ಲಿ ಶೇಷಶಾಯಿಯಾಗಿ ಸುಖದಿಂದ ನಿದ್ರಿಸುವನು॥೨೪॥ ಶ್ರೀಮಹಾವಿಷ್ಣುವಿನ ನಾಭಿಕಮಲದಲ್ಲಿ ಜನಿಸಿದ ಆ ಬ್ರಹ್ಮನು ಜನೋಲೋಕನಿವಾಸಿಗಳಾದ ಯೋಗಿಗಳಧ್ಯಾನಕ್ಕೆ ವಿಷಯನಾಗಿ ಹಿಂದೆಹೇಳಿದ ತನ್ನ ಹಗಲಿನಷ್ಟು ಪ್ರಮಾಣವುಳ್ಳ (4,320,000,000 ಮಾನುಷ ಸಂವತ್ಸರ ಪರಮಾಣವುಳ್ಳ

ರಾತ್ರಿಂ ತದಂತೇ ಸೃಜತೇ ಪುನಃ ॥೨೫॥ ಏವಂಚ ಬ್ರಹ್ಮಣೋ ವರ್ಷಂ ಏವಂ ವರ್ಷಶತಂ ತುತತ್ । ಶತಂಹಿ ತಸ್ಯ ವರ್ಷಾಣಾಂ ಪರಮಾಯುರ್ಮಹಾತ್ಮನಃ ॥೨೬॥ ಏಕಮುಸ್ಯಾಪ್ಯತೀತಂತು ಪರಾರ್ಧಂ ಬ್ರಹ್ಮಣೋ Z ನಘ ! । ತಸ್ಯಾಂತೇ ಭೂನ್ಮಹಾಕಲ್ಪಃ ಪಾದ್ಮ ಇತ್ಯಭಿ ವಿಶ್ರುತಃ ॥೨೭॥ ದ್ವೀತೀಯಸ್ಯ ಪರಾರ್ಧಸ್ಯ ವರ್ತಮಾನಸ್ಯ ವೈದ್ವಿಜ ' । ವಾರಾಹ ಇತಿ ಕಲ್ಪೋZಯಂ ಪ್ರಥಮಃ ಪರಿಕೀರ್ತಿತಃ ॥೨೮॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮೇಂಶೇ ತೃತೀಯೋಧ್ಯಾಯಃ ॥

ರಾತ್ರಿಕಾಲದಲ್ಲಿ ಸುಖವಾಗಿ ಮಲಗಿ ಸಂಪೂರ್ಣವಾಗಿ ನಿದ್ರೆಮಾಡಿ, ಪುನಃ ಆರಾತ್ರಿಯಕೊನೆಯಲ್ಲಿ ಎಚ್ಚರಗೊಂಡವನಾಗಿ ಹಿಂದಿನಕಲ್ಪಗಳಲ್ಲಿ ತಾನು ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸಿದಂತೆಯೇ ಆಗಲೂ ಸಕಲಲೋಕಗಳನ್ನೂ ಸೃಷ್ಟಿಮಾಡಲು ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವನು ॥೨೫॥ ಇಂತು ಮಹಾಮಹಿಮಾಶಾಲಿಯಾದಬ್ರಹ್ಮನಿಗೆ ಇಂತಹಪರಿಮಾಣವುಳ್ಳ ನೂರುವರ್ಷಗಳು ಒಂದುಪರಮಾಯುವೆಂಬದಾಗಿತಿಳಿ॥೨೬॥ಅಯ್ಯಾಪಾಪರಹಿತನೆನಿಸಿದ ಮೈತ್ರೇಯನೆ ! ಇಂತಹ ಪರಮಾಯುವಿನ ಎರಡುಭಾಗಗಳಲ್ಲಿ ಮೊದಲನೆಯ ಪರಾರ್ಧವು (ಐವತ್ತು ವರ್ಷಗಳು) ಕಳೆದುಹೋಯಿತು. ಆಕಾಲದಲ್ಲಿ ಉಂಟಾದ ಕಲ್ಪವನ್ನೇ " ಪಾದ್ಮಕಲ್ಪ " ವೆನ್ನುವರು॥೨೭॥ ಅಯ್ಯಾ ಬ್ರಾಹ್ಮಣನೆ ! ಈಗ ನಡೆಯುತ್ತಿರುವ ಎರಡನೆಯ ಪರಾರ್ಧದ ಕೊನೆಯಲ್ಲಿ " ವಾರಾಹ " ವೆಂಬ ಕಲ್ಪವು ನಡೆಯುವುದು ಎಂಬದಾಗಿ

ಪರಾಶರನು ಮೈತ್ರೇಯನಿಗ ಹೇಳುತ್ತಿದ್ದನೆಂಬಲ್ಲಿಗೆ

ವಿಷ್ಣುಪುರಾಣಪ್ರಥಮಾಂಶದೊಳ್ ಮೂರನೆಯ

ಅಧ್ಯಾಯಂ ಮುಗಿದುದು.

ತೃತೀಯಾಧ್ಯಾಯಂ ಸಮಾಪ್ತಂ

ಮೂರನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದ ಟಪ್ಪಣಿ.

1. ಮನುಷ್ಯರಿಗೆ ಚಾಂದ್ರಮಾನರೀತ್ಯಾ ಒಂದು ತಿಂಗಳಾದರೆ ಪಿತೃಗಳಿಗೆ ಒಂದು ಅಹೋರಾತ್ರವಾಗುವುದು. ಅಮಾವಾಸ್ಯೆಯೇ ಪಿತೃಗಳಿಗೆ ಮಧ್ಯಾನ್ಹಕಾಲವು. ಪೌರ್ಣಮಿಯೇ ಪಿತೃಗಳಿಗೆ ಮಧ್ಯರಾತ್ರಿ. ಇಂತೆಯೇ ಮಾಸ, ವರ್ಷ ಮೊದಲಾದವುಗಳನ್ನೂ ತಿಳಿಯತಕ್ಕದ್ದು.

2. ಸೌರಮಾನಪ್ರಕಾರ ಮನುಷ್ಯರಿಗೆ ಒಂದು ವರ್ಷವಾದರೆ ದೇವತೆಗಳಿಗೆ ಒಂದು ಅಹೋರಾತ್ರ. ಉತ್ತರಾಯಣವೇ ಹಗಲು. ದಕ್ಷಿಣಾಯನವೇ ರಾತ್ರಿ. (ಉತ್ತರಾಯಣ, ಮತ್ತು ದಕ್ಷಿಣಾಯನಗಳು ಅಹೋರಾತ್ರಿಗಳ ಪ್ರಾರಂಭಕಾಲವೇ ಹೊರತು ಅಹೋರಾತ್ರಿಗಳಲ್ಲವೆಂಬದಾಗಿ ಜ್ಯೋತಿಷ್ಕರು ಹೇಳುವರು.) ಇಂತಹ ದೇವಮಾನರ್ರ ಕಾರ ಹನ್ನೆರಡುಸಾವಿರ ವರ್ಷಗಳು ಮುಗಿಯುವಕಾಲಕ್ಕೆ ಒಂದು ದಿವ್ಯಯುಗ ಅಥವಾ ಮನುಷ್ಯರಿಗೆ ಒಂದು ಚತುರ್ಯುಗವಾಗುವುದು.

3	ಕಲಿಪ್ರಮಾಣ ಸೌರಮಾನವರ್ಷಗಳು	432 000
	ದ್ವಾಪರ ,, ಕಲಿಯ ಎರಡರಷ್ಟು	864,000
	ತ್ರೇತಾಪ್ರಮಾಣ ಕಲಿಯ ಮೂರರಷ್ಟು	1,296,000
	ಕೃತಪ್ರಮಾಣ ,, ನಾಲ್ಕರಷ್ಟು	1,728,000
	ಒಟ್ಟು ಒಂದು ಚತುರ್ಯುಗಕ್ಕೆ ಸೌರವರ್ಷಗಳು	4,320,000

ಇವು ಒಂದು ಸಾವಿರಸಾರಿ ಆದರೆ (4,320,000 × 1000 = 4320,000,000) ನಾಲ್ಕುನೂರ ಮೂತ್ತೆರಡು ಕೋಟಿ ಸೌರಸಂವತ್ಸರಗಳಾಗುವುವು.

ಇಲ್ಲಿಗೆ ಬ್ರಹ್ಮನಿಗೆ ಒಂದು ಹಗಲು, ರಾತ್ರಿಯೂ ಅಷ್ಟೇ ಎರಡೂ ಒಟ್ಟು 8,640,000,000, ಎಂಟುನೂರು ಅರವತ್ತು ನಾಲ್ಕು ಕೋಟಿ ಸೌರವರ್ಷಗಳು ಈರಾತ್ರಿಯಲ್ಲಿ ಒಂದು ಪ್ರಳಯವು ನಡೆಯುವುದು. ಈರೀತಿಯಿಂದ ಬ್ರಹ್ಮನ ಒಂದು ವರ್ಷಕ್ಕೆ

8,640,000,000 × 360 = 3,110,400 000 000, ಇಷ್ಟು ಸೌರವರ್ಷಗಳಾಗುವುವು. ಇಲ್ಲಿಗೆ ಬ್ರಹ್ಮನಿಗೆ ಒಂದ ವರ್ಷವಾಗುವುದು, ಇದೇ ರೀತಿಯಿಂದ ಬ್ರಹ್ಮನ ಐವತ್ತು ವರ್ಷಗಳ ಕಾಲಕ್ಕೆ 3,110400,000,000 × 50 = 155,520,000,000,0000 ವರ್ಷಗಳು ಇಂತೆಯೇ ನೂರುವರ್ಷಗಳಾಗಬೇಕಾದರೆ ಇದರ ಎರಡರಷ್ಟು ಅಂದರೆ 155,20 000,000 000 × 2 ಅಥವಾ

3,110,400 000,000, × 100 = 311,040,000,000,000, ವರ್ಷಗಳಾಗುವುವು. ಈಕಾಲಕ್ಕೆ ಮಹಾಪ್ರಳಯವೆಂದುಹೆಸರು.

ಶ್ರೀ

ಪಿನ್ನವಃ ಪರಮಾತ್ಮನೇ.

ಅಥ ಚತುರ್ಥೋಧ್ಯಾಯಃ.

ಶ್ರೀಮೈತ್ರೇಯಃ ॥ ಬ್ರಹ್ಮಾ ನಾರಾಯಣಾಖ್ಯೋ೭ಸೌ ಕಲ್ಪಾದೌ ಭಗವಾ೯ ಯಥಾ । ಸಸರ್ಜ ಸರ್ವಭೂತಾನಿ ತನ್ಮೇವದ ಮಹಾಮುನೆ ! ॥೧॥ ಶ್ರೀಪರಾಶರಃ ॥ ಪ್ರಜಾಸ್ಸಸರ್ಜ ಭಗವಾ೯ ಬ್ರಹ್ಮಾನಾರಾಯಣಾತ್ಮಕಃ।ಪ್ರಜಾಪತಿಪತಿ ರ್ದೇವೋ ಯಥಾ ತನ್ಮೇ ನಿಶಾಮಯ ॥೨॥ ಅತೀತ ಕಲ್ಪಾವಸಾನೇ ನಿಶಾಸುಪ್ತ್ಯೈ ತ್ಥಿತಃ

ಇಂತು ಪರಾಶರಮುನಿಯಿಂದ ಹೇಳಲ್ಪಟ್ಟ ಬ್ರಹ್ಮನ ಸೃಷ್ಟ್ಯಾದಿಕಾರ್ಯ ಪ್ರವೃತ್ತಿಯನ್ನು ಕೇಳಿ ಪುನಃ ಅದೇ ಸೃಷ್ಟಿಕ್ರಮವನ್ನೇ ವಿಶದವಾಗಿ ತಿಳಿಯಬೇಕೆಂಬ ಕುತೂಹಲವುಳ್ಳ ಮೈತ್ರೇಯನು ಪರಾಶರಮುನಿಯನ್ನು ಕುರಿತು ಪ್ರಶ್ನೆಮಾಡುತ್ತಾನೆ:—ಮನನಶೀಲರಾದ ಮುನಿಗಳಲ್ಲಿ ಶ್ರೇಷ್ಠನೆನಿಸಿದ ಪರಾಶರಮುನಿಯೆ ! ಕಲ್ಪದ ಆದಿಯಲ್ಲಿ ಷಡ್ಗುಣೈಶ್ವರ್ಯಸಂಪನ್ನನೆನಿಸಿ ಕಾರಣಬ್ರಹ್ಮನಾದ ಚತುರ್ಮುಖರೂಪಿಯಾದ ಆ ನಾರಾಯಣನು ಸಕಲ ಭೂತಗಳನ್ನೂ ಸೃಷ್ಟಿಸಿದ ಕ್ರಮವೆಂತು ? ಅದನ್ನು ನನಗೆ ವಿಶದವಾಗಿ ತಿಳಿಸಬೇಕೆನಲು ॥೧॥ ಪರಾಶರಸು ಹೇಳುತ್ತಾನೆ:—(ಅಯ್ಯಾ ಮೈತ್ರೇಯನೆ !) ಷಡ್ಗುಣೈಶ್ವರ್ಯಸಂಪನ್ನನೂ, ಸರ್ವಶ್ರೇಷ್ಠನೂ, ಜ್ಞಾನಸ್ವರೂಪನೂ ಎನಿಸಿ ಪರಬ್ರಹ್ಮನೆನಿಸುವ ಅನಾರಾಯಣರೂಪಿಯಾದ ಚತುರ್ಮುಖನು ಕಲ್ಪಾದಿಯಲ್ಲಿ ನಿಖಿಲಭೂತಸಮುದಾಯಗಳನ್ನೂ ಸೃಷ್ಟಿಮಾಡಿದ ಕ್ರಮವನ್ನು ನಿನಿಗೀಗ ತಿಳಿಸುವೆನು ॥ ೨ ॥ ಕಾರಣ ಬ್ರಹ್ಮನಾದ ಚತುರ್ಮುಖನ ಪರಮಾಯುಸ್ಸಿನಲ್ಲಿ ಅರ್ಧವಾದವೊದಲನೆಯ ಪರಾರ್ಧದ ಕೊನೆಯಲ್ಲಿ ನಡೆದ ಪಾದ್ಮಕಲ್ಪಾಂತದಲ್ಲಿ ಉಂಟಾದ ಪ್ರಳಯದಿಂದ ಸಕಲವೂ ನಷ್ಟವಾದ ಬಳಿಕ, ಸಮುದ್ರಮಧ್ಯದಲ್ಲಿ ಶೇಷಶಾಯಿಯಾಗಿ, ರಾತ್ರಿಕಾಲವೆಲ್ಲಾ ಸುಖವಾಗಿ ಮಲಗಿ ಗಾಢನಿದ್ರೆಯಂಗೈದು, ಪುನಃ ಆರಾತ್ರಿಯ ಕೊನೆಯಲ್ಲಿ ಎಚ್ಚರಗೊಂಡ, ನಿಖಿಲಶಕ್ತಿಸಂಪೂರ್ಣನೆನಿಸಿದ ಆ ಚತುರ್ಮುಖನು ಸತ್ವಗುಣಾವಿಷ್ಟ

ಪ್ರಭುಃ । ಸತ್ಯೋದ್ರಿಕ್ತಸ್ತದಾ ಬ್ರಹ್ಮಾ ಕೂನ್ಯಂ ಲೋಕಮವೈ
ಕ್ಷತ ॥೫॥ ನಾರಾಯಣಃ ಪರೋ ಚಿಂತ್ಯಃ ಪರೇಷಾಮಪಿಸಪ್ರ
ಭುಃ । ಸತ್ವಸ್ವರೂಪೀ ಭಗವಾ ನನಾದಿ ಸ್ಸರ್ವಸಂಭವಃ ॥೪॥ ಇ
ಮಂಚೋ ದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ । ಬ್ರ
ಹ್ಮಸ್ವರೂಪಿಣಂ ದೇವಂ ಜಗತಃ ಪ್ರಭವಾಪ್ಯಯಂ ॥೫॥ಆಪೋ
ನಾರಾ ಇತಿ ಪ್ರೋಕ್ತಾ * ಆಪೋವೈ ನರಸೂನವಃ । ಅಯನಂ

ಕೊಗಿ, ಈ ಲೋಕವೆಲ್ಲವೂ ಬಯಲಾಗಿರುವುದನ್ನು ಕಂಡನು ॥ ೩ ॥ ಶ್ರೇಷ್ಠಗಳೆನಿಸಿದ ಇಂದ್ರಿಯಗಳು, ಇಂದ್ರಿಯಾರ್ಥಗಳು, ಇವುಗಳೆಲ್ಲಕ್ಕಿಂತಲೂ ಉತ್ತಮ ನೆನಿಸಿದ ಆ ನಾರಾಯಣನೇ ಧ್ಯಾನವಿಷಯನು. ಆತನೇ ನಿಖಿಲಶಕ್ತಿ ಸಂಪೂರ್ಣನು. ಉತ್ಪತ್ತಿ ರಹಿತನೆನಿಸಿ ಬ್ರಹ್ಮರೂಪದಿಂದ ಎಲ್ಲವನ್ನೂ ಪ್ರಕಾಶ ಗೊಳಿಸುವವನೂ, (ಸೃಷ್ಟಿಮಾಡತಕ್ಕವನೂ) ಆತನೇ ॥ ೪ ॥ ಮೈತ್ರೇಯನು ಕೇಳುತ್ತಾನೆ:— ಎಲೈ ಪರಾಶರಮುನಿಯೆ !) ನಾರಾಯಣಶಬ್ದಕ್ಕೆ ಬ್ರಹ್ಮನೆಂಬ ಅರ್ಥವು ಎಂತು ಸಿದ್ಧಿಸುವುದು ? ಪರಾಶರನು ಹೇಳುತ್ತಾನೆ:—ಎಲೈ ಮೈತ್ರೇಯನೆ! ಎಲ್ಲ ಲೋಕಗಳ ಉತ್ಪತ್ತಿ, ನಾಶಗಳಿಗೆ ಕಾರಣನಾದ ಆಬ್ರಹ್ಮರೂಪಿಯಾದ ನಾರಾಯಣನ ವಿಷಯವಾಗಿ, (ಕಾರಣಬ್ರಹ್ಮನೇ – ನಾರಾಯಣನೆಂಬ ವಿಷಯವಾಗಿ) ಈ ಮುಂದೆಹೇಳುವ ಶ್ಲೋಕವನ್ನು ಉದಹರಿಸುತ್ತಾರೆ ॥೫॥ " ನರಶಬ್ದಕ್ಕೆ ಚತುರ್ಮುಖಸ್ವರೂಪನಾದ ಪರಮಾತ್ಮನೆಂದರ್ಥ. ಆ ಬ್ರಹ್ಮಸೃಷ್ಟಿಯಲ್ಲಿ ಮೊದಲನೆಯದಾದದ್ದು ಉದಕಗಳು. ತನ್ನಿಂದಸೃಷ್ಟಿಸಲ್ಪಟ್ಟ ಆಉದಕಗಳಲ್ಲಿ ಪುನಃ ತಾನೇ ಪ್ರಳಯಕಾಲದಲ್ಲಿ

---

* " ಅಪವಿವಸನರ್ಜ್ಜದೌತಾಸು ವೀರ್ಯಮಪಾಸೃಜತ್" ಎಂಬಶ್ರುತಿಯಿಂದ ಪರಮಾತ್ಮನು ಆದಿಯಲ್ಲಿ ಉದಕಗಳನ್ನು ಉಂಟುಮಾಡಿ ಅದರಲ್ಲಿ ಪುನಃ ತಾನೇ ಅನುಪ್ರವೇಶಮಾಡಿದ ನೆಂಬದಾಗಿ ತಿಳಿಯಬರುತ್ತದೆ.

" ತಾಸ್ವವಾತ್ಸೀತ್ಸ್ವಸೃಷ್ಟಾಸು ಸಹಸ್ರಂಪರಿವತ್ಸರಾ । ತೇನನಾರಾಯಣೋ ನಾಮಯಥಾಹಃ ಪುರುಷೋದ್ಭವಾಃ " ॥ ಎಂಬ ವಚನದಿಂದಲೂ ಮೇಲೆಹೇಳಿದ ಅರ್ಥವು ಸಿದ್ಧಿಸುವುದು,

ತಸ್ಯತಾಃ ಪೂರ್ವಂತೇನ * ನಾರಾಯಣಃ ಸ್ಮೃತಃ ॥ ೬ ॥ ತೋ
ಯಾಂತ ಸ್ಥಾಂ ಮಹೀಂ ಜ್ಞಾತ್ವಾ ಜಗತ್ಯೇಕಾರ್ಣವೇ ಪ್ರಭುಃ ।
ಅನುಮಾನಾತ್ತದುದ್ಧಾರಂ ಕರ್ತುಕಾಮಃ ಪ್ರಜಾಪತಿಃ ॥ ೭ ॥ಅಕ
ರೋತ್ಸ್ವತನೂ ಮನ್ಯಾಂ ಕಲ್ಪಾದಿಷ್ವಯಥಾಪುರಾ । ಮತ್ಸ್ಯಕೂ
ರ್ಮಾದಿಕಾಂ ತದ್ವದ್ವಾರಾಹಂ ವಪುರಾಸ್ಥಿತಃ ॥ ೮ ॥ ವೇದಯಜ್ಞಾ
ಮಯಂ ರೂಪಂ ಅಶೇಷ ಜಗತಃ ಸ್ಥಿತೌ । ಸಿ ತಃಸ್ಥಿರಾತ್ಮಾ ಸರ್ವಾ

ನೆಲೆಮಾಡಿಕೊಂಡು ಮಲಗಿರುವನು. ಆದುದರಿಂದ ನಾರಾಯಣಶಬ್ದಕ್ಕೆ ಚತುರ್ಮುಖನೆಂದರ್ಥ " ಎಂಬುದಾಗಿತಿಳಿ ॥೬॥ ಅಯ್ಯಾ ಮೈತ್ರೇಯನೇ ! ಕಾರಣಬ್ರಹ್ಮನಾದ ಚತುರ್ಮುಖನ ಮೊದಲನಯ ಪರಾರ್ಧದ (ಐವತ್ತು ವರ್ಷಗಳ) ಕೊನೆಯಲ್ಲಿ ಪಾದ್ಮಮಹಾಕಲ್ಪವು ನಡೆಯಿತೆಂಬುದಾಗಿ ಹಿಂದೆಯೇ ತಿಳಿಸಿರುವೆನಷ್ಟೆ. ಆ ಕಲ್ಪಕಾಲದಲ್ಲಿ ನಡೆದವೃತ್ತಾಂತವನ್ನು ಈಗ ತಿಳಿಸುವೆನು. ಇಂತು ಸಮುದ್ರ ಮಧ್ಯದಲ್ಲಿ ಶೇಷಶಾಯಿಯಾಗಿ ಮಲಗಿದ್ದ ಬ್ರಹ್ಮರೂಪಿಯಾದ ಆ ನಾರಾಯಣನು, ಜಲದ ಮೇಲ್ಭಾಗದಲ್ಲಿ ತಾವರೆಯ ಎಲೆಯನ್ನು ಕಂಡು " ಭೂಮಿಯಿಲ್ಲದೆ ಲತೆಯೇ ಮೊದಲಾದ ಯಾವವಿಧವಾದ ಸಸ್ಯವೂ ಬೆಳೆಯಲಾರದು " ಎಂಬ ನ್ಯಾಯದಿಂದ ಈ ಜಲಮಧ್ಯದಲ್ಲಿ ಭೂಮಿಯು ಇರಬಹುದು. ಹಾಗೆ ಇಲ್ಲದಿದ್ದಲ್ಲಿ ಇಲ್ಲಿ ಕಮಲಪತ್ರವು ಎಲ್ಲಿಯದು ? ಎಂಬದಾಗಿ ಊಹಿಸಿ ಆ ಭೂಮಿಯನ್ನು ಮರಳಿ ಉದ್ಧಾರಮಾಡಬೇಕೆಂಬ ಕುತೂಹಲದಿಂದ, ಲೋಕಸಂರಕ್ಷಣೆಯುಲ್ಲಿ ದೃಢಸಂಕಲ್ಪನೆನಿಸಿ, ಸರ್ವಾತ್ಮಕನೂ, ಸರ್ವಾಂತರ್ಯಾಮಿಯೂ, ಸೃಷ್ಟಿಕಾರಣನೂ ಎನಿಸಿದ ಆನಾರಾಯಣನು, ತಾನು ಹಿಂದಿನಕಲ್ಪಗಳಲ್ಲಿ ಮತ್ಸ್ಯ, ಕೂರ್ಮ, ರೂಪಗಳನ್ನು ಧರಿಸಿದ್ದಂತೆಯೇ

* ನರ = ಬ್ರಹ್ಮರೂಪನಾದ ಪರಮಾತ್ಮ. ನರಾಜ್ಜಾತಾಃ ; ನಾರಾಃ = ಆ ತನಿಂದ ಉಂಟಾದ ಜಲಗಳು, ನಾರಾಃ + ಅಯನಂಯಸ್ಯಸಃ , ನಾರಾಯಣಃ = ಅಂತಹ ಉದಕಗಳೇ ತನಗೆವಾಸವಾಗಿ ಉಳ್ಳವನು. ಪ್ರಳಯಕಾಲದಲ್ಲಿ ಜಲಮಧ್ಯಶಾಯಿಯಾದ ಚತುರ್ಮುಖ.

ಶ್ಮಾ ಪರಮಾತ್ಮಾ ಪ್ರಜಾಪತಿಃ ॥ ೯ ॥ಜನಲೋಕ ಗತೈಸ್ಸಿದ್ಧೈ
ಸ್ಸನಕಾದ್ಯೈ ರಭಿಷ್ಟುತಃ । ಪ್ರವಿವೇಶತದಾತೋಯ ಮಾತ್ಮಾಧಾ
ರೋ ಧರಾಧರಃ॥೧೦॥ ನಿರೀಕ್ಷ್ಯ ತಂ ತದಾ ದೇವೀ ಪಾತಾಳತಲ
ಮಾಗತಂ । ತುಷ್ಟಾವ ಪ್ರಣತಾ ಭೂತ್ವಾ ಭಕ್ತಿನಮ್ರಾ ವಸುಂ
ಧರಾ ॥ ೧೧ ॥ ಪೃಥಿವ್ಯುವಾಚ ॥ ನಮಸ್ತೇ ಪುಂಡರೀಕಾಕ್ಷ !
ತುಭ್ಯಂಶಂಖಗದಾಧರ॥ ಮಾಮುದ್ಧರಾಸ್ಮಾದದ್ಯತ್ವಂ ತ್ವತ್ತೋ೭ಹಂ ಪೂರ್ವಮುತ್ಥಿತಾ ॥೧೨॥ ತ್ವಯಾಹಮುದ್ಧೃತಾ ಪೂರ್ವಂ ತ್ವ

ಆಕಾಲದಲ್ಲಿಯೂ ಭೂಮಿಯನ್ನು ಮರಳಿ ಉದ್ಧಾರಮಾಡಲು ಯೋಗ್ಯವಾದ,ವೇದಸ್ವರೂಪವೂ,ಯಜ್ಞಸ್ವರೂಪವೂಎನಿಸಿದ ವರಾಹರೂಪವನ್ನು ಧರಿಸಿ, ಜನೋಲೋಕಗತರಾದ ಮಹನೀಯರು, ಸಿದ್ಧಪುರುಷರು,ಬ್ರಹ್ಮನಮಾನಸಪುತ್ರರಾದ ಸನಕ,ಸನಂದ,ಸನತ್ಸುಜಾತ,ಸನತ್ಕುಮಾರ,ಮೊದಲಾದವರ ಸ್ತೋತ್ರಕ್ಕೆ ವಿಷಯನಾಗಿ ಪಾತಾಳಲೋಕ ಪ್ರಯಾಣಾರ್ಥವಾಗಿ ಜಲವನ್ನು ಪ್ರವೇಶಮಾಡಿದನು॥೭॥೮॥೯॥೧೦॥ಆಗ ಪೂಜ್ಯಳಾದ ಆವಸುಂಧರೆಯು (ಭೂವ್ಯಭಿಮಾನಿನಿಯಾದ ದೇವತೆಯು) ತನ್ನನು ಉದ್ಧಾರಮಾಡುವುದಕ್ಕಾಗಿಯೇ ಪಾತಾಳಲೋಕವನ್ನು ಕುರಿತು ಬಂದಿರುವ ಆ ಪರಮಾತ್ಮನನ್ನು ಕಂಡು ಅತ್ಯಂತ ಹರ್ಷಿತಳಾಗಿ ವಿನಯದಿಂದ ತಲೆಬಾಗಿ ನಮಸ್ಕರಿಸಿ, ಭಕ್ತಿಭರಿತಳಾಗಿ ಸ್ತೋತ್ರಮಾಡಲು ಉಪಕ್ರಮಿಸಿದಳು:-॥ ೧೧ ॥ " ಕಮಲದ ಎಸಳನಂತೆ ಕಂಗೊಳಿಸುವ ವಿಶಾಲವಾದ ಕಣ್ಣುಗಳಿಂದೊಪ್ಪುವ ಎಲ್ಲೆ ಮಹಾವಿಷ್ಣುವೇ ! ನಿನಗೆ ನಮಸ್ಕಾರವು, ಎಲೈ ಶಂಖ, ಚಕ್ರ, ಗದಾಧಾರಿಯಾದವನೆ ! ನಿನಗೆ ಮರಳಿ ನಮಸ್ಕಾರ. ಪೂರ್ವದಲ್ಲಿ ನಾನು ನಿನ್ನಿಂದಲೇ ಉತ್ಪನ್ನಳಾದುದರಿಂದ ಭಕ್ತರಕ್ಷಣಧುರೀಣನೆಂಬ ಬಿರುದನ್ನು ಪಡೆದಿರುವ ನೀನು ಈ ಪಾತಾಳ ಲೋಕದಿಂದ ಅಥವಾ ಈ ಪ್ರಳಯಮಹಾಸಮುದ್ರದಿಂದ ನನ್ನನ್ನು ಉದ್ಧರಿಸಿ ಸಲಹು ॥ ೧೨ ॥ ಹಿಂದಿನ ಕಲ್ಪಗಳಲ್ಲಿ ಮತ್ಸ್ಯ, ಕೂರ್ಮ, ರೂಪಗಳಿಂದ ನೀನು ನನ್ನನ್ನು ಉದ್ಧಾರ ಮಾಡಲಿಲ್ಲವೆ ? ಆಕಾಶ, ವಾಯು, ತೇಜಸ್ಸು, ಜಲ, ಪೃಥಿವಿ ಗಳೆಂಬ ಪಂಚಭೂತಗಳನ್ನೂ ಆದಿಯಲ್ಲಿ ಉಂಟುಮಾಡಿ

ನ್ಮಯಾZಹಂಜನಾರ್ದನ ! । ತಥಾZನ್ಯಾನಿಚ ಭೂತಾನಿ ಗಗನಾದೀನ್ಯ ಶೇಷತಃ ॥೧೩॥ ನಮಸ್ತೇ ಪರಮಾತ್ಮಾ ZZತ್ಮ್ಕ ! ಪುರುಷಾತ್ಮ್ಕ ! ನಮೋಸ್ತುತೇ। ಪ್ರಧಾನವ್ಯಕ್ತ ಭೂತಾಯ ಕಾಲ ಭೂತಾಯ ತೇನಮಃ ॥೧೪॥ ತ್ವಂ ಕರ್ತಾ ಸರ್ವಭೂತಾನಾಂ ತ್ವಂ ಪತಾತ್ವಂ ವಿನಾಶಕೃತ್ । ಸರ್ಗಾದಿಷುಪ್ರಭೋ ! ಬ್ರಹ್ಮವಿಷ್ಣು

ದವನೂ ನೀನೇ ಅಲ್ಲವೆ ? ಮೇಲೆ ಹೇಳಿದ ಭೂತಗಳೆಲ್ಲವೂ ನಿನ್ನ ಸ್ವರೂಪವೇ ಆಗಿರುವ ಕಾರಣ ಅವುಗಳಲ್ಲಿ ಒಂದಾದ ನಾನೂ ನಿನ್ನ ಸ್ವರೂಪವೇ ಆದುದರಿಂದ ಈಗ ಈ ಪ್ರಳಯಾಬ್ಧಿಯಿಂದ ನನ್ನನ್ನು ಸಲಹುವರು ನೀನಲ್ಲದೆ ಮತ್ತಾರು ? ॥೧೩॥ ಪರಮಾತ್ಮ, ಪುರುಷ, (ಕ್ಷೇತ್ರಜ್ಞ) ಪ್ರಕೃತಿ, ಮಹತ್ತತ್ವ, ಕಾಲ, ಮೊದಲಾದ ರೂಪಗಳಿಂದ ತೋರುವ ನಿನಗೆ ಬಾರಿ ಬಾರಿಗೂ ನಮಸ್ಕರಿಸುವೆನು ॥೧೪॥ ಸೃಷ್ಟಿಕಾಲದಲ್ಲಿ ಬ್ರಹ್ಮರೂಪವನ್ನು ಧರಿಸಿ ಸಕಲ ಭೂತಗಳನ್ನೂ ಸೃಷ್ಟಿಮಾಡುವವನೂ, ಇಂತು ಸೃಷ್ಟಿಸಲ್ಪಟ್ಟ ಪ್ರಾಣಿವರ್ಗಗಳನ್ನು ಕಾಪಾಡಲು ಸ್ಥಿತಿಕರ್ತೃವಾದ ವಿಷ್ಣುರೂಪದಿಂದ ಸಲಹುವವನೂ, ಬಳಿಕ ಪ್ರಳಯಕಾಲದಲ್ಲಿ ಅವುಗಳನ್ನು ಲಯಗೊಳಿಸಲು ನಾಶಕರ್ತೃವಾದ ರುದ್ರರೂಪವನ್ನು ಧರಿಸಿ, ಲಯಗೊಳಿಸತಕ್ಕವನೂ ನೀನೇ ಆಗಿರುವಿ ॥೧೫॥ ಯಜ್ಞರಕ್ಷಕನಾದುದರಿಂದಲೂ, ಅಥವಾ ಪಶುಪಾಲಕನಾದುದರಿಂದಲೂ "ಗೋವಿಂದ" ನೆಂಬುದಾಗಿ ಕರೆಯಿಸಿಕೊಳ್ಳುವ ಎಲ್ಲೈ ಮಹಾನುಭಾವನೆ ! ಇಂತು ಪ್ರಳಯಕಾಲದಲ್ಲಿ ಎಲ್ಲಪ್ರಾಣಿಗಳನ್ನು ನಾಶಗೊಳಿಸಿ, ಈಲೋಕಗಳೆಲ್ಲವೂ ಜಲರೂಪವನ್ನು ಪಡೆದು ದೊಡ್ಡ ಸಮುದ್ರವಾಗಿ ಪರಿಣಮಿಸಲು, ಆಕಾಲದಲ್ಲಿ ಅಂತಹ ಸಮುದ್ರಮಧ್ಯದಲ್ಲಿ ವಟಪತ್ರಶಾಯಿಯಾಗಿ, ಯೋಗಿಗಳಧ್ಯಾನಕ್ಕೆ ವಿಷಯನಾಗಿ ಯೋಗನಿದ್ರೆಯಂ ಗೈಯ್ಯುವವನೂ ನೀನೆ॥೧೬॥$ ಇಂದ್ರಿಯಗಳ

$ಶ್ರು॥ ಯತೋವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾಸಹ, ನಸಂದೃಶೇತಿಷ್ಠತಿರೂಪಮಸ್ಯೆ ನಚಕ್ಷುಷಾಪಶ್ಯತಿ ಕಶ್ಚನೈನಂ, ನೈವವಾಚಾನಮನಸಾಪ್ರಾಪ್ತುಂಶಕ್ಯೋ ನಚಕ್ಷುಷಾ, ಇತ್ಯಾದಿಶ್ರುತಿಗಳುಪರಮಾತ್ಮನರೂಪವು ಅತೀಂದ್ರಿಯವೆಂಬುದಾಗಿತಿಳಿಯಿಸುವುವು—

ರುದಾತ್ಮರೂಪಧೃತ್ ॥೧೪॥ ಸಂಭಕ್ಷಯಿತ್ವಾ ಸಕಲಂ ಜಗತ್ಯೇ
ಕಾರ್ಣವೀಕೃತೇ । ಶೇಷೇ ತ್ವಮೇವ ಗೋವಿಂದ । ಚಿಂತ್ಯಮಾ
ನೋ ಮುನೀಷಿಭಿಃ ॥೧೬॥ ಭವತೋಽಯತ್ಪರಂ ರೂಪಂ ತನ್ನ
ಜಾನಾತಿ ಕಶ್ಚನ । ಅವತಾರೇಷು ಯದ್ರೂಪಂ ತದರ್ಚಂತಿ ದಿವೌ
ಕಸಃ ॥೧೭॥ ತ್ವಾಮಾರಾಧ್ಯ ಪರಂಬ್ರಹ್ಮ ಯಾತಾ ಮುಕ್ತಿಂಮು
ಮುಕ್ಷವಃ।ವಾಸುದೇವಮನಾರಾಧ್ಯ ಕೋವಾಮೋಕ್ಷಮವಾಪ್ನುಯಾತ್

ಗೇ ಆಗಲಿ ಮನಸ್ಸಿಗೇ ಆಗಲಿ ಅಗೋಚರವಾದುದರಿಂದ ಅತೀಂದ್ರಿಯವೆನಿ
ಸುವ ನಿನ್ನ ಯಾವ ಸತ್ಯ, ಜ್ಞಾನ, ಆನಂದ, ರೂಪವೆನಿಸಿದ ಉತ್ತಮೋ
ತ್ತಮರೂಪವಿರುವುದೋ ಅದನ್ನು ಕಾಣಲು ಯಾರಿಗೂ ಸಾಧ್ಯವಿಲ್ಲದುದ
ರಿಂದ, ನೀನು †ಭಕ್ತಾನುಗ್ರಹಾರ್ಥವಾಗಿ ಧರಿಸುವ ರಾಮ,ಕೃಷ್ಣ, ಮೊ
ದಲಾದ ನಿನ್ನ ರೂಪಗಳನ್ನು ಮಾತ್ರ ಪೂಜಿಸಿ ಧನ್ಯರಾಗುವರೇ ಹೊರತು
ನಿನ್ನ ನಿಜರೂಪವನ್ನು ಕಾಣಲು ಯಾರುತಾನೇ ಸಮರ್ಥರು ? ॥೧೭॥ ಪರ
ಬ್ರಹ್ಮಸ್ವರೂಪನಾದ ನಿನ್ನನ್ನು ಪೂಜಿಸಿ ಸ್ತೋತ್ರಮಾಡಿ, ನಮಸ್ಕರಿಸಿ,
ಸಂತುಷ್ಟನಾದ ನಿನ್ನ ಅನುಗ್ರಹದಿಂದಲ್ಲವೆ ಮೋಕ್ಷಾಭಿಲಾಷಿಗಳಾಗಿ ಅ
ದಕ್ಕಾಗಿ ಪ್ರಯತ್ನಪಡುವ ಯೋಗಿಗಳು, ದೇವತೆಗಳು, ಮೊದಲಾದವ
ರಿಗೆ ಮೋಕ್ಷ ಅಥವಾ ನಿರತಿಶಯಾನಂದವೆಂಬುದು ಲಭಿಸುವುದು. ಎಲ್ಲವ
ಸ್ತುಗಳನ್ನೂ ತನ್ನಲ್ಲಿಯೇ ನೆಲೆಗೊಳಿಸಿಕೊಂಡು, ಅವುಗಳಲ್ಲಿಯೂ ತಾ
ನೇ ನೆಲೆಸಿ, ಸರ್ವವ್ಯಾಪಕನಾಗಿ ಸರ್ವಪ್ರಕಾಶನಾದುದರಿಂದ * "ವಾಸು
ದೇವ" ನೆಂಬುದಾಗಿ ಕರೆಯಿಸಿಕೊಳ್ಳುವ ನಿನ್ನನ್ನು ಆರಾಧಿಸದಿದ್ದಲ್ಲಿ

† ಉಪಾಸಕಾನಾಂ ಕಾರ್ಯಾರ್ಥಂಬ್ರಹ್ಮಣೋರೂಪಕಲ್ಪನಾ, ಎಂಬಶ್ರುತಿಯಿಂದ
ಪರಮಾತ್ಮನಿಗೆ ರಾಮ, ಕೃಷ್ಣಾದಿ ಅವತಾರಗಳೆಲ್ಲವೂ ಭಕ್ತಾನುಗ್ರಹಾರ್ಥವಾಗಿಯೆ

* ವಸನಾದ್ವಾಸನಾಚ್ಚೈವ ವಾಸುಃ. ದ್ಯೋತನಾದ್ದೇವಃ ವಾಸುಶ್ಚಾಸೌ ದೇವಶ್ಚ
ವಾಸುದೇವಃ, ತಾನು ಎಲ್ಲೆಲ್ಲಿಯೂ ನೆಲೆಸಿ, ಎಲ್ಲವನ್ನೂ ತನ್ನಲ್ಲಿ ನಿಲ್ಲಿಸಿಕೊಂಡು
ಇರುವನು "ವಾಸು" ಎನಿಸುವನು. ಎಲ್ಲವನ್ನೂ ಪ್ರಕಾಶಗೊಳಿಸುವುದರಿಂದ
"ದೇವ" ಎನಿಸುವನು ಸರ್ವಾಧಾರಕನಾಗಿ, ಸರ್ವಪ್ರಕಾಶಕನಾಗಿರುವವನು "ವಾಸು
ದೇವ,, ಈ ವಿಷಯದಲ್ಲಿ "ವಸನಾದ್ಯೋತನಾಚ್ಚೈವ ವಾಸುದೇವಂತತೋವಿದುಃ,
ಎಂಬ ಮೋಕ್ಷಧರ್ಮ ವಚನವು ಪ್ರಮಾಣವಾಗಿರುವುದು,

ಯತ್ಕಿಂ ಚಿನ್ಮನ ಸಾ ಗ್ರಾಹ್ಯಂ ಯದ್ವಾ ಗ್ರಾಹ್ಯಂ ಚಕ್ಷುರಾದಿಭಿಃ ।
ಬುದ್ಧ್ಯಾ ವೈಚ ಯತ್ಪರಿಚ್ಛೇದ್ಯಂ ತದ್ರೂಪ ಮಖಿಲಂ ತವ ॥೧೯॥
ತನ್ಮಯೋಽಹಂ ತ್ವದಾಧಾರಾ ತ್ವತ್ಸೃಷ್ಟಾ ತ್ವತ್ಸಮಾಶ್ರಯಾ ।
ಮಾಧವೀ ಮಿತಿಲೋಕೋಽಯ ಮಭಿಧತ್ತೇ ತತೋಽಹಿವಾಂ॥೨೦॥
ಜಯಾಖಿಲ ಜ್ಞಾನಮಯ! ಜಯಸ್ಥೂಲಮಯಾ ವ್ಯಯ! । ಜಯಾ
ನಂತ! ಜಯಾವ್ಯಕ್ತ! ಜಯವ್ಯಕ್ತ ಮಯ! ಪ್ರಭೋ! ॥೨೧॥
ಪರಾಪರಾತ್ಮ! ಸರ್ವಾತ್ಮ! । ಜಯ ಯಜ್ಞ ಪತೇಽನಘ! ॥

ವೋಕ್ಷವೆಂಬುದು ಯಾರಿಗೆ ಹೇಗೆತಾನೇ ಲಭಿಸೀತು; ॥೧೮॥ ಮನಸ್ಸಿಗೆ ಗೋಚರವಾಗತಕ್ಕ ಜ್ಞಾನ ಸುಖದುಃಖಾದಿಗಳೂ, ತ್ವಕ್ಕು, ಚಕ್ಷುಸ್ಸು ನಾಸಿಕಾ, ಶ್ರೋತ್ರ, ಜಿಹ್ವೆಗಳೆಂಬ ಪಂಚಜ್ಞಾನೇಂದ್ರಿಯ ಜನ್ಯಗಳಾದ ಸ್ಪರ್ಶ, ರೂಪ, ಗಂಧ, ಶಬ್ದ, ರಸಗಳೂ, ಬುದ್ಧಿಯಿಂದ ಗೋಚರವಾಗತಕ್ಕ ಜ್ಞಾನವೂ ಸಕಲವೂ ನಿನ್ನ ಸ್ವರೂಪವೇ (ನೀನೆ ಆ ಆರೂಪದಿಂದ ಕಾಣಿಸುವೆ) ॥೧೯॥ ನಿನ್ನ ಹೊರತು ನನಗೆ ಮತ್ತಾರೂ ರಕ್ಷಕರಿಲ್ಲ ದುದರಿಂದ ನಾನು ನಿನ್ನನ್ನೇ ಅನನ್ಯಗತಿಕಳಾಗಿ ನಂಬಿರುವೆ. ನಾನು ನಿನ್ನಿಂದಲೇ ಉದಯಿಸಿದವಳು ಆದುದರಿಂದಲೇ ಲೋಕದಲ್ಲಿ ಎಲ್ಲರೂ ನನ್ನನ್ನು ನಿನ್ನವಳು [ಲಕ್ಷ್ಮೀಪತಿಯಾದ ಶ್ರೀವಿಷ್ಣುವಿನ ಸಂಬಂಧಿನಿ] ಎಂಬುದಾಗಿ ಹೇಳುವರು ॥೨೦॥ ಎಲೈ ಸರ್ವಜ್ಞನೇ, ನಿನಗೆ ಮಂಗಳವಾಗಲಿ. ಸ್ಥೂಲವಾದ ಜಗತ್ಸ್ವರೂಪದಿಂದ ಕಾಣುವ ಪರಮಾತ್ಮನೇ! ನೀನು ಸರ್ವೋತ್ಕೃಷ್ಟನಾಗಿರು. ಎಲೈ ನಾಶರಹಿತನಾದವನೇ! ನಿನಗೆ ಅನೇಕ ಮಂಗಳಗಳಾಗಲಿ ಎಲೈ ಅವ್ಯಕ್ತವೆನಿಸುವ ಪ್ರಕೃತಿಸ್ವರೂಪದಿಂದ ಕಾಣುವವನ ! ನಿನಗೆ ನಿರಂತರವೂ ಜಯವಾಗಲಿ. ವ್ಯಕ್ತವೆನಿಸುವ ಮಹತ್ತತ್ವ ರೂಪದಿಂದ ಕಾಣುವ ನೀನು ಸರ್ವೋತ್ತಮನಾಗಿ ಬಾಳು. ॥೨೦॥ ಕಾರ್ಯಗಳೆನಿಸುವ ಜಗದಾದಿ ರೂಪದಿಂದಲೂ, ಕಾರಣಗಳೆನಿಸುವ ಚತುರ್ಮುಖಾದಿ ರೂಪದಿಂದಲೂ, ಉತ್ಕರ್ಷಾಪಕರ್ಷರಹಿತನೆನಿಸಿ ಸರ್ವರೂಪದಿಂದಲೂ ತೋರುವಕಾರಣ ಸರ್ವಾತ್ಮಕ ಅಥವಾ ಸರ್ವಾಂತರ್ಯಾಮಿ ಎನಿಸಿಕೊಂಡು ಯಜ್ಞಪ್ರಿಯನೆನಿಸಿ ಯಜ್ಞಪಾಲಕನೆಂಬ

ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಸ್ತ್ವಮಗ್ನಿ
ಯಃ ॥೨೨॥ ತ್ವಂವೇದಾಸ್ತ್ವಂ ತದಂಗಾನಿ ತ್ವಂ ಯಜ್ಞಪುರು
ಷೋ ಹರೇ! । ಸೂರ್ಯೋದಯೋ ಗ್ರಹಾಸ್ತಾರಾನಕ್ಷತ್ರಾಣ್ಯಖಿ
ಲಾನಿಚ ॥೨೩॥ ಮೂರ್ತಾಮೂರ್ತ ಮದೃಶ್ಯಂಚ ದೃಶ್ಯಂಚ ಪು
ರುಷೋತ್ತಮ! । ಯಚ್ಚೋಕ್ತಂ ಯಚ್ಚನೈವೋಕ್ತಂ ಮು

ದಾಗಿ ಕರೆಯಿಸಿಕೊಳ್ಳುವ ಸಕಲ ದೋಷರಹಿತನಾದ ಎಲೈ ಪರಮಾತ್ಮನೆ ನೀನು ಸರ್ವದಾ ಜಯಶೀಲನಾಗಿರು. ಯಜ್ಞವೂ, ಯಜಮಾನನೂ, ಯಜ್ಞಕ್ಕೆ ಪ್ರಧಾನ ದೇವತೆಯೂ, ಯಜ್ಞಸಾಧನಗಳಾದ ಚರು, ಪುರೋಡಾಶಾದಿಗಳೂ, ಯಜ್ಞಫಲವೂ, ಯಜ್ಞಫಲವನ್ನು ಕೊಡತಕ್ಕವನೂ, ಇವೆಲ್ಲವೂ ನೀನೆ. ಯಜ್ಞಶಬ್ದವಾಚ್ಯನಾದವನೂ ನೀನೇ. ತ್ರಿಗುಣಾತ್ಮಕವಾದುದರಿಂದ ತ್ರಿಮೂರ್ತಿ ಸ್ವರೂಪವೆನಿಸಿ, ಅಕಾರ, ಉಕಾರ, ಮಕಾರ ಸಮುದಾಯ ರೂಪವಾದ 'ಓಂ' ಎಂಬ ಶಬ್ದವೂ ಅದರ ಅರ್ಥವಾದ ಪರಮಾತ್ಮವಸ್ತುವೂ ನೀನೆ. ಅಸ್ತುಶ್ರೌಷಟ್, ವಷಟ್, ಇತ್ಯಾದಿ ಮಂತ್ರವೂ, ಆ ಮಂತ್ರದಿಂದ ತೋರಿಬರುವ ಅರ್ಥವೂ ಇವೆಲ್ಲವೂ ನಿನ್ನ ಸ್ವರೂಪವೇ ಅಲ್ಲವೆ. ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಅಗ್ನಿತ್ರಯರೂಪದಿಂದ ಕಾಣುವವನೂ ನೀನೇ ॥೨೨॥ ಋಕ್ಕು, ಯಜುಸ್ಸು, ಸಾಮ, ಅಥರ್ವಗಳೆಂಬ ವೇದಗಳೂ, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರು ವೇದಾಂಗಗಳೂ, ಯಜ್ಞಾಭಿಮಾನಿ ದೇವತೆಯೂ, ಸೂರ್ಯೋದಯ, ಸೂರ್ಯಾದಿ ನವಗ್ರಹಗಳು, ಅಶ್ವಿನ್ಯಾದಿ ಇಪ್ಪತ್ತೇಳು ನಕ್ಷತ್ರಗಳು, ಆಕಾಶದಲ್ಲಿ ಮಿಣುಗುಟ್ಟುವ ಇತರ ನಕ್ಷತ್ರಗಳು ಇವುಗಳೆಲ್ಲವೂ ನಿನ್ನ ಸ್ವರೂಪವೇ ॥೨೩॥ ಎಲೈ ಪರಮೈಶ್ವರ್ಯಶಾಲಿಯಾದ ಪುರುಷೋತ್ತಮನೆ, ದೃಗ್ಗೋಚರಗಳಾಗಿ ಪ್ರತ್ಯಕ್ಷಗಳೆನಿಸುವ ಸ್ಥೂಲವಸ್ತುಗಳೂ, ಅಗೋಚರವಾಗಿ ಅಪ್ರತ್ಯಕ್ಷಗಳೆನಿಸುವ ಅತಿಸೂಕ್ಷ್ಮವಸ್ತುಗಳು, ಕಾರಿಣ್ಯ, ಮಾರ್ದನ, ಯುಕ್ತಗಳಾದ ಪದಾರ್ಥಗಳು ಈ ಸಕಲವೂ ನೀನೇ ಆಗಿ ಆ ಸ್ವರೂಪದಿಂದ ಕಾಣಿಸುವೆ. ನಿನಗೆ ನಮಸ್ಕಾರ. ಇಂತಹ ಗುಣಸಂಪತ್ತಿನಿಂದ ಕೂಡಿರುವ ಎಲೈ

ಯಾಽತ್ರ ಪರಮೇಶ್ವರ!॥ತತ್ಸರ್ವಂ ತ್ವಂ ನಮಸ್ತುಭ್ಯಂಭೂಯೋ
ಭೂಯೋ ನಮೋನಮಃ ॥೨೪॥ ಶ್ರೀ ಪರಾಶರಃ ॥ ಏವಂ ಸಂ
ಸ್ತೂ ಯಮಾನಸ್ತು ಪೃಥಿವ್ಯಾ ಪೃಥಿವೀಧರಃ । ಸಾಮಸ್ವರ ಧ್ವ
ನಿ ಶ್ಶ್ರೀರ್ಮಾ ಜಗರ್ಜ ಪರಿಘರ್ಘರಂ॥೨೫॥ತತ ಸ್ಸಮುತ್ಕ್ಷಿಪ್ಯ
ಧರಾಂ ಸ್ವದಂಷ್ಟ್ರಯಾ ಮಹಾವರಾಹ ಸ್ಫುಟ ಪದ್ಮಲೋಚನಃ।
ರಸಾತಲಾ ದುತ್ಪಲ ಪತ್ರಸನ್ನಿಭ ಸ್ಸಮುತ್ಥಿತೋ ನೀಲ ಇವಾಚ
ಲೋ ಮಹಾ ॥೨೬॥ ಉತ್ತಿಷ್ಠತಾಽನೇನ ಮುಖಾನಿಲಾಹತಂ
ತತ್ಸಂಭವಾಂಭೋ ಜನಲೋಕ ಸಂಶ್ರಯಾ । ಸನಂದನಾದೀ

ಪರಮೇಶ್ವರನೇ, ನಿನಗೆ ಅತ್ಯಾದರದಿಂದ ಭಕ್ತಿಭರಿತಳಾಗಿ ವಿನಯದಿಂದ
ಬಾರಿಬಾರಿಗೂ ನಮಸ್ಕರಿಸುವೆನು ॥೨೪॥ ಪರಾಶರನು ಹೇಳುತ್ತಾನೆ:-
ಇಂತು ಪ್ರಳಯಕಾಲದಲ್ಲಿ ಭೂಮಿಯನ್ನು ಮರಳಿ ತರಲಿಚ್ಛೆಯಿಂದ ವ
ರಾಹರೂಪವನ್ನು ಧರಿಸಿ ಪಾತಾಳ ಲೋಕಕ್ಕೆ ಬಿಜಮಾಡಿದ್ದ ಆ ಪರ
ಮಾತ್ಮನು, ಭೂದೇವಿಯು ತನ್ನನ್ನು ಇಂತು ನಾನಾಪರಿಯಿಂದ ಸ್ತುತಿಸಿ
ದುದಂ ಕೇಳಿ ಪರಮಾನಂದಭರಿತನಾಗಿ ಗಂಭೀರವಾದ ಸ್ವರದಿಂದ ಹರ್ಷ
ಸೂಚಕವಾದ ಘರ್ಘರ ಧ್ವನಿಯಂಗೈದನು ॥೨೫॥ ಬಳಿಕ ವಿಕಾಸ
ವನ್ನು ಪಡೆದಿರುವ ತಾವರೆಯ ಎಸಳಿನಂತೆ ವಿಶಾಲವಾಗಿ ಕಂಗೊಳಿಸು
ವ ಕಂಣುಗಳಿಂದಲೂ, ಕನ್ನೈದಿಲೆಯ ದಳಗಳಂತೆ ಕಪ್ಪಾಗಿ ಮಿಣುಗು
ಟ್ಟುವ ದೇಹಕಾಂತಿಯಿಂದಲೂ ಒಪ್ಪುತ್ತಿರುವ ಆ ಆದಿವರಾಹಮೂ
ರ್ತಿಯು ತನ್ನ ಕೋರೆದಾಡೆಯಿಂದ ಭೂಮಿಯನ್ನು ಎತ್ತಿಕ್ಕೊಂಡು
ಪಾತಾಳ ಲೋಕದಿಂದ ಮೇಲಕ್ಕೆ ಬರುವ ಸಮಯದಲ್ಲಿ, ಭೂಮಿ
ಯನ್ನು ಭೇದಿಸಿಕ್ಕೊಂಡು ಉದ್ಭವಿಸಿರುವ ಕಪ್ಪಾದ ದೊಡ್ಡಪರ್ವತವೋ
ಎಂಬಂತೆ ತನ್ನನ್ನು ನೋಡುತ್ತಿರುವ ಸಿದ್ಧರು ಮೊದಲಾದವರಿಗೆ ಹರ್ಷ
ನಂದಗಳನ್ನುಂಟುಮಾಡಿ ಕಂಗೊಳಿಸುತಿದ್ದನು ॥೨೬॥ ಇಂತು ಪಾತಾಳ
ಲೋಕದಿಂದ ಭೂಮಿಯನ್ನು ತನ್ನ ಕೋರೆ ದಾಡೆಯಮೇಲೆ ಧರಿಸಿ
ಕ್ಕೊಂಡು ಅತಿ ವೇಗದಿಂದ ಮೇಲಕ್ಕೆ ಬರುವ ಕಾಲದಲ್ಲಿ ಆತನ ಊ
ರ್ಧ್ವಗಮನ ವೇಗದಿಂದಲೂ, ಉಚ್ಛ್ವಾಸ ವೇಗದಿಂದಲೂ ಅಲ್ಲಕಲ್ಲೋ

ಸಪಕಲ್ಮಷಾ ಸ್ಮನೀಂ ಶ್ಚ ಕಾರ ಭೂಯೋಪಿ ಪವಿತ್ರತಾಪದಂ ।
॥೨೭॥ ಪ್ರಯಾಂತಿ ತೋಯಾನಿ * ಖುರಾಗ್ರವಿಕ್ಷತೇ ರಸಾತಲೇ೭
ಧಃಕೃತಶಬ್ದಸಂತತಿ । ಶ್ವಾಸಾನಿಲಾಸ್ತಾಃ ಪರತಃ ಪ್ರಯಾಂತಿ
ಸಿದ್ಧಾಜನಾ ಯೇ ನಿಯತಂ ವಸಂತಿ ॥೨೮॥ ಉತ್ತಿಷ್ಠಂತ ಸ್ತಸ್ಯ

ಲವಾದ ಸಮುದ್ರವು, ನಿರಂತರವೂ ಜನೋಲೋಕದಲ್ಲಿ ಭಗವತ್ಸನ್ನಿಧಿಯಲ್ಲಿಯೇ ಇದ್ದುಕೊಂಡು ತದೇಕಚಿತ್ತರಾಗಿ ಆ ಪರಮಾತ್ಮನನ್ನು ಧ್ಯಾನಮಾಡುವಿಕೆಯಿಂದ ನಿರ್ಮಲಾಂತಃಕರಣರೂ, ನಿಷ್ಕಲ್ಮಷರೂ ಎನಿಸಿದ ಆ ಸನಂದನಾದಿ ಮುನಿಗಳನ್ನು ಮರಳಿ ಪರಿಶುದ್ಧರನ್ನಾಗಿ ಮಾಡಿತು. (ಅಂದರೆ ಆ ವರಾಹಮೂರ್ತಿಯು ಉಚ್ಛ್ವಾಸಾಹತವಾದ ಜಲವು ಜನೋಲೋಕದವರಿಗೂ ವ್ಯಾಪಿಸಿ ಅಲ್ಲಿದ್ದ ಋಷಿಗಳೆಲ್ಲರನ್ನೂ ಪರಿಶುದ್ಧರನ್ನಾಗಿಮಾಡಿತೆಂದು ಭಾವವು) ॥೨೭॥ ಪಾತಾಳಲೋಕದಿಂದ ಜನೋಲೋಕದವರೆಗೂ ವ್ಯಾಪಿಸಿರುವಕಾರಣ ಅತ್ಯುನ್ನತವೂ, ಅತಿ ಗಂಭೀರವೂ ಎನಿಸಿದ ದಿವ್ಯ ರೂಪವನ್ನು ಪಡೆದಿರುವ ಆ ವರಾಹಮೂರ್ತಿಯ ಗೊರಸುಗಳಿಂದ ಪಾತಾಳಲೋಕವೆಲ್ಲವೂ ಸೀಳಿ ರಂಧ್ರಗಳುಳ್ಳದ್ದಾಗಿ ಮಾಡಲ್ಪಟ್ಟಿತು. ಇಂತಹ ರಂಧ್ರಗಳ ಮಾರ್ಗವಾಗಿ ಜಲವು ಮಹತ್ತರವಾದ ಧ್ವನಿಯುಂಟಾಗುವಂತೆ ವೇಗದಿಂದ ಪಾತಾಳಲೋಕವನ್ನು ಪ್ರವೇಶಮಾಡಿತು. ಮತ್ತು ನಿರಂತರವೂ ಭಗವದ್ಧ್ಯಾನದಲ್ಲಿಯೇ ನಿರತರೆನಿಸಿ, ಸರ್ವದಾ ಜನೋಲೋಕದಲ್ಲಿಯೇ ವಾಸಮಾಡುವ ಮಹನೀಯರಾದ ಸಿದ್ಧಪುರುಷರೆಲ್ಲರೂ ಆತನ ಉಚ್ಛ್ವಾಸರೂಪವಾದ ವಾಯುವಿನ ವೇಗದಿಂದ ಅಲ್ಲಿ ನಿಲ್ಲಲಾರದೆ ಕಂಗೆಟ್ಟು ದಿಕ್ಕುಪಾಲಾಗಿ ಓಡಿಹೋಗುತ್ತಿದ್ದರು. ॥೨೮॥ ಇಂತು ಅದ್ಭುತಾಕಾರವಂ ಧರಿಸಿ ಪಾತಾಳ ಲೋಕ

---

*ರಾಕ್ಷಭೌಮಾದಧೋಯಾತಾ ರೌದ್ರಂ ತೇಜಸ್ಸುದಾರುಣಂ । ತತ್ಪಾತ್ಯವಿಲಯಂ ಯಾತಾ ವಾರಾಹಂ ಲೋಕಮಾಗತಾ ॥ ೧ ॥ ವಾರಾಹಲೋಕೇ ಬ್ರಹ್ಮಾಂಡಮಧೋರ್ಧ್ವೇ ಭಿನ್ನವಾ ಹರಿಃ । ಖದ್ರೇಣ ತೇನ ಸಾ ದೇವೀ ಸ್ವಾಂ ಯೋನಿಂ ಪುನರಾಗತಾ ॥ ೨ ॥ ಎಂಬ ಶ್ರೀವಿಷ್ಣುಧರ್ಮೋಕ್ತಪ್ರಕಾರವಾಗಿ ಗಂಗೆಯು ವರಾಹಮೂರ್ತಿಯ ಗೊರಸುಗಳ ಗುರುತಿನ ಮಾರ್ಗವಾಗಿ ತನ್ನ ಮೂಲಸ್ಥಾನವನ್ನು ಹೊಂದಿತೆಂಬುದಾಗಿ ತಿಳಿಯಬರುತ್ತದೆ.

ಜಲಾರ್ದ್ರ ಕುಕ್ಷೇ ರ್ಮಹಾವರಾಹಸ್ಯ ಮಹೀಂ ವಿಗೃಹ್ಯ । ವಿಧೂ
ನ್ವತೋ ವೇದಮಯಂ ಶರೀರಂ ರೋಮಾಂತರಸ್ಥಾ ಮುನಯ
ಸ್ತುವಂತಿ ॥೯೯॥ ತಂ ತುಷ್ಟುವು ಸ್ತ್ವೀಷ ಪರೀತ ಚೇತಸೋ
ಲೋಕೇ ಜನೇ ಯೇ ನಿವಸಂತಿ ಯೋಗಿನಃ । ಸನಂದ ನಾದ್ಯಾ
ಹ್ಯತಿನಮ್ರ ಕಂಧರಾ ಧರಾಧರಂ ತಾರತರೋದ್ಧತೇಕ್ಷಣಂ ॥೯೦॥
ಜಯೇಶ್ವರಾಣಾಂ ಪರಮೇಶ ! ಕೇಶವ ! ಪ್ರಭೋ ! ಗದಾಕಂ

ದಿಂದ ಭೂಮಿಯನ್ನು ಎತ್ತಿಕೊಂಡು ತನ್ನ ಕೋರೆದಾಡೆಯುವೇಲೆ ಧರಿಸಿ ಸಮುದ್ರಮಧ್ಯದಿಂದ ಆವಿರ್ಭೂತನಾದ ಆ ವರಾಹರೂಪಿಯೂದ ಶ್ರೀ ಮಹಾವಿಷ್ಣುವು ಜನೋಲೋಕದನರಿಗೂ ವ್ಯಾಪಿಸಿ, ಅತ್ಯಾಶ್ಚರ್ಯಕರ ವೂ, ವೇದಸ್ವರೂಪವೂ ಎನಿಸಿದ ತನ್ನ ದೇಹವನ್ನು ಅಲ್ಲಾಡಿಸಲು,(ಕೊಡವಲು) ಆಗ ಜನೋಲೋಕಗತರಾದ ಸನಂದನಾದಿ ಮಹಾಮುನಿಗಳೆಲ್ಲರೂ ಪರಮಾನಂದ ಭರಿತಚಿತ್ತರಾಗಿ, ವಿನಯಭಕ್ತಿಗಳಿಂದ ತಲೆಬಾಗಿ ಸಾಷ್ಟಾಂಗಪ್ರಣಾಮವಂಗೈದು, ಕೈಮುಗಿದುಕೊಂಡು, ಪ್ರಸನ್ನವಾಗಿ ಗಂಭೀರವಾದ ನೋಟದಿಂದ ಕೂಡಿ, ವಿಶಾಲಗಳಾಗಿಯೂ, ದೀರ್ಘಗಳಾಗಿಯೂ ಇರುವ ನೇತ್ರಕಮಲಗಳಿಂದ ಪ್ರಕಾಶಮಾನನಾದ ಆ ಪರಮಾತ್ಮನನ್ನು ಸ್ತುತಿಸಲುಪಕ್ರಮಿಸಿದರೆಂತೆಂದರೆ.—॥೯೯॥೯೦॥ ಸಕಲ ಲೋಕ ಪಿತಾಮಹನೆನಿಸುವ ಬ್ರಹ್ಮನು, ಸಮಸ್ತ ದೇವತೆಗಳಿಗೂ ಬಡೆಯನೆನಿಸಿ ತ್ರಿಲೋಕಾಧಿಪತಿ ಎನಿಸುವ ಇಂದ್ರನು ಇವರೇ ಮೊದಲಾದ ವರೆಲ್ಲರಿಗೂ ನಿಯಾಮಕನೆನಿಸಿ, ನಿಖಿಲಶಕ್ತಿ ಸಂಪೂರ್ಣನೆನಿಸುವ ಎಲೈ ಪರಮಾತ್ಮನೆ! ನೀನು ಸರ್ವೋತ್ಕೃಷ್ಟನೆನಿಸಿ ಸರ್ವದಾ ಜಯಶೀಲನಾಗಿರು. ಬ್ರಹ್ಮ, ಈಶ್ವರ ಇವರಿಬ್ಬರಿಗೂ ಉತ್ಪತ್ತಿ ಸ್ಥಾನಭೂತನಾದುದರಿಂದ * ಕೇಶವ ನೆಂಬುದಾಗಿ ಕರೆಯಿಸಿಕೊಳ್ಳುವವನೆ? ಬಾಹು ಚತುಷ್ಟಯದಿಂದ ಶಂಖ, ಚಕ್ರ, ಗದಾ, ಖಡ್ಗಗಳನ್ನು ಧರಿಸಿ, ಕೋರೆದಾಡಿ

* ಕ - ಬ್ರಹ್ಮ, ಈಶ - ಈಶ್ವರ, = ಕೇಶವ - ಬ್ರಹ್ಮ ವ ಹೇಶ್ವರರ ಉತ್ಪತ್ತಿಸ್ಥಾನಭೂತನೆಂದರ್ಥವು. ಈವಿಷಯದಲ್ಲಿ "ಕ ಇತಿ ಬ್ರಹ್ಮಣೋ ನಾಮ ಈಶೋ ಽಹಂ ಸರ್ವದೇಹಿನಾಂ । ಆವಾಂ ತವಾಂಗೇ ಸಂಭೂತೌ ತಸ್ಮಾತ್ತ್ವಂ ಕೇಶವನಾಮವಾನ್॥" ಎಂಬ ಮಹಾಭಾರತವಚನವು ಪ್ರಮಾಣವಾಗಿರುವುದು.

ಖ ಧರಾಸಿಚಕ್ರಭೃತ್! । ಪ್ರಸೂತಿ ನಾಶ ಸ್ಥಿತಿ ಹೇತು ರೀಶ್ವರ
ಸ್ತ್ವಮೇವ ನಾನ್ಯೋತ್ಪರಮುಚ ಯತ್ಪದಂ ॥೫೧॥ ಪಾದೇಷು ವೇ
ದಾ ಸ್ತವ ಯೂಪದಂಷ್ಟ್ರ! ದಂತೇಷು ಯಜ್ಞಾಶ್ಚಿತಯುಶ್ಚ ವಕ್ತ್ರೇ।
ಹುತಾಶಜಿಹ್ವೋಸಿ ತನೂರುಹಾಣಿ ದರ್ಭಾಃ ಪ್ರಭೋ! ಯಜ್ಞ
ಪುಮಾಂಸ್ತ್ವಮೇವ ॥೫೨॥ ವಿಲೋಚನೇ ರಾತ್ರ್ಯಹನೀ ಮಹಾ
ತ್ಮಕ ! ಸರ್ವಾತ್ಮಕಂ ಬ್ರಹ್ಮಪರಂ ಶಿರಸ್ತೇ । ಸೂಕ್ತಾನ್ಯ ಶೇ

ಯಿಂದ ಭೂಮಿಯನ್ನು ಉದ್ಧಾರಮಾಡಿರುವೆಯಾದಕಾರಣ ಅಪ್ರತಿಹತ ಶಕ್ತಿಯುಳ್ಳವನೇ ? ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ನಾಶಗಳಲ್ಲಿ ಸ್ವೇಚ್ಛೆಯಿಂದಲೇ ಪ್ರವರ್ತಿಸಿ, ಆ ಆ ಕಾರ್ಯಗಳನ್ನು ನಿನ್ನ ಇಷ್ಟದಂತೆ ನೆರವೇರಿಸುವೆಯಾದುದರಿಂದ ನೀನೊಬ್ಬನಲ್ಲದೆ ಈ ಲೋಕಗಳಿಗೆ ಅಧಿಪತಿಯು ಮತ್ತಾರು? ಮುಕ್ತಸ್ವರೂಪವೆನಿಸುವ ಪರಮಪದ ಅಥವಾ ಮೋಕ್ಷಸ್ವರೂಪನೇ ನೀನು. ॥೫೧॥ ಎಲೈ ಯಜ್ಞಪುರುಷನೆಂಬುದಾಗಿ ಕರೆಯಿಸಿಕೊಳ್ಳುವ ಪರಮಾತ್ಮನೆ —ಅಗ್ನಿಷ್ಟೋಮ, ಅತಿರಾತ್ರ ಮೊದಲಾದ ಕ್ರತುಗಳೆಲ್ಲವೂ ನಿನ್ನ ಪಾದಗಳಲ್ಲಿಯೇ ಅಡಗಿಕೊಂಡಿರುವುವು ನಿನ್ನ ಕೋರೆದಾಡೆಯೇ ಪಶುಬಂಧನದಲ್ಲಿ ಸಾಧನವಾದ ಯೂಪಸ್ತಂಭವು. ಯಜ್ಞ ಸಾಧನಗಳಾದ ಚರುಪುರೋಡಾಶಾದಿ ಹೋಮದ್ರವ್ಯಗಳೆಲ್ಲವೂ ನಿನ್ನ ಹಲ್ಲುಗಳಲ್ಲಿಯೇ ಇರುವುವು. ಶ್ಯೇನಚಿತ, ಕಂಕಚಿತ ಮೊದಲಾದ ಯಜ್ಞಗಳೆಲ್ಲವೂ ನಿನ್ನ ಮುಖದಲ್ಲಿರುವುವು. ಹೋಮಮಾಡಲ್ಪಟ್ಟ ಸಕಲ ಹವಿರ್ದ್ರವ್ಯಗಳನ್ನೂ ತಿನ್ನುವ (ಸುಡುವ) ಸಾಮರ್ಥ್ಯವುಳ್ಳ ಅಗ್ನಿಯೇ ನಿನ್ನ ನಾಲಗೆಯು ಎಲೈ ಸರ್ವನಿಯಾಮಕನಾದ ಪರಮಾತ್ಮನೆ! ಶುಭಾಶುಭಗಳೆನಿಸುವ ಹವ್ಯಕವ್ಯಗಳೆಂಬ ಕರ್ಮಗಳಲ್ಲಿ ಮುಖ್ಯ ಸಾಧನಗಳಾದ ದರ್ಭೆಗಳೇ ನಿನ್ನ ಮೈಗೂದಲುಗಳು. ಇಂತಹ ಸ್ವರೂಪ ವಿಶೇಷಯುಕ್ತನಾದುದರಿಂದಲೇ ನಿನ್ನನ್ನು ಸಾಕ್ಷಾತ್ ಯಜ್ಞಪುರುಷನೆಂದು ಹೇಳುವರು ॥೫೨॥ ಮಹಾಮಹಿಮಶಾಲಿಯಾದ ಪರಮಾತ್ಮನೆ! ನಿನ್ನ ಎರಡು ಕಂಣುಗಳೇ ಅಹೋರಾತ್ರ್ಯಭಿಮಾನಿ ದೇವತೆಗಳು. (ಹಗಲು ರಾತ್ರಿಗಳನ್ನುಂಟುಮಾಡುವ ಸೂರ್ಯ ಚಂದ್ರರು.) ಸರ್ವಾತ್ಮಕವೆನಿಸಿದ

ಷಾಣಿ ಸಟಾಕಲಾಪ್ರೋ ಘ್ರಾಣಂ ಸವಮಸ್ತಾನಿ ಹವೀಂಷಿ ದೇವ!॥
॥೫೫॥ ಸ್ರುಕ್ತುಂಡ! ಸಾವಮಸ್ವರಧೀರನಾದ! ಪ್ರಾಗ್ವಂಶಕಾ
ಯಾ! ಖಿಲಸತ್ರಸಂಧೆ! । ಪೂರ್ತೇಷ್ಟ ಧರ್ಮ ಶ್ರವಣೋಸಿ ದೇ
ವ ! ಸನಾತನಾತ್ಮ್ಮ ! ಭಗವ್ ! ಪ್ರಸೀದ ॥೫೪॥ ಪದಕ್ರಮಾ
ಕ್ರಾಂತ ಭುವಂ ಭವಂತ ಮಾದಿಸ್ಥಿತಿಂ ಚಾಕ್ಷರ ವಿಶ್ವಮೂರ್ತೆ!!

ಪರಬ್ರಹ್ಮವಸ್ತುವೇ ನಿನ್ನ ಉತ್ತಮಾಂಗವು ಭಗವನ್ಮಹಿಮಾಪ್ರತಿಪಾದ
ಕಗಳೆನಿಸಿದ ಸೂಕ್ತಗಳೇ ನಿನ್ನ ಸಟೆಯು (ಹೆಗ್ಗತ್ತಿನ ಕೂದಲು) ಸರ್ವ
ಪ್ರಕಾಶಕನಾದುದರಿಂದ ದೇವಶಬ್ದದಿಂದ ಕರೆಯಿಸಿಕೊಳ್ಳುವ ಎಲೈ ಪರ
ಮಾತ್ಮನೆ, ಘ್ರಾಣೇಂದ್ರಿಯಕ್ಕೆ ಆನಂದವನ್ನುಂಟುಮಾಡುವ ಸುಗಂಧ
ಯುಕ್ತಗಳಾದ ಹವಿರ್ದ್ರವ್ಯಗಳೇ ನಿನ್ನ ಮೂಗು ॥೫೫॥ ಅಗ್ನಿಯಲ್ಲಿ
ಹೋಮಮಾಡಲ್ಪಡತಕ್ಕ ಆಜ್ಯ ಮೊದಲಾದ ಪದಾರ್ಥಗಳನ್ನು ಹೋಮ
ಮಾಡಲು ಸಾಧನಗಳೆನಿಸಿದ ಚಮಸಾದಿಗಳೇ ನಿನ್ನ ಬಾಯಿ. ಉದಾ
ತ್ತಾದಿ ಸ್ವರಗಳೊಡನೆ ಗಾನರೂಪವಾಗಿ ಅಧ್ಯಯನಮಾಡಲ್ಪಡುವ ಸಾ
ಮವೇದವೇ ನಿನ್ನ ಗಂಭೀರವಾದ ಧ್ವನಿಯು. ನಿನ್ನ ಶರೀರದ ಮಧ್ಯ
ಭಾಗವೇ (ಸೊಂಟವೇ)ಯಾಗಶಾಲೆಯ ಪೂರ್ವಭಾಗ (ಪ್ರಾಗ್ವಂಶವು.)
ಸತ್ರಗಳೆಲ್ಲವೂ ನಿನ್ನ ಅವಯವ ಸಂಧಿಗಳು ಪೂರ್ತಗಳೆನಿಸುವ ಕೂಪ,
ಆರಾಮ, ತಟಾಕಾದಿ ನಿರ್ಮಾಣರೂಪಗಳಾದ ಸ್ಮೃತ್ಯುಕ್ತ ಧರ್ಮವೂ,
ಇಷ್ಟಗಳೆನಿಸುವ ಯಜ್ಞರೂಪವಾದ ಶ್ರೌತಧರ್ಮವೂ ಸಹ ನಿನ್ನ ಎರ
ಡು ಕಿವಿಗಳು ಉತ್ಪತ್ತಿರಹಿತನಾದುದರಿಂದ ಸನಾತನನೆಂದುಕರೆಯಿಸಿಕೊ
ಳ್ಳುವ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಪರಮಾತ್ಮನೆ,ನೀನು ಪ್ರಸನ್ನನಾ
ಗಿ ನಿನ್ನನ್ನೇ ನಂಬಿರುವ ನಮ್ಮನ್ನು ಸಲಹು.॥೫೪॥ನಾಶರಹಿತನೆನಿಸಿ ಸರ್ವ
ವ್ಯಾಪಕನಾದ ಪರಮಾತ್ಮನೆ! ಮೂರು ಹೆಜ್ಜೆಗಳಿಂದ ಮೂರು ಲೋಕ
ಗಳನ್ನು ಆವರಿಸಿರುವ ಕಾರಣ ತ್ರಿವಿಕ್ರಮರೂಪಿ ಎಂತಲೂ,ಪ್ರಪಂಚಕ್ಕೆ
ಮೂಲಕಾರಣನೆನಿಸಿ ಸಂರಕ್ಷಣೆ ಮಾಡತಕ್ಕವನೆಂತಲೂ, ಪ್ರಳಯಕಾರ
ಣನೆನಿಸಿ ಮಹೇಶ್ವರ ರೂಪದಿಂದ ನಾಶ ಮಾಡತಕ್ಕವನೆಂತಲೂ, ಭಕ್ತೇ
ಷ್ಟಾರ್ಥ ದಾತೃವೆಂತಲೂ ನಾವು ನಿನ್ನನ್ನು ತಿಳಿದಿರುವೆವು, ಆದುದರಿಂದ

ವಿಶ್ವಸ್ಯ ವಿದ್ಮಃ ಪರಮೇಶ್ವರೋಸಿ ಪ್ರಸೀದ ನಾಥೋಸಿ ಚರಾಚರಸ್ಯ ॥೫೫॥ ದಂಷ್ಟ್ರಾಗ್ರವಿನ್ಯಸ್ತ ಮಶೇಷಮೇತ ದ್ಭೂಮಂಡಲಂ ನಾಥ! ವಿಭಾವ್ಯತೇ ತೇ । ವಿಗಾಹತಃ ಪದ್ಮವನಂ ವಿಲಗ್ನಂ ಸರೋಜಿನೀ ಪತ್ರಮಿವೋಡಪಂಕಂ ॥೫೬॥ ದ್ಯಾವಾಪೃಥಿವ್ಯೋರತುಲ ಪ್ರಭಾವ ! ಯದಂತರಂ ತದ್ವಪುಷಾ ತವೈವ । ವ್ಯಾಪ್ತಂ ಜಗದ್ವ್ಯಾಪ್ತಿ ಸಮುದ್ಯದೀಪ್ತೇ! ಹಿತಾಯ ವಿಶ್ವಸ್ಯ ವಿಭೋ! ಭವತ್ವಂ ॥೫೭॥ *ಪರಮಾರ್ಥ ಸ್ತ್ವ ಮೇವೈಕೋ ನಾನ್ಯೋಸ್ತಿ

ಈ ಚರಾಚರಾತ್ಮಕವಾದ ಎಲ್ಲ ಪ್ರಪಂಚಗಳಿಗೂ ಒಡೆಯನಾಗಿರುವೆ. ಇಂತಹ ಮಹಾಮಹಿಮಶಾಲಿ ಎನಿಸಿ ಭಕ್ತರಕ್ಷಣಧುರೀಣ ನೆನಿಸಿದ ನೀನೇ ನಮ್ಮನ್ನು ಸಲಹದಿದ್ದಲ್ಲಿ ನಮಗೆ ಮತ್ತಾರು ಗತಿ; ॥೫೫॥ ಎಲೈ ಸರ್ವನಿಯಾಮಕನಾದ ಪರಮಾತ್ಮನೇ, ಜಲಾವಗಾಹನಾರ್ಥವಾಗಿ ಸ್ವೇಚ್ಛೆಯಿಂದ ನೀರನ್ನು ಪ್ರವೇಶಿಸುತ್ತಿರುವ ಮದ್ದಾನೆಯು ಕೆಸರಿನಿಂದ ಕೂಡಿರುವ ತಾವರೆಯನ್ನು ತನ್ನ ಕೊಂಬಿನಮೇಲೆ (ದಂತದಮೇಲೆ) ಧರಿಸಿದ್ದರೆ ಎಂತು ಕಂಗೊಳಿಸುವುದೋ ಅಂತೆಯೇ ವರಾಹರೂಪಿಯಾದ ನಿನ್ನ ಕೋರೆದಾಡೆಯ ಮೇಲೆ ಧರಿಸಲ್ಪಟ್ಟಿರುವ ಈ ಭೂಮಿಯು ಕಂಗೊಳಿಸುತ್ತಿರುವುದು॥೫೬॥ ಎಲೈ ನಿರುಪಮಮಹಿಮಶಾಲಿ ಎನಿಸಿದ ಪರಮಾತ್ಮನೆ! ದ್ಯುಲೋಕ ಭೂಲೋಕಗಳ ನಡುವೆ ಇರುವ ಆಕಾಶವನ್ನು ವ್ಯಾಪಿಸಿಕೊಂಡು ಆ ಅಂತರಿಕ್ಷರೂಪದಿಂದಲೂ ನೀನೇ ಕಾಣುತ್ತಿರುವಿ. ಇಂತಹ ಚರಾಚರವಸ್ತುಗಳೆಲ್ಲವನ್ನೂ ವ್ಯಾಪಿಸುವ ದಿವ್ಯತೇಜೋರಾಶಿಯಿಂದ ಪರಿಪೂರ್ಣನಾದ ಮಹಾನುಭಾವನೆ! ನೀನು ಸಕಲಲೋಕಗಳ ಯೋಗಕ್ಷೇಮವನ್ನು ವಹಿಸುವವನಾಗು॥೫೭॥ಭೂತ, ಭವಿಷ್ಯತ್, ವರ್ತಮಾನಗಳೆಂಬ ತ್ರಿಕಾಲತ್ರಯದಲ್ಲಿಯೂ, ಜಾಗ್ರತ್, ಸ್ವಪ್ನ,ಸುಷುಪ್ತಿಗಳೆಂಬ ಅವಸ್ಥಾ

* ಶ್ರು॥ ಸಬ್ರಹ್ಮ ಸಚಿವಸ್ಸಹತಿಸ್ಸೇಂ ದ್ರಸ್ಸೋಕ್ಷರಃಪರಮಸ್ವರಾಟ್ । ನೇಹನಾನಾಸ್ತಿಕಿಂಚನ । ತಸ್ಮಿನ್ಹಜಜ್ಞೇಸ್ಯಯಂಬ್ರಹ್ಮ । ಸರ್ವಗತ್ವಾದನಂತಸ್ಯ । ತದನುಪ್ರವಿಶ್ಯ ।ಸಚ್ಚತ್ಯಚ್ಚಾಭವತ್ । ಹರೇರ್ನಕಿಂಚಿದ್ವ್ಯತಿರಿಕ್ತಮಸ್ತಿ । ಇತ್ಯಾದಿಶ್ರುತಿಗಳಿಂದ ಆ ಪರಮಾತ್ಮನಿಗಿಂತಲೂ ಬೇರೆ ಯಾವದೊಂದೂ ಪರಮಾರ್ಥವಸ್ತು ವಿಲ್ಲವೆಂಬುದಾಗಿ ತಿಳಿಯಬರುತ್ತದೆ.

ಜಗತಃಪತೇ! । ತನ್ಮೈವ ಮಹಿಮಾಯೇನ ವ್ಯಾಪ್ತಮೇತಚ್ಚ ರಾಚರಂ ॥೫೪॥ ಯದೇತದ್ದೃಶ್ಯತೇ ಮೂರ್ತ್ತಮೇತದ್ಜ್ಞಾನಾತ್ಮಕ ನಸ್ತವ। ಭ್ರಾಂತಿಜ್ಞಾನೇನ ಪಶ್ಯಂತಿ ಜಗದ್ರೂಪ ಮಯೋಗಿನಃ॥೫೫॥ ಜ್ಞಾನಸ್ವರೂಪ ಮಖಿಲಂ ಜಗದೇತ ದಬುದ್ಧಯಃ। ಅರ್ದ್ಧಸ್ವರೂಪಂ ಪಶ್ಯಂತೋ ಭ್ರಾಮ್ಯಂತೇ ಮೋಹಸಂಪ್ಲವೇ॥೫೦॥ಯೇತು ಜ್ಞಾನ

ತ್ರಯದಲ್ಲಿಯೂ, ಸ್ಥಾವರ, ಜಂಗಮಗಳೆಂಬ ಸಕಲವಸ್ತುಜಾತದಲ್ಲಿಯೂ ನೀನೊಬ್ಬನೇ ನಾಶರಹಿತನೆನಿಸಿ, ಸತ್ಯಸ್ವರೂಪನಾಗಿ, ಸರ್ವದಾ ಕೇವಲ ಸತ್ತಾರೂಪದಿಂದಿರುವೆಯಲ್ಲದೆ ಈ ಜಗತ್ತಿಗೆ ಮತ್ತಾರುಬಿಡೆಯರು ? ಚರಾಚರರೂಪವಾದ ಈ ಪ್ರಪಂಚವನ್ನು ನಿರಂತರವೂ ಅನುಸ್ಯೂತವಾಗಿ ಆವರಿಸಿಕೊಂಡಿರುವುದು ನಿನ್ನ ಮಾಯೆಯೇ ॥೫೪॥ ದೃಗ್ರೂಪರವಾಗಿ ಪ್ರತ್ಯಕ್ಷವೆನಿಸುವ ಈ ಪ್ರಪಂಚವೆಲ್ಲವೂ ಸತ್ಯಜ್ಞಾನಾನಂದ ಸ್ವರೂಪನೆನಿಸಿದ ನಿನ್ನ ಮೂರ್ತಿ ವಿಶೇಷವಲ್ಲದೆ ಬೇರೆಯಲ್ಲ ಇಂತಿದ್ದರೂ ಎಲ್ಲರೂಪಗಳಿಂದಲೂ ನೀನೇತೋರುತ್ತಾ, ಎಲ್ಲದರಲ್ಲಿಯೂ ನೀನೇವ್ಯಾಪಿಸಿಕೊಂಡು, ಎಲ್ಲವನ್ನೂ ನೀನೇ ಸಲಹತಕ್ಕವನಾಗಿ ಕೊನೆಗೆ ಎಲ್ಲವನ್ನೂ ನಿನ್ನಲ್ಲಿಯೇ ಲಯಗೊಳಿಸಿಕೊಳ್ಳುವಿ ಇಂತು ಸರ್ವವೂ ನೀನೆ ನಿನ್ನ ಹೊರತು ಬಂದು ಹುಲ್ಲುಕಡ್ಡಿಯೂ ಕೂಡ ಚಲಿಸಲಾರದು ಎಂಬ ಇದೇ ಮೊದಲಾಗಿರುವ ಅನುಭವ ಸಾಧನವಾದ ಅಭ್ಯಾಸ ರಹಿತರಾದ ಮೂಢರು ಈ ಜಗತ್ತನ್ನು ದೇವತೆಗಳು, ಮನುಷ್ಯರು, ಪಶು, ಪಕ್ಷಿ, ವೃಕ್ಷ ಮೊದಲಾದ ಹಲವುರೂಪಗಳಿಂದ ತಿಳಿಯುವರೇ ಹೊರತು, ಆಆರೂಪಗಳಿಂದ ಕಾಣಿಸಿಕೊಳ್ಳುವವನು ನೀನೇ ಎಂಬ ಭಾವವು ಅಂತಹ ಮೂಢರಿಗೆ ಎಲ್ಲಿಯದು ॥೫೫॥ ಸಕಲವೂ ನೀನೇ ಎಂಬುದಾಗಿ ತೋರುತ್ತಿದ್ದರೂ ಮೂಢರು [ಭಗವದ್ವಿಷಯಕವಾದ ಜ್ಞಾನರಹಿತರು] ಎಲ್ಲವನ್ನೂ ಬೇರೆಬೇರೆ ಎಂದು ಭಾವಿಸಿ ಭ್ರಮಾಜನಕವೆನಿಸಿ ಎಂದಿಗೂ ಕೊನೆಗಾಣದಿರುವ ಸಂಸಾರಸಮುದ್ರದಲ್ಲಿ ನಿರಂತರವೂ ತೇಲಾಡುತ್ತಲೇ ಇರುವರು ಇಂತಹ ಮೂಢರಿಗೆ ಮುಕ್ತಿಕನ್ಯೆಯು ಎಂತುತಾನೆ ವಶವಾಗುವಳು? ॥೫೦॥ ನಿರತಿಶಯವಾದ ಐಶ್ವರ್ಯಯುಕ್ತನೆನಿಸಿದ ಮಹಾನುಭಾವನೆ ! ನಿರಂತರವೂ ನಿ

ವಿದಶ್ಯುದ್ಧ ಚೇತಸ ಸ್ತೇಜಿಲಂಜಗತ್ । ಜ್ಞಾನಾತ್ಮಕಂ ಪ್ರಪಶ್ಯಂತಿ
ತ್ವದ್ರೂಪಂ ಪರಮೇಶ್ವರ' ॥೪೧॥ಪ್ರಸೀದ ಸರ್ವ ಸರ್ವಾತ್ಮ ! ವಾ
ಸಾಯ ಜಗತಾಮಿವಮಾಂ। ಉದ್ಧರೋರ್ವೀಮ ಮೇಯಾತ್ಮ' ಶಂ
ನೋದೇಹ್ಯಬ್ಜಲೋಚನ' ॥೪೨॥ ಸತ್ಯೋದ್ರಿಕ್ತೋಸಿ ಭಗವ'
ಗೋವಿಂದ ! ಪೃಥಿವೀಮಿವಮಾಂ । ಸಮುದ್ಧರ ಭವಾಯೇಶ ! ಶಂ
ನೋ ದೇಹ್ಯ ಬ್ಜಲೋಚನ' ॥೪೩॥ಸರ್ಗ ಪ್ರವೃತ್ತಿ ರ್ಭವತೋ ಜಗ

ನ್ನಸ್ಮೀ ಧ್ಯಾನಿಸುತ್ತಾ ಬಹುಕಾಲದಮೇಲೆ ಪ್ರಸನ್ನನಾದ ನಿನ್ನ ಅನುಗ್ರಹ
ಕ್ಕೆ ಪಾತ್ರರಾಗಿ ಪ್ರಕೃತಿ, ಪುರುಷ, ಇವರಿಬ್ಬರ ಭೇದವನ್ನು ತಿಳಿದು ಕಾ
ಮ, ಕ್ರೋಧ, ಲೋಭ, ಮೋಹ, ಮದ, ಮಾನಗಳೆಂಬ ಅರಿಷಡ್ವರ್ಗಗ
ಳನ್ನು ಜಯಿಸಿ, ನಿರ್ಮಲಾಂತಃಕರಣರಾದ ಮಹಾನುಭಾವರು ಈ ಪ್ರ
ಪಂಚವೆಲ್ಲವೂ ನೀನೇ ಎಂಬುದಾಗಿ ತಿಳಿದು ಭೇದಬುದ್ಧಿಯನ್ನುಳಿದು
"ಪ್ರತ್ಯಕ್ಷವಾಗಿ ಕಾಣುವ ಈಪ್ರಪಂಚವೆಲ್ಲವೂ ಸಾಕ್ಷಾತ್ಪರವಸ್ತುವೇ.
ಅತನಿಗಿಂತಲೂ ಬೇರೆಯಾವುದೂ ಇಲ್ಲ" ಎಂಬದಾಗಿ ತಿಳಿಯುವರು॥೪೧॥
ತಾವರೆಯ ಎಸಳಿನಂತೆ ವಿಶಾಲವಾಗಿಯೂ ದೀರ್ಘವಾಗಿಯೂ ನಿರ್ಮಲ
ವಾಗಿಯೂ ಮನೋಹರವಾಗಿಯೂ ಇರುವ ವಿಷ್ಣುಗುಟ್ಟುವ ಕಾಂತಿ
ಯುಕ್ತಗಳಾದ ನೇತ್ರಗಳಿಂದೊಪ್ಪುವ ಮಹಾನುಭಾವನೆ ! ಘೋರವಾದ
ಈ ರೂಪವನ್ನು ಉಪಸಂಹರಿಸಿ ಪ್ರಸನ್ನನಾಗಿ ಲೋಕಸಂರಕ್ಷಣಾರ್ಥವಾ
ಗಿ ಭೂಮಿಯನ್ನು ಸ್ಥಿರವಾಗಿ ನಿಲ್ಲಿಸಿ ನಮ್ಮಗಳಿಗೆ ಸುಖ, ಸಂತೋಷಗಳ
ನ್ನುಂಟುಮಾಡು ॥೪೨॥ ಕಮಲದಂತೆ ಕಾಂತಿಗೆ ಆವಾಸಸ್ಥಾನವೆನಿಸಿ
ಮನೋಹರವಾದ ನೇತ್ರಯುಗಳದಿಂದ ಪ್ರಕಾಶಿಸುವ ಮಹಾವಿಷ್ಣುವೆ !
ಸತ್ವಗುಣಾಧಿಕ್ಯವನ್ನು ಪಡೆದು ಭಕ್ತರಕ್ಷಣಧುರೀಣನೆನಿಸಿ, ಷಡ್ಗುಣೈ
ಶ್ವರ್ಯ ಸಂಪನ್ನನಾದ ಶ್ರೀ ವರಾಹಮೂರ್ತಿಯೆ ! ನಮ್ಮಗಳ ಶ್ರೇಯಸ್ಸಿ
ಗಾಗಿ ಈಭೂಮಿಯನ್ನು ಮರಳಿಉದ್ಧರಿಸಿ ನಮ್ಮನ್ನುಸಲಹು॥೪೩॥ಎಲೈ
ಪರಮದಯಾಶಾಲಿ ಎನಿಸಿದ ಪರಮಾತ್ಮನೆ ! ನೀನು ರಜೋಗುಣಾವಿಷ್ಟ
ನಾಗಿ ಆ ರಜೋಗುಣ ಸಂಬಂಧದಿಂದ ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವಿ
ಕೆಯು ಎಂತು ಲೋಕಕ್ಕೆ ಉಪಕಾರಕವಾಗಿರುವುದೋ ಅಂತೆಯೇ ಸ

ತಾಮುಪಕಾರಿಣೀ ॥ ಭವತ್ಪ್ರೇಷಾ ನಮಸ್ತೇಸ್ತು ಶಂನೋದೇಹ್ಯ
ಬ್ಜಲೋಚನ ॥೪೪॥ಶ್ರೀಪರಾಶರಃ ॥ ಏವಂ ಸಂಸ್ತೂಯಮಾನಸ್ತು
ಪರಮಾತ್ಮಾ ಮಹೀಧರಃ । ಉಜ್ಜಹಾರ ಕ್ಷಿತಿಂಕ್ಷಿಪ್ರಂನ್ಯ ಸ್ತ
ವಾಂಶ್ಚ ಮಹಾಂಭಸಿ ॥೪೫॥ ತಸ್ಯೋಪರಿ ಜಲೌಘಸ್ಯ ಮಹತೀ
ನೌರಿವಸ್ಥಿತಾ । ವಿತತತ್ವಾತ್ತು ದೇಹಸ್ಯ ನಮಹೀಯಾತಿ ಸಂಪ್ಲ
ವಂ ॥೪೬॥ ತತಃ ಕ್ಷಿತಿಂ ಸಮಾಂಕೃತ್ವಾ ಪೃಥಿವ್ಯಾಂ ಸೋಽ ಚಿ
ನೋದ್ಗಿರೀ । ಯಥಾವಿಭಾಗಂ ಭಗವಾ ಅನಾದಿಃಪರಮೇಶ್ವ
ರಃ॥೪೭॥ ಪ್ರಾಕ್ಸರ್ಗದಗ್ಧಾ ನಖಿಲಾ ಪರ್ವತಾ ಪೃಥಿವೀತಲೇ।

ತ್ವಗುಣಾಧಿಷ್ಠಾನವಂ ಪಡೆದು ಸ್ಥಿತಿಕಾರ್ಯದಲ್ಲಿ ಪ್ರವರ್ತಿಸುವಿಕೆಯೂ
ಕೂಡ ಈ ಜಗತ್ತಿನ ಉಪಕಾರಕ್ಕಾಗಿಯೇ ಪರಿಣಮಿಸಲಿ. ಎಲೈ ಬಡ
ಯನೆ! ನೀನು ನಮ್ಮನ್ನು ಶ್ರೇಯಸ್ಸಿಗೆ ಪಾತ್ರರನ್ನಾಗಿ ಮಾಡು. ಪ್ರಾಣಿಗ
ಳ ಹೃದಯಕಮಲದಲ್ಲಿ ಸರ್ವದಾ ನೆಲೆಮಾಡಿಕೊಂಡು ಅವುಗಳಿಂದ ನಿರಂ
ತರವೂ ಆಚರಿಸಲ್ಪಡುವ ಸುಕೃತ ದುಷ್ಕೃತ ರೂಪವಾದ ಕರ್ಮವನ್ನು
ನೋಡುತ್ತಿರುವಕಾರಣ,''ಸರ್ವಸಾಕ್ಷಿ''ಎಂತಲೂ''ಸರ್ವಾಂತರ್ಯಾಮಿ''ಎಂ
ತಲೂ ಕರೆಯಿಸಿಕೊಳ್ಳುವ ಎಲೈ ಮಹಾನುಭಾವನೆ! ನಿನಗೆ ನಮಸ್ಕಾರ
ವು ॥೪೪॥ ಪರಾಶರನು ಹೇಳುತ್ತಾನೆ:—ಇಂತು ಸನಕಾದಿಗಳಿಂದ ಹೊ
ಗಳಿಸಿಕೊಳ್ಳುತ್ತಾ ಭೂಮಿಯನ್ನು ಪಾತಾಳಲೋಕದಿಂದ ಉದ್ಧರಿಸಿ
ತನ್ನ ಕೋರೆಹಲ್ಲಿನ ಮೇಲೆ ಧರಿಸಿರುವ ಆ ಮಹಾವಿಷ್ಣುವು ಭೂಮಿಯ
ನ್ನು ಮಹಾಸಮುದ್ರಮಧ್ಯದಲ್ಲಿ ನಿಲ್ಲಿಸಿದನು ॥೪೫॥ ಇಂತು ವರಾಹರೂ
ಪಧಾರಿಯಾದ ಶ್ರೀಮನ್ನಾರಾಯಣನಿಂದ ಜಲಮಧ್ಯದಲ್ಲಿ ಸ್ಥಾಪಿಸಲ್ಪಟ್ಟ
ಆಭೂಮಿಯು ವಿಶಾಲವಾಗಿರುವಿಕೆಯಿಂದ ನೀರಿನಮೇಲುಭಾಗದಲ್ಲಿ ದೊ
ಡ್ಡ ಹಡಗಿನಂತೆ ತೇಲಾಡುತಿದ್ದಿತ್ತೇ ಹೊರತು ಮುಳುಗಲಿಲ್ಲವು ॥೪೬॥ ಬಳಿ
ಕ ಷಡ್ಗುಣೈಶ್ವರ್ಯಸಂಪನ್ನನೂ, ಉತ್ಪತ್ತಿರಹಿತನೂ, ಮಹದೈಶ್ವರ್ಯ ಸಂಪ
ನ್ನನೂ, ಸತ್ಯಸಂಕಲ್ಪನೂ ಎನಿಸಿದ ಆ ಆದಿಮಹಾವಿಷ್ಣುವು ಹಿಂದಿನ ಕ
ಲ್ಪಾಂತದಲ್ಲಿ ಉಂಟಾದ ಕಾಲಾಗ್ನಿಯಿಂದ ಸುಟ್ಟುಹೋಗಿದ್ದ ಆ ಪರ್ವ
ತಗಳನ್ನು ತನ್ನ ಅವ್ಯೋಘವಾದ ಮಹಿಮೆಯಿಂದ (ಇಚ್ಛಾಮಾತ್ರದಿಂ

ಅಮೋಘೇನ ಪ್ರಭಾವೇಣ ಸಸರ್ಜ್ಜಾಮೋಘವಾಂಛಿತಃ ॥ ೪೯ ॥
ಭೂವಿಭಾಗಂ ತತಃ ಕೃತ್ವಾ ಸಪ್ತದ್ವೀಪಾಂ ಯಥಾತಥಂ।*ಭೂ
ರಾದ್ಯಾಂಶ್ಚತುರೋ ಲೋಕಾಂ ಪೂರ್ವವತ್ ಸಮಕಲ್ಪಯತ್॥
ಬ್ರಹ್ಮರೂಪಧರೋ ದೇವ ಸ್ತತೋಸೌ ರಜಸಾವೃತಃ ।ಚಕಾರ
ಸೃಷ್ಟಿಂ ಭಗವಾಂ ಚತುರ್ವಕ್ತ್ರ ಧರೋಹರಿಃ॥೫೦॥ನಿಮಿತ್ತಮಾ

ದ) ಮರಳಿ ಉಂಟುಮಾಡಿ ಹಳ್ಳ ತಿಟ್ಟುಗಳಾಗಿದ್ದ ಆ ಭೂಮಂಡಲವನ್ನು ಸಮಮಾಡಿ ನಿಶ್ಚಲವಾಗಿ ನಿಲ್ಲಲು ಅನುಕೂಲಿಸುವಂತೆ ಆ ಆ ಪರ್ವತಗಳನ್ನು ಅಲ್ಲಲ್ಲಿಯೇ ಸರಿಯಾಗಿ ಸ್ಥಾಪಿಸಿದನು ॥೪೭॥ ॥೪೮॥ ಆ ಬಳಿಕ ಹಿಂದಿನಂತೆಯೇ ಭೂಮಿಯನ್ನು ಏಳು ದ್ವೀಪಗಳಾಗಿ ವಿಭಾಗಮಾಡಿ ಹಿಂದಿನ ಕಲ್ಪಾಂತದಲ್ಲಿ ಉಂಟಾಗಿದ್ದ ಕಾಲಾಗ್ನಿಯಿಂದ ಸುಟ್ಟುಹೋಗಿದ್ದ ಭೂಲೋಕ, ಭುವರ್ಲೋಕ, ಸುವರ್ಲೋಕಗಳೆಂಬ ಮೂರ ಲೋಕಗಳನ್ನು ಸಂಕರ್ಷಣಮೂರ್ತಿಯ ಮುಖಾನಲ ಜ್ವಾಲೆಯಿಂದ ನಷ್ಟವಾಗಿ ಬಯಲಂತೆ ಕಾಣುತ್ತಿದ್ದ ಮಹರ್ಲೋಕವನ್ನೂ ಸಹ ಹಿಂದಿನ ಕಲ್ಪಾಂತದಲ್ಲಿದ್ದಂತೆಯೇ ಏಕರೂಪವಾಗಿರುವಂತೆಯೇ ಸ್ಥಾಪಿಸಿದನು ॥ ೪೯ ॥ ತರುವಾಯ ಸರ್ವಪ್ರಕಾಶಕನಾಗಿ ಭಕ್ತದುರಿತಾಪಹಾರಕನಾದುದರಿಂದ "ಹರಿ" ಎಂಬದಾಗಿ ಕರೆಯಿಸಿಕೊಳ್ಳುವ ಆ ಭಗವಂತನು ರಜೋಗುಣಾವಿಷ್ಟನಾಗಿ ಕಾರಣ ಬ್ರಹ್ಮನೆನಿಸಿದ ಚತುರ್ಮುಖರೂಪವಂ ತಾಳಿ ದೇವತೆಗಳೇ ಮೊದಲಾದವರನ್ನು ಸೃಷ್ಟಿಮಾಡಲು ಉಪಕ್ರಮಿಸಿದನು (ಇದರಿಂದ ಭೂಮ್ಯುದ್ಧಾರವೇ ಮೊದಲಾಗಿ ಸೃಷ್ಟಿಮುಂತಾದ ಸಕಲಕಾರ್ಯಗಳೂ ಆತನಿಗೆ ಲೀಲಾರೂಪವಾದದ್ದೆಂಬದಾಗಿ ಭಾವವು) ॥೫೦॥ ಮೈತ್ರೇಯನು ಪ್ರಶ್ನೆಮಾಡುತ್ತಾನೆ:—ಅಯ್ಯಾ ಪರಾಶರಮುನಿಯೆ ! ಆ ನಾರಾಯಣನೇ ಬ್ರಹ್ಮರೂಪವಂ ಧರಿಸಿ ರಜೋಗುಣಾವಿಷ್ಟನಾಗಿ ಸೃಷ್ಟಿಕಾರ್ಯವನ್ನು

*ಕ್ರು ಸೂರ್ಯಾ ಚಂದ್ರ ಮಸೌಧಾತಾ ಯಥಾಪೂರ್ವಮಕಲ್ಪಯತ್,ಎಂಬ ಶ್ರುತಿಯಿಂದ ಪರಮಾತ್ಮನು ಬ್ರಹ್ಮರೂಪವಂ ಧರಿಸಿ ಸೂರ್ಯ ಚಂದ್ರ ಭೂರಾದಿಲೋಕಗಳನ್ನು ಪ್ರಳಯಾಂತದಲ್ಲಿ ಹಿಂದಿನಂತೆಯೇ ಸರಿಯಾಗಿ ಉಂಟುಮಾಡಿದನೆಂಬುದಾಗಿ ತಿಳಿಯಬರುತ್ತದೆ.

ತ್ರ ವೇವಾಸೌ ಸೃಜ್ಯಾನಾಂ ಸರ್ಗಕರ್ಮಣಿ । ಪ್ರಧಾನಕಾರಣೇ
ಭೂತಾಯತೋವೈಸೃಜ್ಯ ಶಕ್ತಯಃ ॥೫೦॥ ನಿಮಿತ್ತಮಾತ್ರಂ ಮು

ನೆರವೇರಿಸುವ ನೆಂದು ಹೇಳಿದರೆ ಆ ಬ್ರಹ್ಮನಲ್ಲಿಯೂ ಕರ್ಮಾಸಕ್ತಿ, ದುಃಖಪ್ರಾಪ್ತಿ ಮೊದಲಾದ ರಜೋಗುಣಕಾರ್ಯಗಳೆಲ್ಲವೂ ಉಂಟೇ ? ಅಥವಾ ಇಲ್ಲವೆ ? ಇಂತು ಮೈತ್ರೇಯನ ಆಶಂಕೆಯನ್ನುಪರಿಹರಿಸಲು ಪರಾಶರನು ಹೇಳುತ್ತಾನೆ - ಪ್ರಾಣಿಗಳಿಗೆ ತಮ್ಮತಮ್ಮ ಪೂರ್ವ ಜನ್ಮಾರ್ಜಿತಗಳಾದ ಪುಣ್ಯ ಪಾಪ ರೂಪವಾದ ಕರ್ಮವಾಸನೆಯೇ ಸುಖದುಃಖ ರೂಪವಾದ ಫಲಪ್ರಾಪ್ತಿಯಲ್ಲಿ ಮೂಲಕಾರಣವಾಗಿರುವುದರಿಂದ ಜೀವರಾಶಿಗಳ ಸೃಷ್ಟಿಕಾರ್ಯದಲ್ಲಿ ಈ ಬ್ರಹ್ಮನುನಿಮಿತ್ತಮಾತ್ರನೇ ಹೊರತು ಆತನಿಗೆ ಈ ರಜೋಗುಣಸಂಬಂಧಗಳೆನಿಸಿದ ಸುಖದುಃಖ ಮೊದಲಾದವುಗಳಿಲ್ಲ ॥೫೦॥ ಅಯ್ಯಾ ತಪಸ್ವಿವರ್ಯನೆನಿಸಿದ ಮೈತ್ರೇಯನೆ! ಈ ವಿಷಯದಲ್ಲಿ ನಿನಗೆ ಮತ್ತೊಂದು ನಿದರ್ಶನವನ್ನು ತೋರಿಸುವೆನು. ಅದೆಂತೆಂದರೆ —ಕೇವಲ ನಿಮಿತ್ತಕಾರಣ ಭೂತನಾದ ಆ ಪರಮಾತ್ಮನಲ್ಲದೆ ದೇವತೆಗಳು, ತಿರ್ಯಗ್ಜಂಗಳು, ಮನುಷ್ಯರು ಮೊದಲಾದವರ ಸೃಷ್ಟಿಕಾರ್ಯದಲ್ಲಿ ಮತ್ತೊಂದು ಮೂಲಕಾರಣವಾವುದೂ ಇಲ್ಲ. ಆ ಆ ಪ್ರಾಣಿಗಳ ಕರ್ಮವಾಸನಾನುಸಾರವಾಗಿಯೇ ಸೃಷ್ಟಿಯೂ ವಿಚಿತ್ರತರವಾಗಿ ನಾನಾರೂಪವಾಗಿ ಪರಿಣಮಿಸುವುದು ಅಂತಹ ಸೃಷ್ಟಿಕಾರ್ಯದಲ್ಲಿ ಪರಮಾತ್ಮನೇ ಮುಖ್ಯಕಾರಣನೆಂಬುದಾಗಿ ಹೇಳುವಿಕೆಯೂ ಕೂಡ ಔಪಚಾರಿಕವೇ ಹೊರತು ನಿಜವಾಗಿಯೂ ಆತನು ಯಾವುದಕ್ಕೂ ಕಾರಣವಾಗಿಲ್ಲ. ತೃಣಾದಿಗಳಲ್ಲಿನ ಬೀಜವು ಸೂಕ್ಷ್ಮಾಕಾರವಾಗಿಯೇ ಇದ್ದುಕೊಂಡು ಮಳೆಬಿದ್ದಕೂಡಲೆ ತಮ್ಮತಮ್ಮ ಪರಿಣಾಮಶಕ್ತಿಗನುಸಾರವಾಗಿ ಅಂಕುರಾದಿ ರೂಪದಿಂದ ಪರಿಣಮಿಸಿ ಕಡೆಗೆ ದೊಡ್ಡವೃಕ್ಷ, ಗುಲ್ಮ, ಲತಾದಿರೂಪವನ್ನು ಪಡೆಯುವಂತೆಯೇ ಜೀವಿಗಳ ಸುಕೃತ ದುಷ್ಕೃತ ರೂಪವಾದ ಕರ್ಮವಾಸನೆಯೇ ನಿಮಿತ್ತಕಾರಣ ಭೂತನೆನಿಸಿದ ಆ ಚತುರ್ಮುಖರೂಪಿಯಾದ ನಾರಾಯಣನ ಸಾನ್ನಿಧ್ಯವಿಶೇಷದಿಂದ ಜೀವಿಗಳಿಗೆ ತತ್ತತ್ಕರ್ಮಾನುಸಾರವಾಗಿ ಸುಖದುಃಖರೂಪವಾದ ಫಲವನ್ನುಂಟುಮಾ

ಕೈವೈವಂ ನಾನ್ಯತ್ಕಿಂಚಿದಪೇಕ್ಷತೇ'ನೀಯತೇ ತಪತಾಂಶ್ರೇಷ್ಠ'
ಸ್ವಶಕ್ತ್ಯಾ ವಸ್ತು ವಸ್ತ್ವಿತಾಂ ॥೫೨॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮೇಂಶೇ
ಚತುರ್ಥೋಧ್ಯಾಯಃ.

ಡುವದೇ ಹೊರತು ಆತನಿಗೆ ರಜೋಗುಣಸಂಬಂಧಗಳಾದ ಕರ್ಮಾಸಕ್ತಿ, ದುಃಖಪ್ರಾಪ್ತಿ ಮೊದಲಾದ ಯಾವಸಂಬಂಧವೂ ಇಲ್ಲವೆಂಬುದಾಗಿ ಪರಾಶರನು ತನ್ನ ಪ್ರಿಯಶಿಷ್ಯನಾದ ಮೈತ್ರೇಯನಿಗೆ ತತ್ವರಹಸ್ಯವಂ ನಿರೂಪಿಸುತ್ತಿದ್ದನೆಂಬಲ್ಲಿಗೆ

ಶ್ರೀ ವಿಷ್ಣುಪುರಾಣ ಪ್ರಥಮಾಂಶದೊಳ್
ನಾಲ್ಕನೆಯ ಅಧ್ಯಾಯಂ ಮುಗಿದುದು.
ಚತುರ್ಥಾಧ್ಯಾಯಂಸಮಾಪ್ತಂ.

ಓನ್ನಮಃ ಪರಮಾತ್ಮನೆ.

ಅಥಪಂಚಮೋಽಧ್ಯಾಯಃ

ವೈತ್ರೇಯಃ ॥ ಯಥಾ ಸಸರ್ಜ್ಜ ದೇವೋಽಸೌ ದೇವರ್ಷಿ ಪಿತೃ
ದಾನವಾ । ಮನುಷ್ಯ ತಿರ್ಯಗ್ವೃಕ್ಷಾದೀ ಭೂ ವ್ಯೋಮ
ಸಲಿಲೌಕಸಃ ॥ ೧ ॥ ಯದ್ಯೂಣಂ ಯತ್ಸ್ವಭಾವಂಚ ಯ

ಐದನೆಯ ಅಧ್ಯಾಯವು.

ಹಿಂದಿನ ಅಧ್ಯಾಯದಲ್ಲಿ ಶ್ರೀ ವರಾಹ ರೂಪಿಯಾದ ಪರಮಾತ್ಮನು ಪಾತಾಳಲೋಕದಿಂದ ಭೂಮಿನ್ನು ಉದ್ಧರಿಸಿ ಮೊದಲಿನಂತೆಯೇ ಜಲ ಮಧ್ಯದಲ್ಲಿ ಸ್ಥಾಪಿಸಿದ ಬಳಿಕ ಆಭೂಮಿಯಲ್ಲಿಪರ್ವತಾದಿಗಳನ್ನು ಅಲ್ಲಲ್ಲಿ ಸರಿಯಾಗಿ ಸ್ಥಾಪಿಸಿದ ನೆಂಬದಾಗಿ ಪರಾಶರನು ಹೇಳಿದುದಂ ಕೇಳಿ ಆ ವಿಷಯಗಳನ್ನು ವಿಶದವಾಗಿ ತಿಳಿಯಬೇಕೆಂಬ ಕುತೂಹಲಾಕ್ರಾಂತನಾದ ಮೈತ್ರೇಯನು ಪರಾಶರಮುನಿಯಂ ಪ್ರಶ್ನೆಮಾಡಿದುದೆಂತೆಂದರೆ:—"ಎಲೈ ಮಹಿಮಾಶಾಲಿ ಎನಿಸಿದ ಪರಾಶರಮುನಿಯೆ! ಸರ್ವವ್ಯಾಪಕನೂ, ನಿಖಿಲ ಶಕ್ತಿಸಂಪೂರ್ಣನೂ, ಸರ್ವಪ್ರಕಾಶಕನೂ, ಎನಿಸಿದ ಚತುರ್ಮೂರ್ತಿರೂಪಿಯಾದ ಆನಾರಾಯಣನು,ದೇವತೆಗಳು ಋಷಿಗಳು, ಪಿತೃಗಳು,ದಾನವರು ಮನುಷ್ಯರು, ಪಶುಗಳು, ಪಕ್ಷಿಗಳು, ವೃಕ್ಷಗಳು, ಲತೆಗಳು ಮೊದಲಾದ ವುಗಳನ್ನೂ ಭೂಮಿ, ಆಕಾಶ, ಉದಕಗಳಲ್ಲಿ ವಾಸಮಾಡುವ ಇತರವಿಧವಾದ ಜೀವರಾಶಿಗಳನ್ನೂ ಉಂಟುಮಾಡಿದ ಪರಿಎಂತು? ॥೧॥ ಎಲೌ ದ್ವಿಜಶ್ರೇಷ್ಠನೆನಿಸಿದ ಪರಾಶರಮುನಿಯೆ! ಸರ್ಗಾದಿಯಲ್ಲಿ ಸಕಲಲೋಕ ಪಿತಾಮಹನೆನಿಸಿದ ಆ ಬ್ರಹ್ಮನು ನಶ್ವರವಾದ ಈ ಜಗತ್ತನ್ನು ಉಂಟುಮಾ

ತ್ಸ್ವರೂಪಂ ಜಗದ್ದ್ವಿಜ। ।ಸರ್ಗಾದೌ ಸೃಷ್ಟ್ವವಾ೯ ಬ್ರಹ್ಮಾ ತನ್ಮ
ಮಾಚಕ್ಷ್ವ ವಿಸ್ತರಾತ್ ॥೨॥ ಶ್ರೀ ಪರಾಶರಃ ॥ ಮೈತ್ರೇಯ। ಕ
ಥಯಾಮ್ಯೇತ ಚ್ಛೃಣುಷ್ವ ಸುಸಮಾಹಿತಃ । ಯಥಾ ಸಸರ್ಜ್ಜ ದೇ
ವೋಽಸೌ ದೇವಾದೀನಖಿಲಾ೯ವಿಭುಃ* ॥೩॥ಸೃಷ್ಟ್ಯುಂಚಿಂತಯತ
ಸ್ತಸ್ಯ ಸರ್ಗಾದಿಷು ಯಥಾಪುರಾ । ಅಬುದ್ಧಿಪೂರ್ವಕಸ್ಸರ್ಗಃ ಪ್ರಾ

ಡಿದ ಬಗೆಯಾವುದು ? ಸತ್ವಾದಿಗುಣತ್ರಯದಲ್ಲಿ ಈ ಜಗತ್ತಿನ ಗುಣವಾ
ವುದು ? ಇದರ ಸ್ವಭಾವವೇನು ? ಇದರ ಆಕಾರ (ಸ್ವರೂಪವು) ಎಂತ
ಹದು ? ಇವೆಲ್ಲವನ್ನೂ ವಿಶದವಾಗಿ ನಿನ್ನಿಂದ ತಿಳಿಯಲು ನನಿಗೆ ಕುತೂ
ಹಲವು ಅಧಿಕವಾಗಿರುವಕಾರಣ ನನ್ನಲ್ಲಿ ಅನುಗ್ರಹವನ್ನಿಟ್ಟು ಸವಿಸ್ತಾರ
ವಾಗಿ ತಿಳುಹಬೇಕು'' ಎಂಬದಾಗಿ ವಿನಯದಿಂದ ಪ್ರಾರ್ಥಿಸುತಲಿರುವ
ಮೈತ್ರೇಯನಂ ಕಂಡು ದಯಾರ್ದ್ರಹೃದಯನಾದ ಪರಾಶರಮುನಿಯು
ಹೇಳುತ್ತಾನೆ.—॥೨॥ ಅಯ್ಯಾ ಮೈತ್ರೇಯನೆ! ಪರ್ವತಮೊದಲ್ಗೊಂಡು ಪ
ರಮಾಣು ಪರ್ಯಂತೆಗಳಾದ ನಿಖಿಲವಸ್ತುಗಳಲ್ಲಿ ಸರ್ವದಾ ನೆಲೆಸಿರುವಕಾ
ರಣ '' ವಿಭು'' ಎಂಬದಾಗಿ ಕರೆಯಲ್ಪಡುವ ಆ ಪರಮಾತ್ಮನು ದೇವತೆಗ
ಳೇ ಮೊದಲಾದ ಜಂಗಮಸೃಷ್ಟಿಯನ್ನೂ ಪರ್ವತ, ವೃಕ್ಷ ಮೊದಲಾದ ತಿ
ರ್ಯಕ್ ಅಥವ ಅಚೇತನಗಳಾದ ಸ್ಥಾವರಸೃಷ್ಟಿಯನ್ನೂ ಉಂಟುಮಾಡಿದ
ರೀತಿಯನ್ನು ನಿನಗೆ ತಿಳಿಸುವೆನು ಈ ವಿಷಯವು ಅತಿದುರವಗಾಹ (ತಿಳಿ
ಯಲಸಾಧ್ಯ) ವಾದುದರಿಂದ ಅವಹಿತನಾಗಿ ಕೇಳು ॥೩॥ ದೇಹಾದಿಗಳಲ್ಲಿ
ನ ಅಭಿಮಾನ, ಮತ್ತು ತಾನೇ ತನ್ನಸುಖದುಃಖಕ್ಕೆ ಕಾರಣನು. ಕರ್ತೃವೂ
ಭೋಕ್ತೃವೂ ತಾನೇ ಎಂಬ ತಿಳಿವಳಿಕೆಯೇ'' ಅವಿದ್ಯೆ'' ಅಥವಾ ಅಜ್ಞಾ
ನವೆನಿಸುವುದು. ಇಂತಹ ಅವಿದ್ಯೆ ಇಲ್ಲದೆ ದೊಡ್ಡ ಸೃಷ್ಟಿಯಲ್ಲಿಟ್ಟ ದೇಹಗ
ಳಲ್ಲಿ ಜೀವಗಳಿಗೆ ಕರ್ತೃತ್ವ, ಭೋಕ್ತೃತ್ವ ಮೊದಲಾದವು ಸಂಭವಿಸಲಾ

---

* ''ಸರ್ವಮೂರ್ತ ದ್ರವ್ಯಸಂಯೋಗಿತ್ವಂ ವಿಭುತ್ವಂ,, ಚಕ್ಷುರಿಂದ್ರಿಯಕ್ಕೆ ಗೋ
ಚರವಾಗುವ ಸಕಲ ಪದಾರ್ಥಗಳಲ್ಲಿಯೂ ತ್ರಿಕಾಲದಲ್ಲಿಯೂ ಯಾವತೊಂದರೆಯೂ
ಇಲ್ಲದೆ ವ್ಯಾಪಿಸಿಕೊಂಡಿರುವ ಸಾಮರ್ಥ್ಯವುಳ್ಳವಿಕೆಯೇ '' ವಿಭುತ್ವ'' ಎಂಬದಾಗಿ
ನ್ಯಾಯ (ತರ್ಕ) ಶಾಸ್ತ್ರದಲ್ಲಿಹೇಳಲ್ಪಟ್ಟಿದೆ.

ದುರ್ಭೃತಸ್ತ್ವೋವಯಃ ॥೪॥ ತಮೋವೋಹೋ ಮಹಾಮೋಹ
ಸ್ತಾಮಿಸ್ರೋಽಭ್ಯಂಧ ಸಂಜ್ಞಿತಃ। ಅವಿದ್ಯಾಪಂಚಪರ್ವೈಷಾ ಪ್ರಾ
ದುರ್ಭೂತಾ ಮಹಾತ್ಮನಃ ॥೫॥ ಪಂಚಧಾವಸ್ಥಿತಸ್ಯರ್ಗ್ಗೀಧ್ಯಾಯು

ರವು ಆದುದರಿಂದ ಮೊದಲು ಆ ಅವಿದ್ಯಾ ವಿಭಾಗಕ್ರಮವನ್ನು ತಿಳಿಸುವೆನು. ಹಿಂದಿನ ಕಲ್ಪಾಂತಗಳಲ್ಲಿ (ಪ್ರಳಯಾನಂತರಕಾಲದಲ್ಲಿ) ಆ ಪರಮಾತ್ಮನು ಜಗತ್ತನ್ನು ಮರಳಿ ಉಂಟುಮಾಡಿದಂತೆಯೇ ಈ ವರಾಹಕಲ್ಪಾದಿಯಲ್ಲಿಯೂ ಸೃಷ್ಟಿಕಾರ್ಯಕ್ಕಾಗಿ ಚಿಂತಿಸುತಿರಲು ಅನವಧಾನಮೂಲಕವಾದ (ಅಬುದ್ಧಿಪೂರ್ವಕವಾದ) ಅವಿದ್ಯಾವೃತ್ತಿರೂಪವೆನಿಸಿದ ಸ್ಥಾವರ ಸೃಷ್ಟಿಯು ತಾನಾಗಿಯೇ ಉಂಟಾಯಿತು ॥ ೪ ॥ ಇಂತು ಸೃಷ್ಟಿಕಾರ್ಯಕ್ಕಾಗಿ ಆ ಪರಮಾತ್ಮನು ಚಿಂತಿಸುತ್ತಿರುವ ಕಾಲದಲ್ಲಿಯೇ ಮಹಾಮಹಿಮಶಾಲಿ ಎನಿಸಿದ ಆ ಪರಮಾತ್ಮನ ಸಾನ್ನಿಧ್ಯವಿಶೇಷದಿಂದ ‡ಅವಿದ್ಯಾಪರ ಪರ್ಯಾಯಗಳೆನಿಸುವ ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ ಅಂಧತಾಮಿಸ್ರಗಳೆಂಬ ಪಂಚವೃತ್ತಿ ವಿಶೇಷಯುಕ್ತವಾದ ಅವಿದ್ಯೆಯು ಉದಯಿಸಿತು ॥೫॥ ಇಂತು ಪರಮಾತ್ಮನು ಸೃಷ್ಟಿವಿಷಯವಾಗಿ ಧ್ಯಾನಿಸು

‡ ಅವಿದ್ಯೆಯು (ಅಜ್ಞಾನವು) 1ತಮಸ್ಸು, 2ಮೋಹ 3 ಮಹಾಮೋಹ 4 ತಾಮಿಸ್ರ 5ಅಂಧತಾಮಿಸ್ರಗಳೆಂಬದಾಗಿ ಐದುವಿಧವಾಗಿರುವದು (1) ಆತ್ಮವ್ಯತಿರಿಕ್ತಗಳೆನಿಸಿದ ದೇಹಾದಿಗಳಲ್ಲಿನ ಆತ್ಮಾಭಿಮಾನವೇ ತಮಸ್ಸೆನ್ನಲ್ಪಡುವದು(2) ತನಗೆ ಸಂಬಂಧಿಗಳಾದ ಪತ್ನೀ ಪುತ್ರ ಗೃಹಾದಿಗಳ ವಿಷಯದಲ್ಲಿ "ನನ್ನ ಹೆಂಡತಿ, ನನ್ನ ಮನೆ" ಎಂಬುವ ಇದೇ ಮೊದಲಾದ ಮಮತಾರೂಪವಾದ ಅಭಿಮಾನವೇ ಮೋಹವೆನ್ನಲ್ಪಡುವದು (3) ಶಬ್ದಾದಿ ವಿಷಯಗಳ ಉಪಭೋಗದಲ್ಲಿ ಅಂತ್ಯತಾಸಕ್ತಿಯೇ ಮಹಾಮೋಹವೆನ್ನಲ್ಪಡುವದು(4)ಮೇಲೆಹೇಳಿದ ಶಬ್ದ ಮೊದಲಾದ ವಿಷಯೋಪಭೋಗಕ್ಕಾಗಿ ಪ್ರಯತ್ನಪಟ್ಟು ಆ ಪ್ರಯತ್ನವು ಸಫಲವಾಗದಿರ್ದೊಡೆ ಆ ಉಪಭೋಗಸಾಧನಗಳಾದ ಶಬ್ದಾದಿ ವಿಷಯೋಪ ಭೋಗಾಲಾಭದಿಂದುಂಟಾಗುವ ಮನಃಕ್ಲೇಶ "ಚಿತ್ತಕ್ಷೋಭೆ" ವನ್ನು ತಾಮಿಸ್ರವೆಂದು ಹೇಳುವರು (5) ಹಿಂದೆಹೇಳಿದ ಪತ್ನೀ ಪುತ್ರಾದಿಗಳಲ್ಲಿ ತನಗೆ ಇರುವ ಅತಿಶಯವಾದ ಮಮತೆಯಿಂದ ಅವುಗಳಿಗೆ ಎಲ್ಲಿ ನಾಶವುಂಟಾಗುವುದೋ ಎಂಬ ಶಂಕೆಯಿಂದ ತದ್ರಕ್ಷಣಾದಿಚಿಂತೆಯ ಅಭಿಮಾನವೇ ಅಂಧತಾಮಿಸ್ರವೆನಿಸುವುದು.

ತೋಽಪ್ರತಿಬೋಧವಾ॥ ಬಹಿರಂತ ಶ್ಚಾ ಪ್ರಕಾಶ ಸ್ಸಂವೃತಾತ್ಮಾ
ನಗಾತ್ಮಕ್ಯ॥೬॥ಮುಖ್ಯೋ ನಗಾಯತ ಶ್ಚೋಕ್ತಾ ಮುಖ್ಯ ಸರ್ಗಸ್ತ
ತ ಸ್ಸೃಜ್ಯತಃ॥೭॥ತಂದೃಷ್ಟ್ವಾZಸಾಧಕಂ ಸರ್ಗ ಮಮನ್ಯತ ಪರಂ
ಪುನಃ॥೮॥ತಸ್ಯಾ ಭಿಧ್ಯಾಯತ ಸ್ಸರ್ಗ ಸ್ತಿರ್ಯ ಕ್ಸ್ರೋತಾ*ಭ್ಯವರ್ತ

ತಿರಲು ತಮೋಗುಣಾವೃತವಾದಚೈತನ್ಯವುಳ್ಳದ್ದಾಗಿಯೂ,'ತಾನುಯಾರು? ಎಲ್ಲಿಂದ ಬಂದವನು?ಕೊನೆಗೆ ಸೇರುವುದೆಲ್ಲಿ?'ಎಂಬ ಇದೇವೊದಲಾದಪರಾಮರ್ಶಜ್ಞಾನಶೂನ್ಯವೆನಿಸಿ, ಬಾಹ್ಯಗಳೆನಿಸುವ ಶಬ್ದಾದಿವಿಷಯಗಳಲ್ಲಿಯೂ, ಅಂತರಗಳೆನಿಸುವ ಸುಖದುಃಖ ವೊದಲಾದ ವಿಷಯಗಳಲ್ಲಿಯೂ ಜ್ಞಾನಶೂನ್ಯಗಳೆನಿಸಿಕೊಂಡು ಜಲಾದಾನ, (ಹಾಕಿದ ನೀರನ್ನು ಬೇರುಗಳ ಮಾರ್ಗವಾಗಿ ಹೀರುವಿಕೆ) ಆಯುಧಗಳಿಂದ ತಮ್ಮನ್ನು ಕತ್ತರಿಸಿದರೂ ಅಥವಾ ಮುರಿದರೂ ಕೂಡ ಮರಳಿ ಚಿಗುರಿ ದೊಡ್ಡದಾಗಿ ಬೆಳೆಯುವಿಕೆ, ಎಂಬ ಇವೇ ವೊದಲಾದ ತಾಮಸಗುಣಗಳಿಂದ ಕೂಡಿರುವ ಕಾರಣ ಪ್ರಕೃಷ್ಟಜ್ಞಾನಶೂನ್ಯಗಳೆನಿಸಿದ ವೃಕ್ಷಗಳು,ಗುಲ್ಮಗಳು ಇವೇ ವೊದಲಾದ ರೂಪವುಳ್ಳ ಸ್ಥಾವರಸೃಷ್ಟಿಯು ಐದುವಿಧವಾಗಿ ನಿಷ್ಪನ್ನವಾಯಿತು ॥೬॥ ಇಂತು ಸ್ಥಾವರ ಸೃಷ್ಟಿಯಲ್ಲಿ ಆ ಬ್ರಹ್ಮನಿಂದ ವೃಕ್ಷ ಗುಲ್ಮಾದಿರೂಪವಾದ ತಿರ್ಯಕ್ಸೃಷ್ಟಿಯೇ ವೊದಲುಸಾರಿ ಉಂಟುಮಾಳ್ಪಟ್ಟ ಕಾರಣ ಸೃಷ್ಟಿಚಿಂತಕರಾದ ಮಹನೀಯರು ಇಂತಹ ತಿರ್ಯಕ್ಸೃಷ್ಟಿಯನ್ನೇ ಮುಖ್ಯಸೃಷ್ಟಿಯನ್ನಾಗಿ ಹೇಳುವರು ॥೭॥ ಇಂತು ಮೇಲೆಹೇಳಿದ ರೀತಿಯಿಂದ ಯಾವಸಾಧನವೂ ಇಲ್ಲದೆ ತಾನಾಗಿಯೇ ಉದಯಿಸಿ ಪುರುಷಾರ್ಥಪ್ರವೃತ್ತಿಶೂನ್ಯವೆನಿಸಿದ ಈ ಸ್ಥಾವರ ಸೃಷ್ಟಿಯಂ ಕಂಡು ಅಂದರಿಂದ ಸಂತುಷ್ಟನಾಗದೆ ಆ ಪರಮಾತ್ಮನು ಮರಳಿ ಕೇವಲ ಧ್ಯಾನಾಸಕ್ತನಾಗುತಿರಲು ಇದಕ್ಕಿಂತಲೂ ಸ್ವಲ್ಪ ಉತ್ತಮವೆನಿಸಿದ ಮತ್ತೊಂದು ತಿರ್ಯಕ್ಸೃಷ್ಟಿಯು ಉಂಟಾಯಿತು ॥೮॥ಇಂತು ಆ ಪರಮಾತ್ಮನು ಧ್ಯಾನಾಸಕ್ತನಾ

---

* ಇಲ್ಲಿ "ತಿರ್ಯಕ್ಸ್ರೋತಾ ಅಭ್ಯವರ್ತತ" ಎಂದಿರಬೇಕು. ಈ ಸ್ಥಳದಲ್ಲಿ ಸಂಧಿಯು ಆರ್ಷ.

ತಃಯಸ್ಮಾತ್ತಿರ್ಯಕ್ಪ್ರವೃತ್ತಿ ಸ್ಯ ತಿರ್ಯಕ್ಸ್ರೋತಾ ಸ್ತತಸ್ಮೃತಃ॥೯ ಪಶ್ವಾದಯಸ್ತೇವಿಖ್ಯಾತಾ ಸ್ತಮಃಪ್ರಾಯಾಃ*ಹ್ಯವೇದಿನಃ । ಉತ್ಪ ಥಗ್ರಾಹಿಣಶ್ಚೈವತೇಽಜ್ಞಾನೇ ಜ್ಞಾನಮಾನಿನಃ ॥೧೦॥ ಅಹಂಕೃತಾ ಅಹಂಮಾನಾ ಅಷ್ಟಾವಿಂಶ ದ್ವ (ದ್ವಿ) ಧಾತ್ಮಕಾಃ । ಅಂತಃಪ್ರ ಕಾಶಾಸ್ತೇ ಸರ್ವೇ ಹ್ಯಾವೃತಾಶ್ಚ ಪರಸ್ಪರಂ ॥೧೧॥

ಗುತ್ತಿರಲು ಆಹಾರವಿಹಾರಾದಿಗಳಿಂದ ಇದಕ್ಕಿಂತಲೂ ಸ್ವಲ್ಪ ಪ್ರಕೃಷ್ಟ ವೆನಿಸಿದ ಜೀವನವುಳ್ಳ ಪಶು, ಪಕ್ಷಿ, ಮೊದಲಾದ ತಿರ್ಯಕ್ಸೃಷ್ಟಿಯು ಉಂಟಾಯಿತು. ವಾಯುವಿನಂತೆ ಅಡ್ಡಲಾದ ಪ್ರವೃತ್ತಿವುಳ್ಳವಿಕೆಯಿಂದ ಈ ಸೃಷ್ಟಿಯನ್ನು ತಿರ್ಯಕ್ಸೃಷ್ಟಿ ಎಂಬದಾಗಿ ಕರೆಯುವರು॥೯॥ ಇಂತು ತಿರ್ಯಕ್ಸೃಷ್ಟಿರೂಪದಿಂದ ಉದಯಿಸಿದ ಆಪಶು, ಪಕ್ಷಿ, ಮೃಗಾದಿಗಳು ಕೇವಲ ತಮೋಗುಣಪ್ರಾಚುರ್ಯದಿಂದ ಉದಯಿಸಿರುವಕಾರಣ ಅನುಸಂ ಧಾನಶೂನ್ಯಗಳೆನಿಸಿ ಇದು ತಿನ್ನಲು ಯೋಗ್ಯವಾದುದು. ಇದನ್ನು ತಿನ್ನ ಬಾರದು ಇದು ಕಾಮಕ್ರೀಡಾದಿಗಳಿಗೆ ಅನುರೂಪವಾದ ಸ್ಥಾನವು. ಇದುಅಲ್ಲ ಎಂಬ ಈ ಪ್ರಕಾರವಾದ ಯುಕ್ತಾಯುಕ್ತವಿವೇಚನರಹಿತಗಳಾದುದರಿಂದ ಉನ್ಮಾರ್ಗವರ್ತಿಗಳೆನಿಸಿ, ತಾವು ಸ್ವತಃಜ್ಞಾನಶೂನ್ಯಗಳಾಗಿದ್ದರೂ ದಿವ್ಯವಾದ ಜ್ಞಾನವುಳ್ಳವುಗಳಂತೆ ತಿಳಿದಿರುವಕಾರಣ ಅವಿವೇಕಿಗಳೆನಿಸಿಕೊಳ್ಳುವುವು ।೧೦॥ (ಅಯ್ಯಾ ಮೈತ್ರೇಯನೆ!) ಇಂತುಮೇಲೆ

---

* ಕ್ಯು॥ ಅಥೇತರೇಷಾಂ ಪಶೂನಾಂ ಅಶನಾಯಾ ಪಿಪಾಸೇವಾಭಿವಿಜ್ಞಾನಂ ನವಿಜ್ಞಾತಂವದಂತಿ, ನವಿಜ್ಞಾತಂ ಪಶ್ಯಂತಿ, ನವಿದುಃಖ್ವಸ್ತನಂ ನಲೋಕಾ । ಪಶುಪಕ್ಷಿ, ಮೃಗಾದಿಗಳು ಹಸಿವು ನೀರಡಿಕೆ ಮುಂತಾದವುಗಳಲ್ಲಿ ಮಾತ್ರವೇ ಜ್ಞಾನವುಳ್ಳವುಗಳಾಗಿ ಕೆಂಡುಬರುವುವಲ್ಲದೆ ಅವುಗಳಿಗೆ ಜ್ಞಾನಸಹಿತವಾಗಿ ಮಾತನಾಡತಕ್ಕ ಸಾಮರ್ಥ್ಯವಿಲ್ಲ. ಜ್ಞಾನಸಹಿತವಾಗಿ ಅಂದರೆ ತಮಗಿಂತಲೂ ಉತ್ತಮವಾದ ಪದಾರ್ಥಗಳನ್ನು ಗೌರವಿಸಿ ನೋಡಲಾರವು ನಾಳೆ ಬರುವ ಅಂದರೆ ಉತ್ತರಕ್ಷಣದಲ್ಲಿ ತಮಗೆ ಸಂಭವಿಸುವ ಭಯಾದಿಗಳನ್ನು ಅರಿಯವು. ಇಹಲೋಕ ಪರಲೋಕ ವಿಷಯಕವಾದ ಜ್ಞಾನವೂ ಅವುಗಳಿಗಿಲ್ಲ ಎಂಬ ಅರ್ಥವುಳ್ಳ ಈ ಮೇಲೆಹೇಳಿದ ಕ್ರುತಿಯು ಆ ಪಶ್ವಾದಿಗಳು ಯುಕ್ತಾಯುಕ್ತವಿವೇಚನರಹಿತಗಳೆಂಬ ವಿಷಯಲ್ಲಿ ಪ್ರಮಾಣವಾಗಿ ಉದಹರಿಸಲ್ಪಟ್ಟಿದೆ.

ಉದಹರಿಸಲ್ಪಟ್ಟ ತಿರ್ಯಕ್ ಸೃಷ್ಟಿರೂಪವಾದ ಆ ಪಶುಗಳು ಸಾಹಂಕಾರಗಳಿನಿಸಿದ ಕರ್ಮ (ಕೆಲಸ) ತಿಳಿವಳಿಕೆಗಳಿಂದಲೂ, ಇಪ್ಪತ್ತೆಂಟುವಿಧವಾದ ದೌರ್ಬಲ್ಯ ಸ್ವಭಾವದಿಂದಲೂ, ಕೂಡಿರುವ ಕಾರಣ ಸರ್ವದಾ ಆಹಾರ ನಿದ್ರೆ, ಭಯ, ಕಾಮುಕ್ರೀಡೆ, ಮೊದಲಾದ ಸುಖಕಾರ್ಯಗಳಲ್ಲಿಯೇ ಆಸಕ್ತಗಳಿನಿಸಿ ತದೇಕಜ್ಞಾನವುಳ್ಳವುಗಳಾಗಿರುವಕಾರಣ ಅವುಗಳಿಗೆ ಪರಸ್ಪರವಾಗಿರುವ ಆಭಿಜಾತ್ಯ, ಸ್ವಭಾವ, ಮತ್ತು ಜನ್ಯಜನಕಭಾವ ರೂಪವಾದ (ತಂದೆವುಕ್ಕಳೆಂಬ) ಸಂಬಂಧಾದಿಗಳ ತಿಳಿವಳಿಕೆಇಲ್ಲ. ಆದುದರಿಂದಲೇ ಇವುಗಳನ್ನು ತಿರ್ಯಕ್ ಜಂತುಗಳೆಂದು ಕೆರೆಯುವರು. ಈ ಶ್ಲೋಕದಲ್ಲಿ ಅಷ್ಟಾವಿಂಶದ್ವಧಾತ್ಮಕಾಃ, ಅಷ್ಟಾವಿಂಶದ್ವಿಧಾತ್ಮಕಾಃ, ಎಂಬುದಾಗಿ ಎರಡುಪಾಠಗಳುಂಟು. ಮೊದಲನಯ ಪಾಠದಲ್ಲಿ ''ವಧ'' ಶಬ್ದಕ್ಕೆ ದೌರ್ಬಲ್ಯವೆಂದರ್ಥ. ಈ ದೌರ್ಬಲ್ಯವು ಇಪ್ಪತ್ತೆಂಟುವಿಧವಾಗಿರುವುದು. ಅದೆಂತೆಂದರೆ—ಇಂದ್ರಿಯವಧಗಳು ಹನ್ನೊಂದುವಿಧ, ನವವಿಧ ತುಷ್ಟಿಗಳು, ಅಷ್ಟವಿಧ ಸಿದ್ಧಿಗಳು, ಈ ಹದಿನೇಳೂ ಬುದ್ಧಿಕಾರ್ಯಗಳು, ಈ ಹದಿನೇಳುವಿಧವಾದ ಬುದ್ಧಿಕಾರ್ಯವು ತಪ್ಪಿಹೋಗುವಿಕೆಯಿಂದುಂಟಾಗುವ ದೌರ್ಬಲ್ಯವು ಹದಿನೇಳುವಿಧ ಇದಕ್ಕೆ ಬುದ್ಧಿವಧವೆಂದು ಹೆಸರು. ಅಂತು ಇಪ್ಪತ್ತೆಂಟು ವಿಧವಾದದ್ದು ದೌರ್ಬಲ್ಯವೆಂದರ್ಥ. ಇಂದ್ರಿಯವಧಗಳಾವುವೆಂದರೆ—ವಾಕ್ಕು, ಪಾಣಿ, ಪಾದ, ಪಾಯು ಉಪಸ್ಥಗಳೆಂಬುದಾಗಿ ಐದುಕರ್ಮೇಂದ್ರಿಯಗಳು, ತ್ವಕ್ಕು, ಚಕ್ಷುಸ್ಸು, ನಾಶಿಕಾ, ಶ್ರೋತ್ರ, ಜಿಹ್ವೆಗಳೆಂಬ ಐದುಜ್ಞಾನೇಂದ್ರಿಯಗಳು, ಸುಖದುಃಖಗಳನ್ನು ತಿಳಯುವಿಕೆಯಲ್ಲಿ ಸಾಧನವಾದ ಮನಸ್ಸು ಉಭಯ ಸಾಧಾರಣವಾದ ಹನ್ನೊಂದನೆಯ ಇಂದ್ರಿಯ,ಅಂತುಒಟ್ಟುಹನ್ನೊಂದು ಇಂದ್ರಿಯಗಳಾಗುವುವು. ಇವುಗಳಲ್ಲಿನ ಸಹಜವಾದ ಶಕ್ತಿಯು ತಪ್ಪಿಹೋಗುವಿಕೆಯೇ''ಇಂದ್ರಿಯವಧ'' ವೆನಿಸುವುದು. ಅವುಗಳಲ್ಲಿ ಮೊದಲನೆಯದಾದ ಕರ್ಮೇಂದ್ರಿಯಪಂಚಕಕ್ಕೆ ಕ್ರಮವಾಗಿ ಈ ಮುಂದೆಹೇಳುವವು ದೋಷಗಳು. ಅವು ಯಾವುವಂದರೆ ಮೂಗನಾಗಿರುವಿಕೆ. ಬಿಕ್ಕಲು ಇದೇ ಮೊದಲಾದುದು ವಾಗಿಂದ್ರಿಯದೋಷವು. ಕುಣಿತ್ವವೆಂದರೆ ಕೈಮುರಿದು ಹೋಗಿರುವಿಕೆ ಅಥವಾ ಕೈ ಯಾವವಿಧದಲ್ಲೂ ಸ್ವಾಧೀನವಿಲ್ಲದಿರುವಿಕೆಯು ಪಾಣೀಂದ್ರಿ

ಯದೋಷವು. ಕುಂಟನಾಗಿರುವಿಕೆಯು ಪಾದೇಂದ್ರಿಯಕ್ಕೆ ದೋಷವು. ಮಲನಿರೋಧ, ಅಜೀರ್ಣ, ವೃದಣವಾದುದು ಪಾಯ್ವಿಂದ್ರಿಯದೋಷವು ಬಹುಮೂತ್ರ, ಮೂತ್ರಕೋಶದಲ್ಲಿ ಉಂಟಾಗುವ ಇತರವಿಧವಾದ ಜಾಡ್ಯಗಳು ನಪುಂಸಕತ್ವವೊದಲಾದುವು ಉಪಸ್ಥೇಂದ್ರಿಯದೋಷವು ಇವೇ ಕರ್ಮೇಂದ್ರಿಯದೋಷಗಳು ಜ್ಞಾನೇಂದ್ರಿಯದೋಷಗಳು ಯಾವುವಂದರೆ' ಕುಷ್ಠ, ಶ್ವೇತ, ಮೊದಲಾದುವು ತ್ವಗಿಂದ್ರಿಯದೋಷಗಳು, ಕುರುಡು ನೀರುಗಣ್ಣು ಅಂದರೆ ದೂರದಲ್ಲಿರತಕ್ಕ ಪದಾರ್ಥಗಳನ್ನು ನೋಡಲು ಸಾಮರ್ಥ್ಯವಿಲ್ಲದಿರುವಿಕೆಯು ನೇತ್ರೇಂದ್ರಿಯ ದೋಷವು. ಪೀನಸ, ನೆಗಡಿ, ಮೊದಲಾದುವು ಘ್ರಾಣೇಂದ್ರಿಯದೋಷಗಳು ಕಿವುಡು ಶ್ರೋತ್ರೇಂದಿಯದೋಷವು. ಅರೋಚಕ (ರುಚಿತಿಳಿಯದಿರುವಿಕೆಯು) ಮೊದಲಾದುದು ರಸನೇಂದ್ರಿಯದೋಷವು ಇವು ಜ್ಞಾನೇಂದ್ರಿಯ ಪಂಚಕದೋಷಗಳು. ಸ್ತಬ್ಧತೆಯಿಂದ ಸುಖದುಃಖಗಳನ್ನರಿಯದೆ ಕೇವಲಜಡಸ್ವಭಾವವನ್ನವಲಂಬಿಸಿ ಮತ್ತನಾಗಿರುವಿಕೆಯು ಹನ್ನೊಂದನೆಯದಾದ ಮನಸ್ಸಿನ ದೋಷವು, ಅಂತು ಇಂದ್ರಿಯದೋಷಗಳು ಹನ್ನೊಂದು ಇನ್ನು ಮುಂದೆ ಬಂಬತ್ತು ವಿಧವಾದ ತುಷ್ಟಿಗಳು ಅವುಯಾವುವಂದರೆ—ಪ್ರಕೃತಿ, ಪ್ರಕೃತಿಯಿಂದುಂಟಾಗುವ ಮಹತ್ತತ್ವ, ತತ್ಕಾರ್ಯವಾದ ಅಹಂಕಾರ, ತತ್ಕಾರ್ಯಗಳೆನಿಸಿ ಮಹಾಭೂತೋತ್ಪಾದಕಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳೆಂಬದಾಗಿ ಕರೆಯಲ್ಪಡುವ ಸೂಕ್ಷ್ಮಭೂತಗಳು ಈ ಎಂಟೂ ಪ್ರಕೃತಿತತ್ವಗಳೆನಿಸಿಕೊಳ್ಳುವುವು. ಈ ಎಂಟು ವಿಧವಾದ ಪ್ರಕೃತಿತತ್ವಗಳಲ್ಲಿಯೂ ಮನಸ್ಸನ್ನು ಲಯಗೊಳಿಸಿ, ತದೇಕತತ್ಪರನಾಗಿ ಧ್ಯಾನಮಾಡುವಿಕೆಯಿಂದತಾನು ಮುಕ್ತನಾದೆನೆಂಬದಾಗಿ ತಿಳಿವಿಕೆಯು "ಪ್ರಕೃತ್ಯಾಖ್ಯತುಷ್ಟಿ" ಎನ್ನಲ್ಪಡುವುದು. ಸನ್ಯಾಸವೇಷವನ್ನು ಸ್ವೀಕರಿಸುವ ಮಾತ್ರದಿಂದಲೇ ನಾನು ಕೃತಾರ್ಥನಾದೆನು. ನನಗೆಯಿನ್ನು ಮತ್ತಾವವಿಧವಾದ ಕರ್ತವ್ಯವೂ ಉಳಿದಿರುವುದಿಲ್ಲ. ನಾನು ಮುಕ್ತನಾದೆನೆಂಬದಾಗಿ ತಿಳಿದು ತದ್ದ್ವಾರಾ ಸಂತೋಷವನ್ನನುಭವಿಸುವಿಕೆಯೇ 'ಉಪಾದಾನಾಖ್ಯತುಷ್ಟಿ" ಎನ್ನಲ್ಪಡುವುದು. ಮುಕ್ತಿಯು ಕೈ

ಗೂಡುವ ಕಾಲವು ಒದಗಿದಲ್ಲಿ ತಾನಾಗಿಯೇ ಸಿದ್ಧಿಸುವುದು. ವ್ಯರ್ಥವಾಗಿ ನಿರಂತರವೂ ಏಕಾಗ್ರಚಿತ್ತನಾಗಿ ಧ್ಯಾನಿಸುವಿಕೆಯಿಂದ ಕೇವಲಮನಃ ಕ್ಲೇಶವೇ ಹೊರತು ಫಲವೇನು ? ಎಂಬುದಾಗಿ ತೂಷ್ಣೀಕತೆಯನ್ನು ವಹಿಸಿರುವಿಕೆಯು "ಕಾಲಾಖ್ಯತುಷ್ಟಿಯು" ನಮ್ಮ ಪೂರ್ವಜನ್ಮಾರ್ಜಿತಗಳಾದ ಸುಕೃತವಿಶೇಷಗಳು ಪರಿಪಕ್ವವಾಗಿ ನಮಿಗೂ ಮುಕ್ತಿಯು ಲಭಿಸತಕ್ಕುದಾಗಿದ್ದಲ್ಲಿ ನಮ್ಮ ಅದೃಷ್ಟವಿಶೇಷದಿಂದ ತಾನಾಗಿಯೇ ಸಿದ್ಧಿಸುವುದು. ಇದಕ್ಕಾಗಿ ಶ್ರಮಪಟ್ಟು ಫಲವೇನು? ಎಂಬುದಾಗಿ ತಿಳಿದಿರುವಿಕೆಯು "ಭಾಗ್ಯಾಖ್ಯತುಷ್ಟಿ" ಎನಿಸುವುದು ಈ ನಾಲ್ಕುತುಷ್ಟಿಗಳೂ ಮನಃಕಾರ್ಯಗಳಾದುದರಿಂದ ಇವುಗಳಿಗೆ "ಆಧ್ಯಾತ್ಮಿಕ"ತುಷ್ಟಿಗಳೆಂದು ಹೆಸರು. ದ್ರವ್ಯಾರ್ಜನೆಯಲ್ಲಿ ಇಚ್ಛಾವಿಯುಕ್ತನಾಗಿ ವಿರಕ್ತನಾದೊಡೆ "ಸುತಾರವೆಂಬ ತುಷ್ಟಿ" ಎನ್ನಲ್ಪಡುವದು. ಬಂದುವೇಳೆ ಸಂಪಾದಿಸಿದಾಗ್ಯೂ ಅದರಲ್ಲಿ ಅಸಡ್ಡೆಯಿಂದ ಅದನ್ನು ಕಾಪಾಡದೆ ವಿರಕ್ತಿಯನ್ನು ವಹಿಸಿದೊಡೆ "ಸುಪಾರ" ವೆಂಬ ತುಷ್ಟಿಯೆಂದು ವ್ಯವಹರಿಸಲ್ಪಡುವುದು ಅಂತಹ ಧನವು ಬಂದುವೇಳೆ ನಾಶವಾದರೆ ವ್ಯಥೆಪಡದಿರುವಿಕೆಯು "ಸುನೇತ್ರವೆಂಬ ತುಷ್ಟಿಯು" ಬಂದುವಸ್ತುವನ್ನು ಬಂದಾವರ್ತಿ ಉಪಭೋಗಿಸಿದ ಬಳಿಕ ಮರಳಿ ಆ ಪದಾರ್ಥವನ್ನು ಅನುಭವಿಸಬೇಕೆಂಬ ಇಚ್ಛಾವಿಯುಕ್ತನಾಗಿ ವಿರಕ್ತನಾದೊಡೆ ಅದರಿಂದುಂಟಾಗುವ ತುಷ್ಟಿಗೆ "ಮಾರೀಚಕತುಷ್ಟಿ" ಎಂದು ಹೆಸರು. ಯಾವವಸ್ತುವನ್ನಾದರೂ ಉಪಭೋಗಿಸೋಣವೆಂಬ ಇಚ್ಛೆಯೇ ಆತ್ಯಂತಿಕವಾಗಿ ಉಂಟಾಗದಿದ್ದೊಡೆ ಅದಕ್ಕೆ "ಉತ್ತಮಾಂಭವೆಂಬ ತುಷ್ಟಿ" ಎಂದು ಹೆಸರು. ಈ ಒಂಬತ್ತೂ ತುಷ್ಟಿಗಳು. ಇನ್ನುಮುಂದೆ ಎಂಟುವಿಧವಾದ ಸಿದ್ಧಿಗಳು ಯಾವುವಂದರೆ—ಗುರೂಪದೇಶವಿಲ್ಲದೆಯೇ ಅನುಪದಿಷ್ಟವಾದ ಅರ್ಥವನ್ನು ಬುದ್ಧಿಯಿಂದ ಊಹಿಸಿ ಅದರಿಂದಲೇ ವಾಸ್ತವಿಕವಾದ ಅರ್ಥವನ್ನು ತಿಳಿದುಕೊಂಡುದುದಾದರೆ ಈಸಿದ್ಧಿಗೆ 'ಊಹಸಿದ್ಧಿ' ಎಂಬುದಾಗಿ ಹೆಸರು. ಅಕಸ್ಮಾತ್ತಾಗಿ ಯಾವುದೋಬಂದು ಪ್ರಸಂಗದಿಂದಲಾಗಲಿ ಅಥವ ಲೋಕಮರ್ಯಾದೆಯನ್ನು ಪರಿಶೀಲನೆಮಾಡೋಣದರಿಂದಾಗಲಿ ಅರ್ಥಜ್ಞಾನವನ್ನು ಪಡೆದುದಾದರೆ ಇದಕ್ಕೆ "ಶಬ್ದಸಿದ್ಧಿ" ಎಂಬುದಾಗಿ ಹೆಸರು. ಯಾವದಾದರೂ

ಒಂದು ಅರ್ಥವನ್ನು ಒಂದುಸಾರಿ ಗುರುವಿನಿಂದ ಶ್ರವಣಮಾಡಿದ ಮಾತ್ರ ದಿಂದಲೇ ಅದನ್ನು ಅಥವಾ ಅದಕ್ಕಿಂತಲೂ ಅತಿಶಯವಾದ ಜ್ಞಾನವನ್ನು ಹೊಂದಿದರೆ ಇದಕ್ಕೆ "ಅಧ್ಯಯನಸಿದ್ಧಿ" ಎಂದು ಹೆಸರು. ದುಃಖತ್ರಯವನ್ನು ಜಯಿಸೋದರಿಂದುಂಟಾಗುವ ಸಿದ್ಧಿಗಳು ಮೂರುವಿಧ. ಅವುಗಳು ಯಾವುವಂದರೆ—ದುಃಖವು, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬದಾಗಿ ಮೂರುವಿಧ. ಮುಪ್ಪು, ಸಾವು, ಹಸಿವು, ಬಾಯಾರಿಕೆ, ಇಷ್ಟವಸ್ತುವನ್ನಗಲುವಿಕೆ, ಅನಿಷ್ಟಪ್ರಾಪ್ತಿ, ಇದೇವೊದಲಾದ ದುಃಖವು ಆಧ್ಯಾತ್ಮಿಕವೆನ್ನಲ್ಪಡುವುದು ಆಧ್ಯಾತ್ಮಿಕವೆಂದರೆ ಮನಃಕೃತವೆಂದರ್ಥ. ಹುಲಿ, ಕರಡಿ, ಕಳ್ಳಕಾಕರು, ಶತ್ರುಗಳು ಮೊದಲಾದವರಿಂದುಂಟಾಗುವ ದುಃಖವು ಆಧಿಭೌತಿಕವೆಂದು ಹೇಲ್ಪಡುತ್ತದೆ. ಆಧಿಭೌತಿಕವೆಂದರೆ ಭೂತವಿಶೇಷಗಳಿಂದುಂಟಾಗುವದೆಂದರ್ಥ. ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತ, ಶಿಡಿಲುಮೊದಲಾದವುಗಳಿಂದುಂಟಾಗುವ ದುಃಖವು ಆಧಿದೈವಿಕವೆನ್ನಲ್ಪಡುವುದು. ಆಧಿದೈವಿಕವೆಂದರೆ ದೈವಕೃತವೆಂದರ್ಥ. ಇವುಗಳಲ್ಲಿ ಮೊದಲನೆಯದಾದ ಆಧ್ಯಾತ್ಮಿಕವೆಂಬ ದುಃಖವನ್ನು ಆಯುರ್ವೇದದಿಂದ ಜಯಿಸುವಿಕೆಯು "ಮೋದಸಿದ್ಧಿ" ಎನ್ನಲ್ಪಡುವುದು ಎರಡನೆಯದಾದ ಆಧಿಭೌತಿಕವನ್ನು ಲೌಕಿಕಗಳಾದ ಉಪಾಯಾಂತರಗಳಿಂದ ಜಯಿಸುವಿಕೆಯು "ಪ್ರಮುದಿತಸಿದ್ಧಿ" ಎನ್ನಲ್ಪಡುವುದ. ಮೂರನೆಯದಾದ ಆದಿದೈವಿಕದುಃಖವನ್ನು, ಹೊದ್ದಿಕೊಳ್ಳುವುದು ಮರೆಸಾಡುವುದು, ದಾನ, ಮಂಗಳಕರ್ಮಾಚರಣೆ ಮೊದಲಾದುವುಗಳಿಂದ ತಪ್ಪಿಸಿಕೊಳ್ಳುವಿಕೆಯು "ಮೋದಮಾನಸಿದ್ಧಿ" ಎನ್ನಲ್ಪಡುವುದು. ಸ್ನೇಹಿತರು ಮೊದಲಾದವರನ್ನುಬೇಡಿ ಅವರಿಂದುಂಟಾಗುವ ಅರ್ಥಸಿದ್ಧಿಯು "ಸುಹೃತ್ಪ್ರಾರ್ಥಿತಾರ್ಥಸಿದ್ಧಿ" ಎನ್ನಲ್ಪಡುವುದು. ವಿದ್ವಜ್ಜನರು, ತಪಸ್ವಿಗಳು, ಜ್ಞಾನಿಗಳು. ಗುರು, ವೃದ್ಧರುಮೊದಲಾದವರ ಶುಶ್ರೂಷಾದಿಗಳಿಂದುಂಟಾಗುವ ಸಿದ್ಧಿಯು ದಾನಸಿದ್ಧಿಯು. ಅಂತು ಎಂಟುಸಿದ್ಧಿಗಳು ಈ ಹಿಂದೆಹೇಳಿದ ನವವಿಧತುಷ್ಟಿಗಳು, ಅಷ್ಟವಿಧಸಿದ್ಧಿಗಳು ಇವುಗಳ ವಿಪರ್ಯಯವೇ ದೋಷವೆನ್ನಲ್ಪಡುವುದು. ಈ ಹದಿನೇಳೂ ಬುದ್ಧಿಕೃತವಾದ ದೋಷವಾದುದರಿಂದ ಈ ಹದಿನೇಳನ್ನೂ ಬುದ್ಧಿವಧಗಳೆನ್ನುವರು. ಈ ಬುದ್ಧಿವಧಗಳೆಂಬ ದೋಷಗಳು ಹದಿನೇಳು. ಇಂ

ದ್ರಿಯವಧಗಳೆಂಬ ದೋಷಗಳು ಹನ್ನೊಂದು. ಆಂತೂ ಇಪ್ಪತ್ತೆಂಟುದೋಷಗಳು, ಈ ಇಪ್ಪತ್ತೆಂಟು ದೋಷಗಳೂ ಮನುಷ್ಯಸಾಧಾರಣಗಳೆನಿಸಿ ಮನುಷ್ಯರಲ್ಲಿ ಕಂಡುಬರುತ್ತಿದ್ದರೂ ಆ ದೋಷಗಳು ಮನುಷ್ಯರಲ್ಲಿ ವಿರಳವಾಗಿ ಪಶುಗಳಲ್ಲಿ ಮಾತ್ರ ಪ್ರಾಯಿಕವಾಗಿ ತೋರುತ್ತಿರುವಕಾರಣ ಪಶ್ವಾದಿಗಳು ಅಷ್ಟಾವಿಂಶದ್ವಧಾತ್ಮಕಗಳೆಂಬದಾಗಿ ಹೇಳಲ್ಪಟ್ಟವೆ.

ಅಷ್ಟಾವಿಂಶದ್ವಿಧಾತ್ಮಕಾಃ ಎಂಬ ಮತ್ತೊಂದು ಪಾಠವುಂಟು. ಈ ಪಾಠದಲ್ಲಿ ಆ ಪಶುಜಾತಿಯಲ್ಲಿ ಇಪ್ಪತ್ತೆಂಟು ಭೇದಗಳೆಂದರ್ಥ. ಅವು ಯಾವುವಂದರೆ—

ಶ್ಲೋ॥ ಗೌರಜೋ ಮಹಿಷಃ ಕೃಷ್ಣಸ್ಸೂಕರೋ ಗವಯೋರುರುಃ। ದ್ವಿಶಫಾಃ ಪಶವಶ್ಚೈವೇ ಅವಿರುಷ್ಟ್ರಶ್ಚ ಸತ್ತಮ। ಖರೋಶ್ವೋಶ್ವತರೋ ಗೌರ ಶರಭ ಶ್ಚಮರೀತಥಾ ! ಏತೇಽಜೈಕಶಫಾಃಪ್ರೋಕ್ತಾಃ । ಶೃಣು ಪಂಚನಖಾನ್ಪಶೂ ॥ ಶ್ವಾಸೃಗಾಲೋವೃಕೋ ವ್ಯಾಘ್ರೋ ಮಾರ್ಜಾರ ಶ್ಚಶಲ್ಯಕೌ । ಸಿಂಹಃಕಪಿರ್ಗಜಃ ಕೂರ್ಮೋಗೋಧಾಚಮ್ಮಕರಾದಯಃ॥ ಎಂಬ ಭಾಗವತದಲ್ಲಿನ ಸ್ಮರಣಾನುಸಾರವಾಗಿ ಆ ಪಶುಗಳಲ್ಲಿ ಏಕಶಫ (ಒಂದು ಗೊರಸುಳ್ಳ) ಪ್ರಾಣಿಗಳಿಂತಲೂ ದ್ವಿಶಫ (ಎರಡು ಗೊರಸುಳ್ಳ ಪ್ರಾಣಿಗಳಿಂತಲೂ, ಪಂಚನಖ (ಐದುಉಗುರುಳ್ಳ) ಪ್ರಾಣಿಗಳಿಂತಲೂ ಮೂರುವಿಧ ಆಕಳು, ಮೇಕೆ, ಕೋಣ, ಜಿಂಕೆ, ಹಂದಿ, ಗವಯವೆಂಬ ಗೋಸದೃಶವಾದ ಒಂದು ಕಾಡುಮೃಗ, ರುರುವೆಂಬ ಜಿಂಕೆ, ಕುರಿ, ಒಂಟೆಗಳೆಂಬ ಒಂಭತ್ತೂ ಎರಡು ಗೊರಸುಳ್ಳ ಪ್ರಾಣಿಗಳು. ಕತ್ತೆ, ಕುದುರೆ, ಹೇಸರಕತ್ತೆ, ಗೌರಮೃಗ, ಶರಭಮೃಗ, ಚಮರೀಮೃಗಗಳೆಂಬ ಆರೂ ಒಂದುಗೊರಸುಳ್ಳ ಪ್ರಾಣಿಗಳು ನಾಯಿ, ನರಿ, ತೋಳ, ಹುಲಿ, ಬೆಕ್ಕು, ಮೊಲ, ಮುಳ್ಳುಹಂದಿ, ಸಿಂಹ, ಕಪಿ, ಗಜ,ಆಮೆ,ಉಡ, ಮೊಸಳೆಗಳೆಂಬ ಹದಿಮೂರೂ ಐದುಉಗುರುಗಳುಳ್ಳ ಪ್ರಾಣಿಗಳು ಅಂತೂ ಇಪ್ಪತ್ತೆಂಟುವಿಧಗಳು. ಇದರಿಂದ ಆ ಪಶುಜಾತಿಯಲ್ಲಿ ಒಂಬತ್ತು ದ್ವಿಶಫ ಪ್ರಾಣಿಗಳು,ಆರು ಏಕಶಫಪ್ರಾಣಿಗಳು, ಹದಿಮೂರುಪಂಚನಖಪ್ರಾಣಿಗಳು, ಅಂತೂ ಇಪ್ಪತ್ತೆಂಟುಭೇದಗಳೆನುಭಾವವು.

ತಮುಪ್ಯಸಾಧಕಂ ಮತ್ವಾ ಧ್ಯಾಯತೋ ऽನ್ಯ ಸ್ತತೋಭವತ್ ।
ಊರ್ಧ್ವಸ್ರೋತಾಸ್ತೃತೀಯಸ್ತು ಸಾತ್ವಿಕೋ*ರ್ಧ್ವಮವರ್ತತ॥
ತೇಸುಖಪ್ರೀತಿಬಹುಳಾ ಬಹಿರಂತಶ್ಚ ನಾವೃತಾಃ । ಪ್ರಕಾಶಾಬ
ಹಿರಂತಶ್ಚ ಊರ್ಧ್ವಸ್ರೋತೋ$ದ್ಭವಾಸ್ತೃತಾಃ॥೧೪॥ ತುಷ್ಟಾತ್ಮ
ನ ಸ್ತೃತೀಯಸ್ತು ದೇವಸರ್ಗಶ್ಚ ಸಸ್ತೃತಃ । ತಸ್ಮಿನ್ ಸರ್ಗೇಭವ

ಅಯ್ಯಾ ಮೈತ್ರೇಯನೇ ! ಇದುವರೆಗೂ ತಿರ್ಯಕ್ಸೃಷ್ಟಿಯನ್ನು ವಿವರಿಸಿದೆನು. ಇನ್ನಮುಂದೆ ದೇವತೆಗಳು, ಮನುಷ್ಯರು, ರಾಕ್ಷಸರು, ಮೊದಲಾದವರ ಸೃಷ್ಟಿಕ್ರಮವನ್ನು ತಿಳಿಸುವೆನು. ಆ ಪರಮಾತ್ಮನು ತಿರ್ಯಕ್ ಜಂತುಗಳಂ ಉಂಟುಮಾಡಿದ ಬಳಿಕ ಅವು ಪುರುಷಾರ್ಥಪ್ರವೃತ್ತಿ ಶೂನ್ಯಗಳಾಗಿದ್ದುಕೊಂಡು ಕರ್ಮಾಚರಣಾದಿಗಳಲ್ಲಿ ಅಧಿಕಾರರಹಿತಗಳೆ ನಿಸಿ ಸದಾ ಆಹಾರವಿಹಾರಾದಿಗಳಲ್ಲಿಯೇ ಪ್ರವರ್ತಿಸಿರುವುದಂಕಂಡು ಮರಳಿ ಆತನು ಚಿತ್ತೈಕಾಗ್ರತೆಯಂಪಡೆದು ಸಮಾಧಿಲೀನನಾಗುತ್ತಿರಲು ದೇಹಕ್ಕಿಂತಲೂ ಹೊರಗಡೆಯಲ್ಲಿಯೇ ಆಹಾರಾದಿಗಳನ್ನು ಗ್ರಹಿಸುವ ಸಾ ಮರ್ಥ್ಯವುಳ್ಳ ¶ ಅಂದರೆ ಆಹಾರವನ್ನು ತಿನ್ನದೆಯೇ ತದ್ದರ್ಶನಮಾತ್ರ ದಿಂದಲೇ ತೃಪ್ತಿ ಹೊಂದಿ ಅತ್ಯಂತಸುಖವುಳ್ಳ ಮೂರನೆಯದಾದ ಮತ್ತೊಂ ದು ಸೃಷ್ಟಿಯು ಉಂಟಾಯಿತು ॥೧೩॥ ಇಂತಹ ಸರ್ಗಸಂಭೂತರಾದ ಆ ದೇವತೆಗಳಿಗೆ ಸತ್ವಗುಣವೇ ಪ್ರಧಾನವಾಗಿರುವಕಾರಣ ಅವರು ವಿಷ ಯಾನುಭವದೆಸೆಯಲ್ಲಿ ತಮಗೆ ಉಂಟಾಗತಕ್ಕ ಸುಖ ಮತ್ತು ತನ್ನಿಮಿತ್ತ ವಾದ ಆನಂದದಿಂದ ಕೂಡಿ ಅಜ್ಞಾನಾವರಣರಹಿತರೆನಿಸಿ ಪ್ರಕೃಷ್ಟವಾದ ದೇಹಾತ್ಮವ್ಯತಿರೇಕಜ್ಞಾನವಂಪಡೆದು ಸುಖನಿಂದಿರುತ್ತಿದ್ದರು ॥೧೪॥ ಇಂ ತು ಸಂತುಷ್ಟವಾದ ಮನಸ್ಸುಳ್ಳ ಆ ಬ್ರಹ್ಮನಿಂದುದಯಿಸಿದ ಈ ಸೃಷ್ಟಿ ಯನ್ನು ದೇವಸೃಷ್ಟಿ ಎಂಬುದಾಗಿ ಹೇಳುವರು. ಇಂತು ಈ ಸೃಷ್ಟಿ

* ಇಲ್ಲಿ ಸಾತ್ವಿಕ ಊರ್ಧ್ವಂ ಎಂದಿರಬೇಕು $ ಸ್ರೋತ ಉದ್ಭವಾಃ ಎಂದಿರಬೇಕು

¶ ಶ್ರು॥ ನಹವೈದೇವಾ ಅಶ್ನಂತಿ, ನಪಿಬಂತಿ, ಏತದೇವಾಮೃತಂ ದೃಷ್ಟ್ವಾತೃ ಪ್ಯಂತಿ ॥ ಎಂಬ ಶ್ರುತಿಯು ದೇವತೆಗಳು ತಮ್ಮ ಆಹಾರವಾದ ಅಮೃತ ಮೊದಲಾದು ದನ್ನು ತಿನ್ನುವುದಿಲ್ಲ. ಕುಡಿಯುವುದೂ ಇಲ್ಲ. ಅಂತಹ ಅಮೃತವನ್ನು ನೋಡುವ ಮಾತ್ರದಿಂದಲೇ ತೃಪ್ತರಾಗುವರು ಎಂಬದಾಗಿ ಬೋಧಿಸುತ್ತದೆ.

ತ್ಪ್ರೀತಿರಿಪ್ಪನ್ನೇ ಬ್ರಹ್ಮಣಸ್ತದಾ ॥೧೪॥ ತತೋಽನ್ಯಂ ಸತದಾ
ದಧ್ಯಾಸಾಧಕಂ ಸರ್ಗ ಮುತ್ತಮಂ ॥ ಅಸಾಧಕಾ೯ಸ್ತು ತಾ೯ ಜ್ಞಾ
ತ್ವಾ ಮುಖ್ಯಸರ್ಗಾದಿಸಂಭವಾ೯ ॥೧೫॥ ತಥಾಭಿಧ್ಯಾಯತಸ್ತ
ಸ್ಯ ಸತ್ಯಾಭಿಧ್ಯಾಯಿನಸ್ತತಃ । ಪ್ರಾದುರ್ಭೂತಸ್ತದಾ ತಮಃ ವ್ಯಕ್ತಾ
ದಕ್ಷಾಕ್ಷೋಪ್ರೀತಾಸ್ತು ಸಾಧಕಃ ॥೧೬॥ ಯಸ್ಮಾದರ್ವಾ ಗ್ವೈವ
ರ್ದಂತ ತತೋರ್ವಾಕ್ಸ್ರೋತಸ ಸ್ಮೃತಾಃ । ತೇಚಪ್ರಕಾಶಬಹು
ಳಾ ಸ್ತಮೋದ್ರಿಕ್ತಾ ರಜೋಧಿಕಾಃ ॥೧೭॥ ತಸ್ಮಾತ್ತೇದುಃಖಬ
ಹುಳಾ ಭೂಯೋ ಭೂಯಶ್ಚ ಕಾರಿಣಃ । ಪ್ರಕಾಶಾ ಬಹಿರಂತ

ಯು ಉಂಟಾಯಿತೆಂದೂ ಕಂಡು ಇದುವರೆಗೂ ತಾನು ಸೃಷ್ಟಿಸಿದವುಗಳಲ್ಲಿ
ಮನೋಹರವಾಗಿರುವಕಾರಣ ಇದೇ ಉತ್ತಮಸೃಷ್ಟಿ ಎಂಬದಾಗಿ ಆತ
ನಿಗೆ ಬಹಳ ಸಂತೋಷವಾದುದು ॥೧೪॥ ಆ ಬಳಿಕ ಇಂತು ಉಂಟಾದ
ದೈವಸೃಷ್ಟಿಯಲ್ಲಿಯೂ ತೃಪ್ತಿ ಇಲ್ಲದೆ ಮಹದಾದಿ ಸೃಷ್ಟಿಗಳಿಂದುಂಟಾ
ದ ಪ್ರಾಣಿಗಳನ್ನು ಪುರುಷಾರ್ಥ ಪ್ರವೃತ್ತಿಶೂನ್ಯಗಳೆಂದು ಭಾವಿಸಿ, ಈ
ಎಲ್ಲಕ್ಕಿಂತಲೂ ಉತ್ತಮವೆನಿಸಿದ ಮತ್ತೊಂದು ಸೃಷ್ಟಿಯಂ ಕುರಿತು
ಚಿಂತಿಸತೊಡಗಿದನು ॥೧೫॥ ಸತ್ಯಸಂಕಲ್ಪನೆನಿಸಿ ಅವ್ಯಕ್ತಶಬ್ದದಿಂದ ಕರೆ
ಯಿಸಿಕೊಳ್ಳುವ ಆ ಪರಮಾತ್ಮನು ಇಂತು ಧ್ಯಾನಾಸಕ್ತನಾಗುತಿರಲು,
ದೇಹಗತವಾದ (ಉಪಭುಕ್ತವಾದ) ಆಹಾರದಿಂದಲೇ ಅಂದರೆ ಆಹಾರ
ಗ್ರಹಣಸಾಮರ್ಥ್ಯವುಳ್ಳ ಮತ್ತು ಯಜ್ಞಯಾಗಾದಿರೂಪವಾದ ಸತ್ಕರ್ಮಾ
ಚರಣೆಯಿಂದ ಸ್ವರ್ಗಾದ್ಯುತ್ತಮ ಲೋಕಗಳನ್ನು ಪಡೆಯಲು ಸಾಮ
ರ್ಥ್ಯವುಳ್ಳ ಸಾಧಕವೆನಿಸಿದ ಮತ್ತೊಂದು ಸೃಷ್ಟಿಯು ಉಂಟಾಯಿತು.
॥೧೬॥ ಯಾವಕಾರಣ ದೇಹಗತವಾದ ಆಹಾರಾದಿಗಳಿಂದಲೇ ಪ್ರಾಣಧಾ
ರಣೆಯಂ ಮಾಡಿಕೊಂಡು ಅಭಿವೃದ್ಧರಾಗುವರೋ ಆದುದರಿಂದ ಈ ಸೃ
ಷ್ಟಿಗತರಾದ ಪ್ರಾಣಿಗಳಿಗೆ (ಮನುಷ್ಯರಿಗೆ) ಅರ್ವಾಕ್ಸ್ರೋತಸ್ಸುಗಳೆಂ
ಬದಾಗಿ ಹೆಸರು. ಇಂತಹ ಮನುಜರಲ್ಲಿ ಸಾತ್ವಿಕ, ರಾಜಸ, ತಾಮಸಗ
ಳೆಂಬ ಗುಣತ್ರಯಕಾರ್ಭವ್ವೂ ಬಹಳವಾಗಿಯೂ ಹೆಚ್ಚಾಗಿಯೇ ಇರುವ
ವು ॥೧೭॥ ಇಂತು ಗುಣತ್ರಯವೂ ಇವರಲ್ಲಿ ಸಮವಾಗಿರುವಕಾರಣ
ಅಂದರೆ:-ತಮೋಗುಣಾಧಿಕ್ಯದಿಂದ ಅಧಿಕವಾದ ದುಃಖವನ್ನು ಅನುಭವಿಸ

ಶ್ಚ ಮನುಷ್ಯಾ ಸ್ಸಾಧಕಾಶ್ಚತೇ ॥೧೪॥ ಇತ್ಯೇತೇ ಕಥಿತಾಸ್ಸ
ರ್ಗಾ ಷ್ಪಡೇತೇ ಮುನಿಸತ್ತಮ ॥ ಪ್ರಥಮೋಮಹತಸ್ಸರ್ಗೋ
ವಿಜ್ಞೇಯೋ ಬ್ರಹ್ಮಣೋನಘ ! ॥೧೫॥ ತನ್ಮಾತ್ರಾಣಾಂ ದ್ವಿತೀ
ಯಶ್ಚ ಭೂತಸರ್ಗಸ್ತು ಸಂಸ್ಮೃತಃ । ವೈಕಾರಿಕ ಸ್ತೃತೀಯ
ಸ್ತು ಸರ್ಗ ಐಂದ್ರಿಯ ಕಸ್ಸ್ಮೃತಃ ॥೧೦॥ ಇತ್ಯೇಷಪ್ರಾಕೃತಸ್ಸ
ರ್ಗಃ ಸಂಭೂತೋ Z ಬುದ್ಧಿಪೂರ್ವಕಃ । ಮುಖ್ಯಸರ್ಗಶ್ಚತು

ತಕ್ಕವರೂ, ರಜೋಗುಣಾಧಿಕ್ಯದಿಂದ ಪುನಃಪುನಃ ಜರಾಮರಣಗಳನ್ನುಂ
ಟುಮಾಡುವ ಕರ್ಮಾಚರಣವೇ ಸ್ವಭಾವವಾಗಿ ಉಳ್ಳವರೂ, ಕೇವಲ
ಶುದ್ಧ ಸಾತ್ವಿಕ ಗುಣದಿಂದ ಬಾಹ್ಯಾಭ್ಯಂತರಗಳೆರಡರಲ್ಲಿಯೂ ಪ್ರಕೃ
ಷ್ಟವಾದ ಜ್ಞಾನವಂ ಪಡೆದಿರುವರು. ಇಂತು ಕರ್ಮಾಚರಣಾಧಿಕಾರವೂ
ಜ್ಞಾನಾಧಿಕಾರವೂ ಈ ಎರಡಕ್ಕೂ ಇವರು ಅಧಿಕಾರಿಗಳಾಗಿರುವಕಾರಣ
ಮನುಷ್ಯರೇ ಉತ್ತಮರು. ಇಂತಹ ಮಾನುಷಸೃಷ್ಟಿಯೇ ಸೃಷ್ಟಿಗ
ಳೆಲ್ಲದರಲ್ಲೂ ಉತ್ತಮವಾದುದು॥೧೪॥ ಅಯ್ಯಾ ಮನನಶೀಲನಾದ ಯೋ
ಗಿಕುಲಾವತಂಸನೆ! ಇಂತು ನಿನಿಗೆ ಆರುವಿಧವಾದ ಸೃಷ್ಟಿಸ್ವರೂಪವಂ ನಿ
ರೂಪಿಸಿದೆನು. ಅವುಗಳಲ್ಲಿ ಮೊದಲನೆಯದಾದ ಮಹತ್ಸೃಷ್ಟಿಯು ಬ್ರಹ್ಮ
ಕರ್ತೃಕವಾದುದು. ಅದೆಂತೆಂದರೆ —ವಿರಾಟ್ಪುರುಷನಿಗೆ ಸಮಷ್ಟಿ
ವ್ಯಷ್ಟಿ ಭೇದಗಳಿಂದ ಶರೀರಗಳೂ ಎರಡುವಿಧ. ಅವುಗಳಲ್ಲಿ ವಿರಾಟ್ಪು
ರುಷನ ಸಮಷ್ಟಿಶರೀರಾಭಿಮಾನಿಯಾದ ಬ್ರಹ್ಮನ ದೆಸೆಯಿಂದ ಉಂಟಾದ
ಈ ಮಹತ್ತತ್ವವೇ ಮೊದಲನೆಯದು. ಆದುದರಿಂದಲೇ ಈಸೃಷ್ಟಿಗೆಪರಬ್ರ
ಹ್ಮಕರ್ತೃಕವೆಂಬ ವ್ಯವಹಾರವು॥೧೫॥ ಇನ್ನುಮುಂದೆ ಭೂತಸೃಷ್ಟಿ ಕ್ರ
ಮವನ್ನು ವಿವರಿಸುವೆನು. ತನ್ಮಾತ್ರಗಳೆಂತಲೂ, ಸೂಕ್ಷ್ಮಭೂತಗಳೆಂ
ತಲೂ ವ್ಯವಹರಿಸಲ್ಪಡುವ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ
ಈ ಐದರಿಂದಲೂ ಉಂಟಾಗುವ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ
ಗಳೆಂಬ ಐದು ಭೂತಗಳ ಸೃಷ್ಟಿಯೇ ಎರಡನೆಯದು. ಜ್ಞಾನೇಂದ್ರಿಯ
ಪಂಚಕ ಮತ್ತು ಕರ್ಮೇಂದ್ರಿಯಪಂಚಕ ಇವುಗಳ ಸೃಷ್ಟಿಯೇ ಮೂರ
ನೆಯದು. ತತ್ತದ್ದೇವತಾ ಸರ್ಗಭೇದ ವಿವಕ್ಷೆಯಿಂದ ಈ ಇಂದ್ರಿಯಸೃ

ರ್ಥಸ್ತು ಮುಖ್ಯಾವೈ ಸ್ಥಾವರಾಸ್ಮೃತಾಃ ॥೨೦॥ ಪಂಚಮಶ್ಚಹಿ
ಯಃ ಪ್ರೋಕ್ತಸ್ತು ತೈರ್ಯಗ್ಯೋನ್ಯಸ್ಸ ಉಚ್ಯತೇ । ತತೋ * ರ್ಧ್ವಾ
ಸ್ರೋತಸಾಂ ಷಷ್ಠೋ ದೇವಸರ್ಗಸ್ತು ಸಂಸ್ಮೃತಃ ॥೨೨॥ ತ
ತೋರ್ವಾಕ್ಸ್ರೋತಸಾಂ ಸರ್ಗಸ್ಸಪ್ತಮಸ್ಸತುಮಾನುಷಃ ॥೨೩॥
ಅಷ್ಟಮೋ ನುಗ್ರಹಸ್ಸರ್ಗ ಸ್ಸಾತ್ವಿಕ ಸ್ತಾಮಸಶ್ಚ ಸಃ।ಪಂಚೈ

ಷ್ಟಗೆ ವೈಕಾರಿಕವೆಂದು ಹೆಸರು ॥೨೦॥ ಈ ಹಿಂದೆ ಹೇಳಿದ ಮೂರು ಸೃಷ್ಟಿಗಳೂ ಅವಿದ್ಯಾಪರಪರ್ಯಾಯವೆನಿಸುವ ಪ್ರಕೃತಿ ಕಾರ್ಯಗಳಾದುದರಿಂದ ಇವುಗಳಿಗೆ ಪ್ರಾಕೃತಸೃಷ್ಟಿ ಎಂಬುದಾಗಿ ವ್ಯವಹಾರವಿರುವುದು. ಅಥವಾ ಬುದ್ಧಿಶಬ್ದವಾಚ್ಯವಾದ ಮಹತ್ತತ್ವವೇ ಇವುಗಳಿಗೆ ಕಾರಣವಾಗಿರುವುದರಿಂದ ಈ ಮೂರು ಸೃಷ್ಟಿಗಳಿಗೂ ಬುದ್ಧಿಪೂರ್ವಕವಾದ ಸೃಷ್ಟಿ ಎಂತಲೂ ವ್ಯವಹಾರವುಂಟು. ಪರ್ವತಾದಿ ಸ್ಥಾವರ ಪದಾರ್ಥಗಳೇ ಮುಖ್ಯವೆಂಬದಾಗಿ ಹಿಂದೆ ಹೇಳಿರುವಪ್ರಕಾರ ಮುಖ್ಯಗಳೆನಿಸುವ ಆ ಸ್ಥಾವರಸೃಷ್ಟಿಯೇ ನಾಲ್ಕನೆಯದು ॥೨೦॥ ಇಪ್ಪತ್ತೆಂಟು ವಿಧವಾದ ವಧ ಸ್ವಭಾವವುಳ್ಳ ಪಶುವೇ ಮೊದಲಾದ ತಿರ್ಯಗ್ಯೋನಿ ಜಂತುಗಳ ಸೃಷ್ಟಿಯೇ ಐದನೆಯದಾಗಿರುವುದು. ಬಳಿಕ ಆಹಾರಾದಿಗಳನ್ನು ತಿನ್ನದೆಯೇ ತದ್ದರ್ಶನಮಾತ್ರದಿಂದಲೇ ತುಷ್ಟರಾಗಿರುವಕಾರಣ ಊರ್ಧ್ವಸ್ರೋತಸ್ಸುಗಳೆಂಬದಾಗಿ ವ್ಯವಹರಿಸಲ್ಪಡುವ ದೇವತಾ ಸೃಷ್ಟಿಯನ್ನು ಆರನೆಯ ಸೃಷ್ಟಿ ಎನ್ನುವರು ॥೨೨॥ ಆಹಾರಾದಿಗಳನ್ನು ತಿಂದು ಅದರಿಂದಲೇ ದೇಹಪನ್ನು ಅಭಿವೃದ್ಧಿಪಡಿಸಿಕೊಳ್ಳುವಕಾರಣ ಅರ್ವಾಕ್ಸ್ರೋತಸ್ಸುಗಳೆಂಬದಾಗಿ ವ್ಯವಹರಿಸಲ್ಪಡುವ ಮನುಷ್ಯರ ಸೃಷ್ಟಿಯು ಏಳನೆಯದು ॥೨೩॥ ಸಾತ್ವಿಕ, ತಾಮಸ ಏತದುಭಯ ಸ್ವಭಾವವುಳ್ಳ ಮತ್ತೊಂದು ದೇವಸೃಷ್ಟಿಯೇ ಎಂಟನೆಯದು. ಇದಕ್ಕೆ ‡ ಅನುಗ್ರಹವೆಂಬದಾಗಿ ಹೆಸರು. ಮುಖ್ಯ ಸರ್ಗವೇ ಮೊದಲಾದ ಈ ಐದು ಸರ್ಗಗಳೂ ವಿಕೃತಿಕಾರ್ಯಗಳಾ

* ತತಊರ್ಧ್ವಾ ಸ್ರೋತಸಾಂ ಎಂದಿರಬೇಕು.

‡ ಅಷ್ಟಮೋನುಗ್ರಹಸ್ಸರ್ಗ ಸ್ಸಚತುರ್ಥಾ ವ್ಯವಸ್ಥಿತಃ ॥ ಇತ್ಯಾದಿ ವಾಯು ಪುರಾಣ ವಚನದಿಂದಲೂ ಆ ಸೃಷ್ಟಿಕರ್ತೃವಾದ ಬ್ರಹ್ಮನ ಸೃಷ್ಟಿಗಳಲ್ಲಿ ಎಂಟನೆ ಸೃಷ್ಟಿಗೆ ಅನುಗ್ರಹಸೃಷ್ಟಿ ಎಂಬುದಾಗಿ ವ್ಯವಹಾರವಿರುವಂತೆ ತೋರುತ್ತೆ.

ತೇ ವೈಕೃತಾಸ್ಸರ್ಗಾಃ ಪ್ರಾಕೃತಾಸ್ತ್ರಯ ಸ್ಸ್ಮೃತಾಃ ॥೨೪॥
ಪ್ರಾಕೃತೋ ವೈಕೃತಶ್ಚೈವ ಕೌಮಾರೋ ನವಮಃ ಸ್ಮೃತಃ ।
ಇತ್ಯೇತೇವೈ ಸಮಾಖ್ಯಾತಾನವಸರ್ಗಾಃ ಪ್ರಜಾಪತೇಃ ॥ ೨೫ ॥
ಪ್ರಾಕೃತಾ ವೈಕೃತಾಶ್ಚೈವ ಜಗತೋ ಮೂಲಹೇತವಃ । ಸೃಜ

ದುದರಿಂದ ಇವುಗಳಿಗೆ ವೈಕೃತಸೃಷ್ಟಿ ಎಂಬದಾಗಿ ರೂಢಿ ಇರುವುದು. ಮಹದಾದಿ ಸೃಷ್ಟಿತ್ರಯಕ್ಕೂ ಪ್ರಾಕೃತಸೃಷ್ಟಿ ಎಂಬದಾಗಿ ಹೆಸರು. ॥೨೪॥ ಬಳಿಕ ವಿತ್ತೊಂದು ವಿಧವಾದ ದೇವಸೃಷ್ಟಿಯುಂಟಾದುದು ಅದರ ಪರಿಎಂತೆಂದರೆ— † ನೀಲಲೋಹಿತ, ರುದ್ರ, ಸನತ್ಕುಮಾರ ಮೊದಲಾದವರ ಸೃಷ್ಟಿಯು ಪ್ರಾಕೃತ ವೈಕೃತ ಏತದುಭಯರೂಪವಾದದ್ದು. ಇದಕ್ಕೆ ಕೌಮಾರ ಸೃಷ್ಟಿ ಎಂದು ಹೆಸರು. ಇದೇ ಒಂಬತ್ತನೆಯ ಸೃಷ್ಟಿಯು. ಅಯ್ಯಾ ಮೈತ್ರೇಯನೆ ! ಇಂತು ಆ ಪರಬ್ರಹ್ಮನಿಂದ ಮಾಡಲ್ಪಟ್ಟ ನವವಿಧ ಸೃಷ್ಟಿಗಳನ್ನೂ ನಿನಗೆ ತಿಳಿಯಪಡಿಸಿದೆನು. ॥೨೫॥ಅಯ್ಯಾ ! ನಾನು ಇಂತು ಇದುವರೆಗೂ ನಿನಗೆ ನಿವರಿಸಿದ ಪ್ರಾಕೃತ, ವೈಕೃತಗಳೆಂಬ ಎರಡು ವಿಧವಾದ ಒಂಬತ್ತು ಸೃಷ್ಟಿಗಳೂ ಜಗತ್ಸೃಷ್ಟಿಯವಾದ ಆ ಚತುರ್ಮುಖನ ಮುಖ್ಯ ಕಾರ್ಯವೆನಿಸಿದ ಈ ಜಗ

† ಪರಬ್ರಹ್ಮನ ವಿಕೃತಿರೂಪನಾದ ಕಾರಣಬ್ರಹ್ಮನಿಂದ ಸೃಷ್ಟಿಸಲ್ಪಟ್ಟಕಾರಣ ಸನತ್ಕುಮಾರಾದಿ ಸೃಷ್ಟಿಯು ವೈಕೃತವೇ ಹೊರತು ಪ್ರಾಕೃತವಲ್ಲ. ರುದ್ರ ಸೃಷ್ಟಿಯಾದರೋ ತಾನಾಗಿಯೇ ಪ್ರಕೃತಿಯಿಂದುದಯಿಸಿರುವಕಾರಣ ಪ್ರಾಕೃತವೇ ಹೊರತು ವೈಕೃತವಲ್ಲ ಎಂಬದಾಗಿ ಕೆಲವರು ನಿಶ್ಚಯಿಸುವರು. ಆದರೆ ,, ಪ್ರಾದುರಾಸೀತ್ಪ್ರಭೋರಂಗೇ ಕುಮಾರೋ ನೀಲಲೋಹಿತಃ ,, ಎಂಬದಾಗಿ ಮುಂದೆ ಹೇಳುವಪ್ರಕಾರ ಇದು ಸರಿಹೋದರೂ ಕೂಡ, ವಸ್ತುತಃ ಸಿದ್ಧಾಂತವಿರುದ್ಧವಾಗಿರುತ್ತದೆ—ಪ್ರಕೃತಿಭೂತನಾದ ರುದ್ರನಿಂದ ಗಣಪತಿ, ಷಣ್ಮುಖ ಮೊದಲಾದ ವಿಕೃತಿಗಳುಂಟಾಗಿರುವಕಾರಣ ರುದ್ರಸೃಷ್ಟಿಯು ಪ್ರಾಕೃತವೇ ಸರಿ. ಸನತ್ಕುಮಾರಾದಿಗಳು ನಿರಂತರವೂ ನೈಷ್ಠಿಕ ಬ್ರಹ್ಮಚರ್ಯವ್ರತಾವಲಂಬಿಗಳಾದುದರಿಂದ ಅವರ ದೆಸೆಯಿಂದ ಯಾವವಿಧವಾದ ಸೃಷ್ಟಿಯೂ ಉಂಟಾಗದಿರುವಕಾರಣ ಅವರ ಸೃಷ್ಟಿಯು ವೈಕೃತವೇ ಎಂಬದಾಗಿ ಶ್ರೀಧರೀಯ ವ್ಯಾಖ್ಯಾನದಲ್ಲಿದೆ. ಪ್ರಳಯಕಾಲದಲ್ಲಿ ರುದ್ರನು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವನೇತಲೂ, ಪುನಃ ಕಲ್ಪಾದಿಯಲ್ಲಿ ನೀಲಲೋಹಿತನನ್ನು ಸೃಷ್ಟಿಮಾಡಿದನೆಂತಲೂ ವಿಷ್ಣುಚಿತ್ತೀಯ ವ್ಯಾಖ್ಯಾನದಲ್ಲಿ ಬರೆದಿದೆ.

ತೋ ಜಗದೀಕಸ್ಯ ಕಿಮನ್ಯಚ್ಛ್ರೋತುಮಿಚ್ಛಸಿ? ॥೨೬॥ವೈತ್ರೇಯಃ । ಸಂಕ್ಷೇಪಾತ್ಕಥಿತಸ್ಸರ್ಗೋದೇವಾದೀನಾಂ ತ್ವಯಾಮುನೇ! ।ವಿಸ್ತರಾಚ್ಛ್ರೋತುಮಿಚ್ಛಾಮಿತ್ವತ್ತೋ ಮುನಿವರೋತ್ತಮ ! ॥೨೭॥ ಶ್ರೀಪರಾಶರಃ॥ ಕರ್ಮಭಿರ್ಭಾವಿತಾಃ ಪೂರ್ವೈಃ ಕುಶಲೈಃ ಕುಶಲಾಸ್ತುತಾಃ । ಖ್ಯಾತ್ಯಾತಯಾಹ್ಯನಿರ್ಮುಕ್ತಾ ಸ್ಸಂಹಾರೇಷ್ವಪಿ ಸಂಹೃತಾಃ ॥೨೮॥ ಸ್ಥಾವರಾಂತಾ ಸ್ಸುರಾದ್ಯಾಶ್ಚ ಪ್ರಜಾಬ್ರಹ್ಮಕೃತ್ । ಚತುರ್ವಿಧಾಃಬ್ರಹ್ಮಣಃ ಕುರ್ವತಸ್ಸೃಷ್ಟಿಂ ಜಜ್ಞೇರೇ ಮಾನಸಾಸ್ತುತಾಃ ॥೨೯॥ ತತೋದೇವಾಸುರ ಪಿತೃರ್ಮ

ತ್ತಿಗೆ ಮೂಲಕಾರಣಗಳೆನಿಸುವವು. ಇವೆಲ್ಲವನ್ನೂ ನಿನಿಗೆ ನಾನು ತಿಳಿಯಪಡಿಸಿದೆನು. ಮತ್ತೇನನ್ನು ಪ್ರಶ್ನೆಮಾಡಲು ಇಚ್ಛಿಸುವಿ ? ಎಂಬದಾಗಿ ಪರಾಶರನು ಪ್ರಶ್ನೆಮಾಡಿದುದಕ್ಕೆ ವೈತ್ರೇಯನು ಹೇಳುತ್ತಾನೆ—॥೨೬॥ ಅಯ್ಯಾ"ಮನನಶೀಲನೆನಿಸಿದ ಪರಾಶರಮುನಿಯೇ! ದೇವತೆಗಳು, ಮನುಷ್ಯರು, ರಾಕ್ಷಸರು ಮೊದಲಾದವರ ಸೃಷ್ಟ್ಯಯನ್ನು ನೀನು ಸಂಕ್ಷೇಪವಾಗಿ ತಿಳಿಸಿರುವಿ. ಮುನಿವರ್ಯನೆನಿಸಿದ ಪರಾಶರಮುನಿಯೆ ! ನಿನ್ನಿಂದ ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಕೇಳಬೇಕೆಂಬ ಇಚ್ಛೆಯು ನನಿಗೆ ಬಹಳವಾಗಿರುವುದು." ಎಂಬ ವೈತ್ರೇಯನ ಪ್ರಾರ್ಥನೆಯಂ ಕೇಳಿ ಪರಾಶರನು ಹೇಳುತ್ತಾನೆ-॥೨೭॥ ಆ ಚತುರ್ಮುಖನ ಶರೀರದಿಂದುಂಟಾದ ಸೃಷ್ಟ್ಯಯನ್ನೇ ನಿನಗೆ ವಿಶದವಾಗಿ ತಿಳಿಸುವೆನು ಕೇಳು. ಬ್ರಹ್ಮನು ಜೀವರಾಶಿಗಳನ್ನುಂಟುಮಾಡತಕ್ಕ ಕಾಲದಲ್ಲಿಯೇ ಅವು ತಮ್ಮತಮ್ಮ ಬಲವತ್ತರವಾದ ಸಂಸ್ಕಾರಗಳಿಂದ ಕೂಡಿ ಆ ಆ ಸಂಸ್ಕಾರಾನುಗುಣವಾಗಿ ಆ ಆ ದೇಹಾದಿಗಳನ್ನು ಪಡೆದು ವ್ಯತಿಹೊಂದಿದಾಗ್ಯೂ ತತ್ತತ್ಕರ್ಮಾನುಸಾರವಾದ ಬುದ್ಧಿವೃತ್ತಿಯಿಂದ ಕೂಡಿ ತತ್ತತ್ಸಂಸ್ಕಾರ ರೂಪದಿಂದಲೇ ಉದಯಿಸಿದುವು ॥೨೮॥ ಅಯ್ಯಾ ಬ್ರಹ್ಮಿಷ್ಠನಾದ ವೈತ್ರೇಯನೆ, ದೇವತೆಗಳು, ಪಿತೃಗಳು, ಮನುಷ್ಯರು, ರಾಕ್ಷಸರೆಂಬ ಈ ನಾಲ್ಕುವಿಧವಾದ ಪ್ರಜೆಗಳೂ ಸ್ಥಾವರಗಳೂ ಕೂಡ ಸೃಷ್ಟ್ಯಮಾಡುತಲಿರುವ ಆ ಬ್ರಹ್ಮನ ದೆಶೆಯಿಂದ ತಾವಾಗಿಯೇ ಉದಯಿಸಿದಕಾರಣ ಇವುಗಳಿಗೆ ಮಾನಸಗಳೆಂಬದಾಗಿ ವ್ಯವಹಾರವುಂಟು. ॥೨೯॥ ಬಳಿಕ ಆ ಚತುರ್ಮುಖನು ಅಂ

ನುಷ್ಯಾಂಶ್ಚ ಯಥಾಕ್ರಮಂ । ಸಿಸೃಕ್ಷು ರಂಭಾಂಸ್ಯೇತಾನಿ ಸ್ವ
ಮಾತ್ಮಾನ ಮಯೂಯುಜತ್ ॥೫೦॥ ಯುಕ್ತಾತ್ಮನಸ್ತಮೋ
ಮಾತ್ರಾ ಹ್ಯುದ್ರಿಕ್ತಾ ಭೂತ್ಪ್ರಜಾಪತೇಃ । ಸಿಸೃಕ್ಷೋರ್ಜ್ಜಘನಾ
ತ್ಪೂರ್ವ ಮಸುರಾ ಜಜ್ಞಿರೇತತಃ॥೫೧॥ಉತ್ಸಸರ್ಜ ತತಸ್ತಾಂತು
ರಜೋಮಾತ್ರಾತ್ಮಿಕಾಂ ತನುಂ । ಸಾತುತ್ಯಕ್ತಾತನುಸ್ತೇನ ಮೈ
ತ್ರೇಯಾಭೂದ್ವಿಭಾವರೀ ॥ ಸಿಸೃಕ್ಷುರನ್ಯ ದೇಹಸ್ಯಃ ಪ್ರೀತಿಮಾ
ಪ ತತಸ್ಸುರಾಃ । ಸತ್ತ್ವೋದ್ರಿಕ್ತಾ ಸ್ವಮುದ್ಭೂತಾಃ ಮುಖತೋ
ಬ್ರಹ್ಮಣೋದ್ವಿಜ! ॥೫೩॥ ತ್ಯಕ್ತಾಸಾಪಿ ತನುಸ್ತೇನ ಸತ್ವಪ್ರಾ
ಯ ಮಭೂದ್ದಿನಂ । ತತೋಹಿಬಲಿನೋ ರಾತ್ರಾ ವಸುರಾ ದೇ
ವತಾದಿವಾ ॥೫೪॥ ಸತ್ವಮೂತಾತ್ಮಿಕಾಮೇವ ತತೋನ್ಯಾಂ

ಛಶಬ್ದ ವಾಚ್ಯರಾದ ದೇವತೆಗಳು, ಮನುಷ್ಯರು, ಪಿತೃಗಳು, ರಾಕ್ಷಸರು ಇವರನ್ನು ಕ್ರಮವಾಗಿ ಸೃಷ್ಟಿಮಾಡಲು, ಇಚ್ಛೆಯುಳ್ಳವನಾಗಿ ತನ್ನ ಮನಸ್ಸನ್ನು ಸಮಾಧಿಯಲ್ಲಿ ಲಯಗೊಳಿಸಿದನು॥೫೦॥ ಇಂತು ಚಿತ್ತೈಕಾಗ್ರತೆಯುಳ್ಳ ಪಡೆದು ಆತನು ಸೃಷ್ಟಿಸಲಿಚ್ಛೆಯುಳ್ಳವನಾಗುತಿರಲು ತಮೋಮಾತ್ರೆಯು ಅಕಸ್ಮಾತ್ತಾಗಿ ಉದ್ರಿಕ್ತವಾಯಿತು. ಬಳಿಕ ಆತನ ಜಘನಪ್ರದೇಶ (ಕಟಿಪುರೋಭಾಗ)ದಿಂದ ರಾಕ್ಷಸರು ಉದಯಿಸಿದರು. ॥೫೧॥ ತರುವಾಯ ಆತನು ತಮೋಗುಣಾಶ್ರಯವಾದ ಈ ದೇಹವನ್ನು ಬಿಡಲಾಗಿ ಅದೇ ರಾತ್ರಿಯಾಗಿ ಪರಿಣಮಿಸಿತು. ಅಂದರೆ ಕತ್ತಲೆಯಂತೆ ಮೋಹಕರವಾದ ತಮೋಗುಣದಲ್ಲಿನ್ನುಕೊಂಡು ಆತನು ರಾಕ್ಷಸರನ್ನು ಉಂಟುಮಾಡಿದನೆಂಬ ಭಾವವು ॥೫೨॥ ಬಳಿಕ ಸತ್ವಗುಣೋಪಾಶ್ರಿತನಾಗಿ ಸಂತೋಷವಂ ಪಡೆದು ಮತ್ತೊಂದು ದೇಹವನ್ನು ಹೊಂದಿದನು. ಆಗ ಸತ್ವಗುಣಪ್ರಧಾನರಾದ ದೇವತೆಗಳು ಆತನ ಮುಖದಿಂದ ಜನಿಸಿದರು. ॥೫೩॥ ಆ ದೇಹವನ್ನೂ ಆತನು ಬಿಟ್ಟುಬಿಡಲು ಸತ್ವಗುಣದಂತೆ ಪ್ರಕಾಶಮಾನವಾದ ಹಗಲು ಉಂಟಾಯಿತು. ರಾತ್ರಿಕಾಲದಲ್ಲಿ ರಾಕ್ಷಸರು ಉಂಟುಮಾಡಲ್ಪಟ್ಟ ಕಾರಣ ಅವರು ರಾತ್ರಿಕಾಲದಲ್ಲಿ ಬಲಿಷ್ಠರೆನಿಸುವರು. ಅಂತೆಯೇ ದೇವತೆಗಳು ಹಗಲಿನಲ್ಲಿ ಬಲಶಾಲಿಗಳೆನಿಸುವರು॥೫೪

ಜಗೃಹೇತನುಂ । ಪಿತೃವನ್ನಾನ್ಯ ಮೂನಸ್ಯ ಪಿತರಸ್ತಸ್ಯ ಜಜ್ಞಿರೇ ॥೩೨॥ ಉತ್ಸಸರ್ಜ ಪಿತೄಂಸ್ತೃಷ್ಟ್ವಾತತಸ್ತಾಮು ಪಿ ಸಪ್ರಭುಃ । ಸಾಜೋತ್ಸೃಷ್ಟಾ ಭವತ್ಸಂಧ್ಯಾ ದಿನನಕ್ತಾಂತರಸ್ಥಿತಿಃ ॥೩೩॥ ರಜೋಮಾತಾತ್ಮಿಕಾ ಮನ್ಯಾಂ ಜಗೃಹೇ ಸತನುಂ ತತಃ । ರಜೋಮಾತ್ರೋತ್ಕಟಾಜಾತಾ ಮನುಷ್ಯಾ ದ್ವಿಜಸತ್ತಮ ! ॥೩೪॥ ತಾಮಪ್ಯಾಶು ಸತತ್ಯಾಜ ತನುಂಸದ್ಯಃ ಪ್ರಜಾಪತಿಃ।ಜ್ಯೋತ್ಸಾಸಮಭವಚ್ಚಾಪಿ ಪ್ರಾಕ್ಸಂಧ್ಯಾ ಯಾಭಿಧೀಯತೇ॥

ಆ ಬಳಿಕ ಆ ಚತುರ್ಮುಖನು ಶುದ್ಧಸತ್ವಪ್ರಧಾನವಾದ ಮತ್ತೊಂದು ದೇಹವನ್ನವಲಂಬಿಸಿ ಸಕಲ ಜಗತ್ತಿಗೂ ತನ್ನನ್ನು ತಂದೆಯಂತೆ ಭಾವಿಸಿದನು. ಇಂತು ತಂದೆಯೆಂಬ ಭಾವನೆಯುಳ್ಳ ಆತನಿಂದ ಪಿತೃದೇವತೆಗಳು ಜನಿಸಿದರು ॥೩೫॥ ಇಂತು ಪಿತೃದೇವತೆಗಳನ್ನು ಸೃಷ್ಟಿಸಿವಾಡಿದ ಬಳಿಕ ಆತನು ಈ ದೇಹವನ್ನೂ ಪರಿತ್ಯಜಿಸಿದನು. ಇಂತು ಆತನಿಂದ ಬಿಡಲ್ಪಟ್ಟ ಈ ದೇಹವು ಹಗಲು-ರಾತ್ರಿಗಳ ಸಂಧಿಕಾಲವೆನಿಸಿದ ಸಾಯಂಸಂಧ್ಯೆಯಾಯಿತು. ಅಂದರೆ ಆತನು ಸಾಯಂಸಂಧ್ಯಾಕಾಲದಲ್ಲಿ ಪಿತೃದೇವತೆಗಳನ್ನು ಸೃಷ್ಟಿಸಿವಾಡಿದನೆಂಬದಾಗಿ ಭಾವವು ॥೩೬॥ ತರುವಾಯ ಷಡ್ಗುಣೈಶ್ವರ್ಯಸಂಪನ್ನನೂ, ಮಹಾಮಹಿಮಶಾಲಿಯೂ ಎನಿಸಿದ ಆ ಚತುರ್ಮುಖನು ರಜೋಮಯವೆನಿಸಿದ ಮತ್ತೊಂದು ದೇಹವನ್ನು ಕೂಡಲೇ ಅವಲಂಬಿಸಿದನು. ಅಯ್ಯಾ ದ್ವಿಜವರ್ಯನೆನಿಸಿದ ಮೈತ್ರೇಯನೆ ! ಇಂತು ರಜೋಮಯವಾದ ಶರೀರವಂ ಆತನು ಧರಿಸಲು ಮನುಷ್ಯರು ಉದಯಿಸಿದರು, ಇವರಿಗೆ ಸತ್ವಾದಿಗುಣತ್ರಯವು ಸಮವಾಗಿದ್ದರೂ ಅವುಗಳಲ್ಲಿ ರಜೋಗುಣಕಾರ್ಯವೇ ಇವರಿಂದ ಬಹಳವಾಗಿ ಮಾಡಲ್ಪಡುವಕಾರಣ ಇವರಿಗೆ ರಜೋಗುಣವೇ ಮೂಲಕಾರಣವು ॥೩೭॥ ಇಂತು ಮನುಷ್ಯರನ್ನು ಸೃಷ್ಟಿಸಿವಾಡತಕ್ಕ ಕಾಲದಲ್ಲಿ ಧರಿಸಿದ್ದ ರಜೋಗುಣಮಯವಾದ ಆ ಶರೀರವನ್ನೂ ಕೂಡ ಆಪ್ರಜಾಸ್ರಷ್ಟೃವಾದ ಬ್ರಹ್ಮನು ಪರಿತ್ಯಜಿಸಿದನು. ಆಗ ದಿವ್ಯವಾದ ಬೆಳದಿಂಗಳುಂಟಾಯಿತು. ರಾತ್ರಿಯು-ಹಗಲು ಪ್ರಾರಂಭವಾಗುವ ಸಂಧಿಕಾಲ ರೂಪವಾದ (ಉಷಃಕಾಲವೆನಿಸುವ) ಪ್ರಾತಸ್ಸಂಧ್ಯೆ ಅಥವಾ ಮೊದಲನೆಯ ಸಂಧ್ಯೆಯು ಉಂಟಾಯಿತು. (ಇದರಿಂದ ಆ ಬ್ರಹ್ಮನು

ಜ್ಯೋತಸ್ಸ್ನಗಮೇತು ಬಲಿನೋ ಮನುಷ್ಯಾ: ಪಿತರಸ್ತಥಾ। ಮೈತ್ರೇಯ। ಸಂಧ್ಯಾಸಮಯೇ ತಸ್ಮಾದೇತೇ ಭವಂತಿವೈ ॥ ೪೯ ॥
ಜ್ಯೋತಸ್ಸ್ನರಾತ್ರ್ಯಹನೀ ಸಂಧ್ಯಾಚತಸ್ರ್ಯೇತಾನಿ ವೈವಿಭೋಃ
ಬ್ರಹ್ಮಣಸ್ತು ಶರೀರಾಣಿ * ತ್ರಿಗುಣೋಪಾಶ್ರಯಾಣಿತು ॥ ೫೦ ॥

ಮನುಷ್ಯರನ್ನು ಉಷಃಕಾಲದಲ್ಲಿ ಸೃಷ್ಟಿಮಾಡಿದನೆಂಬದಾಗಿ ಭಾವವು) ಅಂದರೆ ಯಾರುಯಾರು ಯಾವಯಾವ ಕಾಲದಲ್ಲಿ ಹುಟ್ಟಿದರೋ ಅವರಿಗೆ ಆದೇಕಾಲವೇ ಬಲಕರವಾದದ್ದು. ತತ್ತದುದ್ದೇಶೇನ ಮಾಡತಕ್ಕ ತತ್ತದ್ದೇವತಾಕಗಳಾದ ಕಾರ್ಯಗಳೆಲ್ಲವನ್ನೂ ತತ್ತಜ್ಜನನಕಾಲದಲ್ಲಿಯೇ ಮಾಡಬೇಕೆಂಬದಾಗಿ ತಿಳಿಯಬರುತ್ತದೆ. ॥೪೯॥ ಇದರಿಂದ ಮನುಷ್ಯರು ಬೆಳದಿಂಗಳಿನಲ್ಲಿ ಅಂದರೆ ಪ್ರಾತಸ್ಸಂಧ್ಯಾಕಾಲದಲ್ಲಿ ಬಲಶಾಲಿಗಳೆನಿಸುವರು. ಅಂತೆಯೇ ಪಿತೃಗಳೂ ತಮ್ಮ ಜನನಕಾಲವಾದ ಸಾಯಂಸಂಧ್ಯಾಸಮಯದಲ್ಲಿ ಬಲಶಾಲಿಗಳೆನಿಸುವರು ಇಲ್ಲಿ ಪಿತೃಗಳನ್ನು ಸಾಯಂಕಾಲದಲ್ಲಿ ಸೃಷ್ಟಿಸಿದನೆಂದು ತೋರುತ್ತದೆ ಆದರೆ ಶ್ರು॥ " ಅಪರಾಹ್ಣಃ ಪಿತೃಣಾಂ " ಎಂಬ ಶ್ರುತಿಯಲ್ಲಿ ಪಿತೃಗಳಿಗೆ ಮಧ್ಯಾನ್ಹಾನಂತರ ಸಾಯಂಕಾಲದೊಳಗಾಗಿ ಪೂಜೆಮಾಡಬೇಕಾಗಿ ತಿಳಿಯಬರುತ್ತೆ. ಹೀಗಿರಲು ಸಾಯಂಸಂಧ್ಯಾಕಾಲದಲ್ಲಿ ಅವರು ಜನಿಸಿದರೆಂದು ಹೇಳುವುದು ಎಂತು? ಎಂದು ಆಕ್ಷೇಪಿಸಿದಲ್ಲಿ ' ಸಾಯಂ ' ಎಂಬ ಶಬ್ದಕ್ಕೆ ಸಂದ್ಯೆಗೆ ಸನ್ನಿಹಿತವಾದ ಕಾಲವೆಂದರ್ಥ. ಇದರಿಂದ ಅಪರಾಹ್ಣವೆಂಬ ಅರ್ಥವು ಸಿದ್ಧಿಸುವುದು ॥೪೯॥

ಆಯ್ಯಾ ಮೈತ್ರೇಯನೆ! ಮನುಷ್ಯರನ್ನುಂಟುಮಾಡತಕ್ಕ ಕಾಲದಲ್ಲಿ ಧರಿಸಿದ್ದ ಸಾತ್ವಿಕ ಶರೀರವೂ, ರಾಹ್ಷಸರನ್ನುಂಟುಮಾಡಿದ ಕಾಲದಲ್ಲಿ ಧರಿಸಿದ್ದ ತಾಮಸ ಶರೀರವೂ, ದೇವತೆಗಳ ಮತ್ತು ಪಿತೃಗಳ ಸೃಷ್ಟಿಕಾಲದಲ್ಲಿ ಧರಿಸಿದ್ದ ಶುದ್ಧಸಾತ್ವಿಕ ದೇಹವೂ, ಈ ನಾಲ್ಕು ಶರೀರಗಳೂ ಸರ್ವಾಂತರ್ಯಾಮಿ ಎನಿಸಿದ ಆ ಪರಮಾತ್ಮನ ಲೀಲಾವಿಭೂತಿಗಳು. ಇದರಿಂದ ಉಪಾಸಕರು ತನ್ನನ್ನು ಉಪಾಸನೆಮಾಡತಕ್ಕ ವಿಷಯದಲ್ಲಿ ಯಾವಯಾವ ಗುಣವುಳ್ಳವನ್ನಾಗಿ ಉಪಾಸನೆಮಾಡಿದರೆ ಆ ಆ ವಿಧವಾದ

* ೪೯ನೆಯ ಪುಟದ ಮೊದಲನೆಯ ಟಿಪ್ಪಣಿಯನ್ನು ನೋಡಿರಿ

ರಜೋಮಾತ್ರಾತ್ಮಕಾಮೇವ ತತೋ ಽನ್ಯಾಂಜಗೃಹೇ ತನುಂ ।
ತತಃ ಕ್ಷುದ್ಬ್ರಹ್ಮಣೋ ಜಾತಾ ಜಜ್ಞೇಕೋಪಿ ಸ್ತಯಾ ತತಃ
॥೪೧॥ ಕ್ಷುತ್ಕ್ಷಾಮಾ ನಂಧಕಾರೇಽಥ ಸೋಽಸೃಜದ್ಭಗವಾ ಪ್ರ
ಭುಃ । ವಿರೂಪಾಶ್ಚಶ್ಮಶ್ರುಲಾಜಾತಾ ಸ್ತೇ ಭ್ಯಧಾವಂ ಸ್ತತಃ ಪ್ರ
ಭುಂ ॥೪೨॥ ಮೈವಂಭೋ ರಕ್ಷ್ಯತಾಮೇಷ ಯೈರುಕ್ತಂ ರಾಕ್ಷ
ಸಾಸ್ತುತೇ । ಊಚು ರ್ಜಕ್ಷಾಮ ಇತ್ಯನ್ಯೇ ಯೇತೇ ಯಕ್ಷಾ
ಸ್ತು * ಜಕ್ಷಣಾತ್ ॥೪೩॥ ಅಪ್ರಿಯೇಣ ತು ತಾ೯ ದೃಷ್ಟ್ವಾ

ಜ್ಞಾನವನ್ನೇ ಆತನುಅವರಿಗೆಉಂಟುಮಾಡತಕ್ಕವನೆಂಬದಾಗಿ ಭಾವವು॥೪೦ ಬಳಿಕ ಆ ಬ್ರಹ್ಮನು ಶುದ್ಧರಜಸ್ವರೂಪವೆನಿಸಿದ ಮತ್ತೊಂದು ದೇಹವನ್ನು ಧರಿಸಲು ಆತನಿಗೆ ಆ ದೇಹವನ್ನು ಧರಿಸುವಿಕೆಯಿಂದ ವಿಶೇಷವಾದ ಹಸಿವು ಉಂಟಾದುದು. ಈ ಹಸಿವೆಯಿಂದ ಆತನಿಗೆ ಬಲವಾದ ಕೋಪವೂ ಉಂಟಾಯಿತು ॥೪೧॥ ಅನಂತರದಲ್ಲಿ ಷಡ್ಗುಣೈಶ್ವರ್ಯಸಂಪನ್ನನಾದ ಆ ಪರಮಾತ್ಮನು ಅಂಧಕಾರದಲ್ಲಿದ್ದುಕೊಂಡು ಪ್ರಜೆಗಳನ್ನು ಸೃಷ್ಟಿಮಾಡಿದನು. ಇದರಿಂದ ಅವರು ವಿಕಾರರೂಪವಂ ಧರಿಸಿ (ವಿಾಶೆ) ಶ್ಮಶ್ರುಗಳುಳ್ಳವರಾಗಿ ಘೋರವಾಗಿ ಕಾಣುವಂತೆ ಆ ಪರಮಾತ್ಮಸ್ವರೂಪನಾದ ಬ್ರಹ್ಮನನ್ನೇ ತಿನ್ನಬೇಕೆಂದು ಆತನನ್ನು ಅಟ್ಟಕೊಂಡುಹೋದರು. ॥೪೨॥ ಆ ಕಾಲದಲ್ಲಿ " ಅಯ್ಯಾ ! ಆತನನ್ನು ತಿನ್ನಬಾರದು. ಆತನನ್ನು ಬಿಟ್ಟುಬಿಡಿರಿ. ಸರ್ವಥಾ ನಾವು ಆತನ ಗೋಜಿಗೆ ಹೋಗಬಾರದು " ಎಂಬದಾಗಿ ಯಾರಾದರೆ ನಿಷೇಧಮಾಡಿದರೋ ಅವರೇ ರಾಕ್ಷಸರೆನಿಸುವರು. " ಸರ್ವಥಾ ನಾವು ಆತನನ್ನು ಬಿಡುವುದಿಲ್ಲ. ತಿನ್ನುವುದೇ ಸರಿ ", ಎಂಬದಾಗಿ ಯಾರಾದರೆ ಆತನನ್ನು ಹಿಂದಟ್ಟಿಕೊಂಡು ಹೋದರೋ ಅವ

* ಜಕ್ಷ ಭಕ್ಷ ಹಸನಯೋಃ, ಎಂಬ ಧಾತು ಪಾರವನ್ನು ಅನುಸರಿಸಿ ಜಕ್ಷ ಧಾತುವಿಗೆ ತಿನ್ನುವಿಕೆ ಅಥವಾ ನಗುವಿಕೆ ಎಂಬದಾಗಿ ಅರ್ಥವಾಗುತ್ತೆ ಅದನ್ನು ಮಾಡುವರು ಜಕ್ಷರು. ಆದುದರಿಂದ ಜಕ್ಷಾ ಎಂಬುದಕ್ಕೆ ಯಕ್ಷಾಃ ಎಂದು ಪಾರವಿಧಿ. ಇಂತು ಹೇಳಕೂಡದೆಂದು ಆಕ್ಷೇಪಿಸಿದರೆ ದೇವತೆಗಳನ್ನು ಪ್ರತ್ಯಕ್ಷವೆಂದರೆ ಲೋಕರೂಢವಾದ ನಾಮವನ್ನು ಪರಿತ್ಯಜಿಸಿ ಪರೋಕ್ಷವಾದ ನಾಮದಿಂದ ಕೂಗಿದಲ್ಲಿ ಅವರಿಗೆ ಬಹಳಸಂತೋಷವೆಂಬದಾಗಿ ' ಪರೋಕ್ಷ ಪ್ರಿಯಾ ಇವಹಿದೇವಾಃ, ಎಂಬ ಶ್ರುತಿಯಿಂದ ತಿಳಿದು ಬರುತ್ತೆ ಇದಿಂದ್ರನೆಂಬುವನನ್ನು ಇಂದ್ರನೆಂದು ಕರೆಯುವಿಕೆಯೂ ಹೀಗೆಯೇ.

ಕೇಽಪಿ ಶೀರ್ಯಂತ ವೇಧಸಃ । ಹೀನಾಶ್ಚ ಶಿರಸೋ ಭೂಯಸ್ಸಮಾ
ರೋಹಂತ ತಚ್ಛಿರಃ ॥೪೪॥ ಸರ್ಪಣಾತ್ತೇZಭವ[ಸರ್ಪಾ] ಹೀನತ್ವಾ
ದಹಯ ಸ್ಮೃತಾಃ ॥ ತತಃಕ್ರುದ್ಧೋ ಜಗತ್ಸ್ರಷ್ಟಾ ಕ್ರೋಧಾ
ತ್ಮಾನೋ ವಿನಿರ್ಮಮೇ ॥ ೪೫ ॥ ವರ್ಣೈರ್ಹೀನ ಕಪಿ ಶೇನೋ
ಗಾಶ್ಚ ಭೂತಾಸ್ತೇ ಪಿಶಿತಾಶನಾಃ ॥೪೬॥ ಧ್ಯಾಯತೋಽಂ ಗಾತ್ಸ
ಮುತ್ಪನ್ನಾ ಗಂಧರ್ವಾ ಸ್ತಸ್ಯ ತತ್ಕ್ಷಣಾತ್ । ಪಿಬಂತೋ

ರೇ ಯಕ್ಷರು. ತಿನ್ನುವುದೇ ಸ್ವಭಾವವಾಗಿರುವಕಾರಣ ಇವರಿಗೆ ಯ
ಕ್ಷರೆಂಬ ಹೆಸರು ಬಂದಿತು. ॥೪೫॥ ಇಂತು ತನ್ನನ್ನೇ ತಿನ್ನುವುದಕ್ಕೆ ಪ್ರ
ಯತ್ನಪಟ್ಟ ಆ ಯಕ್ಷರನ್ನು ಕಂಡು ಆತನಿಗೆ ಇವರಲ್ಲಿ ಪ್ರೀತಿಯು ತಪ್ಪಿ
ಹೋಯಿತು.ಆಗ ಆತನ ತಲೆಗೂದಲು ಉದುರಿಹೋಗಿಬಳಿಕಅದಾಗಿಯೇ
ತಲೆಯಮೇಲಕ್ಕೆ ಬಂದು ಸೇರಿದವು ॥೪೫॥ ಇಂತು ಕೆಳಗೆ ಉದುರಿ ಬಿ
ದ್ದು ಪುನಃ ಮೇಲಕ್ಕೆಹೋಗಿ ತಮ್ಮ ಸ್ಥಾನವನ್ನೇ ಹೊಂದಿದ ಈ ಕೂದ
ಲುಗಳಿಂದ ಹಾವುಗಳು ಉಂಟಾದವು ಇವುಗಳು ತಮ್ಮ ಸ್ಥಾನದಿಂದ
ಕೆಳಗೆಬಿದ್ದು ಪುನಃ ತಾವಾಗಿಯೇ ಮೇಲಕ್ಕೆ ಜರುಗಿಹೋದಕಾರಣ
ಇವುಗಳಿಗೆ ' ಸರ್ಪ ' ಗಳೆಂತಲೂ, ತಾವಾಗಿ ಇಳಿಬಿದ್ದಕಾರಣ (ಹೀನಗ
ಳಾಗಿರುವಿಕೆಯಿಂದ) ' ಅಹಿ ' ಗಳೆಂತಲೂ ಹೆಸರು ಬಂದಿತು. ಬಳಿಕ
ಜಗತ್ಸ್ರಷ್ಟೃವಾದ ಆ ಪರಮಾತ್ಮನು ಕೋಪಗೊಂಡವನಾಗಿ ರಾಕ್ಷಸರ
ನ್ನು ಅತ್ಯಂತ ಕೋಪವುಳ್ಳವರನ್ನಾಗಿ ಮಾಡಿದನು. ಆ ಕಾಲ ಮೊದಲು
ಅವರು ಹೊಂಬಣ್ಣವಾದ ದೇಹಕಾಂತಿಯುಳ್ಳವರೂ, ಅತ್ಯಂತ ಕ್ರೋಧ
ನರೂ ಮತ್ತು ಮಾಂಸಾಹಾರಿಗಳೂ ಆದರು ॥೪೫॥ ಎರಡನೆಯ ಕ್ಷಣದ
ಲ್ಲಿಯೇ ಆತನು ಮುಂಚಿನಂತೆಯೇ ಚಿತ್ತಸ್ವಾಸ್ಥ್ಯವಂ ಪಡೆಯಲು ಆತನ
ಅಂಗಗಳಿಂದ ಗಂಧರ್ವರುಉದಯಿಸಿದರು.(ಗಾಂ ಧಯಂತೀತಿ ಗಂಧರ್ವಾಃ)
ಎಂದರೆ ಗೋ ಶಬ್ದಕ್ಕೆ ಮಾತು ಎಂದರ್ಥ. ಇದರಿಂದ ಆ ಗಂಧರ್ವರು
ತಮ್ಮ ಉದಯಕಾಲದಲ್ಲಿಯೇ ಗಾನಮಾಡುತ್ತ ಉದಯಿಸಿರುವಕಾರಣ
ಅವರಿಗೆ ಗಂಧರ್ವರೆಂಬದಾಗಿ ಹೆಸರು ಬಂದಿತು ॥೪೬॥ ಇಂತು ಆ ಪರ
ಮಾತ್ಮನು ಈ ಹಿಂದೆ ಹೇಳಿದವುಗಳನ್ನೆಲ್ಲಾ ಆ ಆ ಪ್ರಾಣಿಗಳ ಮನೋ
ವೃತ್ತಿ ಮತ್ತು ಕರ್ಮವಾಸನಾನುಸಾರವಾಗಿ ಆ ಆ ಕರ್ಮವಾಸನಾ ಪ್ರೇರಿ

ಜಜ್ಞೇರೇ ಗಾಂವೈ ಗಂಧರ್ವಾ ಸ್ತೇನ ತೇ ದ್ವಿಜ ! ॥೪೭॥ ಏತಾನಿ ಸೃಷ್ಟ್ವಾ ಭಗವಾ೯ ಬ್ರಹ್ಮಾ ತಚ್ಛಕ್ತಿ ಚೋದಿತಃ । ತತಃ ಸ್ವ ಚ್ಛಂದ ತೋ ನ್ಯಾನಿ ವಯಾಂಸಿ ವಯಸೋ ಸೃಜತ್ ॥೪೮॥ ಅವಯೋ *ವಕ್ಷಸ ಶ್ಚಕ್ರೇ ಮುಖತೋ* ಜಾಸ್ಸ ಸೃಷ್ಟ್ವವಾ೯ । ಸೃಷ್ಟ್ವಾ ನುದರಾ ದ್ಗಾಚ್ಚ ಪಾರ್ಶ್ವಾ ಭ್ಯಾಂಚ ಪ್ರಜಾಪತಿಃ ॥ ॥೪೯॥ ಪದ್ಭಾ೦ ಚಾಶ್ವಾ೯ ಸ ಮಾತಂಗಾ೯ ರಾಸಭಾ೯ ಗವ ಯಾ೯ ಮೃಗಾ೯ । ಉಷ್ಟ್ರಾನ ಶ್ವತರಾಂಶ್ಚೈವನ್ಯಂಕೂನನ್ಯಾ ಶ್ಚ ಜಾತಯಃ ॥೫೦॥ ಓಷಧ್ಯಃ ಫಲ ಮೂಲಿನ್ಯೋ ಲೋಮಭ್ಯ

ತನಾಗಿ ಅವುಗಳನ್ನುಂಟುಮಾಡಿ, ತನ್ನ ದೇಹಾವಸ್ಥಾವಿಶೇಷಾನುಗುಣ ವಾಗಿ ಆ ಆ ಪಕ್ಷಿಗಳನ್ನು ಉಂಟುಮಾಡಿದನು ॥೪೭॥ ಬಳಿಕ ಆತನ ವ ಕ್ಷಸ್ಥಲದಿಂದ ಕುರಿಗಳೂ, ಮುಖದಿಂದ ಮೇಕೆಗಳೂ, ಹೊಟ್ಟೆ ಮತ್ತು ಪಾರ್ಶ್ವಗಳಿಂದ ಗೋವುಗಳೂ ಉದಯಿಸಿದುವು ॥೪೮॥ ತರುವಾಯ ಆತನು ತನ್ನ ಕಾಲುಗಳಿಂದ ಕುದುರೆ, ಆನೆ, ಕತ್ತೆ, ಗವಯನೆಂಬ ಕಾ ಡುಮೃಗ, ಒಂಟೆ, ಹೇಸರಕತ್ತೆ, ಜಿಂಕೆ, ದುಪ್ಪ. ಮೊದಲಾದ ತಿರ್ಯಕ್ ಜಾತಿಗೆ ಸೇರಿದ ಮೃಗಗಳನ್ನು ಸೃಷ್ಟಿಸಿದನು ॥೪೯॥ ಓಷಧಿಗಳು, ಲತೆ ಗಳು,ಫಲವೃಕ್ಷಗಳು,ಬೇರುಗಳೇಪ್ರಧಾನವಾಗಿರುವ ಗಡ್ಡೆಗಣಸು ಮೊದ ಲಾದುವು ಆತನ ಮೈಗೂದುಲು (ರೋಮ) ಗಳಿಂದುಂಟಾದುವು ಇಂ ತು ಆತನು ಕಲ್ಪಾದಿಯಲ್ಲಿಯೇ ಪಶು, ಪಕ್ಷಿ, ಮೃಗ, ಓಷಧಿ ಮೊದಲಾ ದುವುಗಳನ್ನು ಉಂಟುಮಾಡಿದ್ದರೂ, ಕೃತಯುಗದಲ್ಲಿ ಯಜ್ಞ, ಯಾಗಾ ದಿಗಳ ಪ್ರಸಕ್ತಿಯೇ ಇಲ್ಲದಿರುವಕಾರಣ, ಕೃತಯುಗವು ಕಳೆದು ತ್ರೇ ತಾಯುಗವು ಪ್ರಾರಂಭವಾದಕೂಡಲೇ ಆ ತ್ರೇತಾಯುಗದ ಆದಿಭಾ ಗದಲ್ಲಿ ಇವು ಗ್ರಾಮ್ಯಗಳು (ಗ್ರಾಮವಾಸಕ್ಕೆ ತಕ್ಕುವು) ಇವುಗಳು ಆರ ಣ್ಯಕಗಳು (ಅರಣ್ಯವಾಸಕ್ಕೆ ತಕ್ಕುವು)ಇಂತಹ ಯಜ್ಞಾಗಳಲ್ಲಿ ಇಂತಹ ವುಗಳನ್ನು ಉಪಯೋಗಿಸಬೇಕು ಇವುಗಳನ್ನು ಉಪಯೋಗಿಸಕೂ ಡದು ಎಂಬದಾಗಿ ವ್ಯವಸ್ಥೆಮಾಡಿ ಯಜ್ಞಾಕರ್ಮಗಳನ್ನು ನೇರವೇರ್ರ ವಂತೆ ಮಾಡಿದನು ॥೫೦॥ ಅಯ್ಯಾ ಮೈತ್ರೇಯನೆ ! ಇಂತು ಆ ಪರಮಾ

* ಈ ಶ್ಲೋಕದ ಅರ್ಧ, ಅರ್ಜ, ಎಂಬಪದಾಗಿ ದ್ವಿತೀಯಾ ವಿಭಕ್ತಿಗೆ ಬದಲಾಗಿ ಪ್ರಥಮಾ ವಿಭಕ್ತಿ ಇರುವುದು ಅವುಗಳನ್ನು ದ್ವಿತೀಯಾಂತಗಳಂತೆ ಭಾವಿಸಬೇಕು

ಸ್ತ್ಯೇಜಪ್ಲೋರೇ ॥ ತ್ರೇತಾಯುಗ ಮುಖೇ ಬ್ರಹ್ಮಾ ಕಲ್ಪಸ್ಯಾದೌ ದ್ವಿಜೋತ್ತಮ ! ॥ ಸೃಷ್ಟ್ವಾ ಪಶೋ್ವೌಷಧೀ ಸ್ಸನ್ಯೋ ಗ್ಯಯೋಜ ಸತಧಾಧ್ವರೇ ॥೫॥ ಗೌರಜಃ ಪುರುಷೋನೋಷ ಶ್ಚಾಶ್ವತರ ಗರ್ದಭಾಃ । ಏತಾ ಗ್ರಾಮ್ಯಾಃ ಪಶೂನಾಹು ರಾರಣ್ಯಾಂಶ್ಚ ನಿಬೋಧಮೇ ॥೫॥ ಶ್ವಾಪದಾ ದ್ವಿಖುರಾ ಹಸ್ತಿವಾನರಾಃ ಪಕ್ಷಿ ಪಂಚಮಾಃ । ದಿದಕಾಃ ಪಶವ ಪ್ಪಷ್ಠಾ ಸ್ಸಪ್ತಮಾ ಸ್ತು ಸರೀಸೃಪಾಃ॥೫॥ಗಾಯತ್ರಂಚ ಮುಚಚ್ಚೈವ ತ್ರಿವೃತೊ್ಸ್ತೋಮ ರಥಂತರಂ । ಅಗ್ನಿಷ್ಟೋಮಂಚ ಯಜ್ಞಾನಾಂ ನಿರ್ಮಮೇ ಪು

ತ್ಮನು ನಾನಾವಿಧ ಜೀವರಾಶಿಗಳನ್ನುಂಟುಮಾಡಿದಬಳಿಕ ಅವುಗಳಲ್ಲಿ ಗ್ರಾಮ್ಯಾರಣ್ಯ ವಿಭಾಗವನುಮಾಡಿದ ಪ್ರಕಾರವನು ತಿಳಿಸುವೆನು ಅದೆಂತೆಂದರೆ—ಆಕಳು ಅಥವ ಎತ್ತುಗಳು, ಮೇಕೆ, ಮನುಷ್ಯ, ಕುರಿ, ಕುದುರೆ, ಹೇಸರಕತ್ತೆ, ಕತ್ತೆ ಇವುಗಳನ್ನು, ಗ್ರಾಮದಲ್ಲಿದ್ದುಕೊಂಡು ಗ್ರಾಮವಾಸಕ್ಕೆ ಅರ್ಹರಾಗಿರುವ ಪ್ರಾಣಿಗಳನ್ನಾಗಿ ತಿಳಿ ಅರಣ್ಯವಾಸಕ್ಕೆ ಯೋಗ್ಯವಾದ ಪ್ರಾಣಿವರ್ಗವನ್ನು ಹೇಳುವೆನು—ಹುಲಿ, ಚಿರತೆ ಮೊದಲಾದ ಕ್ರೂರಜಂತುಗಳು, ಜಿಂಕೆ ಮೊದಲಾದ ಎರಡು ಗೊರಸುಳ್ಳ ಪ್ರಾಣಿಗಳು, ಆನೆಗಳು, ಮಂಗಗಳು, ಪಕ್ಷಿಗಳು, ಜಲದಲ್ಲಿ ವಾಸಮಾಡುವ ಆಮೆ, ಮೊಸಳೆ ಮೊದಲಾದುವು, ಕಾತುಹಸುಗಳು, ಸರ್ಪಗಳು, ಉಡಹಲ್ಲಿ, ಮೊದಲಾದವು ಅರಣ್ಯವಾಸಿಗಳೆನಿಸುವವು ॥೫॥ ಬಳಿಕ ಸೃಷ್ಟಿಕರ್ತೃವಾದ ಆ ಚತುರ್ಮುಖನ ನಾಲ್ಕು ಮುಖಗಳಿಂದಲೂ ಕ್ರಮವಾಗಿ ಋಕ್ಕುಯಾವುವು ಉದಯಿಸಿದುದಂದರೆ—ಚತನ ಪೂರ್ವಾಭಿಮುಖವಾದ ಮುಖದಿಂದ ಛಂದಸ್ಸುಗಳಲ್ಲಿ ಗಾಯತ್ರೀ ಛಂದಸ್ಸು, ವೇದಗಳಲ್ಲಿ ಋಗ್ವೇದವೂ, ಸ್ತೋತ್ರಸಾಧನಗಳಿಸುವ ಯಜ್ಞಾಂತ್ರವಿಶೇಷಗಳಲ್ಲಿ ತ್ರಿವೃತ್ತೋಮವೆಂಬ ಮಂತ್ರಸಮುದಾಯವೂ, ರಥಂತರವೆಂಬ ಸಾಮವಿಶೇಷವೂ,ಅಗ್ನಿಷ್ಟೋಮವೆಂಬ ಸೋಮಯಾಗ ಸಂಸ್ಥಾವಿಶೇಷವೂ ಇವುಗಳು ಉಂಟಾದುವು ॥೫॥ ತರುವಾಯ ಆತನು ತನ್ನ ದಕ್ಷಿಣಾಭಿಮುಖವಾದ ಮುಖದಿಂದ ಯಜುರ್ವೇದವನ್ನು, ತ್ರೈಷ್ಟುಭ ಛಂದಸ್ಸನ್ನು, ಪಂಚದಶಸ್ತೋಮವೆಂಬ ದೇವತಾಸ್ತೋತ್ರಸಾಧನವಾದ ಯಜ್ಞಾಂತ್ರ

ಥಮಾನ್ಮುಖಾತ್ ॥೫೪॥ ಯಜೂಂಷಿ ತ್ರೈಷ್ಟುಭಂ ಛಂದಸ್ತೋ
ಮಂ ಪಂಚದಶಂ ತಥಾ । ಬೃಹತ್ಸಾಮ ತಥೋಕ್ಥ್ಯಂಚ ದಕ್ಷಿ
ಣಾ ದಸೃಜನ್ಮುಖಾತ್ ॥೫೫॥ ಸಾಮಾನಿ ಜಗತೀ ಛಂದ ಸ್ತೋ
ಮಂ ಸಪ್ತದಶಂ ತಥಾ । ವೈರೂಪ ಮತಿರಾತ್ರಂಚ ಪಶ್ಚಿ ಮಾದ
ಸೃಜನ್ಮುಖಾತ್ ॥೫೬॥ ಏಕವಿಂಶ ಮಥರ್ವಾಣ ಮಪ್ತೋರ್ಯಾಮಾ
ಣ ಮೇವಚ । ಅನುಷ್ಟುಭಂ ಚ ವೈರಾಜ ಮುತ್ತರಾದಸೃಜ
ನ್ಮುಖಾತ್ ॥೫೭॥ ಉಚ್ಚಾವಚಾನಿ ಭೂತಾನಿ ಗಾತ್ರೇಭ್ಯ ಸ್ತಸ್ಯ

ವಿಶೇಷಗಳನ್ನೂ, ಬೃಹತ್ಸಾಮವೆಂಬ ಸಾಮಪ್ರಭೇದವನ್ನೂ, ಉಕ್ಥ್ಯ
ವೆಂಬ ಯಜ್ಞವಿಶೇಷವನ್ನೂ ಸೃಷ್ಟಿಮಾಡಿದನು ॥೫೪॥ ಆ ಬಳಿಕ ತನ್ನ
ಪಶ್ಚಿಮ ಮುಖದಿಂದ ಸಾಮವೇದ, ಜಗತೀ ಛಂದಸ್ಸು, ಸಪ್ತದಶಸ್ತೋ
ಮವೆಂಬ ಮಂತ್ರವಿಶೇಷಗಳು, ವೈರೂಪವೆಂಬ ಸಾಮಪ್ರಭೇದ, ಅತಿ
ರಾತ್ರವೆಂಬ ಯಜ್ಞಪ್ರಭೇದ ಇವುಗಳನ್ನು ಉಂಟುಮಾಡಿದನು ॥೫೫॥
ಅನಂತರದಲ್ಲಿ ಅಥರ್ವಣವೇದ, ಏಕವಿಂಶತಿಸ್ತೋಮವೆಂಬ ಮಂತ್ರವಿಶೇ
ಷಗಳು, ಅಪ್ತೋರ್ಯಾಮವೆಂಬ ಯಜ್ಞವಿಶೇಷ, ಅನುಷ್ಟುಪ್ ಛಂದಸ್ಸು,
ವೈರಾಜಸಾಮವೆಂಬ ಸಾಮಪ್ರಭೇದ ಇವುಗಳೆಲ್ಲವೂ ಆತನ ಕಡೆಯ
ದಾದ ಉತ್ತರಾಭಿಮುಖವಾದ ನಾಲ್ಕನೆಯ ಮುಖದಿಂದುದಯಿಸಿದುವು.
॥೫೬॥ ಇಂತು ಆತನಿಂದ ಸೃಷ್ಟಿಸಲ್ಪಟ್ಟು ನೆಲೆಯನ್ನು ಹೊಂದಿರುವ ಆ
ಸಕಲ ಭೂತಗಳಿಗೂ ಕರ್ಮ, ಸ್ವಭಾವ, ನಡತೆ, ಆಹಾರ ಮೊದಲಾದು
ವುಗಳನ್ನು ತಿಳಿಸಲು ಹಿಂದೆ ಸೃಷ್ಟಿಸಲ್ಪಟ್ಟ ಆ ಭೂತಗಳನ್ನೇ ಪುನಃ
ಹೇಳುತ್ತೇನೆ.—(ಅಯ್ಯಾ ಶಿಷ್ಯವರ್ಯನಾದ ಮೈತ್ರೇಯನೆ !) ಬಳಿಕ
ಆತನ ಅವಯವಗಳಿಂದ ಉತ್ತಮರನಿಸಿದ ದೇವಾದಿಗಳೂ, ನೀಚರೆನಿಸಿದ
ರಾಕ್ಷಸಾದಿಗಳೂ ನಾನಾವಿಧವಾಗಿ ಉದಯಿಸಿದರು. ಸೃಷ್ಟಿಕರ್ತೃ
ವಾದ ಆತನು ದೇವತೆಗಳು, ರಾಕ್ಷಸರು, ಪಿತೃಗಳು, ಮನುಜರು ಇವರೆ
ಲ್ಲರನ್ನೂ ಸೃಷ್ಟಿಮಾಡಿದಬಳಿಕ ಪುನಃ ಕಲ್ಪಾದಿಯಲ್ಲಿ ಯೋಚಿಸಿ, ಯ
ಕ್ಷರು, ಪಿಶಾಚಗಳು, ಗಂಧರ್ವರು, ಅಪ್ಸರಸ್ಸುಗಳೆಂಬುದಾಗಿ ದೇವತೆಗ
ಳಿಗೆ ಸುಖಸಾಧನರಾದ ಸ್ತ್ರೀ ವ್ಯಕ್ತಿವಿಶೇಷಗಳು, ನರರು, ಕಿನ್ನರರು,
ರಾಕ್ಷಸರು, ಪಕ್ಷಿಗಳು, ಪಶುಗಳು, ಮೃಗಗಳು, ಸರ್ಪಗಳು, ಬಹಳ

ಜಜ್ಞಿರೇ ॥ ದೇವಾಸುರ ಪಿತೄ್ಣಾಂ ಸೃಷ್ಟ್ವಾ ಮನುಷ್ಯಾಂಶ್ಚ ಪ್ರ
ಜಾಪತಿಃ ॥೫೪॥ ತತಃ ಪುನಸ್ಸಸರ್ಜ್ಜಾದೌ ಸಂಕಲ್ಪ್ಯಸ ಪಿತಾಮ
ಹಃ । ಯಕ್ಷಾಣಿ ಪಿಶಾಚಾಂ ಗಂಧರ್ವಾಣಿ ತಥೈವಾಪ್ಸರಸಾಂಗ
ಣಾನ್ ॥೫೫॥ ನರಕಿನ್ನರರಕ್ಷಾಂಸಿ*ವಯಃ ಪಶುಮೃಗೋರಗಾನ್।

ಕಾಲದವರೆಗೂ ಸ್ಥಿರವಾಗಿನಿಲ್ಲುವ ಮತ್ತು ಬಹಳಕಾಲ ಬದುಕುವ ಪ್ರಾಣಿಗಳು, ಹುಟ್ಟಿದೊಡನೆಯೇ ನಾಶವಾಗುವ ಅಂದರೆ, ಸ್ವಲ್ಪ ಕಾಲ ಮಾತ್ರವಿದ್ದು ಬಳಿಕ ಶೀಘ್ರವಾಗಿ ನಾಶ ಹೊಂದುವ ಇತರ ವಿಧವಾದ ಮೃಗಗಳೂ, ಸ್ಥಾವರಗಳೆನಿಸುವ ಪರ್ವತಾದಿಗಳೂ, ಜಂಗಮಗಳೆನಿಸುವ ಇತರವಿಧವಾದಜೀವರಾಶಿಗಳೂಇವುಗಳನ್ನುಂಟುಮಾಡಿದನು ॥೫೪॥ ಸೃಷ್ಟಿ, ಸ್ಥಿತಿ, ಲಯಗಳೆಂಬ ಕಾರ್ಯತ್ರಯದಲ್ಲಿ ಆದಿಕಾರ್ಯವೆನಿಸಿದ ಸೃಷ್ಟಿಕಾರ್ಯ ನಿರ್ವಾಹಕನಾದ, ಷಡ್ಗುಣೈಶ್ವರ್ಯ ಸಂಪನ್ನನೆನಿಸಿದ ಆ ಚತುರ್ಮುಖನು ತನ್ನ ಇಚ್ಛಾನುಸಾರ ಪ್ರಾಣಿಗಳ ಗುಣ,ಆಕಾರ, ಸ್ವಭಾವ ಮೊದಲಾದುವುಗಳನ್ನು ಉಂಟುಮಾಡಿದನು ಯಾವಯಾವ ಪ್ರಾಣಿಗೆ ಯಾವವಿಧವಾದ ಕರ್ಮವು ಹಿಂದಿನ ಸೃಷ್ಟಿಯಲ್ಲಿ ಆತನಿಂದ ನಿರ್ಮಿತವಾಗಿದ್ದಿತೋ, ಅದೇ ಕರ್ಮವನ್ನೇ ಆ ಆ ಪ್ರಾಣಿಯು ಪುನಃ ಪುನಃ ಹುಟ್ಟಿ ಸಾಯುತ್ತಾ ಅನುಭವಿಸಬೇಕಾಗಿರುವುದು ॥೫೫॥ಇತರರಿಗೆ ಹಿಂಸೆಯನ್ನುಂಟುಮಾಡಿ ಕೊಲ್ಲುವಿಕೆ, ಇಲ್ಲದಿದ್ದರೆ ಉಪಕಾರ ಮಾಡುವಿಕೆ ಇವು ಶಾರೀರ ಕರ್ಮಗಳು. ದಯಾ ಯುಕ್ತನಾಗಿ ಎಲ್ಲಾ ಪ್ರಾಣಿಗಳನ್ನು ಸಮವಾಗಿ ಕಾಣುವಿಕೆ, ಅಥವಾ ಕ್ರೂರವಾಗಿರುವಿಕೆ ಇವು ಮಾನಸ ಕರ್ಮಗಳು, ಯಾವಾಗಲೂ ಸತ್ಯವನ್ನೇ ಹೇಳುವಿಕೆ, ಅಥವಾ ಸುಳ್ಳು ನುಡಿಯುವಿಕೆ, ಇವುಗಳು ವಾಚಿಕ ಕರ್ಮಗಳು, ಧರ್ಮಕಾರ್ಯಗಳು, ಅಧರ್ಮಕಾರ್ಯಗಳು ಇವುಗಳಲ್ಲಿ ಯಾವಯಾವ ಪ್ರಾಣಿಯು ಯಾವಯಾವ ಕರ್ಮವನ್ನು ಮನಸ್ಸಿನಲ್ಲಿ ಭಾವಿಸುತ್ತಿರುವುದೋ, ಆ ಪ್ರಾಣಿಗೆ ಅದೇ ಮನಸ್ಸಿಗೆ ರುಚಿಸುವುದು. ಈ ಶ್ಲೋಕದಲ್ಲಿ ಧರ್ಮ, ಅಧರ್ಮ, ಹಿಂಸ್ರ, ಅಹಿಂಸ್ರ, ಋತ ಅನೃತಗಳೆಂಬದಾಗಿ ಹೇಳಲ್ಪಟ್ಟದೆ ಧರ್ಮ ಸ್ವರೂಪವನ್ನು ತಿಳಿದೊಡೆ ಅಂತಹ ಧರ್ಮಕ್ಕೆ ವಿರುದ್ಧವಾದುದೇ ಅಧರ್ಮ

* ಇಲ್ಲಿ ।ವೀ, ಎಂಬ ದ್ವಿತೀಯಾಂತವಿರಬೇಕು.

ಅವ್ಯಯಂಚ ವ್ಯಯಂಚೈವ ಯದಿದಂ ಸ್ಥಾಣು ಜಂಗಮಂ ॥೬೦॥
ತತ್ಸಸರ್ಜ ತದಾ ಬ್ರಹ್ಮಾ ಭಗವಾನಾದಿ ಕೃದ್ವಿಭುಃ । ತೇಷಾಂ
ಯೇ ಯಾನಿ ಕರ್ಮಾಣಿ ಪ್ರಾಕ್ಸೃಷ್ಟ್ಯಾಂ ಪ್ರತಿಪೇದಿರೇ । ತಾನ್ಯೇ

ವೆಂದು ತಿಳಿಯಬರುತ್ತದೆ. ಹೀಗಿರಲು ಬೇರೆಬೇರೆ ಹೇಳಲು ಯುಕ್ತವಲ್ಲ. ಆದರೆ ಕೆಲವು ಕಾರ್ಯಗಳು ಹಿಂಸೆಗಳೆಂಬದಾಗಿ ತೋರಿದರೂ ಅವು ಹಿಂಸಾಕಾರ್ಯಗಳಲ್ಲ. ಹಿಂಸಾಸಾಮಾನ್ಯವೂ ಹಿಂಸೆಯಾದೊಡೆ "ಅಗ್ನೀ ಷೋಮೀಯಂ ಪಶುಮಾಲಭೇತ" ಇತ್ಯಾದಿ ಶ್ರುತ್ಯುಕ್ತ ಪ್ರಕಾರ ಯಜ್ಞಾರ್ಥವಾದ ಪಶುಹಿಂಸೆಯೂ ಕೂಡ ಹಿಂಸೆಯಾಗಬೇಕಾದೀತು ಇಂತು ಪಶುವಿಶಂಸನವು ಧರ್ಮವೇ ಹೊರತು ಅಧರ್ಮವಲ್ಲ. ಅಧರ್ಮವೆಂಬ ಪಕ್ಷದಲ್ಲಿ ಶ್ರುತಿಗೆ ಅಪ್ರಾಮಾಣ್ಯ ಉಂಟಾದೀತು ವೇದಕ್ಕೆ ಅಪ್ರಾಮಾಣ್ಯವನ್ನು ಕಲ್ಪಿಸುವುದು ತರವಲ್ಲ ಆದ್ದರಿಂದ ಯಜ್ಞಾರ್ಥವಾದ ಪಶುವಿಶಂಸನವು ಧರ್ಮವೇ ಸರಿ. ಹಿಂಸಾರೂಪವಲ್ಲದಿದ್ದರೂ ಪರಸ್ತ್ರೀಗಮನಾದಿಗಳು ಅಧರ್ಮಗಳೆನಿಸುವವು. ಸತ್ಕಾರ್ಯವೂ ಕೂಡ ಕೆಲವು ಸಂದರ್ಭಗಳಲ್ಲಿ ಅಧರ್ಮವೆನಿಸುವುದು. ಕಳ್ಳತನ ಮಾಡಿದವನನ್ನು ಶಿಕ್ಷಿಸುವುದು ರಾಜನಿಗೆ ಧರ್ಮ. ಅಂತಹವನನ್ನು ರಾಜನದೆಶೆಯಿಂದ ಬಿಡಿಸುವುದು ಯದ್ಯಪಿ ಉಪಕಾರವೆಂದು ಭಾವಿಸಿದರೂ ಅದು ಅಧರ್ಮವೇ ಹೊರತು ಧರ್ಮವಲ್ಲ. ಇಂತೆಯೇ ಕ್ರೂರಕರ್ಮವೂ ಕೂಡ ಕೆಲವು ಸಂದರ್ಭಗಳಲ್ಲಿ ಧರ್ಮವಾಗಿಯೇ ಏರ್ಪಡುವುದು. ಒಬ್ಬ ಪ್ರಾಣಿಯನ್ನು ಶಿಕ್ಷೆಮಾಡುವಿಕೆಯು ಕ್ರೂರಕರ್ಮವೇ ಸರಿ.ಆದರೆ ರಾಜನು ದುಷ್ಟರನ್ನು ಶಿಕ್ಷಿಸದೆ ಹೋದಲ್ಲಿ ಅಧರ್ಮವೇಹೊರತು ಅದು ಧರ್ಮವೆನ್ನಿಸಿಕೊಳ್ಳಲಾರದು. ಆದುದರಿಂದ ದುಷ್ಟಶಿಕ್ಷಣವು ಧರ್ಮವೇಹೊರತು ಅದನ್ನು ಅಧರ್ಮವೆಂದು ಯಾರೂ ಹೇಳಲಾರರು. ಸತ್ಯವಾದಿತೆಯೂ ಕೂಡ ಕೆಲವು ಸಮಯಗಳಲ್ಲಿ ಅಧರ್ಮವಾಗಿ ಏರ್ಪಡುವುದು. ಅದೆಂತೆಂದರೆ—ಯಾವುದೋ ತಪ್ಪಿನಿಂದ ಬ್ರಾಹ್ಮಣನಿಗೆ ಮರಣದಂಡನೆಯು ವಿಹಿತವಾಗಿರುವ ಸಮಯದಲ್ಲಿ "ಅವನು ಅಪರಾಧಿಯೇ ಸರಿ. ಇವನನ್ನು ಶಿಕ್ಷಿಸತಕ್ಕುದು ನ್ಯಾಯ" ಎಂಬದಾಗಿ ಸತ್ಯವನ್ನೇ ನುಡಿದಾಗ್ಯೂ ಬ್ರಾಹ್ಮಣ ಮರಣಜನ್ಯವಾದ ಬ್ರಹ್ಮಹತ್ಯಾಗ್ನಿಯು ಇವನನ್ನು ನಿರ್ಮೂಲಮಾಡುವುದೇ ಹೊರತು

ವತೇ ಪ್ರಪದ್ಯಂತೇ ಸೃಜ್ಯಮಾನಾಃ ಪುನಃ ಪುನಃ ॥ ೬೦ ॥ ಹಿಂ
ಸಾ ಹಿಂಸ್ರೇ ಮೃದುಕ್ರೂರೇ ಧರ್ಮಾ ಧರ್ಮಾ ವೃತಾನೃತೇ । ತ
ದ್ಭಾವಿತಾಃ ಪ್ರಪದ್ಯಂತೇ ತಸ್ಮಾತ್ತತ್ತಸ್ಯರೋಚತೇ ॥ ೬೧ ॥
ಇಂದ್ರಿಯಾರ್ಥೇಷು ಭೂತೇಷು ಶರೀರೇಷು ಚ ಸರ್ವಭುಃ ।
ನಾನಾತ್ವಂ ವಿನಿಯೋಗಂ ಚ ತಥೈವ ವ್ಯಸೃಜತ್ಸ್ವಯಂ ॥೬೨॥
ನಾಮರೂಪಂಚ ಭೂತಾನಾಂ ಕೃತ್ಯಾನಾಂ ಚ ಪ್ರಪಂಚನಂ ।

ಬಂದುಬೇರನ್ನಾದರೂ ಉಳಿಸಲಾರದು ಆದ್ದರಿಂದ ಆ ಕಾಲದಲ್ಲಿ ಅಂ
ತಹ ಬ್ರಾಹ್ಮಣನ ಪ್ರಾಣ ಉಳಿಸಲು ಅಸತ್ಯವಂ ನುಡಿದಾಗ್ಯೂ ಅದು
ಅಧರ್ಮವಲ್ಲ. ಇಂತೆಯೇ ಧರ್ಮಸೂಕ್ಷ್ಮಗಳನ್ನು ಬಹಳಯೋಚನೆ
ಯಿಂದತಳಿಯಬೇಕು ಆದ್ದರಿಂದಲೇ ಈ ಶ್ಲೋಕದಲ್ಲಿ ಧರ್ಮಾಧರ್ಮ,
ಹಿಂಸಾ ಹಿಂಸ್ರ, ಮೃದುಕ್ರೂರಗಳೆಂಬದಾಗಿ ವಿರುದ್ಧಧರ್ಮಗಳೊಡನೆ
ಯೂ ಸೇರಿಸಿ ಬರಿಯಲ್ಪಟ್ಟವೆ ಆದಕಾರಣ ಧರ್ಮಾರ್ಜನಾಭಿಲಾಷಿಗ
ಳಾದವರು ಈ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕೆಂದು
ಭಾವವು ॥ ೬೧ ॥ ಇಂತು ತತ್ತ್ವಜ್ಞಂತುಗಳ ಕರ್ಮವಾಸನಾನು ಸಾರ
ವಾಗಿ ಇಂದ್ರಿಯಾರ್ಥಗಳೆನಿಸುವ ಆಹಾರಾದಿಗಳಲ್ಲಿ ಅವರವರಿಗೆ ತಕ್ಕಂತೆ
'ಅಮೃತ, ಅನ್ನ, ಫಲ ತೃಣ, ಮಾಂಸ ಇವೇ ಮೊದಲಾದ ಭೋಗ್ಯ
ವಸ್ತುಗಳ ವಿಭಾಗವನ್ನೂ, ಪ್ರಾಣಿಗಳಲ್ಲಿ ಜಲಚರಗಳು, ಗ್ರಾಮ್ಯಗಳು,
ಆರಣ್ಯಕಗಳು, ಎಂಬ ಇನೇ ಮೊದಲಾದ ಪ್ರಭೇದಗಳನ್ನೂ, ಶರೀರ
ಗಳಲ್ಲಿ ಎರಡು ಕಾಲುಳ್ಳ ಪ್ರಾಣಿಗಳು, ನಾಲ್ಕುಕಾಲುಳ್ಳ ಪ್ರಾಣಿಗಳು,
ಐದು ಉಗುರುಗಳುಳ್ಳವು, ಎರಡು ಗೊರಸುಳ್ಳವು, ಒಂದು ಗೊರಸು
ಳ್ಳವು, ಕ್ರೂರಸ್ವಭಾವಯುಕ್ತಗಳು, ಸಾತ್ವಿಕಸ್ವಭಾವವುಳ್ಳವುಗಳು,
ಮತ್ತು ಇಂತಹ ಪ್ರಾಣಿಗಳಿಂದ ಇಂತಹ ಕೆಲಸವೇ ಮಾಡಲ್ಪಡತ
ಕ್ಕದ್ದು' ಎಂಬ ಇದೇ ಮೊದಲಾದ ವ್ಯವಸ್ಥೆಗಳನ್ನೂ ತತ್ತತ್ಕರ್ಮವಾಸ
ನಾನು ಸಾರವಾಗಿಯೇ ವಿಭಾಗ ಮಾಡಿದನು ॥ ೬೨ ॥ ಆ ಬಳಿಕ ಆತನು
ದೇವತೆಗಳಿಗೆ ಇಂದ್ರ, ಅಗ್ನಿ, ಯಮ, ನಿರ್ಋತಿ, ವೊದಲಾದ ಹೆಸರುಗ
ಳನ್ನೂ, ವಜ್ರಧಾರಿಯಾಗಿರುವಿಕೆ, ಐರಾವತಾರೂಢನಾಗಿರುವಿಕೆ, ಇವೇ

ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚ ಕಾರಯಃ ॥ ೬೪ ॥
ಋಷೀಣಾಂ ನಾಮಧೇಯಾನಿ ಯಥಾ ವೇದ ಶ್ರುತಾನಿವೈ ।
ತಥಾ ನಿಯೋಗಯೋಗ್ಯಾನಿ ಹ್ಯನ್ಯೇಷಾಮಪಿ ಸೋಽಕರೋತ್ ॥
ಯಥರ್ತುಷ್ಯ ತು ಲಿಂಗಾನಿ ನಾನಾರೂಪಾಣಿ ಪರ್ಯಯೇ ।

ಮೊದಲಾದ ರೂಪ ಪ್ರಭೇದಗಳನ್ನೂ, ಮಳೆಸುರಿಸುವಿಕೆ, ಸುಡುವಿಕೆ, ಪ್ರಜೆಗಳನ್ನು ತತ್ತತ್ಕರ್ಮಾನುಸಾರ ಪುಣ್ಯಪಾಪ ರೂಪವಾದ ಫಲದಲ್ಲಿ ಸೇರಿಸುವಿಕೆ, ಮೊದಲಾದ ಕಾರ್ಯವಿಭಾಗಗಳನ್ನೂ, ಇನ್ನೆಲ್ಲವನ್ನೂ ವೇದೋಕ್ತಗಳಾದ ಶಬ್ದಗಳಿಂದಲೇ ಉಂಟುಮಾಡಿದನು ಅಂದರೆ ಆ ಆ ದೇವತೆಗಳಿಗೆ ರೂಪ, ಕರ್ಮ, ಆಯುಧ, ವಾಹನ, ನಾಮಧೇಯ ಮೊದಲಾದವುಗಳನ್ನೆಲ್ಲಾ ವೇದೋಕ್ತವಾಗಿರುವ ಪ್ರಕಾರ ವಿಭಾಗಮಾಡಿದ ನೆಂಬದಾಗಿ ಭಾವವು ॥ ೬೪ ॥ ಆ ಬಳಿಕ ಮುನಿಗಳು ಮೊದಲಾದವರ ನಾಮಧೇಯಗಳನ್ನೂ ಕೂಡ ವೇದೋಕ್ತ ಶಬ್ದಗಳಿಂದಲೇ ವ್ಯವಹರಿಸಿ, ಆ ವೇದ ಪ್ರಭಾವಗಳೆನಿಸಿದ ಸೂಕ್ತ, ಮಂತ್ರ, ಸಾಮ, ಮೊದಲಾದವುಗಳನ್ನೂ ಕೂಡ ವೇದೋಕ್ತಪ್ರಕಾರವಾಗಿಯೇ ವಿಭಾಗಮಾಡಿದನು ॥೬೪॥ವೇದವು ನಾಶರಹಿತವಾದುದೆಂತಲೂ, ಪ್ರಯತ್ನವಿಲ್ಲದೆ ಬ್ರಹ್ಮನ ಮುಖದಿಂದ ತಾನಾಗಿಯೇ ಹೊರಟು ಬಂದಕಾರಣ ಅಪೌರುಷೇಯವೆಂತಲೂ, ನಿತ್ಯವೆಂತಲೂ ವ್ಯವಹರಿಸಲ್ಪಡುವುದು ಇಂತಿರಲು ಅನಿತ್ಯರೆನಿಸಿ ಅವಶ್ಯವಾಗಿಯೂ ಕಾಲಕ್ರಮೇಣ ಹ್ರಸ್ವವನ್ನೂ ಹೊಂದತಕ್ಕ ದೇವತೆಗಳು ಮೊದಲಾದವರಿಗೆ ಈವೇದಶಬ್ದಗಳಿಂದ ವ್ಯವಹಾರಾದಿಗಳು ಎಂತು? ಎಂಬದಾಗಿ ಆಕ್ಷೇಪಿಸಿದೊಡೆ, ಯದ್ಯಪಿ ಆ ದೇವಾದಿಗಳು ತಮ್ಮ ತಮ್ಮ ಆಯುಃ ಪರಿಮಾಣಾನುಸಾರ ತಮ್ಮ ಕರ್ಮವು ಮುಗಿದ ಬಳಿಕ ನಾಶಹೊಂದುವುದೇನೋ ದಿಟ ಆದರು "ಯಾವದ್ಭಾಧಕಂ ತಾವತ್ಪ್ರಮಾಣ್ಯಂ" (ಎದುರಿಗೂ ಬಂದು ವಸ್ತುವಿಗೆ ನಾಶವಿಲ್ಲವೋ ಅದುವರಿಗೂ ಅದು ನಿತ್ಯವೇ ಸರಿ) ಎಂದರೆ ಬಂದು ಕಪ್ಪೆಯ ಚಿಪ್ಪನ್ನು ನೋಡಿ 'ಇದು ಬೆಳ್ಳಿ' ಎಂಬದಾಗಿ ತಿಳಿಯುವಿಕೆಯು ಭ್ರಮೆಯಾದರೂ 'ಇದು ಬೆಳ್ಳಿಯಲ್ಲ, ಇದು ಕಪ್ಪೆಯ ಚಿಪ್ಪು' ಎಂಬದಾಗಿ ತಿಳಿವು ಉಂಟಾಗುವವರಿಗೂ ಅಜ್ಞಾನವೇ

ದೃಶ್ಯಂತೇ ತಾನಿ ತಾನ್ಯೇವ ಯಥಾ ಭಾವಾ ಯುಗಾದಿಷು॥೬೫॥
ಕರೋತ್ಯೇವಂ ವಿಧಾಂ ಸೃಷ್ಟಿಂ ಸರ್ಗಾದೌ ಸ ಪುನಃ ಪುನಃ ।
ಸಿಸೃಕ್ಷೋಃ ಶಕ್ತಿಯುಕ್ತೋಽಸೌ ಸೃಜ್ಯಾಃ ಶಕ್ತಿಪ್ರಚೋದಿತಃ ॥೬೬॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮೇಂಶೇ
ಪಂಚಮೋಧ್ಯಾಯಃ.
ಪಂಚಮಾಧ್ಯಾಯ ಸಮಾಪ್ತಃ

ಅವನಿಗೆ ದೃಢವಾಗಿರುವುದು. ಅಂತೆಯೇ ಪ್ರಕೃತದಲ್ಲಿ ದೇವಾದಿಗಳಿಗೆ ನಾಶವಿದ್ದರೂ ನಾಶವುಂಟಾಗುವವರಿಗೂ ಅವರಿಗೆ ನಿತ್ಯರೆಂತಲೇ ವ್ಯವಹಾರವು ಆದೆಂತೆಂದರೆ —ವಸಂತಋತುವು ಪ್ರಾಪ್ತವಾದೊಡೆ ಮಲ್ಲಿಗೆ ಮೊಗಲಾದ ಹೂಗಳೆಲ್ಲವೂ ಉಂಟಾಗುವುವು. ತರುವಾಯ ಮತ್ತೊಂದು ಋತುವಿನಲ್ಲಿ ಅವು ನಾಶಹೊಂದುವುವು ಇಂತೆಯೇ ಪುನಃ ಅದೇವಸಂತವು ಪ್ರಾಪ್ತವಾದರೆ ಹಿಂದಿನಂತೆಯೇ ಅದೇ ಮಲ್ಲಿಕಾದಿ ಪುಷ್ಪಗಳು ಎಂತು ಉಂಟಾಗುವುವೋ ಅಂತೆಯೇ ಯುಗ,ಮನ್ವಂತರ, ಕಲ್ಪ ಮೊದಲಾದವುಗಳಲ್ಲಿ ದೇವಾದಿಗಳು ಹುಟ್ಟಿ ಸಾಯುತ್ತಾ ಮರಳಿಹುಟ್ಟುತ್ತಿರುವರು.ಆದುದರಿಂದ ಪ್ರಾಪಂಚಿಕವಾದ ನಿತ್ಯತ್ವವುಅವರಲ್ಲಿಲ್ಲದಿದ್ದರೂ ವ್ಯಾವಹಾರಿಕ ದೆಶೆಯಲ್ಲಿರುವ ನಿತ್ಯತ್ವವನ್ನವಲಂಬಿಸಿದೊಡೆ ಆ ದೇವಾದಿಗಳಿಗೂ ನಿತ್ಯತ್ವವು ಉಪಪನ್ನವಾಗುವುದು ॥ ೬೫ ॥ ಆಯ್ಯಾವೈಮೈತ್ರೇಯನೇ ! ಭೂತ ಮತ್ತು ಪ್ರಾಣಿಸಮುದಾಯಗಳನ್ನುಂಟು ಮಾಡಬೇಕೆಂಬ ಇಚ್ಛೆ ಮತ್ತು ಆ ಆ ಪ್ರಾಣಿಗಳ ಕರ್ಮವಾಸನೆ ಇವುಗಳಿಂದ ಕೂಡಿ ಸೃಷ್ಟಿಯನ್ನು ಹೊಂದುವ ಆ ಪ್ರಾಣಿಗಳ ಕರ್ಮವಾಸನೆಯಿಂದ ಪ್ರೇರಿತನಾಗಿ, ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಆಪರಮಾತ್ಮನು ಸೃಷ್ಟ್ಯಾದಿಯಲ್ಲಿ ಇಂತೆಯೇ ಮರಳಿಮರಳಿ ಸೃಷ್ಟಿಯಂಗೈವನು ಎಂಬುದಾಗಿ ಪರಾಶರ ಮುನಿಯು ಮೈತ್ರೇಯನಿಗೆ ದೇವಾದಿಸೃಷ್ಟಿಕ್ರಮವನ್ನುತಿಳಿಯು ಪಡಿಸುತ್ತಿದ್ದನೆಂಬಲ್ಲಿಗೆ

ಶ್ರೀವಿಷ್ಣು ಪುರಾಣಪ್ರಥಮಾಂಶದೊಳ್
ಐದನೆಯ ಅಧ್ಯಾಯಂ ಮುಗಿದುದು.

ಶ್ರೀಃ.

ಓನ್ನಮಃ ಪರಮಾತ್ಮನೆ.

ಅಥ ಪಷ್ಠೋಽಧ್ಯಾಯಃ.



ಮೈತ್ರೇಯಃ ॥ ಅರ್ವಾಕ್ಸ್ರೋತಾಸ್ತ್ವಯಾ ಕಥಿತೋ ಭವತಾ ಯಸ್ತು ಮಾನುಷಃ । ಬ್ರಹ್ಮನ್ ! ವಿಸ್ತರತೋ ಬ್ರೂಹಿ ಬ್ರಹ್ಮಾತಮಸೃಜ ದ್ಯಥಾ ॥ ೧ ॥ ಯಥಾಚ ವರ್ಣಾ ನಸೃಜ ದ್ಯದ್ಗುಣಾಂಶ್ಚ ಮಹಾಮುನೇ ! । ಯಚ್ಚತೇಷಾಂ ಸ್ಮೃತಂ ಕರ್ಮ

ಆರನೆಯ ಅಧ್ಯಾಯವು.



ಹಿಂದಿನ ಅಧ್ಯಾಯದಲ್ಲಿ ಪರಾಶರಮುನಿಯಿಂದ ನಿರೂಪಿಸಲ್ಪಟ್ಟ ದೇವಾದಿ ನವವಿಧ ಸೃಷ್ಟಿಯನ್ನು ಕೇಳಿ ಬಳಿಕ ಮೈತ್ರೇಯನು ಮಾನುಷ ಸೃಷ್ಟಿಯನ್ನು ವಿಶದವಾಗಿ ತಿಳಿಯಲಪೇಕ್ಷಿಸಿ ತನ್ನ ಗುರುವೆನಿಸಿದ ಪರಮ ದಯಾಶಾಲಿಯಾದ ಪರಾಶರ ಮುನಿಯಂ ಕುರಿತು ಪ್ರಶ್ನೆ ಮಾಡುತ್ತಾನೆ.—ಅಯ್ಯಾ ಬ್ರಹ್ಮಣ್ಯ ವರೇಣ್ಯನೆನಿಸಿದ ಪರಾಶರಮುನಿಯೇ ? ಈಗ ನೀನು ವಿವರಿಸಿದ ಸೃಷ್ಟಿಗಳಲ್ಲಿ ಅರ್ವಾಕ್ಸ್ರೋತಸ್ಸುಗಳೆಂಬದಾಗಿ ವ್ಯಪದಿಷ್ಟವಾದ ಯಾವ ಮಾನುಷ ಸೃಷ್ಟಿಯಿರುವುದೋ ಅದನ್ನು ಬ್ರಹ್ಮನು ನಿರ್ಮಾಣಮಾಡಿದ , ಪರಿ ಎಂತು ? ಇದನ್ನು ವಿಶದವಾಗಿ ತಿಳಿಯ ಪಡಿಸುವವನಾಗು ॥ ೧ ॥ ಮತ್ತು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೆಂಬ ನಾಲ್ಕು ವರ್ಣಗಳನ್ನು ಸೃಷ್ಟಿ ಮಾಡಿದ ಬಗೆಯಾವುದು ? ಅವುಗಳ ಗುಣವೇನು ? ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೂಪವಾದ ಆ ಚಾತುರ್ವರ್ಣ್ಯಕ್ಕೆ ಸ್ಮೃತಿವಿಹಿತಗಳಾದ ಕರ್ಮಗಳಾವುವು. ಇವುಗಳನ್ನೂ ತಿಳಿಸುವವನಾಗು ॥ ೨ ॥ ಇಂತು

ವಿಪ್ರಾದೀನಾಂ ತದುಚ್ಯತಾಂ ॥ ೨ ॥ ಶ್ರೀಪರಾಶರಃ ॥ ಸತ್ಯಾ
ಭಿ ಧ್ಯಾಯಿನಃ ಪೂರ್ವಂ ಸಿಸೃಕ್ಷೋ ರ್ಬ್ರಹ್ಮಣೋ ಜಗತ್ ।
ಅಜಾಯಂತ ದ್ವಿಜಶ್ರೇಷ್ಠ ಸತ್ತ್ವೋ ದ್ರಿಕ್ತಾ ಮುಖಾ
ತ್ಪ್ರಜಾಃ ॥ ೩ ॥ ವಕ್ಷಸೋ ರಜಸೋ ದ್ರಿಕ್ತಾ ಸ್ತಥಾನ್ಯಾ
ಬ್ರಹ್ಮಣೋಽಭವ೯ ॥ ರಜಸಾ ತಮಸಾ ಚೈವ ಸಮುದ್ರಿಕ್ತಾ
ಸ್ಥಥೋ ರುತಃ ॥೪॥ ಪದ್ಭ್ಯಾ ಮನ್ಯಾಃ ಪ್ರಜಾ ಬ್ರಹ್ಮಾ ಸಸರ್ಜ

ಪ್ರಾರ್ಥನೆಗೈವ ಮೈತ್ರೇಯನಂ ಕುರಿತು ಪರಾಶರಮುನಿಯುಹೇಳತೊಡ
ಗಿದುದೆಂತೆಂದರೆ:—ಅಯ್ಯಾ ಬ್ರಾಹ್ಮಣಶ್ರೇಷ್ಠನೆನಿಸಿದ ಮೈತ್ರೇಯನೇ?
ಜಗತ್ತನ್ನು ಸೃಷ್ಟಿಸಲಿಚ್ಛೆಯುಳ್ಳ ಸತ್ಯಸಂಕಲ್ಪನೆನಿಸಿದ ಆ ಬ್ರಹ್ಮನ
ಮುಖದಿಂದ ಸತ್ವ ಪ್ರಧಾನರೆನಿಸಿದ ಪ್ರಜೆಗಳು ಆದಿಯಲ್ಲಿ ಉಂಟಾದರು.
(ಇವರೇ ಬ್ರಾಹ್ಮಣರು ಆದುದರಿಂದಲೇ ಇವರಿಗೆ 'ಅಗ್ರಜನ್ಮ' ರೆಂಬ
ದಾಗಿ ಹೆಸರು) ॥ ೨ ॥ ಆ ಬಳಿಕ ಆತನ ವಕ್ಷಸ್ಥಲ (ಎದೆ) ದಿಂದ
ಕೇವಲ ರಜೋಗುಣವೇ ಪ್ರಧಾನರಾಗಿರುವ ಪ್ರಜೆಗಳು ಉದಯಿಸಿದರು
ಇವರೇ ಕ್ಷತ್ರಿಯರು. (ಕ್ಷತ್ರಿಯರು ಸೃಷ್ಟಿಕರ್ತೃವಾದ ಆ ಪರಮಾ
ತ್ಮನ ಬಾಹುಗಳಿಂದುದಯಿಸಿದವರೇ ಹೊರತು ವಕ್ಷಸ್ಥಲದಿಂದ ಉದಯಿ
ಸಿದವರಲ್ಲ. ಇಂತು ವಕ್ಷಸ್ಥಲದಿಂದುದಯಿಸಿದವರೆಂದು ಹೇಳುವಿಕೆಯು
ಶ್ರುತಿವಿರೋಧವು, ಎಂಬುದಾಗಿ ಆ ಶಂಕೆ ಬಂದೊಡೆ ಇಲ್ಲಿ ವಕ್ಷಶ್ಶಬ್ದ
ಕ್ಕೆ ವಕ್ಷಸ್ಥಲ ಸಮೀಪವರ್ತಿಗಳಾದ ಬಾಹುಗಳೆಂಬುದಾಗಿಯೇ ಅರ್ಥ
ಮಾಡಬೇಕು. ಇಲ್ಲದಿದ್ದೊಡೆ ಇವರಿಗೆ "ಬಾಹುಜ" ರೆಂಬವ್ಯವಹಾ
ರವು ಇಲ್ಲದೇಹೋದೀತು. ಆದಕಾರಣ ಬಾಹುಗಳಿಂದ ಕ್ಷತ್ರಿಯರುದ
ಯಿಸಿದರೆಂಬುದಾಗಿಭಾವವು.) ॥ ೪ ॥ ಅನಂತರ ರಜಸ್ಸು ಮತ್ತು ತಮ
ಸ್ಸು ಈ ಎರಡು ಗುಣಗಳ ಸಾಮ್ಯತೆಯನ್ನು ಪಡೆದಿರುವ ಅಂದರೆ ರಜ
ಸ್ತಮೋ ಗುಣಗಳೆರಡನ್ನೂ ಪ್ರಧಾನವಾಗಿ ಆಶ್ರಯಿಸಿಕೊಂಡಿರುವ ಪ್ರ
ಜೆಗಳು ಆತನ ತೊಡೆಗಳಿಂದ ಉದಯಿಸಿದರು. ಇವರೇ ವೈಶ್ಯರು. ಆದು
ದರಿಂದಲೇ ಇವರಿಗೆ ಊರುಜರೆಂತಲೂ ಊರವ್ಯರೆಂತಲೂ ವ್ಯವಹಾರವಿ
ರುವುದು. ॥ ೫ ॥ ಅಯ್ಯಾ ಬ್ರಾಹ್ಮಣಶ್ರೇಷ್ಠನೆ ಆಬ್ರಹ್ಮನು

ದ್ವಿಜಸತ್ತಮ ! । ತಮಃ ಪ್ರಧಾನಾ ಸ್ತ್ವಸ್ಯಾ ಶ್ಚತುರ್ವ್ಯ
ರ್ಣ್ಯಮಿದಂ ತತಃ ॥ ೫ ॥ ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ
ಶ್ಚಾದ್ಯಾಶ್ಚ ದ್ವಿಜ ಸತ್ತಮ ! । *ಪಾದೋರು ವಕ್ಷ ಸ್ಥಲತೋ
ಮುಖತಶ್ಚ ಸಮುದ್ಗತಾಃ ॥ ೬ ॥ ಯಜ್ಞಾ ನಿಷ್ಪತ್ತಯೇ ಸರ್ವ

ಬಳಿಕ ತಮೋಗುಣವನ್ನೇ ಪ್ರಧಾನವಾಗಿ ಪಡೆದಿರುವ ಪ್ರಜೆಗಳನ್ನು ತನ್ನ ಕಾಲುಗಳಿಂದುಂಟುಮಾಡಿದನು. ಇವರೇ ಶೂದ್ರರು. ಇಂತು ಅತಿ ನಿಂದ್ಯವುಂಟುಮಾಡಲ್ಪಟ್ಟ ಈ ಸೃಷ್ಟಿಗೆ ಚಾತುರ್ವರ್ಣ್ಯ ಸೃಷ್ಟಿ ಎಂಬ ದಾಗಿ ಹೆಸರು. ॥ ೫ ॥ ಅಯ್ಯಾ ದ್ವಿಜಶ್ರೇಷ್ಠನೆನಿಸಿದ ಮೈತ್ರೇಯನೆ; ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಇವುರುಗಳು ಸೃಷ್ಟಿ ಕರ್ತೃವಾದ ಆ ಬ್ರಹ್ಮನ ಮುಖ, ವಕ್ಷಸ್ಥಲ ತೊಡೆಗಳು, ಕಾಲುಗಳು, ಇವುಗಳಿಂದ ಉಂಟಾದರು ॥ ೬ ॥ ಇಂತು ಉಂಟಾದ ಈ ಚಾತುರ್ವರ್ಣ್ಯ ಸಂಬಂಧಿಗಳಾದ ಪ್ರಜೆಗಳ ಉಪಯೋಗವನ್ನು ತಿಳಿಸುವೆನು — (ಅಯ್ಯಾ ಪೂಜ್ಯನಾದ) ಮಹಿಮಾ ಶಾಲಿಎನಿಸಿದ ಮೈತ್ರೇಯನೇ, ಯಜ್ಞ ಯಾಗಾದಿಗಳ ನಿರ್ವಾಹಕ್ಕಾಗಿಯೇ ಬ್ರಹ್ಮನು ಈಮೇಲೆ ಹೇಳಿದ ನಾಲ್ಕು ವರ್ಣದವರನ್ನೂ ಯಜ್ಞಸಾಧನರನ್ನಾಗಿ ಭಾವಿಸಿ ಉಂಟುಮಾಡಿದನು. ಇಲ್ಲಿ ಒಂದು ಆಕ್ಷೇಪ ಉಂಟು. ಅದೇನಂದರೆ "ಅವೇದ್ಯತ್ವಾದ ಭಾವಃ ಕರ್ಮಭಿಸ್ಸ್ಯಾತ್" ಎಂಬ ಜೈಮಿನಿ ಸೂತ್ರಾನುಸಾರ ಶೂದ್ರಾದಿಗಳಿಗೆ ವೇದಾಧಿಕಾರವಿಲ್ಲವೆಂಬದಾಗಿ ತಿಳಿಯಬರುತ್ತದೆ. ಇಂತಿರಲು ಚಾತುರ್ವರ್ಣ್ಯದಲ್ಲಿ ಶೂದ್ರರೂ ಸೇರಿರುವು ಕಾರಣ, ಅವರಿಗೂ ಯಜ್ಞಾಧಿಕಾರವು ಉಂಟೆಂಬದಾಗಿ ಯಿಲ್ಲಿ ಮೇಲೆ ಹೇಳಿದ ಶ್ಲೋಕದಿಂದ ಅರ್ಥವಾಗುವುದು ಇದರಿಂದ ಪರಸ್ಪರವಿರೋಧವುಂಟಾಗುವುದು ಈವಿರೋಧಪರಿಹಾರಕ್ಕಾಗಿ ಜೈಮಿನೀಯಸೂತ್ರಪ್ರಬಲವೇ ? ಅಥವಾ ಈ ಪುರಾಣವೇ ಪ್ರಮಾಣವೇ ? ಎಂಬದಾಗಿ ಆಕ್ಷೇ

* ಈ ಶ್ಲೋಕದಲ್ಲಿ "ಪಾದೋರು ವಕ್ಷಸ್ಥಲತೋ ಮುಖತಶ್ಚ" ಎಂಬ ಸ್ಥಳದಲ್ಲಿ ಪ್ರತಿಲೋವ್ಯದಿಂದ ಮುಖ, ವಕ್ಷಸ್ಥಲ, ಊರು, ಪಾದಗಳೆಂಬದಾಗಿ ತಿಳಿಯಬೇಕು.

ವೇತ ದ್ಬ್ರಹ್ಮಾ ಚಕಾರವೈ । ಚಾತುರ್ವರ್ಣ್ಯಂ ಮಹಾಭಾಗ !
ಯಜ್ಞಾ ಸಾಧನ ಮುತ್ತಮಂ ॥ ೭ ॥ ಯಜ್ಞೈರಾಪ್ಯಾ ಯಿ
ತಾ ದೇವಾ ವೃಷ್ಟ್ಯುತ್ಸರ್ಗೇಣ ತಾಃ ಪ್ರಜಾಃ । ಆಪ್ಯಾಯ

ಪಿಸಿದಲ್ಲಿ ಈ ಶ್ಲೋಕಕ್ಕೆ ಶೂದ್ರಾದಿಗಳೂ ಯಜ್ಞಾಧಿಕಾರಿಗಳೆಂಬ ವಿಷಯದಲ್ಲಿ ತಾತ್ಪರ್ಯವಲ್ಲಾ. ಶೂದ್ರನಿಗೆ ಅಧ್ಯಯನ, ಅಗ್ನ್ಯಾಧಾನ, ಯಜ್ಞಮೊದಲಾದವುಗಳಲ್ಲಿ ಅಧಿಕಾರವಿಲ್ಲದಿದ್ದರೂ 'ಶೂದ್ರಶ್ಯ ಶೂಶ್ರಷಯಾ ಶ್ರಿಯಂ' ಎಂಬ ಗೀತಾವಾಕ್ಯದಿಂದಲೂ, 'ನಮಸ್ಕಾರೇಣ ಮಂತ್ರೇಣ ಪಂಚಯಜ್ಞಾನ್ನ ಹಾಪಯೇತ್' ಎಂಬ ಸ್ಮೃತಿವಾಕ್ಯದಿಂದಲೂ ಕೂಡ ಇವರಿಗ ಮುಖ್ಯವಾಗಿ ವಿಹಿತವಾಗಿರುವ ಪರಿಚರ್ಯೆಯಲ್ಲಿಯೇ ಇವರು ನಿರತರಾಗಿದ್ದ ಪಕ್ಷದಲ್ಲಿ ದ್ವಿಜರು ಯಜ್ಞಾದಿಗಳಿಂದ ಯಾವ ಫಲವನ್ನು ಹೊಂದ ವರೋ ಇವರು ಅದೇ ಫಲವನ್ನೇ ತಮ್ಮ ನಿಷ್ಕಪಟವಾದ ಶುಶ್ರೂಷೆಯಿಂದ ಹೊಂದುವರೆಂದು ಭಾವವು ॥ ೭ ॥ ಅಯ್ಯಾ ಧರ್ಮಜ್ಞನೆನಿಸಿದ ಮೈತ್ರೇಯನೆ, ಇಂತು ಆ ಚಾತುರ್ವರ್ಣ್ಯದಿಂದ ಆಚರಿಸಲ್ಪಡತಕ್ಕ ಯಜ್ಞಾ ಯಾಗಾದಿಗಳಿಂದ ಸಂತುಷ್ಟರಾದ ದೇವತೆಗಳು ಆ ಪ್ರಜೆಗಳ ವಿಷಯದಲ್ಲಿ ಅನುಕಂಪಾಯುಕ್ತರಾಗಿ ಮಳೆಸುರಿಸಿ ಅದರಿಂದ ಅವರ ಆಹಾರೋಪಯೋಗಿಗಳಾದ ಸಸ್ಯಾದಿಗಳನ್ನು ಬೆಳೆಯಿಸಲು ಅನುಕೂಲಪಡಿಸಿ ಆ ಚಾತುರ್ವರ್ಣ್ಯವನ್ನೂ ಸಂತೋಷಪಡಿಸುತ್ತಾರೆ. ಆದುದರಿಂದ ಯಜ್ಞಾ ಯಾಗಾದಿಗಳು ಶ್ರೇಯಸ್ಕರಗಳು. ('ಅಗ್ನೌ ಪ್ರಾಸ್ತಾ ಽಽ ಹುತಿ ಸ್ಸಮ್ಯ ಗಾದಿತ್ಯ ಮುಪತಿಷ್ಠತೇ। ಆದಿತ್ಯಾ ಜ್ಜಾಯತೇವೃ ಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ,) ಎಂಬ ಸ್ಮೃತಿಗನುಸಾರವಾಗಿ ಶ್ರದ್ಧೆಯಿಂದ ಭಕ್ತಿಪುರಸ್ಸರವಾಗಿ ನಾವು ಅಗ್ನಿಯಲ್ಲಿ ಆಹುತಿಕೊಟ್ಟಪಕ್ಷದಲ್ಲಿ ಆ ಆಹುತಿಯು ಸೂರ್ಯನಂ ಹೊಂದುವುದು. ಇಂತು ಆಹುತಿಸ್ವೀಕಾರದಿಂದ ಸಂತುಷ್ಟನಾದ ಆದಿತ್ಯನಿಂದ ಮಳೆಯುಂಟಾಗುವುದು. ಇಂತಹ ವೃಷ್ಟಿಯಿಂದ ಸಸ್ಯಗಳು ಸಮೃದ್ಧಿಯಾಗಿ ಬೆಳೆದು ನಮಗೆ ಅನ್ನವನ್ನು ಒದಗಿಸಿ ಕೊಡುವವು. ಈ ಅನ್ನವನ್ನು ತಿಂದು ನಾವು ಬೆಳೆಯುವೆವು. 'ಬೀಜಾಂಕುರನ್ಯಾಯ' ದಿಂದ (ಬೀಜ

ಯಂತೇ ಧರ್ಮಜ್ಞ ! ಯಜ್ಞಾಃ ಕಲ್ಯಾಣ ಹೇತವಃ ॥ ೪ ॥
ನಿಷ್ಪಾ ದ್ಯಂತೇ ನರೈ ಸ್ತೈಸ್ತೈ ಸ್ವಧರ್ಮಾ ಭಿ ರತೈ ಸ್ಸದಾ ।
ವಿಶುದ್ಧಾ ಚರಣೋ ಪೇತೈ ಸ್ಸದ್ಭಿ ಸ್ಸನ್ಮಾರ್ಗ ಗಾವಿ ಭಿಃ ॥ ೯ ॥

ವಿಲ್ಲದೊಡೆ ವೊಳಕೆಯಾಗಲಾರದು ವೊಳಕೆ ಇಲ್ಲದೊಡೆ ಬೀಜವೇ ಉಂಟಾಗಲಾರದು.) ನಾವು ಪುನಃ ಯಜ್ಞಕರ್ಮಾಚರಣ ಶೀಲರಾಗಿರ ಬೇಕು. ಅದರಿಂದ ದೇವತೆಗಳು ನಮ್ಮ ಇಷ್ಟಾರ್ಥಗಳನ್ನು ನೆರವೇರಿ ಸುವರು. ಈ ವಿಷಯದಲ್ಲಿ 'ದೇವಾ ಭಾವಯತಾನೇನ ತೇದೇವಾಭಾ ವಯಂತುವಃ । ಪರಸ್ಪರಂ ಭಾವಯಂತಶ್ಶ್ರೇಯಃ ಪರಮ ವಾಪ್ಸ್ಯಥ, ಎಂಬ ಗೀತಾವಾಕ್ಯವೂ ಪ್ರಮಾಣವಾಗಿರುವುದಲ್ಲದೆ ಇದೇ ರ್ಥವನ್ನೇ ಸ್ಪಷ್ಟವಾಗಿ ಬೋಧಿಸುತ್ತಿರುವುದು, ಇಂತು ನಮಗೂ ಆ ದೇವತೆಗಳ ಗೂ ಇರತಕ್ಕ ಸಂಬಂಧವು ಸೃಷ್ಟ್ಯಾದಿ ಯಾದ ಮೊದಲ್ಗೊಂಡು ಅನುವರ್ತಿ ಸಿರುವಕಾರಣ ಅಂತಹ ಯಜ್ಞಾದಿಗಳನ್ನು ನಾವು ಕಾಲಕಾಲಕ್ಕೆ ಸರಿ ಯಾಗಿ ಆಚರಿಸದಿದ್ದಲ್ಲಿ ಸಕಾಲದಲ್ಲಿ ಮಳೆಗಳು ಸುರಿಯದೆ ನಮ್ಮ ಶ್ರೇ ಯಸ್ಸಿಗೆ ತೊಂದರೆಯಾಗುವುದೆಂದು ಭಾವವು ॥ ೪ ॥ (ಅಯ್ಯಾ ಮೃತ್ಯೋ ಯನೆ,) ಸ್ವಧರ್ಮಗಳೆನಿಸುವ ಶ್ರುತ್ಯುಕ್ತ ಕಾರ್ಯಗಳಲ್ಲಿ ಆಸಕ್ತರೆನ್ನಿ ಸಿ, ಸ್ಮೃತ್ಯುಕ್ತಗಳಾದ ಸತ್ಕರ್ಮಗಳಲ್ಲಿ ಪ್ರವೃತ್ತರಾಗಿ, ವಿರುದ್ಧವಾದ ನಡವಳಿಕೆಯಂ ದೂರತಳ್ಳಿ, ಸನ್ಮಾರ್ಗವಲಂಬಿಗಳೆನಿಸಿ, ತಂದೆ, ತಾತ ಮೊದಲಾದವರಿಂದ ಆಚರಿಸಲ್ಪಟ್ಟ ಸದಾಚಾರಾನುಸಾರಿಗಳೆನಿಸುವ ವಿದ್ವಾಂಸರಿಂದಈ ಯಜ್ಞಯಾಗಾದಿರೂಪಗಳಾದ ಕಾರ್ಯಗಳು ವಿಹಿ ತಕಾಲಗಳಲ್ಲಿ ಆಚರಿಸಲ್ಪಡುತ್ತವೆ ॥ ೯ ॥ ಈಹಿಂದೆ ಹೇಳಿದಕಾರಣ ಗಳನ್ನು ಪಲ್ಯಾಲೋಚಿಸಿದಲ್ಲಿ ಮನುಷ್ಯಜನ್ಮವೇ ಶ್ರೇಷ್ಠವೆಂಬುದಾಗಿ ತೋರುವುದು. ಈ ವಿಷಯದಲ್ಲಿ ಇನ್ನೂ ಕಲವು ನಿದರ್ಶನಗಳು ಟು. ಅವುಗಳನ್ನೇ ವಿವರಿಸುವೆನು ಕೇಳು. ಅಯ್ಯಾ ಮನನ ಶೀಲನೆನಿಸಿದ ಬ್ರಾಹ್ಮಣನೇ, ಪ್ರಾಣಿಗಳು ಜರಾಮರಣ,ಕ್ಷುತ್ತಿ ಪಾಸೆ, ಸುಖದುಃಖ, ರಾಗದ್ವೇಷ ಮೊದಲಾದವುಗಳನ್ನೂ ಮೀರಿ, ಸುಖಾಭಾಸವೆನಿಸಿ ಕೇವಲ ದುಃಖಮಯವಾದ ಈ ಸಂಸಾರ ಸಮುದ್ರದಿಂದ ತಡಿಯನ್ನು ಸೇರ

ಸ್ವರ್ಗಾಪವರ್ಗೌ ಮಾನುಷ್ಯಾ ತ್ಪ್ರಾಪ್ನುವಂತಿ ಮಹಾ ಮುನೇ ! ॥ ಯಥಾಭಿರುಚಿತಂ ಸ್ಥಾನಂ ತದ್ಯಾಂತಿ ಮನುಜಾ ದ್ವಿಜ ! ॥ ೧೦ ॥ ಪ್ರಜಾಸತ್ತಾ ಬ್ರಹ್ಮಣಾ ಸೃಷ್ಟಾ, ಶ್ಚಾತುರ್ವರ್ಣ್ಯೇ ವ್ಯವಸ್ಥಿತಾಃ । ಸಮ್ಯಕ್ ಶ್ರದ್ಧಾ ಸಮಾಚಾರ ಪ್ರವಣಾ ಮುನಿಸತ್ತಮ ! ॥ ೧೧ ॥ ಯಥೋಚ್ಚಾವಚ ವಾಸನಿರತಾ

ಬೇಕಾದ ಪಕ್ಷದಲ್ಲಿ (ಮೋಕ್ಷಸಂಪತ್ತನ್ನು ಹೊಂದಬೇಕಾದ ಪಕ್ಷದಲ್ಲಿ ಅಥವಾ ಪುನರ್ಜನ್ಮರಾಹಿತ್ಯವನ್ನು ಪಡೆಯಬೇಕಾದಲ್ಲಿ) ಮನುಷ್ಯನೊಬ್ಬನಿಗೆ ಮಾತ್ರ ಇದು ಸಾಧ್ಯ ವೇ ಹೊರತು ಮತ್ತಾರಿಗೂ ಸಾಧ್ಯವಲ್ಲ ಶಕ್ತಿವಿಶೇಷವುಳ್ಳವಿಕೆ, ಕೂಪಾರಾಮಾದಿನಿರ್ಮಾಣ, ಷೋಡಶಮಹಾದಾನಗಳು ಮೊದಲಾದಸತ್ಕಾರ್ಯಗಳನ್ನಾಚರಿಸಿಸ್ವರ್ಗಾದಿಸುಖವಂ ಪಡೆಯಬೇಕಾದರೂ ಮನುಷ್ಯನೇಅಧಿಕಾರಿಯು.ಅಥವಾತನಗೆಇಷ್ಟವಾದ ಸತ್ಯಲೋಕ, ವೈಕುಂಠ, ಕೈಲಾಸವೊದಲಾದ ಉತ್ತಮ ಸ್ಥಾನಗಳನ್ನು ಪಡೆಯಬೇಕಾದರೂ ಮನುಷ್ಯನೊಬ್ಬನಿಗಲ್ಲದೆ ಮತ್ತಾರಿಗೂ ಸಾಧ್ಯವಲ್ಲದ ಕಾರಣ ಇಂತಹ ಮನುಷ್ಯ ಜನ್ಮಕ್ಕಿಂತಲೂ ಉತ್ತಮವಾದಜನ್ಮವುಂಟೆ, ಆದುದರಿಂದಲೇ ಈ ಜನ್ಮವನ್ನು ಶ್ರೇಷ್ಠವನ್ನಾಗಿ ಹೇಳಿದೆನು. ॥೧೦॥ ಮನನ ಶೀಲರಾದುದರಿಂದ ಮುನಿಗಳೆಂಬದಾಗಿ ಕರೆಯಿಸಿಕೊಳ್ಳುವ ಜ್ಞಾನಿಗಳಲ್ಲಿ ಶ್ರೇಷ್ಠನಾದ ಮೈತ್ರೇಯನೆ ! ಇಂತು ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರರೆಂಬದಾಗಿ ನಾಲ್ಕು ವರ್ಣಗಳಾಗಿ ಆಬ್ರಹ್ಮನಿಂದ ವಿಭಾಗವಾಡಲ್ಪಟ್ಟ ಆಪ್ರಜೆಗಳು ಶ್ರುತಿ, ಸ್ಮೃತಿ, ಪುರಾಣಾದಿಗಳಲ್ಲಿ ಶ್ರದ್ಧಾಯುಕ್ತರೆನಿಸಿ, ಸದಾಚಾರ ಸಂಪನ್ನರಾಗಿ ತಮ್ಮ ತಮಗೆ ವಿಹಿತಗಳಾದ ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು ॥೧೧॥ ಶೀತೋಷ್ಣ, ಸುಖದುಃಖವೊದಲಾದ ಯಾವ ಬಾಧೆಗಳೂ ಅವರಿಗಿರಲಿಲ್ಲವಾದುದರಿಂದ ತಮ್ಮ ಮನಸ್ಸು ಬಂದಂತೆ ಬೆಟ್ಟ, ಕಾಡು, ಗವಿಯೊದಲಾದೆಡೆಯಲ್ಲಿ ವಾಸಮಾಡಲುಪಕ್ರಮಿಸಿ, ಸತ್ಕುಲ ಪ್ರಸೂತರಾದ ಕಾರಣ ತಮಗೆ ವಿಹಿತಗಳಾದ ಕಾರ್ಯಗಳೆಲ್ಲವನ್ನೂ ಆಚರಿಸುತ್ತಾ ಅದರ ಮೂಲಕ ಪಾಪವನು ಹೋಗಲಾಡಿಸಿಕೊಂಡು * ಕಾಮ, ಕ್ರೋಧ, ಮೋಹ, ಹರ್ಷ, ಮಾನ್ಸ

* ಇನೇ ಅಧ್ಯಾಯದ ಒಳಗೇ ಪುಟದ ಟಪ್ಪಣಿಯನ್ನು ನೋಡಿರಿ.

ಸ್ಸರ್ವ ಬಾಧಾ ವಿವರ್ಜಿತಾಃ । ಶುದ್ಧಾಂತಃ ಕರಣಾಶ್ಚ
ದ್ಧಾ ಸ್ಸರ್ವಾನುಷ್ಠಾನ ನಿರ್ಮಲಾಃ ॥ ೧೨ ॥ ಶುದ್ಧೇಚ ತಾ
ಸಾಂ ಮನಸಿ ಶುದ್ಧೇಂತ ಸ್ಸಂಸ್ಥಿತೇ ಹತಾ । ಶುದ್ಧಜ್ಞಾನಂ
ಪ್ರಪಶ್ಯಂತಿ ವಿಷ್ಣ್ವಾ ಖ್ಯಂ ಯೇನ ತತ್ಪದಂ ॥೧೩॥ ತತಃ
ಕಾಲಾತ್ಮಕೋ ಯೋಽಸೌ ತಸ್ಯಾಂಶಃ ಕಥಿತೋ ಹರೇಃ ।
ಸಪಾತಯತ್ಯ ಘಂ ಘೋರ ಮಲ್ಪ ಮಲ್ಪಾಲ್ಪ ಸಾರವ
ತ್ ॥ ೧೪ ॥ ಅಧರ್ಮ ಬೀಜಮುದ್ಭಿಕ್ತಂ ತಮೋಲೋಭ ಸ
ಮುದ್ಭವಂ । ಪ್ರಜಾಸು ತಾಸು ಮೈತ್ರೇಯ । ರಾಗಾದಿಕ ಮ
ನಾಧಕಂ ॥೧೫॥ ತತಸ್ಸಾ ಸಹಜಾ ಸಿದ್ಧಿ ಸ್ತಾಸಾಂ ನಾತೀ

ಮದ, ಮತಿ, ವಿಷಾದಗಳೆಂಬ ಎಂಟು ವಿಧಗಳಾದ ಮಾನಸಿಕ ಮಲ
ಗಳನ್ನೂ ತೊರೆದು ನಿರ್ಮಲಾಂತಃಕರಣರೆನಿಸಿ ಸುಖದಿಂದಿರುತ್ತಿದ್ದ
ರು. ॥ ೧೨ ॥ ಇಂತು ಮನೋ ನೈರ್ಮಲ್ಯವನ್ನಪಡೆದು ಸದಾಭಗವ
ದ್ಧ್ಯಾನನಿರತರಾಗಿರುವ ಕಾರಣ ಅಂತಹ ಪರಿಶುದ್ಧವಾ ತಮ್ಮ ಮನಸ್ಸಿ
ನಲ್ಲಿ, ಸರ್ವದಾ ನೆಲೆಗೊಂಡು ಜೀವಿಗಳಿಂದಮಾಡಲ್ಪಡತಕ್ಕ ಪುಣ್ಯಪಾಪ
ರೂಪವಾದ ಕರ್ಮಸಂಗವಿಲ್ಲದುದರಿಂದ ಪರಿಶುದ್ಧ ನಿನಿಸುವ ಪರಮಾತ್ಮನ
ನ್ನು ಧ್ಯಾನಗೈಯುತ್ತಾ, ಯಾವ ಜ್ಞಾನವು ಉಂಟಾದೊಡೆತತ್ಪಶಬ್ದವಾಚ್ಯ
ನಾದ ಆತನ ಸಾಯುಜ್ಯವು ದೊರಕುವುದೋ ಅಂತಹ ಜ್ಞಾನವನ್ನು ಪಡೆ
ದು ಕೊಳ್ಳುತ್ತಿದ್ದರು (ಇದರಿಂದ ಆಕಾಲದಲ್ಲಿದ್ದವರೆಲ್ಲರೂ ಕೇವಲ ಬ್ರ
ಹ್ಮ ನಿಷ್ಠರೆಂದು ಭಾವವು) ॥೧೩॥ಇಂತು ಆತ್ರೇತಾಯುಗದಲ್ಲಿ ಕೆಲವುಕಾ
ಲವುಕಳೆದ ತರುವಾಯ ವಿಷ್ಣುವಿನ ಮೂರನೆಯರೂಪವೆನಿಸಿದ ಆಕಾಲವು
ಬಹಳ ಮಟ್ಟಿಗೂ ದುಃಖವನ್ನೇ ಉಂಟುಮಾಡುವ, ಮತ್ತು ಅತ್ಯಲ್ಪವಾ
ದ ಸುಖವುಳ್ಳದ್ದಾದಕಾರಣ ಸುಖದಂತೆ ಕಂಡು ಬರುವ, ಉತ್ಪನ್ನವಾದ
ಎರಡನೆಯ ಕ್ಷಣದಲ್ಲಿಯೇ ಬುದ್ಧಿಶಾಲಿಯಾದವನಿಂದ ನಿಗ್ರಹಿಸಲು ಯೋ
ಗ್ಯವಾದ, ಮತ್ತು ಪುರುಷಾರ್ಥಪ್ರತಿಬಂಧಕವೆನಿಸಿದ ತಮೋಗುಣ, ಲೋ
ಭ (ಅತ್ಯಾಶೆ) ಇವುಗಳಿಗೆ ಮೂಲಭೂತವೆನಿಸಿ,ರಾಗ,ದ್ವೇಷ, ವಿಷಯಾಭಿ
ಲಾಷೆ, ಕೋಪ, ಮಾತ್ಸರ್ಯ ಇವೇ ಮೊದಲಾದ ದುಃಖ ಪರಂಪರೆಗಳ
ಸ್ಸಂಟುನಮಾಡುವ ಕಾರಣ ಅತಿತುಚ್ಛವೆನಿಸಿದ ಅಧರ್ಮ ಬೀಜವನ್ನು ಈ
ಪ್ರಜೆಗಳಲ್ಲಿ ನೆಟ್ಟನು ॥೧೪॥೧೫॥ ಇಂತು ಕಾಲರೂಪಧಾರಿಯಾದ ಆಪರ

ವ ಜಾಯತೇ । ರಸೋಲ್ಲಾಸಾದಯಶ್ಚಾನ್ಯಾ * ಸ್ಸಿದ್ಧ
ಯೋ ೨ ಷ್ಟಾಭವಂತಿಯಾಃ ॥ ೧೬ ॥ ತಾಸುಕ್ಷೀಣಾಸ್ವ ಶೇ
ಷಾಸು ವರ್ತಮಾನೇ ಚ ಪಾತಕೇ । ದ್ವಂದ್ವಾಭಿಭವ ದುಃ
ಖಾರ್ತಾಸ್ತಾಭವಂತಿ ತತಃ ಪ್ರಜಾಃ ॥ ೧೭ ॥ ತತೋದುರ್ಗಾ

ಮಾತ್ಮನು ಪ್ರಜೆಗಳಲ್ಲಿ ಅಧರ್ಮ ಬೀಜವನ್ನು ನೆಡಲಾಗಿ,ಅವರಿಗೆ ಜನ್ಮದೊ
ದಲ್ಗೊಂಡು ಸಹಜಗಳಾಗಿದ್ದ ಊಹ, ಶಬ್ದ, ಮೊದಲಾದ ಎಂಟು ಸಿದ್ಧಿ
ಗಳೂ,ಶೀತೋಷ್ಣ, ಸುಖದುಃಖ, ಜರಾಮರಣ, ಕ್ಷುತ್ಪಿಪಾಸೆ ಮೊದಲಾ
ದ ದ್ವಂದ್ವದುಃಖಗಳನ್ನು ಜಯಿಸುವಿಕೆಯಿಂದಂಟಾಗುವ ಮತ್ತು ಕೃತಯು
ಗದಲ್ಲಿ ಮಾತ್ರ ಸಿದ್ಧಿಸುವ 'ಮಿಥುನೋತ್ಪತ್ತಿ' ಎಂಬಸಿದ್ಧಿಯೂ, ಇತರ
ಯುಗಗಳಲ್ಲಿಯೂ ಸಿದ್ಧಿಸಬಹುದಾದ, ಇತರ ಏಳು ವಿಧ ಸಿದ್ಧಿಗಳೂ
ಕೂಡ ಫಲಿಸದೆ ಹೋದವು, ಅಂದರೆ ಮನಸ್ಸಿನಲ್ಲಿ ರಾಗದ್ವೇಷಾದಿಗಳುಂ
ಟಾದುದರಿಂದ ಕಾರ್ಯಸಿದ್ಧಿಯಾಗುವವರೆಗೂ ನಿಶ್ಚಿಂತನಾಗಿ ಏಕಾಗ್ರಚಿತ್ತ
ತೆಯಿಂದ ಕಾರ್ಯವನ್ನು ಸಾಧಿಸುವ ಸಾಮರ್ಥ್ಯವು ಅವರಿಗೆತಪ್ಪಿಹೋಯಿ
ತು ಎಂಬುದಾಗಿ ಭಾವವು ॥೧೬॥ ಇಂತು ಸಹಜವಾದ ಸಿದ್ಧಿಯು ತಪ್ಪಿ
ಹೋಗುತ್ತಿರಲು ಪಾಪವು ಅಭಿವೃದ್ಧವಾಗಿ ಪ್ರಜೆಗಳೆಲ್ಲರೂ ಪಾಪಾಚರ
ಣಾಸಕ್ತರಾಗಿ ಶೀತೋಷ್ಣ ಸುಖದುಃಖ ಮೊದಲಾದ ದುಃಖಗಳಿಂದ ಪೀ
ಡಿತರಾದರು ॥೧೭॥ ಬಳಿಕ ಎಲ್ಲರೂ ಪರಸ್ಪರ ದ್ವೇಷಾ ಸೂಯಾದಿಗಳಿಂ

---

(೧) ಮಿಥುನೋತ್ಪತ್ತಿ ಸಿದ್ಧಿ, (೨) ರಸೋಲ್ಲಾಸ ಸಿದ್ಧಿ, (೩) ಸಕೃದ್ವ್ಯೃ
ಷ್ಟಿಮಯ ಸಿದ್ಧಿ, (೪) ಗೃಹವೃಕ್ಷಾತ್ಮಿಕ ಸಿದ್ಧಿ (೫) ಸಂಕಲ್ಪ ಸಿದ್ಧಿ, (೬) ಕಲ್ಪವೃ
ಕ್ಷಾತ್ಮಕಸಿದ್ಧಿ, (೭) ಪ್ರಕಾಮ ವೃಷ್ಟಿಸಿದ್ಧಿ (೮) ಅಕೃಷ್ಟಪಚ್ಯಸಿದ್ಧಿಗಳೆಂಬಿದಾಗಿ
ಸಿದ್ಧಿಯು ಎಂಟುವಿಧವಾಗಿರುವುದು ಅದೆಂತೆಂದರೆ

(೧) ಭೋಗಸಾಧನವಾದ ಸ್ತ್ರೀವ್ಯಕ್ತಿಯಿಲ್ಲದೆಯೇ ವಿಷಯಾನಂದಾನು ಭವವು

(೨) ಯೋಗಾಭ್ಯಾಸ ಬಲದಿಂದ ತನ್ನ ತಲೆಯಮೇಲೆ ಚಂದ್ರನು ಅಮೃತವ
ನ್ನು ಸ್ರವಿಸಿದಂತೆ ಆನಂದವಾಗುವಿಕೆ

(೩) ಬಂದಾವರ್ತಿ ಮಳೆ ಬಿದ್ದಲ್ಲಿ ಪುನಃ ಮಳೆಯಿಲ್ಲದೆಯೇ ಸಸ್ಯಗಳು ಸಮೃ
ದ್ಧಿಯಾಗಿ ಬೆಳೆಯುವಿಕೆ.

(೪) ತನಗೆ ಬೇಕಾದ ಕಡೆ ತನ್ನ ಮನಸ್ಸಿಗೆ ಇಷ್ಟವಿದ್ದಂತೆ ಮನೆ, ತೋಟ
ಮೊದಲಾದವುಗಳನ್ನು ನಿರ್ಮಾಣಮಾಡಿಕೊಳ್ಳುವಿಕೆ.

ಣಿ ತಾಶ್ಚಕ್ರು ರ್ಧಾನ್ಯಂ ಪಾರ್ವತ ಮೌದಕಂ । ಕೃತ್ರಿಮಂ
ಚ ತಥಾದುರ್ಗಂ ಪುರಖಟ್ವಾದಿಕಾದಿಯುತ' ॥ ೧೪ ॥ ಗೃಹಾ
ಣಿಚ ಯಥಾನ್ಯಾಯಂ ತೇಷುಚಕ್ರುಃ ಪುರಾದಿಷು । ಶೀತಾ
ತಪಾದಿ ಬಾಧಾನಾಂ ಪ್ರಶಮಾಯ ಮಹಾಮುನೇ ! ॥೧೫॥

ದ ಕೂಡಿರುವ ಕಾರಣ ಬಬ್ಬರಿಂದೊಬ್ಬರು ಹೆದರಿಕೊಂಡು ಚೋರಾದಿ ಭೀತಿ ನಿವಾರಣಾರ್ಥವಾಗಿ ಧನುಸ್ಸುಗಳಿಂದಲೂ, ದೊಡ್ಡ ದೊಡ್ಡ ಕಲ್ಲುಗಳಿಂದಲೂ, ಉದಕದಿಂದಲೂ, ಗೋಡೆಗಳಿಂದಲೂ ಸಹ ದುರ್ಗಗಳನ್ನು (ಕೋಟೆ ಕಂದಕ ಮೊದಲಾದವುಗಳನ್ನು)ಉಂಟು ಮಾಡಿಕೊಂಡರು. ಬಳಿಕ ಈ ಕೋಟೆಯು ಬಳಭಾಗದಲ್ಲಿ ಪಟ್ಟಣ ಮೊದಲಾದವುಗಳನ್ನೂ ಇವುಗಳ ರಕ್ಷಣಾರ್ಥವಾಗಿ ಸೈನ್ಯವನ್ನೂ ಸಹ ಕಲ್ಪಿಸಿಕೊಂಡರು. ॥೧೪॥ ಅಯ್ಯಾ ಮುನಿ ಶೀಲರೊಳ್ ಬೊಡ್ಡವನೆನಿಸಿದ ವೈತ್ರೇಯನೇ ? ಇಂತು ಪತ್ತನಾದಿ ನಿರ್ಮಾಣವಾದ ಬಳಿಕ ಆಪತ್ತಿನದಲ್ಲಿ ಚಳಿ, ಬಿಸಿಲು, ಮಳೆ ಮೊದಲಾದ ತೊಂದರೆಗಳನ್ನು ಪರಿಹಾರ ಮಾಡಿಕೊಳ್ಳಲು ವಾಸ್ತು ಶಾಸ್ತ್ರೋಕ್ತಪ್ರಕಾರವಾಗಿ ಶಾಶ್ವತವಾಗಿಯೂ, ಧನಯು ಕ್ತವೆನಿಸಿಕೊಂಡು, ಜಯಶೀಲವೆನಿಸಿ, ಮನೋಹರವೆನಿಸಿ, ವಿಶಾಲವಾಗಿಯೂ, ದೃಢವಾಗಿಯೂ, ಮನೋಹರವಾದ ಮುಖಭಾಗವುಳ್ಳದ್ದಾಗಿಯೂ, ಬೇಕಾದ ಕೋರಿಕೆಗಳನ್ನು ಸಫಲಗೊಳಿಸುವ ಶ್ರೇಷ್ಠವಾದ ಮನೆಗಳನ್ನು ಕಟ್ಟಿಕೊಂಡು ಆ ಮನೆಗಳಲ್ಲಿ ಸುಖವಾಗಿ ವಾಸಮಾಡುತ್ತಿದ್ದರು ॥೧೫॥ ಇಂತು ಆಪ್ರಜೆಗಳು ವಿಶ್ವಕರ್ಮ ಶಾಸ್ತ್ರೋಕ್ತ ಪ್ರಕಾರ ಶೀತಾತಪಾದಿ ಬಾಧೆಗಳಂತಪ್ಪಿಸಿಕೊಳ್ಳಲು ಅವಕ್ಕೆ ಪ್ರತೀಕಾರವಾಗಿ ಗೃಹಾದಿಗಳನ್ನು ನಿರ್ಮಾ

---

(೫) ಇಚ್ಛಿಸಿದ ಮಾತ್ರದಿಂದಲೇ ಬೇಕಾದವುಗಳೆಲ್ಲವೂ ಕೈಗೂಡುವಿಕೆ

(೬) ಭರದ್ವಾಜ ಮಹರ್ಷಿಯು ರಾಮನನ್ನು ಅರಣ್ಯದಿಂದ ಕರತರಲು ಹೋಗುವಾಗ ಭರತನಿಗೂ, ಅರಣ್ಯವಾಸವನ್ನು ಪೂರ್ತಿಮಾಡಿ ಅಯೋಧ್ಯೆಗೆ ಭರತಕ್ಕ ಕಾಲದಲ್ಲಿ ರಾಮನಿಗೂ ಕೂಡ ಸಂಕಲ್ಪಮಾತ್ರದಿಂದಲೇ ಮಾಡಿದ ಆತಿಥ್ಯದಂತೆ ಜನಗಳ ಅಭಿಮತ ಪೂರ್ತಿಮಾಡುವಿಕೆ.

(೭) ಬೇಕಾದ ಕಾಲದಲ್ಲಿ ಬೇಕಾದಷ್ಟು ಮಳೆಯನ್ನುಂಟು ಮಾಡುವಿಕೆ.

(೮) ಉತ್ತು ಬೀಜ ಹಾಕದೆಯೇ ಧಾನ್ಯಾದಿಗಳನ್ನು ಹೊಂದುವಿಕೆ.

ಇವೆಲ್ಲವೂ ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿವೆ.

ಪ್ರತೀಕಾರ ವಿಮಾ ಕೃತ್ವಾ ಶೇತೌದೇ ಸ್ತಾಃ ಪ್ರಜಾಃ ಪುನಃ ।
ವೃತ್ತೋತ್ಪಾಯಂ ತತ ಶ್ಚಕ್ರುಃ ಹಸ್ತ ಸಿದ್ಧಿಂಚ ಕರ್ಮಜಾಂ ॥೨೦॥
ವ್ರೀಹಯಶ್ಚ ಯವಾಶ್ಚೈವ ಗೋಧೂಮಾ ಅಣವಸ್ತಿಲಾಃ।ಪ್ರಿಯಂ
ಗವೋಹ್ಯುದಾರಾಶ್ಚ ಕೋರದೂಷಾ ಸ್ಸತೀನಕಾಃ॥೨೧॥ ಮಾಷಾ
ಮುದ್ಗಾ ಮಸೂರಾಶ್ಚ ನಿಷ್ಪಾವಾಸ್ಸಕುಳುತ್ಥಕಾಃ ॥ ಆಢಕ್ಯಶ್ಚ
ಣಕಾಶ್ಚೈವ ಶಣಾಸ್ಸಪ್ತ ದಶಸ್ಮೃತಾಃ ॥೨೨॥ ಇತ್ಯೇತಾ ಓಷ
ಧೀನಾಂತು ಗ್ರಾಮ್ಯಾಣಾಂ ಜಾತಯೋಮುನೇ ! । ಓಷಧ್ಯೋಯಾ
ಜ್ಞಿಕಾಶ್ಚೈವ ಗ್ರಾಮ್ಯಾರಣ್ಯಾಶ್ಚತುರ್ದಶ ॥೨೩॥ ವ್ರೀಹಯ ಸ್ಸ

ಣಮಾಡಿಕೊಂಡು ಬಳಿಕ ಜೀವನಾರ್ಥವಾಗಿ ಕೃಷ್ಯಾದಿಗಳನ್ನೂ ಇರತವಿ
ಧವಾದ ಕೈಗಾರಿಕೆಗಳನ್ನೂ ಕಲ್ಪಿಸಿಕೊಂಡು ಜೀವನ ಮಾಡತೊಡಗಿದ
ರು ॥೨೦॥ ಅವರು ಮಾಡುತ್ತಿದ್ದ ಕೃಷಿಯಿಂದ ಉಂಟಾಗುತ್ತಿದ್ದ ಧಾನ್ಯಗ
ಳನ್ನು ವಿವರಿಸುವೆನು ಕೇಳು. ಅಯ್ಯಾ ಮನನಶೀಲನಾದ ಮೈತ್ರೇಯನೆ!
ಬತ್ತ, (ನೆಲ್ಲು) ಜವೆ ಅಥವಾ ಬಾಲವಿರುವ ಬಿಳಿಯದಾದ ದಪ್ಪ ಬತ್ತ,
ಗೋಧಿ, ಕಿರಿ ಬತ್ತ ಅಥವಾ ಜೀರಿಗೆ ಸಂಬಾರ ಬತ್ತ, ಎಳ್ಳು, ನವಣೆ,
ಉದಾರವೆಂಬದಾಗಿ ಕರೆಯಲ್ಪಡುವ ಉದ್ದವಾದ ತೆನೆಗಳುಳ್ಳ ಒಂದು
ವಿಧವಾದ ಬತ್ತ, ಹಾರಕ, ನೆಲಕಡಲೆ ಅಥವಾ ಕಾಡಲೇಕಾಯಿ, ಉ
ದ್ದು, ಹೆಸರು, ಕಾಡುಗಡಲೆ ಅಥವಾ ಕಿರಿಗಡಲೆ, ಅವರೆಯಕಾಳು,
ಹುರುಳಿ, ತೊಗರಿ, ಕಳ್ಳೆ, ಶಣವೆಂದರೆ ಸಣಬನ್ನು ಮಾಡತಕ್ಕ ಪು
ಣ್ಣಂಗಿ ಬೀಜ ಈ ಹದಿನೇಳೂ ಅವಶ್ಯವಾಗಿ ಉಪಯೋಗಿಸಲ್ಪಡುವ
ಕಾರಣ ಇವುಗಳ ವಿಷಯದಲ್ಲಿ ವಿಶೇಷವಾಗಿ ಕೃಷ್ಯಾದಿ ಪ್ರಯತ್ನಗಳಂ
ಮಾಡಿ ಬೆಳೆಯಿಸುತ್ತಿದ್ದರು. ಬಳಿಕ ಅರಣ್ಯದಲ್ಲಿ ಉಂಟಾಗುವ ಮತ್ತು ಗ್ರಾ
ಮಗಳಲ್ಲಿ ಕೃಷ್ಯಾದಿಗಳಿಂದ ಬೆಳೆಯಲ್ಪಡುವ ಯಜ್ಞೋಪಯೋಗಿಗ
ಳಾದ ಧಾನ್ಯಗಳಂ ವಿವರಿಸುವೆನು. ಇವು ಹದಿನಾಲ್ಕು ಭೇದಗಳುಳ್ಳವು.
ಅವು ಯಾವುವಂದರೆ ॥೨೦॥೨೩॥ ನೆಲ್ಲು, ಜವೆ ಅಥವಾ ಬಾಲವಿರುವ ಬಿ
ಳಿಯದಾದ ದಪ್ಪ ಬತ್ತ, ಉದ್ದು, ಗೋಧಿ, ಕಿರಿಬತ್ತ ಅಥವಾ ಜೀರಿಗೆ
ಸಂಬಾರದ ಬತ್ತ, ಎಳ್ಳು, ನವಣೆ, ಹುರುಳಿ, ಸಾವೆ, ಕಾಡಿನಲ್ಲಿ ಯಾರಿಂ
ದಲೂ ಬಿತ್ತಲ್ಪಡದೆ ತಾನಾಗಿಯೇ ಬೆಳೆಯುವ ನೀವಾರವೆಂಬ ಧಾನ್ಯವಿಶೇ

ಯವಾ ಮಾಷಾ ಗೋಧೂಮಾ ಅಣವಸ್ತಿಲಾಃ । ಪ್ರಿಯಂಗು ಸಪ್ತ
ಮಾ ಹ್ಯೇತೇ ಅಪ್ಸ್ವಮಾಸ್ತು ಕುಳುತ್ಥಕಾಃ ॥೨೪॥ ಶ್ಯಾಮಾಕಾ
ಸ್ತ್ವಥ ನೀವಾರಾ ಜರ್ತಿಲಾಸ್ಸ ಗವೇಧುಕಾಃ । ತಥಾವೇಣು
ಯವಾಃಪ್ರೋಕ್ತಾಸ್ತದ್ವನ್ಮರ್ಕಟಕಾ ಮುನೇ ! ॥೨೫॥ ಗ್ರಾ
ಮ್ಯಾ ರಣ್ಯಾ ಸ್ಮೃತಾಶ್ಚೈತಾ ಓಷಧ್ಯಸ್ತು ಚತುರ್ದಶ ಯಜ್ಞಾ
ನಿಷ್ಪತ್ತಯೇ ಯಜ್ಞಾ ಸ್ಥಾ ಽ ಸಾಂ ಹೇತು ರುತ್ತಮಃ ॥೨೬॥
ಏತಾಶ್ಚ ಸಹಯಜ್ಞೈಸ್ತು ಪ್ರಜಾನಾಂ ಕಾರಣಾ ಪರಂ । ಪರಾ
ಪರವಿದಃ ಪ್ರಾಜ್ಞಾ ಸ್ತತೋ ಯಜ್ಞಾ ನ್ಪ್ರಚಕ್ಷತೇ ॥೨೭॥ ಅಹನ್ಯ
ಹನ್ಯನುಷ್ಠಾ ನಂ ಯಜ್ಞಾನಾಂ ನ ವಿಸಿಸ್ಮತ್ತು ! । ಉಪಕಾರಕರಂ

ಷ, ಕಾಡು ಎಳ್ಳು, ಗವೇಧುಕವೆಂಬ ಧಾನ್ಯ, ಪಿದುರಕ್ಕಿ, ಮರ್ಕಟಕವೆಂಬ ಕಾಡು ಧಾನ್ಯ ವೆಂಬ ಕಾಡುನನಕೆ ಈಹದಿನಾಲ್ಕರಲ್ಲಿ ಕೆಲವು ಗ್ರಾಮಗಳಲ್ಲಿಯೂ, ಮತ್ತೆ ಕೆಲವು ಅರಣ್ಯಗಳಲ್ಲಿ ನೂ ಉಂಟಾಗುವಕಾರಣ ಈ ಹದಿನಾಲ್ಕಕ್ಕೂ ಗ್ರಾಮ್ಯಾರಣ್ಯಗಳೆಂಬದಾಗಿ ಹೆಸರು ಇವುಗಳನ್ನೇ ಯಜ್ಞಾಗಳಲ್ಲಿ ಪ್ರಾಯಿಕವಾಗಿ ಉಪಯೋಗಿಸುತ್ತಾರಾದ ಕಾರಣ ಇವುಗಳಿಗೆ ಯಜ್ಞೋಪಯೋಗಿಧಾನ್ಯಗಳೆಂಬ ವ್ಯವಹಾರವಿರುವ್ದು ಈ ಆರಣ್ಯಕ ಧಾನ್ಯಗಳನ್ನು ಬೆಳೆಯಿಸಲು ಯಜ್ಞಾನೇ ಕಾರಣವು ಅಂದರೆಯಜ್ಞಕ್ಕೋಸ್ಕರವೇ ಇವು ಬ್ರಹ್ಮನಿಂದ ನಿರ್ಮಿತಗಳಾಗಿ ತಾವಾಗಿಯೇ ಅರಣ್ಯದಲ್ಲಿ ಬೆಳೆಯುವುವೆಂಬದಾಗಿ ಭಾವವು॥೨೪।೨೫॥೨೬॥ಇಂತು ಯಜ್ಞಾಚರಣೆಯಿಂದ ಮಳೆಯುಂಟಾಗಿ ಅದರಿಂದ ಪ್ರಜೆಗಳು ಸುಖಿಸುವರಾವ ಕಾರಣ ಪ್ರಜೆಗಳ ಅಭಿವೃದ್ಧಿಗೆ (ಶ್ರೇಯಸ್ಸಿಗೆ) ಯಜ್ಞಗಳೇ ಕಾರಣಗಳು. ಪರಮವೆನಿಸುವ ನಿರ್ವೇದಗಳು, ಷಡಂಗಗಳು ಮೊದಲಾದವುಗಳನ್ನೂ, ಅಪರ ವಿದ್ಯೆ ಎನಿಸುವ ಉಪನಿಷದ್ವಿದ್ಯೆಯನ್ನೂ ಸಹ ಚೆನ್ನಾಗಿ ಪರಿಶೀಲನ ಮಾಡಿರುವ ಮಹನೀಯರು ವೃಷ್ಟಿಗೆ ಯಜ್ಞವೇ ಕಾರಣವೆಂತಲೂ, ಆ ಯಜ್ಞಗಳಿಂದಲೇ ಪ್ರಜೆಗಳು ಶ್ರೇಯಸ್ಸನ್ನು ಪಡೆಯುವಕಾರಣ ಪ್ರಜೆಗಳೇ ಯಜ್ಞಕ್ಕೆ ಕಾರಣವೆಂತಲೂ ಹೇಳುವರು ॥೨೭॥ಅಯ್ಯಾ ವಸಿಷ್ಠೇಶ್ವರನೆ; ಪ್ರತಿ ದಿನವೂ ಗೃಹಸ್ಥರಿಂದ ಆಚರಿಸಲ್ಪಡತಕ್ಕ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞಗಳೆಂಬ ಈಪಂ

ಪುಂಸಾಂ ಕ್ರಿಯಮಾಣಾಶಾಶಾಂತಿದಂ ॥೨೯॥ ಯೇಷಾಂತುಕಾಲ
ಸೃಷ್ಟೋ ಽ ಸೌ ಪಾಪಬಿಂದು ರ್ಮಹಾನುತೇ । । ಚೇತಸ್ಸುವವೃ
ಧೇ ಚಕ್ರುಸ್ತೇ ನ ಯಜ್ಞೇಷುಮಾನಸಂ ॥೨೯॥ ವೇದಾ ನ್ವೇ
ದ್ಯಂ ತಥಾ ದೇವಾ ನ್ಯಜ್ಞಾ ಕರ್ಮಾದಿಕಂ ಚಯತ್ । ತತ್ಸರ್ವಂ ನಿಂ

ಚಮಹಾಯಜ್ಞಗಳ ಅನುಷ್ಠಾನವು ಅವರು ಮಾಡತಕ್ಕ ಜ್ಞಾನಾಜ್ಞಾನನಿ
ಮಿತ್ತಕಗಳಾಗ ಯಾವ ಪಾಪಗಳುಂಟೋ ಅವುಗಳನ್ನು ನಾಶಮಾಡುವು
ವು. ವೇದಾಧ್ಯಯನದಿಂದ ಬ್ರಹ್ಮನನ್ನೂ. ಯಜ್ಞಯಾಗಾದಿಗಳಿಂದ ದೇ
ವತೆಗಳನ್ನೂ, ತರ್ಪಣ (ನಿವಾಪಾದಿಗಳಿಂದ) ದಿಂದ ಪಿತೃಗಳನ್ನೂ, ವೈಶ್ವ,
ದೇವ, ಬಲಿಹರಣ ನೊವಲಾದವುಗಳಿಂದ ಭೂತಗಳನ್ನೂ, ಅನ್ನದಾನಾದಿ
ಗಳಿಂದ ಮನುಷ್ಯರನ್ನು ಸಂತೋಷಗೊಳಿಸುವಲ್ಲಿ ಈ ಗೃಹಸ್ಥರಿಗೆ
ಪಂಚಸೂನೆಗಳಿಂದುಂಟಾಗುವ ಪಾಪವು ನಿವೃತ್ತವಾಗುವುದು ॥೨೯॥ ಹಿಂ
ದೆ ಹೇಳಿದಪ್ರಕಾರ ಕಾಲದಿಂದ ಬಿತ್ತಲ್ಪಟ್ಟ ಅಧರ್ಮಬೀಜವು ಯಾರ ಮನ
ಸ್ಸಿನಲ್ಲಾದರ ಮೊಳೆತು ಚಿಗುರಿ ಅಭಿವೃದ್ಧವಾಯಿತೋ ಅಂತಹ ಪಾಪಾ ವಿ
ಷ್ಟವಮನಸ್ಕರು ಯಜ್ಞಾದಿಗಳನ್ನು ಆಚರಿಸಲು ಪ್ರಯತ್ನಮಾಡಲೂಕೂಡ
ಅಸಮರ್ಥರಾದರು ಇಂತು ಬ್ರಹ್ಮನಿಂದುಂಟುಮಾಡಲ್ಪಟ್ಟ ಯಜ್ಞಾಂಗ
ಭೂತಗಳಿಸಿದ ಓಷಧಿಗಳು, ಧಾನ್ಯಗಳು ಮೊದಲಾದುವೆಲ್ಲವೂ ಪ್ರಾಣಿ
ಹನಿತ್ಯಗಳೆಂದು ಹೇಳಿದಂತಾಯಿತು. ಯಜ್ಞಗಳಿಗೆ ದೃಷ್ಟವೆನಿಸುವ ವೃ
ಷ್ಟ್ಯಾದಿಗಳೂ, ಅದೃಷ್ಟಗಳೆನಿಸುವ ಸ್ವರ್ಗಾದ್ಯುತ್ತಮಲೋಕಪ್ರಾಪ್ತಿ
ಎಂಬ ಎರಡು ಫಲಗಳನ್ನು ಹೇಳಿದಂತಾಯಿತು ಇಂತು ದೃಷ್ಟಾದೃ
ಷ್ಟೋಭಯರೂಪವಾದ ಫಲವು ಇದರಿಂದ ದೊರೆಯುತ್ತಿದ್ದರೂ ಕೆಲವ
ರು ಮಾತ್ರ ಈಯಜ್ಞಾದಿಗಳನ್ನು ಅನುಷ್ಠಾನದಲ್ಲಿಡುವಿಕೆ, ಕೆಲವರು ಬಿಟ್ಟ
ಡುವುದು ಇದಕ್ಕೆ ಕಾಲಕೃತವಾದ ಪಾಪವೇ ಮೂಲವು ॥೨೯॥ ಇಂತು
ಕೆಲವರು ಪಾಪವಿದ್ಧ ಮನಸ್ಕರಾಗಿ ವೇದಗಳನ್ನೂ. ಕೇವಲಶುದ್ಧಜ್ಞಾನಸ್ವ
ರೂಪನಾದ ಅಥವಾ ಎಲ್ಲರಿಂದಲೂ ತಿಳಿದು ಕೊಳ್ಳಲು ಯೋಗ್ಯನಾದ ಪ
ರಮಾತ್ಮನನ್ನೂ, ಇತರ ಸಾಮಾನ್ಯರಾದ ಇಂದ್ರಾದಿ ದೇವತೆಗಳನ್ನೂ-
ಯಜ್ಞಾದಿ ಕರ್ಮಗಳನ್ನೂ ನಿಂದಿಸತಕ್ಕವರಾಗಿ ಯಜ್ಞಾದಿಗಳನ್ನು ಯಾ
ರಾದರೂ ಮಾಡತೊಡಗಿದರೂ ಕೈಲಾದಷ್ಟು ಅವರಿಗೆ ತೊಂದರೆಗಳನ್ನೇ

ದವಮಾನಾ ಸ್ತೇ ಯಜ್ಞಾವ್ಯ ಸೇಧಕಾರಿಣಃ ॥೫೦॥ ಪ್ರವೃತ್ತಿವರ್ಗ
ವ್ಯೇ ಚ್ಛೆತ್ತಿ ಕಾರಿಣೋ ವೇದನಿಂದಕಾಃ । ದುರಾತ್ಮಾನೋ ದುರಾ
ಚಾರಾ ಬಭೂವುಃ ಕುಟಿಲಾಶಯಾಃ ॥೫೧॥ ಸಂಸದ್ಧಾಯಾಂ ತು
ವಾರ್ತಾಯಾಂ ಪ್ರಜಾ ಸ್ಸೃಷ್ಟ್ವಾ ಪ್ರಜಾಪತಿಃ । ಮರ್ಯಾದಾಂ
ಸ್ಥಾಪಯಾಮಾಸ ಯಥಾಕಾಲಂ ಯಥಾ ಗುಣಂ ॥೫೨॥ ವರ್ಣ್ಣ
ನಾ ಮಾಶ್ರಮಾಣಾಂಚಧರ್ಮ್ಮಾ ಧರ್ಮ್ಮ ಭೃತಾಂವರ।ಲೋಕಾಂಶ್ಚ
ಸರ್ವವರ್ಣ್ಣಾನಾಂ ಸಮ್ಯಗ್ಧರ್ಮಾನು ಪಾಲಿನಾಂ ॥೫೩॥ ಪ್ರಾಜಾಪ

ಉಂಟುಮಾಡುತ್ತಾ ಬಂದರು. ॥೫೦॥ ಯಾವದಾದರೂ ಬಂದು ಫಲವನ್ನು
ಮನಸ್ಸಿನಲ್ಲಿಟ್ಟುಕೊಂಡು ತತ್ಸಿದ್ಧಿಗಾಗಿ ಮಾಡಲ್ಪಡುವ ಯಾವ ಸತ್ಕಾರ್ಯ
ವುಂಟೋ ಇದೇ ಪ್ರವೃತ್ತಿ ಧರ್ಮವೆನಿಸುವುದು ಇಂತಹ ಪ್ರವೃತ್ತಿ ಧ
ರ್ಮಕ್ಕೆ ವಿಚ್ಛೇದವು ಉಂಟಾಯಿತು. ವೇದಗಳನ್ನು ನಿಂದಿಸಲುಪಕ್ರ
ಮಿಸಿದರು ದುರಾಚಾರ ಸಂಪನ್ನರಾಗಿ ಬುರಭಿಸಂಧಿಯುಳ್ಳವರಾಗಿ
ಕೇವಲ ದುರಾತ್ಮರೆನಿಸಿಕೊಂಡರು. ॥೫೧॥ ಇಂತು ಬ್ರಹ್ಮನು ಪ್ರಜೆಗಳ
ನ್ನುಂಟುಮಾಡಿ, ಅವರಿಗೆ ಕೃಷ್ಯಾದಿಗಳಿಂದ ಜೀವನವನ್ನು ಕಲ್ಪಿಸಿ, ಆ
ಬಳಿಕ ಸತ್ವಾದಿಗುಣತ್ರಯ ಮಧ್ಯದಲ್ಲಿ ಯಾವ ಗುಣವು ಯಾರಲ್ಲಿ ಎಂತು
ಇದ್ದಿತೋ ಆ ಆಗುಣಾನುಸಾರವಾಗಿ, ಬ್ರಾಹ್ಮಣಾದಿನಾಲ್ಕು ವರ್ಣಗಳ
ಗಳಿಗೂ, ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳಿಗೂ, ಯಾರು ಯಾರು ಎ
ಷ್ಟು ಎಷ್ಟುಕಾಲ ಯಾವಯಾವ ಲೋಕದಲ್ಲಿ ವಾಸಮಾಡಬೇಕಾಗುವು
ದೋ ಅವುಗಳೆಲ್ಲವನ್ನೂ ಕ್ಲುಪ್ತಮಾಡಿ ಲೋಕವ್ಯವಸ್ಥೆಯನ್ನುಂಟುಮಾ
ಡಿದನು. ॥೫೨॥ ಆರ್ಯಾ ಧರ್ಮಜ್ಞಾ ಶಿಖಾಮಣಿಯೆ ! ಬ್ರಾಹ್ಮಣಾದಿ ವ
ರ್ಣ ಚತುಷ್ಟಯಕ್ಕೂ, ಬ್ರಹ್ಮ ಚರ್ಯಾದಿ ಆಶ್ರಮ ಚತುಷ್ಟಯ
ಕ್ಕೂ, ಸಹ ಅವರವರು ಆಚರಣೆಯಲ್ಲಿಡಬೇಕಾದ ಮುಖ್ಯಧರ್ಮ್ಮಗ
ಳು, ಅಂತಹ ಧರ್ಮದಲ್ಲಿಯೇ ನಿರತರಾಗಿದ್ದುಕೊಂಡು ಅವುಗಳಂ ಅನು
ಷ್ಠಾನಮಾಡಿದಲ್ಲಿ ಅವರಿಗೆ ಉಂಟಾಗತಕ್ಕ ಲೋಕಗಳು, ಇವೇ ಮೊ
ದಲಾದುದನ್ನು ತಿಳಿಸುವೆನು. ಕೇಳು. ॥ ೫೩ ॥ ಆರ್ಯಾ ಮೈತ್ರೇ
ಯನೆ ; ನಿತ್ಯಗಳೆನಿಸುವ ಸಂಧ್ಯಾವಂದನಾದಿಗಳು, ನೈಮಿತ್ತಿಕಗಳೆನಿ
ಸುವ ವ್ರತ,ದರ್ಶ ಶ್ರಾದ್ಧವೊವಲಾದವುಗಳು,ಅಗ್ನಿ ಹೋತ್ರ, ದರ್ಶ

ಸ್ಥಂ ಬ್ರಾಹ್ಮಣಾನಾಂ ಸ್ಮೃತಂ ಸ್ಥಾನಂ ಕ್ರಿಯಾವತಾಂ । ಸ್ಥಾ
ನಮೈಂದ್ರಂ ಕ್ಷತ್ರಿಯಾಣಾಂ ಸಂಗ್ರಾಮೇಷ್ವನಿವರ್ತಿನಾಂ ॥೪೪॥
ವೈಶ್ಯಾನಾಂ ವಾರುತಂ ಸ್ಥಾನಂ ಸ್ವಧರ್ಮ ನಿರತಾತ್ಮನಾಂ ॥ ಗಾಂ
ಧರ್ವಂ ಶೂದ್ರಜಾತೀನಾಂ ಪರಿಚರ್ಯಾನು ವರ್ತಿನಾಂ॥೪೫॥ ಅಷ್ಟಾ
ಶೀತಿ ಸಹಸ್ರಾಣಿ ಯತೀನಾ ಮೂರ್ಧ್ವರೇತಸಾಂ ॥ ಸ್ಮೃತಂ ತೇ
ಷಾಂತು ಯತ್ ಸ್ಥಾನಂ ತದೇವ ಗುರುವಾಸಿನಾಂ ॥೪೬॥ ಸಪ್ತ
ರ್ಷಿಣಾಂ ಚಯತ್ ಸ್ಥಾನಂ ಸ್ಮೃತಂ ತದ್ವೈಖನಾಕಸಾಂ । ಪ್ರಾ
ಜಾಪತ್ಯಂ ಗೃಹಸ್ಥಾನಾಂ ನ್ಯಾಸಿನಾಂ ಬ್ರಹ್ಮಸಂಜ್ಞಿತಂ ॥ ೪೭ ॥

ಪೌರ್ಣಮಾಸೇಷ್ಟಿ ಮೊದಲಾದ ಕ್ರಿಯೆಗಳಲ್ಲಿಯೇ ನಿರತರಾದ ಬ್ರಾಹ್ಮಣರಿ
ಗೆ ಪಿತೃಲೋಕವು ಸ್ಥಾನವೆಂಬದಾಗಿ ನಿಶ್ಚಯಿಸಲ್ಪಟ್ಟಿದೆ. ಎಂತಹ ಘೋ
ರಯುದ್ಧದಲ್ಲಿಯಾದರೂ ಶತ್ರುವಿಗೆ ಹೆದರಿ ಬೆನ್ನುತೋರಿಸದೆ ಹೋರಾಡಿ
ಆಶಕ್ತುವಿನಿಂದಲೇ ಮರಣ ಹೊಂದತಕ್ಕ ಕ್ಷತ್ರಿಯರಿಗೆ ಇಂದ್ರಲೋಕವು
ಪ್ರಾಪ್ಯಸ್ಥಾನವು ॥೪೪॥ ವೈಶ್ಯರು ಸ್ವಧರ್ಮವೆನಿಸುವ ಕೃಷಿ,ಗೋರಕ್ಷಣ,
ವ್ಯಾಪಾರ ಮೊದಲಾದವುಗಳಲ್ಲಿ ಮಾತ್ರ ನಿರತರಾಗಿದ್ದಲ್ಲಿ ಅವರು ಈದೇ
ಹಾನಂತರ ದೇವಲೋಕಕ್ಕೆ ತೆರಳುವರು ನಿರಂತರವೂ ಬ್ರಾಹ್ಮಣಾ
ದಿ ವರ್ಣತ್ರಯದವರಿಗೂ ಶುಶ್ರೂಷಾದಿಗಳನ್ನು ಮಾಡುವಲ್ಲಿಯೇ ನಿರತ
ರಾದ ಶೂದ್ರರು ಗಂಧರ್ವಲೋಕಕ್ಕೆ ತೆರಳುವರು ಇದರಿಂದ (ಬ್ರಾಹ್ಮ
ಣರಿಗೆ ಪಂಚಮಹಾಯಜ್ಞಗಳು, ಕ್ಷತ್ರಿಯನಿಗೆ ಯುದ್ಧ, ವೈಶ್ಯನಿಗೆ ಕೃ
ಷ್ಯಾದಿಗಳು, ಶೂದ್ರನಿಗೆ ಶುಶ್ರೂಷೆ ಇವುಗಳೇ ಅವರವರಿಗೆ ಸ್ವಧರ್ಮಗ
ಳೆಂಬದಾಗಿ ಧರ್ಮಗಳನ್ನೂ ಕೂಡ ಹೇಳಿದಂತಾಯಿತು. ಆದ್ದರಿಂದಲೇ
ವರ್ಣಧರ್ಮಗಳನ್ನು ಪ್ರತೇಕವಾಗಿ ಹೇಳಲಿಲ್ಲ)॥೪೫॥ಯತಿಗಳು,ಚಿತೇಂ
ದ್ರಿಯರು, ನೈಷ್ಠಿಕ ಬ್ರಹ್ಮಚರ್ಯ ವ್ರತಾವಲಂಬಿಗಳು ಇವರೆಗೆಲ್ಲರಿ
ಗೂ ಬ್ರಹ್ಮಲೋಕವೇ ಸ್ಥಾನವು॥೪೬॥ವಾನಪ್ರಸ್ಥಾಶ್ರಮಾವಲಂಬಿಗಳಾದವ
ರೂ,ಸನ್ಯಾಸಿಗಳೂ, ಗೃಹಸ್ಥಾಶ್ರಮಿಗಳಾದ ಬ್ರಾಹ್ಮಣರೂ ಸಹಪ್ರಾಜಾ
ಪತ್ಯಲೋಕ(ಬ್ರಹ್ಮಲೋಕ) ವನ್ನು ಕುರಿತು ತೆರಳುವರು.॥೪೭॥ಯಮ,
ನಿಯಮಾದಿ ಎಂಟು ವಿಧವಾದ ಯೋಗವನ್ನು ಅಭ್ಯಾಸಮಾಡಿ ಸ್ವಸ್ವರೂಪ
ವನ್ನು ಅಥವಸ್ವಾಂತರ್ಯಾಮಿಯಾದ ಪರಮಾತ್ಮನನ್ನು ತಿಳಿದು ಆತನಲ್ಲಿಯೇ

ಯೋಗಿನಾಮವ್ಯತಂ ಸ್ಥಾನಂ ಸಾತ್ಮ್ಯಂ ತೋಷಕಾರಿಣಾಂ॥೪೪॥
ಏಕಾಂತಿನ ಸ್ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ।
ತೇಷಾಂ ತತ್ಪರಮಂ ಸ್ಥಾನಂ ಯದ್ವೈ ಪಶ್ಯಂತಿ ಸೂರಯಃ॥೪೫॥
ಗತ್ವಾಗತ್ವಾ ನಿವರ್ತಂತೇ ಚಂದ್ರ ಸೂರ್ಯಾದಯೋಗ್ರಹಾಃ । ಅ
ದ್ಯಾಪಿ ನ ನಿವರ್ತಂತೇ ದ್ವಾದಶಾಕ್ಷರಚಿಂತಕಾಃ ॥೪೦॥ ತಾವಿ.ಸ್ರ
ಮಂಧತಾಮಿಸ್ರಂ ಮಹಾರೌರವರೌರವೌ । ಅಸಿಪತ್ರವನಂ ಘೋ
ರಂ ಕಾಲಸೂತ್ರ ಮವೀಚಿಕಂ ॥೪೧॥ ವಿನಿಂದಕಾನಾಂ ವೇದಸ್ಯ

ಚಿತ್ತವನ್ನು ಸರ್ವದಾಲಯಗೊಳಿಸಿ, ಆತನನ್ನೇ ಸರ್ವದಾ ಧ್ಯಾನಿಸುತ್ತಾ ಆತನ ನಾಮವನ್ನೇ ನಿರಂತರವೂ ಪಠನಮಾಡುತ್ತಾ, ಅಪರವಸ್ತುವಿನಲ, ಭದಿಂದ ಸಂತುಷ್ಟಾಂತರಂಗರಾದ ಜ್ಞಾನಿಗಳು ಕೂಡ ಇದೇ ಬ್ರಹ್ಮಲೋಕವನ್ನೇ ಪಡೆಯುವರು. ಇಲ್ಲಿ ಒಂದು ಆಶಂಕೆಯುಂಟು ಅದೇನಂದರೆ, ನಿರಂತರವೂ ಪತ್ನೀಪುತ್ರಾದಿಗಳನ್ನು ಕಾಪಾಡಲು ಅನೇಕ ವಿಧವಾಗಿ ಸಂಸಾರದಲ್ಲಿ ಸುಖದುಃಖಗಳನ್ನು ಅನುಭವಿಸುವ ಗೃಹಸ್ಥರಾದ ಬ್ರಾಹ್ಮಣರೂ ಸತ್ಯಲೋಕವನ್ನು ಕುರಿತು ತೆರಳುವರು. ಯೋಗಿಗಳೂ ಸನ್ಯಾಸಿಗಳೂ ಕೂಡ ಸತ್ಯಲೋಕಕ್ಕೇ ತೆರಳುವರೆಂದು ಹೇಳಿವಿರಿ. ಇದು ಯುಕ್ತವೆ ? ಎಂದು ಪ್ರಶ್ನೆಮಾಡಿದರೆ ಕ್ರಮ ಮುಕ್ತಿಪ್ರಕಾರವೇ ಇಂತಿರುವುದು. ಭಗವದುಪಾಸಕರೂ ಕೂಡ ಬ್ರಹ್ಮಲೋಕವನ್ನೈದಿ ಅಲ್ಲಿ ಕೆಲವು ಕಾಲ ವಿದ್ದು, ಬಳಿಕ ಬ್ರಹ್ಮನೊಡನೆಯೇ ಅವರಿಗೂ ಮುಕ್ತಿಯಾಗಬೇಕಾಗಿರುವುದರಿಂದ ಯೋಗಿಗಳೂ ಬ್ರಹ್ಮಲೋಕಕ್ಕೇನೇಹೋಗುವರೆಂದು ಹೇಳಿದುದು ಸರಿ ॥೪೪॥೪೫॥ ಸೂರ್ಯ, ಚಂದ್ರ ಮೊದಲಾದ ಗ್ರಹಗಳು ಯಾವ ಪರಮಾತ್ಮನ ಸಾನ್ನಿಧ್ಯವನ್ನ ಹೊಂದಿ ಮರಳಿ ಹಿಂದಿರುಗುತ್ತವೋ ಅಂತಹ ಪರಮಾತ್ಮನನ್ನೇ ನಿರಂತರವೂ ಆತನ ದ್ವಾದಶಾಕ್ಷರಮಂತ್ರಪಠನ ಮಾಡಿ ಧ್ಯಾನಿಸುತಕ್ಕವರು ಆ ಸೂರ್ಯಾದಿಗಳಂತೆ ಹಿಂದಿರುಗದೆ ಆತನ ಸಾಯುಜ್ಯವನ್ನೇ ಹೊಂದುವರು (ಆತನಲ್ಲಿಯೇ ಲೀನರಾಗುವರು.) ॥೪೦॥ ವೇದನಿಂದಕರು, ಯಜ್ಞಾಕರ್ಮ ವಿಘಾತಿಗಳು, ಸ್ವಧರ್ಮಪರಿತ್ಯಾಗಿಗಳು ಇವರುಗಳು ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಘೋರವಾದ ಅಸಿಪತ್ರವನ, ಮೊದಲಾದ ನರಕಗಳನ್ನು

ಯಜ್ಞವ್ಯಘಾತಕಾರಿಣಾಂ । ಸ್ಥಾನಮೇತತ್ಸಮಾಖ್ಯಾತಂ ಸ್ವಧರ್ಮತ್ಯಾಗಿನಶ್ಚಯೇ ॥೪೨॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮೇಂಶೇ ಷಷ್ಠೋಧ್ಯಾಯಃ

ಷಷ್ಠಾಧ್ಯಾಯಸ್ಸಮಾಪ್ತಃ

ಹೊಂದುವರೆಂಬದಾಗಿ ಪರಾಶರಮುನಿಯು ಮೈತ್ರೇಯನಿಗೆ ಸೃಷ್ಟಿಪ್ರಕಾರವನ್ನು ತಿಳಿಯಪಡಿಸುತ್ತಿದ್ದನೆಂಬಲ್ಲಿಗೆ ಶ್ರೀವಿಷ್ಣುಪುರಾಣದಲ್ಲಿ ಐದನೆಯ ಅಂಶದೊಳ್ ಆರನೆಯ ಅಧ್ಯಾಯಂ ಮುಗಿದುದು.

ಷಷ್ಠಾಧ್ಯಾಯಂ ಸಮಾಪ್ತಂ.

ಶ್ರೀ.

ಓನ್ನಮಃ ಪರಮಾತ್ಮನೇ

ಅಥ ಸಪ್ತಮೋಧ್ಯಾಯಃ

ಶ್ರೀ ಪರಾಶರಃ ॥ ತತೋ ೨ಭಿಧ್ಯಾಯತಸ್ತಸ್ಯ ಜಜ್ಞಿರೇ ಮಾನಸಾಃ ಪ್ರಜಾಃ । ತಚ್ಛರೀರ ಸಮುತ್ಪನ್ನೈ ರ್ಯಃ ಕಾರ್ಯೈ ಸ್ತತ್ಕರಣೈ

ಪರಾಶರನು ಹೇಳುತ್ತಾನೆ-ಅಯ್ಯಾ ಮೈತ್ರೇಯನೆ! ಇದುವರೆಗೂ ನಿನಗೆ ಮಾನಸಸೃಷ್ಟಿಪ್ರಕಾರವನ್ನು ತಿಳಿಸಿದೆನು ಇನ್ನು ಮುಂದೆ ಮಿಥುನ ಸೃಷ್ಟಿಯನ್ನು ಹೇಳತೊಡಗುವೆನು. ಆದರೆ ಮೊದಲು ಮಾನಸಸೃಷ್ಟಿಯಲ್ಲಿ ಕೆಲವು ವಿಶೇಷಗಳನ್ನೂ ತಿಳಿಸುವೆನು. ಇಂತು ಹೇಳಿದ ಪರಾಶರಮುನಿಯ ಮಾತನ್ನು ಕೇಳಿ, ಮೈತ್ರೇಯನು ಪ್ರಶ್ನೆಮಾಡುತ್ತಾನೆ.-ತಾವು ಇದುವರಿಗೂ ನನಿಗೆ ಸೃಷ್ಟಿಕರ್ತೃವೆನಿಸಿದ ಹಿರಣ್ಯಗರ್ಭನಿಂದುಂಟಾದ ಮಾನಸ ಸೃಷ್ಟಿಯನ್ನೂ ಮತ್ತು ಆತನ ದೇಹದಿಂದುಂಟಾವ ಶಾರೀರಸೃಷ್ಟಿಯನ್ನೂ ಸಹ ತಿಳಿಸಿದಿರಿ. ಇದರಲ್ಲಿ ಪೃಥಿವ್ಯಾದಿಭೂತೋಪಾದಾನವಿಲ್ಲದೆಯೇ ಕೇವಲ ಮನಸ್ಸಂಕಲ್ಪ ಮಾತ್ರದಿಂದಲೇ ಭೌತಿಕದೇಹ

ಸ್ಸಹ॥ಹ್ಮೇತ್ರಜ್ಞಾ ಸ್ಸಮವರ್ತಂತ ಗಾತ್ರೇಭ್ಯ ಸ್ತಸ್ಯ ಧೀಮತಃ॥೧॥
ತೇ ಸರ್ವೇ ಸಮವರ್ತಂತ ಯೇ ಮಯಾ ಪ್ರಾಗುದೀರಿತಾಃ ।
ದೇವಾದ್ಯಾ ಸ್ಥಾವರಾಂತಾಶ್ಚ ತ್ರೈಗುಣ್ಯವಿಷಯೇ ಸ್ಥಿತಾಃ ॥೨॥
ಏವಂಭೂತಾನಿ ಸೃಷ್ಟ್ಯಾನಿ ಚರಾಣಿ ಸ್ಥಾವರಾಣಿ ಚ ॥೩॥ ಯ
ದಾ ಽಸ್ಯತಾಃ ಪ್ರಜಾ ಸ್ಸರ್ವಾ ನ ವ್ಯವರ್ಧಂತ ಧೀಮತಃ । ತದಾ

ಸೃಷ್ಟ್ಯಯು ಸಿದ್ಧಿಸುವುದೆಂತು ? ಮತ್ತು ಜಡವೆನಿಸಿದ ಆತನ ದೇಹದಿಂದ ಚೈತನ್ಯವಿಶಿಷ್ಟರಾದ ಜೀವಗಳ ಉತ್ಪತ್ತಿಯು ಹೇಗೆ ? ಈ ವಿಷಯವನ್ನು ನನಿಗೆ ವಿಶದವಾಗಿ ತಿಳುಹಬೇಕು" ಎನಲು ಪರಾಶರನು ಹೇಳುತ್ತಾನೆ:- (ಅಯ್ಯಾ ಮೈತ್ರೇಯನೆ !) ಇಂತು ಆಹಿರಣ್ಯಗರ್ಭನು ಧ್ಯಾನಾಸಕ್ತನಾಗುತಿರಲು, ಆತನ ಶರೀರದ ದೆಶೆಯಿಂದ ಕಾರ್ಯಗಳೆನಿಸುವ ಇತರ ಜೀವಗಳ ದೇಹಗಳೂ, ಕರಣಶಬ್ದವಾಚ್ಯಗಳೆನಿಸುವ ಇಂದ್ರಿಯಗಳೂ ಕೂಡ ಉಂಟಾದರು. ಈ ಸೃಷ್ಟ್ಯಗೆ ಆತನ " ಮನಸ್ಸು ನಿಮಿತ್ತಮಾತ್ರವಾದುದರಿಂದ ಈ ಸೃಷ್ಟ್ಯಗ " ಮಾನಸಸೃಷ್ಟ್ಯ " ಎಂದು ಹೆಸರು. ಮತ್ತು ಸಮಷ್ಟ್ಯ ಜೀವಸ್ವರೂಪನೆನಿಸಿದ ಆತನ ಜಡದೇಹಗಳಿಂದ ದೇಹೇಂದ್ರಿಯ ವಿಶಿಷ್ಟರಾದ ಕೆಲವು ಮಂದಿ ಪ್ರಜೆಗಳುಂಟಾದರು ॥೧॥ಅಯ್ಯಾ ಮೈತ್ರೇಯನೆ ! ಹಿಂದೆ ನನ್ನಿಂದ ಹೇಳಲ್ಪಟ್ಟ ದೇವತೆಗಳೇ ಮೊದಲಾಗಿ ಪರ್ವತಗಳೇ ಕೊನೆಯಾದ ಜೀವಗಳೆಲ್ಲವೂ ಸತ್ವಾದಿಗುಣತ್ರಯಬಂಧದಿಂದುದಯಿಸಿರುವ ಕಾರಣ ಆ ಗುಣತ್ರಯಕಾರ್ಯರೂಪವಾದ ಸಂಬಂಧಕ್ಕೆ ಬಳಪಟ್ಟಿರುತ್ತಿದ್ದವು ॥೨॥ ಸ್ಥಾವರ ಮತ್ತು ಜಂಗಮ (ಸಂಚರಿಸದಿರುವ ವೃಕ್ಷ, ಪರ್ವತಾದಿಗಳೇ ಸ್ಥಾವರಗಳು, ಸಂಚಾರಮಾಡುವ ಪಶು, ಪಕ್ಷಿ, ಮೃಗ, ಮನುಜಾದಿಗಳೇ ಜಂಗಮವೆಂದು ಭಾವವು) ರೂಪವಾದ ಭೂತಸೃಷ್ಟ್ಯಯು ಈ ರೀತಿಯಾಗಿ ನೆರವೇರಿತು. ॥೩॥ ಇನ್ನುಮುಂದೆ ಯೌನಸೃಷ್ಟ್ಯ (ಯೋನಿಯಿಂದುದಯಿಸಿದ ಕಾರಣ ಈ ಹೆಸರು ಬಂದಿತು.) ಅಥವಾ ಮಿಥುನ (ಸ್ತ್ರೀಪುರುಷಯುಗ್ಮ ಸಮಾಗಮದಿಂದುಂಟಾಗುವ) ಸೃಷ್ಟ್ಯಯನ್ನು ತಿಳಿಸುವೆನು. ಇಂತು ಮಹಾಮಹಿಮಕಾಲಿ ಎನಿಸಿದ ಆ ಪರಮಾತ್ಮಸ್ವರೂಪಿಯಾದ ಹಿರಣ್ಯಗರ್ಭನಿಂದುದಯಿಸಿದ ಈ ಪ್ರಾಣಿಗಳು ಪುತ್ರಪೌತ್ರಾದಿರೂಪದಿಂದ ಕ್ಷೀವಿ

ನ್ಯಾಂ ಮಾನಸಾಂ ಪುತ್ರಾಂ ಸದೃಶಾ ನಾತ್ಮನೋ ಽ ಸೃಜತ್ ।೫॥ ಭೃಗುಂ ಪುಲಸ್ತ್ಯಂ ಪುಲಹಂ ಕ್ರತು ಮಂಗಿರಸಂ ತಥಾ । ಮರೀಚಿಂ ದಕ್ಷ ಮತ್ರಿಂ ಚ ವಸಿಷ್ಠಂ ಚೈವ ಮಾನಸಾಂ ॥೫॥ ನವಬ್ರಹ್ಮಾಣ ಇತ್ಯೇತೇ ಪುರಾಣೇ ನಿಶ್ಚಯಂ ಗತಾಃ॥೬॥ಖ್ಯಾತಿಂ ಭೂತಿಂಚ ಸಂಭೂತಿಂ ಕ್ಷಮಾಂ ಪ್ರೀತಿಂ ತಥೈವ ಚ । ಸನ್ನತಿಂಚ ತಥೈವೋರ್ಜಾಂ ಮನಸೂಯಾಂ ತಥೈವಚ ॥೭॥ ಪ್ರಸೂತಿಂಚ ತತಸ್ಸೃಷ್ಟ್ವಾ ದದೌ ತೇಷಾಂ ಮಹಾತ್ಮನಾಂ ॥

ಷವಾಗಿ ವಂಶಾಭಿವೃದ್ಧಿಯಾಗುವಂತೆ ಅಥವಾ ಜಗತ್ತೆಲ್ಲವನ್ನೂ ವ್ಯಾಪಿಸುವಂತೆ ಏಳಿಗೆಯಂ ಪಡೆಯಲಿಲ್ಲವು. ಇದಕ್ಕಾಗಿ ಆ ಹಿರಣ್ಯಗರ್ಭನು ಆ ಕಾಲದಲ್ಲಿ ತನಗೆ ಅನುರೂಪರೆನಿಸಿದ ಮತ್ತು ಯೋನಿಸೃಷ್ಟಿ ಅಥವ ಮಿಥುನಸೃಷ್ಟಿಪ್ರವರ್ತಕರಾದ ಭೃಗು, ಪುಲಸ್ತ್ಯರೊದಲಾದ ಬಂಭತ್ತು ಮಂದಿ ಬ್ರಹ್ಮರುಗಳನ್ನೂ ತನ್ನ ಮನಸ್ಸಿನಿಂದುಂಟುಮಾಡಿದನು ಇಂತು ಭೃಗ್ವಾದಿಗಳು ಸೃಷ್ಟಿಕರ್ತೃವೆನಿಸಿದ ಹಿರಣ್ಯಗರ್ಭನ ಮನಸ್ಸಿನಿಂದುಂಟಾದ ಕಾರಣ ಅವರಿಗೆ ಮಾನಸಪುತ್ರರೆಂಬುದಾಗಿ ವ್ಯವಹಾರವಿರುವುದು. ಆವರ ಹೆಸರುಗಳನ್ನೇ ವಿಶದಪಡಿಸುವೆನು ॥೪॥

ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ್ಸು, ಮರೀಚಿ, ದಕ್ಷ, ಅತ್ರಿ, ವಸಿಷ್ಠರೆಂಬ ಈ ಬಂಭತ್ತು ಮಂದಿಯೂ ಬ್ರಹ್ಮನ (ಹಿರಣ್ಯಗರ್ಭನ) ಮನಸ್ಸಿನಿಂದುದಯಿಸಿದಕಾರಣ ಈ ಬಂಭತ್ತು ಮಂದಿಗೂ ಕೂಡ ಬ್ರಹ್ಮಶಬ್ದವ್ಯವಹಾರವುಂಟು. ಈ ವಿಷಯವೇ ಬ್ರಹ್ಮಾಂಡವೊದಲಾದ ಕೆಲವು ಪುರಾಣಗಳಲ್ಲಿಯೂ ಹೇಳಲ್ಪಟ್ಟಿದೆ ॥ ೫ - ೬ ॥ ಆಹಿರಣ್ಯಗರ್ಭನು ಇಂತು ಭೃಗುವೊದಲಾದ ಬಂಭತ್ತುಮಂದಿ ಬ್ರಹ್ಮರನ್ನುಂಟುಮಾಡಿ, ಬಳಿಕ ಅವರ ಭೋಗವೊದಲಾದ ಸೌಕರ್ಯಗಳಿಗೂ ಮತ್ತು ಪುತ್ರ, ಪೌತ್ರವೊದಲಾಗಿ ಸಂತತಿಯು ಹೆಚ್ಚಿ ಪ್ರಪಂಚವು ಅಭಿವೃದ್ಧಿಪಡೆಯುವುದಕ್ಕೂ ಕೂಡ ಮುಖ್ಯಸಾಧನರೆನಿಸಿದ ಖ್ಯಾತಿ, ಭೂತಿ, ಸಂಭೂತಿ, ಕ್ಷಮೆ, ಪ್ರೀತಿ, ಸನ್ನತಿ, ಊರ್ಜೆ, ಅನಸೂಯೆ, ಪ್ರಸೂತಿ ಎಂಬ ಬಂಭತ್ತು ಕನ್ನೆಯರನ್ನುಂಟುಮಾಡಿ "ನೀವು ಬಂಬತ್ತು ಮಂದಿಯೂ ಭೃಗುವೊದಲಾದ ಬಂಭತ್ತು ಮಂದಿಗೆ ಪತ್ನಿಯರಾಗಿರಿ, ಎಂದು

ಪತ್ಯೋ್ಯೀಭವಧ್ವವಿತ್ಯುಕ್ತ್ವಾ ತೇಷಾಮೇವತುದತ್ತವಾ್ ॥೪॥
ಸನಂದನಾದಯೋ ಯೇ ಚ ಪೂರ್ವಸೃಷ್ಟಾ ಸ್ತು ವೇಧಸಾ । ಸ
ತೇ ಲೋಕೇಷ್ವ ಸಜ್ಜಂತ ನಿರಪೇಕ್ಷಾಃ ಪ್ರಜಾಃ ಪ್ರತಿ ॥೫॥
ಸರ್ವೇ ತೇ ಽಭ್ಯಾಗತ ಜ್ಞಾನಾ ವೀತರಾಗಾ ವಿಮತ್ಸರಾಃ । ತೇ
ಪ್ವೇವಂ ನಿರಪೇಕ್ಷೇಷು ಲೋಕಸೃಷ್ಟಾ ಮಹಾತ್ಮನಃ ॥೧೦॥
ಬ್ರುಹ್ಮಣೋ ಽ ಭೂನ್ಮಹಾ ಕ್ರೋಧ ಸ್ತ್ರೈಲೋಕ್ಯ ದಹನ ಕ್ಷ
ಮಃ । ತಸ್ಯಕ್ರೋಧ ಸಮುದ್ಭೂತಂ ಜ್ವಾಲಾಮಾಲಾಭಿದೀಪಿತಂ।
ಬ್ರುಹ್ಮಣೋ ಽ ಭೂತ್ತದಾ ಸರ್ವಂ ತ್ರೈಲೋಕ್ಯ ಮಖಿಲಂ ಮ
ನ । ॥೧೧॥ ಭ್ರುಕುಟೇ ಕುಟಿಲಾತ್ತಸ್ಯ ಲಲಾಟಾತ್ಕ್ರೋಧ ದೀಪಿ

ಹೇಳಿ ಆಕನ್ನೆಯರನ್ನು ಅವರಿಗೆ ಕೊಟ್ಟನು ॥೪॥೪॥ ಇಂತು ಆಹಿರಣ್ಯಗ
ರ್ಭನು ಭೃಗು ವೊದಲಾದ ಬಂಭತ್ತು ಮಂದಿ ಮಾನಸ ಪುತ್ರರನ್ನೂ
ಮತ್ತು ಅವರ ಭೋಗಕ್ಕಾಗಿ ಖ್ಯಾತಿ ವೊದಲಾದ ಬಂಭತ್ತುಮಂದಿ ಕ
ನ್ನಿಕೆಯರನ್ನೂ ಉಂಟುಮಾಡುವುದಕ್ಕಿಂತಲೂ ಮುಂಚೆಯೇ ಸನಂದನ,
ಸನತ್ಕುಮಾರ ವೊದಲಾದವರನ್ನು ಸೃಷ್ಟಿಸಿದ್ದನು. ಅವರೆಲ್ಲರೂ ಲೋ
ಕವ್ಯವಹಾರಗಳನ್ನು ಪರಿತ್ಯಜಿಸಿ ಪ್ರಜಾಸೃಷ್ಟ್ಯಾದಿಗಳಲ್ಲಿ ನಿರಪೇಕ್ಷ
ರಾಗಿ ಪ್ರಕೃಷ್ಟಜ್ಞಾನವೆನಿಸಿದ ಆತ್ಮನಾತ್ಮವಿವೇಕವಂ ಪಡೆದುಕೊಂಡು
ರಾಗದ್ವೇಷಾದಿಗಳನ್ನುಳಿದು ಕೇವಲ ಪರಮಾತ್ಮನು ಸಂಧಾನದಲ್ಲಿಯೇ
ನಿರತರಾಗಿರುತ್ತಿದ್ದರು ಆಹಿರಣ್ಯಗರ್ಭನುಸೃಷ್ಟಿಕಾರ್ಯ ಪ್ರವೃತ್ತನಾಗಿ
ಪ್ರಪಂಚವನ್ನು ಸೃಷ್ಟಿಮಾಡಲಕ ಹೆಚ್ಚಿಸುವುದರಲ್ಲಿ ಆಸಕ್ತನಾಗಿ ಅವ
ರನ್ನು ಸೃಷ್ಟಿಮಾಡಿದ್ದರೂ ಅವರುಮಾತ್ರ ಇಂತು ನಿರಂತರವೂ ಆತ್ಮನು
ಸಂಧಾನದಲ್ಲಿಯೇ ನಿರಂತರರಾಗಿರುವುದಂ ಕಂಡು, ಮಹಾ ಮಹಿಮ ಶಾ
ಲಿ ಎನಿಸಿದ ಆ ಹಿರಣ್ಯಗರ್ಭನಿಗೆ ಸಚರಾಚರವಾದ ಈ ಮೂರುಲೋಕ
ವನ್ನೂ ಸುಡುವಂತೆ ನಿರವಧಿಕವಾದ ಕೋಪವು ಉಂಟಾಯಿತು. ಅಯ್ಯಾ
ಮುನಿಶ್ರೇಷ್ಠನೆನಿಸಿದ ಮೈತ್ರೇಯನೆ ! ಇಂತು ಆ ಹಿರಣ್ಯಗರ್ಭನು ಕ್ರೋ
ಧಪರವಶನಾಗುತಿರಲು, ಈ ಮೂರು ಶ್ಲೋಕಗಳೂ ಆಬ್ರಹ್ಮನ ಕ್ರೋ
ಧಾಗ್ನಿಜ್ವಾಲೆಪಙ್ತಿಗಳಿಂದ ಆವರಿಸಲ್ಪಟ್ಟು ನಿಸ್ತೇಜಸ್ಕಗಳಾದುವು ॥೯॥
॥೧೦॥೧೧॥ ಇಂತು ಆಬ್ರಹ್ಮನು ಕೋಪೋದ್ವಿಷ್ಟನಾಗುತಿರಲು, ಕೋಪ

ತಾತ್ ॥ ಸಮುತ್ಪನ್ನಸ್ಯದಾ ರುದ್ರೋ ಮಧ್ಯಾನ್ಹಾರ್ಕ ಸಮಪ್ರ
ಭಃ ॥೧೫॥ ಅರ್ಧನಾರೀನರವಪುಃ ಪ್ರಚಂಡೋ ೪ತಿಶರೀರವಾ।
ವಿಭಜಾತ್ಮಾನ ಮಿತ್ಯುಕ್ತ್ವಾ ತಂ ಬ್ರಹ್ಮಾಂತರ್ದಧೇ ತತಃ ॥೧೬॥
ತಥೋಕ್ತೋ ೪ ಸೌ ದ್ವಿಧಾ ಸ್ತ್ರೀತ್ವಂ ಪುರುಷತ್ವಂ ತಥಾ ೪ ಕ
ರೋತ್।ಬಿಭೇದ ಪುರುಷತ್ವಂಚ ದಶಧಾ ಚೈಕಧಾ ಚ ಸಃ॥೧೪॥
ಸೌವಮ್ಯಾ ಸೌವ್ಯೈ ರ್ಯಸ್ತಥಾಶಾಂತಾ ಶಾಂತೈಸ್ತ್ರೀತ್ವಂಚ ಸಪ್ರ
ಭುಃ । ಬಿಭೇದ ಬಹುಧಾ ದೇವ ಸ್ಸ್ವರೂಪೈ ರಮಿತೈ ಸ್ಸಮೈಃ
॥೧೫॥ ತತೋ ಬ್ರಹ್ಮಾ ೪೪ತ್ಮ ಸಂಭೂತಂ ಪೂರ್ವಂ ಸ್ವಾಯಂ

ದಿಂದ ಸುಡುತ್ತಿರುವ ಆತನ ವಕ್ರವಾದ ಕಣ್ಣು ಹುಬ್ಬಿನಿಂದ, ಮಧ್ಯಾಹ್ನಕಾಲದಲ್ಲಿ ಪ್ರಕಾಶಿಸುತ್ತಿರುವ ಸೂರ್ಯನಂತೆ ಉಗ್ರನಾದ, ಅತಿಭಯಂಕರವಾದ ದೇಹವನ್ನು ಧರಿಸಿರುವನಾದುದರಿಂದ ಬಹಳ ಮಟ್ಟಿಗೂ ಕೋಪಾವೇಶವುಳ್ಳ, ತನ್ನ ಎಡಭಾಗದಿಂದ ಸ್ತ್ರೀರೂಪವನ್ನೂ, ಬಲಭಾಗದಿಂದ ಪುರುಷರೂಪವನ್ನೂ ಧರಿಸಿರುವವನಾದಕಾರಣ ''ಅರ್ಧನಾರಿ'' ಎಂಬದಾಗಿ ವ್ಯವಹರಿಸಲ್ಪಡುವ ರುದ್ರನು ಉದಯಿಸಿದನು. ಇಂತು ಆರುದ್ರನು ಸ್ತ್ರೀಪುಂವ್ಯಕ್ತಿದ್ವಯ ವಿಶಿಷ್ಟನಾಗಿ ಉದಯಿಸಿದುದಂ ಕಂಡು ಆ ಹಿರಣ್ಯಗರ್ಭನು ರುದ್ರನನ್ನು ಕಂಡು ''ಅಯ್ಯಾ ! ನಿನ್ನಲ್ಲಿರುವ ಸ್ತ್ರೀಪುಂವ್ಯಕ್ತಿಗಳನ್ನು ಬೇರೆಮಾಡು,'' ಎಂಬದಾಗಿ ಹೇಳಿ ತಾನು ಅಂತರ್ಧಾನವಂ ಪಡೆದನು ॥೧೫॥೧೬॥ ಈ ರೀತಿಯಾಗಿ ಹಿರಣ್ಯಗರ್ಭನು ಹೇಳಿದಮಾತಂ ಕೇಳಿ ಆತನು ತನ್ನಲ್ಲಿದ್ದ ಪುರುಷತ್ವ ಮತ್ತು ಸ್ತ್ರೀತ್ವವನ್ನು ವಿಭಾಗಮಾಡಿ ಬಳಿಕ ಪುಂಸ್ತ್ವವನ್ನು ಹನ್ನೊಂದು ವಿಧವಾಗಿ ಭೇದಿಸಿದನು,॥೧೪॥ ಆಬಳಿಕ ಸಕಲ ನಿಯಾಮಕನಸಿಸಿದ ಆರುದ್ರನು ತನ್ನ ಪುರುಷ ಧರ್ಮವನ್ನು ಹನ್ನೊಂದು ವಿಧವಾಗಿ ವಿಭಾಗಮಾಡಿದಂತೆಯೇ ತನ್ನಲ್ಲಿದ್ದ ಸ್ತ್ರೀಧರ್ಮವನ್ನೂ ಕೂಡ ಕ್ರೂರಗಳೂ, ಶಾಂತಸ್ವಭಾವವುಳ್ಳವುಗಳೂ, ಕ್ರೂರಶಾಂತೋಭಯ ಸ್ವಭಾವವುಳ್ಳವುಗಳೂ ಕೆಲವು ಬಿಳಿದಾದರೂಪವುಳ್ಳವೂ, ಕೆಲವು ಕರಿಯದಾದರೂಪವುಳ್ಳವೂ ಆಗಿರುವಂತೆ ನಾನಾಪ್ರಕಾರವಾಗಿ ವಿಭಾಗಮಾಡಿದನು. ॥೧೫॥ ಅಯ್ಯಾ ಬ್ರಹ್ಮಣ್ಯನೆ ! ಇಂತು ಆರುದ್ರನು ತನ್ನ ಪುರುಷರೂಪವನ್ನು ಹನ್ನೊಂದು ವಿಧವಾಗಿ ವಿಭಾಗಮಾಡಲು ಆತನಲ್ಲಿದ್ದ ಕೋಪವು (ಸಿಟ್ಟು) ಶೈಥಿಲ್ಯವಂ ಪಡೆಯಿತು.

ಭುವಂ ಪ್ರಭುಂ । ಆತ್ಮಾನಮೇವ ಕೃತವಾ೯ ಪ್ರಾಜಾಪತ್ಯೇವು
ನುಂದ್ವಿಜ ! ॥೧೬॥ ಶತರೂಪಾಂ ಚ ತಾಂ ನಾರೀಂ ತಪೋ
ನಿರ್ಧೂತಕಲ್ಮಷಾಂ । ಸಾ ವ್ಯಯಂಭುವೋ ಮನುರ್ದೇವಃ

ಆಗ ಆ ಹಿರಣ್ಯಗರ್ಭನು, ಮೊದಲು ತನ್ನ ದೇಹದಿಂದುದಯಿಸಿದ್ದ ಶುದ್ಧ ಸಾತ್ವಿಕಸ್ವಭಾವ ಯುಕ್ತನೆನಿಸಿದ ತನ್ನ ಮಗನನ್ನು ತನ್ನ ಸ್ಥಾನದಲ್ಲಿಟ್ಟು ಆತನಿಗೆ "ಸ್ವಾಯಂಭುವಮನು" ಎಂಬದಾಗಿ ನಾಮ ನಿರ್ದೇಶವಂಗೈದು (ಶ್ರು॥ "ಆತ್ಮಾ ವೈ ಪುತ್ರನಾಮಾಸಿ" ಎಂಬ ಶ್ರುತ್ಯುಕ್ತಪ್ರಕಾರ ಆತನೇ ತಾನೆಂದು ಭಾವಿಸಿ ಆತನಿಗೆ ತನ್ನ ಅಧಿಕಾರವಂ ಕೊಟ್ಟು) ಆತನು ಪ್ರಜಾಪಾಲಕನಾಗಿರುವಂತೆ ನೇಮಿಸಿದನು ॥೧೬॥ ಬಳಿಕ ಆಸ್ವಾಯಂಭುವ ಮನುವು, ತಪೋಮಹಿಮೆಯಿಂದ ಸಕಲ ಪಾಪಗಳನ್ನೂ ಕಳೆದುಕೊಂಡು, ಶುದ್ಧಾಂತಃಕರಣಳಾದ ನಾನಾವಿಧರೂಪವಂ ತಾಳಿದ್ದ ಆ ಹೆಂಗಸನ್ನು ತಾನು ವರಿಸಿದನು (ಇಲ್ಲಿ ಸ್ವಾಯಂಭುವಮನುವು ತಾನು ಪ್ರಜಾಪಾಲನೆಯಲ್ಲಿ ತನ್ನ ತಂದೆಯಿಂದ ಸಹಾಯಪಿಸಲ್ಪಡುವುದಕ್ಕಿಂತಲೂ ಮುಂಚೆ ತಾನು ಅರ್ಧನಾರಿರೂಪದಿಂದುದಯಿಸಿದ್ದನು. ಆಬಳಿಕ ಪುಂ ಸ್ತ್ರೀವ್ಯಕ್ತಿ ವಿಭಾಗವಾದುದು ಇವರಿಂದ ಆವರಿಬ್ಬರೂ ಏಕಕಾಲದಲ್ಲಿ ಒಬ್ಬನಿಂದಲೇ ಉದಯಿಸಿದರು ಇಂತಿರಲು ಸ್ವಾಯಂಭುವನು ಆಕೆಯಂ ಪರಿಗ್ರಹಿಸಬಹುದೆ ? ಎಂಬದಾಗಿ ಆಕ್ಷೇಪಿಸಿದೊಡೆ ಆತನು ಸರ್ವವ್ಯಾಪಿಯೂ, ಸರ್ವಪ್ರಕಾಶನೂ ಆಗಿರುವ ಕಾರಣ ಆತನಿಗೆ ತನ್ನವರು, ಇತರರು ಎಂಬ ಭೇದವಿಲ್ಲಾ ಇಂತೆಯೇ ಆಕೆಯೂ "ತಪೋನಿರ್ಧೂತ ಕಲ್ಮಷೆ" ಎಂಬದಾಗಿ ಹೇಳಿರುವುದರಿಂದ ಆಕೆಗೂ ಈ ದೋಷವಿಲ್ಲ. ಇದಕ್ಕಾಗಿಯೇ "ದೇವಃ" "ವಿಭುಃ" ಎಂಬ ಈ ಎರಡೂ ಸ್ವಾಯಂಭುವನಿಗೂ, "ತಪೋನಿರ್ಧೂತ ಕಲ್ಮಷಾಂ" ಎಂಬುದು ಆಕೆಗೂ ವಿಶೇಷಣಗಳಾಗಿ ಕೊಟ್ಟವೆ. ಎಂಬದಾಗಿ ಶ್ರೀ ಶ್ರೀಧರೀಯ ವ್ಯಾಖ್ಯಾನದಲ್ಲಿ ಬರೆಯಲ್ಪಟ್ಟಿದೆ. ಇಂತೆಯೇ ತಪೋನಿರತರೆನಿಸಿದವರಿಗೆ ಪಾಪಲೇಪವಿಲ್ಲವೆಂಬುದಾಗಿಯೂ, ಅವರು ಭೋಗಿಸೊಪ್ಪು ಮೊದಲಾದ ನಿಷಿದ್ಧಪದಾರ್ಥಗಳನ್ನು ಸೇವಿಸಿದಾಗ್ಯೂ ಅವರು ಮನಃ ಪೂರ್ವಕವಾಗಿ ಅಂತಹ ಕಾರ್ಯಗಳಲ್ಲಿ ಪ್ರವರ್ತಿಸುವುದಿಲ್ಲವೆಂತಲೂ, ಬಂದು ವೇಳೆ ಪ್ರವರ್ತಿಸಿದರೂ ಅದು ಅವರಿಗೆ

ಪತ್ನೀತ್ವೇ ಜಗೃಹೇ ವಿಭುಃ ॥೨೫॥ ತಸ್ಯಾಶ್ಚ ಪುರುಷಾ ದ್ದೇವೀ ಶತರೂಪಾ ವ್ಯಜಾಯತ । ಪ್ರಿಯವ್ರತೋ ತ್ತಾನಪಾದೌ ಪ್ರಸೂತ್ಯಾ ಕೂತಿಸಂಜ್ಞಿತಾ ॥೨೬॥ ಕನ್ಯಾದ್ವಯಂ ಚಥರ್ಮಜ್ಞ! ರೂಪೌದಾರ್ಯ ಗುಣಾನ್ವಿತಂ । ದದೌ ಪ್ರಸೂತಿಂ ದಕ್ಷಾಯ ಆಕೂತಿಂ ರುಚಯೇ ಪ್ರಭಾ ೨೭॥ ಪ್ರಜಾಪತಿಸ್ಸ ಜಗ್ರಾಹ ತಯೋರ್ಜಜ್ಞೇ ಸದಕ್ಷಿಣಃ । ಪತ್ರೋ ಯಜ್ಞೋ ಮಹಾಭಾಗ! ದಂಪತ್ರೋರ್ವಿಥಸಂ ತತಃ ॥೨೦॥ ಯಜ್ಞಸ್ಯ ದಕ್ಷಿಣಾಯಾಂ ತು

ದೋಷಾವಹವಲ್ಲನೆಂತಲೂ (ಅತಶ್ಚ ಮನೋಃ ಕಳಂಜ ಭಕ್ಷಣಾದಿಕಂ ನದೋಷಾಯ) ಎಂಬ ಇದೇ ಮೊದಲಾಗಿ ಶ್ರೀಮದ್ಭಗವದ್ಗೀತಾ ವ್ಯಾಖ್ಯಾನದಲ್ಲಿ ಪ್ರತಿಪಾದಿಸುತ್ತಾರೆ. ಇಂತು ಸ್ವಾಯಂಭುವ ಮನುವಿನಿಂದ ಪರಿಗೃಹೀತಳಾದ ಆಕೆಯು ಅತನ ಸಾನ್ನಿಧ್ಯದಿಂದ ನೂರಾರು ಮುದಿ ಮಕ್ಕಳನ್ನ ಪಡೆದಳು. ಅವರಲ್ಲಿ ರೂಪ, ಔದಾರ್ಯ, ವಿನಯ ಮೊದಲಾದ ಸದ್ಗುಣಗಳಿಂದ ಕೂಡಿದ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡು ಮಕ್ಕಳೂ, ಅವರಂತೆಯೇ ಸದ್ಗುಣಾಲಂಕೃತರೆನಿಸಿದ ಪ್ರಸೂತಿ, ಆಕೂತಿ ಎಂಬ ಇಬ್ಬರು ಹೆಣ್ಣುಮಕ್ಕಳೂ ಮುಖ್ಯರಾದವರು ಅಯ್ಯಾ ಧರ್ಮಜ್ಞ ಶಿಖಾಮಣಿ ಎನಿಸಿದ ಮೈತ್ರೇಯನೆ! ಬಳಿಕ ಆ ಸ್ವಾಯಂಭುವಮನುವು ಪ್ರಸೂತಿ ಆಕೂತಿ ಎಂಬ ಆ ಎರಡು ಕನ್ನಿಕೆಯರಲ್ಲಿ ಮೊದಲನೆಯವಳಾದ ಪ್ರಸೂತಿ ಎಂಬ ಕನ್ನಿಕೆಯನ್ನು ದಕ್ಷನಿಗೂ, ಎರಡನೆಯವಳಾದ ಆಕೂತಿ ಎಂಬ ಕನ್ಯೆಯಂರುಚಿ ಎಂಬಾತನಿಗೂ ಕೊಟ್ಟನು. ॥ ೧೯ ॥ ೧೯ ॥ ಅಯ್ಯಾ ಮಹದದೃಷ್ಟಶಾಲಿ (ಮಹಾತೇಜಸ್ವಿ) ಎನಿಸಿದ ಮೈತ್ರೇಯನೇ! ಆ ರುಚಿ ಎಂಬ ಪ್ರಜಾಪತಿಯು ಸ್ವಾಯಂಭುವನಿಂದ ಕೊಡಲ್ಪಟ್ಟ ಆಕೂತಿ ಎಂಬ ಕನ್ನಿಕೆಯಂ ಪರಿಗ್ರಹಿಸಿ, ಆಕೆಯಲ್ಲಿ ದಕ್ಷಿಣಾ ಸಹಿತವಾದ ಯಜ್ಞರೂಪವಾದ ಸ್ತ್ರೀಪುರುಷರ ಯುಗ್ಮವನ್ನು ಉಂಟುಮಾಡಿದನು ಇಂತು ದಕ್ಷಿಣಾ ಯಜ್ಞರಿಗೆ ದಾಂಪತ್ಯ ವ್ಯವಹಾರವು ॥೨೦॥ ಇಂತು ಉದಯಿಸಿದ ಆ ಯಜ್ಞನಿಗೆ ದಕ್ಷಿಣಾದೇವಿಯಲ್ಲಿ ಯಾಮರೆಂಬ ಹೆಸರುಳ್ಳ ಹನ್ನೆರಡು ಮಂದಿ ದೇವಪುತ್ರರು ಸ್ವಾಯಂಭುವ ಮನ್ವಂತರದಲ್ಲಿ ಜನಿಸಿದರು॥೨೧॥

ಪುತ್ರಾ ದ್ವಾದಶ ಜಜ್ಞಿರೇ । ಯಾಮಾ ಇತಿ ಸಮಾ ಖ್ಯಾತಾ ವೇ
ವಾ ಸ್ವಾಯಂಭುವೇ ಮನೌ ॥೨೧॥ ಪ್ರಸೂತ್ಯಾಂಚ ತಥಾ
ದಕ್ಷಃ ಚತಸೃಣೀ ವಿಂಶತಿಂತಥಾ । ಸಸರ್ಜ ಕನ್ಯಾ ಸ್ತಾಸಾಂತು
ಸಮ್ಯ ಜ್ಞಾನಮಾನಿಮೇ ಶೃಣು ॥೨೨॥ ಶ್ರದ್ಧಾ ಲಕ್ಷ್ಮೀ ಧೃತಿ
ಸ್ತುಷ್ಟಿಃ ಪುಷ್ಟಿ ರ್ವೇಧಾ ಕ್ರಿಯಾ ತಥಾ । ಬುದ್ಧಿ ರ್ಲಜ್ಜಾ
ವಪುಶ್ಶಾಂತಿ ಸ್ಸಿದ್ಧಿಃ ಕೀರ್ತಿ ಶ್ಚಯೋದಶೀ ॥೨೩॥ ಪತ್ನ್ಯರ್ಥಂ
ಪ್ರತಿ ಜಗ್ರಾಹ ಧರ್ಮೋ ದಾಕ್ಷಾಯಣೀಃ ಪ್ರಭುಃ । ತಾಭ್ಯಶ್ಚಿ
ಷ್ಟಾ ಯವೀಯಸ್ಯಃ ಏಕಾದಶ ಸುಲೋಚನಾಃ ॥೨೪॥ ಖ್ಯಾತಿ

ಅಯ್ಯಾ ಮೈತ್ರೇಯಸೇ ! ಇನ್ನುಮುಂದೆ ಪ್ರಸೂತಿ, ದಕ್ಷರೆಂಬ ಆ ದಂ
ಪತಿಗಳ ಪುತ್ರೋತ್ಪತ್ತಿಯು ಪ್ರಕಾರವಂ ತಿಳಿಸುವೆನು. ಪ್ರಸೂತಿಯಲ್ಲಿ
ದಕ್ಷಪ್ರಜಾಪತಿಯು ಇಪ್ಪತ್ತುನಾಲ್ಕುಮಂದಿ ಹೆಣ್ಣುಮಕ್ಕಳನ್ನು ಪಡೆದ
ನು. ಅವರ ಹೆಸರುಗಳನ್ನೂ ವಿಶದವಾಗಿ ತಿಳಿಯುಪಡಿಸುವೆನು ಕೇಳು.
॥೨೨॥ ಶ್ರದ್ಧೆ, ಲಕ್ಷ್ಮೀ, ಧೃತಿ, ತುಷ್ಟಿ, ಪುಷ್ಟಿ, ಮೇಧೆ, ಕ್ರಿಯೆ,
ಬುದ್ಧಿ, ಲಜ್ಜೆ, ವಪುಸ್ಸು, ಶಾಂತಿ, ಸಿದ್ಧಿ, ಕೀರ್ತಿಗಳೆಂಬ ಈ ಹದಿಮೂ
ರು ಮಂದಿಯೂ ಮತ್ತು ಖ್ಯಾತಿ, ಸತೀ, ಸಂಭೂತಿ, ಸ್ಮೃತಿ, ಪ್ರೀತಿ,
ಕ್ಷಮೆ, ಸನ್ನತಿ, ಅನಸೂಯಾ, ಊರ್ಜೆ, ಸ್ವಾಹಾ, ಸ್ವಧಾ ಎಂಬ ಈ
ಇಪ್ಪತ್ತುನಾಲ್ಕುಮಂದಿಯೂ ಆ ದಕ್ಷಬ್ರಹ್ಮನ ಹೆಣ್ಣುಮಕ್ಕಳು ಈ
ಇಪ್ಪತ್ತುನಾಲ್ಕು ಮಂದಿಯಲ್ಲಿ ಶ್ರದ್ಧೆ, ಲಕ್ಷ್ಮೀ, ಧೃತಿ, ತುಷ್ಟಿ, ಪುಷ್ಟಿ,
ಮೇಧೆ, ಕ್ರಿಯೆ, ಬುದ್ಧಿ, ಲಜ್ಜೆ, ವಪುಸ್ಸು, ಶಾಂತಿ, ಸಿದ್ಧಿ, ಕೀರ್ತಿಗಳೆಂ
ಬ ಈ ಹದಿಮೂರು ಮಂದಿ ದಕ್ಷಪುತ್ರಿಯರನ್ನೂ ಧರ್ಮಪುರುಷನು
ಪರಿಗ್ರಹಿಸಿದನು. ಈ ಹದಿಮೂರು ಮಂದಿಗಿಂತಲೂ ಚಿಕ್ಕವರಾದ
ಹನ್ನೊಂದುಮಂದಿ ಸುಂದರಿಯರಿರುವರು ॥ ೨೪ ॥ ಖ್ಯಾತಿ; ಸತೀ,
ಸಂಭೂತಿ, ಸ್ಮೃತಿ, ಪ್ರೀತಿ, ಕ್ಷಮೆ, ಸನ್ನತಿ, ಅನಸೂಯೆ, ಊ
ರ್ಜೆ, ಸ್ವಾಹಾದೇವಿ, ಸ್ವಧಾದೇವಿಗಳೆಂಬ ಈ ಹನ್ನೊಂದುವಂದಿಯ
ನ್ನೂ ಭೃಗು, ಈಶ್ವರ, ಮರೀಚಿ, ಅಂಗಿರಸ್ಸು ಋಷಿ, ಪುಲಸ್ತ್ಯ,
ಪುಲಹ, ಋಷಿಶ್ರೇಷ್ಠನಾದ ಕ್ರತುಮುನಿ, ಅತ್ರಿ, ವಶಿಷ್ಠ, ಅಗ್ನಿ, ಪಿತೃ
ದೇವತೆಗಳೆಂಬ ಈ ಹನ್ನೊಂದು ವಂದಿಯೂ ಕ್ರಮವಾಗಿ ಮದುವೆ

ಸ್ಸತ್ಯ ಥಸಂಭೂತಿಃ ಸ್ಮೃತಿಃ ಪ್ರೀತಿಃ ಕ್ಷಮಾ ತಥಾ ॥೫೫॥ ಭೃ
ಗು ರ್ಭವ್ಯೋ ಮರೀಚಿಶ್ಚ ತಥಾ ಚೈವಾಂಗಿರಾ ಮುನಿಃ । ಪುಲ
ಸ್ತ್ಯಃ ಪುಲಹಶ್ಚೈವ ಕ್ರತುಶ್ಚ ಷ್ಟಿ ವರ ಸ್ತಥಾ ॥೫೬॥ ಅತ್ರಿ
ರ್ವಸಿಷ್ಠೋ ವಹ್ನಿಶ್ಚ ಪಿತರಶ್ಚ ಯಥಾಕ್ರಮಂ ॥ ಖ್ಯಾತ್ಯಾದ್ಯಾ
ಜಗೃಹುಃ ಕನ್ಯಾ ಮುನಯೋ ಮುನಿಸತ್ತಮ ॥೫೭॥ ಶ್ರದ್ಧಾ ಕಾ
ಮಂ ಚಲಾ ದರ್ಪಂ ನಿಯಮಂ ಧೃತಿಗಾತ್ಮಜಂ । ಸಂತೋಷಂ ಚ
ತಥಾ ತುಷ್ಟಿಃ ಲೋಭಂ ಪುಷ್ಟಿ ರಸೂಯತ ॥೫೮॥ ಮೇಧಾ

ಯಾದರು. (ಖ್ಯಾತಿ ಎಂಬ ಕನ್ನಿಕೆಯನ್ನು ಭೃಗುಮಹರ್ಷಿಯೂ, ಸತೀ ದೇವಿಯನ್ನು ಈಶ್ವರನೂ, ಸಂಭೂತಿಯನ್ನು ಮರೀಚಿಯೂ, ಸ್ಮೃತಿ ಎಂಬಾಕೆಯನ್ನು ಅಂಗಿರಸ್ಸೂ, ಪ್ರೀತಿ ಎಂಬ ಕನ್ನೆಯನ್ನು ಪುಲಸ್ತ್ಯನೂ, ಕ್ಷಮಾದೇವಿಯನ್ನು ಪುಲಹನೆಂಬಾತನೂ, ಸನ್ನತಿ ಎಂಬ ಕನ್ನೆಯನ್ನು ಕ್ರತುಮಹರ್ಷಿಯೂ, ಅನಸೂಯಾದೇವಿಯನ್ನು ಅತ್ರಿಮಹರ್ಷಿಯೂ, ಊರ್ಜಾದೇವಿಯನ್ನು ವಶಿಷ್ಠಬ್ರಹ್ಮನೂ, ಸ್ವಾಹಾದೇವಿಯನ್ನು ಅಗ್ನಿ ಪುರುಷನೂ, ಸ್ವಧಾದೇವಿಯನ್ನು ಪಿತೃದೇವತೆಗಳೂ ಸಹ ಮದುವೆಯಾದರು). ಆಯ್ಯಾ ವೈತ್ರೇಯನೇ! ಇಂತು ದಕ್ಷಪುತ್ರಿಯರಾದ ಈ ಇಪ್ಪತ್ತ್ತು ನಾಲ್ಕು ಮಂದಿಯರ ಹೆಸರುಗಳನ್ನೂ, ಅವರನ್ನು ಮದುವೆಯಾದವರ ಹೆಸರನ್ನೂ ಸಹ ನಿನಗೆ ತಿಳಿಸಿದೆನು ॥೫೫॥೫೪॥೫೫॥೫೬ ॥ ೫೭ ॥ ಇನ್ನುಮುಂದೆ ಧರ್ಮಪುರುಷನು ತನ್ನ ಸದಿಮೂರು ಮಂದಿ ಪತ್ನಿಯರಲ್ಲಿ ಮಕ್ಕಳಂ ಪಡೆದ ಸಮಾಚಾರವನ್ನು ವಿಶದಪಡಿಸುವೆನು ಅದೆಂತೆಂದರೆ— (ಆಯ್ಯಾ ಮುನಿವರ್ಯನೆನಿಸಿದ ವೈತ್ರೇಯನೆ,) ಆ ಧರ್ಮಪುರುಷನ ಹದಿಮೂರು ಮಂದಿ ಹೆಂಡಿರುಗಳಲ್ಲಿ ಮೊದಲನೆಯವಳಾದ ಶ್ರದ್ಧಾದೇವಿಯು ಕಾಮ (ಇಚ್ಛೆ) ನೆಂಬ ಮಗನಂ ಪಡದಳು. ಎರಡನೆಯವಳಾದ ಲಕ್ಷ್ಮಿಯು ದರ್ಪ (ಅಹಂಕಾರ) ವೆಂಬ ಸುತನಂ ಪೆತ್ತಳು ಮೂರನೆಯವಳಾದ ಧೃತಿಯು, ನಿಯಮ (ವ್ರತ) ನೆಂಬ ತನಯನಂ ಪಡೆದಳು. ನಾಲ್ಕನೆಯವಳಾದ ತುಷ್ಟಿಯು ಸಂತೋಷ ಪುತ್ರಂಗೆ ಜನನಿಯಾದಳು. ಐದನೆಯವಳಾದ ಪುಷ್ಟಿಯು ಲೋಭಕ್ಕೆ ತಾಯಿ ಎನಿಸಿದಳು ಆರನೆಯವಳಾದ ಮೇಧೆಯು ಶ್ರುತ (ಶಾಸ್ತ್ರಜ್ಞಾನಕ್ಕೆ) ನೆಂಬ ಸುತೋತ್ಪತ್ತಿಗೆ ಕಾರಣಳಾ

ಕೃತಂ ಕ್ರಿಯಾ ದಂಡಂ ನಯಂ ವಿನಯು ಮೇವಚ ॥೨೯॥ ಬೋ
ಧಂ ಬುದ್ಧಿ ಸ್ತಥಾ ಲಜ್ಜಾ ವಿನಯಂ ವಪುರಾತ್ಮಜಂ । ವ್ಯವಸಾ
ಯಂ ಪ್ರಜಜ್ಞೇ ವೈ ಕ್ಷೇಮಂ ಶಾಂತಿ ರೆಸೂಯತ ॥೩೦॥ಸುಖಂ
ಸಿದ್ಧಿ ರ್ಯಶಃ ಕೀರ್ತಿ ರಿತ್ಯೇತೆ ಧರ್ಮಸೂನವಃ । ಕಾಮಾ ದ್ರತಿ
ಸ್ಸುತಂ ಹರ್ಷಂ ಧರ್ಮಪುತ್ರ ವಸೂಯತ ॥೩೧॥ ಹಿಂಸಾ ಭಾ

ದಳು. ಏಳನೆಯವಳಾದ ಕ್ರಿಯೆಯು ದಂಡ (ಶಿಕ್ಷೆ) ನಯ (ನೀತಿ) ವಿನಯ (ನಮ್ರತೆ) ರೆಂಬ ಮೂವರು ಪುತ್ರರಿಂದ ಪುತ್ರವತಿಯಾದಳು ಎಂಟನೆಯವಳಾದ ಬುದ್ಧಿಯು ಬೋಧ (ತಿಳಿವಳಿಕೆ) ನೆಂಬ ಮಗನಿಂದ ತನ್ನ ವಂಧ್ಯತ್ವವಂ ಪರಿಹಾರ ಮಾಡಿಕೊಂಡಳು. ಆಂತೆಯೇ ಒಂಬತ್ತನೆಯವಳಿನಿಸಿದ ಲಜ್ಜಾದೇವಿಯು ವಿನಯ (ಶರೀರ ಸಂಬಂಧಗಳಾದ ಚೇಷ್ಟಾವಿಶೇಷ) ನೆಂಬ ಪುತ್ರನಂ ಹೆತ್ತಳು. ಹತ್ತನೆಯುವಳಿನಿಸಿದ ವಪುಸ್ಸೆಂಬ ದೇವಿಗೆ ವ್ಯವಸಾಯ (ಪ್ರಯತ್ನ) ನೆಂಬವನು ಮಗನು. ಹನ್ನೊಂದನೆಯವಳಾದ ಶಾಂತಿಗೆ ಕ್ಷೇಮ (ಇದ್ದದ್ದನ್ನು ಕಾಪಾಡಿಕೊಳ್ಳುವಿಕೆ.) ಸೆಂಬ ಆತ್ಮಜಂ ಪುಟ್ಟಿದನು. ಹನ್ನೆರಡನೆಯವಳಾದ ಸಿದ್ಧಿ ಎಂಬಾಕೆಗೆ ಸುಖನೆಂಬ ಮಗನು ಉದಯಿಸಿದನು. ಇಂತು ಆ ಧರ್ಮಪುರುಷನಿಗೆ ತನ್ನ ಹದಿಮೂರು ಮಂದಿಯಲ್ಲಿಯೂ ಕ್ರಮವಾಗಿ ಪುತ್ರರು ಜನಿಸಿದರು ಆ ಧರ್ಮಪುರುಷನ ಹಿರಿಯ ಪತ್ನಿಯಾದ ಶ್ರದ್ಧಾ ದೇವಿಯ ಪುತ್ರನೆನಿಸಿದ ಕಾಮನು, ರತಿ ಎಂಬ (ಪ್ರೀತಿ) ಮುಗ್ಧಾಂಗನೆಯಂ ಮದುವೆ ಮಾಡಿಕೊಂಡು ಅವಳಲ್ಲಿ ತನ್ನ ತಂದೆಯಾದ ಧರ್ಮಪುರುಷನಿಗೆ ಮೊಮ್ಮಗನೆನಿಸಿದ ಹರ್ಷನೆಂಬ ತನಯನಂ ಪಡೆದನು ॥ ೨೮ ॥ ೨೯ ॥ ೩೦ ॥ ೩೧ ॥ ಅಯ್ಯಾ ಮೈತ್ರೇಯನೆ, $ ಆ ಪರಮಾತ್ಮನ ದಕ್ಷಿಣ (ಒಲಭಾಗ) ದ ಸ್ತನದಿಂದ ಸಾಕ್ಷಾನ್ನಾರಾಯಣ ಮೂರ್ತಿಯೇ ಧರ್ಮಸ್ವರೂಪವಂ ಪಡೆದು ಬಂದನು. ಸರ್ವ ಜನರಿಗು ಭಯವನ್ನುಂಟುಮಾಡುವ ಕಾರಣ

$ ಧರ್ಮಸ್ತನಾದ್ದಕ್ಷಿಣತೋ ಯತ್ರನಾರಾಯಣಸ್ಸ್ವಯಂ । ಅಧರ್ಮಃ ಪೃ ೦ತತೋ ಯಸ್ಮಾ ನ್ಮೃತ್ಯು ರ್ಲೋಕಭಯಂಕರಃ ॥ ಎಂಬ ಭಾಗವತ ವಚನವು ಧರ್ಮಾಧರ್ಮಗಳು ಆ ಪರಮಾತ್ಮನ ದೆಸೆಯಿಂದುದಯಿಸಿದುವೆಂದು ಮೇಲೆ ಹೇಳಿದ ವಚನಕ್ಕೆ ಪ್ರಮಾಣವಾಗಿರುತ್ತೆ.

ರ್ಯಾ ತ್ಯ ಧರ್ಮಸ್ಯ ತಯೋ ರ್ಜಜ್ಞೇ ತಥಾನೃತಂ । ಕನ್ಯಾಚ
ನಿಕೃತಿ ಸ್ತಾಭ್ಯಾಂ ಮಾಯಾ ಜಜ್ಞೇ ಽಥ ವೇದನಾ ॥೫॥ ಮಾ
ಯಾಚ ವೇದನಾ ಚೈವ ವಿಷ್ಣುನಂ ತ್ವಿ ದನೋತ ಯೋಃ ।ತಯೋ
ರ್ಜಜ್ಞೇ ಽ ಥವೈ ಮಾಯಾ ಮೃತ್ಯುಂ ಭೂತಾಪಹಾರಿಣಂ॥೬॥
ವೇದನಾ ಸ್ವಸುತಂ ಚಾಪಿ ದುಃಖಂ ಜಜ್ಞೇ ಽ ಥ ರೌರವಾತ್

ಮೃತ್ಯುವೆಂಬವನಾಗಿ ಕರೆಯಲ್ಪಡುವ ಮೃತ್ಯು ಸ್ವರೂಪವಾದ ಅಧರ್ಮವು ಅತನ ಹಿಂಭಾಗದಿಂದುಂಟಾಯಿತು, ಆ ಧರ್ಮಾಧರ್ಮಗಳಲ್ಲಿ ಮೊದಲನೆಯವನಾದ ಧರ್ಮಪುರುಷನ ಸಂಸಾರವನ್ನು ಇದುವರೆಗೂ ನಿನಗೆ ವಿವರಿಸಿದೆನು ಇನ್ನುಮುಂದೆ ಅಧರ್ಮಪುರುಷನ ಪ್ರಜಾವಿವರಣವಂ ಗೈವೆನು ಕೇಳು ಅದೆಂತೆಂದರೆ—ಆ ಅಧರ್ಮನಿಗೆ ಹಿಂಸೆ (ಇತರರನ್ನು ಸಂಕಟಕ್ಕೆ ಗುರಿಮಾಡುವಿಕೆ) ಎಂಬಾಕೆಯೇ ಸಹಧರ್ಮಚಾರಿಣಿಯು, ಈ ಹಿಂಸಾ ಮತ್ತು ಅಧರ್ಮಗಳೆಂಬ ಮಿಥುನಗಳಿಂದ ಅನೃತ (ಅಸತ್ಯ) ನೆಂಬ ಮಗನು ಉದಯಿಸಿದನು. ಅಂತೆಯೇ ನಿಕೃತಿ (ವಂಚನೆ) ಎಂಬೊಬ್ಬ ಪುತ್ರಿಯೂ ಜನಿಸಿದಳು ಇಂತು ಉದಯಿಸಿದ ನಿಕೃತಿ ಮತ್ತು ಅನೃತರೆಂಬ ಸ್ತ್ರೀಪುರುಷರ ಯುಗ್ಮದಿಂದ ಮಾಯೆ, ವೇದನ, ಅಥವಾ ಕಪಟ ವೆಂಬ ಪುತ್ರಿಕೆಯೂ, ಭಯನೆಂಬ ಸುತನೂ ಹುಟ್ಟಿದರು ಇವರಿಬ್ಬರೂ ದಂಪತಿಗಳಿಸಿಸುವರು. ಅಂತು ನಿಕೃತಿ, ಅನೃತರೆಂಬ ದಂಪತಿಗಳಿಂದ ಮಾಯೂ, ಭಯು ಳೆಂಬ ಬಂದು ಯುಗ್ಮವೂ, ವೇದನಾನರಕವೆಂಬ ಮತ್ತೊಂದು ಯುಗ್ಮವೂ ಉಂಟಾದುವು ॥೫॥ ಆ ಮಾಯಾ ವೇದನೆಗಳಲ್ಲಿ ಮೊದಲನೆಯವನಳಿಸಿದ ಮಾಯಾದೇವಿಯು ಭಯಪುರುಷನ ಸಾನ್ನಿಧ್ಯವಂ ಪಡೆದು ಸಕಲ ಭೂತಗಳನ್ನೂ ಸಂಹಾರ ಮಾಡತಕ್ಕ ಸರ್ವಾಪಹಾರಕನಾದ ಮೃತ್ಯುವೆಂಬ ಪುತ್ರನಂ ಪಡೆದಳು ॥೬॥ ಬಳಿಕ ವೇದನೆಯು ನರಕಪುರುಷನ ಸಂಪರ್ಕವಂ ಹೊಂದಿ ಆತನಿಂದ ತನ್ನ ಗುಣಾವಿಗಳಿಗೆ ಅನುರೂಪನಾದ ದುಃಖನೆಂಬ ಮಗನನ್ನು ಹೆತ್ತಳು. ಭಯಪುರುಷನಿಂದ ಮಾಯೆಯಲ್ಲಿ ಜನಿಸಿದ ಮೃತ್ಯುವಿನಿಂದ ವ್ಯಾಧಿ (ರೋಗ) ಜರೆ, ಮುಪ್ಪು ಶೋಕ, (ಮನಸ್ಸಿಗೆ ಹರ್ಷವಿಲ್ಲದಿರುವಿಕೆ) ತೃಷ್ಣಾ ಆಶೆ ಕೋಪಗಳು ಪುಟ್ಟಿದವು ॥೪॥ ಇಂತು ಜನಿಸಿದ ವ್ಯಾಧಿ, ಜರಾ, ಶೋಕ, ತೃಷ್ಣಾ

ಮೃತ್ಯೋ ರ್ವ್ಯಾಧಿ ಜರಾಶೋಕ ತೃಷ್ಣಾ ಕ್ರೋಧಾಶ್ಚ ಜಜ್ಞಿರೇ ॥೪೪॥ ದುಃ ಖೋತ್ತರಾ ಸ್ಮೃತಾ ಹ್ಯೇತೇ ಸರ್ವೇ ಚಾ ಧರ್ಮ ಲಕ್ಷಣಾಃ । ನೈಷಾಂ ಭಾರ್ಯಾ ಽ ಸ್ತಿ ಪುತ್ರೋ ವಾ ತೇ ಸರ್ವೇ ಹ್ಯೂರ್ಧ್ವ ರೇತಸಃ ॥೪೫॥ರಾದ್ರ್ಯ ಶ್ಚೇತಾನಿ ರೂಪಾಣಿ ವಿಷ್ಣೋ ರ್ಮನಿವರಾತ್ಮಜ ! । ನಿತ್ಯಪ್ರಳಯ ಹೇತುತ್ವಂ ಜಗತೋ ಽ ಸ್ಯ ಪ್ರಪಾಂ ತಿನ್ಯೈ ॥೪೬॥ ದಕ್ಷೋ ಮರೀಚಿ ರತ್ರಿಶ್ಚ ಭೃಗುಶ್ಚಾ

ಮತ್ತು ಕ್ರೋಧಗಳು ತಮ್ಮ ಉತ್ಪತ್ತಿಗೆ ಅಧರ್ಮವೇ ಮೂಲವಾಗಿರುವ ಕಾರಣ ಪ್ರಾಗ್ಜನ್ಮಕೃತಗಳಾದ ಅಧರ್ಮಕ್ಕೆ ಜ್ಞಾಪಕ ಅಥವಾ ಸೂಚಕ ಗಳಾಗಿರುವ ಕಾರಣ ಆ ಅಧರ್ಮಕ್ಕೆ ಯಾವ ದುಃಖರೂಪವಾದ ಫಲ ವುಂಟೋ, ಇವುಗಳಿಂದಲೂ ಅದೇ ದುಃಖವೇ ಫಲವಾಗಿ ಏರ್ಪಡುವುದ ರಿಂದ, ಇವುಗಳಿಗೆ ಹೆಂಡಿರು, ಮಕ್ಕಳು ಮೊದಲಾದ ಸಂಸಾರವಿಲ್ಲವು. ಆದುದರಿಂದಲೇ ಈ ಮೇಲೆ ಹೇಳಿದ ವ್ಯಾಧಿ, ಜರಾ, ಶೋಕ, ತೃಷ್ಣಾ, ಕ್ರೋಧಗಳನ್ನು ಊರ್ಧ್ವರೇತಸ್ಸುಗಳೆಂಬುದಾಗಿ ವ್ಯವಹರಿಸುವರು ॥೪೫॥ ಓ ಮುನಿಕುಲತಿಲಕನೆ, ಅಧರ್ಮವೂ ಮತ್ತು ಆ ಅಧರ್ಮದಿಂದಾಂ ಟಾದ ಅಸತ್ಯ, ವಂಚನೆ, ಮಾಯೆ, ಭಯ, ವೇದನೆ, ನರಕ, ಮೃತ್ಯು, ದುಃಖ, ಜರಾ, ವ್ಯಾಧಿ, ಶೋಕ, ತೃಷ್ಣಾ, ಕ್ರೋಧ ಮೊದಲಾದ ಇವೆಲ್ಲ ಗಳೆಲ್ಲವೂ ಅತನ ತಾಮಸರೂಪಿಗಳಾದ ಲೀಲಾವಿಭೂತಿಗಳೆನ್ನಲ್ಪಡುವವು. ಇಂತು ತಾಮಸಕಾರ್ಯಗಳಾದುದರಿಂದಲೇ ಈ ಜಗತ್ತಿನ ನಿತ್ಯಪ್ರಳಯಕ್ಕೆ ಕಾರಣಗಳಾಗಿರುವವು ॥೪೬॥ ಅಧರ್ಮ ಮೊದಲಾದ ಈಮೇಲೆ ಹೇಳಿದು ವುಗಳೆಲ್ಲವೂ ನಿತ್ಯಪ್ರಳಯಕ್ಕೆ ಕಾರಣಗಳೆಂದು ಹೇಳಿದುದರಿಂದ ಪ್ರಸ ಕ್ತಾನು ಪ್ರಸಕ್ತಸ್ಯಾಯದಿಂದ ನಿತ್ಯ ಸೃಷ್ಟಿ, ನಿತ್ಯಸೃಷ್ಟಿಗಳನ್ನೂ ತಿಳಿ ಯಪಡಿಸಬೇಕಾಗಿರುವ ಕಾರಣ ಅವುಗಳ ಸ್ವರೂಪವಂ ವಿವರಿಸುವೆನು ಅಯ್ಯಾ ಪ್ರಾಜ್ಞನೆನಿಸಿದ ಮೈತ್ರೇಯನೆ, ದಕ್ಷ, ಮರೀಚಿ, ಅತ್ರಿ, ಭೃಗು ಮೊದಲಾದವರು ಪ್ರಜಾಸೃಷ್ಟಿಗೆ ಕಾರಣರಾಗಿರುವುದರಿಂದ, ಇವರೆ ಲ್ಲರೂ ನಿತ್ಯಸೃಷ್ಟಿಗೆ ಮೂಲಭೂತರೆನಿಸುವರು ॥೪೭॥ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ,

ದ್ಯಾಃ ಪ್ರಜೇಶ್ವರಾಃ । ಜಗತ್ಯ ತ್ರ ಮಹಾಭಾಗ! ಸಿತ್ಯಸರ್ಗಸ್ಯ ಹೇತವಃ ॥೫೭॥ ಮನವೋ ಮನುಪುತ್ರಾಶ್ಚ ಭೂಪಾ ವೀರ್ಯ ಧನಾಶ್ಚಯೇ । ಸನ್ಮಾರ್ಗಾಭಿರತಾ ಶೂರಾ ಸ್ತೇ ನಿತ್ಯ ಸ್ಥಿತಿ ಕಾರಿಣಃ॥೫೮॥ಮೈತ್ರೇಯಃ ॥ಯೋಯಂ ನಿತ್ಯ ಸ್ಥಿತಿ ಬ್ರಹ್ಮನ್ ! ನಿತ್ಯ ಸರ್ಗ ಸ್ತಥೇರಿತಃ । ನಿತ್ಯ್ಯ ಭಾವಾಶ್ಚ ತೇಷಾಂ ವೈ ಸ್ವರೂಪಂ ಮಮ ಕಥ್ಯತಾಂ ॥೫೯। ಶ್ರೀ ಪರಾಶರಃ ॥ ಸರ್ಗ ಸ್ಥಿತಿ ವಿನಾಶಾಂ ಶ್ಚ ಭಗವಾ೯ ಮಧುಸೂದನಃ । ತೈ ಸ್ತೈ ರೂಪೈ ರಚಿಂ

ದೇವಸಾವರ್ಣಿ, ಇಂದ್ರಸಾವರ್ಣಿಗಳಂಬ ಈ ಹದಿನಾಲ್ಕು ಮಂದಿ ಮನುಗಳೂ, ಶೌರ್ಯವೇ ಧನವಾಗಿ ಉಳ್ಳ ಸನ್ಮಾರ್ಗಾವಲಂಬಿಗಳೆನಿಸಿದ, ಶೂರರಾದ ರಾಜರುಗಳೂ ಕೂಡ ಈ ಜಗತ್ತಿನ ನಿತ್ಯಸ್ಥಿತಿ (ಪರಿಪಾಲನ) ಕಾರ್ಯಕ್ಕೆ ಮೂಲಭೂತರೆನಿಸುವರು ॥೫೮॥ ಇಂತು ಪರಾಶರನು ಹೇಳಿದ ನಿತ್ಯಸರ್ಗ, ನಿತ್ಯಸ್ಥಿತಿ, ನಿತ್ಯಲಯಗಳಿಗೆ ಕಾರಣಭೂತರೆನಿಸಿದ ಆ ಆ ದೇವತೆಗಳು ಮೊದಲಾದವರಂ ಕೇಳಿದ ಬಳಿಕ ಮೈತ್ರೇಯನು ಆ ಪರಾಶರ ಮುನಿಯುಂ ಕುರಿತು ಪ್ರಶ್ನೆಯಾಡುತ್ತಾನೆ---ಅಯ್ಯಾ ಬ್ರಹ್ಮಣ್ಯವರೇಣ್ಯನೆನಿಸಿದ ಪರಾಶರ ಮುನಿಯೆ ! ಸೃಷ್ಟಿ ಕಾರಣೀಭೂತರಾದ ಭೃಗ್ವಾದಿಗಳೂ, ಸ್ಥಿತಿಕಾರಣರೆನಿಸಿದ ಮನು ಮತ್ತು ಮನುಪುತ್ರರಾದ ರಾಜರುಗಳೂ, ಲಯಕಾರಣರಾದ ಅಥರ್ವಾದಿಗಳೂ ಕೂಡ ಕೆಲವು ಕಾಲ ಮಾತ್ರವಿದ್ದು ತಮ್ಮತಮ್ಮ ಕಾರ್ಯವು ಮುಗಿದಬಳಿಕ ಅವರೂ ಸಹ ಲಯವನ್ನು ಹೊಂದತಕ್ಕವರಾಗಿಯೇ ಇರುವರು. ಆದುದರಿಂದ ಅವರು ಅನಿತ್ಯರೆನಿಸುವರು. ಇಂತಿರಲು ನಿತ್ಯಗಳನಿಸಿದ ಸೃಷ್ಟಿ, ಸ್ಥಿತಿ, ಲಯಗಳಿಗೆ ಅವರಂ ಕಾರಣರೆಂಬುವುದು ಹೇಗೆ? ಮತ್ತು ನಿತ್ಯಸ್ಥಿತಿ ಎಂದರೇನು? ನಿತ್ಯ ಸೃಷ್ಟಿಯು ಯಾವುದು ? ನಿತ್ಯಲಯವೆಂಬುದು ಎಂತಹದು ? ಈ ವಿಷಯಗಳನ್ನು ನನಿಗೆ ವಿಶದವಾಗಿ ತಿಳುಹಬೇಕೆಂದು ಪ್ರಾರ್ಥಿಸಿಕೊಂಡನು ॥೫೯॥ ಇಂತು ಮೈತ್ರೇಯನ ಪ್ರಾರ್ಥನೆಯಂ ಕಿವಿಗೊಟ್ಟು ಕೇಳಿ ಪರಾಶರನು ಹೇಳುತ್ತಾನೆ---

ಅಯ್ಯಾ ಮನನಶೀಲನಾದ ಮೈತ್ರೇಯನೆ ! ಮಧುವೆಂಬ ರಾಕ್ಷಸನನ್ನು ಕೊಂದವನಾದಕಾರಣ ಮಧುಸೂದನನೆಂತಲೂ, ಇಂದ್ರಿಯಾಶ

ತ್ಯಾತ್ಮಾ ಕರೋತ್ಯವ್ಯಾ ಹತೋ ವಿಭುಃ ॥೪೦॥ * ನೈಮಿತ್ತಿಕಃ ಪ್ರಾಕೃತಿಕಸ್ತಥೈವಾ ತ್ಯಂತಿಕೋ ದ್ವಿಜ। ನಿತ್ಯಶ್ಚ ಸರ್ವಭೂತಾನಾಂ ಪ್ರಳಯೋ ಽಯಂ ಚತುರ್ವಿಧಃ ॥೪೧॥ ಬ್ರಾಹ್ಮೋ ನೈಮಿತ್ತಿಕ ಸ್ತತ್ರ ಯಚ್ಛೇತೇ ಜಗತೀ ಪತಿಃ। ಪ್ರಯಾತಿ ಪ್ರಾಕೃತ ಶ್ಚೈವ ಬ್ರಹ್ಮಾಂಡಂ ಪ್ರಕೃತೌ ಲಯಂ॥೪೨॥ಜ್ಞಾನಾ ದಾತ್ಯಂತಿಕಃ

ಕ್ತಿಗೆ ಗೋಚರವಲ್ಲದ ಕಾರಣ ಅಚಿಂತ್ಯ ಮಹಿಮನೆಂದೂ, ಬ್ಬರಶಕ್ತಿಗೆ ತಾನು ಒಳಪಡದೆ ಎಲ್ಲರನ್ನೂ ತನ್ನ ಇಷ್ಟದಂತೆ ಪ್ರವರ್ತನ ಮಾಡಿಸುವ ಕಾರಣ ಅವ್ಯಾಹತ ಶಕ್ತಿಯುಳ್ಳವನೆಂತಲೂ, ತ್ರಿಕಾಲದಲ್ಲಿಯೂ ನಾಶರಹಿತನೆನಿಸಿ ಎಲ್ಲೆಲ್ಲಿಯೂ ನೆಲಸಿರುವಕಾರಣ ವಿಭುವೆಂತಲೂ ಕರೆಯಿಸಿಕೊಳ್ಳುವ ಷಡ್ಗುಣೈಶ್ವರ್ಯಸಂಪನ್ನನಾದ ಆ ಪರಮಾತ್ಮನೇ ದಕ್ಷ, ಮರೀಚಿ ಮೊದಲಾದವರಿಗೆ ಸೃಷ್ಟಿಕಾರ್ಯದಲ್ಲಿಯೂ, ಸ್ವಾಯಂಭುವಾದಿ ಮನುಗಳು ಮತ್ತು ಅವರ ಮಕ್ಕಳಾದ ರಾಜರುಗಳು ಇವರಿಗೆ ಸ್ಥಿತಿ ಕಾರ್ಯದಲ್ಲಿಯೂ, ಅಧರ್ಮ, ಮೃತ್ಯು ಮೊದಲಾದವರಿಗೆ ಲಯಕಾರ್ಯದಲ್ಲಿಯೂ, ಪ್ರವೃತ್ತಿಯನ್ನುಂಟುಮಾಡಿ ತತ್ತತ್ಕಾರ್ಯವನ್ನು ನಿರ್ವಹಿಸುವನಾದುದರಿಂದ ಅನಿತ್ಯರೆನಿಸಿದ ದಕ್ಷ, ಮನು ಮೊದಲಾದವರು ನಿತ್ಯರೆನಿಸಿದ ಸೃಷ್ಟ್ಯಾದಿಗಳಿಗೆ ಕಾರಣರೆಂದು ಹೇಳುವಿಕೆಯು ದೋಷವಲ್ಲ ॥೪೦॥ ಆಯ್ಯಾ ದ್ವಿಜಕುಲಾವತಂಸನೆ! ಸಕಲ ಭೂತಗಳಿಗೂ ಉಂಟಾಗುವ ಪ್ರಳಯವು ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕ, ನಿತ್ಯಗಳೆಂಬುದಾಗಿ ನಾಲ್ಕುವಿಧವಾಗಿರುವುದು ॥೪೧॥ ಸತ್ವಾದಿಗುಣತ್ರಯ ಸಂಬಂಧವಂ ತೊರೆದು ಆ ಪರಮಾತ್ಮನು ನಿರ್ವಿಷ್ಣನಾಗಿ ಕೇವಲ ನಿರ್ವಿಕಲ್ಪಸಮಾಧಿಯಲ್ಲಿ ಲೀನನಾಗುವಿಕೆಯೇ ಬ್ರಾಹ್ಮಪ್ರಳಯ ಅಥವ ನಿತ್ಯ ಪ್ರಳಯವೆನಿಸುವುದು. ಈ ಬ್ರಹ್ಮಾಂಡವೆಲ್ಲವೂ ಪ್ರಕೃತಿಯಲ್ಲಿ ಲಯವಂ ಪಡೆಯುವ ಕಾಲಕ್ಕೆ ಪ್ರಾಕೃತಿಕಪ್ರಳಯವೆಂಬುದಾಗಿ ಹೆಸರು. ॥ ೪೨ ॥ ಯಮ, ನಿಯಮಾದಿ ಎಂಟು ವಿಧವಾದ ಯೋಗಾಭ್ಯಾಸಬಲದಿಂದ ಪರಮಾತ್ಮಜ್ಞಾನವಂ ಪಡೆದ ಯೋಗಿಗಳು ಮುಕ್ತಿಸಾಮ್ರಾಜ್ಯಾಭಿಷೇಕಕ್ಕಾಗಿ ಕಾರಣ ಬ್ರಹ್ಮನೊಡನೆ

* ಈ ಪ್ರಳಯವಿಷಯವಾಗಿ ಇದೇ ಅಂಶದ ಎರಡನೆಯ ಅಧ್ಯಾಯದ ೧೩ನೆಯ ಪುಟವನ್ನು ನೋಡಿರಿ.

ಪ್ರೋಕ್ತೋ ಯೋಗಿನಃ ಪರಮಾತ್ಮನಿ।ನಿತ್ಯ ಸ್ಸದೈವ ಜಾತಾನಾಂ
ಯೋವಿನಾಶೋ ದಿವಾನಿಶಂ ॥೪೫॥ ಪ್ರಸೂತಿಃ ಪ್ರಕೃತೇ ರ್ಯಾತು
ಸಾ ಸೃಷ್ಟಿಃ ಪ್ರಾಕೃತಾ ಮತಾ । ದೈನಂದಿನೀ ತಥಾ ಪ್ರೋಕ್ತಾ
ಯಾಂತರ ಪ್ರಳಯಾದನು ॥ ೪೪ ॥ ಭೂತಾನ್ಯನು ದಿನಂಯತ್ರ
ಜಾಯಂತೇ ಮುನಿಸತ್ತಮ। । ನಿತ್ಯ ಸರ್ಗೋ ಹಿ ಸಃ ಪ್ರೋಕ್ತಃ
ಪುರಾಣಾರ್ಥ ವಿಚಕ್ಷಣೈಃ ॥ ೪೫ ॥ ಏವಂ ಸರ್ವ ಶರೀರೇಷು ಭಗ
ವಾ೯ ಭೂತಭಾವನಃ । ಸಂಸ್ಥಿತಃ ಕುರುತೇ ವಿಷ್ಣು ರುತ್ಪತ್ತಿ ಸ್ಥಿತಿ
ಸಂಯಮಾ೯ ॥೪೬॥ ಸೃಷ್ಟಿ ಸ್ಥಿತಿ ವಿನಾಶಾನಾಂ ಶಕ್ತಯ ಸ್ಸರ್ವ

ಸೇರಿ ಆ ಪರಮಾತ್ಮನ ಸಾನ್ನಿಧ್ಯವಂ ಹೊಂದುವಿಕೆಯೇ ಆತ್ಯಂತಿಕ ಪ್ರ
ಳಯವೆನಿಸುವುದು. ದೀಪದಲ್ಲಿ ಬಂದು ಜ್ವಾಲೆಯಾದ ಬಳಿಕ ಮತ್ತೊಂ
ದು ಜ್ವಾಲೆಯು ಎಂತು ಸಂತತವೂ ಉಂಟಾಗುವುದೋ ಅಂತೆಯೇ ನಿರಂ
ತರವೂ ಉತ್ಪತ್ತಿಯುಂ ಪಡೆಯುವ ಭೂತಜಾಲಗಳು ಅಹರ್ನಿಶದ
ಲ್ಲಿಯೂ ಹೊಂದುವ ನಾಶವೇ ನಿತ್ಯಪ್ರಳಯವೆನಿಸುವುದು ॥೪೫॥ ಅಯ್ಯಾ
ಸಚ್ಛಿಷ್ಯ ಶಿಖಾಮಣಿಯೇ। ಇದುವರೆಗೂ ಪ್ರಳಯ ಸ್ವರೂಪವಂ ನಿ
ರೂಪಿಸಿದುದಾಯಿತು. ಇನ್ನು ಸೃಷ್ಟಿವಿಷಯವಂ ವಿವರಿಸುವೆನು ಪರ
ಬ್ರಹ್ಮರೂಪಿಣಿಯಾದ ಪ್ರಕೃತಿಯು ದೆಶೆಯಿಂದುಂಟಾಗುವ ಯಾವ ಮಹ
ತ್ತತ್ವ, ಅಹಂಕಾರ ಮೊದಲಾದವುಗಳ ಸೃಷ್ಟಿಯುಂಟೋ ಇದನ್ನೇ
ಸೃಷ್ಟಿ ಚಿಂತಕರಾದ ಮಹನೀಯರು " ಪ್ರಾಕೃತ ಸೃಷ್ಟಿ " ಎನ್ನುವರು. ಪ್ರಳಯಾನಂತರ ಕಾಲದಲ್ಲಿ ಉಂಟಾಗುವ ಚರಾಚರ ಸೃಷ್ಟಿಗೆ
" ದೈನಂದಿನ " ಸೃಷ್ಟಿ ಎಂದು ಹೆಸರು ॥೪೪॥ ಅಯ್ಯಾ ಮುನಿವರ್ಯನೆ!
ಈ ಲೋಕದಲ್ಲಿರುವ ಸಕಲ ಪ್ರಾಣಿಗಳೂ ನಿರಂತರವೂ ಉತ್ಪತ್ತಿಯುಂ
ಪಡೆಯುವಿಕೆಯೇ ನಿತ್ಯಸೃಷ್ಟಿ ಎಂಬುದಾಗಿ ಪುರಾಣಗಳ ಸಾರವನ್ನರಿತ
ಮಹನೀಯರು ಹೇಳುವರು ॥೪೫॥ ಚರಾಚರ ರೂಪವಾದ ಈ ಎಲ್ಲ
ಪ್ರಪಂಚಕ್ಕೂ ಕಾರಣಭೂತನಾದ ಆ ಮಹಾವಿಷ್ಣುವು ಆ ಆ ಕಾಲಕ್ಕೆ
ಅನುಸಾರವಾದ ಆ ಆ ದೇಹವಂ ಪಡೆದು ಉತ್ಪತ್ತಿ, ಸ್ಥಿತಿ, ನಾಶಗಳೆಂಬ
ಕಾರ್ಯತ್ರಯವನ್ನೂ ನಿರ್ವಹಿಸುತಿರುವನು ॥೪೬॥ ಅಯ್ಯಾ ಮೈತ್ರೇಯ
ನೆ! ಸರ್ವವ್ಯಾಪಕನೆನಿಸಿದ ಆ ವಿಷ್ಣುವಿನ ಸಂಕಲ್ಪಾನುಸಾರ ಸೃಷ್ಟಿ,

ದೇಹಿಷು । ವೈಷ್ಣವ್ಯಃ ಪರಿವರ್ತಂತೇ ಮೈತ್ರೇಯಾ । ಹರ್ಷಿಶಂ ಸಮಾಃ ॥೪೭॥ ಗುಣತ್ರಯ ಮಯಂ ಹ್ಯೇತ ದ್ಬ್ರಹ್ಮಕ್ಷ । ಶಕ್ತಿತ್ರ ಯಂ ಮಹತ್ । ಯೋಽತಿ ಯಾತಿ ಸಯಾತ್ಮೇನ ಪರಂ ನಾವರ್ತ ತೇಪುನಃ ॥ ೪೮ ॥ ಇತಿ ಶ್ರೀ ವಿಷ್ಣುಪುರಾಣೆ ಪ್ರಥಮೋಂಶೇ ಸಪ್ತ ಮೋಧ್ಯಾಯಃ ॥

ಸಪ್ತಮಾಧ್ಯಾಯ ಸ್ಸಮಾಪ್ತಃ.

ಸ್ಥಿತಿ, ಲಯಗಳಂ ನೆರವೇರಿಸತಕ್ಕ ಆತನ ಸತ್ವಾದಿ ಶಕ್ತಿಗಳು ನಿರಂತ ರವೂ ಎಲ್ಲ ದೇಹಗಳಲ್ಲಿಯೂ ಒಂದೇವಿಧವಾಗಿ ಸುತ್ತುತ್ತಿರುವುವು ಮೈ ತ್ರೇಯನು ಆಕ್ಷೇಪಿಸುತ್ತಾನೆ — ಸರ್ವಕಾಲದಲ್ಲಿಯೂ ಸರ್ವದೇಹಗಳ ಲ್ಲಿಯೂ ಆ ಪರಮಾತ್ಮನೊಬ್ಬನೇ ನೆಲೆಸಿದ್ದ ಪಕ್ಷದಲ್ಲಿ ಕಾಲಭೇದದಿಂದ ಉತ್ಪತ್ತಿ, ಸ್ಥಿತಿ, ನಾಶಗಳುಂಟಾಗುವ ಬಗೆ ಹೇಗೆ? ಎಲ್ಲವೂ ಏಕಕಾ ಲದಲ್ಲಿಯೇ ಉಂಟಾಗಬೇಕಲ್ಲವೆ? ಇದಕ್ಕೆ ಪರಾಶರನು ಸಮಾಧಾನ ಮಾಡುವುದೆಂತೆಂದರೆ — ಅಯ್ಯಾ ಮೈತ್ರೇಯನೆ! ಆ ಪರಮಾತ್ಮನ ಶಕ್ತಿ ಗಳೆನಿಸಿದ ಸತ್ವಾದಿಗಳು ಕೆಲಕೆಲವುಕಾಲ ಕೆಲಕೆಲವು ದೇಹಗಳಲ್ಲಿರುವ ಕಾರಣ ಎಲ್ಲವೂ ಏಕಕಾಲದಲ್ಲಿಯೇ ಆಗಲಾರವು. ಆದುದರಿಂದ ಸೃ ಷ್ಟ್ಯಾದಿ ಕಾರ್ಯತ್ರಯವೂ ಸಕಲ ದೇಹಗಳಲ್ಲಿಯೂ ಏಕಕಾಲದಲ್ಲಿಯೇ ಆಗಬೇಕೆಂಬ ನಿಯಮವಿಲ್ಲ ॥೪೭॥ ಅಯ್ಯಾ ಬ್ರಹ್ಮಜ್ಞನೆ! ಸತ್ವಾದಿ ಗುಣತ್ರಯಾತ್ಮಕವಾದ ಈ ಸೃಷ್ಟ್ಯಾದಿ ಪ್ರವಾಹವನ್ನು ಯಾವ ಮಹಾ ನುಭಾವನಾದರೆ ತನ್ನ ವಿವೇಕವೆಂಬ ಹಡಗಿನ ಸಹಾಯದಿಂದ ದಾಟುವ ನೋ ಅಂತಹವನು ಒಂದುಸಾರಿ ಮಹತ್ತಾದ ಈ ಸಂಸಾರ ಪ್ರವಾಹವಂ ದಾಟಿದ ಬಳಿಕ ಮರಳಿ ಎಂದೆಂದಿಗೂ ಈ ಪ್ರವಾಹಕ್ಕೆ ಬೀಳದೆ ನಿರಂತ ರವೂ ಕೈವಲ್ಯಜ್ಞಾನವುತ್ತು ಆನಂದ ಸ್ವರೂಪನೆನಿಸಿದ ಆ ಪರಮಾತ್ಮನ ಸಾನ್ನಿ ಧ್ಯವಂ ಪಡೆದು ಕೈವಲ್ಯ ಸಾಮ್ರಾಜ್ಯ ಪದವಿಯಲ್ಲಿ ಪಟ್ಟಾಭಿಷಿಕ್ತನಾಗು ವನೆಂದು ಪರಾಶರಮುನಿಯು ಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ

ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದೋಳ್
ಏಳನೆಯ ಅಧ್ಯಾಯಂ ಮುಗಿದುದು.
ಸಪ್ತಮಾಧ್ಯಾಯಂ ಸಮಾಪ್ತಂ.

ಶ್ರೀಃ.

ಓನ್ನಮಃ ಪರವಾತ್ಮನೆ.

ಅಥಾಷ್ಟಮೋಧ್ಯಾಯಃ.



ಶ್ರೀಪರಾಶರಃ ॥ ಕಥಿತ ಸ್ತಾಮಸ ಸ್ಸರ್ಗೋ ಬ್ರಹ್ಮಣ ಸ್ತೇ ಮು ಹಾಮುನೇ!* ರುದ್ರ ಸರ್ಗಂ ಪ್ರವಕ್ಷ್ಯಾಮಿ ತನ್ಮೇ ನಿಗದತ ಶ್ಶೃ ಣು ॥ ೧ ॥ ಕಲ್ಪಾದಾ ವಾತ್ಮನ ಸ್ತುಲ್ಯಂ ಸುತಂ ಪ್ರಧ್ಯಾಯತ

ಎಂಟನೆಯ ಅಧ್ಯಾಯವು.

ಹಿಂದಿನ ಅಧ್ಯಾಯದಲ್ಲಿ ಧರ್ಮಪುರುಷನು ದಕ್ಷಬ್ರಹ್ಮನ ಹದಿಮೂರುಮಂದಿ ಹೆಣ್ಣುಮಕ್ಕಳನ್ನೂ ಮದುವೆಯಾಗಿ ಆ ದಕ್ಷಕನ್ನಿಕೆಯರಲ್ಲಿ ಸಂತಾನವಂ ಪಡೆದ ಸಂಗತಿಯನ್ನೂ, ಆ ಧರ್ಮಪುರುಷನಿಗೆ ಪ್ರತಿಪಂಥಿ (ಶತ್ರು) ಎನಿಸಿದ ಅಧರ್ಮದಿಂದ ಉಂಟಾಗುವ ನಿತ್ಯಪ್ರಳಯಾದಿ ಕಾರಣಗಳನ್ನೂ ಚನ್ನಾಗಿ ವಿವರಿಸಿ, ಈ ಅಧ್ಯಾಯದಲ್ಲಿಯೂ ಕೂಡ ಹಿಂದಿನ ಅಧ್ಯಾಯದಲ್ಲಿ ಹೇಳಿದ ದಕ್ಷಪುತ್ರಿಯೂದ ಸತೀ ಎಂಬಾಕೆಯನ್ನು ಭವ ಶಬ್ದವಾಚ್ಯನಾದ ಈಶ್ವರನು ಮದುವೆಯೂದನೆಂಬ ಸಮಾಚಾರವನ್ನೂ ವಿಶದವಾಗಿ ತಿಳಿಯಪಡಿಸಲು ಪರಮದಯಾಶಾಲಿ ಎನಿಸಿದ ಪರಾಶರ ಮುನಿಯು ಪ್ರಸ್ತುತವಾದ ಆ ದಕ್ಷಕನ್ಯಾ ವಿವಾಹವನ್ನು ವಿಶದಪಡಿಸಲೋಸುಗ ಮೊದಲು ಈಶ್ವರಸೃಷ್ಟಿಯನ್ನು ಹೇಳುತ್ತಾನೆ—ಅಯ್ಯಾ ಮನನಶೀಲರಾದ ಮುನಿಗಳಲ್ಲಿ ಶ್ರೇಷ್ಠನೆನಿಸಿದ ಮೈತ್ರೇಯನೆ! ಕಾರಣಬ್ರಹ್ಮನಾದ ಹಿರಣ್ಯಗರ್ಭನಿಂದುಂಟಾದ ತಾಮಸ ಸೃಷ್ಟಿಯನ್ನು ಇದುವರೆಗೂ ತಿಳಿಸಿದೆನು. ಇನ್ನುಮುಂದೆ ರುದ್ರಸರ್ಗವನ್ನು ವಿಶದಪಡಿಸುವೆನು ಕೇಳು ॥೧॥ ಪ್ರಳಯಾದಿಯಲ್ಲಿ ಆ ಹಿರಣ್ಯಗರ್ಭನು ತನಗೆ ಅನುರೂಪನಾದ ಸು

* ಯದ್ಯಪಿ "ಖ್ಯಾತಿ ಸ್ಸತ್ಯಧಸಂಭೂತಿಃ" ಇತ್ಯಾದಿ ಪ್ರಕಾರವಾಗಿ ಹೇಳಿರುವಕಾರಣ ಮೊದಲನೆಯವಳಾದ ಖ್ಯಾತಿಯವಂಶವರ್ಣನಾನಂತರ ಸತೀದೇವಿಯ ವಂಶವರ್ಣನವು ಉಚಿತವಾದುದು. ಇಂತಿರಲು ಖ್ಯಾತಿವಂಶವರ್ಣನವಂ ಬಿಟ್ಟು ಸತೀದೇವಿಯ ವಂಶವಂ ವರ್ಣಿಸಲು ಆ ಖ್ಯಾತಿಯ ಚರಿತ್ರೆಯು ಬಹಳ ದೊಡ್ಡದಾದುದರಿಂದ ಮೊದಲು ಈ ಸತೀಚರಿತ್ರೆಯಂ ಹೇಳಿ ಬಳಿಕ ಆ ಖ್ಯಾತಿ ಚರಿತ್ರೆಯಂ ಹೇಳಬೇಕಾಯಿತು

ಸ್ತತಃ । ಪ್ರಾದುರಾಸೀ ತ್ಪ್ರಭೋ ರಂಗೇ ಕುಮಾರೋ ನೀಲ
ಲೋಹಿತಃ ॥೨॥ ರುರೋದ ಸುಸ್ವರಂ ಸೋಥ ಪ್ರಾದ್ರವ ದ್ದಿ ವ್ಯ
ಜ ಸತ್ತವು! । ಕಿಂ ರೋದಿಷೀ ತಿ ತಂ ಬ್ರಹ್ಮಾ ರುದಂತಂ ಪ್ರ
ತ್ಯುವಾಚ ವೈ ॥೩॥ ನಾಮು ದೇಹೀತಿ ತಂ ಸೋಽಥ ಪ್ರತ್ಯುವಾಚ
ಪ್ರಜಾಪತಿಃ § ರುದ್ರಸ್ತ್ವಂ ದೇವ! ನಾಮ್ನಾಸಿ ಮಾರೋದೀ ರ್ಧೈ
ರ್ಯ ಮಾವಹ ॥ ಏವ ಮುಕ್ತಃ ಪುನಸ್ಸೋಽಥ ಸಪ್ತ ಕೃತ್ವೋ
ರುರೋದಹ! ॥೪॥ ತತೋಽನ್ಯಾನಿ ದದೌ ತಸ್ಮೈ ಸಪ್ತ ನಾಮಾನಿ

ಪಾರಸಂ ಪಡೆಯಲಪೇಕ್ಷಿಸಿ, ಸಮೂಧಿಲೀನನಾಗುತಿರಲು ಆಗ ಆ ಮ
ಹಾನುಭಾವನ ದೇಹದಲ್ಲಿ ನೀಲಲೋಹಿತ ರುದ್ರನು ಕುಮಾರರೂಪದಿಂ
ದುದಯಿಸಿದನು ॥೨॥ ಅಯ್ಯಾ ಬ್ರಾಹ್ಮಣೋತ್ತಮನೆ ! ಇಂತು ಆ ಹಿರ
ಣ್ಯಗರ್ಭನ ದೇಹದಿಂದುದಯಿಸಿದ ಈ ನೀಲಲೋಹಿತನು ಗಟ್ಟಿಯಾಗಿ
ಅಳುತಾ ಓಡಿಹೋದನು ಇಂತು ಅಳುತಾ ಓಡಿಹೋಗುತ್ತಿರುವ ಈ
ನೀಲಲೋಹಿತನಂ ಕಂಡು ಬ್ರಹ್ಮನು ಅಯ್ಯಾ, ಏಕಕ್ಕೊಕ್ಕರ ಈಪರಿ
ಯಾಗಿ ಅಳುವೆ ? ಇದಕ್ಕೆ ಕಾರಣವೇನು ? ಎಂಬುದಾಗಿ ಪ್ರಶ್ನೆ ಮಾಡಿ
ದನು ॥೩॥ ಇಂತು ಪ್ರಶ್ನೆಮಾಡಿದ ಬ್ರಹ್ಮನ ಮಾತಂ ಲಾಲಿಸಿ, ರುದ್ರನು
ಹೇಳುತ್ತಾನೆ-" ನನ್ನ ಹೆಸರೇನು? ನನಿಗೆ ನಾಮವಂ ನಿರ್ದೇಶಮಾಡು"
ಎನಲು ಬಳಿಕ ಬ್ರಹ್ಮನು ಆತನಂ ಕುರಿತು " ಅಯ್ಯಾ ಸರ್ವಾತ್ಮಕನೆನಿ
ಸಿದ ಮಹಾನುಭಾವನೆ! ನೀನು ಈಪರಿಯಾಗಿ ರೋದನಗೈವೆಯಾದುದರಿಂ
ದ ನಿನ್ನ ಹೆಸರು 'ರುದ್ರನು' ನೀನೀಪರಿ ಅಳಬೇಡ. ಧೈರ್ಯವಂ ತಾಳವನ
ನಾಗು " ಎಂದು ನುಡಿದನು. ಇಂತೀಪರಿಯಾಗಿ ಬ್ರಹ್ಮನು ಹೇಳಿದುದಂ
ಕೇಳಿ ಆತನು ಮರಳಿ ಏಳುಬಾರಿ ರೋದನವಂ ಗೈದನು ॥೪॥ ಇಂತು ಆ
ನೀಲಲೋಹಿತನು ತನ್ನ ಪಿತೃವಾರ ತಂತ್ಯವನ್ನು ಜನಗಳಿಗೆ ಪ್ರಕಾಶಪ
ಡಿಸುವುದಕ್ಕೂ ಮತ್ತು ತಾನು ಪರಮೇಶ್ವರನೆನಿಸಿದ್ದರೂ ಲೋಕಸಂ

§ ಶ್ಲೋ॥ ಏವಮುಕ್ತಾಸ್ತುರುರುದುಃ ದುದ್ರುವುಶ್ಚ ಗಮಂತತಃ । ರೋದನಾದ್ರು
ವಣಾಚ್ಚೈವ ರುದ್ರನಾಮ್ನಾಭಿವಿಖ್ಯತಾಃ ॥ ಎಂಬ ವಾಯುಪುರಾಣ ವಚನವು ಈಶ್ವರ
ನಿಗೆ ಅಳುವಿಕೆಯಿಂದ ರುದ್ರನೆಂಬ ಹೆಸರು ಬಂದಿತು ಎಂಬ ವಿಷಯದಲ್ಲಿ ಪ್ರಮಾಣ
ವಾಗಿರುವುದು.

ವೈ ಪ್ರಭುಃ । ಸ್ಥಾನಾನಿ ಚೈಷಾ ಮಷ್ಟ್ಯನಾಂ ಪತ್ನೀಃ ಪು
ತ್ರಾಂಶ್ಚಕಾರಹ ॥ ಭವಂ ಕರ್ವ ಮಥೇಶಾನಂ ತಥಾ ಪಶುಪತಿಂ
ದ್ವಿಜ! । ಭೀಮ ಮುಗ್ರಂ ಮಹಾದೇವ ಮುವಾಚ ಸ ಪಿತಾಮ
ಹಃ ॥೬॥ ಚಕ್ರೇ ನಾಮಾ ನ್ಯಥೈತಾನಿ ಸ್ಥಾನಾ ನ್ಯೇಷಾಂ ಚಕಾ
ರಸಃ । ಸೂರ್ಯೋ ಜಲಂ ಮಹೀ ವಾಯು ರ್ವಹ್ನಿ ರಾಕಾಶ ಮೇ

ಗ್ರಹಾರ್ಥವಾಗಿ ಇಂತು ಅಳುತ್ತಿರುವುದಂ ಕಂಡು ಆ ಹಿರಣ್ಯಗರ್ಭನು ಆತನಿಗೆ ವರಳೆ ಏಳು ಹೆಸರುಗಳನ್ನೂ, ಈ ಎಂಟುಮಂದಿಗೂ ಹೆಂಡಿರು ಮಕ್ಕಳು ಮೊದಲಾದವರೆಲ್ಲರನ್ನೂ ಉಂಟುಮಾಡಿದನು ॥೫॥ ಅಯ್ಯೋ ದ್ವಿಜಶ್ರೇಷ್ಠನೆ! ಬಳಿಕ ಪಿತಾಮಹನೆನಿಸಿದ ಆ ಬ್ರಹ್ಮನು ಮೊದಲು ಆ ನೀಲಲೋಹಿತನಿಗೆ ಕೊಟ್ಟದ್ದ ರುದ್ರನೆಂಬ ಹೆಸರೇ ಮೊದಲನೆಯದು. ಎರಡನೆಯ ಹೆಸರು ಭವನೆಂತಲೂ, ಮೂರನೆಯದಾದ ಹೆಸರು " ಕರ್ವ " ನೆಂತಲೂ ತಿಳಿ ಈಶಾನ ಎಂಬ ನಾಲ್ಕನೆಯ ಹೆಸರನ್ನೂ, ಪಶುಪತಿ ಎಂಬ ಐದನೆಯ ಹೆಸರನ್ನೂ ಸಹ ಕೊಟ್ಟನು, ಆರನೆಯಬಾರಿ ಆತನನ್ನು ಭೀಮನೆಂಬದಾಗಿ ಕರೆದನು ಉಗ್ರನೆಂಬುದೇ ಆತನ ಏಳನೆಯ ಹೆಸರು. ಮಹಾದೇವನೆಂಬುದೇ ಆತನ ಎಂಟನೆಯ ಹೆಸರು ॥೬॥ ಇಂತು ಆ ಹಿರಣ್ಯಗರ್ಭನು ನೀಲಲೋಹಿತ ರುದ್ರನಂ ಸೃಷ್ಟಿಮಾಡಿ ಆತನಿಗೆ ರುದ್ರ ಮೊದಲಾದ ಎಂಟು ನಾಮಧೇಯಗಳಂ ಕೊಟ್ಟು ಬಳಿಕ ಎಂಟುವಿಧವಾದ ಆ ರುದ್ರನಿಗೆ ಎಂಟು ಸ್ಥಾನಂಗಳಂ ನಿರ್ದೇಶಮಾಡಿದನು. ಅದೆಂತೆಂದರೆ—ಸಕಲ ಲೋಕಕ್ಕೂ ಪ್ರಕಾಶವನ್ನುಂಟುಮಾಡುವ ಸೂರ್ಯನು ಆತನ ಮೊದಲನೆಯ ಸ್ಥಾನವು ಉದಕವೇ ಎರಡನೆಯ ಸ್ಥಾನವೆನಿಸುವುದು ಭೂಮಿಯನ್ನು ಮೂರನೆಯ ಆವಾಸವೆನ್ನುವರು. ವಾಯುವು ಆತನ ನಾಲ್ಕನೆಯ ವಾಸಸ್ಥಾನವು. ಐದನೆಯ ವಾಸಸ್ಥಾನವೇ ಅಗ್ನಿಯು. ಆಕಾಶವು ಆತನ ಆರನೆಯ ವಾಸಸ್ಥಾನವಾಗಿ ಏರ್ಪಟ್ಟಿತು. ದೀಕ್ಷಿತನು (ಯಜ್ಞವನ್ನು ಮಾಡುವುದಕ್ಕಾಗಿ ಸಂಕಲ್ಪಿಸಿರುವ ಯಜಮಾನನು) ಆತನ ಏಳನೆಯ ಸ್ಥಾನವೆನಿಸುವನು. ಅಯ್ಯೋ ಮೈತ್ರೇಯನೆ! ಸರ್ವಜನರಿಗೂ ಆನಂದವನ್ನುಂಟುಮಾಡುವವನಾದುದರಿಂದ ಚಂದ್ರನೆಂಬದಾಗಿ ಕರೆಯಿಸಿಕೊಳ್ಳುವ ಆ ತಾರಕಾನಾಯಕನೇ ಆತನ ಎಂಟ

ವಚಃಸುವರ್ಚಲಾತಥೈವೋಷಾ ಸುಕೇಶೀ ಚಾಪರಾ ಶಿವಾಸ್ವಾಹಾ
ದಿಶ ಸ್ತಥಾದೀಕ್ಷಾ ರೋಹಿಣೀ ಚ ಯಥಾಕ್ರಮಂ ॥ ೪ ॥ ಸೂ
ರ್ಯಾದೀನಾಂ ದ್ವಿಜಶ್ರೇಷ್ಠ ! ರುದ್ರಾದ್ಯೈರ್ಯಾಮಭಿಸ್ಸಹ । ಪ
ತ್ನ್ಯ ಸ್ಸಕಲತಾ ಮಹಾಭಾಗ ! ತದಪತ್ಯೈರಿಮೇಶ್ರಣು ॥೯॥ ಏ
ಷಾಂ ಸೂತಿ ಪ್ರಸೂತಿಭ್ಯಾ ಮಿದಮಾಪ್ಲೂರಿತಂ ಜಗತ್ ॥ ೧೦ ॥

ನಯು ಸಾನವೆಂಬದಾಗಿ ತಿಳಿ. ಇಂತು ನಿನಿಗೆ ಆತನ ಎಂಟು ಸ್ಥಾನಗ
ಳನ್ನೂ ತಿಳಿಯಪಡಿಸಿದೆನು ॥೪॥ ಇನ್ನು ಆ ಎಂಟುಮಂದಿ ರುದ್ರರ ಪತ್ನಿ
ಯರ ಹೆಸರುಗಳಂ ವಿವರಿಸುವೆನು ಕೇಳು—ಸೂರ್ಯಮಧ್ಯವರ್ತಿ ಎನಿ
ಸಿದ ರುದ್ರನಿಗೆ ಸುವರ್ಚಲಾ ದೇವಿಯು ಪತ್ನಿ ಎನಿಸುವಳು. ಜಲವರ್ತಿ
ಯೂದ ಭವನಿಗೆ ಉಷಾದೇವಿ ಎಂಬಾಕೆಯು ಸಹಧರ್ಮಚಾರಿಣಿಯು
ಭೂಮ್ಯಂತರ್ವರ್ತಿಯೂದ ಶರ್ವನಿಗೆ ಸುಕೇಶಿ ಎಂಬಾಕೆಯು ಗೃಹಿಣಿ ಎನಿ
ಸುವಳು, ವಾಯುಮಧ್ಯವರ್ತಿಯೂದ ಈಶಾನನ ಪತ್ನಿಗೆ ಶಿವಾದೇವಿ
ಎಂಬದಾಗಿ ವ್ಯವಹಾರವು ಅಗ್ನಿರೂಪಿಯೂದ ಪಶುಪತಿಗೆ ಸ್ವಾಹಾದೇ
ವಿಯೇ ಹೆಂಡತಿಯು. ಆಕಾಶರೂಪವಂ ಪಡೆದಿರುವ ಭೀಮನ ಪತ್ನಿಯ
ರೇ ಪೂರ್ವವೊದಲಾದ ದಿಕ್ಕುಗಳು. ಯಜ್ಞಾರ್ಥವಾಗಿ ದೀಕ್ಷೆಯಂ ಪಡೆದಿ
ರುವ ಯಜಮಾನರೂಪಿಯಾದ ಉಗ್ರನಿಗೆ ದೀಕ್ಷೆಯೇ ಗೃಹಿಣಿ ಎನಿಸುವ
ಳು. ಚಂದ್ರರೂಪಿಯಾದ ಮಹಾದೇವನಿಗೆ ರೋಹಿಣೀದೇವಿಯು ಪತ್ನಿ
ಯು. ॥೪॥ ಅಯ್ಯಾ ಬ್ರಾಹ್ಮಣೋತ್ತಮನೆ! ರುದ್ರನೇ ವೊದಲಾದ ಎಂ
ಟು ಹೆಸರುಗಳಂ ಪಡೆದು ಸೂರ್ಯನೇ ವೊದಲಾದ ಎಂಟು ಸ್ಥಾನಗಳಲ್ಲಿ
ನೆಲೆಸಿರುವ ಆ ರುದ್ರಾದಿ ಎಂಟು ಮಂದಿಗಳ ಪತ್ನಿಯರ ಹೆಸರನ್ನೂ ಇಂ
ತು ನಿನಿಗೆ ತಿಳಿಯಪಡಿಸಿದೆನು. ಇನ್ನುಮುಂದೆ ಅವರವರ ಪ್ರಜಾವಿವರಣ
ವಂಗೈವೆನು ಕೇಳು. ॥೯॥ (ಅಯ್ಯಾ ಮೈತ್ರೇಯನೇ!) ಇಂತು ಸೂರ್ಯಾ
ದ್ಯಂತರ್ಗತರೆನಿಸಿದ ಆ ರುದ್ರಾದಿಗಳ ಪುತ್ರಪೌತ್ರರಿಂದ ಈ ನಿಖಿಲ ಜಗ
ತ್ತೂ ಪರಿಪೂರ್ಣವಾದುದು. ॥೧೦॥ ಅವುಗಳ ಕ್ರಮವೆಂತೆಂದರೆ—ಸೂ
ರ್ಯಾನ್ತರ್ಗತನೆನಿಸಿದ ರುದ್ರನಿಗೆ ಶನೈಶ್ಚರನು ಪುತ್ರನೆನಿಸುವನು. ಜಲಾನ್ತ
ರ್ಗತನಾದ ಭವನಿಗೆ ಶುಕ್ರನೇ ಮಗನು. ಅಂಗಾರಕನು ಭೂಮ್ಯಂತರ್ಗತ
ನಾದ ಶರ್ವನ ಕುಮಾರನು ವಾಯುರೂಪಿಯಾದ ಈಶಾನನು ಮನೋಜ

ಶನೈಶ್ಚರ ಸ್ತಥಾಶುಕೋ್ರೀ ಲೋಹಿತಾಂಗೋ ಮನೋಜವಃ ॥
ಸ್ಕಂದಃ ಸ್ವರ್ಗೋ್ಽಥ ಸಂತಾನೋ ಬುಧ ಶ್ಚಾ ನುಕ್ರಮಾ ತ್ಸು
ತಾಃ ॥ ೧೧॥ ಏವಂಪ್ರಕಾರೋ ರುದ್ರೋ್ಽಸೌ ಸತೀಂ ಭಾರ್ಯಾ
ಮವಿಂದತ । ಉಪಯೇಮೇ ದುಹಿತರಂ ದಕ್ಷಸ್ಯೈವ ಪ್ರಜಾಪ
ತೇಃ ॥ ೧೨॥ ದಕ್ಷ ಕೋಪಾಚ್ಚ ತತ್ಯಾಜ ಸಾಸತೀ ಸ್ವ ಕಳೇ

ವ (ವಾಯು) ನೆಂಬ ಮಗನಂ ಪಡೆದನು. ಅಗ್ನಿರೂಪಧಾರಿಯಾದ ಪಶುಪ
ತಿಗೆ ಸ್ಕಂದನು (ಷಣ್ಮುಖನೇ) ಮಗನಾದನು. ಆಕಾಶರೂಪಿಯಾದ ಭೀ
ಮನಿಗೆ ಸ್ವರ್ಗ (ಸ್ವರ್ಗಾಭಿಮಾನಿದೇವತೆಯೇ) ಮಗನು ಯಜ್ಞಾರ್ಥವಾಗಿ
ದೀಕ್ಷಿತನೆನಿಸಿದ ಬ್ರಾಹ್ಮಣರೂಪಿಯಾದ ಉಗ್ರನಿಗೆ ಸಂತಾನವು (ಯಜ್ಞಾ
ಚರಣವಿಧಿಯು) ಪುತ್ರನೆನಿಸುವುದು. ಸೋಮ (ಚಂದ್ರ) ರೂಪಿ
ಯಾದ ಮಹಾದೇವನಿಗೆ ಬುಧನೇ ಮಗನೆನಿಸಿಕೊಳ್ಳುವನು. ಇಂತು ಶನೈ
ಶ್ಚರಾದಿ ಈ ಎಂಟು ಮಂದಿಯೂ ಸೂರ್ಯಾದಿರೂಪಗಳಂ ಪಡೆದಿರುವ ರು
ದ್ರನೇ ಮೊದಲಾದ ಆ ಎಂಟು ಮಂದಿಗೂ ಪುತ್ರರೆನಿಸುವರು. ॥೧೦॥ ಇಂ
ತೀಪರಿಯಿಂದ ಈ ಪ್ರಸ್ತುತನಾದ ರುದ್ರನು ದಕ್ಷಪ್ರಜಾಪತಿಯ ಪುತ್ರಿ
ಯಾದ ಸತೀದೇವಿಯನ್ನು ಮದುವೆಯಾದನು. ಆ ರುದ್ರನು ಸತೀ
ದೇವಿಯನ್ನು ತನ್ನ ಪತ್ನಿಯಾಗಿ ಪರಿಗ್ರಹಿಸಿದ ವಿಧಾನವು ಈರೀತಿಯಾ
ದುದು ॥೧೨॥ ಅಯ್ಯಾ ಬ್ರಾಹ್ಮಣೋತ್ತಮನೆ! ಈರೀತಿಯಿಂದ ರುದ್ರನು
ದಕ್ಷಪುತ್ರಿಯಾದ ಸತೀದೇವಿಯಂ ಮದುವೆಯಾಗಿ ಆಕೆಯೊಡನೆ ಕೆಲವು
ಕಾಲ ಸಂಸಾರ ಮಾಡಿಕೊಂಡು ಸುಖದಿಂದಿರುತ್ತಿರಲು, ದಕ್ಷನಿಗೆ ಈಶ್ವ
ರನ ವಿಷಯದಲ್ಲಿ ವೈಮನಸ್ಯ ಉಂಟಾಗಿ ಆತನು ನಿರೀಶ್ವರಯಾಗವಂ
ಮಾಡಲುದ್ಯೋಗಿಸಿದನು. ಆ ಕಾಲದೊಳ್ ಈ ಸತೀದೇವಿಯು ತನ್ನ
ತಂದೆಯಿಂದ ತಾನು ಅನಾಹೂತಳಾಗಿದ್ದರೂ ಪಿತೃವಾತ್ಸಲ್ಯದಿಂದ ತನ್ನ
ಪತಿಯಂ ನಿರ್ಬಂಧಗೊಳಿಸಿ ಆ ಯಾಗಕ್ಕೆ ತೆರಳಿ ಅಲ್ಲಿ ತನಗುಂಟಾದ
ಅಪಮಾನದಿಂದ ತನ್ನ ತಂದೆಯಾದ ದಕ್ಷನಮೇಲೆ ಕೋಪಗೊಂಡು ಯ
ಜ್ಞಾರ್ಥವಾಗಿ ವಿರಚಿತವಾಗಿದ್ದ ಅಗ್ನಿಕುಂಡದಲ್ಲಿ ಬಿದ್ದು, ಈ ದೇಹವಂ
ಪರಿತ್ಯಜಿಸಿದಳು. ಬಳಿಕ ಪರ್ವತರಾಜನೆನಿಸಿದ ಹಿಮವಂತನ ಹೆಂಡತಿ
ಯಾದ 'ಮೇನೆ' ಎಂಬಾಕೆಯಲ್ಲಿ ಪುನಃ ಜನಿಸಿದಳು. ಈ ಜನ್ಮದಲ್ಲಿ

ಬರಂ । ಹಿಮವದ್ದುಹಿತಾ ಸಾಭೂನ್ಮೇನಾಯಾಂ ದ್ವಿಜ ಸತ್ತಮ! ॥೧೩॥ ಉಪಯೇಮೇ ಪುನಶ್ಚೋರ್ವೀಂ ಮನನ್ಯಾಂ ಭಗವಾ ನ್ಹರಃ ॥೧೪॥ ದೇವೌಧಾತೃ ವಿಧಾತಾರೌ ಭೃಗೋಃ ಖ್ಯಾತಿರಸೂ ಯತ । ಶ್ರಿಯಂ ಚ ದೇವದೇವಸ್ಯ ಪತ್ನೀ ನಾರಾಯಣಸ್ಯ ಯಾ ॥೧೫॥ ಮೈತ್ರೇಯಃ ॥ ಕ್ಷೀರೋದಾ ತ್ಕ್ಷೀರಸಮುತ್ಪನ್ನಾ ಶ್ರಿಯತೇಽಮೃತಮಂಥನೇ । ಭೃಗೋಃ ಖ್ಯಾತ್ಯಾಂ ಸಮುತ್ಪನ್ನೇ ತ್ಯೇತದಾಸ ಕಥಂ ಭವಾ ॥ ೧೬ ॥ ಶ್ರೀಪರಾಶರಃ ॥

ಈಕೆಗೆ 'ಉಮೆ' ಎಂತಲೂ, 'ಅಪರ್ಣೆ' ಎಂತಲೂ ಅನೇಕ ನಾಮಗಳುಂಟಾದುವು ॥೧೩॥ ಈ ಜನ್ಮದಲ್ಲಿಯೂ ಕೂಡ ಆಕೆಯು ಈಶ್ವರನೇ ತನಗೆ ಪತಿಯಾಗಬೇಕೆಂದು ನಾನಾಪರಿಯಿಂದ ಆತನಿಗಾಗಿ ಕಷ್ಟಪಟ್ಟು ದುಶ್ಚರಗಳಾದ ನಿಯಮಗಳಿಂದ ಆತನಂ ಸಂತೋಷಗೊಳಿಸಲು ಪರಮ ದಯಾಶಾಲಿ ಏನಿಸಿದ ಆ ಹರನು ಮರಳಿ ತನ್ನನ್ನೇ ಅನನ್ಯಗತಿಕಳಾಗಿ ನಂಬಿಕೊಂಡಿರುವ ಈ 'ಉಮೆ' ಎಂಬ ಕನ್ನೆಯಂ ಮದುವೆಯಾದನು. ॥೧೪॥ ಅಯ್ಯಾ ಮೈತ್ರೇಯನೆ! ಇದುವರೆಗೂ ರುದ್ರಸೃಷ್ಟ್ಯಯಂ ಹೇಳಿದೆನು—ಇನ್ನುಮುಂದೆ ಭೃಗುವಿನಿಂದ ಖ್ಯಾತಿದೇವಿಯಲ್ಲಿ ಜನಿಸಿದ ಪ್ರಜಾವಿವರಣವಂ ಗೈವೆನು.—ಆ ಖ್ಯಾತಿ ಎಂಬಾಕೆಯು ಭೃಗುಮಹರ್ಷಿಯು ಸಾನ್ನಿಧ್ಯದಿಂದ ಸರ್ವವ್ಯಾಪಕರೆನಿಸಿದ ಧಾತೃ, ವಿಧಾತೃ ಎಂಬ ಇಬ್ಬರು ಮಕ್ಕಳಂ ಪಡೆದಳು. ಅಲ್ಲದೆ ಆದಿದೇವನೆನಿಸಿದ ಶ್ರೀನಾರಾಯಣ ಮೂರ್ತಿಯ ಪತ್ನಿ ಎನಿಸಿದ ಲಕ್ಷ್ಮಿ ಎಂಬ ಮತ್ತೊಬ್ಬ ಕನ್ನೆಯನ್ನೂ ಸಹ ಪಡೆದಳು ॥೧೫॥ ಮೈತ್ರೇಯನು ಕೇಳುತ್ತಾನೆ—ಅಯ್ಯಾ ಸರ್ವಜ್ಞನೆನಿಸಿದ ಪರಾಶರಮುನಿಯೆ! ದೇವದಾನವರು ಅಮೃತಕ್ಕೋಸ್ಕರವಾಗಿ ಕ್ಷೀರಸಮುದ್ರವಂ ಮಥನಮಾಡಿದ ಕಾಲದಲ್ಲಿ ಅಂತಹ ಕ್ಷೀರಸಮುದ್ರದಿಂದ ಲಕ್ಷ್ಮಿಯು ಉದಯಿಸಿದಳೆಂಬುದಾಗಿ ಸಕಲ ಪುರಾಣಗಳೂ ಸಾರುತ್ತಿರುವುವು. ಇಂತಿರಲು ಈ ಲಕ್ಷ್ಮಿಯು ಭೃಗುಮಹರ್ಷಿಯಿಂದ ಖ್ಯಾತಿದೇವಿಯಲ್ಲಿ ಜನಿಸಿದಳೆಂದು ಹೇಳುವುದೆಂತು? ॥೧೬॥ ಈರೀತಿಯಾಗಿ ಮೈತ್ರೇಯನು ಕೇಳಿದ ಪ್ರಶ್ನೆಗೆ ಪರಾಶರನು ಹೇಳುತ್ತಾನೆ:—

ಅಯ್ಯಾ ದ್ವಿಜೋತ್ತಮನೆನಿಸಿದ ಮೈತ್ರೇಯನೆ, ಆ ಲಕ್ಷ್ಮಿಗೆ ಉತ್ಪತ್ತಿ

ನಿತ್ಯೈ ವೈಷಾ ಜಗನ್ಮಾತಾ ವಿಷ್ಣೋ ಶ್ರೀ ರನಪಾಯಿನೀ । ಯ
ಥಾ ಸರ್ವ ಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ!॥೧೫॥
ಅರ್ಥೋ ವಿಷ್ಣು ರಿಯಂ ವಾಣೀ ನೀತಿ ರೇಷಾ ನಯೋ ಹರಿಃ ॥
ಬೋಧೋ ವಿಷ್ಣು ರಿಯಂಬುದ್ಧಿ ರ್ಧರ್ಮೋ ೨ಸೌ ಸತ್ಕ್ರಿಯಾ

ನಾಶಗಳು ಇದ್ದಲ್ಲಿ ನೀನು ಕೇಳುವುದು ಯುಕ್ತ. ಭೃಗುಮಹರ್ಷಿಯಿಂ
ದ ಖ್ಯಾತಿಯಲ್ಲಿ ಆಕೆಯು ಜನಿಸಿದವಳೆಂದು ನಾನು ಹೇಳುವುದೂ ವಿ
ರೋಧವಾದೀತು. ಸರ್ವವ್ಯಾಪಕಳೂ, ಸರ್ವಶಕ್ತಳೂ, ಸರ್ವಜ್ಞಳೂ, ಸ
ರ್ವಾತ್ಮಕಳೂ, ನಿತ್ಯಳೂ ಎನಿಸಿ ವಿಷ್ಣುಶಕ್ತಿರೂಪಗಳಾದ ಆಕೆಗೆ ಈ
ದೇಹಗಳೆಲ್ಲವೂ, ಕಾರಣಾಂತರದಿಂದ ಮತ್ಸ್ಯಾದಿರೂಪಗಳು ವಿಷ್ಣುವಿ
ಗೆ ಎಂತು ಉತ್ಪತ್ತಿ ನಾಶಗಳಂತೆ ತೋರುವುದೋ ಅಂತೆಯೇ ಈಕೆಗೂ
ಉತ್ಪತ್ತಿನಾಶಗಳು ಇದ್ದಂತೆ ತೋರುವುದು ಮಾತ್ರವೇ ಆಲ್ಲದೆ ವಾಸ್ತ
ವವಾಗಿಯೂ ಆಕೆಯು ಉತ್ಪತ್ತಿನಾಶಗಳಿಗೆ ಒಳಪಟ್ಟವಳಲ್ಲ. ಆದಕಾ
ರಣ ಆಕೆಯು ಮೊದಲು ಭೃಗುಪತ್ನಿಯಾಗಿದ್ದಳೆಂದೂ ಬಳಿಕ ದುರ್ವಾಸ
ಋಷಿಯ ಶಾಪದಿಂದ ಮರಳಿ ಕ್ಷೀರಸಮುದ್ರದಿಂದ ಜನಿಸಿದಳೆಂದೂ ಹೇ
ಳುವಿಕೆಯು ವಿರೋಧವಲ್ಲ ॥೧೬॥ (ಆಕೆಯು ನಿತ್ಯೇಶ್ವರಿ. ಎಂಬಅಂ
ಶವನ್ನು ಸ್ಫುಟಪಡಿಸಲು ಇಲ್ಲಿಂದ ಈ ಅಧ್ಯಾಯವು ಪೂರ್ತಿಯಾಗುವ ವ
ರೆಗೂ ತಕ್ಕ ದೃಷ್ಟಾಂತಗಳನ್ನು ತೋರಿಸುತ್ತಾನೆ) ಲೋಕದಲ್ಲಿ ಯಾವ
ಶಬ್ದವನ್ನು ಉಚ್ಚರಿಸಿದಾಗ್ಯೂ ಆ ಶಬ್ದದಿಂದ ತೋರುವ ಅರ್ಥವೆಲ್ಲವೂ
ಸರ್ವವ್ಯಾಪಕನೆನಿಸಿದ ಆ ವಿಷ್ಣುವೇ. ಇಂತಹ ಅರ್ಥವನ್ನು ಬೋಧಿಸು
ವ ವಾಕ್ಯ (ಮೂರ್ತೇ) ಲಕ್ಷ್ಮ್ಯಳು. ನೀತಿ (ನ್ಯಾಯಶಾಸ್ತ್ರ) ಯೇಲೋ
ಕಜನನಿಯಾದ ಆ ಲಕ್ಷ್ಮ್ಯಳು. ಆ ನೀತಿಪ್ರತಿಪಾದ್ಯಗಳಾದ ನಯಗಳು,
(ಸಾಮ, ದಾನ, ಭೇದ, ದಂಡ) ಅಥವಾ ಉಪಾಯಗಳೇ ವಿಷ್ಣುವು.

ಪದಾರ್ಥವಿಷಯಕವಾದ ಜ್ಞಾನವೇ ಬೋಧವೆನಿಸುವುದು. ಇಂತಹ
ಬೋಧಸ್ವರೂಪನು ವಿಷ್ಣುವು. ಇಂತಹ ಬೋಧೆ (ತಿಳಿವಳಿ) ಯನ್ನುಂ
ಟುಮಾಡುವ ಬುದ್ಧಿ (ನಿಶ್ಚಯಾತ್ಮಕವಾದ ಮನೋವ್ಯಾಪಾರ ಅಥವಾ
ಅಂತಃಕರಣ) ಯೇ ಲಕ್ಷ್ಮ್ಯಳು. ಯಜ್ಞಯಾಗಾದಿರೂಪವಾದ ಸತ್ಕ್ರಿಯೆ

ತ್ವಿಯಂ ॥೧೪॥ ಸ್ರಷ್ಟಾ ವಿಷ್ಣು ರಿಯಂ ಸೃಷ್ಟಿ ಶ್ರೀ ರ್ಭೂಮಿ ರ್ಭೂಧರೋ ಹರಿಃ । ಸಂತೋಷೋ ಭಗವಾ೯ ಲಕ್ಷ್ಮೀ ಸ್ತು ಷ್ಟಿ ರ್ಮೈತ್ರೇಯ ! ಶಾಶ್ವತೀ ॥ ೧೫ ॥ ಇಚ್ಛಾ ಶ್ರೀ ರ್ಭಗವಾ೯ ಕಾಮೋ ಯಜ್ಞೋ ಽಸೌ ದಕ್ಷಿಣಾತು ಸಾ । ಆಜ್ಯಾಹುತಿ ರ ಸೌ ದೇವೀ ಪುರೋಡಾಶೋ ಜನಾರ್ದನಃ ॥ ೧೦ ॥ ಪತ್ನೀ ಶಾ ಲಾ ಮುನೇ ! ಲಕ್ಷ್ಮೀಃ ಪಾಗ್ವಂಶೋ ಮಧುಸೂದನಃ । ಚಿತಿ ರ್ಲಕ್ಷ್ಮೀ ರ್ಹರಿರ್ಯೂಪ ಇಧ್ಮ ಶ್ಚ ಭಗವಾ೯ ಕುಶಃ ॥೧೧॥

ವೇ ಲಕ್ಷ್ಮಿಯು ಇಂತಹ ಸತ್ಕಾರ್ಯದಿಂದುಂಟಾಗುವ ಅದೃಷ್ಟರೂಪಫಲವೇ ಅಥವಾ ಧರ್ಮವೇ ವಿಷ್ಣುವು ॥೧೪ ॥ ಸೃಷ್ಟಿಕರ್ತೃವೇ ವಿಷ್ಣುವು. ಆತನ ಕಾರ್ಯವಾದ ಸೃಷ್ಟಿಯೇ ಲಕ್ಷ್ಮಿಯು ಭೂಮಿಯೇ ಲಕ್ಷ್ಮೀದೇವಿಯು. ಭೂಮಿಯನ್ನು ಧರಿಸಿರುವ ಪರ್ವತಗಳೇ ವಿಷ್ಣುವು. ಅಯ್ಯಾ ಮೈತ್ರೇಯನೆ ! ಯಾವ ಪ್ರಯತ್ನವೂ ಇಲ್ಲದೆಯೇ ತಾನಾಗಿ ದೊರೆತ ವಸ್ತುವಿನಿಂದಲೇ ತೃಪ್ತಿಯಂ ಪಡಿಯುವಿಕೆಯೇ ಸಂತೋಷವೆನಿಸುವುದು. ಇಂತಹ ಸಂತೋಷವೇ ವಿಷ್ಣುವು ಅದರಿಂದುಂಟಾಗುವ ಸುಖವೇ ತುಷ್ಟಿಯು. ಈ ತುಷ್ಟಿಯೇ ಆ ಶ್ರೀ ದೇವಿಯು ॥೧೫॥ ಧನ, ಕನಕವೊದಲಾದ ವಸ್ತುಗಳಲ್ಲಿ ಆಶೆಯೇ (ಇಚ್ಛೆಯೇ) ಲಕ್ಷ್ಮಿಯು. ಅಂತಹ ವಸ್ತುಗಳನ್ನು ತಾನು ಅನುಭವಿಸಬೇಕೆಂಬ ಕಾಮನೆಯೇ ಆ ವಿಷ್ಣುವು. ಯಜ್ಞವೇ ಆ ವಿಷ್ಣುಸ್ವರೂಪವು. ಅಂತಹ ಯಜ್ಞಕ್ಕೆ ಮುಖ್ಯಸಾಧನವೆನಿಸಿದ ದಕ್ಷಿಣೆಯೇ ಲಕ್ಷ್ಮಿಎನಿಸುವಳು. ಅಗ್ನಿಯಲ್ಲಿ ಹೋಮಮಾಡತಕ್ಕ ಆಜ್ಯ ನೊದಲಾದ ಆಹುತಿಯೇ ಆ ಲಕ್ಷ್ಮಿಯರೂಪವು. ಭಕ್ತರ ದುರಿತಗಳನ್ನಪಹರಿಸುವ ಆ ಜನಾರ್ದನನೇ ಪುರೋಡಾಶವು ॥೧೦॥ ಆಯ್ಯಾ ಮುನಿಶ್ರೇಷ್ಠನೆನಿಸಿದ ಮೈತ್ರೇಯನೆ , ಯಜ್ಞಶಾಲೆಯೇ ಆ ಜಗನ್ಮಾತೆಯಾದ ಲಕ್ಷ್ಮಿಯು. ಅಂತಹ ಯಾಗಶಾಲೆಗೆ ಪ್ರವೇಶವಾರ್ಗವೆನಿಸಿದ "ಪ್ರಾಗ್ವಂಶ" ವೇ ಆ ಮಹಾವಿಷ್ಣುವು. ಚಿತಿಶಬ್ದವಾಚ್ಯವಾದ ಇಷ್ಟಕಾಚಯನವೇ ಆವಯವಂಗಳಾಗಿಯು ರೂಪವು. ಪಶುವಿಶಂಸನ ಸಾಧನವೆನಿಸಿದ ಯೂಪಸ್ತಂಭವೇ ಆ ಪರಮಾತ್ಮನು. ಹೋಮಸಾಧನಗಳೆನಿ

ಸಾಮು ಸ್ವರೂಪೀ ಭಗವಾ೯ ಉದ್ಗೀತಿಃ ಕಮಲಾಲಯಾ । ಸ್ವಾ
ಹಾ ಲಕ್ಷ್ಮೀ ರ್ಜಗನ್ನಾಥೋ ವಾಸುದೇವೋ ಹುತಾಶನಃ ॥೨೩॥
ಶಂಕರೋ ಭಗವಾ೯ ವಿಷ್ಣು ರ್ಗೌರೀ ಲಕ್ಷ್ಮೀ ರ್ದ್ವಿಜೋತ್ತಮ!
ವೈತ್ರೇಯ! ಕೇಶವ ಸ್ಸೂರ್ಯ ಸ್ತತ್ಪ್ರಭಾ ಕಮಲಾಲಯಾ॥೨೪॥
ವಿಷ್ಣುಃ ಪಿತೃಗಣಃ ಪದ್ಮಾ ಸ್ವಧಾ ಶಾಶ್ವತ ಪುಷ್ಟಿದಾ ।

ಸಿದಇಧ್ಮಗಳೇ ಆ ಲಕ್ಷ್ಮಿಯು. ಅಂತಹ ಇಧ್ಮಬಂಧನ ಸಾಧನಗಳೆನಿಸಿದ ಅಥವಾ ಸರ್ವಕ್ರಿಯಾ ಸಾಧಕಗಳೆನಿಸಿದ ದರ್ಭೆಗಳೇ ಆ ಸಕಲ ನಿಯಾಮಕನಾದ ಶ್ರೀ ಮಹಾವಿಷ್ಣುವು ॥೨೧॥

ಗಾನಯುಕ್ತಗಳಾದ ಮಂತ್ರಗಳಿಗೆ ‘‘ಸಾಮ’’ ಎಂಬದಾಗಿ ಹೆಸರು, ಷಡ್ಗುಣೈಶ್ವರ್ಯ ಸಂಪನ್ನನಾದ ಆ ಪರಮಾತ್ಮನೇ ರಥಂತರಾದಿ ಸಾಮರೂಪದಿಂದಿರುವವನು ಅಂತಹ ಸಾಮಮಂತ್ರಗಳ ಗಾನವಿಶೇಷರೂಪವಾದ ಉದ್ಗೀತಿಯೇ ಲಕ್ಷ್ಮಿಯು, ಕಮಲವೇ ಆವಾಸಸ್ಥಾನವಾಗಿ ಉಳ್ಳ ಲಕ್ಷ್ಮಿಯೇ ಸ್ವಾಹಾ ದೇವಿಯು ಸಕಲ ಜಗನ್ನಿಯಾಮಕನಾದ ಆ ವಿಷ್ಣುವೇ ಯಜ್ಞಪುರುಷನು ॥೨೩॥ನಿರಂತರವೂ ಏಕಾಗ್ರಚಿತ್ತರಾಗಿ ತನ್ನನ್ನು ಧ್ಯಾನಮಾಡುವ ಭಕ್ತರಿಗೆ ಸುಖವನ್ನುಂಟು ಮಾಡುವ ಪರಮೇಶ್ವರನೇ ವಿಷ್ಣುವೆನಿಸಿಕೊಳ್ಳುವನು. ಅಯ್ಯಾ ಬ್ರಾಹ್ಮಣೋತ್ತಮನೆ; ಜಗನ್ಮಾತೆಯೆನಿಸಿ ಆ ಪರಮೇಶ್ವರನ ಚಿಚ್ಛಕ್ತಿರೂಪಿಣಿಯಾದ ಆಪಾರ್ವತಿಯೇ ಲಕ್ಷ್ಮಿಎನಿಸುವಳು ಅಯ್ಯಾ ವೈತ್ರೇಯನೆ ; ಬ್ರಹ್ಮ ಮತ್ತು ಈಶ್ವರ ಈ ಇಬ್ಬರ ಸೃಷ್ಟ್ಯಾದಿಗೂ ಕಾರಣಭೂತನಾದುದರಿಂದ ‘‘ಕೇಶವ’’ನೆಂಬದಾಗಿ ಕರೆಯಿಸಿಕೊಳ್ಳುವ ಆ ಮಹಾವಿಷ್ಣುವೇ ಸಕಲಲೋಕಕ್ಕೂ ತೇಜಸ್ಸನ್ನುಂಟುಮಾಡುವ ಸೂರ್ಯನು. ನಿರಂತರವೂ ಕಮಲದಲ್ಲಿಯೇ ವಾಸವಾಗಿರುವಕಾರಣ ‘‘ಕಮಲಾಲಯೆ’’ ಎಂಬ ಹೆಸರುಳ್ಳ ಆ ಲಕ್ಷ್ಮಿಯೇ ಅಂತಹ ಸೂರ್ಯನನ್ನು ಎಡಬಿಡದಿರುವ ಕಾಂತಿ ಅಥವಾ ಪ್ರಭೆಯು ॥೨೪॥ ವಸು, ರುದ್ರ, ಆದಿತ್ಯರೆಂಬ ಮೂರುವಿಧರಾದ ಪಿತೃದೇವತೆಗಳ ಸಮೂಹವೇ ವಿಷ್ಣುವು. ನಿರಂತರವಾದ ಪುಷ್ಟ್ಯಯನ್ನುಂಟುಮಾಡಿ ಅಂತಹ ಪಿತೃದೇವತೆಗಳನ್ನು ತೃಪ್ತಿಗೊಳಿಸುವ ಸ್ವಧಾ

ದ್ಯೌಶ್ಚೀ ಸ್ಸರ್ವಾತ್ಮಕೋ ವಿಷ್ಣೂರವಕಾಶೋಽ ತಿವಿಸ್ತರಃ ॥೨೪॥
ಶಕಾಂಕ ಶ್ರೀಧರಃ ಕಾಂತಿ ಶ್ರೀ ಸ್ತಸ್ಯೈ ವಾನಪಾಯಿನೀ ॥
ಧೃತಿರ್ಲಕ್ಷ್ಮೀ ರ್ಜಗಚ್ಚೇಷ್ಟಾ ವಾಯು ಸ್ಸರ್ವತ್ರಗೋಹರಿಃ॥೨೫॥
ಜಲಧಿ ದ್ವಿಜ ! ಗೋವಿಂದ ಸ್ತದ್ವೇಲಾ ಶ್ರೀ ರ್ಮಹಾಮತೇ ! ।
ಲಕ್ಷ್ಮೀ ಸ್ವರೂಪ ಮಿಂದ್ರಾಣೀ ದೇವೇಂದ್ರೂ ಮಧುಸೂದ
ನಃ ॥ ೨೬ ॥ ಯಮಶ್ಚಕ್ರಧರ ಸ್ಸಾಕ್ಷಾ ದ್ಧೂವೋರ್ನಾ ಕಮಲಾ

ಕಾರವೇ ಪದ್ಮವಾಸಿನಿಯಾದ ಆ ಜಗನ್ಮಾತೆಯು, ಆಕಾಶವೇ [ದ್ಯುಲೋಕವೇ] ಲಕ್ಷ್ಮಿಯ ಸ್ವರೂಪವು. ಅಲ್ಲಿರತಕ್ಕ ಅವಕಾಶವೇ ವಿಷ್ಣುವು. (ಇದರಿಂದ ಆ ಲಕ್ಷ್ಮಿಯು ದ್ಯುಲೋಕದಂತೆ ನಿರ್ಲಿಪ್ತಳೆಂಬದಾಗಿಯೂ, ಆ ವಿಷ್ಣುವು ಆಕಾಶದಂತೆ ಸರ್ವವ್ಯಾಪಕನಾಗಿಯೂ, ಶೂನ್ಯ ಸ್ವರೂಪನಾಗಿಯೂ ಇರುವನೆಂಬದಾಗಿ ಭಾವನವು ಎಂಬದಾಗಿ ಕೆಲವರು ಹೇಳುವರು) ॥೨೪॥

ನಿರಂತರವೂ ಲಕ್ಷ್ಮೀದೇವಿಗೆ ಆ ವಾಸಸ್ಥಾನನೆನಿಸಿದ ಆ ಮಹಾವಿಷ್ಣುವೇ ಮೊಲವನ್ನು ತನ್ನ ತೊಡೆಯಲ್ಲಿ ಧರಿಸಿರುವ ಚಂದ್ರನು. ಶ್ರೀದೇವಿಯೇ ಆ ಚಂದ್ರನನ್ನು ಎಡಬಿಡದೆ ನಿರಂತರವೂ ನೆರಳಿನಂತೆ ಆಶ್ರಯಿಸಿರುವ ಕಾಂತಿಯು, ಮೇಘಾದಿಗಳನ್ನು ಕೆಳಗೆ ಬೀಳದಂತೆ ಆಕಾಶದಲ್ಲಿಯೇ ಧರಿಸಿರುವ ಧೃತಿಯೇ ಲಕ್ಷ್ಮಿಯು, ನಿರಂತರವೂ ಗಮನಶೀಲನೆನಿಸಿದ ವಾಯುವೇ ಶ್ರೀ ಮಹಾವಿಷ್ಣುವೆನಿಸುವನು ॥ ೨೫ ॥ ಅಯ್ಯಾ ಪ್ರತಿಭಾಶಾಲಿಎನಿಸಿದ ವೈತ್ರೇಯನೆ, ಪಶುಪಾಲಕ ಅಥವಾ ಯಜ್ಞಪಾಲಕನಾದುದರಿಂದ "ಗೋವಿಂದ" ನೆಂಬದಾಗಿ ಕರೆಯಿಸಿಕೊಳ್ಳುವ ಆ ವಿಷ್ಣುವೇ ಸಮುದ್ರನು. ಲಕ್ಷ್ಮಿಯೇ ಆ ಸಮುದ್ರಕ್ಕೆ ಪೂರ್ವೋತ್ತರದಡಗಳು. ಆ ಲಕ್ಷ್ಮಿಯೇ ಇಂದ್ರನ ಒಡತಿಯಾದ ಶಚೀದೇವಿಯು. ಮಧುವೆಂಬ ರಾಕ್ಷಸನನ್ನು ಕೊಂದಿದವನಾದುದರಿಂದ ಮಧುಸೂದನ ನೆಂಬದಾಗಿ ಕರೆಯಿಸಿಕೊಳ್ಳುವ ಆ ವಿಷ್ಣುವೇ ದೇವತೆಗಳಿಗೆಲ್ಲಾ ಒಡೆಯನಾದ ದೇವೇಂದ್ರನು ॥ ೨೬ ॥ ಚಕ್ರಾಯುಧವನ್ನು ತನ್ನ ಕೈಯಲ್ಲಿ ಧರಿಸಿರುವ ಕಾರಣ ಚಕ್ರಪಾಣಿ ಎಂಬ ಪೆಸರುಳ್ಳ ಆ ಮಹಾನುಭಾವನ

ಲಯಾ । ಋದ್ಧಿ ಶ್ಚೈ ಶ್ಚೈಧರೋ ದೇವಃ ಸ್ವಯಮೇವ ಧನೇ
ಶ್ವರಃ ॥ ೩೭ ॥ ಗೌರೀ ಲಕ್ಷ್ಮೀರ್ಮಹಾಭಾಗ ! ವರುಣಃ ಕೇಶ
ವ ಸ್ವಯಂ।ಶ್ಚೈ ರ್ದೇವಸೇನಾ ತದ್ಭರ್ತಾ ದೇವಸೇನಾ ಪತಿರ್ಹ
ರಿಃ ॥ ೩೮॥ ಅವಷ್ಟಂಭೋ ಗದಾಪಾಣಿ ಶ್ಚಕ್ತಿ ರ್ಲಕ್ಷ್ಮೀ ರ್ದ್ವಿ
ಜೋತ್ತಮ! । ಕಾಷ್ಠಾ ಲಕ್ಷ್ಮೀ ರ್ನಿಮೇಷೋ ಽಸೌ ಮುಹೂ
ರ್ತೋ೭ಸೌ ಕಲಾತು ಸಾ ॥ ೩೯ ॥ ಜ್ಯೋತಿಷ್ಸ್ವ ಲಕ್ಷ್ಮೀಃ
ಪ್ರದೀಪೋ ಽಸೌ ಸರ್ವ ಸ್ಯರ್ವೇಶ್ವರೋಹರಿಃ । ಲತಾಭೂತಾ ಜ
ಗನ್ಮಾತಾ ಶ್ರೀರ್ವಿಷ್ಣು ರ್ದ್ರುಮ ಸಂಸ್ಥಿತಿಃ ॥ ೪೦॥ ವಿಭಾವರೀ
ಶ್ರೀ ರ್ದಿವಸೋ ದೇವ ಶ್ಚಕ್ರ ಗದಾ ಧರಃ । ವಪ್ರದೋವರೋ

ಯಮಸ್ವರೂಪದಿಂದಿರುವವನು. ಕಮಲವನವಾಸಿನಿಯಾದ ಲಕ್ಷ್ಮಿಯೇ ಆ ಯಮನ ಪತ್ನಿಯಾದ ಧೂಮೋರ್ಣಾದೇವಿಯು. ಲಕ್ಷ್ಮಿಯೇ ಕುಬೇರನ ಹೆಂಡತಿಯಾದ ಋದ್ಧಿದೇವಿಯು. ಲಕ್ಷ್ಮೀಪತಿಯಾದ ವಿಷ್ಣುವೇ ಧನಾಧಿಪನೆನಿಸಿದ ಕುಬೇರನು ॥ ೩೭ ॥ ಅಯ್ಯಾ ಮಹಾಮುನಿವರ್ಯಾ ಲಕ್ಷ್ಮಿಯೇ ವರುಣನ ಹೆಂಡತಿಯಾದ ಗೌರಿಯು. ಭಕ್ತಪಾಪಾಪಹಾರಕನಾದುದರಿಂದ 'ಹರಿ' ಎಂಬುದಾಗಿ ಕರೆಯಿಸಿಕೊಳ್ಳುವ ಆ ಪರಮಾತ್ಮನೇ ದೇವಸೇನಾನಾಯಕನಾದ ಸ್ಕಂದನು. ಮತ್ತು ಲಕ್ಷ್ಮಿಯೇ ಆ ಸ್ಕಂದನ ಒಡತಿಯಾದ ದೇವಸೇನೆ ಎನಿಸುವಳು ॥ ೩೮ ॥ ಅಯ್ಯಾ ಬ್ರಾಹ್ಮಣೋತ್ತಮನೆ ; ಗದೆಯನ್ನು ಕೈಯ್ಯಲ್ಲಿ ಧರಿಸಿರುವ ಆ ಮಹಾವಿಷ್ಣುವೇ ಪುರುಷ ಪ್ರಯತ್ನವೆನಿಸುವ ಅವಷ್ಟಂಭವು ಲಕ್ಷ್ಮಿಯೇ ಪುರುಷ ಪ್ರಯತ್ನದಲ್ಲಿರುವ ಸಾಮರ್ಥ್ಯ ಅಥವಾ ಶಕ್ತಿಯು. ಕಾಷ್ಠೆ ಎಂಬ ಕಾಲವಿಶೇಷವೇ ಲಕ್ಷ್ಮೀಸ್ವರೂಪವು. ನಿಮೇಷವೇ ಈ ಮಹಾವಿಷ್ಣು ಸ್ವರೂಪವೆನಿಸುವುದು. ಮುಹೂರ್ತರೂಪದಿಂದ ಇರುವವನೇ ಆ ಪರಮಾತ್ಮನು. ಕಲಾರೂಪದಿಂದಿರುವಳೇ ಲಕ್ಷ್ಮಿಯು. ॥ ೩೯ ॥ ದೀಪವೇ ಈ ವಿಷ್ಣುವು. ಆ ದೀಪದಲ್ಲಿನ ಪ್ರಕಾಶವೇ ಲಕ್ಷ್ಮಿಯು ವೃಕ್ಷಾದಿಗಳೇ ಆ ಪರಮಾತ್ಮನೆಂತಲೂ, ಲತಾದಿಗಳೆಲ್ಲವೂ ಆ ಲಕ್ಷ್ಮಿ ಎಂತಲೂ ತಿಳಿವ

ವಿಷ್ಣುಃ ವಧೂಃ ಪದ್ಮವನಾಲಯಾ ॥ ೫೧ ॥ ನದ ಸ್ವರೂಪೀ ಭಗ
ವಾ ಶ್ರೀರ್ನದೀರೂಪ ಸಂಸ್ಥಿತಾ । ಧ್ವಜಶ್ಚ ಪುಂಡರೀಕಾಕ್ಷಃ
ಪತಾಕಾ ಕಮಲಾಲಯಾ ॥೫೨॥ ತೃಷ್ಣಾ ಲಕ್ಷ್ಮೀ ರ್ಜಗತ್ಸಾ ಕ್ಷಿ
ಣೀ ಲೋಭೋ ನಾರಾಯಣಃ ಪರಃ ॥ ರತೀರಾಗಶ್ಚ ಧರ್ಮಜ್ಞ!
ಲಕ್ಷ್ಮೀ ಗೌರ್ವಿದ ಏವಚ ॥ ೫೩ ॥ ಕಿಂವಾತ್ರ ಬಹುನೋ
ಕ್ತೇನ ಸಂಕ್ಷೇಪೇಣೇದ ಮುಚ್ಯತೇ ॥ ೫೪ ॥ ದೇವ ತಿರ್ಯ ಙ್ಮ

ವನಾಗು. ॥ ೫೧ ॥ ಚಕ್ರ ಮತ್ತು ಗದೆಗಳನ್ನು ಧರಿಸಿರುವ ಆತನೇ ಹಗ
ಲು ಲಕ್ಷ್ಮಿಯೇ ರಾತ್ರಿಯು. ಭಕ್ತವಾಂಛಿತ ಪೂರಕನಾದ ವಿಷ್ಣು
ವೇ ಕನ್ಯಾರ್ಥಿಯಾದ ವರನು. ಪದ್ಮವನವಾಸಿನಿಯಾದ ಲಕ್ಷ್ಮಿಯೇ
ಪತಿಂವರೆಯಾದ ಕನ್ಯೆಯು (ವಧುವು) ॥೫೧॥ ನದಗಳೆಂಬ ಹೊಳೆಗಳೆ
ಲ್ಲವೂ ಆ ವಿಷ್ಣುವೇ, ನದಿಗಳೆಲ್ಲವೂ ಆ ಲಕ್ಷ್ಮೀರೂಪವು. ತಾವರೆ
ಎಸಳಿನಂತೆ ವಿಶಾಲವಾಗಿ ಕಂಗೊಳಿಸುವ ಕಂಣುಗಳುಳ್ಳ ಆ ವಿಷ್ಣುವೇ
ಧ್ವಜಪಟವು. ಕಮಲವಾಸಿನಿಯಾದ ಆ ಲಕ್ಷ್ಮೀಯೇ ಪತಾಕೆಯು॥೫೨॥
ಎಲ್ಲ ವಸ್ತುಗಳನ್ನೂ ಅಪೇಕ್ಷಿಸುವಿಕೆ ಎಂಬ ತೃಷ್ಣೆಯೇ ಲಕ್ಷ್ಮಿಯು
ಸಕಲಲೋಕನಾಯಕನಾದ ಆ ಪರಮಾತ್ಮನೇ ಎಷ್ಟು ಬಂದರೂ ತೃಪ್ತಿ
ಇಲ್ಲದಿರುವ ಅತ್ಯಾಶೆ ಅಥವಾ ಲೋಭವು ಕಾಮುವೇ ವಿಷ್ಣುವು. ಆ
ಕಾಮುನ ಪತ್ನಿಯಾದ ರತಿಯೇ ಲಕ್ಷ್ಮೀರೂಪದಿಂದಿರುವವಳು ॥ ೫೩ ॥

ಆಯ್ಯಾ ಧರ್ಮಜ್ಞನೆನಿಸಿದ ಮೈತ್ರೇಯನೆ , ವಿಶೇಷವಾತುಗ
ಳಿಂದ ಫಲವೇನು ? ಸಂಕ್ಷೇಪವಾಗಿ ಕಲವುವಾತುಗಳಿಂದ ಈ ವಿಷ್ಣು
ಮತ್ತು ತತ್ಪತ್ನಿಯಾದ ಲಕ್ಷ್ಮಿಯ ಸ್ವರೂಪವಂ ತಿಳಿಸುವೆನು ॥೫೪॥
ಈ ಲೋಕದಲ್ಲಿ ದೇವತೆಗಳು, ತಿರ್ಯಕ್ ಜಂತುಗಳು, ಮನುಷ್ಯರು, ಪ
ಶುಗಳು, ಪಕ್ಷಿಗಳು, ಮೃಗಾದಿಗಳು ಇವುಗಳಲ್ಲಿ ಪುಂವಾಚಕಗಳಾದ
ಯಾವಯಾವ ವಸ್ತುಗಳಿರುವವೋ ಅವುಗಳೆಲ್ಲವೂ ಆ ಷಡ್ಗುಣೈಶ್ವರ್ಯ
ಸಂಪನ್ನನೆನಿಸಿದ ಶ್ರೀ ವಿಷ್ಣುವಿನ ಲೀಲಾರೂಪಗಳೇ ಸರಿ, ಅಂತೆಯೇ
ಮೇಲೆಹೇಳಿದ ದೇವಾದಿಗಳಲ್ಲಿ ಸ್ತ್ರೀವಾಚಕಗಳಾದ ಯಾವಯಾವ ಪ್ರಾ
ಣಿಗಳಿರುವವೋ ಅವುಗಳೆಲ್ಲವೂ ಸಾಕ್ಷಾತ್ ಆ ಲಕ್ಷ್ಮಿಯ ರೂಪಗಳೇ.

ನುಷ್ಯೇಷು ಪನ್ನಾವಾ ಭಗವಾ೯ ಹರಿಃ । ಸ್ತೀನಾಮ್ಯಾ ಶ್ರೀಕ್ಷ್ಣ
ವಿಜ್ಞೇಯಾ ನಾನಯೋ ರ್ವಿದ್ಯತೇ ಪರಂ ॥ ೪೫ ॥
ಇತಿ ಶ್ರೀವಿಷ್ಣುಪುರಾಣೇ ಪ್ರಥಮೇಂಶೇ ಅಪ್ಪವೋಧ್ಯಾಯಃ

ಇಂತಿರಲು ಆ ಲಕ್ಷ್ಮೀನಾರಾಯಣರಿಬ್ಬರಿಗೂ ಪರಸ್ಪರ ಯಾವವಿಧವಾದ ವ್ಯತ್ಯಾಸವೂ ಇಲ್ಲವೆಂಬುದಾಗಿ ಪರಾಶರನು ಮೈತ್ರೇಯನಿಗೆ ತತ್ತ್ವೋಪದೇಶವಂ ಗೈಯ್ಯುತ್ತಿದ್ದನೆಂಬಲ್ಲಿಗೆ ಶ್ರೀವಿಷ್ಣುಪುರಾಣ ಪ್ರಥಮಾಂಶದೊಳ್ ಎಂಟನೆಯ ಅಧ್ಯಾಯಂ ಮುಗಿದುದು ॥೪ ॥

ಅಪ್ಪವಾಧ್ಯಾಯಂ ಸಮಾಪ್ತಂ.

ಶ್ರೀಃ

ಓಂ ನಮಃಪರಮಾತ್ಮನೇ

ಅಥನವಮೋಽಧ್ಯಾಯಃ

ಶ್ರೀಪರಾಶರಃ ॥ ಇದಂಚ ಶೃಣು ಮೈತ್ರೇಯ । ಯತ್ಪೃಷ್ಟೋ
ಽಹಮಿಹ ತ್ವಯಾ । ಶ್ರೀಸಂಬಂಧಂ ಮಯಾ ತ್ವೇತ ಚ್ಛ್ರುತ

ಹಿಂದಿನ ಅಧ್ಯಾಯದಲ್ಲಿ ಪರಾಶರನು ಮೈತ್ರೇಯನಂ ಕುರಿತು ಭೃಗುಮಹರ್ಷಿಯಿಂದ ಖ್ಯಾತಿದೇವಿಯಲ್ಲಿ ಸಾಕ್ಷಾನ್ನಾರಾಯಣನ ಪತ್ನಿಎನಿಸಿದ ಶ್ರೀ ದೇವಿಯು (ಲಕ್ಷ್ಮಿಯು) ಪುಟ್ಟಿದಳೆಂಬುದಾಗಿ ಹೇಳಿದುದಂ ಕೇಳಿ ಮೈತ್ರೇಯನು, "ದೇವದಾನವರು ಅಮೃತೋತ್ಪಲಬ್ಧಿಗಾಗಿ ಕ್ಷೀರಸಮುದ್ರವನ್ನು ಮಥನಮಾಡಿದ ಕಾಲದಲ್ಲಿ ಶ್ರೀ ದೇವಿಯು ಜನಿಸಿದವಳು ಇಂತಿರಲು ಆಕೆಯು ಖ್ಯಾತಿದೇವಿಯಲ್ಲಿ ಭೃಗುಮಹರ್ಷಿಯಿಂದ ಜನಿಸಿದವಳೆಂದು ಹೇಳುವ್ರದೆಂತು" ? ಎಂಬದಾಗಿ ಆಕ್ಷೇಪಿಸಿದ್ದನಷ್ಟೆ. ಆಕೆಯು ಖ್ಯಾತಿದೇವಿಯಲ್ಲಿ ಜನಿಸಿದ್ದಳು ಎಂಬ ವಿಷಯವಂ ಮೈತ್ರೇಯನಿಗೆ ತಿಳಿಯಪಡಿಸಲು ಪರಾಶರನು ಹೇಳುತ್ತಾನೆ—ಅಯ್ಯಾ ಮೈತ್ರೇಯನೆ; ಲಕ್ಷ್ಮಿಯು ಕ್ಷೀರಸಮುದ್ರದಿಂದುದಯಿಸಿದವಳು. ಖ್ಯಾತಿದೇವಿಯು

ಮಾಸೀನ್ಮರೀಚಿತಃ ॥ ೧ ॥ ದುರ್ವಾಸಾ ಕ್ಷಂಕರಸ್ಯಾಂಕ ಕ್ಷ
ಚಾರ ಪೃಥಿವೀ ಮಿಮಾಂ। ಸದದರ್ಶ ಸ್ರಜಂ ವಿದ್ಯಾಂ ಋಷಿ ರ್ವಿ
ದ್ಯಾಧರೀ ಕರೇ ॥ ೨ ॥ ಸಂತಾನ ಕಾನಾ ಮಖಿಲಂ ಯಸ್ಯಾ ಗಂ
ಧೇನ ವಾಸಿತಂ । ಅತಿಸೇವ್ಯ ಮಭೂದ್ಬ್ರಹ್ಮ ! ತದ್ವನಂ ವನ
ಚಾರಿಣಾಂ ॥೩॥ ಉನ್ಮತ್ತ ವ್ರತ ಧೃ ದ್ವಿಪ್ರ ಸ್ತಾಂ ದೃಷ್ಟ್ವಾ ಸ
ಕೋಭನ ಸ್ರಜಂ । ತಾಂ ಯಯಾಚೇ ವರಾರೋಹಾಂ ವಿದ್ಯಾ ಧ
ರ ವಧೂಂ ತತಃ ॥ ೪ ॥ ಯಾಚಿತಾ ತೇನ ತನ್ವಂಗೀ ಮಾಲಾಂ

ಲ್ಲಿ ಆಕೆಯ ಉತ್ಪತ್ತಿ ಎಂತು ? ಎಂಬದಾಗಿ ನೀನುಎಂತು ಆ ಜಗನ್ಮಾತೆ ಯಾದ ಲಕ್ಷ್ಮೀದೇವಿಯು ಜನನವಿಷಯುವಾಗಿ ಸಂದೇಹಪಟ್ಟೆಯೋ, ಅಂತೆಯೇ ನನಿಗೂ ಪೂರ್ವದಲ್ಲಿ ಸಂಶಯವಿದ್ದಿತು. ಬಳಿಕ ಈ ಸಂದೇಹ ಪರಿಹಾರಕ್ಕಾಗಿ ನಾನು ಮರೀಚಿ ಎಂಬ ಮುನಿವರನಂ ಪ್ರಶ್ನೆಮಾಡಿ ಆತನಿಂದ ತಿಳಿದುಕೊಂಡೆನು. ಈ ವಿಷಯವನ್ನೇ ನಿನಿಗೂ ನಾನೀಗ ತಿಳಿಸುವೆನು ಕೇಳು ॥೧॥ ಪೂರ್ವಕಾಲದೊಳ್ ದುರ್ವಾಸನೆಂಬ ಮಹರ್ಷಿಯು ಈಶ್ವರನಂತೆ ಮಹಾಕ್ರೋಧವುಳ್ಳವನೆನಿಸಿ, ಅತ್ಯಗ್ರನಾದಕಾರಣ ಇತರರ ಅಪರಾಧವನ್ನು ಲೇಶಮಾತ್ರವೂ ಸಹಿಸದವನಾಗಿ, ಆ ಪರಮೇಶ್ವರನ ಅಂಶದಿಂದಲೇ ತಾನು ಜನಿಸಿದವನಾದುದರಿಂದ ನಿಗ್ರಹಾನುಗ್ರಹ ಸಾಮರ್ಥ್ಯ (ಶಾಪ ಮತ್ತು ವರಕೊಡುವಿಕೆ) ದಿಂದ ಕೂಡಿದವನಾಗಿರುತ್ತಿದ್ದನು. ಇಂತಿರಲು ಈ ಮಹರ್ಷಿಯು ಒಂದುದಿನ ಈ ಭೂಮಿಯನ್ನು ಸಂಚಾರವಾಡಿ ನೋಡಿಕೊಂಡು ಬರುತ್ತಾ ಬಂದಾನೊಂದು ವನದೊಳ್ ಒಬ್ಬ ವಿದ್ಯಾಧರಿಕನ್ನೆಯು ಕೈಯ್ಯಲ್ಲಿ ಹಿಡಿದಿದ್ದ ಬಂದು ಪುಷ್ಪಮಾಲೆಯಂ ಕಂಡನು ॥೩॥ ಅಯ್ಯಾ ಬ್ರಹ್ಮಣ್ಯನೆ; ಆ ಮಾಲಿಕೆಯು ದೇವಲೋಕದಲ್ಲಿ ಇಂದ್ರನ ಉದ್ಯಾನ ವನದಲ್ಲಿರುವ ಕಲ್ಪವೃಕ್ಷಗಳ ಹೂಗಳಿಂದ ನಿರ್ಮಿತವಾಗಿದ್ದುದರಿಂದ ಬಹಳ ಸುವಾಸನೆಯಿಂದೊಡಗೂಡಿ ದೇವಲೋಕವಾಸಿಗಳಿಂದನುಭವಿಸಲು ಅರ್ಹವಾಗಿದ್ದಿತು. ಮತ್ತು ಆ ವನವೆಲ್ಲವೂ ಆ ಹೂಗಳ ಪರಿಮಳದಿಂದ ತುಂಬಿ, ಆಕಾಶದಲ್ಲಿ ಸಂಚರಿಸುವರಿಗೂ ಮತ್ತು ಆ ಅರಣ್ಯ ನಿವಾಸಿಗಳಿಗೂ ಸಹ ಬಹಳ ಇಂಪಾದ

ವಿದ್ಯಾಧರಾಂ ಗನಾ । ದದೌತಸ್ಮೈ ವಿಶಾಲಾಕ್ಷೀ ಸಾದರಂ ಪ್ರಣಿ
ಪತ್ಯ ತಂ ॥೫॥ ತಾವತಾದಾಯಾತ್ಮನೈ ವೀ ಮೂರ್ಧ್ನಿ ಸ್ರಜ ಮುನ್ಮ
ತ್ತ ರೂಪಧೃತ್ । ಕೃತ್ವಾ ಸ ವಿಪ್ರೋ ವೈತ್ರೇಯ ! ಪರಿಬಭ್ರಾ
ಮ ಮೇದಿನೀಂ ॥೬॥ ಸ ದರ್ಶ ಸಂಯಾಯಾನ್ತಂ ಉನ್ಮತ್ತೈ ರಾ
ವತೇ ಸ್ಥಿತಂ । ತ್ರೈಲೋಕ್ಯಾಧಿಪತಿಂ ದೇವಂ ಸಹದೇವೈ ಶ್ಚಚೀ
ಪತಿಂ ॥೭॥ ತಾವಾತ್ಮನಸ್ಸ ಶಿರಸ ಸ್ಸ್ರಜ ಮುನ್ಮತ್ತಷಟ್ಪದಾಂ।

ದ್ವಾಗಿಅವರ ಮನಸ್ಸನ್ನು ಸೆಳೆಯುತಿದ್ದಿತು. ॥೪॥ ಆಬಳಿಕ (ಯೋಗಿಗಳು ಬಾಲರಂತೆಯೂ, ಹುಚ್ಚರಂತೆಯೂ, ಪಿಶಾಚಗಳಂತೆಯೂ ವೈಮೇ ಲೆ ಜ್ಞಾನವಿಲ್ಲದೆ ನಿರಂತರವೂ ಪರಬ್ರಹ್ಮಾನುಸಂಧಾನದಲ್ಲಿ ಮನಸ್ಸಿಟ್ಟು ಕಾರ್ಯಾಕಾರ್ಯವಿವೇಚನೆಯಿಲ್ಲದೆ ಇರುವರು.ಎಂಬದಾಗಿ ಹೇಳಿರುವ ಪ್ರ ಕಾರಹುಚ್ಚನಂತೆ ಕಾಣಿಸುತ್ತಾ ಹುಚ್ಚ ಹಿಡಿದವರ ನಡವಳಿಕೆಗಳನ್ನೇಆ ಚರಿಸುತ್ತಿರುವ ಈ ಬ್ರಾಹ್ಮಣನು (ದೂರ್ವಾಸಮಹರ್ಷಿಯು) ಮನೋ ಹರವಾದ ಆ ಪೂಮಾಲೆಯ ನ್ನು ಕಂಡು ಆಶ್ಚರ್ಯಪಟ್ಟು 'ಎಲೈ ಉತ್ತಮ ಸ್ತ್ರೀ ಎನಿಸಿದ ವಿದ್ಯಾಧರಿಯೆ , ನಿನ್ನ ಕೈಯಲ್ಲಿರುವ ಹೂವಿನ ದಂಡೆಯಂ ನನಿಗೆ ಕೊಡುವೆಯಾ ?' ಎಂದು ದಾಗಿ ಆ ಕನ್ನೆಯಂ ಯಾಚಿಸಿದನು ॥೪॥ ಇಂ ತೀ ಪರಿಯಂದ ಆತನು ಬೇಡುವುದಂ ಕಂಡು, ಸುಕುಮಾರವಾದ ಅವ ಯವ ಸನ್ನಿವೇಶವುಳ್ಳ, ವಿಶಾಲವಾಗಿ ಕಂಗೊಳಿಸುವ ಲೋಚನ ಯುಗ್ಮ ದಿಂದೊಪ್ಪುವ, ಆ ವಿದ್ಯಾಧರಿಸ್ತ್ರೀಯು ಆತಂಗೆ ಸಾಷ್ಟಾಙ್ಗ ಪ್ರಣಾಮ ವಂಗೈದು ಅತ್ಯಾದರಯುಕ್ತಳಾಗಿ, ವಿನಯಭಕ್ತಿಗಳಿಂದ ಆಮಾಲಿಕೆ ಯಂ ಆತನಿಗೆ ಸಮರ್ಪಿಸಿದಳು. ॥೫॥ ಅಯ್ಯಾ ವೈತ್ರೇಯನೆ ; ಉ ನ್ಮತ್ತರೂಪಧಾರಿಯಾದ ಆ ಮುನಿಯು ಆ ಪೂಮಾಲೆಯಂ ಪರಿಗ್ರಹಿಸಿ ತನ್ನ ತಲೆಯಮೇಲೆ ಹಾಕಿಕೊಂಡು ಮರಳಿ ಈ ಭೂಮಿಯಲ್ಲಿ ಅಲೆದಾ ಡುತ್ತಿದ್ದನು ॥೬॥ ಇಂತು ಆತನು ಈ ಮಾಲೆಯಂ ತನ್ನ ತಲೆಯಮೇಲೆ ಧರಿಸಿ ಸಂಚರಿಸುತ್ತಿರಲು, ಮದಿಸಿದ ಐರಾವತವೆಂಬ ಆನೆಯ ಮೇಲೆ ಕುಳಿತು, ದೇವತೆಗಳ ಸಮೂಹವುಂದಾ ನೃತನಾಗಿ ಬರುತಿರುವ, ಶಚೀ ದೇವಿಗೆ ಪತಿ ಎನಿಸಿ ತ್ರಿಲೋಕಾಧಿಪನಾದ ದೇವೇಂದ್ರನಂ ಕಂಡನು॥೭॥

ಆದಾಯಾ ಮುರರಾಜಾಯ ಚಿಕ್ಷೇಪೋನ್ಮತ್ತವನ್ಮುನಿಃ ॥೪॥ ಗೃ
ಹೀತ್ವಾ ಸುರರಾಜೇನ ಸ್ವಗೈ ರಾವತ ಮೂರ್ಧನಿ । ನ್ಯಸ್ತಾ ರ
ರಾಜ ಕೈಲಾಸ ಶಿಖರೇ ಜಾನ್ನವೀ ಯಥಾ ॥೯॥ ಮದಾಂಧಕಾರಿ
ತಾ ಚಿಕ್ಷೇಪಾಸೌ ಗಂಧೋತ್ಕೃಷ್ಟೇನ ವಾರಣಃ । ಕರೇಣಾಥೇಂ
ಯ ಚಿಕ್ಷೇಪ ತಾಂ ಸ್ರಜಂ ಧರಣೀತಲೇ ॥೧೦॥ ತತ ಕ್ಷುಬ್ಧಕ್ರೋಧ
ಭಗವಾ೯ ದುರ್ವಾಸಾ ಮುನಿಸತ್ತಮಃ । ಮೈತ್ರೇಯ ! ದೇವರಾ

ಇಂತು ಬರುತ್ತಿರುವ ದೇವೇಂದ್ರನಂ ಕಂಡು ಮನನಶೀಲನೆನಿಸಿದ ಆ ದು
ರ್ವಾಸ ಮಹರ್ಷಿಯು, ಆ ಮಾಲಿಕೆಯು ಪರಿಮಳಕ್ಕಾಗಿ ಆದರಲ್ಲಿಬಂದು
ಸೇರಿ, ಅದರ ಮಕರಂದವಂ ಸವಿದು ಮದಯುಕ್ತಗಳಾಗಿ ಝೇಂಕಾ
ರವಂ ಗೈಯ್ಯುತ್ತಿರುವ ದುಂಬಿಗಳಿಂದ ಕೂಡಿ ಮನೋಹರವಾದ ಆ
ಭೂದಂಡೆಯಂ ತನ್ನ ಹಸ್ತಕದಿಂತೆಗೆದು ಅವಮಾಧಿಸನೆನಿಸಿದ ಆ ಇಂದ್ರ
ನ ಬಳಿಗೆ ಹುಚ್ಚು ಹಿಡಿದವನಂತೆ ಬಿಸುಟನು ॥೮॥ ಬಳಿಕ ದೇವೇಂ
ದ್ರನು ಆ ಮಾಲೆಯಂ ತೆಗೆದುಕೊಂಡು ತನ್ನ ವಾಹನವಾದ ಐರಾವತವೆಂಬ
ಮದ್ದಾನೆಯ ಕುಂಭಸ್ಥಲದಲ್ಲಿ ಎಸೆದನು. ಇಂತು ಇಂದ್ರನಿಂದ ಆ ಆನೆ
ಯ ಕುಂಭಸ್ಥಲದಲ್ಲಿ ಎಸೆಯಲ್ಪಟ್ಟ ಆ ಮಾಲೆಯು ಕೈಲಾಸಪರ್ವತದ
ಶಿಖರ ಭಾಗದಲ್ಲಿ ಪ್ರವಹಿಸುತಿರುವ ಗಂಗಾನದಿಯಂತೆ ಕಂಗೊಳಿಸುತಿದ್ದಿ
ತು (ಬಿಳುಪಾದ ದೇಹಕಾಂತಿಯುಳ್ಳ ಐರಾವತವು ಕೈಲಾಸಪರ್ವತದಂತೆ
ಉನ್ನತವಾಗಿದ್ದಿತೆಂತಲೂ, ಅದರ ಕುಂಭಸ್ಥಲದ ಮಾಲೆಯು ಶುಭ್ರವಾದ
ಗಂಗಾನದಿಯ ಪ್ರವಾಹವಂ ಪೋಲುತಿದ್ದಿತೆಂತಲೂ ಭಾವವು. ಕೈಲಾ
ಸವು ಬೆಳ್ಳಯ ಪರ್ವತವೆಂತಲೂ, ಗಂಗಾನದಿಯು ಇತರ ನದಿಗಳಿಂ
ತಲೂ ಬಿಳುಪಾದದ್ದೆಂತಲೂ, ಭಾವವು) ॥೯॥ ಇದಕ್ಕಿಂತಲೂ ಪೂರ್ವದ
ಲ್ಲಿಯೇ ಮದಿಸಿದ್ದ ಆ ಆನೆಯು ತನ್ನ ಕುಂಭಸ್ಥಲದಲ್ಲಿ ಇಂದ್ರನು ಬಿಸು
ಟ ಈ ಭೂಮಾಲೆಯ ಸುವಾಸನೆಯಿಂದ ಪುನಃ ಮತ್ತಿಷ್ಟುಮದಿಸಿ, ಅದಂ
ಸೆಳೆದುಕೊಂಡು ತನ್ನ ಸೊಂಡಲಿನಿಂದ ಮೂಸಿನೋಡಿ, ಪುಡಿಮಾಡಿ ನೆಲದ
ಮೇಲೆ ಎರಚಿತು ॥೧೦" ಎಲೌ ಮೈತ್ರೇಯನೆ ! ಷಡ್ಗುಣೈಶ್ವರ್ಯ ಸಂಪ
ನ್ನನೆನಿಸಿ, ಮನನಶೀಲರೆಂದ ಮುನಿಗಳೊಳ್ ಶ್ರೇಷ್ಠನೆನಿಸಿದ ಆ ದು

ಜಾನಂ ಕ್ರುದ್ಧ ಶ್ಚೈತಪು ವಾಚಹ ॥೧೧॥ ಐಶ್ವರ್ಯ ಮದ ದುಷ್ಟಾ
ತ್ಮಕ ! ಅತಿಸ್ತಬ್ಧೋಽಸಿ ವಾಸವ । । ಶ್ರೀಯೋ ಧಾಮು ಸ್ರಜಂ
ಯಸ್ತ್ವಂ ಮದ್ದತ್ತಾಂ ನಾಭಿನಂದಸಿ ॥೧೨॥ಪ್ರಸಾದ ಇತಿ ನೋ
ಕ್ತಂ ತೇ ಪ್ರಣಿಪಾತ ಪುರಸ್ಸರಂ । ಹಸ್ತೋ ತ್ಪಲ್ಲ ಕಪೋಲೇ
ನ ನಚಾಪಿ ಶಿರಸಾ ಧೃತಾ ॥೧೩॥ ಮಯಾ ದತ್ತಾ ಮಿಮಾಂ ಮಾ
ಲಾಂ ಯಸ್ಮಾನ್ನ ಬಹುಮನ್ಯಸೇ । ತ್ರೈಲೋಕ್ಯ ಶ್ರೀ ರತೋ
ಮೂಢ! ವಿನಾಶ ಮುಪಯಾಸ್ಯತಿ ॥೧೪॥ ನಾಂ ಮನ್ಯತೇಽನ್ಯೋ ಽ
ಸ್ಯದೃಶಂ ನೂನಂ ಶಕ್ರ! ಭವಾ ದ್ವಿಜೈಃ । ಅತೋಽವ ಮಾನ

ರ್ವಾಸವುಮಹರ್ಷಿಯು ಇದೆಲ್ಲವಂ ಕಂಡು ಬಹಳ ಕೋಪಗೊಂಡು ದೇ
ವತೆಗಳಿಗೆ ಒಡೆಯನಾದ ಇಂದ್ರನಂ ಕಾರಿತು, ಮುಂದೆ ಹೇಳುವ ರೀತಿ
ಯಿಂ ನುಡಿದನು ॥೧೧॥ 'ಎಲೈ ಐಶ್ವರ್ಯ ಮದಮತ್ತನಾದ ದುಷ್ಟಬು
ದ್ಧಿಯುಳ್ಳ ವಾಸವನೆ ! ಸಕಲ ಸಂಪತ್ತಿಗೂ ಕಾರಣಭೂತಳೆನಿಸಿದ ಲ
ಕ್ಷ್ಮೀದೇವಿಗೆ ಆವಾಸಭೂತವಾದ ಈ ಪ್ರೂಮಾಲೆಯಂ ನೀನು ಈಪರಿ
ಯಿಂದ ಅಲಕ್ಷ್ಯವುಮಾಡಿರುವೆ ಯಾದುದರಿಂದ ಬಹಳವಾಗಿ ಗರ್ವಿತನಾಗಿ
ರುವೆ. ನಾನು ಕೊಟ್ಟ ಈ ಪ್ರೂಮಾಲೆಯಂ ನೀನೀ ಪರಿಯಿಂದ ತಿರಸ್ಕರಿಸ
ಬಹುದೆ ? ॥೧೨॥ ಎಲೈ ಮದಾಂಧನೆ, ನಾನು ನಿನಿಗೆ ಮಾಲೆಯಂ ಕೊ
ಟ್ಟರೆ ನೀನು ಅದಂ ಸಾಷ್ಟಾಂಗ ಪ್ರಣಾಮ ಪೂರ್ವಕವಾಗಿ ಮಹಾ ಪ್ರ
ಸಾದವೆಂದು ಹೇಳಿ ಪರಿಗ್ರಹಿಸಬೇಕಾದುದು ಯುಕ್ತ. ಅಥವಾ ಆಪ್ರೂ
ಮಾಲೆಯಂ ಕಣ್ಣಿಗೆ ಒತ್ತಿಕೊಂಡು ಸಂತೋಷದಿಂದ ವಿಕಸಿತ ಮುಖಕ
ಮಲ ಯುಕ್ತನಾಗಿ ಮಸ್ತಕದೋಳ್ ಧರಿಸಲು ಯೋಗ್ಯವಾದುದು. ಇಂ
ತಿರಲು ಅದಂ ಪ್ರಸಾದವೆಂದು ಭಾವಿಸಲೂ ಇಲ್ಲ; ಶಿರದೊಳ್-ಸಂತೋ
ಷದಿಂದ ಧರಿಸಲೂ ಇಲ್ಲ ॥೧೩॥ ಎಲೈ ಕಾರ್ಯಾಕಾರ್ಯ ವಿವೇಕರಹಿ
ತನಾದ ಮೂಢನೆ ; ನಾನು ಕೊಟ್ಟ ಮಾಲೆಯಂ ನೀನೀಪರಿಯಾಗಿ ಅನಾ
ದರವಂತೋರ್ಪಡಿಸಿತಿರಸ್ಕರಿಸಿರುವೆಯಾದುದರಿಂದನಿನ್ನ ಮೂರುಲೋಕದ
ಆಧಿಪತ್ಯವೂ, ನಿನ್ನ ಸಂಪತ್ತೂ ಕೂಡ ನಾಶಹೊಂದುವುದು. ॥೧೪॥ ಎಲೌ
ದುರಾತ್ಮನಾದ ಇಂದ್ರನೇ ; ಸಾಕ್ಷಾತ್ ಶ್ರೀ ಪರಶಿವ ಮೂರ್ತಿಯಾದ

ಮಸ್ಮಾಸು ಮಾನಿನಾ ಭವತಾ ಕೃತಂ ॥೧೫॥ ಮದ್ದತ್ತಾ ಭವತಾ
ಯಸ್ಮಾತ್ ಕ್ಷಿಪ್ತಾ ಮಾಲಾ ಮಹೀತಲೇ । ತಸ್ಮಾತ್ ಪ್ರಣಷ್ಟ
ಲಕ್ಷ್ಮೀಕಂ ತ್ರೈಲೋಕ್ಯಂ ತೇ ಭವಿಷ್ಯತಿ ॥೧೬॥ ಯಸ್ಯ ಸಂ
ಜಾತ ಕೋಪಸ್ಯ ಭಯ ಮೇತಿ ಚರಾಚರಂ ।ತಂ ತ್ವಂ ಮಾ ಮತಿ
ಗರ್ವೇಣ ದೇವರಾಜಾ೭ವ ಮನ್ಯಸೇ ॥೧೭॥ ಶ್ರೀಪರಾಶರಃ ॥ ಮ
ಹೇಂದ್ರೋ ವಾರಣ ಸ್ಕಂಧಾ ದವತೀರ್ಯ ತ್ವರಾನ್ವಿತಃ । ಪ್ರಸಾದ

ಶಂಕರನ ಅಂಶಾವತಾರ ಭೂತನೆನಿಸಿ ತಪೋನಿಧಿಯಾದ ನನ್ನಂ ನೀನು ಸಾಮಾನ್ಯರಾದ ಬ್ರಾಹ್ಮಣರಿಗೆ ಸಮಾನನೆಂದು ತಿಳಿದಿರುವಿ. ಆದುದರಿಂ ಲೇ ನೀನೀ ಪರಿ ದುರಹಂಕಾರಯುಕ್ತನಾಗಿ ನಮಿಗೆ ಅವಮಾನವಂ ಮಾಡಿದನಾನಾದೆ. ॥೧೫॥ ನಾನು ಕೊಟ್ಟ ಪೂಮಾಲೆಯಂ ಅಲಕ್ಷ್ಯದಿಂದ ನೆಲದಮೇಲೆ ಎಸೆದುದರಿಂದ ನಿನ್ನ ಅಧಿಪತ್ಯಕ್ಕೆ ಒಳಪಟ್ಟಿರುವ ಈ ಮೂರುಲೋಕಗಳ ಸಂಪತ್ತೂ ನಾಶವಾಗುವುದಲ್ಲದೆ ಈ ಮೂರುಲೋಕಗಳಲ್ಲಿ ವಾಸಿಸುವವರೆಲ್ಲರೂ ಕೇವಲ ದಾರಿದ್ರ್ಯಭಿ ಭೂತರಾಗಲಿ, ಎಂಬದಾಗಿ ಎರಡನೆಯ ಬಾರಿ ಮತ್ತೊಂದು ಶಾಪವಾ ಕೊಟ್ಟನು. (ಈ ಶ್ಲೋಕದಲ್ಲಿ ಇಂದ್ರನೇ ಮಾಲಿಕೆಯನ್ನು ಬಿಸುಟಂತಾಗಿ ಹೇಳಲ್ಪಟ್ಟಿದೆ. ಇಂದ್ರನೇ ಸಾಕ್ಷಾತ್ತಾಗಿ ಬಿಸಾಡದಿದ್ದರೂ, ಇಂದ್ರನು ಆ ಮಾಲಿಕೆಯಂ ಸರಿಯಾಗಿ ಗೌರವದಿಂದ ಪರಿಗ್ರಹಿಸದೆ ಉಪೇಕ್ಷೆಯಿಂದ ಆನೆಯ ಕುಂಭಸ್ಥಲದಲ್ಲಿ ಹಾಕಿದನು. ಮದೋನ್ಮತ್ತವಾದ ಆ ಆನೆಯು ಅದಂ ನೆಲಕ್ಕೆತಳ್ಳಿತು. ಇದಕ್ಕೆ ಇಂದ್ರನ ಉಪೇಕ್ಷೆಯೇ ಕಾರಣವಾದುದರಿಂದ ಈ ಪರಿಯಾಗಿ ಹೇಳಲ್ಪಟ್ಟಿದೆ. ಎಂದು ಭಾವವು) ॥೧೬॥ ಎಲೌ ತ್ರಿದಶಾಧಿಪನೆನಿಸಿದ ಇಂದ್ರನೆ; ಯಾವನಿಗೆ ಸಾಮಾನ್ಯವಾಗಿ ಕೋಪವುಂಟಾದೊಡೆ, ಮೂಲೋಕದಲ್ಲಿನ ಚರಾಚರಗಳೆಲ್ಲವೂ ಭಯದಿಂದ ಗಡಗಡನೆ ನಡುಗುವುವೋ, ಅಂತಹ ಸುಲಭ ಕೋಪನಾದ ನನ್ನಂ ದುರಹಂಕಾರದಿಂದ ನೀನೀಪರಿ ಅವಮಾನಗೊಳಿಸುವೆಯಾ? ॥೧೭॥ ಪರಾಶರನು ಹೇಳುತ್ತಾನೆ— ಇಂತು ದುರ್ವಾಸಮುನಿಯು ನುಡಿದುದಂಕೇಳಿ ಇಂದ್ರನು ಆ ಐರಾವತದಿಂದಿಳಿದು ಬಹಳ ತ್ವರೆಯಿಂದ ಬಳಿಸಾರ್ದು, ಆತನ ಅಡಿದಾವರೆಗಳಿಗೆರಗಿ

ಯಾವಾಸ ತದಾ ದುರ್ವಾಸಸ ಮಕಲ್ಮಷಂ ॥೧೪॥ ಪ್ರಸಾದ್ಯವಾ
ನಸ್ಯ ತದಾ ಪ್ರಣಿಪಾತಪುರಸ್ಸರಂ । ಪ್ರತ್ಯುವಾಚ ಸಹಸ್ರಾಕ್ಷಂ
ದುರ್ವಾಸಾ ಮುನಿಸತ್ತಮಃ॥೧೫॥ ನಾಹಂ ಕೃಪಾಳು ಹೃದಯೋ
ನಚವಾಂ ಭಜತೇ ಹ್ಯೇವಾ। ಅನ್ಯೇ ತೇ ವಮನಯ ಶಕ್ರ। ದುರ್ವಾ
ಸಸ ಮವೇಹಿ ಮಾಂ ॥ ೧೦ ॥ ಗೌತಮಾದಿಭಿ ರನ್ಯೈ ಸ್ತ್ವಂ

ಓ ತಪೋನಿಧಿಯೇ ! ನನ್ನ ಅಪರಾಧವಂ ಮನ್ನಿಸಿ ಸರ್ವಥಾ ನನ್ನನ್ನು 'ಕಾಪಾಡಬೇಕು. ನನ್ನಲ್ಲಿ ಯಾವ ಅಪರಾಧವೂ ಇಲ್ಲದೆ ತಾವು ನನಗೆ ಶಾ
ಪವಂ ಕೊಡಲಿಲ್ಲ. ನಾನುಅಪರಾಧಿ. ತಾವು ನನ್ನಮೇಲೆ ದಯೆಯೆಂತೋರಿ
ಸಲಹಬೇಕು'॥೧೬॥ (ಅಯ್ಯಾ ಮೈತ್ರೇಯನೆ) ಇಂತು ಇಂದ್ರನು ನಾನಾ
ಪ್ರಕಾರದಿಂದ ಆತನ ಪಾದಗಳಿಗೆರಗಿ ಬೇಡುತಿರುವುದಂಕಂಡು ಸುಲಭಕೋ
ಪನೆನಿಸಿದ ಆ ಮುನಿಯು, ಸಾವಿರ ಕಣ್ಣುಳ್ಳವನಾದುದರಿಂದ 'ಸಹಸ್ರಾಕ್ಷ,
ನೆಂಬದಾಗಿ ಕರೆಯಿಸಿಕೊಳ್ಳುವ ಆ ಇಂದ್ರನಂ ಕುರಿತು ಇಂತೆಂದನು॥೧೭
ಎಲೌ ಇಂದ್ರನೆ ! ನಾನು ದಯಾರ್ದ್ರ ಹೃದಯನಲ್ಲ ನನಿಗೂ ತಾಳ್ಮೆ
ಗೂ ಬಹಳ ದೂರವಿರುವುದು. (ನನಿಗೆ ತಾಳ್ಮೆ ಎಂಬುದೇ ಇಲ್ಲವು) ಆ
ಪರಿ ಬಂದಾವರ್ತಿ ಕೋಪಬಂದ ಕಾಲದಲ್ಲಿ ಶಾಪವನ್ನಿತ್ತು,ಮರಳಿ ಅದಕ್ಕೆ
ಪ್ರತೀಕಾರ ಮಾಡುವುದಾಗಲಿ, ಆಥವಾ ಕೃಪೆಮಾಡುವುದಾಗಲಿ, ನನ್ನಸ್ವ
ಭಾವವಲ್ಲವು ಅಂತಹ ಋಷಿಗಳು ಬೇರೆ. ನನ್ನಂ ಸ್ವಲ್ಪವೂ ಸಹನೆಯಿ
ಲ್ಲದ ಮತ್ತು ಸರ್ವದಾ ಕೋಪಶೀಲನೆನಿಸಿದ ದುರ್ವಾಸಮುನಿ ಎಂ ದಾ
ಗಿ ತಿಳಿ॥೧೦॥(ಎಲೌ ಗರ್ವಿಷ್ಠನೆ)ಗೌತಮನೇ ಮೊದಲಾದ ಕೆಲವುಮಂದಿ
ಋಷಿಗಳು ನಿನ್ನಿಂದಸತ್ಕೃತರಾಗಿದ್ದರೂ, ನೀನು ತ್ರಿಲೋಕಾಧಿಪತಿ ಯಾ
ದುದರಿಂದ, ನೀನು ಅವರಿಗ ಎಂತಹ ಅಪರಾಧವಂ ಮಾಡಿದರೂ, ನಿನ್ನಲ್ಲಿ
ದಾಕ್ಷಿಣ್ಯವನ್ನಿಟ್ಟು ನಿನ್ನ ಅನುಗ್ರಹವನ್ನುಬಯಸುವವರಾಗಿ, ನಿನ್ನಅಪರಾ
ಧವಂ ಮುಂದುಮಾಡದಿರುವ ಕಾರಣ ನೀನೀಪರಿ ವ್ಯರ್ಥವಾಗಿ ಗರ್ವಿತನಾ
ಗಿರುವಿ, ನಾನು ಅಂತಹವನಲ್ಲ. ನಿನ್ನ ಕೋಪಪ್ರಸಾದಗಳು ನನ್ನಂ ಏನೂ
ಮಾಡಲಾರವು. ಕೋಪ ಮತ್ತು ತಪಸ್ಸುಗಳೇ ಪ್ರಧಾನಬಲವಾಗಿರುವ,
ನನ್ನನ್ನು ದುರ್ವಾಸಮಹರ್ಷಿ ಎಂಬದಾಗಿ ತಿಳಿ. ನಾನು ಅವರಂತೆ ನಿನ್ನ

ಗರ್ವ ಮಾರೋಪಿತೋ ಮುಧಾ । ಅಹ್ಲಾಂತಿ ಸಾರ ಸರ್ವಸ್ವಂ
ದುರ್ವಾಸಸ ಮವೇಹಿಮಾಂ ॥೨೧॥ ವಸಿಷ್ಠಾದ್ಯೈ ರ್ದಯಾಸಾ
ರೈ ಸ್ತೋತ್ರಂ ಕುರ್ವದ್ಭಿ ರುಚ್ಚಕೈಃ। ಗರ್ವಂ ಗತೋಸಿ ಯೇನೈ
ವಂ ಮಾಮುಪೈದ್ಯಾವ ಮನ್ಯಸೇ ॥೨೨॥ ಜ್ವಲಜ್ಜಟಾ ಕಲಾಪಸ್ಯ
ಭ್ರುಕುಟೀಕುಟಿಲಂ ಮುಖಂ । ನಿರೀಕ್ಷ್ಯೈಕಾಸ್ತ್ರೀ ಭುವನೇ ಮಮು
ಯೋ ನಗತೋಭಯಂ ॥೨೩॥ ನಾಹಂ ಕ್ಷಮಿಷ್ಯೇ ಬಹುನಾ

ಅಪರಾಧವಂ ಸಹಿಸಿಕೊಂಡು ನಿನ್ನ ಅನುಗ್ರಹಕ್ಕೆ ಪಾತ್ರನಾಗುವವನಲ್ಲ. (ಆ ಗೌತಮನಾದರೆ ಅತ್ಯಂತ ರೂಪವತಿಯೂ, ಲಾವಣ್ಯವತಿಯೂ, ಆದ ಅವನ ಪತ್ನಿಯಂ ನೀನು ಕಾಮಿಸಿದವನಾದರೂ ಕೋಪಬಂದ ಕಾಲದಲ್ಲಿ 'ನೀನು ಯಾವ ವಿಷಯಾಸಕ್ತಿಯಿಂದ ಲುಬ್ಧನಾಗಿ ಒಂದೆಯೋ ನಿನ್ನ ಸರ್ವಾಂಗವೂ ತನ್ಮಯವಾಗಲಿ, ಎಂಬದಾಗಿ ಶಪಿಸಿ ಮರಳಿ ನಿನ್ನ ಪ್ರಾರ್ಥನಾನುಸಾರ 'ಅವುಗಳೆಲ್ಲವೂ ಕಂಣುಗಳಂತೆ ತೋರಲಿ, ಎಂಬದಾಗಿ ನಿನಗೆ ಅನುಗ್ರಹಮಾಡಿದನು. ನಾನು ಅಂತಹವನಲ್ಲ. ನಿನ್ನಿಂದ ನನಿಗೆಆಗಬೇಕಾಗಿರುವ ಕಾರ್ಯವೇನೂ ಇರುವುದಿಲ್ಲ. ಆ ಗೌತಮಾದಿಗಳು ನಿನ್ನಂ ಈರೀತಿ ಗರ್ವಿಷ್ಠನನ್ನಾಗಿ ಮಾಡಿರುವರು) ॥೨೧॥ ವಸಿಷ್ಠನೇ ಮೊದಲಾದ ಸಪ್ತರ್ಷಿಗಳಾದರೋ ಕೇವಲ ದಯಾಶಾಲಿಗಳಾದುದರಿಂದ ನಿನ್ನಿಷ್ಟಾನುಸಾರ ನಡೆದುಕೊಳ್ಳುತ್ತಲೂ, ಮತ್ತು ನೀನು ಅವರಿಗಿಂತಲೂ ಉನ್ನತ ಪೀಠದಲ್ಲಿ ಕುಳಿತಿದ್ದರೂ ತವಗೆ ಅಪಮಾನವೆಂದು ಭಾವಿಸದೆ, ನಿಂತು ತಲೆ ಎತ್ತಿಕೊಂಡು ಸ್ತುತಿಪಾಠಕರಂತೆ ನಿರಂತರವೂ ನಿನ್ನಂ ಹೊಗಳುತ್ತಿರುವರು. ಆದುದರಿಂದಲೇ ನೀನೀಪರಿ ಗರ್ವಿತನಾಗಿ ನನ್ನನ್ನೂ ಅವರಂತೆ ಭಾವಿಸಿ ಈ ಪ್ರಕಾರ ಅವಮಾನಗೊಳಿಸಿದೆ॥೨೨॥ ಉರಿಯುವ ಅಗ್ನಿಯಂತೆ ಹೊಂಬಣ್ಣವಾಗಿ ಪ್ರಕಾಶಿಸುವ ಜಡೆಗಳಿಂದ ಕೂಡಿದ, ಅತಿ ಕೋಪದಿಂದ ವಕ್ರವಾದ ಕಂಣು ಹುಬ್ಬುಗಳಿರುವ, ಕ್ರೂರವಾದ ನನ್ನ ವೋರೆಯಂ ಕಂಡು ಈ ಮೂರುಲೋಕದೊಳ್ ಯಾರು ತಾನೆ ನನಿಗೆ ಹೆದರಲಾರರು ? ಇಂತಿದ್ದರೂ ನೀನು ನನಿಗೆ ಲೇಶಮಾತ್ರವೂ ಹೆದರದೆ ಅಧಿಕಾರ ಮದಮತ್ತನಾಗಿ ನನ್ನಂ ಈಪರಿ ಅವಮಾನಗೊಳಿರುವೆ ॥ ೨೩ ॥ ಎಲ್ಲೆ

ಕಿಮುಕ್ತೇನ ? ಶತಕ್ರತೋ॥ ವಿಡಂಬನಾ ಮಿಮಾಂ ಭೂಯಃ ಕ
ರೋಷ್ಯ ನುನಯಾತ್ಮಿಕಾಂ॥೨೪॥ಶ್ರೀಪರಾಶರಃ--ಇತ್ಯುಕ್ತಾ ವ
ಪ್ರಯಯೌ ವಿಪ್ರೋ ದೇವರಾಜೋಪಿತಂ ಪುನಃ । ಆರುಹ್ಯೈರಾ
ವತಂ ನಾಗಂ ಪ್ರಯಯೌ ವಮರಾವತೀಂ ॥೨೫॥ ತತಃ ಪ್ರಭೃತಿ
ನಿಶ್ಶ್ರೀಕಂ ಸಶಕ್ರಂ ಭುವನತ್ರಯಂ । ವೈಮೈತ್ರೇಯಾಸೀದ ಪಧ್ವ
ಸ್ತಂ ಸಂಕ್ಷೀಣೌಷಧಿ ವೀರುಧಂ॥೨೬॥ನ ಯಜ್ಞಾ ಸ್ಯಂ ಪ್ರವರ್ತಂ
ತೇ ನತಪಶ್ಯಂತಿ ತಾಪಸಾಃ । ನಚ ದಾನಾದಿ ಧರ್ಮೇಷು ಮನ

ಇಂದ್ರನೆ , ನೀನು ನೂರು ಅಶ್ವಮೇಧ ಯಾಗಗಳಂ ಮಾಡಿ ಮಹತ್ತರವಾ
ದ ಈ ಪದವಿಯಂ ಪಡೆದುದು ನನ್ನಂತಹವರಂ ಈರೀತಿ ಅವಮಾನ ಗೊ
ಳಿಸುವುದಕ್ಕಲ್ಲವೆ ? ನಾನು ಎಂದಿಗೂ ನಿನ್ನ ಅಪರಾಧವಂ ಮನ್ನಿಸುವನಲ್ಲ. ಬಹಳ ಮಾತಾಡಿ ಫಲವೇನು? ನನಿಗೆ ವೊದಲು ಅಪಮಾನಮಾಡಿ ಬಳಿಕ ನನ್ನಿಂದೇನಾದೀತೆಂಬದಾಗಿ ಅಲಕ್ಷ್ಯದಿಂದ ನನ್ನನ್ನು ಅನುಗ್ರಹೋನ್ಮುಖನನ್ನಾಗಿ ಮಾಡುವ ನೆಪದಿಂದ ಈ ಪರಿ ಪರಿಹಾಸಮಾಡುತಿರುವೆ. ಆದುದರಿಂದ ನಾನು ನಿನ್ನಲ್ಲಿ ಲೇಶಮಾತ್ರವೂ ಕೃಪೆಮಾಡುವವನಲ್ಲ. ॥೨೪॥ ಪರಾಶರನು ಹೇಳುತ್ತಾನೆ ...ಈರೀತಿ ಹೇಳುತ್ತಾ ದುರ್ವಾಸಮುನಿಯು ಇಂದ್ರನ ವಿಷಯದಲ್ಲಿ ಅನುಗ್ರಹ ಮಾಡದೆಯೇ ಕೋಪದಿಂದಲೇ ಹೊರಟುಹೋದನು. ಬಳಿಕ ದೇವತೆಗಳಿಗೆ ಒಡೆಯನಾದ ಇಂದ್ರನೂ ಕೂಡ, ಮುಂಚಿನಂತೆಯೇ ತನ್ನ ವಾಹನವೆನಿಸಿದ ಐರಾವತವೆಂಬ ಆನೆಯಮೇಲೆ ಕುಳಿತು ತನ್ನ ರಾಜಧಾನಿಯಾದ ಅಮರಾವತಿಯಂ ಸೇರಿದನು ॥೨೫॥ ಎಲೌ ಮೈತ್ರೇಯನೆ , ಅದು ವೊದಲ್ಗೊಂಡು ಮೂರು ಲೋಕಗಳ ಸಂಪತ್ತೂ ದಿನೇದಿನೇ ಕ್ಷೀಣವಾಗುತ್ತಾ ಬಂದಿತು. ಓಷಧಿಗಳು, ಲತೆಗಳು ವೊದಲಾದ ಯಾವ ಭೋಗಸಾಧನ ವಸ್ತುಗಳೂ ಲೋಕದಲ್ಲಿ ಬೆಳೆಯುವುದಿಲ್ಲ. ಅಂತೆಯೇ ಇಂದ್ರನೂ ಕೂಡ ತನ್ನ ಸಂಪತ್ತನ್ನು ಹೋಗಲಾಡಿಸಿಕೊಂಡು ದಿನೇದಿನೇ ನಿಸ್ತೇಜಸ್ಕನಾಗಿ, ಉತ್ಸಾಹ, ಪೌರುಷ, ಬಲರಹಿತನಾದನು ॥೨೬॥ ಇಂತು ಭೋಗಸಾಧನಗಳಾದ ಲತಾದಿಗಳು ಬೆಳೆಯದಿರಲು ಆ ದೇವತೆಗಳಿಗೆ ಆಹಾರವೇ ಇಲ್ಲದಂತಾಯಿತು ಲೋಕದಲ್ಲಿ

ಕ್ಷಕ್ಕೇ ತದಾ ಜನಃ॥೨೩॥ ನಿಸ್ಸತ್ವಾ ಸ್ಸ ಕಲಾ ಲೋಕಾ ಲೋ
ಭಾದ್ಯುಪಹ ತೇಂದ್ರಿಯಾಃ । ಸ್ವಲ್ಪೇಽಪಿಹಿ ಬಭೂವುಸ್ತೇ ಸಾಭಿ
ಲಾಷಾ ದ್ವಿಜೋತ್ತವ.! ॥೨೪॥ ಯತಸ್ಸತ್ವಂ ತತೋ ಲಕ್ಷ್ಮೀ ಸ್ಸ
ತ್ವಂ ಭೂತ್ಯನು ಸಾರಿ ಚ। ನಿಶ್ಚೇಷ್ಟಕಾಣಾಂ ಕುತ ಸ್ಸತ್ವಂ ? ವಿ
ನಾತೇನ ಗುಣಾಃ ಕುತಃ ? ॥೨೯॥ ಬಲಶೌರ್ಯಾದ್ಯ ಭಾವಾಶ್ಚ

ಯಾರಾದರೂ ಯಜ್ಞ ಯಾಗಾದಿಗಳಂ ಮಾಡಿದಲ್ಲಿ ಆಯಜ್ಞಾದಿಗಳಲ್ಲಿ ತಮ್ಮ ತಮ್ಮ ಭಾಗಕ್ಕೆ ಬರುವ, ಚರು, ಪುರೋಡಾಶ ಮೊದಲಾದುದರಿಂದಾದರೂ ಜೀವಿಸೋಣವೆಂದರೆ ಆ ಯಜ್ಞ ಯಾಗಾದಿಗಳ ಪ್ರಸಕ್ತಿಯೇ ಇಲ್ಲ. ಒಳ್ಳೆಯದು ದೇವತೆಗಳಿಗೆ ಇಂತಹ ದುರವಸ್ಥೆಯು ಒದಗಿದರೂ ಚಿಂತೆಯಿಲ್ಲ. ಜನಗಳಾದರೂ ತಂತಮ್ಮ ವರ್ಣಾಶ್ರಮಧರ್ಮಗಳಲ್ಲಿ ನಿರತರಾಗಿದಾರೆಯೆ ? ಎಂದು ಯೋಚಿಸಿದಲ್ಲಿ ಯಾವ ತಪಸ್ವಿಯೂ ತಪಸ್ಸನ್ನೇ ಮಾಡಲೊಲ್ಲನು ಜನರೆಲ್ಲರೂ ದಾನ, ಧರ್ಮ, ಪರೋಪಕಾರಗಳನ್ನೇ ಮರೆತರು ॥೨೩॥ ಎಲ್ಲಿ ನೋಡಿದರೂ ಸಂತೋಷವೇ ಇಲ್ಲ. ಜನರೆಲ್ಲರೂ ಧೈರ್ಯಗುಂದಿ ಲೋಭಾದಿಗಳಲ್ಲಿ ನಿರತರಾದರು. ಅಯ್ಯಾ ಮೈತ್ರೇಯನೆ ! ಆ ಕಾಲದಲ್ಲಿ ಜನಗಳಿಗುಂಟಾದ ದುರವಸ್ಥೆಯಂ ನಾನೆಷ್ಟು ವರ್ಣಿಸಲಿ !ಅವರು ಸರಿಯಾಗಿ ಬಾಳುತ್ತಿದ್ದ ಕಾಲದಲ್ಲಿ ಅತ್ಯಲ್ಪವೆಂದು ಭಾವಿಸಿದ್ದ ವಸ್ತುವೂ ಕೂಡ ಅವರಿಗೆ ದೊಡ್ಡ ಸಿಧಿಯಾಗಿ ಏರ್ಪಟ್ಟಿತು ॥೨೪ ಸಂತೋಷ ಧೈರ್ಯಗಳಿರುವಡೆ ಲಕ್ಷ್ಮಿಯು ತಾನಾಗಿಯೇ ಬಂದು ಸೇರುವಳು ಸಂಪತ್ತಿರುವಲ್ಲಿ ಅಂತೆಯೇ ಸಂತೋಷ ಮತ್ತು ಧೈರ್ಯಗಳೂ ಬದಗುವುವು ಇಂತು ಸಂಪತ್ತು ಸಂತೋಷಗಳಿಗೆ ಅನ್ಯೋನ್ಯಾಶ್ರಯವಿರುವಲ್ಲಿ (ಬಂದನೊಂದು ಅಗಲದಿದ್ದಲ್ಲಿ) ಈ ಪರಿ ಶಾಪಗ್ರಸ್ತನಾದ ಆ ಇಂದ್ರನಿಗೇ ಆಗಲಿ, ಆಥವ ಅವನ ಆಧಿಪತ್ಯಕ್ಕೆ ಒಳಪಟ್ಟಿರುವ ಈ ಜನರಿಗೇ ಆಗಲಿ ಸಂತೋಷ ಧೈರ್ಯಗಳೆಲ್ಲಿಯವು ? ಅವುಗಳಿಲ್ಲದೊಡೆ ಸತ್ಯ, ಶೌಚ, ಶೀಲ ಧರ್ಮ, ಪರೋಪಕಾರ ಮೊದಲಾದ ಸದ್ಗುಣಗಳು ತಾನೆ ಎಲ್ಲಿಯವು ? (ಅದರೆ ಅವರಿಗೆ ಸಂತೋಷವಿಲ್ಲದಿರುವಿಕೆಯಿಂದ ಧೈರ್ಯಗುಂದಿ, ತನ್ಮೂಲಕ ನಾನಾ ಬಗೆ ಕ್ಲಷ್ಟಗಳಿಗೊಳಗಾದರೆಂಬುದಾಗಿ

ಪುರುಷಾಣಾಂ ಗುಣೈರ್ವಿನಾಲಂಘನೀಯ ಸ್ವಮುತ್ತಸ್ಯೆ ಬಲಕಾರ್ಯ
ವಿವರ್ಜಿತಃ ॥೫೦॥ ಭವತ್ಯೆ ಪಧ್ವಸ್ತ ಮತಿ ರ್ಲಂಭಿತಃ ಪ್ರಥಿತಃ ಪು
ರ್ಮಾ । ವಿವ ಮತ್ಯಂತನಿಶ್ಚೀಕೇ ತ್ರೈಲೋಕ್ಯೇ ಸತ್ವವರ್ಜಿ
ತೇ ॥೫೧॥ ದೇವಾ೯ಪ್ರತಿಬಲೋದ್ಯೋಗಂ ಚಕ್ರು ರ್ದೈತೇಯ

ಭಾವವು ॥೪೯॥(ಅಯ್ಯಾ ಮೈತ್ರೇಯನೆ) ಮನುಷ್ಯನು ಐಶ್ವರ್ಯಹೀನನಾದೊಡೆ ಅನೇಕ ಕಷ್ಟಗಳಿಗೆ ಗುರಿಯಾಗುವನು. ಅದೆಂತೆಂದರೆ—ಮನುಷ್ಯನಿಗೆ ಸತ್ಯ, ಶೌಚಾದಿಗುಣಗಳಿಲ್ಲದಿದ್ದಲ್ಲಿ ಬಲವೇ ಆಗಲಿ, ಪರಾಕ್ರಮವೇ ಆಗಲಿ ಎಲ್ಲಿಯದು ? ಅಂತಹ ಪರಾಕ್ರಮ ಹೀನನಾದವನಂ ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಜನರೆಲ್ಲರೂ ಜರಿವರು॥೫೦॥ (ಎಲೈ ಶಿಷ್ಯನಾದ ಮೈತ್ರೇಯನೆ;) ಪುರುಷನು ಎಂತಹ ಐಶ್ವರ್ಯಶಾಲಿಯಾಗಿದ್ದರೂ ಸರ್ವೋತ್ತಮಗಳಾದ ಪ್ರಭುತ್ವ, ಸಾಹಸ, ಪರಾಕ್ರಮ, ಸಾಮರ್ಥ್ಯಗಳಿಂದ ಕೂಡಿದವನಾದರೂ ಯುಕ್ತಾಯುಕ್ತ ವಿವೇಚನ ಶಾಲಿಯಾಗಿದ್ದರೂ ಕಷ್ಟಕ್ಕೆ (ಆಪತ್ತಿಗೆ) ಗುರಿಯಾದೊಡೆ ಈ ಮೇಲ್ಕಂಡ ಗುಣಗಳೆಲ್ಲವೂ ಮಾಲಿನ್ಯವನ್ನು ಪಡೆಯುವುವಲ್ಲದೆ ಆತನ ಜ್ಞಾನವೂ ನಾಶವನ್ನೈದುವುದು. ಇದೊಂದು ಆಶ್ಚರ್ಯವಲ್ಲ. ಅದೆಂತೆಂದರೆ:—ಪ್ರಕೃತ ಇಂದ್ರನು ತ್ರಿಲೋಕಾಧಿಪನೆನಿಸಿ ಬೃಹಸ್ಪತಿಯೇ ಮೊದಲಾದ ಪ್ರತಿಭಾಶಾಲಿಗಳಾದ ಮಂತ್ರಿಗಳಿಂದ ಕೂಡಿ ಲೋಕೋತ್ತರವಾದ ಪರಾಕ್ರಮಾದಿ ಗುಣಗಳುಳ್ಳವನಾದರೂ ಆತನಿಗೆ ಇಂತಹ ಕಷ್ಟವು ಬಂದೊದಗಿದಾಗ ಆತನ ದುರದಸ್ಥೆಯಂಬಣ್ಣಿಸಲಾದೀತೆ ? (ಎಂತಹವನಿಗಾದರೂ ಕಷ್ಟ ಬಂದೊದಗಿದಲ್ಲಿ ಆತನ ಸುಗುಣಗಳೆಲ್ಲವೂ ಮಲಿನಗಳಾಗಿ ಆತನು ಸರ್ವರಿಂದಲೂ ತಿರಸ್ಕರಿಸಲ್ಪಡುವನೆಂಬದಾಗಿ ಭಾವವು) ಈ ರೀತಿ ದುರ್ವಾಸಮುನಿಯ ಶಾಪದಿಂದ ಲೋಕತ್ರಯನಿವಾಸಿಗಳೆಲ್ಲರೂ ತಮಗೆ ಸಹಜವಾದ ಸತ್ವಗುಣಜನ್ಯಗಳಾದ ಸಂತೋಷ ಮತ್ತು ಧೈರ್ಯಗಳಂ ನಾಶಮಾಡಿಕೊಂಡು ಜಗಜ್ಜನನಿ ಎನಿಸಿದ ಆ ಲಕ್ಷ್ಮಿಯ ಅನುಗ್ರಹವೆಂಬ ಕಟಾಕ್ಷಕ್ಕೆ ಸಂಪೂರ್ಣವಾಗಿ ಪರಾಙ್ಮುಖರೆನಿಸಿ ಕಂಗೆಟ್ಟ ಕಳೆಗುಂದಿ, ಕೃಷ್ಣಪಕ್ಷದ ಚಂದ್ರನಂತೆ ಹೀನಸ್ಥಿತಿಯಂ ಪಡೆಯುತ್ತಿದ್ದರು ॥೫೦॥ ಇಂತರ್ಪ ಸಮಯದೊಳ್ ಮೊದಲಿನಿಂದಲೂ ದೇವತೆಗಳಮೇಲೆ ಕಾರ್ಯಸಾಧನೆಗಾಗಿ

ದಾನವಾಃ ॥೩॥ ಲೋಭಾಭಿ ಭೂತಾ ನಿಶ್ಶ್ರೀಕಾ ದೈತ್ಯಾ ಸ್ಸ
ತ್ವ ವಿವರ್ಜಿತಾಃ । ಶ್ರಿಯಾ ವಿಹೀನೈ ರ್ನಿಸ್ಸತ್ವೈ ರ್ದೇವೈ ಶ್ಚ
ಕ್ರುಸ್ತತೋ ರಣಂ ॥೪॥ ವಿಜಿತಾ ಸ್ತ್ರಿದಶಾ ದೈತ್ಯೈ ರಿಂದ್ರಾ
ದ್ಯಾಶ್ಚ ರಣಂ ಯಯುಃ । ಪಿತಾಮಹಂ ಮಹಾಭಾಗಂ ಹುತಾಶನ
ಪುರೋಗಮಾಃ ॥೫॥ ಯಥಾವತ್ಕ ಥಿತೋ ದೈವೈಃಬ್ರಹ್ಮಾ ಪ್ರಾ
ಹ ತತಸ್ಸುರಾ೯ । ಪರಾಪರೇಶಂ ಶರಣಂ ವ್ರಜಧ್ವಮಸುರಾರ್ದ

ಸನ್ನುಯವಂ ಹುಡುಕುತ್ತಾ ರಂಧ್ರಾನ್ವೇಷಿಗಳಾಗಿದ್ದ ದಿತಿದೇವಿಯ ಮಕ್ಕಳಾದ ದೈತ್ಯರೂ ಅಂತೆಯೇ ದನುಪುತ್ರರಾದ ದಾನವರೂ ಕೂಡ ಐಕಮತ್ಯದಿಂದ ದೇವತೆಗಳಮೇಲೆ ಕೈಮಾಡತೊಡಗಿದರು ॥೩॥ ಇಂತು ಅವರಿಬ್ಬರಿಗೂ ಪರಸ್ಪರವಾಗಿ ಘೋರಯುದ್ಧವು ನಡೆಯಲು ಆಗ ಸತ್ವ ಗುಣಕಾರ್ಯಗಳಾದ ಸಂತೋಷಧೈರ್ಯಗಳಿಂದ ವಿಹೀನರೆನಿಸಿ ಲೋಭಯುಕ್ತರಾದ ಆ ದೈತ್ಯದಾನವರು, ಸಹಜವಾದ ಸತ್ವಾಂಶವನ್ನು ಹೋಗಲಾಡಿಸಿಕೊಂಡು ಸಂಪತ್ತಿನಿಂದ ಹೀನರಾಗಿರುವ ಕಾರಣ ಸಂತೋಷರಹಿತರಾದ ದೇವತೆಗಳೊಡನೆ ಕಾದು ಅವರನ್ನು ಸೋಲಿಸಿದರು ॥೪॥ ಇಂತು ಪರಾಜಿತರಾದ ದೇವತೆಗಳು ತಮಗೆ ಸಂಭವಿಸಿದ ಅಪಜಯದಿಂದ ಖಿನ್ನರಾಗಿ ಎಲ್ಲರೂ ಸಂಘೀಭವಿಸಿ ತಮಗೆ ದೂತಕಾರ್ಯಕಾರಿಯಾದ ಅಗ್ನಿ ಪುರುಷನು ಮುಂದುವಾಡಿಕೊಂಡು ಮಹಾಮಹಿಮಶಾಲಿ ಎನಿಸಿ ಸಕಲ ಲೋಕಗಳಿಗೂ ಸೃಷ್ಟಿಕರ್ತೃವೆನಿಸಿ ಈ ಸೃಷ್ಟಿಗಿಂತಲೂ ಆದಿಯಲ್ಲಿ ತಾನೇ ಹುಟ್ಟಿದವನಾದಕಾರಣ ಪಿತಾಮಹನೆನಿಸುವ ಚತುರ್ಮುಖನಂ ಸಾರ್ದು, ತಮಗುಂಟಾಗಿರುವ ದುರವಸ್ಥೆಯಂ ಆತನ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡರು ॥೫॥

ಈ ಪರಿಯಿಂದ ದೇವತೆಗಳು ತಮಗುಂಟಾಗಿರುವ ಆಪತ್ತನ್ನು ಕುರಿತು ಆ ಬ್ರಹ್ಮನನ್ನು ಪ್ರಾರ್ಥಿಸಲು ಆಗ ಆ ಚತುರ್ಮುಖನು ದೇವತೆಗಳಂ ಕುರಿತು ಇಂತೆಂದನು. ಓದೇವತೆಗಳಿರಾ ಪರಗಳೆನಿಸುವ ಇಂದ್ರಿಯಗಳು ಅವುಗಳ ವಿಷಯಗಳು, ಮನಸ್ಸು, ಬುದ್ಧಿ, ಅವ್ಯಕ್ತ, ಇವುಗಳಿಗಿಂತಲೂ ಪರನೆನಿಸಿ ಇವುಗಳಿಗೆಲ್ಲಾ ಒಡೆಯನಾಗಿರುವ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ತಾನು ನಿಜವಾಗಿಯೂ ಕಾರಣವಲ್ಲದಿದ್ದರೂ ಆ ಕಾರ್ಯಗಳ

ನಂ ॥೫೫॥ ಉತ್ಪತ್ತಿ ಸ್ಥಿತಿನಾಶಾನಾಮಹೇತುಂ ಹೇತುವಿನಶ್ವರಂ।
ಪ್ರಜಾಪತಿಪತಿಂ ವಿಷ್ಣುಮನಂತ ಮಪರಾಜಿತಂ ॥೫೬॥ ಪ್ರಧಾ
ನಪುಂಸೋರಜಯೋಃ ಕಾರಣಂ ಕಾರ್ಯಭೂತಯೋಃ। ಪ್ರಣ
ತಾರ್ತಿಹರಂ ವಿಷ್ಣುಂ ಸರ್ವಜ್ಞೇಯೋ ವಿಧಾಸ್ಯತಿ ॥೫೭॥ ಶ್ರೀ
ಪರಾಶರಃ। ಏವ ಮುಕ್ತ್ವಾಸುರಾ ಸರ್ವೇ ಬ್ರಹ್ಮಲೋಕ
ಪಿತಾ ಮಹಃ। ಕ್ಷೀರೋದಸ್ಯೋತ್ತರಂ ತೀರಂ ತೈರೇವ ಸಹಿತೋ
ಯಯೌ ॥೫೮॥ ಸಗತ್ವಾ ತ್ರಿದಶೈ ಸ್ಸರ್ವೈ ಸ್ಸನುವೇತಃ ಪಿತಾ

ಗೆಅಭಿಮಾನಿಗಳಾದ ಬ್ರಹ್ಮಾದಿಗಳು ತನ್ನ ಅಂಶದಿಂದಲೇ ಇರತಕ್ಕವರಾ
ದಕಾರಣ ಕಾರಣನೆಂಬದಾಗಿ ಕಂಡುಕೊಳ್ಳುವ, ಅಸುರಾದಿಯಾದ ಸ
ಕಲನಿಯಾಮಕನಾದುದರಿಂದ ಈಶ್ವರನೆಂಬದಾಗಿ ಹೇಳಲ್ಪಡುವ ಪ್ರಜಾ
ಪಾಲಕರಿಗೂ ಮತ್ತು ಉತ್ಪತ್ತಿ ಸ್ಥಿತಿಕರ್ತೃಗಳಿಗೂ ಕೂಡ ಅಧಿಪತಿಯಾದ,
ಸರ್ವೋತ್ತಮನೆನಿಸಿದ ಮಹಿಮಾಶಾಲಿಯಾದುದರಿಂದಲೂ ಅಪ್ರತಿಹತಶ
ಕ್ತಿಯುಳ್ಳವನಾದುದರಿಂದಲೂ ಎಲ್ಲಿ ಯಾವಾಗಲಾ ಯಾರಿಂದಲೂ ಪರಾಜ
ಯವಂ ಪಡೆಯುದವನಾದುದರಿಂದ ಅಪರಾಜಿತನೆಂಬದಾಗಿ ಕರೆಯಲ್ಪಡು
ವ ಮತ್ತು ಉತ್ಪತ್ತಿರಹಿತರೆನಿಸಿದ ಪ್ರಕೃತಿಪುರುಷರಿಗೂ ಕೂಡ ಕಾರಣ
ಭೂತನಾದ ಶರಣಾಗತರಕ್ಷಕನೆನಿಸಿ ಅವರ ಆಪತ್ತನ್ನು ಪರಿಹರಿಸುವವ
ನಾದ ಮತ್ತು ಬ್ರಹ್ಮಾದಿ ಪಿಪೀಲಿಕಾಂತಗಳಾದ ಸಕಲ ಪದಾರ್ಥಗಳಲ್ಲಿ
ಯೂ ತ್ರಿಕಾಲಗಳಲ್ಲಿಯೂ ಯಾವಬಾಧೆಯೂ ಇಲ್ಲದೆ ಕೇವಲ ಸತ್ತಾ
ಅಥವ ಸತ್ಯಸ್ವರೂಪದಿಂದ ತಾನೊಬ್ಬನೇ ನೆಲೆಸಿರುವ ಕಾರಣ ವಿ
ಷ್ಣುವೆನಿಸುವ ಆ ಪರಮಾತ್ಮನನ್ನು ಮರೆಹೊಕ್ಕು ಆತನಲ್ಲಿ ನಿಮ್ಮ
ಕಷ್ಟವಂ ವಿಜ್ಞಾಪಿಸಿಕೊಳ್ಳಿರಿ. ಆತನು ನಿಮಗೆ ಸರ್ವಪ್ರಕಾರದಿಂದ
ಲೂ ಮೇಲ್ಮೆಯನ್ನುಂಟುಮಾಡದಿರನು ॥೫೫-೫೬-೫೭॥ ಪರಾಶರಮುನಿ
ಯು ಹೇಳುತ್ತಾನೆ — ಇಂತು ಸಕಲಲೋಕ ಪಿತಾಮಹನೆನಿಸಿದ ಆ ಬ್ರ
ಹ್ಮನು ದೇವತೆಗಳೊಡನೆ ಹೇಳಿ ಆ ದೇವತೆಗಳೊಡನೆ ಕ್ಷೀರಸಮುದ್ರದ
ಉತ್ತರದಿಕ್ಕಿನ ತೀರವನ್ನು ಕುರಿತು ತಾನೂ ಪ್ರಯಾಣಮಾಡಿದನು ॥೫೮॥
ಈ ರೀತಿ ಸಮಸ್ತ ದೇವತೆಗಳಿಂದೊಡಗೂಡಿ ಕ್ಷೀರಸಮುದ್ರತೀರವಂ
ಹೊಂದಿ ಅಲ್ಲಿನಿಂದ ಪರಿವೃತನಾದ ಆ ಚತುರ್ಮುಖನು ಪರಾಪರೇಶನೆನಿಸುವ

ಮಹಃ । ತುಷ್ಟಾವ ವಾಗ್ಭಿರಿಷ್ಟಾಭಿಃ ಪರಾ ಪರ ಪತಿಂ ಹರಿಂ॥೪೯॥
ಬ್ರಹ್ಮೋವಾಚ ॥ ನಮಾಮಿ ಸರ್ವಂ ಸರ್ವೇಶ ಮನಂತ ಮಜ
ಮವ್ಯಯಂ । ಲೋಕಧಾಮಧರಾಧಾರ ಮಪ್ರಕಾಶಮಭೇದಿನಂ ॥
ನಾರಾಯಣಮಣೀಯಾಂಸ ಮಶೇಷಾಣಾಮಣೀಯಸಾಂ । ಸಮ
ಸ್ತಾನಾಂಗರಿಷ್ಠಂಚ ಭೂರಾದೀನಾಂಗರೀಯಸಾಂ ॥ ೪೧ ॥
ಯತ್ರ ಸರ್ವಂ ಯತಸ್ಸರ್ವ ಮುತ್ಪನ್ನಂ ಮತ್ಪರಸ್ಸರಂ । ಸರ್ವಭೂ

ಆ ಶ್ರೀ ಮಹಾವಿಷ್ಣುವನ್ನು ಪ್ರಷ್ಟಾರ್ಥಗಳಾದ ವಾಕ್ಯಗಳಿಂದ ಈಮುಂದೆಹೇಳುವ ಪ್ರಕಾರ ಸ್ತೋತ್ರಮಾಡತೊಡಗಿದನು॥೪೯॥ಬ್ರಹ್ಮನು ಸ್ತೋತ್ರಮಾಡುವ ಕ್ರಮವೆಂತೆಂದರೆ—ಈ ಪ್ರಪಂಚದಲ್ಲಿರುವ ಸಕಲವಸ್ತುಗಳೂ ಆ ಪರಮಾತ್ಮಸ್ವರೂಪವೇ ಆಗಿರುವ ಕಾರಣ ಸರ್ವಾತ್ಮನೆಂತಲೂ ಸರ್ವೇಶ್ವರನೆಂತಲೂ ಹೇಳಲ್ಪಡುವ ನಾಶರಹಿತನಾದುದರಿಂದ ,,ಅನಂತ'' ನೆಂತಲೂ ಉತ್ಪತ್ತಿರಹಿತನಾದುದರಿಂದ ,,ಅಜ'' ನೆಂತಲೂ, ಯಾವವಿಧವಾದ ಹೆಚ್ಚುಕಡಿಮೆಯನ್ನೂ ಪಡೆಯದೆ ಸುಖದುಃಖ ವಿಕಾರಶೂನ್ಯನಾದುದರಿಂದ ,,ಅವ್ಯಯ'' ನೆಂತಲೂ ಕರೆಯಿಸಿಕೊಳ್ಳುವ ಪೃಥಿವಿಯೇ ಮೊದಲಾದ ಅಂಡಗಳನ್ನು ಧರಿಸಿರುವ (ಅಭಿಮಾನಶಾಲಿಗಳಾದ) ಇಂದ್ರಾದಿಗಳಿಗೂ ಕೂಡ ಆಶ್ರಯಭೂತನಾದ, ಇತರ ಪ್ರಕಾಶರಹಿತನಾದ, ಮತ್ತು ತನಗಿಂತಲೂ ಬೇರೆಯಾದ ವಸ್ತುವೇ ಇಲ್ಲದಕಾರಣ ಸರ್ವಸಮನೆನಿಸಿರುವ, ಅತಿ ಸೂಕ್ಷ್ಮಗಳೆನಿಸುವ ಪರಮಾಣು ಮೊದಲಾದುವುಗಳಲ್ಲಿ ಅವುಗಳಿಗಿಂತಲೂ ಸೂಕ್ಷ್ಮರೂಪದಿಂದಿರುವ ಅತಿದೊಡ್ಡವುಗಳೆನಿಸುವ ಪೃಥಿವ್ಯಾದಿಗಳಲ್ಲಿ ಅವುಗಳಿಗಿಂತಲೂ ಸ್ಥೂಲರೂಪನಾಗಿರುವ (ಸೂಕ್ಷ್ಮಪದಾರ್ಥಕ್ಕಿಂತಲೂ ಅತಿಸೂಕ್ಷ್ಮನೆನಿಸಿ ಸ್ಥೂಲಪದಾರ್ಥಗಳಿಗಿಂತಲೂ ಅತ್ಯಂತ ಸ್ಥೂಲನೆನಿಸಿರುವ) ನಾರಾಯಣಶಬ್ದವಾಚ್ಯನಾದ ಆ ಪರಮಾತ್ಮನನ್ನು ವಂದಿಸುವೆನು ॥೪೦-೪೧॥

ಪ್ರಳಯಕಾಲದಲ್ಲಿ ನಾನೇ ಮೊದಲಾದ (ಬ್ರಹ್ಮನೇ ಮೊದಲಾದ) ಈ ಜಗತ್ತೆಲ್ಲವೂ ಯಾವನಲ್ಲಿ ಲಯಹೊಂದುವುದೋ ಯಾವನ ದೆಶೆಯಿಂದ ಸೃಷ್ಟಿಕಾಲದಲ್ಲಿ ಅಂತೆಯೇ ಆವಿರ್ಭವಿಸುವುದೋ, ಯಾವನಾದರೆ ಈ ಸಕಲಭೂತಗಳಲ್ಲಿಯೂ ನೆಲೆಸಿದವನಾಗಿ ಆ ಆ ರೂಪದಿಂದ ಗೋ

ತಶ್ಚ ಯಃ ಪ್ರೋಕ್ತಃ ಪರಾನ್ನಾಮುಪಿಯಃ ಪರಃ ॥೪೨॥ ಪರಃಪರ
ಸ್ಮಾತ್ಪುರುಷಾ ತ್ಪರಮಾತ್ಮ ಸ್ವರೂಪಧೃತ್ । ಯೋಗಿಭಿಶ್ಚಿಂತ್ಯ
ತೇಯೋಸೌ ಮುಕ್ತಿಹೇತೋ ರ್ನ್ನಮುಕ್ಷುಭಿಃ ॥೪೩॥ ಸತ್ವಾದ
ಯೋ ನಸಂತೀಶೇ ಯತ್ರ ಚ ಪ್ರಾಕೃತಾಗುಣಾಃ । ಸಶುದ್ಧಸ್ಸರ್ವ
ಶುದ್ಧೇಭ್ಯಃ ಪುರುಷಾದ್ಯಃ ಪ್ರಸೀದತು ॥೪೪॥ ಕಲಾ ಕಾಷ್ಠಾ
ಮುಹೂರ್ತಾದಿ ಕಾಲಸೂತ್ರಸ್ಯ ಗೋಚರೇ । ಯಸ್ಯೆ ಶಕ್ತಿರ್ನ

ಚರಿಸುವನೋ, ಪರಗಳೆನಿಸುವ ಇಂದ್ರಿಯಾದಿಗಳಿಗಿಂತಲೂ ಯಾವನು ಶ್ರೇಷ್ಠನೋ ಅಂತಹ ಪುರುಷನಿಗಿಂತಲೂ ಶ್ರೇಷ್ಠನೆನಿಸಿ ಪರಮಾತ್ಮ ನೆಂಬದಾಗಿ ಕರೆಯಲ್ಪಡುವವನಾಗಿ ಮುಮುಕ್ಷುಗಳಾದ ಯೋಗಿಗಳಿಂ ದ ಮುಕ್ತಿಗೋಸುಗ ಯಮನಿಯಮಾದಿ ಅಷ್ಟಾಂಗಯೋಗೋಪಾಸ ನೆಯಿಂದ ಧ್ಯಾನಿಸಲ್ಪಡುವನೋ ಅಂತಹ ಪರಮಾತ್ಮನು ಪ್ರಸನ್ನನಾಗಿ ನಮ್ಮ ದುಃಖವ ಅಳಿಸಲಿ ॥೪೨-೪೫॥ ಆದಿಪುರುಷನೆನಿಸುವ ಆ ಶ್ರೀ ಮ ಹಾವಿಷ್ಣುವು ಪ್ರಸನ್ನನಾಗಿ ನಮಗೆ ಸುಖವನ್ನುಂಟುಮಾಡಲಿ ॥೪೪॥ (ಪ್ರ ಕೃತಿ ಗುಣಗಳೆನಿಸುವ ಕಾರಣ) ಪ್ರಾಕೃತಗಳೆನಿಸುವ ಸತ್ವ, ರಜಸ್ಸು, ತಮಸ್ಸುಗಳೆಂಬ ಗುಣತ್ರಯನೂನ್ಯನೆನಿಸಿ, ಶುದ್ಧಪದಾರ್ಥಗಳಿಗಿಂತಲೂ ಅತಿಪರಿಶುದ್ಧನೆನಿಸಿರುವ ಯಾವ ಪರಮಾತ್ಮನಾದರೆ ಸಕಲ ಜೀವರಾಶಿಗ ಳಲ್ಲಿಯೂ ಅಂತರ್ಯಾಮಿರೂಪದಿಂದ ತಾನೇ ನೆಲೆಸಿ ಆ ಜೀವರು ಮಾ ಡುವ ಸುಕೃತ ದುಷ್ಕೃತಗಳ ಫಲಗಳಾದ ಸುಖದುಃಖಗಳ ಸಂಪರ್ಕ ವಿಲ್ಲದಕಾರಣ ಶುದ್ಧನೆನಿಸುವನೋ ಆ ಪರಮಾತ್ಮನ ಶಕ್ತಿ ಎನಿಸುವ ಲಕ್ಷ್ಮಿಯೂ ಕೂಡ ಕಲಾ, ಕಾಷ್ಠಾ, ಮುಹೂರ್ತ, ದಿವಸ, ಮೊ ದಲಾದ ಕಾಲಸೂತ್ರಕ್ಕೆ ಗೋಚರಿಸದವಳಾಗಿರುವಳೋ (ಆಕೆಗೂ ಕೂಡ ಸ್ವರೂಪಭೇದವಿಲ್ಲದ ಕಾರಣದಿಂದಲೂ ಉತ್ಪತ್ತಿರಹಿತಳಾದುದ ರಿಂದಲೂ ನಿತ್ಯಳಾಗಿಯೇ ಇರುವಳೆಂದು ಭಾವವು) ಅಂತಹ ಹರಿಯು (ಭಕ್ತರ ಪಾಪಗಳನ್ನ ಹರಣಮಾಡುವ ಕಾರಣ ಹರಿ ಎಂದು ವ್ಯವಹಾ ರವು) ನಮ್ಮಗಳಿಗೆ ಪ್ರಸನ್ನನಾಗಲಿ ॥೪೫॥ ಮೈತ್ರೇಯನು ಕೇಳುತ್ತಾನೆ ಅಯ್ಯಾ ಮುನೀಶ್ವರನೆ, ಆತನು ಶುದ್ಧನು, ನಿರ್ಗುಣನು, ಎಂಬದಾಗಿ

ಕೆದ್ಧ ಸ್ಯಪ್ರಸೀದತು ಸನೋಹರಿಃ ॥೫೫॥ ಪ್ರೋಚ್ಯತೇ * ಪರಮೋ
ಕೋಜೋ ಯಕ್ಶದ್ದೊಽಪ್ಯುಪಚಾರತಃ । ಪ್ರಸೀದತು ಸನೋ
ವಿಷು ರಾತ್ಮಾಯ ಸ್ಸರ್ವದೇಹಿನಾಂ ॥೫೬॥ ಯಃ ಕಾರಣಂಚ
ಕಾರ್ಯಂಚ ಕಾರಣಸ್ಯಾಪಿ ಕಾರಣಂ । ಕಾರ್ಯಸ್ಯಾಪಿಚ ಯಃ
ಕಾರ್ಯಂ ಪ್ರಸೀದತುಸನೋಹರಿಃ॥೫೭॥ ಕಾರ್ಯಕಾರ್ಯಸ್ಯ ಯತ್ಕಾ
ರ್ಯಂ ತತ್ಕಾರ್ಯಸ್ಯಾಪಿಯ ಸ್ಸ್ವಯಂ । ತತ್ಕಾರ್ಯ ಕಾರ್ಯಭೂತೋ

ಹೇಳುವಿರಿ ಹಾಗಾದರೆ ಆತನಿಗೆ ಲಕ್ಷ್ಮೀದೇವಿಯು ಪತ್ನಿ ಎಂದು ಹೇಳುವ ಬಗೆಹೇಗೆ ? ಪರಾಶರನುಹೇಳುತ್ತಾನೆ:—ಸರ್ವಾಂತರ್ಯಾಮಿಎನಿಸಿ ಉತ್ಪತ್ತಿಶೂನ್ಯನಾದ ಪರಮಾತ್ಮನನ್ನು ಉಪಚಾರದಿಂದ ಶಕ್ತಿರೂಪಳಾದ ಆ ಲಕ್ಷ್ಮೀಗೆ ಪತಿಯೆನ್ನಾಗಿ ಹೇಳುವರೇ ಹೊರತು ಆತನು ನಿಜವಾಗಿಯೂ ಸಂಸಾರಿಯಲ್ಲ ॥೫೬॥ ಈ ಲೋಕಸೃಷ್ಟಿಗೆ ಮುಖ್ಯಕಾರಣನೆನಿಸಿರುವ ಚತುರ್ಮುಖರೂಪದಿಂದಿರುವನೂ ಆ ಪರಮಾತ್ಮನೇ ಮತ್ತು ಆತನೇ ಆ ಸೃಷ್ಟಿಕಾರ್ಯಗಳೆನಿಸುವ ಚರಾಚರರೂಪದಿಂದಲೂ ಕಾಣಿಸುವನು ಕಾರಣನೆನಿಸುವ ಚತುರ್ಮುಖಾದಿಗಳೂ ಕೂಡ ಆತನಿಂದಲೇ ಜನಿಸಿದವರಾಮದರಿಂದ ಸಕಲಕಾರಣಕ್ಕೂ ಆತನೇ ಮುಖ್ಯಕಾರಣಭೂತನು. ಸಕಲ ಜೀವಜಂತುಗಳೂ ಆತನ ಅಂಶದಿಂದಲೇ ಉದಯಿಸಿದವರಾದುದರಿಂದ ತನಗೆ ಕಾರ್ಯಭೂತನಾದ ಚತುರ್ಮುಖ ಸೃಷ್ಟಿಯಲ್ಲಿಯೂ ಪುನಃ ಕಾರ್ಯರೂಪನಂ ಪಡೆದಿರುವನೂ ಆ ಪರಮಾತ್ಮನೇ ಆದುದರಿಂದ ಇಂತಹ ಪರಮೈಶ್ವರ್ಯಶಾಲಿ ಎನಿಸಿದ ಆ ಪರಮಾತ್ಮನು ನಮಗೆ (ಪ್ರಸಾದವನ್ನು ಮಾಡಲಿ) ಅನುಗ್ರಹಮಾಡಲಿ ॥೫೭॥ ಪ್ರಕೃತಿಕಾರ್ಯವೆನಿಸಿದ (ಪ್ರಕೃತಿಯಿಂದುಂಟಾದ) ಅಹಂಕಾರ, ಆ ಅಹಂಕಾರದಿಂದುಂಟಾಗುವ ಸೂಕ್ಷ್ಮಭೂತಗಳು, ಅವುಗಳಿಂದ ಜನಿಸಿದ ಮಹಾಭೂತಗಳು, ಆ ಮಹಾಭೂತಸಮುದಾಯದಿಂದುಂಟಾಗುವ ಬ್ರಹ್ಮಾಂಡವು, ಆ ಬ್ರಹ್ಮಾಂಡಕಾ

* ಪರಾ + ಚ + ಅಸೌ + ಮೂ + ಚ=ಪರನೂ, (ಆ ಪರಮಾತ್ಮನ ಚಿಚ್ಛಕ್ತಿರೂಪಳಾದ ಲಕ್ಷ್ಮೀದೇವಿಯು) ಪರಮಾಯಾಃ + ಈಶಃ = ಪರಮೇಶಃ, ಆ ಲಕ್ಷ್ಮೀದೇವಿಯ ಪತಿ=ಶ್ರೀಮಹಾವಿಷ್ಣುವೆಂದರ್ಥ.

ಯ ಸ್ತತಶ್ಚ ಪ್ರಣತಾ ಸ್ಮ್ಯಹಂ ॥೪೪॥ * ಕಾರಣಂ ಕಾರಣಸ್ಯಾಪಿ ತಸ್ಯಕಾರಣ ಕಾರಣಂ । ತತ್ಕಾರಣಾನಾಂ ಹೇತುಂತಂ ಪ್ರಣತಾ ಸ್ಮ್ಯಹಂ ಸುರೇಶ್ವರಂ ॥೪೯॥ ಭೋಕ್ತಾರಂ ಭೋಜ್ಯಭೂತಂಚ ಸ್ರಷ್ಟಾರಂ ಸೃಜ್ಯಮೇವಚ। ಕಾರ್ಯ ಕರ್ತೃ ಸ್ವರೂಪಂತಂ ಪ್ರಣತಾ

ರ್ಯಭೂತರನಿಸಿದ ಬ್ರಹ್ಮ, ದಕ್ಷ ಮೊದಲಾದ ಪ್ರಜಾಪತಿಗಳು ಅವರಿಂದುಂಟಾದ ಪುತ್ರ, ಪೌತ್ರರೂಪವಾದ ಪರಂಪರೆಯಲ್ಲವೂ ಆತನ ಆವಾಸ ಸ್ಥಾನವಾಗಿಯೇ ಇರುವ ಕಾರಣ ಇಂತಹ ಕಾರ್ಯರೂಪನಾಗಿ ಅಚಿಂತ್ಯಾದ್ಭುತಶಕ್ತಿಯುಕ್ತನಾದ ಆ ಪರಮಾತ್ಮನ್ನು ನಾವು ಸಾಷ್ಟಾಂಗ ಪ್ರಣಾಮವನ್ನು ಗೈವೆವು ॥೪೪॥ ಈ ಪುತ್ರಪೌತ್ರಾದಿ ಪ್ರವಾಹಸೃಷ್ಟಿಗೆ ಕಾರಣಭೂತರಾದ ಬ್ರಹ್ಮಾದಿಗಳು, ಆ ಬ್ರಹ್ಮಾದಿಸೃಷ್ಟಿಗೆ ಕಾರಣವಾದ ಬ್ರಹ್ಮಾಂಡ, ಅದಕ್ಕೆ ಕಾರಣವೆನಿಸಿದ ಮಹಾಭೂತಗಳು, ಅವುಗಳ ಕಾರಣಗಳಾದ ಸೂಕ್ಷ್ಮಭೂತಗಳು, ಆ ಸೂಕ್ಷ್ಮಭೂತಗಳು ಆ ಸೂಕ್ಷ್ಮಭೂತೋತ್ಪತ್ತಿಗೆ ಕಾರಣವಾದ ಅಹಂಕಾರ, ಇಂತಹ ಅಹಂಕಾರ ಕಾರಣವಾದ ಮಹತ್ತತ್ವ, ಈ ಮಹತ್ತತ್ವಕಾರಣವಾದ ಪ್ರಕೃತಿ ತತ್ಕಾರಣಭೂತನಾದುದರಿಂದ ಪ್ರಧಾನಕಾರಣನೆನಿಸಿದ ಆ ಪರಮಾತ್ಮನನ್ನು ನಾವು ಶರಣಹೊಂದುವೆವು ॥೪೯॥ ಬ್ರಹ್ಮಾದಿ, ಅಣು, ರೇಣು, ತೃಣ, ಕಾಷ್ಠೆಗಳೆಂಬ ಸಕಲಪದಾರ್ಥಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಸರ್ವದೇಶಗಳಲ್ಲಿಯೂ, ಸರ್ವದಿಕ್ಕುಗಳಲ್ಲಿಯೂ ಶಾಶ್ವತವಾಗಿ ನೆಲೆಸಿರು

* ಪ್ರಕೃತೇರ್ಗುಣ ಕ್ಷೋಭಾತ್ ಪ್ರಥಮಂ ಕ್ರಿಯಾಶಕ್ತಿಸ್ಸೂತ್ರಮುತ್ಪದ್ಯತೇ । ತತೋಜ್ಞಾನಶಕ್ತಿರ್ಮಹತ್ತತ್ವಂ ತತೋಽಹಂಕಾರಃ ಅಹಂಕಾರಾತ್ಪಂಚತನ್ಮಾತ್ರಾಣಿ ತನ್ಮಾತ್ರೇಭ್ಯೋ ಮಹಾಭೂತಾನಿ ತತಶ್ಚ ಬ್ರಹ್ಮಾಂಡಂ ತತಶ್ಚ ಬ್ರಹ್ಮದಕ್ಷಾದಯಃ ತತಶ್ಚ ಪುತ್ರಪೌತ್ರಾದಿ ಪ್ರವಾಹ ಸೃಷ್ಟಿಃ ಎಂಬ ಪ್ರಮಾಣದಿಂದ ಆತನು ನಿಖಿಲ ಕಾರಣಗಳಿಗೂ ಕಾರಣವೆಂಬದಾಗಿ ತೋರುತ್ತದೆ. ಇದರರ್ಥವು ಮೇಲೆ ಬರಯಲ್ಪಟ್ಟಿದೆ. ಇದನ್ನು ವ್ಯತ್ಯಾಸಮಾಡಿದರೆ "ಕಾರ್ಯಕಾರ್ಯಸ್ಯ" ಇತ್ಯಾದಿ ೪೪ನೆಯ ಶ್ಲೋಕದ ಅರ್ಥವಾಗುವುದು.

ಸ್ಸ್ಮ ಪರಂಪದಂ ॥೫೦॥ ವಿಶುದ್ಧ ಬೋಧವನ್ನಿತ್ಯ ಮಜಮಕ್ಷಯ
ಮವ್ಯಯಂ । ಅವ್ಯಕ್ತಮವಿಕ ರಂಯ ತ್ತದ್ವಿಷ್ಣೋಃ ಪರಮಂಪ
ದಂ॥ನಸ್ಥೂಲಂ ನಚಸೂಕ್ಷ್ಮಂ ಯನ್ನವಿಶೇಷಣ ಗೋಚರಂ । ತ
ತ್ಪದಂ ಪರಮಂ ವಿಷ್ಣೋಃ ಪ್ರಣಮಾಮ ಸದಾಮಲಂ ॥ ೫೨ ॥
ಯಸ್ಯಾಯುತಾ ಯುತಾಂಶಾಂಶೇ ವಿಶ್ವಶಕ್ತಿರಿಯಂ ಸ್ಥಿತಾ ।

ವ ಯಾವ ಪರಮಾತ್ಮನನ್ನು ಸುಕೃತ, ದುಷ್ಕೃತ ಫಲಭೋಕ್ತೃವ
ನ್ನಾಗಿಯೂ ಭೋಗಸಾಧನನೆಂತಲೂ, ಸೃಷ್ಟಿಕರ್ತೃವೆಂಬದಾಗಿಯೂ,
ಸೃಷ್ಟಿಗೋಚರನೆಂಬದಾಗಿಯೂ, ಗಮನಾಗಮನಾದಿ ಕ್ರಿಯಾರೂಪನೆಂ
ತಲೂ (ಯಜ್ಞಾಯಾಗಾದಿ ಕಾರ್ಯರೂಪನೆಂತಲೂ, ಗಮನಾಗಮನ, ದಾ
ನಾದಾನಾದಿಗಳಲ್ಲಿ ಕರ್ತೃಗಳೆನಿಸಿದ ಇಂದ್ರಿಯಾದಿರೂಪನೆಂತಲೂ ಕರ್ಮ
ಚರಣಾಧಿಕಾರಿ ಎಂತಲೂ) ನಾನಾಪರಿಯಿಂದ ಸಮಸ್ತ ಶಾಸ್ತ್ರಪುರಾಣ
ಗಳೂ ಪೊರೆಯಿಡುತ್ತವೆಯೋ ಅಂತಹ ಕೈವಲ್ಯವ್ಯಾಧಿಪನೆನಿಸಿ ಆ ಕೈವ
ಲ್ಯರೂಪದಿಂದೆಸೆವ ಪರಮಾತ್ಮನನ್ನು ನಾವು ಅನನ್ಯಭಕ್ತಿಯಿಂದ ನಮ
ಸ್ಕರಿಸುವೆವು ॥೫೦॥ ಯಾವ ಪರಮಾತ್ಮನ ಪಾದಾರವಿಂದಗಳಲ್ಲಿನ ಭಕ್ತಿ
ಯು ರಾಗಾದಿವಿಷಯಕವಾದ ಮುಮುತಾದಿಗಳನ್ನು ನಾಶಮಾಡಿ ಮುಕ್ತಿ
ಸಾಧನವಾಗುವುದೋ, ಅಂತಹ ಉತ್ಪತ್ತಿಶೂನ್ಯವೂ ನಾಶರಹಿತವೂ ಎ
ನಿಸಿ ಸರ್ವದಾ ಭಾಸಮಾನವಾಗಿರುವ ಆ ಪರಮಾತ್ಮನ ಅಡಿದಾವರೆಗಳ
ಗೆ ನಾವು ಶರಣಾಗತರಾಗಿರುವೆವು. ॥೫೦॥

ಯಾವ ಪರಮಾತ್ಮನು ಸ್ಥೂಲ, ಸೂಕ್ಷ್ಮವೊದಲಾದ ಪರಿಮಾಣುಗ
ಳಿಗೆ ಗೋಚರನಾಗದೆಯೂ ಯಾವುದೊಂದು ವಿಶೇಷಣ (ಗುಣವಾಚಕ
ಶಬ್ದ) ಗಳಿಗೂ ಗೋಚರಿಸದೆ ತ್ರಿಕಾಲಗಳಲ್ಲಿ ಯೂ ಕೇವಲ ಸಚ್ಚಿ
ದಾನಂದ ಸ್ವರೂಪನಾಗಿಯೇ ಶಂಗೊಳಿಸುತಿರುವನೋ ಅಂತಹ ಸರ್ವ
ವ್ಯಾಪಕನಾದ ಆ ಪರಮೇಶ್ವರನ ನಿರ್ಮಲವಾದ ಪಾದಾರವಿಂದಕ್ಕೆ ನಾವು
ಬಾರಿಬಾರಿಗೂ ನಮಸ್ಕರಿಸುವೆವು ॥೫೨॥ ಯಾವ ಪರಬ್ರಹ್ಮಸ್ವರೂಪ
ನಾದ ಶ್ರೀಮನ್ನಾರಾಯಣಮೂರ್ತಿಯ ಸಂಬಂಧಿನಿಯಾದ ಚಿಚ್ಛಕ್ತಿಯೆ
ನಿಸುವ ಮಾಯೆಯ ಕೋಟ್ಯಂಶದ ಬಂದುಭಾಗವಾದ ರಜೋಗುಣಾಂ
ಶದಲ್ಲಿ ಈ ಚರಾಚರರೂಪವಾದ ಪ್ರಪಂಚ ನಿರ್ಮಾಣಶಕ್ತಿ ಎಂಬುದು

ಪರಬ್ರಹ್ಮಸ್ವರೂಪಸ್ಯ ಪ್ರಣವಾವಯವಸ್ಯವೈ ॥೫೫॥ ಯ
ದ್ಯೋಗಿನಸ್ಸದೋದ್ಯುಕ್ತಾಃ ಪುಣ್ಯಪಾಪ ಕ್ಷಯೇ ಕ್ಷಯಂ ।
ಪಶ್ಯಂತಿ ಪ್ರಣವೇ ಚಿಂತ್ಯಂ ತದ್ವಿಷ್ಣೋಃ ಪರಮಂಪದಂ ॥೫೪॥
ಯನ್ನದೇವಾನವಾನಯೋ ನಚಾಹಂ ನಚಶಂಕರಃ । ಜಾನಂತಿ
ಪರಮೇಶಸ್ಯ ತದ್ವಿಷ್ಣೋಃ ಪರಮಂಪದಂ ॥೫೫॥ ಶಕ್ತಯೋ ಯ
ಸ್ಯ ದೇವಸ್ಯ ಬ್ರಹ್ಮವಿಷ್ಣುಶಿವಾತ್ಮಿಕಾಃ ಭವಂತ್ಯ ಭೂತಪ್ರಭವಸ್ಯ
ತದ್ವಿಷ್ಣೋಃ ಪರಮಂಪದಂ ॥೫೬॥ ಸರ್ವೇಶ ! ಸರ್ವಭೂತಾ

ನೆಲೆಗೊಂಡಿರುವುದೋ ಅಂತಹ ವಿಕಾರಶೂನ್ಯನಾದ ಪರಮಾತ್ಮನನ್ನು ನಾವು ಮರೆಹೊಗುವೆವು ॥೫೫॥ ಯಾವ ಪರಮಾತ್ಮನ ಸಾಕ್ಷಾತ್ಕಾರವಂ ಪಡೆಯಲು ನಿರಂತರವೂ ಅಷ್ಟಾಂಗಸಾಧನವೆನಿಸಿದ ಯೋಗಾಭ್ಯಾಸಾದಿಗಳಿಂದ ಪ್ರಯತ್ನಮಾಡುತ್ತಾ ವೈರಾಗ್ಯವಂ ಪಡೆದು ಪುಣ್ಯಪಾಪಗಳು ಕ್ಷೀಣವಾಗಲು ನಾಶರಹಿತನಾದ ಆ ಪರಮಾತ್ಮನನ್ನು ಪ್ರಣವ (ಓಂಕಾರ) ವಿಷಯನನ್ನಾಗಿ ಮಾಡಿಕೊಂಡು ಉಪಾಸನೆಮಾಡುತ್ತಾ ಅತನ ಅನುಗ್ರಹವು ದೊರೆತಬಳಿಕ ಮುಕ್ತರಾಗುವರೋ ಅಂತಹ ವಿಷ್ಣುಸ್ವರೂಪನೆನಿಸಿದ ಆ ಪರಮಾತ್ಮನ ಅಡಿದಾವರೆಗಳೀ ನನುಗೀಗ ಒದಗಿರುವ ಆಸಕ್ತನ್ನು ನಿರ್ಮೂಲಮಾಡಿ ನಮ್ಮನ್ನು ಸಲಹಲಿ ॥೫೪॥ ಯಾವ ಪರಮಾತ್ಮನ, ಅಡಿದಾವರೆಗಳನ್ನು ದೇವತೆಗಳು, ಮುನಿಸಶ್ರೇಷ್ಠರಾದ ಮುನಿಗಳು, ಈ ಸಮಸ್ತಪ್ರಪಂಚಕ್ಕೂ ಸೃಷ್ಟಿಕರ್ತೃವೆನಿಸಿದ ನಾನು, ಮತ್ತು ಕೈವಲ್ಯಾಧಿಪನೆನಿಸಿ ಭಕ್ತವಾಂಛಿತಪ್ರದಕನಾದ ಶಿವನೂ, ಯಾರೊಬ್ಬರೂ ಪ್ರತ್ಯಕ್ಷವಾಗಿ ಗೋಚರಿಸಿಕೊಳ್ಳಲು ಶಕ್ತರಾಗುವುದಿಲ್ಲವೋ ಅಂತಹ ಪರಮಾತ್ಮನ ಪಾದಾರವಿಂದಕ್ಕೆ ನಾವು ನಮಸ್ಕರಿಸುವೆವು ॥ ೫೫ ॥ ಯಾವ ಪರಮಾತ್ಮನ ಶಕ್ತಿರೂಪಗಳಾದ ಸತ್ವರಜಸ್ತಮಸ್ಸುಗಳೆಂಬ ಗುಣತ್ರಯಶಕ್ತಿಗಳು ಬ್ರಹ್ಮ, ವಿಷ್ಣು, ಶಂಕರರೆಂಬ ಮೂರ್ತಿತ್ರಯಗಳನ್ನು ತೋರ್ಪಡಿಸಿ ಭಿನ್ನಭಿನ್ನಗಳಾಗಿ ಸೃಷ್ಟಿ, ಸ್ಥಿತಿ ಲಯಗಳೆಂಬ ಕಾರ್ಯತ್ರಯವನ್ನು ನಿರ್ವಹಿಸುತಲಿವೆಯೋ ಅಂತಹ ಅನಾದಿ ಎನಿಸಿದ ಆ ಪರಮಾತ್ಮನ ಪಾದಾರವಿಂದಗಳನ್ನೇ ನಾವು ದೃಢವಾಗಿ ನಂಬಿರುವೆವು ॥೫೬॥ ಎಲೈ ಸರ್ವನಿಯಾಮಕನೆ, ಸರ್ವಾಂತರ್ಯಾಮಿಯೆ, ಸರ್ವೇಶ್ವರೂ

ತ್ಮ್ಕ ! ಸರ್ವ ! ಸರ್ವಾಶ್ರಯಾ ! ಚ್ಯುತ ! । ಪ್ರಸೀದ ವಿಷ್ಣೋ ಭಕ್ತಾನಾಂ ವ್ರಜನೋದೃಷ್ಟಿಗೋಚರಂ ॥೫೭॥ ಶ್ರೀ ಪರಾಶರಃ ॥ ಇತ್ಯುದೀರಿತಮಾ ಕರ್ಣ್ಯ ಬ್ರಹ್ಮಣಸ್ತದಕಾಸ್ತತಃ । ಪ್ರಣಮ್ಯೋಚುಃ ಪ್ರಸೀದೇತಿ ವ್ರಜನೋ ದೃಷ್ಟಿಗೋಚರಂ ॥೫೮॥ ಯನ್ನಾಯಂ ಭಗವಾ೯ ಬ್ರಹ್ಮಾ ಜಾನಾತಿ ಪರಮಂ ಪದಂ ॥ ತನ್ನತಾಸ್ಸ್ಮ ಜಗದ್ಧಾಮ ತವ ಸರ್ವಗತಾ ಚ್ಯುತ ! ॥೫೯॥ ಇತ್ಯಂತೇ ವಚಸ ಸ್ತೇಷಾಂ ದೇವಾನಾಂ ಬ್ರಹ್ಮಣಸ್ತಥಾ । ಊ

ಮಿಯೆ, ನಿಖಿಲಾಧಾರನೆ, ನಾಶರಹಿತನೆನಿಸಿದ ವಿಷ್ಣುಶಬ್ದವಾಚ್ಯನಾದ ಪರಮಾತ್ಮನೆ, ನೀನು ಪ್ರಸನ್ನನಾಗಿ ನಮ್ಮನ್ನು ಈ ಮಹದಾಪತ್ತಿನಿಂದ ಉದ್ಧರಿಸಿ, ನಮಗೆ ದರ್ಶನವಂ ಕೊಟ್ಟು ನಮ್ಮನ್ನು ಕಾಪಾಡು ॥೫೭॥ ಪರಾಶರಮುನಿಯು ಹೇಳುತ್ತಾನೆ—ಇಂತು ಚತುರ್ಮುಖನು ಪರಮಾತ್ಮಸ್ವರೂಪಿಯಾದ ಆ ನಾರಾಯಣನನ್ನು ನಾನಾಪರಿಯಿಂದ ಬೇಡಿಗಬಳಿಕ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಆ ಪರಮಾತ್ಮನಿಗೆ ಭಕ್ತಿ, ಶ್ರದ್ಧಾ, ವಿನಯಗಳಿಂದ ಕೂಡಿ ಪರಮಾದರದಿಂದ ಸಾಷ್ಟಾಂಗ ಪ್ರಣಾಮವಂ ಗೈದು, ಓ ಭಕ್ತಾನು ಕಂಪಿಸುವ ಮಹಾನುಭಾವನೆ, ನಮಗೆ ಪ್ರಸನ್ನನಾಗಿ ನಮ್ಮೆದುರಲ್ಲಿ ಬಂದು ನಿಂತು ನಮಗೆ ಅಭಯವಂ ಕೊಟ್ಟು ನಮ್ಮನ್ನು ಕಾಪಾಡು,, ಎಂಬದಾಗಿ ನಾನಾಪರಿಯಿಂದ ಆತನನ್ನು ಸ್ತೋತ್ರಮಾಡಿ ಹಲವುಬಗೆಗಳಿಂದ ಪ್ರಾರ್ಥಿಸಿಕೊಂಡರು ॥೫೯॥ ನಿನ್ನ ತತ್ವವನ್ನು ಈ ನಿಖಿಲಪ್ರಪಂಚಕ್ಕೂ ಸೃಷ್ಟಿಕಾರಣಭೂತನಾದ ಈ ಚತುರ್ಮುಖನೂ ಕೂಡ ಅರಿತವನಲ್ಲ. ಇಂತಿರಲು ಸಾಮಾನ್ಯರಾದ ನಮ್ಮಂತವರ ಪಾಡೇನು ? ಆದಕಾರಣ ಎಲ್ಲೆ ಸರ್ವಾಂತರ್ಯಾಮಿ ಎನಿಸಿದ ಪರಮಾತ್ಮನೆ, ಸರ್ವತೋಮುಖವಾಗಿ ಪ್ರಕಾಶಿಸುವ ತೇಜಃಪುಂಜರಂಜಿತವಾದ ನಿನ್ನಡಿದಾವರೆಗಳಿಗೆ ನಾವು ಬಾರಿಬಾರಿಗೂ ವಂದಿಸುವೆವು ॥೫೯॥ ಇಂತು ಬ್ರಹ್ಮನೂ ದೇವತೆಗಳೂ ಕೂಡ ಆ ಪರಮಾತ್ಮನನ್ನು ಸ್ತೋತ್ರ, ಮಾಡಿ ತಲೆಬಾಗಿ ನಮಸ್ಕರಿಸಿದ ಬಳಿಕ ದೇವತೆಗಳಿಗೆ ಪುರೋಹಿತನೂ, ತ್ರಿದಶಾಧಿಪನೆನಿಸಿದ ಇಂದ್ರನಿಗೆ ಮುಖ್ಯಮಂತ್ರಿಯೂ, ಬ್ರಹ್ಮರ್ಷಿವರ್ಯನೂ ಎನಿಸಿದ ಬೃಹಸ್ಪತಿ ಮತ್ತು ಇತರ ಋಷಿಗಳೂ ಆತನನ್ನು ಸ್ತೋ

ಚುರ್ದೇವರ್ಷಯ ಸ್ಸರ್ವೇ ಬೃಹಸ್ಪತಿ ಪುರೋಗಮಾಃ ॥ ೬೦ ॥
ಆದ್ಯೋಯಜ್ಞಃ ಪುಮಾ ನಿಜ್ಯೋ ಯಃಪ್ರೂರ್ವೇಷಾಂ ಚಪೂರ್ವಜಃ।
ತನ್ನತಾಸ್ಸ್ಮಜಗತ್ಸ್ರಷ್ಟಃ ಸ್ರಷ್ಟೃಣಾಮವಿಶೇಷಣಂ ॥೬೧॥ ಭಗ
ವ! ಭೂತಭವ್ಯೇಶ! ಯಜ್ಞಮೂರ್ತಿ ಧರಾವ್ಯಯ ! । ಪ್ರಸೀದ
ಪ್ರಣ ತಾನಂತ್ವಂ ಸರ್ವೇಷಾಂ ದೇಹಿದರ್ಶನಂ ॥೬೨॥ ಏಷಬ್ರ
ಹ್ಮಾ ಸಹಾಸ್ಮಾಭಿ ಸ್ಸಹರುದ್ರೈ ಸ್ತ್ರಿಲೋಚನಃ । ಸರ್ವಾದಿ
ತ್ಯೈ ಸ್ಸಮಂ ಪ್ರೂಷಾ ಪಾವಕೋಯಂ ಸಹಾಗ್ನಿಭಿಃ ॥೬೪॥ ಅಶ್ವಿ

ತ್ಯವಾತಲುಪಕ್ರಮಿಸಿದರು ॥೬೦॥ ಆದೆಂತೆಂದರೆ—ಈ ಪ್ರಪಂಚಸೃಷ್ಟಿ ಗಿಂತಲೂ ಪೂರ್ವದಲ್ಲಿಯೇ ಜನಿಸಿದವನಾದಕಾರಣ ,,ಆದ್ಯ,, ನೆಂತಲೂ ಪೂಜಾರ್ಹನೆಂತಲೂ, ಪೂಜಾಸಾಧನಭೂತನೆಂತಲೂ) ಯಜ್ಞಸ್ವರೂ ಪಿಎಂತಲೂ ಪೂರ್ವಿಕರೆನಿಸಿದ ಬ್ರಹ್ಮಾದಿಗಳಿಗಿಂತಲೂ ಪೂರ್ವಿಕನೆಂತಲೂ, ನಾನಾಬಗೆಯಿಂದ ಕರೆಯಿಸಿಕೊಳ್ಳುವ ಸೃಷ್ಟಿಕರ್ತನಾದ ಈ ಚತುರ್ಮು ಖನಿಗೂ ಸೃಷ್ಟಿಕರ್ತೃವಾದ, ನಾಮರೂಪ ಮೊದಲಾದ ಯಾವವಿಶೇ ಷಣಗಳಿಗೂ ಗೋಚರಿಸದೆ ಮನಸ್ಸು, ವಾಕ್ಕು ಮೊದಲಾದ ಇಂದ್ರಿಯ ಶಕ್ತಿಗೂ ಒಳಪಡದಿರುವಕಾರಣ ಮಹಾಮಹಿಮ ಸಂಪನ್ನನೆನಿಸಿದ*ತತ್ ಶಬ್ದವಾಚ್ಯನಾದ ಪರಮಾತ್ಮನಿಗೆ ನಮಸ್ಕರಿಸುವೆವು ॥೬೧॥ ಎಲೈ ಷಡ್ಗು ಣೈಶ್ವರ್ಯಸಂಪನ್ನನೆ, ಭೂತ ಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯಾ ಧೀಶನೆ, ಯಜ್ಞಸ್ವರೂಪಿಯೆ; ವಿಕಾರರಹಿತನೆ , ನಿನ್ನನ್ನು ಮರೆಹೊ ಕ್ಕಿರುವ ನಮ್ಮಂತಪನ್ನರಾದ ನಮ್ಮಗಳ ವಿಷಯದಲ್ಲಿ ಕರುಣೆಯನ್ನು ತೋರಿ ನಮಗೆ ನಿನ್ನ ದಿವ್ಯರೂಪವಂ ತೋರುವವನಾಗು ॥೬೨॥

ಸಮಸ್ತ ದೇವತೆಗಳಿಂದೊಡಗೂಡಿದ ಈ ಚತುರ್ಮುಖನೂ, ಏ ಕಾದಶರುದ್ರರಿಂದೊಡಗೂಡಿರುವ ಈ ಮುಕ್ಕಣ್ಣನೂ (ಈಶ್ವರನೂ) ದ್ವಾದಶಾದಿತ್ಯಪರಿವೃತನಾದ ಈ ಸೂರ್ಯನೂ, ಮೂರುಅಗ್ನಿಗಳಿಂದ ಕೂಡಿ ದ ಈ ಯಜ್ಞಪುರುಷನಾದ ಅಗ್ನಿಯೂ, ಅಶ್ವಿನಿದೇವತೆಗಳು, ಅಷ್ಟವ

---

* ,, ಓಂ ತತ್ಸದಿತಿ ಶಬ್ದೋಯಂ ಬ್ರಹ್ಮಣಸ್ತ್ರಿವಿಧ ಸ್ಸ್ಮೃತಃ ॥ ಎಂಬ ಗೀ ತಾ ವಾಕ್ಯಾನುಸಾರ ಓಂ, ತತ್, ಸತ್, ಎಂಬ ಈ ಮೂರು ಶಬ್ದಗಳೂ ಪರಾತ್ಪರ ವೆನ್ನುತ್ತ ಬೋಧಕಗಳೆಂಬುದಾಗಿ ಬೋಧಿಸುತ್ತವ

ನೌ ವಸವಶ್ಚೈವ ಸರ್ವೇ ಚೈತೇವುರುದ್ಗಣಾಃ । ಸಾಧ್ಯಾ ವಿಶ್ವೇ ತಥಾದೇವಾ ದೇವೇಂದ್ರಶ್ಚಾಯವಿಶ್ವರಃ ॥೬೪॥ ಪ್ರಣಾವುಪ್ರವಣಾನಾಥ ! ದೈತ್ಯ ಸೈನ್ಯಪರಾಜಿತಾಃ । ಶರಣಂ ತ್ವಾ ವುನುಪ್ರಾಪ್ತಾ ಸೃವುಸ್ತಾ ದೇವತಾಗಣಾಃ ॥೬೫॥ ಶ್ರೀಪರಾಶರಃ ॥ ಏವಂ ಸಂಸ್ತೂಯವಾನಸ್ತು ಶಂಖ ಚಕ್ರಗದಾಧರಃ ॥ ಜಗಾವು ದರ್ಶನಂ ತೇಷಾಂ ವೈತ್ರೇಯ! ಪರವೇಶ್ವರಃ॥೬೬॥ತಂದೃಷ್ಟ್ವಾ ತೇ ತದಾ ದೇವಾ ಶ್ಚಂಖಚಕ್ರ ಗದಾಧರಂ । ಅಪೂರ್ವರೂಪಸಂಸ್ಥಾನಂ ತೇಜಸಾಂ ರಾಶಿವೂರ್ಜಿತಂ ॥೬೭॥ ಪ್ರಣವ್ಯಪ್ರಣ

ಸುಗಳು, ಇಸ್ಪು ಅನೇಕವುಂದಿ ದೇವತೆಗಳೂ, ಸಾಧ್ಯರೆನಿಸುವ ದೇವಯೋನಿವಿಶೇಷಗಳೂ ವಿಶ್ವದೇವರೆಂಬದಾಗಿ ಕರೆಯಿಸಿಕೊಳ್ಳುವ ದೇವತೆಗಳೂ ಈ ಸವುಸ್ತ ದೇವತೆಗಳಿಗೂ ಒಡೆಯ (ರಕ್ಷಕ) ನೆನಿಸಿದ ಈ ಇಂದ್ರನೂ ಇವರೆಲ್ಲರೂ ದಿತಿದೇವಿಯ ವುಕ್ಕಳಾದ ದೈತ್ಯರೆಂಬ ರಾಕ್ಷಸರೊಡನೆ ಹೋರಾಡಿ ಯುದ್ಧದಲ್ಲಿ ಅಪಜಯವಂ ಪಡೆದು ಕಂಗೆಟ್ಟು ಬೇರೊಬ್ಬ ರಕ್ಷಕನನ್ನರಿಯದೆ ಚಿಂತಾಕ್ರಾಂತರಾಗಿ ಅನನ್ಯಭಾವನೆಯಿಂದ ,, ನಿನಗಿಂತಲೂ ಆಪದ್ಬಾಂಧವನೂ ಭಕ್ತರಕ್ಷಣಧುರೀಣನೂ ಶರಣಾಗತವತ್ಸಲನೂ, ಕರುಣಾಶಾಲಿಯೂ ಕೂಡ ಬೇರೊಬ್ಬನೂ ಇಲ್ಲವೆಂಬದಾಗಿ,, ನಿನ್ನನ್ನೇ ಸವುಸ್ತರೂ ಶರಣಹೊಂದಿರುವರು ॥೬೫-೬೪-॥೬೫॥ ಪರಾಶರವುನಿಯು ಹೇಳುತ್ತಾನೆ—ಎಲೌ ವೈತ್ರೇಯನೆ; ದೇವತೆಗಳಿಂದ ಇಂತು ನಾನಾಪರಿಯಿಂದ ಸ್ತೋತ್ರವಾಡಿಸಿಕೊಂಡು ತನ್ನ ನಾಲ್ಕುತೋಳುಗಳಿಂದಲೂ, ಶಂಖ, ಚಕ್ರ, ಗದಾ, ಖಡ್ಗಗಳನ್ನು ಧರಿಸಿ ಪರವೈಶ್ವರ್ಯಶಾಲಿ ಎನಿಸಿದ ಆ ಪರವಾತ್ಮನು ಆ ದೇವತೆಗಳ ಸ್ತೋತ್ರದಿಂದ ಸಂತುಷ್ಟಾಂತರಂಗನಾಗಿ ಅವರಿಗೆ ಅನುಗ್ರಹವಂ ವಾಡಲೋಸುಗ ಅವರಿಗೆ ತನ್ನ ದಿವ್ಯರೂಪವಂ ತೋರಿದನು ॥೬೬॥ ಇಂತು ಪ್ರತ್ಯಕ್ಷನಾಗಿ ಶಂಖ, ಚಕ್ರ ಗದಾಖಡ್ಗಗಳನ್ನು ಧರಿಸಿ ಸಕಲಲೋಕವಿಲಕ್ಷಣವಾದ ದೇಹಕಾಂತಿ ಅಂಗಸೌಷ್ಠವಯುಕ್ತನಾಗಿ ಕೋಟಿಸೂರ್ಯರು ಏಕಕಾಲದಲ್ಲಿ ಉದಿಸಿರುವರೋ ಎಂಬಂತೆ ತೇಜೋರಾಶಿಯಿಂದಾವೃತನಾಗಿ ವುಂದಹಾಸಯುಕ್ತವಾದ ವುಖಕವುಲವುಳ್ಳ ಆ ಪರವಾತ್ಮನಂ ಕಂಡು ॥೬೭॥ ಸಕಲಲೋಕಗಳಿಗೂ ಪಿತಾವುಹನೆನಿಸಿದ ಚ

ತಾಃ ಪೂರ್ವಂ ಸಂತೋಷಸ್ತಿಮಿತೇಕ್ಷಣಾಃ । ತುಷ್ಟುವುಃ ಪುಂಡರೀಕಾಕ್ಷಂ ಪಿತಾಮಹಪುರೋಗಮಾಃ ॥೬೪॥ ದೇವಾಃ ॥ ನಮೋ ನಮೋ ವಿಶೇಷಸ್ತ್ವಂ ತ್ವಂ ಬ್ರಹ್ಮಾ ತ್ವಂ ಪಿನಾಕಧೃತ್ । ಇಂದ್ರಸ್ತ್ವಮಗ್ನಿಃ ಪವನೋ ವರುಣ ಸ್ಸವಿತಾಯಮಃ॥೬೫॥ ವಸವೋ ಮರುತಸ್ಸಾಧ್ಯಾ ವಿಶ್ವೇ ದೇವ ಗಣಾ ಭವಾ೯ । ಯೋಽಯಂತ ವಾಗ್ರತೋ ದೇವ । ಸನುಸ್ತೋ ದೇವತಾಗಣಃ ॥ ಸರ್ವಮೇವ ಜಗತ್ಸ್ರಷ್ಟಾ ಯತ ಸ್ಸರ್ವಗತೋ ಭವಾ೯ ॥೬೦॥ ತ್ವಂ ಯಜ್ಞಾ

ತುಮ್ಮುಖನೇ ಮೊದಲಾದ ಸಮಸ್ತದೇವಗಣವು ಅತ್ಯಂತಹರ್ಷದಿಂದ ನಿಶ್ಚಲವಾದ ಕಣ್ಣುರೆಪ್ಪೆಗಳುಳ್ಳದ್ದಾಗಿ [ಸಂತೋಷಸಾರವಶ್ಯದಿಂದ ಕಣ್ಣುರೆಪ್ಪೆಹಾಕುವುದನ್ನೂ ಸಹ ಮರೆತು ಆನಂದ ತುಂದಿಲಾಂತಃಕರಣದಿಂದೊಡಗೂಡಿ) ಆ ಪರಮೇಶ್ವರನಿಗೆ ಮೊದಲು ಸಾಷ್ಟಾಂಗನಮಸ್ಕಾರವಮಾಡಿ, ಬಳಿಕ ಕಮಲದ ಎಸಳಿನಂತೆ ವಿಶಾಲವಾಗಿಯೂ ಕಾಂತಿಯುಕ್ತವಾಗಿಯೂ ಮನೋಹರವಾಗಿಯೂ ಇರುವ ಲೋಚನಯುಗ್ಮದಿಂದೊಪ್ಪುವ ಆ ಪರಮಾತ್ಮನಂ ಈಪರಿ ಸ್ತೋತ್ರಮಾಡತೊಡಗಿದರು ॥ ದೇವತೆಗಳು ಹೇಳುತ್ತಾರೆ— ಈ ಜಗತ್ತಿನಲ್ಲಿ ಕಾಣಬರುವ ಎಲ್ಲ ಪದಾರ್ಥಗಳಿಗಿಂತಲೂ ನಿರತಿಶಯನುಹಿಮೆಯುಳ್ಳ ಪರಾತ್ಮನೆ,ನಿನಿಗೆ ನಮಸ್ಕಾರವು. ಓಜಗದೀಶನೆ , ನಿನಿಗೆ ಅನಂತನಮನಗಳು. ಈ ಲೋಕಕ್ಕೆ ಸೃಷ್ಟಿಕರ್ತೃವಾದ ಆ ಬ್ರಹ್ಮರೂಪನೂ, ಪಿನಾಕವೆಂಬ ಘೋರವಾದ ಧನುಸ್ಸನ್ನು ಧರಿಸಿ ಲಯಕಾರ್ಯಕಾರಿಯಾದ ಆ ಶಿವನೂ ನೀನೇ ಆಗಿರುವೆ. ಇಂದ್ರ ಅಗ್ನಿ, ವಾಯು, ವರುಣ ಸೂರ್ಯ, ಯಮ, ವಸುಗಳು, ಮರುತ್ತುಗಳು, ಸಾಧ್ಯರು, ವಿಶ್ವಸಂಜ್ಞಕರಾದ ದೇವತೆಗಳು ಇವರೆಲ್ಲರೂ ನಿನ್ನ ಅಂಶಲೇಶಭೂತರಾದುದರಿಂದ ಆ ಆ ದೇವತೆಗಳ ರೂಪದಿಂದಿರುವವನೂ ನೀನೇ ಆಗಿರುವೆ. ಎಲ್ಲೆ ಸರ್ವವ್ಯಾಪಕನಾದುದರಿಂದ ದೇವನೆಂಬುದಾಗಿ ಕರೆಯಲ್ಪಡುವ ಶ್ರೀ ಮಹಾವಿಷ್ಣುವೆ, ನೀನು ಸರ್ವಾತ್ಮಕನಾಗಿರುವ ಕಾರಣದಿಂದಲೇ ನಿನ್ನ ಎದುರಾಗಿ ನಿಂತಿರುವ ಈ ಸಮಸ್ತವಾದ ದೇವತಾಗಣವೂ ನಿನ್ನ ಸ್ವರೂಪವೇ ಆಗಿರುವುದು. ನೀನೇ ಅವರೆಲ್ಲರನ್ನೂ ವ್ಯಾಪಿಸಿರುವೆ. ॥೬೪-೬೦॥ ದೇವತೆಗಳ ಪೂಜಾರೂಪವಾದ ಯಜ್ಞವೂ,

ಸ್ತ್ವಂವ ಷಟ್ಕಾರ ಸ್ತ್ವಮೋಂಕಾರಃ ಪ್ರಜಾಪತಿಃ ವೇತ್ತಾ ವೇ
ದ್ಯಂಚ ಸರ್ವಾತ್ಮಕ ! ತ್ವನ್ಮಯಂ ಚಾಖಿಲಂಜಗತ್ ॥೭೧॥ ತ್ವಾ
ಮೂರ್ತಾ ಶ್ಚರಣಂ ವಿಷ್ಣೋ ! ಪ್ರಯಾತಾ ದೈತ್ಯನಿರ್ಜಿತಾಃ । ವ
ಯಂ ಪ್ರಸೀದ ಸರ್ವಾತ್ಮಕ ! ತೇಜಸಾಪ್ಯಾಯಯಸ್ವನಃ ॥೭೨॥
ತಾವದಾರ್ತಿ ಸ್ತಥಾವಾಂಛಾ ತಾವನ್ಮೋಹಸ್ತಥಾ ಸುಖಂ । ಯಾ
ವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥೭೩॥ ತ್ವಂಪ್ರಸಾ
ದಂ ಪ್ರಸನ್ನಾತ್ಮಕ ! ಪ್ರಸನ್ನಾನಾಂಕು ರುಷ್ವನಃ । ತೇಜಸಾ

ವಷಟ್ಕಾರವೂ, ಓಂಕಾರವೂ, ಪ್ರಾಣ್ಯಭಿಮಾನಿದೇವತೆಯೂ, ತಿಳಿಯತಕ್ಕ
ವನೂ, ತಿಳಿಯಲ್ಪಡತಕ್ಕ ಜ್ಞಾನಸ್ವರೂಪನೂ ಕೂಡ ನೀನೇ ಆಗಿರುವೆ.
ಎಲೈ ದೇವನೆ, ಹೆಚ್ಚಾಗಿ ಹೇಳಿ ಪಲವೇನು? ಎಲ್ಲವೂ ನಿನ್ನ ದೆಶೆಯಿಂ
ದಲೇ ಪುಟ್ಟಿ ನಿನ್ನಿಂದಲೇ ರಕ್ಷಿತವಾಗಿ ನಿನ್ನಲ್ಲಿಯೇ ಲಯಹೊಂದುವು
ದು. ಅದುದರಿಂದ ಈ ಜಗತ್ತೆಲ್ಲವೂ ನಿನಗಿಂತಲೂ ಬೇರೆಯಲ್ಲ ॥೭೦॥
ಸರ್ವ ವ್ಯಾಪಕನೆನಿಸಿದ ಶ್ರೀ ಮಹಾವಿಷ್ಣುವೆ, ನಾವು ದೈತ್ಯರೊರಡನೆ
ಯುದ್ಧದಲ್ಲಿ ಹೋರಾಡಿ ಆ ದೈತ್ಯರಿಂದ ಪರಾಜಯವಂ ಪಡೆದು ಕಂಗೆ
ಟ್ಟು ಕಳೆಗುಂದಿ ಬೇರೊಬ್ಬ ರಕ್ಷಕನನ್ನು ಕಾಣದೆ ನಿನ್ನನ್ನೇ ಮರೆ
ಹೊಕ್ಕಿರುವೆವು. ಇಂತಹ ನಮ್ಮನ್ನು ನೀನೀಗ ಕೈಬಿಟ್ಟರೆ ನಮಗೆ ಗತಿ
ಯಾರು? ಸರ್ವಪ್ರಕಾರದಿಂದಲೂ ನಮ್ಮ ವಿಷಯದಲ್ಲಿ ನಿನ್ನ ಕೃಪಾಕಟಾ
ಕ್ಷವಂ ಬೀರಿ ಸೌಮ್ಯವಾದ ನಿನ್ನದೃಷ್ಟಿಕಡೆಗಣ್ಣೋಟದಿಂದ (ನಿನ್ನ ಪರಾಕ್ರ
ಮ ಅಥವ ಬಾಹುಬಲದಿಂದ) ನಮ್ಮನ್ನು ತೃಪ್ತಿಗೊಳಿಸಿ ಕಾಪಾಡು॥೭೨॥
ಓ ಮಹಾನುಭಾವನೆ, ಯಾವ ಪ್ರಾಣಿಯಾದರೆ ಎದುವರೆಗೂ ನಿನ್ನಚ
ರಣಾರವಿಂದದಲ್ಲಿ ಏಕಾನ್ತಭಕ್ತಿಯುಕ್ತವಾಗಿ ಅನನ್ಯಭಾವನೆಯಿಂದ
ನಿನ್ನನ್ನು ಮರೆಹೋಗುವುದಿಲ್ಲವೋ ಅದುವರೆಗೂ ಸಂಕಟಗಳಿಗೆ ಗುರಿ
ಯಾಗಿ ಲೋಭ, ಅಕ್ಕಾಶೆಮೊದಲಾದುವುಗಳಿಗೆ ಮುಖ್ಯಸ್ಥಾನನೆನಿಸಿ ಮೋ
ಹರೂಪವಾದ ಅಜ್ಞಾನಪಾಶಕ್ಕೆ ಸಿಲುಕಿ ನರಳಾಡುತ್ತಾ ಅನೇಕ ತೊಂ
ದರೆಗಳನ್ನನುಭವಿಸುತ್ತಾ ಬಣ್ಣಿಸಲಸದಳವಾದ ದುಃಖಪರಂಪರೆಗಳನ್ನ
ನುಭವಿಸುವನು. ದುರಿತಾಪಹಾರಕನಾದ ನಿನ್ನ ಚರಣಕಮಲದಲ್ಲಿ ಅದೇ
ಪ್ರಾಣಿಯು ಭಕ್ತಿಯುಕ್ತನಾದೊಡೆ ಆತನಿಗೆ ಈ ಮೇಲೆಹೇಳಿದ ಯಾವ

ನಾಥ ! ಸರ್ವೇಷಾಂ ಸ್ವಶಕ್ತ್ಯಾಪ್ಯಾಯನಂ ಕುರು ॥೭೪॥ ಶ್ರೀಪ
ರಾಶರಃ ॥ ಏವಂ ಸಂಸ್ತೂಯಮಾನಸ್ತು ಪ್ರಣತೈ ರಮರೈರ್ಹರಿಃ।
ಪ್ರಸನ್ನದೃಷ್ಟಿ ರ್ಭಗವಾ ನಿದಮಾಹ ಸವಿಶ್ವಕೃತ್ ॥೭೫॥ ತೇಜ
ಸೋ ಭವತಾಂ ದೇವಾಃ ! ಕರಿಷ್ಯಾಮ್ಯುಪ ಬೃಂಹಣಂ । ವದಾ
ಮ್ಯಹಂ ಯತ್ಕ್ರಿಯತಾಂ ಭವದ್ಭಿಸ್ತದಿದಂ ಸುರಾಃ! ॥೭೬॥ ಅನೀ
ಯ್ಯ ಸಹಿತಾ ದೈತ್ಯೈಃ ಕ್ಷೀರಾಬ್ಧೌ ಸಕಲೌಷಧೀಃ । ಮಂಥಾ
ನಂ ಮಂದರಂ ಕೃತ್ವಾ ಯೋಕ್ತ್ರಂ ಕೃತ್ವಾಚವಾಸುಕಿಂ ॥೭೭॥

ತೊಂದರೆಗಳೂ ಸಂಭವಿಸಲಾರವು ॥೭೪॥

ಎಲೌ ಒಡೆಯನೆ, ಇಂತು ಶರಣಾಗತರಾದ ನಮ್ಮ ಪ್ರಾರ್ಥನೆ
ಯಂ ಲಾಲಿಸಿ ನಿನ್ನ ಅದ್ಭುತವಾದ ಶಕ್ತಿಯಿಂದ ನಮ್ಮೆಲ್ಲರಿಗೂ ಸುಖವ
ನ್ನುಂಟುಮಾಡಿ ನಮ್ಮನ್ನು ಸಲಹು ಪರಾಶರನು ಹೇಳುತ್ತಾನೆ—ಇಂತು
ಮಹಾನುಭಾವಶಾಲಿಯಾದ ಷಡ್ಗುಣೈಶ್ವರ್ಯಸಂಪನ್ನನೆನಿಸಿ ಭಕ್ತದುರಿ
ತಾಪಹಾರಕನಾದ ಆ ಪರಮಾತ್ಮನು, ದೇವತೆಗಳು ಮೊರೆಯಿಡುವು
ದಂ ಕಂಡು ದಯಾರ್ದ್ರಹೃದಯನಾಗಿ ಆ ದೇವತೆಗಳ ಮೇಲೆ ಮಂದ
ಹಾಸಯುಕ್ತವಾದ ಕಟಾಕ್ಷವಂ ಬೀರುತ್ತಾ ಅವರಂ ಕುರಿತು ಇಂತೆಂದ
ನು ॥೭೫॥ ಓ ದೇವತೆಗಳಿರಾ ! ನೀವು ಈ ವಿಷಯದಲ್ಲಿ ಇಷ್ಟೊಂದು
ವ್ಯಥೆಪಡಬೇಕಾದುದಿಲ್ಲ. ನಿಮ್ಮ ಶಕ್ತಿಯನ್ನು ನಾನು ಮತ್ತಷ್ಟು ಹೆಚ್ಚಿ
ಸುವೆನು ಇದಕ್ಕಾಗಿ ನಾನು ನಿಮಗೊಂದುಪಾಯವಂ ಹೇಳುವೆನು. ಅದ
ನ್ನು ನೀವೆಲ್ಲರೂ ಬಂದೇ ಮನಸ್ಸಿನಿಂದ ನೆರವೇರಿಸುವವರಾಗಿರಿ. ॥೭೬॥
ನೀವು ಈಗ ಆ ದೈತ್ಯರೊಡನೆಯೇ ಸೇರಿಸಿಕೊಂಡು ವಿಚಿತ್ರಶಕ್ತಿಯುಕ್ತ
ಗಳಾದ ನಾನಾಬಗೆಗಳಾದ ಓಷಧಿಗಳನ್ನು ಸಂಪಾದಿಸಿ ಅವುಗಳನ್ನು ಕ್ಷೀರ
ಸಮುದ್ರದಲ್ಲಿ ಎಸೆದು ಮಂದರಪರ್ವತವಂ ಕಡೆಗೋಲನ್ನಾಗಿ ಮಾಡಿ
ವಾಸುಕಿ ಎಂಬ ಸರ್ಪರಾಜನನ್ನು ಹಗ್ಗವನ್ನಾಗಿ ಮಾಡಿಕೊಂಡು
ಕ್ಷೀರಸಮುದ್ರದಲ್ಲಿರುವ ಅಮೃತವಂ ಸಂಪಾದಿಸಲೋಸುಗ ಆ ಕ್ಷೀರಸ
ಮುದ್ರವಂ ಮಥನಮಾಡಲುಪಕ್ರಮಿಸಿರಿ. ಈ ಸಂದರ್ಭದಲ್ಲಿ ನಾನು
ನಿಮ್ಮ ಕಡೆನಿಂತು ನಿಮಗೆ ಬೇಕಾದ ಎಲ್ಲ ಸಲಕರಣಿಗಳನ್ನೂ ಒದಗಿಸಿ
ಕೊಟ್ಟು ಬೇಕಾದ ಸಹಾಯವಂ ಮಾಡುವೆನು ॥೭೭-೭೮॥ ಈ ದೈತ್ಯರು

ಮಥ್ಯತಾಮಮೃತಂದೇವಾ ಸ್ಸಹಾಯೇ ಮಯ್ಯವಸ್ಥಿತೇ ॥೬೪॥
ಸಾಮಪೂರ್ವಂಚ ದೈತ್ಯೇಯಾ ಸ್ತತ್ರಸಾಮಾನ್ಯಕರ್ಮಣಿ । ಸಾಮಾ
ನ್ಯಫಲಭೋಕ್ತಾರೋ ಯೂಯಂ ವಾಚ್ಯಾ ಭವಿಷ್ಯಥ ॥೬೫॥
ಮಥ್ಯಮಾನೇಚ ತತ್ರಾಬ್ಧೌ ಯತ್ಸಮುತ್ಪದ್ಯತೇಽಮೃತಂ । ತತ್ರಾ
ನಾದ್ಬಲಿನೋಯೂಯ ಮಮರಾಶ್ಚ ಭವಿಷ್ಯಥ ॥೬೬॥ ತಥಾಚಾ
ಹಂ ಕರಿಷ್ಯಾಮಿ ತೇ ಯಥಾ ತ್ರಿದಶ ದ್ವಿಷಃ । ನಪ್ರಾಪ್ಸ್ಯಂತ್ಯ
ಮೃತಂ ದೇವಾಃ ! ಕೇವಲಂ ಕ್ಲೇಶ ಭಾಗಿನಃ ॥೬೭॥ ಶ್ರೀಪರಾ
ಶರಃ ॥ ಇತ್ಯುಕ್ತಾ ದೇವದೇವೇನ ಸರ್ವಏವ ತತಸ್ಸುರಾಃ ।

ರೆಂಬ ಶತ್ರುಗಳನ್ನು ನಾವು ಉಪಾಯದಿಂದ ಗೆಲ್ಲಬೇಕಲ್ಲದೆ ಸಾಹಸ ಮಾಡಿ ಫಲವಿಲ್ಲ ಇಂತು ದೈತ್ಯರೂ ನೀವೂ ಕೂಡಿ ಸಮುದ್ರಮಥನಮಾಡುವ ಕಾಲದಲ್ಲಿ ನೀವು ಸಾಮಾನ್ಯವಾದ ಯತ್ಕಿಂಚಿತ್ ಫಲಪ್ರಾಪ್ತಿಯಲ್ಲಿ ಆ ಸಕ್ತರಾಗಿ ದೃಢವಾಗಿ ನನ್ನಮೃತಂ ನಂಬದೆ ಅನಾದರಣೆಮಾಡಿದಲ್ಲಿ ಬಹಳವಾಗಿ ಸಂಕಟಗಳಿಗೆ ಈಡಾಗಿ ಅಪವಾದಕ್ಕೂ ಕೂಡ ಗುರಿಯಾಗುವಿರಿ. ಆದುದರಿಂದ ನೀವು ಸಾಮಾನ್ಯವಾದ ಫಲಪ್ರಾಪ್ತಿಯಿಂದ ತೃಪ್ತರಾಗದೆ ಹಿಡಿದ ಕಾರ್ಯವನ್ನು ಕೊನೆಗಾಣಿಸಬೇಕು ॥೬೯॥ ಇಂತು ನೀವು ನನ್ನ ಮಾತನ್ನು ದೃಢವಾಗಿ ನಂಬಿ ಕ್ಷೀರಸಮುದ್ರವಂ ಮಥನಮಾಡಿದೊಡೆ ಆ ಕ್ಷೀರಸಮುದ್ರದಿಂದ ಅಮೃತವು ಉದ್ಭವಿಸುವುದು. ಇಂತಹ ಅಮೃತವಂ ಆಸ್ವಾದನಮಾಡುವುದರಿಂದ ಮಹಾಬಲಿಷ್ಠರೂ, ಧೈರ್ಯಶಾಲಿಗಳೂ ಸಾವಿಲ್ಲದವರೂ ಆಗುವಿರಿ ॥೭೦॥ ಆದರೆ ನಿಮ್ಮೊಡನೆ ಮಥನಮಾಡುವುದಕ್ಕೆ ನಮಿಗೆ ಸಹಕಾರಿಗಳಾದ ದೈತ್ಯರಿಗೂ ಕೂಡ ಇಂತೆಯೇ ಅಮೃತವಂ ನಾನೆಂದಿಗೂ ಕೊಡುವವನಲ್ಲ. ಓ ದೇವತೆಗಳಿರಾ, ಅವರು ನಿಮ್ಮೊಡನೆ ಕಷ್ಟಪಟ್ಟು ಹೇಗಾದರೆ ವಿಫಲಪ್ರಯತ್ನರಾಗಿ ಕೊನೆಗೂ ಅಮೃತವಂ ಪಡೆಯದೆ ಶ್ರಮಮಾತ್ರವನ್ನನುಭವಿಸುವರೋ ಹಾಗೆ ಅವರಿಗೆ ನಾನು ಕ್ಲೇಶವನ್ನುಂಟುಮಾಡಿ ಸಂಕಟಪಡಿಸುವೆನೆಂದೂ ಹೊರತು ಅವರಿಗೆ ಬಂದುತೊಟ್ಟು ಅಮೃತವೂ ಕೂಡ ದೊರೆಯುವಹಾಗೆ ಮಾಡುವುದಿಲ್ಲ (ನೀವು ಅನುಭವಿಸುವ ಕಷ್ಟದಲ್ಲಿ ಮಾತ್ರ ಅವರು ನಿಮಿಗೆ ಭಾಗಿಗಳಾಗಿರುವರೇ ಹೊರತು ನೀವು ಆಸ್ವಾದನಮಾಡ

ಸಂಧಾನಮು ಸುರೈಃಕೃತ್ವಾ ಯತ್ನವಂತೋಽಮೃತೇಭವ॥ ೪॥
ನಾನಾಷಧೀ ಸ್ಸಮಾನೀಯ ದೇವದೈತೇಯದಾನವಾಃ। ಕ್ಷಿಪಾ ವ
ಕ್ಷೀರಾಬ್ಧಿಪಯಸಿ ಶರದಭ್ರಾಮಲತ್ವಿಷಿ॥೪॥ ಮಂಥಾನಂ ಮಂದ
ರಂ ಕೃತ್ವಾ ಯೋಕ್ತ್ರಂ ಕೃತ್ವಾಚ ವಾಸುಕಿಂ। ತತೋವ.ಥಿತುಮಾ
ರಬ್ಧಾ ವೈತ್ರೇಯ। ತರಸಾಽಮೃತಂ॥೪॥ ವಿಬುಧಾಸ್ಸಹಿತಾಸ್ಸ
ರ್ವೇ ಯತಃ ಪುಚ್ಛಂ ತತಃ ಕೃತಾಃ। ಕೃಷ್ಣೇನ ವಾಸುಕೇರ್ದೈ
ತ್ಯಾಃ ಪೂರ್ವಕಾಯೇ ನಿವೇಶಿತಾಃ॥೪॥ ತೇ ತಸ್ಯಮುಖನಿಶ್ವಾ

ಹೋಗುವ ಅಮೃತದಲ್ಲಿ ಅವರಿಗೆ ಭಾಗವಿಲ್ಲದಂತೆ ಮಾಡುವೆನೆಂಬದಾಗಿಭಾ
ವವು)॥೪॥ಪರಾಶರಮುನಿಯು ಹೇಳುತ್ತಾನೆ-ಇಂತುದೇವದೇವನಿಸಿದ
ಆ ಮಹಾ ವಿಷ್ಣುವು ಹೇಳಿದ.ದಂ ಕೇಳಿ ಆ ದೇವತೆಗಳು ಪರಮಾನಂದ
ತುಂದಿಲಾಂತರಂಗರಾಗಿ ಉಪಾಯದಿಂದ ತಮ್ಮ ಹಗೆಗಳಾದ ದೈತ್ಯರೊಡನೆ
ಸಂಧಿಮಾಡಿಕೊಂಡು ಅವರನ್ನು ಕ್ಷೀರಸಮುದ್ರಮಥನದಲ್ಲಿ ಪ್ರೋತ್ಸಾ
ಹಿಸಿ, ನಾನಾಬಗೆಗಳಾದ ಓಷಧಿಗಳಂ ತಂದು ಆ ಕ್ಷೀರಸಮುದ್ರದಲ್ಲಿ
ಹಾಕಿ ಅದನ್ನು ಮಥನಮಾಡಲು ಅನರೊಡನೆ ತಾವೂ ಸನ್ನದ್ಧರಾದರು. ॥
ಇಂತು ಸನ್ನದ್ಧರಾದ ಆ ದೇವತೆಗಳೂ, ದಿತಿದೇವಿಯ ಮಕ್ಕಳಾದ ದೈ
ತ್ಯರೂ, ದನುಪುತ್ರರಾದ ದಾನವರೂ ಕೂಡ ನಾನಾಬಗೆಗಳಾದ ಓಷಧಿಗ
ಳಂ ತಂದು ಶರತ್ಕಾಲದ ಮೋಡದಂತೆ ಬಿಳಿದಾಗಿ ನಿರ್ಮಲವಾಗಿರುವ ಉ
ದಕದಿಂದ ಕಂಗೊಳಿಸುತ್ತಿರುವ ಕ್ಷೀರಸಮುದ್ರದಲ್ಲಿ ಆ ಓಷಧಿಗಳಂ
ಹಾಕಿ॥೪॥ ಮಂದರ ಪರ್ವತವಂ ಕಡೆಗೋಲನ್ನಾಗಿ ಮಾಡಿ ಸರ್ಪರಾಜ
ನೆನಿಸಿದ ವಾಸುಕಿಯಂ ಕಡೆಯುವ ಹಗ್ಗವನ್ನಾಗಿ ಮಾಡಿಕೊಂಡು ಅ
ತಿತ್ವರೆಯಿಂದೊಡಗೂಡಿ ಆದರಾತಿಶಯದಿಂದ ಮಥನಮಾಡತೊಡಗಿದ
ರು॥೪॥ ಆ ಬಳಿಕ ಭಕ್ತದಯಾಪರನಾದ ಶ್ರೀ ಪರಮಾತ್ಮನು ದೇವ
ತೆಗಳೆಲ್ಲರನ್ನೂ ಬಾಲದ ಕಡೆ ಹಿಡಿದುಕೊಂಡು ಕಡೆವಂತೆ ಹೇಳಿ ಆರಾಹ್ಷ
ಸರಂ ಹೆಡೆ (ತಲೆ)ಯ ಕಡೆ ಹಿಡಿದುಕೊಳ್ಳುವಂತೆ ಮಾಡಿದನು, ಈ ಕೃತ್ರಿ
ಮವನ್ನರಿಯದೆ, ಕೇವಲ ತಾಮಸಸ್ವಭಾವಯುಕ್ತರಾದ ಆ ದೈತ್ಯದಾನ
ವರು ಆ ವಾಸುಕಿಯ ತಲೆಯಕಡೆಯೇ ಹಿಡಿದುಕೊಂಡು ಬಲವಾಗಿ ವೇಗ
ದಿಂದ ಕಡೆಯಲಾರಂಭಿಸಿದರು॥೪॥ ಇಂತು ಮಥನಮಾಡುವ ಕಾಲ

ಸ ವಹ್ನಿರೋಪಹತತ್ವಿಷಃ । ನಿಸ್ತೇಜಸೋಽಸುರಾಸ್ಸರ್ವೇಬಭೂ
ವು ರವಿತೌಜಸಃ ॥೪೬॥ ತೇನೈವ ಮುಖನಿಶ್ವಾಸವಾಯುನಾ ಸ್ತಾ
ಬಲಾಹಕೈಃ । ಪುಚ್ಛಪ್ರದೇಶೇ ವರ್ಷದ್ಭಿ ಸ್ತಥಾಚಾಪ್ಯಾಯಿತಾ
ಸ್ಸುರಾಃ ॥೪೭॥ ಕ್ಷೀರೋದಮಧ್ಯೇ ಭಗವಾ ಕೂರ್ಮರೂಪೀ
ಸ್ವಯಂಹರಿಃ । ಮಂದರಾದ್ರೇ ರಧಿಷ್ಠಾನಂ ಭ್ರಮತೋಭೂನ್ಮ
ಹಾಮುನೆ ! ॥೪೮॥ ರೂಪೇಣಾನ್ಯೇನ ದೇವಾನಾಂ ಮಧ್ಯೇ

ದಲ್ಲಿ ಎರಡು ಕಡೆಗಳಲ್ಲಿಯೂ ದೇವದಾನವರು ಬಲಾತ್ಕಾರದಿಂದ ದೃಢವಾಗಿ ಸೆಳೆಯುವಿಕೆಯಿಂದಲೂ, ಮತ್ತು ಆಪರ್ವತದಲ್ಲಿರುವ ಹಳ್ಳತಿಟ್ಟಗಳಲ್ಲಿ ಕಲ್ಲುಗಳು ಒತ್ತುವಿಕೆಯಿಂದಲೂ ಕೂಡ ಈ ಬಾಧೆಯಂ ಸಹಿಸಲಾರದ ಆ ವಾಸುಕಿಯು ವಿಷವನ್ನುಕಾರಲು ಪ್ರಾರಂಭಿಸಿತು. ಈ ವಿಷವಾಯುವಿನ ಪ್ರಸರಣೆಯಿಂದ ರಾಕ್ಷಸರೆಲ್ಲರೂ ಮೂರ್ಛೆಹೊಂದಿ, ಜ್ವರೋಪತಾಪಯುಕ್ತರಾಗಿ ತಮ್ಮಲ್ಲಿದ್ದ ಶಕ್ತಿಯಂ ಹೋಗಲಾಡಿಸಿಕೊಂಡು ಬಳಲಿಹೋದರು. ॥೪೬॥ ಆ ಬಳಿಕ ಅದೇ ವಾಸುಕಿಯ ಶ್ವಾಸರೂಪವಾದ ಗಾಳಿಯಿಂದ ದೇವತೆಗಳ ಕಡೆಗೆ ತಳ್ಳಲ್ಪಟ್ಟ ಮೋಡಗಳೆಲ್ಲವೂ ಆ ವಾಸುಕಿಯ ಬಾಲದ ಕಡೆ ನುಳಿ ಸುರಿಸಲಾರಂಭಿಸಿದುವು. ಆಗ ದೇವತೆಗಳು ಸ್ವಲ್ಪಸ್ವಲ್ಪವಾಗಿ ಆ ವಿಷಜ್ವಾಲೆಯಿಂದ ಪೀಡಿತರಾಗಿದ್ದರೂ ಕೂಡ ಬಾಲದ ಕಡೆ ಮಾತ್ರ ಮೇಘಗಳು ಮಳೆಸುರಿಸುತ್ತಿದ್ದ ಕಾರಣ ಅವರಿಗೆ ಹಿತಕರವಾಗಿದ್ದಿತೇ ಹೊರತು ದುಃಖಕರವಾಗಿರಲಿಲ್ಲ ॥ ೪೭॥ ಇಂತು ದೇವದಾನವರು ಮಥನ ಮಾಡುತ್ತಿದ್ದ ಕಾಲದಲ್ಲಿ ಆ ಮಂದರಾಚಲವು ಭಾರವಾಗಿದ್ದ ಕಾರಣ ಆಕ್ಷೀರಸಮುದ್ರದಲ್ಲಿ ನಿಲ್ಲಲಾರದೆ ಪಾತಾಳ ಲೋಕದವರೆಗೂ ಕೆಳಕ್ಕೆ ಹೋಯಿತು. ಆಕಾಲದಲ್ಲಿ ಈ ಹರಿಯು ಕೂರ್ಮಾವತಾರಮಾಡಿ ಮಂದರ ಪರ್ವತದ ಕೆಳಭಾಗವನ್ನು ಕಠಿಣತರವಾದ ತನ್ನ ಬೆನ್ನಿನ ಮೇಲ್ಭಾಗದಲ್ಲಿ ಧರಿಸಿ, ದೇವದಾನವರು ಮಥನಮಾಡುವಂತೆ ಅವರಿಗೆ ಅನುಕೂಲಮಾಡಿಕೊಟ್ಟನು ॥೪೮॥ ಎಲೌ ಮಹಾಮುನಿ ಎನಿಸಿದ ಮೈತ್ರೇಯನೆ ; ಅಬಳಿಕ, ಶಂಖ ಚಕ್ರ, ಗದಾ ಧಾರಿಯಾದ ಈ ಮಹಾವಿಷ್ಣುವು ದೇವತೆಗಳ ಗುಂಪಿನಲ್ಲಿಯೂ, ದಾನವರ ಗುಂಪಿನಲ್ಲಿಯೂ ಕೂಡ ಏಕ ಕಾಲದಲ್ಲಿಯೇ ಸಹಾಯವಾಗಿ ನಿಂತು, ಅವರೊಡನೆ, ತಾನೂ

ಚಕ್ರಗದಾಧರಃ । ಚಕರ್ಷನಾಗರಾಜಾನಂ ದೈತ್ಯಮಧ್ಯೇಽಪರೇಣ
ಚ ॥೪೯॥ ಉಪರ್ಯಾಕ್ರಾಂತವಾ ಶೈಲಂ ಬೃಹದ್ರೂಪೇಣ ಕೇ
ಶವಃ । ತಥಾಪರೇಣ ಮೈತ್ರೇಯ ! ಯನ್ನಿದೃಷ್ಟಂ ಸುರಾಸು
ರೈಃ ॥೯೦॥ ತೇಜಸಾನಾಗರಾಜಾನಂ ತಥಾಽಽಪ್ಯಾಯಿತವಾ ಹ
ರಿಃ ।ಅನ್ಯೇನ ತೇಜಸಾ ದೇವಾನುಪ ಬೃಂಹಿತವಾ ಪ್ರಭುಃ॥೯೧
ಮಥ್ಯಮಾನೇ ತತಸ್ತ್ಸ್ಮಿ ಕ್ಷೀರಾಬ್ಧೌ ದೇವದಾನವೈಃ । ಹವಿ

ಮಂದರ ಪರ್ವತವನ್ನು ಹಿಡಿದು ಮಥನಮಾಡತೊಡಗಿದನು. (ತಾನು ದೇವತೆಗಳಿಗೆ ಮಾತ್ರ ಸಹಾಯ ಮಾಡಿದರೆ ದಾನವರೂ, ದಾನವರಿಗೆ ಸಹಾಯಮಾಡಿದರೆ ದೇವತೆಗಳೂ ಸಹಾಯಶೂನ್ಯರಾಗುವರೆಂಬ ಭಾವದಿಂದ ಎರಡು ರೂಪಗಳನ್ನು ಧರಿಸಿ, ಮುಖ್ಯವಾಗಿ ದೇವತೆಗಳಿಗೇನೇ ವಿಶೇಷ ಸಹಾಯಮಾಡುವ ಉದ್ದೇಶದಿಂದ ಈ ಪರಿಮಾಡಿದನೆಂತಲೂ, ದೇವತೆಗಳ ಪರವಾಗಿಯೇ ಈತನು ಸಹಾಯವಾಗಿದ್ದರೂ, ದಾನವರಿಗೆ ತನ್ನಮೇಲೆ ಅನುಗ್ರಹಲುಂಟಾಗದಿರುವುದಕ್ಕೂ ಕೂಡ ಈರೀತಿಮಾಡಿದನೆಂತಲೂ ನಾನಾಪರಿಯಿಂದ ಹೇಳುವರು) ॥೪೯॥ ಬಳಿಕ ಮತ್ತೊಂದು ರೂಪವಂ ಧರಿಸಿ ಆ ದೇವದಾನವರಿಗೆ ತಿಳಿಯದಂತೆಯೇ ಆ ಮಂದರಾಚಲವಂ ನೀರಿನಲ್ಲಿ ಮುಳುಗದ ಹಾಗೆ ಮೇಲಕ್ಕೆ ಧರಿಸಿದ್ದನು. ಎಲೌ ಮೈತ್ರೇಯನೆ ; ಇಂತು ಆ ಭಗವಂತನು ದೇವದಾನವರಿಬ್ಬರಿಗೂ ಗೋಚರಿಸದ ಮಹತ್ತರವಾದ ಬಂದುರೂಪದಿಂದ ಆ ಮಂದರಗಿರಿಯಂ ಧರಿಸಿದುದು ಮಾತ್ರವಲ್ಲದೆ ಇನ್ನೂ ಅನೇಕ ಅದ್ಭುತಕಾರ್ಯಗಳನ್ನೂ ಸಹ ಮಾಡಿದನು. ಅದನ್ನು ನಿನಗೀಗವಿವರಿಸುವೆನು ॥೯೦॥ ಮಥನಕಾಲದಲ್ಲಿ ದೇವದಾನವರಿಬ್ಬರೂ ಎರಡು ಕಡೆಯಲ್ಲಿ ಹಿಡಿದು ಬಲಾತ್ಕಾರವಾಗಿ ಸೆಳೆಯೋಣದರಿಂದ ಆ ವಾಸುಕಿಗೆ ಬಹಳ ಆಯಾಸವಾಗಬಹುದೆಂದೆಣಿಸಿ ತನ್ನ ತೇಜಸ್ಸಿನಲ್ಲಿ ಒಂದಂಶವನ್ನು ಆ ವಾಸುಕಿಯಲ್ಲಿಟ್ಟು ಎಷ್ಟು ಬಲವಾಗಿ ಸೆಳೆದರೂ ಅದಕ್ಕೆ ಆಯಾಸವೇ ಆಗದಂತೆ ಅದಕ್ಕೆ ಆ ಪ್ಯಾಯನಮಾಡಿದನು. ತನ್ನ ತೇಜಸ್ಸಿನ ಮತ್ತೊಂದು ಅಂಶದಿಂದ ದೇವತೆಗಳಿಗೆ ಬಳಲಿಕೆಯುಂಟಾಗದಂತೆ ಅವರ ಶಕ್ತಿಯನ್ನು ಮತ್ತಷ್ಟು ಹೆಚ್ಚುವಂತೆ ಮಾಡಿ ಅವರಿಗೆ ಉತ್ಸಾಹವನ್ನೂ ಕೂಡ ಬಹಳವಾಗಿ ವೃದ್ಧಿಪಡಿಸಿದನು ॥೯೧॥ ಇಂತು ದೇವ

ರ್ಧಾವಾಪ್ಲವತ್ಪೂರ್ವಂ ಸುರಭಿ ಸ್ಸುರಪೂಜಿತಾ ॥೯॥ ಜಗೃ
ಹ್ಯುದಂತದಾದೇವಾ ದಾನವಾಶ್ಚ ಮಹಾಮುನೆ! । ವ್ಯಾಪ್ತಿಪ್ತಜೀ
ತಸಶ್ಚೈವ ಬಭೂವುಸ್ತಮಿತೇಕ್ಷಣಾಃ ॥೯॥ ಕಿಮೇತದಿತಿ ಸಂ
ದ್ಧಾನಾಂ ದಿವಿ ಚಿಂತಯತಾಂ ತತಃ। ಬಭೂವ ವಾರುಣೀ ದೇವೀ
ಮದ ಘೂರ್ಣಿತ ಲೋಚನಾ ॥೯॥ ಕೃತಾವರ್ತಾ ತ್ತತಸ್ತಸ್ಮಾ
ತ್ ಕ್ಷೀರೋದಾ ದ್ವಾಸಯಂ ಜಗತ್ । ಗಂಧೇನಪಾರಿಜಾತೋ

ದಾನವರು ಅತ್ಯಂತೋತ್ಸಾಹದಿಂದ ಕೂಡಿ ಆ ಕ್ಷೀರಾಬ್ಧಿಯಂ ಮಥನ
ಮಾಡುತಿರಲು, ಹವಿಸ್ಸುಗಳನಿಸುವ ಹಾಲು, ವೊಸರು, ತುಪ್ಪ ವೊದ
ಲಾದ ಶ್ರೇಷ್ಠ ಪದಾರ್ಥಗಳಿಗೆ ಆಶ್ರಯವೆನಿಸಿ, ಸಕಲ ದೇವತೆಗಳಿಂದ
ಲೂ ಪೂಜನೀಯವಾದ ಕಾಮಧೇನುವು ಮಟ್ಟವೊದಲು ಅಸಮುದ್ರ
ದಿಂದುದಯಿಸಿತು ॥೯॥ ಇಂತು ಉದಿಸಿದ ಆಸುರಭಿಯಂ ಕಂಡು ದೇ
ವದಾನವರು ಪರಮಾನಂದ ಭರಿತರಾಗಿ, ಬಹಳವಾಗಿ ಆಶ್ಚರ್ಯಗೊಂಡವರಾ
ದರು. ಅಯ್ಯಾಮುನಿಶ್ರೇಷ್ಠರಲ್ಲಿ ಅಗ್ರಗಣ್ಯನೆನಿಸಿದ ಮೈತ್ರೇಯನೆ ; ಇಂ
ತು ಕಾಮಧೇನುವು ಉದಯಿಸಲು ಅವರ ಸಂತೋಷಾಶ್ಚರ್ಯಗಳಿಗೆ ಪಾರ
ವೇ ಇಲ್ಲ. ಅದರ ದಿವ್ಯರೂಪವಂ ಕಂಡು, ಇವರಿಗೆ ಮೈಮೇಲೆ ಸ ರ
ನೆತಪ್ಪಿದ್ದು ಮಾತ್ರವಲ್ಲದೆ, ಅದನ್ನೇ ನೋಡಿ ನೋಡಿ ಕಂಣುರೆಪ್ಪೆಹಾ
ಕುವುದನ್ನೂ ಕೂಡ ಮರೆತು ಸ್ತಬ್ಧರಾಗಿ ಎಲ್ಲಿನವರು ಅಲ್ಲಲ್ಲಿಯೇ ಸು
ಮ್ಮನೆ ಏನೂ ತೋರದೆ ನಿಂತುಕೊಂಡರು ॥೯॥ ಈ ಆಶ್ಚರ್ಯವೆಲ್ಲವಂ
ಕಂಡು ಅಂತರಿಕ್ಷದಲ್ಲಿದ್ದ ಸಿದ್ಧಪುರುಷರೆಲ್ಲರೂ ಇದರ ಸ್ವರೂಪವಂ ತಿಳಿ
ಯಲೋಸುಗ ನಾನಾಪರಿಯಿಂದ ಯೋಚಿಸುತ್ತಿರಲು ಆಸಮುದ್ರದಿಂದ
ನೀರಿನ ಸುಳಿಗಳ ಮಾರ್ಗವಾಗಿ, ಮದಯುಕ್ತಳೆನಿಸಿ ಮನೋಹರವಾಗಿ
ಯೂ, ವಿಶಾಲವಾಗಿಯೂ ಇರುವ ಕಡೆಗಣ್ಣೋಟದಿಂದೊಪ್ಪುವ ಲ
ಕ್ಷ್ಮೀದೇವಿಯು ಹೊರಗೆ ಬಂದಳು. ಈ ಲಕ್ಷ್ಮಿಯು ಹುಟ್ಟುತಲೇ
ಮದಯುಕ್ತಳಾಗಿಯೇ ಜನಿಸಿದಳಾದುದರಿಂದಲೇ ಈಗಲೂ ಈಕೆಯ್ಯು
ಯಾರಲ್ಲಿದ್ದರೂ ಅವರೆಲ್ಲರೂ ಮದಯುಕ್ತರಾಗಿಯೇ ಇರುವರು. ಇಂತು
ಲಕ್ಷ್ಮೀವಂತರು ಮದಯುಕ್ತರಾಗಿರುವಿಕೆಯು ಈಕೆಯಗುಣವಲ್ಲದೆ
ಆ ಐಶ್ವರ್ಯವಂತರ ದೋಷವಲ್ಲ. ॥೯॥ ಆ ಬಳಿಕ ಆ ಕ್ಷೀರಸಮು

ಭೂದ್ದೇಸಸ್ತ್ರೀನಂದನ ಸ್ತೈರುಃ ॥೯೫॥ ರೂಪೌದಾರ್ಯ ಗುಣೋ
ಪೇತಸ್ತ ತಶ್ಚಾಪ್ಸರಸಾಂಗಣಃ । ಕ್ಷೀರೋದಧೇ ಸ್ಸಮುತ್ಪನ್ನೋ
ಮೈತ್ರೇಯ ಪರಮಾದ್ಭುತಃ ॥೯೬॥ ತತಶ್ಚೀತಾಂಶು ರಭವ ಜ್ಜಗ
ಹೇತಂ ಮಹೇಶ್ವರಃ ॥ ಜಗೃಹುಶ್ಚ ವಿಷಂನಾಗಾಃ ಕ್ಷೀರೋದಾದ್ಧಿ
ಸಮುದ್ಭವಂ ॥೯೭॥ ತತೋ ಧನ್ವಂತರಿರ್ದೇವ ಶ್ಚೀತಾಂಬರೆ

ದ್ರದಿಂದ ಪಾರಿಜಾತವೃಕ್ಷವು ಜಲಮಧ್ಯದಿಂದ ಹೊರಗೆ ಕಾಣಿಸಿತು. ಇದರ ಸುಗಂಧವು ಲೋಕತ್ರಯವನ್ನೂ ಆವರಿಸಿಕೊಂಡು, ಅಲ್ಲಿದ್ದ ಸಮಸ್ತದೇವತಾಸ್ತ್ರೀಯರ ಮನಸ್ಸಿಗೂ ತನ್ನ ಪರಿಮಳದಿಂದ ಸಂತೋಷ ವ್ಯಾಕುಲತೆಗಳನ್ನುಂಟುಮಾಡಿತು ॥೯೫॥ ಎಲಾ ಮೈತ್ರೇಯನೆ; ಇಷ್ಟು ಮಾತ್ರವೇ ಅಲ್ಲದೆ ಬಳಿಕ ಅಲ್ಲಿ ಉಂಟಾದ ಪರಮಾದ್ಭುತಗಳನ್ನು ಏನೆಂದು ಬಣ್ಣಿಸಲಿ ! ಇಂತು ಪಾರಿಜಾತವು ಹುಟ್ಟಿದ ಬಡನೆಯೇ ಮೂಲೋಕಕ್ಕೂ ಆಶ್ಚರ್ಯಕರವಾದ ರೂಪ, ಸೌಂದರ್ಯ, ಸೌಶೀಲ್ಯ, ಗಾಂಭೀರ್ಯ, ವೊದಲಾದ ಸರ್ವೋತ್ತಮಗಳಾದ ಗುಣಗಳಿಂದಲಂಕೃತರಾದ ಅಪ್ಸರಸ್ತ್ರೀಸಮೂಹವು ಆ ಕ್ಷೀರಸಮುದ್ರ ಮಧ್ಯದಿಂದ ಉದಯಿಸಿತು ॥೯೬॥ ಆ ಬಳಿಕ ತಾಪಾದತಂನ ಕಿರಣಗಳಿಂದ ಜಗತ್ತಿಗೇನೇ ಆನಂದವನ್ನುಂಟುಮಾಡುವ ಕಾರಣ ಶೀತಾಂಶುವೆಂಬದಾಗಿ ಕರೆಯಿಸಿಕೊಳ್ಳುವ ಚಂದ್ರನು ಆ ಸಮುದ್ರಮಧ್ಯದಿಂದುತ್ಪನ್ನನಾದನು, ತರುವಾಯ ಸಕಲಲೋಕಗಳಿಗೂ ವೋಹವನ್ನುಂಟುಮಾಡುವ ಭಯಂಕರವಾದ ವಿಷವು (ಕಾಲಕೂಟವು) ಜನಿಸಿತು. ಆಗ ತೈ ಲೋಕ್ಯವೆಲ್ಲವೂ ಇದರ ವ್ಯಾಪ್ತಿಯಿಂದ ಮೂರ್ಛಾಕಾಂತವಾಗಿ ನಾಶವಾಗುತಿರಲು ಪರಮಕರುಣಾಶಾಲಿಯಾದ ಮಹೇಶ್ವರನು ಈ ವಿಷವಂ ಪಾನಮಾಡಿದನು. ವಿಷವಂ ಪಾನಮಾಡುವುದಕ್ಕಾಗಿ ಪರಮೇಶ್ವರನು ಆಕಾಲಕೂಟವಂ ತನ್ನ ಅಂಗೈಯ ಮಧ್ಯದಲ್ಲಿ ಧರಿಸಿರುವಾಗ ಸರ್ಪಗಳು, ಹಲ್ಲಿನಲ್ಲಿ ಮಾತ್ರ ವಿಷವನ್ನು ಧರಿಸಿರುವ ಇತರ ಪ್ರಾಣಿಗಳು, ಚೇಳುಗಳು, ಓಷಧಿಗಳು (ವಿಷತೆಲಗಳು) ಆ ಶಂಕರನ ಕೈಯಲ್ಲಿದ್ದ ವಿಷದಲ್ಲಿ ಸ್ವಲ್ಪ ಸ್ವಲ್ಪ ಭಾಗವನ್ನೂ ಪರಿಗ್ರಹಿಸಿದುವು. ಈ ವಿಷಕ್ಕಿಂತಲೂ ಮುಂಚೆಯೇ ಉದಯಿಸಿದ್ದ ಚಂದ್ರನನ್ನೂ ಕೂಡ ಆ ಪರಶಿವಮೂರ್ತಿಯೇ ತನ್ನ ಶಿರೋಭೂಷಣವ

ಧರಸ್ಸ್ವಯಂ । ಬಿಭ್ರತ್ಕಮಂಡಲುಂ ಪೂರ್ಣಮಮೃತಸ್ಯ ಸನು
ತ್ಥಿತಃ ॥೯೪॥ ತತಸ್ಸ್ವಸ್ಥ ಮನಸ್ಕಾಸ್ತೇ ಸರ್ವೇದೈತೇಯದಾನ
ವಾಃ । ಬಭೂವು ರುದಿತಾಸ್ಸದ್ಯೋ ಮೈತ್ರೇಯ ! ಮುನಿಭಿಸ್ಸ
ಹ ॥೯೫॥ ತತಸ್ಸುರತಕ್ಕಾಂತಿಮತೀವಿಕಾಸಿ ಕಮಲೇಸ್ಥಿತಾ । ಶ್ರೀ
ರ್ದೇವೀವಿಷಯಸಸ್ತಸ್ಮಾದುತ್ಥಿತಾ ಧೃತಪಂಕಜಾ ॥೯೬॥ ತಾಂತು
ಷ್ಟುವುರ್ಮಹಾಯುಕ್ತಾ ಶ್ರೀಸೂಕ್ತೇನ ಮಹರ್ಷಯಃ ॥೯೭॥
ವಿಶ್ವಾವಸು ಮುಖಾಸ್ತತ್ರ ಗಂಧರ್ವಾಃ ಪುರತೋ ಜಗುಃ । ಘೃ
ತಾಚೀಪ್ರಮುಖಾ ಬ್ರಹ್ಮನ್ನನೃತುಶ್ಚಾಪ್ಸರೋ ಗಣಾಃ ॥೯೮॥

ನ್ನಾಗಿ ಪರಿಗ್ರಹಿಸಿದನು ॥೯೩॥ ಬಳಿಕ ನಿರ್ಮಲವಾಗಿಯೂ ಬಿಳಿದಾಗಿ
ಯೂ ಇರುವ ಪಟ್ಟವಸ್ತ್ರವನ್ನುಟ್ಟು ಅಮೃತಪರಿಪೂರ್ಣವಾದ ಕಮಂಡ
ಲುವನ್ನು ಕೈಯ್ಯಲ್ಲಿ ಧರಿಸಿದ ಧನ್ವಂತರಿ ಎಂಬ ದೇವವೈದ್ಯನು ಪಾಲ್ಗ
ಡಲಿನ ಮಧ್ಯಭಾಗದಿಂ ಜನಿಸಿದನು ॥೯೪॥ ಎಲೌ ಮೈತ್ರೇಯನೆ, ಇಂತು
ಧನ್ವಂತರಿಯು ಅಮೃತಪೂರ್ಣವಾದ ಕಮಂಡಲುವಂ ಧರಿಸಿ ಉದಯಿ
ಸಿದುದಂ ಕಂಡು ದೈತ್ಯರು, ದಾನವರು, ಬ್ರಹ್ಮರ್ಷಿಗಳು, ದೇವತೆಗಳು
ಎಲ್ಲರೂ ಚಿತ್ತಸ್ವಾಸ್ಥ್ಯವಂ ಪಡೆದು ಪರಮಾನಂದ ಭರಿತರಾದರು॥೯೫॥
ಆ ಬಳಿಕ ಅಲ್ಲಿದ್ದ ಸರ್ವಸ್ತರ ಮನಸ್ಸನ್ನೂ ಆಕರ್ಷಿಸುವಂತಹ ದಿವ್ಯ
ಕಾಂತಿಯಿಂದೊಡಗೂಡಿದ ಶ್ರೀ ದೇವಿಯು (ಲಕ್ಷ್ಮಿಯು) ತನ್ನ ಕೈಯೊ
ಳ್ ತಾವರೆಯಂ ಧರಿಸಿ, ದಿವ್ಯವಾದ ಕಮಲದಿಂದ ಮೇಲಿತಲೆದೋರಿದ
ಳು ॥೯೬॥ ಇಂತು ಉದಿಸಿದ ಆ ಲೋಕಮಾತೆಯಾದ ಶ್ರೀ ದೇವಿಯಂ
ಕಂಡು ಪರಮಾನಂದ ಭರಿತರಾದ ಮಹರ್ಷಿಗಳೆಲ್ಲರೂ ಏಕಕಾಲದಲ್ಲಿ
ಯೇ ಆ ಜಗಜ್ಜನನಿಯಂ ಪವಿತ್ರತನುವೆನಿಸಿದ ಶ್ರೀ ಸೂಕ್ತವೆಂಬ ಋ
ಙ್ಮಂತ್ರಗಳಿಂದ ಸ್ತೋತ್ರಮಾಡಿದರು. ॥೯೭॥ ಅನಂತರದಲ್ಲಿ ದೇವ
ಗಾಯಕರಾದ ವಿಶ್ವಾವಸುವೊದಲಾದ ಗಂಧರ್ವರೆಲ್ಲರೂ ಆಕೆಯ ಇದು
ರಾಗಿ ಪರಮಭಕ್ತಿಯಿಂದೊಡಗೂಡಿ ಆಕೆಯನ್ನು ತಮ್ಮ ಗಾನ ವಿದ್ಯೆಯಿಂ
ದ ನಾನಾ ಪರಿಯಾಗಿ ಸ್ತೋತ್ರಮಾಡುತ ಆಕೆಯನ್ನು ತಮ್ಮ ಗಾ
ನದಿಂದ ಸಂತೋಷಪಡಿಸಿದರು ಎಲೈ ಬ್ರಹ್ಮಣ್ಯ ಶ್ರೇಷ್ಠನೆನಿಸಿದ
ಮೈತ್ರೇಯನೇ ; ಇಂತು ಗಂಧರ್ವರು ಗಾನಮಾಡಿದ ಬಳಿಕ ಘೃತಾ

ಗಂಗಾದ್ಯಾಸ್ಸರಿತಸ್ತೋಯೈಃ ಸ್ನಾನಾರ್ಥಮುಪತಸ್ಥಿರೇ। ದಿಗ್ಗಜಾ
ಹೇಮಪಾತ್ರಸ್ಥಮಾದಾಯ ವಿಮಲಂಜಲಂ ॥ ಸ್ನಾಪಯಾಂಚಕ್ರಿ
ರೇ ದೇವೀಂಸರ್ವಲೋಕಮಹೇಶ್ವರೀಂ ॥೧೦೩॥ ಕ್ಷೀರೋದೋ
ರೂಪಧೃತ್ತಸ್ಯೈ ಮಾಲಾಮಮ್ಲಾನ ಪಂಕಜಾಂ । ದದೌವಿಭೂಷ
ಣಾನ್ಯಂಗೇ ವಿಶ್ವಕರ್ಮಾಚಕಾರಹ ॥೧೦೪॥ ದಿವ್ಯಮಾಲ್ಯಾಂಬರ
ಧರಾ ಸ್ನಾತಾ ಭೂಷಣ ಭೂಷಿತಾ । ಪಶ್ಯತಾಂ ಸರ್ವದೇವಾನಾಂ
ಯಯೌ ವಕ್ಷಸ್ಥಲಂ ಹರೇಃ॥ ೧೦೫॥ ತತೋ ವಲೋಕಿತಾ ದೇವಾ

ಚೀ, ಊರ್ವಶೀ, ರಂಭ, ತಿಲೋತ್ತಮ ಮೊದಲಾದ ಅಪ್ಸರಸ್ತ್ರೀಯರೆ
ಲ್ಲರೂ ಆಕೆಯ ಮುಂಭಾಗದೊಳ್ ನರ್ತನಮಾಡಿದರು ॥೧೦೨॥ ಗಂಗೆ,
ಯಮುನೆ, ಮೊದಲಾದ ಮಹಾಪವಿತ್ರ ತಮಗಳೆನಿಸಿದ ಮಹಾನದಿಗಳೆಲ್ಲ
ವೂ ಆಕೆಯ ಸ್ನಾನಾರ್ಥಮಾಗಿ ಆಕೆಯು ಇದ್ದೆಡೆಗೇ ಹರಿದು ಬಂದುವು
ಬಳಿಕ ಅಷ್ಟದಿಗ್ಗಜಗಳು ಸುವರ್ಣಕುಂಭಗಳಲ್ಲಿ ನೀರನ್ನು ತುಂಬಿ ನಿ
ರ್ಮಲವಾದ ಉದಕಧಾರೆಗಳಿಂದ ಸಕಲಲೋಕಗಳಿಗೂ ಯಜಮಾನಿನಿಎ
ನಿಸಿದ ಜಗಜ್ಜನನಿಯಾದ ಆ ಶ್ರೀದೇವಿಯಂ ಅಭಿಷೇಕಮಾಡಿದರು ॥೧೦೩॥
ಆ ಬಳಿಕ ಕ್ಷೀರಸಮುದ್ರಾಭಿಮಾನಿದೇವತೆಯು ದಿವ್ಯರೂಪವಂತಾಳಿ,
ಎಂದಿಗೂ ಬಾಡದೆ ಪರಿಮಳಯುಕ್ತವಾಗಿಯೇ ಇರುವಂತಹ ಕಮಲಗ
ಳಿಂದಲೇ ಕಟ್ಟಿದ ಬಂದು ಪ್ರೂದಂಡೆಯನ್ನೂ, ಸರ್ವೋತ್ತಮಗಳಾದ ನವ
ರತ್ನಾಭರಣಗಳನ್ನೂ ತೆಗೆದುಕೊಂಡು ಬಂದು ಆಕೆಗೆ ಸಮರ್ಪಿಸಲು, ದೇ
ವತೆಗಳಿಗೆ ಬಡಗಿ ಅಥವ ಕಂಮಾರನೆನಿಸಿದ ವಿಶ್ವಕರ್ಮನು ಆ ಆಭರಣಗಳಂ
ತೆಗೆದುಕೊಂಡು ಆಕೆಗೆ ಅಲಂಕರಿಸಿದನು ॥೧೦೪॥ ಇಂತು ಆ ಶ್ರೀದೇ
ವಿಯು ಮಜ್ಜನವಂಗೈದು ದಿವ್ಯವಾದ ಪಟ್ಟವಸ್ತ್ರವನ್ನುಟ್ಟು ಪರಿಮಳದಿಂ
ದ ಘಮಘಮಿಸುವ ಪ್ರೂದಂಡೆಗಳಂಧರಿಸಿ, ಸರ್ವಾಭರಣಗಳಿಂದ ಲಂಕೃತ
ಗಳಾಗಿ, ಬ್ರಹ್ಮನೇ ಮೊದಲಾದ ಸಕಲ ದೇವತೆಗಳೂ ನೋಡುವಂತೆ
ಜಗತ್ಪತಿ ಎನಿಸಿದ ಆ ಶ್ರೀ ಮಹಾವಿಷ್ಣುವಿನ ವಕ್ಷಃ ಸ್ಥಲವಂ ಪ್ರವೇಶಿಸಿ
ದಳು ॥೧೦೫॥ ಇಂತುಪರಮಾತ್ಮನ ನಾಭಿ ಎಂಬ ಗೃಹಮಂ ಪೊಕ್ಕು ಅ
ಲ್ಲಿ ಸಂತೋಷದಿಂದ ನೆಲೆಸಿದ ಆಜಗನ್ಮಾತೆಯು, ಅನುಗ್ರಹ ಪರಿಪೂರ್ಣ
ವೂ ಕೃಪಾಯುಕ್ತವೂ ಆಗಿರುವ ತನ್ನ ಪ್ರಸನ್ನವೀಕ್ಷಣದಿಂದ ಎಲ್ಲ ದೇ

ಹರಿವಕ್ಷಸ್ಥಲ ಸ್ಥಯಾ । ಲಕ್ಷ್ಮ್ಯಾಲೈವೈತ್ರೇಯ ! ಸಹಸಾ ಪರಾಂ
ನಿರ್ವೃತಿಮಾಗತಾಃ ॥೧೦೬॥ ಉದ್ವೇಗಂಪರಮಂ ಜಗ್ಮುರ್ದೈತ್ಯಾ
ವಿಷ್ಣುಪರಾಙ್ಮುಖಾಃ ॥ ತ್ಯಕ್ತಾಲಕ್ಷ್ಮ್ಯಾ ಮಹಾಭಾಗ ! ವಿಪ್ರಚಿ
ತ್ತಿಪುರೋಗಮಾಃ ॥೧೦೭॥ ತತಸ್ತೇ ಜಗೃಹುರ್ದೈತ್ಯಾ ಧನ್ವಂ
ತರಿಕರಸ್ಥಿತಂ । ಕವಂಡಲುಂ ಮಹಾವೀರ್ಯಾಯತಾಸ್ತೇ ತದ್ವಿ
ಜಾ ! ಮೃತಂ ॥೧೦೮॥ ಮಾಯಯಾ ಮೋಹಯಿತ್ವಾತಾ
ವಿಷ್ಣುಸ್ತ್ರೀರೂಪಸಂಸ್ಥಿತಃ । ದಾನವೇಭ್ಯಸ್ತದಾದಾಯ ದೇವೇ
ಭ್ಯಃ ಪ್ರದದೌ ಹರಿಃ ॥೧೦೯॥ ತತಃ ಪಪ್ರುಸ್ಸುರಗಣಾಶ್ಚ ಕ್ರಾದ್ಯಾ

ವತೆಗಳನ್ನೂ ಒಂದು ಬಾರಿ ಮುಂದಹಾಸದಿಂದೊಡಗೂಡಿ ನೋಡಿದಳು. ಎಲೈ ವೈತ್ರೇಯನೆ ; ಇಂತು ಆ ಲಕ್ಷ್ಮ್ಯಯು ದೇವತೆಗಳಂ ನೋಡಿದೊಡನೆಯೇ ಆದೇವತೆಗಳಿಗುಂಟಾದ ಆನಂದಾತಿಶಯವಂ ನಾನೆಂತು ಬಣ್ಣಿಸಲಿ ? ॥೧೦೬॥ ಅನಂತರ ಶ್ರೀಮಹಾವಿಷ್ಣುವಿನ ಪಾದಾರವಿಂದಲ್ಲಿ ಸಂಪೂರ್ಣವಾಗಿ ಭಕ್ತಿಶೂನ್ಯರೆನಿಸಿ ನಿರಂತರವೂ ಆತನ ವಿಷಯದಲ್ಲಿ ದ್ವೇಷವನ್ನೇ ಸಾಧಿಸುತಿರುವ ವಿಪ್ರಚಿತ್ತಿಮೊದಲಾದ ದೈತ್ಯದಾನವರು, ಇಂತು ಲಕ್ಷ್ಮ್ಯಯು ಶ್ರೀನಾರಾಯಣನ ನಾಭಿಕಮಲವಂ ಸೇರಿಯುದಂ ಕಂಡು, ಆಕೆಯ ಅನುಗ್ರಹಕ್ಕೆ ತಾವು ಪಾತ್ರರಾಗದಿರುವಿಕೆಯಿಂದಲೂ,ತಮಗೆ ಶತ್ರುಗಳಾದ ದೇವತೆಗಳಿಗೆ ಆಕೆಯು ಅನುಗ್ರಹಮಾಡಿದುದರಿಂದಲೂ, ತಾವು ನಿರಂತರವೂ ವಿಷ್ಣುವಿಗೆ ಹಗೆಗಳಾಗಿಯೇ ಇರುವುದರಿಂದಲೂ ಕೂಡ, ತಮಗೆ ಮುಂದೆ ಇನ್ನೇನು ಆಪತ್ತು ಸಂಭವಿಸುವುದೋ ಎಂಬುದಾಗಿ ನಾನಾ ವಿಧದಿಂದ ದುಃಖಪಡುತ್ತಾ ಭಯಾಕ್ರಾಂತರಾದರು ॥೧೦೭॥ ಎಲೈ ಬ್ರಾಹ್ಮಣನೆ ; ಆಬಳಿಕ ದೈತ್ಯದಾನವರು ಇಂತು ಭಯಾಕ್ರಾಂತರಾಗಿದ್ದರೂ ಧೈರ್ಯಗೆಡದೆ ಮಹಾಪರಾಕ್ರಮಯುಕ್ತರಾಗಿ ಆ ಧನ್ವಂತರಿಯ ಕೈಯಲ್ಲಿದ್ದ ಅಮೃತವನ್ನಪಹರಿಸಲುದ್ಯುಕ್ತರಾಗಿ ಆ ಅಮೃತಪಾತ್ರೆಯುಂ ಕಿತ್ತುಕೊಂಡರು ॥೧೦೮॥ ಆ ಕಾಲದೋಳ್ ಸರ್ವವ್ಯಾಪಕನಾದ ಪರಮಾತ್ಮನು ಅವರನ್ನು ಮೋಸಪಡಿಸಲೋಸುಗ ಕಪಟವಾದ ಸ್ತ್ರೀರೂಪವಂ ಧಾರಣಮಾಡಿ ಆ ದೈತ್ಯದಾನವರಂ ವಂಚಿಸಿ ಅವರಿಂದ ಆ ಅಮೃತಪಾತ್ರೆಯುಂ ತೆಗೆದು ದೇವತೆಗಳಿಗೆ ಕೊಟ್ಟನು ॥೧೦೯॥

ಸ್ತತ್ತದಾಮೃತಂ । ಉದ್ಯತಾಯುಧನಿಸ್ತ್ರಿಂಶಾದೈತ್ಯಾಸ್ತಾಂಶ್ಚ ಸಮು
ಭ್ಯಯುಃ ॥೧೧೦॥ ಪೀತೇ ಽಮೃತೇಚ ಬಲಿಭಿ ರ್ದೇವೈರ್ದೈತ್ಯಚ
ಮೂಸ್ತದಾ । ವಧ್ಯಮಾನಾ ದಿಶೋ ಭೇಜೇಪಾತಾಳಂಚ ವಿವೇಶ
ಹ ॥೧೧೧॥ ತತೋದೇವಾ ಮುದಾಯುಕ್ತಾ ಶ್ಚಂಖಚಕ್ರಗದಾಧ
ರಂ । ಪ್ರಣಿಪತ್ಯ ಯಥಾಪೂರ್ವ ಮಶಾಸಂಸ್ತ್ರಿವಿಷ್ಟಪಂ ॥೧೧೨॥
ತತಃ ಪ್ರಸನ್ನಭಾ ಸ್ಸೂರ್ಯಃ ಪ್ರಯಯೌ ಸ್ವೇನ ವರ್ತ್ಮನಾ ।

ಇಂತು ವಿಷ್ಣುವು ರಾಕ್ಷಸರ ಕೈಲಿದ್ದ ಅಮೃತ ಪಾತ್ರೆಯಂ ದೇವತೆಗಳ ವಶಮಾಡಿದೊಡನೆಯೇ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಅ ರಲ್ಲಿದ್ದ ಅಮೃತವಂ ಪಾನಮಾಡಿದರು. ಇಂತು ದೇವತೆಗಳು ವೋಸ ದಿಂದ ತಮಗೆ ಅಮೃತವಂ ಕೊಡದೆಯೇ ತಾವೇ ಅದೆಲ್ಲವಂ ಆಸ್ವಾದಿಸು ದುದಂ ಕಂಡು ಅತ್ಯಂತ ಕೋಪೋದ್ರಿಕ್ತರಾದ ರಾಕ್ಷಸರೆಲ್ಲರೂ ಗುಂಪು ಸೇರಿ ಭಯಂಕರಗಳಾಗಿಯೂ, ಹರಿತವಾಗಿಯೂ ಇರುವ ನಾನಾವಿಧಾ ಯುಧಗಳಂ ತೆಗೆದುಕೊಂಡು ದೇವತೆಗಳೊಡನೆ ಯುದ್ಧಮಾಡಲು ಸನ್ನ ದ್ಧರಾದರು. ॥ ೧೧೦ ॥ ದೇವತೆಗಳು ಅಮೃತ ಪಾನಮಾಡಿದವರಾದ ಕಾ ರಣ ಮಹಾಬಲಶಾಲಿಗಳಾಗಿ ಆರಾಕ್ಷಸರೊಡನೆ ಘೋರವಾಗಿ ಯುದ್ಧ ಮಾಡತೊಡಗಿದರು. ಇಂತು ದೇವತೆಗಳು ಯುದ್ಧಮಾಡುತಿರುವುದಂ ಕಂಡು ರಾಕ್ಷಸರೆಲ್ಲರೂ ಭಯಾಕ್ರಾಂತರಾಗಿ ಪ್ರಾಣಭೀತಿಯಿಂದ, ಕೆ ಲವರು ದಿಕ್ಕುಪಾಲಾಗಿ ಓಡಿಹೋದರು. ಮತ್ತೆ ಕೆಲವರು ಪರ್ವತಗಳ ನ್ನು ಕುರಿತು ತೆರಳಿದರು ಇನ್ನೂ ಕೆಲವರು ತಮಗೆ ಎಲ್ಲಿಹೋದರೆ ಭಯವಿಲ್ಲವೆಂಬುದಂ ಯೋಚಿಸಿ ಪಾತಾಳ ವಿವರವಂ ಪ್ರವೇಶಿಸಿ ದರು ॥ ೧೧೧ ॥ ಇಂತು ದಾನವರೆಲ್ಲರೂ ದಿಕ್ಕುಪಾಲಾಗಿ ಕಾಗೆಟ್ಟು ಓ ಡಿಹೋದುದಂ ಕಂಡು ದೇವತೆಗಳೆಲ್ಲರೂ ಪರಮ ಸಂತೋಷ ಭರಿತಾಂತ ರಂಗರಾಗಿ, ಇದುವರೆಗೂ ತಮಗುಂಟಾದ ಶ್ರೇಯಸ್ಸಿಗೆಲ್ಲಾ ಮುಖ್ಯಸಾ ಧನ ಭೂತನಾದ ಶಂಖ, ಚಕ್ರ, ಗದಾಧಾರಿಯಾದ ಪರಮಾತ್ಮನಿಗೆ ಭ ಕ್ತಿಯಿಂದ ಸಾಷ್ಟಾಂಗವೆರಗಿ, ಹಿಂದಿನಂತೆಯೇ ಸ್ವರ್ಗಾಧಿಪತ್ಯವಂ ಮಾ ಡಿಕೊಂಡು ಯಾವತೊಂದರೆಯೂ ಇಲ್ಲದೆ ಸುಖದಿಂದಿರುತಿದ್ದರು ॥೧೧೩॥ ತರುವಾಯ, ಎಲೈ ಮುನಿಶ್ರೇಷ್ಠನಾದ ಮೈತ್ರೇಯನೆ ! ಸೂರ್ಯನು

ಜ್ಯೋತೀಂಷಿಚ ಯಥಾಮಾರ್ಗಂ ಪ್ರಯಯು ರ್ಮುನಿಸತ್ತಮ! ॥೧೦೪॥ ಜಜ್ವಾಲ ಭಗವಾಂ ಶ್ಚೋಚ್ಚೈ ಶ್ಚಾರುದೀಪ್ತಿ ರ್ವಿಭಾವಸುಃ। ಧರ್ಮೇಚ ಸರ್ವಭೂತಾನಾಂ ತದಾಮತಿರಜಾಯತ॥೧೦೫॥ಶ್ರಿಯಾಜುಷ್ಟಂಚ ತ್ರೈಲೋಕ್ಯಂ ಬಭೂವ ದ್ವಿಜಸತ್ತಮ! । ಕಕ್ರಚ್ಚ ತ್ರಿದಶಶ್ರೇಷ್ಠಃ ಪುನ ಶ್ಚ್ರೀಮಾನಜಾಯತ॥೧೦೬॥ ಸಿಂಹಾಸನ ಗತಶ್ಚಕ್ರ ಸ್ಸಂಪ್ರಾಪ್ಯ ತ್ರಿದಿವಂ ಪುನಃ। ದೇವರಾಜ್ಯೇ

ನಿರ್ಮಲವಾದ ಕಾಂತಿಯಿಂದೊಡಗೂಡಿ ತನ್ನ ಮಾರ್ಗದಲ್ಲಿ ತಾನು ಸಂಚಾರ ಮಾಡತೊಡಗಿದನು. ಚಂದ್ರ ಮೊದಲಾದ ನಿಕ್ಷತ್ರಗ್ರಹಗಳೆಲ್ಲವೂ ತಮ್ಮ ತಮ್ಮ ಮಂಡಲಗಳಂ (ಆವಾಸವಂ) ಸಾರ್ದು ತಂತಮ್ಮ ಮಾರ್ಗಗಳಲ್ಲಿ ಸಂಚರಿಸಲುಪಕ್ರಮಿಸಿದರು ॥ ೧೦೩ ॥ ಸಕಲ ಲೋಕಗಳಿಗೂ ಪ್ರಾಣಪ್ರದವಾದ ತೇಜಸ್ಸನ್ನುಂಟುಮಾಡುವ ಸೂರ್ಯನು ಮನೋಹರವಾದ ತೇಜಸ್ಸಿನಿಂದೊಡಗೂಡಿ ಬಹಳವಾಗಿ ಆಕಾಶದಲ್ಲಿ ಕಂಗೊಳಿಸುತಿದ್ದನು. ಆ ಮೊದಲು ಹಿಂದಿನಂತೆಯೇ ಪ್ರಜೆಗಳಿಗೆಲ್ಲರಿಗೂ ಧರ್ಮದಲ್ಲಿ ಬುದ್ಧಿಯುಂಟಾಗಿ ಎಲ್ಲರೂ ಧರ್ಮಕಾರ್ಯಾ ಸಕ್ತರಾದರು ॥೧೦೪॥ ಎಲೌ ದ್ವಿಜವರ್ಯನೆನಿಸಿದ ಮೈತ್ರೇಯನೆ ! ಬಳಿಕ ಮೂರುಲೋಕದ ಜನರೆಲ್ಲರೂ ಹಿಂದಿನಂತೆ ಸಂತೋಷ ಧೈರ್ಯಯುಕ್ತರಾಗಿ ಸಂಪತ್ತಿನಿಂದೊಡಗೂಡಿ ಸಂತೋಷದಿಂದ ಸುಖವಾಗಿರುತಿದ್ದರು. ದೇವರಾಜನೆನಿಸಿದ ಇಂದ್ರನೂ ಕೂಡ ಶ್ರೀಮಹಾವಿಷ್ಣುವಿನ ಅನುಗ್ರಹದಿಂದ ಲಕ್ಷ್ಮೀಕಟಾಕ್ಷ ಪಾತ್ರನಾಗಿ ಸಕಲಸಂಪತ್ತುಗಳಿಂದ ಕೂಡಿದವನಾಗಿ ತ್ರೈಲೋಕ್ಯಾಧಿಪತ್ಯವಂ ಮಾಡಿಕೊಂಡು ಶತ್ರುಗಳ ಬಾಧೆಯಿಂದ ವಿಮುಕ್ತನಾಗಿ ತನ್ನ ರಾಜಧಾನಿಯಾದ ಅಮರಾವತಿಯಲ್ಲಿ ಸುಖದಿಂದಿರುತಿದ್ದನು. ॥ ೧೦೫ ॥

ಇಂತೀಪರಿಯಿಂದ ಇಂದ್ರನು ಮರಳಿ ಸ್ವರ್ಗದಲ್ಲಿ ತ್ರೈಲೋಕ್ಯಾಧಿಪತ್ಯವಂ ಪಡೆದು ಸಿಂಹಾಸನಾರೂಢನಾಗಿ, ಹಿಂದೆ ದುರ್ವಾಸಮಹರ್ಷಿಯ ಶಾಪದಿಂದ ಲಕ್ಷ್ಮಿಯು ತನಗೆ ತೊಲಗಿಹೋದಂತೆ ಎಂದೆಂದಿಗೂ ಪುನಃ ತೊಲಗದೆ ಶಾಶ್ವತವಾಗಿರಲು, ತಾವರೆಯನ್ನು ಕೈಯಲ್ಲಿ ಧರಿಸಿರುವ ಜಗಜ್ಜನನಿಯಾದ ಶ್ರೀದೇವಿಯಂ ಕುರಿತು ಸ್ತೋತ್ರಮಾಡತೊಡಗಿದು

ಸ್ಥತೋ ದೇವೀಂತುಷ್ಟವಾಜ್ಜಕರಾಂತತಃ ॥೧೧೬॥ ಇಂದ್ರಉವಾ
ಚ॥ನಮೋಮಿ ಸರ್ವಲೋಕಾನಾಂ ಜನನೀ ಮಬ್ಧಿಸಂಭವಾಂ।ಶ್ರಿಯ
ಮುನ್ನಿದ್ರಪದ್ಮಾಕ್ಷೀಂ ವಿಷ್ಣು ವಕ್ಷಸ್ಥಲಸ್ಥಿತಾಂ ॥೧೧೭॥ ಪದ್ಮಾಲ
ಯಾಂ ಪದ್ಮಕರಾಂ ಪದ್ಮಪತ್ರನಿಭೇಕ್ಷಣಾಂ। ವಂದೇಪದ್ಮಮು
ಖೀಂ ದೇವೀಂ ಪದ್ಮನಾಭಪ್ರಿಯಾಮಹಂ॥೧೧೮॥ತ್ವಂಸಿದ್ಧಿ ಸ್ತ್ವಂ

ದೆಂತೆಂದರೆ ॥ ೧೧೬ ॥ ಕ್ಷೀರಸಮುದ್ರ ಮಥನಕಾಲದೋಳ್ ಲೋಕ ಹಿತಾರ್ಥವಾಗಿಪುಟ್ಟಿ, ಅರಳಿದ ತಾವರೆಯಂತೆ ವಿಶಾಲಗಳೆನಿಸಿ, ಕಾಂತಿಯುಕ್ತಗಳಾಗಿ ಕಂಗೊಳಿಸುವ ನೇತ್ರಕಮಲದಿಂದೊಪ್ಪುವ, ಜಗಜ್ಜನಕನಾದ ಶ್ರಿಮಹಾವಿಷ್ಣುವಿನ ನಾಭಿಕಮಲದಲ್ಲಿ ನೆಲೆಸಿರುವ ಸಕಲಲೋಕ ಮಾತೆಯಾದ ಶ್ರೀದೇವಿಯುಂ ನಾನು ನಮಸ್ಕರಿಸುವೆನು ॥ ೧೧೭ ॥ ತಾವರೆಯನ್ನು ನೆಲೆಮಾಡಿಕೊಂಡು, ಕಮಲವನ್ನು ಕ್ಯೆಯ ಲ್ಲಿಪಿಡಿದು, ಕಮಲದ ಎಸಳಿನಂತೆ ವಿಶಾಲಗಳೂ, ಪ್ರಸನ್ನಗಳೂ, ನಿರ್ಮಲಗಳೂ, ಕಾಂತಿಯುಕ್ತಗಳೂ, ರಕ್ತಾಂತಗಳೂ ಎನಿಸಿದ ಲೋಚನಗಳಿಂದೊಪ್ಪುವ, ಕಮಲದಂತೆ ಕಂಗೊಳಿಸುವ ಮುಖವುಳ್ಳ, ಜಗತ್ಪ್ರಷ್ಟೃವೆನಿಸಿದ ಚತುರ್ಮುಖನಿಗೆ ಆವಾಸಭೂತವಾದ ನಾಭಿಕಮಲದಿಂದೊಪ್ಪುವ ಶ್ರೀಮಹಾ ವಿಷ್ಣುವಿಗೆ ಪರಮ ಪ್ರೇಮಾಸ್ಪದಳೆನಿಸಿದ ಶ್ರೀದೇವಿಯುಂ ನಾನು ವಂದಿಸುವೆನು ॥ ೧೧೮ ॥ ಎಲ್ಲೆ ಲೋಕಪಾವನಿ ಎನಿಸಿದ ಮಾತೆಯೇ ! ಅಣಿಮಾದಿಸಿದ್ಧಿ ರೂಪದಿಂದಿರುವಳೂ ನೀನೇ ಆಗಿರುವೆ. ಸ್ವಧಾಕಾರವೂ, ಸ್ವಾಹಾ ಕಾರವೂಕೂಡ ನಿನ್ನನ್ನೇ ಬೋಧಿಸುತಲಿರುವ್ರವು. ದೇವತೆಗಳಿಗೆ ಮುಪ್ಪುಸಾವುಗಳನ್ನು ನಾಶಮಾಡಿ ನಿರಂತರವೂ ಸುಖದಲ್ಲಿಯೇ ಇದ್ದ ಕೊಂಡು ದುಃಖವನ್ನು ಸಂಪೂರ್ಣವಾಗಿ ನಾಶಮಾಡುವಂತೆ ಮಾಡಿರುವ ಅಮೃತವೂ ಕೂಡ ನೀನೇ ಅಲ್ಲವೇ ? ಅಹೋ ರಾತ್ರಿಗಳ ಸಂಧಿಕಾಲವೆನಿಸಿದ ಸಂಧ್ಯೆ, ರಾಕ್ಷಸರಿಗೆ ಉತ್ಪತ್ತಿಕಾಲವೆನಿಸಿ, ಅವರಿಗೆ ತೇಜಸ್ಸನ್ನು ವೃದ್ಧಿಗೊಳಿಸುವ ರಾತ್ರಿ, ಸಕಲ ಪ್ರಾಣಿಗಳಿಗೂ ಚಟುವಟಿಕೆ (ಲವಲವಿಕೆ) ಯನ್ನುಂಟುಮಾಡುವ ಕಾಂತಿ, (ಹಗಲು) ಐಶ್ವರ್ಯ, ಬುದ್ಧಿ, ಯಾವಕಾರ್ಯವನ್ನು ಮಾಡಬೇಕಾದರೂ ಉತ್ಸಾಹವೆನಿಸಿದ ಶ್ರದ್ಧೆ, ಇಂತಹ ಬುದ್ಧಿ ಶ್ರದ್ಧೆಗಳಿಗೆ ಅಭಿಮಾನಿನಿ ಎನಿಸಿದ ಸರಸ್ವತಿ ಇದೇ ಮೊದ

ಸ್ವಧಾ ಸ್ವಾಹಾ ಸುಧಾತ್ವಂ ಲೋಕಪಾವನಿ ! । ಸಂಧ್ಯಾರಾತ್ರಿಃ ಪ್ರಭಾ ಭೂತಿರ್ಮೇಧಾ ಶ್ರದ್ಧಾ ಸರಸ್ವತೀ ॥೧೦೯॥ ಯಜ್ಞವಿದ್ಯಾ ಮಹಾವಿದ್ಯಾ *ಗುಹ್ಯವಿದ್ಯಾಚ ಶೋಭನೇ!। ಆತ್ಮವಿದ್ಯಾಚ

ಲಾದರೂಪದಿಂದ ನೀನು ಈ ಪ್ರಪಂಚವನ್ನು ಆವರಿಸಿಕೊಂಡು ಅನಂತವೂ ಆ ರೂಪದಿಂದ ತೋರುವೆಯಾದುದರಿಂದ ಈ ಮೇಲೆ ಹೇಳಿದ ಸಿದ್ಧಿ ಮೊದಲಾದುವುಗಳೆಲ್ಲವೂ ನಿನ್ನ ರೂಪಗಳಾಗಿಯೇ ಇರುವುವು॥೧೦೯॥ ಜ್ಞಾನ, ವೈರಾಗ್ಯ ಮೊದಲಾದವುಗಳಿಗಿಂತಲೂ ಯಜ್ಞಾದಿಕರ್ಮ, ಮತ್ತು ಅವುಗಳ ಆಚರಣೆ ಮೊದಲಾದವನ್ನು ಬೋಧಿಸುವವಿದ್ಯಾವಾಂಸಾ (ಕರ್ಮ ವಿದ್ಯೆ) ಶಾಸ್ತ್ರವೂ ಮತ್ತು ಆ ಶಾಸ್ತ್ರಪ್ರಕಾರವಾಗಿಯೇ ಆಚರಿಸುವವರಿಗೆ ತದನುರೂಪವಾದ ಸ್ವರ್ಗಾದಿ ಲೋಕಗಳನ್ನುಂಟುಮಾಡುವವಳೂ ನೀನೇ. (ಮತ್ತು ತಾಮಸರಾದ ಇನ್ನು ಕೆಲವರು ಕೇವಲ ಮೋಹಕವಾದ ಇಂದ್ರಜಾಲ ಮೊದಲಾದ ವಿದ್ಯೆಯಲ್ಲಿ ಆಸಕ್ತರಾಗಿರುವರು ಅಂತಹ ಇಂದ್ರಜಾಲವಿದ್ಯೆಯೂ, ತದನುಸಾರಿಗಳಿಗೆ ತದನುಗುಣವಾದ ಫಲವನ್ನು ಕೊಡುವವಳೂ ಸಹ ನೀನೇ ಆಗಿರುವೆ)। ಆದೇವತೆಗಳನ್ನು ಉಪಾಸನೆ ಮಾಡುವ ಪ್ರಕಾರವನ್ನು ಬೋಧಿಸುವ ಮಹಾ ವಿದ್ಯೆಯೂ, ತದನುಸಾರಿಗಳಿಗೆ ಅದಕ್ಕೆ ತಕ್ಕ ಫಲವನ್ನು ಕೊಡುವವಳೂ ಕೂಡ ನೀನೇ ಅಲ್ಲವೆ ? ಮತ್ತು ಪಂಚಾಕ್ಷರಿ, ಅಷ್ಟಾಕ್ಷರಿ, ದ್ವಾದಶಾಕ್ಷರಿ ಮೊದಲಾದ ಅಷ್ಟಕೋಟಿಮಹಾ ಮಂತ್ರಗಳೂ, ಮಂತ್ರಶಾಸ್ತ್ರವೂ, ಅದರ ಫಲವೂ ಕೂಡ ನೀನೇ ಆಗಿರುವೆ. ಉಪನಿಷತ್ಪ್ರತಿಪಾದಿತವೆನಿಸಿದ ಪರಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಮುಖ್ಯಸಾಧನ ಭೂತವಾದ ಆತ್ಮ

* "ಗುಹ್ಯವಿದ್ಯೆ" ಎಂದರೆ ರಹಸ್ಯವಾದ ವಿದ್ಯೆ, ಮಂತ್ರಶಾಸ್ತ್ರವೆಂದರ್ಥ, ಆತ್ಮ ವಿದ್ಯೆಯು ಎಲ್ಲ ವಿದ್ಯೆಗಳಿಗಿಂತಲೂ ಕಷ್ಟಸಾಧ್ಯವಾಗಿಯೂ, ಪರಮರಹಸ್ಯವಾಗಿಯೂ ಇರುವ ಕಾರಣ ಆತ್ಮವಿದ್ಯೆಯೇ ಗುಹ್ಯವಿದ್ಯೆಯಲ್ಲದೆ ಮಂತ್ರಶಾಸ್ತ್ರವಲ್ಲವೆಂದು ಆಕ್ಷೇಪಿಸಿದರೆ "ಗುರುಂ ಪ್ರಕಾಶಯೇ ದ್ಧೀರ್ಮಾ ನ ತು ಮಂತ್ರಂ ಪ್ರಕಾಶಯೇತ್" ಬುದ್ಧಿಶಾಲಿಯಾದವನು ಗುರುವನ್ನ ಪ್ರಸಿದ್ಧಿಗೊಳಿಸಬೇಕಲ್ಲದೆ ಮಂತ್ರವನ್ನು ಪ್ರಕಾಶಪಡಿಸಬಾರದು, ಎಂಬ ವಚನದಿಂದ ಮಂತ್ರಶಾಸ್ತ್ರವೇ ಗುಹ್ಯವಿದ್ಯೆ ಎಂದು ತಿಳಿಯುವುದು.

ದೇವಿ! ತ್ವಂ ವಿಮುಕ್ತಿಫಲದಾಯಿನೀ॥೧೫೦॥ ಆನ್ವೀಕ್ಷಕೀ ತ್ರಯೀ
ವಾರ್ತಾದಂಡನೀತಿ ಶ್ಚ್ಯಾವೇವಚ। ಸೌಮ್ಯಾ ಸೌಮ್ಯೈ ರ್ಜಗ
ದ್ರೂಪೈ ಸ್ತ್ವಯೈತ ದ್ದೇವಿ! ಪೂರಿತಂ॥೧೫೧॥ ಕಾತ್ವನ್ಯಾ ತ್ವಾ
ಮೃತೇ ದೇವಿ! ಸರ್ವಯಜ್ಞಮಯಂ ವಪುಃ। ಅಧ್ಯಾಸ್ತೇ ದೇವ

ವಿದ್ಯೆಯೂ, ಆ ವಿದ್ಯೆಯಿಂದ ಹೊಂದಲು ಯೋಗ್ಯವಾದ ಪರವಸ್ತುವೂ ಕೂಡ ನೀನಲ್ಲದೆ ಬೇರಾರು?(ಇದರಿಂದ ಲೋಕದಲ್ಲಿ ಜನರು ಆಕೆಯನ್ನು ಯಾವರೂಪದಿಂದ ಧ್ಯಾನಿಸಿದರೆ ಆ ರೂಪದಿಂದಲೇ ಅವರಿಗೆ ಆ ಫಲವನ್ನು ಕೊಡತಕ್ಕವಳಾಗಲೂ, ಅನ್ನ, ದೇಹ, ತೃಪ್ತಿ, ಕಾಪಾಡುವೊದಲಾದ ಸಕಲ ವಸ್ತುಗಳಲ್ಲಿಯೂ ಸರ್ವಕಾಲಗಳಲ್ಲಿಯೂ ನೆಲೆಸಿರುವಳೆಂಬುದಾಗಲೂ, ಈಕೆಗಿಂತಲೂ ಬೇರೆ ವಸ್ತುವೇ ಇಲ್ಲವೆಂತಲೂ ಭಾವವು) ॥೧೫೦॥ ತರ್ಕಶಾಸ್ತ್ರವೂ, ವೇದತ್ರಯವೂ, ಶಿಲ್ಪಶಾಸ್ತ್ರವೂ, ಆಯುರ್ವೇದಾದಿ ಉಪವೇದಗಳೂ, ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳನ್ನು ಪ್ರಯೋಗಿಸುವ ರೀತಿಯನ್ನು ಬೋಧಿಸುವ ರಾಜನೀತಿಯೂ ಮತ್ತು ಇದರಂತೆಯೇ ನಿನ್ನ ನಾನಾಪ್ರಕಾರಗಳಾದ ಕ್ರೂರ, ಸೌಮ್ಯರೂಪಗಳಿಂದ ಈ ಜಗತ್ತೆಲ್ಲವೂ ನಿಬಿಡೀಕೃತವಾಗಿರುವುದು (ಈ ಜಗತ್ತಿನಲ್ಲಿಕಂಣಿಗೆ ಗೋಚರಿಸುವ ಅಥವಾ ಅತೀಂದ್ರಿಯಗಳೆನಿಸಿದ ಸಕಲ ವಸ್ತುಗಳೂ ಆಕೆಯ ರೂಪಗಳೆಂದೇ ಭಾವವು) ॥೧೫೧॥ ಜ್ಯೋತಿಷ್ಟೋಮ, ವಾಜಪೇಯ, ಪೌಂಡರೀಕ, ಅತಿರಾತ್ರ ಮೊದಲಾದ ಸಕಲ ಯಜ್ಞಸ್ವರೂಪವೆನಿಸಿ, ಅನವತರವೂ ಮಹಾಮುಕ್ತಿಗಳಾದ ಯೋಗಿವರ್ಯರಿಂದ ಚಿತ್ತೈಕಾಗ್ರತೆಯಂ ಪಡೆದು ಧ್ಯಾನವಿಷಯವಾಗಿ ಮಾಡಲ್ಪಡುವ, ದೇವ ದೇವ ನೆನಿಸಿ ಗದಾಧಾರಿಯಾಗಿರುವ ಶ್ರೀ ಮಹಾವಿಷ್ಣುವಿನ ಶರೀರದಲ್ಲಿ ನೀನಲ್ಲದೆ ವರ್ತಿಸಲಿಹುದಾರು? (ಆತನ ವಕ್ಷಸ್ಥಲದಲ್ಲಿ ವಾಸವಾಡುವ ಸೌಭಾಗ್ಯವು ನಿನಗಲ್ಲದೆ ವರ್ತಿಗುಂಟು? ನೀನು ಆತನ ವಕ್ಷದಲ್ಲಿ ವಾಸವಾಡುವ ಕಾರಣವೇ ಆತನಿಗೆ "ಶ್ರೀನಿಕೇತನ ಶ್ರೀನಿವಾಸ, ಮೊದಲಾದ ಹೆಸರುಗಳು ಬಂದುವು. ಆದುದರಿಂದ ಅತ್ಯಾಶ್ಚರ್ಯಕರವಾದೆ ನಿನ್ನ ಸೌಭಾಗ್ಯಾತಿಶಯವು ಬಣ್ಣಿಸಲಸದಳವಾದುದು.)

ದೇವಸ್ಯ ಯೋಗಿಚಿಂತ್ಯಾ ಗದಾಭೃತಃ ॥೧೨॥ ತ್ವಯಾ ದೇವಿ ಪರಿತ್ಯಕ್ತಂ ಸಕಲಂ ಭುವನತ್ರಯಂ । ವಿನಷ್ಟಪ್ರಾಯ ಮಭವತ್ತ್ವಯೇದಾನೀಂ ಸಮೇಧಿತಂ ॥೧೩॥ ದಾರಾಃ ಪುತ್ರಾಗ್ತ ಥಾಗಾರಾ ಸ್ಸುಹೃದ್ಧಾನ್ಯ ಧನಾದಿಕಂ । ಭವತ್ಯೇ ತನ್ಮಹಾಭಾಗೇ ! ನಿತ್ಯಂ ತ್ವದ್ವೀಕ್ಷಣಾ ನ್ನೃಣಾಂ ॥೧೪॥ ಶರೀರಾರೋಗ್ಯ ನೈಶ್ವರ್ಯ ಮರಿಪಕ್ಷ ಕ್ಷಯ ಸ್ಸುಖಂ । ದೇವಿ ! ತ್ವದ್ದೃಷ್ಟಿ

॥ ೧೨ ॥ ಸರ್ವವ್ಯಾಪಿನಿ ಎನಿಸಿದ ಓ ಲಕ್ಷ್ಮೀದೇವಿಯೇ ! ನೊದಲು (ದುರ್ವಾಸರು ಕೊಟ್ಟ ಶ್ರೂಪಾಲೆಯುಂ ನಾನು ತಿರಸ್ಕರಿಸಿದ ಬಳಿಕ ಈಗ ನಿನ್ನ ಅನುಗ್ರಹಕ್ಕೆ ಪಾತ್ರನಾಗುವವುಂಟೆ) ನಿನ್ನ ಅನುಗ್ರಹ ರಹಿತವಾದ ಈ ಮೂಲೋಕವೂ ನಿನ್ನಿಂದ ಬಿಡಲ್ಪಟ್ಟುದಾಗಿ ನಷ್ಟ ಪ್ರಾಯವಾಗಿ ಅನೇಕ ಈತಿಬಾಧೆಗಳಿಗೆ ಈಡಾಗಿದ್ದಿತು. ಈಗ ಮರಳಿ ನಿನ್ನ ಅನುಗ್ರಹದಿಂದ ಅಭಿವೃದ್ಧಿಯಂ ಪಡೆದು ಪೂರ್ವಸ್ಥಿತಿಯಂ ಹೊಂದಿತು (ಆದುದರಿಂದ ನಿನ್ನ ಉಪೇಕ್ಷೆಯು ಮನುಷ್ಯರಿಗೆ ಸಕಲ ವಿಧದಲ್ಲಿಯೂ ದುಃಖಪರಂಪರೆಗಳನ್ನುಂಟು ಮಾಡುವುದಲ್ಲದೆ ಸಂತೋಷ, ಧೈರ್ಯಗಳನ್ನು ನಾಶಮಾಡುವುದು. ನಿನ್ನ ಅನುಗ್ರಹವು ಪದೇ ಪದೇ ಸಕಲ ಸಂಪತ್ತನ್ನೂ ಉಂಟುಮಾಡಿ ಸರ್ವದಾ ಸುಖವನ್ನೇ ಒದಗಿಸುವುದೆಂದು ಭಾವವು. ಈ ನಿನ್ನ ನಿಗ್ರಹಾನುಗ್ರಹಗಳೆರಡಕ್ಕೂ ನಾನೊಬ್ಬನೇ ನಿದರ್ಶನವಾಗಿರುವೆನೆಂತಲೂ ಭಾವವು) ॥ ೧೩॥ ಎಲ್ಲೆ ಪ್ರಜ್ಞೆಳಿನಿಸಿ ಪರಮ ಪವಿತ್ರಳಾದ ಶ್ರೀದೇವಿಯೇ ! ಮನುಷ್ಯನು ನಿನ್ನ ಕೃಪಾ ಕಟಾಕ್ಷಕ್ಕೆ ಪಾತ್ರನಾದೊಡೆ ಹೆಂಡಿರು, ಮಕ್ಕಳು, ಮನೆ, ಸ್ನೇಹಿತರು, ಧಾನ್ಯ, ಧನ, ಮೊದಲಾದುವುಗಳನ್ನು ಹೊಂದಿ ಈ ಲೋಕದಲ್ಲಿ ನಿರಂತರವೂ ಸುಖಿಸುವನು. (ನಿನ್ನ ಅನುಗ್ರಹಕ್ಕೆ ಪರಾಙ್ಮುಖನಾದವನು ನನ್ನಂತೆ ಸಕಲಸಂಪತ್ತನ್ನೂ ನಾಶಪಡಿಸಿಕೊಂಡು ಪತ್ನೀ ಪುತ್ರಾದಿಗಳನ್ನು ತೊರೆದು, ದೇಶಭ್ರಷ್ಟನಾಗಿ ಅನೇಕ ಸಂಕಟಗಳಿಗೆ ಗುರಿಯಾಗುವನು) ॥ ೧೪ ॥ ಓ ಜಗನ್ಮಾತೆಯೇ ! ನಿನ್ನ ಕೃಪಾಪೂರ್ವಕವಾದ ನೋಟಕ್ಕೆ ಪಾತ್ರನಾದವನಿಗೆ ದೇಹಾರೋಗ್ಯವೂ, ಸಕಲ ಸಂಪತ್ತುಗಳೂ, ಶತ್ರುನಾಶವೂ, ಸುಖವೂ, ಪ್ರಭುತ್ವವೂ ಕೂಡ ಎಂದೆಂದಿಗೂ

ದೃಷ್ಟ್ವಾನಾಂ ಪುರುಷಾಣಾಂ ನದುರ್ಲಭಂ ॥೧೩೫॥ ತ್ವಂಮಾತಾ ಸರ್ವಲೋಕಾನಾಂ ದೇವದೇವೋ ಹರಿಃ ಪಿತಾ । ತ್ವಯೈ ತದ್ವಿ ಷ್ಣುನಾಚಾಂಬ ! ಜಗದ್ವ್ಯಾಪ್ತಂ ಚರಾಚರಂ ॥೧೩೬॥ ಮಾ ನಃ ಕೋಶಂ ತಥಾಗೋಷ್ಠಂ ಮಾ ಗೃಹಂ ಮಾಪರಿಚ್ಛದಂ । ಮಾ ಶರೀರಂ ಕಳತ್ರಂಚ ತ್ಯಜೇಥಾ ಸ್ಸರ್ವಪಾವನಿ ! ॥೧೩೭॥ ಮಾ ಪುತ್ರಾ ಮಾಸುಹೃದ್ವರ್ಗಾ ಮಾಪಶೂ ನ್ಮಾ ವಿಭೂಷಣಂ ।

ದುರ್ಲಭವಾಗಿರಲಾರದು.ಸಕಲೇಷ್ಟಾರ್ಥಗಳೂ ನಿನ್ನನೋಟದೊಡನೆಯೇ ಕೈಗೂಡುವುವು ॥ ೧೩೫ ॥ ಓ ಲಕ್ಷ್ಮಿಯೇ ! ಈರೇಳು ಲೋಕಗಳಿಗೂ ನೀನೇ ತಾಯಿಯು. ಸಕಲ ದೇವತೆಗಳಿಗೂ ಒಡೆಯನಾದುದರಿಂದ ದೇವದೇವನೆನಿಸಿದ ಶ್ರೀ ಮಹಾವಿಷ್ಣುವೇ ತಂದೆಯಾಗಿರುವನು. ಓ ಮಾತೆಯೇ ! ನಿನ್ನಿಂದಲೂ ನಿನ್ನ ಪತಿಯಾದ ವಿಷ್ಣುವಿನಿಂದಲೂ ಕೂಡ ಚರಾಚರಾತ್ಮಕವಾದ ಈ ಸಕಲ ಜಗತ್ತೂ ಆವರಿಸಲ್ಪಟ್ಟಿತು. ಲೋಕದಲ್ಲಿ ಸ್ತ್ರೀವಾಚಕಗಳಾದುವುಗಳೆಲ್ಲವೂ ಮತ್ತು ಆ ಪದಾರ್ಥಗಳಿಂದ ಬೋಧಿಸಲ್ಪಡತಕ್ಕವುಗಳೂ ನೀನೇ ಆಗಿರುವೆ ಪುಂವಾಚಕಗಳೂ, ತದರ್ಥಪ್ರತಿಪಾದ್ಯಗಳೂ ಕೂಡ ನಿನ್ನ ಒಡೆಯನೆನಿಸಿ ಜಗಜ್ಜನಕನಾದ ಶ್ರೀವಿಷ್ಣುವು ॥ ೧೩೬ ॥ ಇಂತು ನೀನು ಸಕಲ ಲೋಕಗಳಿಗೂ ತಾಯಿಯಾಗಿರುವುದರಿಂದ ನನಿಗೂ ಕೂಡ ನೀನೇ ಜನನಿಯಲ್ಲವೆ ? ಆದುದರಿಂದ ನೀನು ನನ್ನ ಬೊಕ್ಕಸವನ್ನು ಉಪೇಕ್ಷಿಸಬೇಡ. ನನ್ನ ಪಶುಶಾಲೆಯು ವಿಷಯದಲ್ಲಿ ನಿನ್ನ ಅನುಗ್ರಹವು ಸಂಪೂರ್ಣವಾಗಿರಲಿ, ನನ್ನ ಮನೆಯಲ್ಲಿ ನಿರಂತರವೂ ಸಂತೋಷದಿಂದ ನೆಲೆಸಿರು. ನನ್ನ ಪರಿವಾರವು ಎಂದಿಗೂ ನಿನ್ನ ಅಗ್ರಹಕ್ಕೆ ಪಾತ್ರವಾಗಬೇಡ. ನನ್ನ ಶರೀರವನ್ನು ಚನ್ನಾಗಿ ಕಾಪಾಡುವ ಭಾರವು ತಾಯಿಯಾದ ನಿನ್ನದಲ್ಲದೇ ಮತ್ತಾರದು ? ನನ್ನ ಕಳತ್ರ ಪೋಷಣೆಯೂ ಕೂಡ ನಿನ್ನದೇ ಆಗಿರುವುದು ॥ ೧೩೭ ॥ ದೇವದೇವನೆನಿಸಿದ ಶ್ರೀಹರಿಯ ನಾಭಿಕಮಲವಾಸಿನಿಯಾದ ಓ ಲಕ್ಷ್ಮಿಯೇ ! ನನ್ನ ಮಕ್ಕಳನ್ನು ಸರ್ವದಾ ಅನುಗ್ರಹ ದೃಷ್ಟಿಯಿಂದ ಕಾಪಾಡು. ನನ್ನ ಸ್ನೇಹಿತರವೇಲೆ ಎಂದೆಂದಿಗೂ ಅಗ್ರಹಗೊಂಡು ಉಪೇಕ್ಷೆಮಾಡಬೇಡ. ನನ್ನ ಪಶುವರ್ಗವನ್ನು ಚನ್ನಾಗಿ ಪಾಲಿಸು. ನನ್ನ ಆಭರಣಾದಿಗಳಲ್ಲಿ ಸ

ತ್ಯಜೇಥಾ ಮಮ ದೇವಸ್ಯ ವಿಷ್ಣೋರ್ವಕ್ಷಸ್ಥಲಾಲಯೇ॥೧೭೪॥
ಸತ್ಯೇನ ಶೌಚ ಸತ್ಯಾಭ್ಯಾಂ ತಥಾ ಶೀಲಾದಿಭಿ ರ್ಗುಣೈಃ । ತ್ಯ
ಜ್ಯಂತೇ ತೇ ನರಾ ಸದ್ಯ ಸ್ಸಂತ್ಯಕ್ತಾಯೇ ತ್ವಯಾಽಮಲೇ ! ॥
ತ್ವಯಾ ವಲೋಕಿತಾ ಸದ್ಯ ಶ್ಶೀಲಾದ್ಯೈ ರ್ಗುಣೈಃ ಸಕಲೈ ರ್ಗುಣೈಃ।
ಧನೈಶ್ವರ್ಯೈ ರ್ಯುಜ್ಯಂತೇ ಪುರುಷಾ ನಿರ್ಗುಣಾ ಅಪಿ ॥೧೭೫॥
ಸಶ್ಲಾಘ್ಯ ಸ್ಸಗುಣೋ ಧನ್ಯ ಸ್ಸಕುಲೀನ ಸ್ಸಬುದ್ಧಿಮಾ ।

ರ್ವದಾ ನೆಲೆಸಿರು (ಓ ಮಾತೆಯೇ ! ನಾನೇ ನಿನ್ನ ಸುತನಾಗಿರುವುದರಿಂದ ನನ್ನ ವಸ್ತುಗಳೆಲ್ಲವೂ ನಿನ್ನ ಪೋಷಣೆಗೇ ಒಳಪಟ್ಟವು. ತಾಯಿಯನ್ನು ಮಗನು ಈ ರೀತಿ ಪ್ರಾರ್ಥಿಸ ಬೇಕಾದುದೇ ಅನವಶ್ಯಕವಾದರೂ ನ ನ್ನ ಚಾಪಲ್ಯನಿವೃತ್ತಿಗಾಗಿ ಪ್ರಾರ್ಥಿಸುವೆನು ಆದುದರಿಂದ ಸಂಪೂರ್ಣ ವಾದ ಅನುಗ್ರಹವಿಟ್ಟು ನನ್ನನ್ನೂ, ನನ್ನ ಗೃಹಾರಾಮ, ಪತ್ನೀ ಪುತ್ರಾದಿ ಗಳನ್ನೂ ಸಲಹು. ಎಂದು ಭಾವವು) ॥ ೧೭೪ ॥

ಕಮಲದಂತೆ ನಿರ್ಮಲವಾದ ದೇಹಕಾಂತಿಯಿಂದ ಕಂಗೊಳಿಸುವ ಲಕ್ಷ್ಮಿಯೇ ! ನಿನ್ನ ಅನುಗ್ರಹಕ್ಕೆ ದೂರರಾದ ಮನುಜರು ಸಂತೋಷ (ಧೈರ್ಯ, ಉತ್ಸಾಹ) ಶೌಚ, ಆಚಾರಶೀಲತೆ, ಸತ್ಯವನ್ನೇ ಅನವರತವೂ ನುಡಿಯುವಿಕೆ, ಅಂತೆಯೇ ಶೀಲ, ಶೌರ್ಯ, ಮೊದಲಾದ ಸದ್ಗುಣಗಳಿಂದ ವಿಮುಕ್ತರೆನಿಸಿ ಆ ಕ್ಷಣದಲ್ಲಿಯೇ ಅನೇಕ ಕಷ್ಟಗಳಿಗೆ ಈಡಾಗಿ ದುಃ ಖಭಾಗಿಗಳಾಗುವರು. ಆದುದರಿಂದ ಸರ್ವಕಾಲದಲ್ಲಿಯೂ ನಿನ್ನ ಕೃಪಾ ಪೂರ್ವಕವಾದ ದೃಷ್ಟಿಯನ್ನು ನನ್ನಲ್ಲಿ ಪ್ರಸಾರಗೊಳಿಸಿ ನನ್ನನ್ನು ಸಲಹು ॥೧೭೫॥ ಮತ್ತು ನಿನ್ನ ಅನುಗ್ರಹಕ್ಕೆ ಪಾತ್ರರಾದವರು ಶೌ ರ್ಯ್ಯ ದಾರ್ಯಾದಿ ಗುಣಹೀನರಾಗಿದ್ದರೂ, ದುಷ್ಕುಲದಲ್ಲಿ ಜನಿಸಿದವರಾಗಿ ದ್ದರೂ, ಕುರೂಪಿಗಳಾಗಿದ್ದರೂ ಕೂಡ ಒಡನೆಯೇ ಒಳ್ಳೆಯ ಶೀಲವು ಳ್ಳವರೂ, ಶೂರರೂ, ಬುದ್ಧಿಶಾಲಿಗಳೂ, ಸೌಂದರ್ಯವಂತರೂ, ಸತ್ಕು ಲಪ್ರಸೂತರೂ ಎನಿಸಿ ಸಕಲಸದ್ಗುಣ ಸಂಪನ್ನರಾಗಿ ಧನ, ಕನಕ, ವಸ್ತು ವಾಹನ ಮೊದಲಾದ ಸಕಲಸಂಪತ್ತುಗಳಂ ಪಡೆದು ಪ್ರಭುತ್ವ, ಧೈರ್ಯ, ಉತ್ಸಾಹ ಸಂಪನ್ನರೆನಿಸಿ ಸುಖಿಸುವರು. ಆದುದರಿಂದ ಬಣ್ಣಿಸಲಸದ ಳವಾದ ನಿನ್ನ ಮಹಿಮೆಯಂ ಎಷ್ಟೆಂದು ವಿವರಿಸಲಿ ? ॥ ೧೭೬ ॥ ಎಲ್ಲೆ

ಸಶೂರ ಸ್ಯಚ ವಿಕ್ರಾಂತೋ ಯಂ ತ್ವಂ ದೇವಿ! ನಿರೀಕ್ಷಸೇ॥೧೪॥
ಸದ್ಯೋ ವೈಗುಣ್ಯಮಾಯಾಂತಿ ಶೀಲಾದ್ಯಾ ಸ್ಸಕಲಾಗುಣಾಃ।
ಪರಾಙ್ಮುಖೀ ಜಗದ್ಧಾತ್ರೀ ಯಚ್ಚೈ ತ್ವಂ ವಿಷ್ಣ್ವವಲ್ಲಭೆ! ॥೧೫॥
ನತೇ ವರ್ಣಯಿತುಂ ಶಕ್ತಾ ಗುಣಾಞ್ ಜಿಹ್ವಾಪಿ ವೇಧಸಃ। ಪ್ರ

ಸರ್ವಾಂತರ್ಯಾಮಿಣಿಯಾದ ಶ್ರೀದೇವಿಯೇ! ಯಾವ ಮನುಜನಂ ನಿನ್ನ ಕೃಪಾಕಟಾಕ್ಷವು ಗೋಚರಿಸುವುದೋ, ಅವನೇ ಹೊಗಳಲು ಯೋಗ್ಯನಾದವನು. ಆತನಿಗಿಂತಲೂ ಈ ಲೋಕದಲ್ಲಿ ಗುಣಶಾಲಿಯು ಮತ್ತಾವನುಂಟು? ಆತನೇ ವಂಶೈಶ್ವರ್ಯವಾಲಿ ಎನಿಸುವನು. ಸಕಲರೂ ಆತನೇ ಮಹಾಕುಲಪ್ರಸೂತನೆನ್ನುವರು. ಅವನು ಎಂತಹ ಮೂಢನಾದರೂ ಅತ್ಯಂತ ವಿವೇಕಿ ಎನಿಸುವನು. ಅವನು ಶೂರಾಗ್ರಣಿಯಾಗುವನು. ಆತನಿಗಿಂತಲೂ ಪರಾಕ್ರಮಿಯಾದವನೇ ಇಲ್ಲ ಇದೆಲ್ಲವೂ ನಿನ್ನ ಮಹಿಮಾತಿಶಯವಲ್ಲವೆ?॥೧೬॥ ಎಲ್ಲೆ ವಿಷ್ಣುವಿನ ಪ್ರಿಯರಶ್ಮಿ ಎನಿಸಿದ ಮಂಗಳಾಂಗಿಯೇ! ಜಗಜ್ಜನನಿಯಾದ ನೀನು ಯಾವಮನುಜನನ್ನು ಕೃಪಾಪೂರ್ವಕವಾದ ಕಟಾಕ್ಷದಿಂದ ನೋಡುವುದಿಲ್ಲವೋ ಆತನು ಮಹಾಕುಲಪ್ರಸೂತನಾದರೂ, ಶೀಲಧರ್ಮಗಳನ್ನು ಬಲ್ಲವನಾದರೂ, ಸುಂದರನೂ ಧೀರನೂ, ಶೂರನೂ, ವಿವೇಕಿಯೂ, ವಿನಯ ಸಂಪನ್ನನೂ ಆಗಿದ್ದರೂ ಕೂಡ ನಿನ್ನ ಅನುಗ್ರಹವು ಆತನಿಗಿಲ್ಲವಾದ ದರಿಂದ ಗ್ರೀಷ್ಮಕಾಲದ ಮಧ್ಯಾಹ್ನದ ಚಂದ್ರನಂತೆ ಆತನ ಗುಣಗಳೆಲ್ಲವೂ ಮಾಲಿನ್ಯವಂ ಪಡೆದು ಕೇವಲನಿಸ್ತೇಜಸ್ಕನಾಗಿ ಸರ್ವದಾ ಅನೇಕ ದುಃಖಗಳನ್ನನುಭವಿಸುವನು (ಇದಂದರಿಂದ ಪ್ರಕೃಷ್ಟವಾದ ಗುಣಗಳುಳ್ಳವನಾದರೂ ಆಕೆಯ ಅನುಗ್ರಹವು ದೊರೆಯದಿದ್ದರೆ ಆತನಗುಣಗಳೆಲ್ಲವೂ ದೋಷಗಳಾಗಿಯೇ ಪರಿಣಮಿಸುವುವು, ಎಂಬುದಾಗಿ ಭಾವವು) ॥ ೧೫॥ ಕಮಲಗಳಂತೆ ಕಾಂತಿಯುಕ್ತಗಳೆನಿಸಿ, ವಿಶಾಲಗಳಾಗಿಯೂ, ನಿರ್ಮಲಗಳಾಗಿಯೂ ಇರುವ ಲೋಚನಯುಗ್ಮದಿಂದೊಪ್ಪುವ ಓ ಜಗನ್ಮಾತೆಯೇ! ಅನವರತವೂ ವೇದಪ್ರವಚನ ಶೀಲನೆನಿಸಿ, ಪರಮಾಯು ಸಂಪನ್ನನೆನಿಸಿದ ಬ್ರಹ್ಮನ ನಾಲಗೆಯೂ ಕೂಡ ನಿನ್ನ ಗುಣಗಳನ್ನು ಬಣ್ಣಿಸಲು ಶಕ್ತವಲ್ಲ. ಇಂತಿರಲು ನಾನು ನಿನ್ನನ್ನು ಸ್ತೋತ್ರಮಾಡಿ, ನಿನ್ನ ಗುಣ ಗುಣಗಳನ್ನು ವರ್ಣಿಸಿ

ಸೀದ ದೇವಿ ! ಪದ್ಮಾಕ್ಷಿಮಾಽಸ್ಮಾಕ್ಂ ತ್ವಾಕ್ಷೀಃ ಕದಾಚನ ॥
ಶ್ರೀ ಪರಾಶರಃ॥ಏವಂ ಶ್ರೀ ಸ್ತುತಾ ಸಮ್ಯಕ್ಪ್ರಾಹಾ ದೃಶ್ಯಾ
ಶತಕ್ರತುಂ । ಪಶ್ಯತಾಂ ಸರ್ವದೇವಾನಾಂ ಸರ್ವಭೂತಸ್ಥಿತಾ ದ್ವಿ
ಜ ! ॥ ೧೪೪ ॥ ಶ್ರೀರುವಾಚ ॥ ಪರಿತುಷ್ಟಾಽಸ್ಮಿ ದೇವೇಶ !
ಸ್ತೋತ್ರೇಣಾನೇನತೇ ಹರೇ ! । ವರಂ ವೃಣೀಷ್ವ ಯಸ್ತ್ವ
ಷ್ಟೋ ವರದಾಽಹಂ ತವಾಗತಾ ॥ ೧೪೫॥ ಇಂದ್ರಉವಾಚ ॥ ವರ

ಆದರಿಂದ ನಿನ್ನನ್ನು ಮೆಚ್ಚಿಸಿ, ನಿನ್ನ ಅನುಗ್ರಹಕ್ಕೆ ಪಾತ್ರನಾಗಬೇಕಾ
ದರೆ ಅದು ನನಿಗೆ ಸಾಧ್ಯವಾಗುವುದೆಂತು ? ಇಂತು ನಿನ್ನ ಗುಣಗಳನ್ನು ವ
ರ್ಣಿಸುವುದು ಸರ್ವರಿಗೂ ಅಸಾಧ್ಯವಾದುದರಿಂದ ನೀನಾಗಿಯೇ ದಯಮಾ
ಡಿ ನನ್ನ ವಿಷಯದಲ್ಲಿ ಪ್ರಸನ್ನಳಾಗು ನನ್ನನ್ನು ಎಂದೆಂದಿಗೂ ಕೈಬಿಡದೆ
ಸಲಹು ಎಂಬದಾಗಿ ಇಂದ್ರನು ದೇವಲೋಕದಲ್ಲಿ ದೇವತೆಗಳ ಇದಿರಾ
ಗಿ ಜಗಜ್ಜನನಿಯೂ, ಸಕಲೈಶ್ವರ್ಯದಾಯಕಳೂ ಎನಿಸಿದ ಆ ಲಕ್ಷ್ಮೀ
ಯನ್ನು ಅನನ್ಯ ಭಾವನೆಯುಳ್ಳ ಭಕ್ತಿಯಿಂದ ಸ್ತೋತ್ರಮಾಡಿದನು.
॥ ೧೪೫ ॥ ಪರಾಶರಮುನಿಯು ಶಿಷ್ಯನಾದ ಮೈತ್ರೇಯನಿಗೆ ಹೇಳುತ್ತಾ
ನೆ. ಅಯ್ಯಾ ದ್ವಿಜವರ್ಯನೇ ! ಇಂತು ಇಂದ್ರನು ಅನನ್ಯಭಕ್ತಿಯಿಂದ
ಸ್ತೋತ್ರಮಾಡಲು, ಸಕಲ ಭೂತನಿವಾಸಿನಿಯಾದ ಆ ಲೋಕಮಾತೆ
ಯು ಪರಮಹರ್ಷಿತಳಾಗಿ ಆ ಇಂದ್ರನಿಗೆ ಕಾಣದಂತೆ ಅಲ್ಲಿಯೇ ನೆಲೆಸಿ
ಸಮಸ್ತ ದೇವತೆಗಳ ಇದಿರಾಗಿಯೇ ಇಂದ್ರನಂ ಕುರಿತು ಇಂತೆಂ
ದಳು ॥೧೪೪॥ ಮಹಾ ಲಕ್ಷ್ಮೀಯು ಹೇಳುತ್ತಾಳೆ:—ಎಲೈ ದೇವತೆಗಳ
ಗೆ ಒಡೆಯನೆನಿಸಿದ ಇಂದ್ರನೇ ! ಇದುವರೆಗೂ ನೀನು ನನ್ನನ್ನು ಸ್ತೋ
ತ್ರಮಾಡಿದುದರಿಂದ ನಾನು ಅತ್ಯಂತಸಂತುಷ್ಟಳಾಗಿರುವೆನು. ಆದುದರಿಂ
ಲೇ ನಿನಗೆ ವರವಂ ದಯಪಾಲಿಸಬೇಕೆಂದು ನಿನ್ನಲ್ಲಿಗೆ ಬಂದಿರುವೆ
ನು, ಬೇಕಾದ ವರವಂ ಬೇಡೆನಲು, ಆಗ ಇಂದ್ರನು ॥ ೧೪೫
ಓ ಜಗನ್ಮಾತೆಯೇ ! ನನ್ನ ಸ್ತೋತ್ರದಿಂದ ನೀನು ಸಂತುಷ್ಟಳಾಗಿ ದಿ
ವಾಗಿಯೂ ನನಿಗೆ ವರವಂ ದಯಪಾಲಿಸಬೇಕೆಂಬದಾಗಿಯೇ ಇಲ್ಲಿ
ಬಂದ ಪಕ್ಷದಲ್ಲಿ, ನಾನು ವರವಂ ನಿನ್ನಿಂದಪೊಂದಲು ಯೋಗ್ಯನಾಗಿ
ಪಕ್ಷದಲ್ಲಿ, ನೀನು ಎಂದೆಂದಿಗೂ ಈ ಮೂಲೋಕವನ್ನು ಉಪೇಕ್ಷಿಸ

ದಾಯದಿಮೇ ದೇವಿ ! ವರಾರ್ಹೋಽಯದಿ ಚಾಪ್ಯಹಂ । ತ್ರೈ ಲೋಕ್ಯಂ ನತ್ವಯಾ ತ್ಯಾಜ್ಯ ಮೇಷ ಮೇ ಽಸ್ತು ವರಃ ಪರಃ॥೧೫॥ ಸ್ತೋತ್ರೇಣ ಯಸ್ತ್ವಾಥೈತೇನ ತ್ವಾಂ ಸ್ತೋಷ್ಯ ತ್ಯಬ್ಧಿ ಸಂಭ ವೇ ! । ಸತ್ವಯಾ ನಪರಿತ್ಯಾಜ್ಯೋ ದ್ವಿತೀಯೋ ಽ ಸ್ತು ವರೋ ಮಮ ॥೧೬॥ ಶ್ರೀರುವಾಚ ॥ ತ್ರೈ ಲೋಕ್ಯಂ ತ್ರಿದಶ ಶ್ರೇ ಷ್ಠ ! ನ ಸಂತ್ಯಕ್ಷ್ಯಾಮಿ ವಾಸವ ! । ದತ್ತೋ ವರೋ ಮಯಾ ಽಯಂ ತೇ ಸ್ತೋತ್ರಾರಾಧನ ತುಷ್ಟಯಾ ॥ ೧೭ ॥ ಯಚ್ಚ ಸಾಮ್ಯಂ ತಥಾಪ್ಯಾತ ಸ್ತ್ರೈಣಾನೇನ ಮಾನವಃ । ಮಾಂ ಸ್ತೋಷ್ಯತಿ ನತಸ್ಯಾಹಂ ಭವಿಷ್ಯಾಮಿ ಪರಾಙ್ಮುಖೀ ॥೧೮॥ ಶ್ರೀಪರಾಶರಃ ॥

ಕಾಪಾಡುವುದಲ್ಲದೇ ಸ್ಥಿರವಾಗಿ ಇಲ್ಲಿಯೇ ನೆಲೆಸಿರು. ಇದೇ ನನ್ನ ಉತ್ತಮೋತ್ತಮವಾದ ಪ್ರಾರ್ಥನೆಯು. ಇದನ್ನು ನೀನು ದಯಪಾಲಿ ಸು ॥೧೫॥ ಮತ್ತೇನೆಂದರೆ,-ಓ ಜಲಧಿಕನ್ಯೆಯೇ ! ಇದುವರೆಗೂ ನಾನು ನಿನ್ನನ್ನು ಹೊಗಳಿದ ಈ ಸ್ತೋತ್ರದಿಂದ ಮತ್ತಾರಾದರೆ ನಿನ್ನನ್ನು ಅನನ್ಯ ಭಾವನೆಯಿಂದ ಭಕ್ತಿಪುರಸ್ಸರವಾಗಿ ಹೊಗಳುವರೋ ಅಂತಹ ವರನ್ನೂ ಕೂಡ ಉಪೇಕ್ಷಿಸದೆ ಅನುಗ್ರಹಮಾಡಿ ಸಲಹು. ಇದೇ ನನ್ನ ಎರಡನೆಯವರವು ॥೧೬॥ ಇಂತು ದೇವೇಂದ್ರನು ಆ ಲಕ್ಷ್ಮೀದೇವಿ ಯನ್ನು ಪ್ರಾರ್ಥಿಸಲು ಪರಮಋಷಿತಳಾದ ಆಲೋಕವಾತೆಯು ಇಂದ್ರ ನಂ ಕುರಿತು ಇಂತೆಂದಳು:-ಸಕಲ ದೇವತೋತ್ತಮನೆನಿಸಿದ ಓ ಇಂದ್ರ ನೇ ! ನಿನ್ನ ಕೋರಿಕೆಯಂತೆಯೇ ನಾನೆಂದಿಗೂ ಈ ಮೂರುಲೋಕವಂ ಬಿಟ್ಟು ತೆರಳಲಾರೆ, ನಿನ್ನ ಸ್ತೋತ್ರದಿಂದ ಸಂತುಷ್ಟಳಾದ ನಾನು ನಿನ ಗೀವರವಂ ದಯಪಾಲಿಸರುವೆನು. ಆದುದರಿಂದ ನಾನು ಈ ತ್ರೈಲೋ ಕ್ಯವಂ ಉಪೇಕ್ಷೆಮಾಡಿ ಬೇರೊಂದೆಡೆಗೆ ತೆರಳುವೆನೆಂದು ಹಂಬಲಿಸಬೇ ಡ ॥೧೭॥ ಮತ್ತು ನಿನ್ನ ಕೋರಿಕೆಯಂತೆಯೇ ಯಾರಾದರೆ ಅನುದಿ ನವೂ ಸಂಧ್ಯಾಕಾಲಗಳಲ್ಲಿ ಈ ಸ್ತೋತ್ರದಿಂದ ನನ್ನನ್ನು ಹೊಗಳಿ ನನ್ನ ಗುಣಗಳನ್ನು ಕೀರ್ತನೆಮಾಡುವರೋ ಅಂತಹವರ ವಿಷಯದಲ್ಲಿಯೂ ನಾನು ಎಂದೆಂದಿಗೂ ಪರಾಙ್ಮುಖಳಾಗಲಾರೆನು. ಇದರಿಂದ ನಿನ್ನ ಎರ ಡನೆಯವರವೂ ಕೂಡ ಸಿದ್ಧಿಸಿದಂತಾಯಿತು. ॥೧೮॥ ಪರಾಶರಮು

ಏವಂ ದದೌ ವರಂ ದೇವೀ ದೇವರಾಜಾಯ ವೈಪುರಾ । ಮೈತ್ರೇ
ಯ ! ಶ್ರೀರ್ಮಹಾಭಾಗಾ ಸ್ತೋತ್ರಾರಾಧನ ತೋಷಿತಾ ॥೧೪೦॥
ಭೃಗೋಃ ಖ್ಯಾತ್ಯಾಂ ಸಮುತ್ಪನ್ನಾ ಶ್ರೀಃ ಪೂರ್ವ ಮುದಧೇಃ ಪು
ನಃ।ದೇವದಾನವ ಯತ್ನೇನ ಪ್ರಸೂತಾ ಕವ್ಯ ಕವಮಂಥನೇ ॥೧೪೧॥
ಏವಂ ಯದಾ ಜಗತ್ಸ್ವಾಮೀ ದೇವ ದೇವೋ ಜನಾರ್ದನಃ ।
ಅವತಾರಂ ಕರೋತ್ಯೇಷಾ ತದಾ ಶ್ರೀ ಸ್ತತ್ಸಹಾಯಿನೀ ॥೧೪೨॥
ಪುನಶ್ಚ ಪದ್ಮಾತ್ಸಂಭೂತಾ ಹ್ಯಾದಿತೇ್ಯೀ ಽ ಭೂ ಚ್ಚದಾ ಹರಿಃ ।

ನಿಯು ಶಿಷ್ಯನಿಗೆ ತಿಳಿಸುತ್ತಾನೆ -ಎಲೌ ಮೈತ್ರೇಯನೆ, ಮಹದೈಶ್ವರ್ಯ ಸಂಪನ್ನಳೆನಿಸಿ, ಸರ್ವಾಂತರ್ಯಾಮಿಣಿಯಾದ ಆ ಶ್ರೀ ದೇವಿಯು ಪೂರ್ವ ಕಾಲದಲ್ಲಿ, ಇಂದ್ರನಿಂದ ಸ್ತೋತ್ರಮಾಡಿಸಿಕೊಂಡು ಪರಮಾನಂದ ಭರಿತಳಾಗಿ ದೇವರಾಜನಾದ ಇಂದ್ರನಿಗೆ ಈ ಎರಡು ವರಗಳನ್ನು ಅತಿವಿಶ್ವಾಸದಿಂದ ದಯಪಾಲಿಸಿದಳು ॥೧೪೦॥ ಪರಮಕರುಣಾಶಾಲಿಯಾದ ಪರಾಶರಮುನಿಯು ಶಿಷ್ಯನಾದ ಮೈತ್ರೇಯನ ಶಂಕಾನಿರಾಸಾರ್ಥವಾಗಿ ಈ ಕಥೆಯನ್ನು ಸವಿಸ್ತರವಾಗಿ ವರ್ಣಿಸಿ, ಒಳಕ ಆತನ ಸಂದೇಹವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಈ ಮುಂದೆ ವಿವರಿಸುವ ಪ್ರಕರಣವನ್ನು ಪ್ರಾರಂಭಿಸುತ್ತಾನೆ -ಅಯ್ಯಾ ! ಮೊದಲು ಲಕ್ಷ್ಮಿಯು ಭೃಗುವಿನಿಂದ ಖ್ಯಾತಿದೇವಿಯಲ್ಲಿ ಜನಿಸಿದಳು. ಬಳಿಕ ದೇವದಾನವರು ಅಮೃತಕ್ಕೋಸ್ಕರ ಪಾಲ್ಗಡಲನ್ನು ಮಥನಮಾಡುವ ಕಾಲದಲ್ಲಿ (ದೇವದಾನವರು ಮಂದರವನ್ನು ಕಡೆಗೋಲಾಗಿ ಮಾಡಿ ಕ್ಷೀರಸಮುದ್ರವನ್ನು ಮಥನಮಾಡುವ ಕಾಲದಲ್ಲಿ) ಅಲ್ಲಿಂದ ಜನಿಸಿದಳು. ಇದು ಆಕೆಯನ್ನು ಎರಡನೆಯ ಅವತಾರವೆಂದು ತಿಳಿ. ॥೧೪೧॥ಸಕಲ ಜಗನ್ನಿಯಾಮಕನೆನಿಸಿ ದೇವದೇವನೆನಿಸಿದ ಶ್ರೀ ಮಹಾವಿಷ್ಣುವು ಲೋಕಾನುಗ್ರಹಾರ್ಥವಾಗಿ ಅವತರಿಸಿದ ಸಮಯಗಳಲ್ಲಿ ಆಕೆಯೂ ಕೂಡ ಆತನಿಗೆ ಸಹಾಯಕಳಾಗಿ ಅವತರಿಸಿ, ತದನುವರ್ತಿನಿಯಾಗಿರುವಳು, ಆದರೆ, ಯಾವ ಯಾವ ಅವತಾರದಲ್ಲಿ ಈಕೆಯು ಯಾವ ಯಾವ ರೂಪವಂತಾಳಿದ್ದಳೆಂದರೆ ಕೇಳು.- ॥೧೪೨॥ ಶ್ರೀಮನ್ನಾರಾಯಣನು ಬಲಿನಿಗ್ರಹಾರ್ಥವಾಗಿ ಇಂದ್ರನಿಗೆ ತಮ್ಮನಾಗಿ ಅದಿತಿದೇವಿಯಲ್ಲಿ ಪುಟ್ಟಿದಕಾಲದೊಳ್ ಈಕೆಯು

ಯದಾಚ ಭಾರ್ಗವೋ ರಾಮ ಸ್ತದಾ ಽಭೂ ದ್ಧರಣೀತಿ ವ್ಯಯಂ ॥
ರಾಘವತ್ವೇ ಽ ಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ । ಅನ್ಯೇ
ಷು ಚಾವತಾರೇಷು ವಿಷ್ಣೋ ರೇಷಾನಪಾಯಿನೀ ॥ ೧೪೪ ॥
ದೇವತ್ವೇ ದೇವದೇಹೀಯಂ ಮನುಷ್ಯತ್ವೇಚ ಮಾನುಷೀ । ವಿ
ಷ್ಣೋ ರ್ದೇಹಾನುರೂಪಾಂವೈ ಕರೋತ್ಯೇಷಾ ತ್ಮನ ಸ್ತನುಂ॥

ತಾವರೆಯಲ್ಲಿ ಪುಟ್ಟಿ "ಪದ್ಮಾಲಯೆ,, ,,ಪದ್ಮೆ,, ಎಂಬ ಹೆಸರನ್ನು ಪಡೆದುಕೊಂಡಳು, ಮದಿಸಿದ ಕ್ಷತ್ರಿಯರಂ ಸಂಹರಿಸಿ ಭೂಭಾರವಂ ತಗ್ಗಿಸಲು ವಿಷ್ಣುವು ಪರಶುರಾಮಾವತಾರವಂ ಮಾಡಿದ್ದಾಗ ಈ ಲೋಕಮಾತೆಯು ಭೂದೇವಿಯಾಗಿದ್ದಳು ॥ ೧೪೩ ॥ ರಾವಣಾದಿ ದುಷ್ಟನಿಗ್ರಹಾರ್ಥಮಾಗಿ ವಿಷ್ಣುವು ಸೂರ್ಯವಂಶದಲ್ಲಿ ದಶರಥನ ಪುತ್ರನಾಗಿ ಅವತರಿಸಿದ್ದ ಕಾಲದಲ್ಲಿ ಈಕೆಯು ಸೀತಾರೂಪನಂ ತಾಳಿದ್ದಳು. ಅಂತೆಯೇ ಶಿಶುಪಾಲನೇ ಮೊದಲಾದ ಖೂಳರಂ ಸಂಹರಿಸಿ ಲೋಕಸೌಖ್ಯವನ್ನುಂಟುಮಾಡಲು ಶ್ರೀ ಮಹಾವಿಷ್ಣುವು ಯದುವಂಶದಲ್ಲಿ ವಸುದೇವನಂದನನಾಗಿ ಅವತರಿಸಿದ್ದ ಕಾಲದಲ್ಲಿ ಈಕೆಯು ,,ರುಕ್ಮಿಣಿ,, ಎಂಬ ಹೆಸರಿನಿಂದ ಅವತರಿಸಿದ್ದಳು. ಇನ್ನೂ ಇದರಂತೆಯೇ ವಿಷ್ಣುವು ಮತ್ಸ್ಯಾದ್ಯವತಾರಗಳನ್ನು ಎತ್ತಿದ್ದ ಕಾಲದಲ್ಲಿಯೂ ಕೂಡ ಈಕೆಯು ಆತನನ್ನು ಎಡೆಬಿಡದೆ ಹಿಂಬಾಲಿಸಿದ್ದಳೇ ಹೊರತು ಒಂದು ನಿಮಿಷಮಾತ್ರವಾದರೂ ಆತನನ್ನು ಅಗಲಿದ್ದವಳಲ್ಲ ಆದುದರಿಂದ ಈಕೆಯೇ ಜಗದುತ್ಪತ್ತಿ, ಸ್ಥಿತಿ, ಲಯಗಳಿಗೆ ಮೂಲಕಾರಣ ಭೂತಳಾದ ಪ್ರಕೃತಿ ಎಂದು ತಿಳಿ ॥೧೪೪॥

ಶ್ರೀ ಮಹಾವಿಷ್ಣುವು ಲೋಕಹಿತಾರ್ಥವಾಗಿ ದೇವರೂಪದಿಂದಲೇ ಅವತರಿಸಿದಾಗ ಈಕೆಯೂ ಕೂಡ ದೇವಸಂಬಂಧಿಯಾದ ಶರೀರದಿಂದಲೇ ಅವತರಿಸುವಳು. ಆತನು ಮನುಷ್ಯ ಶರೀರವಂತಾಳಿ ಮನುಷ್ಯನಾಗಿ ಅವತರಿಸಿದಾಗ ಈಕೆಯೂ ತದನುರೂಪವಾದ ಮಾನುಷ ದೇಹದಿಂದಲೇ ಅವತರಿಸುವಳು ಸರ್ವಕಾಲಗಳಲ್ಲಿಯೂ ಈ ಲೋಕಮಾತೆಯು ಸರ್ವವ್ಯಾಪಕನಾದ ಆ ವಿಷ್ಣುವಿನ ದೇಹಕ್ಕೆ ಅನುರೂಪವಾಗಿಯೇ ತಾನೂ ದೇಹವನ್ನು ಧರಿಸುವಳಲ್ಲದೆ ಆತನಿಗೆ ವ್ಯತಿರಿಕ್ತವಾಗಿ ಯಾಗಲಿ, ಅಥವಾ ಆತನನ್ನು ಬಿಟ್ಟೆಯಾಗಲಿ ಇರುವವಳಲ್ಲ॥೧೪೫॥ ಇಂತು ಮಹಾ ಪವಿತ್ರಳಿನಿಸಿ ಜ


ಯಸ್ತ್ವೇತ ಚ್ಛೃಣುಯಾ ಜ್ಜನ್ಮ ಲಕ್ಷ್ಮ್ಯಾ ಯಶ್ಚ ಪಠೇ ನ್ನರಃ।
ಶ್ರಿಯೋ ನವಿಚ್ಯುತಿ ಸ್ತಸ್ಯ ಗೃಹೇ ಯಾವ ತ್ಕುಲತ್ರಯಂ॥೧೪೬॥
ಪಠ್ಯತೇ ಯೇಷು ಚೈವೈಷಾ ಗೃಹೇಷು ಶ್ರೀ ಕಥಾ ಮುನೇ ! ।
ಅಲಕ್ಷ್ಮ್ಮೀಃ ಕಲಹಾಧಾರಾ ನತೇಷ್ವಾ ಸ್ತೇ ಕದಾಚನ ॥೧೪೭॥
ಏತತ್ತೇ ಕಥಿತಂ ಸರ್ವಂ ಯನ್ಮಾಂ ಸ್ತ್ವಂ ಪರಿಪೃಚ್ಛಸಿ । ಕ್ಷೀ
ರಾಬ್ಧೌ ಶ್ರೀರ್ಯಥಾ ಜಾತಾ ಪೂರ್ವಂ ಭೃಗುಸುತಾ ಸತೀ ॥೧೪೮॥

ಗತ್ಪೂಜ್ಯಳಾದ ಲಕ್ಷ್ಮ್ಮಿಯ ಈ ಅವತಾರಕಥೆಯನ್ನು ಯಾರು ಅನರತವೂ ಭಕ್ತಿಯಿಂದ ಕೇಳುವರೋ, ಅಂತೆಯೇ ಪಠನಮಾಡುವರೋ ಅವರ ಮನೆಯಲ್ಲಿ ಕುಲತ್ರಯವಲ್ಲಿಯೂ ಆ ಲಕ್ಷ್ಮ್ಮಿಯು ವಿಚ್ಛಿತ್ತಿ ಎಂಬುದು ಉಂಟಾಗದೆ ಕುಲತ್ರಯದವರೂಕೂಡ ಆಯುರಾರೋಗ್ಯ ಭಾಗ್ಯಾದಿಗಳಿಂದ ಸುಖಿಸುವರು॥೧೪೬॥ಎಲೌ ಮನನ ಶೀಲನೆನಿಸಿದ ಮೈತ್ರೇಯ ಮಹರ್ಷಿಯೆ! ಯಾವ ಮನೆಯಲ್ಲಿ ಈ ಪರಿಯಾದ ಲಕ್ಷ್ಮ್ಮಿದೇವಿಯ ಕಥೆಯು ಪಠನಮಾಡಲ್ಪಡುವುದೋ ಆ ಮನೆಯಲ್ಲಿ ಅನರತವೂ ಸಕಲ ಸಂಪತ್ಸಮೃದ್ಧಿಗಳಿಂದೊಡಗೂಡಿದ ಈ ಶ್ರೀ ದೇವಿಯೇ ವಾಸವಮಾಡುವ ಕಾರಣ ಅಂತಹ ಸ್ಥಳಗಳಲ್ಲಿ ಕಲಹ, ದಾರಿದ್ರ್ಯ, ಮೊದಲಾದವುಗಳಿಗೆ ಆಶ್ರಯಭೂತಳಾದ ಅಲಕ್ಷ್ಮ್ಮಿಯು ಎಂದೆಂದಿಗೂ ತಲದೋರಲಾರಳು. ಕಲಹ, ದಾರಿದ್ರ್ಯ, ಮೊದಲಾದುವೂ ಕೂಡ ಸುಳಿಯುವುದೇ ಇಲ್ಲ ॥೧೪೭॥ ಎಲೈ ಮೈತ್ರೇಯನೆ! 'ಪೂರ್ವದಲ್ಲಿ ಭೃಗು ಪುತ್ರಿಯಾದ ಶ್ರೀ ದೇವಿಯು ಕ್ಷೀರಸಮುದ್ರದಿಂದ ಜನಿಸಿದ ಪರಿ ಎಂತು'' ? ಎಂಬುದಾಗಿ ನೀನು ನನ್ನನ್ನು ಪ್ರಶ್ನೆ ಮಾಡಿದೆಯಾದುದರಿಂದ ಇದೆಲ್ಲವಂ ನಾನು ನಿನಗೆ ವಿಶದವಾಗಿ ತಿಳಿಸಿದನು ॥೧೪೮॥ ಇಂತು ಸಕಲ ಸಂಪತ್ತುಗಳನ್ನು ಹೊಂದಲು ಮುಖ್ಯಸಾಧನವೆನಿಸಿ ಇಂದ್ರನ ಮುಖಕಮಲ ನಿರ್ಗಳಿತವಾದ ಈಸ್ತೋತ್ರ ರತ್ನವನ್ನು ಯಾರಾದರ ಅನವರತವೂ ಭಕ್ತಿ ಶ್ರದ್ಧೆಗಳಿಂದೊಡಗೂಡಿ ; ಅನನ್ಯಭಾವನೆಯಿಂದ ಪರನ ಮಾಡುವರೋ, ಅಂತಹ ಮಹಾನುಭಾವರು ಜಗನ್ಮಾತೆಯಾದ ಆಲಕ್ಷ್ಮ್ಮಿಯ ಅನುಗ್ರಹಕ್ಕೆ ಪಾತ್ರರಾಗಿ ಸಕಲೇಷ್ಟಾರ್ಥಗಳನ್ನೂ ಪಡೆದು ಪುತ್ರ ಪೌತ್ರ ಸಂಪನ್ನರೆನಿಸಿ, ಸಕಲ ಭೋಗಗಳನ್ನೂ ಅನುಭವಿಸುವರಲ್ಲದೆ, ಅವರು ವಾಸವಮಾಡುವ ಸ್ಥಳದಲ್ಲಿಯೂ ಕೂಡ, ಅವುಂಗ

ಇತಿ ಸಕಲ ವಿಭೂತ್ಯವಾಪ್ತಿ ಹೇತು ಸ್ತುತಿರಿಯ ಮಿಂದ್ರಯು
ಪೋದ್ಗತಾ ಹಿ ಲಕ್ಷ್ಮ್ಯಾಃ । ಅನುದಿನ ಮಿಹ ಪಠ್ಯತೇ ನೃಭಿ
ರ್ಯೈ ರ್ವಸತಿ ನತೇಷು ಕದಾಚಿದಪ್ಯ ಲಕ್ಷ್ಮೀಃ ॥೧೪೯॥
ಇತಿ ಶ್ರೀ ವಿಷ್ಣು ಪುರಾಣೇ ಪ್ರಥಮಾಂಶೇ ನವಮೋಽಧ್ಯಾಯಃ

ಳವು ಅಥವಾ ೮ ಲಕ್ಷ್ಮ್ಯಯು ಎಂದೆಂದಿಗೂ ತಲೆದೋರಳೆಂಬದಾಗಿ ಪರಾ
ಶರಮುನಿಯು ಪ್ರಿಯಶಿಷ್ಯನಾದ ಮೈತ್ರೇಯನಿಗೆ ರಹಸ್ಯೋಪದೇಶವಂ
ಗೈಯ್ಯುತಿದ್ದನೆಂಬಲ್ಲಿಗೆ ಶ್ರೀ ವಿಷ್ಣುಪುರಾಣ ಪ್ರಥಮಾಂಶ ದೋಳ್
ಒಂಬತ್ತನೆಯ ಅಧ್ಯಾಯಂ ಮುಗಿದುದು.

ನವಮಾಧ್ಯಾಯಂ ಸಮಾಪ್ತಂ



ಶ್ರೀ

ಓನ್ನಮಃ ಪರಮಾತ್ಮನೇ.

ಅಥ ದಶಮೋಧ್ಯಾಯಃ

ಮೈತ್ರೇಯಃ ॥ ಕಥಿತಂ ಮೇ ತ್ವಯಾ ಸರ್ವಂಯತ್ಪೃಷ್ಟೋಸಿ ಮು ಹಾಮುನೇ ! ಭೃಗುಸರ್ಗಾ ತ್ಪ್ರಭೃತ್ಯೇಷ ಸರ್ಗೋ ಮೇ ಕಥ್ಯತಾಂ ಪುನಃ ॥೧॥ ಶ್ರೀಪರಾಶರಃ ॥ ಭೃಗೋಃ ಖ್ಯಾತ್ಯಾಂ ಸ ಮುತ್ಪನ್ನಾ ಲಕ್ಷ್ಮೀ ರ್ವಿಷ್ಣು ಪರಿಗ್ರಹಃ । ತಥಾ ಧಾತೃವಿಧಾತಾರೌ

ಮನನಶೀಲನೆನಿಸಿದ ಮೈತ್ರೇಯ ಮಹರ್ಷಿಯು ತನ್ನ ಗುರುವಾದ ಪರಾಶರಮುನಿಯಂ ಕುರಿತು ಮರಳಿ ಪ್ರಶ್ನೆಮಾಡತೊಡಗಿದುದೆಂತೆಂದರೆ- ಮಹಾಮುನಿಎನಿಸಿದ ಸರಮುದಯಾಳುವಾದ ಪರಾಶರ ಮುನಿಯೇ ! ಇದು ವರೆಗೂ ನಾನು ತಿಳಿಯಬೇಕೆಂದು ಅಪೇಕ್ಷಿಸಿ ಪ್ರಶ್ನೆಮಾಡಿದ ವಿಷಯಗಳೆ ಲ್ಲವಂ ವಿಶದವಾಗಿ ಕೃಪಾಪೂರ್ವಕವಾಗಿ ತಿಳಿಸಿದವನಾದೆ ಈ ಹೀಗೆ ನೀನು ಹೇಳಿದ ಕಥಾಸಂದರ್ಭದಲ್ಲಿ ಭೃಗುಮಹರ್ಷಿಯು ವಂಶಾವಳಿಯ ನ್ನೂ ಸಹಾ ತಿಳಿಸಿರುವೆ. ಅದರ ಮಧ್ಯದಲ್ಲಿ ವಿಷ್ಣುವಿನ ಅರ್ಧಾಂಗನೆನಿಸಿ ದ ಸಾಕ್ಷಾಲ್ಲೋಕಮಾತೆಯಾದ ಲಕ್ಷ್ಮಿಯು ಉತ್ಪತ್ತಿಯನ್ನೂ ಕೂಡ ವಿಶದವಾಗಿ ವಿವರಿಸಿರುವೆ. ಇದರಿಂದ ಹಿಂದು ಮುಂದು ಸಂಬಂಧಗಳೊಂ ದೂ ನನಗೆಚನ್ನಾಗಿ ಬುದ್ಧಿವಿಷಯವಾಗಲಿಲ್ಲಾ. ಆದುದರಿಂದ ದಯವಿಟ್ಟು ಮರಳಿ ಭೃಗುಸೃಷ್ಟಿಯೊದಲ್ಗೊಂಡು ಈಭೃಗುವಿನ ವಂಶಾವಳಿಯನ್ನೇ ವಿಶದವಾಗಿ ವಿವರಿಸುವವನಾಗು ॥೧॥ ಇಂತು ಪರಮ ಭಕ್ತಿಯಿಂದ ಬೆಸ ಗೊಳ್ಳುವ ಶಿಷ್ಯನ ಕೋರಿಕೆಯಂತೆ ಪರಾಶರನು ಭೃಗುವಂಶವನ್ನು ಮರಳಿ ವರ್ಣಿಸಲುಪಕ್ರಮಿಸುತ್ತಾನೆ. ಸರ್ವವ್ಯಾಪಕನಾದುದರಿಂದ 'ವಿಷ್ಣು' ಎಂಬುದಾಗಿಕರೆಯಿಸಿಕೊಳ್ಳುವ ಪರಮಾತ್ಮನ ಪತ್ನಿ ಎನಿಸಿದ ಲಕ್ಷ್ಮಿಯು ಭೃಗು ಮಹರ್ಷಿಯಿಂದ ಖ್ಯಾತಿಎಂಬಾಕೆಯಲ್ಲಿ ಜನಿಸಿದಳು ಅಂತೆಯೇ ಮಹಾ ಮಹಿಮರುಂಪನ್ನರಾದ ಧಾತೃ, ವಿಧಾತೃ ಎಂಬ ಇಬ್ಬರು ಗಂಡು ಮಕ್ಕಳು ಆಭೃಗುಮಹರ್ಷಿಗೆ ಖ್ಯಾತಿದೇವಿಯಲ್ಲಿ ಪುಟ್ಟಿದರು (ಭೃಗುಮ ಹರ್ಷಿಯು ಖ್ಯಾತಿ ದೇವಿಯಲ್ಲಿ ಜ್ಯೇಷ್ಠಳೆನಿಸಿದ ಲಕ್ಷ್ಮೀದೇವಿಯೆಂಬ ಒಬ್ಬ ಹೆಣ್ಣು ಮಗಳನ್ನೂ, ಧಾತೃ, ವಿಧಾತೃಗಳೆಂಬ ಇಬ್ಬರು ಗಂಡು

ಖ್ಯಾತ್ಯಾಂ ಜಾತೌ ಸುತೌಭೃಗೋಃ ॥೨॥ ಆಯತಿ ರ್ನಿಯತಿ ಶ್ಚೈ ವ ಮೇರೋಃ ಕನ್ಯೇ, ಮಹಾತ್ಮನಃ । ಭಾರ್ಯೇ ಧಾತೃ ವಿಧಾ ತೋಸ್ತೇ ತಯೋರ್ಜಾತೌ ಸುತಾ ವುಭೌ ॥೩॥ ಪ್ರಾಣಶ್ಚೈವ ಮೃಕಂಡುಶ್ಚ ಮಾರ್ಕಂಡೇ ಯೋ ಮೃಕಂಡುತಃ । ತತೋ ವೇ ದಶಿರಾ ಜಜ್ಞೇ ಪ್ರಾಣಸ್ಯಾಪಿ ಸುತಂ ಶೃಣು ॥ ೪ ॥ ಪ್ರಾಣಸ್ಯ ದ್ಯುತಿಮಾ ನ್ ಪುತ್ರ ಅಜಾವಾಂಶ್ಚ ತತೋಽಭವತ್ । ತತೋವಂ ಶೋ ಮಹಾಭಾಗ! ವಿಸ್ತರಂ ಭಾರ್ಗವೋ ಗತಃ ॥೫॥ ಪತ್ನೀ ಮ

ಮಕ್ಕಳನ್ನು ಪಡೆದನು) ॥೨॥ ಮೇರುವಿಗೆ ಆಯತಿ, ನಿಯತಿಗಳೆಂಬ ಇಬ್ಬರು ಹೆಣ್ಣು ಮಕ್ಕಳಿದ್ದರು. ಅವರಲ್ಲಿ ಹಿರಿಯವಳಾದ ಆಯತಿಯನ್ನು ಧಾತೃವೂ, ಕಿರಿಯವಳಾದ ನಿಯತಿಯನ್ನು ವಿಧಾತೃವೂ ಮದುವೆಯಾದರು. ಈ ಆಯತಿ, ನಿಯತಿಯರಲ್ಲಿ, ಪ್ರಾಣ, ಮತ್ತು ಮೃಕಂಡುಗಳೆಂಬ ಇಬ್ಬರು ಸುತರು ಜನಿಸಿದರು. ಮೃಕಂಡುವಿಗೆ ಮಾರ್ಕಂಡೇಯನೆಂಬೊಬ್ಬ ತನಯನು ಪುಟ್ಟಿದನು. ಆ ಮಾರ್ಕಂಡೇಯನಿಗೆ ವೇದಶಿರಸ್ಸೆಂಬೊಬ್ಬ ತನಯನುಂಟಾದನು ಇನ್ನು ಪ್ರಾಣನ ಸಂತತಿಯನ್ನು ವಿವರಿಸುವೆನು ಕೇಳು ॥೩-೪॥ ಧಾತೃವಿಗೆ ಆಯತಿ ಎಂಬಾಕೆಯಲ್ಲಿ ಹುಟ್ಟಿದ ಪ್ರಾಣನಿಗೆ ದ್ಯುತಿಮಂತನೆಂಬುವನು ಮಗನು ಆ ದ್ಯುತಿಮಂತನಿಗೆ ಅಜಾವಂತನೆಂಬೊಬ್ಬ ತನಯನು ಜನಿಸಿದನು. ಮಹದೈಶ್ವರ್ಯ ಶಾಲಿ ಎನಿಸಿದ ಎಲೈ ಮೈತ್ರೇಯನೆ, ಆ ಬಳಿಕ ದಿನೇದಿನೇ ಭೃಗುವಿನ ವಂಶವು ವಿಶಾಲವಾಗಿ ಹಬ್ಬಿಕೊಂಡಿತು ॥೫॥ (ಇಂತು ಇಪ್ಪತ್ತನಾಲ್ಕು ಮುಂದಿದ ಕ್ಷಕನ್ಯೆಯರಲ್ಲಿ ಧರ್ಮಪುರುಷನಿಂದ ಪರಿಗೃಹೀತರಾದ ಶ್ರದ್ಧೆ ಮೊದಲಾದ ಹದಿಮೂರು ಮುಂದಿಯ ವಂಶವನ್ನು ವಿಶದವಾಗಿ ವಿವರಿಸಿದೆನು. ಬಳಿಕ ಭೃಗುಮಹರ್ಷಿಯ ಪತ್ನಿಯಾದ ಖ್ಯಾತಿ, ಮಹೇಶ್ವರನ ಪತ್ನಿಯಾದ ಸತೀದೇವಿ, ಮರೀಚಿ ಮಹರ್ಷಿಯ ಪತ್ನಿಯಾದಸಂಭೂತಿ ಇವರೇ ಮೊದಲಾದವರಲ್ಲಿ ಭೃಗುಪತ್ನಿಯಾದ ಖ್ಯಾತಿದೇವಿಯ ವಂಶಾವಳಿಯನ್ನೂ ವಿವರಿಸಿದೆನು ಮಹೇಶ್ವರನ ಪತ್ನಿಯಾದ ಸತೀದೇವಿಯು ತಾನು ಪ್ರೌಢಾವಸ್ಥೆಯನ್ನು (ಯೌವನವನ್ನು) ಹೊಂದುವುದಕ್ಕಿಂತಲೂ ಮುಂಚೆಯೇ

ರೀಚೇಸ್ಸಂ ಭೂತಿಃ ಪೌರ್ಣಮಾಸ ಮಸೂಯತ। ವಿರಜಾಃ ಪರ್ವ
ತಶ್ಚೈವ ತಸ್ಯಾಪುತ್ರೌ ಮಹಾತ್ಮನಃ॥ ವಂಶಸಂ ಕೀರ್ತನೇಪುತ್ರಾ ೯
ವದಿಷ್ಯೇಽಹಂ ತತೋ ದ್ವಿಜ। ॥೬॥ ಸ್ಮೃತಿಶ್ಚಾಂಗಿ ರಸಃ ಪತ್ನೀ
ಪ್ರಸೂತಾ ಕನ್ಯಕಾಸ್ತಥಾ। * ಸಿನೀವಾಲೀ ಕುಹೂಶ್ಚೈವ ರಾ

ದಕ್ಷನಿಂದ ತನ್ನಪತಿಗುಂಟಾದ ಅಪಮಾನಕ್ಕಾಗಿ ನೇಹತ್ಯಾಗ ಮಾಡಿದುದ
ರಿಂದ ಆಕೆಯ ವಂಶವು ಬೆಳೆಯಲಿಲ್ಲ. ಆದುದರಿಂದ ಕ್ರಮಪ್ರಾಪ್ತವೆನಿ
ಸಿದ ಮರೀಚಿಪತ್ನಿಯಾದ ಸಂಭೂತಿ ಎಂಬಾಕೆಯ ವಂಶವನ್ನು ವಿವರಿ
ಸುವೆನು) ಎಲೈ ಬ್ರಾಹ್ಮಣೋತ್ತಮನೆ, ಮರೀಚಿ ಪತ್ನಿಎನಿಸಿದ ಸಂ
ಭೂತಿಯು ಪೌರ್ಣ ಮಾಸನೆಂಬ ತನಯನಂ ಪೆತ್ತಳು. ಮಹಾಮಹಿಮ
ಸಂಪನ್ನನೆನಿಸಿದ ಆ ಪೌರ್ಣಮಾಸನಿಗೆ ವಿರಜಸ್ಸು, ಪರ್ವತ ಎಂಬಿಬ್ಬರು
ಪುತ್ರರು ಜನಿಸಿದರು. ಇದೇ ಮರೀಚಿಗೆ ಕಶ್ಯಪ, ವಿವಸ್ವತ್ ಮೊದಲಾ
ದ ಇನ್ನೂ ಕೆಲವು ಮಂದಿ ಮಕ್ಕಳಿರುವರು ಅವರೆಲ್ಲರನ್ನೂ ಮುಂದೆ
ಅದಿತಿ ವಂಶವರ್ಣನಸಮಯದಲ್ಲಿ ವಿಶದಪಡಿಸುವೆನು. ಪೌರ್ಣಮಾಸನ ವಂ
ಶವರ್ಣನವುಇಲ್ಲಿ ಪ್ರಕೃತವಾದುದರಿಂದಲೂ, ಮತ್ತು ಸ್ವಲ್ಪವಾಗಿರುವುದರಿಂ

---

* ಸಿನೀವಾಲೀ, ಅಮಾವಾಸ್ಯೆಯು ಪ್ರತಿಪತ್ತಿನ ಸಂಬಂಧದಿಂದ ಕೂಡಿದ್ದು
ಆದಿನ ಸ್ವಲ್ಪಮಟ್ಟಿಗಾದರೂ ಚಂದ್ರದರ್ಶನವಾದೊಡೆ ಅಂತಹ ಅಮಾವಾರ್ಯೆಗೆ 'ಸಿನೀ
ವಾಲಿ, ಎಂದು ಹೆಸರು

೨ ಕುಹೂ, ಅಮಾವಾಸ್ಯೆಯು, ಸಂಪೂರ್ಣವಾಗಿದ್ದು ಆ ದಿನ ಚಂದ್ರದರ್ಶ
ನವೇ ಇಲ್ಲದೊಡೆ ಆ ತಿಥಿಗೆ 'ಕುಹೂ' ಎಂಬುದಾಗಿ ವ್ಯವಹಾರವು

೩ ರಾಕಾ, ಪೂರ್ಣಿಮೆಯು ಸಂಪೂರ್ಣವಾಗಿದ್ದು ಚಂದ್ರನು ಆ ದಿನ ಸಂ
ಪೂರ್ಣವಾಗಿ ಹದಿನಾರು ಕಲೆಗಳಿಂದೊಡ ಗೂಡಿದ್ದರೆ ಆ ಪೂರ್ಣಿಮೆಯನ್ನು 'ರಾಕಾ
ಎಂದು ಹೇಳುವರು.

೪ ಅನುಮತಿ, ಪೂರ್ಣಿಮೆಯು ಸ್ವಲ್ಪವಾಗಿದ್ದು ಆದಿನ ಕುಕ್ಷ ಚತುರ್ದಶಿ
ಅಥವಾ ಕೃಷ್ಣ ಪ್ರತಿಪತ್ತು ಇವುಗಳ ಯೋಗದಿಂದ ಸಂಪೂರ್ಣ ಚಂದ್ರನುದಯಿಸದೆ
ಹದಿನಾರು ಕಲೆಗಳಿಗೆ ಸ್ವಲ್ಪ ಕಡಿಮೆ ಯಾಗಿರುವಂತೆ ಇದ್ದರೆ ಆಪೂರ್ಣಿಮೆಯನ್ನು
ಅನುಮತಿ, ಎನ್ನುವರು.

ಕಾ ಚಾನುಮತಿ ಸ್ತಥಾ॥೬॥ ಅನಸೂಯಾ ತಥೈವಾತ್ರೇ ರ್ಜಜ್ಞೇ ಪುತ್ರಾನ ಕಲ್ಮಷಾ೯ । ಸೋಮಂ ದುರ್ವಾಸಸಂ ಚೈವ ದತ್ತಾ ತ್ರೇಯಂ ಚ ಯೋಗಿನಂ ॥೪॥ ಪ್ರೀತ್ಯಾಂ ಪುಲಸ್ತ್ಯ ಭಾರ್ಯಾ ಯಾಂ ದತ್ತೋಽತ್ರಿಸ್ತತ್ಸುತೋಽಭವತ್ । ಪೂರ್ವ ಜನ್ಮನಿಸೋಽ ಗಸ್ತ್ಯ ಸ್ಸಪ್ತಮೇತಸ್ವಾ ಯಂ ಭುವೇಽಂತರೇ ॥೯॥ ಕರ್ದಮಶ್ಚಾ ರ್ವ ರೀವಾಂಶ್ಚ ಸಹಿಷ್ಣುಶ್ಚ ಸುತತ್ರಯಂ । ಹ್ಲವಾತು ಸುಷುವೇ ಭಾರ್ಯಾ ಪುಲಹಸ್ಯ ಪ್ರಜಾಪತೇಃ ॥೧೦॥ ಕ್ರತೋಶ್ಚ ಸಂನತಿರ್ಭಾರ್ಯಾ ವಾಲಖಿಲ್ಯಾ ನಸೂಯತ । * ಷಷ್ಟಿಃ ಪುತ್ರಸಹಸ್ರಾಣಿ ಖ

ದಲೂ, ಆ ಪೌರ್ಣಮಾಸನವಂಶವನ್ನು ಮಾತ್ರ ವಿವರಿಸಿದೆನು ॥೬॥ ಅಂ ಗಿರಸ್ಸಿನ ಪತ್ನಿಯಾದ ಸ್ಮೃತಿಯು ಸಿನೀವಾಲೀ, ಕುಹೂ, ರಾಕಾ, ಅ ನುಮತಿಗಳೆಂಬ ನಾಲ್ವರು ಕನ್ನಿಕೆಯರಂ ಪೆತ್ತಳು ॥೭॥ ಅಂತೆಯೇ ಅತ್ರಿ ಮುನಿಯ ಹೆಂಡಿರಾದ ಅನಸೂಯಾ ದೇವಿಯು, ಚಂದ್ರ, ದುರ್ವ್ವಾಸಸ್ಸು, ಯೋಗಿವರೇಣ್ಯ ನೆನಿಸಿದ ದತ್ತಾತ್ರೇಯರೆಂಬ ಮೂವರು ಗಂಡು ಮಕ್ಕ ಳಂಪಡೆದಳು॥೮॥ಪುಲಸ್ತ್ಯ ಬ್ರಹ್ಮನ ಹೆಂಡಿರಾದ ಪ್ರೀತಿದೇವಿಯಲ್ಲಿ ಈ ಅ ತ್ರಿಮಹರ್ಷಿಯೇ ದತ್ತಾತ್ರೇಯ ರೂಪದಿಂದವತರಿಸಿದನು ಹಿಂದಿನ ಜನ್ಮ ದಲ್ಲಿ ಅಂದರೆ ಕಳೆದ ಸ್ವಾಯಂಭುವ ಮನ್ವಂತರತಲ್ಲಿ ಈತನಿಗೇ ಅಗ ಸ್ತ್ಯನೆಂಬ ವ್ಯವಹಾರವು ॥೯॥ ಪುಲಹಬ್ರಹ್ಮನ ಪತ್ನಿ ಎನಿಸಿದ ಹ್ಲವಾದೇ ವಿಯು ಕರ್ದಮ, ಅರ್ವ್ವರೀವಂತ, ಸಹಿಷ್ಣುಗಳೆಂಬ ಮೂವರು ಪುತ್ರರಂ ಪಡೆದಳು ॥೧೦॥ ಕ್ರತುವಿನ ಹೆಂಡಿರಾದ ಸಂನತಿಯು ಸೂರ್ಯಾಗ್ನಿಗಳಂತೆ ದಿವ್ಯತೇಜಸ್ಸಂಪನ್ನರೆನಿಸಿ, ಜಿತೇಂದ್ರಿಯರೂ, ಊರ್ಧ್ವ ರೇತಸ್ಕರೂ, (ಪಾಪಂಚಿಕ ವಿಷಯಾನುಭವದಲ್ಲಿ ಪರಾಙ್ಮುಖರಾಗಿದ್ದು ಸ್ತ್ರೀ ಸಂಗವ

---

* ಷಷ್ಟಿಃ ಪುತ್ರ ಸಹಸ್ರಾಣಿ, ಎಂಬುದಕ್ಕೆ ಬದಲಾಗಿ ಅಷ್ಟಾ ಶೀತಿಸಹಸ್ರಾ ಣಿ, ಎಂದು ಮತ್ತೊಂದು ಪಾಠ ವಿರುವದಾಗಿ ಶ್ರೀ ಶ್ರೀಧರಾಚಾರ್ಯರವರು ವ್ಯಾಖ್ಯಾನ ಮಾಡಿರುವ ಕಾರಣ ಕ್ರತುವಿಗೆ ಸಂನತಿಯಲ್ಲಿ ಎಂಬತ್ತೆಂಟು ಸಾವಿರ ಮಂದಿ ಮಕ್ಕ ಳು ಹುಟ್ಟಿದರೆಂದು ತೋರುವುದು ।

ಷೀಣಾಂ ಮೂರ್ಧ್ವರೇ ತಸಾಂ । ಅಂಗುಷ್ಠ ಪರ್ವಮಾ ತ್ರಾಣಾಂ ಜ್ವಲದ್ಭಾಸ್ಕರ ತೇಜಸಾಂ॥೧೧॥ಊರ್ಜಾಯಾಂಚ ವಸಿಷ್ಠಸ್ಯ ಸಪ್ತಾ ಜಾಯಂತವೈಸುತಾಃ । ರಜೋ ಗೋತ್ರೋ ರ್ಧ್ವಬಾಹೂ ಚ ಸವನಶ್ಚಾ ನಘಸ್ತಥಾ । ಸುತಪಾಶ್ಚುಕ್ರ ಇತ್ಯೇತೇ ಸರ್ವೇ ಸಪ್ತರ್ಷಯೋಽಮಲಾಃ॥೧೨॥ ಯೋಸಾವಗ್ನ್ಯಭಿ ಮಾನೀ ಸ್ಯಾ ದ್ಬ್ರಹ್ಮಣ ಸ್ತನಯೋ ಽಗ್ರಜಃ । ತಸ್ಮಾ ತ್ತಸ್ಯ ಮಹಾಸು ತಾಃ ಲೇಭೇ ತ್ರೀ ನುದಾರೌ ಹಸೋದ್ವಿಜ! ॥೧೩॥ * ಪಾವಕಂ

ನ್ನು ಬಿಟ್ಟು ಇರುವ ಕಾರಣ ಊರ್ಧ್ವ ಗೋತಸ್ಕರೆಂದು ವ್ಯವಹಾರವು) ದಿವ್ಯಜ್ಞಾನ ಸಂಪನ್ನರೂ ಎನಿಸಿದ, ಮತ್ತು ಹೆಬ್ಬೆಟ್ಟಿನ ಪ್ರಮಾಣದ ಆಕಾರವುಳ್ಳ ವಾಲಖಿಲ್ಯರೆಂಬ ಅರವತ್ತು ಸಾಸಿರ ಮಂದಿ ತನಯರಂ ಪಡೆದಳು॥ ಅಂತೆಯೇ ವಸಿಷ್ಠ ಮುನಿಯೂ ಕಡ ತನ್ನ ಸತ್ನಿಯೆನಿಸಿದ ಊರ್ಜೆ ಎಂಬಾಕೆಯಲ್ಲಿ ರಜ, ಗೋತ್ರ, ಊರ್ಧ್ವ ಬಾಹು, ಸವನ, ಅನಘ, ಸುತಪಸ್ಸು, ಶುಕ್ರರೆಂಬ ಏಳುಮಂದಿ ಪುತ್ರರಂ ಪಡೆದನು. ಈ ಏಳು ಮಂದಿಯೂ ಮಹಾಮಹಿಮ ಸಂಪನ್ನರೆನಿಸಿ, ಪಾಪಸಂಪರ್ಕ ಶೂನ್ಯರಾಗಿ, ದಿವ್ಯಪ್ರಭಾವದಿಂದೊಡಗೂಡಿ ನಿರ್ಮಲ ಮನಸ್ಕರಾಗಿದ್ದರು ಈ ಹಿಂದೆ ಹೇಳಿದ ರಜ, ಗೋತ್ರ, ಊರ್ಧ್ವ ಬಾಹು, ಸವನ, ಅನಘ, ಸುತಪ, ಶುಕ್ರರೆಂಬ ಈ ಏಳು ಮಂದಿಯೇ ಹಿಂದೆ ಕಳೆದುಹೋದ, ಮೂರನೆಯುದಾದ ಉತ್ತಮನೆಂಬ ಮನ್ವಂತರದಲ್ಲಿ ಸಪ್ತರ್ಷಿಗಳಾಗಿದ್ದರು॥೧೪-೧೫॥ ಚತುರ್ಥ

* ನಿರ್ಮಂಥ್ಯಃ ಪರಮಾನಸ್ಯಾ ದ್ವೈದ್ಯುತಃ ಪಾವಕಸ್ಮೃತಃ । ಯಜ್ಞಾಸೌತ ಪತೇ ಸೂರ್ಯೇ ಶುಚಿರಗ್ನಿ ರಸೌಸ್ಮೃತಃ॥, ಎಂಬ ಕೂರ್ಮಪುರಾಣದಲ್ಲಿ ಹೇಳಿದ ಶ್ಲೋಕದಿಂದ ಯಜ್ಞಾದಿ ಕಾಲಗಳಲ್ಲಿ ಮಥನ ಮಾಡುವಿಕೆಯಿಂದ ಅರಣಿಯಲ್ಲಿ ಉತ್ಪನ್ನವಾದ ಅಗ್ನಿಗೆ ಪವಮಾನನೆಂತಲೂ, ಶಿಡಿಲು ಮೊದಲಾದುವುಗಳಲ್ಲಿ ಉತ್ಪನ್ನವಾಗುವ ಅಗ್ನಿಗೆ ಪಾವಕನೆಂತಲೂ, ಸೂರ್ಯಮಂಡಲದಲ್ಲಿ ನಿರ್ಮಲವಾದ ತೇಜಸ್ಸಿನಿಂದ ಕಂಗೊಳಿಸುತ್ತಾ, ಕಿರಣಗಳ ಮಾರ್ಗವಾಗಿ ನೀರನ್ನು ಹೀರುವ ಸಾಮರ್ಥ್ಯವುಳ್ಳ ಅಗ್ನಿಗೆ ಶುಚಿ ಎಂತಲೂ ವ್ಯವಹಾರವೆಂಬುದಾಗಿ ತೋರುವುದು.

ಪವಮಾನಂ ಚ ಶುಚಿಂಚಾಪಿ ಜಲಾಶಿನಂ ॥ ೧೫ ॥ ತೇಷಾಂತು ಸಂತತಾ ವನ್ಯೇ ಚತ್ವಾರಿಂಶಚ್ಚ ಪಂಚಚ । ಕಥ್ಯಂತೇ ವಹ್ನಯ ಶ್ಚೈತೇ ಪಿತಾ ಪುತ್ರತ್ರಯಂಚ ಯತ್ ॥೧೬॥ ಏವಮೇ ಕೋನ ಪಂಚಾ ಶದ್ವಹ್ನಯಃ ಪರಿಕೀರ್ತಿತಾಃ ॥ ೧೭ ॥ ಪಿತರೋಬ್ರಹ್ಮ ಣಾ ಸೃಷ್ಟಾ ವ್ಯಭಜ್ಯಾ ತಾ ಯೇ ಮುಖಾ ತವ । *ಅಗ್ನಿಷ್ವಾತ್ತಾ

ಖನ ಹಿರಿಯ ಮಗನೆನಿಸಿದ ಅಗ್ನ್ಯಭಿಮಾನಿ ಪುರುಷನು ತನ್ನ ಬಡತಿಯಾದ ಸ್ವಾಹಾದೇವಿಯಲ್ಲಿ ಪಾವಕ, ಪವಮಾನ, ಮತ್ತು ಶುಚಿಗಳೆಂಬ ಮೂವರು ತನಯರಂಪಡೆದನು ॥೧೪-೧೫॥ ಈ ಮೇಲೆ ಹೇಳಿದ ಪಾವಕ, ಪವಮಾನ, ಶುಚಿಗಳೆಂಬ ಈ ಮೂವರಿಗೂ ಹದಿನೈದು ಮಂದಿ ಮಕ್ಕಳು ತಾತ ಮಕ್ಕಳು ಹನಿಸಿದರು. ಅಂತು ಈ ಮೂವರಿಗೂ ನಾಲ್ವತ್ತೈದು ಮಂದಿ ಮಕ್ಕಳು ಪೌತ್ರರು ಬ್ರಹ್ಮನ ಹಿರಿಯಮಗನಾದ ಅಗ್ನಿಪುರುಷನು, ಈತನ ಮೂವರು ಮಕ್ಕಳು, ಈ ಮೂವರು ಮಂಬಿಗೂ ಬಬ್ಬೊಬ್ಬರಿಗೂ ಹದಿನೈದು ಮಂದಿಯಂತೆ ನಾಲ್ವತ್ತೈದು ಮಂದಿ ಅಂತೂ ನಲವತ್ತೈದಕ್ಕೆ ಮೂರು ಮಂದಿಗಳಾದರು ಈನಲವತ್ತೊಂಬತ್ತು ಮಂದಿಗಳಿಗೂ ಕೂಡ ಅಗ್ನಿಗಳೆಂತಲೇ ವ್ಯವಹಾರವು (ಅಂದರೆ ಅಗ್ನಿಯಲ್ಲಿ ನಲವತ್ತೊಂಬತ್ತು ಪ್ರಭೇದಗಳುಂಟೆಂದು ಭಾವವು)॥೧೬-೧೭॥ ಅಯ್ಯಾ ಶಿಷ್ಯವತ್ಸಲ, ದಕ್ಷಪ್ರಜಾಪತಿಯ ಹೆಣ್ಣುಮಕ್ಕಳಲ್ಲಿ ಒಬ್ಬಳಾದ ಸ್ವಧಾದೇವಿಯನ್ನು ಪಿತೃಗಳು ಮದುವೆ ಮಾಡಿಕೊಂಡು ಹಿಂದೆಯೇ ಹೇಳಿದೆ ನಷ್ಟೆ ! ಆ ಪಿತೃದೇವತೆಗಳಲ್ಲಿ * ಅಗ್ನಿಷ್ವಾತ್ತರು, ಬರ್ಹಿಷದರೆಂಬುದಾಗಿ ಎರಡು ಬಗೆಗಳುಂಟು. ಯಜ್ಞಾದಿಗಳನ್ನಾಚರಿಸದೆ ಅಗ್ನಿಹೋತ್ರವನ್ನು ಬಿಟ್ಟು ಇರುವವರಿಗೆ ಅಗ್ನಿಷ್ವಾತ್ತರೆಂಬ ವ್ಯವಹಾರವು ಯಜ್ಞಾದಿಗಳನ್ನಾ

* ಶ್ರುತಿ, 'ಯೇವಾ ಅಯಜ್ವಾನೋ ಗೃಹಮೇಧಿನಸ್ತೇಪಿತರೋಗ್ನಿಷ್ವಾತ್ತಾಃ, ಯೇವೈ ಯಜ್ವಾನಸ್ತೇ ಪಿತರೋ ಬರ್ಹಿಷದಃ, ಎಂಬ ಶ್ರುತಿಯು ಈಮೇಲೆ ಹೇಳಿದ ಅರ್ಥಕ್ಕೆ ಪ್ರಮಾಣವಾಗಿರುವುದು.

ಬರ್ಹಿಷ ದೋ ಽ ನಗ್ನ್ಯ ಯಸ್ವಾಗ್ನ್ಯ ಯಶ್ಚ ಯೇ । ತೇಭ್ಯಸ್ಸ್ವಧಾ ಸುತೇ, ಜಜ್ಞೇ ಮೇನಾಂ ವೈಶರಿಣೀಂ ತಥಾ ॥ ೧೪ ॥ ತೇ ಉಭೇ ಬ್ರಹ್ಮ ವಾದಿನ್ಯೌ ಯೋಗಿನ್ಯೌ ಚಾಪ್ಯುಭೇ ದ್ವಿಜ । ಉತ್ತಮ ಜ್ಞಾನ ಸಂಪನ್ನೇ ಸರ್ವೈ ಸ್ಸಮುದಿತೈ ರ್ಗುಣೈಃ ॥೧೫॥ ಇತ್ಯೇಷಾ ದಕ್ಷ ಕನ್ಯಾ ನಾಂ ಕಥಿತಾ ಽ ಪತ್ಯಸಂತತಿಃ । ಶ್ರದ್ಧಾವಾ ಸಂ ಸ್ಮರನ್ನೇತಾಂ ನಾನಪತ್ಯೋ ಽಭಿಜಾಯತೇ ॥೧೦॥

ಇತಿ ಶ್ರೀವಿಷ್ಣು ಪುರಾಣೇ ಪ್ರಥಮಾಂಶೇ,

ದಶಮೋಧ್ಯಾಯಃ.

ಚರಿಸುತ್ತಾ ಸರ್ವಕಾಲದಲ್ಲಿಯೂ ಅಗ್ನಿ ಹೋತ್ರವನ್ನು ಎಡೆಬಿಡದೆಆಚರಿಸುವವರಿಗೆ ಬರ್ಹಿಷದರೆಂದು ಹೆಸರು ಅಗ್ನಿಷ್ವಾತ್ತರಲ್ಲಿ ಮೂರು ಗುಂಪುಗಳು. ಬರ್ಹಿಷದರಲ್ಲಿ ನಾಲ್ಕು ಗುಂಪುಗಳುಂಟು ಈ ಮೇಲೆ ಹೇಳಿದ ಪಿತೃ ದೇವತೆಗಳಿಬ್ಬರಿಗೂ ಸ್ವಧಾದೇವಿ ಯೊಬ್ಬಳೇ ಹೆಂಡತಿ, ಈ ಸ್ವಧಾದೇವಿಯಲ್ಲಿ ಅಗ್ನಿಷ್ವಾತ್ತರೆಂಬ ಪಿತೃಗಣದವರು ಮೇನೆ, ಎಂಬಕನ್ಯೆಯನ್ನೂ, ಬರ್ಹಿಷದರೆಂಬ ಪಿತೃಗಣದವರು 'ವೈಶರಣೀ' ಎಂಬ ಕನ್ನಿಕೆಯನ್ನೂ ಪಡೆದರು ॥೧೪॥ ಈ ಈರ್ವರು ಕನ್ನೆಯರೂ ನಿರಂತರವೂ ವೇದಾಧ್ಯಯನ ಮಾಡುತ್ತಾ, ಸಕಲ ಸದ್ಗುಣಗಳಿಂದೊಡಗೂಡಿ, ಸರ್ವೋತ್ತಮನೆನಿಸಿದ ಆ ಭಗವಂತನ ಪಾದಾರವಿಂದದಲ್ಲಿ ದೃಢವಾದ ಭಕ್ತಿಯನ್ನಿಟ್ಟು ಅದರಿಂದ ದಿವ್ಯಜ್ಞಾನವಂ ಪಡೆದು, ಅನವರತವೂ ಯೋಗಾಭ್ಯಾಸದಲ್ಲಿಯೇ ಕಾಲ ಕಳೆಯುತ್ತಾ, ಮದುವೆಮಾಡಿಕೊಳ್ಳದೆ ಬ್ರಹ್ಮಚರ್ಯವ್ರತದಲ್ಲಿಯೇ ಇರುತ್ತಿದ್ದರು ॥೧೫॥ ಅಮ್ಮಾ ದ್ವಿಜವರ್ಯನೆನಿಸಿದ ಮೈತ್ರೇಯನೆ, ನೀನು ದಕ್ಷಕನ್ನೆಯರ ಪುತ್ರಸಂತತಿಯನ್ನು ವಿವರಿಸೆಂದು, ನನ್ನನ್ನು ಕೇಳಿದೆ ಯಾದುದರಿಂದ ನಿನ್ನ ಕೋರಿಕೆಯಂತೆಯೇ ದಕ್ಷಕನ್ನೆಯರ ಪುತ್ರಸಂತತಿಯನ್ನು ವಿವರಿಸಿದೆನು. ಇಂತಹ ದಕ್ಷಕನ್ಯಾ ಸಂತತಿಯನ್ನು ಅನವರತವೂ ಭಕ್ತಿಶ್ರದ್ಧೆಗಳಿಂದ ಸ್ಮರಿಸುವವರು, ವಂಶವಿಚ್ಛಿತ್ತಿ ಇಲ್ಲ

ದಂತೆ ಸರ್ವದಾ ಉತ್ತಮವಾದ ಸಂತತಿಯನ್ನು ಪಡೆದು ಪುತ್ರ ಪೌತ್ರಾದಿಗಳೊಡನೆ ಸುಖಿಸುವರು. ಪುತ್ರಸಂತಾನ ವಿಲ್ಲದವರೂ ಕೂಡ ಮುಕ್ಕಳಂ ಪಡೆಯುವರಲ್ಲದೆ ಅವರ ವಂಶವು ಆ ಚಂದ್ರಾರ್ಕ ಸ್ಥಾಯಿಯಾಗಿರುವುದು ॥ ೨೦ ॥

ಎಂಬದಾಗಿ ಪರಾಶರನು ಮೈತ್ರೇಯನಿಗೆ ಹೇಳುತಿದ್ದ ನೆಂಬಲ್ಲಿಗೆ

ವಿಷ್ಣುಪುರಾಣದಪ್ರಥಮಾಂಶದೊಳ್.

ಸತ್ತನೆಯಅಧ್ಯಾಯಂಮುಗಿದುದು.

ದಶಮಾಧ್ಯಾಯಂಸಮಾಪ್ತಂ.

ಶ್ರೀಃ.

ಓನ್ನಮಃ ಪರಮಾತ್ಮನೇ,

ಅಥೈಕಾದಶೋಧ್ಯಾಯೆಃ.

ಶ್ರೀ ಪರಾಶರಃ॥ ಪ್ರಿಯವ್ರತೋ ತ್ತಾನಪಾದೌ ಮನೋಃ ಸ್ವಾಯಂ ಭುವಸ್ಯತು । ದ್ವೌಪುತ್ರೌ ಸುಮಹಾ ವೀರ್ಯೌ ಧರ್ಮಜ್ಞೌ ಕಥಿತೌತವ ॥ ॥ ತಯೋರುತ್ತಾನ ಪಾದಸ್ಯ ಸುರುಚ್ಯಾ ಮುತ್ತಮಸ್ಸುತಃ । ಅಭೀಷ್ಟಾ ಯಾಮು ಭೂದ್ಧ್ರುವ ಪಿತುರತ್ಯಂತವ ಲ್ಲಭಃ ॥೩॥ ಸುನೀತೀರ್ನಾಮ ಯಾರಾಜ್ಞೋ ಸ್ತಸ್ಯಾ ಸು ಷ್ಮಹಿಷೀ ದ್ವಿಜ! । ಸನಾತಿ ಪ್ರೀತಿ ಮಾಂಸ್ತಸ್ಯಾಂ ತಸ್ಯಾಶ್ಚಾ ನೇದ್ಧ್ರುವ ಸ್ಸುತಃ॥೪॥ರಾಜಾಸನಸ್ಥಿತ ಸ್ಯಾಂಕಂ ಪಿತುರ್ಧ್ರುವ ತರ ಮಾಶ್ರಿತಂ।

ಪರಾಶರಮುನಿಯು ಹೇಳುತ್ತಾನೆ —ಎಲೈ ಬ್ರಹ್ಮಣ್ಯ ಶಿಖಾಮಣಿ ಎನಿಸಿದ ಮೈತ್ರೇಯನೆ, ಇದುವರೆಗೂ ಸ್ವಾಯಂಭುವಮನುವಿನ ಕನ್ಯಾ ಸಂತತಿಯನ್ನು (ದೌಹಿತ್ರವಂಶವನ್ನು) ವಿವರಿಸಿದೆನು ಇನ್ನು ಆತನ ಪುತ್ರಸಂತತಿಯನ್ನು ವಿವರಿಸುವೆವು ಇದು ಮೊದಲೊಂಡು ಮೂರು ಅಧ್ಯಾಯಗಳು ಪೂರೈಸುವವರೆಗೂ ಆಸ್ವಾಯಂಭುವ ಮನುವಿನ ಪೌತ್ರ (ಮೊಮ್ಮಗ)ನಾದ ಧ್ರುವನ ಚರಿತ್ರೆಯಂ ವಿವರಿಸುವೆನು ಕೇಳು. ಸ್ವಾಯಂಭುವ ಮನುವಿಗೆ ಮಹಾ ಬಲಶಾಲಿಗಳೂ, ಧೀರರೂ, ಧರ್ಮಜ್ಞ ಶಿಖಾಮಣಿಗಳೂ, ಎನಿಸಿದ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡು ಮಕ್ಕಳಿದ್ದರೆಂಬುದಾಗಿ ಹಿಂದೆಯೇ ತಿಳಿಸಿರುವೆನಷ್ಟೆ ॥ ೧ ॥ ಆ ಇಬ್ಬರು ಮಕ್ಕಳಲ್ಲಿ ಹಿರಿಯವನಾದ ಉತ್ತಾನಪಾದರಾಜನಿಗೆ ಸುರುಚಿ,ಸುನೀತಿಗಳೆಂಬ ಇಬ್ಬರು ಧರ್ಮಪತ್ನಿಯರಿದ್ದರು. ಅವರಲ್ಲಿ ರಾಜನಿಗೆ ಅತ್ಯಂತ ಪ್ರೇಮಾಸ್ಪದಳೆನಿಸಿದ ಸುರುಚಿಯಲ್ಲಿ ಉತ್ತಮನೆಂಬೊಬ್ಬ ಮಗನು ಜನಿಸಿದನು. ಈತನು ತಂದೆಯಾದ ಉತ್ತಾನ ಪಾದನಿಗೆ ನಿರತಿಶಯ

ದೃಷ್ಟ್ವೋತ್ತಮಂ ಧ್ರುವಶ್ಚಕ್ರೇ ತಮಾರೋಢುಂ ಮನೋರಥಂ ॥೪॥ ಪ್ರತ್ಯಕ್ಷಂ ಭೂಪತಿಸ್ತಸ್ಯಾ ಸ್ಸುರುಚ್ಯಾ ನಾಭ್ಯನಂದತ । ಪ್ರಣಯೇನಾಗತಂ ಪುತ್ರ ಮುತ್ಸಂಗಾರೋಹಣೋತ್ಸುಕಂ ॥೫॥ಸಪತ್ನೀ ತನಯಂ ದೃಷ್ಟ್ವಾ ತಮಂಕಾ ರೋಹಣೋತ್ಸುಕಂ । ಸ್ವಪುತ್ರಂಚ ತಥಾರೂಢಂ ಸುರುಚಿರ್ವಾಕ್ಯ ಮಬ್ರವೀತ್ ॥೬॥ ಕ್ರಿಯತೇ ಕಿಂಮುಧಾವತ್ಸ । ಮಹಾನೇಷ ಮನೋ

ಪ್ರೀತಿಪಾತ್ರನಾಗಿದ್ದನು. ॥೩॥ ಸುನೀತಿ ಎಂಬ ಕಿರಿಯವಳಲ್ಲಿ ರಾಜನಿಗೆ ಅಷ್ಟು ಪ್ರೀತಿ ಇರಲಿಲ್ಲವು. ಈಕೆಯಲ್ಲಿ ಧ್ರುವನೆಂಬೊಬ್ಬ ತನಯನು ಪುಟ್ಟಿದನು. ॥೪॥ ಇತಿರಲು ಒಂದಾನೊಂದು ದಿನ ರಾಜನಾದ ಉತ್ತಾನಪಾದನು ಬಡ್ಡೀಲಗದಲ್ಲಿ ಸಿಂಹಾಸನಾರೂಢನಾಗಿ ಕುಳಿತು ತನ್ನ ತೊಡೆಯಮೇಲೆ ಸುರುಚಿಯ ಮಗನಾದ ಉತ್ತಮನಂ ಕುಳ್ಳರಿಸಿಕೊಂಡು ದಿವ್ಯ ಭೋಗವಂ ಕೈಕೊಳ್ಳುತಿರಲಾಗಿ, ಸುನೀತಿಯ ಮಗನಾದ ಧ್ರುವನು ತನ್ನ ಸಹೋದರನಾದ ಉತ್ತಮನಂತೆ ತಾನೂ ರಾಜನ ತೊಡೆಯಮೇಲೆ ಕುಳಿತು ಕೊಳ್ಳಬೇಕೆಂದಭಿಲಷಿಸಿ ತನ್ನ ತಂದೆಯು ಬಳಿ ಸಾರ್ದು ಹಲವು ಬಗೆಯಿಂದ ತಂದೆಯನ್ನು ಕಾಡಿದನು. ॥೪॥ ಆಕಾಲದಲ್ಲಿ ರಾಜನಿಗೆ ಪರನು ಪ್ರೇಮಾಸ್ಪದಳಾದ ಆ ಸುರುಚಿಯು ಅಲ್ಲಿಯೇ ಇದ್ದ ಕಾರಣ, ತನ್ನ ಮಗನಾದ ಧ್ರುವನು ಎಷ್ಟೇ ಉತ್ಸಾಹದಿಂದ ಉತ್ತಮನಂತೆ ತಾನೂ ತನ್ನ ತಂದೆಯ ತೊಡೆಯಮೇಲೆ ಕುಳಿತು ಕೊಳ್ಳಬೇಕೆಂಬ ಆಶೆಯಿಂದ ಓಡಿಬಂದು, ಆ ರಾಜಾಸನದ ಮೇಲೆ ಕುಳಿತುಕೊಳ್ಳಲು ಅತ್ಯಾಸಕ್ತಿಯಿಂದ ಕೂಡಿರುವ ಆ ಧ್ರುವನಿಗೆ ಅವಕಾಶಕೊಡದೆಯೂ, ಮತ್ತು ಬಂದು ಮಾತನ್ನೂ ಕೂಡ ಆಡದೆ ತಿರಸ್ಕರಿಸಿದನು ॥೫॥ ಅಷ್ಟರಲ್ಲಿಯೇ ರಾಜನಿಗೆ ವಲ್ಲಭಳಾದ ಸುರುಚಿಯು, ತನ್ನ ಮಗನು ರಾಜನ ತೊಡೆಯು ಮೇಲೆ ಕುಳಿತಿರುವುದನ್ನೂ, ತನ್ನ ಸವತಿಯ ಮಗನಾದ ಧ್ರುವನೂ ಕೂಡ ತನ್ನ ಮಗನಂತೆಯೇ ರಾಜಾಸನವನ್ನೇರಲು ತಂದೆಯ ಬಳಿ ಸಾರ್ದು ಬಹಳ ಉತ್ಸಾಹದೊಡನೆ ತಂದಯನ್ನು ಕಾಡುತ್ತಿರುವುದನ್ನೂ ಕಂಡು, ತನ್ನಸವತಿಯ ಮಗನಾದ ಆ ಧ್ರುವನಂ ಕುರಿತು ಇಂತೆಂದಳು॥೬॥

ರಥಃ । ಅನ್ಯಸ್ತ್ರೀ ಗರ್ಭಜಾತೇನ ಹ್ಯಸಂಭೂಯ ಮವೋದ
ರೇ ॥೩॥ ಉತ್ತಮೋತ್ತಮಮುಪಾಸ್ಯ ವವಿವೇಕೋ Z ಭಿವಾಂ
ಛಸಿ । ಸತ್ಯಂ ಸುತಸ್ತ್ವಮುಪೈಷ್ಯಸಿ ಕಿಂತುನತ್ವಂ ಮಯೂಧೃ
ತಃ ॥೪॥ ಏತದ್ರಾಜಾಸನಂ ಸರ್ವ ಭೂಭೃತ್ಸಂಶ್ರಯ ಕೇತನಂ ।
ಯೋಗ್ಯಂ ಮಮೈವ ಪುತ್ರಸ್ಯ ಕಿಮಾತ್ಮಾಕ್ಲೇಶ್ಯತೇತ್ವಯಾ? ॥೫॥
ಉಚ್ಚೈರ್ಮನೋರಥ ಸ್ತೇಽಯಂ ಮತ್ಪುತ್ರಸ್ಯೈವ ಕಿಂಮು

ಎಲೈ ತರಳನಾದ ಧ್ರುವನೇ! ರಾಜಾಸನವನ್ನೇರಲು ಏಕೆ ಸುಮ್ಮನೆ ಬ
ಯಸು ತಂದೆಯನ್ನು ಕಾಡುವೆ? ಇದು ಸಾಮಾನ್ಯ ಕೋರಿಕೆಯಲ್ಲವು! ನೀನು ಪಟ್ಟಮಹಿಷಿಯಾದ ನನ್ನ ಉದರದಲ್ಲಿ ಪುಟ್ಟದೆ ಯಾವಳೋ ಒಬ್ಬ ಸಾಮಾನ್ಯಳಾದ ಹೆಂಗಸಿನ ಉದರದಲ್ಲಿ ಪುಟ್ಟಿ ಈರೀತಿ ರಾಜಸಿಂಹಾಸನವನ್ನು ಹತ್ತಲು ಬಯಸಬಹುದೆ? ॥೨॥ ನೀನು ಬುದ್ಧಿ ಇಲ್ಲದವನಾದುದರಿಂದ "ಈ ಸಿಂಹಾಸನವು ಸುರುಚಿ ಪುತ್ರನಾದ ಉತ್ತಮನಿಗೆ ಸಲ್ಲತಕ್ಕುದು. ನನಿಗೆ ಯೋಗ್ಯವಾದುದಲ್ಲ,, ಎಂಬುದಾಗಿ ಯೋಚಿಸದೆ ಈಪರಿಯಿಂದ ತಂದೆಯನ್ನು ಕಾಡುತ್ತಿರುವೆ. ಎಲ್ಲ ವಿಧಗಳಲ್ಲಿಯೂ ಈ ಸಿಂಹಾಸನವು ನನ್ನ ಮಗನಾದ ಉತ್ತಮನಿಗೇ ಅರ್ಹವಾದುದಲ್ಲದೆ ನಿನಗೆ ಯೋಗ್ಯವಾದುದಲ್ಲ ಹಾಗಾದರೆ ,,ನಿನ್ನ ಮಗನಾದ ಉತ್ತಮನಂತೆ ನಾನೂ ಉತ್ತಾನಪಾದನ ಮಗನಲ್ಲವೇ?,? ಎಂದು ಕೇಳುವೆಯೇನೆ? ಹಾಗಾದರೆ ಹೇಳುವೆನು ಕೇಳು ನನ್ನ ಮಗನಾದ ಉತ್ತಮನಂತೆಯೇ ನೀನೂ ಈ ಉತ್ತಾನಪಾದನ ಮಗನೆಂಬುದೇನೋ ದಿಟ. ಆದರೇ ನೀತಿಯಲ್ಲಿ ನೀನು ಜನಿಸಿದವನೇ ಹೊರತು ನನ್ನ ಹೊಟ್ಟೆಯಲ್ಲಿ ಹುಟ್ಟಿದವನಲ್ಲ. ॥೪॥ ಭೂಮಂಡಲದಲ್ಲಿ ಸಕಲ ರಾಜಾಧಿರಾಜರಿಂದಲೂ ಸೇವೆಗೊಳ್ಳುವ, ಚಕ್ರವರ್ತಿಗೆ ಸ್ಥಾನಭೂತವಾದ ಈ ಸಿಂಹಾಸನವು ನನ್ನ ಮಗನಿಗೇ ಸಲ್ಲತಕ್ಕುದಲ್ಲದೆ ನಿನಿಗೆಂದಿಗೂ ಸಲ್ಲತಕ್ಕುದಲ್ಲ. ಆದುದರಿಂದ ವ್ಯರ್ಥವಾಗಿ ಈ ಸಿಂಹಾಸನವನ್ನು ಬಯಸಿ ಮನಸ್ಸಿಗೆ ಇಲ್ಲದ ಚಿಂತೆಯನ್ನು ಹಚ್ಚಿಕೊಂಡು ಏಕೆ ಶ್ರಮಪಡುವೆ? ತೆರಳು, ಇಂತು, ರಾಜಾಸನವನ್ನು ಏರಲು ಬಯಸುವುದೂ ಕೂಡ ನಿನಿಗೆ ಉಚಿತವಲ್ಲ ॥೫॥ ಎಲೈ ಅವಿವೇಕಿಯೆ! ನನ್ನ ಮ

ಧಾ? । ಸುನೀತ್ಯಾ ಮಾತ್ಮನೋ ಜನ್ಮ ಕಿಂ ತ್ವಯಾ ನಾವಗಮ್ಯತೇ? ॥೧೦॥ ಶ್ರೀ ಪರಾಶರಃ॥ ಉತ್ಸೃಜ್ಯಾಪಿತರಂ ಬಾಲಸ್ತಚ್ಚುತ್ವಾ ಮಾತೃಭಾಷಿತಂ । ಜಗಾಮ ಕುಪಿತೋ ಮಾತುರ್ನಿಜಾಯಾದ್ವಿಜ ! ಮಂದಿರಂ ॥೧೧॥ ತಂದೃಷ್ಟ್ವಾ ಕುಪಿತಂ ಪುತ್ರಂ ವಿಮಾಷ್ಟ್ಯಾಸ್ಫುರಿತಾಧರಂ । ಸುನೀತಿರಂಕಮಾರೋಪ್ಯ ಮೈತ್ರೇಯೇ ! ದಮಬ್ರವೀತ ॥೧೨॥ ವತ್ಸಕಃ ಕೋಪಹೇತುಸ್ತೇ ? ಕಶ್ಚ ತ್ವಾಂ ನಾಭಿನಂದತಿ ? । ಕೋಽವಜಾನಾತಿ ಪಿತರಂ? ತವಕಸ್ತೇ ಽ ಪರಾ

ಗನಂತೆ ನೀನೂ ರಾಜಾಸನವನ್ನಾರೋಹಣ ಮಾಡಲು ಬಯಸುವಿಕೆಯು ವ್ಯರ್ಥವಾದುದೇ ಹೊರತು ಕೈಗೂಡತಕ್ಕುದಲ್ಲ, ಇದು ಸಾಮಾನ್ಯ ಕೋರಿಕೆಯಲ್ಲ, ನೀನು (ಧ್ರುವನು) ಸುನೀತಿಯಲ್ಲಿ ಜನಿಸಿದವನೆಂಬುದನ್ನು ಮರೆತೆಯೋ ? ನಡೆ ! ನಡೆ ! ॥೧೦॥ ಪರಾಶರನು ಹೇಳುತ್ತಾನೆ:—ಇಂತು ತರಳನಾದ ಆ ಧ್ರುವನು ತನ್ನ ಬಲತಾಯಿಯು ಹೇಳಿದ ಮಾತುಗಳೆಲ್ಲವಂ ಕೇಳಿ ಆಕಾಲದಲ್ಲಿ ತಂದೆಯು ಏನೂ ಮಾತಾಡದೆ ಸುಮ್ಮನಿರುವುದಂ ಕಂಡು, ತನ್ನತಂದೆಯು ಸ್ತ್ರೀಜಿತನು, ಆದುದರಿಂದಲೇ ಏನನ್ನೂ ಮಾತನಾಡದೆ ಸುಮ್ಮನಿರುವನು. ಎಂಬುದಾಗಿ ನಿಶ್ಚಯಿಸಿ ಆ ಸ್ಥಳದಲ್ಲಿ ನಿಲ್ಲದೆಯೋ ಬಡನೆಯೇ ಅಲ್ಲಿಂದ ತೆರಳಿ ಪರಮಕೋಪವಿಷ್ಟನಾಗಿ ತನ್ನ ತಾಯಿಯ ಮನೆಯಂ ಸೇರಿದನು. ॥೧೧॥ ಎಲೈ ಮೈತ್ರೇಯನೆ, ಆಗ ಸುನೀತಿಯು, ಇಂತು ಕೋಪಗೊಂಡು ಕಂಬನಿಗಳಂ ಕೆಂಪಡರಿಸಿ ಕೋಪವು ಉಕ್ಕಿ ಆ ಕೋಪದಿಂದ ಕೆಳತುಟಿಯುನಡುಗಿಸಿಕೊಂಡು ತೊದಲುಮಾತುಗಳನ್ನಾಡುತಿರುವ ವತ್ಸನಾದ ಧ್ರುವನಂ ಕಂಡು ದೂರದಿಂದ ಓಡಿಬಂದು ತಬ್ಬಿಕೊಂಡು ತನ್ನ ತೊಡೆಯಮೇಲೆ ಕುಳ್ಳಿರಿಸಿ ಈ ರೀತಿ ಕೇಳತೊಡಗಿದಳು. ಸುನೀತಿಯು ಕೇಳುತ್ತಾಳೆ:—ಎಲೈ ಪಸುಳೆಯೆ ! ಏಕೆ ಈ ಪರಿಕೋಪಗೊಂಡಿರುವೆ ? ಮಗು ! ನಿನ್ನನ್ನಾರೇನು ಮಾಡಿದರು ? ಅಡಬಾರದ ಮಾತನ್ನು ಯಾರಾದರೂ ಆಡಿದರೇನು ! ಇಲ್ಲವೇ ನಿನ್ನ ತಂದೆಯನ್ನು ಧಿಕ್ಕರಿಸಿ ಯಾರಾದರೂ ಅಪಮಾನಗೊಳಿಸಿದರೇ ? ಅಥವಾ ನಿನಗೇನೇ ಯಾರಾದರೂ ಅಪಕಾರ

ಧೃತಿ ॥೧೩॥ ಶ್ರೀ ಪರಾಶರಃ॥ ಇತ್ಯುಕ್ತ ಸ್ಸಕಲಂ ಮಾತ್ರೇ ಕಥ
ಯಾಮಾಸತದ್ಯಥಾ । ಸುರುಚಿಃ ಪ್ರಾಹ ಭೂಪಾಲ ಪ್ರತ್ಯಕ್ಷಮ
ತಿಗರ್ವಿತಾ ॥೧೪॥ ನಿಶ್ವಸ್ಯ ಸೇತಿಕಥಿತೇ ತಸ್ಮಿ೯ಪುತ್ರೇಣ ದುರ್ಮ
ನಾಃ । ಶ್ವಾಸಹ್ಲಾನೇಕ್ಷಣಾದೀನಾ ಸುನೀತಿರ್ವಾಕ್ಯ ಮಬ್ರವೀ
ತ್ ॥೧೫॥ಸುನೀತಿಃ॥ಸುರುಚೆಸ್ಸತ್ಯ ಮಾಹೇದಂ ಸ್ವಲ್ಪಭಾಗ್ಯೋ
ಸಿಪುತ್ರಕ! । ನಹಿಪುಣ್ಯವತಾಂ ವತ್ಸ ! ಸಪತ್ನೈ ಃರೇವ ಮುಚ್ಯ
ತೇ ॥೧೬॥ ನೋದ್ವೇಗಸ್ತ್ವತ ಕರ್ತವ್ಯಃ ಕೃತಂ ಯದ್ಭವತಾಪು

(ಅಪರಾಧ) ಮಾಡಿದರೇನು ? ॥೧೩॥ ಪರಾಶರಮುನಿಯು ಹೇಳುತ್ತಾನೆ- ಇಂತೀ ಪರಿಯಿಂದ ತಾಯಿಯಾದ ಸುನೀತಿಯು ಪ್ರಶ್ನೆಮಾಡಿದುದಂ ಕೇಳಿ ಧ್ರುವನು ,,ಅಮ್ಮಾ! ನಮ್ಮ ಮಲತಾಯಿಯಾದ ಸುರುಚಿಯು ಅತಿ ಗರ್ವದಿಂದ ರಾಜನ ಇದಿರಾಗಿಯೇ ನನ್ನನ್ನು ಈ ರೀತಿಯಾಗಿ ಮಾತ ನಾಡಿ ಧಿಕ್ಕರಿಸಿದಳು, ಎಂಬದಾಗಿ ನಡೆದ ಸಮಾಚಾರವೆಲ್ಲವನ್ನೂ ವಿಶ ದವಾಗಿ ತಿಳಿಯಪಡಿಸಿದನು. ॥೧೪॥ ಇಂತು ಧ್ರುವನು ಹೇಳಿದ ಆ ಮಾ ತುಗಳೆಲ್ಲವಂ ಕೇಳಿ ಸುನೀತಿಯು ನಿಟ್ಟುಸಿರುಬಿಟ್ಟು ದುಃಖದಿಂದ ಕಂಗೆ ಟ್ಟಮುಖಕಮಲವುಳ್ಳವಳಾಗಿ ಮನಸ್ಸಿನಲ್ಲಿಯೇ ಮರುಗುತ್ತಾ, ದೀನ ದೃಷ್ಟಿಯಿಂದೊಡಗೂಡಿ, ಕುಗ್ಗಿಹೋದ ಕಂಠಧ್ವನಿಯಿಂದ ತನ್ನ ಮು ಗನಂ ಕುರಿತು ಇಂತೆಂದಳು ॥೧೫॥ ಸುನೀತಿಯು ಹೇಳುತಾ ಳೆ:— ಮಗು ! ಸುರುಚೆಯು ಹೇಳಿದುದು ದಿಟವೇ ಸರಿ. ನೀನು ಆಸು ರುಚೆಯ ಹೊಟ್ಟೆಯಲ್ಲಿ ಜನಿಸಿದ್ದರೆ ಉತ್ತಮನಂತೆಯೇ ನಿನ್ನನ್ನೂ ರಾ ಜನು ಪ್ರೇಮದಿಂದ ತನ್ನ ತೊಡೆಯ ಮೇಲೆ ಕೂಡಿಸಿಕೊಳ್ಳುತಿದ್ದನು. ಹಾಗಿಲ್ಲದೆ ನೀನು ನನ್ನ ಉದರದಲ್ಲಿ ಪುಟ್ಟಿದವನಾದುದರಿಂದ ನೀನು ಭಾ ಗ್ಯಹೀನನಾಗಿರುವೆ. ಎಲೈ ವತ್ಸನೆ , ಭಾಗ್ಯಶಾಲಿಗಳಾದವರನ್ನು ಇಂತು ಕರ್ಣಕಠೋರವಾದ ಮಾತುಗಳನ್ನಾಡಿ ಯಾರೂ ವ್ಯಥಪಡಿಸುವುದಿಲ್ಲವು॥ ಅಪ್ಪಾ ಧ್ರುವನೇ ! ಈ ವಿಷಯವನ್ನೇ ಮನಕ್ಕೆ ಬಲವಾಗಿ ಹಚ್ಚಿ ಕೊಂಡು ಮರುಗಬೇಡ. ಸಾಕು, ನಿಲ್ಲಿಸು, ಇನ್ನು ಬೇಡ. ಈ ದುಃ ಖವನ್ನು ಇಲ್ಲಿಗೇ ಸಾಕುಮಾಡು. ಇದೆಲ್ಲವೂ ನಿನ್ನ ಆದೃಷ್ಟವಲ್ಲದೆ

ರಾ । ತತ್ಕೋಪಹರ್ತುಂ ಶಕ್ನೋತಿ ? ದಾತುಂ ಕಶ್ಚಾ ಕೃತಂ ತ್ವ
ಯಾ ? ॥೧೩॥ ತತ್ತ್ವಯಾನಾತ್ರ ಕರ್ತವ್ಯಂ ದುಃಖಂತದ್ವಾಕ್ಯ
ಸಂಭವಂ ॥೧೪॥ ರಾಜಾಸನಂ ತಥಾ ಛತ್ರಂ ವರಾಶ್ವಾ ವರವಾರ
ಣಾಃ । ಯಸ್ಯ ಪುಣ್ಯಾನಿ ತಸ್ಯೈತೇ ಮತ್ವೃತ ಚ್ಛ್ರಿಯ್ಯ ಪುತ್ರ
ಕ ! ॥೧೫॥ ಅನ್ಯಜನ್ಮಕೃತೈಃ ಪುಣ್ಯೈಃ ಸುರುಚ್ಯಾಂ ಸುರುಚಿ
ರ್ನೃಪಃ । ಭಾರ್ಯೇತಿ ಪ್ರೋಚ್ಯತೇ ಚಾನ್ಯಾ ಮದ್ವಿಧಾಪುಣ್ಯ ವ
ರ್ಜಿತಾ ॥೧೬॥ ಪುಣ್ಯೋಪಚಯ ಸಂಪನ್ನ ಸ್ತಸ್ಯಾಃ ಪುತ್ರಸ್ತ

ಬೇರೆಯಲ್ಲ. ನಾವು ಹಿಂದಿನ ಜನ್ಮದಲ್ಲಿ ದೇವರನ್ನು ಕೇಳಿಕೊಂಡು ಬಂದುದನ್ನು ಅನುಭವಿಸುವೇ ತೀರಬೇಕು. ನಾವು ಕೇಳಿಕೊಂಡ ಒಂದುದನ್ನು ಯಾರೂ ತೆಗೆದುಕೊಳ್ಳಲಾರರು, ಅಥವಾ ಇಲ್ಲದುದನ್ನು ಆ ಭಗವಂತನಿಗಿಂತಲೂ ಬೇರೊಬ್ಬರು ಕೊಡಲೂ ಆರರು. ಆದುದರಿಂದ ಈ ವಿಷಯದಲ್ಲಿ ಹೆಚ್ಚಾಗಿ ವ್ಯಥೆಪಡಬೇಡ ಆಸುರುಚಿಯು ವಾಕ್ಯವು ಇಲ್ಲಿಗೆ ಮುರೆತುಬಿಡು. ಅದನ್ನು ಸ್ಮರಿಸಿಕೊಂಡರೆ ದುಃಖವು ಮರಳಿ ತಲೆದೋರುವುದು, ಆದುದರಿಂದ ಶಮಾಧಾನಹೊಂದಿ ಸುಮ್ಮನಿರು ॥೧೩-೧೯॥ ಎಲೈ ಪಸುಳೆಯೆ ! ಪುಣ್ಯಶಾಲಿಗಳಾದವರು ಸಿಂಹಾಸನವನ್ನೇರಿ ಶ್ವೇತ ಚ್ಛತ್ರ, ಉತ್ತಮಗಳೆನಿಸಿದ ಕುದುರೆಗಳು, ಮದ್ದಾನೆಗಳು ಇವುಗಳನ್ನು ಪಡೆದು ರಾಜ್ಯದಲ್ಲಿ ಸುಖಿಸುವರು, ಎಂಬುದಾಗಿ ತಿಳಿದು ಪ್ರಕೃತದಲ್ಲಿ ನೀನು ಅಂತಹ ಪುಣ್ಯಶಾಲಿಯಲ್ಲದಿರುವ ಕಾರಣ ಇವುಗಳೊಂದೂ ನಿನಗೆ ಇಲ್ಲವೆಂದು ಭಾವಿಸಿ ಶಾಂತಿಯಂ ಪಡೆವವನಾಗು ॥೧೯॥ ನಿಮ್ಮ ಬಲತಾಯಿ ಯೆನಿಸಿದ ಸುರುಚಿಯು ಕಳೆದ ಜನ್ಮದಲ್ಲಿ ತಾನು ವಿಶೇಷವಾಗಿ ಸುಕೃತವನ್ನಾಚರಿಸಿದವಳಾದುದರಿಂದ ಈಗ ರಾಜನಿಗೆ ಪರಮ ಪ್ರೇಮಾಸ್ಪದಳೆನಿಸಿ ರಾಣಿಯಾಗಿರುವಳು. ಅವಳಂತೆ ನಾನು ಹಿಂದಿನ ಜನ್ಮದಲ್ಲಿ ಯಾವುದೊಂದು ಸುಕೃತವನ್ನೂ ಆಚರಿಸಿದವಳಲ್ಲ ಆದುದರಿಂದಲೇ ನಿರ್ಭಾಗ್ಯಳಾದ ನನ್ನನ್ನು ಎಲ್ಲರೂ ರಾಜನ ಹೆಂಡತಿ ಎನ್ನುವರೇ ಹೊರತು ರಾಣಿ ಎಂಬುದಾಗಿ ಯಾರೂ ಅನ್ನುವದಿಲ್ಲ ಲೋಕದಲ್ಲಿ ನಡವಳಿಕೆಯೇ ಇಂತಿರಲು ವಿಶೇಷವಾಗಿ ಹೇಳಿ ಫಲವೇನು ? ॥೨೦॥ ಉತ್ತಮನೂ ಕೂಡ

ಥೋತ್ತಮಃ । ಮನುಷ್ಯತ್ವ ಸ್ತಥಾಜಾತ ಸ್ಸ್ವಲ್ಪ ಪುಣ್ಯೋ ದ್ಭವಂಭವಾ ॥೨೧॥ ತಥಾಪಿದುಃಖಂ ನಭವಾ ಕರ್ತು ಮರ್ಹತಿ ಪುತ್ರಕ ! । ಯಃಶ್ಚ ಯಾವತ್ಸತೇನೈವ ಸ್ವೇನತುಷ್ಯತಿ ಬುದ್ಧಿ ಮಾ ॥೨೨॥ ಯದಿಚ್ಛೇದ್ದುಃಖ ಮತ್ಯರ್ಥಂ ಸುರುಚ್ಯಾ ವಚನಾ ತ್ತವ।ತತ್ಪುಣ್ಯ ಪ್ರಚಯೋ ಯತ್ನಂ ಕುರು ಸರ್ವಫಲಪ್ರದೇ॥೨೩॥ ಸುಶೀಲೋಭವ ಧರ್ಮಾತ್ಮಾ ವೈತ್ರಃ ಪ್ರಾಣೇಹಿ ತೇರತಃ ।

ಜನ್ಮಾಂತರದಲ್ಲಿ ತಾನು ಸುಕೃತವನ್ನಾಚರಿಸಿದವನಾದುದರಿಂದಲೇಪುಣ್ಯ ವತಿಯಾದ ಆ ಸುರುಚಿಯು ಉದರದಲ್ಲಿ ಜನಿಸಿದನು, ನೀನು ನಿರ್ಭಾಗ್ಯ ನಾದುದರಿಂದಲೇ ನನ್ನ ಹೊಟ್ಟೆಯಲ್ಲಿ ಹುಟ್ಟಿರುವೆ, ಆದರೆ ಯಾವುದೋ ಒಂದು ಬಗೆಯಾದ ಅಲ್ಪ ಸುಕೃತದಿಂದ ನಾಹನ ಮಗನೆನಿಸಿರುವೆ, ದಿಟ ವಾಗಿಯೂ ನಾನು ಹೇಳುವ ಮಾತನ್ನು ನಂಬು ॥ ೨೧ ॥ ಓ ಮಗುವೆ ! ಇಂತಿದ್ದರೂ ಕೂಡ ನೀನು ನಿರ್ಭಾಗ್ಯನೆಂದು ದುಃಖಿಸಬೇಡ. ಬುದ್ಧಿ ಶಾಲಿಯಾದವನು ತನ್ನ ಅದೃಷ್ಟಾನುಸಾರ ತನ್ನ ಪಾಲಿಗೆ ಬಂದ ಸುಖವ ನ್ನು ಅನುಭವಿಸಿಕೊಂಡು ಅದರಿಂದಲೇ ಸಂತೋಷಿಸಬೇಕಲ್ಲದೆ ಹೆರರ ಸಿ ರಿ, ಸಂಪತ್ತು ಮೊದಲಾದುವನ್ನು ಕಂಡು ಹೊಟ್ಟೆಕಿಚ್ಚು ಪಡಬಾರ ದು ॥೨೨॥ ಹಾಗೊಂದುವೇಳೆ ನನ್ನ ಸವತಿ ಎನಿಸಿದ ಆ ಸುರುಚಿಯು ಕ ರ್ಣ ಕಠೋರವಾದ ವಾಕ್ಯವು ನಿನ್ನ ಅಂತರಂಗದಲ್ಲಿ ನಿರಂತರವೂ ನಿನಗೆ ದುಃಖವನ್ನು ಟು ಮಾಡಿ, ಬಹಳವಾಗಿ ನಿನ್ನನ್ನು ವ್ಯಥೆಪಡಿಸುವ ಪಕ್ಷ ದಲ್ಲಿ ಸಕಲೇಷ್ಟಾರ್ಥಗಳೂ ಕೈಗೂಡುವಂತೆ ಹೆಚ್ಚಾಗಿ ಪುಣ್ಯಸಂಪಾದನೆ ಮಾಡಲು ಪ್ರಯತ್ನಿಸು. (ಅಥವಾ ಸಕಲೇಷ್ಟಾರ್ಥಗಳನ್ನು ಕೈಗೂಡಿ ಸುವಂತಹ ದಿವ್ಯಮಹಿಮಾಶಾಲಿಯಾದ ಶ್ರೀವಿಷ್ಣುನಾರಾಯಣನಲ್ಲಿ ದೃಢವಾ ದಭಕ್ತಿಯನ್ನಿರಿಸಿ, ಆ ಭಕ್ತಿಯಿಂದಲೇ ಆತನನ್ನಾರಾಧಿಸಿ, ಆತನ ಅನು ಗ್ರಹಕ್ಕೆ ಪಾತ್ರನಾಗಿ ಶ್ರೇಯಸ್ಸಂಪಾದನೆಗಾಗಿ ಪ್ರಯತ್ನವಮಾಡು) ॥೨೩॥ ಎಲೈ ತರಳನೆ, ನಾನು ನಿನಗೊಂದು ಉಪದೇಶವನ್ನು ಮಾಡುವೆನು, ಅದ ರಂತೆ ನೀನು ನಡೆದು ಕೊಂಡೆಯಾದರೆ ಎಲ್ಲ ಕೋರಿಕೆಗಳೂ ನಿನ್ನ ಕೈ ಸೇರುವುವು. ಅದೇನಂದರೆ ಹೇಳುವೆನು ಕೇಳು. ಅನವರತವೂ ಒಳ್ಳೆಯ

ನಿನ್ನುಂಯಥಾಪಃ ಪ್ರವಣಾಃ ಪಾತ್ರವಾಯಾಂತಿ ಸಂಪದಃ ॥೨೪॥
ಧ್ರುವಉವಾಚ॥ ಅಂಬ! ಯತ್ತ್ವಮಿದಂ ಪೃಷ್ಟ ಪ್ರಶವಾಯು ವ
ಚೋವಮು । ನೈತದ್ದ್ರವಚನಾ ಭಿನ್ನೋ ಹೃದಯೋವಮು ತಿಷ್ಠ
ತಿ ॥೨೫॥ ಸೋಹಂ ತಥಾ ಯತಿಷ್ಯಾಮಿ ಯಥಾಸರ್ವೋತ್ತಮೋ
ತ್ತಮಂ । ಸ್ಥಾನಂ ಪ್ರಾಪ್ಸ್ಯಾಮ್ಯ ಶೇಷಾಣಾಂ ಜಗತಾ ಮುಭಿ
ಪೂಜಿತಂ ॥೨೬॥ ಸುರುಚೆರ್ದಯಿತಾರಾಜ್ಞ ಸ್ತಸ್ಯಾಜಾತೋ

ನಡೆನುಡಿಗಳುಳ್ಳವನಾಗು. ಧರ್ಮವನ್ನು ಎಡೆಬಿಡದೆ ಆಚರಿಸು, ಎಲ್ಲರ ಲ್ಲಿಯೂ ಮಿತ್ರಭಾವವನ್ನೇ ತೋರಿಸು, ಯಾವ ಪ್ರಾಣಿಯನ್ನೂ ಹಿಂಸಿಸ ಬೇಡ, ಸಕಲ ಭೂತಗಳನ್ನೂ ನಿನ್ನಂತೆಯೇ ತಿಳಿ. ನೀರು ಹಳ್ಳದಲ್ಲಿ ಹರಿದು ಬೀಳುವುದಲ್ಲದೆ, ದಿಣ್ಣೆಯ ಮೇಲಕ್ಕೆ ಹತ್ತಿ ಪ್ರವಹಿಸಲಾರದು. ಅಂತೆಯೇ ಸಕಲ ಗುಣಗಳಿಂದೊಡಗೂಡಿ ವಿನೀತನಾದವನು ಸಕಲಸಂಪತ್ತುಗಳಿಗೂ ಪಾತ್ರನಲ್ಲದೆ ಉದ್ಧತನಾದವನು ಎಂದಿಗೂ ಸಂಪದವನ್ನು ಹೊಂದಲಾರನು. ॥೨೪॥ ಇಂತು ಸುನೀತಿಯುಪದೇಶ ವಾಕ್ಯವಂ ಕೇಳಿ ಧ್ರುವನು ತನ್ನ ತಾಯಿಗೆ ಉತ್ತರ ಹೇಳುತ್ತಾನೆ —ಓ ಜನನಿಯೇ ! ನಾನು ಸಮಾಧಾನವಂ ಪಡೆಯುಲು ಇದುವರೆಗೂ ನೀನು ಹೇಳಿದ ಮಾತುಗಳೆಲ್ಲವೂ ಶಾಂತಿ ಪ್ರಧಾನಗಳೆನಿಸಿ ಮನಸ್ಸಿಗೆ ವ್ಯಥೆಯನ್ನು ಹೋಗಲಾಡಿಸಕ್ಕುವು, ಅದೇನೋ ದಿಟ. ಆದರೆ ಒಡಕಲು ಪಾತ್ರೆಯಲ್ಲಮೇಲಿನಿಂದ ಎಷ್ಟು ನೀರು ತುಂಬಿದರೂ ಅದು ಅಲ್ಲಿ ನಿಲ್ಲದೆಯೇ ಸೋರಿಹೋಗುವಂತೆ, ಆ ಸುರುಚಿಯು ದುರ್ವಾಕ್ಯಗಳಿಂದ ತೂತು ಬಿದ್ದಿರುವ ನನ್ನ ಮನಸ್ಸೆಂಬ ಪಾತ್ರೆಯಲ್ಲಿ ನಿನ್ನ ಉಪದೇಶಜಲವು ಬಂದು ತೊಟ್ಟಾದರೂ ನಿಲ್ಲದೆ ಸೋರಿಹೋಗುತ್ತಿರುವುದು ॥೨೫॥ ಆದರೆ, ಎಲ್ಲ ಲೋಕಗಳಿಂದಲೂ ನಮಸ್ಕರಿಸಲ್ಪಟ್ಟ ಪೂಜಾರ್ಹವೆನಿಸಿದ ಉತ್ತಮೋತ್ತಮವಾದ ಸ್ಥಾನವನ್ನು ಪಡೆಯುಲು ನಾನು ಪ್ರಯತ್ನ ಮಾಡಹೋಗುವೆನು. ಇದೋ ನಿನ್ನ ಆಜ್ಞೆಯಾದೊಡೆ ಈಗಲೇ ತೆರಳುವೆನು ॥ ೨೬ ॥ ನಮ್ಮ ಬಲತಾಯಿಎನಿಸಿದ ಸುರುಚಿಯು ಪೂರ್ವಜನ್ಮದಲ್ಲಿ ತಾನು ವಿಶೇಷವಾಗಿ ಪುಣ್ಯವನ್ನಾಚರಿಸಿದವಳು, ಆದುದರಿಂದಲೇ ರಾಜನಾದ ನನ್ನ ತಂದೆಗೂ ಪ್ರೀ

ಸ್ಮಿ ನೋದರಾತ್ । ಪ್ರಭಾವಂ ಪಶ್ಯವೇಽಂಬ ! ತ್ವಂ ವೃದ್ಧ
ಸ್ಯಾಪಿತವೋದರೇ ॥೨೬॥ ಉತ್ತಮುರ್ನಮ ಮಭ್ರಾತಾಯೋ ಗ
ರ್ಭೇಣ ಧೃತಸ್ತಯಾ । ಸ ರಾಜಾಸನ ಮಾಪ್ನೋತು ಪಿತ್ರಾದತ್ತಂ
ತಥಾಸ್ತುತಂ ॥೨೪॥ ನಾನ್ಯದತ್ತವೆ ಭೀಪ್ಸಾಮಿ ಸ್ಥಾನ ಮಂಬ!
ಸ್ವಕರ್ಮಣಾ । ಇಚ್ಛಾಮಿತದಹಂ ಸ್ಥಾನಂ ಯನ್ನಪ್ರಾಪ ಪಿ
ತಾಮಮ ॥೨೯॥ ಶ್ರೀ ಪರಾಶರಃ ॥ ನಿರ್ಜಗಾಮ ಗೃಹಾನ್ಮಾತು

ತಿಸ್ಥಾನವಾಗಿರುವಳು, ಆಕೆಯು ಗರ್ಭದಲ್ಲಿ ನಾನೇನೋ ಜನಿಸಲಿಲ್ಲ, ಆದ
ರೂ ಚಿಂತೆಯಿಲ್ಲ, ಎಲೈ ಜನನಿಯೇ ! ನಾನು ಪುಣ್ಯವತಿಯಾದ ಆಕೆಯ
ಉದರದಲ್ಲಿ ಪುಟ್ಟದೆ ನಿನ್ನ ಉದರದಲ್ಲಿಯೇ ಬೆಳೆದು ನಿನ್ನಿಂದಲೇ ಪೋ
ಷಿಸಲ್ಪಟ್ಟವನಾದುದರಿಂದ ನಾನೂ ನಿರ್ಭಾಗ್ಯನೆಂದಲ್ಲವೆ ಹೇಳುವೆ ಇಂ
ತಾದರೂ ನನ್ನ ಪ್ರಭಾವವನ್ನು ಸ್ವಲ್ಪಮಟ್ಟಿಗೆ ನೋಡು, ನಾನು ಮಾ
ಡುವ ಕಾರ್ಯಗಳಿಂದಲೇ ವ್ಯಕ್ತವಾಗುವುದು ॥೨೭॥ ನನ್ನ ಸಹೋದರನೆನಿ
ಸಿದ ಆ ಉತ್ತಮನು ಅಂತಹ ಪುಣ್ಯಶಾಲಿಯಾದ ಸುರುಚಿಯ ಉದರದಲ್ಲಿ
ಜನಿಸಿದವನಲ್ಲವೆ ? ಬಳ್ಳಿಯದ,, ತನ್ನ ತಾಯಿಯಾದ ಸುರುಚಿಯು
ಹಲವು ಬಗೆಯಾಗಿ ಹೊಗಳಿದ ಮಹಿಮೆಯುಳ್ಳ ತನ್ನ ತಂದೆಯ ರಾಜ್ಯ
ವನ್ನು (ಸಿಂಹಾಸನವನ್ನು) ಆ ಉತ್ತಮನೇ ಹೊಂದಲಿ, ನನಗೇನೂ ವ್ಯ
ಥೆಯಿಲ್ಲವು. ॥೨೮॥ ಓ ಮಾತೆಯೇ ! ಇನ್ನೊಬ್ಬರಿಂದ ಕೊಡಲ್ಪಟ್ಟ ವ
ಸ್ತುವನ್ನು ನಾನೇಕೆ ಬಯಿಸಲಿ ! ಹಾಗೆ ಇನ್ನೊಬ್ಬರ ಬಡವೆಗೆ ಆಶೆಪಡ
ಬಹುದೆ ! ನನ್ನ ಸಾಮರ್ಥ್ಯದಿಂದಲೇ ನಾನು ಸಂಪಾದಿಸುವೆನು. ಇ
ದುವರೆಗೂ ನನ್ನ ತಂದೆಯೂ ಕೂಡ ಹೊಂದದಿರುವ ಕಾರಣ, ಸರ್ವೋ
ತ್ತಮವೆನಿಸಿ ಸಕಲ ಲೋಕಪ್ರೂಜನೀಯವಾದ ಸ್ಥಾನವನ್ನು ಹೊಂದಲು
ಅಪೇಕ್ಷಿಸುವೆನಲ್ಲದೆ, ಈ ನನ್ನ ತಂದೆಯು ರಾಜ್ಯವಂ ನನಗೇಕೆ ಕೋ
ರಲಿ ॥೨೯॥ ಪರಾಶರನು ಹೇಳುತ್ತಾನೆ -ಅಯ್ಯಾ ಮೈತ್ರೇಯನೆ, ಆ ಧ್ರು
ವನು ಚಿಕ್ಕ ವಯಸ್ಸಿನವನಾಗಿದ್ದರೂ ಕೂಡ ಅವನ ಕ್ಷತ್ರಿಯ ತೇಜಸ್ಸ
ನ್ನು ನಾನೇನೆಂದುಹೇಳಲಿ ! ಇಂತು ತನ್ನ ತಾಯಿಯಾದ ಸುನೀತಿ
ಯೊಡನೆ ಮಾತನಾಡಿ ಆ ಧ್ರುವನು ಬಡನೆಯೇ ಮನೆಯಿಂದ ತೆರಳಿ,

ರಿತ್ಯುಕ್ತ್ವಾ ಮಾತರಂ ಧ್ರುವಃ । ಪುರಾಚ್ಚ ನಿರ್ಗಮ್ಯತತಸ್ತ
ದ್ಬಾ ಹ್ಯೋ ಪವನಂ ಯಯೌ ॥೫೦॥ ಸದದರ್ಶ ಮುನೀಂಸ್ತ
ತ್ರ ಸಪ್ತಪ್ರೂರ್ವಾ ಗತಾ೯ಧ್ರುವಃ । ಕೃಷ್ಣಾ ಜಿನೋತ್ತರೀಯೇ
ಷು ವಿಷ್ಟರೇಷು ಸಮಾಸ್ಥಿತಾ೯ ॥೫೧॥ ಸರಾಜ ಪುತ್ರಸ್ತಾ೯ ಸ
ರ್ವಾ೯ ಪ್ರಣಿಪತ್ಯಾ ಭ್ಯಭಾಷತ। ಪ್ರಶ್ರಯಾ ವನತಸ್ಸವ್ಯ ಗಭಿ
ವಾದನಪೂರ್ವಕಂ ॥ ೫೨॥ ಧ್ರುವಉವಾಚ॥ ಉತ್ತಾನ ಪಾದತನ
ಯಂ ಮಾಂ ನಿಬೋಧತ ಸತ್ತಮಾಃ। ಜಾತಂ ಸುನೀತ್ಯಾಂ ನಿರ್ವೇ
ದಾ ದ್ಯುಷ್ಮಾಕಂ ಪ್ರಾಪ್ತಮಂತಿಕಂ ॥೫೩॥ ಋಷಯ ಊಚುಃ॥
ಚತುಃ ಪಂಚಾಬ್ದ ಸಂಭೂತೋ ಬಾಲಸ್ತ್ವಂ ನೃಪನಂದನ!। ನಿ
ರ್ವೇದ ಕಾರಣಂ ಕಿಂಚಿತ್ತವಾ ದ್ಯಾಪಿ ವಿದ್ಯತೇ ॥೫೪॥ ನಚಿಂ

ಆ ಪಟ್ಟಣದಿಂದ ಹೊರಗೆ ಬಂದು ಆ ಪಟ್ಟಣದ ಹೊರಭಾಗದಲ್ಲಿರುವ ಬಂ
ದು ಉದ್ಯಾನವನಂ ಹೊಕ್ಕು ಅಲ್ಲಲ್ಲಿ ಸುಳಿದಾಡುತಿರಲು ॥೫೦॥ ಆಗಧ್ರುವ
ನು ಆ ಉಪವನದಲ್ಲಿ, ತನ್ನನ್ನು (ಧ್ರುವನನ್ನು) ಅನುಗ್ರಹಿಸುವುದಕ್ಕಾಗಿ
ಆಗತಾನೇ ಬಂದು, ಹುಲ್ಲಿಯ ಚರ್ಮದಿಂದ ಹಾಸಲ್ಪಟ್ಟ ದರ್ಭಾಸನಗಳ
ಲ್ಲಿ ಸುಖವಾಗಿ ಕುಳಿತು ಸ್ವಾತ್ಮಾರಾಮರಾಗಿ ಮೆರೆಯುತಿರುವ ಸಪ್ತ
ರ್ಷಿಗಳಂ ಕಂಡನು. ॥೫೧॥ ಬಳಿಕ ರಾಜಪುತ್ರನಾದ ಆಧ್ರುವನು ಹಿಂ
ದೆಹೇಳಿದ ಆ ಏಳುಮಂದಿ ಋಷಿಗಳ ಬಳಿ ಸಾರ್ದು, ತನ್ನ ಗೋತ್ರಪ್ರ
ವರಾದಿಗಳನ್ನು ಹೇಳಿ, ವಿನಯದಿಂದ ತಲೆಬಾಗಿ ಸಾಷ್ಟಾಂಗವೆರಗಿ, ಬಳಿಕ
ಆ ಋಷಿಗಳೊಡನೆ ತನ್ನ ಬಿನ್ನಹವಂ ಹೇಳಿಕೊಳ್ಳುತಿದ್ದನು ॥೫೨॥ ಧ್ರುವ
ನು ಹೇಳುತ್ತಾನೆ;-ಅಯ್ಯಾ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿದ ಮಹರ್ಷಿ
ಗಳಿರಾ , ನಾನು ಸ್ವಾಯಂಭುವ ಮನುವಿನ ಕಿರಿಯ ಮಗನೆನಿಸಿದ ಉ
ತ್ತಾನಪಾದನ ಮಗನು. ನನ್ನ ತಾಯಿಯು ಸುನೀತಿಯು ನನ್ನನ್ನು
ಧ್ರುವನೆಂದು ಕರೆಯುವರು ಇಂತಹ ನಾನು ಈಗ ನನಿಗೆ ಒದಗಿರುವ
ಮನೋವ್ಯಾಕುಲತೆಯನ್ನು ನೀಗಿಕೊಳ್ಳಲು ತಮ್ಮನ್ನು ಮರೆಹೊಕ್ಕಿರು
ವೆನು. ॥೫೩॥ ಋಷಿಗಳು ಕೇಳುತ್ತಾರೆ,—ಎಲೈ ರಾಜಪುತ್ರನೆ; ನಿನ್ನ
ನ್ನು ನೋಡಿದರೆ ನಿನಗೆ ಇನ್ನೂ ನಾಲ್ಕು ಅಥವ ಐದುಸಂವತ್ಸರಗಳ ವಯ
ಸ್ಸಿನಂತೆ ತೋರುವುದು. ನಿನಗೆ ಇನ್ನೂ ಅಂತಹ ಮನೋವ್ಯಥೆಗೆ

ತ್ಯಂ ಭವತಃ ಕಿಂಚಿದ್ದ್ರಾಯತೇ ನೃಪತಿಃ ಪಿತಾ । ನಚೈ ವೇಷ್ಟ ವಿಯೋಗಾದಿ ತವ ಪಶ್ಯಾಮಿ ಬಾಲಕ! ॥೫೪॥ ಶರೀರೇ ನಚ ತೇವ್ಯಾಧಿ ರಸ್ಮಾಭಿರುಪ ಲಕ್ಷ್ಯತೇ। ನಿರ್ವೇದಃ ಕಿಂನಿಮಿತ್ತಸ್ತೆ? ಕಥ್ಯತಾಂ ಯದಿವಿದ್ಯತೇ ॥೫೬॥ ಶ್ರೀಪರಾಶರಃ॥ ತತಸ್ಸ ಕಥ ಯಾ ವಾಸ ಸುರುಚ್ಯಾಯ ದುದಾಹೃತಂ। ತನ್ನಿಶಮ್ಯತತಃ ಪ್ರೋ ಚುರ್ಮ್ಮನಯಸ್ತೇ ಪರಸ್ಪರಂ ॥೫೭॥ ಅಹೋ! ಕ್ಷತ್ರಂ ಪರಂ

ಯಾವ ಕಾರಣವೂ ಇದ್ದಂತೆ ತೋರುವುದಿಲ್ಲವು. ॥೫೪॥ ನಿನಗೆ ಮನ ತ್ತಾವ ವಿಧವಾದ ಯೋಚನೆಯೂ ಇರುವಂತೆ ಕಾಣೆವು ನೀನೇನೂ ದರಿದ್ರನಲ್ಲ ಚಕ್ರವರ್ತಿ ಎನಿಸಿದ ಉತ್ತಾನಪಾದನ ಮಗನಾಗಿರುವೆ. ಆದುದರಿಂದ ಅನ್ನಾಹಾರಾದಿಗಳ ಯೋಚನೆಯೂ ನಿನಗೇನೂ ಇಲ್ಲವು ದಿಲ್ಲ. ನೀನು ಕೋರಿದುದೆಲ್ಲವನು ನಿನ್ನ ತಂದೆಯು ನಿನಗೆ ಒದಗಿಸಿ ಕೊಡುವನು ಎಲೈ ಪಸುಳೆಯೇ ! ನೀನು ಇನ್ನೂ ಚಿಕ್ಕವಯಸ್ಸಿನ ಹುಡುಗನಾಗಿರುವ ಕಾರಣ ಇಷ್ಟರಾದ ಬಂಧು, ಮಿತ್ರರು ಮೊದಲಾದವರ ಅಗಲುವಿಕೆಯಿಂದಲೂ ನಿನಗಾವ ವಿಧವಾದ ಯೋಚನೆಯೂ ತೋರಲಾರದು. ಇಂತಿರಲು ನಿನ್ನ ಮನೋವ್ಯಥೆಗೆ ಕಾರಣವೇನು?॥೫೫॥ನೀನು ರಾಜಪುತ್ರನಾದುದರಿಂದ ಸರ್ವೋತ್ತಮಗಳಾದ ಆಹಾರಾದಿಗಳನ್ನು ತಿಂದು ಸುಖದಿಂದಿರುವೆ ನಿನ್ನನ್ನು ಕಂಡರೆ ನಿನ್ನ ಶರೀರದಲ್ಲಿ ಯಾವುದೊಂದು ರೋಗವೂ ಇರುವಂತೆ ಕಾಣುವುದಿಲ್ಲ ನಿನ್ನ ಮನೋವ್ಯಥೆಗೆ ಕಾರಣವೇನು ? ಹಾಗೊಂದುವೇಳೆ ಪ್ರಬಲವಾದ ಮನೋವ್ಯಥೆಯು ನಿನಗುಂಟಾಗಿದ್ದು ಅದಕ್ಕೆ ಕಾರಣವೂ ಇದ್ದೊಡೆ ಅದನ್ನು ವಿಶದವಾಗಿ ಹೇಳು ॥ ಪರಾಶರಮುನಿಯು ಹೇಳುತ್ತಾನೆ,—ಇಂತು ಆ ಏಳುಮಂದಿ ಋಷಿಗಳಿಂದಲೂ ಪ್ರಶ್ನೆಮಾಡಲ್ಪಟ್ಟ ಆ ತರಳನಾದ ಧ್ರುವನು ಆ ಏಳುಮಂದಿ ಮುನಿಗಳನ್ನು ಕುರಿತು ತನ್ನ ಸವತಿತಾಯಿಯಾದ ಸುರುಚಿಯು ಆಡಿದ ಮಾತುಗಳೆಲ್ಲವನು ವಿಶದವಾಗಿ ತಿಳಿಯುಪಡಿಸಿ ಬಳಿಕ ಅದೇ ತನ್ನ ಮನೋವ್ಯಥೆಗೆ ಕಾರಣವೆಂಬುದಾಗಿ ಹೇಳಿದನು. ಇಂತು ಧ್ರುವನ ಮಾತನ್ನು ಕೇಳಿ ಆ ಏಳುಮಂದಿಯೂ ಆಶ್ಚರ್ಯಗೊಂಡು ಬಳಿಕ ಒಬ್ಬರೊಬ್ಬರು ತನ್ನಿಷ್ಟಕ್ಕೆ ತಾವೇ ಈರೀತಿ ಮಾತನಾಡಿಕೊಂಡರು. ॥೫೭॥ ಈಹು

ತೇಜೋ ಬಾಲಸ್ಯಾಪಿಯದಕ್ಷಮಾ । ಸಪತ್ನ್ಯಾ ಮಾತುರುಕ್ತಂ
ಯದ್ದೃದಯಾನ್ನಾಪ ಸರ್ಪತಿ ॥೪೪॥ ಭೋ! ಭೋ! ಕ್ಷತ್ರಿಯ
ದಾಯಾದ! ನಿರ್ವೇದಾದ್ಯ ತ್ತ್ವಯಾ ಽಧುನಾ ಕರ್ತುಂ ವ್ಯವಸಿತಂ
ತನ್ನಃ ಕಥ್ಯತಾಂ ಯದಿರೋಚತೇ ॥೪೫॥ ಯಚ್ಚ ಕಾರ್ಯಂ ತವಾ
ಸ್ಮಾಭಿ ಸ್ಸಾಹಾಯ್ಯ ಮನಿತದ್ಯತೇ! । ತತ್ಕಥ್ಯತಾಂ ವಿವಕ್ಷು
ಸ್ತ್ವಮ ಸ್ಮಾಭಿರುಪಲಕ್ಷ್ಯಸೇ ॥೪೦॥ಧ್ರುವಃ॥ ನಾಹ ಮರ್ಥಮು
ಭೀಪ್ಸಾಮಿ ನರಾಜ್ಯಂ ದ್ವಿಜಸತ್ತಮಾಃ! । ತತ್ಸಾಧನ ಮೇಕಮಿ

ಡುಗನನ್ನು ನೋಡಿದರೆ ಇನ್ನೂ ನಾಲ್ಕು ಐದುವರ್ಷದ ಪ್ರಾಯದವನಾಗಿ ರುವನು ಇಷ್ಟು ಚಿಕ್ಕವನಾದರೂ ತಮ್ಮ ಬಲತಾಯಿಯ ಮಾತಿನಿಂದ ತನಗೆ ಮಾನಭಂಗ ಉಂಟಾಯಿತೆಂದು ತಿಳಿದಿರುವನು ಆ ಬಲತಾಯಿ ಯ ಮಾತಿನಿಂದುಂಟಾದ ಕೋಪವು ಇನ್ನೂ ಇವನನ್ನು ಬಿಟ್ಟಿಲ್ಲವಲ್ಲಾ ! ಆಹಾ ! ಉತ್ತಮವೆನಿಸಿದ ಆ ಕ್ಷತ್ರಿಯತೇಜಸ್ಸನ್ನು ಏನೆಂದು ಹೇಳಬ ಹುದು ! ॥೪೪॥ ಅಯ್ಯಾ ಕ್ಷತ್ರಬಂಧುವೆನಿಸಿದ ಧ್ರುವನೆ ; ಇಂತಪ್ಪ ಮ ನೋವ್ಯಥೆಯನ್ನು ನೀಗಿಕೊಳ್ಳಲು ಏನುಮಾಡಬೇಕೆಂದು ನೀನು ನಿಶ್ಚಯಿ ಸಿರುವೆ ಆ ನಿನ್ನ ನಿಶ್ಚಯವನ್ನು ನಮಗೆ ಹೇಳಬಹುದಾಗಿದ್ದರೆ ಅದನ್ನು ತಿಳಿಸು ॥೪೫॥ ಅಯ್ಯಾ ನಿರತಿಶಯ ತೇಜೋರಾಶಿಯಿಂದ ಕಂಗೊಳಿಸು ತ್ತಾ ಎಲ್ಲರ ಮನಸ್ಸಿಗೂ ಆಶ್ಚರ್ಯವನ್ನುಂಟುಮಾಡುವ ಬಾಲನೆ , ಈ ವಿಷ ಯದಲ್ಲಿ ನಾವು ನಿನಗೇನು ಸಹಾಯ ಮಾಡಬೇಕಾಗಿರುವುದು? ನೀನು ಏನನ್ನೋ ಇನ್ನೂ ಹೇಳಬೇಕೆಂದು ಅಪೇಕ್ಷೆಯುಳ್ಳವನಂತೆ ಕಾಣುವೆ ಆದುದರಿಂದ ನಮ್ಮಿಂದ ನೀನು ಯಾವ ವಿಧವಾದ ಸಹಾಯವನ್ನು ಪಡೆಯ ಬೇಕೆಂದಿರುವೆಯೋ ಅದನ್ನು ಧೈರ್ಯವಾಗಿ ಹೇಳು ॥೪೦॥ ಇಂತು ಆ ಏ ಳುಮಂದಿಯು ಹೇಳಿದ ಮಾತನ್ನು ಕೇಳಿ ಬಳಿಕ ಧ್ರುವನು ಹೇಳತೊಡ ಗಿದನು;--ಅಯ್ಯಾ ಬ್ರಾಹ್ಮಣೋತ್ತಮರೆನಿಸಿದ ಋಷಿವರ್ಯರೆ , ನಾನು ಹಣವನ್ನು ಬೇಡುವುದಿಲ್ಲ. ನನಗೆ ರಾಜ್ಯವೂ ಬೇಡ. ಹಿಂದೆ ಇದುವರೆ ಗೆ ಯಾರೂ ಅನುಭವಿಸದಿರುವ ಸರ್ವೋತ್ತಮವಾದ ಒಂದು ಸ್ಥಾನವಂ ಪಡೆದು ಅಲ್ಲಿ ಸುಖಿಸಬೇಕೆಂದು ಮಾತ್ರ ಬಯಸುವೆನು. ಇದೇ ನನ್ನ ಕೋರಿಕೆಯು. ಇದಲ್ಲದೆ ನನಗೆ ಮತ್ತಾವುದೂ ಬೇಕಿಲ್ಲ. ॥ ೪೧ ॥

ಚ್ಛಾಮಿ ಭುಕ್ತಂ ನಾನ್ಯೇಸಯತ್ಪರಃ॥೪೧॥ಏತನ್ಮೇ ಕ್ರಿಯತಾಂ ಸವ್ಯಕ್ಕಥ್ಯತಾಂ ಪ್ರಾಪ್ಯತೇ ಯಥಾ । ಸ್ಥಾನಮಗ್ರ್ಯಂ ಸಮಸ್ತೇ ಭ್ಯಸ್ಥಾನೇಭ್ಯೋ ಮುನಿಸತ್ತಮಾಃ! ॥೪೨॥ ಮರೀಚಿಃ ॥ ಅನಾ ರಾಧಿತ ಗೋವಿಂದೈ ರ್ನರೈಸ್ಥಾನಂ ನೃಪಾತ್ಮಜ! । ನಹಿಸಂಪ್ರಾ ಪ್ಯತೇಶ್ರೇಷ್ಠಂ ತಸ್ಮಾದಾರಾ ಧಯಾಚ್ಯುತಂ ॥೪೩॥ ಅತ್ರಿಃ । ಪ ರಃ ಪರಾಣಾಂಪುರುಷೋ ಯಸ್ಯತುಷ್ಟೋ ಜನಾರ್ದನಃ । ಸಪ್ರಾ ಪ್ನೋತ್ಯಕ್ಷಯಂ ಸ್ಥಾನಮೆತತ್ಸತ್ಯಂ ಮಯೋದಿತಂ ॥೪೪॥ ಅಂಗಿ

ಅಯ್ಯಾ ಮುನಿವರ್ಯರೆ ; ಎಲ್ಲ ಪದವಿಗಳಿಗಿಂತಲೂ ಉತ್ತಮವೆನಿಸಿದ ಆ ಮೊದಲನೆಯ ಸ್ಥಾನವನ್ನು ಹೊಂದಲು ನಾನೇನುಮಾಡಬೇಕು? ಅದಕ್ಕೆ ಉಪಾಯವೇನು ! ಅದನ್ನು ಹೊಂದುವ ಬಗೆಹೇಗೆ ? ಇದೆಲ್ಲವನ್ನೂ ವಿಶದವಾಗಿ ತಾವು ತಿಳಿಯುಪಡಿಸಿದೊಡೆ ನನ್ನಲ್ಲಿ ಪರಿಪೂರ್ಣಾನುಗ್ರಹವನ್ನು ತೋರಿದಂತಾಗುವುದು, ಇಷ್ಟ ಮಾತ್ರ ನನಿಗೆ ಅನುಗ್ರಹಿಸಿದರೆ ನಾನು ಕೃತಾರ್ಥನಾಗುವೆನು ॥೪೨॥ ಇಂತು ಆ ಧ್ರುವನ ವಿನಯವಚನ ಪುರಸ್ಸರವಾದ ಬಿನ್ನಹವಂ ಕೇಳಿ ಮರುಕಗೊಂಡು ಆ ವಿಳುಮುಂದಿಯಲ್ಲಿ ಒಬ್ಬನಾದ ಮರೀಚಿಯು ಈರೀತಿ ಹೇಳಲುಪಕ್ರಮಿಸುತ್ತಾನೆ ;—ಎಲೈ ಅರಸುಮಗನೆ , ಮನುಷ್ಯನು ತಾನು ಮೇಲ್ಮೆಯಂ ಪಡೆಯಬೇಕಾದರೆ, ಪಶುಪಾಲಕನೂ,ಯಜ್ಞರಕ್ಷಕನೂ, ಇಂದ್ರಿಯಾಭಿಮಾನಿಯೂ ಎನಿಸಿದ ಆ ಗೋವಿಂದನನ್ನು ಆರಾಧಿಸದಿದ್ದೊಡೆ ಆತನಿಗೆ ಎಂದಿಗೂ ಶ್ರೇಯಸ್ಸು ದೊರೆಯಲಾರದು. ಆದುದರಿಂದ ಸರ್ವಕಾಲದಲ್ಲಿಯೂ ನಾಶರಹಿತನೆನಿಸಿದ ಆ ವಿಷ್ಣುವನ್ನು ಆರಾಧಿಸಿ, ಆತನನ್ನು ಸಂತೋಷಗೊಳಿಸಿ ಆತನ ಅನುಗ್ರಹಕ್ಕೆ ಪಾತ್ರನಾಗು ॥೪೩॥ ಬಳಿಕ ಎರಡನೆಯವನೆನಿಸಿದ ಅತ್ರಿಮುನಿಯು ಹೇಳುತ್ತಾನೆ :--ಬಂದಕ್ಕಿಂತಲೂ ಒಂದು ಉತ್ತಮಗಳೆನಿಸಿದ ಇಂದ್ರಿಯಗಳು, ಶಬ್ದಾದಿ ವಿಷಯಗಳು, ಮನಸ್ಸು, ಬುದ್ಧಿ, ಮಹತ್ತತ್ವ,) ಅಹಂಕಾರ ಇವುಗಳಿಗಿಂತಲೂ ಉತ್ತಮನೆನಿಸಿದ ಆ ಜನಾರ್ದನನು ಯಾರ ಪೂಜಾದಿಗಳಿಂದ ಸಂತುಷ್ಟನಾಗುವನೋ ಅಂತಹ ಮನುಷ್ಯನು ಈ ಲೋಕದಲ್ಲಿ ಸರ್ವೋತ್ತಮವಾದ ಸ್ಥಾನವಂ ಪಡೆಯುವನು. ಆದುದರಿಂದ ಆ ಪರಮಾತ್ಮನನ್ನು ಪ್ರೀತಿಗೊಳಿಸು. ಈ ನನ್ನಮಾತು ದಿಟ.

ರಾಃ ॥ ಯಸ್ಮಾಂತ ಸ್ಸರ್ವಮೇವೇದ ಮಚ್ಯುತಸ್ಯ ಮಹಾತ್ಮನಃ।
ತಮಾರಾಧಯ ಗೋವಿಂದಂ ಸ್ಥಾನಮಗ್ರ್ಯಂ ಯದೀಚ್ಛಸಿ ॥೪೫॥
ಪುಲಹಃ ॥ ಪರಂಬ್ರಹ್ಮ ಪರಂಧಾಮ ಯೋಸೌಬ್ರಹ್ಮತಥಾಪರಂ।
ತಮಾರಾಧ್ಯಹರಿಂಯಾತಿ ಮುಕ್ತಿಮಪ್ಯೇತಿ ದುರ್ಲಭಾಂ ॥೪೬॥ ಕ್ರ
ತುಃ॥ಯೋ ಯಜ್ಞಃ ಪುರುಷೋ ಯಜ್ಞೋ ಯಜಿಶ್ಚೋ ಯಜ್ಞೇಶಃ ಪರಮಃ

ಇದನ್ನು ಅಸಡ್ಡೆ ಮಾಡಬೇಡ. ॥೪೪॥ ತರುವಾಯ ಅವರಲ್ಲಿ ಮೂರನೆ ಯವನೆನಿಸಿದ ಅಂಗಿರಸ್ಸು ಹೇಳಿದನು ;--ಎಲೈ ರಾಜನಂದನನಾದ ಧ್ರುವನೆ ; ನೀನು ಉತ್ತಮ ಪದವಿಯನ್ನು ಬಯಸುವಿಯಾದರೆ, ಚರಾಚರ ರೂಪದಿಂದಿರುವ ಈ ಸಕಲ ಲೋಕಗಳನ್ನೂ ತನ್ನ ಕುಕ್ಷಿಯಲ್ಲಿ ಧರಿಸಿ, ಆ ಲೋಕಗಳು ಎಷ್ಟೋ ಸಾರಿ, ಸೃಷ್ಟಿ, ಸ್ಥಿತಿ, ಲಯಗಳಂ ಪಡೆಯುತಿದ್ದರೂ ತಾನುಮಾತ್ರ ತಾವರೆಯ ಎಲೆಯಮೇಲಿನ ನೀರಿನಂತೆ ನಿರ್ವಿಕಾರನಾಗಿಯೇ ಇದ್ದುಕೊಂಡ , ಕಂಗೊಳಿಸುವ ಮಹಾ ಮಹಿಮ ಸಂಪನ್ನನೆನಿಸಿ, ಅಚಿಂತ್ಯ ವೈಭವಯುಕ್ತನಾದ ಆ ಗೋವಿಂದನನ್ನು ಭಜಿಸು॥ ಅನಂತರದಲ್ಲಿ ನಾಲ್ಕನೆಯಬಾರಿ ಪುಲಹನೆಂಬ ಮತ್ತೊಬ್ಬ ಮುನಿಯು ಹೇಳಿದನು;--ಅಯ್ಯಾ ಧ್ರುವನೆ , ಎಲ್ಲಕ್ಕಿಂತಲೂ ಅನಾದಿ ಎನಿಸಿದವನಾದುದರಿಂದ ಬ್ರಹ್ಮನೆಂದು ಕರೆಯಿಸಿಕೊಂಡು, ಸರ್ವೋತ್ತಮನೆನಿಸಿ, ಉತ್ತಮವೆನಿಸಿದ ಸ್ಥಾನವಂ ಹೊಂದಿ ಪರಬ್ರಹ್ಮನೆಂದು ಹೇಳಲ್ಪಡುವ ಆ ಹರಿಯನ್ನು ಅನನ್ಯಭಾವನೆಯಿಂದ ಭಜಿಸಿದೊಡೆ, ಅನೇಕ ಜನ್ಮಗಳನ್ನೆತ್ತಿ ಪುಣ್ಯಸಂಪಾದನೆ ಮಾಡಿದರೂಕೂಡ ಹೊಂದಲಸಾಧ್ಯವಾದ ಮುಕ್ತಿ [ಮೋಕ್ಷ] ಸಂಪತ್ತು ಕೈಗೂಡುವುದು. ಇಂತಿರಲು ಸಾಮಾನ್ಯವಾದ ನಿನ್ನ ಕೋರಿಕೆಯು ಕೈಗೂಡದಿರದು. ಆದಕಾರಣ ಭಕ್ತದುರಿತಾಪಹಾರಕನಾದ ಆ ಹರಿಯನ್ನು ಆರಾಧಿಸು. ಆತನು ಪ್ರಸನ್ನನಾಗುವನು. ನಿನ್ನ ಮನೋರಥವು ಸಿದ್ಧಿಸುವುದು ॥೪೬॥ ಇದಾದಮೇಲೆ ಐದನೆಯ ಬಾರಿ ಕ್ರತುವೆಂಬ ಮತ್ತೊಬ್ಬ ಮುನಿಯು ಹೇಳಿದುದೇನೆಂದರೆ- ಯಾವ ಪರಮಾತ್ಮನಾದರೆ ತಾನು ಸರ್ವವ್ಯಾಪಕನಾದುದರಿಂದ, ಯಜ್ಞ ಪುರುಷ, ಯಜ್ಞ, ಯಜಮಾನ. ಯಜ್ಞರಕ್ಷಕ, ಮೊದಲಾದ ಸಕಲರೂಪಗಳಿಂದಲೂ ತಾನೇ ಇದ್ದುಕೊಂಡು ಆಯಜ್ಞಕರ್ತೃವೆನಿಸಿದ ಯಜ

ಪುನರ್ಭೂ। ತಸ್ಮಿಂಸ್ತುಷ್ಟೇ ಯದಪ್ರಾಪ್ಯಂ ಕಿಂತದಸ್ತಿ? ಜನಾರ್ದನೇ॥೪೭॥ ಪುಲಸ್ತ್ಯಃ । ಐಂದ್ರವಿಂದ್ರಃ ಪರಂ ಸ್ಥಾನಂ ಯಮಾರಾಧ್ಯ ಜಗತ್ಪತಿಂ । ಪ್ರಾಪ ಯಜ್ಞಪತಿಂವಿಷ್ಣುಂ ತಮಾರಾಧಯಸುವ್ರತ । ॥೪೮॥ ವಸಿಷ್ಠಃ॥ ಪ್ರಾಪ್ತೋಽಪ್ಯಾರಾಧಿತೇವಿಷ್ಣೌ ಮನಸಾಯದ್ಯದಿಚ್ಛಸಿ । ತೈಲೋಕ್ಯಾಂತರ್ಗತಂ ಸ್ಥಾನಂ ಕಿಮುವತ್ತೋತ್ತಮೋತ್ತಮಂ ॥೪೯॥ ಧ್ರುವಃ ॥ ಆರಾಧ್ಯಃ ಕಥಿತೋ ದೇವೋ ಭವದ್ಭಿಃ ಪ್ರಣತಸ್ಯಮೇ । ಮಯಾತತ್ಪರಿತೋಷಾಯ ಯ

ಮಾನನಿಗೆ ತದನುರೂಪವಾದ ಫಲವಂಕೊಡುವನೋ ಅಂತಹ ಮಹಾವಿಷ್ಣುವು ಪ್ರಸನ್ನನಾದೊಡೆ ಯಾವುದು ತಾನೇಲಭಿಸಲಾರದು? ಆದುದರಿಂದ ಆ ವಿಷ್ಣುವನ್ನಾರಾಧಿಸು ॥೪೭॥ ಬಳಿಕ ಆತನೆಯ ಸಾರಿ ಪುಲಸ್ತ್ಯನೆಂಬ ಮುನಿಯು ಹೇಳಿದುದೆಂತೆಂದರೆ —ಅಯ್ಯಾ ಮಹಾನಿಯಮವುಳ್ಳ ಧ್ರುವನೆ ; ನೀನು ಸರ್ವೋತ್ತಮವಾದ ಸ್ಥಾನವಂ ಬಯಸುವಿಯಾದರೆ, ಯಜ್ಞಪತಿಯಾದ ಆ ಶ್ರೀ ಮಹಾವಿಷ್ಣುವನ್ನು ಆರಾಧಿಸು ಪೂರ್ವದಲ್ಲಿ ಇಂದ್ರನು ಜಗತ್ಪತಿಯಾದ ಆಶ್ರೀಮನ್ನಾರಾಯಣನನ್ನು ಆರಾಧಿಸಿ ತ್ರಿಲೋಕ್ಯಾಧಿಪತ್ಯವನ್ನು ಪಡೆದನು. ಆದುದರಿಂದ ನೀನೂ ಆತನನ್ನೇ ಪೂಜಿಸಿದೊಡೆ ನಿನ್ನ ಮನೋರಥವು ಸಫಲವಾಗುವುದು ॥೪೮॥ ಕಡೆಯಲ್ಲಿ ವಸಿಷ್ಠನು ಈ ರೀತಿ ಹೇಳತೊಡಗಿದನು.-ಎಲೈ ಮಗುವೆ , ಸರ್ವವ್ಯಾಪಕನಾದ ಆವಿಷ್ಣುವನ್ನು ಆರಾಧಿಸಿದೊಡೆ ನೀನು ಈ ಮೂರುಲೋಕದಲ್ಲಿ ಯಾರ ಪದವಿಯನ್ನು ಬಯಸಿದರೂ ಕೊಡುವನು ಇಂತಿರಲು ಉತ್ತ, ವೋತ್ತಮವಾದ ಸ್ಥಾನವೆಲ್ಲಿದು ನೀನೇ ಹೇಳುವೆ. ಅಂತಹ ಪದವಿಯನ್ನು ನೀನು ಹೊಂದುವುದು ಬಂದು ದೊಡ್ಡದಲ್ಲ. ಆದಕಾರಣ ಆತನನ್ನು ಆರಾಧಿಸು ॥೪೯॥ ಇಂತು ಆ ಏಳು ಮಂದಿಯೂ ವಿಷ್ಣುವನ್ನೇ ಆರಾಧಿಸೆಂಬುದಾಗಿ ಹೇಳಿದ ಅವರ ಉಪದೇಶವಂ ಕೈಕೊಂಡು ಮರಳಿ ಧ್ರುವನು ಪ್ರಶ್ನೆಮಾಡುತ್ತಾನೆ-ಅಯ್ಯಾ ಮುನೀಶ್ವರಿರಾ , ನಾನು ನಿಮ್ಮನ್ನು ಮರೆ ಹೊಕ್ಕ ಕಾರಣ ನೀವೆಲ್ಲರೂ ಸೇರಿ ಬಂದೇ ಮಾತಿನಿಂದ ಮಹಾವಿಷ್ಣುವನಾ ರಾಧಿಸುವಂತೆ ಅಪ್ಪಣೆಕೊಟ್ಟಿರುವಿರಿ. ನಾನು ಆತನನ್ನು ಸಂತೋಷಗೊಳಿಸಬೇಕಾದರೆ ಯಾವಮಂತ್ರವನ್ನು ಜಪಿಸಬೇಕು.

ಜ್ಜಪ್ಯವ್ಯಾತದುಚ್ಯತಾಂ ॥೫೦॥ ಯಥಾಚಾರಾಧನಂಕೃತಸ್ಯ ಮಯಾ
ಕಾರ್ಯಂ ಮಹಾತ್ಮನಃ । ಪ್ರಸಾದ ಸುಮುಖಾಃ! ತನ್ಮೇಕಥಯಂ
ತು ಮಹರ್ಷಯಃ ! ॥೫೧ ॥ ಋಷಯಊಚುಃ॥ ರಾಜಪುತ್ರ! ಯ
ಥಾವಿಷ್ಣೋ ರಾರಾ ಧಿಪರೈರ್ನರೈಃ । ಕಾರ್ಯಮಾರಾಧನಂ ತ
ನ್ನೋ ಯಥಾವಚ್ಛ್ರೋತುಮರ್ಹಸಿ ॥೫೨॥ ಬಾಹ್ಯಾರ್ಥಾದಖಿ

ಇದನ್ನು ನನಗೆ ತಿಳಿಸಿದುದಾದರೆ ನಾನು ಅದರಿಂದ ಕೃತಾರ್ಥನಾಗುವೆನು. ಇಷ್ಟು ಮಾತ್ರ ಅನುಗ್ರಹಿಸಿರಿ ! ೫೦॥ ನಿರಂತರವೂ ನನ್ನಂತಹವರಿಗೆ ಅನುಗ್ರಹಮಾಡುವುದರಲ್ಲಿಯೇ ಆಸಕ್ತರೆನಿಸಿದ ಮಹರ್ಷಿಗಳಿರಾ, ಮಹಾನುಭಾವನೆನಿಸಿದ ಆ ವಿಷ್ಣುವನ್ನು ನಾನು ಯಾವ ಬಗೆಯಿಂದ ಆರಾಧಿಸಬೇಕು ? ತಾವು ದಿವ್ಯಜ್ಞಾನಸಂಪನ್ನರಾಗಿರುವ ಕಾರಣ ಈ ಅಂಶವನ್ನು ನನಿಗೆ ವಿಶದವಾಗಿ ತಿಳಿಯುವಡಿಸಿರಿ ॥೫೨॥ ಇಂತು ಧ್ರುವನಮಾತನ್ನು ಲಾಲಿಸಿ ಬಳಿಕ ಆ ಋಷಿಗಳು ಹೇಳುತ್ತಾರೆ--ಎಲೈ ರಾಜನಂದನನೆ , ವಿಷ್ಣುವನ್ನು ಆರಾಧನ ಮಾಡುವುದರಲ್ಲಿ ಬದ್ಧಾದರರೆನಿಸಿದವರು ಆ ವಿಷ್ಣುವನ್ನು ಪೂಜಿಸುವ ರೀತಿಯಂ, ನಾವುನಿನಗೆ ತಿಳಿಸುವೆವು, ಕಿವಿಗೊಟ್ಟು ಸಂಪೂರ್ಣವಾಗಿ ಕೇಳುವವನಾಗು ॥ ೫೩ ॥ ಮನುಷ್ಯನು, ಸರ್ವವ್ಯಾಪಕನೆನಿಸಿದ ಆ ಪರಮಾತ್ಮನನ್ನು ಆರಾಧಿಸಬೇಕಾದರೆ ಮೊದಲು ಶಬ್ದಾದಿ ವಿಷಯಗಳಿಂದ ಮನಸ್ಸನ್ನು ಬಿಗಿಹಿಡಿದು, ಮರಳಿ ಈ ಮನವು ಆ ವಿಷಯಗಳಿಗೆರಗದಂತೆ ನಿಶ್ಚಲಗೊಳಿಸಬೇಕು ಇಂತು ಮನವು ವಿಷಯಾದಿಗಳಿಗೆ ಎರಗದೆ ಆತನನ್ನೇ ಅನವರತವೂ ಧ್ಯಾನಮಾಡುವ ಅಭ್ಯಾಸಂ ಸ್ಥಿರಮಾಡಿಕೊಂಡೆಡೆ ಬಳಿಕ ಅಂತಹ ಮನಸ್ಸನ್ನು ಆತನ ಅಧೀನಮಾಡಿ, ಆತನಲ್ಲಿಯೇ ಲಯಗೊಳಿಸಬೇಕು (ಇಲ್ಲಿ ಆ ವಿಳುಮುಂದಿಋಷಿಗಳೂ ಧ್ರುವನಿಗೆ ಮೊದಲು ಅಷ್ಟಾಂಗ ಯೋಗ ಸಾಧ್ಯವಾದ ಚಿತ್ತಸ್ಥೈರ್ಯವಂ ಉಪದೇಶಿಸಿ ಬಳಿಕ ದ್ವಾದಶಾಕ್ಷರ ಮಂತ್ರವನ್ನು ಉಪದೇಶಿಸಲು, ಆದಿಯಲ್ಲಿ ಮನಸ್ಸು ಬಾಹ್ಯಾರ್ಥಗಳಿಗೆ ಹೋಗದಂತೆ ತಡೆಮಾಡಬೇಕು, ಎಂಬುದಾಗಿ ಹೇಳಿದರು. ಇದರಿಂದ ಹಿಂಸೆ, ಸುಳ್ಳು ಮೊದಲಾದ ನಿಷಿದ್ಧ ಕಾರ್ಯಗಳನ್ನು ತ್ಯಾಗಮಾಡುವಿಕೆ ಎಂಬ ಮೊದಲನೆಯ ಅಂಗವೆನಿಸಿದ ಯಮವನ್ನು ಹೇಳಿದಂತಾಯಿತು. ಸರ್ವವಿಷಯಗಳ

ಲಾಚ್ಚಿತ್ತಂ ತ್ಯಾಜಯೇತ್ಪ್ರಥಮಾಂತರಃ।ತಸ್ಮಿನ್ನೇವ ಜಗದ್ಧಾಮ್ನಿ
ತತಃ ಕುರ್ವೀತ ನಿಶ್ಚಲಂ ॥೫೫॥ ಏವಮೇ ಕಾಗ್ರಚಿತ್ತೇನ ತ
ನ್ಮಯೇನ ಧೃತಾತ್ಮನಾ। ಜಪ್ತವ್ಯಂ ಯನ್ಮಿಬೋಧೈತ ತ್ತಸ್ಯಃ ಪಾ
ರ್ಥಿವನಂದನ! ॥೫೪॥ ಹಿರಣ್ಯಗರ್ಭ ಪುರುಷ ಪ್ರಧಾನಾ ವ್ಯಕ್ತ

ನ್ನೂ ತ್ಯಾಗವಾಡಿ ವೈರಾಗ್ಯವಂ ಪಡೆಯಬೇಕೆಂದು ಹೇಳಿದುದರಿಂದ ಪ್ರ
ತ್ಯಾಹಾರವೆಂಬ ಮತ್ತೊಂದು ಅಂಗವು ಹೇಳಲ್ಪಟ್ಟಿತು. ಆ ಮನಸ್ಸು
ಬೇರೊಂದು ಕಡೆಗೆ ಹೋಗದಂತೆ ಸ್ಥಿರಗೊಳಿಸಬೇಕೆಂದು ಹೇಳಿದುದ
ರಿಂದ, ಚಿತ್ತಸ್ಥೈರ್ಯಸಂಪಾದಕಗಳೆನಿಸಿದ ಆಸನ, ಪ್ರಾಣಾಯಾಮಗ
ಳೆಂಬ ಮತ್ತೆರಡು ಅಂಗಗಳನ್ನು ಹೇಳದಂತಾಯಿತು. ಇಂತಾದ ಬಳಿಕ
ಆ ಮನಸ್ಸನ್ನು ಆ ಪರಮಾತ್ಮನಲ್ಲಿಯೇ ಸ್ಥಿರಗೊಳಿಸಬೇಕೆಂಬುದಾಗಿ ಹೇ
ಳಿದುದರಿಂದ " ಧಾರಣೆ " ಎಂಬ ಮತ್ತೊಂದು ಅಂಗವು ಹೇಳಲ್ಪ
ಟ್ಟಿತು) ॥೫೫॥ ಅಯ್ಯಾ ರಾಜಕುಮಾರನೆ, ಇಂತು ಮನಸ್ಸನ್ನು ನಿಗ್ರಹಿ
ಸಿದ ಬಳಿಕ ಆ ಮನಸ್ಸನ್ನು ತನ್ಮಯವಾಗಿ (ಪರಮಾತ್ಮನಲ್ಲಿಯೇ ಅಡಗಿ
ಕೊಂಡುದನ್ನಾಗಿ) ಮಾಡಿ ಮಂತ್ರವನ್ನು ಜಪಿಸಬೇಕು. ಹಾಗಾದರೆ
ಜಪವಾಡತಕ್ಕ ಮಂತ್ರವಾವುದೆಂದರೆ ಅದನ್ನು ತಿಳಿಯುವೆವು ಕೇಳು
(" ಧೃತಾತ್ಮನಾ " ಎಂಬುದಾಗಿ ಹೇಳಿದುದರಿಂದ ಶೌಚಾಚಾರಸಂಪನ್ನನಾಗಿ
ರಬೇಕೆಂದು ಹೇಳಿದುದಾಯಿತು. ಇದರಿಂದ ನಿಯಮವೆಂಬ ಮತ್ತೊಂ
ದು ಅಂಗವನ್ನು ಉಪದೇಶಿಸಿದರು "ಏಕಾಗ್ರಚಿತ್ತೇನ " ಎಂಬುದಾಗಿ
ಹೇಳಿದುದರಿಂದ " ಧ್ಯಾನವು " ಹೇಳಲ್ಪಟ್ಟಿತು. " ತನ್ಮಯೇನ ಎಂಬ
ದಾಗಿ ಹೇಳಿದುದರಿಂದ " ಸಮಾಧಿ ಅಥವಾ ಭಗವಂತನಲ್ಲಿ ಮನವನ್ನು
ಐಕ್ಯಮಾಡುವಿಕೆ ಯೆಂಬ ಮನೋಲಯವು ಹೇಳಲ್ಪಟ್ಟಿತು. ಇಂತು ಅ
ಷ್ಟಾಂಗಯೋಗವೂ ಉಪಸ್ಯಸ್ತವಾದುದು) ॥ ೫೪ ॥ ಹಿರಣ್ಯಗರ್ಭನೆನಿಸಿ
ದ ಚತುರ್ಮುಖನು, ಪುರುಷನೆನಿಸಿದ ವಿಷ್ಣು ಅಥವಾ ವಿರಾಟ್‌ಪುರುಷ.
ಸಕಲಲೋಕಗಳನ್ನು ಪ್ರಕೃತಿಯಲ್ಲಿ ಲಯಗೊಳಿಸುವಕಾರಣ ಪ್ರಧಾ
ನವೆಂದು ಕರೆಯಲ್ಪಡುವ ಕಾಲವು, ಈ ಮೂರುಮಂದಿಗೂ (ಹಿರಣ್ಯ
ಗರ್ಭ, ಪುರುಷ, ಪ್ರಧಾನರಿಗೆ) ನಿಯಾಮಕತ್ವವೆನಿಸಿದ ತ್ರಿಗುಣಾತ್ಮಕವಾದ
ಮಾಯೆಯು, ಈ ರೂಪಗಳೆಲ್ಲವೂತನ್ನವೇಆಗಿ ತಾನೇ ಆ ಆರೂಪಗಳಿಂದ

ರೂಪಿಣಿ। ಓಂನಮೋ ವಾಸುದೇವಾಯ ಶುದ್ಧಜ್ಞಾನ ಸ್ವಭಾವಿನೆ॥
ಏತಜ್ಜಾಪಭಗವಾ ಜಪ್ಯಂಸ್ವಾಯಂಭುವೋಮನುಃ। ಪಿತಾ
ಮಹಸ್ತವ ಪುರಾತಸ್ಯ ತುಷ್ಟೋಜನಾರ್ದನಃ ॥೫೬॥ ದದೌಯಥಾ

ಇರತಕ್ಕವನಾದರೂ ವಿಶುದ್ಧವೆನಿಸಿದ ಜ್ಞಾನದೇಹದಿಂದ ಎಂದೆಂದಿಗೂ ನಾಶವಿಲ್ಲದೆ ಇರುವ, ಸರ್ವನಿಯಾಮಕನೆನಿಸಿ, ಸಕಲವಸ್ತುಗಳನ್ನೂ ಉಂಟುಮಾಡಿ, ಅವುಗಳಿಗೆ ಒಂದೊಂದು ವಿಧವಾದ ಶಕ್ತಿಯನ್ನು ಕೊಟ್ಟಿರುವವನಾದುದರಿಂದ ವಾಸುದೇವನೆಂಬದಾಗಿ ಕರೆಯಿಸಿಕೊಳ್ಳುವ ಆ ಪರಮಾತ್ಮನಿಗೆ ನಮಸ್ಕಾರವೆಂಬದಾಗಿ ಅರ್ಥವುಳ್ಳದ್ವಾದಶಾಕ್ಷರ ಮಂತ್ರವನ್ನು ಬಾರಿಬಾರಿಗೂ ಜಪಿಸಬೇಕು ॥ ೫೫ ॥ (ಧ್ರುವನು ಪ್ರಶ್ನೆ ಮಾಡುತ್ತಾನೆ —ಅಯ್ಯಾ ಋಷಿವರ್ಯರೇ, ಈ ಮಂತ್ರವನ್ನು ಹಿಂದೆಯಾರಾದರೂ ಪಠನಮಾಡಿರುವರೋ ಅಥವಾ ಇಲ್ಲವೋ ? ಈ ವಿವರವನು; ನನಿಗೆ ವಿಶದಪಡಿಸಿರಿ) ಋಷಿಗಳು ಹೇಳತೊಡಗಿದರು, ಅಯ್ಯಾ ಧ್ರುವನ್ನೆ ನಿನ್ನ ಪಿತಾಮಹನೆನಿಸಿದ ಸ್ವಾಯಂಭುವ ಮನುವು ಹಿಂದೆ ಈ ಮಂತ್ರವನ್ನು ಜಪಿಸಿ, ಅದರಿಂದ ಭಗವಂತನನ್ನು ಮೆಚ್ಚಿಸಿ ಅನೇಕ ಕೋರಿಕೆಗಳನ್ನು ಪಡೆದುಕೊಂಡನು ಈಮಂತ್ರವು ಸಾಮಾನ್ಯವಾದುದಲ್ಲ ಪರಮ ರಹಸ್ಯವಾದುದು. ಶೀಘ್ರದಲ್ಲಿಯೇ ಉಪಾಸಕರಿಗೆ ಫಲದಾಯಕವಾದುದು. ಜಪಿಸಲು ಯೋಗ್ಯವಾದ ಮಂತ್ರಗಳಿಗೆಲ್ಲಾ ಉತ್ತಮವಾದುದು ॥ ೫೬ ॥ ಇಂತಹ ಮಂತ್ರ ಜಪದಿಂದ ಸಂತುಷ್ಟನಾದ ಪರಮಾತ್ಮನು ಮೂರು ಲೋಕವಲ್ಲಿಯೂ ದುರ್ಲಭನೆನಿಸಿದ ಸಂಪತ್ತನ್ನು ನಿನ್ನ ತಾತನಾದ ಸ್ವಾಯಂಭುವ ಮನುವಿಗೆ ಅನುಗ್ರಹಿಸಿದನು. ಅಂತೆಯೇ ನೀನೂಕೂಡ ಅನವರತವೂ ಈ ಮಂತ್ರವನ್ನೇ ಜಪಿಸುತ್ತ, ಭಕ್ತಪರಾಧೀನನೆನಿಸಿದ ಆ ಗೋವಿಂದ ಪರಮಾತ್ಮನನ್ನು ಸಂತೋಷಗೊಳಿಸಿದೆಯಾದೊಡೆ ನಿನ್ನ ಕೋರಿಕೆಯು ಕೈಗೂಡುವುದು. ನಿನ್ನ ಪಿತಾಮಹನಂತೆಯೇ ಉತ್ತಮೋತ್ತಮ ಪದವಿಯುಂ ಪಡೆಯುವೆ. ಎಂದಾಗಿ ಸಪ್ತರ್ಷಿಗಳು ಧ್ರುವನಿಗೆ ಪರಮ ರಹಸ್ಯವೆನಿಸಿದ ದ್ವಾದಶಾಕ್ಷರ ಮಂತ್ರವನ್ನು ಆ ಮಂತ್ರಮಹಿಮೆ, ಫಲಸ್ತುತಿಗಳನ್ನು ಉಪದೇಶಿಸುತಿದ್ದರೆಂಬ

ಭಿಲಷಿತಾ ವ್ಯದ್ಧಿಂ ತೈ ್ರಲೋಕ್ಯದುರ್ಲಭಾಂ ॥ ತಥಾ ತ್ವಮಪಿ ಗೋವಿಂದಂ ತೋಷಯೈ ತತ್ಸದಾ ಜಪನ್ ॥ ೪೭ ॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮಾಂಶೇ ಏಕಾದಶೋಧ್ಯಾಯಃ

ದಾಗಿ ಪರಾಶರನು ತನ್ನ ಶಿಷ್ಯನಾದ ಮೈತ್ರೇಯನಿಗೆ ಹೇಳುತಿದ್ದನೆಂಬ ಲ್ಲಿಗೆ ಶ್ರೀವಿಷ್ಣುಪುರಾಣ ಪ್ರಥಮಾಂಕದೊಳ್ ಹನ್ನೊಂದನೆಯ ಅಧ್ಯಾಯಂ ಮುಗಿದುದು.

ಏಕಾದಶಾಧ್ಯಾಯಂ ಸಮಾಪ್ತಂ

ಶ್ರೀಃ.

ಓಂನಮಃ ಪರಮಾತ್ಮನೇ

ಅಥ ದ್ವಾದಶೋಧ್ಯಾಯಃ.

ಶ್ರೀಪರಾಶರಃ ॥ ನಿಶಮ್ಯ ತವಶೇಷೇಣ ಮೈತ್ರೇಯ ! ನೃಪತೇಸ್ಸುತಃ । ನಿರ್ಜಗಾಮ ವನಾತ್ತಸ್ಮಾ ತ್ಪ್ರಣಿಪತ್ಯಸತರ್ಷಭ

ಪರಮ ಕಾರುಣಿಕ ನೆನಿಸಿದ ಪರಾಶರ ಮುನಿಯು ಹಿಂದಿನ ಅಧ್ಯಾಯದ ಕೊನೆಯಲ್ಲಿ ಸಪ್ತರ್ಷಿಗಳು ಧ್ರುವನಿಗೆ ಪರಮಾತ್ಮನ ಆರಾಧನ ಕ್ರಮವನ್ನೂ ಮಂತ್ರ ಜಪಕ್ರಮವನ್ನೂ ಉಪದೇಶಿಸಿದರೆಂಬುದಾಗಿ ಹೇಳಿ ಬಳಿಕ, ಅದೇ ಕಥೆಯನ್ನೇ ಪೂರ್ತಿಮಾಡಲು ತನ್ನ ಶಿಷ್ಯನೆನಿಸಿದ ಮೈತ್ರೇಯನಂ ಕುರಿತು ಹೇಳಲುಪಕ್ರಮಿಸುತ್ತಾನೆ:— ಎಲೈ ಮೈತ್ರೇಯನೆ; ನೃಪನಂದನನೆನಿಸಿದ ಆಧ್ರುವನು, ಇಂತು ಆ ಏಳುಮಂದಿ ಋಷಿಗಳೂ ಉಪದೇಶಿಸಿದ ವಿಷಯವನ್ನೂ ಚನ್ನಾಗಿ ಕಿವಿಗೊಟ್ಟು ಕೇಳತಿಳಿದವನಾಗಿ ಬಳಿಕ ಆಮುನಿವರ್ಯರಿಗೆ ಸಾಷ್ಟಾಂಗನೆರಗಿ, ಅವರಂಬೀಳ್ಕೊಂಡು ಅಲ್ಲಿಂದ ಪೊರಮಟ್ಟು, ಪರಮಪಾವನ ನೆನಿಸಿದ ಯಮುನಾನದಿಯ ದಡವುಂ

ಷೀಕ ॥೧॥ ಕೃತಕೃತ್ಯ ಮಿವಾತ್ಮಾನಂ ಮನ್ಯಮಾನಸ್ತತೋದ್ವಿ
ಜ' । ಮಧುಸಂಜ್ಞಂ ವ.ಹಾಪುಣ್ಯಂ ಜಗಾಮ ಯಮುನಾತಟಂ॥
ಪುನಶ್ಚ ಮಧುಸಂಜ್ಞೇನ ದೈತ್ಯೇನಾಧಿಷ್ಠಿತಂ ಯತಃ । ತತೋ
ಮಧುವನಂ ನಾಮ್ನಾ ಖ್ಯಾತ ಮತ್ರ ಮಹೀತಲೇ ॥೨॥ ಹತ್ವಾ
ಚ ಲವಣಂ ರಕ್ಷೋ ಮಧುಪುತ್ರಂ ಮಹಾಬಲಂ । ಶತ್ರುಘ್ನೋ
ಮಧುರಾಂ ನಾಮ ಪುರೀಂ ಯತ್ರ ಚಕಾರ ವೈ ॥೪॥ ಯತ್ರವೈ
ದೇವ ದೇವಸ್ಯ ಸಾನ್ನಿಧ್ಯಂ ಹರಿಮೇಧಸಃ । ಸರ್ವಪಾಪಹರೇತ
ಸ್ಮಿ ತಪಸ್ತೀರ್ಥೇ ಚಕಾರಸಃ ॥೫। ಮರೀಚಿ ಮಿಶ್ರಿ ಲ್ರಸ್ಯಾನಿ

ಸಾರ್ದ್ರ, ಆ ಯಮುನಾ ನದಿಯತೀರದಲ್ಲಿ ಮಧುವನ ವೆಂಬದಾಗಿ ಪೆಸರ್ಗೊಂಡ ಬಂದು ಅರಣ್ಯವುಂ ಪ್ರವೇಶಿಸಿದನು ॥೧॥೨॥ ಪೂರ್ವದ ಲ್ಲಿ ಮಧುವೆಂಬದಾಗಿ ಹೆಸರುಳ್ಳ ಅಸುರ ಶ್ರೇಷ್ಠನೊಬ್ಬನು ಈ ಅರಣ್ಯ ದಲ್ಲಿ ವಾಸಮಾಡಿಕೊಂಡಿದ್ದುದರಿಂದ ಈ ಅರಣ್ಯವನ್ನು ಲೋಕದಲ್ಲಿ ಎ ಲ್ಲರೂ ,,ಮಧುವನ,, ವೆಂಬದಾಗಿ ಕರೆಯುವರು ॥೪॥ ಮತ್ತು ಈ ಮಧುವೆಂಬ ದೈತ್ಯನಿಗೆ ಲವಣಾಸುರನೆಂಬ ಮಗನೊಬ್ಬನಿದ್ದನು. ಇವ ನು ಲೋಕ ಕಂಟಕನಾಗಿರಲು, ತ್ರೇತಾಯುಗದಲ್ಲಿ ಶ್ರೀರಾಮನ ಅನು ಜನಾದ ಶತ್ರುಘ್ನನು ತನ್ನ ಅಣ್ಣನ ಅಪ್ಪಣೆಯಮೇರೆ ಆ ಲವಣಾಸುರನ ನ್ನು ಕೊಂದು,ಇದೇ ಮಧುವನವಿದ್ದಿಡೆಯಲ್ಲಿಯೇ ಮಧುರಾ ಪಟ್ಟಣವೆಂಬ ಒಂದು ದಿವ್ಯ ನಗರಿಯಂ ನಿರ್ಮಿಸಿದನು ॥೪॥ ಈ ಸ್ಥಲದಲ್ಲಿಭಜಕರ ಪಾ ಪ ನಿವಾರಕ ನೆನಿಸಿದುದರಿಂದ ಹರಿ ಎಂಬದಾಗಿ ಕರೆಯಿಸಿಕ್ಕೊಳ್ಳುವ, ದೇ ವದೇವ ನೆನಿಸಿದ ಶ್ರೀಮಹಾವಿಷ್ಣುವಿನ ಸಾನ್ನಿಧ್ಯವು ಅತಿಶಯ ವಾಗಿ ರುವುದು. ಇಂತು ಶ್ರೀಮನ್ನಾರಾಯಣನ ಸಾನ್ನಿಧ್ಯದಿಂದೊಪ್ಪುವ, ಸರ್ವ ಪಾಪ ನಾಶಕವೆನಿಸಿ, ಮಹಾ ಪವಿತ್ರತಮವಾದ ಆಪ್ರದೇಶದಲ್ಲಿ ಧ್ರುವ ನು ನಿಯಮದಿಂದ ಉಗ್ರವಾದ ತಪಸ್ಸನ್ನಾಚರಿಸತೊಡಗಿದನು ॥ ೫ ॥ ಮರೀಚಿ, ಅತ್ರಿ, ಅಂಗಿರಸ್ಸು, ಪುಲಹ, ಕ್ರತು, ವಸಿಷ್ಠ, ವಸಿಷ್ಠರೆಂ ಬ ಆ ಏಳುಮಂದಿಯೂ ತನಗೆ (ಧ್ರುವನಿಗೆ) ಉಪದೇಶ ಮಾಡಿದ ಪ್ರ ಕಾರ ಆ ನಿಯಮಕ್ಕೆ ಸ್ವಲ್ಪವೂ ಲೋಪ ಬಾರದಂತೆ, ದೇವದೇವೋ

ಭಿರ್ವೃಥೋದ್ದಿಷ್ಟಮುಭೂತ್ತಥಾ । ಆತ್ಮನ್ಯಶೇಷದೇವೇಶಂ ಸ್ಥಿತಂ ವಿಷ್ಣುಮುಮನ್ಯತ ॥೬॥ ಅನನ್ಯ ಚೇತಸಸ್ತಸ್ಯ ಧ್ಯಾಯತೋಭಗವಾ ಹರಿಃ । ಸರ್ವ ಭೂತಗತೋ ವಿಷ್ಣು ಸ್ಸರ್ವಭಾವ ಗತೋ ಭವತ್ ॥೭॥ ಮನಸ್ಯೇವ ಸ್ಥಿತೇ ತಸ್ಯ ವಿಷ್ಣೌ ಮೈತ್ರೇಯ ! ಯೋಗಿನಃ । ನಶಶಾಕ ಧರಾಭಾರ ಮುದ್ವೋಢುಂ ಭೂತಧಾರಿಣೀ ॥೮॥ ಮಾಮು ಪಾದಸ್ಥಿತೇ ತಸ್ಮಿ ನನಾಮಾರ್ಧೇನ ಮೇದಿನೀ । ದ್ವಿತೀಯಮಂಜ ನನಾಮಾರ್ಧಂ ಕ್ಷಿತೇ ರ್ದಕ್ಷಿಣತಃ ಸ್ಥಿತೇ ॥೯॥ ಪಾದಾಂಗುಷ್ಠೇನ ಸಂಪೀಡ್ಯಯದಾ ಸವ

ತ್ತಮನೆನಿಸಿ, ಸಕಲ ನಿಯಾಮಕನೂ, ಸರ್ವ ವ್ಯಾಪಕನೂ ಆದ ಶ್ರೀ ಪರಮಾತ್ಮನನ್ನು ತನ್ನ ಹೃದಯಾರವಿಂದದಲ್ಲಿ ನೆಲೆಗೊಳಿಸಿಕೊಂಡು ಧ್ಯಾನ ಮಾಡಲುಪಕ್ರಮಿಸಿದನು ॥೬॥ ಇಂತು ಧ್ರುವನು ಬೇರೊಂದೆಡೆಯಲ್ಲಿ ಮನಸ್ಸಿಡದೆ ತಪಸ್ಸು, ಧ್ಯಾನಗಳಲ್ಲಿಯೇ ಆಸಕ್ತನಾಗಿ ಆ ಪರಮಾತ್ಮನನ್ನು ಧ್ಯಾನ ಮಾಡುತ್ತಿರಲು, ಭಕ್ತಾನು ಕಂಪಿಯೆನಿಸಿದ ಪರಮಾತ್ಮನು ಈತನ ನಿಯಮದಿಂದ ಪ್ರಸನ್ನನಾಗಿ ತನ್ನ ವಿಶ್ವರೂಪವಂ ಆ ಧ್ರುವನ ಹೃದಯಾರವಿಂದದಲ್ಲಿ ತೋರ್ಪಡಿಸಿದನು ॥೭॥ ಅಯ್ಯಾ ಮೈತ್ರೇಯನೆ; ಇಂತು ಆಧ್ರುವನ ಮನಸ್ಸಿನಲ್ಲಿ ವಿಷ್ಣುವು ನೆಲೆಸಿರುವಾಗ, ಯೋಗಿವರ್ಯನೆನಿಸಿದ ಆ ಧ್ರುವನು ಅನನ್ಯಮನಸ್ಕನಾಗಿ ಆತನನ್ನೇ ಧ್ಯಾನಮಾಡುತ್ತಿರಲು, ಸಕಲ ಭೂತಗಳನ್ನೂ ತನ್ನ ಮೇಲೆ ಅಡಗಿಸಿಕೊಂಡಿರುವ ಕಾರಣ ಭೂತಧಾರಿಣಿ ಎನಿಸಿದ ಈ ಪೃಥಿವಿಯು ಧ್ರುವನ ಭಾರಮಂ ತಡೆಯಲಾರದೆ ಕುಗ್ಗಿಹೋಯಿತು ॥೮॥ ಬಳಿಕ ಆಧ್ರುವನು ಒಂದು ಕಾಲಿನಿಂದಲೇ ನಿಂತು ತಪವನ್ನಾಚರಿಸ ತೊಡಗಿದನು. ಧ್ರುವನು ತನ್ನ ಎಡಗಾಲಿನಿಂದ ಭೂಮಿಯನ್ನು ತುಳಿದು, ಬಲಗಾಲನ್ನು ಮೇಲಕ್ಕೆತ್ತಿ ತಪಸ್ಸು ಮಾಡುವ ಕಾಲದಲ್ಲಿ ಧ್ರುವನ ಎಡಪಾರ್ಶ್ವದಲ್ಲಿ ಮಾತ್ರ, ಭೂಮಿಯು ವಿಶೇಷವಾಗಿ ಕುಗ್ಗಿ ಹಳ್ಳತಿಟ್ಟುಗಳಾದವು. ಆತನು ಬಲಗಾಲಿನಿಂದ ಭೂಮಿಯಂ ತುಳಿದುಕೊಂಡು ತನ್ನ ಎಡಗಾಲನ್ನು ಮೇಲಿಟ್ಟು ಧ್ಯಾನಿಸುವಾಗ ಆ ಧ್ರುವನ ಬಲ ಭಾಗದ ಭೂಪ್ರದೇ

ಸುಧಾಂ ಸ್ಥಿತಃ । ತದಾ ಸವ॰ಸ್ತಾ ವಸುಧಾಚಚಾಲ ಸಹಪರ್ವ
ತೈಃ ॥೧೦॥ ನದ್ಯೋನದಾ ಶ್ಚಮುದ್ರಾಶ್ಚ ಸಂಕ್ಷೋಭಂಪರಮಂ
ಯಯುಃ । ತತ್ಕ್ಷೋಭಾದವ ರಾಃ ಕ್ಷೋಭಂ ಪರಂ ಜಗ್ಮುರ್ಮ
ಹಾಮುನೇ ! ॥೧೧॥ ಯಾವಾ ನಾವು ತದಾದೇವಾ ಮೈತ್ರೇ
ಯ ! ಪ॰ವಾಕುಲಾಃ । ಇಂದ್ರೇಣ ಸಹ ಸಂಮಂತ್ರ್ಯ ಧ್ಯಾನ

ಶವೆಲ್ಲಾ ಕುಸಿದು ಹೋದಂತಾಯಿತು, ॥೯॥ ಇಷ್ಟು ಘೋರವಾಗಿ ಧ್ರು
ವನು ತಪಸ್ಸು ಮಾಡುತಿದ್ದಾಗ್ಯೂ ಪರಮಾತ್ಮನು ಪ್ರಸನ್ನನಾಗಿ ತನಗೆ
ಪ್ರತ್ಯಕ್ಷನಾಗಿ ಬಂದು ದರ್ಶನವನ್ನೀಯದಿರುವುದಂ ಕಂಡು ಧ್ರುವನು
ತನ್ನಹೆಬ್ಬೆಟ್ಟಿನಿಂದ ಮಾತ್ರ ಭೂಮಿಯನ್ನು ತುಳಿದುಕೊಂಡು ಮತ್ತಷ್ಟು
ಕ್ರೂರವಾಗಿ ತಪಸ್ಸನ್ನು ಮಾಡತೊಡಗಿದನು. ಆ ಕಾಲದೋಳ್ ಭೂ
ಮಿಯು ಪರ್ವತಗಳೊಡನೆ ಗಡಗಡನೆ ನಡುಗಲಾರಂಭಿಸಿತು ॥೧೦॥ ಆಗ
ನದಿಗಳೂ, ಹೊಳೆಗಳೂ, ಸಮುದ್ರಗಳೂ ಎಲ್ಲವೂ ಬಹಳವಾಗಿ ಕ್ಷೋ
ಭೆಗೊಂಡು ದಡವನ್ನು ಮೀರಿ ಪ್ರಳಯ ಕಾಲದಂತೆ ಎಲ್ಲೆಲ್ಲಿಯೂ ಪ್ರ
ವಹಿಸಲಾರಂಭಿಸಿದುವು ಅಯ್ಯಾ ಮನನಶೀಲರಲ್ಲಿ ಉತ್ತಮನೆನಿಸಿದ,
ಮೈತ್ರೇಯನೆ, ಇಂತು ಭೂಮಂಡಲವೆಲ್ಲವೂ ಕ್ಷೋಭೆಗೊಂಡಿರುವು
ದಂ ಕಂಡು ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಗುಂಪುಕೂಡಿ
"ಓಹೋ ! ಭೂಮಂಡಲದಲ್ಲಿ ಈ ರೀತಿ ಕ್ಷೋಭೆಯುಂಟಾಗಿರುವುದಂ
ನೋಡಿದರೆ ಯಾವನೋ ಮಹಾಪುರುಷನೊಬ್ಬನು ತಪವನ್ನಾಚರಿಸು
ವಂತಿದೆ. ಆತನ ನಿಯಮವು ಪರಿಪೂರ್ಣವಾದೊಡೆ ನಮ್ಮುಲ್ಲಿ ಯಾರಪ
ದವಿಯನ್ನಪೇಕ್ಷಿಸುವನೋ ತಿಳಿಯದು. ಆದುದರಿಂದ ಆತನ ನಿಯಮ
ಕ್ಕೆ ಈಗಲೇ ಭಂಗವನ್ನುಂಟು ಮಾಡಬೇಕೆಂಬುದಾಗಿ" ಯೋಚಿಸಿ ಆ
ತನ ತಪಸ್ಸಿನಿಂದ ಬಹಳ ವ್ಯಥೆಪಟ್ಟರು ॥೧೦॥ ಎಲೈ ಮೈತ್ರೇಯನೆ ;
ಇಂತು ಯೋಚಿಸಿದ ಇವರು ಧ್ರುವನ ತಪಸ್ಸಿಗೆ ಭಂಗ ಉಂಟಾಗಲು
ಮಾಡಿದ ದುಷ್ಕೃತ್ಯಗಳಂ ನಾನೇನೆಂದು ಹೇಳಲಿ ! ಇಂತು ದೇವತೆಗ
ಳೆಲ್ಲರೂ ಕ್ಷೋಭೆ ಗೊಂಡಿರಲಾಗಿ ಆ ಸ್ವಾಯಂಭುವ ಮನ್ವಂತರದಲ್ಲಿ
ಪ್ರಸಿದ್ಧರಾಗಿದ್ದ" ಯಾಮ, ರೆಂದು ಪೆಸರ್ಗೊಂಡ ದೇವಪುರುಷರು

ಭಂಗಂ ಧ್ರುವಕ್ಕಾಯುಃ ॥೧೨॥ ಕೂಶ್ಮಾಂಡಾ ವಿವಿಧೈ ರೂಪೈ ಸ್ಸ
ಹೇಂದ್ರೇಣ ಮಹಾವನೇ ! । ಸಮಾಧಿಭಂಗಮತ್ಯರ್ಥ ಮಾರ
ಬ್ಧಾಃ ಕರ್ತುಮಾತುರಾಃ ॥೧೩॥ ಸುನೀತಿರ್ನಮ ತನ್ಮಾತಾ ಸಾ
ಸಾ ತತ್ಪರತಃ ಸ್ಥಿತಾ । ಪುತ್ರೇತಿ ಕರುಣಾಂವಾಚ ಮಾಹಮಾ
ಯಾ ಮಯಿತದಾ ॥೧೪॥ ಪುತ್ರಕಾ ! ಸ್ಮಾನ್ನಿವರ್ತಸ್ವ ಶರೀರಾ
ತ್ಯಯ ದಾರುಣಾತ್ । ನಿರ್ಬಂಧತೋ ಮಯಾಲಬ್ಧೋ ಬಹುಭಿ
ಸ್ತ್ವಂ ಮನೋರಥೈಃ ॥೧೫॥ ದೀನಾ ಮೇಕಾಂಪರಿತ್ಯಕ್ತು ಮ

ಇಂದ್ರ ನೊಡನೆ ಆಲೋಚಿಸಿ, ಆತನನ್ನೂ ತಮ್ಮ ಸಂಗಡಲೇ ಕರೆದು ಕೊಂಡು ಆ ಧ್ರುವನ ಬಳಿ ಸಾರ್ದು ಆತನ ತಪಸ್ಸನ್ನು ಭಂಗಪಡಿಸ ಲಾರಂಭಿಸಿದರು ॥೧೨॥ ಅಯ್ಯಾ ಮುನಿವರ್ಯನೆ, ಇಂತು ೧ಯಾವು,, ರೆಂಬ ದೇವತೆಗಳು ಧ್ರುವನ ತಪೋಭಂಗಕ್ಕೆ ಪ್ರವರ್ತಿಸಿದುದಂ ಕಂ ಡು ''ಕೂಶ್ಮಾಂಡ,, ರೆಂಬ ಉಪದೇವತೆಗಳು ಕೆಲವುಮಂದಿ ಅಸ್ಥಳ ಕ್ಕೆ ಬಂದು ತಮ್ಮ ಪ್ರಭುವೆನಿಸಿದ ಇಂದ್ರನ ಅಪ್ಪಣೆಯಂ ಹೊಂದಿ ತಾವೂ ತಮ್ಮ ಮಾಯೆಯಿಂದ ಅನೇಕ ರೂಪವಂತಾಳಿ ಆ ಧ್ರುವನಿಗೆ ತಪೋ ಭಂಗವನ್ನುಂಟು ಮಾಡಲಾರಂಭಿಸಿದರು. ॥೧೩॥ ಆಬಳಿಕ ಈ ದೇವತೆಗಳೆಲ್ಲರೂ ಸೇರಿ ತಮ್ಮ ಮಾಯೆಯಿಂದ ಆಧ್ರುವನ ತಾಯಿಯಂ ತಿರುವ ಬಾದು ಸ್ತ್ರೀವ್ಯಕ್ತಿಯಂ ನಿರ್ಮಿಸಿ, ಆಧ್ರುವನ ಮುಂದುಗಡೆ ಯಲ್ಲಿ ನಿಲ್ಲಿಸಿದರು. ತರುವಾಯ ಮಾಯಾಮಯಳಾದ ಸುನೀತಿಯು ಆ ಧ್ರುವನಂ ಕಂಡು ಅತಿದುಃಖಿತಳಾಗಿ ತನ್ನಮಗನು ಅನುಭವಿಸುವ ಕ ಷ್ಟವಂ ನೋಡಿ ಸಹಿಸಲಾರದೆ ತನ್ನ ಕಣ್ಣುಗಳಂದ ಕಂಬನಿ ಮಳೆಯಂಕ ರೆಯುತ್ತಾ ಕೂಗ್ದಿದ ಧ್ವನಿಯಿಂದ ಈರೀತಿ ಮಾತನಾಡತೊಡಗಿದಳು. ಮಾ ಯಾ ಸುನೀತಿಯು ಹೇಳುತ್ತಾಳೆ — ಎಲೈ ನನ್ನ ಮುದ್ದು ಕಂದನೆ ; ಶರೀರವನ್ನು ಶೋಷಿಸಿ ಪ್ರಾಣಾಪಹಾರಕವಾಗಿರುವ ಈ ತಪಸ್ಸನ್ನು ಇಲ್ಲಿಗೆ ಸಾಕುಮಾಡು. ನಾನು ನಿನ್ನಿಂದ ಅನೇಕ ಮನೋರಥಗಳನ್ನನು ಭವಿಸುವೆನೆಂದು ತಿಳಿದು ಅತಿಕಷ್ಟದಿಂದ ನಿನ್ನನ್ನು ಪಡೆದೆನಲ್ಲವೆ ! ಇಂ ತಹ ನೀನು ಈಪರಿಯಾದೊಡೆ ಮುಂದೆ ನನ್ನನಾಡೇನು ? ॥೧೫॥ ಎಲೈ

ನಾಥಾಂ ನತ್ವಮರ್ಹಸಿ । ಸಪತ್ನೀ ವಚನಾದ್ವತ್ಸ ! ಹೃಗತೇ ಸ್ತ್ವಂಗತಿರ್ಮಮ ॥ ೬॥ ಕ್ವಚತ್ವಲ ಪಂಚವರ್ಷೀಯಃ ? ಕ್ವ ಚೈತದ್ದಾರುಣಂ ತಪಃ । ನಿವರ್ತ್ಯತಾಂ ಮನಃಕಷ್ಟಾನ್ನಿರ್ಬ ಧಾತ್ಪಲ ವರ್ಜಿತಾತ್ ॥೭॥ ಕಾಲಃ ಕ್ರೀಡನಕಾನಾಂ ತೇ ತ

ಮಗುವೆ , ನೀನಲ್ಲದೆ ನನಗೆ ಬೇರೊಬ್ಬ ಮಗನಿರುವನೆ ? ಇಂತು ಒ ಬ್ಬನೇ ಮಗನಾದನೀನೂ ಕೂಡ ಈರೀತಿ ಅರಣ್ಯಕ್ಕೆ ತೆರಳಿರುವೆಯಲ್ಲ! ಪತಿಯಾದ ಉತ್ತಾನ ಪಾದನಿಂದ ನಾನು ಕೋರಿಕೆಗಳಂ ಸಫಲಗೊಳಿ ಸಿಕೊಳ್ಳೋಣವೆಂದರೆ, ಆತನು ನನ್ನನ್ನು ಹುಲ್ಲು ಕಡ್ಡಿಗಿಂತಲೂ ಕ ಡಿಮೆಯಾಗಿ ತಿಳಿದು, ನನ್ನ ಸವತಿಯಾದ ಸುರುಚಿಯಲ್ಲಿಯೇ ಆಸಕ್ತ ನಾಗಿ ನನ್ನನ್ನು ಪ್ರೀತಿಸದಿರುವುದನ್ನು ನೀನರಿಯೆಯಾ ? ಆದುದರಿಂದ ಅನಾಥಳಾದ ನನ್ನನ್ನು ಈಪರಿ ಉಪೇಕ್ಷೆ ಮಾಡುವುದು ನಿನಿಗೆ ನ್ಯಾಯ ವಲ್ಲವು. ನಿನ್ನ ಬಲತಾಯಿಯ ಮಾತನ್ನು ಮುಂದುಮಾಡಿಕೊಂಡು ತಪ ಸ್ಸಿಗಾಗಿ ಅರಣ್ಯವಂ ತೆರಳಿ ಅನಾಥಳೂ, ಏಕಪುತ್ರಳೂ ಎನಿಸಿದ ನ ನ್ನನ್ನು ಕಾಡುಪಾಲುಮಾಡಿ ನೀನೂ ಕೂಡ ಈರೀತಿ ಕ್ಲೇಶಪಡುವೆ ಯಲ್ಲಾ ! ನಿರ್ಗತಿಕಳಾದ ನನ್ನನ್ನು ಈರೀತಿ ನೀನೂ ಕೂಡ ಕೈಬಿ ಟ್ಟರೆ ನನಗೆ ಬೇರೆ ಗತಿಯಾರು ? ॥೬॥ ಎಲೈ ತರಳನೆ , ನಾಲ್ಕು ಅ ಥವಾ ಐದುವರ್ಷಗಳ ಪ್ರಾಯವುಳ್ಳ ನೀನೆಲ್ಲಿ? ಆಚರಿಸಲಸಾಧ್ಯವಾದ ಈ ಉಗ್ರತಪಸ್ಸೆಲ್ಲಿ ? ಕೇವಲ ಮನಸ್ಸಿಗೆ ಕಷ್ಟವನ್ನುಂಟುಮಾಡಿ ಫಲ ವನ್ನೂ ಕೊಡದ ಅಭಿನಿವೇಶವೆಂಬೊಡ ಗೂಡಿರುವ ಈ ತಪಸ್ಸಿನಿಂದ ನಿನ್ನ ಮನಸ್ಸನ್ನು ಹಿಂದಿರುಗಿಸಿ ನನಗೆ ಪ್ರೀತಿಯನ್ನುಂಟುಮಾಡು ॥೭॥ ಈಗ ನಿನಗಿರುವ ವಯಸ್ಸು, ನೀನು ಆಟಪಾಟಗಳನ್ನಾಡಿಕೊಂಡು ದಿವ್ಯ ವಾದ ಮಧುರ ಭೋಜನವಂಮಾಡಿ ಸುಖವಾಗಿ ಕಾಲ ಕಳೆಯಲುಯೋ ಗ್ಯವಾದುದು. ಈ ಬಾಲ್ಯವು ಕಳೆದಬಳಿಕ ಕೌಮಾರಾವಸ್ಥೆಯು ಬಂ ದೊಡೆ ಆಗ ವೇದ, ವೇದಾಂಗಾದಿ ಸಕಲವಿದ್ಯೆಗಳನ್ನೂ ಕಲಿಯಬೇ ಕು. ಆಬಳಿಕ ಯುವ್ವನಾರಂಭ ವಾದೊಡೆ ಆಗ ಸರ್ವೋತ್ತಮಗಳಾದ ಸ್ರಕ್ಚಂದನ ವನಿತಾದಿಗಳನ್ನನುಭವಿಸಿ ಸುಖವಾಗಿರತಕ್ಕ ಕಾಲವು. ಇಂ

ದಂತೇ ಧ್ರಿಯಮಸ್ಯತೇ । ತತಶ್ಚಮುಸ್ತ ಭೋಗಾನಾಂ ತದಂತೇ
ಜೇಷ್ಯತೇತಪಃ ॥೧೪॥ ಕಾಲಃ ಕ್ರೀಡನಕಾನಾಂ ಯಸ್ತವ ಬಾಲ
ಸ್ಯಪುತ್ರಕ!।ತಸ್ಮಿತ್ವಮಿಚ್ಛಂಸ್ತಪಸೇವಿನಾಶಾಯಾತ್ಮನೋರತಃ॥
ಮತಾಪ್ರೀತಿಃ ಪರಮೋಧರ್ಮೋ ವಯೋವಸ್ಥಾ ಕ್ರಿಯಾಕ್ರಮಂ।

ತು ಬಾಲ್ಯ ಕೌಮಾರ, ಯವ್ವನಗಳೆಂಬ ಈ ಮೂರೂ ಕಳೆದಬಳಿಕ ತ
ಪವನ್ನಾಚರಿಸುವುದು ಧರ್ಮವು ॥೧೪॥ ಎಲೈ ಪಸುಳೆಯೆ ; ಆದಕಾರ
ಣ ಇಂತಹ ಆಟ ಪಾಟಗಳಿಗೆ ಉಚಿತವಾದ ಈ ವಯಸ್ಸಿನಲ್ಲಿ ಉಗ್ರವಾ
ದ ತಪಸ್ಸನ್ನಾಚರಿಸಲು ನೀನು ಪ್ರಯತ್ನ ಪಟ್ಟರುವೆಯಲ್ಲಾ. ನಿನ್ನಮೌ
ಢ್ಯವಂ ನಾನೇನೆಂದು ಪೇಳಲಿ! ನೀನೀಪರಿ ಈ ವಯಸ್ಸಿನಲ್ಲಿ ತಪಸ್ಸ
ನ್ನಾರಂಭಿಸಿ ಈ ತಪಸ್ಸು ಸಫಲವಾಗದಿದ್ದೊಡೆ ಮತ್ತಷ್ಟು ನಿಯಮವ
ನ್ನು ವೃದ್ಧಿಗೊಳಿಸಿ ಆ ನಿಯಮದಿಂದಲೇ ಆತ್ಮನಾಶವಂ ಹೊಂದುವೆ.
ಮನುಷ್ಯನು ಎಂತಹ ಆಪತ್ತಿನಲ್ಲಿಯೂ ಆತ್ಮಹತ್ಯೆ ಮಾಡಿಕೊಳ್ಳಬಾರ
ದು. ಆತ್ಮಹತ್ಯೆಯು ಅತ್ಯಂತ ನಿಂದನೀಯವಾದುದಲ್ಲವೆ ? ॥೧೯॥
ಎಲೈ ಮುದ್ದುಮಗುವೆ , ನಾನು ಹಿಂದೆಹೇಳಿದಂತೆ ನಿನ್ನ ವಯಸ್ಸಿಗೆ ಅ
ನುಗುಣವಾಗಿ ಆಟ ಪಾಟಗಳನ್ನಾಡಿಕೊಂಡು ನನ್ನ ಮುಂದೆ ಕುಣಿದು
ನಲಿದಾಡುತ್ತಾ ನನ್ನನ್ನು ಸಂತೋಷಪಡಿಸು. (ವೃಥಾತೀರ್ಥಂ ವೃಥಾ
ದಾನಂ ವೃಥಾಜಪ್ಯಂ ವೃಥಾಹುತಂ । ಸಜೀವತಿ ವೃಥಾಬ್ರಹ್ಮ ! ಯ
ಸ್ಯ ಮಾತಾಸುದುಃಖಿತಾ) ತಾಯಿಯು ಕಷ್ಟಕ್ಕೆಗುರಿಯಾಗಿ ದುಃಖಪ
ಡುವ ಕಾಲದಲ್ಲಿ ಮಗನಾದವನು ತೀರ್ಥಯಾತ್ರೆ ಮಾಡಿದರೇನು ? ದಾ
ನಮಾಡಿಫಲವೇನು ? ಜಪವಮಾಡಿದರೇನುಫಲ ? ಯಜ್ಞಾದಿಕ್ರತುಗಳ
ನ್ನಾಚರಿಸಿದರೆತಾನೇ ಆ ಪಾಪವಂ ನಾಶಮಾಡಿಕೊಳ್ಳಲಾದೀತೆ ? ಅಂತ
ಹನನು ಬದುಕಿದ್ದು ತಾನೇಫಲವೇನು ? ಎಂಬದಾಗಿ ಅನೇಕ ಪುರಾಣ
ಗಳಲ್ಲಿ ಹೇಳಿರುವಂತೆ) ನನ್ನನ್ನು ಕಷ್ಟಕ್ಕೆ ಗುರಿಮಾಡಿ ನೀನೀಪರಿ ತಪ
ಸ್ಸು ಮಾಡಿ ಯಾವ ಸದ್ಗತಿಯನ್ನು ತಾನೇಗಳಿಸುವೆ ? ಆದುದರಿಂದ ನ
ನ್ನ ಮಾತನ್ನು ಲಾಲಿಸಿ ಅಧರ್ಮವೆನಿಸಿದ ಈ ಕಾರ್ಯವಂ ಇಲ್ಲಿಗೆನಿಲ್ಲಿ
ಸಿ ನನ್ನೊಡನೆ ಪಟ್ಟಣಕ್ಕೆತೆರಳಿ ನನ್ನನ್ನು ಸಂತೋಷಗೊಳಿಸು.

ಅನುವರ್ತಸ್ವ ಮಾಂ ಮೋಹಾನ್ನಿವರ್ತ್ಯಾಽಸ್ಮಾದ ಧರ್ಮತಃ ॥
ಪರಿತ್ಯಜತಿ ವತ್ಸಾ ! ದ್ಯಾಯದ್ಯೇತನ್ನಭವಾಂಸ್ತಪಃ । ತ್ಯಕ್ತ್ವಾ
ವ್ಯೂಹ ಮಪಿಪ್ರಾಣಾಂಸ್ತತೋಽವೈಪಶ್ಯತಸ್ತವ ॥೨೧॥ ಶ್ರೀಪ

(ಸಕಲ ಧರ್ಮಗಳನ್ನೂ ಬೋಧಿಸುವ ಶ್ರುತಿಯೂ ಕೂಡ ಆದಿಯಲ್ಲಿ ,, ಮಾತೃದೇವೋ ಭವ,, ಎಂಬದಾಗಿ ,,ತಾಯಿಯು ಮಾತನ್ನು ಮೀರದೆ ಆಕೆಯನ್ನೇ ಸಾಷ್ಟಾತ್ಪರಾತ್ಪರ ವಸ್ತುವೆಂಬಂದಾಗಿ ತಿಳಿ. ಎಂಬೀ ರೀತಿಯಿಂದ ಕೂಗಿ ಕೂಗಿ ಹೇಳುತ್ತಿರುವುದು. ಇಂತಹ ಶ್ರುತಿವಾಕ್ಯವನ್ನೂ ಕೂಡ ನಿರಾಕರಿಸಿ, ನನ್ನನ್ನು ಈ ರೀತಿ ಕಷ್ಟಕ್ಕೆ ಒಳಪಡಿಸುವುದು ನಿನಿಗೆ ಸಮನಲ್ಲ) ॥೨೦॥ ಎಲೈ ಕಂದನೆ , ನನ್ನ ಮಾತಿನಂತೆ ನೀನೀ ತಪಸ್ಸನ್ನು ನಿಲ್ಲಿಸಿದರೆ ಸಮ ಹಾಗಿಲ್ಲದೊಡೆ ನಾನೂ ನಿನ್ನಮುಂದೆಯೇ ನನ್ನ ಪ್ರಾಣಗಳನ್ನು ನೀಗಿಕೊಳ್ಳುವೆನು. ಆದಕಾರಣ ಇಂತಹ ಘೋರತರ ಕೃತ್ಯವನ್ನು ನಾನುಮಾಡದಹಾಗೆ ಶೀಘ್ರದಲ್ಲಿಯೇ ತಪಸ್ಸಿನಿಂದ ಮೇಲಕ್ಕೆ ಏಳು. ॥೨೧॥ ಪರಾಶರ ಮುನಿಯು ಹೇಳುತ್ತಾನೆ :—ಈ ಧ್ರುವನು ಏಷ್ಟೆಯಿನಲ್ಲಿ ತನ್ನ ಮನಸ್ಸನ್ನು ದೃಢವಾಗಿ ನೆಲೆಗೊಳಿಸಿದ್ದ ಕಾರಣ ಇಂತು ಪ್ರಲಾಪ ಮಾಡುತ್ತಿದ್ದ ತನ್ನ ತಾಯಿಯನ್ನು ಕಣ್ಣುಬಿಟ್ಟು ನೋಡಿದರೂ * ಕೂಡ,ಕಂಬನಿಯಿಂದೊಡಗೂಡಿದ ನೇತ್ರಕಮಲವುಳ್ಳ ಆ ಸುನೀ

* ಆತ್ಮಾ ಮನಸಾಸಂಯುಜ್ಯತೇ, ಮನ ಇಂದ್ರಿಯೇಣ,ಇಂದ್ರಿಯ ಸಮರ್ಥನ, ತತಃಪ್ರತ್ಯಕ್ಷಂ, ಎಂಬ ಶಾಸ್ತ್ರ ಪ್ರಮಾಣಾನುಸಾರ ಯಾವುದಾದರೂ ಒಂದು ವಸ್ತುವನ್ನು ಗೋಚರಿಸಿಕೊಳ್ಳಬೇಕಾದರೆ, ಮನಸ್ಸು ನಿಶ್ಚಲವಾಗಿರಬೇಕು. ಇಂತಹ ಮನಸ್ಸಿಗೂ ಜೀವನಿಗೂ ಸಂಬಂಧ ಉಂಟಾದರೆ, ಮನಸ್ಸು ಆ ಆ ಇಂದ್ರಿಯದೊಡನೆ ಸೇರುವುದು ಬಳಿಕ ಇಂದ್ರಿಯವು ಪದಾರ್ಥವನ್ನು ಕುರಿತು ತೆರಳುವುದು. ಬಳಿಕ ಪ್ರತ್ಯಕ್ಷವುಂಟಾಗುವುದು ಅಂದರೆ ನಾವು ಈಗ ಒಂದು ಶಬ್ದವನ್ನು ಕೇಳಬೇಕಾದರೆ, ಮನಸ್ಸು ಯಾವುದೋ ಬೇರೊಂದು ಯೋಚನೆಯಲ್ಲಿದ್ದರೆ ಆ ಶಬ್ದವೇ ಕೇಳಿಸುವುದಿಲ್ಲ, ಆ ಮನಸ್ಸು ನಿರ್ಯೋಚನೆಯಾಗಿದ್ದರೆ ಆಶಬ್ದವು ಕೇಳುವುದು. ಇಂತೆಯೇ ಮಿಕ್ಕ ಸ್ಪರ್ಶ, ರೂಪ, ರಸ, ಗಂಧಗಳನ್ನೂ ತಿಳಿಯಬೇಕು. ಇದರ ಪ್ರಕಾರವೇ ಧ್ರುವನು ತನ್ನ ಮನಸ್ಸನ್ನು ಪರಮಾತ್ಮನಲ್ಲಿ ಲಯಗೊಳಿಸಿದ್ದ ಕಾರಣ ತಾನು ಕಣ್ಣು ಬಿಟ್ಟು ನೋಡುತ್ತಿದ್ದರೂ ಆ ಮಾಯಾ ಸುನೀತಿಯು ಅವನ ಕಂಣಿಗೆ ಕಾಣಲಿಲ್ಲ.

ರಾಕ್ಷಸಃ॥ ತಾಂ ಪ್ರಲಾಪವತೀ ಮೇವಂ ಬಾಷ್ಪಾ ವಿಲ ವಿಲೋಚ
ನಾಂ। ಸಮಾಹಿತಮನಾ ವಿಷ್ಣೂ ಪಶ್ಯನ್ನಪಿ ನದೃಷ್ಟವಾ ॥೨೨॥
ವತ್ಸ ! ವತ್ಸ ! ಸುಘೋರಾಣಿ ರಕ್ಷಾಂಸ್ಯೇತಾನಿ ಭೀಷಣೇ
ವನೇಽಭ್ಯುದ್ಯತಶಸ್ತ್ರಾಣಿ ಸಮಾಯಾಂತ್ಯಪಗವ್ಯತಾಂ ॥ ೨೩ ॥
ಇತ್ಯುಕ್ತ್ವಾ ಪ್ರಯಯೌ ಸಾಽಥ ರಕ್ಷಾಂಸ್ಯಾವಿರ್ಬಭೂ ಸ್ತತಃ।
ಅಭ್ಯುದ್ಯತೋಗ್ರಶಸ್ತ್ರಾಣಿ ಜ್ವಾಲಾ ಮಾಲಾ ಕುಲೈ ರ್ಮುಖೈಃ॥
ತತೋ ನಾದಾನ ತೀವ್ರೋಗರ್ಜಾ ರಾಜಪುತ್ರಸ್ಯತೇಪುರಃ। ಮುಮು
ಚು ರ್ದೀಪ್ತಶಸ್ತ್ರಾಣಿ ಭಾಸ್ವಮಯಂತೋ ನಿಶಾಚರಾಃ ॥ ೨೫ ॥
ಶಿವಾಶ್ಚ ಶತಶೋ ನೇಗು ಸ್ಸಜ್ವಾಲಾ ಕಬಳೈ ರ್ಮುಖೈಃ। ತಾ
ಸಾಯ ತಸ್ಯ ಬಾಲಸ್ಯ ಯೋಗಯುಕ್ತಸ್ಯ ಸರ್ವತಃ ॥೨೬॥ ಹ

ತಿಯು ಈ ಧ್ರುವನ ಕಂಣುಗಳಿಗೆ ಗೋಚರಿಸಲಿಲ್ಲವು ॥೨೨॥ ಅಯ್ಯೋ ನನ್ನ ಮುದ್ದು ಮಗುವೆ, ನನ್ನ ಕಂದನೆ; ಅಲ್ಲಿನೋಡು ನಿನ್ನ ಹಿಂಭಾಗದಲ್ಲಿ ಘೋರ ರೂಪಿಗಳಾದ ರಕ್ಕಸರು, ಅತ್ಯಂತ ಭಯಂಕರಗಳಿನಿಸಿದ ಘೋರಗಳಾಗಿರುವ ಆಯುಧಗಳನ್ನು ಪಿಡಿದು ಕೂಗಿಕೊಂಡು ಓಡಿಬರುತ್ತಿರುವರಲ್ಲಾ. ನಾನೇನು ಮಾಡಲಿ. ಈ ತಪಸ್ಸನ್ನು ಬಿಟ್ಟು ಮೇಲಕ್ಕೆ ಎದ್ದು ಓಡಿಹೋಗು. ಇಲ್ಲಿ ಇನ್ನು ಬಂದು ಅರಗಳಿಗೆಯೂಕೂಡ ನಿಲ್ಲುವುದು ಸಮನಲ್ಲ. ಎಂಬುದಾಗಿ ಕೂಗಿಕೊಳ್ಳುತ್ತಾ ಆ ಮಾಯಾ ಸುನೀತಿಯು ಓಡಿಹೋದಳು. ಆ ಬಳಿಕ ಉರಿಯುವ ಬೆಂಕಿಯಂತೆ ಉಗ್ರಗಳಾದ ಮುಖಗಳಂ ಧರಿಸಿ, ಮಸೆದಿರುವಿಕೆಯಿಂದ ಥಳಥಳಿಸುವ ಆಯುಧಗಳಂ ಪಿಡಿದು, ಭಯಂಕರವಾದ ಗರ್ಜನೆಯಿಂದೊಡಗೂಡಿದ ರಾಕ್ಷಸರು ಆ ಧ್ರುವನ ಮುಂದೆ ಬಂದು ನಿಂತು, ರಾಜಪುತ್ರನಾದ ಆ ಧ್ರುವನ ಮುಂಗಡೆಯಲ್ಲಿ ಥಳಥಳಿಸುವ ತಮ್ಮ ಆಯುಧಗಳಂ ತಿರುಗಿಸುತ್ತಾ ಘೋರವಾಗಿ ಗರ್ಜಿಸಲಾರಂಭಿಸಿದರು ॥೨೩॥ ॥೨೪॥ ॥೨೫॥ ಆ ಬಳಿಕ ಯೋಗದಲ್ಲಿ ಅತ್ಯಂತ ಆಸಕ್ತನೆನಿಸಿ, ಪರಬ್ರಹ್ಮನನ್ನು ಮನಸ್ಸಿನಲ್ಲಿ ಅನುಸಂಧಾನ ಮಾಡುತ್ತಿರುವ ಆ ಬಾಲನಾದ ಧ್ರುವನನ್ನು ಹೆದರಿಸುವುದಕ್ಕಾಗಿ ನರಿಗಳು ಆತನ ಮುಂಗಡೆ ಬಂದುನಿಂತುಕರಾಳಗಳೆನಿಸಿದ ತಮ್ಮ ಬಾಯಿಗಳಿಂದ ಬೆಂಕಿಯ ಕೆಂಡಗಳನ್ನುಗುಳುತ್ತಾ ನಾನಾ ಬಗೆಯಿಂದ

ನ್ಯತಾಂ ಹನ್ಯತಾಮೇಷಭಿದ್ಯತಾಂ ಭಿದ್ಯತಾಮುಯಂ।ಭಕ್ಷ್ಯತಾಂ ಭಕ್ಷ್ಯತಾಮೇಷ ಇತ್ಯೂಚು ಸ್ತೇ ನಿಶಾಚರಾಃ॥೨೭॥ ತತೋನಾ ನಾವಿಧಾ ನಾದಾ ಸಿಂಹೋಷ್ಟ್ರಮಕರಾನನಾಃ।ತಾ ಸಾಯು ರಾ ಜಪುತ್ರಸ್ಯ ನೇದು ಸ್ತೇ ರಜನೀಚರಾಃ ॥೨೮॥ ರಕ್ಷಾಂಸಿ ತಾನಿ ತೇನಾದಾ ಶಿವಾಸ್ತಾನ್ಯಾಯುಧಾನಿಚ । ಗೋವಿಂದಾ ಸಕ್ತ ಚಿ ತ್ತಸ್ಯ ಯಯು ರ್ನೇಂದ್ರಿಯಗೋಚರಂ ॥೨೯॥ ನಿಕಾಗ್ರಚೇತಾ ಸ್ಯತತಂ ವಿಷ್ಣು ವೇವಾತ್ಮಸಂಶ್ರಯಂ ! ದೃಷ್ಟ್ವಾ ಪೃಥಿ

ಭಯಂಕರವಾಗಿ ಶಬ್ದಮಾಡತೊಡಗಿದುವು. ॥೨೬॥ ಅನಂತರದಲ್ಲಿ ಆ ರಾಕ್ಷಸರೆಲ್ಲರೂ ಬಬ್ಬರಿಗೊಬ್ಬರು, ಕೊಲ್ಲಿರಿ. ಈ ಹುಡುಗನನ್ನು ಕೊಂದು ಹಾಕಿರಿ ಹೊಡೆಯಿರಿ ಬಡಿಯಿರಿ, ತೀಳಿರಿ. ತಿನ್ನಿರಿ ಇವನನ್ನು ನುಂಗಿರಿ. ಎಂಬದಾಗಿ ಆತನಿಗೆ ಕೇಳುವಂತೆ ಭಯಂಕರಗಳಾದ ಕೋರೆಗಳುಳ್ಳ ತಮ್ಮ ಬಾಯಿಗಳನ್ನು ತೆರೆದುಕೊಂಡು ವಿಶೇಷವಾಗಿ ಶಬ್ದಮಾಡಲುಪಕ್ರಮಿಸಿದರು ॥೨೭॥ ಇಂತು ಅನನ್ಯ ಭಾವನೆಯಿಂದ ಆ ಪರಮಾತ್ಮನನ್ನು ಧ್ಯಾನಮಾಡುತ್ತಿರುವ ಧ್ರುವನನ್ನು ಭಯಪಡಿಸಲೋಸುಗ, ಸಿಂಹಮುಖದಂತೆಯೂ, ಒಂಟೆಯ ಮೋರೆಯಂತೆಯೂ, ಮೊಸಳೆಯ ಮುಸುಡಿಯಂತೆಯೂತಮ್ಮ ಮೋರೆಗಳಂ ಮಾಡಿಕೊಂಡು, ರಾಕ್ಷಸರೆಲ್ಲರೂ ಒಂದೇಸಾರಿಕೂಡಿಕೊಂಡು ನಾನಾ ಬಗೆಯಿಂದ ಶಬ್ದಮಾಡಿದರು. ॥೨೮॥ ಪಶುಪಾಲಕನೂ, ಯಜ್ಞಸಂರಕ್ಷಕನೂ, ಇಂದ್ರಿಯ ಶಕ್ತಿವರ್ಧಕನೂ ಆದುದರಿಂದ ಗೋವಿಂದನೆಂದು ಕರೆಯಿಸಿಕೊಳ್ಳುವ ಪರಮಾತ್ಮನಲ್ಲಿ ದೃಢವಾದ ಭಕ್ತಿಯನ್ನಿರಿಸಿ, ಆತನನ್ನೇ ಅನವರತವೂ ಧ್ಯಾನಮಾಡುತಲಿರುವ ಆ ಧ್ರುವನಿಗೆ, ಆ ಭಯಂಕರ ಮುಖಗಳುಳ್ಳ ರಾಕ್ಷಸರಾಗಲಿ, ಅವರ ಕೂಗಾಗಲಿ, ಆ ನರಿಗಳಾಗಲಿ, ಅಥವಾ ಆ ರಾಕ್ಷಸರ ಕೈಯಲ್ಲಿ ಹಿಡಿದಿದ್ದ ಆಯುಧಗಳಾಗಲಿ, ಯಾವುದೊಂದೂ ಕಣ್ಣಿಗೆ ಕಾಣಿಸಲಿಲ್ಲವಾದುದರಿಂದ ಆತನುಭಯವಿಲ್ಲದೆಯೇ ತನ್ನ ಕೆಲಸವನ್ನು ಮಾಡುತ್ತಿದ್ದನು ॥೨೯॥ ಇಂತು ರಾಜಪುತ್ರನೆನಿಸಿದ ಆ ಧ್ರುವನು ತನ್ನ ಹೃದಯಾಂಬುಜದಲ್ಲಿ ನೆಲೆಸಿರುವ ಆ ಮಹಾವಿಷ್ಣುವನ್ನು ಮಾತ್ರ ಏಕಚಿತ್ತತೆಯಂ ಪಡೆದು ಧ್ಯಾನಮಾಡುತ್ತಿದ್ದನಾದುದರಿಂದ ಆ ಧ್ರುವನಿಗೆ ಸರ್ವವೂ ವಿಷ್ಣುಮಯವಾಗಿಆ ಪರ

ವೀನಾಥ ಪುತ್ರೋನಾನ್ಯಂ ಕಥಂಚನ ॥೬೦॥ ತತ ಸ್ಸರ್ವಾಸು ಮಾ
ಯಾಸುವಿನಷ್ಟಾಸು ಪುನಸ್ಸುರಾಃ । ಸಂಕ್ಷೋಭಂ ಪರಮಂ ಜ
ಗ್ಮು ಸ್ತತ್ಪರಾಭವ ಶಂಕಿತಾಃ ॥೬೧॥ ತೇ ಸನೋತ್ಯ ಜಗದ್ಯೋನಿ
ಮನಾದಿನಿಧನಂ ಹರಿಂ। ಶರಣ್ಯಂ ಶರಣಂ ಯಾತಾ ಸ್ತಪಸಾ ತಸ್ಯ
ತಾಪಿತಾಃ ॥೬೨॥ ದೇವಾಊಚುಃ ॥ ದೇವದೇವ ! ಜಗನ್ನಾಥ !
ಪರೇಶ ! ಪುರುಷೋತ್ತಮ । ಧ್ರುವಸ್ಯ ತಪಸಾ ತಪ್ತಾ ಸ್ಮಾಂ
ವಯಂ ಶರಣಂ ಗತಾಃ ॥೬೩॥ ದಿನೇದಿನೇ ಕಳಾಲೇಶೈಃ ಶಶಾಂಕಃ
ಪೂರ್ಯತೇ ಯಥಾ ।ತಥಾಽಯಂತಪಸಾ ದೇವ ಪ್ರಯಾತ್ಯೃದ್ಧಿ ಮು

ಮಾತ್ಮನ ದಿವ್ಯರೂಪವುಮಾತ್ರ ಗೋಚರವಾಗುತಿದ್ದಿತೇ ಹೊರತು ಮು
ತ್ತೆಯಾವುದೂ ಆತನಕಂಣುಗಳಿಗೆ ಕಾಣಿಸುತಲೂ ಇರಲಿಲ್ಲಮಾತಶಬ್ದ
ವೂ ಕೇಳಿಸುತಲಿರಲಿಲ್ಲ, ॥೬೦॥ ಇಂತು ಆ ದೇವತೆಗಳೆಲ್ಲರೂ ಧ್ರುವನ
ತಪೋಭಂಗಕ್ಕಾಗಿ ತಾವು ಕಲಿತಿದ್ದ ಮಾಯೆಗಳೆಲ್ಲವಂ ಪ್ರಯೋಗಿಸಿದ
ರೂ ಬಂದೂ ಸಫಲವಾಗದೆ, ಆತನು ಮಾತ್ರ ಧೀರನಾಗಿಯೇ ನಿಂತು ತಪ
ಸ್ಸು ಮಾಡುತ್ತಿರುವುದಂ ಕಂಡು ಆ ದೇವತೆಗಳೆಲ್ಲರೂ ಭಯಪಟ್ಟು, ಅವ
ನಿಂದ ತನುಗೆ ಉಂಟಾದ ಅಪಮಾನಕ್ಕಾಗಿ ಹೆದರಿ(ಆತನಿಂದ ತಮಗೆ ಮು
ತ್ತೇನು ಅಪಮಾನವು ದೊರೆಯುವುದೋ ಎಂಬುದಾಗಿ ಭೀತಿಗೊಂಡು)
॥೬೧॥ ಆ ಧ್ರುವನ ತಪಸ್ಸಿನ ಜ್ವಾಲೆಯಿಂದ ಪೀಡಿತರಾಗಿ ಕಂಗೆಟ್ಟು ಮು
ರುಗುತಿರುವ ಆ ದೇವತೆಗಳೆಲ್ಲರೂ, ಜಗತ್ತುಗಳ ಸೃಷ್ಟ್ಯಾದಿಗಳಿಗೆ ಕಾರ
ಣಭೂತನೆನಿಸಿ, ತಾನು ಮಾತ್ರ ಅವುಗಳಿಗೆ ಒಳಪಡದವನಾದುದರಿಂದ
ಆದ್ಯಂತರಹಿತನೆನಿಸಿ, ಭಕ್ತರಕ್ಷಣ ಧುರೀಣನೆನಿಸಿದ ಶ್ರೀ ಮಹಾವಿಷ್ಣು
ವಿನ ಸನ್ನಿಧಾನವಂ ಹೊಂದಿ, ಆತನನ್ನು ಸರ್ವ ಪ್ರಕಾರದಿಂದಲೂ ಮೊರೆ
ಹೊಕ್ಕರು ॥೬೨॥ ದೇವತೆಗಳು ವಿಷ್ಣುವನ್ನು ಪ್ರಾರ್ಥಿಸುತ್ತಾರೆ:—
ಎಲೈ ಸಕಲನಿಯಾಮಕನೆನಿಸಿದ ದೇವದೇವನೆ, ಸಕಲ ಜಗದಾಧಾರ
ನೆ ; ಸರ್ವಶ್ರೇಷ್ಠನೆನಿಸಿದ ಸ್ವಾಮಿಯೆ, ಪುರುಷೋತ್ತಮನೆ ; ಧ್ರುವ
ನ ತಪಸ್ಸಿನಿಂದ ಸಂತಾಪಗೊಂಡ ನಾವುಗಳು ಬೇರೊಬ್ಬ ರಕ್ಷಕನಿಲ್ಲದಿರು
ವುದರಿಂದ ನಿನ್ನನ್ನೇ ಮೊರೆಹೊಗುವೆವು ॥೬೩॥ ಶುಕ್ಲಪಕ್ಷದಲ್ಲಿ ಚಂದ್ರ
ನು ದಿನದಿನವೂ ಬಂದೊಂದು ಕಲೆಯನ್ನುಹೊಂದಿ ದಿನದಿನಕ್ಕೂ ಹೆಚ್ಚಾ

ಹರ್ಷಿಕಂ ॥೩೪॥ ಔತ್ತಾನಪಾದಿ ತಪಸಾ ವಯಂ ಮಿತ್ಥಂ ಜನಾರ್ದ
ನ!। ಭೀತಾ ಸ್ತ್ವಾಂಶರಣಂ ಯಾತಾ ಸ್ತಪಸ ಸ್ತಂ ನಿವರ್ತಯ॥
ನವಿದ್ಮಃ ಕಿಂ ಸ ಶಕ್ರತ್ವಂ ಕಿಂಸೂರ್ಯತ್ವ ಮಭೀಪ್ಸತಿ। ವಿತ್ತಪಾಂ
ಬುಪ ಸೋ ವಮಾನಾಂ ಸಾಖಿಲಾಪಃಪದೇಷು ಕಿಂ ॥೩೫॥ ತದ
ಸ್ಮಾಕಂ ಪ್ರಸೀದೇಶ! ಹೃದಯಾ ಚ್ಛಲ್ಯ ಮುದ್ಧರ । ಉತ್ತಾನ
ಪಾದತನಯಂ ತಪಸ ಸ್ತನ್ನಿವರ್ತಯ ॥೩೬॥ ಶ್ರೀ ಭಗವಾನುವಾ

ದ ಕಾಂತಿಯನ್ನು ಪಡೆಯುವಂತೆಯೇ ಈ ಧ್ರುವನೂ ಕೂಡ ಅನುದಿನವೂ ತಪವನ್ನು ವೃದ್ಧಿಗೊಳಿಸುತ್ತಲೇ ಇರುವನು. ॥೪॥ ಉತ್ತಾನಪಾದರಾಯನ ಕುವರನಾದ ಆ ಧ್ರುವನ ತಪಸ್ಸಿನಿಂದ ನಾವೀಪರಿ ಭಯಗೊಂಡು ನಿನ್ನನ್ನು ಶರಣು ಹೊಗಿರುವೆವು. ಆದುದರಿಂದ ಶೀಘ್ರವಾಗಿ ಆತನ ಬಳಿ ಸಾರ್ದು, ಆತನ ಕೋರಿಕೆಯುಂ ವಿಚಾರಿಸಿ ಆತನು ತನ್ನತಪಸ್ಸನ್ನು ಇಲ್ಲಿಗೆ ನಿಲ್ಲಿಸುವಂತೆ ಮಾಡು ॥೩೫॥ ಆತನನ್ನೂ, ಆತನ ಏಕಚಿತ್ತತೆಯನ್ನೂ, ಆತನ ಅತ್ಯುಗ್ರವಾದ ತಪಃ ಪ್ರಭಾವವನ್ನೂ ನೋಡಿದರೆ ಆತನು ಸಾಮಾನ್ಯವಾದ ವರವಂ ಬೇಡುವಂತೆ ಕಾಣುವುದಿಲ್ಲ. ಆತನು ಸುರಲೋಕಾಧಿಪತಿಯೆನಿಸಿದ ಇಂದ್ರನ ಪದವಿಯನ್ನೇ ಕೋರುವನೋ, ಅಥವಾ ಆಕಾಶವೆಂಬ ಸರೋವರಕ್ಕೆ ಕಮಲಪ್ರಾಯನಾದ ಸೂರ್ಯನ ಆಧಿಪತ್ಯವನ್ನೇ ಕೋರುವನೋ, ಇಲ್ಲವೇ ಕುಬೇರನ ಪದವಿಯನ್ನಭಿಲಷಿಸುವನೋ, ವರುಣನ ಪದವಿ ಎನಿಸಿದ ಜಲಾಧಿಪತ್ಯವನ್ನೇ ಅಪೇಕ್ಷಿಸುವನೋ, ಹಾಗಿಲ್ಲದೊಡೆ ಓಷಧೀಶನೆನಿಸಿದ ಚಂದ್ರನ ಆಧಿಪತ್ಯವಂ ಬಯಸಿ ಅದಕ್ಕಾಗಿ ಕೈ ಮಾಡಿರುವನೋ ಯಾವುದೊಂದೂ ನಮಗೆ ತಿಳಿಯದು ॥೩೬॥ ಎಲೈ ಒಡೆಯನೆ, ನಮ್ಮ ವಿಷಯದಲ್ಲಿ ಪ್ರಸನ್ನನಾಗು. ನಮ್ಮ ಮನಸ್ಸಿನಲ್ಲಿರುವ ಬಾಣವನ್ನು ತೆಗೆದುಹಾಕು. (ನಮ್ಮ ಸಂಶಯವನ್ನು ನಿವೃತ್ತಿಮಾಡು) ಉತ್ತಾನಪಾದರಾಜನ ಕುಮಾರನಾದ ಧ್ರುವನನ್ನು ತಪಸ್ಸಿನಿಂದ ನಿಲ್ಲಿಸು. (ಆತನು ತಪಸ್ಸು ಮಾಡುವುದಂ ನಿಲ್ಲಿಸು) ॥೩೭॥ ಇಂತು ಆ ದೇವತೆಗಳ ವಿನ್ನಹವಂ ಆಲಿಸಿ, ಬಳಿಕ ಭಕ್ತಾನುಕಂಪಿ ಎನಿಸಿದ ಷಡ್ಗುಣೈಶ್ವರ್ಯ ಸಂಪನ್ನನಾದ ವಿಷ್ಣುವು ಹೇಳಲುಪಕ್ರಮಿಸುತ್ತಾನೆ :—ಎಲೈ ದೇವತೆಗಳಿರಾ, ಈಗ ತಪಸ್ಸು ಮಾಡುತ್ತಿರುವ ಉ

ಚ॥ ನೇಂದ್ರತ್ವಂ ನಚಸೂರ್ಯತ್ವಂ ನೈವಾಂಬುಪಧನೇಶತಾಂ ।
ಪ್ರಾರ್ಥಯತ್ಯೇಷ ಯಂ ಕಾಮಂ ತಂಕರೋತ್ಯಖಿಲಂ ಸುರಾಃ॥
ಯಾತ ದೇವಾ! ಯಥಾಕಾಮಂ ಸ್ವಸ್ಥಾನಂ ವಿಗತಜ್ವರಾಃ। ನಿವ
ರ್ತ್ಯಾ ವ್ಯೂಹಂ ಬಾಲಂ ತಪಸ್ಯಾಸಕ್ತಮಾನಸಂ ॥೪೯॥ ಶ್ರೀಪ
ರಾಶರಃ ॥ ಇತ್ಯುಕ್ತಾ ಸ್ತೇನ ದೇವೇನ ಪ್ರಣಮ್ಯ ತ್ರಿದಶಾ ಸ್ತ
ತಃ । ಪ್ರಯಯುಃ ಸ್ವಾನಿ ಧಿಷ್ಣ್ಯಾನಿ ಶತಕ್ರತು ಪುರೋಗ
ಮಾಃ ॥೪೦॥ ಭಗವಾನಪಿ ಸರ್ವಾತ್ಮಾ ತನ್ಮಯತ್ವೇನ ತೋಷಿತಃ।

ತ್ತಾನಪಾದರಾಜನ ಮಗನಾದ ಈ ಧ್ರುವನು ನಿಮ್ಮ ಇಂದ್ರಪದವಿಯ
ನ್ನೂ ಬಯಸುವುದಿಲ್ಲ. ಸೂರ್ಯನ ಆಧಿಪತ್ಯವಂ ಕಟ್ಟಿಕೊಂಡು ಅವನೇ
ನು ಮಾಡಿಯಾನು ? ಜಲಾಧಿಪತಿಯಾದ ವರುಣನ ಆಧಿಪತ್ಯಕ್ಕೆಂತೂ ಸು
ತರಾಂ ಅವನು ಆಶೆಪಡಲಿಲ್ಲಾ. ಪ್ರಪಂಚದಲ್ಲಿರುವ ಸಕಲ ದ್ರವ್ಯ (ಧನ)
ಕ್ಕೂ ಅಧಿಪತಿಯಾದ ಕುಬೇರನ ಪದವಿಯಂ ಅವನು ಕೋರುವವನಲ್ಲಾ.
ಚಂದ್ರನ ಅಧಿಕಾರವೂ ಅವನಿಗೆ ಬೇಡ. ಅವನು ಏನೇನನ್ನು ಕೋರು
ವನೋ ಅವೆಲ್ಲವನ್ನೂ ನಾನು ಅವನಿಗೆ ಕೈಗೂಡಿಸುವೆನು. ॥೪೮॥

ಎಲೈ ದೇವತೆಗಳಿರಾ! ಹೊರಡಿರಿ, ಭಯವಿಲ್ಲದೆ ನಿಮ್ಮ ನಿಮ್ಮ
ಸ್ಥಾನಗಳಂ ಕುರಿತು ತೆರಳಿರಿ. ನಿಮಗೆ ಧ್ರುವನಿಂದ ಯಾವದೊಂದು
ಭಯವೂ ಬೇಡ ತಪಸ್ಸುಮಾಡುವಿಕೆಯಲ್ಲಿಯೇ ಬಹಳವಾಗಿ ಆಸಕ್ತಿ
ಯುಕ್ತವಾದ ಮನಸ್ಸುಳ್ಳ ಆ ತರಳನನ್ನು ನಾನು ಹಿಂದಿರುಗಿಸಿ ಅವನ ತಪ
ಸ್ಸನ್ನು ಸಾಕುಮಾಡಿಸುವೆನು ॥೪೯॥ ಪರಾಶರಮುನಿಯು ಹೇಳುತ್ತಾನೆ-
ಇಂತು ದೇವದೇವನೆನಿಸಿದ ಆ ಮಹಾವಿಷ್ಣುವು ಆಡಿದ ಮಾತುಗಳಂ
ಕೇಳಿ ಇಂದ್ರನೇ ಮೊದಲಾದ ಸುರವರರೆಲ್ಲರೂ ಆ ನಾರಾಯಣನ ಅಡಿ
ದಾವರೆಗಳಿಗೆ ಸಾಷ್ಟಾಂಗನೆರಗಿ ಆತನನ್ನು ಬೀಳ್ಕೊಂಡು ತಮ್ಮ ತಮ್ಮ
ಸ್ಥಾನಮಂ ಕುರಿತು ತೆರಳಿದರು ॥೪೦॥ ಆ ಬಳಿಕ ಭಗವಂತನೆನಿ
ಸಿದ ಆ ಪರಮಾತ್ಮನೂ ಕೊಡಲಿ, ಶಂಖ, ಚಕ್ರ, ಗದಾ, ಖಡ್ಗಗಳೆಂಬ
ನಾಲ್ಕು ಆಯುಧಗಳನ್ನು ತನ್ನ ನಾಲ್ಕು ಕೈಗಳಲ್ಲಿ ಧರಿಸಿ, ದಿವ್ಯವಾದ
ಮಳೆಗಾಲದ ಮೋಡದಂತೆ ನೀಲವಾದ ದೇಹದಿಂದೊಡಗೂಡಿ, ಪರಮ
ಭಕ್ತಾಗ್ರೇಸರನಾದ ಆ ಧ್ರುವನು ನಿಯಮದಿಂದಿದ್ದ ಸ್ಥಳಕ್ಕೆ ಬಂದು ಆ

ಗತ್ವಾ ಧ್ರುವ ಮುವಾ ಚೇದಂ ಚತುರ್ಭುಜವಪು ರ್ಹರಿಃ ॥ ೪೧ ॥
ಶ್ರೀ ಭಗವಾನುವಾಚ ॥ ಔತ್ತಾನಪಾದೇ ಭದ್ರಂ ತೇ ತಪಸಾ
ತೋಷಿತೋ ಭೃಶಂ। ವರದೋಽಹ ಮನುಪ್ರಾಪ್ತೋ ವರಂವರ
ಯ ಸುವ್ರತ ॥೪೨॥ ಬಾಹ್ಯಾರ್ಥನಿರಪೇಕ್ಷಂತೇ ಮಯಿಚಿತ್ತಂ
ಯದಾಹಿಶಂ। ಸಪ್ತರ್ಷ್ಯಾ ಽಹಂ ಭವತ ಸ್ತೇನ ತದ್ವೃ ಣೀಷ್ವ ವ
ರಂ ಪರಂ ॥೪೪॥ ಶ್ರೀ ಪರಾಶರಃ ॥ ಶ್ರುತ್ವೇತ್ಥಂ ಗದಿತಂತಸ್ಯ
ದೇವದೇವಸ್ಯ ಬಾಲಕಃ । ಉನ್ಮೀಲಿತಾಕ್ಷೋ ದದೃಶೇ ಧ್ಯಾನದೃ
ಷ್ಟಿರ್ಹರಿಂ ಪುರಃ ॥೪೪॥ ಶಂಖಚಕ್ರ ಗದಾಶಾರ್ಙ್ಗ ವರಾಸಿಧರ

ಧ್ರುವನು ಏಕಚಿತ್ತನಾಗಿ ತನ್ನನ್ನೇ (ಪರಮಾತ್ಮನನ್ನೇ)ಧ್ಯಾನಮಾಡುತ್ತಿರುವುದಂಕಂಡು, ಸಂತೋಷಪಟ್ಟು ಆ ಧ್ರುವನನ್ನು ಕುರಿತು ಈರೀತಿ ಹೇಳತೊಡಗಿದನು ॥೪೧॥ ಪಡ್ಗುಣ್ಯೈಶ್ವರ್ಯಸಂಪನ್ನನೆನಿಸಿದ ಶ್ರೀಮನ್ನಾರಾಯಣನು ಹೇಳುತ್ತಾನೆ—ಎಲೈ ಉತ್ತಾನಪಾದನಂದನನೆ; ನಿನಗೆ ಸಮಸ್ತ ಕಲ್ಯಾಣಗುಣಗಳೂ ಉಂಟಾಗಲಿ. ನಿನ್ನ ತಪಸ್ಸಿನಿಂದ ನಾನು ಬಹಳವಾಗಿ ಸಂತೋಷಪಟ್ಟಿರುವೆನು. ಅಯ್ಯಾ ಮಹಾವ್ರತಶೀಲನೆನಿಸಿದ ಧ್ರುವನೆ; ನಾನು ನಿನಗೆ ವರವಂ ಕೊಡಲು ನಿನ್ನಲ್ಲಿಗೆ ಬಂದಿರುವೆನು. ಬೇಕಾದ ವರವಂ ಬೇಡು ॥೪೨॥ ನೀನು ಬಹ್ದಿ ಬಾಹ್ಯವಿಷಯಗಳಲ್ಲಿ ಮನಸ್ಸನ್ನಿಡದೆ ಕೇವಲ ಶುದ್ಧ ಭಕ್ತಿಯಿಂದೊಡಗೂಡಿ ಸ್ಥಿರವಾದ ಧ್ಯಾನದಿಂದ ನಿನ್ನ ಮನಸ್ಸನ್ನು ನನ್ನಲ್ಲಿಯೇ ಲಯಗೊಳಿಸಿರುವೆ. ಇಂತಹ ನಿನ್ನ ದೃಢವಾದ ಭಕ್ತಿಯಿಂದಲೂ, ಮನಸ್ಸೈರ್ಯದಿಂದಲೂ ನಿನ್ನಲ್ಲಿ ಬಹಳವಾಗಿ ಪ್ರಸನ್ನನಾಗಿರುವೆನು. ಆದುದರಿಂದ ನಿನಿಗೆ ಬೇಕಾದ ಬಂದು ಉತ್ತಮವರವಂ ಬೇಡು ॥೪೩॥ ಪರಾಶರನು ಹೇಳುತ್ತಾನೆ—ದೇವದೇವನೆನಿಸಿದ ಆ ಮಹಾವಿಷ್ಣುವು ಇಂತು ಹೇಳಿದ ಮಾತನ್ನು ಕೇಳಿ ಆ ಬಾಲಕನು ಧ್ಯಾನದೃಷ್ಟಿಯಿಂದ ನೋಡಲಾಗಿ ಭಕ್ತದುರಿತಾಪಹಾರಕನಾದ ನಾರಾಯಣನು ತನ್ನ ಮುಂಭಾಗದಲ್ಲಿ ನಿಂತುಕೊಂಡಿರುವುದಂ ಕಂಡನು ॥೪೪॥ ಆ ನಾರಾಯಣನು ತನ್ನ ನಾಲ್ಕುತೋಳುಗಳಿಂದಲೂ ಶಂಖ, ಚಕ್ರ, ಗದೆ ಶಾರ್ಙ್ಗವೆಂಬ ಧನುಸ್ಸು ಇವುಗಳಂ ಪಿಡಿದು ಸೊಂಟದಲ್ಲಿ ದಿವ್ಯವಾದ ಖಡ್ಗವುಂಧರಿಸಿ ಏಕಕಾಲದಲ್ಲಿ ಉದಯಿಸಿದ ದ್ವಾದಶಾದಿತ್ಯರಂತೆ ಕಂಗೊ

ಮಚ್ಯುತಂ। ಕಿರೀಟಿನಂ ಸಮಾಲೋಕ್ಯ ಜಗಾಮಶಿರಸಾಮಹೀಂ॥
ರೋಮಾಂಚಿತಾಂಗಸ್ಸಹಸಾ ಸಾಧ್ವಸಂ ಪರಮಂ ಗತಃ । ಸ್ತವಾ
ಯ ದೇವದೇವಸ್ಯ ಸಚಕ್ರೇ ಮಾನಸಂಧ್ರುವಃ॥೬॥ಕಿಂನದಾವಿ
ಸ್ತುತಾವಸ್ಯ ಕೇನೋಕ್ತೇ ನಾಸ್ಯ ಸಂಸ್ತುತಿಃ । ಇತ್ಯಾ ಕುಲ
ಮತಿರ್ದೀನಂ ತಮೇವಶರಣಂ ಯಯೌ ॥೪೭॥ ಧ್ರುವಉವಾಚ॥
ಭಗವನ್! ಯದಿಮೇ ತೋಷಂ ತಪಸಾ ಪರಮಂಗತಃ । ಸ್ತೋ
ತುಂ ತ್ವಾ ಮಹಮಿಚ್ಛಾ ಮಿ ತತ್ರ ಪ್ರಜ್ಞಾಂ ಪ್ರಯಚ್ಛ ಮೇ ॥೪೮॥

ಳಿಸುವ ನವರತ್ನಮಯವಾದ ಕಿರೀಟವಂ ಧರಿಸಿ ತನ್ನ ಮುಂಗಡೆಯಲ್ಲಿ ನಿಂತಿರುವುದಂ ಕಂಡು ಒಡನೆಯೇ ತಲೆಬಾಗಿ ಸಾಷ್ಟಾಂಗಪ್ರಣಾಮವಂ ಗೈದನು ॥೪೫॥ ಆ ಬಳಿಕ ಧ್ರುವನು ತನಗೆ ಪ್ರಸನ್ನನಾಗಿ ವರವಂ ದಯಪಾಲಿಸಲು ತನ್ನಲ್ಲಿಗೆ ಬಂದಿರುವ ಆ ನಾರಾಯಣನಂ ನೋಡಿದೊಡನೆಯೇ ಬಹಳ ಸಂಭ್ರಮದಿಂದಲೂ ಮತ್ತು ಭೀತಿಯಿಂದಲೂ ಕೂಡಿ, ಪುಳಕಾಲಂಕೃತ ಗಾತ್ರನಾಗಿ, ಆ ಪರಮಾತ್ಮನ ಗುಣಾತಿಶಯಗಳಂ ವಿಶೇಷವಾಗಿ ಕೊಂಡಾಡಲು ತನ್ನ ಮನದೊಳ್ ಯೋಚಿಸಿದನು ॥೪೬॥ ತರುವಾಯ ಎನಾನು ಈತನನ್ನು ಯಾವ ಬಗೆಯಿಂದ ಹೊಗಳಲಿ! ಈ ನಾರಾಯಣನು ಸರ್ವಾತ್ಮಕನಾದುದರಿಂದ ಎಲ್ಲವೂ ಈತನಿಗೆ ತಿಳಿದೇ ಇರುವುದು. ಚತುರ್ಮುಖಾದಿಗಳಿಗೂ ಕೂಡ ಈತನು ಅಗೋಚರನೆನಿಸಿರುವನು. ಇಂತಹ ಅಚಿಂತ್ಯನೈಭವಶಾಲಿಯಾದ ಈತನನ್ನು ಅಲ್ಪಜ್ಞನೂ, ಬಾಲನೂಆದ ನಾನು ಹೊಗಳುವುದೆಂತು ! ಇದುವರೆಗೂ ಯಾರೂ ಸ್ತೋತ್ರಮಾಡದಿರುವ ರೀತಿಯಿಂದಲ್ಲವೇ ನಾನು ಸ್ತೋತ್ರಮಾಡಬೇಕು ಎಂಬ ಇದೇ ಮೊದಲಾಗಿ ಯೋಚಿಸಿ ಬಳಿಕ ಆ ಪರಮಾತ್ಮನನ್ನೇ ವೊರೆಹೊಗುವುದು ಲೇಸೆಂದು ಭಾವಿಸಿ ಆತನನ್ನೇ ಶರಣಹೊಂದಿದನು ॥೪೭॥ ಎಲೈ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಪರಮಾತ್ಮನ;ನೀನು ದಿಟವಾಗಿಯೂ ನನ್ನ ತಪಸ್ಸಿಗೂ ಭಕ್ತಿಗೂ ಸ್ಥಿರಚಿತ್ತತೆಗೂ ಮೆಚ್ಚಿ ನನಗೆ ವರವಂದಯಪಾಲಿಸಬೇಕೆಂದು ಇಲ್ಲಿಗೆ ಬಿಜಮಾಡಿದ್ದ ಪಕ್ಷದಲ್ಲಿ ನಿನ್ನನ್ನು ಹೊಗಳಬೇಕೆಂಬುದಾಗಿ ನನಗೆ ಬಹಳ ಕುತೂಹಲವಿರುವುದು.ಆದಕಾರಣ ನಿನ್ನನ್ನು ಹೊಗಳುವುದರಲ್ಲಿ ನನ್ನಬುದ್ಧಿಯು ಪ್ರಸರಿಸುವಂತೆ ಅನುಗ್ರಹಿಸೆಂಬುದಾಗಿ ಧ್ರುವನು ೪

ಅಧಿಕಪಾಠಶ್ಲೋಕಾದ್ವಾ ॥ (ಬ್ರಹ್ಮಾದ್ಯೈ ರ್ವೇದತತ್ವಜ್ಞೈ ರ್ವಿದ್ಯತೇ ಯಸ್ಯನೋಗತಿಃ। ತಂ ತ್ವಾ ಕಥಮಹಂ ದೇವ! ಸ್ತೋತುಂ ಶಕ್ಷ್ಯಾಮಿ ಬಾಲಕಃ ॥ ತ್ವದ್ಭಕ್ತಿ ಪ್ರವಣಂ ಹ್ಯೇತತ್ಪರಮೇಶ್ವರ! ಮೇ ಮನಃ। ಸ್ತೋತುಂ ಕಾಮಯತೇ ವಿಷ್ಣೋ! ತತ್ಪ್ರಜ್ಞಾಂ ಪ್ರಯಚ್ಛ ಮೇ ॥) ಶ್ರೀ ಪರಾಶರಃ ॥ ಶಂಖಪ್ರಾಂ

ಪರಮಾತ್ಮನನ್ನೇ ವೊರೆಹೊಕ್ಕು ಬೇಡಿಕೊಂಡನು॥೪೮॥ (ಇನ್ನುಮುಂದೆ ಎರಡುಶ್ಲೋಕಗಳು ಅಧಿಕಪಾಠಕ್ಕೆ ಸೇರಿದುವು. ಎಲೈ ಸರ್ವವ್ಯಾಪಕನೆನಿಸಿ ಸಕಲ ಸ್ವರೂಪಿಯಾದವನೆ, ವೇದತತ್ವವನ್ನು ಚೆನ್ನಾಗಿ ಬಲ್ಲ ಬ್ರಹ್ಮಾದಿಗಳೂ ಕೂಡ ನೀನು ಇಂತಹವನು. ನಿನ್ನ ಮಹಿಮೆಯು ಇಷ್ಟ ರದು " ಎಂಬುದಾಗಿ ನಿನ್ನ ಮಹಿಮೆಯಂ ಬಲ್ಲವರಲ್ಲ. ಇಂತಹ ನಿನ್ನನ್ನು ಬಾಲನಾದ ನಾನು ಸ್ತೋತ್ರಮಾಡುವುದೆಂತು? ಎಲೈ ಪರಮೈಶ್ವರ್ಯಶಾಲಿಯೆ, ನನ್ನ ಮನಸ್ಸು ನಿನ್ನ ಪಾದಾರವಿಂದಗಳಲ್ಲಿನ ಭಕ್ತಿಗೆ ಸಿಕ್ಕಿಬಿದ್ದು ನನ್ನ ಅಧೀನತಪ್ಪಿ ನಿನ್ನಲ್ಲಿಯೇ ಆಸಕ್ತವೆನಿಸಿ ನಿನ್ನ ಮಹಿಮೆ ಮತ್ತು ಗುಣಾತಿಶಯಗಳಂ ಕೊಂಡಾಡಲು ಬಹಳವಾಗಿ ಉತ್ಕಂಠೆ (ಅತ್ಯಾಸಕ್ತಿ) ಯಿಂದೊಡಗೂಡಿರುವುದು. ಆದಕಾರಣ ನಿನ್ನ ಗುಣಾತಿಶಯಗಳಂ ಕೊಂಡಾಡಲು ನನ್ನ ಬುದ್ಧಿಗೆ ಪ್ರೇರಿಸುವನಾಗು ॥) ಪರಾಶರ ಮುನಿಯು ಹೇಳುತ್ತಾನೆ.—ಎಲೈ ಬ್ರಾಹ್ಮಣೋತ್ತಮನೆನಿಸಿದ ಮೈತ್ರೇಯನೆ, ಇಂತು ತನಗೆ ವರವಂ ದಯಪಾಲಿಸಲು ಪ್ರತ್ಯಕ್ಷವಾಗಿ ಬಂದಿರುವ ಶ್ರೀವು ನ್ನಾರಾಯಣನನ್ನು ಧ್ರುವನು ಪ್ರಾರ್ಥಿಸಲು, ಭಕ್ತ ಪರಾಧೀನನೂ ಸಕಲ ಜಗನ್ನಿಯಾಮಕನೂ, ಯಜ್ಞಸಂರಕ್ಷಕನೂ (ಪಶುಪಾಲನೂ, ಇಂದ್ರಿಯಾಭಿಮಾನಿಯೂ) ಎನಿಸಿದ ಆ ಪರಮಾತ್ಮನು, ತಾನು ಕೈಯಲ್ಲಿ ಪಿಡಿದಿದ್ದ ಶಂಖದ ತುದಿಯಿಂದ, ತನ್ನ ಇದಿರಾಗಿ ಭಕ್ತಿಯಿಂದ ತಲೆಬಾಗಿ ಕೈಮುಗಿದುಕೊಂಡು ನಿಂತಿರುವ, ಉತ್ತಾನಪಾದರಾಯನ ಮಗನಾದ ಆ ಧ್ರುವನನ್ನು ಸವರಿದನು (ವೇದಚತುಷ್ಟಯಕ್ಕೂ ಸಾರಭೂತವಾದ ಪರಮಾತ್ಮಸ್ವರೂಪವನ್ನು ಅಥವಾ ಪರತತ್ವವನ್ನು ಪ್ರತಿಪಾದಿಸುವ ವೇದಾಂತ ಸ್ವರೂಪವೆನಿಸಿದ ಶಂಖದ ತುದಿಯಿಂದ ವಿಷ್ಣುವು ಧ್ರುವನನ್ನು ಸ್ಪರ್ಶನಮಾಡಿದನೆಂಬುದಾಗಿ ಶ್ರೀಶುಕಮುನಿಯು ಭಾಗವತದಲ್ಲಿ ಹೇಳಿರು

ತೇನ ಗೋವಿಂದ ಸ್ತಂ ಪಸ್ಪರ್ಶ ಕೃತಾಂಜಲಿಂ । ಉತ್ತಾನಪಾ
ದ ತನಯಂ ದ್ವಿಜವರ್ಯ ! ಜಗತ್ಪತಿಃ॥೪೯॥ ತತಃ * ಪ್ರಸನ್ನವದನ
ಸ್ತತ್ಕ್ಷಣಾ ನ್ಮೃಪನಂದನಃ।ತುಷ್ಟಾವ ಪ್ರಣತೋ ಭೂತ್ವಾ ಭೂ
ತಧಾತಾರ ಮಜಂ ಯುತಂ ॥೫೦॥ ಧ್ರುವಃ॥ ಭೂಮಿರಾಪೋ ऽ ನ
ಲೋ ವಾಯುಃ ಖಂ ಮನೋ ಬುದ್ಧಿರೇವಚ । ಭೂತಾದಿರಾದಿ

ತ್ತಾನೆ) ಮತ್ತು ,,ವಿದ್ಯಾಕೋಶಶ್ಚ ಶಂಖಃ'' ವಿಷ್ಣುವು ಕೈಯ್ಯಲ್ಲಿ ಪಿಡಿದಿರುವ ಶಂಖವು ಪರವಿದ್ಯೆ ಎಂಬ ಹಣಕ್ಕೆ ಬೊಕ್ಕಸ ವೆಂಬದಾಗಿ ಅಸ್ತ್ರ ಭೂಷಣಾಧ್ಯಾಯದಲ್ಲಿ ಹೇಳಲ್ಪಟ್ಟಿದೆ) ॥೪೯॥ ಇಂತು ನಾರಾಯಣನು ಧ್ರುವನನ್ನು ಶಂಖದ ತುದಿಯಿಂದ ಸವರಿದ ಬಳಿಕ ಆ ರಾಜಪುತ್ರನು ದಿವ್ಯಜ್ಞಾನವಂ ಪಡೆದು ಪ್ರಸನ್ನವಾದ ಮುಖಕಮಲದಿಂದೊಡಗೂಡಿ ಆ ನಾರಾಯಣನಿಗೆ ಸಾಷ್ಟಾಂಗವೆರಗಿ, ಸಕಲ ಭೂತಾಶ್ರಯನೆನಿಸಿದ ಆ ಪರಮಾತ್ಮನನ್ನು ಸ್ತೋತ್ರಮಾಡತೊಡಗಿದನು ॥೫೦॥ ಧ್ರುವನು ಹೇಳತ್ತಾನೆ--(ಆ ಪರಮಾತ್ಮನು ಇಪ್ಪತ್ತುನಾಲ್ಕು ತತ್ವ ಸ್ವರೂಪದಿಂದಿರುವನೆಂದು ವಿಶದಪಡಿಸಲು ಮೊದಲು ಆ ಇಪ್ಪತ್ತುನಾಲ್ಕುತತ್ವಗಳನ್ನು ವಿಭಾಗಮಾಡುತ್ತಾನೆ) ಪೃಥಿವ್ಯಾದಿ ಪಂಚಭೂತಗಳು, ಗಂಧಾದಿ ಪಂಚಗುಣಗಳು ಅಥವಾ ತನ್ಮಾತ್ರಗಳು, ಕರ್ಮೇಂದ್ರಿಯಪಂಚಕ, ಜ್ಞಾನೇಂದ್ರಿಯಪಂಚಕ, ಮನಸ್ಸು, ಬುದ್ಧಿ, ಅಹಂಕಾರ, ಮೂಲಪ್ರಕೃತಿಗಳೆಂಬ ಈ ಇಪ್ಪ

---

* ಪ್ರಸನ್ನವದನಃ ,, ಎಂಬೆಡೆಯಲ್ಲಿ, ವಿಷ್ಣುವು ಧ್ರುವನನ್ನು ಶಂಖದ ತುದಿಯಿಂದ ಸವರಿದುದರಿಂದ ಅವನ ಮುಖವು ಪ್ರಸನ್ನವಾದುದು. ಅಂದರೆ ವೇದಾಂತ ಸಾರಭೂತವಾದ ಶಂಖದಿಂದ ವಿಷ್ಣುವು ಮುಟ್ಟಿದಮಾತ್ರದಿಂದಲೇ ಆತನಿಗೆ ಮೋಹಾದಿಗಳು ತೊಲಗಿ ದಿವ್ಯಜ್ಞಾನವು ಉಂಟಾಯಿತೆಂದು ಭಾವವು. ಶ್ರುತಿ ,, ಬ್ರಹ್ಮ ವಿದ ಇವಸೋಮ್ಯ ತೇಮುಖಂ ಭಾತಿ ,, ಎಂಬ ಶ್ರುತಿ ಪ್ರಮಾಣಾನುಸಾರ, ಬ್ರಹ್ಮಜ್ಞಾನಿಯ ಮುಖವು ಪ್ರಸನ್ನವಾಗಿ ಕಾಣುವುದೆಂದು ತಾತ್ಪರ್ಯ. ಪ್ರಕೃತದಲ್ಲಿ ವಿಷ್ಣುವು ಧ್ರುವನಿಗೆ ಪ್ರತ್ಯಕ್ಷನಾದ ಮಾತ್ರದಿಂದಲೇ ಅವಶ್ಯಕವಾಗಿಯೂ ಭಗವದ್ವಿಷಯಕವಾದ ಜ್ಞಾನವು ಉಂಟಾಗಿಯೇ ಇತ್ತು. ಹೀಗಿದ್ದರೂ ಶಂಖದ ತುದಿಯಿಂದ ಸವರಿದ ಬಳಿಕ ಅತನಿಗೆ ಜ್ಞಾನೋದಯವಾಯಿತೆಂದು ಹೇಳೋಣವು ಆ ಪರಮಾತ್ಮನ ಕೈಯಲ್ಲಿದ್ದ ಶಂಖದಮಾಹಾತ್ಮ್ಯವನ್ನು ತೋರಿಸುತ್ತದೆ.

ಪ್ರಕೃತಿ ರ್ಯಸ್ಯರೂಪಂ ನತೋಽಸ್ಮಿ ತಂ॥ ೫೧॥ಶುದ್ಧಸೂಕ್ಷ್ಮೋಽ
ಖಿಲವ್ಯಾಪೀ ಪ್ರಧಾನಾತ್ಪರತಃ ಪುರ್ಮಾ । ಯಸ್ಯರೂಪಂ ನಮ
ಸ್ತಸ್ಮೈ ಪುರುಷಾಯ * ಗುಣಾತ್ಮನೇ ॥೫೨॥ ಭೂತಾದೀನಾಂ
ಸಮುದಾಯಾನಾಂ ಗಂಧಾದೀನಾಂಚ ಶಾಶ್ವತಃ । ಬುದ್ಧ್ಯಾ ದೀನಾಂ

ತ್ತುನಾಲ್ಕೂ ತತ್ವಗಳೆನಿಸುವುವು. ಇಂತಹ ಚತುರ್ವಿಂಶತಿ ತತ್ವಸ್ವರೂಪ ನೆನಿಸಿ ಎಲ್ಲೆಲ್ಲಿಯೂ ತಾನೇ ತಾನಾಗಿ ಕಂಗೊಳಿಸುತ್ತಾ ಕಾಲತ್ರಯದಲ್ಲಿ ಯೂ ಅಬಾಧಿತನೆನಿಸುವ ಆ ಪರಮಾತ್ಮನನ್ನು ನಾನು ವಂದಿಸುವೆನು॥೫೧ (ಸೃಷ್ಟ್ಯಾದಿಕರ್ತೃಗಳೆನಿಸಿದ ಮೂರ್ತಿತ್ರಯವೂ ನಿನ್ನ ಲೀಲಾವಿಭೂತಿ ಎಂಬುದಾಗಿ ಈ ಶ್ಲೋಕದಿಂದ ವರ್ಣಿಸುತ್ತಾನೆ) ಎಲ್ಲ ಲೋಕಗಳನ್ನೂ ಉಂಟುಮಾಡಿ, ಸಲಹಿ, ಸಂಹರಿಸುವ ಸಾಮರ್ಥ್ಯವುಳ್ಳ ಮೂಲಪ್ರಕೃತಿ, ಆ ಪ್ರಕೃತಿಗಿಂತಲೂ ಉತ್ತಮನೆನಿಸಿದ ವಿರಾಟ್ ಪುರುಷನು, ಸತ್ವಾದಿಗುಣತ್ರಯಸ್ವರೂಪನೆನಿಸಿದ ಭೋಕ್ತೃ ಆಥವಾ ಜೀವಾತ್ಮ ಈ ರೂಪಗಳಿಂದ ಎಲ್ಲ ಲೋಕಗಳನ್ನೂ ಆವರಿಸಿಕೊಂಡು,ತಾನುಮಾತ್ರ ಉತ್ಪತ್ತ್ಯಾದಿರಹಿತನೆನಿಸಿರುವಕಾರಣ ಸ್ವತಃ ಪರಿಶುದ್ಧನೆಂತಲೂ,ಪರಮಾಣು,ಮೊದಲಾದುವುಗಳಲ್ಲಿ ಅದಕ್ಕಿಂತಲೂ ಸೂಕ್ಷ್ಮನಾಗಿರುವ ಕಾರಣ ಸೂಕ್ಷ್ಮತಮನೆಂತಲೂ, ಬ್ರಹ್ಮಾದಿ ಸ್ಥಾವರಾಂತಗಳೆನಿಸಿದ ಎಲ್ಲ ವಸ್ತುಗಳಲ್ಲಿಯೂ ತಾನೇ ನೆಲಸಿರುವ ಕಾರಣ ಸರ್ವವ್ಯಾಪಕನೆಂತಲೂ ಕರೆಯಿಸಿಕೊಳ್ಳುವ ಅಚಿಂತ್ಯಾದ್ಭುತಶಕ್ತಿ ಸಂಪನ್ನನೆನಿಸಿದ ಪರಮಾತ್ಮನನ್ನು ನಾನು ಬಾರಿಬಾರಿಗೂ ವೊರೆಹೊಗುವೆನು ॥ ೫೨ ॥ ಪೃಥಿವಿ ಮೊದಲಾದ ಭೂತಸಮುದಾಯಕ್ಕೂ, ಗಂಧ ಮುಂತಾದ ಗುಣಗಳಿಗೂ, ಮನಸ್ಸು, ಬುದ್ಧಿ, ಅಹಂಕಾರ, ವಿರಾಟ್ ಪುರುಷ ಇವರೆಲ್ಲರಿಗಿಂತಲೂ ಉತ್ತಮನೆ

---

* "ಗುಣಾತ್ಮನೇ, ಎಂಬುದಕ್ಕೆ ಪ್ರತಿಯಾಗಿ "ಗುಣಾತ್ಮನೇ,, ಎಂಬ ಮತ್ತೊಂದು ಪಾಠವಿರುವುದಾಗಿ ಶ್ರೀ ವಿಷ್ಣುಚಿತ್ತೀಯ ವ್ಯಾಖ್ಯಾನವು, ಈ ಪಕ್ಷದಲ್ಲಿ ಭೋಕ್ತೃವೆಂದರ್ಥವು,

ಈ ಶ್ಲೋಕದ ಅರ್ಥವೂ ೫೧ ನೇ ಶ್ಲೋಕದ ಅರ್ಥವೂ ಬಂದಾಗಿಯೇ ತೋರುವುದು,ಆದರೆ ಅಲ್ಲ, ಈ ಶ್ಲೋಕದಲ್ಲಿ ಪರಮಾತ್ಮನು ಸರ್ವೋತ್ತಮನು, ಷಡ್ಭಾವವಿಕಾರಶೂನ್ಯನು ಎಂಬುದಾಗಿ ಹೇಳಲ್ಪಟ್ಟಿಹೆ,

ಪ್ರಧಾನಸ್ಯ ಪುರುಷಸ್ಯಚ ಯಃ ಪರಃ ॥೫೪॥ ತಂ ಬ್ರಹ್ಮ ಭೂತ
ಮಾತ್ಮಾನ ಮಶೇಷ ಜಗತಃ ಪತಿಂ । ಪ್ರಪದ್ಯೇ ಶರಣಂ ಶುದ್ಧಂ
ತ್ವದ್ರೂಪಂ ಪರಮೇಶ್ವರ!॥೫೪॥ * ಬೃಹತ್ವಾ ದ್ಬೃಂಹಣತ್ವಾಚ್ಚ

ನಿಸಿ, ಆದ್ಯಂತ ರಹಿತನಾಗಿ, ಕಾಲತ್ರಯದಲ್ಲಿಯೂ ನಾಶವಿಲ್ಲದ ನೆಲೆ (ಸ
ತ್ತಾ) ಯುಳ್ಳ (ಪರಮಾತ್ಮನನ್ನು ನಾನು ವಂದಿಸುವೆನೆಂಬುದಾಗಿ ಮುಂದಿನ
ಶ್ಲೋಕದೊಡನೆ ಅನ್ವಯಿಸುತ್ತದೆ) ॥೫೪॥ ಓ ಪರಮೇಶ್ವರನೆ ; ಎಲ್ಲಪಾ
ಪಗಳನ್ನೂ ದೂರಮಾಡಿರುವ ಕಾರಣ ಅಪಹತ ಪಾಪ್ಮತ್ವಾದಿಗುಣಗ
ಳಿಂದ ಕೂಡಿ, ಎಲ್ಲ ಲೋಕಗಳಿಗೂ ಒಡೆಯನೆನಿಸಿ, ಆ ಲೋಕಗಳಿಗಿಂತ
ಲೂ ಬೇರೆಯಾಗಿದ್ದು ಕೊಂಡು(ಲೋಕದ ನಡವಳಿಕೆಗೆ ಸಿಕ್ಕದೆ)ಬಣ್ಣಿಸಲ
ಸದಳವಾದ ರೂಪಯುಕ್ತನೆನಿಸಿದ ನಿನ್ನನ್ನು ನಾನು ಮರೆಹೊಗುವೆನು.
ಇಂತಹ ಸಕಲ ಕಲ್ಯಾಣಗುಣ ಗಣಾಲಂಕೃತವಾದ ಕಾರಣವೇ ಪರಿ
ಶುದ್ಧವೆನಿಸಿದ (ರಜಸ್ಸು, ತಮಸ್ಸು ಇವುಗಳ ಸಂಪರ್ಕಲೇಶವಿಲ್ಲದಿರುವ)
ನಿನ್ನ ರೂಪವನ್ನೇ ನಾನುಅನವರತವೂ ಭಜಿಸುವೆನು॥೫೪॥ಎಲೈ ಸರ್ವಾಂ
ತರ್ಯಾಮಿಯೆ; ನೀನು ಈ ಪ್ರಪಂಚದಲ್ಲಿರುವ ಇರುವೆ ಮೊದಲು ಪರ್ವತದ
ವರೆಗೂ ಇರುವ ಎಲ್ಲ ವಸ್ತುಗಳನ್ನೂ ಆವರಿಸಿರುವೆ. ಬಂದೇ ವಸ್ತುವು
ಇಂತು ಎಲ್ಲೆಲ್ಲಿಯೂ ವ್ಯಾಪಿಸುವುದು ಅಸಂಭವ. ಇಂತಹ ಮಹಿಮೆಯು
ನಿನ್ನಲ್ಲಿಯೇ ಇರುವುದಲ್ಲದೆ ಮತ್ತೆಲ್ಲಿಯೂ ಇಲ್ಲ. ಆದುದರಿಂದಲೇ ನಿನ್ನ
ರೂಪಕ್ಕೆ ,,ಬೃಹತ್ ” ಎಂದು ಹೆಸರು, ನಿನಗೆ ಬ್ರಹ್ಮನೆಂದು ಹೆಸರುಬ
ರುವುದಕ್ಕೂ ಇದೇ ಕಾರಣವು ಇಂತು ಬೃಹತ್ ಅಥವ ಬ್ರಹ್ಮನೆಂದು
ಕರೆಯಿಸಿಕೊಳ್ಳುವ ನಿನ್ನ ರೂಪವನ್ನು ಮುಮುಕ್ಷುಗಳಾದ ಯೋಗಿವ
ರ್ಯರು ಅನೇಕವಿಧಗಳಿಂದ ಉಪಾಸನೆಮಾಡಿ ನಿನ್ನ ಅನುಗ್ರಹಕ್ಕೆ ಪಾತ್ರ
ರಾಗುವರು. ಮತ್ತು ನೀನು ಇಂತಹವನಿಂದ ಹುಟ್ಟಿದೆ, ನಿನ್ನ ತಾಯಿ
ಯು ಇಂತಹವಳು. ನಿನ್ನ ತಂದೆಯು ಇಂತಹವನು ಎಂಬುದಾಗಿ ಯಾರೂ

* ಬೃಹತ್, ಬೃಹ್ ಎಂಬ ಧಾತುವಿನ ಮೇಲೆ ವರ್ತಮಾನಾರ್ಥದಲ್ಲಿ ಕತ್ವ
ಪ್ರತ್ಯಯ ಒಂದು ಬೃಹತ್ ಎಂದಾಯಿತು, ದೊಡ್ಡದಾದುದು ಅಥವಾ ವ್ಯಾಪಿಸ
ತಕ್ಕ ಶಕ್ತಿಯುಳ್ಳದೆಂದರ್ಥ, ಮೇಲೆ ಹೇಳಿದ ಧಾತುವಿನ ಮುಂದೆ "ಮನ್" ಎಂಬ
ಪ್ರತ್ಯಯವು ಬಂದು ಬ್ರಹ್ಮನ್ ಎಂದಾಯಿತು, ಅರ್ಥವು ಹಿಂದಿನಂತೆಯೇ.

ಯದ್ರೂಪಂ ಬ್ರಹ್ಮ ಸಂಜ್ಞಿತಂ। ತಸ್ಮೈ ನಮಸ್ತೇ ಸರ್ವಾತ್ಮ॑ನ್!
ಯೋಗಿಚಿಂತ್ಯಾ ವಿಕಾರವತ್ ॥೫೫॥ ಸಹಸ್ರಶೀರ್ಷಾ ಪುರುಷ
ಸ್ಸಹಸ್ರಾಕ್ಷ ಸ್ಸಹಸ್ರಪಾತ್। ಸರ್ವವ್ಯಾಪೀ ಭುವಸ್ಪರ್ಶಾ ದತ್ಯತಿ
ಷ್ಠ ದ್ದಶಾಂಗುಲಂ ॥೫೬॥ ಯದ್ಭೂತಂ ಯಚ್ಚ ವೈ ಭವ್ಯಂ ಪುರು

ತಿಳಿಯರು, ಆದುದರಿಂದ ನೀನು ಉತ್ಪತ್ತಿಶೂನ್ಯನಾದುದರಿಂದಲೇ ನಿನ್ನನ್ನು ಅನಾದಿ ಎನ್ನುವರು. ಇದೇ ಕಾರಣ ಅನಂತನೆಂತಲೂ ವ್ಯವಹರಿಸುವರು, ಹುಟ್ಟು, ನೆಲೆ, ಸಾವು. ಬೆಳವಳ, ತಗ್ಗು, ಬದಲಾವಣೆಗಳೆಂಬ ಷಡ್ಭಾವವಿಕಾರಗಳಲ್ಲಿ ಕೊನೆಯ ಐದು ವಿಕಾರಗಳಿಗೂ ಮೂಲಭೂತವಾದ ಉತ್ಪತ್ತಿಯೇ ಇಲ್ಲದಿರುವ ಕಾರಣ ಮಿಕ್ಕ ಐದು ವಿಕಾರಗಳಿಗೂ ನೀನು ಬಳಪಟ್ಟವನಲ್ಲವು. ಇಂತು ಎಲ್ಲ ವಸ್ತುಗಳನ್ನೂ ವ್ಯಾಪಿಸಿ ಮೇಲೆಹೇಳಿದ ಆರು ವಿಕಾರಗಳಿಗೂ ಬಳಪಡದೆ ಮುಮುಕ್ಷುಗಳ ಉಪಾಸನೆಗೆ ವಿಷಯವೆನಿಸಿ ಬ್ರಹ್ಮವೆಂದು ಕರೆಯಿಸಿಕೊಳ್ಳುವ ನಿನ್ನ ದಿವ್ಯರೂಪವಂ ನಾನು ಬಾರಿಬಾರಿಗೂ ವಂದಿಸುವೆನು ॥೫೫॥ ಇಂತು ಧ್ರುವನು ಶ್ರೀ ಮನ್ನಾರಾಯಣನನ್ನು ಹೊಗಳಿ ಆ ಬಳಿಕ ತಾನು ಹಿಂದೆಹೇಳಿದ ಬೃಹತ್ತ್ವ ಮತ್ತು ಬೃಂಹಣತ್ವಗಳನ್ನು ವಿಶದಪಡಿಸಲೋಸುಗ ಪುರುಷಸೂಕ್ತಾರ್ಥದಿಂದ ಮರಳಿ ಸ್ತೋತ್ರಮಾಡಲುಪಕ್ರಮಿಸುತ್ತಾನೆ—ಓ ಪರಮಾತ್ಮನೆ, ಪೃಥಿವಿ ಮೊದಲಾದ ಏಳು ಆವರಣಗಳಿಂದ ಕೂಡಿದ ಈ ಬ್ರಹ್ಮಾಂಡವನ್ನುಂಟುಮಾಡಿ ಆ ಬ್ರಹ್ಮಾಂಡವನ್ನು ನಿನ್ನ ಅಂಶಗಳಿಂದಲೇ ತುಂಬಿ ಆ ಬ್ರಹ್ಮಾಂಡವನ್ನೂ ಮೀರಿ ನಿರವಧಿಕನೆನಿಸಿರುವೆ. ಇಂತು ಎಲ್ಲವನ್ನೂ ಉಂಟುಮಾಡಿ ಅದೆಲ್ಲವಂ ನೀನೇ ವ್ಯಾಪಿಸಿರುವೆಯಾದಕಾರಣ ನೀನು ಸಾವಿರಾರು ತಲೆಗಳುಳ್ಳವನು. ನಿನಗೆ ಸಾವಿರಾರು ಕಂಣುಗಳಿರುವುವು. ಅಂತೆಯೇ ಸಾವಿರಾರು ಕಾಲುಗಳಿಂದೊಡಗೂಡಿರುವೆ, ಇಂತಹ ಅಚಿಂತ್ಯ ಮಹಿಮಶಾಲಿ ಎನಿಸಿದ ಈ ನೀನು ಈ ಬ್ರಹ್ಮಾಂಡವನ್ನೆಲ್ಲಾ ಆವರಿಸಿಕೊಂಡು ಮಹಾಪ್ರಮಾಣಯುಕ್ತನಾಗಿ ಕಂಗೊಳಿಸುತಿರುವೆ ಎಂಬುದಾಗಿ ಶ್ರುತಿಯು ಮೊರೆಯಿಡುವುದು (ಈ ಶ್ಲೋಕದಲ್ಲಿ ಸಹಸ್ರಶೀರ್ಷಾ ಎಂಬಲ್ಲಿ ಶೀರ್ಷಶಬ್ದದಿಂದ ಸಕಲ ಅಂಗಗಳೂ ಉಪಲಕ್ಷಿತಗಳಾಗುವುವು. ಶೀರ್ಷವೆಂದರೆ, ಬೋಧನ, ಮನನ, ಶ್ರವಣ, ಸ್ಪರ್ಶನ, ದರ್ಶನ,

ರಸನ, ಘ್ರಾಣಜ್ಞಾನಗಳನ್ನು (ಹೇಳಿದ ಮಾತನ್ನು ತಿಳಿಯುವಿಕೆ, ಆ ಮಾತನ್ನು ಬಾರಿಬಾರಿಗೂ ಚಿಂತಿಸುವಿಕೆ, ಕೇಳುವಿಕೆ, ಮುಟ್ಟುವಿಕೆ, ನೋಡುವಿಕೆ, ರುಚಿ ತಿಳಿಯುವಿಕೆ, ವಾಸನೆ ಕಂಡು ಹಿಡಿಯುವಿಕೆಗಳೆಂಬ ಈ ಪ್ರಾಪಂಚಿಕಜ್ಞಾನಗಳೆಲ್ಲವನ್ನೂ) ತಿಳಿಸುವ ಸಾಮರ್ಥ್ಯವುಳ್ಳುದೆಂದರ್ಥವೆಂಬದಾಗಿ ಯಜುರ್ವೇದ ಬ್ರಾಹ್ಮಣದಲ್ಲಿ ಹೇಳಲ್ಪಟ್ಟಿದೆ. ಸಹಸ್ರಾಕ್ಷಃ ಎಂಬ ಸ್ಥಲದಲ್ಲಿ ಅಕ್ಷಿ ಶಬ್ದದಿಂದ ಎಲ್ಲಾ ಜ್ಞಾನೇಂದ್ರಿಯಗಳೂ ಉಪಲಕ್ಷಿತಗಳಾಗುವುವು ಸಹಸ್ರಪಾತ್ ಎಂಬೆಡೆಯಲ್ಲಿರುವ ಪಾದಶಬ್ದವು ಎಲ್ಲಾ ಕರ್ಮೇಂದ್ರಿಯಗಳನ್ನೂ ಬೋಧಿಸುವುದು. ಪ್ರಕೃತದಲ್ಲಿ ಪರಮಾತ್ಮನಿಗೆ ಅಂಗಗಳು ಉಪಾಂಗಗಳು ಯಾವುವೂ ಇಲ್ಲವಾದರೂ ಜ್ಞಾನ, ಮತ್ತು ಶಕ್ತಿ ಇವುಗಳು ಅಪರಿಮಿತಗಳಾಗಿರುವುವೆಂದು ತಿಳಿಯಬೇಕೆಂಬದಾಗಿ ''ಅಪಾಣಿಪಾದೋಜವನೋಗ್ರಹೀತಾಪಶ್ಯತ್ಯ ಚಕ್ಷುಸ್ಸಶ್ರುಣೋತ್ಯಕರ್ಣಃ'' ಎಂಬದಾಗಿ ಶ್ರುತಿಯು ಹೇಳುತ್ತಿರುವುದು. ಎಂತು ಅನೇಕ ಕಣ್ಣುಗಳು ಅನೇಕ ಕಿವಿ, ಮೂಗು, ಬಾಯು ಅವಯವಗಳುಳ್ಳವನು ಎಲ್ಲವನ್ನೂ ಕಂಡು ಕೇಳ, ಮಾಡಲೂ ಶಕ್ತನಾಗುವನೋ ಅಂತೆಯೇ ಪರಮಾತ್ಮನ ಶಕ್ತಿಯು ಅಪರಿಮಿತವಾದುದೆಂದು ಭಾವವು. ಪುರುಷನೆಂದರೆ, ''ಪೂರ್ವಮೇವಾಹ ಮಿಹಾಸಮಿತಿ, ತತ್ಪುರುಷಸ್ಯ ಪುರುಷತ್ವಂ,, ಇತ್ಯಾದಿಶ್ರುತಿಗಳಿಂದಲೂ. '' ಪೂರಣಾತ್ಸದನಾಚ್ಚಾಪಿ ತತೋಽಸಿಪುರುಷಸ್ಸ್ಮೃತಃ' ಇತ್ಯಾದಿ ಸ್ಮೃತಿ ಪ್ರಮಾಣಗಳಿಂದಲೂ ಕೂಡ, ಬ್ರಹ್ಮಾದಿ ಪಿಪೀಲಿಕಾಂತಗಳೆನಿಸಿದ ಎಲ್ಲ ವಸ್ತುಗಳಿಂದಲೂ ಈ ಪ್ರಪಂಚವನ್ನು ತುಂಬಿ ಆ ಪದಾರ್ಥಗಳಲ್ಲಿಯೂ ತಾನೇ ನೆಲಸಿರುವನೆಂಬ ಅರ್ಥವು ತೋರುವುದು. ಭುವಃ ಎಂಬ ಸ್ಥಲದಲ್ಲಿ ಭೂ ಶಬ್ದವು, ಚಿದಚಿದಾತ್ಮಕಗಳಾದ ಎಲ್ಲ ಭೂತಗಳನ್ನೂ ಬೋಧಿಸುವುದು. ದಶಾಂಗುಲಂ ಎಂದರೆ-ಹತ್ತು ಅಂಗುಲ ಪ್ರಮಾಣವೆಂದರ್ಥ ಅಂದರೆ ಪರಮಾತ್ಮನು ಈ ಭೂಮಂಡಲವನ್ನು ಉಂಟುಮಾಡಿ ಅವುಗಳನ್ನು ತಾನೇ ಅನುಪ್ರವೇಶಮಾಡಿ, ಬಳಿಕ ನಿರವಧಿಕವಾದ ಪ್ರಮಾಣದಿಂದೊಡಗೂಡಿರುವನೆಂದು ಅರ್ಥವು. ಎಂಬದಾಗಿ ಶ್ರೀ ವಿಷ್ಣು ಚಿತ್ತೀಯ ವ್ಯಾಖ್ಯಾನದಲ್ಲಿದೆ) ॥೫೬॥ (ಮಗನಿಗಿಂತಲೂ ತಂದೆಯಾದವನು ಸಕಲ ವಿಷಯಗಳಲ್ಲಿಯೂ ದೊಡ್ಡವನಾಗಿರುವಿಕೆಯು, ಲೋಕದಲ್ಲಿ ದೃ

ಪೋತ್ತಮ ! ತದ್ಭವಾ ! ತ್ವತ್ತೋ ವಿರಾಟ್ ಸ್ವರಾಟ್ ಸಮ್ರಾ
ಟ್ ತ್ವತ್ತಶ್ಚಾಪ್ಯಧಿಪೂರುಷಃ॥೫೭॥ಅತ್ಯರಿಚ್ಯತ ಸೋ ೨ ಧಶ್ಚ ತಿರ
ಶ್ಚೋರ್ಧ್ವಂಚವೈ ಭುವಃತ್ವತ್ತೋ ವಿಶ್ವಮಿದಂಜಾತಂ ತ್ವತ್ತೋ

ಷ್ಟವಾಗಿರುವುದು. ಇದರಂತೆ ಈ ಹಿಂದೆ ಹೇಳಿದ ಅಪಾರಗುಣಗಣಾ
ಲಂಕೃತನಾದ ನಿನ್ನಿಂದಲೇ ಎಲ್ಲವೂ ಉಂಟಾಗುವದೆಂಬ ಅರ್ಥವನ್ನು
ದೃಢಪಡಿಸಲು ಕಾರ್ಯಕ್ಕಿಂತಲೂ ಕಾರಣವು ಅಧಿಕವಾಗಿರುವುದು ಯುಕ್ತ
ವೆಂದು ಮೇಲೆಹೇಳಿದ ದೃಷ್ಟಾಂತಾನುಸಾರ ತಿಳಿಯಪಡಿಸಲುಪಕ್ರಮಿಸು
ತ್ತಾನೆ. ಪುರಶಬ್ದದಿಂ ಕರೆಯಿಸಿಕೊಳ್ಳುವ ಈ ಶರೀರದಲ್ಲಿ ಅಧಿಷ್ಠಿತನಾ
ಗಿರುವ ಕಾರಣ ಪುರುಷನೆಂದು ವ್ಯವಹರಿಸಲ್ಪಡುವ ಎಲೈ ಪರಮಾತ್ಮನೆ;
ಇದುವರೆಗೂ ಹಿಂದೆ ಉತ್ಪತ್ತಿಯಂ ಪಡೆದು ಕಾಲಧರ್ಮವಂ ಹೊಂದಿದ
ವುಗಳೂ ಮುಂದೆ ಉತ್ಪನ್ನವಾಗತಕ್ಕವೂ ಇವೆಲ್ಲವೂ ನಿನ್ನದೆಶೆಯಿಂದಲೇ
ಹುಟ್ಟಿ ಸಾಯುವ ಕಾರಣ ಇವುಗಳೂ ಕೂಡ ನಿನ್ನ ರೂಪಾಂತರಗಳಾ
ಗಿಯೇ ಇರುವುವು. ವಿರಾಟ್ ಎಂಬದಾಗಿ ಕರೆಯಲ್ಪಡುವ ಬ್ರಹ್ಮಾಂಡ
ವೂ, ಸ್ವರಾಟ್ ಶಬ್ದವಾಚ್ಯನಾದ ಬ್ರಹ್ಮನೂ, ಸಮ್ರಾಟ್ ಎಂಬದಾಗಿ
ವ್ಯವಹಾರಯೋಗ್ಯನಾದ ಮನುವೂ, ಅಥವಾ *ವಿರಾಟ್, ಸ್ವರಾಟ್,ಸ
ಮ್ರಾಟ್‌ಗಳೆಂಬದಾಗಿ ಕರೆಯಲ್ಪಡುವ ಸುರಲೋಕ,ಅಂತರಿಕ್ಷ,ಭೂಲೋ
ಕಗಳೂ, ಇವುಗಳೆಲ್ಲವನ್ನೂ ಆವರಿಸಿಕೊಂಡು ಅವುಗಳಲ್ಲಿ ನೆಲೆಸಿರುವ
ಕಾರಣ ಅಧಿಷ್ಠಾತೃವೆನಿಸಿದ ಮಹಾಪುರುಷನೂ ಕೂಡ ನಿನ್ನಿಂದಲೇ ಉ
ದಿಸಿದರು (ಭೂರಾದಿಲೋಕಗಳು ನಿನ್ನಿಂದ ಉತ್ಪನ್ನಗಳಾದುವೆಂದು ಮಾ
ತ್ರ ಅರ್ಥವಲ್ಲ. ಆ ಆಲೋಕಗಳಲ್ಲಿರುವ ಚೇತನಾಚೇತನವಸ್ತು ಜಾಲವೆ
ಲ್ಲವೂ ನಿನ್ನಿಂದಲೇ ಉತ್ಪನ್ನವಾದುದೆಂದು ಭಾವವು) ॥೫೭॥ ಇಂತು ಈ
ಮೇಲೆವಿವರಿಸಿದುವೆಲ್ಲವೂ ನಿನ್ನಿಂದಲೇ ಉಂಟಾದ ಕಾರಣ ನೀನು ಈ
ಭೂಮಿಯ ಕೆಳಭಾಗದಲ್ಲಿರುವ ಪಾತಾಳವನ್ನು ಇದರ ಸುತ್ತ ಮುತ್ತಲಿ
ರುವ ದ್ವೀಪಗಳನ್ನೂ, ಮೇಲುಭಾಗದಲ್ಲಿರುವ ಸ್ವರ್ಗಾದಿಗಳನ್ನು ಕೂ

* ಶ್ಲೋ॥ ಅಯಂ ಲೋಕಸ್ತ್ವಹೈ ಸಮ್ರಾಡಂತರಿಕ್ಷಂ ವಿರಾಟ್ ಸ್ಮೃತಂ ! ಸ್ವ
ರಾಡಸೌಸ್ಮೃತೋ ಲೋಕಃ ॥ ಎಂಬ ವಾಯು ಪುರಾಣ ವಚನವು ಈಯರ್ಥದಲ್ಲಿ
ಪ್ರಮಾಣವಾಗಿರುವುದು.

ಭೂತಭವಿಷ್ಯತೀ ॥೫೪॥ ತ್ವದೂಪಧಾರಿಣ ಶ್ಚಾಂತ ಸ್ಸರ್ವಭೂತ
ಮಿದಂ ಜಗತ್ । ತ್ವತ್ತೋ ಯಜ್ಞಾ ಸ್ಸರ್ವ ಹುತಃ ಪೃಷದಾಜ್ಯಂ
ಪಶು ರ್ವಿಧಾ ॥೫೫॥ ತ್ವತ್ತೋ ೨ಶ್ವಚೋಥಸಾವಾನಿ ತ್ವತ್ತಶ್ಚಂ
ದಾಸಿ ಜಜ್ಞಿರೇ । ತ್ವತ್ತೋ ಯಜೂಂಷ್ಯ ಜಾಯಂತ ತ್ವತ್ತೋ ೨

ಡ ಅವರಿಸಿ ವ್ಯಷ್ಟಿರೂಪದಿಂದ ತುಂಬಿರುವೆ. ಈ ಎಲ್ಲವೂ ನಿನ್ನಿಂದಲೇ ಉಂಟಾದುದು. ಭೂತ, ಮತ್ತು ಭವಿಷ್ಯತ್ತುಗಳೆಂಬ ಹಿಂದೆಕಳೆದ ಮತ್ತು ಮುಂದೆಬರುವುವೂ ಕೂಡ ನಿನ್ನ ದೆಸೆಯಿಂದಲೇ ಉಂಟಾದುವು. ಭೂತ ಭವಿಷ್ಯತ್ತುಗಳನ್ನು ಹೇಳದುದರಿಂದಲೇ ವರ್ತಮಾನವನ್ನೂ ಕೂಡ ಹೇಳದಂತಾಯಿತೆಂದು ಭಾವವು ॥೫೪॥ ಚರಾ ಚರ ರೂಪದಿಂ ದಿರುವ ಈ ಪ್ರಪಂಚವೆಲ್ಲವೂ, ಕಾರಣಭೂತನೆನಿಸಿದ ನಿನ್ನರೂಪದಿಂದಿ ರುವ ಬ್ರಹ್ಮಾಂಡದಲ್ಲಿ ಅಂತರ್ಭೂತ ವಾಗಿರುವುದು ಇಂತು ನಿನ್ನ ರೂ ಪದಿಂದಿರುವ ಬ್ರಹ್ಮಾಂಡದಲ್ಲಿ ಈ ನಿಖಿಲ ಜಗತ್ತೂ ಲಯವಾಗಿರುವ ದೆಂದು ಹೇಳಿದರೆ ನಿನ್ನಲ್ಲಿ ಇದೆಲ್ಲವೂ ಅಡಗಿರುವದೆಂದು ಬೇರೆಹೇಳಬೇ ಕೆ ? ಸಕಲಭೂತಗಳನ್ನೂ ಒಳಗೊಂಡಿರುವ ಈ ಜಗತ್ತು ಬ್ರಹ್ಮಾಂಡ ದಲ್ಲಿ ಲೀನವಾಗಿರುವುದು. ಆ ಬ್ರಹ್ಮಾಂಡವೂ ಕೂಡ ನಿನ್ನ ಸ್ವರೂಪವೇ ಆಗಿರುವುದು. ಅನೇಕ ಬಗೆಗಳಾದ ಚರು ಪುರೋಡಾಶ ಮೊದ ಲಾದ ಹೋಮ ಸಾಧನಗಳಿಂದೊಡಗೂಡಿರುವ ಕಾರಣ ಸರ್ವಹುತ ವೆನಿಸುವ ಅಗ್ನಿಷ್ಟೋಮ, ಅತಿರಾತ್ರ, ವಾಜಪೇಯ, ಪೌಂಡರೀಕ ಮೊದಲಾದ ಕ್ರತುಗಳೆಲ್ಲವೂ ನಿನ್ನಿಂದಲೇ ಉಂಟಾದುವು. ಈ ಮೇಲೆ ಹೇಳಿದ ಯಜ್ಞೋಪ ಯೋಗಿಗಳಾದ ಪೃಷದಾಜ್ಯಾದಿಗಳೂ (ಮೊಸ ರಿನಿಂದ ಕೂಡಿದತುಪ್ಪ) ನಿನ್ನಿಂದಲೇ ಉಂಟಾದುವು * ಗ್ರಾಮ್ಯ, ಆ ರಣ್ಯಕಗಳೆಂಬ ಭೇದಗಳಿಂದ ಕೂಡಿದ ಪಶುವರ್ಗವೂ ಕೂಡ ನಿನ್ನಿಂದಲೇ ಉತ್ಪನ್ನ ವಾದುದು. ॥೫೫॥ ಆಱಳಿಕ ಋಗ್ವೇದವೂ, ಸಾಮವೇದವೂ, ಗಾಯತ್ರೀ, ಉಷ್ಣಿಕ್ಕು, ಅನುಷ್ಟುಪ್, ಬೃಹತೀ, ಪಙ್ಕ್ತಿ, ತ್ರಿಷ್ಟುಪ್, ಜಗತೀ, ಶಕ್ವರೀ, ಮೊದಲಾದ ಛಂದಸ್ಸುಗಳೂ, ಯಜುರ್ವೇದವೂ,

* ಈ ವಿಷಯವನ್ನು ಇದೇ ಅಂಕದ೫ನೇ ಅಧ್ಯಾಯದ ೫೦ ಮತ್ತು ೫೧ನೆ ಶ್ಲೋಕಗಳಲ್ಲಿ ನೋಡಿರಿ.

ಽಶ್ವಾಶ್ಚೈಕತೋದತಃ॥೬೦॥ ಗಾವ ಸ್ತ್ವತ್ತಸ್ಸಮುದ್ಭೂತಾ ಸ್ತ್ವ
ತ್ತೋಽ ಜಾ ಅವಯೋ ಮೃಗಾಃ । ತ್ವನ್ಮುಖಾ ದ್ಬ್ರಹ್ಮಣಾ
ಬಾಹ್ವೋ ಸ್ತವ ಹ್ಷತ್ರ ಮುಜಾಯತ ॥೬೧॥ ವೈಶ್ಯಾ ಸ್ತಥೋರು
ಜಾ ಕ್ಶುದ್ರಾ ಸ್ತವ ಪದ್ಭ್ಯಾಂ ಸಮುದ್ಗತಾಃ । *ಅಹ್ನೋ ಸ್ಸೂ
ರ್ಯೋಽನಿಲಃ ಪ್ರಾಣಾ ಚ್ಚಂದ್ರಮಾಮನಸಸ್ತವ॥೬೨॥ಪ್ರಾಣೋಽಂ
ತಸ್ಸುಷಿರಾ ಜ್ಜಜ್ಞೇ ಮುಖಾದಗ್ನಿರಜಾಯತ । ನಾಭಿತೋ ಗ

ಎಮ್ಮ ವೊದಲಾದುವೂ, ಕುದುರೆ ವೊದಲಾದುವೂ ಕೂಡ ನಿನ್ನಿಂದ ಉ
ದಯಿಸಿದುವು. ॥೬೦॥ ಗೋವುಗಳು, ಮೇಕೆಗಳು, ಕುರಿಗಳು, ಜಿಂಕೆಗ
ಳು, ಇವೇ ವೊದಲಾದ ಮೃಗಜಾತಿಗಳೆಲ್ಲವೂ ನಿನ್ನಿಂದುಂಟಾದುವು. ಆ ಬಳಿಕ ನಿನ್ನ ಮುಖದಿಂದ ಬ್ರಾಹ್ಮಣರೂ, ನಿನ್ನ ತೋಳುಗಳಿಂದ ಕ್ಷತ್ರಿ
ಯರೂ ಉದಯಿಸಿದರು. ಆದುದರಿಂದಲೇ ಬ್ರಾಹ್ಮಣರು ತಮ್ಮ ಬಾಯಿ
ಯಿಂದಲೇ ತಾವು ಜೀವಿಸಬೇಕೆಂತಲೂ, ಮತ್ತು ವಚನಶೂರರೆಂತಲೂ,
ಅಂತೆಯೇ ಕ್ಷತ್ರಿಯರೂ ಕೂಡ ತಮ್ಮ ಬಾಹುಗಳಿಂದಲೇ ಅಂದರೆ ಬಾ
ಹುಬಲದಿಂದ ಜೀವಿಸಬೇಕೆಂತಲೂ ಪರಾಕ್ರಮ ಶಾಲಿಗಳೆಂತಲೂ ವ್ಯವ
ಹಾರ ವುಂಟಾದುದು. ॥೬೧॥ ಆ ಬಳಿಕ ನಿನ್ನ ತೊಡೆಗಳಿಂದ ವೈಶ್ಯರು
ಉತ್ಪನ್ನರಾದರು. ಆದುದರಿಂದಲೇ ಇವರಿಗೆ ಸ್ಥಿರವಾಗಿ ಕುಳಿತು ವ್ಯಾ
ಪಾರ ಮಾಡತಕ್ಕುದೇ ಜೀವಿಕೆಯಾಗಿ ಏರ್ಪಟ್ಟಿತು. ಇವರಂತೆ ನಿಶ್ಚಲ
ರಾಗಿ ಕುಳಿತು ಕೆಲಸಮಾಡಲು ಮತ್ತಾರಿಗೂ ಸಾಧ್ಯವಲ್ಲವು. ತರುವಾ
ಯ ನಿನ್ನ ಕಾಲುಗಳಿಂದ ಶೂದ್ರರು ಜನಿಸಿದರು. ಇವರು ಕೇವಲ ಜಂ
ಘಾಬಲವುಳ್ಳವರು. ಇವರಿಗೆ ಜೀವನವೂ ಆ ಜಂಘಾಬಲದಿಂದಲೇ ಏರ್ಪ
ಟ್ಟಿತು. ಇಂತಾದ ಬಳಿಕ ನಿನ್ನಕಣ್ಣುಗಳಿಂದ ಸೂರ್ಯನು ಜನಿಸಿದನು, ನಿನ್ನ
ಪ್ರಾಣದಿಂದ ವಾಯುವು ಹುಟ್ಟಿತು. ನಿನ್ನ ಮನಸ್ಸಿನಿಂದಲೇ ಚಂದ್ರನು
ಆವಿರ್ಭವಿಸಿದನು. ॥೬೨॥ ಪ್ರಾಣವು ನಿನ್ನ ಹೃದಯವಾಯುವಿನಿಂದ ಉ
ದ್ಭವಿಸಿತು, ನಿನ್ನಬಾಯಿಯಿಂದ ಅಗ್ನಿಯು ಜನಿಸಿದನು. ನಿನ್ನ ನಾಭಿಯಿಂ

* ಶ್ರು॥ ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯಾದಿಕ ಕ್ಕೋ ಽತ್ರೇದಾಗ್ನಿ
ವ ತಾಶ್ಚ ವೇದಾಃ । ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಭೂಮಿ
ರ್ಹ್ಯಸರ್ವ ಭೂತಾಂತರಾತ್ಮ ॥ ಎಂಬ ಶ್ರುತಿಯೂ, ಪುರುಷಸೂಕ್ತವೂ ಈ ವಿಷಯದಲ್ಲಿ ಉಪಬೃಂಹಕವಾಗಿರುವುದು.

ಗನಂ ದ್ಯೌಶ್ಚ ಶಿರಸಸ್ಸಮವರ್ತತ॥೬೫॥ದಿಶಶ್ಚ್ರೋತಾತ್ ಕ್ಷಿತಿಃ ಪದ್ಭ್ಯಾಂ ತ್ವತ್ತಸ್ಸರ್ವ ಮಭೂ ದಿದಂ ॥೬೪॥ ನ್ಯಗ್ರೋಧ ಸ್ಸಮು ಹಾನಲ್ಪೇ ಯಥಾಬೀಜೇ ವ್ಯವಸ್ಥಿತಃ । ಸಂಯಮೇ ವಿಶ್ವ ಮಖಿ ಲಂ ಬೀಜಭೂತೇ ತಥಾತ್ವಯಿ ॥೬೫॥ ಬೀಜಾದಂಕುರ ಸಂಭೂ ತೋ ನ್ಯಗ್ರೋಧ ಸ್ಸು ಸಮುಚ್ಛ್ರಿತಃ।ವಿಸ್ತಾರಂಚ ಯಥಾ ಯಾ

ದ (ಹೊಕ್ಕುಳಿನಿಂದ) ಅಂತರಿಕ್ಷವು ಉಂಟಾದುದು. (ನಿನ್ನ ಹೊಕ್ಕುಳಿನ ಮಧ್ಯಪ್ರದೇಶವೇ ಆಕಾಶವೆಂದು ಕರೆಯಲ್ಪಡುವುದು) ನಿನ್ನ ತಲೆಯೇ ಸ್ವರ್ಗಲೋಕವು ॥೬೫॥ ನಿನ್ನ ಕಿವಿಗಳೇ ದಿಕ್ಕುಗಳು. ನಿನ್ನ ಕಾಲುಗಳಿಂದ ಈ ಭೂಮಂಡಲವು ತಲೆದೋರಿದುದು. ಎಲೈ ಶ್ರೀಮನ್ನಾರಾಯಣನೇ ; ಈ ಪ್ರಪಂಚದಲ್ಲಿ ಕಣ್ಣಿಗೆ ಕಾಣುವ ವಸ್ತುಗಳೆಲ್ಲವೂ ನಿನ್ನಿಂದಲೇ ಉಂಟಾದುವು. ॥೬೪॥ ಎಲೈ ಪರಮಾತ್ಮನೆ ; ನಾನು ವಿಶೇಷವಾಗಿ ನಿನ್ನ ಗುಣಗಣಗಳನ್ನೂ ನಿನ್ನ ಮಹಿಮೆಯನ್ನೂ ಬಣ್ಣಿಸಲಾರೆನು. ಸಾಸುವೆ ಕಾಳಿಗಿಂತಲೂ ಬಹುಚಿಕ್ಕದಾದ ಒಂದು ಆಲದ ಬೀಜವಂ ನೆಟ್ಟರೆ ಅದರಿಂದುಂಟಾಗುವ ಮರವು ಹೇಗೆ ಮಹಾಪ್ರಮಾಣವಾಗಿ ಬೆಳೆದು ವಿಶಾಲವಾಗಿ ಶಾಖೋಪಶಾಖೆಗಳಿಂದ ಕೂಡಿದೊಡ್ಡವನದಂತೆ ಕಂಗೊಳಿಸುವುದೋ ಅಂತೆಯೇ ಈ ಪ್ರಪಂಚವೆಲ್ಲವೂ ಪರಮಾಣು ಪರಿಮಾಣಯುಕ್ತನಾದ ನಿನ್ನಿಂದಲೇ ಉದಯಿಸಿ ಅನೇಕ ಪ್ರಕಾರವಾಗಿ ಕಂಗೊಳಿಸುವುದು. ಅತ್ಯಲ್ಪವಾದ ಒಂದು ಆಲದಬೀಜದಲ್ಲಿ ಬಹುದೊಡ್ಡದಾದ ಆಲದಮರವು ಎಂತು ಅಡಗಿರುವುದೋ ಅಂತೆಯೇ ಈ ಈಶೇಳುಲೋಕಗಳೆಂಬ ದೊಡ್ಡವೃಕ್ಷಕ್ಕೆ ಬೀಜದಂತಿರುವ ನಿನ್ನಲ್ಲಿ ಈ ಲೋಕಗಳೆಲ್ಲವೂ ಪ್ರಳಯಕಾಲದಲ್ಲಿ ಅಡಗಿಹೋಗುವುವು. ಕ್ಷ್ರ॥ ಯಥೈವ ವಟಬೀಜಸ್ಥಃ ಸ್ಸಾಕೃತ ಶ್ಚ ಮಹಾದ್ರುಮಃ । ತಥೈವ ರಾಮಬೀಜಸ್ಥಂ ಜಗದೇತಚ್ಚರಾಚರಂ ॥ ಎಂಬ ರಾಮತಾಪನಿಯೋಪನಿಷತ್ತಿನ ಶ್ರುತಿಯೂ ಕೂಡ ಈ ಮೇಲೆ ಹೇಳಿದ ಅರ್ಥವನ್ನೇ ಪರಿಪೋಷಿಸುತ್ತದೆ ॥೬೫॥ ಅತಿಸೂಕ್ಷ್ಮವಾದ ಆಲದ ಬೀಜವಂ ಬಿತ್ತಿ ಬೆಳೆಸುತ್ತಾ ಬಂದರೆ ಚಿಗುತು ಕಾಲ ಕ್ರಮೇಣ ದೊಡ್ಡ ಮರವಾಗಿ ಅತ್ಯಂತ ಉನ್ನತವಾಗಿಯೂ ವಿಶಾಲವಾಗಿಯೂ ಎಂತು ಕಂಗೊಳಿಸುವುದೋ ಅಂತೆಯೇ ಪರಿಮಾಣು ಪರಿಮಾಣ ಯುಕ್ತನೆನಿಸಿದ ನಿನ್ನಿಂದ ಉತ್ಪನ್ನವಾದ ಈ ಜಗತ್ತು ನಾನಾಬಗೆಯಿಂದ ತೋರ

ತಿ ತ್ವಯಾಸೃಷ್ಟಂ ತಥಾ ಜಗತ್‌॥೬೬॥ಯಥಾಹಿ ಕದಳೀ ನಾನ್ಯಾ ತ್ವಕ್ಪ್ರತಾ ದಥ ದೃಶ್ಯತೇ । ಏವಂ ವಿಶ್ವಸ್ಯ ನಾನ್ಯ ಸ್ತ್ವಂ ತ್ವ ತ್ತಸ್ಯಾಯಿಶ್ವರ ! ದೃಶ್ಯತೇ ॥೬೭॥ಹ್ಲಾದಿನೀ ಸಂವಿತ್ತ್ವಯ್ಯೇಕಾ ಸರ್ವಸಂಸ್ಥಿತೌ । ಹ್ಲಾದತಾಪಕರೀ ಮಿಶ್ರಾ ತ್ವಯಿ ನೋ ಗುಣವರ್ಜಿತೇ ॥೬೮॥ ಪೃಥಗೂ ತೈಕ ಭೂತಾಯ ಭೂತ ಭೂತಾಯ ತೇ ನಮಃ । ಪ್ರಭೂತ ಭೂತರೂಪಾಯ ತು

ವುದು ॥೬೬॥ ಇದನ್ನೇ ಬೇರೊಂದು ದೃಷ್ಟಾಂತದಿಂದ ಹೇಳುತ್ತಾನೆ— ಬಾಳೆಯಮರವನ್ನು ಕತ್ತರಿಸಿ ನೋಡಿದಾಗ್ಗೂ ಎಲೆ ಅಥವಾ ಪಟ್ಟೆಗಳಲ್ಲದೆ ಬೇರೆ ಪದಾರ್ಥಗಳೇ ಅದರಲ್ಲಿ ದೊರೆಯಲಾರವು. ಅಂತೆಯೇ ಸತ್ಯ ಸ್ವರೂಪನೆನಿಸಿ, ಸದ್ರೂಪನಾದ ನಿನ್ನಲ್ಲಿಯೇ ನೆಲೆಸಿರುವ ಈ ಜಗತ್ತು ನಿನಗಿಂತಲೂ ಬೇರೆಯಾಗಿ ಕಂಡುಬಂದರೂ ಬೇರೆಯಲ್ಲವು. ಎಲೈ ಸಕಲನಿಯಾಮಕನೆನಿಸಿದ ಪರಮಾತ್ಮನೆ, ನಿನ್ನ ಲೀಲಾವಿಭೂತಿಯನ್ನು ನಾನೆಷ್ಟೆಂದು ಬಣ್ಣಿಸಲಿ ಈ ಜಗತ್ತು ನಿನಗಿಂತಲೂ ಬೇರೆಯಿಲ್ಲ, ನೀನು ಈ ಜಗತ್ತಿಗಿಂತಲೂ ಬೇರೆಯಲ್ಲವು ॥೬೭॥ ಎಲೈ ಸಕಲ ಜಗನ್ನಿಯಾಮಕನೆನಿಸಿದ ನಾರಾಯಣನೆ, ನಿರಂತರವೂ ಉಪಾಸಕರಿಗೆ ಆನಂದವನ್ನುಂಟುಮಾಡುವಕಾರಣ ಹ್ಲಾದಿನೀ ಎಂಬುದಾಗಿ ಕರೆಯಿಸಿಕೊಳ್ಳುವ ವಿದ್ಯಾಶಕ್ತಿಯು, ಸರ್ವಾಧಿಷ್ಠಾನ ಭೂತನೆನಿಸಿದ ನಿನ್ನೊಬ್ಬನಲ್ಲಿ ವಿನಾ ಮತ್ತಾರಲ್ಲಿಯೂ ಇಲ್ಲವು. ಇಂತಹ ಆನಂದಕರತಾಶಕ್ತಿ ಎಂಬುದು ನಿನ್ನಲ್ಲಿಯೇ ಅನವರತವೂ ಅವ್ಯಭಿಚರಿತವಾಗಿರುವ ಕಾರಣದಿಂದಲೇ ನಿನ್ನನ್ನು ಆನಂದಮಯನೆಂಬುದಾಗಿ ಕರೆಯುವರು. ಮತ್ತು ನೀನು ಸತ್ವಾದಿ ಗುಣತ್ರಯ ಸಮುದಾಯಕ್ಕೂ ಕೂಡ ದೂರನೆನಿಸಿರುವ ಕಾರಣ, ಸಂತೋಷವನ್ನುಂಟುಮಾಡುವಂತಹ ಸತ್ವಗುಣಾಂಶವೂ, ದುಃಖ ಸಂಪಾದಕವೆನಿಸಿದ ತಮೋ ಗುಣಾಂಶವೂ, ಏತದುಭಯ ಸಂಕಲಿತವಾದ ರಜೋಗುಣಾಂಶವೂಕೂಡ ನಿನ್ನಲ್ಲಿಲ್ಲವು. ಅಂದರೆ ನೀನು ಸಂತೋಷಕಾಲದಲ್ಲಿ ಹಿಗ್ಗುವನಲ್ಲ. ದುಃಖವು ಬಂದೊದಗಿದಾಗ ಅದಕ್ಕಾಗಿ ವ್ಯರುಗುವುದಿಲ್ಲ. ಸತ್ವತಮಸ್ಸುಗಳ ಸಮಷ್ಟಿರೂಪವಾದ ರಜೋಗುಣಕ್ಕೆ ಕಾರಣಭೂತಗಳಾದ ಕಾಮಾದಿಗಳಿಗೂ ನೀನು ಬಳಪಟ್ಟವನಲ್ಲವು, ಆದುದರಿಂದಲೇ ನೀನು "ನಿರ್ಗುಣನು, ಗುಣಾತೀತನು" ಎಂಬುದಾಗಿ ವ್ಯವಹಾರವನ್ನು ಪಡೆದಿರುವೆ॥೬೮॥

ಭ್ಯಂ ಭೂತಾತ್ಮನೇ ನಮಃ ॥೬೯॥ ವ್ಯಕ್ತಂ ಪ್ರಧಾನಪುರುಷೌ ವಿ
ರಾಟ್ ಸಮ್ರಾ ಟ್ಸ್ವರಾಟ್ತಥಾ । ವಿಭಾವ್ಯತೇಽಂತಃಕರಣೇ ಪು

ಓ ಪರಮಾತ್ಮನೆ! ಕಾರ್ಯರೂಪದಿಂದ ನಾನಾ ರೂಪಗಳನ್ನು ಪಡೆದಿರುವ ಕಾರಣ ಭಿನ್ನ ಭಿನ್ನನಾಗಿ ಕಂಡುಬರುವೆ. ವಾಸ್ತವ ಸ್ಥಿತಿಯನ್ನು ಪರ್ಯಾಲೋಚಿಸಲು ಕಾರಣಭೂತನು ನೀನೊಬ್ಬನಲ್ಲದೆ ನಿನಗಿಂತಲೂ ಬೇರೆ ಯಾರೂ ಇಲ್ಲವು. ಆದುದರಿಂದಲೇ ' ಏಕಮೇವಾದ್ವಿತೀಯಂ, ನೇಹ ನಾನಾಸ್ತಿಕಿಂಚನ" ಆ ಪರತತ್ವವು ಒಂದೇ ಅಲ್ಲದೇ ಆತನಿಗೆ ಸಮನಾದ ಬೇರೊಂದು ವಸ್ತುವೇ ಇಲ್ಲವು. ಇಲ್ಲಿ ಭೇದಶಂಕೆಗೂ ಕೂಡ ಅವ ಕಾಶವಿಲ್ಲವು. ಎಂಬುದಾಗಿ ಶ್ರುತಿಗಳು ಘಂಟಾ ಘೋಷವಾಗಿ ಸಾರುತ್ತಿರುವುವು. ಆದುದರಿಂದಲೇ ನಿನ್ನನ್ನು ಅದ್ವಿತೀಯನೆಂದು ಹೇಳುವರು. ಪೃಥಿವ್ಯಾದಿ ಭೂತ ಸಮುದಾಯಕ್ಕೆ ಕಾರಣಭೂತಗಳೆನಿಸಿದ ಭೂತ ಸೂಕ್ಷ್ಮರೂಪದಿಂದ ಆವಿರ್ಭವಿಸಿ ಆ ಭೂತರೂಪಗಳನ್ನುಂಟುಮಾಡುವ ವನೂ ಕೂಡ ನೀನೇ ಆಗಿರುವೆ. ಮಹಾ ಭೂತ ಸಮುದಾಯ ರೂಪದಿಂದಲೂ ಕೂಡ ನೀನೇ ಸಕಲ ಜಗತ್ತನ್ನೂ ಆವರಿಸಿರುವೆ ಇಂತಹ ಮಹಾ ಮಹಿಮ ಸಂಪನ್ನನೆನಿಸಿ, ಅಚಿಂತ್ಯಾದ್ಭುತ ಶಕ್ತಿಯಿಂದೊಡಗೂಡಿ ಚರಾಚರ ರೂಪದಿಂದ ಈ ಈರೇಳುಲೋಕಗಳನ್ನೂ ವ್ಯಾಪಿಸಿಕೊಂಡಿರುವ ನಿನಗೆ ನಾನು ಬಾರಿಬಾರಿಗೂ ಸಾಷ್ಟಾಂಗಪ್ರಣಾಮವಂಗೈವೆನು ॥೬೯॥ ಯಮಾದಿ ಯೋಗಸಂಪನ್ನರೆನಿಸಿದ ಮುಮುಕ್ಷುಗಳು ತಮ್ಮ ಹೃದಯಾರವಿಂದದಲ್ಲಿ ನಿನ್ನನ್ನು ನೆಲೆಗೊಳಿಸಿ ಧ್ಯಾನಮಾಡುವ ಕಾಲದಲ್ಲಿ ನೀನು, ಪ್ರಧಾನವೆನಿಸುವ ಮೂಲಪ್ರಕೃತಿ, ಪುರುಷ, ಬ್ರಹ್ಮಾಂಡ, ಚತುರ್ಮುಖನೆನಿಸಿದ ಕಾರಣ ಬ್ರಹ್ಮ, ಮನು ಮೊದಲಾದ ರೂಪಗಳಿಂದ ಕಾಣುವೆ. ಅಂತೆಯೇ ಉಪಾಧ್ಯಭಿಮಾನಿಗಳೆನಿಸಿದ ಕಾರಣ, ಕ್ಷೇತ್ರಜ್ಞರೆಂದು ಕರೆಯಿಲ್ಪಡುವ ಪುರುಷರು (ಜೀವರು) ತಮ್ಮ ತಮ್ಮ ಕಾಲಕರ್ಮ ಸಂಯೋಗಾನುಸಾರ ತಾವು ನಾಶಹೊಂದುತ್ತಿದ್ದರೂ ಕೂಡ ನೀನು ಮಾತ್ರ ನಾಶರಹಿತನಾಗಿಯೇ ಕಾಣಿಸುವೆ. ಅಂದರೆ ಪ್ರಕೃತಿ ಮೊದಲಾಗಿ ಎಲ್ಲವೂ ನಾಶವನ್ನು ಅವಶ್ಯಕವಾಗಿಯೂ ಹೊಂದಿಯೇ ತೀರಬೇಕು. ಇಂತು ಆ ಪ್ರಕೃತ್ಯಾದಿಗಳು ನಾಶವನ್ನೈದುತ್ತಿದ್ದರೂ, ನೀನು ಮಾತ್ರ ನಿರ್ವಿಕಾರನಾಗಿ ಕಮಲಪತ್ರದ ಮೇಲೆ ನಿಂತಿರುವ ಜಲಬಿಂದುವಿನಂತೆ

ರುಷೇ ಸ್ವಾಕ್ಷಯೋ ಭವಾ ॥೭೦॥ಸರ್ವಸ್ಮಿನ್ಸರ್ವಭೂತಸ್ತ್ವಂ ಸ
ರ್ವಸ್ಸರ್ವ ಸ್ವರೂಪಧೃತ್ । ಸರ್ವಂತ್ವತ್ತ ಸ್ತತಶ್ಚತ್ವಂ ನಮಸ್ಸರ್ವಾ
ತ್ಮನೇಽಸ್ತುತೇ ॥೭೧॥ ಸರ್ವಾತ್ಮಕೋ ಽಪಿ ಸರ್ವೇಶ ! ಸರ್ವಭೂತ
ಸ್ಥಿತೋ ಯತಃ । ಕಥಯಾಮಿ ತತಃ ಕಿಂತೇ ? ಸರ್ವಂವೇತ್ಸಿ ಹೃ

ಯಾವುದಕ್ಕೂ ಒಳಗಾಗದೆ ನಿರ್ಲಿಪ್ತನೆನಿಸಿ ಸಾಕ್ಷಿಭೂತನಾಗಿ ಕಂಗೊಳಿ
ಸುತಿರುವೆ. ಇಂತಹ ಪರಮೈಶ್ವರ್ಯಶಾಲಿಯಾದ ನಿನ್ನನ್ನು ನಾನು ಬಾರಿ
ಬಾರಿಗೂ ಭಕ್ತಿ ಶ್ರದ್ಧೆಗಳಿಂದೊಡಗೂಡಿ ವಂದಿಸುವೆನು ॥೭೦॥ ದೇವ,
ತಿರ್ಯಕ್,ಮಾನುಷ,ಮೊದಲಾದ ಎಲ್ಲ ದೇಹಗಳಲ್ಲಿಯೂ ಆ ಆ ಕ್ಷೇತ್ರಜ್ಞ
(ಅಂತರ್ಯಾಮಿ ಎನಿಸಿದ ಜೀವ) ರೂಪದಿಂದ ನೀನೆಲ್ಲವನ್ನೂ ವ್ಯಾಪಿಸಿರು
ವೆ. ಮತ್ತು ಆ ಆ ದೇಹರೂಪದಿಂದ ಕಾಣುವವನೂ ಕೂಡ ನೀನೇ ಆಗಿ
ರುವೆ. ನೀನು ಸರ್ವಾಂತರ್ಯಾಮಿ ಎನಿಸಿ ಜೀವನಾಜೀವನ ರೂಪದಿಂದಿ
ರುವ ಕಾರಣ ಕ್ಷೇತ್ರವೆನಿಸುವ ದೇಹವೂ, ಕ್ಷೇತ್ರಜ್ಞನೆನಿಸಿದ ಜೀವನೂ
ಕೂಡ ನೀನಲ್ಲದೆ ಬೇರೆ ಯಾರು ? ಅಣು, ರೇಣು, ತೃಣ, ಕಾಷ್ಠ ವೇ ಮೊದ
ಲಾದ ನಿರ್ಜೀವ ವಸ್ತುಗಳೂ, ಇರುವೆ, ಪಕ್ಷಿ ಮೊದಲಾದ ತಿರ್ಯಗ್ಜಂ
ತು ಜಾಲವೂ, ಮಾನುಷ ಮೊದಲಾದ ಜ್ಞಾನಯುಕ್ತ ಪ್ರಾಣಿವರ್ಗವೂ
ಕೂಡ ನಿನ್ನಿಂದಲೇ ಉತ್ಪನ್ನವಾದುದು. ಆದುದರಿಂದಲೇ ನಿನ್ನನ್ನು ಸ
ರ್ವಾತ್ಮಕನೆಂತಲೂ, ಸರ್ವಾಂತರ್ಯಾಮಿ ಎಂತಲೂ ಕರೆವರು. ಇಲ್ಲಿ ಧ್ರು
ವನು ಸ್ತೋತ್ರಮಾಡಿದಂತೆ:-ಹಿರಣ್ಯಗರ್ಭಾದಿಗಳುಮಾತ್ರ ಆ ಪರಮಾತ್ಮ
ನ ಅಂಶದಿಂದುತ್ಪನ್ನರಾದವರೇ ಹೊರತು, ಆ ಹಿರಣ್ಯಗರ್ಭನು ಸೃಜಿಸಿ
ದ ಈ ಪ್ರಪಂಚವೆಲ್ಲವೂ ಆ ಪರಮಾತ್ಮನಿಂದಲೇ ಪುಟ್ಟಿತೆಂದು ಹೇಳುವು
ದೆಂತು?" ಎಂಬದಾಗಿ ಆಕ್ಷೇಪಿಸಿದೊಡೆ, ಹಿರಣ್ಯಗರ್ಭಾದಿಗಳು ಆ ಪರ
ಮಾತ್ಮನಿಂದುದಯಿಸಿದವರೆಂದು ಹೇಳುವುದು ನಿರಾಕ್ಷೇಪವು. ಅಂತೆಯೇ
ಆ ಹಿರಣ್ಯಗರ್ಭನಿಂದುಂಟಾದ ಈ ಭೂತವರ್ಗವೂ ಕೂಡ ಆ ಪರಮಾ
ತ್ಮನಿಂದಲೇ ಜನಿಸಿದುದೆಂತಲೇ ಹೇಳಬೇಕು. "ಅಂಗಾದಂಗಾತ್ಸಂಭ
ವಸಿ, ಹೃದಯಾದಭಿಜಾಯಸೇ, ಆತ್ಮಾ ವೈ ಪುತ್ರನಾಮಾಸಿ"
ಇತ್ಯಾದಿ ಶ್ರುತಿಗಳು, ತಂದೆಯೇ ಮಗನ ರೂಪದಿಂದುದಯಿಸುವನಲ್ಲದೆ
ಬೇರೊಂದು ಭೂತವು ಉತ್ಪನ್ನವಾಗುವದಿಲ್ಲವೆಂದು ಸಾರುತ್ತಿರುವುವು.
ಅಂತೆಯೇ ಎಲ್ಲ ಭೂತ ಸೃಷ್ಟಿಗೂ ಕೂಟಸ್ಥನೆನಿಸಿದ ಪರಮಾತ್ಮನೇ ಎ

ದಿಸ್ಥಿತಂ ॥೭೨॥ ಸರ್ವಾತ್ಮಕ ! ಸರ್ವಭೂತೇಶ ! ಸರ್ವಸತ್ವ ಸಮುದವ ! । ಸರ್ವಭೂತೋ ಭವಾ ವೇತ್ತಿ ಸರ್ವ ಸತ್ವ ಮನೋರಥಂ ॥೭೩॥ ಯೋ ಮೇ ಮನೋರಥೋ ನಾಥ ! ಸಫಲಸ್ತ್ವಯಾ ಕೃತಃ । ತಪಶ್ಚ ತಪ್ತಂ ಸಫಲಂ ಯದ್ದೃಷ್ಟೋಽಸಿ ಜಗತ್ಪತೇ ! ॥

ಲ್ಲಕ್ಕೂ ಸೃಷ್ಟಿಕಾರಣನೆಂಬದಾಗಿ ಹೇಳುವುದು ನಿರಾಕ್ಷೇಪವೆಂಬದಾಗಿ ಶ್ರೀಶ್ರೀಧರಿಯವ್ಯಾಖ್ಯಾನುಸಾರವಾದ ಅರ್ಥವು (ಪೃಥಿವಿ,ಅಪ್ಪು,ತೇಜಸ್ಸು ವಾಯು, ಆಕಾಶಗಳೆಂಬ ಪಂಚಭೂತಗಳೂ,ಗಂಧ, ಶೈತ್ಯ, ಔಷ್ಣ್ಯ ಸ್ಪರ್ಶ,ಶಬ್ದಗಳೆಂಬ ಐದು ಗುಣಗಳೂ, ಬ್ರಹ್ಮಾದಿಪಿಪೀಲಿಕಾಂತ ವಸ್ತು ಜಾಲದಿಂದೊಡಗೂಡಿದ ಈ ಜಗತ್ತು, ಈ ಜಗತ್ತಿಗೆ ಉಪಾದಾನಕಾರಣವೂ, ನಿಮಿತ್ತ ಕಾರಣವೂ, ಜನಕ,ಪಾಲಕ, ಸಂಹಾರಕನೂ, ಪರಮಾತ್ಮನೇ ಆಗಿರುವನು ಇದೇ ವಿಷಯವನ್ನೇ ಶಬ್ದಃಖೇ, ಪೌರುಷಂ ನೃಷು, ತೇಜಶ್ಚಾಸ್ಮಿವಿಭಾವಸೌ । ಎಲೈ ಅರ್ಜುನನೆ , ನಾನು ಆಕಾಶದಲ್ಲಿ ಶಬ್ದವೆಂಬ ಗುಣರೂಪನೆನಿಸಿರುವೆನು. ಮನುಷ್ಯರಲ್ಲಿ ಪೌರುಷ (ಪುರುಷ ಪ್ರಯತ್ನ)ರೂಪದಿಂದಿರುವೆನು ಅಗ್ನಿಯಲ್ಲಿ ತೇಜೋರೂಪದಿಂದಿರುವೆನು. ಇತ್ಯಾದಿ ಗೀತಾವಾಕ್ಯಗಳು ಪರಿಪೋಷಿಸುತ್ತಿರುವುವು ಆದುದರಿಂದ, ಇದರಲ್ಲಿ ಕಾಣು ಬರುವ ಸಕಲ ವಸ್ತುಗಳೂ, ಅಂತಹ ಪ್ರಪಂಚವನ್ನೂ ಅವಸ್ತುಗಳನ್ನೂ ಸಹ ಉಂಟುಮಾಡಿದವನೂ ನೀನೇ ಆಗಿರುವೆ, ಎಂಬದಾಗಿ ಶ್ರೀವಿಷ್ಣು ಚಿತ್ತೀಯವ್ಯಾಖ್ಯಾನು ಸಾರವಾದ ಅರ್ಥವು) ॥

ಧ್ರುವನು ಈ ರೀತಿಯಿಂದ ತನಗೆ ಪ್ರಸನ್ನನಾದ ಪರಮಾತ್ಮನನ್ನು ಹೊಗಳಿ, ಆಸ್ತೋತ್ರವನ್ನು ನಿಗಮನ (ಪರಿಪೂರ್ತಿ) ಮಾಡಲು ಈ ರೀತಿ ಪ್ರಾರ್ಥಿಸುತ್ತಾನೆ-ಓಪರಮಾತ್ಮನೇ ; ಸರ್ವಭೂತಾಂತರ್ಯಾಮಿಯಾದುದರಿಂದ ಸರ್ವಾತ್ಮಕನೆನಿಸಿರುವೆ. ಇಂತಿರಲು ನೀನು ಎಲ್ಲರ ಹೃದಯವನ್ನೂ ಚನ್ನಾಗಿ ತಿಳಿದವನಾಗಿರುವಿ ಆದಕಾರಣ ನಾನು ನಿನ್ನನ್ನು ಏನೆಂದು ಬೇಡಿಕೊಳ್ಳಲೇ ! ॥೭೨॥ ಎಲೈ ಸರ್ವಾತ್ಮಕನೆ ; ಸರ್ವಾಂತರ್ಯಾಮಿಯೆ ; ಸರ್ವಜನಕನೆ ; ಎಲ್ಲರ ಮನಸ್ಸಿನಲ್ಲಿರುವ ಕೋರಿಕೆಗಳನ್ನೂ ವಿಶದವಾಗಿ ತಿಳಿದಿರುವ ನಿನ್ನ ಸನ್ನಿಧಿಯಲ್ಲಿ ನಾನು ಏನೆಂದು ಬೇಡಿಕೊಳ್ಳಲಿ ॥೭೩॥ ಎಲೈ ಸಕಲ ಜಗನ್ನಾಯಕನೆನಿಸಿದವನೆ ; ಇಂದೀಗ ನಾನು ನಿನ್ನ ಪಾದಾರವಿಂದ ದರ್ಶನವನ್ನು ಪ್ರತ್ಯಕ್ಷವಾಗಿ ಅನುಭವಿಸಿ ನಿನ್ನೊಡನೆ ಇಷ್ಟುಕಾಲ ಮಾತ

ಶ್ರೀಭಗವಾನುವಾಚ ॥ ತಪಸಸ್ತ್ವಫಲಂ ಪ್ರಾಪ್ತಂ ಯದ್ದ್ರುಪೋ್ಽ
ಹಂ ತ್ವಯಾ ಧ್ರುವ ! । ಮದ್ದರ್ಶನಂ ಹಿ ವಿಫಲಂ ರಾಜಪುತ್ರ !
ನಜಾಯತೇ ॥೨೫॥ ವರಂವರಯ ತಸ್ಮಾತ್ತ್ವಂ ಯಥಾಭಿಮತ
ಮಾತ್ಮನಃ । ಸರ್ವಂ ಸಂಪದ್ಯತೇ ಪುಂಸಾಂ ಮಯಿದೃಷ್ಟ್ಯಪಥಂಗ

ನಾಡಿದ ಕಾರಣ ನನ್ನ ಕೋರಿಕೆಗಳೆಲ್ಲವಂ ನೀನು ಸಫಲ ಗೊಳಿಸಿದಂತೆ. ಯಿತು. ನಾನು ಇದುವರೆಗೂ ಶ್ರಮಪಟ್ಟು ಮಾಡಿದ ತಪಸ್ಸೆಲ್ಲವೂ ಸಾರ್ಥಕವಾಯಿತು. ನನ್ನ ಮನೋರಥವು ಈಡೇರಿತು. ನಿನ್ನನ್ನು ಹೊಗಳಲು ಶಕ್ತಿಹೀನನಾಗಿದ್ದ ನಾನು ನಿನ್ನನ್ನು ಬೇಡಿಕೊಂಡಂತೆ ನೀನುನನಗೆ ಸ್ತೋತ್ರಮಾಡಲು ಸಾಮರ್ಥ್ಯವಂ ದಯಪಾಲಿಸಿದುದೇ ಇದಕ್ಕೆ ನಿದರ್ಶನವಾಗಿರುವುದು ॥೨೪॥

ಇಂತು ಧ್ರುವನು ಪರಮಾತ್ಮನಂ ನಾನಾಬಗೆಯಿಂದ ಹೊಗಳಿ ಸುಮ್ಮನಾಗಲು, ತರುವಾಯ ಪಡ್ಗುಣೈಶ್ವರ್ಯ ಸಂಪನ್ನನೆನಿಸಿದ ಪರಮಾತ್ಮನು ಹೇಳತೊಡಗಿದನು-ಎಲೈ ರಾಜಕುವರನಾದ ಧ್ರುವನೆ , ನೀನು ಬಹುಕಾಲದಿಂದಲೂ ಇಲ್ಲಿ ಘೋರವಾಗಿ ತಪವನ್ನಾಚರಿಸಿ ನನ್ನನ್ನು ಪ್ರತ್ಯಕ್ಷಗೊಳಿಸಿಕೊಂಡೆಯಾದುದರಿಂದ ನಿನ್ನ ತಪವೆಲ್ಲವೂ ಸಾರ್ಥಕಮಾದುದು. ನಿನ್ನ ಎನೋರಥಗಳು ಈಡೇರುವುದರಲ್ಲಿಯೂ ಸಂದೇಹವಿಲ್ಲ. ನನ್ನದರ್ಶನವು ದೊರೆತೊಡೆ ಭಜಕರಕೋರಿಕೆಗಳು ಎಂದಿಗೂ ವಿಫಲಗಳಾಗಲಾರವು. ನನ್ನ ದರ್ಶನವು ವ್ಯರ್ಥವಾದುದಲ್ಲ ॥೨೫॥ ಆದುದರಿಂದ ನಿನ್ನ ಮನಸ್ಸಿಗೆ ಬೇಕಾದವರವಂ ಬೇಡು. ಮನುಷ್ಯನು ನನ್ನನ್ನು ಗೋಚರಿಸಿಕೊಂಡೊಡೆ ಎಲ್ಲ ಮನೋರಥಗಳೂ ತಾನಾಗಿಯೇ ಅವನಿಗೆ ಈಡೇರುವುವು. ಆದುದರಿಂದ ಈಗನಿನಗೆ ಲಬ್ಧಗಳಾಗಿರುವ ಐಹಿಕಫಲಗಳನ್ನು ಳದು ಪಾರಲೌಕಿಕಗಳೆನಿಸಿದ ನನ್ನ ಸಾಲೋಕ್ಯ, ಸಾರೂಪ್ಯ, ಸಾಯುಜ್ಯವೊದಲಾದ ಮುಕ್ತಿಗಳಲ್ಲಿ ಯಾವುದನ್ನಾದರೂ ಬೇಡುವಂತಿದ್ದರೆ ಕೇಳಿಕೊಳ್ಳುವವನಾಗು (ಸಾಲೋಕ್ಯವೆಂದರ ಆಪರಮಾತ್ಮನೊಡನೆ ವೈಕುಂಠ, ಕೈಲಾಸಾದಿಗಳಲ್ಲಿ ವಾಸಮಾಡುವಿಕೆ ಎಂದರ್ಥವು. ಸಾರೂಪ್ಯವೆಂದರೆ ಆತನರೂಪಕ್ಕೆ ಸದೃಶವಾದ ರೂಪವನ್ನು ತಾನೂ ಹೊಂದುವಿಕೆ, ಸಾಯುಜ್ಯವೆಂದರೆ ಆಪರಮಾತ್ಮನಲ್ಲಿಯೇ ತಾನು ಲೀನವಾಗುವಿಕೆ ಸೇರಿಹೋಗುವಿಕೆ) ಎಂದರ್ಥವು. ಇಂತಹವುಗಳು ಯಾವವಾದರೂ ಬೇಕಾ

ತೇ ॥೭೬॥ ಧ್ರುವಃ ॥ ಭಗವ! ಸರ್ವಭೂತೇಷ ! ಸರ್ವಸ್ಯಾಸ್ತೇ ಭವಾ ಹೃದಿ। ಕಿಮಜ್ಞಾತಂ ತವ? ಸ್ವಾಮಿ ! ಮನಸಾ ಯು ನ್ಮಯೇಪ್ಸಿತಂ ॥೭೭॥ ತಥಾಪಿತುಭ್ಯಂ ದೇವೇಶ ! ಕಥಯಿಷ್ಯಾಮಿ ಯನ್ಮಯಾ ! ಪ್ರಾರ್ಥ್ಯತೇ ದುರ್ವಿನೀತೇನ ಹೃದಯೇನಾತಿ ದುರ್ಲ ಭಂ ॥೭೮॥ ಕಿಂವಾಸರ್ವಜಗತ್ಸ್ರಷ್ಟಃ ! ಪ್ರಸನ್ನೇ ತ್ವಯಿ ದು ರ್ಲಭಂ ? । ತ್ವತ್ಪ್ರಸಾದಫಲಂ ಭುಜ್ಯೇ ತ್ರೈಲೋಕ್ಯಂ ಮಘ

ದೊಡೆ ಬೇಡಿಕೊಳ್ಳುವವನಾಗೆಂದು ಭಾವವು ॥೭೭॥ ಇಂತು ಪರಮಾತ್ಮ ನು ಹೇಳಿದ ಬಳಿಕ, ಧ್ರುವನು ಶ್ರೀವಾಸುದೇವನನ್ನು ಕುರಿತು ಹೇಳ ತೊಡಗಿದನು-ಎಲೈ ಸರ್ವಾಂತರ್ಯಾಮಿಯೆ ; ನೀನು ಎಲ್ಲರ ಹೃದಯದಲ್ಲಿ ಯೂ ನೆಲೆಸಿರುವ ಕಾರಣ ಯಾರಯಾರ ಮನಸ್ಸಿನಲ್ಲಿ ಏನೇನು ಕೋರಿ ಕೆಯುಂಟೆಂದು ನೀನು ತಿಳಿದೇ ಇರುವಿ, ಇಂತಿರಲು ನನ್ನ ಕೋರಿಕೆಯಾ ವುದೆಂಬುದು ನಿನಗೆ ತಿಳಿಯಲಿಲ್ಲವೆ ? ಇಂತಿದ್ದರೂ ಕೂಡ ನೀನು ಏನೂ ತಿಳಿಯದಪ್ರಾಕೃತನಂತೆ ನನ್ನನ್ನು ಬಾರಿಬಾರಿಗೂ ಪ್ರಶ್ನೆಮಾಡುವಿಯಾದು ದರಿಂದ ನನ್ನ ಮನೋಗತವನ್ನು ತಿಳಿಸುವೆನು. ಕೇಳು. ನೀನೇ ನನಿಗೆ ಈ ಪರಿಹೇಳಿಕೊಟ್ಟಾಗ್ಗೂ ಕೂಡ ಈಗಲೂ ನನಿಗೆ ಸಾಲೋಕ್ಯಾದಿ ಮುಕ್ತಿ ಗಳಲ್ಲಿ ಮನಸ್ಸಿಲ್ಲವು ನೀನು ಅದನ್ನೂ ಕೂಡ ತಿಳಿದು ಕೊಂಡೇ ಇದ್ದೀ ಯೆ. ಎಲೈ ದೇವದೇವನೇ ; ಎಷ್ಟು ಬಾರಿ ಶಿಕ್ಷಿಸಿದಾಗ್ಗೂ ದಾರಿಗೆ ಬಾ ರದಿರುವ (ಸುರಚಿಯಮಾತನ್ನು ಮರೆತು ಬಿಡೋಣವೆಂದು ಮನಸ್ಸಿನಲ್ಲಿ ಎಷ್ಟೆಷ್ಟು ಪ್ರಯತ್ನಮಾಡಿದರೂ ಮರೆಯುವುದು ಅಸಾಧ್ಯವಾಗಿರುವ) ಕಾರಣ ದುರ್ವಿನೀತವೆನಿಸಿದ ಈ ನನ್ನ ಮನಸ್ಸು ಯಾರಿಂದಲೂ ಹೊಂ ದಲಸಾಧ್ಯವಾಗಿರುವ ಮಹಾಪದವಿಯನ್ನು ತಾನು ಮಾತ್ರಹೊಂದಬೇಕೆಂ ಬದಾಗಿ ಪ್ರಯತ್ನಪಟ್ಟು ನಿನ್ನನ್ನು ನೋಡಿದ ಮೊದಲ್ಗೊಂಡು ತವಕಪಡು ತ್ತಿರುವುದು. ನನ್ನ ಅಪರಾಧವನ್ನು ಮನ್ನಿಸು॥೭೭॥೭೮॥ಎಲೈ ಸಕಲ ಜಗ ನ್ನಾಯಕನೆ; ನೀನು ಪ್ರಸನ್ನನಾಗಿ ವರವಂ ದಯಪಾಲಿಸುತ್ತೇನೆಂಬದಾಗಿ ಹೇಳುತ್ತಿರುವಾಗ್ಗೆ ಏನು ತಾನೇ ದುರ್ಲಭವಾಗಿರುವುದು? ತ್ರಿಲೋಕಾಧಿ ಪತಿಎನಿಸಿದ ಇಂದ್ರನೂ ಕೂಡ ನಿನ್ನ ಅನುಗ್ರಹವಂಪೆಡೆದು,ಆ ನಿನ್ನ ಅನು ಗ್ರಹಕ್ಕೆ ಫಲರೂಪವಾದ ತ್ರೈಲೋಕ್ಯಾಧಿಪತ್ಯವಂ ಅನುಭವಿಸುತಿರುವ ನಲ್ಲದೆ ಆತನಿಗೆ ಅಂತಹ ಯೋಗ್ಯತೆಯುು ಎಲ್ಲಿಯದು ? ಇದೆಲ್ಲವೂ ನಿನ್ನ

ವಾನಪಿ ॥೭೯॥ ನೈತದ್ರಾಜಾಸನಂ ಯೋಗ್ಯ ಮಜಾತಸ್ಯ ಮಮೋ
ದರಾತ್। ಇತಿ ಗರ್ವಾ ದವೋಚನ್ಮಾಂ ಸಪತ್ನೀಮಾತು ರಜ್ಯತ! ॥
ಆಧಾರಭೂತಂ ಜಗತ ಸ್ಸರ್ವೇಷಾ ಮುತ್ತಮೋತ್ತಮಂ। ಪ್ರಾರ್ಥ
ಯಾಮಿ ಪ್ರಭೆ ೀ! ಸ್ಥಾನಂ ತ್ವತ್ಪ್ರಸಾದತೋಽವ್ಯಯಂ ॥೮೦॥ಶ್ರೀ
ಭಗವಾನುವಾಚ॥ಯತ್ತ್ವಯಾ ಪ್ರಾರ್ಥಿತಂ ಸ್ಥಾನಮೇತತ್ಪ್ರ

ಅನುಗ್ರಹದ ಫಲವೇ ಅಲ್ಲವೆ ? ಇಂತಿರಲು ನನ್ನ ಕೋರಿಕೆಯನ್ನು ಒದಗಿ
ಸುವುದು ನಿನಗೊಂದು ದೊಡ್ಡದೇ ? ॥೭೯॥ ಬ್ರಹ್ಮಾದಿಗಳಿಂದಲೂ ಕೂಡ
ಹೊಂದಲು ಅಸಾಧ್ಯವಾದ ನನ್ನ ಸಾಲೋಕ್ಯಾದಿಗಳನ್ನು ಬಿಟ್ಟು ತ್ರೈಲೋ
ಕ್ಯಾಂತರ್ಗತವಾದ ಸ್ಥಾನವನ್ನೇ ಏತಕ್ಕೆ ಬಯಸುವಿ, ಎಂಬದಾಗಿ ಪರ
ಮಾತ್ಮನು ಕೇಳಬಹುದೆಂಬದಾಗಿ ಶಂಕಿಸಿ ಧ್ರುವನು ತಾನು ಪ್ರಾರ್ಥಿ
ಸಿದುದಕ್ಕೆ ಕಾರಣವನ್ನು ತಿಳಿಯ ಪಡಿಸುತ್ತಾನೆ.-ಎಲೈ ನಾಶರಹಿತನೆ ;
ನನ್ನ ತಾಯಿಯು ಸವತಿಯು ಅತ್ಯಂತ ಗರ್ವಯುಕ್ತಳಾಗಿ ನನ್ನನ್ನು ಕು
ರಿತು, ,,ನೀನು ನನ್ನ ಹೊಟ್ಟೆಯಿಂದ ಜನಿಸಿದವನಲ್ಲ. ಆದುದರಿಂದ ಈ
ರಾಜಾಸನಕ್ಕೆ ನೀನು ಅರ್ಹನಲ್ಲ,, ಎಂಬದಾಗಿ ನಾನಾಪರಿಯಿಂದ ಧಿಕ್ಕ
ರಿಸಿ ಮಾತನಾಡಿದಳು. ॥೮೦॥ ಎಲೈ ಪ್ರಭುವರ್ಯನೆ , ಆದುದರಿಂದ ಸಕಲ
ಜಗತ್ತಿಗೂ ಆಧಾರಭೂತವೆ ಸಿ, ಸರ್ವೋತ್ತಮವಾದ ಸ್ಥಾನವನ್ನು ನಾ
ನು ಪೊಂದಲು ಬೇಡುವೆನು. ಈ ಸ್ಥಾನದಲ್ಲಿ ಕೆಲವು ಕಾಲವಿದ್ದ ಬಳಿಕ
ಮೋಕ್ಷವೂ ನನಿಗೆ ದೊರೆಯುವಂತೆ ಈ ಎರಡುವರಗಳನ್ನೂ ಬೇಡಿಕೊ
ಳ್ಳುವೆನು. ಇವನ್ನು ಈಡೇರಿಸುವ ಭಾರವು ನಿನ್ನದು (ನಿನ್ನದರ್ಶನವು
ನನಿಗೆ ದೊರೆತಕಾರಣ ಮೊದಲೇ ನಿನ್ನ ಸಾಲೋಕ್ಯಾದಿಗಳನ್ನು ಬೇಡು
ವುದೇ ಉಚಿತವಾಗಿದ್ದರೂ ನನ್ನ ಬಲತಾಯಿಯ ಗರ್ವಭಂಗಕ್ಕೋಸುಗ
ಉತ್ತಮೋತ್ತಮವಾದ ಸ್ಥಾನದಲ್ಲಿ ನಾನು ಕೆಲವು ಕಾಲ ಆಧಿಪತ್ಯವ
ಮಾಡಿ ತರುವಾಯ ಸಾಲೋಕ್ಯಾದಿಗಳಿಂ ಹೊಂದುವಂತೆ ನೀನು ಅನು
ಗ್ರಹಿಸಬೇಕೆಂದು ಭಾವವು) ॥೮೧॥ ನಾರಾಯಣನು ಹೇಳತೊಡಗಿದನು-
ಎಲೈ ಪಸುಳೆಯೆ , ಮನುಷ್ಯನು ತಾನು ಪೂರ್ವಜನ್ಮದಲ್ಲಿ ಮಾಡಿದ ಫಲ
ವನ್ನನುಭವಿಸಿಯೇ ತೀರಬೇಕು. ಕಳೆದ ಜನ್ಮದಲ್ಲಿ ನೀನು ನನ್ನನ್ನು
ನಾನಾಬಗೆಯಿಂದ ಸಂತೋಷಗೊಳಿಸಿರುವೆ. ಆದರೆ ಯಾವುದೋ ಒಂ

ಪ್ಸ್ಯತಿ ವೈ ಭವಾ೯ । ತ್ವಯಾ ಽ ಹಂ ತೋಷಿತಃ ಪೂರ್ವ ಮನ್ಯ
ಜನ್ಮನಿ ಬಾಲಕ ! ॥೪॥ ತ್ವಮಾಸೀ ರ್ಬ್ರಾಹ್ಮಣಃ ಪೂರ್ವಂ
ಮಯ್ಯೇಕಾಗ್ರಮನಾ ಸ್ಸದಾ । ಮಾತಾ ಪಿತ್ರೋಶ್ಚ ಶುಶ್ರೂಷು
ರ್ನಿಜಧರ್ಮಾನುಪಾಲಕಃ ॥೫॥ ಕಾಲೇನ ಗಚ್ಛತಾ ವಿತ್ರಂ ರಾ
ಜಪುತ್ರ ಸ್ತವಾ ಭವತ್ । ಯೌವನೇ ಽಖಿಲಭೋಗಾಢ್ಯೋ ದರ್ಪ

ದು ವಿಘ್ನವು ಬದಗಿದ ಕಾರಣ ನೀನು ಈಗ ರಾಜಪುತ್ರನಾಗಿ ಜನಿಸಿರುವೆ ಆದುದರಿಂದಲೇ ಅದಕ್ಕೆ ತಕ್ಕಂತೆ ಫಲವಂ ಬೇಡಿದೆ. ನನ್ನ ಅನುಗ್ರಹವಂ ನೀನು ಪಡೆದವನಾದುದರಿಂದಲೇ ಈ ಸ್ಥಾನದಲ್ಲಿಯೂ ನಿನಗೆ ತೃಪ್ತಿಯಿಲ್ಲದೆ ಕೆಲವು ಕಾಲ ಮಾತ್ರ ಈ ಪದವಿಯನ್ನನುಭವಿಸಿ ಬಳಿಕ ಸಾಯುಜ್ಯವನ್ನು ಕೋರುವಿ. ಆದಕಾರಣ ಕೆಲವು ಕಾಲದ ಮಟ್ಟಿಗೆ ಈ ಫಲವನ್ನನುಭವಿಸಿ ಬಂದು ಕಲ್ಪವು ಮುಗಿಯುವವರೆಗೂ ಧ್ರುವಪದವಿಯಲ್ಲಿದ್ದು ಆ ಬಳಿಕ ನಿನ್ನ ತಾಯಿಯೊಡನೆ ನನ್ನನ್ನು ಬಂದುಸೇರುವಿ ॥೪॥ ಎಲೈ ಧ್ರುವನೆ ; ನಿನ್ನ ಕಳೆದ ಜನ್ಮದ ಕಥೆಯನ್ನು ಹೇಳುವೆನು ಕೇಳು. ಪೂರ್ವದಲ್ಲಿ ನೀನು ಬ್ರಾಹ್ಮಣನಾಗಿ ಪುಟ್ಟಿ, ನಿರಂತರವೂ ನನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಯನ್ನಿರಿಸಿ, ಅನವರತವೂ ಏಕಚಿತ್ತತೆಯಿಂದ ನನ್ನನ್ನೇ ಭಜಿಸುತ್ತಾ, ಆ ಆಕಾಲಗಳಲ್ಲಿ ಜನನೀ ಜನಕರನ್ನು (ಶುಶ್ರೂಷೆ) ಉಪಚರಿಸುತ್ತಾ, ಬ್ರಾಹ್ಮಣ ಧರ್ಮವನ್ನು ಸರಿಯಾಗಿ ಕಾಪಾಡಿಕೊಂಡು, ಪರಮಭಕ್ತಾಗ್ರೇಸರನಾಗಿದ್ದೆ ॥೫॥ ಹೀಗೆಯೇ ಕೆಲವು ಕಾಲ ಕಳೆದ ಬಳಿಕ ಯೌವನವು ಪ್ರಾಪ್ತವಾದೊಡೆ, ನಾನಾಬಗೆಗಳಾದ ದಿವ್ಯಭೋಗಗಳನ್ನನುಭವಿಸುತ್ತಾ, ಮನ್ಮಥನಂತೆ ಮನೋಹರವಾದ ದೇಹಕಾಂತಿಯಿಂದೊಡಗೂಡಿ, ಮಹದೈಶ್ವರ್ಯ ಸಂಪನ್ನನಾದ ಒಬ್ಬ ರಾಜಪುತ್ರನೊಡನೆ ಅಕಸ್ಮಾತ್ತಾಗಿ ನಿನಗೆ ಸ್ನೇಹವು ಬಳೆದುದು ॥೬॥ ಇಂತು ಆ ರಾಜಪುತ್ರನ ಸಹವಾಸದಿಂದ ಆತನ ಬಳಿಗೆ ಆಗಿಂದಾಗ್ಗೆ ಹೋಗಿ ಬರುವ ಕಾಲದಲ್ಲಿ ಅಪರಿಮಿತವಾದ ಆತನ ಸಂಪತ್ತನ್ನು ಕಂಡು ನಾನೂ ಇವನಂತೆ ರಾಜಪುತ್ರನಾಗಿ ಹುಟ್ಟಬೇಕಲ್ಲವೆ ?,, ಎಂಬದಾಗಿ ನಿನ್ನ ಮನಸ್ಸಿಗೆ ತೋರಿತು. (ಇವನಂತೆಯೂ ನಾನೂ ನೃಪನಂದನನಾಗಿ ಪುಟ್ಟಿದರೆ ಅನೇಕ ದಿವ್ಯಭೋಗಗಳನ್ನು ಕೈಕೊಳ್ಳಬಹುದು. ಈತನ ಸಂಪದವು ಅಪಾರವಾದುದು.

ನಿಯೋ ಜ್ವಲಾಕೃತಿಃ ॥೪೪॥ ತತ್ಸಂಗಾತ್ತಸ್ಯ ತಾವೃದ್ಧಿ ಮವ
ಲೋಕ್ಯಾತಿ ದುರ್ಲಭಾಂ । ಭವೇಯಂ ರಾಜಪುತ್ರೋ ೭ ಹ ವಿತಿ
ವಾಂಛಾ ತ್ವಯಾ ಕೃತಾ॥೪೫॥ತತೋ ಯಥಾಭಿಲಷಿತಾ ಪಶ್ಚಾತ್ತಾ
ತೇ ರಾಜಪುತ್ರತಾ। ಉತ್ತಾನಪಾದಸ್ಯ ಗೃಹೇ ಜಾತೋ ೭ ಸಿ ಧ್ರು
ವ! ದುರ್ಲಭೇ ॥೪೬॥ ಅನ್ಯೇಷಾಂ ತತ್ಪರಂ ಸ್ಥಾನಂ ಕುಲೇ ಸ್ವಾ
ಯಂಭುವಸ್ಯ ಯತ್ ॥೪೭॥ ತಸ್ಯೈತತ್ ಪರಂ ಬಾಲ! ಯೇನಾಸ
ಹಂ ಪರಿತೋಷಿತಃ। ಮಾನವಾರಾಧ್ಯ ನರೋ ಮುಕ್ತಿ ಮವಾಪ್ನೋ

ಆದುದರಿಂದ ನಾನೂ ಇ ನಂತೆಯೇ ಸುಖವನ್ನನುಭವಿಸಬೇಕಾದರೆ ರಾ
ಜಕುವರನಾಗಿ ಹುಟ್ಟಬೇಕೆಂಬದಾಗಿ ಅವನು ಮನಸ್ಸಿನಲ್ಲಿ ಎಣಿಸಿದ
ನೆಂದು ಭಾವವು) ॥೪೫॥ ಆಬಳಿಕ ನೀನು ಮನದಲ್ಲಿ ಎಣಿಸಿದಂತೆಯೇ
ರಾಜನಂದನನಾಗಿರುವೆ ಆದರೆ ಹಿಂದಿನ ಜನ್ಮದಲ್ಲಿ ನೀನು ಪರಮಭಾ
ಗವತನಾಗಿದ್ದುದರಿಂದ ಅತ್ಯಂತ ದುರ್ಲಭವೆನಿಸಿದ ಸ್ವಾಯಂಭುವ ಮನು
ವಿನ ವಂಶದಲ್ಲಿ ಉತ್ತಾನಪಾದ ರಾಯನ ಮನೆಯಲ್ಲಿ ಅವನ ಮಗನಾಗಿ
ಜನಿಸಿದೆ. ಇದೇನು ಸಾಮಾನ್ಯವೆಂದೆಣಿಸಬೇಡ ॥೪೬॥ ಎಲೈ ಧ್ರುವನೆ;
ಇತರ ಸಾಮಾನ್ಯ ತಾಪಸರಿಗೆ ಈ ಸ್ವಾಯಂಭುವವಂಶದಲ್ಲಿ ಹುಟ್ಟುವಿ
ಕೆಯಿಂಬುದು ಪರಮ ಶ್ರೇಷ್ಠವೆನಿಸುವುದು. (ಈ ಸ್ವಾಯಂಭುವ ಮನು
ವಿನವಂಶವು ಬಹಳ ಪರಿಶುದ್ಧವಾದುದರಿಂದ ಇಂತಹ ಉತ್ತಮ ವಂಶದಲ್ಲಿ
ಇತರ ತಾಪಸರು ಜನ್ಮವಂ ಹೊಂದಿದರೆ ಏಷ್ಟೋ ಉತ್ತಮನೆಂದುಹೇಳ
ಬಹುದು. ಅಂದರೆ, ಇಂತಹ ವಂಶದಲ್ಲಿ ಹುಟ್ಟುವುದಕ್ಕೆ ಯೋಗ್ಯತೆಯನ್ನು
ಸಂಪಾದಿಸುವಷ್ಟು ನಿಯಮವನ್ನೂ ಇತರ ತಾಪಸರು ಮಾಡಲಾರರೆಂದು
ಭಾವವು) ॥೪೭॥ ಎಲೈ ತರಳನೆ ; ನೀನು ಮಾತ್ರ ಹಿಂದಿನ ಜನ್ಮದಲ್ಲಿ ನನ್ನ
ನ್ನು ಬಹುವಾಗಿ ನಿನ್ನ ತಪಸ್ಸಿನಿಂದ ಸಂತೋಷಪಡಿಸಿದೆಯಾದಕಾರಣ
ನಿನಗೆ ಇದೊಂದು ಉತ್ತವ ವಾದ ಜನ್ಮವು ಲಭಿಸಿತು. ಆದುದರಿಂದ ಇಂ
ತಹ ಉತ್ತಮಜನ್ಮವಂ ಅಲೆಗೆಳೆಯಬೇಡ. ಮನುಜನು ತನ್ನ ಸತ್ಕರ್ಮಾ
ಚರಣೆಯಿಂದ ನನ್ನನ್ನು ಸಂತೋಷಗೊಳಿಸಿದರೆ ಬಡನೆಯೇ ಅತ್ಯಂತ ದು
ರ್ಲಭವೆನಿಸಿದ - ಮೋಕ್ಷಸಂಪದವನ್ನೇ ದಿಟವಾಗಿಯೂ ಹೊಂದುವನು.
ಇಂತಿರಲು ಮನುಷ್ಯನು ತನ್ನ ಭಕ್ತಿಯಿಂದ ನನ್ನ ಅನುಗ್ರಹವಂ ಸಂ

ತ್ಯವಿಲಂಬಿತಂ ॥೪೪॥ ಮಯ್ಯರ್ಪಿತ ಮನಾ ಬಾಲ ! ಕಿಮು ಸ್ವರ್ಗಾದಿಕಂ ಪದಂ ? ॥ ೪೫ ॥ ತ್ರಿಲೋಕ್ಯಾ ದಧಿಕಸ್ಥಾನೇ ಸರ್ವ ತಾರಾಗ್ರಹಾಶ್ರಯಃ। ಭವಿಷ್ಯತಿ ನ ಸಂದೇಹೋ ಮತ್ಪ್ರ ಸಾದಾದ್ಧ್ರುವಾ ಧ್ರುವ!॥೪೦॥ ಸೂರ್ಯಾತ್ಸೋಮಾ ತ್ತಥಾ ಭೌಮಾ ತ್ಸೋಮ ಪುತ್ರಾ ದ್ಬೃಹಸ್ಪತೇಃ । ಸಿತಾರ್ಕತನಯಾದೀನಾಂ ಸರ್ವಋ್ಷಾಣಾಂ ತಥಾ ಧ್ರುವ ! ॥೪೧॥ ಸಪ್ತರ್ಷೀಣಾ ಮಶೇ ಷಾಣಾಂ ಯೇಚ ವೈಮಾನಿಕಾ ಸ್ಸುರಾಃ । ಸರ್ವೇಷಾಮುಪರಿ

ಪಾದಿಸಿಕೊಂಡೊಡೆ ಅಂತಹಮನುಜನಿಗೆ ಮುಕ್ತಿಯೇ ದೊರೆಯುವಾಗ್ಗೆ ನಶ್ವರಗಳಿನಿಸಿದ ತನ್ನ ಸುಕೃತಗಳಿಂದ ಸಂಪಾದಿಸಿದ ಈ ಸ್ವರ್ಗಾದಿಗಳ ನ್ನು ಹೊಂದುವುದೊಂದು ದೊಡ್ಡದೆ ? ॥೪೪॥೪೫॥ ಎಲೈ ತರಳ ಧ್ರುವ ನೆ ; ಮೂರುಲೋಕಗಳಲ್ಲಿರುವ ಸ್ಥಾನಗಳಿಗಿಂತಲೂ ಉತ್ತಮವೆನಿಸಿ ಎ ಲ್ಲಾ ಗ್ರಹಗಳಿಗೂ ಮತ್ತು ನಕ್ಷತ್ರಗಳಿಗೂ ಆಶ್ರಯ ಭೂತನಾದ ಉತ್ತ ಮೋತ್ತಮ ಸ್ಥಾನವೊಂದು ನಿನಗಾಗಿ ಏರ್ಪಡುವುದು ಇದೇ ನನ್ನ ಅನುಗ್ರಹಕ್ಕೆ ಫಲವು. ಈ ವಿಷಯದಲ್ಲಿ ಸಂಶಯಪಡಬೇಡ (ನೀನು ಕೋರಿದಂತೆಯೇ ನಿನಗೋಸುಗ ಈಗ ಬೇರೊಂದು ಸ್ಥಾನವನ್ನು ನಾ ನು ನಿರ್ಮಾಣಮಾಡಿಕೊಡುವೆನು) ॥೪೦॥

" ಆ ಸ್ಥಾನವು ಎಂತಹದು ? ಎಲ್ಲಿರುವುದು ? ಎಂದು ಕೇಳುವಿ ಯಾದೊಡೆ ಹೇಳುವೆನು. ತೇಜೋಮಂಡಲರೂಪನೆನಿಸಿದ ಸೂರ್ಯ, ಅಮೃ ತಮಯ ಕಿರಣನೆನಿಸಿದ ಚಂದ್ರ, ಭೂಪುತ್ರನಾದ ಅಂಗಾರಕ, ಚಂದ್ರ ನ ಮಗನಾದ ಬುಧ, ದೇವಗುರುವೆನಿಸಿದ ಬೃಹಸ್ಪತಿ, ಶ್ವೇತವರ್ಣಯು ಕ್ತನೆನಿಸಿದ ಶುಕ್ರ, ಸೂರ್ಯನಂದನನಾದ ಶನಿ, ಅಶ್ವಿನ್ಯಾದಿ ನಕ್ಷತ್ರಗಳು, ಇತರ ತಾರೆಗಳು, ಕಶ್ಯಪನೇ ಮೊದಲಾದ ಸಪ್ತರ್ಷಿಗಳು , ವೈಮಾನಿಕ ರಾದ ದೇವತೆಗಳು (ಆಕಾಶವಿಮಾನದಲ್ಲಿ ಚರಿಸುವ ದೇವತೆಗಳು) ಇ ವರುಗಳು ಸಂಚರಿಸುವ ಮಾರ್ಗಕ್ಕಿಂತಲೂ ಮೇಲುಭಾಗದಲ್ಲಿ ಸರ್ವೋ ತ್ತಮವಾದ ಸ್ಥಾನವನ್ನು ನಾನು ನಿನಗೋಸುಗ ದಯಪಾಲಿಸಿರುವೆನು॥ ಎಲೈ ಧ್ರುವನೆ ; ಈ ಮೇಲೆ ಹೇಳ್ದವರಲ್ಲಿ ಕೆಲವುಮಂದಿ, ನಾಲ್ಕಯು ಗಗಳು ಮುಗಿಯುವವರೆಗೂ ತಮ್ಮತಮ್ಮ ಸ್ಥಾನದಲ್ಲಿ ನೆಲೆಸಿರುವರು.

ಸ್ಥಾನಂ ತವದತ್ತಂ ಮಯಾ ಧ್ರುವ। ॥೯॥ ಕೇಚಿ ಚ್ಚತುರ್ಯು
ಗಂ ಯಾವತ್ಕೇಚಿ ನ್ಮನ್ವಂತರಂ ಸುರಾಃ । ತಿಷ್ಠಂತಿ ಧ್ರುವ !
ತೇ ದತ್ತಾ ಮಯಾ ವೈ ಕಲ್ಪಸಂಸ್ಥಿತಿಃ ॥೯॥ ಸುನೀತಿರಪಿ ತೇ
ಮಾತಾ ತ್ವದಾಸನ್ನಾತಿ ನಿರ್ಮಲಾ। ವಿಮಾನೇ ತಾರಕಾ ಭೂತ್ವಾ
ತಾವತ್ಕಾಲಂ ನಿವತ್ಸ್ಯತಿ ॥೯॥ ಯೇಚ ತ್ವಾಂ ಮಾನವಾಃ ಪ್ರಾ
ತ ಸ್ಸಾಯಂಚ ಸುಸಮಾಹಿತಾಃ । ಕೀರ್ತಯಿಷ್ಯಂತಿ ತೇಷಾಂ
ಚ ಮುಕ್ತಪ್ರಣ್ಯಂ ಭವಿಷ್ಯತಿ ॥೯॥ ಶ್ರೀ ಪರಾಶರಃ ॥ ಏವಂ
ಪೂರ್ವಂ ಜಗನ್ನಾಥಾ ದ್ದೇವ ದೇವಾ ಜ್ಜನಾರ್ದನಾತ್ । ವರಂ
ಪ್ರಾಪ್ಯ ಧ್ರುವ ಸ್ಥಾನ ಮಧ್ಯಾಸ್ತೇ ಸುಮಹಾಮತೇ ! ॥೯॥
ಸ್ವಯಂ ಶುಕ್ರೋಷಣಾ ದ್ಧ್ಯಾಗ್ ನ್ಮಾತಾಪಿತೃಭ್ಯಾ ಞ್ಚ ವೈತ

ಮತ್ತೆ ಹಲಬರು ಬಂದು ಮನ್ವಂತರವು ಪರಿಪೂರ್ಣವಾಗುವ ವರೆಗೂ ತಮ್ಮ ಆಧಿಪತ್ಯವಂ ನಡೆಸುವರು. ಇದೆಲ್ಲವನ್ನೂ ನಾನೇ ನಿಯಮಿಸಿರುವೆನು ॥೯॥ ನಿನ್ನ ತಾಯಿಯಾದ ಸುನೀತಿಯೂ ಕೂಡ ನಿರ್ಮಲಾಂತಃಕರಣಯುಕ್ತಳಿನಿಸಿ ನಿನ್ನ ಸವಿಾಪದಲ್ಲಿಯೇ ಬಂದು ನಕ್ಷತ್ರರೂಪದಿಂದ ಅದುವೆರೆಗೂ ವಾಸವಾಡುವಳು (ಈ ಸುನೀತಿಯು ನಿನಗೆ ತಾಯಿಯಾದುದರಿಂದ ಆಕೆಗೆ ಇಷ್ಟೊಂದು ಮಹತ್ತ್ವವು ದೊರೆತುದಲ್ಲದೆ ಆಕೆಯ ಪುಣ್ಯವೆಂದರಿಯಬೇಡ) ॥೯॥ ಎಲೈ ಧ್ರುವನೆ, ಪರಮಭಾಗವತ ಶಿಖಾಮಣಿ ಎನಿಸಿದ ನಿನ್ನ ಚರಿತೆಯನ್ನೂ ಅಂತೆಯೇ ನಿನ್ನ ನಾಮವನ್ನೂ ಕೂಡ ಪ್ರಾತಸ್ಸಾಯಂಕಾಲಗಳಲ್ಲಿ ಶ್ರದ್ಧಾ ಭಕ್ತಿಗಳೊಂದಿಗೆ ಕೀರ್ತನವಾಡುವವರೂ ಕೂಡ ವಿಶೇಷವಾಗಿ ಪುಣ್ಯವಂ ಹೊಂದಿ ತದ್ದ್ವಾರಾ ಉತ್ತಮಪದವಿಗೆ ಯೋಗ್ಯರಾಗುವರು ॥೯॥ ಆ ಬಳಿಕ ಪರಮಕಾರುಣಿಕ ನೆನಿಸಿದ ಪರಾಶರನು ಮೈತ್ರೇಯನಿಗೆ ತಿಳಿಸುತ್ತಾನೆ— ಅಯ್ಯಾ ವಿದ್ವದ್ವರೇಣ್ಯನೆ, ಇಂತು ಧ್ರುವನು ಆದಿಯಲ್ಲಿ ಸಕಲ ಜಗನ್ನಿಯಾಮಕನೂ, ದೇವದೇವನೂ, ದುಷ್ಟಸಂಹಾರಕನೂ ಎನಿಸಿದ ಶ್ರೀ ಮನ್ನಾರಾಯಣನ ಅನುಗ್ರಹವಂ ಸಂಪಾದಿಸಿ, ಶಾಶ್ವತವಾದ ಸ್ಥಾನಾಧಿಪತ್ಯವಂ ಪಡೆದು ಆ ತನ್ನ ಸ್ಥಾನದಲ್ಲಿ ನೆಲಸಿರುವನು ॥೯॥ ಆ ಬಳಿಕ ದೇವಾಸುರ ಗುರುವೆನಿಸಿದ ಶುಕ್ರಾಚಾರ್ಯನು ಧ್ರುವನ ಮಾತಾಪಿತೃಳು

ಥಾ। ದ್ವಾದಶಾಕ್ಷರ ಮಾಹಾತ್ಮ್ಯ ತ್ತಪಸಶ್ಚ ಪ್ರಭಾವತಃ॥೯೩॥
ತಸ್ಯಾಭಿಮಾನ ವೃದ್ಧಿಂಚ ಮಹಿಮಾನಂ ನಿರೀಕ್ಷ್ಯ ಚ।
ದೇವಾಸುರಾಣಾ ಮಾಚಾರ್ಯ ಶ್ಲೋಕ ಮುತ್ಪೇಶನಾ ಜಗೌ॥
ಅಹೋಽಸ್ಯ ತಪಸೋ ವೀರ್ಯ ಮಹೋಽಸ್ಯ ತಪಸಃ ಫಲಂ। ಯ
ದೇನಂ ಪುರತಃ ಕೃತ್ವಾ ಧ್ರುವಂ ಸರ್ತರ್ಷಯಃ ಸ್ಥಿತಾಃ ॥೯೯॥
ಧ್ರುವಸ್ಯ ಜನನೀ ಚೇಯಂ ಸುನೀತಿರ್ನಾಮ ಸೂನೃತಾ। ಅ

ಕ್ರೂಪೆಗೂ ಧರ್ಮಮಾರ್ಗದಲ್ಲಿರುವಿಕೆಗೂ ಕೂಡ ಬಹಳ ಸಂತೋಷ ಗೊಂಡು ದ್ವಾದಶಾಕ್ಷರ ಮಂತ್ರದ ಮಹಿಮೆಯು ಎಂತಹದು? ಧ್ರುವನು ಆಚರಿಸಿದ ತಪೋಮಹಿಮೆಯನ್ನು ಏನೆಂದು ಹೇಳಲಿ! ಇಂತು ಧ್ರುವನು ಪೂರ್ವಜನ್ಮದಲ್ಲಿ ಶ್ರದ್ಧಾಭಕ್ತಿ ಸಮನ್ವಿತನೆನಿಸಿ ನಿರಂತರವೂ ತನ ಜನನೀ ಜನಕರನ್ನು ಪರಿಚರಿಸಿ, ಧರ್ಮಮಾರ್ಗಕ್ಕೆ ಸ್ವಲ್ಪವೂ ಲೋಪ ಬಾರದಂತೆ ನಡೆಯುತ್ತಿದ್ದನು, ಈ ಜನ್ಮದಲ್ಲಿ ಆ ಹಿಂದಿನ ಸಂಸ್ಕಾರದಿಂದಲೇ ಇಪ್ಪತ್ತು ಚಿಕ್ಕ ವಯಸ್ಸಿನಲ್ಲಿ ದೇವದೇವನಾದ ಶ್ರೀಮನ್ನಾರಾಯಣನನ್ನೂ ದ್ವಾದಶಾಕ್ಷರ ಮಾತ್ರ ಜಪದಿಂದ ಒಲಿಸಿಕೊಂಡು, ಉಗ್ರತಪವನ್ನಾಚರಿಸಿ ಇಂತಹ ಮಹಾ ಪದವಿಯನ್ನು ಪಡೆದನು) ಆದುದರಿಂದ ಮಹಾ ವಿಷ್ಣುವೂ ಕೂಡ ಈತನಲ್ಲಿ ಪರಿಪೂರ್ಣವಾದ ಅನುಗ್ರಹವನಿಟ್ಟು ಈತನಿಗೆ ಇಂತಹ ದಿವ್ಯ ಸಂಪದವನ್ನೂ, ಮಹಿಮೆಯನ್ನೂ ಕೂಡ ದಯಪಾಲಿಸಿರುವನು? ಎಂಬದಾಗಿ ಈಯರ್ಥವುಳ್ಳ ಶ್ಲೋಕವನ್ನು ಸಂತೋಷದಿಂದ ಗಾನಮಾಡಿದನು॥೯೭॥೯೮॥ ಕಶ್ಯಪನೇ ಮೊದಲಾದ ಏಳುಮಂದಿ ಮುನಿವರ್ಯರಿಗಿಂತಲೂ ಉತ್ತಮವಾದ ಪದವಿಯನ್ನು ಹೊಂದಿದ ಈ ಧ್ರುವನ ತಪಶ್ಶಕ್ತಿಯು ಇನ್ನೆಂತಹದು? ಇವನ ತಪಃಫಲವಂ ಬಣ್ಣಿಸಲು ಸಾಧ್ಯವಲ್ಲ. ಈ ಧ್ರುವನು ಮಹಾಮಹಿಮ ಸಂಪನ್ನನು, ಎಂಬದಾಗಿ ಆಶ್ಚರ್ಯದಿಂದ ಶುಕಾಚಾರ್ಯನು ಗಾನಮಾಡಿದನು ॥೯೯॥ ಈ ಧ್ರುವನ ಜನನಿಯಾದ ಸುನೀತಿಯೂ ಕೂಡ ತನ್ನ ಮಗನನ್ನು ತನ್ನ ಸವತಿಯು ನಾನಾಬಗೆಯಾಗಿ ಧಿಕ್ಕರಿಸಿ ಮಾತನಾಡಿ ಕಳುಹಿಸಿದಳೆಂಬ ಸಮಾಚಾರವನ್ನು ತಾನು ಕೇಳಿದೊಡನೆಯೇ ಹಂಬಲಿಸದೆ ತನ್ನ ಮಗನನ್ನು ಕುರಿತು ಎಲ್ಲೆ ಕಂದನೆ, ನಿನ್ನ ಬಲತಾಯಿ

ಸ್ಯಾಚ್ಛ ಮಹಿಮಾನಂ ಕಶ್ಚಿತ್ಕೋ ವರ್ಣಯಿತುಂ ಭುವಿ? ॥೧೦೦॥
ತ್ರೈಲೋಕ್ಯಾಶ್ರಯತಾಂ ಪ್ರಾಪ್ತಂ ಪರಂ ಯತ್ತ ತಿಸ್ಥಿರಾ
ಯತಿ । ಸ್ಥಾನಂ ಪ್ರಾಪ್ತಾ ಪರಂ ಧೃತ್ವಾ ಯಾ ಕುಕ್ಷಿ ವಿವರೇ
ಧ್ರುವಂ॥೧೦೧॥ಯಚ್ಛೈ ಕೃತತ್ಕೀರ್ತಯೇ ನ್ನಿತ್ಯಂ ಧ್ರುವಸ್ಯೈ ರೋ
ಹಣಂ ದಿವಿ । ಸರ್ವ ಪಾಪವಿನಿರ್ಮುಕ್ತ ಸ್ಸ ವ್ಯರ್ಗಲೋಕೇ ಮ

ಯು ಹೇಳಿದುದೆಲ್ಲವೂ ದಿಟ ಇದಕ್ಕಾಗಿ ನೀನೇಕೆ ಮರುಗುವೆ ? ಪುಣ್ಯ
ವನ್ನು ಸಂಪಾದಿಸದಿರ್ದೊಡೆ ಮನುಜನು ಮೇಲ್ಮೆಯನ್ನು ಪಡೆಯಲಾರ
ನು. ಆದುದರಿಂದ ನೀನು ಸುಕೃತಸಂಪಾದನೆಗಾಗಿ ಯತ್ನಿಸು. ಎಂಬದಾಗಿ
ಹಿತವಾಗಿಯೂ ಸತ್ಯವಾಗಿಯೂ ಇರುವ ಮಾತನ್ನು ಬೋಧಿಸಿದಳಲ್ಲಾ !
ಆದುದರಿಂದ ಈ ಧ್ರುವನ ತಾಯಿಯಾದ ಸುನೀತಿಯ ಮಹಿಮೆಯನ್ನೂ
ಈ ಲೋಕದೊಳ್ ಯಾರುತಾನೇ ಬಣ್ಣಿಸಲಾಪರು? ॥೧೦೦॥ ಪರಮಭಾ
ಗವತ ಶಿಖಾಮಣಿ ಎನಿಸಿದ ಇಂತಹ ಧ್ರುವನನ್ನು ತನ್ನ ಗರ್ಭಕೋಶವೆಂ
ಬ ಸಣ್ಣ ರಂಧ್ರದಲ್ಲಿ ಕೆಲವುಕಾಲ ಮಾತ್ರ ಧರಿಸಿರುವಳಾಗಿ ಮೂಲೋ
ಕಗಳಿಗೂ ಆಶ್ರಯಭೂತನೆನಿಸಿ, ನಿತ್ಯಮುಕ್ತಿರೂಪನೂದ ಉತ್ತರಫಲ
ಮುಳ್ಳ ವಿಷ್ಣುಪದವೆಂಬ ಸರ್ವೋತ್ತಮಸ್ಥಾನವಂ ಪಡೆದ ಈ ಸುನೀತಿ
ಯ ಮಹಿಮೆಯು ಅಗೋಚರವಾದುದು (ಗರ್ಭಕೋಶವು ಚೊಟ್ಟುದ್ದ
ಪ್ರಮಾಣಯುಕ್ತವಾದುದು. ಇಂತಹ ಗರ್ಭಕೋಶದಲ್ಲಿ ಧ್ರುವನನ್ನು
ಈಕೆಯು ಧರಿಸಿ ಅವನಿಂದ ತ್ರೈಲೋಕ್ಯಾಶ್ರಯಭೂತವಾದ ವಿಷ್ಣುಪ
ದವೆಂಬ ಅಂತರಿಕ್ಷದಲ್ಲಿ ಸರ್ವೋತ್ತಮಸ್ಥಾನವಂ ಪಡೆದಳೆಂಬುದು ಆ
ಶ್ಚರ್ಯ. ಅಂದರೆ ಅತ್ಯಲ್ಪ ಶ್ರಮದಿಂದ ಎಂದಿಗೂ ನಾಶವಾಗದ ಸರ್ವೋ
ತ್ತಮವಾದ ಸುಖವನ್ನನುಭವಿಸಿದಳೆಂದರ್ಥ. ಮುಖ್ಯವಾಗಿ ಇಂತಹ ಮ
ಹಾಮಹಿಮನೆನಿಸಿದ ಈ ಧ್ರುವನಿಗೆ ಈಕೆಯು ಜನನಿಯಾದುದರಿಂದ
ನಾಶರಹಿತವಾದ ಮೋಕ್ಷಕ್ಕೆ ಈಡಾದಳೆಂದು ಭಾವವು) ॥೧೦೧॥ ಎಲೈ
ಮೈತ್ರೇಯನೆ;ಉತ್ತಾನಪಾದನದಂದನನೆನಿಸಿದ ಧ್ರುವನು ಇಂತು ನಕ್ಷತ್ರ
ಮಂಡಲದಲ್ಲಿ ಸರ್ವೋತ್ತಮವಾದ ನಿರ್ವ್ಯಸ್ಥಾನಾಧಿಪತ್ಯವಂ ಪಡೆದ ಈಉ
ಪಾಖ್ಯಾನವನ್ನು ಅನವರತವೂ ಶ್ರದ್ಧಾಭಕ್ತಿಗಳೊಂದಿಗೆ ಪಠನಮಾಡುವ
ವರು ಕಾಯಿಕ,ವಾಚಿಕ, ಮಾನಸಿಕಗಳೆಂಬ ಮೂರುಬಗೆಗಳಾದ ಪಾಪ

ಹೀಯತೇ॥೧೦೨॥ ಸ್ಥಾನ ಭಂಗಂ ನಚಾಪ್ನೋತಿ ದಿವಿವಾ ಯದಿ
ವಾಭುವಿ।ಸರ್ವಕಲ್ಯಾಣ ಸಂಯುಕ್ತೋ ದೀರ್ಘಕಾಲಂಸಜೀವತಿ॥
ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಧ್ರುವೋಪಾಖ್ಯಾನಂನಾಮ
ದ್ವಾದಶೋಧ್ಯಾಯಃ.

ಗಳನ್ನೂ ದೂರಮಾಡಿ, ದೀರ್ಘಕಾಲ ಸ್ವರ್ಗದಲ್ಲಿ ದಿವ್ಯಭೋಗಗಳನ್ನು ಕೈಕೊಳ್ಳುತ್ತಾ ದೇವತೆಗಳ ಸತ್ಕಾರಕ್ಕೆ ಯೋಗ್ಯರಾಗುವರು॥೧೦೨॥ ಪರ ಲೋಕದಲ್ಲಿ ಯಾಗಲಿ ಅಥವಾ ಈ ಲೋಕದಲ್ಲಿಯೇ ಆಗಲಿ ಎಂದಿಗೂ ತಮ್ಮ ಪದವಿಯನ್ನು ನಾಶಪಡಿಸಿಕೊಳ್ಳಲಾರರು. ಮತ್ತು ಈ ಲೋಕದಲ್ಲಿಯೂ ಕೂಡ ಅನೇಕ ಬಗೆಗಳಾದ ಧನ, ಕನಕ,ಪುತ್ರ, ಪೌತ್ರ, ವಸ್ತು ವಾಹನಾದಿ ಸಂಪದಗಳನ್ನೂ ಪಡೆದು ಶ್ರೀಮನ್ನಾರಾಯಣ ಪಾದಾರವಿಂದಗಳಲ್ಲಿ ಸ್ಥಿರವಾದ ಭಕ್ತಿಯಿಂದೊಡಗೂಡಿ ಚಿರಕಾಲ ಸುಖಿಸುವರು॥ ಎಂಬದಾಗಿ ಪರಾಶರಮುನಿಯು ಮೈತ್ರೇಯನಿಗೆ ಹೇಳುತಿದ್ದನೆಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದೊಳ್ ಧ್ರುವಚರಿತ್ರವೆನಿಸಿದ ಹನ್ನೆರಡನೆಯ ಅಧ್ಯಾಯಂ ಮುಗಿದುದು.

— ದ್ವಾದಶಾಧ್ಯಾಯಂ ಸಮಾಪ್ತಂ —

—※※※※※—

ಶ್ರೀಃ

ಓನ್ನಮಃ ಪರಮಾತ್ಮನೇ

ತ್ರಯೋದಶೋಧ್ಯಾಯಃ

ಶ್ರೀಪರಾಶರಃ ॥ ಧ್ರುವಾ ಚ್ಛಿ ಷ್ಟಿಂ ಚ ಭವ್ಯಂಚ ಭಾರ್ಯಾ ಶಂಭು ರ್ವ್ಯ ಜಾಯತ । ಶಿಷ್ಟೇ ರಾಧತ್ತ ಸುಚ್ಛಾಯಾ ಪಂಚ ಪುತ್ರಾ ನಕಲ್ಮಷಾ ॥೧॥ ರಿಪುಂ ರಿಪುಂಜಯಂ ವಿಪ್ರಂ ವೃಕಲಂ ವೃ ಕತೇಜಸಂ । ರಿಪೋರಾಧತ್ತ ಬೃಹತೀ ಚಾಕ್ಷುಷಂ ಸರ್ವತೇ ಜಸಂ ॥ ೨॥ ಅಜೀಜನತ್ಪುಷ್ಕರಿಣ್ಯಾಂ ವಾರುಣ್ಯಾಂ ಚಾಕ್ಷು ಷೋಮನುಂ । ಪ್ರಜಾಪತೇ ರಾತ್ಮಜಾಯಾಂ ವೀರಣಸ್ಯ ಮಹಾ

ಪರಾಶರನು ಹೇಳ ತೊಡಗಿದನು—ಅಯ್ಯಾ ಮೈತ್ರೇಯನೆ! ಇದು ವರೆಗೂ ಧ್ರುವನು ಶ್ರೀಮನ್ನಾರಾಯಣನ ಅನುಗ್ರಹದಿಂದ ಸರ್ವೋತ್ತ ಮವೂ ಶಾಶ್ವತವೂ ಎನಿಸಿದ ಪದವಿಯಂ ಹೊಂದಿದ ಪ್ರಕಾರವಂ ತಿಳಿ ಯುಪಡಿಸಿದೆನು. ಇನ್ನು ಮುಂದೆ ಆತನ ವಂಶಾವಳಿಯನ್ನು ವಿವರಿಸುವೆ ನು. ಈ ಧ್ರುವನಿಗೆ ಶಂಭುವೆಂಬ ಹೆಂಡತಿಯಲ್ಲಿ ಶಿಷ್ಟಿ, ಭವ್ಯ, ಎಂಬ ದಾಗಿ ಈರ್ವರು ತನಯರು ಜನಿಸಿದರು, ಮೊದಲನೆಯವನಾದ ಶಿಷ್ಟಿ ಯು ಒಡತಿಯಾದ ಸುಚ್ಛಾಯೆಯಲ್ಲಿ ರಿಪು, ರಿಪುಂಜಯ, ವಿಪ್ರ, ವೃಕಲ, ವೃಕತೇಜಸರೆಂಬ ಮಹಾಪರಿಶುದ್ಧರೆನಿಸಿದ ಐದು ಮಂದಿ ಮಕ್ಕಳಂಪೆತ್ತ ಳು. ಈ ಐದುಮಂದಿಯಲ್ಲಿ ಹಿರಿಯವನಾದ ರಿಪುವಿನ ಹೆಂಡಿರಾದ ಸುಚ್ಛಾ ಯೆಯು ದಿವ್ಯವಾದ ದೇಹಕಾಂತಿ,ಬಲಗಳಿಂದೊಡಗೂಡಿದ ಚಾಕ್ಷುಷನೆಂ ಬ ತನಯಸಂ ಪೆತ್ತಳು. ॥೧, ೨॥ ಈ ಚಾಕ್ಷುಷನು ವರುಣನ ವಂಶದಲ್ಲಿ ಹುಟ್ಟಿದ ವೀರಣನೆಂಬಪ್ರಜ್ಞಾನ ಪುತ್ರಿಯೆನಿಸಿದ ಪುಷ್ಕರಿಣಿ ಎಂಬಾಕೆ ಯಲ್ಲಿ ಮನುವೆಂಬ ಬಭ್ರು ಕುವರನಂ ಪಡೆದನು. (ಸ್ವಾಯಂಭುವ, ಸ್ವಾ ರೋಚಿಷ, ಔತ್ತಮಿ, ತಾಮಸ, ರೈವತ, ಚಾಕ್ಷುಷ ವೈವಸ್ವತ,

ತ್ಮನಃ ॥೪॥ ಮನೋ ರಜಾಯಂತ ದಕ ನಡ್ವಲಾಯಾಂ ಮಹೌ
ಜಸಃ । ಕನ್ಯಾಯಾಂ ತಪತಾಂ ಶ್ರೇಷ್ಠ ! ವೈರಾಜಸ್ಯ ಪ್ರಜಾ
ಪತೇಃ ॥೫॥ ಊರುಃ ಪೂರು ಶ್ಚತ ದ್ಯುಮ್ನ ಸ್ತಪಸ್ವೀ ಸತ್ಯ
ವಾ೯ ಶುಚಿಃ । ಅಗ್ನಿಷ್ಟೋ ಮೋತಿರಾತ್ರಶ್ಚ ಸುದ್ಯುಮ್ನ ಶ್ಚೇತಿ
ತೇನವ ಅಭಿಮನ್ಯು ಶ್ಚ ದಶಮೋ ನಡ್ವಲಾಯಾಂ ಮಹೌಜಸಃ ॥
ಊರೋ ರಜನಯ ತ್ಪುತ್ರಾ೯ ಷ ಡಾಗ್ನೇಯಿಾ ಮಹಾಪ್ರಭಾ೯।
ಅಂಗಂ ಸುಮನ ಸಂ ಸ್ವಾತಿಂ ಕ್ರತು ಮಂಗಿರಸಂ ಶಿಬಿಂ ॥೬॥

ಎಂಬ ಇವರೇಪೊಡಲಾಗಿ ಹದಿನಾಲ್ಕು ಮನುಗಳುಂಟು. ಇವರಲ್ಲಿ ಆರ
ನೆಯವನಾದ ಚಾಕ್ಷುಷ ಮನುವೆಂಬುವನು ರಿಪುವಿನ ಮಗನಾದ ಚಾಕ್ಷು
ಷಮನುವಿನಲ್ಲಿ ಜನಿಸಿದವನು. ಇದಾದ ಬಳಿಕ ಈಗ ನಡೆಯುತ್ತಿರುವ
ಮನ್ವಂತರಕ್ಕೆಲ್ಲೇ ವೈವಸ್ವತ ಮನ್ವಂತರವೆಂಬದಾಗಿ ಹೆಸರು. ಈತನು
ಸೂರ್ಯನ ವಂಶದಲ್ಲಿ ಜನಿಸಿದನು. ಈ ಕಥೆಯು ಮುಂದೆ ವರ್ಣಿಸಲ್ಪ
ಡುವುದು) ॥೪॥

ಎಲೈ ತಪಸ್ವಿವರ್ಯನೆ! ವೈರಾಜನೆಂಬ ಬ್ರಹ್ಮನ ಮಗಳಾದ ನಡ್ವ
ಲೆ ಎಂಬಾಕೆಯಲ್ಲಿ ಈ ಹಿಂದೆಹೇಳಿದ ಚಾಕ್ಷುಷ ಮನುವಿಗೆ ಊರು,ಪೂ
ರು, ಶತದ್ಯುಮ್ನ, ತಪಸ್ವಿ, ಸತ್ಯವಂತ, ಶುಚಿ, ಅಗ್ನಿಷ್ಟೋಮ, ಅತಿರಾ
ತ್ರ, ಸುದ್ಯುಮ್ನರೆಂಬ ಮಹಾಪರಾಕ್ರಮಶಾಲಿಗಳೂ, ಸತ್ಯವಂತರೂ
ಗುಣಶಾಲಿಗಳೂ ಎನಿಸಿದ ಒಂಭತ್ತು ಮಂದಿ ಕುಮಾರರೂ, ಅಭಿಮನ್ಯು,
ವೆಂಬದಾಗಿ ಹತ್ತನೆಯವನಾದ ಮತ್ತೊಬ್ಬ ಮಗನೂ ಹುಟ್ಟಿದರು (ಅಂ
ದರೆ ಚಾಕ್ಷುಷ ಮನುವಿಗೆ ನಡ್ವಲಾದೇವಿಯಲ್ಲಿ ಊರು, ಪೂರು, ಶತದ್ಯು
ಮ್ನ, ತಪಸ್ವಿ, ಸತ್ಯವಂತ, ಶುಚಿ, ಅಗ್ನಿಷ್ಟೋಮ, ಅತಿರಾತ್ರ, ಸುದ್ಯು
ಮ್ನ, ಅಭಿಮನ್ಯುಗಳೆಂಬ ಹತ್ತು ಮಂದಿ ಮಕ್ಕಳುಂಟಾದರೆಂದು ಭಾವ
ವು.) ॥೫,೬॥ ಈ ಹತ್ತು ಮಂದಿಯಲ್ಲಿ ಜ್ಯೇಷ್ಠನೆನಿಸಿದ ಊರುವು ತನ್ನ
ಪ್ರಿಯ ಪತ್ನಿಯಾದ ಆಗ್ನೇಯಿಾ ಎಂಬ ಸ್ತ್ರೀಯಲ್ಲಿ ಅಗ್ನಿಯಂತೆ ಜಾಜ್ವ
ಲ್ಯಮಾನವಾದ ದೇಹಕಾಂತಿಯಿಂದೊಡಗೂಡಿದ ಅಂಗ, ಸುಮನಸ, ಸ್ವಾ
ತಿ, ಕ್ರತು, ಅಂಗಿರಸ್ಸು, ಶಿಬಿಗಳೆಂಬ ಆರುಮಂದಿ ಮಕ್ಕಳನ್ನು ಪಡೆ
ದನು. ॥೬॥ ಈ ಆರು ಮಂದಿಯಲ್ಲಿ ಹಿರಿಯವನಾದ ಅಂಗನಿಗೆ ಮೃತ್ಯುವಿನ

ಅಂಗಾ ತ್ಸುನೀಥಾ ಪತ್ಯಂ ವೈ ವೇನ ಮೇಳ ಮುಚಾಯುತ ।
ಪ್ರಜಾರ್ಥ ಮೃಷಯ ಸ್ತಸ್ಯ ಮಮಂ ಥು ರ್ದ ಕ್ಷಿಣಂ ಕರಂ॥೬॥
ವೇನಸ್ಯ ಪಾಣಾ ವಥಿತೇ ಸಂಬಭೂವ ಮಹಾದ್ಯುತೇ ! । ವೈ
ನ್ಯೋ ನಾಮ ಮಹೀ ಪಾಲೋ ಯಃ ಪೃಥುಃ ಪರಿಕೀರ್ತ್ಯತೇ॥೪॥
ಯೇನ ದುಗ್ಧಾ ಮಹೀ ಪೂರ್ವಂ ಪ್ರಜಾನಾಂ ಹಿತಕಾರಣಾತ್॥೯॥
ಮೈತ್ರೇಯಃ ॥ ಕಿಮರ್ಥಂ ಮಥಿತಃ ಪಾಣಿ ರ್ವೇನಸ್ಯ ಪರಮ
ರ್ಷಿಭಿಃ ? । ಯತ್ರ ಜಜ್ಞೇ ಮಹಾವೀರ್ಯ ಸ್ಸ ಪೃಥು ರ್ಮನಿ
ಸತ್ತಮ ! ॥೧೦॥ ಶ್ರೀಪರಾಶರಃ ॥ ಸುನೀಥಾನಾಮ ಯಾ ಕನ್ಯಾ

ಮಗಳಾದ ಸುನೀಥೆಯಲ್ಲಿ ವೇನನೆಂಬ ಒಬ್ಬನೇ ಮಗನು ಹುಟ್ಟಿದನು. ಈ ವೇನನ ಬಲಗೈಯನ್ನು ಋಷಿಗಳು ಸೇರಿ ಸಂತತಿಗೋಸ್ಕರವಾಗಿ ಮಥನಮಾಡಿದರು. ॥೬॥ ಅಯ್ಯಾ ಮಹಾತೇಜಸ್ವಿಯಾದ ಮೈತ್ರೇಯನೆ ! ಇಂತು ಋಷಿಗಳೆಲ್ಲರೂ ಆ ವೇನನ ಬಲಗೈಯನ್ನು ಮಥನ ಮಾಡುತಿರಲಾಗಿ ವೈನ್ಯನೆಂಬ ಮಹಾಧಾರ್ಮಿಕನಾದ ರಾಜನೊಬ್ಬನು ಜನಿಸಿದನು. ಇವನನ್ನೇ ಪೃಥುವೆಂಬದಾಗಿ ಜನರೆಲ್ಲರೂ ಕರೆವರು ॥೪॥ ಈ ಪೃಥುರಾಜನೇ ! ಪೂರ್ವದಲ್ಲಿ ಪ್ರಜೆಗಳ ಹಿತಚಿಂತನೆಯಿಂದ ಸಕಲ ಭೂಮಂಡಲವನ್ನೂ ಊರ್ಜಿತ ಸ್ಥಿತಿಗೆ ತಂದನು (ಈತನಿಂದ ಸಕಲ ಭೂಭಾಗವೂ ಊರ್ಜಿತ ಸ್ಥಿತಿಯುಂ ಹೊಂದಿತಾದುದರಿಂದಲೇ ಈತನಿಗೆ ಭೂಮಿಯು ಮಗಳಾದಳೆಂದೂ, ಆದುದರಿಂದಲೇ ಭೂಮಿಗೆ ಪೃಥಿವೀ ಎಂಬದಾಗಿ ಹೆಸರುಂಟಾಯಿತೆಂದೂ ಮುಂದೆ ಕಥೆಯು ಹೇಳುವುದು) ॥೯॥

ಮೈತ್ರೇಯನು ಪ್ರಶ್ನೆಮಾಡುತ್ತಾನೆ—ಅಯ್ಯಾ ಮುನಿವರ್ಯನೆನಿಸಿದ ಪರಾಶರನೆ ! ವೇನನ ಬಲಗೈಯಿಂದ ಮಹಾಬಲಶಾಲಿಯಾದ ಪೃಥು ರಾಜನು ಹುಟ್ಟಿದನೆಂದು ಹೇಳುವಿಯಲ್ಲಾ ಹಾಗಾದರೆ ದೀರ್ಘದರ್ಶಿಗಳೂ ಜ್ಞಾನಾಪರರೂ, ದಿವ್ಯಜ್ಞಾನಸಂಪನ್ನರೂ ಎನಿಸಿದ ಋಷಿಗಳು ವೇನನ ಬಲಗೈಯನ್ನು ಮಥನಮಾಡಲು ಕಾರಣವೇನು ? ಇದನ್ನು ನನಿಗೆ ವಿಶದವಾಗಿ ತಿಳಿಯಪಡಿಸು. ॥೧೦॥ ಪರಾಶರನು ಹೇಳುತ್ತಾನೆ—ಅಯ್ಯಾ ಮೈತ್ರೇಯನೆ ! ಮೃತ್ಯುವಿಗೆ ಸುನೀಥೆ ಎಂಬುವಳು ಹಿರಿಯಮಗಳು ಈಕೆಯನ್ನು ಮೃತ್ಯುವು ಅಂಗನಿಗೆ ಕೊಟ್ಟು ಮದುವೆ ಮಾಡಿದನು, ಆ ಅಂಗನಿಂದ

ಮೃತ್ಯೋಃ ಪ್ರಥಮಜಾ ಽ ಭವತ್ । ಅಂಗಸ್ಯ ಭಾರ್ಯ್ಯಾ ಸಾದ
ತ್ತಾ ತಸ್ಯಾಂ ವೇ ನೋವ್ಯಜಾಯತ ॥೧೧॥ ಸಮೃತಾವುಹ್ಯ
ದೋಷೇಣ ತೇನ ಮೃತ್ಯು ಸುತಾತ್ಮಜಃ । ನಿಸ್ಸ್ವಾಧ್ಯಾಯೇವ ಮೈತ್ರೇಯ ! ದುಷ್ಟ್ಯ ವಿವವ್ಯಜಾಯತ ॥೧೨॥ ಅ ಷ್ಟಕೋ ಯದಾ ರಾಜ್ಯೇ ಸವೇನಃ ಪರಮರ್ಷಿಭಿಃ । ಘೃ ಷಯಾವಾಸ ಸತದಾ ಪೃಥಿವ್ಯಾಂ ವೃಥಿವೀಪತಿಃ ॥೧೩॥ ನಯುಃ ವ್ಯಂ ನದಾ ತವ್ಯಂ ನಹೋತವ್ಯಂ ಕಥಂಚನ । ಭೋಕ್ತಾ ಯಜ್ಞಸ್ಯ ಕಸ್ತ್ವ

ಈಕೆಯಲ್ಲಿ ಈ ವೇನನು ಜನಿಸಿದನು॥೧೧॥ಅಯ್ಯಾ ವೈ ಮೈತ್ರೇಯನೆ! ಈವೇನನು ಮೃತ್ಯುಪುತ್ರಿಯಾದ ಸುನೀಥೆಯಲ್ಲಿ ಜನಿಸಿದವನಾದುದರಿಂದಲೇ ಮಾತಾಮಹನಾದ ಮೃತ್ಯುವಿನಂತೆಯೇ ಇವನಿಗೂ ದುಷ್ಟಬುದ್ಧಿಯುಂಟಾಯಿತು,ವೇನನಿಗೆ ಮಾತಾಮಹನೆನಿಸಿದ ಮೃತ್ಯುವು ಹೇಗೆ ಕ್ರೂರ ಸ್ವಭಾವದವನೋ ಅದರಂತೆಯೇ ಇವನಿಗೂ ಕ್ರೂರಸ್ವಭಾವವೇ ಇದ್ದಿತೆಂದು ಭಾವವು) ಆದುದರಿಂದ ಆ ವೇನನು ಸ್ವಭಾವದಿಂದಲೇ (ಹುಟ್ಟುತಲೇ) ದುಷ್ಟನಾಗಿಯೇ ಜನಿಸಿದನು, ॥೧೨॥ ಇಂತಾದ ಬಳಿಕ ಕೆಲವು ಕಾಲದ ಮೇಲೆ ಅಂಗನ ತರುವಾಯ ಪ್ರಜೆಗಳೆಲ್ಲರೂ ಈ ವೇನನಿಗೆ ಪಟ್ಟಗಟ್ಟಿದರು, ಈ ವೇನನು ಸಿಂಹಾಸನದಲ್ಲಿ ಕುಳಿತು ರಾಜ್ಯಭಾರವನ್ನು ವಹಿಸಿದೊಡನೆಯೇ ತನ್ನ ಸ್ವಾಭಾವಿಕ ಕ್ರೌರ್ಯ ಮೊದಲಾದ ದೋಷಗಳಿಂದೊಡಗೂಡಿ, ತನ್ನ ಆಳ್ವಿಕೆಗೆ ಒಳಪಟ್ಟ ನಾಲ್ಕು ವರ್ಣಾಶ್ರಮದವರನ್ನೂ ಕುರಿತು ,,ಎಲೈ ಪ್ರಜೆಗಳಿರಾ; ಇಂದು ಮೊದಲ್ಗೊಂಡು ನನ್ನ ರಾಜ್ಯದಲ್ಲಿ ನೀವಾರೂ ಯಾವ ವಿಧವಾದ ಯಜ್ಞವನ್ನೂ ಮಾಡಕೂಡದು. ಯಾರೊಬ್ಬರಿಗೂ ಏನನ್ನೂ ದಾನಮಾಡಕೂಡದು. ಅಗ್ನಿಯಲ್ಲಿ ಯಾವಬಗೆಯಾದ ಆಹುತಿಯನ್ನೂ ಹಾಕಕೂಡದು. ,, ನಾವಿಷ್ಣುಃಪೃಥಿವೀಪತಿಃ, ಅಷ್ಟಾಭಿರ್ಲೋಕಪಾಲಾನಾಂ ಮಾತ್ರಾಭಿರ್ನಿರ್ಮಿತೋ ನೃಪಃ ,, ಸ್ಥಿತಿಕರ್ತನಾದ ವಿಷ್ಣುವೇ ರಾಜರೂಪದಿಂದ ಸಾಕ್ಷಾತ್ತಾಗಿ ಅವತರಿಸಿ ಪ್ರಜಾಪರಿಪಾಲನವಂ ಗೈವನು. ಅಷ್ಟದಿಕ್ಪಾಲಕರಲ್ಲಿರುವ ಒಂದೊಂದು ವಿಧವಾದ ಶಕ್ತಿಯನ್ನೂ ಕೂಡಿಟ್ಟು ಬ್ರಹ್ಮನು ರಾಜನನ್ನು ಉಂಟುಮಾಡಿರುವನು. ಅಷ್ಟದಿಕ್ಪಾಲಕರಂಟು ಮಂದಿಯಲ್ಲಿಯೂ ಇರುವ ಮಹಿಮೆಗ

ನ್ಯೋ ? ಹ್ಯಹಂ ಯಜ್ಞಪತಿಃ ಪ್ರಭುಃ ॥೧೪॥ ತತ ಸ್ತೆ ಮೃಷ
ಯಃ ಪೂರ್ವಂ ಸಂಪೂಜ್ಯ ಪೃ ಥಿವಿ ಪತಿಂ । ಊಚು ಸ್ತಾಮ
ಕಳಂ ವಾಕ್ಯಂ ಮೈತ್ರೇಯ ! ಸಮುಪ ಸ್ಥಿತಾಃ ॥೧೫॥ ಋಷ
ಯ ಊಚುಃ ॥ ಭೋ ! ಭೋ ! ರಾಜನ್ ! ಶ್ರುಣು ಷ್ವತ್ವಂ
ಯದ್ವದಾವಸ್ತ ವಾಂತಿಕೇ । ರಾಜ್ಯ ದೇಹೋಪಭೋಗಾಯ
ಪ್ರಜಾನಾಂಚ ಹಿತಂ ಪರಂ ॥೧೬॥ ದೀರ್ಘ ಸತ್ರೇಣ ದೇವೇಶಂ
ಸರ್ವಯಜ್ಞೇ ಶ್ವರಂ ಹರಿಂ।ಪೂಜಯಿಷ್ಯಾಮ ಭದ್ರಂತೇ ತತ್ರಾಂ

ಳೆಲ್ಲವೂ ಈ ರಾಜನೊಬ್ಬನಲ್ಲಿಯೇ ಇರುವವು,, ಎಂಬುದಾಗಿ ಸ್ಮೃತಿಗಳು ಸಾರುತ್ತಿರುವುವು. ಆದುದರಿಂದ ನಸಗಿಂತಲೂ ಯಜ್ಞದಲ್ಲಿ ಹೋಮಮಾಡತಕ್ಕ ವಸ್ತುವಂ ಪರಿಗ್ರಹಿಸುವನು ಬೇರೊಬ್ಬನಾವನಿರುವನು, ರಾಜನಾದ ನಾನೇ ಯಜ್ಞಕ್ಕೆ ಮುಖ್ಯವಾದ ದೇವತೆಯಾಗಿರುವೆನು, ಆದುದರಿಂದ ಇನ್ನು ಮೇಲೆ ಯಜ್ಞಾದಿಗಳನ್ನು ನನ್ನ ರಾಜ್ಯದಲ್ಲಿ ಯಾರೂ ನಡೆಸಿಸಬಾರದು, ಎಲ್ಲರೂ ನನ್ನನ್ನೇ ಪೂಜ್ಯರೆ ಮಾಡತಕ್ಕದು, ಎಂಬುದಾಗಿ ತನ್ನ ದೇಶದಲ್ಲೆಲ್ಲೆಲ್ಲಿಯೂ ಸಾರಿಸಿದನು ॥೧೪॥ ಇಂತು ರಾಜಾಜ್ಞೆಯಂ ಕೇಳಿ ಆ ಪ್ರಜೆಗಳೆಲ್ಲರೂ ಭೀತಿಗೊಂಡಿರಲು ಆ ಕಾಲದಲ್ಲಿ ಋಷಿಗಳೆಲ್ಲರೂ ಆ ವೇನರಾಜನ ಬಳಿಸಾರ್ದು, ಆತನಂ ಪೂಜಿಸಿ, ಪ್ರೀತಿ ವಿಶ್ವಾಸಗಳಿಂದೊಡಗೂಡಿದ ಸವಿ ಮಾತುಗಳಿಂದ ಆ ರಾಜನೊಡನೆ ಈಪರಿಯಾಗಿ ವಿನ್ನವಿಸತೊಡಗಿದರು— ॥ ೧೫ ॥ ಋಷಿಗಳು ರಾಜನೊಡನೆ ಹೇಳುತ್ತಾರೆ.... ಎಲೈ ಪ್ರಜಾರಂಜಕನಾದುದರಿಂದ ರಾಜನೆಂದು ಕರೆಯಿಸಲ್ಪಡುವ ವೇನನೇ ನೀನು ಸುಖವಾಗಿ ಚಿರಕಾಲ ರಾಜ್ಯವಾಳುತ್ತಾ,ದೀರ್ಘಕಾಲ ಆಯುರಾರೋಗ್ಯಗಳಂ ಪಡೆದು ಕ್ಷೇಮದಿಂದಿರುವಿಕೆಗೂ ವ,ತ್ತು ಪ್ರಜೆಗಳಹಿತಕ್ಕೋಸ್ಕರವೂ ಕೂಡ ನಿನ್ನ ಬಳಿಯಲ್ಲಿ ಕೆಲಮಾತುಗಳನ್ನಾಡಬೇಕೆಂದು ಬಂದಿರುವೆವು ನಾವು ಹೇಳುವ ಮಾತುಗಳಂ ಪ್ರೀತಿಯಿಂದ ಕಿವಿಗೊಟ್ಟು ಪಾಲಿಸುವವನಾಗು॥೧೬॥ ನಾವುಗಳೆಲ್ಲರೂ ದೇಶ, ಪ್ರಜೆಗಳು,ರಾಜ, ಇವರುಗಳ ಮೇಲ್ಮೆಗಾಗಿ ಬಂದು ಸಾಸಿರ ವರ್ಷಗಳ ಕಾಲ ನಡೆಯುವ ದೀರ್ಘಸತ್ರವೆಂಬ ಯಜ್ಞವನ್ನಾರಂಭಿಸಿ, ಅಗ್ನಿಷ್ಟೋಮ, ಅತಿರಾತ್ರ, ವಾಜಪೇಯ, ಪೌಂಡರೀಕ, ಅಶ್ವಮೇಧ ಮೊದಲಾದ ಸಕಲ

ಕಸ್ತೇ ಭವಿಷ್ಯತಿ ॥೧೬॥ ಯಜ್ಞೇನ ಯಜ್ಞಪುರುಷೋ ವಿಷ್ಣು
ಸ್ಸಂಪ್ರೀಣಿತೋ ನೃಪ! । ಅಸ್ಮಾಭಿ ರ್ಭವತಃ ಕಾಮಾ್ ಸ
ರ್ವಾನೇವ ಪ್ರದಾಸ್ಯತಿ ॥೧೭॥ ಯಜ್ಞೈ ರ್ಯಜ್ಞೇಶ್ವರೋ ಯೇ
ಷಾಂ ರಾಷ್ಟ್ರೇ ಸಂಪ್ರಜ್ಯತೇಹರಿಃ । ತೇಷಾಂ ಸರ್ವೇ ಪ್ಸಿತಾವಾ
ಪ್ತಿಂ ದದಾತಿ ನೃಪ! ಭೂಭೃತಾಂ ॥೧೯॥ ವೇನಃ ॥ ಮತ್ತಃ
ಕೋಽಭ್ಯ ಧಿ ಕೋನ್ಯೋಸ್ತಿ ಕಶ್ಚಾರಾಧ್ಯೋ ಮಮಾಪರಃ ? ।

ಯಜ್ಞಗಳಿಗೂ ಅಭಿಮಾನಿದೇವತೆ ಎನಿಸಿ ತ್ರಿಲೋಕಾಧಿಪತಿಯಾದ ಶ್ರೀ
ವಿಷ್ಣುವನ್ನು ಆ ಯಜ್ಞದಿಂದ ಸಂತೋಷಗೊಳಿಸಬೇಕೆಂದಿರುವೆವು, ಇದ
ಕ್ಕಾಗಿ ನೀನು ವಿಘ್ನವೂಡಬೇಡ, ನಿನಗೆ ಮಂಗಳವಾಗಲಿ, ಈ ಯಜ್ಞ
ವು ನಿರ್ವಿಘ್ನವಾಗಿ ನೆರವೇರಿದೊಡೆ ,, ನ್ಯಾಯದಿಂದ ಪ್ರಜಾಪರಿಪಾಲನ
ಮಾಡುವ ರಾಜನು ಆ ಪ್ರಜೆಗಳು ಗಳಿಸುವ ಪುಣ್ಯದಲ್ಲಿ ಆರನೆಯ ಒಂದು
ಪಾಲಿಗೆ ಭಾಗಿಯು, ಎಂಬ ಅರ್ಥವುಳ್ಳ ,ಪುಣ್ಯಾತ್ ಷಡ್ಭಾಗಮಾದತ್ತೇ
ನ್ಯಾಯೇನ ಪರಿಪಾಲಯನ್,, ಎಂಬ ಸ್ಮೃತ್ಯನುಸಾರ ನಾವು ಮಾಡುವ
ಯಜ್ಞದಿಂದ ನಮಿಗುಂಟಾಗುವ ಸುಕೃತದಲ್ಲಿ ನೀನೂ ಆರನೆಯ ಒಂದು
ಹಿಸ್ಸೆಗೆ ಭಾಗಿಯಾಗುವೆ ॥೧೫॥ ಎಲೈ ನರಪಾಲನೆ ಈಗ ನಾವು ಮಾಡ
ಬೇಕೆಂದಿರುವ ಯಜ್ಞದಿಂದ ಯಜ್ಞಪಾಲಕನೆನಿಸಿದ ವಿಷ್ಣುವು ಸುಪ್ರೀ
ತನಾಗುವನು ಅದರಿಂದ ನಿನ್ನಕೋರಿಕೆಗಳೆಲ್ಲವೂ ದಿಟವಾಗಿಯೂ ತಾವಾ
ಗಿಯೇ ಕೈಗೂಡುವುವು ॥೧೯॥ ಎಲೈ ರಾಜನೆ ಯಾವ ರಾಜನ ದೇಶದಲ್ಲಿ
ಯಜ್ಞಪತಿ ಎನಿಸಿದ ವಿಷ್ಣುವು ಯಜ್ಞಗಳಿಂದ ಸತ್ಕೃತನಾಗುವನೋ ಅಂ
ತಹ ರಾಜನಿಗೆ ಆ ಪರಮಾತ್ಮನು ಪ್ರಸನ್ನನಾಗಿ ಆ ರಾಜನ ಕೋರಿಕೆಗಳೆ
ಲ್ಲವೂ ಸುಲಭವಾಗಿ ಶೀಘ್ರದಲ್ಲಿಯೇ ಕೈಗೂಡುವಂತೆ ಅನುಗ್ರಹಿಸುವ
ನು. ಆದುದರಿಂದ ನೀನು ಈ ದೇಹದಿಂದಲೇ ಇನ್ನೂ ದೀರ್ಘಕಾಲ ಸು
ಖವಾಗಿದ್ದು, ಅನೇಕ ದಿವ್ಯ ಭೋಗಗಳನ್ನನುಭವಿಸಿ ಕ್ಷೇಮದಿಂದ ರಾ
ಜ್ಯವಂ ಪರಿಪಾಲನೆ ಮಾಡಬೇಕೆಂಬುದಾಗಿ ನಿನಗೆ ಕುತೂಹಲ ವಿದ್ದೊಡೆ
ನಮಗೆ ಈ ಯಜ್ಞವಂ ಮಾಡುವುದಕ್ಕೆ ಅನುಜ್ಞೆಯಂ ದಯಪಾಲಿಸು
ಎಂಬದಾಗಿ ನಾನಾ ಬಗೆಯಿಂದ ಕೇಳಿಕೊಂಡರು ॥೧೯॥ ವೇನ ರಾಜ
ನು ಹೇಳುತ್ತಾನೆ:—ಎಲೈ ಋಷಿಗಳಿರಾ ; ನನಗಿಂತಲೂ ದೊಡ್ಡವನಾ

ಕೋಽಯಂ ಹರಿರಿತಿಖ್ಯಾತೋ ? ಯೋವೋಯಜ್ಞೇಶ್ವರೋಮತಃ ॥೨೦॥ ಬ್ರಹ್ಮಾ ಜನಾರ್ದನ ಶ್ಶಂಭು ರಿಂದ್ರೋ ವಾಯುರ್ಯಮೋ ರವಿಃ। ಹುತಭುಗ್ವರುಣೋ ಧಾತಾ ಪೂಷಾ ಭೂಮಿ ರ್ನಿಶಾಕರಃ ॥೨೧॥ ಏತೇ ಚಾನ್ಯೇಚ ಯೇ ದೇವಾ ಶ್ಶಾಪಾನು ಗ್ರಹಕಾರಿಣಃ । ನೃಪಸ್ಯತೇ ಶರೀರಸ್ಥಾ ಸ್ಸರ್ವದೇವ ಮಯೋನೃಪಃ॥ ಏತ ದ್ಗೃಹೀತ್ವಾ ವಚನಾಜ್ಞಾಪ್ತಂ ಯದ್ಯ ಥಾ ಕ್ರಿಯತಾಂ ತ ಥಾ । ನದಾತವ್ಯಂ ನ ಹೋತವ್ಯಂ ನ ಯಷ್ಟವ್ಯಂಚ ಭೋ

ವನಿರುವನು ? ನನಗಿಂತಲೂ ಬೇರೆ ಪೂಜಾರ್ಹನಾರು ? ನೀವು ಮಾಡಬೇಕೆಂದಿರುವ ಯಜ್ಞಕ್ಕೆ ಅಧಿಪತಿಯು ಶ್ರೀಹರಿಯೆಂಬುದಾಗಿ ನನ್ನ ಬಳಿ ಉಸಿರುವಿರಲ್ಲಾ ಆ ಹರಿ ಎಂಬುವನಾರು ? ನಾನೇ ಸಕಲ ದೇವತಾಸ್ವರೂಪಿಯಾಗಿರುವಲ್ಲಿ ನೀವು ಬೇರೊಬ್ಬನನ್ನು ಪೂಜಿಸಬೇಕೆಂದಿರುವುದಂ ನೋಡಿದರೆ ನನಿಗೆ ತಂಬಾ ಅಪಮಾನ ಕರವಾಗಿರುವುದು ॥೨೦॥ ಈ ಜಗತ್ತಿನ ಸೃಷ್ಟಿಗಧೀಶನೆನಿಸಿದ ಚತುರ್ಮುಖನೂ, ಸ್ಥಿತಿಕರ್ತನಾದ ವಿಷ್ಣುವೂ, ಲಯಕರ್ತನೆನಿಸಿದ ಶಂಕರನೂ, ತ್ರಿಲೋಕಾಧಿಪನೆನಿಸಿದ ಇಂದ್ರನೂ, ಪ್ರಾಣಪ್ರದನಾದ ವಾಯುವೂ, ಪ್ರಾಣಿಗಳನ್ನು, ಅವರವರ ಕರ್ಮಾನುಸಾರವಾಗಿ ಸುಖದುಃಖಗಳಲ್ಲಿ ನಿಯೋಗಿಸುವ ಯಮನೂ ತೇಜಃಪ್ರದನಾದ ಸೂರ್ಯನೂ, ದೇವತೆಗಳಿಗೆ ಹವಿಸ್ಸನ್ನು ಜಯಿಸುವ ಅಗ್ನಿಯೂ, ಜಲಾಧಿಪನೆನಿಸಿದ ವರುಣನೂ, ಧಾರಣ ಸಮರ್ಥನಾದ ಧಾತೃವೂ, ಪೋಷಿಸುವ ಸಾಮರ್ಥ್ಯವುಳ್ಳ ಪುರುಷನೂ, ರಾತ್ರ್ಯಧೀಶನಾದ ಚಂದ್ರನೂ, ಇವರೇ ಮೊದಲಾಗಿ ನಿಗ್ರಹಾನುಗ್ರಹ ಸಾಮರ್ಥ್ಯವುಳ್ಳ ಸಕಲ ದೇವತೆಗಳೂ ರಾಜನ ಶರೀರದಲ್ಲಿ ಅಡಗಿರುವರು. ಆದುದರಿಂದ ರಾಜನು ಸಕಲ ದೇವತಾ ಸ್ವರೂಪಿಯಾಗಿರುವನು ॥೨೧-೨೭॥ ಎಲೈ ಬ್ರಾಹ್ಮಣರುಗಳಿರಾ ; ಈಗ ಇದುವರೆಗೂ ನಾನು ಹೇಳಿದಮಾತನ್ನು ಚನ್ನಾಗಿ ಗಮನಿಸಿ ಕೇಳಿ ನನ್ನ ಆಜ್ಞೆಯಂತೆ ಜಾಗರೂಕತೆಯಿಂದ ನಡೆಯುತಕ್ಕದ್ದು. ಇಲ್ಲವಾದೊಡೆ ನಿಮಗೆ ಕೇಡುತಪ್ಪದುದಲ್ಲ. ಇದು ಮೊದಲು ನಿಮ್ಮಲ್ಲಿ ಯಾರೊಬ್ಬರೂ ಯಾರೊಬ್ಬರಿಗೂ ಯಾವ ವಿಧವಾದ ದಾನವನ್ನೂ ಮಾಡಕೂಡದು ಚರು, ಸಮಿತ್ತು, ಆಜ್ಯ ಮೊದಲಾದ

ದ್ವಿಜಾಃ! ॥೨೫॥ಭರ್ತೃ ಶುಶ್ರೂಷಣಂ ಧರ್ಮೋ ಯಥಾಸ್ತ್ರೀಣಾಂ ಪರೋಮತಃ । ಮಮಾಜ್ಞಾ ಪಾಲನಂ ಧರ್ಮೋ ಭವತಾಂಚ ತಥಾದ್ವಿಜಾಃ! ॥೨೪॥ ಋಷಯ ಊಚುಃ ॥ ದೇಹ್ಯನುಜ್ಞಾಂ ಮಹಾಭಾಗ! ಮಾ ಧರ್ಮೋ ಯಾತು ಸಂಕ್ಷಯಂ । ‡ ಹವಿಷಾಂ

ಯಾವ ವಸ್ತುಗಳನ್ನೂ ಅಗ್ನಿಯಲ್ಲಿ ಹೋಮಮಾಡಕೂಡದು. ಯಾವಯ ಜ್ಞವನ್ನೂ ಮಾಡಬಾರದು ನನಗಿಂತಲೂ ಬೇರೆ ಮತ್ತಾರನ್ನೂ ಪೂಜಿಸ ಕೂಡದು ॥೨೫॥ ಎಲೈ ಬ್ರಾಹ್ಮಣರುಗಳಿರಾ ; ಸ್ತ್ರೀಗೆ ತನ್ನ ಪತಿಯ ಆಜ್ಞಾನುಸಾರ ನಡೆಯುವಿಕೆಯೂ ಮತ್ತು ಆತನಿಗೆ ಇಷ್ಟವಾದ ಕಾರ್ಯ ವನ್ನೇ ಮಾಡುತ್ತಾ ಅನಿಷ್ಟವಾದ ಕಾರ್ಯವಂ ಪರಿತ್ಯಜಿಸುವುದೂ ಕೂಡ ಹೇಗೆ ಧರ್ಮಯುಕ್ತವಾದುದೋ ಹಾಗೆಯೇ ನನ್ನ ಪ್ರಜೆಗಳಾದ ನಿಮಿ ಗೂ ಕೂಡ ನನ್ನ ಆಜ್ಞೆಯಂತೆ ನಡೆಯುವುದೇ ಪರಮ ಧರ್ಮವಾಗಿರು ವುದು. ಇಂತಿರಲು ನೀವು ನನ್ನನ್ನು ಪದೇ ಪದೇ ಪ್ರಶ್ನೆಮಾಡುವುದ ರಿಂದ ಫಲವಿಲ್ಲ. ಇಲ್ಲಿಂದ ತೆರಳಿರಿ, ಎಂಬದಾಗಿ ವೇನನು ಹೇಳಿದ ಬ ಳಿಕ ಆ ಋಷಿಗಳು ಅಲ್ಲಿಗೂ ಸಿಟ್ಟುಗೊಳ್ಳದೆ ಶಾಂತರಾಗಿಯೇ ಮರಳಿ ಆ ವೇನರಾಯನನ್ನು ಬೇಡಿಕೊಳ್ಳಲುಪಕ್ರಮಿಸಿದರು ॥೨೪॥ ಎಲೈ ಮ ಹಾಮಹಿಮ ಸಂಪನ್ನನೆನಿಸಿದ ವೇನರಾಯನೆ ; ನೀನು ಈ ವಿಷಯದ ಲ್ಲಿ ದುರಾಲೋಚನೆ ಮಾಡಿ ದುಡುಕಬೇಡ ; ಧರ್ಮವನ್ನು ನಾಶಗೊಳಿಸ ಬಾರದು ; ಧರ್ಮವು ನಷ್ಟವಾದೊಡೆ ರಾಜ್ಯವು ಅನೇಕ ಅನರ್ಥಗಳಿಗೆ ಈಡಾಗುವುದು. ಈ ಸಕಲ ಪ್ರಪಂಚಪ್ರೊ ಹವಿಸ್ಸುಗಳ ಪರಿಣಾಮ ರೂಪವಾದುದು ಅದು ಹೇಗೆಂದರೆ; ನಾವು ಈ ಲೋಕದಲ್ಲಿ ವಿಧ್ಯುಕ್ತ ವಾಗಿ ಅಗ್ನಿಯಲ್ಲಿ ಹೋಮಮಾಡಿದರೆ ಇದರಿಂದ ದೇವತೆಗಳು ಸಂತುಷ್ಟ ರಾಗಿ ಮಳೆಗರೆವರು. ಅದರಿಂದ ಸಸ್ಯಾದಿಗಳು ಚನ್ನಾಗಿ ಬೆಳೆದು

‡ ದೇವಾ೯ ಭಾವಯತಾನೇನ ತೇದೇವಾ ಭಾವಯಂತುವಃ । ಪರಸ್ಪರಂ ಭಾವಯಂತ ಶ್ರೇಯಃ ಪರಮವಾಪ್ಸ್ಯಥ ॥ ಎಂಬದಾಗಿ ಗೀತಾವಾಕ್ಯವೂ, ಅಗ್ನೌ ಪ್ರಾಸ್ತಾಹುತಿ ಸ್ಸಮ್ಯ ಗಾದಿತ್ಯ ಮುಪತಿಷ್ಠತೇ । ಆದಿತ್ಯಾ ಜ್ಜಾಯತೇ ವೃಷ್ಟಿ ರ್ವೃಷ್ಟೇರನ್ನಂ ತತಃಪ್ರಜಾಃ ॥ ಎಂಬ ಸ್ಮೃತಿವಾಕ್ಯವೂ ಕೂಡ ಈ ವಿಷಯದಲ್ಲಿ ಪ್ರಮಾಣವಾಗಿರುವುದು.

ಪರಿಣಾವೋಽಯಂ ಯ ದೇತ ದಖಿಲಂ ಜಗತ್ ॥೩೫॥ ಶ್ರೀ ಪ
ರಾಶರಃ। ಇತಿ ವಿಜ್ಞಾಪ್ಯವೂನೋಪಿ ಸವೇನಪರಮರ್ಷಿಭಿಃ । ಯದಾ
ದದಾತಿನಾನುಜ್ಞಾಂ ಪ್ರೋಕ್ತಃ ಪ್ರೋಕ್ತಃ ಪುನಃ ಪುನಃ॥೩೬॥ ತತ
ಸ್ತು ಋಷಯಃ ಸ್ಸರ್ವೇ ಕೋಪಾವಿಷ್ಟ ಸಮನ್ವಿತಾಃ । ಹ
ನ್ಯತಾಂ ಹನ್ಯತಾ ವೇಷ ಇತ್ಯೂಚುಸ್ತೇ ಪರಸ್ಪರಂ॥೩೭॥ಯೋ
ಯಜ್ಞಾ ಪುರುಷಂ ವಿಷ್ಣು ಮನಾದಿ ನಿಧನಂ ಪ್ರಭುಂ । ವಿನಿಂದ

ದೇಶವು, ಸುಭಿಕ್ಷಸ್ಥಿತಿಯಲ್ಲಿರುವುದು ಆ ಸಸ್ಯವರ್ಗದಿಂದುಂಟಾದ ಫಲದಿಂ
ದ ನಾವು ಮುಂಚೆ ಯಜ್ಞಗಳನ್ನು ಮಾಡಬೇಕು. ಹೀಗೆ ನಮಗೂ ದೇ
ವತೆಗಳಿಗೂ ಕೂಡ ಸಂಬಂಧವು ಅನುಸ್ಯೂತವಾಗಿರುವುದು ಆದುದರಿಂದ
ದಯವಿಟ್ಟು ನನಗೆ ಅನುಜ್ಞೆಯನ್ನು ದಯಪಾಲಿಸು ॥೩೫॥ ಪರಾಶರನು
ಹೇಳುತ್ತಾನೆ:—ಅಯ್ಯಾ ಮೈತ್ರೇಯನೆ, ಇಂತು ಆ ಋಷಿಗಳೆಲ್ಲರೂ
ಆವೇನ ರಾಯನನ್ನು ಮುಂಚೆ ಅನೇಕ ಬಗೆಯಿಂದ ಬೇಡಿಕೊಂಡರು.
ಅವರು ಎಷ್ಟೆಷ್ಟು ಬಗೆಯಿಂದ ಬೇಡಿಕೊಂಡರೂ ಇವನು ಬೇರೆ ಅವ
ರಿಗೆ ಅನುಜ್ಞೆಯನ್ನು ಕೊಡಲಿಲ್ಲವು ॥೩೬॥ ಆ ಬಳಿಕ ಆ ಋಷಿಗಳೆಲ್ಲರೂ
ಸೇರಿ, ಈ ವೇನನು ತನುಗೆ ಯಜ್ಞಾದಿಗಳಿಗೆ ಅನುಜ್ಞೆಯನ್ನು ಕೊಡದಿ
ರುವುದಕ್ಕೂ ಮತ್ತು ದೇವದೇವನೆನಿಸಿದ ಶ್ರೀವಾಸುದೇವನಾರಾಯಣನನ್ನು ಜರೆ
ದುಮಾತನಾಡಿದುದಕ್ಕೂ ಬಹಳವಾಗಿ ಸಿಟ್ಟುಗೊಂಡು ಅಸಹನೆಯಿಂದೊ
ಡಗೂಡಿ (ಆತನು ಭಗವಂತನನ್ನು ನಿಂದಿಸಿದುದಕ್ಕಾಗಿ ಆ ಮಾತನ್ನು
ಕೇಳಿ ತಡೆಯಲಾರದೆ) ಎಲ್ಲರೂ ಅನ್ಯೋನ್ಯವಾಗಿ ಸೇರಿ ದುರಾಚಾರ ಸಂ
ಪನ್ನನೆನಿಸಿ ನಾಸ್ತಿಕವಾದವಂ ಮಾಡುತ್ತಿರುವ ಈ ನರಾಧಮನಂ ಹೊಡೆ
ಯಿರಿ, ಬಡಿಯಿರಿ, ಕೊಲ್ಲಿರಿ ಎಂಬ ಇದೇ ಮೊದಲಾಗಿ ನಾನಾ ಪರಿ
ಯಿಂದ ಮಾತನಾಡಿಕೊಂಡರು ॥೩೭॥ ಯಜ್ಞಾ ಪುರುಷನೂ, ಯಜ್ಞಾಧಿಪತಿ
ಯೂ, ಯಜ್ಞಫಲದಾಯಕನೂ, ಸರ್ವವ್ಯಾಪಕನೂ, ಉತ್ಪತ್ತಿನಾಶ
ಶೂನ್ಯನೂ, ಜಗದ್ವಿಲಕ್ಷಣಶಕ್ತಿ ಸಂಪನ್ನನೂ ಎನಿಸಿದ ಶ್ರೀಮಹಾವಿಷ್ಣು
ವನ್ನು ಯಾವ ನರಾಧಮನು ನಿಂದಿಸುವನೋ ಅಂತಹ ನೀಚನು ಭೂಮಿಗೆ
ಯೋಗ್ಯನಾದ ಪತಿಯಲ್ಲವು. ಪ್ರಕೃತದಲ್ಲಿ ಇವನೂ ಕೂಡ ಯಜ್ಞಾದಿ
ಗಳಿಗೆ ಅನುಜ್ಞೆ ಕೊಡದೆ ಭಗವನ್ನಿಂದಕ ನಾದುದರಿಂದ ರಾಜನಾಗಲು

ತ್ಯ ಸಮಾಚಾರೋ ನಸಯೋಗ್ಯೋ ಭುವಃಪತಿಃ ॥೨೪॥ ಇತ್ಯು
ಕ್ತಾ ವ ಮಂತ್ರಪೂತೈ ಸ್ತೈ ಃ ಕುಶೈರ್ಮುನಿಗಣಾ ಭೃಶಂ ।ನಿಜ
ಘ್ನು ರ್ನಿಹತಂ ಪೂರ್ವಂ ಭಗವನ್ನಿಂದನಾದಿನಾ ॥೨೫॥ ತತಶ್ಚ ಮು
ನಯೋ ರೇಣುಂ ದದೃಶು ಸ್ಸರ್ವತೋ ದ್ವಿಜ! । ಕಿಮೇತದಿತಿ
ಚಾಸನ್ನಾ ಪಪ್ರಚ್ಛು ಸ್ತೇ ಜನಾಂ ಸ್ತದಾ ॥೨೬॥ ಆಖ್ಯಾತಂ
ಚ ಜನೈಸ್ತೇಷಾಂ ಚೋರೀ ಭೂತೈ ರರಾಜಕೇ । ರಾಷ್ಟ್ರೇ
ತು ಲೋಕೈ ರಾರಬ್ಧಂ ಪರ ಸ್ವಾದಾನ ಮಾತುರೈಃ ॥೨೭॥ ತೇ
ಷಾಮುದೀರ್ಣ ವೇಗಾನಾಂ ಚೋರಾಣಾಂ ಮುನಿಸತ್ತಮಾಃ ! ।

ತಕ್ಕವನಲ್ಲ. ॥೨೪॥ ಈ ಪರಿಯಿಂದ ಮಾತನಾಡಿಕೊಂಡು ಆ ಋಷಿಗ
ಳೆಲ್ಲರೂ, ಮೊದಲು ವಿಷ್ಣುವನ್ನು ದೂಷಣೆಮಾಡಿ, ಯಜ್ಞದೂಷಕನಾದು
ದರಿಂದ ಮೃತಪ್ರಾಯನಾಗಿದ್ದ ಆ ವೇನನನ್ನು ಮಂತ್ರ ಪೂತಗಳಾದ ಕುಶ
ಗಳಿಂದ ಅಟ್ಟಿಕೊಂಡು ಹೊಡೆಯ ತೊಡಗಿದರು ॥೨೫॥ ಈ ಹೊತ್ತಿಗೆ
ಸರಿಯಾಗಿ ನಾಲ್ಕು ದಿಕ್ಕುಗಳನ್ನೂ ವಿಶೇಷವಾದ ಧೂಳಿಯು ವ್ಯಾಪಿಸಿ
ಕೊಂಡು ಎಲ್ಲರ ದೃಷ್ಟಿಗಳನ್ನೂ ಮುಚ್ಚಿಕೊಂಡಿತು. ಆ ಕಾಲಕ್ಕೆ
ಸರಿಯಾಗಿ ನಾಲ್ಕು ಕಡೆಯಿಂದಲೂ ಭಯದಿಂದ ಕಂಗೆಟ್ಟು ಅನೇಕಮಂದಿ
ಜನರು ಈಋಷಿಗಳ ಬಳಿಸಾರ್ದು ಇವರನ್ನುಮರೆಹೊಕ್ಕರು. ಆಗ ಋ
ಷಿಗಳು ಹೀಗೆ ಓಡಿಬಂದ ಆ ಜನರನ್ನು ನೋಡಿ ಈರೀತಿ ಎಲ್ಲೆಲ್ಲಿಯೂ
ಧೂಳಿ ಏಳುವುದಕ್ಕೆ ಕಾರಣವೇನೆಂಬುದಾಗಿ ಪ್ರಶ್ನೆ ಮಾಡಿದರು ॥೨೬॥
ಆಗ ಆ ಜನಗಳೆಲ್ಲರೂ ಸ್ವಾಮಿ ತಪಸ್ವಿವರ್ಯರೆ, ಈ ಭೂಮಿಯಲ್ಲಿ ಈಗ
ನಮಗೆ ಒದಗಿರುವ ವಿಪತ್ತನ್ನು ಏನೆಂದು ಹೇಳುವ! ದೇಶವು ಅರಾಜಕ
ವಾದುದು. (ರಾಜನಾದರೋ ಪ್ರಜೆಗಳ ಯೋಗಕ್ಷೇಮವನ್ನೇ ವಿಚಾ
ರಿಸುವುದಿಲ್ಲವು.) ಜನರೆಲ್ಲರೂ ತಮ್ಮ ತಮ್ಮ ವರ್ಣಾಶ್ರಮೋಚಿತ ಕೃತ್ಯ
ಗಳನ್ನು ಪರಿತ್ಯಜಿಸಿ ತಿನ್ನುವುದಕ್ಕೆ ಗತಿ ಯಿಲ್ಲದೆ ಯಲ್ಲರೂ ಕಳ್ಳತನದಲ್ಲಿ
ಉದ್ಯುಕ್ತರಾಗಿರುವರು. ಇಂತು ತಿನ್ನುವುದಕ್ಕೆ ಗತಿ ಇಲ್ಲದಿರುವಕಾ
ರಣ ಕಳ್ಳತನದಿಂದಾದರೂ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಹಿಂದಟ್ಟಿ
ಬರುತಿರುವರು ॥೨೭॥ ಸ್ವಾಮಿ ಮುನಿವರ್ಯರೆ; ಇಂತು ಪರಸ್ವತ್ತನ್ನು
ಅಪಹರಿಸಲು ವೇಗವಾಗಿ ಹಿಂದಟ್ಟಿ ಬರುತಿರುವ ಚೋರರ ಕಾಲು ತುಳಿ

ಸುಮಹಾ ದೃಶ್ಯತೇ ರೇಣುಃ ಪರ ವಿತ್ತಾಪ ಹಾರಿಣಾಂ ॥೩॥
ತತ ಸ್ಸಂನುಂತ್ಯ ೨ ತೇ ಸರ್ವೇ ಮುನಯು ಸ್ತಸ್ಯ ಮುಂತ್ರತಃ ।
ಮಮುಂಥು ರೂರುಂ ಪುತಾರ್ಥ ಮನಪತ್ಯ ಸ್ಯ ಯತ್ನತಃ ॥೪॥
ಮಥ್ಯ ಮಾನಾ ತ್ಸ ಮುತ್ತ ಸ್ಥೌ ತಸ್ಯೋರೋಃ ಪುರುಷ ಃ
ಕಿಲ । ದಗ್ಧ ಸ್ಥೂಣಾ ಪ್ರತೀಕಾಶಃ ಖರ್ವ ಟಾಸ್ಯೋ ೨ ತಿಪ್ರ
ಸ್ವಕಃ ॥೫॥ ಕಿಂ ಕರೋಮೀತಿ ತಾ ೯ಸರ್ವಾ ವಿಪ್ರಾನಾಹ
ತ್ವರಾನ್ವಿತಃ । ನಿಷೀದೇತಿ ತ ಮೂಚು ಸ್ತೇ ನಿಷಾದ ಸ್ತೇನ
ಸೋ ೨ ಭವತ್ ॥೬॥ ತತ ಸ್ತತ್ಸಂ ಭವಾ ಜ್ಜಾತಾ ವಿಂಧ್ಯ ಶೈಲ

ತದಿಂದ ಉಂಟಾಗಿರುವ ಈ ಧೂಳಿಯು ಈ ೭ನೇತಿ ಲೋಕವನ್ನೆಲ್ಲಾ ಕವಿದು ಕೊಂಡಿರುವುದು. ಎಂಬದಾಗಿ ಆ ಋಷಿಗಳಿಗೆ ವಿನ್ನವಿಸಿದರು.॥೨॥ ಆ ಬಳಿಕ ಆ ಋಷಿಗಳೆಲ್ಲರೂ ಅನ್ಯೋನ್ಯವಾಗಿ ವಿಚಾರಮಾಡಿ "ನಮಗೆ ರಾಜನಾದ ಈ ವೇನನು ಅಪುತ್ರನಾಗಿರುವನು. ಇವನಿಗೆ ಪುತ್ರನುಂಟಾಗುವಂತೆ ಮಾಡಬೇಕೆಂದು" ನಿಶ್ಚಯಿಸಿ ಪುತಾರ್ಥವಾಗಿ ಆ ವೇನನ ತೊಡೆಯನ್ನು ಪುತ್ರೋತ್ಪತ್ತಿಗೋಸುಗ ಮಥನಮಾಡಿದರು. ॥೩॥ ಇಂತು ಋಷಿಗಳೆಲ್ಲರೂ ಆ ವೇನನ ತೊಡೆಯನ್ನು ಮಥನ ಮಾಡಲಾಗಿ ಸುಟ್ಟು ಹೋದ ಕಂಬದಂತೆ ಕಪ್ಪಗೂ, ದಪ್ಪನಾಗಿ ಇರುವ ಆಕಾರದಿಂದ ಕೂಡಿ, ಚಿಕ್ಕವೋರೆ, ದಪ್ಪನಾದ ಮೂಗು, ಸ್ಥೂಲವಾದ ಹೊಟ್ಟೆ ಇವುಗಳುಳ್ಳ ಬಬ್ಬು ಪುರುಷನು ಆ ವೇನರಾಯನ ತೊಡೆಯಿಂದ ಪುಟ್ಟಿದನು ॥೪॥ ಇಂತು ಉದಯಿಸಿದ ಆ ವಿಕಟ ಪುರುಷನು ಅತಿ ತ್ವರೆಯಿಂದೊಡಗೂಡಿ ಆ ಮುನಿಗಳೆನ್ನು ಕುರಿತು ,,ಎಲೈ ಬ್ರಾಹ್ಮಣೋತ್ತಮರೆ ; ನಾನು ನಿಮಗೆ ಕಿಂಕರನಾಗಿರುವೆನು. ಆಜ್ಞಾಪಿಸಿರಿ. ನಾನು ನಿಮಗೆ ಯಾವ ಕೆಲಸವನ್ನು ಮಾಡಿಕೊಡಬೇಕು ? ಎಂಬದಾಗಿ ಪ್ರಶ್ನೆಮಾಡಿದನು. ಆ ಬಳಿಕ ಆ ಮುನಿಗಳು ಅವನಂ ಕುರಿತು ಕುಳಿತುಕೊಳ್ಳುವಂತೆ ಹೇಳಿದರು. ತರುವಾಯ ಅವನು ಕುಳಿತುಕೊಂಡನು. ಆದುದರಿಂದ ಅವನಿಗೆ ನಿಷಾದನೆಂಬದಾಗಿ ಹೆಸರಾಯಿತು. (ನಿಷಾದನೆಂದರೆ ವಿಸ್ತಾರವನೆಂದರ್ಥವು.) ॥೫॥ ಅಯ್ಯಾ ಮುನಿಶಾರ್ದೂಲನೆನಿಸಿದ ಮೈತ್ರೇಯನೆ ; ಈ ವಿಕಟ ಪುರುಷನುದಯಿಸಿದ ಬಳಿಕ, ಅತ್ಯಂತ ನೀಚ ಕಾರ್ಯವನ್ನು

ನಿವಾಸಿನಃ । ನಿಷಾದಾ ಮುನಿಶಾರ್ದೂಲ । ಪಾಪಕರ್ಮೋ ಪಲ
ಕ್ಷಣಾಃ ॥೩೬॥ ತೇನ ದ್ವಾರೇಣ ತತ್ಪಾಪಂ ನಿಷ್ಕ್ರಾನ್ತಂ ತಸ್ಯ
ಭೂಪತೇಃ । ನಿಷಾದಾಸ್ತೇ ತತೋಜಾತಾ ವೇನ ಕಲ್ಮಷ ನಾಶ
ನಾಃ ॥೩೭॥ ತತೋಸ್ಯ ದಕ್ಷಿಣಂ ಹಸ್ತಂ ಮನುಂಥು ಸ್ತೇ ತದಾ
ದ್ವಿಜಾಃ ॥೩೮॥ ಮಥ್ಯಮಾನೇ ಚ ತತಾ ಭೂ ತ್ಪೃಥುರ್ವೈ ನೃಪಃ
ಪ್ರತಾಪವಾ । ದೀಪ್ಯಮಾನ ಸ್ಸ್ವವಪುಷಾ ಸಾಕ್ಷಾದಗ್ನಿರಿವೋ
ಜ್ವಲ ॥೩೯॥ ಆದ್ಯಮಾಜಗವಂ ಸಾಮ ಜಾತ್ಪಪಾತ ತತೋ
ಧನುಃ । ಶರಾಶ್ಚ ದಿವ್ಯಾ ನಭಸಃ ಕವಚಂ ಚ ಪಪಾತಹ ॥೪೦॥

ಮಾಡುವಿಕೆಯೇ ಪ್ರಧಾನವಾಗಿ ಉಳ್ಳ ಬೆಸ್ತರು ಉದಯಿಸಿದರು. ಇವರಿ
ಗೆ ವಿಂಧ್ಯಪರ್ವತದ ತೊಪ್ಪಲು ಪ್ರದೇಶಗಳು ಆವಾಸಸ್ಥಾನವಾಗಿ ಏರ್ಪ
ಟ್ಟವು ॥೩೬॥ ಇಂತು ಋಷಿಗಳು ಮಥನಮಾಡಿದ ಆ ತೊಡೆಯ ರಂಧ್ರ
ಮಾರ್ಗದಿಂದ ಹುಟ್ಟಿದ ಬೆಸ್ತರ ರೂಪದಿಂದ ಆ ಭೂಪತಿಯಾದ ವೇನರಾ
ಯನ ಪಾಪಗಳೆಲ್ಲವೂ ಹೊರಗೆ ಬಂದುವು (ಆ ವೇನರಾಯನು ಪಾಪವಿಮು
ಕ್ತನಾದನೆಂದು ಭಾವವು) ಆ ಮಾರ್ಗವಾಗಿ ಉದಯಿಸಿದ ಈ ಬೆಸ್ತರು
ವೇನರಾಯನ ಪಾಪನಾಶಕ್ಕೆ ಕಾರಣ ಭೂತರಾದರು. ॥೩॥ ಆಬಳಿಕ
ಈ ಋಷಿಗಳೆಲ್ಲರೂ ಇಂತು ಉದಯಿಸಿದ ಈ ವಿಕಟಪುರುಷನು ರಾಜ
ಸಿಂಹಾಸನಾರೋಹಣಮಾಗ್ಯೆಯ್ಯಲು ಅಯೋಗ್ಯನೆಂದರಿತು, ಮತ್ತೊ
ಬ್ಬ ರಾಜನಂ ಪಡೆಯಲು ವತ್ತಿಂದುಬಾರಿ ಆ ವೇನರಾಯನ ಬಲಗೈ
ಯ್ಯನ್ನು ಮಥನಮಾಡಿದರು. ॥೩೭॥ ಇಂತು ಆ ಮುನಿಗಳೆಲ್ಲರೂ ಆವೇ
ನನ ದಕ್ಷಿಣ ಹಸ್ತವನ್ನು ಮಥನ ಮಾಡುತಿರಲು, ಕಂದರ್ಪನಂತೆ ಕಂಗೊ
ಳಿಸುವ ದೇಹ ಕಾಂತಿಯಿಂದೊಡಗೂಡಿ, ಸಾಕ್ಷಾತ್ ಅಗ್ನಿಪುರುಷನಂತೆ
ತೇಜಸ್ವಿ ಎನಿಸಿ, ಇಂದ್ರನಂತೆ ಪರಾಕ್ರಮಶಾಲಿಯಾದ ಒಬ್ಬ ಪುರುಷನು
ಆ ವೇನರಾಯನ ಬಲಗೈಯಿಂದ ಜನಿಸಿದನು. ಈತನಿಗೇ ಪೃಥುರಾಯ
ನೆಂದು ಹೆಸರು. ॥೩೯॥ ಇಂತು ಪೃಥುರಾಯನು ಜನಿಸಿದ ಬಳಿಕ ಧನು
ಸ್ಸುಗಳಲ್ಲಿ ಮೊದಲನೆಯದಾದ ಅಜಗರವೆಂಬ ಪಿನಾಕಧನುಸ್ಸು ಅಂತರಿ
ಕ್ಷದಿಂದ ಕೆಳಗೆ ಬಿದ್ದಿತು. ತೀಕ್ಷ್ಣತರಗಳೆನಿಸಿದ ಉತ್ತಮ ಬಾಣಗಳೂ,
ಅಂತೆಯೇ ದಿವ್ಯವಾದ ಕವಚವೂ ಕೂಡ ಆಕಾಶದಿಂದ ಭೂಮಿಯನ್ನು

ತಸ್ಮಿನ್ ಜಾತೇತು ಭೂತಾನಿ ಸಂಪ್ರಹೃಷ್ಟಾನಿ ಸರ್ವಶಃ ॥೪೧॥ ಸ
ತ್ಪುತ್ರೇಣಚ ಜಾತೇನ ವೇನೋಪಿ ತ್ರಿದಿವಂ ಯಯೌ । ಪುನ್ನಾ
ವ್ನೋ ನರಕಾತ್ತ್ರಾತ ಸ್ಸ ತೇನ ಸು ಮಹಾತ್ಮನಾ॥೪೨॥ ತಂ ಪ
ಮುದಾಶ್ಚ ನದ್ಯಶ್ಚ ರತ್ನಾ ನ್ಯಾದಾಯ ಸರ್ವಶಃ । ತೋಯಾನಿ

ಸೇರಿದುವು. ॥೪೧॥ ಇಂತು ವೇನಪುತ್ರನಾದ ಪೃಥುರಾಜನು ಉದಯಿಸುತಿರಲಾಗಿ ಎಲ್ಲ ಭೂತಗಳೂ, ಇಂತಹ ಸರ್ವೋತ್ತಮವಾದ ಪರಾಕ್ರಮದಿಂದೊಡಗೂಡಿದ ರಾಜನನ್ನು ತಾವು ಪಡೆದುದಕ್ಕಾಗಿ ಪರಮಾನಂದ ಭರಿತಗಳಾದುವು (ಆನಂದ ಸೂಚಕಗಳಾದ ಚಿನ್ಹೆಗಳಾಂಟಾದುವು. ಅಂದರೆ ಗಾಳಿಯು ಹಿತವಾಗಿರುವಂತೆ ಮೆಲ್ಲಗ ಬೀಸಲಾರಂಭಿಸಿತು. ಸೂರ್ಯನು ಚನ್ನಾಗಿ ಪ್ರಕಾಶಿಸುತಿದ್ದನು. ಸಮುದ್ರವು ವಿಶೇಷವಾಗಿ ಮೊರೆಯದೆ ಶಾಂತವಾಗಿದ್ದಿತು ನದಿಗಳೆಲ್ಲವೂ ನಿರ್ಮಲವಾದ ಉದಕವಂತಾಳಿದುವು. ಮೃಗಪಕ್ಷಿಗಳೆಲ್ಲವೂ ಭಯಂಕರವಾಗಿ ಗರ್ಜಿಸದೆ ಕಿವಿಗಿಂಪಾದ ಧ್ವನಿಗೈಯ್ಯುತೊಡಗಿದುವು ಮಾನುಷ ವರ್ಗವೆಲ್ಲವೂ ಸಂತೋಷಪಟ್ಟಿತೆಂದು ಭಾವವು) ॥೪೧॥ ಇಂತು ಉದಯಿಸಿದ ಮಹಾನುಭಾವನಾದ ಆ ಪೃಥುರಾಯನಿಂದ ನೀಚಸ್ವಭಾವವುಳ್ಳ ವೇನನೂಕೂಡ ಸ್ವರ್ಗಾರೋಹಣವಂಗೈದನು ಪುತ್ರಸಂತಾನವಿಲ್ಲದಿದ್ದೊಡೆ ಮನುಷ್ಯನು ಎಷ್ಟೇ ದಾನಧರ್ಮ ಪರೋಪಕಾರ ನಿರತನಾಗಿದ್ದರೂ ಅವನಿಗೆ ಸದ್ಗತಿ ದೊರೆಯಲಾರದು. ಆದುದರಿಂದ ಮಕ್ಕಳನ್ನು ಪಡೆಯುವುದು ಅವಶ್ಯಕ ಅದರಲ್ಲಿಯೂ ಸತ್ಪುತ್ರನಾದವನು ಸುಲಭವಾಗಿ ಮಾತಾಪಿತೃಗಳಿಗೆ ಸದ್ಗತಿ ಪ್ರದನಾಗುವನು. ಆದಕಾರಣ ಸತ್ಪುತ್ರನೆನಿಸಿದ ಈ ಪೃಥುವು ವೇನರಾಯನನ್ನು ,,ಪುತ್,, ಎಂಬ ನರಕದಿಂದ ಉದ್ಧರಿಸಿದನು. (ಪುತ್ರನೆಂದರೆ) ,,ಪುನ್ನಾಮ್ನೋನರಕಾತ್ಯಸ್ಮಾತ್ತ್ರಾಯತೇ ಪಿತರಂಸುತಃ । ತಸ್ಮಾತ್ಪುತ್ರಇತಿಖ್ಯಾತಃ,, ಎಂಬ ಸ್ಮೃತಿಗನುಸಾರವಾಗಿ, ಜನನೀ ಜನಕರನ್ನು ಪುತ್ ಎಂಬುವ ಘೋರನರಕದಿಂದ ಉದ್ಧರಿಸುವನೆಂದರ್ಥವು) ॥೪೨॥ ಆ ಬಳಿಕ ಸಮುದ್ರಗಳೂ, ನದಿಗಳೂ ಕೂಡ ಈ ಪೃಥುರಾಯನ ರಾಜ್ಯಾಭಿಷೇಕಕ್ಕೊಸುಗ ಉತ್ತಮೋತ್ತಮಗಳಾದ ಬೆಲೆಯಿಲ್ಲದ ಅನೇಕ ರತ್ನಗಳನ್ನೂ, ಪವಿತ್ರವಾದ ಉದಕವನ್ನೂ ಕೂಡತೆಗೆದುಕೊಂಡು ನಾನಾ

ಚಾ ಭಿಷೇಕಾರ್ಥಂ ಸರ್ವಾ ಣ್ಯೇವೋಪ ತಸ್ಥೆ ॥೪೫॥ ಪಿತಾ
ಮಹಶ್ಚ ಭಗವಾ೯ ದೇವೈ ರಾಂಗಿರಸೈ ಸ್ಸಹ । ಸ್ಥಾವರಾಣಿಚ
ಭೂತಾನಿ ಜಂಗಮಾನಿಚ ಸರ್ವಶಃ ॥ ಸಮಾಗಮ್ಯ ತದಾವೈನ್ಯ
ಮಭ್ಯಷಿಂಚನ್ನರಾಧಿಪಂ ॥೪೪॥ ಹಸ್ತೇತು ದಕ್ಷಿಣೇ ಚಕ್ರಂ ದೃ
ಷ್ಟ್ವಾ ತಸ್ಯ ಪಿತಾಮಹಃ । ವಿಷ್ಣೋರಂಶಂ ಪೃಥುಂ ಮತ್ವಾ ಪರಿ

ದಿಕ್ಕುಗಳಿಂದಲೂ ಬಂದು ಆಪೃಥುರಾಜನಸಮೀಪವನ್ನು ಸೇರಿದುವು" ೪೫॥
ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಚತುರ್ಮುಖನೂಕೂಡ ಈ ಪೃಥುರಾಯನ
ಪಟ್ಟಾಭಿಷೇಕಮಹೋತ್ಸವಕ್ಕಾಗಿ, ಆ ಮನ್ವಂತರದಲ್ಲಿ ಉಂಟಾಗುವ ಆಂ
ಗಿರಸ್ಸುಗಳೆಂಬ ಹೆಸರುಳ್ಳ ದೇವತೆಗಳ ಸಂಗಡ ಕೂಡಿ ಆ ಪೃಥುರಾಯನ
ಒಳಗೆಸಾರ್ದನು, ಸ್ಥಾವರಗಳೆನಿಸಿದ (ಚಲನೆಯಿಲ್ಲದಿರುವ) ಹಿಮವಂತ,
ಮಲಯ, ದರ್ದುರ, ಗಂಧಮಾದನ, ಮೊದಲಾದ ಪರ್ವತಾಭಿಮಾನಿದೇವತೆ
ಗಳೂ ವನಾಭಿಮಾನಿದೇವತೆಗಳೂ, ಜಂಗಮರೆನಿಸಿದ ಋಷಿಗಳು, ಮ
ನುಜರು, ಮೊದಲಾದ ಭೂತವರ್ಗವೆಲ್ಲವೂ ಎಲ್ಲಾ ಕಡೆಗಳಿಂದಲೂ ಬಂದು
ಆ ಸ್ಥಳವಂಸೇರಿ ಸಂತೋಷದಿಂದೊಡಗೂಡಿ ವೇನರಾಯನ ಕುವರನಾದ
ಆ ಪೃಥುರಾಜನನ್ನು ದಿವ್ಯವಾದ ಓಷಧಿರಸ ಗಂಧೋದಕ, ಸಮುದ್ರೋ
ದಕಮೊದಲಾದುವುಗಳಿಂದ ಅಭಿಷೇಕ ಮಾಡಿದರು॥ ೪೪॥ಎಲ್ಲ ಕೋರಿಕೆಗ
ಳಿಗೂ ಪಿತಾಮಹನೆನಿಸಿದ ಚತುರ್ಮುಖನು ಆ ಕಾಲದಲ್ಲಿಆ ಪೃಥುರಾಯನ
ಬಲಗೈಯಲಿದ್ದ ಚಕ್ರರೇಖೆಯಂ ಕಂಡು, ಲೋಕದಲ್ಲಿ ಧರ್ಮವು ಮು
ಲಿನವಾಗಿ ದುಷ್ಟರು ಪ್ರಬಲಸ್ಥಿತಿಯಂ ಪಡೆದು ಅಧರ್ಮವು ತಲೆದೋರಿ
ಸಜ್ಜನರು ಸಂಕಟ ಪಡುವಂತಾದರೆ ಆ ಕಾಲದಲ್ಲಿ ದುಷ್ಟ ಶಿಕ್ಷಣದಿಂದ
ಅಧರ್ಮವನ್ನು ನಿರ್ಮೂಲಮಾಡಿ, ಸಜ್ಜನ ರಕ್ಷಣದಿಂದ ಧರ್ಮವಂ ಲೋ
ಕದಲ್ಲಿ ನೆಲೆಮಾಡುವುದಕ್ಕಾಗಿ ತಾನು ಅವತರಿಸುವೆನೆಂದು ಅಪ್ಪಣೆ ಕೊಡಿ
ಸಿದ್ದ ಭಗವದ್ವಾಕ್ಯವಂ ಸ್ಮರಿಸಿ, ಪ್ರಕೃತದಲ್ಲಿ ಅಂತಹ ಭಗವದವತಾರ
ಕ್ಕೆ ತಕ್ಕ ಸಮಯವಾಗಿದ್ದುದರಿಂದ ಈ ಪೃಥುರಾಯನು ಸಾಮಾನ್ಯನಲ್ಲ,
ಸಾಹ್ಷಾತ್ಪರಾತ್ಪರ ವಸ್ತುವೆನಿಸಿದ ವಿಷ್ಣುವೇ ಈ ರೂಪದಿಂದವತರಿಸಿರುವ
ನು, ಹಾಗಲ್ಲದಿದ್ದೊಡೆ ಈತನಿಗೆ ಇಂತಹ ಮಹಿಮೆ ಎಲ್ಲಿಯದು ? ಎಂಬ
ದಾಗಿ ತಿಳಿದು ಅಪಾರವಾದ ಸಂತೋಷ ಸಮುದ್ರದಲ್ಲಿ ಮುಳುಗಿತೇಲಾಡು

ತೋಷಂ ಪರಂಯಯೌ ॥೪೫॥ ವಿಷ್ಣು ಚಿಹ್ನಂ ಕರೇ ಚಕ್ರಂ ಸ
ರ್ವೇಷಾಂ ಚಕ್ರವರ್ತಿನಾಂ । ಭವತ್ಯ ವ್ಯಾ ಹತೋಯಸ್ಯ ಪ್ರಭಾ
ವ ಸ್ಪ್ರದಶೈ ರಪಿ ॥೪೬॥ ಮಹತಾ ರಾಜರಾಜ್ಯೇನ ಪೃಥುರ್ವೈ
ನ್ಯಃ ಪ್ರತಾಪವಾ । ಸೋ ಭಿಷಿಕ್ತೋ ಮಹಾತೇಜಾ ವಿಧಿವದ್ಧ
ರ್ಮ ಕೋವಿದೈಃ ॥೪೭॥ ಪಿತಾ ಪರಾಜಿತಾ ಸ್ತಸ್ಯ ಪ್ರಜಾಸ್ತಾ
ನಾನು ರಂಜಿತಾಃ । ಅನುರಾಗಾತ್ತ ತಸ್ಯಸ್ಯ ನಾಮರಾಜೇತ್ಯ ಜಾ

ತಿದ್ದನು॥೪೫॥ ಸರ್ವವ್ಯಾಪಕನೆನಿಸಿದ ಶ್ರೀ ಮಹಾವಿಷ್ಣುವಿನ ಚಿಹ್ನಭೂತ
ವೆನಿಸಿದ ಚಕ್ರವು (ಚಕ್ರರೇಖೆಯು) ಎಲ್ಲಾಚಕ್ರವರ್ತಿಗಳಿಗೂ ಕೈಯಲ್ಲಿ
ಇರುವುದು, ದೇವದೇವನೆನಿಸಿದ ಆ ವಿಷ್ಣುವಿನ ಮಹಿಮೆಯು ಎಂತು
ಯಾರಿಂದಲೂ ತಿರಸ್ಕರಿಸಲಸಾಧ್ಯವಾಗಿರುವುದೋ ಅಂತೆಯೇ ಕೈಯಲ್ಲಿ
ಚಕ್ರರೇಖೆಯುಳ್ಳ ಚಕ್ರವರ್ತಿಗಳ ಮಹಿಮೆಯನ್ನು ದೇವತೆಗಳೂ ಕೂಡ
ವಿಾರಲಾರರು; ಇಂತಿರಲು ಕೈಯಲ್ಲಿ ಚಕ್ರರೇಖೆಯುಳ್ಳ ಈ ಪೃಥು
ರಾಯನ ಪರಾಕ್ರಮವೂ, ತೇಜಸ್ಸೂ, ಮಹಿಮೆಯೂ, ಸಾಮಾನ್ಯವಾದು
ದೇ ? ॥೪೬॥ ಪ್ರತಾಪಯುಕ್ತನು, ಮಹಾತೇಜಸ್ವಿಯೂ, ಎನಿಸಿದ ವೇ
ನಪುತ್ರನಾದ ಆ ಪೃಥು ಚಕ್ರವರ್ತಿಯು ಧರ್ಮಜ್ಞರೆನಿಸಿದ ದೇವಾದಿ
ಗಳಿಂದ, ಅತಿಸಮೃದ್ಧವೂ ಅಪಾರವೂ ಎನಿಸಿದ ತನ್ನತಂದೆಯ ರಾಜ್ಯಾ
ಧಿಕಾರದಲ್ಲಿ ವಿಧಿಯಂತೆ ಅಭಿಷಿಕ್ತನಾದನು. ॥೪೭॥ ತನ್ನತಂದೆಯಾದ
ವೇನನಿಂದ ಪ್ರೀತಿಸದೆ, ವಿಶೇಷತೊಂದರೆಗಳಿಗೆ ಸಿಕ್ಕಿ ಹಿಂಸೆಪಡುತ್ತಾ
ಬಹಳವಾಗಿ ವ್ಯಥೆಗೊಂಡು ಮರುಗುತ್ತಿದ್ದ ದೇಶದ ಪ್ರಜೆಗಳೆಲ್ಲರೂ, ಈ
ತನಿಗೆ ಪ್ರಜೆಗಳಲ್ಲಿರುವ ಸ್ವಾಭಾವಿಕವಾದ ಅನುರಾಗಾತಿಶಯದಿಂದ ಈ
ತನಿಗೆ ವಶರಾಗಿ ಈತನ ಆಜ್ಞೆಯನ್ನು ವೇದವಾಕ್ಯದಂತೆ ಶಿರಸಾವಹಿಸಿ
ನಡೆದುಕೊಳ್ಳುತಿದ್ದರು, ತನ್ನ ಪ್ರತಾಪದಿಂದ (ಹೆಚ್ಚಾಗಿಸುಡುವುದರಿಂದ)
ಸೂರ್ಯನಿಗೆ ತಪನನೆಂಬ ಶಬ್ದವು ಎಂತು ಸಾರ್ಥಕವಾದುದೋ, ಜನಗಳ
ಕಣ್ಮನಗಳಿಗೆ ಆಹ್ಲಾದವನ್ನುಂಟುಮಾಡುವಕಾರಣ ಚಂದ್ರನಿಗೆ ಇರುವ
ಹೆಸರು ಎಂತು ಅನ್ವರ್ಥವಾದುದೋ, ಅಂತೆಯೇ ಈ ಪೃಥು ಚಕ್ರವ
ರ್ತಿಯೂ ಕೂಡ ಲೋಕದ ಪ್ರಜೆಗಳನ್ನು ವಿಶೇಷವಾಗಿ ಪ್ರೀತಿಸುತ್ತಿ
ದ್ದನಾದಕಾರಣ ಈತನ ರಾಜಶಬ್ದವು ಅರ್ಥಾನುಸಾರವಾಗಿದ್ದಿತು. (ರಾ

ಯತ ॥೪೯॥ ಅಪಸ್ತ ಸ್ತಂಭಿರೇ ಚಾಸ್ಯ ಸಮುದ್ರ ಮುಖಿಯಾಸ್ಯ ತಃ । ಪರ್ವತಾಶ್ಚಾದ ದುರ್ಮಾರ್ಗಂ ಧ್ವಜ ಭಂಗಶ್ಚ ನಾಭವತ್॥ ॥೪೯॥ ಅಕೃಷ್ಟಪಚ್ಯಾ ಪೃಥಿವೀ ಸಿದ್ಧ್ಯಂತ್ಯರ್ಥಾನಿ ಚಿಂತಯಾ। ಸರ್ವಕಾಮದುಘಾ ಗಾವಃ ಪುಟಕೇ ಪುಟಕೇಮಧು ॥೫೦॥ ತಸ್ಯ ವೈಜಾತ ಮಾತ್ರಸ್ಯ ಯಜ್ಞೇ ಪೈತಾಮಹೇ ಶುಭೇ । ಸೂ ತಸ್ಯಾತ್ಯಾಂ ಸಮುತ್ಪನ್ನ ಸ್ತಾತ್ಯೇಹನಿ ಮಹಾಮತಿಃ ॥೫೧॥

ಜನೆಂದರೆ, ಪ್ರಜೆಗಳನ್ನು (ರಂಜನ) ಸಂತೋಷಗೊಳಿಸುವವನೆಂದು ಭಾವವು. ಇಂತಹ ಶಬ್ದವು ಈತನಿಗೇ ಸಲ್ಲುತಕ್ಕುದಾಗಿದ್ದಿತು ॥೪೯॥ ಇಂತಹ ಈ ಪೃಥುರಾಜನು ಸಮುದ್ರಕ್ಕೆ ಇದಿರಾಗಿ ಪ್ರಯಾಣಮಾಡಿ ಆ ಸಮುದ್ರದ ಬಳಿಗೆ ಹೋಗುವಾಗ್ಗೆ ಸಮುದ್ರವು (ಜಲವು) ಕಟ್ಟಕದ ಲದೆ ಈತನಿಗೆ ಮಾರ್ಗವನ್ನು ಬಿಟ್ಟುಕೊಡುತಿದ್ದಿತು. ಪರ್ವತಗಳೂ ಈತನಿಗೆ ಆಡ್ಡಲಾಗಿ ನಿಲ್ಲದೆ ದಾರಿಯನ್ನುಂಟುಮಾಡಿಕೊಡುತ್ತಿದ್ದುವು. ಅರಣ್ಯಗಳಲ್ಲಿ ರಥಿಕನಾಗಿ ಸಂಚಾರ ಹೊರಟುಬರತಕ್ಕ ಕಾಲದಲ್ಲಿ ಈ ತನ ರಥದ ಮೇಲುಭಾಗದಲ್ಲಿರುವ ಧ್ವಜಕ್ಕೆ ಸ್ವಲ್ಪವೂ ಕುಂದಕ ಬಾರ ದಂತೆ ಬಾಗಿದ್ದ ಗಿಡಗಳೆಲ್ಲವೂ ಮೇಲಕ್ಕೆ ಕೊಂಬೆಗಳನ್ನು ಸೆಳೆದುಕೊಂ ಡು ನೆಟ್ಟನೆ ನಿಲ್ಲುತಿದ್ದುವು ॥೪೯॥ ಭೂಮಿಯು ಉತ್ತು, ಬಿತ್ತಿ, ಪೈರು ಮಾಡದೆಯೇ ಸಂಪೂರ್ಣವಾಗಿ ಫಲದಾಯಕವಾಗಿದ್ದಿತು. ಈತನು ಮನಸ್ಸಿನಲ್ಲೆಳಸಿದ ಮಾತ್ರದಿಂದಲೇ ಎಲ್ಲ ಕೋರಿಕೆಗಳೂ ಕೈಗೂಡು ತ್ತಿದ್ದುವು. ಗೋವುಗಳೂ ಕೂಡ ತಮಗೆ ಕೂಟಸ್ಥವೆನಿಸಿದ ಕಾಮು ಧೇನುವಿನಂತೆ ಸಕಲೇಷ್ಟಾರ್ಥಗಳನ್ನೂ ಪೂರಣ ಮಾಡುತ್ತಿದ್ದುವು. ಯಾ ವ ಗಿಡ ಬಳ್ಳಿಗಳಲ್ಲಿ ಎಲ್ಲೆಲ್ಲಿ ನೋಡಿದರೂ ಪ್ರತಿಯೊಂದು ಹೂವಿನಲ್ಲಿಯೂ ಮಕರಂದವು ತುಂಬಿ ತುಳುಕುತಿದ್ದಿತು. ॥೫೦॥ ಮಹಾನುಭಾವನೆನಿಸಿದ ಈ ಪೃಥುಚಕ್ರವರ್ತಿಯು ಹುಟ್ಟಿದ ಬಳಿಕ ಆತನು ಮಾಡಿದ ಬ್ರಹ್ಮದೇ ವತಾಕವಾದ (ಬ್ರಹ್ಮನೇ ಪ್ರಧಾನದೇವತೆಯಾಗಿ ಉಳ್ಳ) ಯಜ್ಞದಲ್ಲಿ ಸೋಮಾಭಿಷವಾದ ಬಳಿಕ ಸುತ್ಯಾಹಸ್ಸಿನಲ್ಲಿ ಮಹಾಮತಿ ಎನಿಸಿದ ಸೂತನು ಉದಯಿಸಿದನು. ॥೫೧॥

ಮಂಗಳಕರವಾದ ಆ ಯಜ್ಞದಲ್ಲಿ ಸೂತನು ಜನಿಸಿದ ದಿವಸವೇ

ತಸ್ಮಿನ್ನೇವಮಹಾಯಜ್ಞೇ ಜಜ್ಞೇ ಪ್ರಾಜ್ಞೋ ಽ ಥಮಾಗಧಃ ।
ಪ್ರೋಕ್ತೌ ತದಾ ಮುನಿವರೈ ಸ್ತಾವುಭೌ ಸೂತ ಮಾಗಧೌ ॥೫೭॥
ಸ್ತೂಯತಾ ಮೇಷ ನೃಪತಿಃ ಪೃಥು ರ್ವೈನ್ಯಃ ಪ್ರತಾಪವಾ ।
ಕರ್ಮ್ಮ ತದನುರೂಪಂಚ ಪಾತ್ರಂ ಸ್ತೋತ್ರಸ್ಯ ವಾಂ ಪರಂ ॥೫೫॥
ತತಸ್ತಾವೂಚತು ರ್ವಿಪ್ರಾ ಸರ್ವಾನೇವ ಕೃತಾಂಜಲೀ।ಅದ್ಯ ಜಾ
ತಸ್ಯ ನೋಕರ್ಮ ಜ್ಞಾಯತೇ ಽಸ್ಯ ಮಹೀಪತೇಃ ॥೫೪॥ ಗುಣಾನ
ಚಾಸ್ಯ ಜ್ಞಾಯಂತೇ ನಚಾಸ್ಯ ಪ್ರಥಿತಂ ಯಶಃ । ಸ್ತೋತ್ರಂ ಕಿ
ಮಾಶ್ರಯಂತ್ವ ಸ್ಯ ಕಾರ್ಯ ಮಸ್ಮಾಭಿ ರುಚ್ಯತಾಂ ॥೫೫॥ ಋಷ

ಪ್ರಾಜ್ಞನೆನಿಸಿದ ಮಾಗಧನೂ ಕೂಡ ಉದಯಿಸಿದನು. ಇಂತು ಉದಯಿಸಿದ ಈಸೂತ, ಮಾಗಧ, ಇವರಿಬ್ಬರನ್ನೂ ಮುನಿವರ್ಯರೆನಿಸಿದ ಸೂತ, ಮಾಗಧರೆಂದು ಕರೆವರು ಈ ಸೂತ ಮಾಗಧರಿಬ್ಬರಿಗೂ ಪೃಥು ಚಕ್ರವರ್ತಿಯ ಗುಣವರ್ಣನವೇ ಮುಖ್ಯಕಾರ್ಯವಾಗಿ ಏರ್ಪಟ್ಟಿತು ॥೫೩॥ ಇಂತ ಉದಯಿಸಿದ ಆ ಸೂತ ಮಾಗಧರನ್ನು ಕುರಿತು ಅಲ್ಲಿದ್ದ ಋಷಿಗಳೆಲ್ಲರೂ ಏಕಕಂಠರವಾಗಿ (ಬಂದೇ ಮಾತಿನಿಂದ) ‘‘ಎಲೈ ಸೂತಮಾಗಧ ಮುನಿವರ್ಯರೇ; ಮಹಾ ಪ್ರತಾಪಶಾಲಿಯೆನಿಸಿದ, ವೇನರಾಯನ ಪುತ್ರರತ್ನವೆನಿಸಿದ ಈ ಪೃಥು ಚಕ್ರವರ್ತಿಯ ಶೌರ್ಯ, ಔದಾರ್ಯ, ಗಾಂಭೀರ್ಯಾದಿ ಗುಣಗಳನ್ನೂ, ಈತನ ಪರಾಕ್ರಮಯುಕ್ತವಾದ ಕರ್ಮವನ್ನೂ, ಯಶಸ್ಸನ್ನೂ ಕೂಡ ಹೊಗಳಿರಿ. ಈತನಿಗೆ ತಕ್ಕುದಾದ (ಯೋಗ್ಯವಾದ) ಈತನ ಕರ್ಮವು ನಿನ್ನ ಸ್ತೋತ್ರಕ್ಕೆ ಬಹಳ ಅರ್ಹವಾಗಿರುವುದು ॥೫೫॥ ಎಂಬದಾಗಿ ಹೇಳಿದ ಆ ಋಷಿ ವಾಕ್ಯವಂ ಕೇಳಿ ಆ ಸೂತ ಮಾಗಧರಿಬ್ಬರೂ ಭಕ್ತಿಯಿಂದ ತಲೆಬಾಗಿ ಕೈ ಮುಗಿದುಕೊಂಡು ಎಲ್ಲ ಮುನಿವರ್ಯರೆ, ಈ ರಾಜನು ಈಗತಾನೇ ಉದಯಿಸಿದವನು. ಈತನು ಮಾಡಿದ ಕರ್ಮವು ತಿಳಿಯದು. ಆದುದರಿಂದ ಈತನ ಗುಣಗಳನ್ನು ಅರಿವುದೆಂತು; ಈತನ ಯಶಸ್ಸನ್ನು ಹೊಗಳೋಣವೆಂದರೆ ಈತನ ಕೀರ್ತಿಯು ಇನ್ನೂ ಈ ಲೋಕದಲ್ಲಿ ಪ್ರಖ್ಯಾತವಾಗಿಲ್ಲವು. ಆದುದರಿಂದ ನಾವು ಈತನನ್ನು ಯಾವರೀತಿ ಹೊಗಳತಕ್ಕುದು; ಇಂತಿರಲು ನಾವು ಮಾಡುವುದೇನು? ಇದನ್ನು ನಮಿಗೆ ತಿಳಿಯುವಡಿಸಿರಿ’’ ಎಂಬುದಾ

ಯ ಊಚುಃ ॥ ಕರಿಷ್ಯತ್ಯೇಷ ಯುತ್ಕರ್ಮ ಚಕ್ರವರ್ತೀ ಮಹಾಬ
ಲಃ । ಗುಣಾಢ್ಯವಿಷ್ಣ್ವಂ ಶೇ ಚಾಸ್ಯ ತೈರಯಂ ಸ್ತೂಯತಾಂ ನೃ
ಪಃ ॥೫೭॥ ಶ್ರೀ ಪರಾಶರಃ॥ ತತ ಸ್ಸ ನೃಪತಿ ಸ್ತೋತ್ರಂ ತಚ್ಛ್ರು
ತ್ವಾ ಪರಮಂ ಯಯೌ । ಸದ್ಗುಣೈಃ ಶ್ಲಾಘ್ಯತಾ ಮೇತಿ ತಸ್ಮಾ
ಲ್ಲಭ್ಯಾ ಗುಣಾಮಯಾ ॥೫೭॥ ತಸ್ಮಾದ್ಯ ದತ್ರ ಸ್ತೋತ್ರೇ ಮೇ
ಗುಣ ನಿರ್ವರ್ಣನಂ ತ್ವಿಮೌ । ಕರಿಷ್ಯೇತೇ ಕರಿಷ್ಯಾಮಿ ತದೇ

ಗಿ ಆ ಮುನಿವರರಂ ಬೇಡಿದರು. ॥೫೪॥ ೫೫॥ ಆ ಬಳಿಕ ಋಷಿಗಳುಹೇಳ
ತೊಡಗಿದರು:—ಎಲೈ ಸೂತ ಮಾಗಧರಿರಾ ; ಈತನ ಬಲಗೈಯಲ್ಲಿವಿಷ್ಣು
ಚಕ್ರಚಿಹ್ನವಿರುವುದು ಆದುದರಿಂದ ಈತನು ಚಕ್ರವರ್ತಿಯಾಗುವನು, ಮತ್ತು ಆ ವಿಷ್ಣುವಿನ ಅಂಶದಿಂದಲೇ ಉದಯಿಸಿದವನಾದಕಾರಣ ಮಹಾ
ಪರಾಕ್ರಮಶಾಲಿಯಾಗಿರುವನು. ಈ ಎರಡು ಕಾರಣಗಳಿಂದಲೂ ಅವ
ಶ್ಯವಾಗಿಯೂ ಈತನು ಸಕಲ ಸದ್ಗುಣ ಸಂಪನ್ನನಾಗುವನು. ಈತನ್ನ
ಮಾಡುವ ಕೆಲಸಗಳೂ ಕೂಡ ಸರ್ವೋತ್ತಮಗಳಾಗಿಯೇ ಇರುವುವು.
ಆದುದರಿಂದ ಈತನಿಗೆ ಮುಂದೆ ಉಂಟಾಗುವ ಈತನ ಸದ್ಗುಣಗಳನ್ನೇ
ನೀವು ಹೊಗಳಿರಿ. ಈತನಿಗೆ ಕರ್ತವ್ಯವನ್ನು ಬೋಧಿಸತಕ್ಕವರು ಬೇರೆ
ಯಾರೂ ಇಲ್ಲದಿರುವ ಕಾರಣ, ಈತನ ಗುಣಕರ್ಮಗಳನ್ನು ಸ್ತೋತ್ರ
ಮಾಡುವಿಕೆಯಿಂದಲೇ ಈತನಿಗೆ ನೀವು ಅವನ ಕರ್ತವ್ಯವನ್ನು ವಿಜ್ಞಾಪಿಸಿರಿ
॥೫೬॥ ಪರಾಶರನು ಹೇಳುತ್ತಾನೆ;—ಎಲೈ ಮೈತ್ರೇಯನೆ, ಆಪೃಥುವು
ಹಾರಾಯನ ಪ್ರಾಜಾಪತ್ಯ ಯಜ್ಞದಲ್ಲಿ ಉದಿಸಿದ ಸೂತಮಾಗಧರೊಂದಿ
ಗೆ ಋಷಿಗಳು ಹೇಳಿದ ಮಾತುಗಳೆಲ್ಲವಂ ಕೇಳಿ ಆ ಪೃಥು ಚಕ್ರವರ್ತಿ
ಯೂ ಕೂಡ ಪರಮಾನಂದ ಭರಿತನಾಗಿ ಈ ಋಷಿಗಳು ನನಿಗೆ ಉಪದೇಶ
ಮಾಡುವ ನೆಪದಿಂದ ನನ್ನನ್ನು ಸ್ತೋತ್ರಮಾಡುವಂತೆ ಸೂತ ಮಾಗಧರಿಗೆ
ಆಜ್ಞಾಪಿಸಿರುವರು. ನನ್ನ ಗುಣಗಳು ಹೊಗಳತಕ್ಕುವಾಗಿರುವಕಾರಣ
ಉತ್ತಮಗಳೆನಿಸಿರುವುವು. ಮನುಷ್ಯನು ಸದ್ಗುಣಗಳಿಂದಲ್ಲವೇ ಶ್ಲಾಘ್ಯಾ
ರ್ಹನೆನಿಸುವನು ! ಆದುದರಿಂದ ನಾನು ಸದ್ಗುಣಗಳನ್ನೇ ಹೊಂದಬೇಕು
॥೫೭॥ ಇಂತಿರುವ ಕಾರಣ ಮಹಾನುಭಾವರೆನಿಸಿದ ಈ ಸೂತ ಮಾಗಧ
ರಿಬ್ಬರೂ ನನ್ನನ್ನು ಹೊಗಳತಕ್ಕ ಸಮಯದಲ್ಲಿ ಯಾವ ಯಾವ ಸದ್ಗುಣ

ವಾಹಂ ಸಮಾಹಿತಃ ॥೫೪॥ ಯದಿಮೌ ವರ್ಜನೀಯಂಚ ಕಿಂಚಿ
ದತ್ರನವದಿಷ್ಯತಃ । ತದಹಂ ವರ್ಜಯಿಷ್ಯಾಮಿ ತ್ಯೇವಂ ಚಕ್ರೇ
ಮತಿಂನೃಪಃ ॥೫೫॥ ಅಥ ತೌ ಚಕ್ರತುಃ ಸ್ತೋತ್ರಂ ಪೃಥೋ
ರ್ವೈನ್ಯಸ್ಯ ಧೀಮತಃ । ಭವಿಷ್ಯೈಃ ಕರ್ಮಭಿ ಸ್ತಸ್ಯ ಕ್ತಸ್ಯ ಸ್ವ
ರೌ ಸೂತ ಮಾಗಧೌ ॥೫೦॥ ಸತ್ಯವಾ ಗ್ದಾನ ಶೀಲೋಯಂ ಸತ್ಯ
ಸಂಧೋ ನರೇಶ್ವರಃ । ಹೀರ್ಮೈತ್ರಃ ಹ್ಮನೂಶೀಲೋ ವಿ

ಗಳನ್ನು ಹೊರಪಡಿಸುವರೋ, ಮತ್ತು ಯಾವ ಯಾವ ಸಚ್ಚರಿತ್ರವನ್ನು ಪ್ರಕಾಶಪಡಿಸುವರೋ ಅದೇ ಕೆಲಸವನ್ನೇ ಮಾಡುತ್ತಾ, ಅನ್ಯವಹಿತ ಚಿತ್ತನಾಗಿ ಅಂತಹ ಉತ್ತಮ ಗುಣಗಳನ್ನೇ ಹೊಂದಲು ಪ್ರಯತ್ನಪಡುವೆನು ॥೫೪॥ ಮತ್ತು ಇವರು ನನ್ನನ್ನು ಕೈವರಿಸುವಾಗ, ಯಾವ ಯಾವ ದುರ್ಗುಣಗಳನ್ನು ಬಿಡಬೇಕೆಂದು ಹೇಳುವರೋ ಆ ದುರ್ಗುಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಮಾಡಿ ತಪ್ಪಿಸಲು ಪ್ರಯತ್ನಪಡುವೆನು; ಹೀಗೆಂದು ತನ್ನ ಮನದಲ್ಲಿ ಯೋಚಿಸಿ ಆ ಸೂತ ಮಾಗಧರು ತನ್ನನ್ನು ಹೊಗಳುವುದನ್ನೇ ಕಿವಿಗೊಟ್ಟು ಕೇಳಲು ಏಕಾಗ್ರಚಿತ್ತನಾಗಿ ದೃಢಪಡಿಸಿಕೊಂಡು ಇರುತ್ತಿದ್ದನು. ॥೫೯॥ ಅನಂತರದಲ್ಲಿ ಆ ಸೂತ ಮಾಗಧರಿಬ್ಬರೂ ಕಿವಿಗಿಂಪಾದ ಮಧುರ ಸ್ವರದಿಂದೊತಗೂಡಿ ವೇನರಾಯನ ಮಗನೂ, ಪ್ರತಿಭಾಶಾಲಿಯೂ ಎನಿಸಿದ ಆ ಪೃಥುರಾಯನನ್ನು ಆತನು ಮುಂದೆ ಮಾಡುವ ಸತ್ಕಾರ್ಯಗಳಿಗಾಗಿ ಹೊಗಳುವುದಕ್ಕೆ ಪ್ರಾರಂಭಿಸಿದರು ॥೫೦॥ ಮಹಾನುಭಾವನೆನಿಸಿದ ನರಪಾಲಕನಾದ ಈ ಪೃಥುವು ಅನವರತವೂ ಸತ್ಯವನ್ನೇ ನುಡಿವನಲ್ಲದೆ ಎಂದೆಂದಿಗೂ ಪುಸಿಯನ್ನಾಡನು. ದಾತೃತ್ವವೆಂಬುದು ಈತನಿಗೆ ಸಹಜಗುಣವಾಗಿರುವುದು. ತನ್ನ ಪ್ರತಿದ್ವಂದ್ವಿಯನ್ನೇ ಆಗಲಿ ಅಥವಾ ತನ್ನ ಮರ್ಯಾದೆಯನ್ನಾಗಲಿ ಎಂದಿಗೂ ಸೀಗಿಕೊಳ್ಳತಕ್ಕವನಲ್ಲವು. ಕೆಟ್ಟ ಕೆಲಸಗಳಿಂದ ಮನಸ್ಸನ್ನು ಹಿಂಜರಿಯುವಂತೆ ಮಾಡುವ ನಾಚಿಕೆಯು ಈತನಿಗೆ ಸ್ವಭಾವಿಕವಾಗಿರುವುದು. ಎಲ್ಲರಲ್ಲಿಯೂ ಸ್ನೇಹ ಬೆಳೆಯಿಸಿ ಎಲ್ಲರನ್ನೂ ವಿಶ್ವಾಸದಿಂದ ಕಾಣುವನು. ಇತರರು ಈತನಿಗೆ ಕೇಡನ್ನುಂಟುಮಾಡಿದರೂ ಈತನುಮಾತ್ರ ಅವರ ವಿಷಯದಲ್ಲಿ ಎಂದೆಂದಿಗೂ ಕೇಡು ಬಗೆಯದೆ ಶಾಂತ ಸ್ವಭಾವದಿಂದಲೇ

ಕ್ರಾಂತೋ ದುಷ್ಟಶಾಸನಃ ॥೬೦॥ ಧರ್ಮಜ್ಞಶ್ಚ ಕೃತಜ್ಞಶ್ಚ ದ
ಯಾವಾ೯ ಪ್ರಿಯಭಾಷಿತಾ । ಮಾನ್ಯಾ ನ್ಮಾನಯಿತಾ ಯಜ್ವಾ
ಬ್ರಹ್ಮಣ್ಯಃ ಸಾಧುವತ್ಸಲಃ॥೬೪॥ ಸಮಃ ಶತ್ರೌಚ ಮಿತ್ರೇಚ ವ್ಯ
ವಹಾರ ಸ್ಥಿತೌ ನೃಪಃ ॥೬೫॥ ಸೂತೇ ನೋಕ್ತಾ೯ ಗುಣಾನಿ

ಇರುವನು. ಅಪ್ರತಿಹತವಾದ ಪರಾಕ್ರಮವು ಯುಕ್ತನು, ದುಷ್ಟರನ್ನು ನಿಗ್ರಹಿಸಿ ಸಾಧುಗಳನ್ನೇ ವೃದ್ಧಿಪಡಿಸುವನು ॥೬೦॥ ಎಲ್ಲ ವಿಧವಾದ ಧರ್ಮಗಳನ್ನೂ ಈತನು ಬಲ್ಲವನು. ತನಗೆ ಯಾರಾದರೂ ಅತ್ಯಲ್ಪವಾದ ಉಪಕಾರವನ್ನು ಮಾಡಿದ್ದರೂ ಅದನ್ನು ಎಂದಿಗೂ ಮರೆಯತಕ್ಕವನಲ್ಲವು. ಎಲ್ಲ ಭೂತಗಳೂ ತನ್ನಂತೆಯೇ ಎಂದು ತಿಳಿದು ಆ ಭೂತ ವರ್ಗದ ವಿಷಯದಲ್ಲಿ ಕನಿಕರವು ಈತನಿಗುಂಟು. ಮನಸ್ಸಿಗೆ ಉದ್ವೇಗವನ್ನುಂಟು ಮಾಡುವಂತಹ ನಿಷ್ಠುರೋಕ್ತಿಗಳನ್ನಾಡದೆ ಮನಸ್ಸಿಗೆ ಹಿತವಾಗಿರುವಂತೆ ಮಾತನಾಡತಕ್ಕವನು. ಗೌರವಿಸಲು ಅರ್ಹರಾದವರನ್ನು ಸರ್ವ ಪ್ರಕಾರದಲ್ಲಿಯೂ ಪೂಜಿಸುವನು. ಶ್ರೌತ ಮೊದಲಾದ ವಿಧಿಗಳಲ್ಲಿ ಹೇಳಿರುವಂತೆಯೇ ಸ್ವಲ್ಪವೂ ತಪ್ಪದೆ ಯಜ್ಞಾದಿಗಳನ್ನು ನೆರವೇರಿಸುವನು. ಆತ್ಮಜ್ಞಾನ ಸಂಪನ್ನನು (ಮುಕ್ತಿ ಸಾಧನವೆನಿಸಿದ, ಪರಬ್ರಹ್ಮ ವಿಷಯಕವಾದ ಜ್ಞಾನವನ್ನು ಸಂಪಾದಿಸಿ ಆಪರಮಾತ್ಮನನಿರತಿಶಯಾನಂದ ಸ್ವರೂಪವನ್ನು ಬಲ್ಲವನು) ಸಜ್ಜನರನ್ನು ಪ್ರೀತಿಸತಕ್ಕ ಸ್ವಭಾವವುಳ್ಳವನು ॥೬೪॥ ಇವರು ತನಗೆ ಶತ್ರುಗಳು, ಆದುದರಿಂದ ಇವರನ್ನು ನಾನು ನಿಗ್ರಹಿಸಬೇಕೆಂಬ ದ್ವೇಷವಾಗಲಿ,ಅಥವಾ ಇವರು ನನಗೆ ಮಿತ್ರರು, ಆದುದರಿಂದ ನಾನು ಅವರನ್ನು ಪ್ರೀತಿಸಬೇಕೆಂಬ ಮಮತೆಯಾಗಲಿ ಆತನಿಗಿಲ್ಲವು ಅಥವಾ ಶತ್ರುಗಳಲ್ಲಿ ದ್ವೇಷವನ್ನೇ ಸ್ಥಿರಗೊಳಿಸಿ ಅವರನ್ನು ನಿಗ್ರಹಿಸುತಲೂ, ಮಿತ್ರರಲ್ಲಿ ಪ್ರೀತಿಯನ್ನೇ ಅನವರತವೂ ತೋರುತ್ತಾ ಅವರನ್ನು ಸಂತೋಷಪಡಿಸುತಲೂ ಇರುವವನಲ್ಲ. ರಾಜಧರ್ಮವನ್ನು ಚನ್ನಾಗಿ ಅರಿತವನಾದುದರಿಂದ ಯಾರೇ ಆಗಲಿ ತಪ್ಪುಮಾಡಿದವರನ್ನು ಅವರವರ ತಪ್ಪಿಗೆ ಸರಿಯಾಗಿ ಶಿಕ್ಷಿಸುತ್ತಾ, ತನ್ನಲ್ಲಿ ಹಿತಬುದ್ಧಿಯುಳ್ಳವರನ್ನು ಗೌರವಿಸುತ್ತಾ ಪ್ರಜೆಗಳನ್ನು ಬಹಳವಾಗಿ ಪ್ರೀತಿಯಿಂದ ಕಾಪಾಡುವನು ಎಂಬುದಾಗಿ ಹೊಗಳಿದರು. ॥೬೫॥ ಇಂತು ಆ ಸೂತ ಮಾಗಧರಿಬ್ಬ

ತ್ಥಂ ಸತಥಾ ಮಾಗಧೇನಚ । ಚಕಾರ ಹೃದಿ ತಾದೃಕ್ಚ ಕರ್ಮ
ಣಾ ಕೃತ ವಾನಸೌ ॥೬೪॥ ತತಸ್ಸ ಪೃಥಿವೀ ಪಾಲಃ ಪಾಲಯಾ
ಪೃಥಿವೀ ಮಿಮಾಂ । ಇಮಾಜ ವಿವಿಧೈ ರ್ಯಜ್ಞೈ ರ್ಮ್ಮಹದಿ
ಭೂರಿ ದಕ್ಷಿಣೈಃ ॥೬೫॥ ತಂಪ್ರಜಾಃ ಪೃಥಿವೀನಾಥ ಮುಪತ
ಸ್ಥುಃ ಕ್ಷುಧಾರ್ದಿತಾಃ । ಓಷಧೀಷು ಪ್ರಣಷ್ಟಾಸು ತಸ್ಮಿ ಕಾ
ಲೇ ಹ್ಯರಾಜಕೇ ॥ ತ ಮೂಚುಸ್ತೇ ನರಾಃ ಪೃಷ್ಟಾ ಸ್ತತ್ರಾ ಗ

ರೂ ಹೊಗಳಿದ ಆ ಗುಣಾತಿಶಯಗಳು ಕೇಳಿ ಈ ಪೃಥುರಾಜನು ಆ ಸೂತ ಮಾಗಧರ ಮಾತುಗಳೆಲ್ಲವಂ ಚನ್ನಾಗಿ ಗ್ರಹಿಸಿಮನಸ್ಸಿನಲ್ಲಿ ಅವುಗ ಳನ್ನೇ ಬಾರಿಬಾರಿಗೂಸ್ಮರಿಸುತ್ತಾ, ಅದಕ್ಕನುಸಾರವಾಗಿಯೇ ಎಲ್ಲ ಕೆಲ ಸಗಳನ್ನೂನೆರವೇರಿಸುತ್ತಿದ್ದನು (ಮನಸ್ಸಿನಲ್ಲಿ ಸಂಕಲ್ಪಿಸಿದಂತೆಯೇ ಕಾ ರ್ಯದಲ್ಲಿಯೂ ನಡೆಯಿಸುವುದು ಮಹಾತ್ಮರ ಲಕ್ಷಣವು)॥೬೪॥ತರುವಾಯ ನರಪಾಲಕನೆನಿಸಿದ ಆ ಪೃಥುರಾಯನು ಧರ್ಮದಿಂದ ಈ ಭೂಮಂಡಲ ವನ್ನು ಪರಿಪಾಲನೆ ಮಾಡುತಿದ್ದು ಸಮೃದ್ಧ ದಕ್ಷಿಣೆಗಳಿಂದೊಡಗೂಡಿ, ರಾಜಸೂಯ, ಅಶ್ವಮೇಧ ಮೊದಲಾದ ಅನೇಕ ಕ್ರತುಗಳಿಂದ ದೇವತೆಗ ಳನ್ನು ಸಂತೋಷಪಡಿಸಿದನು. ॥೬೫॥ ಈ ಪೃಥುರಾಯನು ರಾಜನಾಗು ವುದಕ್ಕೆ ಮುಂಚೆ ಈತನ ತಂದೆಯಾದ ವೇನರಾಯನ ರಾಜ್ಯಾಧಿಕಾರ ಸಮಯದಲ್ಲಿ ಕಾಲಕಾಲಕ್ಕೆ ಸರಿಯಾಗಿ ಮಳೆ ಬೆಳೆಗಳಾಗದೆ ಇದ್ದುದ ರಿಂದ ಭೂಮಿಯು ಯಾವ ವಿಧವಾದ ಫಲವನ್ನೂ ಕೊಡದೆ ಇದ್ದಿತು. ಇಂತಹ ಕ್ಷಾಮದಿಂದ ಪೀಡಿತರಾದ ಪ್ರಜೆಗಳೆಲ್ಲರೂ ಹಸಿವೆಯಿಂದಪೀಡಿ ತರಾಗಿ ವಿಶೇಷ ಸಂಕಟಗಳನ್ನನುಭವಿಸುತ್ತಿದ್ದರು ಆ ಕಾಲದಲ್ಲಿ ಭಗ ವಂತನು ಪ್ರಜೆಗಳ ಸಂಕಟವನ್ನು ನೋಡಿ ಮರುಕಗೊಂಡು ಈ ಪೃಥು ರಾಯನ ರೂಪದಿಂದ ಅವತರಿಸಿದನು. ಇದನ್ನು ಕಂಡು ಆಪ್ರಜೆಗಳೆಲ್ಲ ರೂ ಬಹಳವಾಗಿ ಸಂತುಷ್ಟಚಿತ್ತರಾಗಿ ಆ ಪೃಥುರಾಯನಂಸಾರ್ದು ತಮ್ಮ ದುರವಸ್ಥೆಯಂ ವಿಜ್ಞಾಪಿಸಿಕೊಳ್ಳಬೇಕೆಂದು ಅಲ್ಲಿಗೆ ಬಂದರು. ಇಂ ತು ನೆರೆದಿರುವ ಜನ ಸಮೂಹವಂ ಕಂಡು ಆ ಪೃಥುರಾಯನು ಎಲೈ ಪ್ರಜೆಗಳಿರಾ; ನೀವು ಇಷ್ಟು ಮುಂದಿಯೂ ಗುಂಪುಸೇರಿ ಇಲ್ಲಿಗೆ ಬರಲು ಕಾರಣವೇನು? ಎಂಬುದಾಗಿ ಪ್ರಶ್ನೆ ಮಾಡಿದನು. ಈ ರೀತಿಯಿಂದ

ಮನ ಕಾರಣಂ ॥೬೬॥ ಪ್ರಜಾ ಊಚುಃ ॥ ಅರಾಜಕೇ ನೃಪ ಶ್ರೇಷ್ಠ ಧರಿತ್ರ್ಯಾ ಸಕಲೌಷಧೀಃ । ಗ್ರಸ್ತಾ ಸ್ತತಃ ಕ್ಷಯಂ ಯಾಂತಿ ಪ್ರಜಾಸ್ಸರ್ವಾಃ ಪ್ರಜೇಶ್ವರ; ॥೬೭॥ ತ್ವಂ ನೋ ವೃತ್ತಿ ಪ್ರದೋ ಧಾತ್ರಾ ಪ್ರಜಾಪಾಲೋ ನಿರೂಪಿತಃ । ದೇಹಿ ನಃ ಕ್ಷು ತ್ಪರೀತಾನಾಂ ಪ್ರಜಾನಾಂ ಜೀವನೌಷಧೀಃ॥೬೮॥ಶ್ರೀ ಪರಾಶರಃ॥ ತತೋ ೨ ಥ ನೃಪತಿ ರ್ದಿವ್ಯ ಮಾದಾಯಾ ಜಗವಂಧನುಃ । ಕ ರಾಂಶ್ಚ ದಿವ್ಯಾ೯ ಕುಪಿತ ಸ್ಸೋ೨ ನ್ವಧಾವ ದ್ವಸುಂಧರಾಂ॥೬೯॥

ಪೃಥುರಾಯನು ಆಡಿದ ಮಾತುಗಳಂ ಕೇಳಿ ಆ ಪ್ರಜೆಗಳೆಲ್ಲರೂ ತಮ್ಮ ತಮ್ಮ ಕಷ್ಟಗಳಂ ಹೇಳಿಕೊಳ್ಳಲುಪಕ್ರಮಿಸಿದರು. ॥೬೬॥ ಪ್ರಜೆಗಳು ಹೇಳುತ್ತಾರೆ·—ಎಲೈ ಪ್ರಭುವರ್ಯನೆ ಭೂಮಿಯನ್ನಾಳುವ ರಾಜನು ದುರ್ವೃತ್ತನೆನಿಸಿ ಯಜ್ಞಾದಿಗಳಿಗೆ ವಿಘ್ನಕರನನ್ನುಂಟುಮಾಡಿದ ಕಾರಣ ದೇಶವೆಲ್ಲವೂ ಅರಾಜಕವೆನಿಸಿರುವುದು. ಇಂತಹ ಅನಾಯಕ ದೇಶದಲ್ಲಿರುವ ನಮ್ಮ ಗೋಳನ್ನು ನಾವು ಏನೆಂದು ಬಣ್ಣಿಸುವ! ಭೂಮಿಯನ್ನು ಉತ್ತು ಆಬಾದು ಮಾಡಿ ಬೀಜವನ್ನು ನೆಟ್ಟರೆ, ಭೂಮಿಯೇ ಆ ಬೀಜಗಳನ್ನೆಲ್ಲಾ ನುಂಗಿರುವುದು, ಬಂದು ಬೀಜವು ಕೂಡಾ ಮೊಳೆಯುವುದಿಲ್ಲವು. ಆದುದರಿಂದ ಎಲೈ ರಾಜನೆ, ಲೋಕದಲ್ಲಿ ಪ್ರಜೆಗಳೆಲ್ಲರೂ ಕ್ಷೀಣರಾಗುತ್ತಿರುವರು ॥೬೭॥ ಈ ಸಮಯದಲ್ಲಿ ನಮ್ಮಗಳ ಯಾವುದೋ ಒಂದು ಅದೃಷ್ಟವಿಶೇಷದಿಂದ ನೀನು ನಮಿಗೆ ರಾಜನಾಗುವಂತೆ ವಿಧಿಯು ನಿರೂಪಿಸಿರುವನು ಇಂತು ರಾಜನಾದ ನೀನೇ ನಮಗೆ ಜೀವನೋಪಾಯವನ್ನು ಒದಗಿಸಿ ಕೊಡಬೇಕಲ್ಲದೆ ನಮಗೆ ಬೇರೇ ದಿಕ್ಕಾರು ; ಆದಕಾರಣ ವಿಶೇಷವಾಗಿ ಹಸಿವೆಯಿಂದ ಸಂಕಟಪಡುತ್ತಿರುವ ನಮಿಗೆ ಜೀವನ ಸಾಧನಗಳೆನಿಸಿದ ಓಷಧಿಗಳೆನ್ನು ಒದಗಿಸಿಕೊಡು. ನಾವೆಲ್ಲರೂ ನಿನ್ನ ಪ್ರಜೆಗಳಾದ ಕಾರಣ ಈ ಕಾರ್ಯವು ನಿನ್ನದೇ ಅಲ್ಲವೆ? ॥೬೮॥ ಪರಾಶರನು ಹೇಳುತ್ತಾನೆ ;—ಇಂತು ಪ್ರಜೆಗಳಹಂಬಲಿಕೆಯನ್ನು ಕೇಳಿ ಅವರಲ್ಲಿ ಕನಿಕರಗೊಂಡು, ಭೂಮಿಯಮೇಲೆ ಬಹಳವಾಗಿ ಸಿಟ್ಟುಗೊಂಡು, ಉತ್ತಮವೆನಿಸಿದ ತನ್ನ ಅಜಗವವೆಂಬ ಬಿಲ್ಲನ್ನೂ, ಅತಿ ತೀಕ್ಷ್ಣಗಳೆನಿಸಿದ ಉತ್ತಮೋತ್ತಮ ಬಾಣಗಳನ್ನೂ ಕೂಡ ತೆಗೆದುಕೊಂಡವನಾಗಿ ಕೋ

ತತೋ ನನಾಶ ತ್ವಂತಾ ಗಾಭೂರ್ತ್ವಾ ತು ವಸುಂಧರಾ । ಸಾ ಲೋಕಾ ಬ್ರಹ್ಮ ಲೋಕಾದೀ ಸಂತ್ರಾಸಾ ದಗಮ ನ್ಮಹೀ ॥೭೦॥ಯತ್ರ ಯತ್ರ ಯಯೌ ದೇವೀ ಸಾ ತದಾ ಭೂತಧಾರಿಣೀ ತತ್ರ ತತ್ರ ಚ ಸಾ ವೈನ್ಯಂ ದದರ್ಶಾ ಭ್ಯುದ್ಯತಾಯುಧಂ ॥೭೧। ತತಸ್ತಂ ಪ್ರಾಹ ವಸುಧಾ ಪೃಥುಂ ಪೃಥು ಪರಾಕ್ರಮಂ। ಪ್ರಣೇ ಪಮಾನೋ ತದ್ಬಾಣ ಪರಿತ್ರಾಣ ಪಾರಾಯಣಾ ॥೭೨॥ ಪೃಥಿ ವ್ಯುವಾಚ ॥ ಸ್ತ್ರೀವಧೇ ತ್ವಂ ಮಹತ್ಪಾಪಂ ಕಿಂ ನರೇಂದ್ರ ! ನಪಶ್ಯಸಿ? । ಯೇನ ಮಾಂ ಹಂತು ಮತ್ಯರ್ಥಂ ಪ್ರಕರೋಷಿ ನೃ

ದೊಡನೆ ಭೂಮಿಯನ್ನು ಅಟ್ಟಿಕೊಂಡು ಹೊರಟನು ॥೬೯॥ ಇಂತು ಪರಮ ಕ್ರುದ್ಧನೆನಿಸಿ ಧನುರ್ಬಾಣಗಳನ್ನು ಕೈಯಲ್ಲಿ ಪಿಡಿದು ಹಿಂಬಾಲಿಸಿ (ಅಟ್ಟಿಕೊಂಡು) ಬರುತಿರುವ ಮಹಾ ಪರಾಕ್ರಮ ಶಾಲಿಯಾದ ಆ ಪೃಥುರಾಜನಂ ಕಂಡು ಸಕಲ ಸಂಪತ್ತುಗಳನ್ನೂ ತನ್ನಲ್ಲಿ ಅಡಗಿಸಿ ಕೊಂಡಿರುವ ಕಾರಣ ,, ವಸುಂಧರೆ ,, ಎಂಬುದಾಗಿ ಕರೆಯಿಸಿಕೊಳ್ಳುವ ಆ ಭೂದೇವಿಯು ಭೀತಿಕೊಂಡು ಗೋ ರೂಪವಂ ಧರಿಸಿ ಅತಿ ಶೀಘ್ರ ವಾದ ನಡೆಯಿಂದ ಬ್ರಹ್ಮಲೋಕ ವೊದಲಾದ ಎಲ್ಲ ಲೋಕಗಳನ್ನೂ ಆವೆದಾಡಲುಪಕ್ರಮಿಸಿದಳು. ॥೭೦॥ ಎಲ್ಲ ಪ್ರಾಣಿವರ್ಗಕ್ಕೂ ವಾಸಸ್ಥಾ ನಭೂತಳಾದ ಆ ಭೂದೇವಿಯು ಭೆಯದಿಂದ ಎಲ್ಲೆಲ್ಲಿ ಹೋದರೂ ಆ ಪ್ರದೇಶಗಳಲ್ಲೆಲ್ಲಾ ಈ ಪೃಥುರಾಯನು ಹೆದೆಬಿಗಿದ ಬಿಲ್ಲಿನಲ್ಲಿ ನೆಟ್ಟ ಬಾಣವುಳ್ಳವನಾಗಿ ತನ್ನನ್ನು ಹಿಂಬಾಲಿಸಿ ಬರುತ್ತಿದ್ದುದನ್ನು ಕಂಡು ತಾನು ಎಲ್ಲಿ ಹೋದರೂ ಈತನು ತನ್ನನ್ನು ಬೇರೆ ಬಿಡುವುದಿಲ್ಲವೆಂದು ನಿಶ್ಚಯಿಸಿ ಬಂದೆಡೆಯಲ್ಲಿ ನಿಂತುಬಿಟ್ಟಳು ॥೭೧॥ ಆ ಬಳಿಕ ಮಹಾ ಪರಾಕ್ರಮಶಾಲಿ ಎನಿಸಿದ ಈ ಪೃಥುರಾಯನಂ ಕಂಡು ಆತನ ಹರಿತವಾದ ಬಾಣದ ಹೊಡೆತವನ್ನು ತಪ್ಪಿಸಿಕೊಳ್ಳಲೋಸುಗ ಭಯದಿಂದ ಗಡಗಡನೆ ನಡುಗುತ್ತಾ ಆ ರಾಯನಂ ಕುರಿತು ಇಂತೆಂದಳು. ॥೭೨॥ ಭೂದೇವಿಯು ಪೃಥುರಾಯನಿಗೆ ಹೇಳುತ್ತಾ ಳೆ;—ಎಲೈ ಧಾರ್ಮಿಕನೆನಿಸಿ ಅತ್ಯಂತ ವಿಶ್ವಾಸದಿಂದ ಪ್ರಜೆಗಳನ್ನು ಸಲಹುವ ನೃಪವರ್ಯನೆ , ಈ ರೀತಿ ಕೋಪಗೊಂಡು ಧನುರ್ಬಾಣಗಳಿಂದೊಡಗೂಡಿ ನನ್ನನ್ನು ಕೊಲ್ಲಲು ಉಜ್ಜುಗಿಸುವೆ ?

ಕೋ! ದ್ಯಮಂ ॥೭೪॥ ಪೃಥುರುವಾಚ॥ ಏಕಸ್ಮಿನ್ ಯತ್ರ ನಿಧ
ನಂ ಪ್ರಾಪಿತೇ ದುಷ್ಟಕಾರಿಣಿ । ಬಹೂನಾಂ ಭವತಿಕ್ಷೇಮಂ ತ
ಸ್ಯ ಪುಣ್ಯಪ್ರದೋ ವಧಃ ॥೭೪॥ ಪೃಥಿವೀ ॥ ಪ್ರಜಾನಾ ಮುಪ
ಕಾರಾಯ ಯದಿ ಮಾಂ ತ್ವಂ ಹನಿಷ್ಯಸಿ । ಆಧಾರಃ ಕಃ ಪ್ರಜಾ
ನಾಂತೇ ನೃಪಶ್ರೇಷ್ಠ! ಭವಿಷ್ಯತಿ? ॥ ೭೫ ॥ ಪೃಥುಃ ॥ ತ್ವಾಂ

ಎಲೈ ನರೇಂದ್ರನೆ! ನೀನು ಸಮಸ್ತ ಧರ್ಮಗಳನ್ನೂ ಬಲ್ಲವನಾಗಿದ್ದರೂ ಸ್ತ್ರೀವಧ್ಯವು ಅತ್ಯಂತ ಪಾಪಾವಹ ವೆಂಬುದನ್ನು ಅರಿಯೆಯಾ? ಅಥವಾ ಪ್ರಜೆಗಳ ಗೋಳನ್ನು ಕೇಳಿ ಉಂಟಾದ ಕೋಪಾ ವೇಶದಿಂದ ಅದನ್ನು ಮರತೆಯಾ ? ॥೭೪॥ ಇಂತು ಭೂದೇವಿಯು ಮಾತಂ ಲಾಲಿಸಿ ತರುವಾಯು ಪೃಥುರಾಯನು ಹೇಳುತ್ತಾನೆ ; ಎಲೈ ಭೂತ ಧಾರಿಣಿಯೆ ; ನೀನು ಹೇಳುವುದೇನೋ ದಿಟ. ಆದರೂ ಕೂಡ ಒಬ್ಬ ದುಷ್ಟನನ್ನು ಕೊಂದು ಅನೇಕರನ್ನು ಉದ್ಧಾರಮಾಡಿದರೆ ಅದು ಎಂತಹ ಪಾತಕವಾದರೂ ಏನನ್ನೂ ಮಾಡಲಾರದು. ಬಹು ಮಂದಿಯ ಸುಖಕ್ಕೋಸ್ಕರ ಒಬ್ಬನನ್ನು ಕೊಂದರೂ ಕೂಡ ಅನೇಕರಿಗೆ ಅದರಿಂದ ಸುಖವುಂಟಾಗುವ ಕಾರಣ ಆ ಒಬ್ಬ ದುಷ್ಟನ ವಧೆಯು ಕೊಲ್ಲತಕ್ಕವನಿಗೆ ಪುಣ್ಯಸಂಪಾದಕವಾಗುವುದೇ ಹೊರತು ಪಾಪಲೇಶವೂ ಕೂಡ ಅವನಿಗೆ ಸಂಭವಿಸಲಾರದು. (ಇಂತು ಶಾಸ್ತ್ರಪ್ರಮಾಣವಿರುವ ಕಾರಣ ಅನೇಕ ಕೋಟಿ ಸಂಖ್ಯಾಕರಾದ ಈ ಪ್ರಜೆಗಳ ಸುಖಕ್ಕಾಗಿ ಸ್ತ್ರೀಯಾದ ನಿನ್ನೊಬ್ಬಳನ್ನು ಕೊಲ್ಲುವುದರಿಂದ ನನಿಗೆ ಯಾವ ಪಾತಕವೂ ಉಂಟಾಗುವುದೇ ಇಲ್ಲವು ॥೭೪॥ ಈ ರೀತಿಯಾದ ಪೃಥುವಿನ ಮಾತನ್ನು ಕೇಳಿ ಮರಳಿ ಭೂದೇವಿಯು ಹೇಳುತ್ತಾಳೆ:—ಎಲೈ ರಾಜಶ್ರೇಷ್ಠನೆ ; ನೀನು ಈಗ ಅನೇಕಮಂದಿ ಪ್ರಜೆಗಳ ಸೌಕರ್ಯಕ್ಕಾಗಿ ನನ್ನನ್ನು ಕೊಲ್ಲುವಿಯುಲ್ಲನೆ ? ಅದಂತಿರಲಿ, ನನ್ನನ್ನು ನೀನು ಕೊಂದು ಹಾಕಿದ ಬಳಿಕ ಈ ನಿನ್ನ ಪ್ರಜೆಗಳೆಲ್ಲರೂ ಎಲ್ಲಿ ನಿಲ್ಲುವರು, ಎಲ್ಲಿ ಕೂಡುವರು, ಇವರು ಮುಲಗುವುದೆಲ್ಲಿ; ಇವೆಲ್ಲಕ್ಕೂ ಮುಖ್ಯಾಶ್ರಯ ಭೂತಳಾದ ನಾನೇ ಮುಡದುಹೋದರೆ ನಿನ್ನ ಪ್ರಜೆಗಳಿಗೆ ಗತಿಯಾರು? ಪ್ರಜೆಗಳೂ ನಾಶವಾದ ಬಳಿಕ ಈ ರಾಜ್ಯ (ದೊರತನ) ದಿಂದ ನೀನು ತಾನೇ ಏನು ಮಾಡುವೆ ; ॥೭೫॥

ಹತ್ವಾ ವಸುಧೇ! ಬಾಣೈರ್ಮರ್ಚ್ಛಾಸನ ಪರಾಙ್ಮುಖೀಂ । ಆತ್ಮಯೋಗ ಬಲೇನೈವ ಧಾರಯಿಷ್ಯಾಮ್ಯಹಂ ಪ್ರಜಾಃ ॥೭೩॥ ತತಃ ಪ್ರಣಮ್ಯ ವಸುಧಾ ತಂಭೂಮಃ ಪ್ರಾಹ ಪಾರ್ಥಿವಂ । ಪ್ರವೇಪಿತಾಂಗೀ ಪರಮಂ ಸಾಧ್ವಸಂ ಸಮು ಪಾಗತಾ ॥೭೪॥ ಉಪಾಯತ ಸ್ಸಮಾರಬ್ಧಾ ಸ್ಸರ್ವೇ ಸಿದ್ಧ್ಯಂತ್ಯುಪಕ್ರಮಾಃ । ತಸ್ಮಾ

ತರುವಾಯ ಪೃಥುರಾಯನು ಮರಳಿ ಹೇಳತೊಡಗಿದನು: ಎಲೌಭೂದೇವಿಯೆ; ನಾನು ನಿನ್ನನ್ನು ಕೊಂದಬಳಿಕ (ಈ ಪ್ರಜೆಗಳಿಗೆ ಆಧಾರಭೂತಳಾದ ನೀನಿಲ್ಲದಿರುವಿಕೆಯಿಂದ) ಈ ಪ್ರಜೆಗಳು ಬದುಕಿರಲಾರರೆಂದು ತಿಳಿಯಬೇಡ. ನನ್ನ ಆಜ್ಞೆಗೆ (ಆಳ್ವಿಕೆಗೆ) ವಿರೋಧವಾಗಿ ನಡೆಯುತಿರುವ ಕಾರಣ ನಿನ್ನನ್ನು ಕೊಲ್ಲುವುದು ಯುಕ್ತವು ಆದುದರಿಂದ ನಾನು ಈಗಲೇ ನಿನ್ನನ್ನು ಸಂಹರಿಸಿ ನನ್ನ ಯೋಗಶಕ್ತಿಯಿಂದ ಭೂಮಿಯ ರೂಪವಂ ತಾಳಿ ಇವರೆಲ್ಲರಂ ಧರಿಸುವೆನು. ಅದುಕಾರಣ ನೀನಿಲ್ಲದೊಡೆ ಈಪ್ರಜೆಗಳೆಲ್ಲರೂ ನಶಿಸಿಹೋಗುವರು. ನೀನೇ .ಇವರಿಗೆ ಆಶ್ರಯಭೂತಳು, ಎಂಬ ದುರಭಿಮಾನವಂ ತೊರೆವಳಾಗು ॥೭೬॥ ಇಂತು ಆ ಪೃಥುರಾಯನು ತನ್ನ ಯೋಗ ಬಲದಿಂದಲೇ ಪ್ರಜೆಗಳನ್ನು ತಾನು ನಿಲ್ಲುವಂತೆ ಮಾಡುವೆನೆಂಬದಾಗಿ ಹೇಳಿದ ಮಾತಂ ಕೇಳಿ ಆ ಭೂದೇವಿಯು ಹೆಚ್ಚಾಗಿ ಭೀತಿಗೊಂಡು, ತನ್ನ ಅಭಿಮಾನವೂ ಕೂಡ ನಷ್ಟವಾಯಿತೆಂದು ವಿಶೇಷವಾಗಿ ಗಾಬರಿಯಿಂದ ನಡುಗುತ್ತಾ ವಿನಯದಿಂದ ಕೂಡಿ ಆ ರಾಜನ ಬಳಿ ಸಾರ್ದು ಆತನಿಗೆ ಸಾಷ್ಟಾಂಗವೆರಗಿ ಈ ರೀತಿ ಹೇಳತೊಡಗಿದಳು ॥೭೭॥ ಎಲೈ ರಾಜನೆ, ಲೋಕದಲ್ಲಿ ಎಂತಹ ಶೂರನಾದರೂ ತನ್ನ ಕಾರ್ಯವಂ ನೆರವೇರಿಸಿಕೊಳ್ಳಬೇಕಾದರೆ ಉಪಾಯದಿಂದ ಕೈಗೂಡುವಂತೆ ಮಾಡಿಕೊಳ್ಳಬೇಕಲ್ಲದೆ ಸರ್ವಥಾ ಶೌರ್ಯದಿಂದಲೇ ಆಗ ಮಾಡಿಕೊಳ್ಳಲು ಸಾಧ್ಯವಲ್ಲ. ಅದಕ್ಕಾಗಿಯೇ ಅಲ್ಲವೇ ಸಾಮ, ದಾನ, ಭೇದ, ದಂಡಗಳೆಂಬದಾಗಿ ನಾಲ್ಕು ಉಪಾಯಗಳನ್ನು ಪಂಡಿತರು ಕಂಡು ಹಿಡಿದಿರುವರು. ಮೊದಲನೆಯ ಮೂರು ಉಪಾಯಗಳಿಗೂ ತನ್ನ ಕಾರ್ಯವು ಸಾಧ್ಯವಾಗದಿದ್ದೊಡೆ ಕೊನೆಗೆ ಶೌರ್ಯಪ್ರಧಾನವೆನಿಸಿದದಂಡೋಪಾಯದಿಂದ ಪ್ರಯತ್ನಿಸಬೇಕು. ಆದುದರಿಂದ ಈಗ ನಾನು ನಿನ

ದ್ವದಾಮ್ಯುಪಾಯಂತೇ ತಂಕುರುಷ್ವಯದೀಚ್ಛಸಿ ॥ ೭೪ ॥
ಸಮಸ್ತಾ ಯಾ ಮಯಾ ಜೀರ್ಣಾ ನಃನಾಥ ! ಮಹೌಷಧೀಃ ।
ಯದೀಚ್ಛಸಿ ಪ್ರದಾಸ್ಯಾಮಿ ತಾಃ ಕ್ಷೀರಪರಿಣಾಮಿನೀಃ ॥ ೭೫ ॥
ತಸ್ಮಾತ್ಪ್ರಜಾ ಹಿತಾರ್ಥಾಯ ಮಮಧರ್ಮ ಭೃತಾಂವರ ! ।
ತಂತು ವತ್ಸಂ ಪ್ರಯಚ್ಛತ್ವಂ ಕ್ಷೀರೇಯಂ ಯತ್ರವತ್ಸಲಾ ॥೭೦॥
ಸಮಾಂಚ ಕುರು ಸರ್ವತ್ರ ಯೇನ ಕ್ಷೀರಂ ಸಮಂತತಃ । ವರೌಷ

ಗೊಂದು ಉಪಾಯವಂ ಹೇಳುವೆನು. ಅದು ನಿನಿಗೆ ಯುಕ್ತವೆಂದು ತೋರಿದರೆ ಆ ರೀತಿ ನಡೆಯಿಸು ॥೭೪॥ ಎಲೌ ಮನುಜಾಧಿಪನೆ ; ಆ ಉಪಾಯವು ಯಾವುದೆಂದರೆ ; ನಾನು ಇದುವರೆಗೂ ನುಂಗಿರುವ ಉತ್ತಮೋತ್ತಮಗಳಾದ ಮಹೌಷಧಿಗಳನ್ನೆಲ್ಲಾ ಹಾಲಿನ ರೂಪದಿಂದ ಪುನಃ ನಿನಗೆ ಹಿಂದಿರುಗಿ ಕೊಡುವೆನು- (ಹಾಲಿನ ರೂಪದಿಂದ ಆ ಓಷಧಿಗಳನ್ನೆಲ್ಲಾ ಸುರಿಸುವೆನು) ॥೭೫॥ ಇಂತಾದರೆ ಪ್ರಜೆಗಳೂ ತಮ್ಮ ಹಸುವೆಯನ್ನು ನೀಗಿಕೊಂಡು ಸೌಖ್ಯವನ್ನನುಭವಿಸುವರು. ನಾನೂ ಕೂಡ ನಿನ್ನ ಅನುಗ್ರಹದಿಂದ ಸುಖವಾಗಿರುವೆನು, ಆದುದರಿಂದ ಎಲ್ಲರ ಕಾರ್ಯವೂ ಕೈಗೂಡಿದಂತಾಗುವುದು. ಎಲೈ ಧರ್ಮಜ್ಞ ವರೇಣ್ಯನೆ, ಯಾವ ಕರುವನ್ನು ಕಂಡೊಡನೆಯೇ ಅತ್ಯಂತ ವಾತ್ಸಲ್ಯದಿಂದ ಕೂಡಿದ ನಾನು ಹಾಲನ್ನು ಸುರಿಸುವೆನೋ ಅಂತಹ ಕರುವನ್ನು ನನಿಗೆ ದಯಪಾಲಿಸುವವನಾಗು (ಕರುವನ್ನು ಕಂಡೊಡನೆಯೇ ಆಕಳು ಹಾಲನ್ನು ಸುರಿಸತಕ್ಕದು ಅದಕ್ಕೆ ಸ್ವಾಭಾವಿಕ ಗುಣವಾದುದರಿಂದ ಪ್ರಕೃತದಲ್ಲಿ ಗೋರೂಪದಿಂದಿರುವ ನಾನೂ ಕೂಡ ಹಾಲು ಕರೆಯಬೇಕಾದರೆ ನನಿಗೊಂದು ಕರುವು ಅತ್ಯವಶ್ಯಕವಾದುದು. ಅದಕ್ಕೋಸುಗ ನೀನು ನನಗೊಂದು ಕರುವನ್ನು ಒದಗಿಸಿಕೊಡು) ॥೭೦॥ ಎಲೈ ವೀರನೆನಿಸಿದ ಪೃಥುರಾಯನೆ; ಉತ್ತಮಗಳೆನಿಸಿದ ಓಷಧಿಗಳಿಗೆ ಬೀಜಭೂತಗಳಾದ ಕ್ಷೀರಧಾರೆಗಳನ್ನೂ ನಾನು ಸುರಿಸುವೆನು. ಆ ಕ್ಷೀರಧಾರೆಗಳು ಎಲ್ಲೆಲ್ಲಿಯೂ ಹರಡಿಕೊಳ್ಳಲು ಈ ನನ್ನ ಕರೀರದಲ್ಲಿರುವ (ಭೂಮಿಯಲ್ಲಿರುವ) ಹಳ್ಳತಿಟ್ಟುಗಳನ್ನೆಲ್ಲಾ ಸಮಮಾಡು ಇಂತಾದರೆ ನಾನು ಕರೆಯುವ ಹಾಲು ಓಷಧಿರೂಪದಿಂದ ಈ ಭೂಮಿಯನ್ನು ಪ್ರಸರಿಸಿಕೊಳ್ಳುವುದು ॥೭೧॥ ಪರಾಶರನು ಹೇಳುತ್ತಾನೆ—ಹೀಗೆಂ

ಧೀಬೀಜ ಭೂತಂ ವೀರ ! ಸರ್ವತ್ರಭಾವಯೇ ॥೮೫॥ ಶ್ರೀ ಪರಾ
ಶರಃ । ತತ ಉತ್ಸಾರಯೂ ವಾಸ ಶೈಲಾ ಶತಸಹಸ್ರಶಃ। ಧನುಃ
ಕೋಟ್ಯಾ ತಥಾವೈನ್ಯ ಸ್ತೇನ ಶೈಲಾ ವಿವರ್ಧಿತಾಃ ॥೮ ॥ ನಹಿ
ಪೂರ್ವವಿಸರ್ಗೇವೈ ವಿಷಮೇ ಪೃಥಿವೀತಲೇ । ಪ್ರವಿಭಾಗಃ ಪುರಾ
ಣಾಂವಾ ಗ್ರಾಮಾಣಾಂ ವಾ ಪುರಾಭವತ್ ॥೮೫॥ ನಸಸ್ಯಾನಿ ನ
ಗೋರಕ್ಷ್ಯಂ ನಕೃಷಿ ರ್ನವಣಿಕ್ಪಥಃ । ವೈನ್ಯಾತ್ಪ್ರಭೃತಿ ಮೈ
ತ್ರೇಯ! ಸರ್ವಸ್ಯೈತಸ್ಯ ಸಂಭವಃ॥೮೪॥ ಯತ್ರಯತ್ರ ಸಮಂತ್ವ
ಸ್ಯಾ ಭೂಮೇ ರಾಸೀನ್ನರಾಧಿಪಃ । ತತ್ರ ತತ್ರ ಪ್ರಜಾನಾಂ ಹಿ ನಿ

ದು ಹೇಳಿದ ಭೂದೇವಿಯು ಮಾತನ್ನು ಅಂಗೀಕರಿಸಿದ ಆ ಪೃಥುರಾಯನು ತಾನು ಕೈಯಲ್ಲಿ ಪಿಡಿದಿದ್ದ ಆ ಆಜಗವ ಧನುಸ್ಸಿನ ತುದಿಯಿಂದ ಸುತ್ತು ಮುತ್ತಲೂ ಲಕ್ಷಾಂತರಗಟ್ಟಲೆ ಬಿದ್ದಿದ್ದ ಕಲ್ಲುಗಳನ್ನೆಲ್ಲಾ ಬಂದುಕಡೆಗೆತ ಳ್ಳಿರಾಶಿಮಾಡಿದನು. ಆ ತರುವಾಯ ಹೀಗೆ ರಾಶಿಯಾಗಿಬಿದ್ದಿದ್ದ ಆ ಕಲ್ಲುಗ ಳೇ ದೊಡ್ಡದೊಡ್ಡ ಪರ್ವತಗಳಾಗಿ ಬೆಳೆದುವು॥೮೩॥ ಎಲೈ ಮೈತ್ರೇಯನೆ ನೇನರಾಯನ ಕುವರನಾದ ಈ ಪೃಥುಚಕ್ರವರ್ತಿಯು ಭೂಮಿಯನ್ನು ಸಮವಾಡುವುದಕ್ಕಿಂತ ಹಿಂದಿನಕಲ್ಪಗಳಲ್ಲಿ ಭೂಮಿ ಎಲ್ಲವೂ ಹಳ್ಳತಿಟ್ಟು ಗಳಾಗಿದ್ದಿತು. ಎಲ್ಲೆಲ್ಲಿಯೂ ನಾನಾಬಗೆಗಳಾದ ಕಲ್ಲುಗಳು ಬಿದ್ದಿದ್ದುವು ಗ್ರಾಮಗಳು, ಪಟ್ಟಣಗಳು, ಪರ್ವತಗಳು, ಕಾಡುಗಳೆಂಬ ಇವೇ ಮೊದ ಲಾದ ಯಾವ ವಿಭಾಗಗಳೂ ಇರಲಿಲ್ಲವು. ಭೂಮಿಯಲ್ಲಿ ಮತ್ತೆಬೇರೆ ಬಗೆಗಳಾದ ತಿದ್ದುಪಾಟುಗಳೂ ಇರಲಿಲ್ಲ. ॥೮೪॥ ಸಸಿಗಳೂ ಕೂಡ ಇ ರಲಿಲ್ಲಾ. ಗೋವುಗಳನ್ನು ಕಾಪಾಡತಕ್ಕವರೆಂತೂ ಇರಲೇ ಇಲ್ಲ.ಬೇಸಾ ಯಕ್ಕಾಗಿ ಭೂಮಿಯನ್ನು ಉತ್ತು ಬಿತ್ತಿ ಪೈರುಮಾಡುವ ಸಂಪ್ರದಾಯ ವೇ ಇರಲಿಲ್ಲವು. ಕ್ರಯವಿಕ್ರಯ ರೂಪವಾದ ವ್ಯಾಪಾರವೆಂಬ ವೈಶ್ಯಧ ರ್ಮವೂ ಕೂಡ ಇರಲಿಲ್ಲವು. ಅಯ್ಯಾ ಮೈತ್ರೇಯನೆ; ಮಹಾನುಭಾವ ನಾದ ಪೃಥುರಾಯನ ಕಾಲದಲ್ಲಿಯೇ ಇವುಗಳೆಲ್ಲವೂ ಉಂಟಾದುವು ॥ ಇಂತು ಆ ಪೃಥುರಾಯನು ಭೂಮಿಯಮೇಲಿದ್ದ ಕಲ್ಲುಗಳನ್ನೆಲ್ಲಾ ತನ್ನ ಬಿಲ್ಲಿನ ತುದಿಯಿಂದ ಒಟ್ಟುಮಾಡಿದ ಬಳಿಕ ಭೂಮಿಯೆಲ್ಲವೂ ವಿಶಾಲವಾಗಿ ಕಂಡುಬಂದಿತು. ಅದರಲ್ಲಿಯೂ ಹಳ್ಳ ದಿಣ್ಣೆಗಳಿಲ್ಲದೆ ಸಮನಾಗಿದ್ದ ಭೂ

ವಾಸಂಸಮರೋಚಯತ್ ॥೪೫॥ ಆಹಾರಃ ಫಲಮೂಲಾನಾಂ ಪ್ರಜಾನಾಮಭವತ್ತದಾ । ಕೃಚ್ಛ್ರೇಣಮಹತಾ ಸೋಪಿ ಪ್ರಣಷ್ಟಾಸ್ವೋಷಧೀಷ್ವಥ ॥ ೪೬ ॥ ಸಂಕಲ್ಪಯಿತ್ವಾ ವತ್ಸಂತು ಮನುಂಸ್ವಾಯಂಭುವಂ ಪ್ರಭುಂ । ಸ್ವಪಾಣಾಪೃಥಿವೀ ನಾಥೋ ದುದೋಹಪೃಥಿವೀಂ ಪೃಥುಃ । ॥ ೪೭ ॥ ಸಸ್ಯಬೀಜಾನಿ ಸರ್ವಾಣಿ ಪ್ರಜಾನಾಂ ಹಿತಕಾಮ್ಯಯಾ । ತೇನಾನ್ನೇನ ಪ್ರಜಾ ಸ್ತಾತ ! ವರ್ತಂತೇ ೞದ್ಯಾಪಿನಿತ್ಯಶಃ ॥೪೪॥ ಪ್ರಾಣಪ್ರ

ಭಾಗದಲ್ಲಿ ಈಪೃಥುರಾಜನು ಪ್ರಜೆಗಳ ವಾಸಕ್ಕೋಸ್ಕರ ಸ್ಥಳವನ್ನು ಏರ್ಪಡಿಸಿಕೊಟ್ಟನು ॥೪೫॥ ಆಗ ಪ್ರಜೆಗಳ ದೇಹಧಾರಣೆಗಾಗಿ ಹಣ್ಣು, ಹಂಪಲು, ಗೆಡ್ಡೆ ಗೆಣಸುಗಳು ಆಹಾರವಾಗಿ ಏರ್ಪಟ್ಟವು ಲಯ್ಯಾ ಮೈತ್ರೇಯನೆ ; ಈ ಪೃಥುರಾಯನಿಗಿಂತಲೂ ಮುಂಚೆ ವೇನರಾಯನ ಆಳ್ವಿಕೆಯಲ್ಲಿ ಈ ಕಂದ, ಮೂಲ ಫಲಗಳ ರೂಪವಾದ ಆಹಾರವೂ ಕೂಡ ಹೊಂದಲು ಅತಿ ಕಷ್ಟಸಾಧ್ಯವಾಗಿದ್ದಿತು. ಭೂಮಿಯಲ್ಲಿ ಯಾವ ಓಷಧಿಗಳೂ ಬೆಳೆಯುತ್ತಿರಲಿಲ್ಲವು ಇದೆಲ್ಲವೂ ರಾಜನ ದುರ್ನಡತೆಯಿಂದುಂಟಾದ ಕಾರಣ ಆ ಕಾಲದಲ್ಲಿ ಬೇರು ಗೆಡ್ಡೆಗಳನ್ನು ಸಂಪಾದಿಸುವುದೂ ಕೂಡ ಕಷ್ಟಸಾಧ್ಯವಾಗಿದ್ದಿತೆಂದು ಭಾವವು ॥೪೬॥ ತರುವಾಯ, ಭೂಪಾಲನೆನಿಸಿದ ಪೃಥುರಾಯನು ತನ್ನ ವಂಶಕ್ಕೆ ಮೂಲಪುರುಷನಾದುದರಿಂದ ಪ್ರಜಾಸಂತಾನ ಪ್ರವರ್ತಕನೆನಿಸಿದ ಸ್ವಾಯಂಭುವ ಮನುವನ್ನು ಈ ಭೂದೇವಿರೂಪಳಾದ ಗೋವಿಗೆ ಕರುವಿನಂತೆ ಮನಸ್ಸಿನಲ್ಲಿ ಭಾವಿಸಿ ತನ್ನ ಅಂಗೈಯೆಂಬ ಪಾತ್ರೆಯಲ್ಲಿ ಭೂದೇವಿ ಎಂಬ ಆಕಳಿನಿಂದ ಓಷಧಿಗಳೆಂಬ ಹಾಲನ್ನು ಕರೆಯತೊಡಗಿದನು (ಆ ಗೋವಿನ ಹಾಲನ್ನು ತನ್ನ ಕೈಯ್ಯಲ್ಲಿ ಹಿಂಡಿದನೆಂದು ಭಾವವು) ॥೪೭॥ ಅಪ್ಪಾ ಮೈತ್ರೇಯನೆ; ಇಂತು ಪ್ರಜೆಗಳ ಸುಖಕ್ಕಾಗಿ ಪೃಥುರಾಜನು ಸಮಸ್ತ ಸಸ್ಯಬೀಜಗಳನ್ನೂ ಹಾಲಿನ ಮೂಲಕ ಹಿಂಡಿದ ಬಳಿಕ ಎಲ್ಲರೂ ಆ ಸಸ್ಯಬೀಜಗಳಿಂದಲೇ ಜೀವಿಸುತ್ತಿದ್ದರು. ಈಗಲೂ ಕೂಡ ಈ ಕಂದ ಮೂಲ, ಫಲಗಳೇ ಪ್ರಜೆಗಳ ಮುಖ್ಯ ಆಹಾರವಾಗಿರುವುದು ॥೪೪॥ ಇಂತು ಪೃಥು

ದಾತಾ ಸಪೃಥು * ರ್ಯಸ್ಮಾದ್ಭೂಮೇ ರಭೂತ್ಪಿತಾ । ತತಸ್ತು ಪೃ
ಥಿವೀ ಸಂಜ್ಞಾ ಮವಾ ಪಾಖಿಲಧಾರಿಣೀ ॥೪೯॥ ತತಶ್ಚದೇವೈ ರ್ದೈ
ನಿಭಿರ್ದೈತ್ಯೈ ರಕ್ಷೋಭಿ ರದ್ರಿಭಿಃ । ಗಂಧರ್ವೈ ರುರಗೈ ರ್ಯ
ಕ್ಷೈಃ ಪಿತೃಭಿ ಸ್ತರುಭಿ ಸ್ತಥಾ ॥೪೦॥ ತತ್ತ ತ್ಪಾತ್ರಮುಪಾದಾಯ
ತತ್ತದ್ದುಗ್ಧಂ ಮುನೇ ! ಪಯಃ । ವತ್ಸದೋಗ್ಧೃ ವಿಶೇಷಾಚ್ಚ ತೇ

ಮಹಾರಾಜನು ಭೂದೇವಿಯನ್ನು ಕೊಲ್ಲದೆ ಆಕೆಯ ಪ್ರಾಣಗಳನ್ನು ಉಳಿ
ಸಿದುದರಿಂದ ಈ ಪೃಥುರಾಜನು ಭೂಮಿಗೆ ತಂದೆಯಾದನು ಇಂತು
ಪೃಥುಮಹಾರಾಜನಿಂದ ತನಗೆ ಪ್ರಾಪ್ತವಾಗಿದ್ದ ಮಹಾಭಯವನ್ನು
ಭೂದೇವಿಯು ಆತನಿಂದಲೇ ತಪ್ಪಿಸಿಕೊಂಡ ಕಾರಣ ಆತನಿಗೆ ಮಗ
ಳಾದಳು ಆದುದರಿಂದಲೇ ಎಲ್ಲಾ ವಸ್ತುಗಳಿಗೂ ಮುಖ್ಯಾಧಾರ ಭೂತಳೆ
ನಿಸಿದ ಈ ಭೂದೇವಿಯನ್ನು ,,ಪೃಥಿವಿ,, ಎಂದು ಕರೆವರು (ಪೃಥುರಾ
ಯನ ಮಗಳು ಪೃಥಿವೀ ಎಂದರ್ಥ) ॥೪೯॥ ಆ ಬಳಿಕ ದೇವತೆಗಳು ಮು
ನಿಗಳು, ದೈತ್ಯರು, ರಾಕ್ಷಸರು, ಪರ್ವತಗಳು, ಗಂಧರ್ವರು, ಸರ್ಪಗಳು
ಯಕ್ಷರು ಪಿತೃಗಳು ಗಿಡಗಳೆಂಬ ಈ ಹತ್ತು ಪ್ರಾಣಿವರ್ಗವೂ ಬೇರೆ
ಬೇರೆ ಪಾತ್ರೆಗಳಲ್ಲಿ ಬೇರೆಬೇರೆ ಕರುಗಳನ್ನು ನಿವರ್ತ್ಯಣಮಾಡಿಕೊಂಡು
ಆ ಭೂದೇವಿಯೆಂಬ ಗೋವಿನ ಹಾಲನ್ನು ಕರೆದರು ಆದುದರಿಂದ ಆ
ಕರುಗಳೂ ಪಾತ್ರೆಗಳೂ, ಹಾಲೂ ಕೂಡ ಆ ಆ ಜಾತಿಗೆ ಸೇರಿದುದಾ
ಯಿತು ॥೪೦-೪೧॥ ಇದೇ ವಿಷಯವನ್ನೇ ಹರಿವಂಶ ಮತ್ಸ್ಯಪುರಾಣವೊ
ದಲಾದವುಗಳಲ್ಲಿ ವಿಶದಪಡಿಸುತ್ತಾರೆ ಆ ವಿಷಯವನ್ನು ಇಲ್ಲಿ ಸಂಗ್ರಹ
ವಾಗಿ ತಿಳಿಯಪಡಿಸುತ್ತೇನೆ. ಮೊದಲು ದೇವತೆಗಳು, ಇಂದ್ರನನ್ನು ಕರು

* ಶ್ಲೋ॥ ಜನಕಶ್ಚೋಪನೇತಾಚ ಯಶ್ಚ ವಿದ್ಯಾಂಪ್ರಯಚ್ಛತಿ । ಅನ್ನದಾತಾ
ಭಯತ್ರಾತಾ ಪಂಚೈತೇ ಪಿತರಸ್ಸ್ಮೃತಾಃ ॥ ತನ್ನನ್ನು ಹೆತ್ತವನು, ಉಪನಯನವಾ
ಡಿ ಬ್ರಹ್ಮೋಪದೇಶಮಾಡಿದವನು, ವಿದ್ಯಾಗುರು, ಅನ್ನವಿಟ್ಟು ಸಾಕಿದವನು, ಆಪತ್ತಿ
ನಿಂದ ಸಲಹಿದವನು ಈ ಐದು ಮಂದಿಯೂ ಮನುಜನಿಗೆ ಪಿತೃಗಳೆಂದು ಸ್ಮೃತಿಗ
ಳು ಹೇಳುವವು. (ತಂದೆಯಂತೆ ಗೌರವಿಸಲ್ಪಡತಕ್ಕವರೆಂದರ್ಥವು) ಪ್ರಕೃತ ಪೃಥು
ರಾಯನು ಭೂಮಿಯನ್ನು ಪ್ರಾಣನಾಶರೂಪವಾದ ಆಪತ್ತಿನಿಂದ ಸಲಹಿದ ಕಾರಣ
ಭೂಮಿಗೆ ತಂದೆ ಎನಿಸಿದನು.

ಷಾಂ ತದ್ಯೋನಯೋ ೪ ಭವ॑ ॥೯೦॥ ಸೈಷಾ ಧಾತ್ರೀ ವಿಧಾ
ತ್ರೀಚ ಧಾರಣೀ ಪೋಷಣೀತಥಾ । ಸರ್ವಸ್ಯ ಜಗತಃ ಪೃಥ್ವೀ
ವಿಷ್ಣು ಪಾದ ತಲೋದ್ಭವಾ ॥೯೨॥ ಏವಂಪ್ರಭಾವಸ್ಯ ಪೃಥುಃ ಪು

ವಾಗಿ ಭಾವಿಸಿ ಸೂರ್ಯನನ್ನು ಹಾಲುಕರೆವಂತೆ ಏರ್ಪಡಿಸಿ ಚಿನ್ನದ ಪಾ
ತ್ರೆಯಲ್ಲಿ ಬಲವೆಂಬ ಹಾಲನ್ನು ಹಿಂಡಿದರು ಆದುದರಿಂದ ಅವರು ಮಹಾ
ಬಲಕಾಲಿಗಳೆನಿಸಿದರು. ಎರಡನೆಯ ಬಾರಿ ಮುನಿಗಳು ಸೋಮನನ್ನು ಕ
ರುವೆಂದು ಭಾವಿಸಿ ಬೃಹಸ್ಪತಿಯನ್ನು ಹಾಲುಕರೆವುದಕ್ಕೆ ನೇಮಿಸಿಛಂದ
ಸ್ಸುಗಳೆಂಬ ಪಾತ್ರೆಯಲ್ಲಿ ತಪಸ್ಸು ಮತ್ತು ವೇದಗಳೆಂಬಹಾಲನ್ನು ಕರ
ದರು. ಮೂರನೆಯ ಸಾರಿ ದೈತ್ಯರು ತ್ರಿಮೂರ್ಧನನ್ನು ಕರುವನ್ನಾಗಿ
ಮಾಡಿ ವಿರೋಚನನನ್ನು ಹಾಲುಕರೆಯಲು ನೇಮಿಸಿ ಕಬ್ಬಿಣದ ಪಾತ್ರೆ
ಯಲ್ಲಿ ಮಾಯಾ ಅಥವ ವೋಸವೆಂಬ ಹಾಲನ್ನು ಹಿಂಡಿದರು. ನಾಲ್ಕ
ನೆಯ ವೇಳೆಯಲ್ಲಿ ರಾಕ್ಷಸರು ಸುಮಾಲಿಯನ್ನು ಕರುವೆಂದು ಭಾವಿಸಿ
ಜಂತು ವೆಂಬವನನ್ನು ಕವಾಡಿಗನನ್ನು ಮಾಡಿತಲೆಬುರುಡೆ (ಕಪಾಲ)
ಎಂಬ ಪಾತ್ರೆಯಲ್ಲಿ ರಕ್ತವೆಂಬ ಹಾಲನ್ನು ಹಿಂಡಿದರು. ಐದನೆಯ
ಆವೃತ್ತಿ ಪರ್ವತಗಳೆಲ್ಲವೂ ಹಿಮವಂತನನ್ನು ಕರುವೆಂದುಮಾಡಿ ವೇರು
ಪರ್ವತವನ್ನು ಹಾಲುಗರೆಯುವಂತೆ ನೇಮಿಸಿ ಕಲ್ಲಿನ ಪಾತ್ರೆಯಲ್ಲಿ ಮಹಾ
ಷಧಿಗಳೆಂಬ ಹಾಲನ್ನು ಕರೆದರು ಆರನೆಯವೇಳೆ ಗಂಧರ್ವರು
ಚಿತ್ರರಥನನ್ನು ಆ ಭೂದೇವಿ ಎಂಬ ಆಕಳಿಗೆ ಕರುವನ್ನಾಗಿ ಮಾ
ಡಿ ವಿಶ್ವಾವಸುವೆಂಬ ಗಂಧರ್ವನನ್ನು ಹಾಲುಕರೆವಂತೆ ನಿಯಮಿಸಿ ಕಮ
ಲಪಾತ್ರೆಯಲ್ಲಿ ಪರಿಮಳವೆಂಬ ಹಾಲನ್ನು ಹಿಂಡಿದರು. ಏಳನೆಯಬಾರಿ ಸ
ರ್ಪಗಳೆಲ್ಲ ವೂತಕ್ಷಕನನ್ನು ಕರುವಿನ ಸ್ಥಾನದಲ್ಲಿಟ್ಟು ಧೃತರಾಷ್ಟ್ರನನ್ನು
ಹಾಲುಕರೆವಂತೆ ಗೊತ್ತುಮಾಡಿ ಸೋರೆಬುರುಡೆಯಲ್ಲಿ ವಿಷವೆಂಬ ಹಾಲ
ನ್ನು ಕರೆದರು ಎಂಟನೆಯ ಸರದಿಯಲ್ಲಿ ಯಕ್ಷರು ತಮಿಗೆ ಅಧಿಪನೆನಿಸಿ
ದ ಕುಬೇರನನ್ನು ಕರುವಿನಂತೆ ಭಾವಿಸಿ ಗರುಡನನ್ನು ಹಾಲುಕರೆವನಂತೆ
ಗೊತ್ತುಮಾಡಿ ಮಣ್ಣಿನ ಪಾತ್ರೆಯಲ್ಲಿ ಯಕ್ಷಿಣಿ (ಅಂತರ್ಧಾನ) ವೆಂಬ
ಹಾಲನ್ನು ಹಿಂಡಿದರು. ಒಂಬತ್ತನೆಯ ಸಾರಿ ಪಿತೃದೇವತೆಗಳೆಲ್ಲರೂ
ಯಮನನ್ನು ಕರುವೆಂದು ಗೊತ್ತುಮಾಡಿಕೊಂಡು ಅಂತಕನನ್ನು ಹಾಲ

ತ್ರೋವೇನಸ್ಯ ವೀರ್ಯವಾ । ಜಜ್ಞೇವಮಹೀಪತಿಃ ಪೂರೋ್ವ ರಾ
ಜಾ ಭೂಜ್ಜನರಂಜನಾತ್ ॥ ೯೫ ॥ ಯಇದಂ ಜನ್ಮವೈನಸ್ಯ
ಪೃಥೋಃ ಕೀರ್ತಯತೇ ನರಃ । ನತಸ್ಯ ದುಷ್ಕೃತಂ ಕಿಂಚಿ
ತ್ಫಲದಾಯಿ ಪ್ರಜಾಯತೇ॥ ೯೪॥ ದುಸ್ಸ್ವಪ್ನೋ ಪಶಮಂನ್ಯಾನಾಂ

ಕರೆವಂತ ಹೇಳಿ ಬೆಳ್ಳಯ ಪಾತ್ರೆಯಲ್ಲಿ ಸ್ವಧೆ ಎಂಬ ಹಾಲನ್ನು ಹಿಂಡಿದರು. ಹತ್ತನೆಯ ಬಾರಿ ವೃಕ್ಷಗಳು ಆಲದಮರವನ್ನು ಕರುವೆಂದು ತಿಳಿದು ಸಾಲೆ ಮರವನ್ನು ಕರೆವಂತೆ ಭೂವಿಸ ಮುತ್ತುಗದ ಪಾತ್ರೆಯಲ್ಲಿ (ಛಿನ್ನ ಸಂರೋಹಣ) ತಮ್ಮನ್ನು ಕೊಡಲಿ ಮೊದಲಾದ ಆಯುಧಗಳಿಂದ ಕತ್ತರಿಸಿದರೆ ಮರಳಿ ಬೆಳೆಯುವಿಕೆ ಎಂಬ ಹಾಲನ್ನು ಹಿಂಡಿದರು (ಇಲ್ಲಿ ಬರೆಯತಕ್ಕ ವಿಷಯಗಳು ಇನ್ನೂ ಅನೇಕವಾಗಿದ್ದರೂ ಗ್ರಂಥವು ಹೆಚ್ಚಿ ಹೋಗುವುದೆಂಬ ಶಂಕೆಯಿಂದ ಇಲ್ಲಿ ಸಿಲ್ಲಿಸಿರುತ್ತೇನೆ ಹರಿವಂಶ, ಮತ್ಸ್ಯ ಪುರಾಣಗಳಲ್ಲಿ ಈ ಸಂಗತಿಯನ್ನು ವಿಶದವಾಗಿ ತಿಳಿಯಬಹುದು) ಆದುದರಿಂದ ಶ್ರೀ ಮಹಾವಿಷ್ಣುವಿನ ಪಾದಮೂಲದಿಂದುದಯಿಸಿದ ಈ ಭೂದೇವಿಯೇ ಎಲ್ಲ ಲೋಕಗಳಿಗೂ ತಾಯಿಯು, ಇವಳೇ ಎಲ್ಲಕ್ಕೂ ಆಧಾರಭೂತಳು. ಈಕೆಯೇ ಎಲ್ಲವನ್ನೂ ಮಾತಕ್ಕವಳು. ಅಂತೆಯೇ ಎಲ್ಲ ಲೋಕಗಳನ್ನೂ ಕಾಪಾಡತಕ್ಕವಳೂ ಕೂಡ ಈಕೆಯೇ ಅಲ್ಲದೆ ಈಕೆಗಿಂತಲೂ ಮತ್ತೊಬ್ಬರಿಲ್ಲ ॥೯೩॥ ಎಲೌ ಮೈತ್ರೇಯನೆ; ಇಂತಹ ಮಹಾನುಭಾವನೂ, ಪರಾಕ್ರಮಶಾಲಿಯೂ ಎನಿಸಿದ ಪೃಥುರಾಜನು ಪೂರ್ವದಲ್ಲಿ ವೇನರಾಯನಿಂದ ಹುಟ್ಟಿ ರಾಜ್ಯಾಧಿಕಾರವಂ ಪಡೆದನು. ತರುವಾಯು ಪ್ರಜೆಗಳನ್ನು ಪ್ರೀತಿ ವಿಶ್ವಾಸಗಳಿಂದ ಕಾಪಾಡುವಿಕೆ ಎಂಬ ಪ್ರಜಾನುರಾಗವನ್ನು ಸಂಪಾದಿಸಿದುದರಿಂದ ರಾಜನೆನಿಸಿಕೊಂಡನು. ಎಲೈ ಮೈತ್ರೇಯನೆ! ರಾಜಶಬ್ದವು ಸಾಮಾನ್ಯವಾದುದಲ್ಲ. ಪ್ರಜೆಗಳ ವಿಷಯದಲ್ಲಿ ಕೇವಲ ದಯಾಪರನೂ, ಪ್ರೀತಿಯುಳ್ಳವನೂ ಅವರ ಆಪತ್ತುಗಳನ್ನೂ ನಿವಾರಣಮಾಡಿ ಸಲಹತಕ್ಕ ಸಾಮರ್ಥ್ಯವುಳ್ಳವನೇ ರಾಜನೆನಿಸುವನಲ್ಲದೆ ಕೇವಲ ಪ್ರಜಾಪಾಲನಾಧಿಕಾರಪಂ ಪಡೆದ ಮಾತ್ರದಿಂದಲೇ ರಾಜನೆನಿಸಲಾರನು. ಈ ಪೃಥುರಾಯನೊಬ್ಬನು ಮಾತ್ರ ಇಂತಹ ನಿರತಿಶಯ ಗುಣಗಣಾಲಂಕೃತನಾಗಿದ್ದುದರಿಂದ ರಾಜನೆಂಬಹೆಸರು ಈತನಿಗೇ ಸಲ್ಲತಕ್ಕುದು.

ಕೃಣ್ವತಾಂ ಜೈತದುತ್ತಮಂ । ಪೈಥೋರ್ಜನ್ಮ ಪ್ರಭಾವಶ್ಚ
ಕರೋತಿ ಸತತಂ ಶುಭಂ ॥೯೫॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಪೃಥೂಪಾಖ್ಯಾನಂ
ನಾಮ ತ್ರಯೋದಶೋಧ್ಯಾಯಃ.

ವಿಕ್ಕವರಲ್ಲರೂ ಹೆಸರಿಗೆ ರಾಜರೇ ಹೊರತು ಅರ್ಥಾನುಸಾರವಾದ ರಾಜಶಬ್ದಕ್ಕೆ ಅರ್ಹರಲ್ಲವು ॥೯೫॥ ಇಂತು ಮಹಾನುಭಾವನೆನಿಸಿದ ವೇ ನರಾಯನ ಕುವರನೆನಿಸಿದ ಈ ಪೃಥುಚಕ್ರವರ್ತಿಯಉತ್ಪತ್ತಿ ಕಥೆಯನ್ನು ಅನವರತವೂ ಯಾರುಕೀರ್ತನಮಾಡುವರೋ ಮತ್ತು ಆದರದಿಂದಕಿವಿಗೊ ಟ್ಟು ಕೇಳುವರೋ ಅಂತಹವರಿಗೆ ಪಾಪಲೇಶ ಸಂಪರ್ಕವೂ ಉಂಟಾ ಗಲಾರದು. ಅವರು ಎಂತಹ ಕೆಟ್ಟಕೆಲಸಗಳನ್ನು ಮಾಡಿದವರಾದರೂ ಆ ಕೆಟ್ಟಕೆಲಸಗಳು ಅವರಿಗೆ ಯಾವ ಕೇಡನ್ನೂ ಉಂಟುಮಾಡಲಾರದು ॥ ಇದನ್ನು ಅನವರತವೂ ಕೇಳುವವರು ಎಂತಹ ದುಸ್ಸ್ವಪ್ನ ಗಳನ್ನು ನೋ ಡಿದ್ದರೂಅವರಿಗೆ ಅದರಿಂದ ಯಾವ ಬಾಧಕವೂ ಉಂಟಾಗಲಾರದು ಅಂತೆ. ಯೇ ಕೆಟ್ಟ ಕನಸುಗಳೂ ಕೂಡ ಸಂಭವಿಸಲಾರವು ಮಹಾನುಭಾವನೆನಿ ಸಿದ ಈ ಪೃಥುರಾಯನ ಉತ್ಪತ್ತಿ ಕಥಾಮಹಾತ್ಮ್ಯವು ಮನುಜರಿಗೆ ಅನ ವರತವೂ ಮಂಗಳ ಪರಂಪರೆಗಳನ್ನೇ ಉಂಟುಮಾಡುವುದು॥೯೫॥

ಎಂಬದಾಗಿ ಪರಾಶರಮುನಿಯು ಮೈತ್ರೇಯನಿಗೆ ತಿಳಿಸುತ್ತಿದ್ದನೆಂಬಲ್ಲಿಗೆ

ಶ್ರೀ ವಿಷ್ಣುಪುರಾಣದ ಮೊದಲನೆಯ ಅಂಶದೊಳ್

"ಪೃಥುರಾಜಚರಿತ" ವೆಂಬ ಹದಿಮೂರನೆಯ ಅಧ್ಯಾಯ ಮುಗಿದುದು

— ತ್ರಯೋದಶಾಧ್ಯಾಯಂ ಸಮಾಪ್ತಂ —

ಶ್ರೀಃ

ಓಂನಮಃ ಪರಮಾತ್ಮನೇ

ಚತುರ್ದಶೋಧ್ಯಾಯಃ.

ಶ್ರೀ ಪರಾಶರಃ ॥ ಪೃಥೋಃ ಪುತ್ರೌತು ಧರ್ಮಜ್ಞೌ ಜ್ಞಾತೇಂ ತ ರ್ಧಿವಾದಿನೌ । ಶಿಖಂಡಿನೀಹವಿರ್ಧಾನ ಮಂತರ್ಧಾನಾ ದ್ವ್ಯಜಾ ಯತ ॥೧॥ ಹವಿರ್ಧಾನಾತ್ ಷಡಾಗ್ನೇಯೀ ಧಿಷಣಾ ಽ ಜನಯ ತ್ಸುತಾ । ಪ್ರಾಚೀನ ಬರ್ಹಿಷಂ ಶುಕ್ರಂಗಯಂ ಕೃಷ್ಣಂ ವೃ ಜಾಜಿನೌ ॥೨॥ ಪ್ರಾಚೀನಬರ್ಹಿ ರ್ಭಗವಾ ನ್ ಮಹಾನಾಸೀತ್ಪ್ರ ಜಾಪತಿಃ । ಹವಿರ್ಧಾನಿ ರ್ಮಹಾರಾಜೋ ಯೇನಸಂವರ್ಧಿತಾಃ ಪ್ರ ಜಾಃ ॥೩॥ ಪ್ರಾಚೀನಾಗ್ರಾಃ ಕುಶಾಸ್ತಸ್ಯ ಪೃಥಿವ್ಯಾಂ ವಿಸ್ತೃತಾ ಮುನೇ! । ಪ್ರಾಚೀನಬರ್ಹಿ ರಭವ ತ್ಖ್ಯಾತೋ ಭುವಿ ಮಹಾಬ

ಪರಾಶರನು ಹೇಳುತ್ತಾನೆ--ಎಲೈ ಮೈತ್ರೇಯನೆ; ಇದುವರೆಗೂ ಪೃಥುಮಹಾರಾಯನ ಚರಿತ್ರೆಯನ್ನು ವಿವರಿಸಿದೆನು. ಇನ್ನುಮುಂದೆ ಆತನ ವಂಶಾವಳಿಯನ್ನು ಹೇಳುವೆನು. ಮಹಾನುಭಾವನೆನಿಸಿದ ಈ ಪೃಥುರಾ ಯನಿಗೆ ಎಲ್ಲ ಧರ್ಮಗಳನ್ನೂ ಬಲ್ಲವರೆನಿಸಿದ ಅಂತರ್ಧಿ, ವಾದಿ ಎಂಬ ಇ ಬ್ಬರು ಮಕ್ಕಳಿದ್ದರು. ಅವರಲ್ಲಿ ಹಿರಿಯವನಾದ ಅಂತರ್ಧಿಯು ತನ್ನ ಕಾಂ ತೆಯಾದ ಶಿಖಂಡಿನೀ ಎಂಬವಳಲ್ಲಿ ಹವಿರ್ಧಾನನೆಂಬ ತನಯನಂ ಪಡೆದ ನು॥೧॥ ಅಗ್ನಿ ವಂಶಸಂಭೂತಳಾದ ಧಿಷಣಾ ಎಂಬಾಕೆಯು ಹವಿರ್ಧಾನ ನ ದೆಸೆಯಿಂದ ಪ್ರಾಚೀನಬರ್ಹಿಸ್ಸು, ಶುಕ್ರ, ಗಯ, ಕೃಷ್ಣ ,ವೃಜ, ಅಜಿನರೆಂಬ ಆರುಮಂದಿ ಮಕ್ಕಳಂ ಪಡೆದಳು ॥೨॥ ಹವಿರ್ಧಾನನ ಹಿರಿ ಯಮಗನಾದ ಪ್ರಾಚೀನಬರ್ಹಿಸ್ಸೆಂಬನು ಷಡ್ಗುಣೈಶ್ವರ್ಯ ಸಂಪನ್ನನೆನಿ ಸಿ ದೊಡ್ಡ ಪ್ರಜಾಪಾಲಕನಾಗಿದ್ದನು. ಈತನು ಪ್ರಜೆಗಳನ್ನು ಬಹಳವು ಟ್ಟಗೂ ವೃದ್ಧಿಗೆ ತಂದನು ॥೩॥ ಅಯ್ಯಾ ಮುನಿಶ್ರೇಷ್ಠನೆನಿಸಿದ ಮೈತ್ರೇ ಯನೆ; ಈತನು ಭೂತಲದಲ್ಲಿ ಎಲ್ಲೆಲ್ಲಿಯೂ ಅನೇಕ ಯಜ್ಞಗಳನ್ನಾ ಚರಿಸಿ ಪೂರ್ವಾಗ್ರಗಳಿಂದ ದರ್ಭೆಗಳನ್ನು ಎಲ್ಲೆಲ್ಲಿಯೂ ಹರಡಿದ್ದನಾ

ಲಃ ॥೪॥ ಸಮುದ್ರ ತನಯಾಯಾಂ ತು ಕೃತದಾರೋ ಮಹೀಪ
ತಿಃ । ಮಹತ ಸ್ತಪಸಃ ಪಾರೇ ಸವರ್ಣಾಯಾಂ ಮಹಾಮತೇ! ॥
॥೫॥ ಸವರ್ಣಾ ಧತ್ತ ಸಾಮುದ್ರೀ ದಶಪ್ರಾಚೇನ ಬರ್ಹಿಷಃ ।
ಸರ್ವೇ ಪ್ರಚೇತಸೋ ನಾಮ ಧನುರ್ವೇದಸ್ಯ ಪಾರಗಾಃ ॥ ೬॥ ಅ
ಪೃಥಗ್ಧರ್ಮ ಚರಣಾ ಸ್ತೇ೬ ತಪ್ಯಂತ ಮಹತ್ತಪಃ । ದಶವರ್ಷ
ಸಹಸ್ರಾಣಿ ಸಮುದ್ರ ಸಲಿಲೇಶಯಾಃ ॥೭॥ ಮೈತ್ರೇಯಃ ॥ ಯ
ದರ್ಥಂತೇ ಮಹಾತ್ಮಾನ ಸ್ತಪ ಸ್ತೇಪುಃ ಮಹಾಮುನೇ! । ಪ್ರ
ಚೇತಸ ಸ್ಸಮುದ್ರಾಂಭ ಸ್ಯೇತ ದಾಖ್ಯಾತು ಮರ್ಹಸಿ ॥೮॥ ಶ್ರೀ

ದುದರಿಂದ ಭೂಲೋಕದಲ್ಲಿ ಮಹಾ ಬಲಶಾಲಿ ಎನಿಸಿದ ಈತನನ್ನು ಎಲ್ಲ
ರೂ ಪ್ರಾಚೀನಬರ್ಹಿಸ್ಸು ಎಂಬುದಾಗಿ ಕರೆಯತೊಡಗಿದರು. ॥೪॥ ಈ
ತನು ಬಹುದೀರ್ಘಕಾಲ ತಪಸ್ಸನ್ನಾಚರಿಸಿ ತರುವಾಯ ಪುತ್ರಸಂತಾನವಿ
ಲ್ಲದೊಡೆ ನರಕವು ತಪ್ಪದೆಂದು ತಿಳಿದು ಪುತ್ರಸಂಪಾದನವಾಡಿ ಭಯಂಕ
ರವಾದ ಪುತ್ ಎಂಬ ಹೆಸರುಳ್ಳ ನರಕವನ್ನು ದಾಟಲೋಸುಗ ಸಮುದ್ರ
ರಾಜನ ಕುವರಿಯಾದ ಸವರ್ಣಾ ಎಂಬಾಕೆಯನ್ನು ವುದುವೆಯಾದನು ॥
ಸಮುದ್ರ ಕುವರಿಯಾದ ಈ ಸವರ್ಣೆಯು ಈ ಪ್ರಾಚೀನಬರ್ಹಿಸ್ಸಿನಿಂದ
ಹೆತ್ತುವುಳ್ಳಳಂ ಜನಿಸಿದಳು ಈ ಹತ್ತುಮಂದಿಗೂ ಪ್ರಚೇತಸ್ಸುಗಳೆಂ
ದು ಹೆಸರು. ಮತ್ತು ಇವರೆಲ್ಲರೂ ಧನುರ್ವೇದವನ್ನು ಚನ್ನಾಗಿ ಕಲಿತ್ತ
ಅದರಲ್ಲಿ ಪಾರಂಗತರೆನಿಸಿದ್ದರು॥೬॥ಇವರೆಲ್ಲರೂ ಒಂದೇವಿಧವಾದ ನಡವ
ಳಿಯುಳ್ಳವರಾಗಿ ಒಂದೇ ಧರ್ಮವನ್ನಾಚರಿಸುತ್ತಾ ಹತ್ತು ಸಾವಿರ ವ
ರ್ಷಕಾಲ ಪರ್ಯಂತವಾಗಿ ಸಮುದ್ರದಲ್ಲಿ ಆಳವಾಗಿ ನೀರಿರುವ ಪ್ರದೇಶದ
ಲ್ಲಿ ಮುಳುಗಿಕೊಂಡಿದ್ದು ಅತ್ಯುಗ್ರವಾದ ದೀರ್ಘತಪಸ್ಸನ್ನಾಚರಿಸಿದರು ॥
ಮೈತ್ರೇಯನು ಕೇಳುತ್ತಾನೆ—ಎಲೈ ಮುನಿವರ್ಯನೆನಿಸಿದ ಪರಾಶರನೆ ;
ಮಹಾತ್ಮರೆನಿಸಿದ ಈ ಹತ್ತುಮಂದಿಯೂ ದಶಸಹಸ್ರ ವರ್ಷ ಪರಿವಿ
ತವಾದ ದೀರ್ಘಕಾಲ ಸಮುದ್ರೋದಕಮಧ್ಯದಲ್ಲಿ ತಪವನ್ನಾಚರಿ
ಸಿದುದೇಕೆ ? ಈ ವಿಷಯವನ್ನು ಕೇಳಬೇಕೆಂದು ತವಕಿಸುತಿರುವ ನನ
ಗೆ ವಿಶದವಾಗಿ ತಿಳುಹಬೇಕೆಂದು ಕೇಳಿಕೊಂಡನು ॥೮॥ ಪರಾಶರನು
ಹೇಳುತ್ತಾನೆ—ಎಲೌ ಮೈತ್ರೇಯನೆ; ಕೇಳು. ಮಹಾನುಭಾವನೆನಿಸಿದ ಚ

ಪರಾಶರಃ ॥ ಪಿತ್ರಾ ಪ್ರಜೇತಸಃ ಪ್ರೋಕ್ತಾಃ ಪ್ರಜಾರ್ಥ ಮುಮಿ
ತಾತ್ಮನಾ । ಪ್ರಜಾಪತಿ ನಿಯುಕ್ತೇನ ಬಹುಮಾನ ಪುರಸ್ಸರಂ ॥
॥೯॥ ಪ್ರಾಚೀನ ಬರ್ಹಿರುವಾಚ । ಬ್ರಹ್ಮಣಾ ದೇವ ದೇವೇನ
ಸವಮಾದಿಷ್ಟೋ ಸ್ಮ್ಯಹಂ ಭುತಾಃ ॥ ಪ್ರಜಾ ಸ್ಸಂವರ್ಧನೀಯಾ
ಸ್ತೇ ಮಯಾ ಚೋಕ್ತಂ ತಥೇತಿತತ್ ॥೧೦॥ ತನ್ಮಮ ಪ್ರೀತಯೇ
ಪುತ್ರಾಃ ! ಪ್ರಜಾವೃದ್ಧಿ ಮತಂದ್ರಿತಾಃ । ಕುರುಧ್ವ ಮಾನನೀ
ಯಾ ವಸ್ಸ್ಯು ರ್ಗಾಚ್ಛ ಪ್ರಜಾಪತೇಃ ॥೧೧॥ ಶ್ರೀಪರಾಶರಃ ॥ ತ
ತಸ್ತೇ ತತ್ಪಿತು ಶ್ಚ ತ್ವಾ ವಚನಂ ವೃಷನಂದನಾಃ । ತಥೇ ತ್ಯು

ತುರ್ಮುಖನು ಈ ಪ್ರಾಚೀನಬರ್ಹಿ ಮಹಾರಾಜನಿಗೆ ಪ್ರಜೆಗಳನ್ನು ವೃದ್ಧಿ
ಗೊಳಿಸುವಂತೆ ಆಜ್ಞೆಯನ್ನಿತ್ತನು. ಅತನು ತನ್ನ ಮಕ್ಕಳಾದ ಈ ಹತ್ತು
ಮಂದಿಗೂ ಪ್ರೇರಿಸಿದನು ॥೯॥ ಪ್ರಾಚೀನಬರ್ಹಿ ಮಹಾರಾಜನು ಹೇಳು
ತ್ತಾನೆ—ಎಲೌ ಮಕ್ಕಳಿರಾ, ಸಕಲಲೋಕಪಿತಾಮಹನೆನಿಸಿದ ಚತುರ್ಮುಖ
ನು ನನ್ನ ಬಳಿಗೆ ಬಂದು ಬಹುಮಾನಪೂರ್ವಕವಾಗಿ ,,ಎಲ್ಲೈ ರಾಜನೆ ಈ
ಲೋಕದಲ್ಲಿ ಪ್ರಜೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯವು ನಿನ್ನದಾಗಿರು
ವುದು. ಆದುದರಿಂದ ಇನ್ನುಮೇಲೆ ನೀನು ಈ ಲೋಕದಲ್ಲಿ ಪ್ರಜಾವೃದ್ಧಿ
ಯಂ ಮಾಡುವವನಾಗು " ಎಂಬದಾಗಿ ಆಜ್ಞೆಯನ್ನಿತ್ತನು. ನಾನು ಕೂಡ
ದೇವದೇವನೆನಿಸಿದ ಆತನ ಮಾತಿಗೆ ಮಾರುತ್ತರವನ್ನೀಯದೆ ಬಹುಮಾನ
ದಿಂದ ಅಂಗೀಕರಿಸಿದೆನು ॥೧೦॥ ಎಲೌ ಸುತವರ್ಯರೆ ; ಆ ಪಿತಾಮಹನ ಆ
ಜ್ಞೆಯು ನಿಮಗೂ ಕೂಡ ಗೌರವಾರ್ಹವಾದುದಲ್ಲವೆ? ಆದುದರಿಂದ ಇ
ದು ಮೊದಲು ನೀವು ಅನುದಿನವೂ ಜಾಗರೂಕರಾಗಿದ್ದು ಕೊಂಡು ಪ್ರಮಾ
ದ ರಹಿತರಸಿ ಪ್ರಜಾವೃದ್ಧಿಗೆ ತಕ್ಕ ಕಾರ್ಯವಂ ಮಾಡಲು ಕೈಕೊಳ್ಳಿರಿ.
ಇದರಿಂದ ನನಗೆ ಬಹಳ ಸಂತೋಷವುಂಟಾಗುವುದು,, ಎಂಬದಾಗಿ ತನ್ನ
ಹತ್ತುಮಂದಿ ಮಕ್ಕಳನ್ನೂ ಕೂಗಿ ಎಲ್ಲರಿಗೂ ಏಕಕಾಲದಲ್ಲಿ ಪ್ರಜಾವೃ
ದ್ಧಿಗಾಗಿ ಆಜ್ಞೆಯನ್ನಿತ್ತನು ॥೧೧॥ ಪರಾಶರನು ಹೇಳತೊಡಗಿದನು ಆ
ಯ್ಯಾಮುನಿಯಾದ ಮೈತ್ರೇಯನೆ; ಬಳಿಕ ಆ ರಾಜಕುವರರೆಲ್ಲರೂ ಇಂ
ತು ತಂದೆಯಮಾತನ್ನು ಕೇಳಿ ಮಹಾಪ್ರಸಾದವೆಂದು ಆತನ ಆಜ್ಞೆಯ
ನ್ನು ಶಿರಸಾವಹಿಸಿ ಆತನ ಆಪ್ಪಣೆಯಂತೆ ಪ್ರಜಾವೃದ್ಧಿಕಾರ್ಯಕ್ಕೆ ಸಮ್ಮತಿ

ಕ್ತ್ವಾ ಚತಂ ಭೂಯಃ ಪಪ್ರಚ್ಛುಃ ಪಿತರಂ ಮುನೇ ; ॥೧೨॥
ಪ್ರಚೇತಸ ಊಚುಃ ॥ ಯೇನತಾತ! ಪ್ರಜಾವೃದ್ಧಿ ಸಮರ್ಥಾಃ
ಕರ್ಮಣಾವಯಂ । ಭವೇಮುತ ತ್ಸಮಸ್ತಂ ನಃ ಕರ್ಮ ವ್ಯಾ
ಖ್ಯಾತು ಮರ್ಹತಿ ॥೧೩॥ ಪ್ರಾಚೇನ ಬರ್ಹಿಃ ॥ಆರಾಧ್ಯ ವರದಂ
ವಿಷ್ಣು ಮಿಷ್ಟಪ್ರಾಪ್ತಿ ಮಸಂಶಯಂ । ಸನೋತಿ ನಾನ್ಯಥಾ ಮ
ರ್ತ್ಯಃ ಕಿಮನ್ಯತ್ಕಥ ಯಾಮಿ ವಃ॥೧೪॥ತಸ್ಮಾತ್ಪ್ರ ಜಾ ವಿವೃದ್ಧ್ಯ
ರ್ಥಂ ಸರ್ವ ಭೂತೇಶ್ವರಂ ಹರಿಂ । ಆರಾಧಯತ ಗೋವಿಂದಂ

ಪಟ್ಟು ಬಳಿಕ ತಮ್ಮ ತಂದೆಯಾದ ಪ್ರಾಚೀನಬರ್ಹಿರಾಜನನ್ನು ಮರಳಿ ಕೇಳತೊಡಗಿದರು ॥೧೨॥ ಆ ಹತ್ತುಮಂದಿ ಪ್ರಚೇತಸರೂ ಕೇಳುತ್ತಾರೆ- ಎಲೈ ಜನಕನೆ (ತಂದೆಯೆ) ಪ್ರಜಾವೃದ್ಧಿರೂಪವಾದ ಈ ಕಾರ್ಯವಂ ಮಾಡಲು ನಮಗೆ ಶಕ್ತಿಯುಂಟಾಗುವುದೆಂತು? ಈ ಕಾರ್ಯವು ನಮ್ಮಿಂದ ಸಾಧ್ಯವಾದುದೆ? ಇದಕ್ಕೆ ಉಪಾಯವೇನು? ಇವೆಲ್ಲವನ್ನೂ ನಮಿಗೆ ವಿ ಶದವಾಗಿ ತಿಳಿಸುವವನಾಗು ॥೧೩॥ ಪ್ರಾಚೀನಬರ್ಹಿಯು ಹೇಳುತ್ತಾನೆ- ಓ ಮಕ್ಕಳಿರಾ! ಭಜಕರ ಸಕಲ ಕೋರಿಕೆಗಳನ್ನೂ ನೆರವೇರಿಸುವವನಾ ದುದರಿಂದ ವರದನೆಂಬುದಾಗಿ ಹೊಗಳಿಸಿಕೊಳ್ಳುವ ಸರ್ವ ವ್ಯಾಪಕನೆನಿ ಸಿದ ಆ ಭಗವಂತನನ್ನು ಆರಾಧಿಸಿದೊಡೆ ಮನುಜನು ಎಲ್ಲ ಕೋರಿಕೆಗ ಳನ್ನೂ ಹೊಂದುವನು. ಈಮಾತು ಸಟೆಯಲ್ಲವು ಇಂತು ಸಕಲೇಷಾ ಮ ರ್ಥ ಪೂರಕನೆನಿಸಿದ ಆ ಮಹಾವಿಷ್ಣುವು ಭಜಕರ ಸಂಕಲ್ಪಗಳನ್ನು ಈಡೇರಿಸುವುದರಲ್ಲಿ ಬದ್ಧಕಂಕಣನಾಗಿರುವಾಗ ನಾನು ನಿಮಿಗೆ ವಿಶೇಷ ವಾಗಿ ಹೇಳಕಕ್ಕುದೇನಿರುವುದು ॥೧೪॥ ನೀವು ಆರಂಭಿಸುವ ಪ್ರಜಾವೃ ದ್ಧಿರೂಪವಾದ ಕಾರ್ಯವು ನಿರ್ವಿಘ್ನವಾಗಿ ನೆರವೇರಬೇಕೆಂದು ನೀವುಅಪೇ ಕ್ಷಿಸುವುದಾದರೆ ಸಕಲನಿಯಾಮಕನೂ ಭಕ್ತ ದುರಿತಾಪಹಾರಕನೂ ಪಶು ಪಾಲಕನೂ ಅಥವಾ ಯಜ್ಞ ಸಂರಕ್ಷಕನೂ ಎನಿಸಿದ ಶ್ರೀವಿಷ್ಣುನಾರಾಯಣ ನನ್ನು ಮರೆಹೊಗಬೇಕು. ಆತನನ್ನು ಮೊರೆಹೊಕ್ಕಲ್ಲದೆ ನಿಮ್ಮ ಕಾರ್ಯವು ಸಫಲವಾಗಲಾರದು॥೧೪॥ ಸಮಸ್ತ ಲೋಕಗಳಿಗೂ ಆಧಾರಭೂತವೆನಿಸಿದ ಪ್ರವೃತ್ತಿ ನಿವೃತ್ತಾತ್ಮಕವಾದ ಧರ್ಮ ವನ್ನೇ ಆಗಲಿ ಅಥವಾ ಸಕಲಕಾ ರ್ಯಗಳನ್ನೂ ಸಾಧಿಸಿ ಎಲ್ಲವಸ್ತುಗಳನ್ನು ಹೊಂದಲು ಮುಖಸಾಧನವೆನಿ

ಯದಿ ಸಿದ್ಧಿ ಮಭೀಪ್ಸ್ಯಥ ॥೧೫॥ ಧರ್ಮಮರ್ಥಂಚ ಕಾಮಂಚ
ಮೋಕ್ಷಂಚಾ ನ್ವಿಚ್ಛತಾಂ ತಥಾ । ಆರಾಧನೀಯೋ ಭಗವಾನ
ನಾದಿಃ ಪುರುಷೋತ್ತಮಃ ॥೧೬॥ ಯಸ್ಮಿನ್ನಾರಾಧಿತೇ ಸರ್ಗಂ ಚ
ಕಾರಾದೌ ಪ್ರಜಾಪತಿಃ । ತಮಾರಾಧ್ಯಾಚ್ಯುತಂ ವೃದ್ಧಿಃ ಪ್ರಜಾ
ನಾಂ ಮೋಭವಿಷ್ಯತಿ ॥ ೧೭॥ ಶ್ರೀ ಪರಾಶರಃ ॥ ಇತ್ಯೇವ ಮು
ಕ್ತಾ ಸ್ತೇ ಪುತ್ರಾಃ ಪಿತ್ರಾ ಪ್ರಾಚೇತಸಾ ದಶ । ಮಗ್ನಾಃ ಪ
ಯೋಧಿಸಲಿಲೇ ತಪಶ್ಚೇರು ಸ್ಸಮಾಹಿತಾಃ ॥೧೮॥ ದಶವರ್ಷ ಸ
ಹಸ್ರಾಣಿ ನ್ಯಸ್ತ ಚಿತ್ತಾ ಜಗತ್ಪತಾ । ನಾರಾಯಣೇ ಮುನಿಶ್ರೇ

ಸಿದ ಅರ್ಥವನ್ನಾಗಲಿ ಅಥವಾ ಕಾಮುನೆಸಿಸುವ ಕೋರಿಕೆಗಳನ್ನಾಗಲಿ ಮು
ತ್ತು ಈ ಹಿಂದೆಹೇಳಿದ ಧರ್ಮ, ಅರ್ಥ, ಕಾಮುಗಳೆಂಬ ಈ ಮೂರು ಪು
ರುಷಾರ್ಥಗಳೂ ಕೈಗೂಡಿದ ಬಳಿಕ ನಿಶ್ರೇಯಸ ಪದವಿಯನ್ನು (ಮೋ
ಕ್ಷವನ್ನು, ಹೊಂದಬೇಕಾದರೂ ಪುರುಷೋತ್ತಮನೆನಿಸಿ ಉತ್ಪತ್ತಿವಿನಾ
ಶರಹಿ ನಾದ ಆ ಗೋವಿಂದನನ್ನು ಭಜಿಸಿದಲ್ಲದೆ ಯಾವುದೂ ಕೈಗೂಡ
ಲಾರದು ॥೧೬॥ ಸಕಲಲೋಕಗಳಿಗೂ ಪಿತಾವ ಹನೆನಿಸಿದ ಚತುರ್ಮುಖನೂ
ಕೂಡ ಆದಿಸೃಷ್ಟಿಯಲ್ಲಿ ಈ ಲೋಕಗಳನ್ನು ಸೃಷ್ಟಿಮಾಡುವುದಕ್ಕೋ ಸ್ಕರ ಆ ನಾರಾಯಣನನ್ನು ಪೂಜಿಸಿ ಆತನ ಅನುಗ್ರಹದಿಂದಲ್ಲವೇ ತನ್ನ
ಸೃಷ್ಟಿಕಾರ್ಯವನ್ನು ಇದುವರೆಗೂ ಯಾವದೊಂದು ತೊಂದರೆಯೂ ಇಲ್ಲ
ದೆ ಅವಿಚ್ಛಿನ್ನವಾಗಿ ನಡೆಯಿಸುತ್ತಿರುವನು. ಅದು ಕಾರಣ ಅಂತಹ ಸ್ವಾ
ಮಿಯನ್ನಾರಾಧಿಸಿದೊಡೆ ನಿಮ್ಮ ಪ್ರಜಾವೃದ್ಧಿರೂಪವಾದ ಕಾರ್ಯವು ನಿ
ರ್ವಿಘ್ನವಾಗಿ ಕೈಗೂಡುವುದು ॥೧೭॥ ಪರಾಶರನು ಹೇಳುತ್ತಾನೆ. ಇಂ
ತು ತಂದೆಯಾದ ಪ್ರಾಚೇನಬರ್ಹಿಸ್ಸಿನ ಆಜ್ಞೆಯನ್ನು ಶಿರಸಾವಹಿಸಿ ಆ
ಹತ್ತು ಮಂದಿ ಪ್ರಚೇತಸರೂ ಏಕಾಗ್ರಚಿತ್ತರೆನಿಸಿ ಸಮುದ್ರಮಧ್ಯದಲ್ಲಿ
ಮುಳುಗಿಕೊಂಡು ತಪಸ್ಸುಮಾಡತೊಡಗಿದರು ॥೧೮॥ ಎಲ್ಲೆ ಮುನಿವರ್ಯ
ನೆನಿಸಿದ ಮೈತ್ರೇಯನೆ; ಇಂತು ಹತ್ತು ಸಾವಿರವರ್ಷಗಳವರೆಗೂ ತಮ್ಮ
ಮನಸ್ಸನ್ನು ಬಿಗಿಹಿಡಿದು ಸಕಲ ಲೋಕಗಳಿಗೂ ಮುಖ್ಯಾಶ್ರಯಭೂತ
ನೂ, ಮೋಕ್ಷಸ್ವರೂಪನೂ, ಸಕಲ ಜಗನ್ನಿಯಾಮಕನೂ, ಎನಿಸಿದ ಪರ
ಮಾತ್ಮನಲ್ಲಿ ತಮ್ಮ ಮನಸ್ಸನ್ನು ಲಯಗೊಳಿಸಿ ॥೧೯॥ ಅದೇ ನೀರಿನಲ್ಲಿ

ಷ್ಠ ! ಸರ್ವಲೋಕ ಪರಾಯಣೇ॥ ೧೯॥ ತತ್ರೈವತೇ ಸ್ಥಿತಾ ದೇವ ಮೇಕಾಗ್ರಮನಸೋ ಹರಿಂ । ತುಷ್ಟುವು ರ್ಯಸ್ತುತಃ ಕಾಮಾಂ ಸ್ತೋಷ್ಟು ರಿಷ್ಟಾ ಪ್ರಯು ಚ್ಛತಿ ॥ ೨೦॥ ಮೈತ್ರೇಯಃ ॥ ಸ್ತವಂ ಪ್ರಚೇತಸೋ ವಿಷ್ಣೋ ಸ್ಸಮುದ್ರಾಂ ಭಸಿ ಯಂ ಸ್ಥಿತಾಃ । ಚ ಕ್ರುಸ್ತಂ ಮೇ ಮುನಿಶ್ರೇಷ್ಠ ! ಸುಪುಣ್ಯಾಂ ವಕ್ತು ಮರ್ಹಸಿ ॥

ಶ್ರೀ ಪರಾಶರ ॥ ಕ್ರುಣು ಮೈತ್ರೇಯ ! ಗೋವಿಂದಂ ಯಥಾ ಪೂರ್ವಂ ಪ್ರಚೇತಸಃ । ತುಷ್ಟುವು ಸ್ತನ್ಮಯೀಭೂತಾ ಸ್ಸಮುದ್ರ ಸಲಿಲೇಶಯಾಃ ॥ ೨೨॥ ಪ್ರಚೇತಸಃ ॥ ನತಾಸ್ಸ್ಮ ಸರ್ವ ವಚಸಾಂ

ಯೇ ಮುಳುಗಿಕೊಂಡಿದ್ದು ಭಜಕರಕೋರಿಕೆಗಳನ್ನು ನೆರವೇರಿಸುವಂತಹ ಆ ಶ್ರೀವಿಷ್ಣುರಾಯಣನನ್ನು ಅನವರತವೂ ಅವ್ಯಭಿಚರಿತವಾದ (ಬೇರೊಂದು ಕಡೆಅಭಿರುಚಿ ಇಲ್ಲದ) ಭಕ್ತಿಯಿಂದೊಡಗೂಡಿ ಏಕಚಿತ್ತತೆಯಿಂದ ಧ್ಯಾನಮಾಡತೊಡಗಿದರು. ॥೨೧॥

ಮೈತ್ರೇಯನು ಪ್ರಶ್ನೆಮಾಡುತ್ತಾನೆ .... ಎಲೈ ಮುನಿವರ್ಯನೆನಿಸಿದ ಪರಾಶರನೆ , ಪ್ರಾಚೀನ ಬರ್ಹಿಯ ಕುವರರಾದ ಆ ಹತ್ತುಮಂದಿ ಪ್ರಚೇತಸರೂ ಕೂಡ ತಾವು ಮಾಡಬೇಕೆಂದು ಸಂಕಲ್ಪಿಸಿದ ಪ್ರಜಾ-ವೃದ್ಧಿರೂಪವಾದ ಕಾರ್ಯವು ನಿರ್ವಿಘ್ನವಾಗಿ ನೆರವೇರುವುದಕ್ಕೋಸ್ಕರ ಸಮುದ್ರೋದಕದಲ್ಲಿದ್ದುಕೊಂಡು ಆ ಪರಮಾತ್ಮನನ್ನು ಸ್ತೋತ್ರಮಾಡಿದ ಪರಿಯೆಂತು? ಮಹಾಪವಿತ್ರವೂ, ಪುಣ್ಯಸಂಪಾದಕವೂ, ಎನಿಸಿದ ಆಸ್ತೋತ್ರವನ್ನು ನನಗೆವಿಶದವಾಗಿ ತಿಳುಹಿಸುವವನಾಗು ॥೨೦॥ ಪರಾಶರನು ಹೇಳುತ್ತಾನೆ: — ಎಲೈ ಮೈತ್ರೇಯನೆ, ಹಿಂದಿನ ಕಾಲದಲ್ಲಿ ಪ್ರಜಾವೃದ್ಧಿಯಂ ಬಯಸಿದ ಆ ಪ್ರಚೇತಸರು ಸಮುದ್ರ ಜಲಮಧ್ಯದಲ್ಲಿ ಮುಳುಗಿಕೊಂಡು ನಿರಂತರವೂ ತದೇಕಚಿತ್ತರೆನಿಸಿ, ಆ ಪರಮಾತ್ಮನ ಅಡಿದಾವರೆಗಳನ್ನೇ ನಾನಾಪರಿಯಿಂದ ಧ್ಯಾನಮಾಡುತ್ತಾ, ತಮ್ಮ ಮನಸ್ಸನ್ನು ಆತನೊ ಲಯಗೊಳಿಸಿ ಭಕ್ತಾನು ಕಂಪಿಯಾದ ಆ ಗೋವಿಂದನನ್ನು ಸ್ತೋತ್ರಮಾಡಿದಪರಿಯಂ ನಿನಗೆ ವಿವರಿಸುವೆನು ಕೇಳು ॥೨೨॥ ಆಪ್ರಚೇತಸರು ಸ್ತೋತ್ರನಾಡಿದಪರಿ ಎಂತೆಂದರೆ—ಎಲೈ ಪರಮಾತ್ಮನೆ. ನಾಲ್ಕುವೇದಗಳು;ಅವುಗಳ ಉಪದೇದಗಳು ನಾಲ್ಕು, ಆರು ವೇದಾಂಗಗಳು,

ಪ್ರತಿಷ್ಠಾ ಯತ್ರ ಶಾಶ್ವತೀ । ತವಾದ್ಯಂತ ಮಶೇಷಸ್ಯ ಜಗತಃ
ಪರಮಂ ಪ್ರಭುಂ ॥೨೩॥ ಜ್ಯೋತಿರಾದ್ಯ ಮನೌಪಮ್ಯ ಮಣ್ವಾ
ನಂತ ಮಪಾರವತ್ । ಬೀಜಭೂತ ಮಶೇಷಸ್ಯ ಸ್ಥಾವರಸ್ಯ ಚ
ರಸ್ಯಚ ॥೨೪॥ ಯಸ್ಯಾ ಹಃ ಪ್ರಥಮಂರೂಪಂ ರೂಪ ಮಸ್ಯ
ತತೋ ನಿಶಾ । ಸಂಧ್ಯಾಚ ಪರಮೇಶಸ್ಯ ತಸ್ಮೈ ಕಾಲಾತ್ಮನೇ

ಕರ್ಮಸ್ವರೂಪವಂ ತಿಳಿಸುವ ಮಿಮಾಂಸಾಶಾಸ್ತ್ರ, ನ್ಯಾಯಶಾಸ್ತ್ರ, ಹದಿನೆಂ
ಟು ಸ್ಮೃತಿಗಳು, ಹದಿನೆಂಟು ಪುರಾಣಗಳು, ರಾಮಾಯಣ, ಮಹಾಭಾ
ರತ ಮೊದಲಾದ ಇತಿಹಾಸಗಳು, ಇವುಗಳಿಗೆಲ್ಲಾ ಮುಖ್ಯತಾತ್ಪರ್ಯವಿಷ
ಯನಾದವನು ನೀನೇ ಆಗಿರುವೆ. ಎಲ್ಲಾಲೋಕಗಳಿಗೂಉತ್ಪತ್ತಿ, ನಾಶಗ
ಳಿಗೆ ಕಾರಣ ಭೂತನೂ ನೀನೇ ಆಗಿರುವೆ. ಇಂತಹ ಅಚಿಂತ್ಯಾದ್ಭುತಶಕ
ತ್ಯಿಸಂಪನ್ನನೆನಿಸಿದ ನಿನ್ನನ್ನು ನಾವು ಬಾರಿಬಾರಿಗೂ ವಂದಿಸುವೆವು॥೨೩॥
ಸೂರ್ಯ, ಅಗ್ನಿ ಮೊದಲಾದವರ ತೇಜಸ್ಸಿಗಿಂತಲೂ ಅತಿಶಯವಾದ ತೇಜಸ್ಸಿ
ನಿಂದ ಕಂಗೊಳಿಸುತಿರುವೆ. ಆ ಸೂರ್ಯಾಗ್ನಿಗಳಿಗೂ ಕೂಡ ನೀನೇ ಕಾಂ
ತಿಯನ್ನುಂಟುಮಾಡತಕ್ಕವನಾಗಿರುವೆ. ಆದುದರಿಂದ ನಿನ್ನ ತೇಜಸ್ಸಿಗೆಸಮಾ
ನವಾದ ಬೇರೆ ಯಾವುದೊಂದೂ ಇಲ್ಲವು. ಆದುದರಿಂದ ಉಪಮಾನ ಶೂ
ನ್ಯವಾದ ಚಿದ್ರೂಪವೆನಿಸಿದ ತೇಜಃ ಪುಂಜದಿಂದೊಡಗೂಡಿ, ಶರೀರಗಳ
ಲ್ಲಿರುವ ಅತಿಸೂಕ್ಷ್ಮನಾಡಿಗಳಲ್ಲಿಯೂ ಕೂಡ ಸಂಚರಿಸುವ ಸಾಮರ್ಥ್ಯ
(ಚಾತುರ್ಯ) ವುಳ್ಳವನಾದುದರಿಂದ ನಿನ್ನನ್ನು ಅಣುರೂಪನೆಂದು ವ್ಯವಹರಿ
ಸುವರು. ಭೇದಶೂನ್ಯನಾದುದರಿಂದ ಅಣುರೂಪನೆನಿಸಿರುವೆ. ಅವಧಿ ಅ
ಥವಾ ಪರಿಮಾಣಶೂನ್ಯನಾದುದರಿಂದ ಅಪಾರನೆನಿಸಿರುವೆ. ಚರಾಚರರೂಪ
ದಿಂದಿರುವ ಈ ಜಗವೆಲ್ಲವೂ ನಿನ್ನಿಂದಿಲೇ ಜನಿಸಿದುದಾದ ಕಾರಣ ಈಜ
ಗತ್ತಿಗೆಲ್ಲಾ ನೀನೇ ಬೀಜಭೂತನೆನಿಸಿರುವೆ. ನಿನ್ನ ಚರಿತ್ರೆಯು ಬಣ್ಣಿಸಲ
ಸದಳವಾಗಿರುವುದು. ಇಂತಹ ಗುಣಗಳಿಂದೊಡಗೂಡಿದವನಾದ ಕಾರಣ
ನಾವು ನಿನಗೆ ಬಾರಿಬಾರಿಗೂ ತಲೆಬಾಗಿ ನಮಿಸುವೆವು ॥೨೪॥

ಪ್ರಾತಃಕಾಲ, ಸಾಯಂಕಾಲಗಳೂ, ತತ್ತತ್ಕಾಲಾಭಿಮಾನಿ ದೇ
ವತೆಗಳೂ, ರಾತ್ರಿಯೂ, ರಾತ್ರ್ಯಭಿಮಾನಿ ದೇವತೆಯೂ, ಕೂಡ ಯಾ
ವ ಪರಮಾತ್ಮನಿಗೆ ರೂಪಗಳಾಗಿರುವವೋ ಅಂತಹ ಕಾಲಸ್ವರೂಪನೆನಿ

ನಮಃ ॥ ೨೫ ॥ ಭುಜ್ಯತೇನುದಿನಂ ದೇವೈಃ ಪಿತೃಭಿಶ್ಚ ಸುಧಾ
ತ್ಮಕಃ । ಜೀವಭೂತಸ್ಸಮಸ್ತಸ್ಯ ತಸ್ಮೈ ಸೋಮಾತ್ಮನೇ ನ
ಮಃ ॥೨೬॥ ಯಸ್ತಮೋ ಹಂತಿ ತೀವ್ರಾತ್ಮಾ ಪ್ರಭಾಭಿ ರ್ಭಾಸ
ಯನ್ಜಗತ್ । ಘರ್ಮಾ ಶೀತಾಂ ಜಸಾಂ ಯೋನಿ ಸ್ತಸ್ಮೈ ಸೂರ್ಯಾ
ತ್ಮನೇ ನಮಃ ॥ ೨೭ ॥ ಕಾಠಿಣ್ಯಾರ್ಥ ಯೋ ಬಿಭರ್ತೀ ಜಗದೇತ
ದ್ವಿಶೇಷತಃ। ಶಬಾ ದಿ ಸಂಶ್ರಯೋ ವ್ಯಾಪೀ ತಸ್ಮೈ ಭೂಮ್ಯಾತ್ಮ
ನೇ ನಮಃ ॥೨೮॥ ಯದ್ಯೋನಿರೂಪಂ ಜಗತಾಂ ಬೀಜಭೂತಂಚ

ಸಿದ ಪರಮಾತ್ಮನಂ ನಾವು ಬಾರಿಬಾರಿಗೂ ವಂದಿಸುವೆವು ॥೨೫॥ ದೇವ
ತೆಗಳು, ಪಿತೃಗಳು, ಇವರಿಗೆ ಅನುದಿನವೂ ಆಹಾರವೆನಿಸಿ, ಎಲ್ಲ ಲೋ
ಕಗಳಿಗೂ ಜೀವಸ್ವರೂಪದಿಂದಿರುವ, ಶೀತಕಿರಣಗಳಿಂದೊಡಗೂಡಿ ಆ
ಮೃತಮಯನಾದ ಆ ಚಂದ್ರ ಸ್ವರೂಪದಿಂದಿರುವ ಭಗವಂತನಂ ನಾವು
ಬಾರಿಬಾರಿಗೂ ನಮಿಸುವೆವು॥೨೬॥ಯಾರಾದರೆ ತೀಕ್ಷ್ಣತರಗಳೆನಿಸಿದ ಕಿ
ರಣಗಳಿಂದೊಡಗೂಡಿ, ತನ್ನ ಕಾಂತಿಗಳಿಂದ ಭೂಮ್ಯಾಕಾಶಗಳನ್ನು ಪ್ರಕಾ
ಶಗೊಳಿಸುತ್ತಾ, ತನ್ನ ಕಿರಣಗಳಿಂದ ಲೋಕಗಳಿಗೆ ಬಿಸಿಲು, ಚಳಿ, ಮ
ಳೆಗಳನ್ನುಂಟುಮಾಡಿ, ಈ ಲೋಕದಲ್ಲಿನ ಜನರು ಮಾಡುವ ಸುಕೃತ
ದುಷ್ಕೃತಗಳಿಗೆ ಸಾಕ್ಷಿ ಭೂತನಾದುದರಿಂದ " ಕರ್ಮಸಾಕ್ಷಿ,, ಎಂತ
ಲೂ, ಎಲ್ಲ ಲೋಕಗಳಿಗೂ ಅಂಧಕಾರವನ್ನು ಹೋಗಲಾಡಿಸಿ ಪ್ರಕಾಶ
ವನ್ನುಂಟುಮಾಡುವವನಾದುದರಿಂದ ' ಜಗಚ್ಚಕ್ಷು, ವೆಂತಲೂ ಕರೆಯಿಸಿ
ಕೊಳ್ಳುವ ಸೂರ್ಯಭಗವಂತನ ರೂಪದಿಂದಿರುವ ಪರಮಾತ್ಮನನ್ನು ನಾವು
ವೊರೆಹೊಗುವೆವು ॥೨೭॥ ಕಾಠಿಣ್ಯಯುಕ್ತವೆನಿಸಿ ಈ ಜಗತ್ತೆಲ್ಲವಂ
ವ್ಯಾಪಿಸಿಕೊಂಡು ಶಬ್ದ; ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದುಗುಣ
ಗಳಿಗೂ ಆಶ್ರಯಭೂತವೆನಿಸಿದ ಪೃಥಿವಿಯೇ ಶರೀರವಾಗಿರುವ (ಭೂ
ಮ್ಯಾತ್ಮಕನೆನಿಸಿದ) ಆ ಪರಮಾತ್ಮನಿಗೆ ನಾವು ನಮಸ್ಕಾರ ಮಾಡುವೆ
ವು ॥೨೮॥ ಯಾವ ಉದಕಗಳಾದರೆ ಎಲ್ಲ ಲೋಕಗಳಿಗೂ (ಶೋಣಿತ)
ರಕ್ತರೂಪದಿಂದ ಉತ್ಪತ್ತಿ ಸ್ಥಾನಭೂತವಾದ ಯೋನಿ ಎನಿಸುವುದೋ,
ಪ್ರಾಣಿಗಳಿಗೆ ಶುಕ್ಲ (ವೀರ್ಯ) ರೂಪದಿಂದ ಬೀಜ ಭೂತವಾಗಿರುವುದೋ
ಅಂತಹ ಉದಕರೂಪವನ್ನು ಧರಿಸಿರುವ ಎಲ್ಲ ಲೋಕಗಳಿಗೂ ಬಡೆಯು

ದೇಹಿನಾಂ । ತತ್ತೋಯು ರೂಪ ಮಿಾಶಸ್ಯ ನಮಾವೋ ಹರಿಮೋ
ಧಸಃ ॥೨೯॥ ಯೋ ಮುಖಂ ಸರ್ವದೇವಾನಾಂ ಹವ್ಯ ಭುಕ್ಕವ್ಯ
ಭುಕ್ತಥಾಪಿತೃಾಣಾಂ ಚ ನಮುಸ್ತಸ್ಮೈ ವಿಷ್ಣವೇ ಪಾವಕಾತ್ಮ
ನೇ॥೩೦॥ ಪಂಚ ಧಾ ವಸ್ಥಿತೋ ದೇಹೇಯು ಶ್ಟೀಷ್ಟಾಂ ಕುರುತೇ
ನಿಕಂ । ಆಕಾಶಯೋನಿ ರ್ಭಗವಾಂ ಸ್ತಸ್ಮೈ ವಾಯ್ವಾತ್ಮ
ನೇ ನಮಃ ॥೩೧॥ ಅವಕಾಶ ಮಶೇಷಾಣಾಂ ಭೂತಾನಾಂ ಯಃ
ಪ್ರಯಚ್ಛತಿ । ಅನಂತಮೂರ್ತಿ ರ್ಮಾ ಶುದ್ಧ ಸ್ತಸ್ಮೈ ವ್ಯೋ
ಮಾತ್ಮನ ನಮಃ ॥೩೨॥ ನಮಸ್ತೇಂದ್ರಿಯ ವರ್ಗಸ್ಯ ಯಸ್ತಥಾ

ನೆನಿಸಿದ ಭಕ್ತದುರಿತಾಪಹಾರಕನಾದ ವಿಷ್ಣುವನ್ನು ನಾವು ವಂದಿಸುವೆ
ವು ॥೨೯॥ ಸಕಲ ದೇವತೆಗಳಿಗೂ ಮೊದಲನೆಯವನೆನಿಸಿ ದೈವಕಾರ್ಯಗ
ಳೆನಿಸಿದ ಹವ್ಯಗಳಲ್ಲಿಯೂ, ಪಿತೃ ಕಾರ್ಯಗಳೆನಿಸಿದ ಕವ್ಯಗಳಲ್ಲಿಯೂ
ಕೂಡ ಹೋಮಮಾಡತಕ್ಕ ಆಹುತಿಗಳನ್ನು ಬಯ್ದು ಆ ಆ ದೇವತೆಗಳಿಗೆ
ವಿಭಾಗಮಾಡಿಕೊಡುವವ ನಾದಕಾರಣ ಹವ್ಯವಾಹನ, ಕವ್ಯವಾಹನ ನೆಂ
ಬುದಾಗಿ ಕರೆಯಿಸಿಕೊಳ್ಳುವ ಅಗ್ನಿಸ್ವರೂಪನೆನಿಸಿದ ವಿಷ್ಣುವಿಗೆ ನಾವು
ಬಾರಿಬಾರಿಗೂ ವಂದಿಸುವೆವು ॥೩೦॥ ಶರೀರಗಳಲ್ಲಿ ಪ್ರಾಣ, ಅಪಾನ,
ವ್ಯಾನ, ಉದಾನ, ಸಮಾನಗಳೆಂಬ ಐದು ರೂಪಗಳಿಂದ ನೆಲೆಸಿ ನಿರಂತರ
ವೂ ಜಲನಯುಕ್ತನಾಗಿ ಆಕಾಶದಲ್ಲಿ ಪ್ರಟ್ಟ ಆ ಆಕಾಶದಲ್ಲಿಯೇ ವಿಶೇ
ಷವಾಗಿ ಸಂಚರಿಸುವಂತಹ ವಾಯುರೂಪನಾದ ಪರಮಾತ್ಮನನ್ನು ನಾವು
ನಮಸ್ಕರಿಸುವೆವು ॥೩೧॥ ಎಲ್ಲ ಭೂತಗಳಿಗೂ ಅವಕಾಶವನ್ನುಂಟುಮಾಡಿ
ಅಪಾರವಾದ (ಕೊನೆಯಿಲ್ಲದ) ಅಥವಾ ಪರಿಮಾಣರಹಿತವಾದ ರೂಪ
ದಿಂದೊಡಗೂಡಿ ನಿರ್ಲಿಪ್ತತೆಯಿಂದ ಸ್ವಚ್ಛವೆನಿಸಿದ ಆಕಾಶರೂಪದಿಂ
ದಿರುವ ಆ ಮಹಾ ವಿಷ್ಣುವಿಗೆ ನಮ್ಮ ಭಕ್ತಿಪೂರ್ವಕಗಳಾದ ಅನಂತ
ವಂದನೆಗಳಂ ಸಮರ್ಪಿಸುವೆವು ॥೩೨॥ ವಾಕ್ಕು, ಪಾಣಿ, ಪಾದ,
ಪಾಯು, ಉಪಸ್ಥಗಳೆಂಬ ಐದುಕರ್ಮೇಂದ್ರಿಯಗಳು, ಚಕ್ಷುಸ್ಸು, ಶ್ರೋ
ತ್ರ, ಜಿಹ್ವೆ, ಘ್ರಾಣ, ಚರ್ಮಗಳೆಂಬ ಐದುಜ್ಞಾನೇಂದ್ರಿಯಗಳು, ಈ ಎ
ಲ್ಲ ಇಂದ್ರಿಯಗಳಿಗೂ ಸರ್ವೋತ್ತಮವಾದ ಆಶ್ರಯವೆನಿಸಿ, ಹನ್ನೊಂದ
ನೆಯದಾದಮನಸ್ಸೂ ಆ ಆ ಇಂದ್ರಿಯಗಳ ಗುಣರೂಪದಿಂದಿರುವಆ ಕೃ

ಸ್ಥಾನಮುತ್ತಮಂ । ತಸ್ಮೈ ಶಬ್ದಾದಿರೂಪಾಯ ನಮಃ ಕೃಷ್ಣಾ
ಯ ವೇಧಸೇ ॥೩೫॥ ಗೃಹ್ಣಾತಿ ವಿಷಯಾ ನ್ನಿತ್ಯ ಮಿಂದ್ರಿಯಾ
ತ್ಮಾ ಹ್ಯರಾಹ್ಯರಃ । ಯಸ್ತಸ್ಮೈ ಜ್ಞಾನ ಮೂಲಾಯನತಾಸ್ಮ
ಹರಿಮೀಧಸೇ ॥೩೪॥ ಗೃಹೀತಾ ನಿಂದ್ರಿಯೈ ರರ್ಥಾ ನಾತ್ಮನೆ
ಯಃ ಪ್ರಯಚ್ಛತಿ । ಅಂತಃಕರಣ ಭೂತಾಯ ತಸ್ಮೈ ವಿಶ್ವಾತ್ಮ
ನೇ ನಮಃ ॥೩೫॥ ಯಸ್ಮಿನ್ನನಂತೇ ಸಕಲಂ ವಿಶ್ವಂ ಯಸ್ಮಾತ್ತ
ಥೋದ್ಗತಂ । ಲಯಯಸ್ಥಾನಂಚ ಯಸ್ತಸ್ಮೈ ನಮಃ ಪ್ರಕೃತಿ ಧ
ರ್ಮಿಣೇ ॥೩೬॥ ಕುದ್ಧ ಸ್ಸಂಲಹ್ಯತೇ ಭ್ರಾಂತ್ಯಾ ಗುಣ ವಾನಿ

ಷ್ಣ ಭಗವಂತನಂನಾವು ನಮಿಸುವೆವ್ರು॥೩೪॥ಯಾವಪರಮಾತ್ಮನಾದರೆ ಹೃ
ರವೆನಿಸುವ(ಕಂಣು)ಲೋಚನಮಾರ್ಗದಿಂದ ರೂಪವನ್ನು ಗ್ರಹಿಸುವನೋ
ಅಕ್ಷರಗಳೆನಿಸಿದ ಶ್ರೋತ್ರಾದಿಗಳಿಂದ ಶಬ್ದ ಮೊದಲಾದ ವಿಷಯಗಳನ್ನೂ
ಸಹ ಗೋಚರಿಸುವನೋ ಅಂತಹ ಜ್ಞಾನೋತ್ಪತ್ತಿಗೆ ಮೂಲಭೂತನೆನಿಸಿ
ದ ಹರಿಯನ್ನು ನಾವು ವಂದಿಸುವೆವು (ಕಣ್ಣು ಮೊದಲಾದ ಇಂದ್ರಿಯಗ
ಳೆಲ್ಲವೂ ಆತನ ಪ್ರೇರಣೆಯಿಲ್ಲದೊಡೆ ರೂಪಾದಿ ವಿಷಯಗಳನ್ನು ಗೋಚ
ರಿಸಲಾರವ್ರು. ಆದುದರಿಂದ ಇಂದ್ರಿಯಗಳಿಗೂ ಆ ಇಂದ್ರಿಯಗಳ ಮೂ
ಲಕ ಉಂಟಾಗುವ ಜ್ಞಾನಕ್ಕೂ ಕೂಡ ಆ ಪರಮಾತ್ಮನೇ ಒಡೆಯನೆಂದು
ಭಾವವು) ॥೩೪॥ ಈ ಮೇಲೆಹೇಳಿದ ಎಲ್ಲ ಇಂದ್ರಿಯಗಳೂ ಗ್ರಹಿಸುವ
ಆ ಆ ಇಂದ್ರಿಯಗುಣ (ವಿಷಯ) ಗಳನ್ನು ಜೀವಾತ್ಮನಿಗೆ ಗೋಚರಿಸು
ವಂತಹ ಶಕ್ತಿಯುಕ್ತನೆನಿಸಿ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳೆಂ
ಬ ನಾಲ್ಕುಭೇದವುಳ್ಳ ಅಂತಃಕರಣ ರೂಪದಿಂದಿರುವ ಪರಮಾತ್ಮನನ್ನು
ನಾವು ವಂದಿಸುವೆವು (ಬಾಹ್ಯೇಂದ್ರಿಯಗಳು ಗ್ರಹಿಸಿದ ವಿಷಯಗಳನ್ನು
ಜೀವಾತ್ಮನಿಗೆ ಸಾಕ್ಷಾತ್ಕಾರಮಾಡಿಸುವವನೆಂದು ಭಾವವು) ॥೩೫॥ ಯಾ
ವ ನಾಶರಹಿತನೆನಿಸಿದ ಪರಮಾತ್ಮನಿಂದ ಈ ಜಗತ್ತುಗಳೆಲ್ಲವೂ ಉದಯಿಸಿ
ರುವವೋ, ಅಂತೆಯೇ ರಕ್ಷಣೆಯನ್ನು ಹೊಂದುವವೋ, ಕೊನೆಗೆ ಲೀನವಾ
ಗುವವೋ, ಅಂತಹ ಗುಣತ್ರಯ ಸ್ವರೂಪವೆನಿಸಿದ ಪ್ರಕೃತಿ ರೂಪದಿಂದ
ಲೂ ಆ ಪರಮಾತ್ಮನೇ ತೋರುವ ಕಾರಣ ಪ್ರಕೃತಿ ಧರ್ಮಗಳಿಂದೊಡ
ಗೂಡಿರುವ ಆ ಪರಮಾತ್ಮನಿಗೆ ಅನಂತಾನಂತವಂದನೆಗಳಂ ಸಮರ್ಪಿಸುವ

ವ ಯೋ ಽ ಗುಣಃ । ತವಾತ್ಮ ರೂಪಿಣಂ ದೇವಂ ನತಾಸ್ಸ್ಮ ಪು
ರುಷೋತ್ತಮಂ ॥೪೭॥ ಅವಿಕಾರಮಜಂ ಶುದ್ಧಂ ನಿರ್ಗುಣಂ ಯ
ನ್ನಿರಂಜನಂ । ನತಾಸ್ಸ್ಮ ತತ್ಪರಂ ಬ್ರಹ್ಮ ವಿಷ್ಣೋರ್ಯ ತ್ಪರಮಂ
ಪದಂ ॥೪೮॥ ಅದೀರ್ಘ ಹ್ರಸ್ವ ಮಸೂ ಲ ಮನಣ್ವಶ್ಯಾಮ ಲೋ
ಹಿತಂ । ಅಸ್ನೇಹ ಚ್ಛಾಯ ಮತಮ ಮಸಕ್ತ ಮಶರೀರಿ
ಣಂ ॥೪೯॥ ಅನಾಕಾಶ ಮಸಂ ಸ್ಪರ್ಶ ಮರಂ ಧ ಮರಸಂ ಚ
ಯತ್ । ಅಚಕ್ಷ್ವಶ್ರೋತ್ರ ಮಚಲ ಮವಾಕ್ಪಾಣಿ ಮನೂ

ವು ॥೪೬॥ ಯಾವ ಪರಮಾತ್ಮನಾದರೆ ತಾನು ಯಾವ ಗುಣಗಳಿಗೂ ಒಳ
ಗಾಗದೆ ನಿರ್ಲಿಪ್ತನೆನಿಸಿ ವಿಕಾರರಹಿತನಾಗಿದ್ದರೂ ಜನಗಳು ಮೂಢ
ಭ್ರಾಂತಿಯಿಂದ ಆತನನ್ನು ಸತ್ವಾದಿಗುಣತ್ರಯಗಳಿಗೆ ಒಳಗಾದವನಂತ
ಲೂ ಪರಿಣಾಮಯುಕ್ತನಂತಲೂ ವ್ಯವಹರಿಸುವರೋ ಅಂತಹ ಪರಮಾ
ತ್ಮಸ್ವರೂಪನೆನಿಸಿದ ವಿರಾಟ್ಪುರುಷನನ್ನು ನಾವು ಬಾರಿಬಾರಿಗೂ ವಂ
ದಿಸುವೆವು ॥೪೭॥ ಇಂತು ಪ್ರಜೇತರರು ಆ ಪರಮಾತ್ಮನನ್ನು ಸೃಷ್ಟ್ಯಾ
ದಿಯುಕ್ತಗಳಾದ ಕಾಲ, ವ್ಯಕ್ತ, ಪ್ರಕೃತಿ, ಪುರುಷ ಮೊದಲಾದ ರೂಪ
ಗಳಿಂದ ಸ್ತೋತ್ರಮಾಡಿ ಆ ಬಳಿಕ ಆತನು ಶುದ್ಧನು, ನಿರ್ಲಿಪ್ತನು, ನಿ
ರ್ವಿಕಾರನು ಎಂಬುದಾಗಿ ಆತನ ವಾಸ್ತವಿಕವಾದ ರೂಪವನ್ನು ವರ್ಣಿಸು
ತ್ತಾ ಸ್ತೋತ್ರಮಾಡಲುಪಕ್ರಮಿಸಿದ್ದಾರೆ—ಯಾವ ಪರಮಾತ್ಮನು ಷಡ್ಭಾ
ವವಿಕಾರಶೂನ್ಯನೂ, ಜನ್ಮರಹಿತನೂ, ಸ್ವಭಾವದಿಂದಲೇ ಪರಿಶುದ್ಧನೂ
ನಿರ್ಲಿಪ್ತನೂ ಎನಿಸಿರುವನೋ ಅಂತಹ ಸರ್ವವ್ಯಾಪಕನೆನಿಸಿದ ಆ ವಿಷ್ಣು
ವಿನ ಸರ್ವೋತ್ತಮವಾದ ದಿವ್ಯಪದವನ್ನು ನಾವು ಹೊಗಳುವೆವು ॥೪೮॥
ಆ ಪರಮಾತ್ಮನು ಉದ್ದವಾಗಿಲ್ಲ. ಚಿಕ್ಕವನೂ ಅಲ್ಲ. ದಪ್ಪನಾಗಿಲ್ಲ. ಆತ
ನ ರೂಪವು ಸಣ್ಣದಲ್ಲ. ಕಪ್ಪಗಿಲ್ಲ ಕೆಂಪಗೂ ಇಲ್ಲ. ಆತನಿಗೆ ಲೇಪವಿ
ಲ್ಲ. ಯಾವದೊಂದು ವಿಧವಾದ ಕಾಂತಿಯೂ ಆತನಲ್ಲಿಲ್ಲವು. ಆತನು ಸೂ
ಕ್ಷ್ಮನಲ್ಲ. ಯಾವುದರಲ್ಲಿಯೂ ಆತನು ಆಸಕ್ತಿಯುಳ್ಳವನಲ್ಲ. ಆತನಿಗೆ ಶ
ರೀರವೇ ಇಲ್ಲ ॥೪೯॥ ಆತನು ಆಕಾಶ (ವಿವರ) ರಹಿತನು ಆತನು ಸ್ಪರ್ಶ
ವಲ್ಲ ಗಂಧವೂ ಅಲ್ಲ ರಸವು ಆತನ ಸ್ವರೂಪವೇ ಅಲ್ಲವು ಕಣ್ಣು, ಕಿವಿ,
ಕೈಕಾಲು ಮೂಗು ಮೊದಲಾದ ಅಂಗಗಳೇ ಆತನಿಗಿಲ್ಲವು. ಆತನು ಚಲಿಸ

ನಸಂ ॥೪೦॥ ಅನಾಮು ಗೋತ್ರ ಮಸುಖ ಮತೇಜಸ್ಕ ಮಹೇತು
ಕಂ । ಅಭಯಂ ಭ್ರಾಂತಿ ರಹಿತಮನಿದ್ರ ಮಜರಾಮರಂ ॥೪೧॥
ಅರಜೋಽಶಬ್ದ ಮಮೃತ ಮಪ್ಲವಂ ಯದಸಂವೃತಂ । ಪೂರ್ವಾ
ಪರೇ ನವೈಯಸ್ಮಿ ತದ್ವಿಷ್ಣೋಃ ಪರಮಂ ಪದಂ ॥೪೨॥ ಪರ
ವಿಶಿತ್ವ ಗುಣ ವತ್ಸರ್ವ ಭೂತ ಮಸಂಶ್ರಯಂ । ನತಾಸ್ಸ್ಮ ತತ್ಪ
ರಂ ವಿಷ್ಣೋ ರ್ಜಿಹ್ವಾ ದೃಗ್ಗೋಚರಂ ನಯ ॥೪೩॥ಶ್ರೀಪರಾ
ಶರಃ ॥ಏವಂ ಪ್ರಜೇತಸೋ ವಿಷ್ಣುಂ ಸ್ತುವಂತಸ್ತತ್ಸ ಮಾಧಯಃ।
ದಶವರ್ಷ ಸಹಸ್ರಾಣಿ ತಪಶ್ಚೇರು ರ್ಮಹಾರ್ಣವೇ ॥೪೪॥ ತತಃ
ಪ್ರಸನ್ನೋ ಭಗವಾಂ ಸ್ತೇಷಾ ಮಂತರ್ಜಲೇ ಹರಿಃ । ದದೌ ದ

ತಕ್ಕವನಲ್ಲ. ಮಾತನಾಡುವವನೂ ಅಲ್ಲ. ಆತನಿಗೆ ಮನಸ್ಸೂ ಕೂಡ ಇಲ್ಲ. ॥೪೦॥ (ಇದುವರೆಗೂ ಯಾರೊಬ್ಬರೂ ಆತನ ಹೆಸರು, ಕುಲಗಳನ್ನರಿತವರಲ್ಲ) ಆದುದರಿಂದ ಆತನಿಗೆ ಹೆಸರೇ ಆಗಲಿ ಕುಲವೇ ಆಗಲಿ ಇಲ್ಲವು ಆತನಿಗೆ ಸುಖವೇ ಇಲ್ಲವು. ಇಂತಹ ಸುಖವೇ ಇಲ್ಲದ ಕಾರಣ ಆ ಸುಖ ನಿಮಿತ್ತವಾದ ಹರ್ಷವಾಗಲಿ ಆ ಸುಖಕ್ಕೆ ವಿಪರ್ಯಯಭೂತವಾದ ದುಃಖವಾಗಲಿ ಆ ದುಃಖಜನ್ಯವಾದ ವ್ಯಸನವೇ ಆಗಲಿ ಆತನಿಗಿಲ್ಲವು. ಆತನಲ್ಲಿ ಯಾವುದೊಂದು ಬಗೆಯಾದ ತೇಜಸ್ಸೂ ಇಲ್ಲ ಆತನಿಗೆ ಉತ್ಪತ್ತ್ಯಾದಿಹೇತುಗಳಾವುವೂ ಇಲ್ಲವು. ಆದುದರಿಂದ ಉತ್ಪತ್ತ್ಯಾದಿಕಾರಣಭೂತರಾದ ತಂದೆ ತಾಯಿ ಮೊದಲಾದವರೂ ಇಲ್ಲ ; ಎಲ್ಲವೂ ಆತನ ಸ್ವರೂಪವೇ ಆಗಿರುವ ಕಾರಣ ಆತನಿಗೆ ಯಾರಿಂದಲೂ ಭಯವಿಲ್ಲ ಸುಳ್ಳುತಿಳಿವಳಿಕೆಯೆಂಬ ಭ್ರಾಂತಿಯು ಆತನಿಗಿಲ್ಲ, ನಿದ್ದೆ, ಆಹಾರ ಮುಪ್ಪು, ಸಾವುಗಳಿಗೆ ಆತನು ಬಳಗಾದವನಲ್ಲವು ॥೪೧॥ ಆತನು ರಜೋಗುಣವಲ್ಲ ಶಬ್ದವಲ್ಲ ಮರಣಶೂನ್ಯನು (ಅಮೃತಸ್ವರೂಪನು ಅಥವಾ ನಾಶರಹಿತವಾದ ಸುಖದಿಂದಿರುವವನು) ಗಮನಶೂನ್ಯನು ಹೊದಿಕೆ ಇಲ್ಲದವನು ಆತನಿಗೆ ಪೂರ್ವ ಪಶ್ಚಿಮ ಮೊದಲಾದ ದಿಕ್ಕುಗಳಿಲ್ಲವು ; ಆದಕಾರಣ ಆತನು ಸರ್ವತೋಮುಖನೆನಿಸುವನು, ಕಾಲಕೃತಗಳಾದ ಚಿಕ್ಕವನು, ದೊಡ್ಡವನು, ಹಳಬನು, ಹೊಸಬನು ಎಂಬಿವೇ ಮೊದಲಾದವುಗಳು ಆತನಿಗಿಲ್ಲವು ॥೪೨॥ ಇಂತು ಆತನು ನಿರುಪಾಧಿಕನಾಗಿದ್ದರೂ ಕೂಡ ಪ್ರಭುತ್ವ ಮೊದಲಾದ

ರ್ಜನ ಮುನ್ನಿದ್ರ ದಳ ನೀಲೋತ್ಪಲ ಚ್ಛವಿಃ ॥೪೫॥ ಪತತ್ರಿರಾಜ ಮಾರೂಢ ಮವಲೋಕ್ಯ ಪ್ರಜೇತಸಃ । ಪ್ರಣಿಪೇತು ಶಿರೋಭಿ ಸ್ಸಂ ಭಕ್ತಿಭಾರಾವನಾವಿತೈಃ ॥೪೬॥ತತಸ್ತ ನಾಹಭಗವಾ ನ್ವೀ ಯತಾ ವಿಾಪ್ಸಿತೋವರಃ। ಪ್ರಸಾದ ಸುಮು ಖೋ ಽ ಹಂವ್ಯೋ

ಷಡ್ಗುಣೈಶ್ವರ್ಯಸಂಪನ್ನನೆನಿಸುವನು, ತನ್ನ ಮಾಯೆಯಿಂದ ಎಲ್ಲ ಭೂತಗಳನ್ನೂ ಯಾವುದೊಂದು ಆಧಾರವೂ ಇಲ್ಲದೆ ಉಂಟುಮಾಡಿ ನಿಲಿಗೊಳಿಸಿರುವ ಕಾರಣ ಆತನು ಇಂತಹನನೇ ಎಂಬುದಾಗಿ ನಾಲುಗೆಯಿಂದ ಹೇಳಲಾಗದು ಕಂಣಿನಿಂದ ಆತನನ್ನು ನೋಡಿ ಇತರರಿಗೆ ತೋರಿಸಲೂ ಆಗುವುದಿಲ್ಲವು, ಇಂತಹಅಚಿಂತ್ಯಾದ್ಭುತ ಶಕ್ತಿಸಂಪನ್ನನೆನಿಸಿದ ಆ ಪರಮಾತ್ಮನಲ್ಲದೆನಮಗೆ ಬೇರೆಗತಿಯೇ ಇಲ್ಲವು॥೪೪॥ಪರಾಶರನು ಹೇಳುತ್ತಾನೆ--

ಇಂತು ಆ ಪ್ರಚೇತಸರು ಸರ್ವವ್ಯಾಪಕನೆನಿಸಿದ ಶ್ರೀ ಮಹಾವಿಷ್ಣುವನ್ನು ನಾನಾಪರಿಯಿಂದ ಕೊಂಡಾಡುತ್ತಾ ತಮ್ಮ ಮನಸ್ಸನ್ನು ಆತನಲ್ಲಿಯೇ ಲಯಗೊಳಿಸಿ ಮಹಾರ್ಣವ ಜಲಮಧ್ಯದಲ್ಲಿ ಮುಳುಗಿಕೊಂಡು ಹತ್ತುಸಾವಿರ ವರ್ಷಗಳವರೆಗೂ ತಪವಾಚ್ಯರಿಸಿದರು ॥ ೪೪ ॥ ಆ ಬಳಿಕ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಮಹಾವಿಷ್ಣುವು ಇವರ ಸ್ತೋತ್ರಕ್ಕೆ ಮೆಚ್ಚಿ ಪ್ರಸನ್ನನಾಗಿ ಅರಳಿದ ಕನ್ನೈದಿಲೆಯ ಎಳಸಿನಂತೆ ಕಪ್ಪಗೆ ಕಂಗೊಳಿಸುವ ದೇಹಕಾಂತಿಯುಕ್ತನೆನಿಸಿ ಆ ಜಲಮಧ್ಯದಲ್ಲಿಯೇ ಆ ಪ್ರಚೇತಸರಿಗೆ ದರ್ಶನವನ್ನಿತ್ತನು ॥೪೫॥ ಇಂತು ಜಲಮಧ್ಯದಲ್ಲಿ ತನುಗೆ ಪ್ರತ್ಯಕ್ಷನಾಗಿ ಬಂದ ಪಕ್ಷಿರಾಜನೆನಿಸಿದ ಗರುಡನನ್ನೇಲೆ ಕುಳಿತು ಕಂಗೊಳಿಸುತಿರುವ ಆ ಮಹಾವಿಷ್ಣುವಂ ನೋಡಿದೊಡನೆಯೇ ಆ ಪ್ರಚೇತಸರೆಲ್ಲರೂ ವಿನಯಭಕ್ತಿಸಮನ್ವಿತರೆನಿಸಿ ಬಾಗಿದ ಮಸ್ತಕಗಳಿಂದೊಡಗೂಡಿ ಆತನಿಗೆ ಸಾಷ್ಟಾಂಗ ಪ್ರಣಾಮವಂ ಗೈದರು ॥೪೬॥ ಆ ಬಳಿಕ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಪರಮಾತ್ಮನು ಆ ಪ್ರಚೇತಸರಂ ಕುರಿತು "ಎಲೈ ಪ್ರಚೇತಸರಿರಾ, ನಾನು ನಿಮ್ಮ ಸ್ತೋತ್ರಕ್ಕೆ ಬಹಳವಾಗಿ ಮೆಚ್ಚಿದೆನು, ನಿಮಗೆ ವರವಂ ಕೊಡಬೇಕೆಂದು ಬಂದಿರುವೆನು, ನಿಮ್ಮ ವಿಷಯದಲ್ಲಿ ನನಗೆ ತುಂಬಾ ಅನುಗ್ರಹವನ್ನಿರಿಸಬೇಕೆಂಬ ಕುತೂಹಲವುಂಟಾಗಿರುವುದು, ಆದಕಾರಣ ನಿಮಗೆ ಬೇಕಾದ ವರವಂ ಬೇಡಿರಿ,

ವರದಸ್ಸಮುಪಸ್ಥಿತಃ ॥೪೬॥ ತತಸ್ತಮೂಚುರ್ವರದಂ ಪ್ರಣಿಪತ್ಯ ಪ್ರಚೇತಸಃ । ಯಥಾ ಪಿತ್ರಾ ಸಮಾದಿಷ್ಟಂ ಪ್ರಜಾನಾಂ ವೃದ್ಧಿ ಕಾರಣಂ ॥೪೪॥ ಸಚಾಪಿ ದೇವಸ್ತಂ ದತ್ತ್ವಾ ಯಥಾಭಿಲಷಿತಂವರಂ । ಅಂತರ್ಧಾನಂ ಜಗಾ ಮಾಶು ತೇಜಸ ನಿಷ್ಣಕ್ರಮುರ್ಜಲಾತ್ ॥೪೯॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮಾಂಶೇ ಚತುರ್ದಶೋಧ್ಯಾಯಃ

ಎಂಬದಾಗಿ ಹೇಳಿದನು ॥೪೬॥ ತರುವಾಯು ಇಂತು ತನುಗೆ ವರವಂ ದಯಪಾಲಿಸಬೇಕೆಂದು ತನುಗೆ ಪ್ರತ್ಯಕ್ಷನಾಗಿ ಬಂದು ನಿಂತಿರುವ ಆ ಪರಮಾತ್ಮನ ಕೃಪಾಪೂರ್ವಕಮಾದ ವಾಕ್ಯವಂ ಕೇಳಿ ಆ ಪ್ರಚೇತಸರೆಲ್ಲರೂ ಪರಮಾನಂದಕುಂದಿಲಾಂತರಂಗರಾಗಿನಿಜಪತಿಗೆ ಬಾರಿಬಾರಿಗೂ ಅಡ್ಡಬೀಳುತ್ತಾ ,,ಎಲೈ ಪ್ರಭುವೆ'' ನಮ್ಮ ತಂದೆಯುನಮಗೆ ಪ್ರಜಾಭಿವೃದ್ಧಿಯಂಗೈವಂತೆ ಆಜ್ಞಾಪಿಸಿರುವನು, ಈ ಕಾರ್ಯದಲ್ಲಿ ನಮಗೆ ಯಾವುದೊಂದುತೊಂದರೆಯೂಬಾರದಂತೆಯೂ, ನಮ್ಮ ಕೋರಿಕೆಯುಸುಲಭನಾಗಿಕೈಗೂಡುವಂತೆಯೂ ಅನುಗ್ರಹಿಸು ,, ಎಂಬದಾಗಿ ಬೇಡಿಕೊಂಡರು ॥೪೪॥ ಆ ಬಳಿಕ ಭಕ್ತಾನುಕಂಪಿ ಎನಿಸಿದ ಆ ಪರಮಾತ್ಮನೂ ಕೂಡ ಆ ಪ್ರಚೇತಸರು ಕೋರಿದಂತೆಯೇ ಅವರು ಮುಂದೆ ಪ್ರಾರಂಭಿಸುವ ಪ್ರಜಾವೃದ್ಧಿರೂಪವಾದ ಕಾರ್ಯವು ನಿರ್ವಿಘ್ನವಾಗಿ ನೆರವೇರಿ ಸಾಫಲ್ಯವಂ ಪಡೆಯುವಂತೆ ಆ ಪ್ರಚೇತಸರಿಗೆ ವರವಂ ದಯಪಾಲಿಸಿ, ಒಡನೆಯೇ ಕಣ್ಮರೆಯಾದನು, ಆ ಪ್ರಚೇತಸರೂ ಕೂಡ ತಮ್ಮ ತಪಸ್ಸನ್ನು ಅಲ್ಲಿಗೆ ಸಾಕುಮಾಡಿ ಸಮುದ್ರನುಧ್ಯದಿಂದ ಹೊರಗೆ ಬಂದರು ॥೪೯॥ ಎಂಬದಾಗಿ ಪರಾಶರ ಮುನಿಯು ಮೈತ್ರೇಯಮುನಿಗೆ ಹೇಳುತ್ತಿದ್ದನೆಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದೊಳ್ ಹದಿನಾಲ್ಕನೆಯ ಅಧ್ಯಾಯಂ ಮುಗಿದುದು,

— ಚತುರ್ದಶಾಧ್ಯಾಯಂ ಸಮಾಪ್ತಂ, —

ಶ್ರೀ.

ಓನ್ನಮಃ ಪರಮಾತ್ಮನೇ,

ಪಂಚದಶೋಧ್ಯಾಯಃ

ಶ್ರೀ ಪರಾಶರಃ ॥ ತಪಶ್ಚರತ್ಸು ಪೃಥಿವೀಂ ಪ್ರಚೇತಸ್ಸು ಮಹೀರುಹಾಃ । ಅರಕ್ಷ್ಯಮಾಣಾ ಮಾವವ್ರುಃ ಒಭೂವಾಥ ಪ್ರಜಾಕ್ಷ

ಪರಾಶರನು ಹಿಂದಿನ ಕಥೆಯನ್ನೇ ಸಂಪೂರ್ಣವಾಗಿ ಹೇಳಲುಪಕ್ರಮಿಸಿ ತನ್ನ ಪ್ರಿಯಶಿಷ್ಯನೆನಿಸಿದ ಮೈತ್ರೇಯನಂ ಕುರಿತು ಈ ರೀತಿ ಹೇಳಲುಪಕ್ರಮಿಸಿದನು --ಎಲೈ ಮೈತ್ರೇಯನೆ! ಪ್ರಾಚೀನರ್ಬಹಿಮಹಾರಾಯನ ಆಜ್ಞಾನುಸಾರ ಅವನ ಮಕ್ಕಳಾದ ಪ್ರಚೇತಸರೆಲ್ಲರೂ ಪ್ರಜಾವೃದ್ಧಿಗಾಗಿ ವಿಷ್ಣುವನ್ನು ಧ್ಯಾನಮಾಡಲೋಸುಗ ಸಮುದ್ರವು ಧ್ಯದಲ್ಲಿ ಮುಳುಗಿಕೊಂಡು ತಪಸ್ಸುಮಾಡುತಿದ್ದ ಕಾಲದಲ್ಲಿ * ಇವರ ತಂದೆಯಾದ ಪ್ರಾಚೀನಬರ್ಹಿರಾಯನೂ ಕೂಡ ಕೇವಲ ಕರ್ಮಾಸಕ್ತನಾಗಿರುವುದಂ ಕಂಡು ಅಧ್ಯಾತ್ಮ (ವೇದಾಂತಶಾಸ್ತ್ರ) ಪಾರಂಗತನೆನಿಸಿದ ನಾರದಮುನಿಯು ಈ ಪ್ರಾಚೀನಬರ್ಹಿರಾಯನಂ ಸಾರ್ದು ಆತನಿಗೆ ಜ್ಞಾನೋಪದೇಶವಂ ಗೈದನು, ತರುವಾಯ ಈತನೂ ಕೂಡ ಜ್ಞಾನವಂ ಸ್ಥಿರಪಡಿಸಿಕೊಳ್ಳಲೋಸುಗ ತನ್ನ ರಾಜ್ಯವಂ ತೊರೆದು ವಾನಪ್ರಸ್ಥಾಶ್ರಮವಂ ಕೈಗೊಂಡು ಅರಣ್ಯಕ್ಕೆ ತೆರಳಿದನು, ಇಂತು ತಂದೆ ಮಕ್ಕಳೆಲ್ಲರೂ ಬೇರೆಬೇರೆ ಕಾರ್ಯಗಳಲ್ಲಿ ನಿರತರಾಗಿರುವಕಾರಣ ರಾಜ್ಯವು ಅನಾಯಕವಾಯಿತು, ಆಗ ಇಂತು ನಾಥನಿಲ್ಲದಿರುವ ಈ ಭೂಮಂಡಲದಲ್ಲಿ ಎಲ್ಲೆಲ್ಲಿಯೂ ಗಿಡಗಳು ಹೇರಳವಾಗಿ ಬೆಳೆದು ಆವರಿಸಿಕೊಂಡವು, ಇದರಿಂದ ಪ್ರಜೆಗಳ ನಾಶಕ್ಕೆ ಕಾರಣವಾಗಿ ಪ್ರಜೆಗಳೆಲ್ಲರೂ

---

* ಶ್ಲೋ॥ ಪ್ರಾಚೀನಬರ್ಹಿಷಂ ಜಾತಂ ಕರ್ಮಸ್ವಾಸಕ್ತಚೇತಸಂ । ನಾರದೋಧ್ಯಾತ್ಮಸತ್ವಜ್ಞಃ ಕೃಪಾಳುಃ ಪ್ರತ್ಯಬೋಧಯತ್ ॥ ಎಂಬ ಪುರಂಜನಾಖ್ಯಾನವಚನವು ಈ ವಿಷಯದಲ್ಲಿ ಉಪಬೃಂಹಕವಾಗಿರುವುದು.

ಯಃ॥೧೫॥ ನಾಶಕನ್ಮ ರುತೋ ವಾತುಂ ವೃತಂ ಖ ಮು ಭವದ್ದ್ರು
ಮೈಃ। ದಶವರ್ಷ ಸಹಸ್ರಾಣಿ ನಶೇಕುಶ್ಚೇಷ್ಟಿತುಂ ಪ್ರಜಾಃ॥೨॥
ತಾಃ ದೃಷ್ಟ್ವಾ ಜಲ ನಿಷ್ಕ್ರಾನ್ತಾ ಸ್ಸರ್ವೇ ಕೃದ್ಧಾ ಪ್ರ
ಚೇತಸಃ। ಮುಖೇಭ್ಯೋ ವಾಯು ಮಗ್ನಿಂ ಚ ತೇ ಽ ಸೃಜ
ಜಾತ ಮನ್ಯೂನ್॥೩॥ ಉನ್ಮೂಲಾ ನಥ ತಾಃ ವೃಕ್ಷಾಃ ಕೃತ್ವಾ
ವಾಯು ರಶೋಷ ಯತ್। ತಾನಗ್ನಿ ರ ದಹದ್ಘೋರ ಸ್ತದಾ ಽ
ಭೂದ್ದ್ರುಮ ಸಂಕ್ಷಯಃ॥೪॥ದ್ರುಮಕ್ಷಯ ಮಥೋ ದೃಷ್ಟ್ವಾ
ಕಿಂಚಿಚ್ಛೇ ಷ್ಟೇಷು ಶಾಖಿಷು। ಉಪಗಮ್ಯಾ ಬ್ರುವೀ ದೇನಾಃ

ದಿನೇದಿನೆ ಕ್ಷೀಣರಾಗುತ್ತ ಬಂದರು॥೧೫॥ ಇಂತು ಎಲ್ಲೆಲ್ಲಿಯೂ ಬತ್ತಾಗಿ ಮರಗಳೇ ಆವರಿಸಿಕೊಂಡಿದ್ದ ಕಾರಣ ಅವುಗಳ ಮಧ್ಯದಲ್ಲಿ ವಾಯುವೂ ಕೂಡ ಸಂಚರಿಸಲಾರನು, ಅಂತರಿಕ್ಷವೆಲ್ಲಾ ಗಿಡಗಳಿಂದಲೇ ನಿಬಿಡವಾಗಿದ್ದಿತು, ಈ ಪ್ರಚೇತಸರು ತಪಸ್ಸುನಮಾಡುತ್ತಿದ್ದ ಹತ್ತುಸಾವಿರ ವರ್ಷಗಳವರೆಗೂ ಪ್ರಜೆಗಳಲ್ಲಿ ಯಾರೊಬ್ಬರೂ ಸಂಚಾರ ಮಾಡುವುದಕ್ಕೂ ಕೂಡ ಆಗುತ್ತಿರಲಿಲ್ಲ, ॥೨॥ ಹತ್ತುಸಾವಿರ ವರ್ಷಗಳು ತುಂಬಿದ ಬಳಿಕ ಈ ಪ್ರಚೇತಸರು ಸಮುದ್ರಮಧ್ಯದಿಂದ ಹೊರಗೆ ಬಂದು ಈಪರಿ ಎಲ್ಲಿ ನೋಡಿದರೂ ಗಿಡಗಳೇ ತುಂಬಿಕೊಂಡಿರುವುದನ್ನೂ, ಪ್ರಜೆಗಳ ಸಂಚಾರಕ್ಕೂ ಕೂಡ ಮಾರ್ಗವಿಲ್ಲದಿರುವುದನ್ನೂ ಕಂಡು ಬಹಳವಾಗಿ ಸಿಟ್ಟುಗೊಂಡರು, ಇಂತು ಕೋಪೋದ್ದೀಪಿತರಾದ ಪ್ರಚೇತಸರ ಬಾಯಿಯಿಂದ ಅಗ್ನಿ ಮತ್ತು ವಾಯುಗಳು ಜನಿಸಿದುವು, ॥೩॥ ಇಂತು ಈ ಪ್ರಚೇತಸರ ಬಾಯಿನಿಂದುಂಟಾದ ವಾಯುವು ಮಹಾಭಯಂಕರವಾಗಿ ಬೀಸುತ್ತಾ ಅಲ್ಲಿ ಬೆಳೆದಿದ್ದ ಗಿಡಗಳನ್ನೆಲ್ಲಾ ಬುಡಮುಟ್ಟ ಕಿತ್ತು ಕೆಡವಿ ತನ್ನಲ್ಲಿ ಶೋಷಣಾತ್ಮಕವಾದ ಶಕ್ತಿಯಿಂದ ಅವುಗಳಲ್ಲಿನ ಸಾರವನ್ನೆಲ್ಲಾ ಹೀರಿ ಬಣಗಿಸಿತು, ಇಂತು ಪ್ರಚಂಡವಾಯುವು ಬಣಗಿಸಿದ ಆ ಮರಗಳನ್ನೆಲ್ಲಾ ಘೋರವಾದ ಅಗ್ನಿಯು ಸುಟ್ಟು ಬೂದಿಮಾಡಿತು, ಇಂತು ಆ ಪ್ರಚೇತಸರ ಮುಖದಿಂದುಂಟಾದ ವಾಯು ಮತ್ತು ಅಗ್ನಿಗಳೆರಡೂ ಸೇರಿ ತಮ್ಮ ಶಕ್ತಿಯಂ ಪ್ರಯೋಗಿಸಿದುದರಿಂದ ಸ್ವಲ್ಪವೂ ಎಡವಿಲ್ಲದೆ ಬತ್ತಾಗಿ ಬೆಳೆದಿದ್ದ ಆ ಮರಗಳೆಲ್ಲವೂ ಹಾಳಾದುವು॥೪॥ ಆ ಬಳಿಕ ವ್ಯಹ್ಲೆ

ರಾಜಾ ಸೋಮಃ ಪ್ರಜಾಪತೀನ್ ॥೫॥ ಕೋಪಂ ಯಚ್ಛತ ರಾಜಾನ ! ಶ್ರೂಯತಾಮುಚ್ಯತೇ ಚ ವಚೋಮಮ।ಸಂಧಾನಂ ವಃ ಕರಿಷ್ಯಾಮಿ ಸಹ ಹ್ಯೇತಿರುಹೈರಹಂ ॥೬॥ ರತ್ನಭೂತಾ ಚ ಕನ್ಯೇಯಂ ವಾರ್ಕ್ಷೀಯಾ ವರ ವರ್ಣಿನೀ । ಭವಿಷ್ಯಜ್ಜಾ ನತಾ ಪೂರ್ವಂ ಮಯಾ ಗೋಭಿರ್ವಿವರ್ಧಿತಾ ॥೭॥ ಮಾರಿಷಾ ನಾಮ ನಾಮ್ನೈಷಾ ವೃಷ್ಣಾಣಾ ಮಿತಿ ನಿರ್ಮಿತಾ । ಭಾರ್ಯಾ ವೋಸ್ತು

ಗಳಿಗೆಲ್ಲಾ ಅಧಿಪತಿ ಎನಿಸಿದ ಸೋಮನು ಈ ರೀತಿಯಿಂದ ಗಿಡಗಳೆಲ್ಲವೂ ನಿರ್ಮೂಲವಾಗಿ ಕೆಲವುಮಾತ್ರಉಳಿದಿರುವುದಂಕಂಡು ಈ ಹತ್ತುಮಂದಿ ಪ್ರಚೇತಸರಿಗೂ ಅಡ್ಡಬಿದ್ದು ಸಾವೋಪಾಯದಿಂದ ಈ ಪ್ರಚೇತಸರಂ ಕುರಿತು ೫. ಎಲೈ ಪ್ರಜಾವೃದ್ಧಿಯಂ ಬಯಸಿದ ಪ್ರಚೇತಸರಿರಾ, ನೀವು ಪ್ರಜಾವೃದ್ಧಿಯಂ ಬಯಸಿ ತನೂಜ್ಭಲಕ ಪ್ರಜಾ ಸಂರಕ್ಷಣೆಯಂಮಾಡಿ ಧರ್ಮವಂ ಪಡೆಯಬೇಕೆಂದಿರುವಿರಿ. ಇಂತಹ ನಿಮಗೆ, ಪ್ರಜೆಗಳಿಗೆ, ಆಹಾರವಾಗಿರುವಕಾರಣಪ್ರಜಾವೃದ್ಧಿಕರಗಳೆನಿಸಿದಕಂದ, ಮೂಲ,ಫಲಾದಿಗಳನ್ನುಂಟುಮಾಡುವ ಗಿಡಗಳಂಕತ್ತರಿಸುವುದು ನ್ಯಾಯವೆ? ಎಂಬದಾಗಿ ಹೇಳಿದನು ॥೫॥ ಎಲೈ ರಾಜರುಗಳಿರಾ, ಕೋಪವನ್ನು ಅಡಗಿಸಿಕೊಳ್ಳಿರಿ: ದಯವಿಟ್ಟು ನನ್ನ ಮಾತನ್ನು ಲಾಲಿಸಿರಿ, ನಿಮಿಗೂ ಮರಗಳಿಗೂ ಕೂಡ ಪರಸ್ಪರವಾಗಿ ಕಲಹಬೇಡ, ನಿಮ್ಮಿಬ್ಬರಿಗೂ ನಾನು ಸಂಧಿಯನ್ನು ಮಾಡುತ್ತೇನೆ, ಆದಕಾರಣ ಕೋಪವನ್ನು ಬಿಟ್ಟು ನನ್ನ ಮಾತನ್ನು ಸ್ವಲ್ಪ ಲಾಲಿಸಿರಿ ॥೬॥ ವೃಷ್ಣಿಗಳಿಂದುದಯಿಸಿದ ಈ ಕನ್ಯೆಯು ಮಹಾಸುಂದರಿಯು, ಪತಿಯನ್ನು ಬಯಸುವಂತಹ ಕೋಮಲವಾದ ವಯಸ್ಸನ್ನು ಹೊಂದಿರುವಳು, (ಮುಂದೆ ಈಕೆಯು ನಿಮಗೆ ಪತ್ನಿಯಾಗುವಳು, ಈಕೆಯು ನಿಮ್ಮಿಂದ ದಕ್ಷನನ್ನು ಪಡೆಯುವಳು, ಆ ದಕ್ಷನ ವಂಶದಿಂದ ಈ ಲೋಕವೆಲ್ಲವೂ ನಿಬಿಡವಾಗುವುದು, ಎಂಬ ಇದೇ ಮೊದಲಾದ)ನುಂದಿನ ನಡವಳಿಕೆಯಂತಿಳಿದು ನಾನು ಈ ಕನ್ನೆಯಂ ನಿಮಗೋಸ್ಕರವಾಗಿಯೇ ಅಮೃತಮಯಗಳೆನಿಸಿದ ಕಿರಣಗಳಿಂದ ಸಂರಕ್ಷಿಸಿದೆನು, ಆದುದರಿಂದ ಈಕೆಯನ್ನು ನಿಮಗೆ ಕೊಡಿಸಿ ಮದುವೆಮಾಡಿ, ಬಳಿಕ ನಿಮಗೂ ವೃಷ್ಣಿ

ಮಹಾ ಭಾಗಾ ! ಧ್ರುವಂ ವಂಶ ವಿವರ್ಧಿನೀ ॥೪॥ ಯುಷ್ಮಾ ಕಂ ತೇಜಸೋ ऽ ರ್ಧೇನ ಮಮ ಚಾರ್ಧೇನ ತೇ ಜಸಃ । ಅಸ್ಯಾ ಮುತ್ಪ ತ್ಸ್ಯತೇ ವಿದ್ವಾ ದಕ್ಷೋನಾಮ ಪ್ರಜಾಪತಿಃ ॥೫॥ ಮ ಮಾಂಶೇನ ಚ ಸಂಯುಕ್ತೋ ಯುಷ್ಮತ್ತೇಜೋ ಮಯೇನ ವೈ । ತೇಜಸಾಗ್ನಿ ಸಮೋಭೂಯಃ ಪ್ರಜಾ ಸ್ಸಂವರ್ಧ ಯಿಷ್ಯ ತೀ ॥೬॥ ಕಂಡುರ್ನಾಮ ಮುನಿಃ ಪೂರ್ವ ಮಾಸೀದ್ವೇದ ವಿದಾಂ

ಗಳಿಗೂ ಇರುವ ವೈರವಂ ಶಾಂತವಾಡುವೆನು ॥೩॥ ಎಲೈ ಮಹ ದೈಶ್ವರ್ಯಸಂಪನ್ನರೂ, ಮಹಾಮಹಿಮಶಾಲಿಗಳೂ, ಭಾಗ್ಯಸಂಪನ್ನರೂ ಎನಿಸಿದ ಪ್ರಚೇತಸರಿರಾ, ವೃಷ್ಣಿಕನ್ಯೆಯಾದ ಈಕೆಯ ಹೆಸರು ಮಾರಿಷೆ. ಈಕೆಯು ನಿಮಗೋಸ್ಕರವಾಗಿಯೇ ನಿರ್ಮಿಸಲ್ಪಟ್ಟಿರುವಳು, ಆದುದ ರಿಂದ ಈಕೆಯನ್ನು ಪರಿಗ್ರಹಿಸಿರಿ, (ಮದುವೆ ಮಾಡಿಕೊಳ್ಳಿರಿ) ದಿಟವಾ ಗಿಯೂ ಈಕೆಯಿಂದ ನಿಮ್ಮ ವಂಶವು ಏಳಿಗೆಗೆ ಬರುವುದು. ಈ ವಿಷ ಯದಲ್ಲಿ ಸ್ವಲ್ಪವೂ ಸಂದೇಹಪಡಬೇಡಿರಿ, ನನ್ನ ಮಾತಿನ ಭರವಸೆಯಿಂದ ಈಕೆಯನ್ನು ಮದುವೆಮಾಡಿಕೊಂಡು ವಂಶವನ್ನು ಅಭಿವೃದ್ಧಿಪಡಿಸಿರಿ, ॥೪॥ ಈಕೆಯಲ್ಲಿ ನಿಮ್ಮಿಂದ ಹುಟ್ಟುವ ಮಗನು ನಿಮ್ಮ ತೇಜಸ್ಸಿನ (ಪರಾಕ್ರಮ ಬಲಗಳ) ಅರ್ಧಾಂಶದಿಂದಲೂ, ಅಂತೆಯೇ ನನ್ನಲ್ಲಿರುವ ತೇಜಸ್ಸಿನ ಅರ್ಧಾಂಶದಿಂದಲೂ ಸೇರಿ ಮಹಾಮಹಿಮಶಾಲಿ ಎನಿಸುವನು. ಆತನ ಹೆಸರು ದಕ್ಷನು, ಬಳ್ಳಿಯ ತಿಳುವಳಿಕೆಯುಳ್ಳವನು, ಜ್ಞಾನಿಯು, ಮಹಾಪ್ರಸಿದ್ಧರಾದ ಬಂಭತ್ತು ಮಂದಿ ಬ್ರಹ್ಮರುಗಳಲ್ಲಿ ಈತನು ತ.೦ ಬಾ ಹೆಸರುವಾಸಿಯಾಗುವನು ॥೫॥ ಇಂತು ಈ ದಕ್ಷನು ನನ್ನ ತೇಜ ಸ್ಸಿನ ಅರ್ಧಾಂಶದಿಂದಲೂ,ನಿಮ್ಮ ಹತ್ತು ಮಂದಿಯ ತೇಜಸ್ಸಿನ ಅರ್ಧಾಂ ಶದಿಂದಲೂ ಕೂಡಿದವನಾದಕಾರಣ ಅಗ್ನಿಯಂತೆ ಮಹಾತೇಜಸ್ವಿ ಎನಿಸಿ ಬಾರಿಬಾರಿಗೂ ಪ್ರಜೆಗಳನ್ನು ವೃದ್ಧಿಪಡಿಸುತ್ತಾ ಅನುದಿನವೂ ಅದೇ ಕಾರ್ಯದಲ್ಲಿಯೇ ಮನಸ್ಸಿಟ್ಟು ವಿಶೇಷವಾಗಿ ಪ್ರಜಾವೃದ್ಧಿಯಂಗೈದು ತದ್ವಾರಾ ಬಹಳವಾಗಿ ಕೀರ್ತಿಯು ಪಡೆಯುವನು, ಈ ದಕ್ಷನು ಸೌ ಮ್ಯವಾದ (ಶೀತಲವಾದ ಅಥವಾ ಶಾಂತವಾದ) ನನ್ನ ತೇಜಸ್ಸಿನಿಂದಲೂ ತೀಕ್ಷ್ಣವೆನಿಸಿದ, ಅಗ್ನಿ ಸಂಬಂಧವಾದ ನಿಮ್ಮ ತೇಜಸ್ಸಿನಿಂದಲೂ ಕೂಡಿ

ವರಃ । ಸುರವ್ಯೋ ಗಾತಮೀ ತೀರೇ ಸತೇ ಪೇ ಪರಮಂ ತಪಃ ॥
ತತೊಕ್ಷೀ ಭಾಯ ಸುರೇಂದ್ರೇಣ ಪ್ರಮೊಲೀ ಚಾಖ್ಯಾ ವ
ರಾಪ್ಸರಾಃ । ಪ್ರಯುಕ್ತಾ ಹ್ಷೋಭಯಾ ಮಾಸ ತಮೃಷಿಂ ಸಾ
ಶುಚೆ ಸ್ಮಿತಾ ॥೧೭॥ ಹ್ಷೋಭಿತ ಸ್ಸತಯಾ ಸಾರ್ಧಂ ವರ್ಷಾಣಾ
ಮಧಿಕಂ ಶತಂ । ಅತಿಷ್ಠನ್ಮಂದರದ್ರೋಣ್ಯಾಂ ವಿಷಯಾಸಕ್ತ
ಮಾನಸಃ ॥೧೪॥ ಸಾತಂ ಪಶ್ಯಹ ಮಹಾಭಾಗ ! ಗಂತು ಮಿಚ್ಛಾ

ಜನಿಸುವನಾದಕಾರಣ ಈತನು ಅಗ್ನೀಷೋಮಾತ್ಮಕನಾಗುವನು. ಈತನನ್ನು ಈ ಲೋಕದಲ್ಲಿ ಯಾರೂ ಎದುರಿಸಲಾರರು. ॥೧೦॥ (ಪ್ರಚೇತಸರು ಕೇಳುತ್ತಾರೆ; ಎಲೈ ಸೋಮನೆ? ನಾವು ಹತ್ತುಮಂದಿ ಬಹಳ ಹುಟ್ಟಿದವರು. ಈ ನಮ್ಮ ಹತ್ತು ಮಂದಿಗೂ ಈಕೆಯೊಬ್ಬಳೇ ಹೇಗೆ ಸಹಧರ್ಮಚಾರಿಣಿಯಾಗುವಳು; ಸೋಮನು ಹೇಳುತ್ತಾನೆ:—ಎಲೈ ಪ್ರಚೇತಸರಿರಾ; ಈ ವಿಷಯದಲ್ಲಿ ನೀವು (ಯಾವ ಆಕ್ಷೇಪಣೆಯನ್ನೂ ಮಾಡುವಂತಿಲ್ಲ. ಇವುಗಳಿಗೆಲ್ಲಾ ತಕ್ಕ ಕಾರಣಗಳಿರುವುವು ಅವುಗಳನ್ನೇ ನಾನೀಗ ನಿಮಗೆ ವಿವರಿಸುವೆನು-ಕೇಳಿರಿ) ಪೂರ್ವಕಾಲದಲ್ಲಿ ಮಹಾ ಪವಿತ್ರವಾದ ಗೌತಮೀ ನದಿಯ ದಡದಲ್ಲಿ, ಸಕಲವೇದ ಪಾರಂಗತನೂ, ಶೌಚಾಚಾರ ಸಂಪನ್ನನೂ, ವ್ರತನಿಷ್ಠನೂ ಎನಿಸಿದ ಕಂಡುವೆಂಬ ಬಬ್ಬಾ ನೊಬ್ಬ ಮುನಿವರ್ಯನು ಬಹು ವರ್ಷಗಳ ಪರಿಯಂತರ ಘೋರವಾದ ತಪ ವನ್ನಾಚರಿಸತೊಡಗಿದನು ॥೧೧॥ ಈ ಕಂಡುವು ಇಂಥ ಘೋರವಾದ ತಪವನ್ನಾಚರಿಸುತಿರುವುದಂ ಕಂಡು ಇಂದ್ರಾದಿಗಳುಹೆದರಿ ಈತನ ಮನ ಸ್ಸು ವಿಕಾರವಂ ಹೊಂದಿ ತಪಸ್ಸನ್ನು ಸಾಕುಮಾಡುವಂತೆ (ಈತನ ತಪೋ ವಿಘ್ನಕ್ಕಾಗಿ) 'ಪ್ರಮ್ಲೋಚೆ' ಎಂಬ ದಿವ್ಯ ಸೌಂದರ್ಯಸಂಪನ್ನಳೆ ನಿಸಿದ ಒಬ್ಬ ಅಪ್ಸರ ಸ್ತ್ರೀಯನ್ನು ಕಳುಹಿಸಿದರು. ಇಂತು ಇಂದ್ರನು ಕಳುಹಿಸಿದ ಆ ಪ್ರಮ್ಲೋಚೆಯು ಬಡನೆಯೇ ಈ ಕಂಡು ಮುನಿಯಂ ಸಾರ್ದು ಮುಂದಣಾಸ ಯುಕ್ತಳಾಗಿ ಆತನ ಬಳಿ ತನ್ನ ಹಾವಭಾವಗಳ ನ್ನು ತೋರ್ಪಡಿಸುತ್ತಾ ಆತನ ಮನಸ್ಸಿಗೆ ಕ್ಷೋಭೆಯನ್ನುಂಟು ಮಾಡಿ ದಳು. ॥೧೩॥ ಇಂತು ಆಕೆಯ ದರ್ಶನದಿಂದ ಕ್ಷೋಭೆಗೊಂಡ ಮನಸ್ಸುಳ್ಳ ಈ ಕಂಡು ಮುನಿಯು ತನ್ನ ತಪೋನಿಯಮಗಳನ್ನೆಲ್ಲಾ ಮರೆತು ಸಾಂ

ವ್ಯಹಂ ದಿವಂ । ಪ್ರಸಾದ ಸುಮುಖೋ ಬ್ರಹ್ಮ ! ನ್ನನು ಜ್ಞಾಂ ದಾತು ಮರ್ಹಸಿ ॥೧೪॥ ತಯೈವ ಮುಕ್ತ ಸ್ಸ ಮುನಿ ಸ್ತಸ್ಯಾ ವಾಸಕ್ತ ಮಾನಸಃ । ದಿನಾನಿ ಕತಿ ಚಿದ್ಬ್ರ ದ್ರೀ ! ಸ್ಥೀಯತಾ ಮಿತ್ಯ ಭಾಷತ ॥೧೫॥ ಏವಮುಕ್ತಾ ತತಸ್ತೇನ ಸಾರ್ಗಂ ವರ್ಷ ಶತಂ ಪುನಃ ! ಬುಭುಜೇ ವಿಷಯಾ ಸ್ತನ್ವೀ ತೇನ ಸಾರ್ಧಂ ಮಹಾತ್ಮನಾ ॥೧೬॥ ಅನುಜ್ಞಾಂ ದೇಹಿ ಭಗವನ್ ! ವ್ರಜಾಮಿ ತ್ರಿದಶಾಲಯಂ । ಉಕ್ತ ಸ್ತಯೇತಿ ಸಪುನ ಸ್ಥೀಯತಾ ಮಿತ್ಯಭಾ ಷತ ॥೧೭॥ ಪುನರ್ಗತೇ ವರ್ಷ ಶತೇ ಸಾಧಿಕೇ ಸಾಶುಭಾನನಾ ।

ಸಾರಿಕ ಸುಖಗಳಲ್ಲಿ ತನ್ನ ಮನಸ್ಸನ್ನು ವಿಶೇಷವಾಗಿ ನಿಲ್ಲಿಸಿ ಆಕೆಯೊಡನೆ ಕ್ರೀಡಾ, ಸರಸಸಲ್ಲಾಪಗಳನ್ನನುಭವಿಸುತ್ತಾ ಮಂದರ ದ್ರೋಣಿಯೆಂಬ ಸ್ಥಳದಲ್ಲಿ ನೂರಾರು ವರ್ಷಕಾಲ ಪರ್ಯಂತ ಸುಖವಾಗಿ ಸಂಸಾರ ಮಾಡಿ ಕೊಂಡಿದ್ದನು, ॥೧೪॥ ಇಂತಿರಲು ಬಂದಾನೊಂದು ದಿನ ಈ ಪ್ರಮೋ ಚೆಯು ಕಂಡು ಮುನಿಯಂ ಕುರಿತು ಎಲೈ ಮುನಿವರ್ಯನೆ! ನಾನು ಸ್ವ ರ್ಗಲೋಕವಂ ಕುರಿತು ತೆರಳಬೇಕೆಂದು ಬಯಸುವೆನು. ಎಲೈ ಬ್ರಹ್ಮ ಣ್ಯನೆ; ನನ್ನಲ್ಲಿ ಅನುಗ್ರಹವಿಟ್ಟು ನನಗೆ ಅಪ್ಪಣೆಯುಂ ದಯಪಾಲಿಸಿದೆ ಯಾದೊಡೆ ನಾನು ಸ್ವರ್ಗಲೋಕಕ್ಕೆ ತೆರಳುವೆನು ಆದುದರಿಂದ ದಯ ವಿಟ್ಟು ನನಗೆ ಅನುಜ್ಞೆಯಂ ದಯಪಾಲಿಸು ॥೧೪॥ ಇಂತು ಆ ಅಪ್ಸರ ಸ್ತ್ರೀಯು ಹೇಳಿದ ಮಾತನ್ನು ಕೇಳಿ ಆ ಮುನಿಯು ಆಕೆಯಲ್ಲಿ ವಿಶೇಷ ವಾದ ವ್ಯೋಹವುಳ್ಳವನಾದಕಾರಣ ಎಲೌ ಮಂಗಳಾಂಗಿಯೇ! ಕೆಲವು ದಿವಸ ಇಲ್ಲಿದ್ದು ಬಳಿಕ ನೀನು ಇಂದ್ರಲೋಕಕ್ಕೆ ತೆರಳು, , ಎಂಬದಾಗಿ ಹೇಳಿದನು ॥೧೫॥ ಈ ಪರಿಯಿಂದ ಕಂಡು ಮುನಿಯು ಹೇಳಿದ ಮಾತಂ ಕೇಳಿ ಆ ಸುಂದರಿಯು ಎಂದಿನಂತೆಯೇ ಆತನೊಡನೆ ವಿಷಯೋಪಭೋ ಗವಂ ಗೈಯುತ್ತಾ ಮರಳಿ ನೂರು ವರ್ಷಗಳನ್ನು ಕಳೆದಳು ॥೧೦॥ ಮ ತ್ತೊಂದುಬಾರಿ ಆ ನಾರೀಮಣಿಯು ಆ ಮುನಿವರ್ಯನಂ ಕುರಿತು, ಎಲೈ ಷಡ್ಗುಣೈಶ್ವರ್ಯ ಸಂಪನ್ನನೆನಿಸಿದ ಮುನಿವರ್ಯನೆ! ನನಿಗೆ ಅನುಜ್ಞೆಯಂ ಕೊಡು. ನಾನು ದೇವಲೋಕಕ್ಕೆ ಹೋಗುವೆನು ಎಂಬದಾಗಿ ಬೇಡಿದ ಳು. ಇಂತು ಆ ಸುದತಿಯು ಮಾತಂ ಕೇಳಿದ ಆ ಕಂಡುವು ಮರಳಿ

ಯಾ ವಿತ್ಯಾಹ ದಿವಂ ಬ್ರೂಹ್ಮಣ್ ! ಪ್ರಣಯಾ ತ್ಪ್ರಕೃತ ಕೋಪ
ನಂ॥೧೪॥ಉತ್ತಸ್ಥಯೌವಂ ಸಮುನಿ ರುಪಗೃಹ್ಯಾ ಯತೇ ಹ್ಷಣಾ
ಮ್ । ಪ್ರಾಹಾ ಸ್ಪತಾಂ ಕ್ಷಣಂ ಸುಭ್ರು ; ಚಿರಕಾಲಂ ಗಮಿಷ್ಯ
ಸಿ॥೧೫॥ ತಚ್ಛ್ರುತ್ವಾ ಪಭೀತಾ ಸುಕ್ರೋಣೀ ಸಹತೇನರ್ಷಿ ಣಾ ಪು
ನಃ । ಶತದ್ವಯಂ ಕಿಂಚಿದೂನಂ ವರ್ಷಾಣಾ ಮನ್ವತಿಷ್ಠ ತ॥೧೦
ಗಮನಾಯ ಮಹಾಭಾಗಾ ! ದೇವರಾಜ ನಿಕೇತನಂ । ಪ್ರೋ
ಕ್ತಃ ಪ್ರೋಕ್ತ ಸ್ತಯಾ ತನ್ವ್ಯಾ ಸ್ಥೀಯತಾ ಮಿತ್ಯ ಭಾಷತ ॥
॥೧೧॥ ತಸ್ಯ ಶಾಪ ಭಯಾ ದ್ಭೀತಾ ದಾಕ್ಷಿಣ್ಯೇನ ಚ ದಕ್ಷಿಣಾ ।

ಆಕೆಗೆ ಹಿಂದಿನಂತೆಯೇ ಉತ್ತರವಂ ಕೊಟ್ಟು ಆಕೆಯನ್ನು ನಿಲ್ಲಿಸಿದನು ॥ ಬಳಿಕ ನೂರಾರು ವರ್ಷಗಳು ಕಳೆದಮೇಲೆ ಆ ಮಂಗಳಾನನೆಯು ಆ ಕಂಡುಮುನಿಯುಂ ಕುರಿತು ಎಲೈ ಬ್ರಹ್ಮಣ್ಯನೆ ನಾನು ಸ್ವರ್ಗಲೋಕಕ್ಕೆ ತೆರಳುವೆನು, ಎಂಬದಾಗಿ ಪ್ರೀತಿಯುಕ್ತಳಾಗಿ ಮುಗುಳ್ನಗೆಯಂ ಬೀರುತ್ತಾ ಆತನಂ ವಿನಯದಿಂದ ಬೇಡಿಕೊಂಡಳು ॥೧೪॥ ಇಂತು ಆ ಸುಂದರಿಯು ನುಡಿದ ಮಾತಂ ಕೇಳಿ ಆ ಮುನಿಯು ಅತ್ಯಂತ ಪ್ರೀತಿಯಿಂದ ಆ ಮಂಗಳಾಂಗಿಯನ್ನು ಅಪ್ಪಿಕೊಂಡು ಎಲೈ ಮೋಹನಾಂಗಿಯೆ ; ಬಂದುಷ್ಟಣನಿಲ್ಲಾ, ನೀನು ಇಲ್ಲಿಂದ ಹೊರಟುಹೋದಬಳಿಕ ಮರಳಿ ಇಲ್ಲಿಗೇನೂ ಬರತಕ್ಕವಳಲ್ಲ. ಆದಕಾರಣ ಇನ್ನೆ ಷ್ಟಂದು ಕ್ಷಣಕಾಲ ನನ್ನೊಡನಿದ್ದು ನನ್ನಿಗೆ ಆನಂದವನ್ನುಂಟುಮಾಡಿ ಬಳಿಕ ತೆರಳು ಎಂಬದಾಗಿ ಹೇಳಿದನು॥ ತರುವಾಯ ಆ ನಾರೀಮಣಿಯು, ಇಂತು ನುಡಿದ ಆ ಕಂಡುಮುನಿಯ ಮಾತಂ ಕೇಳಿ ಆತನ ಮಾತಂ ತಾನು ನಡೆಯಿಸದಿದ್ದೊಡೆ ತನಗೆ ಎಲ್ಲಿ ಶಾಪವಂ ಕೊಡುವನೋ ಎಂಬ ಭೀತಿಯಿಂದ ಮರಳಿ ಆತನೊಡನೆ ವಿಷಯಸುಖಗಳನ್ನು ಅನುಭವಿಸುತ್ತಾ ಸುಮಾರು ಇನ್ನೂರು ವರ್ಷಗಳ ವರೆಗೂ ಆತನೊಡನೆಯೇ ಕಾಲವಂ ಕಳೆದಳು ॥೧೦॥ ಎಲೈ ಮಹಿಮಸಂಪನ್ನರೆನಿಸಿದ ಪ್ರಜೇತಸರಿರಾ ; ಆ ಸುದತೀಮಣಿಯು ದೇವರಾಜನೆನಿಸಿದ ಇಂದ್ರನ ಲೋಕಕ್ಕೆ ತಾನು ಹೋಗಬೇಕೆಂದು ಆ ಕಂಡುಮುನಿಯಂ ಎಷ್ಟೆಷ್ಟುಬಾರಿ ಎಷ್ಟೆಷ್ಟು ಪರಿಯಿಂದ ಕೇಳಿದಾಗ್ಗೂ ಬಾರಿಬಾರಿಗೂ ಆತನು ಹಿಂದಿನಂತೆಯೇ ' ಇರು ' ಎಂಬದಾಗಿಯೇ ಹೇಳುತ್ತಿದ್ದನು ॥

ಪ್ರೋಕ್ತಾ ಪ್ರಣಯು ಭಂಗಾರ್ತಿ ವೇದಿನೀ ನಜಹೌ ಮುನಿಂ ॥
ತಯಾ ಚ ರಮತ ಸ್ತಸ್ಯ ಮಹರ್ಷೇ ಸ್ತದಹರ್ನಿಶಂ । ನವಂ
ನವ ಮಭೂ ತ್ಪ್ರೀಮು ಮನ್ಮಥಾವಿಷ್ಟ ಚೇತಸಃ ॥೬೪॥ ಏಕ
ದಾ ತ್ವರಯಾ ಯುಕ್ತೋ ನಿಶ್ಚಕ್ರಾಮೋಟಜಾ ನ್ಮುನಿಃ । ನಿ
ಷ್ಕ್ರಮಂತಂ ಚ ಕುತ್ರೇತಿ ಗಮ್ಯತೇ ? ಪ್ರಾಹ ಸಾಶುಭಾ ॥
॥೬೪॥ ಇತ್ಯುಕ್ತ ಸ್ಸತಯಾ ಪ್ರಾಹ ಪರಿವೃತ್ತ ಮಹಶ್ಯುಭೇ! ।
ಸಂಧ್ಯೋಪಾಸ್ತಿಂ ಕರಿಷ್ಯಾಮಿ ಕ್ರಿಯಾ ಲೋಪೋ ಽನೃಥಾ ಭ
ವೇತ್ ॥೬೫॥ ತತಃ ಪ್ರಹಸ್ಯ ಸುದತೀ ಸಾ ತಂ ಪ್ರಾಹ ಮಹಾ

ಆ ಕಂಡುಮುನಿಯಲ್ಲಿ,ಗೌರವ,ಭಯ,ಪ್ರೇಮ,ಸಚ್ಚರಿತೆಗಳನ್ನು ಇರಿಸಿದ್ದ ಆ ಪ್ರಮ್ಲೋಚೆಯು ಆತನ ಶಾಪದಿಂದ ಹೆದರಿದವಳಾಗಿ ತಾನುತಮ್ಮಿಬ್ಬರಿಗೂ ಪ್ರಕೃತದಲ್ಲಿರುವ ಹೆಚ್ಚಾದ ಪ್ರೀತಿಗೆ ಭಂಗವನ್ನುಂಟುಮಾಡಿತರೆ ಆದರಿಂದ ಇಬ್ಬರ ಮನಸ್ಸಿಗೂ ವಿಶೇಷನಾಗಿ ವ್ಯಥೆಯುಂಟಾಗುವುದೆಂದರಿತು ಆ ಮುನಿಯು ಮಾತಂ ಉಲ್ಲಂಘಿಸಿ ಆತನಂ ತೊರೆದು ಹೋಗಲಾರದೆ ಅಲ್ಲಿಯೇ ನಿಂತಳು॥೬೩॥ ಇಂತು ವಿಶೇಷವಾಗಿ ಮನ್ಮಥವಿಕಾರಕ್ಕೆ ಬಳಪಟ್ಟವನಾದಕಾರಣ ಆಕೆಯಲ್ಲಿ ವ್ಯಾಮೋಹವುಳ್ಳ ಆ ಕಂಡುಮುನಿಯು ಅನುದಿನವೂ ಆಕೆಯೊಡನೆ ಬೇಕಾದಷ್ಟು ಸರಸಸಲ್ಲಾಪಗಳನ್ನಾಡುತ್ತಾ ವಿಷಯಸುಖಗಳನ್ನು ಅನುಭವಿಸುತಿದ್ದರೂ ಎಂದಿಗೂ ತೃಪ್ತಿಯುಂಟಾಗಲೇಇಲ್ಲ. ಅನುದಿನವೂ ಹೊಸಹೊಸದಾಗಿ (ಆಗತಾನೇ) ತಾನು ಆಕೆಯಂ ಹೊಂದಿ ಆಕೆಯಲ್ಲಿ ಪ್ರೀತಿಯನ್ನಿರಿಸಿದ್ದಂತೆ ತೋರುತ್ತ ಬಂದಿತು॥ ಎಲೌ ಪ್ರಚೇತಸರಿರಾ' ಇಂತಿರಲು ಒಂದಾನೊಂದುದಿವಸ ಒಂದು ಆಶ್ಚರ್ಯವು ನಡೆಯಿತುಅದೇನೆಂದರೆ-ಒಂದುದಿನಸಾಯಂಕಾಲಆಕಂಡುಮುನಿಯು ಸಂಧ್ಯೋಪಾಸನೆಗಾಗಿಅತಿತ್ವರೆಯಿಂದೊಡಗೂಡಿಪರ್ಣಶಾಲೆಯಿಂದಹೊರಗೆಬಂದನು.ಆಗಈವ್ಯೋಹನಾಂಗಿಯುತನ್ನ ಮುಖಕಮಲದಿಂದಕುಭ್ರವಾದ ಮುಗುಳ್ನಗೆಯಂ ಬೀರುತ್ತಾಆಕಂಡುಮುನಿಯಂಕುರಿತು ಎಲೌ ಮುನಿವರ್ಯನೆ!ಇದೇನುಇಷ್ಟುತ್ವರೆಯಿಂದ ಹೊರಟಿರುನೆ!ಅಂತಪಕಾರ್ಯವಾವುದು?ಎಂಬುದಾಗಿ ಪ್ರಶ್ನೆಮಾಡಿದಳು॥೬೪॥ ಇಂತು ತನ್ನ ಹೃದಯವಲ್ಲಭಳು ನುಡಿದ ಮಾತಂ ಕೇಳಿ ಆ ಕಂಡುಮುನಿಯು,ಎಲೌ ಮಂಗಳಾಂಗಿಯೆ ಚ

ಮುನಿಂ। ಕಿಮುದ್ಯ ಸರ್ವ ಧರ್ಮಜ್ಞ !ಪರಿವೃತ್ತ ಮಹಸ್ತವ?॥೬೬॥
ಬಹೂನಾಂ ವಿಪ್ರ ! ವರ್ಷಾಣಾಂ ಪರಿಣಾಮ ಮಹಸ್ತ
ವ । ಗತಮೇ ತ ನ್ನಕಾರುತೇ ವಿಸ್ಮಯಂ ಕಸ್ಯ ಕಥ್ಯತಾಂ ॥೬೭॥
ಕಂಡುರುವಾಚ ॥ ಪ್ರಾತಸ್ತ್ವನೂಗತಾ ಭದ್ರೇ ! ನದೀತೀರ ಮಿ
ದಂ ಶುಭಂ । ಮಯಾ ದೃಷ್ಟಾ ಚ ತನ್ವಂಗೀ ಪ್ರವಿಷ್ಟಾ ಚ ಮ
ಮಾ ಶ್ರಮಂ ॥೬೮॥ ಇಯಂ ಹಿ ವರ್ತತೇ ಸಂಧ್ಯಾ ಪರಿಣಾಮ

ಗಲೆಲ್ಲಾ ಕಳೆದುಹೋಯಿತು. ಸಾಯಂಕಾಲವು ಸವಿಾಪಿಸುತ್ತಿರುವುದು ಸಂಧ್ಯಾವಂದನೆಯನ್ನು ಮಾಡಲೋಸುಗ ನದೀತೀರಕ್ಕೆ ತೆರಳುವೆನು ಕಾಲಕ್ಕೆ ಸರಿಯಾಗಿ ಸಂಧ್ಯಾವಂದನೆಯನ್ನು ಮಾಡದಿದ್ದೊಡೆ ಅಕಾಲದಲ್ಲಿ ಮಾಡಿದ ಕಾರ್ಯವು ಸಂಪೂರ್ಣಫಲದಾಯಕವಾಗುವುದಿಲ್ಲ ಆದುದರಿಂದ ಕ್ರಿಯಾಲೋಪವುಂಟಾಗುವುದೆಂದು ತೀವ್ರವಾಗಿ ಹೋಗುತ್ತಿರುವೆನು' ಎಂಬದಾಗಿ ಹೇಳಿದನು ॥೬೫॥ ಇಂತು ಕಂಡುಮುನಿಯ ವಚನವಂ ಕೇಳಿದ ಆ ಸುದತಿಯು ಮನಸ್ಸಿನಲ್ಲಿ ಆಶ್ಚರ್ಯಗೊಂಡು ಆ ಕಂಡುಮುನಿಯಂ ಕುರಿತು ,ಓಹೋ ಮಹರ್ಷಿಗಳೆ; ತಾವು ಎಲ್ಲ ಧರ್ಮಗಳನ್ನೂ ಬಲ್ಲವರಲ್ಲವೆ? ಈಗ ತಮಗೆ ಸಾಯಂಕಾಲವಾದಂತಿದೆ' ಎಂಬದಾಗಿಹಾಸ್ಯಮಾಡತೊಡಗಿದಳು ॥೬೬॥ ಮತ್ತು ಆ ಬ್ರಾಹ್ಮಣನು ತನ್ನ ಲೀಲೆಯಿಂದ ಮೂಢನಾಗಿರುವನೆಂದು ನಿಶ್ಚಯಿಸಿಕೊಂಡು ಸ್ತ್ರೀಲೋಲನ ಮಾತುಗಳು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕವುಗಳೆಂದು ತನ್ನ ಮನದೊಳ್ ತಿಳಿದು ,ಸ್ವಾಮಿನಾ, ಬ್ರಾಹ್ಮಣೋತ್ತಮರೆ ತನ್ನ ಹಗಲು ಎಷ್ಟು ದೊಡ್ಡದು ತಮಗೊಂದು ಹಗಲಾಗಬೇಕಾದರೆ ಎಷ್ಟು ವರ್ಷಗಳಾಗಬೇಕು.ತನ್ನ ಹಗಲು ಇಷ್ಟು ದೀರ್ಘಕಾಲ ವ್ಯಾಪಿಸುವುದೆಂತೆಂದರೆ ಇದು ಯಾರಿಗೆ ತಾನೇ ಆಶ್ಚರ್ಯವಲ್ಲ ತಾವೇ ಹೇಳಿರಿ' ಎಂಬದಾಗಿ ನಗುತ್ತಾ ಹಾಸ್ಯಮಾಡತೊಡಗಿದಳು ॥೬೭॥

ಈ ಮಾತನ್ನು ಕೇಳಿ ಕಂಡುಮುನಿಯು ಪ್ರಶ್ನೆ ಮಾಡುತ್ತಾನೆ:— ಎಲೌ ಮಂಗಳಾಂಗಿಯೇ ; ಇದೇನು ಈ ಪರಿಹಾಸ್ಯಮಾಡುವೆ ? ಈ ದಿವಸ ಪ್ರಾತಃಕಾಲದಲ್ಲಿ ನಾನು ಈ ನದೀ ತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ ನೀನು ಅಲ್ಲಿಗೆ ಬಂದೆ. ಆ ಬಳಿಕ ನಾನು ನಿನ್ನಂ ಕಂಡು ಮಾತ

ಮಹೋಗತಂ । ಅಪಹಾಸಃ ಕಿಮರ್ಥೋ ಽಯಂ ಸದಾ ಭವಃ
ಕಥ್ಯತಾಂ ಮಮ ॥೬೯॥ ಪ್ರವೋಲ್ಲೋಚಾ ॥ ಪ್ರತ್ಯುಪಸ್ಥಾಗತಾ
ಬ್ರಹ್ಮನ್ ? ಸತ್ಯ ಮೇತ ನ್ನತನ್ಮೃಷಾ । ತತ್ತ್ವದ್ಗತಸ್ಯ ಕಾಲಸ್ಯ
ಗತಾನ್ಯ ಬ್ದಶತಾನಿತೇ ॥೭೦॥ ಸೋಮಃ ॥ ತತ ಸ್ಸಸಾಧ್ವಸೋ
ವಿಪ್ರ ಸಾತ್ಂ ಪ್ರಪ್ರಚ್ಛ್ಯ ತೇಕ್ಷಣಾಂ । ಕಥ್ಯತಾಂ ಭೀರು
ಕಃ ಕಾಲ ಸ್ತ್ವಯಾ ಮೇರಮತ ಸ್ಸಹ ॥೭೧॥ ಪ್ರವೋಲ್ಲೋಚಾ ॥

ನಾಡಿಸಿದ ಬಳಿಕ ನನ್ನೊಡನೆ ಈ ಆಶ್ರಮಕ್ಕೆ ಬಂದು ಸೇರಿದೆ ॥೬೮॥ ಇದೋ ಈಗ ಸಂಧ್ಯಾಕಾಲವು ಸಮೀಪಿಸುತ್ತಿರುವುದು, ಹಗಲು ಕಳೆದುಹೋಯಿತು, ಇಂತಿರಲು ಈಗ ನಾನು ಸಂಧ್ಯಾವಂದನೆಗಾಗಿ ನದೀತೀರಕ್ಕೆ ಹೋಗಬೇಕೆಂದಿದ್ದರೆ ನೀನೀಪರಿ ಹಾಸ್ಯಮಾಡಿ ಮಾತನಾಡಲು ಕಾರಣವೇನು? ಇರತಕ್ಕ ನಿಜ ಸ್ಥಿತಿಯನ್ನು ನನಿಗೆ ತಿಳುಹಿಸು ॥೬೯॥ ಇದನ್ನು ಕೇಳಿ ಪ್ರವೋಲ್ಲೋಚೆಯು ಮರಳಿ ಹೇಳುತ್ತಾಳೆ;---ಎಲೈ ಬ್ರಾಹ್ಮಣೋತ್ತಮನೆನಿಸಿದ ಕಂಡುಮುನಿಯೆ ; ನಾನು ನದೀ ತೀರದಲ್ಲಿಗೆ ಪ್ರಾತಃಕಾಲದಲ್ಲಿ ಬಂದುದೇನೋ ದಿಟ. ಆದು ಎಂದೆಂದಿಗೂ ಸಟೆಯಲ್ಲವು. ಆ ಬಂದು ದಿನದಂತೆಯೇ ಇದುವರೆಗೂ ಕಳೆದುಹೋದ ನೂರಾರು ಸಂವತ್ಸರಗಳು ನಿನಿಗೆ ಬಂದು ಹಗಲಿನಂತಿದೆ. ಆದರೆ ಇದುವರೆಗೂ ನೂರಾರು ವರ್ಷಗಳೇನೋ ಕಳೆದುಹೋದುವು ॥೭೦॥ ಸೋಮನು ಪ್ರಚೇತಸರಿಗೆ ಹೇಳುತ್ತಾನೆ :---ಏಲೈ ಮಹಾನುಭಾವರೆನಿಸಿದ ಪ್ರಚೇತಸರಿರಾ ; ಇಂತು ಪ್ರವೋಲ್ಲೋಚೆಯು ಉಸುರಿದುದ೦ ಕೇಳಿ ಆ ಬ್ರಾಹ್ಮಣೋತ್ತಮನೆನಿಸಿದ ಕಂಡು ಮುನಿಯು ತಾನು ಮಾಡಿದ ಧರ್ಮಲೋಪ ರೂಪವಾದ ಅಪರಾಧದಿಂದ ವಿಶೇಷವಾಗಿ ಗಾಬರಿಪಟ್ಟ ವಿಶಾಲವಾದ ನೇತ್ರಗಳಿಂದ ಕಂಗೊಳಿಸುವ ಆ ನಾರೀಮಣಿಯಂ ಕುರಿತು ,, ಎಲೌ ಭೀರುವೆ ; ನಾನು ನಿನ್ನೊಡನೆ ಸೇರಿ ಇದುವರೆಗೂ ಎಷ್ಟುಕಾಲವಾಯಿತು ? ಇದನ್ನು ಹೇಳು ,, ಎಂಬದಾಗಿ ಹೇಳಿದನು ॥೭೧॥ ಪ್ರವೋಲ್ಲೋಚೆಯು ಹೇಳುತ್ತಾಳೆ :—ಮುನಿವರ್ಯನೆ ; ನೀನು ನನ್ನೊಡನೆ ಸೇರಿದುದು ಮೊದಲುಗೊಂಡು ಇದುವರೆಗೂ ಐನೂರ ಏಳು ವರ್ಷಗಳು, ಆರು ತಿಂಗಳು, ಮೂರು ದಿನಗಳು ಕಳೆದುಹೋದುವು. (೯೦೭)

ಸಪ್ತೋತ್ತರಾಣ್ಯತೀತಾನಿ ನವವರ್ಷ ಶತಾನಿಚ । ಮಾಸಾಶ್ಚ ಷಟ್ತ ಥೈವಾನ್ಯ ತ್ಸಮತೀತಂ ದಿನತ್ರಯಂ ॥೬॥ ಕಂಡುಃ ॥ ಸ ತ್ಯಂ ಭೀರು ! ವದಸ್ಯೇತ ತ್ಪರಿಹಾಸೋ ಽ ಥವಾಳುಭೆ; । ದಿನ ಮೇಕ ಮಹಂ ಮನ್ಯೇ ತ್ವಯಾ ಸಾರ್ಧ ಮಿಹಸ್ಥಿತಂ ॥೬॥ ಪ್ರ ವೆಶ್ಲೋಚಾ ॥ ವದಿಷ್ಯಾ ಮ್ಯನೃತಂ ಬ್ರಹ್ಮ ರ್ಷೆ! ಕಥಮತ್ರ ತವಾಂ ತಿಕೇ । ವಿಶೇಷೇಣಾ ದ್ಯ ಭವತಾ ದೃಷ್ಟ್ವಾ ಮಾರ್ಗಾನುವರ್ತಿ ನಾ ॥೬॥ ಸೋಮಃ ॥ ನಿಶಮ್ಯ್ಯ ತದ್ವಚಸ್ತಥ್ಯಂ ಸಮುನಿ ರ್ನೃ ಪ ನಂದನಾಃ ! । ಧಿಗ್ಧಿಜ್ಮಾಮಿ ತ್ಯತೀವೇ ತ್ಥಂ ನಿನಿಂದಾ ತ್ಮಾನ ಮಾತ್ಮಾನಾ ॥೬॥ ಮುನಿಃ ॥ ತಪಾಂಸಿ ನಷ್ಟಾನಿ ಹತಂ ಬ್ರಹ್ಮ

ವರ್ಷ ೬ತಿಂಗಳು ೩ ದಿನಗಳು)॥೬॥ ಈ ಮಾತಂ ಕೇಳಿ ಕಂಡು ಮು ನಿಯು ,ಎಲೈಭೀರುಸ್ವಭಾವವುಳ್ಳ ಮಂಗಳಾಂಗಿಯೇ , ಇದೇನು ಈಪರಿ ನುಡಿಯುವೆ!ನೀನುಹೇಳುವುದೇನು ದಿಟವೋ ಅಥವಾ ಪರಿಹಾಸವೋ ? ನನಗೆಮಾತ್ರ ನೀನು ಇಲ್ಲಿಗೆ ಬಂದು ಬಂದು ಹಗಲಾದಂತೆಯೂ, ನಾನು ನಿನ್ನೊಡನೆ ಒಂದೇ ಹಗಲೇ ಇದ್ದಂತೆಯೇ ಇಹೆ. ಇದರಲ್ಲಿಯಾವುದು ದಿಟ, ನಿಜವಾದ ಸಂಗತಿಯನ್ನು ತಿಳುಹು ,, ಎಂಬದಾಗಿ ಕೇಳಿದನು ॥ ೬೬ ॥ ಪ್ರವೆಶ್ಲೋಚೆಯು ಹೇಳುತ್ತಾಳೆ :—ಎಲೈ ಬ್ರಹ್ಮಣ್ಯನೆ ; ಸರ್ವಜ್ಞನೆನಿಸಿದ ನಿನ್ನ ಸನ್ನಿಧಿಯಲ್ಲಿ ನಾನು ಸುಳ್ಳನ್ನೆಂತು ಹೇಳಲಿ ; ಅದರಲ್ಲಿಯೂ ವಾಸ್ತವವಾದ ಸಮಾಚಾರವನ್ನು ನೀನಾಗಿಯೇ ತಿಳಿಯಬೇಕೆಂದು ಕೇಳುತ್ತಿರುವಾಗ ನಾನು ಸುಳ್ಳು ಹೇಳಬಹುದೆ ! ಇಷ್ಟು ಮಾತ್ರವಲ್ಲದೆ ನೀನೇನೂ ನನ್ನ ಮನಸ್ಸಿಗೆ ವಿರೋಧವಾಗಿ ನಡೆಯತಕ್ಕವನಲ್ಲ. ನನ್ನ ಮನಸ್ಸಿಗೆ ಅನುಸಾರವಾಗಿ ನಡೆಯುತಿರುವ ನಿನ್ನ ಸನ್ನಿಧಿಯಲ್ಲಿ ನಾನು ಸುಳ್ಳನ್ನು ಹೇಳಬಹುದೆ ? ಆದಕಾರಣ ನನ್ನ ಮಾತನ್ನು ನಂಬು ॥೬॥ ಸೋಮನು ಹೇಳುತ್ತಾನೆ:—ಎಲೈ ರಾಜಪುತ್ರರೆನಿಸಿದ ಪ್ರಚೇತಸರಿರಾ ; ಇಂತು ನುಡಿದ ಪ್ರವೆಶ್ಲೋಚೆಯು ಸತ್ಯವಾದ ನುಡಿಯಂ ಕೇಳಿ ಮನನಶೀಲನೆನಿಸಿದ ಆ ಕಂಡುಮುನಿಯು ಛೆ ! ಇಷ್ಟು ದೀರ್ಘಕಾಲ ಉನ್ಮತ್ತನಂತೆ ಸ್ತ್ರೀಲೋಲನಾಗಿದ್ದ ನನ್ನ ಜನ್ಮವಂ ಸುಡಬೇಕು. ನನ್ನಂತಹ ಮೂಢರು ಈ ಲೋಕದಲ್ಲಿ ಮತ್ತಾರಿರುವರು ?

ಬ್ರಹ್ಮವಿದಾಂ ಧನಂ । ಹೃತೋ ವಿವೇಕಃ ಕೇನಾಪಿ ಯೋಷಿ
ನ್ಮೋಹಾಯ ನಿರ್ಮಿತಾ ॥೬೬॥ ಊರ್ಮಿ ಷಟ್ಕಾತಿಗಂ ಬ್ರಹ್ಮ
ಜ್ಞೇಯಮಾತ್ಮ ಜಯೇನವೇ । ಮತಿರೇಷಾ ಹೃತಾ ಯೇನ
ಧಿಕ್ತಂ ಕಾಮ ಮಹಾ ಗ್ರಹಂ ॥೬೭॥ ವ್ರತಾನಿ ವೇದವೇದ್ಯಾಪ್ತಿ
ಕಾರಣಾ ನ್ಯಖಿಲಾ ನಿಚ । ನರಕಗ್ರಾಮ ಮಾರ್ಗೇಣ ಸಂಗೇನಾ
ಪಹೃತಾನಿವೇ ॥೬೮॥ ವಿನಿಂದ್ಯೇತ್ಥಂ ಸ ಧರ್ಮಜ್ಞಾ ಸ್ವಯ

ಎಂಬದಾಗಿ ನಾನಾಪರಿಯಿಂದ ತನ್ನನ್ನು ತಾನೇ ನಿಂದಿಸಿಕೊಂಡನು॥೬೫॥ ಕಂಡುಮುನಿಯು ಹೇಳಿಕೊಳ್ಳುತ್ತಾನೆ—ಅಯ್ಯೋ! ಇದುವರೆಗೂ ನಾನು ಆಚರಿಸಿದ ತಪಸ್ಸೆಲ್ಲವೂ ವ್ಯರ್ಥವಾಯಿತು. ಬ್ರಹ್ಮಜ್ಞಾನಿಗಳಿಗೆ ಮೂಲಧನವೆನಿಸಿದ ವೇದಪಾಠ, ಆತ್ಮವಿಚಾರಗಳೆಲ್ಲವೂ ನಿಷ್ಫಲವಾದುವು, ವಿವೇಕ (ಕಾರ್ಯಾಕಾರ್ಯವಿವೇಚನೆ) ವೆಂಬ ಧನವನ್ನು ಈ ಯುವತಿ ಎಂಬ ಚೋರಳು ಸಂಪೂರ್ಣವಾಗಿ ಅಪಹರಿಸಿದಳು ಯಾವನೋ ಒಬ್ಬನು ನನ್ನ ತಪೋಭಂಗವನ್ನುಂಟುಮಾಡಲೋಸುಗ ನನ್ನಚಿತ್ತವನ್ನು ಹೆಣ್ಣಿಗೊಳಿಸಲು ಈರಾಕ್ಷಸಿಯನ್ನು ನಿರ್ಮಿಸಿದನು॥ಹಸಿವು,ಬಾಯಾರಿಕೆ, ಲೋಭ,ಮೋಹಮುಪ್ಪು,ಸಾವುಗಳನ್ನುವಿುರಿ ಅನವರತವೂ ಸಚ್ಚಿದಾನಂದ ಸ್ವರೂಪನೆನಿಸಿದ ಪರಮಾತ್ಮನನ್ನು,ಮನಸ್ಸಿನ ನಿಗ್ರಹಮೂಲಕ ನಾನು ತಿಳಿದು ಆನಂದಿಸಬೇಕೆಂದಿದ್ದೆನಲ್ಲಾ! ಇಂತಹ ನನ್ನ ಮನೋರಥವು ಈಡೇರದಂತೆನನ್ನ ವಿವೇಕವನ್ನುಸಂಪೂರ್ಣವಾಗಿ ಅಪಹರಿಸಿದ ಕಾಮ(ಮನ್ಮಥ)ನೆಂಬ ದೊಡ್ಡ ಪಿಶಾಚವನ್ನು ಸುಡಬೇಕು. ಈ ಕಾಮವಿಕಾರದಿಂದಲ್ಲವೇ ನನಿಗೆ ಇಷ್ಟು ಅನರ್ಥವು ಸಂಭವಿಸಿದುದು ॥೬೭॥ ವೇದವೇದ್ಯನೆನಿಸಿದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಮೂಲಸಾಧನಗಳೆನಿಸಿದ ನನ್ನ ಎಲ್ಲ ನಿಯಮಗಳೂ ಕೂಡ, ನರಕವೆಂಬ ಗ್ರಾಮಕ್ಕೆ ಹಾದಿಯಾಗಿರುವ ಸ್ತ್ರೀ ಸಂಗದಿಂದ ಹಾಳಾದುವು (ನಾನು ಪರಮಾತ್ಮ ತತ್ವವನ್ನು ತಿಳಿದುಕೊಳ್ಳಬೇಕೆಂದು ಎಷ್ಟೆಷ್ಟೋ ವ್ರತಗಳನ್ನು ಮಾಡಿ ಅದರಿಂದ ಚಿತ್ತಶುದ್ಧಿಯಂ ಪಡೆದು ಸ್ವಾತ್ಮಾರಾಮನಾಗಬೇಕೆಂದಿದ್ದೆ. ಇದಕ್ಕೆ ಪ್ರತಿಪ್ರತಿಪಂಥಿನಿಯಾಗಿ ಬಂದ ಈ ಯುವತಿಯೊಡನೆ ಸೇರಿ ಆ ನಿಯಮಗಳನ್ನೆಲ್ಲಾ ಮುರಿದು ಕೊನೆಗೆ ನರಕವನ್ನು ಸಂಪಾದಿಸಿಕೊಂಡೆನಲ್ಲಾ) ॥೬೮॥

ಮಾತ್ಮಾನ ಮಾತ್ಮನಾ । ತಾವುಪ್ಸರಸ ಮಾಸೀನಾ ಮಿದಂ ವಚ
ನ ಮಬ್ರವೀತ್ ॥೬೯॥ ಗಚ್ಛ ಪಾಪೇ ! ಯಥಾ ಕಾಮಂಯತ್ಕಾ
ರ್ಯಂ ತತ್ಕೃತಂ ತ್ವಯಾ।ದೇವರಾಜಸ್ಯ ಮ ತ್ಕೃಷ್ಣೇಭಂ ಕುರ್ವಂ
ತ್ಯಾ ಭಾವಜೇಷ್ಪಿತೈಃ ॥೪೦॥ ನ ತ್ವಾಂ ಕರೋ ವ್ಯಹಂ
ಭಸ್ಮ ಕೋಧಾ ತೀ ವ್ರೇಣ ವನ್ಹಿನಾ । ಸ ತಾಂ ಸಪ್ತಪದಂ ಮೈ
ತ್ರಂ ಉಷಿತೋ ೨ ಹಂ ತ್ವಯಾ ಸಹ- ॥೪೧॥ ಅಥವಾ ತವದೋ

ಸಕಲ ಧರ್ಮಗಳನ್ನೂ ಅರಿತವನೆನಿಸಿದ ಆ ಕಂಡುಮುನಿಯು ಈ ಪರಿ
ಯಿಂದ ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾ ತನ್ನ ಆಶ್ರಮದಲ್ಲಿ ಕುಳಿತಿ
ದ್ದ ತನ್ನ ತಪೋಭಂಗಕ್ಕೆ ಮುಖ್ಯಕಾರಣಭೂತಳಾದ ಆ ಪ್ರಮ್ಲೋಚೆ
ಎಂಬ ಅಪ್ಸರಸ್ತ್ರೀಯನ್ನು ಕಂಡು ಅವಳೊಡನೆ ಈ ರೀತಿ ಹೇಳತೊಡಗಿ
ದನು॥೬೯॥ ಎಲೈ ಪಾಪಶೀಲಳೆ ; ತೆರಳು. ನಿನ್ನ ಕಾರ್ಯವು ಮುಗಿದುದು.
ಪ್ರೇಮಭಾವವನ್ನು ಸೂಚಿಸುವಂತಹ ನಿನ್ನ ಭ್ರೂ ಭಂಗ, ಕಡೆಗಣ್ಣೋ
ಟ ಮೊದಲಾದವುಗಳಿಂದ ನನ್ನ ಮನಸ್ಸಂ ಕೆಡಿಸಿ, ನನ್ನ ವಿವೇಕವನ್ನೆ
ಲ್ಲಾ ನಿರ್ಮೂಲಮಾಡಿ, ನನ್ನ ತಪಸ್ಸಿನಿಂದ ಭೀತನಾಗಿದ್ದ ದೇವರಾಜನೆನಿ
ಸಿದ ಇಂದ್ರನಿಗೆ ಪರಮೋಪಕಾರವಂ ಮಾಡಿಯಾಯಿತು. ಇನ್ನು ನಿನಗೆ
ಇಲ್ಲೇನೂ ಕೆಲಸವಿಲ್ಲವು. ಇನ್ನು ಇಲ್ಲಿ ನಿಲ್ಲದೆ ತೆರಳುವವಳಾಗು ॥೪೦॥
ಪ್ರಳಯಕಾಲದ ಅಗ್ನಿಯಂತೆ ಅತಿ ತೀವ್ರವಾದ ನನ್ನ ಕೋಪಾಗ್ನಿಯಿಂದ
ನಿನ್ನನ್ನು ನಾನು ಬೂದಿಯಾಗಿ ಮಾಡುವ ಸಾಮರ್ಥ್ಯವು ನನ್ನಲ್ಲಿದ್ದರೂ
ಕೂಡ ನಿನ್ನ ವಿಷಯದಲ್ಲಿ ಮಾತ್ರ ಅಂತಹ ಕಾರ್ಯವನ್ನು ಮಾಡಲೊಲ್ಲೆನು
ಸೆತ್ಪುರುಷರು ಯಾರೊಡನೆ ಏಳುಹೆಜ್ಜೆ ನಡೆಯುತ್ತಾರೋ ಅಥವಾ ಏಳು
ಮಾತುಗಳನ್ನಾಡುವರೋ ಅಂತಹವರು ಸ್ನೇಹಿತರೆಂದು ಹೇಳುವರು. ನೀ
ನು ನನ್ನೊಡನೆ ನೂರಾರು ವರ್ಷಕಾಲ ವಾಸಮಾಡಿಕೊಂಡಿದ್ದೆ.ಮತ್ತು ನ
ನ್ನೊಡನೆಬಹುಕಾಲಪರ್ಯಂತ ಸರಸಸಲ್ಲಾಪಗಳನ್ನನುಭವಿಸಿದವಳಾಗಿರುವೆ
ಇದರಿಂದ ನೀನು ನನಿಗೆ ಸ್ನೇಹಿತಳಾಗಿರುವೆ. ಆದಕಾರಣ ಅಂತಹ ಸ್ನೇಹ
ಧರ್ಮಕ್ಕೆ ವಿರೋಧವಾಗಿ ನಾನುನಡೆಯುಲಾರೆನು ॥೪೧॥ ಅಥವಾ ಈ ವಿ
ಷಯದಲ್ಲಿ ನಿನ್ನ ಅಪರಾಧವೇನಿರುವುದು? ನಿಷ್ಫಲವಾಗಿ ನಿನ್ನಮೇಲೆ ಸಿ
ಟ್ಟುಗೊಂಡುತಾನೇ ಫಲವೇನು ನೀನು ನಸ್ಮನ್ನು ವ್ಯಾಮೋಹಪಡಿಸಲು

ಷಃ ಕಃ? ಕಿಂವಾ ಕುಪ್ಯಾ ವ್ಯಹಂತವ । ಮುನ್ಮೈವದೊಷೋತಿಕ
ರಾಂ ಯೇ ನಾಹ ಮು ಜಿತೇಂದ್ರಿಯಃ ॥೪೨॥ ಯುಷಾ ಶಕ್ರ ಪ್ರಿ
ಯಾ ರ್ಥಿನ್ಯಾ ಕೃತೋ ಮತ್ತಪಸೋ ವ್ಯಯಃ । ತ್ವಯಾ ಧಿ
ಕ್ತ್ವಾಂ ಮಹಾಮೋಹ ಮಂಜೂಷಾಂ ಸು ಜುಗುಪ್ಸಿತಾಂ ॥೪೩॥
ಸೋಮಃ ॥ ಯಾವ ದಿತ್ಥಂ ಸ ವಿಪ್ರರ್ಷಿ ಸತ್ತಾಂ ಬ್ರುವೀತಿ ಸು
ಮಧ್ಯ ಮಾಂ । ತಾವ ದ್ಗಳತ್ಸ್ವೇ ದ ಜಲಾಸಾ ಬಭೂವಾತಿ ವೇ
ಪಥುಃ ॥೪೪॥ ಪ್ರವೇಪ ಮಾನಾಂ ಸತದಾ ಸ್ವಿನ್ನ ಗಾತ್ರಲತಾಂ
ಸತೀಂ । ಗಚ್ಛ ಗಚ್ಛೇತಿ ಸ ಕ್ರೋಧ ಮುವಾ ಚ ಮುನಿಸತ್ತ

ನನ್ನಲ್ಲಿಗೆ ಬಂದಾಗ ನಿನ್ನನ್ನು ನಿಗ್ರಹಿಸದೆ ಪ್ರಾಕೃತನಂತೆ ನಿನ್ನನ್ನು ಕಂ
ಡೊಡನೆಯೇ ಧೈರ್ಯಗುಂದಿ ವಿವೇಕ ಭ್ರಷ್ಟನೆನಿಸಿ ಇಷ್ಟು ಕಾಲವು
ನ್ನೊಡನೆ ಸೇರಿದ್ದದ್ದು ನನ್ನದೋಷವೇ ಅಲ್ಲದೇ ಈ ವಿಷಯದಲ್ಲಿ ನೀನು
ಶಾನೇ ಏನು ಅಪರಾಧವಮಾಡಿದೆ. ನಾನು ಜಿತೇಂದ್ರಿಯನಲ್ಲದಕಾರಣ
ನನಗೆ ಇಷ್ಟು ಅನರ್ಥವು ಸಂಭವಿಸಿತು ॥೪೨॥ ನಾನು ನಿನ್ನೊಡನೆ ಸೇ
ರುವುದಕ್ಕಿಂತಲೂ ಮುಂಚೆ ನನಿಗೆ ಇಂದ್ರಿಯನಿಗ್ರಹವಿಲ್ಲದಿದ್ದರೂ ನನ್ನ
ಚಿತ್ತವುಮಾತ್ರ ವಿಕಾರಗೊಂಡಿರಲಿಲ್ಲಾ. ನಿನ್ನ ಸಮಾಗಮದಿಂದಲೇ ನನ್ನ
ಚಿತ್ತವು ಕ್ಷೋಭೆಗೊಂಡಿತು. ನೀನು ಇಲ್ಲಿ ಬಂದು ನಿನ್ನ ಶೃಂಗಾರಚೇ
ಷ್ಟೆಗಳಿಂದ ನನ್ನನ್ನು ಮೋಹಗೊಳಿಸಿ ನನ್ನ ತಪಸ್ಸನ್ನು ಹಾಳುಮಾಡಿರು
ವೆ. ಆದಕಾರಣ ವಿಶೇಷವಾದ ಮೋಹವೆಂಬ ದ್ರವ್ಯಕ್ಕೆ ಪೆಟ್ಟಿಗೆಯಂತಿ
ರುವ ನಿನ್ನನ್ನೆಷ್ಟು ಹೀಯಾಳಿಸಿದರೂ ಸಾಲದು. ನಿನ್ನ ಜನ್ಮವಂಶು
ಡು. ಇಂತಹ ಅಸಹ್ಯಕರಳಾದ ನಿನ್ನನ್ನು ಎಷ್ಟು ನಿರಾಕರಿಸಿದರೂ ಸ್ವಲ್ಪ
ವೇ ಸರಿ. ॥೪೩॥ ಸೋಮನು ಹೇಳುತ್ತಾನೆ -ಸೂಕ್ಷ್ಮವಾದ ಮಧ್ಯಪ್ರ
ದೇಶದಿಂದೊಡಗೂಡಿ, ಮನ್ಮಥನ ಒಡ್ಡಾನೆಯಂತೆ ಕಂಗೊಳಿಸುತ್ತಿರುವ
ಆ ಪ್ರಮ್ಲೋಚೆಯನ್ನು, ಮುನಿವರ್ಯನೆನಿಸಿದ ಆ ಕಂಡುಮುನಿಯು ಇಂತು
ಜರಿದು ಮಾತನಾಡುವಾಗ್ಗೆ ಆಕೆಯು ಭಯದಿಂದ ಗಡಗಡನೆ ನಡುಗುತ್ತಾ
ಏನೂ ತಿಳಿಯದವಳಂತೆ ನಿಂತಳು. ಆಕೆಯ ಶರೀರದಿಂದ ಭಯಜನ್ಯ
ವಾದ ಬೆವರು ನೀರು ಪ್ರವಾಹವಾಗಿ ಹರಿದುಹೋಯಿತು ॥೪೪॥ ತರುವಾ
ಯ ಮುನಿವರ್ಯನೆನಿಸಿದ ಆ ಕಂಡುಮುನಿಯು, ಇಂತು ಭಯದಿಂದ ನಡು
ಗುತ್ತಾ ನಿಂತಿರುವ, ಕೋಮಲವಾದ ಅನಯವಸನ್ನೆವೇಕದಿಂದೊಡಗೂಡಿ

ಮಃ ॥೪೫॥ ಸಾತು ನಿರ್ಭ ರ್ತ್ಸಿ ತಾ ತೇನ ವಿಸಿಷ್ಟ ಶಾಪ್ಯ ತದಾ
ಕ್ರಮಾತ್। ಆಕಾಶಗಾಮಿನೀ ಸ್ವೇದಂ ಮುಮೂರ್ಚ ತರುಪಲ್ಲವೈಃ॥
॥೪೬॥ ವೃಕ್ಷಾ ದ್ವೃಕ್ಷಂ ಯಾಯಾ ಬಾಲಾ ತದಗಾತ್ರಾರುಣ ಪಲ್ಲ
ವೈಃ । ನಿರ್ಯಾ ರ್ಜ ಮಾನಾ ಗಾತ್ರಾಣಿ ಗಳತ್ಸ್ವೇ ದ ಜಲಾನಿ
ವೈ ॥೪೭॥ ಋಷಿಣಾ ಯಸ್ತದಾ ಗರ್ಭ ಸ್ತಸ್ಯಾ ದೇಹೇ ಸಮಾ
ಹಿತಃ । ನಿರ್ಜಗಾಮು ಸರೋಮಾಂಚ ಸ್ವೇದ ರೂಪೀ ತ ದಂಗ

ಗಾಳಿಯಿಂದ ಮಿಸುಕುವ ಲತೆಯಂತೆ, ಈ ಕಂಡು ಮುನಿಯ ಶಾಪಭಯ ದಿಂದ ನಡುಗುತ್ತಾ ನಿಂತಿರುವ ಆ ವೋಹನಾಂಗಿಯಂ ಕುರಿತು, ಛೀ ! ನೀಚಳೆ, ತೆರಳು, ಇಲ್ಲಿ ಬಂದು ಕ್ಷಣಕಾಲ ಕೂಡ ನಿಲ್ಲಕೂಡದು. ತತ್ ಕ್ಷಣ ಹೊರಡು, ಎಂಬುದಾಗಿ ಅತ್ಯುಗ್ರವಾದ ಕೋಪದೊಡನೆ ಗದರಿಸಿದ ನು ॥೪೫॥ ಇಂತು ಆ ಕಂಡು ಮುನಿಯು ಗದರಿಸಿ ಮಾತನಾಡಿದೊಡನೆ ಯೇ ಆ ಅಪ್ಸರಸ್ತ್ರೀಯು ಅಲ್ಲಿನಿಲ್ಲದೆ ಕೂಡಲೆ ಆತನ ಆಶ್ರಮದಿಂದ ಹೊರಗೆ ಬಂದು ಆಕಾಶಮಾರ್ಗದಲ್ಲಿ ಹೊರಟು ದೇವಲೋಕಕ್ಕೆ ಹೋ ಗುತ್ತಾ, ತನ್ನ ಶರೀರದಲ್ಲಿ ಭಯದಿಂದುಂಟಾದ ಆ ಬೆವರು ನೀರನ್ನು ಮರ ಗಳ ಚಿಗುರುಗಳಿಂದ ಒರಸಿದಳು ॥೪೬॥ ಆಕೆಯು ಹೋಗುವಾಗ ದಾರಿ ಯೆಲ್ಲೆಲ್ಲಾ ಗಿಡದಿಂದಗಿಡಕ್ಕೆ ಹೋಗುತ್ತಾ, ಆ ಗಿಡಗಳ ತುದಿಯಲ್ಲಿರುವ ಕೆಂಪಾದ ಚಿಗುರುಗಳಿಂದ ತನ್ನ ಶರೀರದಲ್ಲಿ ಬಾರಿಬಾರಿಗೂ ಸ್ರವಿಸುತ್ತಿ ರುವ ಸ್ವೇದೋದಕವನ್ನು ಒರಸಿಕೊಳ್ಳುತ್ತಾ ಹೋಗುತ್ತಿದ್ದಳು ॥೪೭॥ ಈ ಪ್ರವೋಲೇಚೆಯು ಕಂಡು ಮುನಿಯ ಆಶ್ರಮದಿಂದ ಹೊರಟು ಹೋ ಗುವುದಕ್ಕಿಂತಲೂ ಮುಂಚೆಯೇ ಆತನ ಸಾನ್ನಿಧ್ಯದಿಂದ ಗರ್ಭವಂ ತಾ ಳಿದ್ದಳು. ಇಂತು ಕಂಡು ಮುನಿಯಿಂದ ತನ್ನಲ್ಲಿಧರಿಸಿದ್ದ ಆಗರ್ಭವು ಈ ಕೆಯು ಭಯಪಟ್ಟು ಹೋಗುವಾಗ ಬೆವರಿನರೂಪದಿಂದ ಹೊರ ಗೆ ಸ್ರವಿಸಿತು. (ಆದಕಾರಣ ಗರ್ಭಿಣೀಸ್ತ್ರಿಯರನ್ನು ವಿಶೇಷವಾಗಿ ಹೆದ ರಿಸಿ, ಗದರಿಸಿ ಮಾತನಾಡಿ, ಅವರಿಂದ ಕಷ್ಟಕೆಲಸಗಳನ್ನು ಮಾಡಿಸಿದರೆ ಆ ಗರ್ಭವು ದೇಹದಲ್ಲಿ ನಿಲ್ಲದೆ ಕದಲಿ ಸ್ರವಿಸಿ ಹೋಗುವಕಾರಣ, ಗ ರ್ಭಿಣಿಯರಾದ-ಹೆಂಗಸರನ್ನು ಇಂತಹ ದುರವಸ್ಥೆಗೆ ಒಳಪಡಿಸದಂತೆ ಜಾ ಗರೂಕರಾಗಿರಬೇಕೆಂದು ಭಾವವು) ॥೪೮॥ ಇಂತು ಆ ಪ್ರವೋಲೇಚೆಯು

ತಃ ॥೪ ॥ ತಂ ವೃಷ್ಣಾ ಜಗೃ ಹು ರ್ಗರ್ಭ ಮೇಕಂ ಚಕ್ರೇ ಚ
ಮಾರುತಃ । ಮಯಾ ಚಾ ಪ್ಯಾಯಿತೋ ಗೋಭಿ ಸ್ಸತದಾ ವವೃ
ಧೇ ಶನೈಃ ॥೪೯॥ ವೃಷ್ಣಾ ಗ್ರ ಗರ್ಭ ಸಂಭೂತಾ ಮಾರಿಷಾಖ್ಯಾ
ವರಾನನಾ । ತಾಂ ಪ್ರದಾಸ್ಯಂತಿ ವೋ ವೃಷ್ಣಾಃ ಕೋಪ ಏಷ
ಪ್ರಶಾಮ್ಯತಾಂ ॥೫೦॥ ಕಂಡೋ ರ ಪತ್ಯ ಮೇ ವಂಸಾ ವೃಷ್ಣೇ
ಭ್ಯಶ್ಚ ಸಮುದ್ಗತಾ । ಮಮಾ ಪತ್ಯಂ ತಥಾ ವಾಯೋಃ ಪ್ರ
ಮ್ಲೋ ಚಾ ತನಯಾ ಚ ಸಾ ॥೫೧॥ ಸ ಚಾಪಿ ಭಗವಾ ಕಂ

ತನ್ನಲ್ಲಿದ್ದ ಗರ್ಭವು ಬೆವರಿನ ರೂಪದಿಂದ ಹೊರಗೆ ಬಂದ್ದುದಂ ಗಿಡಗಳೆ ತುದಿಯಲ್ಲಿರುವ ಚಿಗುರುಗಳಿಗೆ ಒರಸಿ ಹೊರಟುಹೋದ ಬಳಿಕ ಅಲ್ಲಲ್ಲಿ ಅಂಟಿಕೊಂಡಿದ್ದ ಆಬೆವರನ್ನು ವೃಷ್ಣಿಗಳು ಕೆಳಗೆ ಬೀಳದಂತೆ ಧರಿಸಿದ್ದವು. ಅದನ್ನೆಲ್ಲಾ ಗಾಳಿಯು ಬಂದು ಕಡೆ ಸೇರಿಸಿದನು. ಇದನ್ನು ಕಂಡು ಕನಿ ಕರದಿಂದ ಸಾನೂ ಕೂಡ ನನ್ನ ಅಮೃತಮಯಗಳೆನಿಸಿದ ಕಿರಣಗಳಿಂದ ಪೋಷಿಸಿದೆನು. ಇಂತು ಆಗರ್ಭವು ಮೆಲ್ಲಮೆಲ್ಲನೆ ಬೆಳೆಯುತ್ತ ಬಂದಿತು ॥ ಇಂತು ಗಿಡಗಳ ತುದಿಯಿಂದ ಜನಿಸಿದ,ಮಾರಿಷೆ ಎಂಬ ಹೆಸರುಳ್ಳ ಈ ಕ ಮಲಮುಖಿಯನ್ನು,ಈಗ ಗಿಡಗಳೆಲ್ಲವೂ ಸೇರಿ ನಿಮ್ಮ ಭೀತಿಯಂ ತಪ್ಪಿ ಸಿಕೊಳ್ಳಲು ನಿಮಗೆ ಕೊಡುತ್ತವೆ. ಆದುದರಿಂದ ನೀವು ಈ ಕೆಯನ್ನು ಪರಿಗ್ರಹಿಸಿ, ಈ ವೃಷ್ಣಿಗಳನ್ನು ನಿರ್ಮೂಲಮಾಡದೆ ನಿಮ್ಮ ಕೋಪವ ನ್ನು ಶಾಂತಮಾಡಿಕೊಳ್ಳಿರಿ ॥೫೦॥ ಇಂತುಕಂಡು ಮುನಿಯಿಂದ ಪ್ರಮ್ಲೋ ಚೆಯಲ್ಲಿ ಜನಿಸಿದ ಈ ಕನ್ಯಾರತ್ನವು ಅವರಿಬ್ಬರಿಗೆ ಮಾತ್ರವೇ ಮಗಳಲ್ಲ. ಗಿಡಗಳು ಬೆವರಿನರೂಪದಿಂದ ಈಕೆಯನ್ನು ಧರಿಸಿ, ಸಲಹಿದ ಕಾರಣ ಈ ಕೆಯು ಗಿಡಗಳಿಗೂ ಕೂಡ ಮಗಳೆನಿಸುವಳು. ವಾಯುವು, ಚದರಿ ದ್ದ ಈ ಗರ್ಭವನ್ನು ಬಂದು ಕಡೆ ಸೇರಿಸಿದ ಕಾರಣ, ಈಕೆಯು ವಾ ಯುತನಯಳೆನಿಸುವಳು. ನಾನು ಅಮೃತಮಯಗಳಾದ ನನ್ನ ಕಿರಣಗ ಳಿಂದ ಆಪ್ಯಾಯನಮಾಡಿದ ಕಾರಣ ನನಗೂ ಕೂಡ ಈಕೆಯು ಮಗಳಾ ಗಿರುವಳು. ಆದುದರಿಂದ ನೀವು ಈಕೆಯನ್ನು ಪರಿಗ್ರಹಿಸಿರಿ. ॥೫೧॥ ಹಾಗಾದರೆ 'ಯೋಗಭ್ರಷ್ಟನೆನಿಸಿದ ಆ ಕಂಡು ಮುನಿಯ ಕನ್ಯೆಯಾದ ಈ ಮಾರಿಷೆಯಂ ನಾವು ಪರಿಗ್ರಹಿಸುವುದೆಂತು ? ಎಂಬುದಾಗಿ ಸಂದೇಹ

ಡುಃ ಕ್ಷೀಣೇ ತಪಸಿ ಸತ್ತ ಮಃ । ಪುರುಷೋತ್ತಮಾಖ್ಯ ಮದ್ರೀ
ಶಂ ವಿಷ್ಣೋ ರಾಯ ತನಂ ಯಯೌ॥೫೨॥ತತ್ರೈ ಕಾಗ್ರ ಮತಿ
ರ್ಭೂತ್ವಾ ಚ ಕಾ ರಾ ರಂಭನಂ ಹರೇಃ ॥ ಬ್ರಹ್ಮ ಪಾರ ಮು
ಯಂ ಕುರ್ವ ಜಪಮೇ ಕಾಗ್ರ ಮಾನಸಃ ॥ ಊರ್ಧ್ವ ಬಾಹು
ರ್ಮಹಾ ಯೋಗೀ ಸ್ಥಿತ್ವಾಽಸೌ ಭೂಪ ನಂದನಾಃ ॥೫೪॥ ಪ್ರಜೇ
ತಸ ಊಚುಃ ॥ ಬ್ರಹ್ಮ ಪಾರಂ ಮುನೇ ಕ್ಯೇತ್ರತು ಮಿಚ್ಛಾ
ಮಃ ಪರಮಂ ಸ್ತವಂ । ಜಪತಾ ಕಂಡುನಾದೇವೋಯೇನಾ

ಪಡಬೇಡಿರಿ. ಇಂತು ಪ್ರವೃತ್ತೀಚೆಯಿಂದ ನ್ನ ಹಿಂದಿನ ತಪವೆಲ್ಲವೂ ನಷ್ಟವಾದುದಂ ಕಂಡು, ಷಡ್ಗುಣೈಶ್ವರ್ಯ ಸಂಪನ್ನನೂ. ತಪೋನಿರತನೂ ಎನಿಸಿದ ಈ ಕಂಡು ಮುನಿಯು ಮರಳಿ ತಪಸ್ಸುಮಾಡುವುದಕ್ಕಾಗಿ, ವಿಷ್ಣು ಸಾನ್ನಿಧ್ಯಕ್ಕೆ ಮೊದಲನೆಯದೆನಿಸಿ, ಲೋಕಪ್ರಸಿದ್ಧವಾದ, ಪುರುಷೋತ್ತಮವೆಂಬ ಹೆಸರುಳ್ಳ ಪರ್ವತಶ್ರೇಷ್ಠವಂ ಕುರಿತುತೆರಳಿದನು॥೫೩॥ಆ ಪರ್ವತದಲ್ಲಿ ಏಕಾಗ್ರಚಿತ್ತನೆನಿಸಿ ಪರಮೇಶ್ವರನನ್ನಾರಾಧಿಸುತ್ತಾ ಎಲ್ಲ ಇಂದ್ರಿಯಗಳನ್ನೂ ಆತನಲ್ಲಿಯೇ ಲಯಗೊಳಿಸಿ, ಚತುರ್ಮುಖನೇ ಮೊದಲಾಗಿ ಎಲ್ಲಾಪದಾರ್ಥಗಳಲ್ಲಿಯೂ ತಾನೇ ನಾನಾರೂಪದಿಂದ ನೆಲೆಸಿರುವ ಕಾರಣ " ಬಹ್ಮ,, ನೆಂತಲೂ, ಸಂಸಾರವೆಂಬಕಡಲಿಗೆ ದಡದಂತಿರುವ ಕಾರಣ ,, ಪಾರ ,, ನೆಂತಲೂ ವ್ಯವಹಾರ ವಿಷಯನಾಗಿರುವ, ಅಥವಾ ಬಹ್ಮ ಶಬ್ದ ವಾಚ್ಯವಾದ ವೇದಕ್ಕೆ ಮುಖ್ಯ ತಾತ್ಪರ್ಯವಿಷಯನಾಗಿರುವ, ಅಥವಾ ವೇದಗಳಿಗೆ ಪಾರವೆನಿಸಿದ ವೇದಾಂತಶಾಸ್ತ್ರದಿಂದ ಪ್ರತಿಪಾದ್ಯನಾದ, ಆ ಪರವಸ್ತುವನ್ನೇ ಅನವರತವೂ ಸ್ತವನ ಮಾಡುತ್ತಾ, ತನ್ನ ತೋಳುಗಳನ್ನು ಮೇಲಕ್ಕೆ ಎತ್ತಿಕೊಂಡು ಮಹಾಯೋಗಿಎನಿಸಿ, ತೀವ್ರವಾಗಿ ತಪಸ್ಸನ್ನಾಚರಿಸ ತೊಡಗಿದನು ॥೫೪॥ ಪ್ರಜೇತಸರು ಹೇಳುತ್ತಾರೆ:— ಎಲೈ ಓಷಧೀಶನೆನಿಸಿದ ಸೋಮನೆ; ಬ್ರಹ್ಮಪಾರವೆಂಬ ಜಪವನ್ನು ಮಾಡಿ ಕಂಡು ಮುನಿಯು ಪರಮಾತ್ಮ ರೂಪಿಯಾದ ಕೇಶವನನ್ನು ಆರಾಧಿಸಿದನೆಂದು ಹೇಳುವೆಯಲ್ಲವೆ ? ಹಾಗಾದರೆ, ಆ ಜಪವು ಯಾವುದು? ಅವನು ಸ್ತೋತ್ರಮಾಡಿದ ಪರಿಯೆಂತು? ಇಂತಹ ದಿವ್ಯಸ್ತೋತ್ರವನ್ನು ನಮಿಗೆ ತಿಳಿಸುವವನಾಗು. ॥೫೪॥ ಸೋಮನು ಹೇಳುತ್ತಾನೆ :—

ಸರ್ವವ್ಯಾಪಕನೆನಿಸಿದ ಆ ವಿಷ್ಣುವು ನಿರತಿಶಯವಾದ ಮಹಿಮೆಯಿಂದೊಡಗೂಡಿದವನು. ಆವೃತ್ತಿರಹಿತನು. ಸಂಸಾರವೆಂಬ ಸಮುದ್ರಕ್ಕೆ ದಡದಂತಿರುವನು. ಆತನಿಗಿಂತಲೂ ಆಚೆಮಾರ್ಗವೇ ಇಲ್ಲ. ಆತನೇ ಕೊನೆಯಲ್ಲಿರುವನು. ಇದೇ ಅರ್ಥವನ್ನೇ ''ಸೋಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಂ'' ಎಂಬದಾಗಿ ಕಠೋಪನಿಷತ್ತಿನಲ್ಲಿ ಹೇಳಿದೆ. ಇಂತು ಈತನು ಕಡೆಹಾಯಲು ಕಷ್ಟಸಾಧ್ಯವಾಗಿರುವ ಸಂಸಾರವೆಂಬ ಮಾರ್ಗಕ್ಕೆ ಕೊನೆಯಲ್ಲಿರುವ ಕಾರಣ ಈತನನ್ನು ಹೊಂದುವುದೂ ಕೂಡ ಅಸಾಧ್ಯವಾಗಿರುವುದು. ಆದುದರಿಂದ ಈತನನ್ನು ಅಪಾರಪಾರನೆನ್ನುವರು. ಹಾಗಾದರೆ ದಿನಕ್ರಮೇಣ ಸ್ವಲ್ಪ ಸ್ವಲ್ಪವಾಗಿ ನಡೆಯುತ್ತಾ ದೀರ್ಘಕಾಲವಾದ ಬಳಿಕಲಾದರೂ ಆತನನ್ನು ಹೊಂದಬಹುದಲ್ಲವೆ ? ಎಂದರೆ ಅದೂ ಕೂಡ ಸಾಧ್ಯವಲ್ಲ. ಏಕೆಂದರೆ, ಪರಶಬ್ದದಿಂದ ಕರೆಯಿಸಿಕೊಳ್ಳುವ ಆಕಾಶಾದಿಗಳಿಗಿಂತಲೂ ಭಿನ್ನನಾಗಿ ಬಹುದೂರದಲ್ಲಿರುವನು. ಆದುದರಿಂದ ಈತನ ಮಹಿಮೆಯು ಅಗೋಚರವಾಗಿರುವುದು. ಆದಕಾರಣ ಈತನು ಅನಂತನೆನಿಸುವನು. ಆದುದರಿಂದಲೇ (ಇಂತು ಅನಂತನೂ, ಅಪಾರಪಾರನೂ, ಪರಪಾರನೂ ಆಗಿರುವಕಾರಣ) ಸತ್ಯಸ್ವರೂಪನೆನಿಸುವನು. ಅಥವಾ ಅರ್ಥಶಬ್ದಕ್ಕೆ ಪ್ರಯೋಜನವೆಂದು ಅರ್ಥವು. ಅಂತಹ ಪ್ರಯೋಜನಗಳಲ್ಲಿ ನಾಶರಹಿತವಾದ ಪ್ರಯೋಜನವು ಮೋಕ್ಷನಲ್ಲದೆ ಬೇರೆಯಲ್ಲ, ಇಂತಹ ಪರಮಾನಂದಸ್ವರೂಪವೆನಿಸಿದ ಮೋಕ್ಷವೇ ಆತನಿಗೆ ರೂಪವಾಗಿರುವ ಕಾರಣ ಈತನನ್ನು ಪರಮಾರ್ಥರೂಪಿ ಎಂದು ಕರೆವರು. ಈತನು ಕಂಣಿಗೆ ಕಾಣಿಸುವುದಿಲ್ಲ ಹೀಗಿರಲು ಈತನನ್ನು ಪರಮಪುರುಷಾರ್ಥವೆನಿಸಿದ ಮೋಕ್ಷಸ್ವರೂಪನೆಂತಲೂ ಸಂಸಾರಮಾರ್ಗಕ್ಕೆ ಕೊನೆಯಲ್ಲಿರುವನೆಂತಲೂ ಕೂಡಹೇಳುವುದೆಂತು? ಶ್ರುತಿಯೂ ಕೂಡ ''ಸೋಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂಪದಂ'' ಎಂಬದಾಗಿ ಹೇಳಿರುವುದಲ್ಲಾ ಇದುತಾನೇ ಹೇಗೆ ಸಮಂಜಸವಾಗುವುದೆಂದು ಭ್ರಾಂತಿಗೊಳ್ಳಬೇಡಿರಿ. ಬ್ರಹ್ಮಶಬ್ದ ವಾಚ್ಯವಾದ ವೇದ, ಅಥವಾ ತಪಸ್ಸುಗಳಲ್ಲಿ ಅನುದಿನವೂ ಆಸಕ್ತರೆನಿಸಿ ಅವುಗಳನ್ನೇ ನಿರಂತರವೂ ಆಚರಣೆಯಲ್ಲಿಟ್ಟುಕೊಂಡಿರುವ ಕಾರಣ ಸಬ್ರಹ್ಮರೆನಿಸಿದ

ರಾಧ್ಯತ ಕೇಶವಃ ॥೫೪॥ ಸೋಽಯಂ ॥ ಪರಾ ಪರಂ ವಿಷ್ಣು
ರ ಪಾರ ಪಾರಃ ಪರಃ ಪರೇ ಭ್ಯಃ ಪರಮಾರ್ಥ ರೂಪೀ । ಸ
ಬ್ರಹ್ಮ ಪಾರಃ ಪರ ಪಾರ ಭೂತಃ ಪರಃ ಪರಾಣಾಮಪಿಪಾರ

ಮುಮುಕ್ಷುಗಳಿಂದ ಹೊಂದಲು ಸಾಧ್ಯನು ,, ನಾಯಮಾತ್ಮಾ ಪ್ರವಚ
ನೇನ ಲಭ್ಯಃ ” ಇತ್ಯಾದಿ ಶ್ರುತಿಯಲ್ಲಿ ಹೇಳಿರುವಂತೆ ಕೇವಲ ವೇದಪಾ
ಠದಿಂದಲಾಗಲಿ, ಬುದ್ಧಿ ಕಾರ್ಯ್ಯಗಳಿನಿಸಿದ ತರ್ಕಗಳಿಂದಲಾಗಲಿ, ಸಕಲ
ಶಾಸ್ತ್ರಗಳನ್ನೂ ಓದಿ ವಾದಮಾಡುವುದರಿಂದಲಾಗಲಿ ಆತನನ್ನು ಹೊಂದಲು
ಸಾಧ್ಯವಲ್ಲ. ವೇದ ಶಾಸ್ತ್ರಗಳನ್ನು ಅಭ್ಯಾಸಮಾಡಿದುದಕ್ಕನುಗುಣವಾಗಿ
ಅವುಗಳ ಮುಖ್ಯತಾತ್ಪರ್ಯ್ಯವನ್ನು ಶಾಂತವಾದ ಮನಸ್ಸಿನಿಂದ ಯೋಚಿಸತ
ಕ್ಕ ಮುಮುಕ್ಷುಗಳಿಗೆ ಈತನು ಹೊಂದಲು ಯೋಗ್ಯನು. ಆದುದರಿಂದಲೇ
ಈತನಿಗೆ ಸಬ್ರಹ್ಮಪಾರನೆಂದು ವ್ಯವಹಾರವು ಪರಶಬ್ದವಾಚ್ಯವೆನಿಸಿದ
ಅನಾತ್ಮಪ್ರಪಂಚಕ್ಕೆ ಈತನು ಅವಧಿರೂಪ (ಕೊನೆ) ನಾಗಿರುವುದರಿಂದ
ಈ ವ್ಯವಹಾರವು ಬಂದಿತು. ಆತ್ಮವಿಷಯವಾಗಿ ವಿಚಾರಮಾಡುವ ಕಾ
ಲದಲ್ಲಿ ಮೊಟ್ಟಮೊದಲು ಇವೇ ಆತ್ಮತತ್ವಗಳೆಂದು ತಿಳಿದುಬರುವ ಇಂ
ದ್ರಿಯಗಳು, ಇಂದ್ರಿಯಾರ್ಥಗಳು, ಮನಸ್ಸು, ಬುದ್ಧಿ, ಮಹತ್ತತ್ವ, ಅ
ಹಂಕಾರ, ವಿರಾಟ್ ಪುರುಷರುಗಳಿಗಿಂತಲೂ ಭಿನ್ನನೆನಿಸಿ ನಿರುಪಾಧಿಕ
ನಾಗಿರುವ ಕಾರಣ ,, ಇಂದ್ರಿಯೇಭ್ಯಃ ಪರಾಹ್ಯರ್ಥಾ, ಎಂದು ಮೊದ
ಲುಮಾಡಿ ,, ಸಾಕಾಷ್ಠಾ ಸಾಪರಾಗತಿಃ” ಆತನೇ ದಾರಿಗೆ ಕೊನೆಯಾಗಿ
ರುವನು, ಆ ಪರತತ್ವಕ್ಕಿಂತಲೂ ಅಚೆಯಾಗಲಿ ವೇ ಇಲ್ಲ, ಎಂಬದಾಗಿ
ಶ್ರುತಿಯೂ ಕೂಡ ಹೇಳುತ್ತಿರುವುದು. ದುರಂತವೆನಿಸಿದ (ಕೊನೆಗಾಣಲ
ಶಕ್ಯವಾದ) ಸಂಸಾರಕ್ಕೆ ಪಾರಭೂತನೂ, ಹೊಂದಲಶಕ್ಯವಾದ (ತಿಳಿ
ಯಲಶಕ್ಯವಾದ) ಕೊನೆಯುಳ್ಳವನೂ, (ನಿಷ್ಕೃತಿಯುಳ್ಳವನೂ) ಪರಮಾ
ರ್ಥರೂಪಿಯೂ, ಆವೃತ್ತಿಶೂನ್ಯನೂ ಎನಿಸಿದ ಆಪರಮಾತ್ಮನನ್ನು ಹೊಂ
ದಬೇಕಾದರೆ ಊರಿಂದೂರಿಗೆ ನಡದುಕೊಂಡು ಹೋಗುವಂತೆ ಅಜ್ಞಾರಿ
ಗೆ ಸಾಧ್ಯವಲ್ಲ. ಇಂತು ಆತ್ಮಜ್ಞಾನಶೂನ್ಯರಿಗೆ ಅತಿದೂರದಲ್ಲಿರತಕ್ಕವನಾ
ದರೂ ತಪಸ್ಸು ಮತ್ತು ವೇದಾರ್ಥಮನನಗಳಲ್ಲಿ ಅನುದಿನವೂ ನಿರತರಾದ
ಮುಮುಕ್ಷುಗಳು, ತಪಸ್ಸು, ವೇದಾರ್ಥ ಚಿಂತನ ಇವುಗಳಿಂದ ಸ್ವಲ್ಪಸ್ವ

ಪಾರಃ ॥೫೪॥ ಸ ಕಾರಣಂ ಕಾರಣ ತಸ್ತತೋಽಪಿ ತಸ್ಯಾಪಿ ಹೇ
ತುಃ ಪರಹೇತು ಹೇತುಃ । ಕಾರ್ಯೇಷು ಚೈವಂ ಸಹ ಕರ್ಮ ಕರ್ತೃ
ರೂ ಪೈರ ಶೇಷೈ ರವತೀಹ ಸರ್ವಂ ॥೫೬॥ ಬ್ರಹ್ಮ ಪ್ರಭು ಬ್ರ್ಯ

ಲ್ಪವಾಗಿ ಜ್ಞಾನವನ್ನು ವೃದ್ಧಿಪಡಿಸಿಕೊಂಡು ಕ್ರಮಕ್ರಮವಾಗಿ ಅನಾತ್ಮಗ
ಳೆನಿಸಿದ ಇಂದ್ರಿಯಾದಿಗಳನ್ನು ಆತ್ಮತತ್ವವಲ್ಲವೆಂದು ತಿಳದು ದೂರಮಾ
ಡಿ ಆ ನಿಜತತ್ವವನ್ನರಿಯುವರು. ಇಂತು ಉಪಾಧಿಪರಿಚ್ಛೇದಶೂನ್ಯನಾಗಿ
ರುವಕಾರಣ(ಈತನಿಗೆ ಮತ್ತೊಂದು ಆಶ್ರಯ,ಪರಿಮಾಣವಿಲ್ಲದಿರುವಕಾರ
ಣ)ಅಪ್ರತಿಹತವೆನಿಸಿ,ವಾಙ್ಮಾನಸಗಳಿಗೆ ಅಗೋಚರವಾದ ನಿರತಿಶಯೈಶ್ವ
ರ್ಯಶಾಲಿಯಾಗಿರುವ ಈ ಪರಮಾತ್ಮನನ್ನು ಅಂತರ್ಮುಖಿಗಳೆನಿಸಿದ ಯೋಗಿ
ಗಳು ಸುಲಭವಾಗಿ ತಿಳಯುವರು. ಬಹಿರ್ಮುಖಿಗಳಾದ ಮೂಢರು ಎಷ್ಟು
ದೀರ್ಘಕಾಲ ಯಾವಯಾವವಿಧವಾಗಿ ಪ್ರಯತ್ನಿಸಿದರೂ ಅವರುಆತನನ್ನು
ಹೊಂದಲಾರರೆಂದು ಭಾವವು ಪಾರಪಾರಃ ಎಂಬ ಸ್ಥಳದಲ್ಲಿ ಪಾರಶಬ್ದ
ಕ್ಕೆ ಪಾಲಕ ಅಥವಾ ಪೂರಕನೆಂದರ್ಥವು. ಲೋಕವನ್ನು ಕಾಪಾಡಿ ಅ
ಭಿವೃದ್ಧಿಪಡಿಸುವ ಕಾರಣ ಪಾರರೆನಿಸುವ ಇಂದ್ರ, ಬ್ರಹ್ಮ, ಮೊದಲಾ
ದವರಿಗೂ ಕೂಡ ಪಾಲಕನೆನಿಸಿ ತನ್ನ ಅಂಶದಿಂದಲೇ ಅವರುಗಳನ್ನು
ಲೋಕದಲ್ಲಿ ತುಂಬಿರುವ ಕಾರಣ ಈ ಪರಮಾತ್ಮನನ್ನು ಪಾರಪಾರನೆ
ನ್ನುವರು. ಚತುರ್ಮುಖ, ಇಂದ್ರ ಮೊದಲಾದವರನ್ನೂ ಕೂಡ ತಾನೇ
ಉಂಟುಮಾಡಿ, ತನ್ನ ಅಂಶವನ್ನು ಅವರಲ್ಲಿರಿಸಿ ಆ ಆಕಾರ್ಯಗಳನ್ನು ಅವ
ರವರಿಂದ ಮಾಡಿಸುತ್ತಾ ತಾನು ಮಾತ್ರ ಯಾವುದಕ್ಕೂ ಒಳಗಾಗದೆ ನಿರ್ಲಿ
ಪ್ತನೆನಿಸಿಕೊಂಡು ಸರ್ವ ಕಾಲದಲ್ಲಿಯೂ ಆನಂದ ಘನನೆನಿಸಿರುವನೆಂದು
ಭಾವವು ॥೫೫॥

ಎಲೈ ಪ್ರಚೇತಸರಿರಾ; ತಪೋನಿರತನೆನಿಸಿದ ಆ ಕಂಡುಮುನಿಯು
ವಿಶುದ್ಧರೂಪದಿಂದ ಪರಮಾತ್ಮನನ್ನು ಸ್ತೋತ್ರಮಾಡಿ ಬಳಿಕ ಆತನು ಸ
ರ್ವಾತ್ಮಕನಾಗಿರುವುದರಿಂದ ಆತನ ಲೀಲಾವಿಭೂತಿಯನ್ನು ವರ್ಣಿಸಲುಪ
ಕ್ರಮಿಸುತ್ತಾನೆ : — ಪುತ್ರರು, ಪೌತ್ರರು ಮೊದಲಾಗಿ ಪ್ರವಾಹರೂಪ
ದಿಂದಿರುವ ಸೃಷ್ಟಿಗೆ ಕಾರಣ ಭೂತನೆನಿಸಿದ ಚತುರ್ಮುಖನಿಗೂ, ಆ ಚ
ತುರ್ಮುಖನ ಉತ್ಪತ್ತಿಗೆ ಕಾರಣವೆನಿಸಿದ ಬ್ರಹ್ಮಾಂಡಕ್ಕೂ, ಆ ಬ್ರಹ್ಮಾಂ

ಡೋತ್ಪತ್ತಿಗೆ ಹೇತುಭೂತಗಳೆನಿಸಿದ ಮಹಾಭೂತಗಳಿಗೂ, ಇಂತಹ ಮಹಾಭೂತೋತ್ಪತ್ತಿಗೆ ಕಾರಣಭೂತಗಳಾದ ಸೂಕ್ಷ್ಮಭೂತಗಳಿಗೂ, ತತ್ಕಾರಣವೆನಿಸಿದ ಅಹಂಕಾರಕ್ಕೂ, ಇಂತಹ ಅಹಂಕಾರ ಕಾರಣವೆನಿಸಿದ ಮಹತ್ತತ್ವಕ್ಕೂ ಮಹತ್ತತ್ವಕಾರಣಭೂತವೆನಿಸಿದ ಮೂಲಪ್ರಕೃತಿಗೂ ಕೂಡ ಆ ಪರಮಾತ್ಮನೊಬ್ಬನೇ ಮೂಲಕಾರಣನಲ್ಲದೆ ಆತನಿಗೆ ಮಾತ್ರ ಯಾವಕಾರಣವೂ ಇಲ್ಲವು. (ಆತನುಬೇರೊಂದುಕಾರಣದಿಂದಜನಿಸಿದವನಲ್ಲ. ತಾನಾಗಿಯೇ ಮೆರೆಯುತ್ತಿರುವನೆಂದು ಭಾವವು) ಈ ಹಿಂದೆ ಹೇಳಿದಂತೆ ಎಲ್ಲಾ ಕಾರಣಗಳಿಗೂ ಆತನೇ ಎಂತುಮೂಲಕಾರಣನಾಗಿರುವನೋ ಅಂತೆಯೇ ಕಾರ್ಯಗಳೆನಿಸಿದ ಪ್ರಕೃತಿಕಾರ್ಯರೂಪವಾದ ಮಹತ್ತತ್ವವೊದಲ್ಗೊಂಡು ಚರವು ಕಾರ್ಯ ಪರ್ಯಂತವೆನಿಸಿದ, ಕಾರ್ಯ ಮೂಲಾರೂಪದಿಂದಲೂ ಕೂಡ ಆತನೇ ಈ ಚರಾಚರಗಳನ್ನೂ ಆವರಿಸಿರುವನು. ಅದೇ ತೆಂದರೆ; ಮಹತ್ತತ್ವವು ಪ್ರಕೃತಿಯಿಂದುಂಟಾಗುವಕಾರಣ ಅಂತಹ ಮಹತ್ತತ್ವವು ಪ್ರಕೃತಿಕಾರ್ಯವೆನಿಸುವುದು. ಅಹಂಕಾರವು ಮಹತ್ತತ್ವಕಾರ್ಯವಾಗಿರುವುದು.ಸೂಕ್ಷ್ಮಭೂತಗಳು(ತನ್ಮಾತ್ರೆಗಳು) ಅಹಂಕಾರಕಾರ್ಯಗಳಾಗಿರುವವು. ಮಹಾಭೂತಗಳು, ಈ ಸೂಕ್ಷ್ಮ ಭೂತಕಾರ್ಯಗಳು ಮಹಾಭೂತ ಸಮುದಾಯದಿಂದುಟಾಗುವ ಬ್ರಹ್ಮಾಂಡವು ಮಹಾಭೂತ ಕಾರ್ಯವೆನಿಸುವುದು.ಆ ಬ್ರಹ್ಮಾಂಡದಿಂದುಟಾಗುವ ಬ್ರಹ್ಮ,(ಚತುರ್ಮುಖ) ವೊದಲಾದವರು ಬ್ರಹ್ಮಾಂಡಕಾರ್ಯರೆನಿಸುವರು. ತರುವಾಯ ಈ ಜಗತ್ತೆಲ್ಲವೂ ಚತುರ್ಮುಖನಕಾರ್ಯವಾಗಿರುವುದು. ಇಂತಹ ಪ್ರಪಂಚವೆಲ್ಲವೂ ಸರ್ವವ್ಯಾಪಕನೆನಿಸಿದ ಆಪರಮಾತ್ಮನಿಗೆ ಆವಾಸಭೂತವಾಗಿರುವುದರಿಂದ ಆತನೇ ಎಲ್ಲಾಕಾರ್ಯರೂಪಳಿಂದಲೂ ಇರುವನು. ಇಂತು ಕಾರಣ ರೂಪನೂ,ಕಾರ್ಯರೂಪನೂ ಆಗಿರುವವನು. ಆ ಪರಮಾತ್ಮನೊಬ್ಬನಲ್ಲದೆ ಆತನಿಗಿಂತಲೂ ಬೇರೆ ಕಾರಣವೂ ಕಾರ್ಯವೂ ಕೂಡ ಇಲ್ಲವು, (ಇಂತು ಸೃಷ್ಟಿಕ್ರಿಯೆಯಲ್ಲಿ ಆ ಪರಮಾತ್ಮನು ಉಪಾದಾನಕಾರಣಭೂತನೆಂದು ಹೇಳಿದುದರಿಂದ ಆತನು ಸರ್ವಾತ್ಮಕನೆಂದು ಹೇಳಿದಂತಾಯಿತು. ಇನ್ನು ಮುಂದೆ ಪಾಲನಕ್ರಿಯೆ) (ಸ್ಥಿತಿಕಾರ್ಯ) ಯಲ್ಲಿ ಪರಿಪಾಲಿಸುವವನೂ, ಪಾಲನೆಯನ್ನು ಹೊಂದತಕ್ಕವನೂ ಕೂಡ ಆ ಪರಮಾತ್ಮನೇ ಎಂಬದಾಗಿ

ವಿಕದಪಡಿಸಿ ಆ ಮೂಲಕವಾಗಿಯೂ ಈ ತನುಸರ್ವಾತ್ಮಕನೆಂದು ಹೇಳಲು ಪಕ್ರಮಿಸುತ್ತಾನೆ) ಸರ್ವವ್ಯಾಪಕನೆನಿಸಿದ ಆ ವಿಷ್ಣುವೊಬ್ಬನೇ ಪಾಲನೆಯುಂಹೊಂದುವವನೂ, ಪರಿಪಾಲನೆಮಾಡತಕ್ಕ ಇಂದ್ರಾದಿರೂಪದಿಂದಿರುವವನೂ ಆಗಿರುವನು. ಕಾರ್ಯವನ್ನು ಮಾಡುವ ಕರ್ತೃವೂ, ಕಾರ್ಯವನ್ನು ಹೊಂದುವ ಕರ್ಮವೂ ಕೂಡ ಆತನೇ ಆಗಿರುವನು. (ಉಪಕಾರಮಾಡುವವನೂ ಉಪಕಾರವನ್ನು ಹೊಂದುವವನೂ ಇವರಿಬ್ಬರಲ್ಲಿಯೂ ಆತನೇ ನೆಲೆಸಿರುವ ಕಾರಣ) ಕರ್ತೃ ಕರ್ಮಗಳೆರಡೂ ಆತನ ಅಂಶಗಳೇ ಆಗಿರುವುವು. ಅಂದರೆ ಕರ್ಮ ರೂಪಗಳೆನಿಸಿದ ಮಾನುಷಾನಂದ, ಮನುಷ್ಯ ಗಂಧರ್ವಾನಂದ, ದೇವಗಂಧರ್ವಾನಂದ ಮೊದಲ್ಗೊಂಡು ಬ್ರಹ್ಮಾನಂದದವರೆಗೂ ಇರುವ ಆನಂದಗಳೂ, ಬ್ರಹ್ಮಾನಂದವೂ ಕೂಡ ಆತನೇ ಆಗಿರುವನು. ಅಂತೆಯೇ ಕರ್ತೃಗಳೆನಿಸಿದ ಮಾನುಷರು, ಮನುಷ್ಯ ಗಂಧರ್ವರು, ದೇವಗಂಧರ್ವರು, ಮೊದಲಾದರೂಪದಿಂದ ಆತ್ಯಂತಿಕ ಪ್ರಳಯವೆನಿಸಿ ಮಹಾನಂದವೆಂದು ಕರೆಯಲ್ಪಡುವ ಮೋಕ್ಷವೆಂಬ ಪರಮಪುರುಷಾರ್ಥವನ್ನು ಸಾಧಿಸುವ ಕರ್ತೃರೂಪಿಯೂ ಕೂಡ ಆತನೇ ಆಗಿರುವನು ॥೫೬॥

ಪ್ರಜೇತಸರು ಕೇಳುತ್ತಾರೆ. ಜಗತ್ತಿನ ಸ್ಥಿತಿಕರ್ತೃವೆನಿಸಿದ ವಿಷ್ಣುವೇಷದ ಪರಬ್ರಹ್ಮನಾಗಿದ್ದಲ್ಲಿ ನಿರ್ಗುಣನಾಗಿರುವ ಆತನು ಅನೇಕ ರೂಪಗಳಿಂದ ಈ ಪ್ರಪಂಚವನ್ನು ಸಲಹುವನೆಂದು ಹೇಳುವುದೆಂತು? ಆಪರಮಾತ್ಮನಿಗೆ ರೂಪಾದಿಗಳು ಇಲ್ಲವಲ್ಲಾ ! ಹಾಗಲ್ಲದೆ ಆತನೇ ಸರ್ವಾತ್ಮಕನೆಂದು ಹೇಳಿದರೆ ಆತನಿಗೆ ಸರ್ವ ಭಾವವಿಕಾರಗಳು ಇರಬೇಕಾಗುವುವು. ಹಾಗೆ ಆತನೇ ಸರ್ವಭಾವವಿಕಾರಯುಕ್ತನಾದರೆ ಆತನು ಶುದ್ಧನು, ನಿರ್ಲಿಪ್ತನು, ನಿರ್ಗುಣನು ಎಂಬದಾಗಿ ಹೇಳುವುದು ಸುಳ್ಳಾಗುವುದಲ್ಲವೆ? ಪರಮಾತ್ಮನಿಗೆ ನಿರ್ಗುಣತ್ವ, ಶುದ್ಧತ್ವ, ನಿರ್ಲಿಪ್ತತ್ವಾದಿಗಳನ್ನು ಪ್ರತಿಪಾದಿಸುವ ಶ್ರುತಿಯೂ ಕೂಡ ಸುಳ್ಳಾಗಬೇಕಾಗುವುದು. ಆದುದರಿಂದ ಇದರ ಪರಿಹಾರವೆಂತು. ಸೋಮನು ಹೇಳುತ್ತಾನೆ:— ಸರ್ವವ್ಯಾಪಕನೆನಿಸಿದ ಕಾರಣ ಆ ಪರಮಾತ್ಮನನ್ನು ವಿಷ್ಣುವೆನ್ನುವರು. ಆತನೇ ಶುದ್ಧನೆನಿಸಿದ ಪರಬ್ರಹ್ಮನು. ಆತನೇ ಸರ್ವಾತ್ಮಕನು. ಸರ್ವ ಭೂತಾಧಿಪನು. ಪರಿಪಾಲಕನು. ಆತನು ಅಚ್ಯುತನು (ನಾಶರಹಿತನು) ಇಂತು ನಾಶರಹಿತ

ಹ್ಮ ಸ ಸರ್ವ ಭೂತೋ ಬ್ರಹ್ಮ ಪ್ರಜಾನಾಂ ಪತಿ ರಚ್ಯುತೋ
ಸೌ । ಬ್ರಹ್ಮಾಹ್ಯರಂ ನಿತ್ಯ ಮಜಶ ಸ ವಿಷ್ಣು ರಪಕ್ಷಯಾ ದ್ಯೈ
ರ ಖಿಲೈ ರಸಂಗಿ ॥೫೭॥ ಬ್ರಹ್ಮಾ ಹ್ಯರ ಮಜಂ ನಿತ್ಯಂ ಯದಾ
ಸೌ ಪುರುಷೋತ್ತಮಃ । ತದಾ ರಾಗಾ ದಯೋ ದೋಷಾಃ ಪ್ರ
ಯಾಂ ತು ಪ್ರಳಯಂ ಮನು ॥೫೮॥ ಸೋಮಃ ॥ ಏತ ದ್ಬ್ರಹ್ಮ
ಪರಾ ಖ್ಯಂ ವೈ ಸಂಸ್ತ ವಂ ಪರಮಂ ಜರ್ಷೆ । ಅವಾಪ ಪರಮಾಂ

ನಾದುದರಿಂದ ಆತನು ಯಾವ ಯಾವ ರೂಪವಂ ಧರಿಸಿದಾಗ್ಯೂ ಆತನಿಗೆ ಸ್ವಾಭಾವಿಕವಾದ ರೂಪಕ್ಕೆ ಹಾನಿಯಿಲ್ಲವು.

ಇಂತು ವ್ಯಾಪನ ಶೀಲನೆನಿಸಿದ ಆ ಪರಮಾತ್ಮನು ಸರ್ವ ಸ್ವರೂಪಿಯಾಗಿದ್ದರೂ ನಾಶರಹಿತನಾಗಿರುವನು. ಆದುದರಿಂದಲೇ ಧ್ರುವನೆನಿಸುವನು. ಅಪಕ್ಷಯ, ವೃದ್ಧಿ, ಪರಿಣಾಮ, ಸಂಗಗಳು ಆತನಿಗಿಲ್ಲವು. ಅವಾಙ್ಮನಸ ಗೋಚರನೆನಿಸಿದ ತನ್ನ ಮಾಯೆಯಿಂದ ಆತನೇ ಸರ್ವಾತ್ಮಕತ್ವವನ್ನು ಪಡೆಯುವನು ಆದುದರಿಂದ ಸರ್ವಾತ್ಮಕನಾಗಿರುವ ಆ ಪರಮಾತ್ಮನಿಗೆ ಶುದ್ಧತ್ವಾದಿಗಳು ಅಬಾಧಿತಗಳಲ್ಲವು ॥೫೭॥ ಪುರುಷೋತ್ತಮನೆನಿಸಿದ ಈ ವಿಷ್ಣುವೇ ನಿರ್ವಿಕಾರ ಪರಬ್ರಹ್ಮ ಸ್ವರೂಪನಾದುದರಿಂದ ಅಂತಹ ಪರಮಾತ್ಮನು, ಇದುವರೆಗೂ ನಾನು ಆತನನ್ನು ಸ್ತೋತ್ರ ಮಾಡಿದುದಕ್ಕಾಗಿ ನನ್ನ ಮೇಲೆ ಸಂಪೂರ್ಣಾನುಗ್ರಹವನ್ನಿರಿಸಿ ಆತನ ದಿವ್ಯ ರೂಪವಂ ನನ್ನ ಮನದಲ್ಲಿ ತೋರಿಸಲಿ. (ನನಗೆ ಆತನು ಪ್ರತ್ಯಕ್ಷನಾಗಲಿ ಎಂದು ಭಾವವು) ಇಂತಹ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ ಇದುವರೆಗೂ ನಾನು ನನ್ನ ನೇಮವಂ ಬಿಟ್ಟು ತುಚ್ಛವಾದ ವೈಷಯಿಕಾನಂದದಲ್ಲಿ ಆಸಕ್ತನಾಗಿದ್ದುದರಿಂದ ಉಂಟಾದ ನನ್ನ ರಾಗಾದಿ ದೋಷಗಳೆಲ್ಲವೂ ನಾಶವಾಗಲಿ ॥೫೮॥ ಸೋಮನು ಹೇಳುತ್ತಾನೆ:—ಬ್ರಹ್ಮಣ್ಯನೆನಿಸಿದ ಕಂಡುಮುನಿಯು ಮೇಲೆ ಹೇಳಿದ ಬ್ರಹ್ಮ ಪರಾಖ್ಯವೆನಿಸಿದ ಈ ಸ್ತೋತ್ರವನ್ನು ಶ್ರದ್ಧಾ ಭಕ್ತಿಗಳಿಂದೊಡಗೂಡಿ ಏಕ ಚಿತ್ತತೆಯಿಂದ ಧ್ಯಾನಮಾಡಿ ಪರಮಾತ್ಮ ಸಾಕ್ಷಾತ್ಕಾರ ರೂಪವಾದ (ಮೋಕ್ಷ ರೂಪವಾದ ಅಥವಾ ಪರಮಾತ್ಮನಲ್ಲಿ ಸೇರಿ ಹೋಗುವಿಕೆ ಎಂಬ) ಪರಮ ಸಿದ್ಧಿಯಂ ಹೊಂದಿದನು ॥೫೯॥ ಇಂತಹ ಸರ್ವೋತ್ತ

ಸಿದ್ಧಿಂ ಸ ಸವಮಾರಾಧ್ಯ ಕೇಶವಂ ॥೫೯॥ (ಇಮಂ ಸ್ತವಂ ಯಃ ಪಠತಿ ಶೃಣು ಯಾದವ್ಯಾಪಿ ನಿತ್ಯತಃ । ಸಕಾಮ ದೋಷೈ ರಖಿಲೈ ರ್ಮುಕ್ತಃ ಪ್ರಾಪ್ನೋ ತ್ಯತಿ ವಾಂಛಿತಂ ॥) ಇಯಂಚ ಮಾರಿಷಾ ಪರ್ವ ಮಾಸೀ ದ್ಯಾ ತಾಂ ಬ್ರವೀಮಿ ವಃ । ಕಾರ್ಯ ಗೌರವ ಮೇತಸ್ಯಾಃ ಕಥನೇ ಫಲದಾಯಿ ವಃ ॥೬೦॥ ಅಪುತ್ರಾ ಪ್ರಾಗಿ ಯಂ ವಿಷ್ಣುಂ ಮೃತೇ ಭರ್ತರಿ ಸತ್ಯಮಾಃ । ಭೂಪಪತ್ನೀ ಮ ಹಾಭಾಗಾ ತೋಷಯಾಮಾಸ ಭಕ್ತಿತಃ ॥೬೧॥ ತಯಾ ಚಾರಾ

ಮವೆನಿಸಿದ ಬ್ರಹ್ಮಪಾರವೆಂಬ ಈ ಸ್ತೋತ್ರವನ್ನು ಅನುದಿನವೂ ಪಠನ ಮಾಡುವವರೂ, ಅಂತೆಯೇ ಶ್ರವಣ ಮಾಡುವವರೂ ಕೂಡ ಸಕಲ ವಿಧ ಗಳಾದ ಕಾಮ ದೋಷಗಳನ್ನೂ ದೂರಮಾಡಿ ತಮ್ಮ ಇಷ್ಟಾರ್ಥಗಳ ನ್ನು ಪಡೆಯುವರು.) ಈಕೆಯು ಅಯೋ ನಿಜಳಾದ ಮಾತ್ರದಿಂದಲೇ ನಾವು ಹತ್ತುಮಂದಿಯೂ ಈಕೆಯನ್ನು ಪರಿಗ್ರಹಿಸುವುದೆಂತು ? ಎಂಬ ದಾಗಿ ಸಂದೇಹಪಡಬೇಡಿರಿ. ಈಕೆಗೆ ಆದೇ ರೀತಿಯೇ ದೈವವರವಿರು ವುದು. ಆದೇನೆಂದರೆ , ಈಕೆಯು ಹಿಂದಿನ ಜನ್ಮದಲ್ಲಿ ಯಾರು ? ಇವ ಳಿಗೆ ವರವೇನು , ಇವಳ ಮಾಹಾತ್ಮ್ಯವೆಂತಹದು, ಇದೆಲ್ಲವನ್ನೂ ನಿಮು ಗೆ ತಿಳಿಸುವೆನು. ಇದೆಲ್ಲಾ ನಿಮಗೆ ತಿಳಿದಿರುವುದರಿಂದ ಬಹಳ ಪ್ರಯೋ ಜನವುಂಟು ॥೬೦॥ ಈ ಮಾರಿಷೆಯು ಹಿಂದಿನ ಜನ್ಮದಲ್ಲಿ ಒಬ್ಬ ರಾಜನ ಹೆಂಡತಿಯು. ತುಂಬಾ ಗುಣಶಾಲಿನಿಯೂ, ಮಹಾ ಪತಿವ್ರತೆಯೂ ಎನಿಸಿ ದ್ದಳು. ಹೀಗಿರಲು ಶೀಘ್ರ ಕಾಲದಲ್ಲಿಯೇ ಈಕೆಯ ದುರದೃಷ್ಟದಿಂದ ಪತಿಯು ಪರಲೋಕವನ್ನೈದಿದನು. ಆಗ್ಗೆ ಈಕೆಗೆ ಪುತ್ರ ಸಂತಾನವಿ ರಲಿಲ್ಲ. ಎಲೈ ಸತ್ಪುರುಷರೆನಿಸಿದ ಪ್ರಚೇತಸರಿರಾ ; ಇಂತು ಪತಿಯ ವಿಯೋಗವನ್ನನುಭವಿಸಿ, ಮಕ್ಕಳಿಲ್ಲದೆ ಸಂಕಟಪಡುತ್ತಿದ್ದ ಈಕೆಯು ಅವ್ಯಭಿಚರಿತವಾದ ಭಕ್ತಿ ಸಂಪನ್ನಳೆನಿಸಿ ಸರ್ವಾತ್ಮಕನೆನಿಸಿದ ವಿಷ್ಣು ವನ್ನು ತನ್ನ ಭಕ್ತಿಯಿಂದ ಮೆಚ್ಚಿಸಿದಳು॥೬೧॥ ಇಂತು ಈಕೆಯ ಅನನ್ಯ ವಾದ ಭಕ್ತಿಗೆ ಮೆಚ್ಚಿದ ವಿಷ್ಣುವು ಈಕೆಗೆ ಪ್ರತ್ಯಕ್ಷನಾಗಿ, ಎಲೈ ಸ್ತ್ರೀ ಯೆ , ನಾನು ನಿನ್ನ ಭಕ್ತಿಗೆ ಮೆಚ್ಚಿ ನಿನಗೆ ವರವಂ ಕೊಡಬೇಕೆಂದು ನಿ ನ್ನಲ್ಲಿಗೆ ಬಂದಿರುವೆನು. ಆದುದರಿಂದ ನಿನಗೆ ಬೇಕಾದ ವರವಂ ಬೇಡು.

ಧಿ ತೋ ವಿಷ್ಣುಃ ಪ್ರಾಹ ಪ್ರತ್ಯಕ್ಷತಾಂ ಗತಃ । ವರಂ ವೃಣೀ
ಷ್ವೇತಿ ಶುಭಾಂ ಸಾಜಪತ್ನಾಹಾತ್ಮ ನಾಂಛಿತಂ ॥೬೨॥ ಭಗವ!
ಬಾಲ ವೈಧವ್ಯಾ ದ್ವ್ಯಥಾಜನ್ಮಾಹ ಮಿ ದೃಶೀ । ಮುಂದ ಭಾ
ಗ್ಯಾ ಸಮುದೂತಾ ವಿಫಲಾಂಶ ಜಗತ್ಪತೇ ॥೬೩॥ ಭವಂತು ಪತ
ಯ ಶ್ಲಾಘ್ಯಾ ಮಮ ಜನ್ಮನಿ ಜನ್ಮನಿ । ತ್ವ ತ್ಪ್ರ ಸಾ ದಾ ತ್ತ ಥಾ
ಪುತ್ರಃ ಪ್ರಜಾಪತಿ ಸಮೋz ಸ್ತು ಮೇ ॥೬೪॥ ರೂಪ ಸಂಪತ್ಸಮಾ
ಯುಕ್ತಾ ಸರ್ವಸ್ಯ ಪ್ರಿಯದರ್ಶನಾ । ಆಯೋನಿ ಜಾಚ ಜಾ
ಯೇಯಂ ತ್ವತ್ಪ್ರ ಸಾ ದಾದ ಥೋಕ್ಷಜ! ॥೬೫॥ ಸೋಮಃ ॥ ತ

ಎಂಬದಾಗಿ ಹೇಳಿದನು ಇದನ್ನು ಕೇಳಿ ಪರಮಾನಂದ ಭರಿತಳಾದ ಈ ಮಾರಿಷೆಯು ತನ್ನ ಇಷ್ಟಾರ್ಥವನ್ನು ಹೇಳತೊಡಗಿದಳು. ॥೬೨॥ ಎಲೈ ಷಡ್ಗುಣೈಶ್ವರ್ಯ ಸಂಪನ್ನನೆನಿಸಿದ ವಿಷ್ಣುವೆ; ನಾನು ಇಂತಹ ಚಿಕ್ಕವ ಯಸ್ಸಿನಲ್ಲಿಯೇ ದುರಂತವಾದ ವೈಧವ್ಯವನ್ನು ಹೊಂದಿದೆನು. ನನ್ನ ಜ ನ್ಮವು ವ್ಯರ್ಥವು ಎಲೈ ಜನನ್ನಿಯಾಮಕನೆ? ಪತಿಯಿಲ್ಲದಮೇಲೆ ನಾನು ಬದುಕಿತಾನೇ ಫಲವೇನು? ಇಂತು ನಿರ್ಭಾಗ್ಯಳೆನಿಸಿದ ನನಿಗೆ ಮುಂದೆ ಗತಿಯಾರು? ಅಥವಾ ನನಿಗೆ ಮಕ್ಕಳಾದರೂ ಇದ್ದಿದ್ದರೆ ಅವರಿಂದಲಾ ದರೂ ನಾನು ಕಾಲಾಂತರದಲ್ಲಿ ಸುಖಪಡಬಹುದೆಂದು ಮನಸ್ಸನ್ನು ಬಿಗಿ ಹಿಡಿದಿರೋಣವೆಂದರೆ ನನಗೆ ಂತಹ ಮಕ್ಕಳೂ ಕೂಡ ಇಲ್ಲವಲ್ಲ. ಆ ದುದರಿಂದ ನನ್ನ ಜನ್ಮವು ನಿಷ್ಫಲವಾದುದು ॥೬೪॥ ಎಲೈ ಸಕಲ ನಿಯಾ ಮಕನೆ, ಈ ಜನ್ಮದಲ್ಲಿಂತೂ ಹೀಗಾಯಿತು ಇನ್ನುಮುಂದೆ ಯಾದ ರೂ ನಾನು ಇಂತಹ ವೈಧವ್ಯದುಃಖಕ್ಕೆ ಸಿಕ್ಕಿ ನರಳದಂತೆ ನನಗೆ ಉತ್ತ ಮರನಿಸಿದ ಪತಿಗಳನ್ನ ಜನ್ಮ ಜನ್ಮದಲ್ಲಿಯೂ ಅನುಗ್ರಹಿಸು. ಅಂತೆಯೇ ನಿನ್ನ ಅನುಗ್ರಹದಿಂದ, ಸಕಲ ವಿಧದಲ್ಲಿಯೂ ಬ್ರಹ್ಮನಿಗೆ ಸಮಾನನಾದ ಮಗನು ನನಿಗೆ ಉಂಟಾಗಲಿ. ॥೬೪॥ ಅಂತೆಯೇ ನಾನೂ ಕೂಡ ಸ ರ್ವೋತ್ತಮ ರೂಪ, ಸಂಪತ್ತುಗಳಿಂದೊಡಗೂಡಿ, ಎಲ್ಲರ ನೋಟಕ್ಕೂ ಆನಂದವನ್ನುಂಟುಮಾಡುತ್ತಾ ಅಯೋನಿಜೆಯಾಗಿ ಜನಿಸುವಂತೆ ನನಿಗೆ ವರವಂ ದಯಪಾಲಿಸುವವನಾಗು. ಎಲೈ ಅಧೋಕ್ಷಜನೆ, ನಿನ್ನ ಅನು ಗ್ರಹದಿಂದ ನನಿಗೆ ಇಷ್ಟು ಮಾತ್ರ ವರವಂ ದಯಪಾಲಿಸು. ಇದರಿಂದ

ಯೈವ ಮುಕ್ತೋ ದೇವೇಶೋ ಹೃಷೀ ಕೇಕ ಉವಾಚ ತಾಂ ।
ಪ್ರಣಾಮ ನಮ್ರಾ ಮುತ್ಥಾಪ್ಯ ವರದ ಸ್ಸಮುಪ ಸ್ಥಿತಃ ॥೬೬॥
ದೇವಃ ॥ ಭವಿಷ್ಯಂತಿ ಮ ಹಾವೀರ್ಯಾ ಅನ್ಯಸ್ಮ ನ್ನೇವ ಜನ್ಮನಿ ।
ಪ್ರಖ್ಯಾ ತೋ ದಾರ ಕರ್ಮಾ ಣೊ ಭವತ್ಯಾಃ ಪತಯೋ ದಕ ॥
॥೬೭॥ ಪುತ್ರಂಚ ಸು ಮಹಾತ್ಮಾನ ಮತಿ ವೀರ್ಯ ಪರಾಕ್ರಮಂ !
ಪ್ರಜಾಪತಿ ಗುಣೈ ರ್ಯು ಕ್ತಂ ತ್ವಮೇ ವಾಪ್ಸ್ಯ ಸಿ ಶೋಭನೆ ॥
॥೬೮॥ ವಂಶಾ ನಾಂ ತಸ್ಯ ಕರ್ತೃ ತ್ವಂ ಜಗತ್ಯ ಸ್ಮಿ ಭವಿಷ್ಯತಿ।

ನಾನು ಕೃತಾರ್ಥಳಾಗುವೆನು ॥೬೫॥ ಸೋಮನು ಹೇಳುತ್ತಾನೆ :—ಸಕಲೇಂದ್ರಿಯ ನಿಯಾಮಕನೆನಿಸಿದ, ದೇವದೇವನಾದ ಮಹಾವಿಷ್ಣುವು ಈ ಮಾತನ್ನು ಕೇಳಿ ಕನಿಕರಗೊಂಡು ತನ್ನ ಪಾದಗಳ ಬಳಯಲ್ಲಿ ದಂಡಾಕಾರನಾಗಿ ಬಿದ್ದಿರುವ ಆಮೂರಿಷೆಯನ್ನು ಕಮಲದಳದಂತೆ ಕೋಮಲವಾದ ತನ್ನ ಕೈಯಿಂದ ಎಬ್ಬಿಸಿ ಆಕೆಗೆ ಇಷ್ಟವಾದ ವರವಂ ಕೊಡಲು ಈರೀತಿ ಹೇಳತೊಡಗಿದನು, ॥೬೬॥ ವಿಷ್ಣುವು ಹೇಳುತ್ತಾನೆ :—ಎಲೈ ಮುಂಗಳಾಂಗಿಯೇ! ನಿನಿಸಿದ ರಾಜಪತ್ನಿಯೆ ; ಮುಂದಿನ ಜನ್ಮದಲ್ಲಿಯೇ (ಈ ಜನ್ಮವಾದ ಬಳಿಕ ನಿನಿಗೆ ಉಂಟಾಗುವ ಮತ್ತೊಂದು (ಜನ್ಮದಲ್ಲಿಯೇ) ಮಹಾಬಲಶಾಲಿಗಳೂ,ಲೋಕ ಪ್ರಸಿದ್ಧರೂ ಲೋಕೋಪ ಕಾರಿಗಳೂ ಎನಿಸಿದ ಹತ್ತುಮಂದಿ ಪತಿಗಳು ನಿನಗೆ ಲಭಿಸುವರು. ಜನ್ಮ ಜನ್ಮದಲ್ಲಿಯೂ ತನಗೆ ಉತ್ತಮರಾದ ಪತಿಗಳು ಲಭಿಸಬೇಕೆಂದು ಬೇಡಿದುದಕ್ಕೆ ಎರಡನೆಯ ಜನ್ಮದಲ್ಲಿಯೇ ಆಕೆಗೆ ಈ ವರವಂ ವಿಷ್ಣುವು ದಯಪಾಲಿಸಲು ಕಾರಣವೇನೆಂದರೆ, ತನ್ನ ಭಕ್ತರು ಬಾರಿಬಾರಿಗೂ ಜನ್ಮ ದುಃಖನನ್ನು ಅನುಭವಿಸಬಾರದೆಂದು ದಯೆಯಿಂದ ಆಕೆಗೆ ಬಂದೇ ಜನ್ಮದಲ್ಲಿಯೇ ಆಕೆಯ ಇಷ್ಟದಂತೆ ಬಹು ಮುಂದಿ ಪತಿಗಳನ್ನೂ, ಸರ್ವೋತ್ತಮನೆನಿಸಿದ ಪುತ್ರನನ್ನೂ ಕೂಡ ದಯಪಾಲಿಸಿದನೆಂದು ,ಭಾವವು) ॥೬೭॥ ಎಲೈ ಮುಂಗಳಕರಳೆನಿಸಿದ ಮೂರಿಷೆಯೆ ; ಚತುರ್ಮುಖನಂತೆ ನಿಖಿಲ ಸದ್ಗುಣಾಲಂಕೃತನೆನಿಸಿ, ಮಹಾಮಹಿಮ ಸಂಪನ್ನನೂ, ಅತಿ ಶೂರನೂ, ಬಲಿಷ್ಠನೂ, ಪರಾಕ್ರಮಶಾಲಿಯೂ ಎನಿಸಿದ ಸುತನನ್ನೂ ಕೂಡ ಅದೇ ಜನ್ಮದಲ್ಲಿಯೇ ನಿನ್ನ ಅನುಗ್ರಹದಿಂದ ನೀನು ಪಡೆಯುವೆ. ॥೬೮॥ ಇಂತು

ತ್ರೈಲೋಕ್ಯ ಮಖಿಲಾ ಸೂತಿ ಸ್ತಸ್ಯ ಚಾ ಪೂರ ಯಿಷ್ಯತಿ ॥
॥೬೯॥ ತ್ವಂ ಚಾಪ್ಯ ಯೋನಿಜಾ ಸಾಧ್ವೀರೂಪೌ ದಾರ್ಯ ಗುಣಾ
ನ್ವಿತಾ । ಮನಃ ಪ್ರೀತಿ ಕರೀ ನೃಣಾಂ ಮತ್ಪ್ರ ಸಾದಾ ದ್ಭವಿ
ಷ್ಯಸಿ ॥೭೦॥ ಇತ್ಯ ಕ್ತ್ವಾಂ ತರ್ದ ಧೇ ದೇವ ಸ್ತಾಂ ವಿ
ಲೋಲ ವಿಶೋ ಚನಾಂ! ರಾಜೇಯಂ ಮಾರಿಷಾ ಜಾತಾಯುಷ್ಮ
ತ್ಪತ್ನೀ ನೃಪತ್ಮ ಜಾಃ ! ॥೭೧॥ ಶ್ರೀ ಪರಾಶರಃ॥ ತತ ಸ್ಸೋಮ
ಸ್ಯೆ ವಚನಾ ಜ್ಜ ನೃಹುಸ್ತೇ ಪ್ರಚೇತಸಃ । ಸಂಹೃತ್ಯ ಕೋಪಂ

ನಿನ್ನಿಂದ ಹುಟ್ಟುವ ಈ ಮಗನೇ ಈ ಲೋಕದಲ್ಲಿರುವ ಸಕಲ ವಂಶಗಳನ್ನೂ ಸ್ಥಾಪಿಸುವನು. ಅತನ ಪುಣ್ಯ ಪಾಪ್ಯ ರೂಪವಾದ ಸಂತಾನವೇ ಮೂಲೋಕವನ್ನೂ ತುಂಬುವುದು. ಸ್ವರ್ಗ, ಮರ್ತ್ಯ, ಪಾತಾಳಗಳೆನಿಸಿದ ಮೂರು ಲೋಕಗಳಲ್ಲಿರುವ ಪ್ರಾಣಿವರ್ಗವೆಲ್ಲವೂ ಅತನ ಸಂತತಿಗೆ ಸೇರಿದುದೇ ಆಗಿರುವುದು. ಈ ಮೂರು ಲೋಕಗಳಲ್ಲಿನ ವಂಶಗಳಿಗೆಲ್ಲಾ ಅತನೇ ಮೂಲ ಪುರುಷನೆಂದು ಭಾವವು ॥೬೯॥ ಅಂತೆಯೇ ನೀನೂ ಕೂಡ ಅಯೋನಿಜೆ ಎನಿಸಿ, ನನ್ನ ಅನುಗ್ರಹದಿಂದ ಪತಿವ್ರತಾ ಶಿರೋಮಣಿಯೂ, ಸೌಂದರ್ಯ, ಸೌಶೀಲ್ಯ, ಗಾಂಭೀರ್ಯ, ವಿನಯ, ಮಾರ್ದವ, ಲಜ್ಜೆ ಮೊದಲಾದ ಉತ್ತಮ ಗುಣಗಳಿಂದ ಲಂಕೃತಳಳೂ, ಜನರ ಮನಸ್ಸಿಗೆ ಹಿತವಾಗಿ ಪ್ರಿಯವಾದ ನುಡಿಗಳನ್ನಾಡುವುದರಿಂದ ಸಕಲ ಜನಾಭಿಷ್ಟಳೂ ಎನಿಸಿ, ಸರ್ವೋತ್ತಮನಾದ ಪದವಿಯನ್ನು ಹೊಂದಿ ಸುಖಪಡುವೆ ॥೭೦॥ ದೇವದೇವನೆನಿಸಿದ ಶ್ರೀ ಮಹಾವಿಷ್ಣುವು ಈ ರೀತಿಯಿಂದ ಮಾರಿಷೆಗೆ ವರವಂ ದಯಪಾಲಿಸಿ ತಾನು ಕಣ್ಮರೆಯಾದನು. ಜಿಂಕೆಯು ಕಾಣಿನಂತೆ ಚಂಚಲವಾದ ನೋಟವುಳ್ಳ ಆ ರಾಜಪುತ್ರಿಯೇ ಈಕೆಯು. ಓ ರಾಜಕುವರರೆನಿಸಿದ ಪ್ರಚೇತಸರಿರಾ; ಈಕೆಯು ನಿಮಗೇ ಸಹಧರ್ಮಚಾರಿಣಿಯಲ್ಲದೆ ಬೇರೆಯವರಂ ತನ್ನ ಕಡೆಗಂಣಿನಿಂದಲೂ ನೋಡತಕ್ಕವಳಲ್ಲವು. ಆದುದರಿಂದ ಈಕೆಯನ್ನು ನೀವು ಪರಿಗ್ರಹಿಸಿರಿ ॥೭೧॥ ಪರಾಶರ ಮುನಿಯು ಹೇಳುತ್ತಾನೆ: —ಇಂತು ಓಷಧೀಶನೆನಿಸಿದ ಚಂದ್ರನು (ಸೋಮನು) ನುಡಿದ ಮಾತಿನಲ್ಲಿ ನಂಬಿಕೆಯಿಟ್ಟು, ತಮಗೆ ಗಿಡಗಳ ಮೇಲಿದ ಕೋಪವನ್ನು ಅಡಗಿಸಿಕೊಂಡು ಆ ಮಾರಿಷೆಯನ್ನು ತಮ್ಮ ಧರ್ಮಪತ್ನಿ

ವೃಷ್ಣೇಭ್ಯಃ ಪತ್ನೀಂ ಧರ್ಮೀಣ ಮಾರಿಷಾಂ ॥೭೨॥ ದಕಭ್ಯಸ್ತು
ಪ್ರಚೇ ತೋ ಭ್ಯೋ ಮಾರಿಷಾಯಾಂ ಪ್ರಜಾಪತಿಃ । ದಕ್ಷೋ
ಜಜ್ಞೇ ಮಹಾ ಭಾಗೋ ಯಃ ಪೂರ್ವಂ ಬ್ರಹ್ಮಣೋ ಭವತ್॥೭೩॥
ಸತುದಕ್ಷೋ ಮಹಾಭಾಗ ಸ್ಸೃಷ್ಟ್ಯರ್ಥಂ ಸುಮಹಾ ಮತೇ!।
ಪುತ್ರಾನು ತ್ಪಾದಯಾ ಮಾಸ ಪ್ರಜಾ ಸೃಷ್ಟ್ಯರ್ಥ ಮಾ
ತ್ಮನಃ ॥೭೪॥ ಅಚರಾಂಶ ಚರಾಂಶ್ಚೈವ ದ್ವಿಪದೋಥ ಚತು
ಷ್ಪದಃ । ಆದೇಶಂ ಬ್ರಹ್ಮಣಃ ಕುರ್ವ್ ಸೃಷ್ಟ್ಯರ್ಥೇ ಸಮುವ
ಸ್ಥಿತಃ ॥೭೫॥ ಸಸೃಷ್ಟ್ವಾ ಮನಸಾದಕ್ಷಃ ಪಂಚಾಶದ ಸೃಜತ್ಸ್ತ್ರಿ
ಯಃ ॥೭೬॥ ದದೌಸ ದಶ ಧರ್ಮಾಯ ಕಾಶ್ಯಪಾಯ ತ್ರಯೋದ

ಎಂಬದಾಗಿ ಭಾವಿಸಿ ಆಕೆಯನ್ನು ಪರಿಗ್ರಹಿಸಿದರು. ಇಂಕು ಮಾರಿಷೆ ಯು ಆ ಹತ್ತು ಮಂದಿ ಪ್ರಚೇತಸರಿಗೂ ಹೆಂಡತಿಯಾದಳು ॥೭೨॥ ತರು ವಾಯ ಈ ಹತ್ತು ಮಂದಿ ಪ್ರಚೇತಸರೂ ತನ್ನ ಧರ್ಮಪತ್ನಿ ಎನಿಸಿದ ಈ ಮಾರಿಷೆಯಲ್ಲಿ ಮಹದೈಶ್ವರ್ಯಶಾಲಿಯೂ, ಪ್ರಜಾಪಾಲಕನೂ, ಎನಿ ಸಿದ ದಕ್ಷನೆಂಬ ಕುವರನಂ ಪೆತ್ತರು. ಈ ದಕ್ಷನೇ ಪೂರ್ವದಲ್ಲಿ ಬ್ರಹ್ಮ ನಿಗೆ ಮಗನಾಗಿದ್ದನು ॥೭೩॥ ಮಹದೈಶ್ವರ್ಯ ಸಂಪನ್ನನೆನಿಸಿದ ಈ ದಕ್ಷ ನು ಸೃಷ್ಟಿಗೋಸ್ಕರವಾಗಿ (ಲೋಕಾಭಿ ವೃದ್ಧಿಗಾಗಿ) ಯೂ, ಮತ್ತು ತಾನು 'ಪುತ್ರವಂತನೆಂದು ಹೆಸರುವಾಸಿಯು ಪಡೆಯುವುದಕ್ಕಾಗಿಯೂ ಕೂಡ ಅನೇಕಮಂದಿ ತನಯರಂ ಜನಿಸಿದನು ॥೭೪॥ ಅಯ್ಯಾ ಸೂಕ್ಷ್ಮ ಬುದ್ಧಿಯುಳ್ಳ ಮೈತ್ರೇಯನೆ; ಆ ಬಳಿಕ ಭಾಗ್ಯಶಾಲಿ ಎನಿಸಿದ ಈ ದ ಕ್ಷನು ಬ್ರಹ್ಮನಿಗೆ ಬದಲಾಗಿ ಆತನ ಕಾರ್ಯವನ್ನು ತಾನೇ ನಡಿಯಿಸುತ್ತಾ ಅನುದಿನವೂ ಸೃಷ್ಟಿಕಾರ್ಯದಲ್ಲಿಯೇ ಆಸಕ್ತನೆನಿಸಿ ಚರಗಳೆನಿಸಿದ ಜಂಗ ಮ ಪ್ರಾಣಿಗಳನ್ನೂ, ಆ ಚರಗಳೆನಿಸಿದ ಸ್ಥಾವರ ವಸ್ತುಜಾಲವನ್ನೂ ಎರಡು ಕಾಲುಗಳುಳ್ಳ ಪ್ರಾಣಿಗಳನ್ನೂ ನಾಲ್ಕು ಕಾಲುಗಳುಳ್ಳ ಪ್ರಾಣಿ ಗಳನ್ನ ಕೂಡ ವಿಶೇಷವಾಗಿ ಉಂಟುಮಾಡಿದನು ॥೭೫॥ ಹರ್ಯಶ್ವನೇ ಮೊದಲಾದ ಗಂಡುಮಕ್ಕಳೆಲ್ಲರೂ ನಾಶವಾದ ತರುವಾಯ ದಕ್ಷನು ತನ್ನ ಮನಸ್ಸಂಕಲ್ಪ ಮಾತ್ರದಿಂದಲೇ ಐವತ್ತು ಮಂದಿ ದಿವ್ಯ ಸುಂದರಿಯರೆನಿ ಸಿದ ಕನ್ನೆಯರನ್ನು ನಿರ್ಮಿಸಿದನು ॥೭೬॥ ಆ ಐವತ್ತುಮಂದಿ ಕನ್ಯಾರತ್ನ

ಕ। ಕಾಲಸ್ಯ ನಯನೇ ಯುಕ್ತಾ ಸ್ಸಪ್ತವಿಂಶತಿ ಮಿಂದವೇ॥೩೭॥
ತಾಸು ದೇವಾ ಸ್ತಥಾದೈತ್ಯಾ ನಾಗಾ ಗಾವಸ್ತಥಾ ಖಗಾಃ ।ಗಂಧ
ರ್ವಾ ಪ್ಸರಸಶ್ಚೈವ ದಾನವಾದ್ಯಾಶ್ಚ ಜಜ್ಞಿರೇ ॥೩೮॥ ತ
ತಃ ಪ್ರಭೃತಿ ಮೈತ್ರೇಯ' । ಪ್ರಜಾಮೈಥುನ ಸಂಭವಾಃ । ಸಂ
ಕಲ್ಪಾದ್ದರ್ಶನಾ ತ್ಸ್ಪರ್ಶಾ ತ್ಪೂರ್ವೇಷಾ ಮಭವನ್ ಪ್ರಜಾಃ ।
ತಪೋ ವಿಶೇಷೈ ಸ್ಸಿದ್ಧಾನಾಂ ತದಾತ್ಯಂತ ತಪಸ್ವಿನಾಂ ॥೩೯॥
ಮೈತ್ರೇಯಃ॥ಅಂಗುಷ್ಠಾ ದ್ದಕ್ಷಿಣಾ ದ್ದಕ್ಷಃ ಪೂರ್ವಂ ಜಾತ
ಶ್ಚತೋ ಮಯಾ । ಕಥಂ ಪುನ್ರ್ಜಜ್ಞೇತಸೋ ಭೂಯಸ್ಸ ಸಂ

ಗಳಲ್ಲಿ ಹತ್ತು ಮಂದಿ ಕುವರಿಯರಂ ಧರ್ಮಪುರುಷನಿಗೆ ಕೊಟ್ಟು ವಿವಾಹ ಮಾಡಿದನು. ತರುವಾಯ ಪಿತಾಮಹನೆನಿಸಿದ ಬ್ರಹ್ಮನ ಮೊಮ್ಮಗನಾದ ಕಾಶ್ಯಪನಿಗೆ ಹದಿಮೂರು ಮುದಿಯಂ ಕೊಟ್ಟು ವಿವಾಹ ಮಾಡಿದನು ಮಿಕ್ಕ ಇಪ್ಪತ್ತೇಳು ಮಂದಿಯುಂ ಚಂದ್ರನಿಗೆ ಕೊಟ್ಟು ವಿವಾಹವಾಗಿ ದನು. ಈ ಇಪ್ಪತ್ತೇಳು ಮುದಿಯೇ ಕಾಲವನ್ನು ಸೂಚಿಸುವ ನೃಷ್ಟಿ. ಕೆಲವೊದಲಾದ ಇಪ್ಪತ್ತೇಳು ತಾರೆ (ನಕ್ಷತ್ರ)ಗಳು. ಈ ನಕ್ಷತ್ರಗಳ ಪರಿವರ್ತನದಿಂದಲೇ ಮಾಸ, ಋತು, ಅಯನ, ವರ್ಷ, ಮೊದಲಾದ ಕಲ್ಪಾಂತದ ವರೆಗಿನ ಕಾಲವೂ ಗಣಿಸಲ್ಪಡುವುದು. ॥೩೭॥ ಈ ಐವತ್ತು ಮಂದಿ ಕನ್ಯೆಯರಲ್ಲಿ ದೇವತೆಗಳು, ದೈತ್ಯರು, ನಾಗರು, ಪಕ್ಷಿಗಳು, ಗಂಧರ್ವರು, ಅಪ್ಸರ ಸ್ತ್ರೀಯರು, ದಾನವರು ಮೊದಲಾದವರೆಲ್ಲರೂ ಜನಿಸಿದರು. ॥೩೮॥ ಎಲಾ ಮೈತ್ರೇಯನೆ; ಈ ದಕ್ಷನಿಗಿಂತಲೂ ಪೂರ್ವದಲ್ಲಿ ಸ್ತ್ರೀ ಪುರುಷ ಮಿಥುನ ಸಮಾಗಮದಿಂದ ಮಕ್ಕಳಾಗುವ ವಾಡಿಕೆಯು ವಿಶೇಷವಾಗಿರಲಿಲ್ಲ. ಈ ದಕ್ಷನ ತರುವಾಯ ಲೋಕದಲ್ಲಿ ಪ್ರಜಾಸೃಷ್ಟಿಗೆ ದಂಪತಿಗಳು ಅನ್ಯೋನ್ಯವಾಗಿ ಬೆರೆದು ಕೂಡಿ ಸೇರಿ ವಿಹರಿಸುವುದೇ ಮುಖ್ಯ ಕಾರಣವಾಗಿ ಏರ್ಪಟ್ಟಿತು. ಆದರೆ ದಕ್ಷನಿಗಿಂತಲೂ ಮುಂಚೆ ಮನಸ್ಸಿನಲ್ಲಿ ಯೋಚಿಸೋಣದರಿಂದಲೂ, ಸ್ತ್ರೀ ವ್ಯಕ್ತಿಯನ್ನು ನೋಡು ವಿಕೆಯಿಂದಲೂ, ಅಥವಾ ಸ್ಪರ್ಶ ಮಾತ್ರದಿಂದಲೂ ಮಕ್ಕಳಾಗುತ್ತಿದ್ದರು. ಸಿದ್ಧರಿಗೂ, ಮಹಾ ತಪಸ್ವಿಗಳಿಗೂ ಕೂಡ ಅವರವರ ತಪೋ ಮಹಾತ್ಮೆಯಿಂದಲೇ ಮಕ್ಕಳಾಗುತ್ತಿದರು. ॥೩೯॥ ಮೈತ್ರೇಯನು ಹೇ

ಭೂತೋ ಮಹಾಮುನೇ ! ॥೮೦॥ ನಿಷನೋ ಸಂಶಯೋ ಬ್ರು
ಹಿ ! ಸುಮಹಾ ಹೃದಿವರ್ತತೇ । ಯದಾ ಹಿತ್ರಶ್ಚ ಸೋಮು
ಸ್ಯ ಪುನಶ್ಶುರತಾಂಗತಃ? ॥ ೮೧ ॥ ಶ್ರೀಪರಾಶರಃ॥ ಉತ್ಪತ್ತಿಶ್ಚ
ನಿರೋಧಶ್ಚ ನಿತ್ಯೋ ಭೂತೇಷು ಸತ್ತಮ ! ॥ ಋಷಯೋತ್ರನ

ಳುತ್ತಾನೆ :---ಮಹಾ ಮುನಿಗಳೆನಿಸಿದ ಪರಾಶರರೆ; ಪೂರ್ವದಲ್ಲಿ ವಿರಾಟ್ ಪುರುಷನ ಬಲ ಹೆಬ್ಬೆಟ್ಟಿನಿಂದ ದಕ್ಷನು ಜನಿಸಿದನೆಂದು ನಾನು ಕೇಳಿದ್ದೆ. ಇಂತಿರಲು ದಕ್ಷನು ಪ್ರಚೇತಸರಿಂದ ಮಾರಿಷೆಯಲ್ಲಿ ಜನಿಸಿದನೆಂದು ತಾವು ಹೇಳುವಿರಿ. ಇದೆಂತು ಸಮಂಜಸವಾಗುವುದು? ಇಷ್ಟು ಮಾತ್ರವಲ್ಲದೆ ನನಿಗೆ ಮತ್ತೊಂದು ಶಂಕೆಯೂ ಉಂಟು ॥ ೮೦ ॥ ಚಂದ್ರನ ಮಗಳೆನಿಸಿದ ಮಾರಿಷೆಯಲ್ಲಿ ಹುಟ್ಟಿದ ದಕ್ಷನು ಆ ಚಂದ್ರನಿಗೇನೇ ಇಪ್ಪತ್ತೇಳು ವಂದಿ ಕನ್ಯೆಯರಂ ಕೊಟ್ಟು ಮದುವೆ ಮಾಡಿದನೆಂದು ಹೇಳುವುರಿ. ಆದುದರಿಂದ ದಕ್ಷನು ಚಂದ್ರನಿಗೆ ಮಾವನಾದನು. ಹೀಗಾದರೆ ಚಂದ್ರನ ದೌಹಿತ್ರನೇ (ಮಗಳ ಮಗನೇ) ಚಂದ್ರನಿಗೆ ಮಾವನೆಂದು ಹೇಳುವುದೆಂತು? ಎಲೈ ಬ್ರಹ್ಮಪುತ್ರನೆನಿಸಿದ ಪರಾಶರನೆ, ಈ ಹಿಂದೆ ಹೇಳಿದುದೂ ಕೂಡ ನನ್ನ ಮನಸ್ಸಿನಲ್ಲಿ ವಿಶೇಷವಾಗಿ ನನಿಗೆ ಸಂಶಯವನ್ನುಂಟುಮಾಡಿರುವುದು. ಇದರ ಪರಿಹಾರವಂ ನನಿಗೆ ಸವಿಸ್ತರವಾಗಿ ತಿಳುಹಬೇಕೆಂದು ಮೈತ್ರೇಯನು ಪರಾಶರನನ್ನು ಬೇಡಿಕೊಂಡನು. ॥೮೧॥ ಪರಾಶರನು ಹೇಳುತ್ತಾನೆ:--ಎಲೈ ಬ್ರಹ್ಮವಾದಿಗಳಲ್ಲಿ ಶ್ರೇಷ್ಠನೆನಿಸಿದ ಮೈತ್ರೇಯನೆ; ಭೂತಗಳಿಗೆ ಹುಟ್ಟು ಸಾವುಗಳು ನಿತ್ಯಗಳೆನಿಸುವುವು. ಹುಟ್ಟುತಲೇ ಸಾವು ಆ ಹುಟ್ಟಿನೊಡನೆಯೇ ಬಂದಿರುವುದು. ಸತ್ತವನು ಮರಳಿ ಹುಟ್ಟಲೇಬೇಕು ಇದೇ ಅರ್ಥವನ್ನೇ "ಜಾತಸ್ಯಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯಚ ॥ ಎಂಬದಾಗಿ ಶ್ರೀ ಕೃಷ್ಣ ಭಗವಂತನೂ ಕೂಡ ಗೀತೆಯಲ್ಲಿ ಹೇಳಿರುವನು. ಸರ್ವೋತ್ತಮನೆನಿಸಿದ, ಅಪ್ರತಿಹತ ಸಾಮರ್ಥ್ಯವುಳ್ಳ ಜ್ಞಾನ ಚಕ್ಷುಸ್ಸಿನಿಂದೊಡಗೂಡಿದ ಋಷಿಗಳು ಈ ಹುಟ್ಟು ಸಾವುಗಳನ್ನು ಲಕ್ಷ್ಯವಾಡದೆ, ಆವುಗಳಿಂದುಂಟಾಗುವ ಹರ್ಷ, ದುಃಖಗಳಿಗೂ ಕೂಡ ಗಮನ ಕೊಡದೆ ನಿರ್ವಿಕಾರರಾಗಿಯೇ ಇರುವರು. (ಹುಟ್ಟು ಸಾವುಗಳು ಪ್ರವಾಹ ರೂಪದಿಂದ ಅವಿಚ್ಛಿನ್ನಗಳಾಗಿರುವುವು.

ಮುಹ್ಯಂತಿ ಯೇಚಾನ್ಯೇ ದಿವ್ಯ ಚಕ್ಷುಷಃ ॥೪॥ ಯುಗೇ ಯು
ಗೇ ಭವಂತ್ಯೇತೇ ದಕ್ಷಾದ್ಯಾ ಮುನಿಸತ್ತಮ ! । ಪುನಶ್ಚೈವ ನಿ
ರುಧ್ಯಂತೇ ವಿದ್ವಾಂಸ್ತ ತ್ರನಮುಹ್ಯತಿ ॥೫॥ ಕಾನಿಷ್ಠ್ಯಂ
ಜ್ಯೇಷ್ಠ್ಯಮಪ್ಯೇಷಾಂ ಪೂರ್ವಂ ನಾ ಭೂದ್ದ್ವಿಜೋತ್ತಮ ॥
ತಪ ಏವ ಗರೀಯೋ ಽ ಭೂ ತ್ಪ್ರಭಾವಶ್ಚೈವ ಕಾರಣಂ॥೪॥
ಮೈತ್ರೇಯಃ ॥ ದೇವಾನಾಂ ದಾನವಾನಾಂ ಚ ಗಂಧರ್ವೋ ರಗ

ಇದಕ್ಕೆ ಪ್ರತೀಕಾರ ಮಾಡಲಸಾಧ್ಯವೆಂಬದಾಗಿ ತಿಳಿದು ಜ್ಞಾನಿಗಳು ತಟ
ಸ್ಥರಾಗಿರುವರೆಂದು ಭಾವವು). ॥೪॥ಅಯ್ಯಾ ಮುನಿವರ್ಯನೆನಿಸಿದ ಮೈ
ತ್ರೇಯನೆ ; ಸೂರ್ಯಾದಿ ಒಂಬತ್ತು ಗ್ರಹಗಳೂ ಒಂದು ರಾಶಿಯಲ್ಲಿ ಸೇ
ರುವ ಕಾಲಕ್ಕೆ ಯುಗವೆಂಬದಾಗಿ ಜ್ಯೋತಿಶ್ಶಾಸ್ತ್ರ ಸಂಕೇತವು. ಅಂತ
ಹ ಪ್ರತಿಯೊಂದು ಯುಗದಲ್ಲಿಯೂ ದಕ್ಷನೇ ಮೊದಲಾದವರೆಲ್ಲರೂ ಹು
ಟ್ಟುವರು. ಅಂತೆಯೇ ಪುನಃ ಮತ್ತೊಂದು ಅಂತಹ ಸಮಯವು ಬರು
ವವರೆಗೂ ಅಧಿಕಾರದಲ್ಲಿರುವರು. ಪುನಃ ಮಡಿದುಹೋಗುವರು. ಇಂ
ತು ದಕ್ಷಾದಿಗಳಿಗೂ ಕೂಡ ಹುಟ್ಟು ಸಾವುಗಳು ನಿತ್ಯಗಳೆನಿಸುವುವು
ಯುಗಾರಂಭ ಕಾಲದಲ್ಲಿ, ಎಲ್ಲ ಪ್ರಾಣಿಗಳೂ ರಾತ್ರಿಯಾದ ಬಳಿಕ ಎಚ್ಚ
ತ್ತುಕೊಳ್ಳುವಂತೆ ಉದಯಿಸುವರು. ಯುಗಾವಸಾನ ಕಾಲದಲ್ಲಿ,ಪ್ರಾ
ಣಿಗಳು ರಾತ್ರಿಕಾಲದಲ್ಲಿ ನಿದ್ದೆಗೈವಂತೆ ಆವರೂ ಕೂಡ ನಾಶಹೊಂದು
ವರು. ಎಲ್ಲ ಭೂತಗಳೂ ಇಂತಹ ಮರಣರೂಪವಾದ ಪ್ರವಾಹಕ್ಕೆ
ಸಿಕ್ಕಿದವರೇ ಆಗಿರುವರು. ಆದರೆ ಆತ್ಮಜ್ಞಾನಿ ಎನಿಸಿದವನು ಮಾತ್ರ
ಈ ಪ್ರವಾಹಕ್ಕೆ ಸಿಕ್ಕುವುದೂ ಇಲ್ಲ. ಅದರಿಂದ ನರಳುವುದೂ ಇಲ್ಲ.
॥೫॥ ಮತ್ತು ನೀನು ಕೇಳಿದ ಎರಡನೆಯ ಪ್ರಶ್ನೆಗೆ (ಚಂದ್ರನ ಮೊಮ್ಮ
ಗನಾದ ದಕ್ಷನು ಪುನಃ ಚಂದ್ರನಿಗೆ ಮಾವನಾದುದೆಂತು ? ಎಂಬ ಆಕ್ಷೇ
ಪಣೆಗೆ) ಉತ್ತರವಂ ಹೇಳುವೆನು. ಕೇಳು, ಅಯ್ಯಾ ಬ್ರಾಹ್ಮಣೋತ್ತ
ಮನೆ ; ಪೂರ್ವಕಾಲದಲ್ಲಿ ದೊಡ್ಡವರು, ಚಿಕ್ಕವರು ಎಂಬ ಎಣಿಕೆಯನ್ನು
ವಯಸ್ಸಿನಿಂದ ಎಣಿಸುತ್ತಿರಲಿಲ್ಲ. ತಪಸ್ಸ್ಸಿಗನುಸಾರವಾಗಿ ದೊಡ್ಡವರು,
ಚಿಕ್ಕವರು, ಎಂಬದಾಗಿ ಗೊತ್ತುಮಾಡಿಕೊಳ್ಳುತ್ತಿದ್ದರು. ಇದಕ್ಕೆ ಅವ
ರವರ ಮಹಾತ್ಮೆಯೇ (ಪ್ರಭಾವವೇ) ಕಾರಣವಾಗಿದ್ದಿತು.

ರಕ್ಷಸಾಂ । ಉತ್ಪತ್ತಿಂ ವಿಸ್ತರೇ ಣೇಶ[ಮವು ಬ್ರಹ್ಮ್ಣ ! ಪ್ರಚೇ
ತ್ಸ ॥೪೫॥ ಶ್ರೀ ಪರಾಶರಃ ॥ ಪ್ರಜಾ ಸ್ಸೃಜೇತಿ ವ್ಯಾದಿಷ್ಟಃ
ಪೂರ್ವಂ ದಕ್ಷಸ್ವಯಂ ಭುವಾ । ಯಥಾ ಸಸರ್ಜ ಭೂತಾನಿ ತಥಾ
ಶೃಣು ಮಹಾಮತೇ ॥೪೬॥ ಮನಸಾ ತ್ವೇವ ಭೂತಾನಿ ಪೂರ್ವಂ
ದಕ್ಷೋ ಽ ಸೃಜತ್ತದಾ । ದೇವಾ ಋಷೀ ಸ ಗಂಧರ್ವಾ
ಅಸುರಾ ಪನ್ನಗಾಂ ಸ್ತಥಾ ॥ ೪೭॥ ಯದಾ ಽ ಸ್ಯ ಸೃಜ್ಯಮಾನ
ಸ್ಯ ನನ್ಯವರ್ಧಂತ ತಾಃ ಪ್ರಜಾಃ । ತತಸ್ಸಂ ಚಿಂತ್ಯ ಸ ಮುನಿ

(ಆದುದರಿಂದ ಚಂದ್ರನು ವಯಸ್ಸಿನಲ್ಲಿನುತ್ರ ದೊಡ್ಡವನಾಗಿದ್ದ
ರೂ ಮಹಿಮೆಯಲ್ಲಿ ಮಾತ್ರ ದಕ್ಷನೇ ಅಧಿಕನೆನಿಸಿದ್ದ ಕಾರಣ ತನಗಿಂ
ತಲೂ ವಯಸ್ಸಿನಲ್ಲಿ ಚಿಕ್ಕವನಾಗಿದ್ದ ದಕ್ಷನಿಗೆ ಅಳಿಯನಾದನೆಂದು ಭಾ
ವವು) ॥೪೪॥ ಮೈತ್ರೇಯನು ಕೇಳುತ್ತಾನೆ — ಎಲೈ ಬ್ರಹ್ಮಣ್ಯನೆನಿಸಿದ
ಪರಾಶರನೆ, ಪ್ರಚೇತಸಪುತ್ರನೆನಿಸಿದ ದಕ್ಷನು ಸೃಷ್ಟಿಕಾರ್ಯವಂನೆರವೇ
ರಿಸುತ್ತಿದ್ದಾಗ ಹುಟ್ಟಿದ ದೇವತೆಗಳಾರು ? ದಾನವರಾರು ? ಅಂತಯೇ
ಗಂಧರ್ವರು, ಸರ್ಪರು, ರಾಕ್ಷಸರು, ಇವರುಗಗಳೆಲ್ಲಾ ಯಾರು ? ಇವರ
ಹೆಸರೇನು ? ಇದನ್ನು ನನಿಗೆ ಸವಿಸ್ತಾರವಾಗಿ ತಿಳಿಯಪಡಿಸು ॥೪೫॥
ಪರಾಶರನು ಹೇಳುತ್ತಾನೆ — ಎಲೈ ಬುದ್ಧಿಶಾಲಿಯೆನಿಸಿದ ಮೈತ್ರೇಯನೇ;
ಲೋಕಕ್ಕೆ ಸೃಷ್ಟಿಕರ್ತನೆನಿಸಿದ ಚತುರ್ಮುಖಬ್ರಹ್ಮನು ತಾನಾಗಿಯೇ
ದಕ್ಷನಂ ಕುರಿತು ಪ್ರಜೆಗಳಂ ಸೃಷ್ಟಿಸುವಂತೆ ಆಜ್ಞೆಯನ್ನಿತ್ತನು. ತರು
ವಾಯ ದಕ್ಷನು ಪ್ರಜಾಸೃಷ್ಟಿಗೆ ಮೊದಲುಮಾಡಿದನು. ಆದರ ಕ್ರಮ
ವನ್ನೇ ನಾನು ನಿನಗೆ ತಿಳಿಸುವೆನು ॥೪೬॥ ಇಂತು ಚತುರ್ಮುಖನ ಆ
ಜ್ಞಾನುಸಾರ ದಕ್ಷನು ಸೃಷ್ಟಿಗೆ ಆರಂಭಿಸಿ, ತನ್ನ ಮನಸ್ಸಂಕಲ್ಪಮಾತ್ರ
ದಿಂದಲೇ ಭೂತಗಳನ್ನು ಮೊದಲು ಉಂಟುಮಾಡಿದನು. ತರುವಾಯ
ದೇವತೆಗಳು, ಋಷಿಗಳು, ಗಂಧರ್ವರು, ಅಸುರರು, ಸರ್ಪಗಳು, ಇವ
ರನ್ನೆಲ್ಲಾ ಉಂಟುಮಾಡಿದನು ॥೪೭॥ ಇಂತು ದಕ್ಷನು ಸೃಷ್ಟಿಸಿದ ಪ್ರ
ಜೆಗಳು ವಿಳಗೆಯನ್ನು ಹೊಂದದಿರುವದಂ ಕಂಡು ಸೃಷ್ಟಿಕರ್ತನೆನಿಸಿದ
ಈ ದಕ್ಷನು ತನ್ನ ಜ್ಞಾನದೃಷ್ಟಿಯಿಂದ ಚನಾಗಿ ಪರ್ಯಾಲೋಚಿಸಿ
ವೈಧಾತನ ಧರ್ಮದಿಂದಲೇ (ಸ್ತ್ರೀಪುರುಷಸಮಾಗಮದಿಂದಲೇ) ಪ್ರಜೆಗಳ

ಸ್ಸೃಷ್ಟ್ವಾ ಹೇತೋಃ ಪ್ರಜಾಪತಿಃ ॥ ೪೪ ॥ ಮೈಥುನೇನೈವ ಧರ್ಮೇಣ ಸಿಸೃಕ್ಷು ರ್ವಿವಿಧಾಃ ಪ್ರಜಾಃ । ಅಸಿಕ್ನೀ ಮುಪ ಯೇಮೇ ಽಥ ವೀರಣಸ್ಯ ಪ್ರಜಾಪತೇಃ । ಸುತಾಂ ಸುತಪಸಾ ಯುಕ್ತಾಂ ಮಹತೀಂ ಲೋಕಧಾರಿಣೀಂ ॥೪೫॥ ಅಥಪುತ್ರ ಸಹಸ್ರಾಣಿ ವೈರಣ್ಯಾಂ ಪಂಚವೀರ್ಯವಾ೯ । ಅಸಿಕ್ನ್ಯಾಂ ಜನ ಯಾಮಾಸ ಸರ್ಗಹೇತೋಃ ಪ್ರಜಾಪತಿಃ ॥೪೦॥ ತಾ೯ ದೃ ಷ್ಟ್ವಾ ನಾರದೋ ವಿಪ್ರ ! ಸಂವಿವರ್ಧ ಯಿಷೂ೯ ಪ್ರಜಾಃ । ಸಂಗಮ್ಯ ಪ್ರಿಯಸಂವಾದೋ ದೇವರ್ಷಿರಿದಮು ಬ್ರವೀತ್ ॥೪೧॥ ಹೇ ! ಹರ್ಯ ಶ್ವಾ ! ಮಹಾವೀರ್ಯಾಃ ! ಪ್ರಜಾ ಯೂಯಂ ಕರಿ ಷ್ಯಥ । ಈ ದೃಶೋ ಲಕ್ಷ್ಯತೇ ಯತ್ನೋ ಭವತಾಂ ಕ್ರೂಯ ತಾಮಿದಂ ॥೪೨॥ ಬಾಲಿಶಾ ಬತ ಯೂಯಂ ಯೇ ನಾಸ್ಯ

ನ್ನು ವೃದ್ಧಿಪಡಿಸಬೇಕಲ್ಲದೆ ಬೇರೆ ಉಪಾಯವಿಲ್ಲವೆಂದು ನಿಶ್ಚಯಿಸಿ ವೀರಣ ಬ್ರಹ್ಮನಪುತ್ರಿಯಾದ ಅಸಿಕ್ನಿಯೆಂಬುವಳನ್ನು ಮದುವೆ ಯಾದನು. ಈ ಅಸಿಕ್ನಿಯು ಮಹಾತಪಸ್ಸಂಪನ್ನಳೂ, ಲೋಕವನ್ನು ಪರಿಪಾಲನೆಮಾಡುವಂತಹ ಸಾಮರ್ಥ್ಯವುಳ್ಳವಳೂ ಆಗಿದ್ದಳು॥೪೪-೪೫॥ ಇಂತು ದಕ್ಷನು ವೀರಣಬ್ರಹ್ಮನ ಕುವರಿಯಾದ ಆ ಅಸಿಕ್ನಿಯಲ್ಲಿ ಪ್ರ ಜಾವೃದ್ಧಿಗಾಗಿ ಐದುಸಾವಿರ ಮಂದಿ ಗಂಡು ಮಕ್ಕಳಂ ಪಡೆದನು ॥೪೦॥ ಎಲೈ ಬ್ರಾಹ್ಮಣನೇ ! ಇಂತು ದಕ್ಷನಿಂದ ಜನಿಸಿದ ಈ ಐದು ಸಾವಿರ ಮಂದಿಯೂ ಪ್ರಜೆಗಳನ್ನು ವೃದ್ಧಿ ಪಡಿಸಬೇಕೆಂದು ತುಂಬಾಕುತೂಹಲ ವುಳ್ಳವರಾಗಿದ್ದರು. ಇದಂ ನೋಡಿ ದೇವರ್ಷಿ ಎನಿಸಿದ ನಾರದನು ಅವರ ಬಳಿಗೆ ಬಂದು ಅವರಮನಸ್ಸಿಗೆ ಹಿತಕರವಾಗಿರುವಂತೆ ಈರೀತಿ ಮಾ ತನಾಡ ತೊಡಗಿದನು ॥೪೧॥ ಎಲೈ ಮಹಾವೀರ್ಯ ಸಂಪನ್ನರೆನಿಸಿದ ಹರ್ಯಶ್ವವೊದಲಾದ ದಕ್ಷಕುವರರಿರಾ, ನೀವು ಏತಕ್ಕೋಸ್ಕರ ಪ್ರಜೆಗಳ ನ್ನು ಸೃಷ್ಟಿಮಾಡಲು ಉದ್ಯುಕ್ತರಾಗಿರುವಿರಿ? ನಿಮ್ಮ ಪ್ರಯತ್ನವಂ ಕಂ ಡರ ನೀವು ಪ್ರಜಾಸೃಷ್ಟಿಯಲ್ಲಿಯೇ ನಿರತರಾಗಿರುವಂತೆ ತೋರುವುದು. ನಾನು ಹೇಳುವ ಮಾತನ್ನು ಸ್ವಲ್ಪ ಕಿವಿಗೊಟ್ಟು ಲಾಲಿಸಿರಿ ॥೪೨॥ ಅಯ್ಯೋ ಹುಚ್ಚರಿರಾ; ಈ ಭೂಮಿಯ ಬಳಿಗಡೆ ಏನಿರುವುದು ? ಇದರ

ಜಾನೀಥವೈ ಭುವಃ । ಅಂತರೂರ್ಧ್ವಾ ಮಧಶ್ಚೈವ ಕಥಂ ಸ್ರ
ಷ್ಟ್ಯಾ ಥವೈಪ್ರಜಾಃ ? ॥೯೪॥ಊರ್ಧ್ವಾಂ ತಿರ್ಯ ಗಧಶ್ಚೈವ ಯಥಾ ಽ
ಪ್ರತಿ ಹತಾಗತಿಃ। ತಥಾಕಸ್ಮಾ ದ್ಭವೋ ನಾಂತಂ ಸರ್ವೇ ದ್ರಷ್ಟ್ಯ
ಥಬಾಲಿಶಾಃ ! ॥ ೯೫ ॥ ತೇತು ತದ್ವಚನಂ ಶ್ರುತ್ವಾ ಪ್ರಯಾತಾ

ವೇಲ್ಯಾಗದಲ್ಲಿರುವುದೇನು ? ಇದರ ತಳದಲ್ಲಿರುವುದಂ ನೀವು ಬಲ್ಲಿರಾ? ಇದೊಂದೂ ತಿಳಿಯದೆ ನೀವು ಸೃಷ್ಟ್ಯವಾಡುವುದೆಂತು ? ಒಂದೂ ತಿಳಿಯದೆ ಸವಮ್ಮನೆ ಸೃಷ್ಟ್ಯಗೋಸ್ಕರ ವ್ಯರ್ಥವಾಗಿ ತೊಂದರೆ ಪಡುವ ನಿಮನ್ನು ಎಂತಹ ಮೂಢರೆಂದು ಹೇಳಬಹುದು, ಈ ಭೂಮಿಯು ಉಪಕ್ರಮವೆಲ್ಲಿ ? ಇದು ಯಾವ ಆಶ್ರಯದಿಂದ ನಿಂತಿರುವುದು ? ಇದರ ಸ್ಥಿತಿಯೇನು ? ಇದರ ಪರಿಣಾಮವೆಂತು ? ಎಂಬುದನೆನ್ನಿಂದೂ ತಿಳಿಯದೆ ವ್ಯರ್ಥವಾಗಿ ಈ ಸೃಷ್ಟ್ಯಗೋಸ್ಕರ ಏಕೆ ಬದ್ಧಾಡುವಿರಿ ; ಇದರಿಂದ ನೀವು ಮರಳಿ ಮರಳಿ ದುಃಖ ಸಂಪಾದಕವಾದ ಸಂಸಾರದಲ್ಲಿಯೇ ಬಿದ್ದು ನರಳುವಿರಲ್ಲದೆ ನಿನುಗೆ ಎಂದೆಂದಿಗೂ ಬಿಡುಗಡೆ ಯಾಗಲಾರದು. ಆದುದರಿಂದ ಮೋಕ್ಷಮಾರ್ಗವಂ ತಿಳಿದು ಜನ್ಮರಾಹಿತ್ಯವಂ ಪಡೆಯಲು ಪ್ರಯತ್ನಿಸಿರಿ ಎಂಬದಾಗಿ ನಾರದನು ದಕ್ಷಪುತ್ರರಿಗೆ ಉಪದೇಶಿಸಿದನೆಂದು ಗೂಢಾಭಿಪ್ರಾಯವು ॥೯೪॥ ಓ ಮೂರ್ಖರಿರಾ ! ಮೇಲೆ ಕೆಳಗೆ, ಅಡ್ಡಲಾಗಿ, ಎಲ್ಲಾ ದಿಕ್ಕುಗಳಲ್ಲಿಯೂ ಹೇಗಾದರೆ ಸಂಚಾರವು ತಡೆಯಲ್ಪಡುವುದಿಲ್ಲವೋ ಅಂತಹ ಅಪ್ರತಿಹತ ಗತಿಯಂ ಸಂಪಾದಿಸಿ ಭೂಮಿಯ ಪಾರವಂ ತಿಳಿಯಲು ಏತಕ್ಕೆ ಪ್ರಯತ್ನ ಪಡಬಾರದು; (ನೀವೇನೂ ತತ್ವಜ್ಞಾನಕ್ಕೆ ಅನಧಿಕಾರಿಗಳಲ್ಲ. ಸರ್ವೋತ್ತಮವಾದ ಪುರುಷಜನ್ಮವನ್ನೂ ಪಡೆದಿರುವಿರಿ. ನಿಮ್ಮ ಬುದ್ಧಿಯೂ ಕೂಡ ತುಂಬಾ ಚುರುಕಾಗಿರುವುದು. ಆದುದರಿಂದ ಲಿಂಗದೇಹಕ್ಕೆ ನಾಶವುಂಟಾಗುವವರೆಗಿನ ವೇದಾಂತ ಶಾಸ್ತ್ರವನ್ನಾದರೂ ಅಭ್ಯಾಸದಲ್ಲಿ ತೆಗೆದುಕೊಂಡು ಒಂದು ಮುಕ್ತರಾಗುವ ಉಪಾಯವಂ ಹುಡುಕಿಕೊಳ್ಳಿರೆಂಬದಾಗಿ ಗೂಢಾಭಿಪ್ರಾಯವು) ॥೯೫॥ ಇಂತು ನಾರದಮುನಿಯು ನುಡಿದ ಮಾತಂ ಕೇಳಿ ಆ ದಕ್ಷಪುತ್ರರೆಲ್ಲರೂ ಆತನ ಮಾತಂ ನಿಶ್ಚಯವೆಂದು ನೆಚ್ಚಿ, ಎಲ್ಲರೂ ದಿಕ್ಕುಪಾಲಾಗಿ ಹೊರಟು ಹೋದರು. ಸಮುದ್ರಕ್ಕೆ ಹರಿದು

ಸರ್ವತೋದಿಶಂ । ಅದ್ಯಾಪಿ ನಿವರ್ತಂತೇ ಸಮುದ್ರೇಭ್ಯ ಇ
ವಾಪಗಾಃ ॥೯೫॥ ಹರ್ಯಶ್ವೇ ಷ್ವಥ ನಷ್ಟೇಷು ದಕ್ಷಃ ಪ್ರಾ
ಚೇತಸಃ ಪುನಃ । ವೈರಿಣ್ಯಾ ಮಥ ಪುತ್ರಾಣಾಂ ಸಹಸ್ರ ಮಸೃ
ಜತ್ಪ್ರಭುಃ ॥ ೯೬ ॥ ವಿವಿಧ ಯಿಷವ ಸ್ತೇತು ಶಬಲಾಶ್ವಾಃ
ಪ್ರಜಾಃ ಪುನಃ । ಪೂರ್ವೋಕ್ತಂ ವಚನಂ ಬ್ರಹ್ಮ ! ನಾರದೇ
ನ ಪ್ರಚೋದಿತಾಃ ॥ ೯೭ ॥ ಅನ್ಯೋನ್ಯ ಮೂಚು ಸ್ತೇ
ಸರ್ವೇ ಸತ್ಯ ಮಾಹ ಮಹಾ ಮುನಿಃ । ಭ್ರಾತೄಣಾಂ ಪದವೀ
ಮೈವ ಗಂತವ್ಯಾ ನಾತ್ರ ಸಂಶಯಃ ॥ ೯೮ ॥ ಜ್ಞಾತ್ವಾ ಪ್ರಯಾ

ಬಿದ್ದ ನದಿಗಳು ಹೇಗೆ ವಾಪಸಿ ಹಿಂದಿರುಗುವುದಿಲ್ಲವೋ ಅಂತಯೇ ನಾರ
ದರ ಮಾತಂ ಕೇಳಿ ಹೊರಟು ಹೋದ ದಕ್ಷ ಕುವರರು ಇಮವರೆಗೂ
ಹಿಂದಿರುಗಲೇಇಲ್ಲ. ॥ ೯೫ ॥ ಇಂತು ಹರ್ಯಶ್ವಾದಿಗಳು ನಷ್ಟರಾದ
ರಂಬ ಸಮಾಚಾರವಂತಿಳಿದು ಪ್ರಚೇತಸಪುತ್ರನೆನಿಸಿದ ದಕ್ಷನು ಹಿಂದೆ
ಹೇಳಿದ ವೀರಣ ಬ್ರಹ್ಮನ ಮಗಳಿನಿಸಿದ ಅಸಿಕ್ನಿಯಲ್ಲಿವುರಳಿ ಬಂದು
ಸಾವಿರ ಗಂಡುಮಕ್ಕಳಂ ಜನಿಸಿದನು ॥ ೯೬ ॥ ಇಂತುಉದಿಸಿದ ಶ
ಬಲಾಶ್ವರೆನಿಸಿದ ಈ ಸಾವಿರಮಂದಿಯೂ ಕೂಡ ತಮ್ಮ ಅಣ್ಣಂದಿರಂತೆ
ಯೇ ಪ್ರಜಾವೃದ್ಧಿಗಾಗಿ ಪ್ರಯತ್ನವಾಡುತ್ತಿದ್ದರು. ಅಯ್ಯಾಬ್ರಾಹ್ಮ
ಣೋತ್ತಮನೆನಿಸಿದ ನೈಶ್ರೇಯನೆ, ದೇವರ್ಷಿಯೆನಿಸಿದ ಈ ನಾರದಮುನಿ
ಯು ಅವರನ್ನೂಸುಮ್ಮನೆ ಬಿಡಲಿಲ್ಲ. ಇವರಿಗೂ ಹಿಂದಿನಂತೆಯೇ ಉಪ
ದೇಶಿಸಿದನು. ॥೯೭॥ ಇಂತುನಾರದಮುನಿಯು ಮಾತಾಡಿಕೇಳಿ ಆ ಶಬಲಾಶ್ವ
ರೆಲ್ಲರೂ ಒಬ್ಬರಿಗೊಬ್ಬರು ಈ ನಾರದಮುನಿಯು ಹೇಳಿದಮಾತುದಿಟ. ನ
ಮ್ಮ ಅಣ್ಣಂದಿರು ಹೋಗಿರುವಮಾರ್ಗವನ್ನು ನಾವುಕಂಡು ಹಿಡಿಯಲೇಬೇ
ಕು. ಈ ವಿಷಯದಲ್ಲಿ ಸಂದೇಹವೇಇಲ್ಲ. ಉದಾಸೀನರಾಗಿದ್ದು ಫಲ
ವಿಲ್ಲ. ॥೯೮॥ ಮೊದಲು ಭೂಮಿಯ ಪ್ರಮಾಣವನ್ನರಿತು ಆಬಳಿಕ
ತಂದೆಯ ಅನುಮತಿಯಂ ಪಡೆದು ಲೋಕಸಂಗ್ರಹಾರ್ಥವಾಗಿ ಪ್ರಜಾ
ಸೃಷ್ಟಿಗೆ ಕೈವಾಡುವುದೇ ಉಚಿತವೆಂದು ತೋರುವುದು' ಎಂಬದಾಗಿ
ಆಶಬಲಾಶ್ವರೆಲ್ಲರೂ ಮಾತನಾಡಿಕೊಂಡು ತಮ್ಮ ಅಣ್ಣಂದಿರಾದ ಹರ್ಯ
ಶ್ವರು ಹೋದಮಾರ್ಗವನ್ನೇ ಹಿಡಿದು ದಿಕ್ಕುಪಾಲಾಗಿ ಹೊರಟು ಹೋ

ಣಂ ದೃಷ್ಟ್ವಾಽಽಶ್ಚ ತತ ಸ್ಸ ಽಕ್ಷ್ಯಾ ಮುಹೇ ಪ್ರಜಾಃ । ತೇಽಪಿ ತೇ
ನೈವ ಮಾರ್ಗೇಣ ಪ್ರಯಾತಾ ಸ್ಸರ್ವತೋ ದಿಕಂ । ಅದ್ಯಾಪಿ
ನ ನಿವರ್ತಂತೇ ಸಮುದ್ರೇಭ್ಯ ಇವಾ ಪಗಾಃ ॥ ೯೯ ॥ ತತಃ
ಪ್ರಭೃತಿ ವೈ ಭಾ ಽತಾ ಭ್ರಾತು ರನ್ವೇಷಣೇ ದ್ವಿಜ ! । ಪ್ರಯಾ
ತೋ ನಶ್ಯತಿ ತಥಾ ತನ್ನ ಕಾರ್ಯಂ ವಿಜಾನತಾ ॥ ೧೦೦ ॥
ತಾಂಶ್ಚಾಪಿ ನಷಾ ಽನ್ವಿ ಚ್ಛನ್ಯು ಪುತ್ರಾ ದಕ್ಷಃ ಪ್ರಜಾಪತಿಃ ।
ಕ್ರೋಧಂ ಚಕ್ರೇ ಮಹಾಭಾಗೋ ನಾರದಂತು ಶಶಾಪ ಚ ॥
ಸರ್ಗ ಕಾನು ಸ್ತತೋ ವಿದ್ವಾ ಸ ಮೈತ್ರೇಯ ! ಪ್ರಜಾಪತಿಃ ।
ಷಷ್ಟಿಂ ದಕ್ಷೋ ಽ ಸೃಜತ್ಕನ್ಯಾ ವೈರಣ್ಯಾ ಮಿತಿ ನ ಶ್ರು
ತಂ ॥ ೧೦೨ ॥ ದದೌ ಸ ದಶ ಧರ್ಮಾ ಯ ಕಾಶ್ಯಪಾಯ ತ್ರ

ದರು ಇಂತು ಹೊರಟು ಹೋದವರು ಇದುವರೆಗೂ ಹಿಂದಿರುಗಲೇ ಇಲ್ಲ. ಎಲೌ ಮೈತ್ರೇಯನೇ; ಸಮುದ್ರಕ್ಕೆ ಹರಿದು ಬಿದ್ದ ನದಿಗಳು ಎಂತು ಹಿಂದುರುಗುವುದಿಲ್ಲವೋ ಅಂತೆಯೇ ಹರ್ಯಶ್ವರಂ ಹುಡುಕಿ ಕೊಂಡು ಹೋದ ಶಬಲಾಶ್ವರ ದಾರಿಯು ಇದುವರೆಗೂ ತಿಳಿಯಲೇ ಇಲ್ಲವೆಂದು ಭಾವವು ॥ ೯೯ ॥ ಎಲೌ ಬ್ರಾಹ್ಮಣೋತ್ತಮನೆನಿಸಿದ ಮೈತ್ರೇಯನೆ: ಅದು ಮೊದಲು ಓಡಿಹೋದ ಅಣ್ಣನ ಹುಡುಕಿಕೊಂಡು ತಮ್ಮನಾದವನು ಹೋಗಬಾರದು. ಹಾಗೊಂದುವೇಳೆ ಅಜ್ಞಾನವಶಾತ್ ಹೊರಟರೆ ಮರಳಿ ಆತನು ಹಿಂದಿರುಗುವುದೇ ಇಲ್ಲ. ಅವನಂತೆಯೇ ಇವನೂ ಕೂಡ ನಷ್ಟ ನಾಗುವನೆಂದು ಭಾವವು. ಆದಕಾರಣ ಈ ಅಂಶವನ್ನು ತಿಳಿದವನು ನಷ್ಟನಾದವನನ್ನು ಹುಡುಕಿಕೊಂಡು ಹೋಗಬಾರದು ॥ ೧೦೦ ॥ ಆ ಸಳಿಕ ಮಹದೈಶ್ವರ್ಯ ಶಾಲಿಯೂ, ಪ್ರಜಾವೃದ್ಧಿ ಕಾರಣನೂ ಎನಿಸಿದ ದಕ್ಷನು ತನ್ನ ಈ ಸಾವಿರ ಮಂದಿ ಮಕ್ಕಳೂ ಕೂಡ ನಷ್ಟರಾದರೆಂಬ ಸಮಾಚಾರವಂ ತಿಳಿದು ಕ್ರೋಧಾವಿಷ್ಟನಾಗಿ ತುಂಬಾ ಸಂಕಟಪಡುತ್ತ, ದೇವರ್ಷಿ ಎನಿಸಿದ ನಾರದ ಮುನಿಗೆ ಶಾಪವನ್ನಿತ್ತನು ॥ ೧೦೧ ॥ ಎಲೈ ಮೈತ್ರೇಯನೇ: ತರುವಾಯ ಸೃಷ್ಟಿಯಂ ಬಯಸಿದ ದಕ್ಷನು ವೀರಣ ಬ್ರಹ್ಮನ ಮಗಳಾದ ಅಸಿಕ್ನಿಯಲ್ಲಿ ಅರವತ್ತು ಮಂದಿ ಹೆಣ್ಣು ಮಕ್ಕಳನ್ನು ಪಡ

ಯೋದಶ । ಸಪ್ತ ವಿಂಶತಿ ಸೋಮಾಯ ಚ ತಸೋ್ಮೀ ನ ರಿಷ್ಟ
ನೇಮಿನೇ ॥ ೧೦೫ ॥ ದ್ವೇ ಚೈವ ಬಹುಪುತ್ರಾಯ ದ್ವೇ ಚೈ
ವಾಂಗಿ ರಸೇ ತಥಾ । ದ್ವೇ ಭೃಶಾಶ್ವಾಯ ವಿದುಷೇ ತಾಸಾಂ
ನಾಮಾನಿ ಮೇ ಶೃಣು ॥೧೦೪॥ ಅರುಂಧತೀ ವಸು ಜಾರ್ಯಾಮೀ
ಲಂಭೋಭಾನು ರ್ಮರುದ್ವತೀ।ಸಂಕಲ್ಪಾಚ ಮುಹೂರ್ತಾ ಚ ಸಾ
ಧ್ಯಾ ವಿಶ್ವಾಚ ಭಾವಿನೀ । ಧರ್ಮಪತೆ್ನ್ಯೀ ದಶತ್ವೇತಾ ಸ್ತಾ
ಸ್ವಪತಾ್ಯನಿ ಮೇಶೃಣು ॥ ವಿಶ್ವೇ ದೇವಾಸು್ತ ವಿಶ್ವಾಯಾ
ಸಾ್ಸಧ್ಯಾಸಾಧಾ್ಯನ ವ್ಯಜಾಯತ । ಮರುದ್ವತಾ್ಯಂ ಮರು
ತ್ವಂತೋ ವಸವಸು್ತ ವಸೋ್ಸ್ಕೃತಾಃ ॥ ೧೦೫ ॥ ಮು
ಹೂರ್ತಾಸು್ತ ಮುಹೂರ್ತಾಯಾಂ ಜಾತಾಭಾನೋ್ಸ್ತು ಭಾ

ದನು, ಹೀಗೆಂಬದಾಗಿ ನಾನು ಈ ಕಥೆಯನ್ನು ಕೇಳಿರುವೆನು ॥ ೧೦೩ ॥ ಆ ಅರವತ್ತು ಮಂದಿಯಲ್ಲಿ ಹತ್ತು ಮಂದಿಯನ್ನು ಧರ್ಮ ಪುರುಷನಿಗೂ, ಚತುರ್ಮುಖನ ಮೊಮ್ಮಗನಾದ ಕಾಶ್ಯಪನಿಗೆ ಹದಿನೂರು ಮಂದಿಯನ್ನೂ, ಚಂದ್ರನಿಗೆ ಇಪ್ಪತ್ತೇಳು ಮಂದಿಯನ್ನೂ, ಅರಿಷ್ಟನೇಮಿಗೆನಾಲ್ಕು ಮಂದಿಯನ್ನೂ, ಬಹುಪುತ್ರನಿಗೆ ಇಬ್ಬರನ್ನೂ, ಅಂಗಿರಸ್ಸಿಗೆ ಇಬ್ಬರನ್ನೂ, ಭೃಶಾಶ್ವನಿಗೆ ಇಬ್ಬರನ್ನೂ, ಕೊಟ್ಟು ಎಲ್ಲ ಕನ್ಯೆಯರಿಗೂ ವಿವಾಹವಂ ಮಾಡಿದನು. ಅವರುಗಳ ಹೆಸರುಗಳನ್ನೂ ವಿಶದವಾಗಿ ಹೇಳುವೆನು ಕೇಳು ॥ ೧೦೪ ॥ ೧೦೫ ॥ ಅರುಂಧತಿಯೇ ಮೊದಲಾದ ಅರವತ್ತು ಮಂದಿ ದಕ್ಷಕನ್ಯೆಯರಲ್ಲಿ ವಸು, ಜಾಮಿ, ಲಂಭೆ, ಭಾನು, ಮರುದ್ವತೀ, ಸಂಕಲ್ಪ, ಮುಹೂರ್ತ, ಸಾಧ್ಯ, ವಿಶ್ವ, ಭಾವಿನೀ, ಈ ಹತ್ತು ಮಂದಿಯೂ ಧರ್ಮ ಪುರುಷನ ಹೆಂಡತಿಯರು. ಇವರುಗಳಲ್ಲಿ ಜನಿಸಿದ ಮಕ್ಕಳ ಹೆಸರುಗಳಂ ವಿವರಿಸುವೆನು; ಈ ಹತ್ತು ಮಂದಿಯಲ್ಲಿ ವಿಶ್ವ ಎಂಬಾಕೆಯು ವಿಶ್ವೇದೇವತೆಗಳನ್ನು ಹೆತ್ತಳು; ಸಂಧ್ಯಾ ಎಂಬವಳಲ್ಲಿ ಹುಟ್ಟಿದವರೇ ಸಾಧ್ಯರೆಂಬುವರು; ಮರುದ್ವತಿಯಮಕ್ಕಳೇ ಮರುತ್ವಂತರು, ವಸು ಎಂಬಾಕೆಯಲ್ಲಿ ವಸುಗಳು ಜನಿಸಿದರು ॥ ೧೦೫ ॥

ಮುಹೂರ್ತೆ ಎಂಬಾಕೆಯಲ್ಲಿ ಮುಹೂರ್ತಾಭಿಮಾನಿ ದೇವತೆಗಳು ಜನಿಸಿದರು. ಭಾನು ಎಂಬಾಕೆಯಿಂದ ಭಾನುಗಳು (ಕಿರಣಗಳು) ಆವಿ

ನವಃ ॥ ೧೦೬ ॥ ಲಂಭೋಯಾಸ್ತು ಸುತೋ ಘೋಷೋ ನಾ
ಗವೀಥಿಸ್ತು ಜಾಮಿಜಃ ॥೧೦೭॥ ಪೃಥಿವೀ ವಿಷಯಂ ಸರ್ವಮು
ರುಂಧತ್ಯ್ಯಾಮಜಾಯತ । ಸಂಕಲ್ಪಾಯಾಂ ತು ಸರ್ವಾತ್ಮಾ ಜ
ಜ್ಞೇ ಸಂಕಲ್ಪ ಏವಜ ॥೧೦೮॥ ಯೇತ್ವನೇಕ ವಸುಪ್ರಾಣಾ ದೇ
ವಾ ಜ್ಯೋತಿಃ ಪುರೋಗಮಾಃ । ವಸವೋಽಷ್ಟೌ ಸಮಾಖ್ಯಾತಾ
ಸ್ತೇಷಾಂ ವಕ್ಷ್ಯಾಮಿ ವಿಸ್ತರಂ ॥೧೦೯॥ ಆಪೋ ಧ್ರುವಶ್ಚ ಸೋ
ಮಶ್ಚ ಧರ್ಮಶ್ಚೈವಾ ನಿಲೋಽನಲಃ । ಪ್ರತ್ಯೂಷಶ್ಚ ಪ್ರಭಾ
ಸಶ್ಚ ವಸವೋ ನಾಮಭಿಸ್ಮೃತಾಃ ॥೧೧೦॥ ಆಪಸ್ಯ ಪುತ್ರೋ
ವೈಸ್ತಬ್ಧ ಶ್ರಮಶ್ಯಾನ್ತೋ ಧನಿಸ್ತಥಾ ।ಧ್ರುವಸ್ಯ ಪುತ್ರೋ

ರ್ಭವಿಸಿದರು ॥೧೦೬॥ಲಂಭೆಯ ಎಂಬಾಕೆಗೆ ಘೋಷಾಭಿಮಾನಿದೇವತೆಯು ಮಗನೆನಿಸಿದನು, ಜಾಮಿಯ ಎಂಬಾಕೆಯಲ್ಲಿ ನಾಗವೀಥಿಯು (ದೇವತೆಗಳುಸಂಚರಿಸತಕ್ಕ ಉತ್ತರದಿಕ್ಕಿನ ಬೀದಿಗೆ ಅಭಿಮಾನಿದೇವತೆಯು) ಜನಿಸಿದನು ॥೧೦೭॥ ಅರುಂಧತಿಯಲ್ಲಿ ಪೃಥಿವಿಯೇ ಆಧಾರವಾಗಿರುವ (ಭೂಮಿಯಲ್ಲಿರುವ) ಎಲ್ಲ ಚರಾಚರ ಪ್ರಾಣಿವರ್ಗವೂ ಜನಿಸಿದುದು, ಸಂಕಲ್ಪಾ ಎಂಬವಳಲ್ಲಿ ಸರ್ವವಸ್ತು ವಿಷಯಗಳೆನಿಸಿದ ಸಂಕಲ್ಪಾಭಿಮಾನಿ ದೇವತೆಯು ಜನಿಸಿದಳು ॥೧೦೮॥ ವಸು ಎಂಬವಳಲ್ಲಿ ಹುಟ್ಟಿದ ಎಂಟುಮಂದಿಯೂ ಕೂಡ ನಾನಾವಿಧವಾದ ಪ್ರಾಣಬಲದಿಂದೊಡಗೂಡಿದ್ದರು. ಇವರುಗಳಲ್ಲಿ ಅಗ್ನಿಯೇ ಮೊದಲನೆಯವನು. ಈ ವಿಷಯದಲ್ಲಿ ,, ವಸೂನಾಂ ಪಾವಕಶ್ಚಾಸ್ಮಿ ,, ಎಂಬ ಸ್ಮೃತಿಯು ಪ್ರಮಾಣವಾಗಿರುವುದು ಈ ಎಂಟುಮಂದಿಯ ಹೆಸರುಗಳನ್ನೂ ವಿಶದವಾಗಿ ಹೇಳುವೆನು ಕೇಳು॥೧೦೯॥ಆಪ,ಧ್ರುವ, ಸೋಮ, ಧರ್ಮ, ಅನಿಲ,ಅನಲ ಪ್ರತ್ಯೂಷ, ಪ್ರಭಾಸರೆಂಬದಾಗಿ ವಸುಗಳು ಎಂಟುಮಂದಿ ಇರುವರು. ॥೧೧೦॥ ಅವರಲ್ಲಿ ಆಪನೆಂಬುವನಿಗೆ ಶ್ರಮ, ಶ್ರಾನ್ತ, ಧುನಿಗಳೆಂಬದಾಗಿ ಮೂರುಮಂದಿ ಮಕ್ಕಳು. ಎರಡನೇಯವನೆನಿಸಿದ ಧ್ರುವನೆಂಬುವನಿಗೆ ಲೋಕದಲ್ಲಿನ ಪ್ರಜೆಗಳನ್ನು ಕ್ಷೀಣರನ್ನಾಗಿಮಾಡುವ (ಲೋಕದಲ್ಲಿರುವ ಪ್ರಜೆಗಳನ್ನು ಸಂಹಾರ ಮಾಡುವವನಾದಕಾರಣ ಕಾಲನೆಂದು ಹೆಸರು) ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಕಾಲನೆಂಬವನು ಮಗನು ॥೧೧೧॥

ಭಗವಾ೯ ಕಾಲೋ ಲೋಕ ಪ್ರಕಾಲನಃ ॥೧೧೧॥ ಸೋಮಸ್ಯ ಭಗವಾ೯ ವರ್ಚಾ ವರ್ಚಸ್ವೀ ಯೇನ ಜಾಯತೇ ॥೧೧೨॥ ಧರ್ಮ ಸ್ಯ ಪುತ್ರೋ ದ್ರವಿಣೋ ಹುತ ಹವ್ಯವಹಸ್ತಥಾ । ಮನೋಹರಾಯಾ ಶ್ಚಶಿರಃ ಪ್ರಾಣೋ ೨ ಥ ರಮಣಸ್ತಥಾ ॥೧೧೩॥ ಅನಿಲಸ್ಯ ಶಿವಾ ಭಾರ್ಯ್ಯಾ ತಸ್ಯಾಃ ಪುತ್ರಃ ಪುರೋಜವಃ । ಅವಿಜ್ಞಾತ ಗತಿಶ್ಚೈವ ದ್ವೌ ಪುತ್ರಾ ವನಿಲಸ್ಯತು ॥೧೧೪॥ ಅಗ್ನಿಪುತ್ರಃ ಕುಮಾರಸ್ತು ಶರಸ್ತಂಬೇ ವ್ಯಜಾಯತ । ತಸ್ಯಶಾಖೋ ವಿಶಾಖಶ್ಚ ನೈಗಮೇಷಶ್ಚ ಪೃಷ್ಠಜಾಃ ॥೧೧೫॥ ಅಪತ್ಯಂ ಕೃತ್ತಿಕಾನಾಂತು ಕಾರ್ತಿಕೇಯ ಇತಿಸ್ಮೃತಃ ॥ ೧೧೬ ॥ ಪ್ರತ್ಯೂಷಸ್ಯ ವಿದುಃ ಪುತ್ರ ಮೃಷಿಂ ನಾಮ್ನಾತು ದೇವಲಂ । ದ್ವೌಪುತ್ರೌ ದೇವಲಸ್ಯಾಪಿ ಹ್ಯ ಮೂವಂತೌ ಮನೀಷಿಣೌ ॥೧೧೭॥ ಬೃಹಸ್ಪತೇಸ್ತು ಭಗಿನೀ ವರ

ಸೋಮನ ಮಗನು ಮಹಾಮಹಿಮ ಸಂಪನ್ನನಾದ ವರ್ಚಸ್ಸೆಂಬುವನು (ವರ್ಚಸ್ಸಿಗೆ ಅಭಿಮಾನಿದೇವತೆಯು) ಈತನ ಅನುಗ್ರಹದಿಂದಲೇ ವರ್ಚಸ್ಸಂ ಪಡೆಯತಕ್ಕದು ॥೧೧೨॥ ಧರ್ಮನೆಂಬವನಿಗೆ ಮನೋಹರೆ ಎಂಬಾಕೆಯಲ್ಲಿ ದ್ರವಿಣ, ಹುತಹವ್ಯವಹ, ಶಿಶಿರ, ಪ್ರಾಣ, ರಮಣರೆಂಬ ಮಕ್ಕಳು ಹುಟ್ಟಿದರು ॥೧೧೩॥ ಅನಿಲನೆಂಬ ವಸುವಿಗೆ ಶಿವಾ ಎಂಬಾಕೆಯು ಹೆಂಡತಿಯು. ಆಕೆಗೆ ಪುರೋಜವ, ಅವಿಜ್ಞಾತಗತಿ ಎಂಬದಾಗಿ ಇಬ್ಬರು ಮಕ್ಕಳು (ಅಂದರೆ ಅನಿಲನು ತನ್ನ ಹೆಂಡತಿಯಾದ ಶಿವಾ ಎಂಬ ವಳಲ್ಲಿ ಪುರೋಜವ, ಅವಿಜ್ಞಾತಗತಿಗಳೆಂಬದಾಗಿ ಇಬ್ಬರು ಮಕ್ಕಳಂ ಜನಿಸಿದನೆಂದು ಭಾವವು ॥೧೧೪॥ ಅಗ್ನಿಪುತ್ರನೆನಿಸಿದ ಕುಮಾರಸ್ವಾಮಿಯು ಕಾಚಿಹುಲ್ಲಿನಲ್ಲಿ ಜನಿಸಿದನು. ಆತನಿಗೆ ಶಾಖ, ವಿಶಾಖ, ನೈಗಮೇಷರೆಂಬದಾಗಿ ಮೂರುಮಂದಿ ತಮ್ಮಂದಿರು ॥೧೧೫॥ ಈ ಕುಮಾರಸ್ವಾಮಿಯೇ ಕೃತ್ತಿಕೆಯ ಮಗನಾದುದರಿಂದ ಈತನಿಗೇನೇ ಕಾರ್ತಿಕೇಯನೆಂಬದಾಗಿ ವ್ಯವಹಾರವು ॥೧೧೬॥ ಪ್ರತ್ಯೂಷನಿಗೆ ಮುನಿವರ್ಯನೆನಿಸಿದ ದೇವಲನು ಮಗನು. ಈ ದೇವಲಮುನಿಗೆ ಕ್ಷವಾತೀಲರೂ, ವಿವೇಕಜ್ಞಾನ ಸಂಪನ್ನರೂ ಎನಿಸಿದ ಇಬ್ಬರು ಮಕ್ಕಳಾದರು ॥೧೧೭॥ ದೇವಗುರುವೆನಿಸಿದ ಬೃಹಸ್ಪತ್ಯಾಚಾರ್ಯನ ತಂಗಿಯು ವಸುಗಳಲ್ಲಿ ಎಂಟನೆಯವನಾದ

ಸ್ತ್ರೀ ಬ್ರಹ್ಮಚಾರಿಣೀ । ಯೋಗ ಸಿದ್ಧಾ ಜಗತ್ಕೃತ್ಸ್ನ ಮಸ
ಕ್ತಾ ವಿಚರತ್ಯುತ ॥ ಪ್ರಭಾಸಸ್ಯ ತುಭಾರ್ಯಾ ಸಾ ವಸೂನಾ ಮ
ಷ್ಟವುರ್ಯ ಹ॥೧೧೯॥ವಿಶ್ವಕರ್ಮಾ ಮಹಾಭಾಗಸ್ತ್ವಾಂ ಜಜ್ಞೇ
ಪ್ರಜಾಪತಿಃ । ಕರ್ತಾಶಿಲ್ಪ ಸಹಸ್ರಾಣಾಂ ತ್ರಿದಶಾನಾಂಚವ
ರ್ಧಕಿಃ ॥೧೧೯॥ ಭೂಷಣಾನಾಂ ಚ ಸರ್ವೇಷಾಂ ಕರ್ತಾಶಿಲ್ಪ ವ
ತಾಂವರಃ । ಯಸ್ಸರ್ವೇಷಾಂ ವಿಮಾನಾನಿ ದೇವಾದೀನಾಂ ಚ ಕಾ
ರಹ ॥ ಮನುಷ್ಯಾಶ್ಚೋಪ ಜೀವಂತಿ ಯಸ್ಯ ಶಿಲ್ಪಂ ಮಹಾತ್ಮ
ನಃ॥೧೨೦॥ಅಜೈಕಪಾದ ಹಿ ರ್ಬುಧ್ನ್ಯ ಸ್ತ್ವಷ್ಟಾ ರುದ್ರಶ್ಚ ಬುದ್ಧಿ
ರ್ಮಾ । ತ್ವಷ್ಟುಶ್ಚ ಪ್ಯಾತ್ಮಜಃ ಪುತ್ರೋ ವಿಶ್ವರೂಪೋ ಮಹಾ

ಪ್ರಭಾಸನೆಂಬವನ ಧರ್ಮಪತ್ನಿಯು. ಈಕೆಯು ಸರ್ವೋತ್ತಮವಾದ ದೇಹಸೌಂದರ್ಯದಿಂದೊಡಗೂಡಿ ಉತ್ತಮ ಸ್ತ್ರೀಯೋಗ್ಯವಾದ ಶಾಂತಿ, ವಿನಯ, ಗಾಂಭೀರ್ಯ, ಮಾರ್ದವ, ಲಜ್ಜೆ ಮೊದಲಾದ ಸದ್ಗುಣಗಳಿಂದೊಡಗೂಡಿದವಳು. ಈಕೆಯು ಅನುದಿನವೂ ಪರಬ್ರಹ್ಮಾನುಸಂಧಾನದಲ್ಲಿಯೇ ಆಸಕ್ತಳೆನಿಸಿ, ಯೋಗಸಿದ್ಧಿಯಂ ಪಡೆದು ವೈರಾಗ್ಯ ಸಂಪನ್ನಳೆನಿಸಿ ಸಾಂಸಾರಿಕ ವ್ಯವಹಾರಗಳಲ್ಲಿ ಜುಗುಪ್ಸೆಯಂಹೊಂದಿ ಅನವರತವೂ ಈ ಜಗತ್ತನ್ನೆಲ್ಲವಂ ಅಲೆಯುತಲಿದ್ದಳು ॥೧೧೯॥ ತರುವಾಯ ದೇವತೆಗಳ ಶಿಲ್ಪಿ ಎನಿಸಿ, ಅನೇಕ ಬಗೆಗಳಾದ ಹಸ್ತಶಿಲ್ಪಿಗಳಲ್ಲಿ ನಿಪುಣನೂ, ದೇವತೆಗಳನ್ನು ವಿಶೇಷವಾಗಿ ಅಭಿವೃದ್ಧಿಪಡಿಸಿದವನೂ ಎನಿಸಿದ ವಿಶ್ವಕರ್ಮನು ಎಂಟನೆಯವನಾದ ಪ್ರಭಾಸನೆಂಬ ವಸುವಿನ ಹೆಂಡತಿಯಲ್ಲಿಯೇ ಹುಟ್ಟಿದನು ॥೧೧೯॥ ಈ ವಿಶ್ವಕರ್ಮನೇ ಲೋಕದಲ್ಲಿ ಅನೇಕ ಬಗೆಗಳಾದ ಆಭರಣಗಳನ್ನೂ, ಅನೇಕ ಚಮತ್ಕಾರಗಳನಿಸಿದ ಹಸ್ತಚಾತುರ್ಯಗಳನ್ನೂ ನಿರ್ಮಿಸಿದನು. ದೇವತೆಗಳೇ ಮೊದಲಾದವರಿಗೆಲ್ಲಾ ಈತನೇ ವಿಮಾನಗಳನ್ನೂ ಸಹ ನಿರ್ಮಿಸಿಕೊಟ್ಟವನು. ಭೂಲೋಕದಲ್ಲಿನ ಮನುಷ್ಯರೂ ಕೂಡ ಈತನ ವಿದ್ಯಾನೈಪುಣ್ಯವನ್ನೇ ಅವಲಂಬಿಸಿ ಆತನಲ್ಲಿದ್ದ ವಿದ್ಯಾನೈಪುಣ್ಯದ ಅಲ್ಪಾಂಶದಿಂದ ಈ ಲೋಕದಲ್ಲಿ ಮಹಾಚಾತುರ್ಯಯುಕ್ತರಾಗಿ ಜೀವಿಸುವರು ॥೧೨೦॥ ಇಂತು ವಿಶ್ವಕರ್ಮನ ಜನ್ಮಾನಂತರ ಬೃಹಸ್ಪತ್ಯಾಚಾರ್ಯನ ಸೋದರಿಯೂ, ಪ್ರಭಾಸನ ಪತ್ನಿ

ತಪಾಃ॥೧೨೧॥ ಹರಶ್ಚ ಬಹುರೂಪಶ್ಚ ತ್ರ್ಯಂಬಕ ಶ್ಚಾಪರಾಜಿತಃ
ವೃಷಾಕಪಿಶ್ಚ ಶಂಭುಶ್ಚ ಕಪರ್ದೀ ರೈವತಸ್ತಥಾ ॥೧೨೨॥ ಮೃಗ
ವ್ಯಾಧಶ್ಚ ಶರ್ವಶ್ಚ ಕಪಾಲೀಚ ಮಹಾಮುನೇ । ಏಕಾದಶೈತೇ
ಕಥಿತಾ ರುದ್ರಾಸ್ತ್ರಿ ಭುವನೇಶ್ವರಾಃ॥೧೨೩॥ಶತಂ ತ್ವೇಕಂ ಸಮಾ
ಮ್ನಾತಂ ರುದ್ರಾಣಾ ಮಮಿತೌಜಸಾಂ । ಕಾಶ್ಯಪಸ್ಯತು ಭಾರ್ಯಾ
ಯಾ ಸ್ತಾಸಾಂ ನಾಮಾನಿ ಮೇಶೃಣು ॥ ೧೨೪ ॥ ಅದಿತಿ ರ್ದಿತಿ
ರ್ದನುಶ್ಚೈವ ಹ್ಯರಿಷಾ ಸುರಸಾ ಕಷಾ । ಸುರಭಿ ರ್ವಿನತಾಚೈವ
ತಾಮ್ರಾ ಕ್ರೋಧವಶಾ ಇಲಾ॥ ಕದ್ರೂ ರ್ಮುನಿಶ್ಚ ಧರ್ಮಜ್ಞ ! !
ತದಪತ್ಯಾನಿ ಮೇಶೃಣು ॥೧೨೫॥ ಪೂರ್ವ ಮನ್ವಂತರೇ ಶ್ರೇಷ್ಠಾ

ಯೂ ಎನಿಸಿದ ಆಕೆಯಲ್ಲಿಯೇ ಅಜೈಕಪಾತ್, ಅಹಿರ್ಬುಧ್ನ್ಯ, ತ್ವಷ್ಟೃ ಎಲ್ಲ, ಅತ್ಯಂತ ಬುದ್ಧಿಯುಕ್ತನೆನಿಸಿದ ರುದ್ರನೆಂಬ ನಾಲ್ಕುಮಂದಿ ಕುವರರು ಜನಿಸಿದರು. ಅವರಲ್ಲಿ ಮೂರನೆಯವನಾದ ತ್ವಷ್ಟೃವಿಗೆ ಮಹಾತಪಸ್ಸಂಪನ್ನನೆನಿಸಿದ ವಿಶ್ವರೂಪನೆಂಬ ತನಯನು ಜನಿಸಿದನು ॥೧೨೧॥ ಹರ, ಬಹುರೂಪ, ತ್ರ್ಯಂಬಕ, ಅಪರಾಜಿತ, ವೃಷಾಕಪಿ, ಶಂಭು, ಕಪರ್ದಿ, ರೈವತ, ಮೃಗವ್ಯಾಧ, ಶರ್ವ, ಕಪಾಲಿಗಳೆಂಬ ಈ ಹನ್ನೊಂದುಮಂದಿಯೂ ರುದ್ರರನಿಸುವರು. ತ್ವಷ್ಟೃವಿಗೆ ತಮ್ಮನೆನಿಸಿದ ರುದ್ರನಲ್ಲಿಯೇ ಈ ಹನ್ನೊಂದು ಪ್ರಭೇದಗಳು. ಇವರೇ ಮೂರುಲೋಕಗಳಲ್ಲಿಯೂ ಅಪ್ರತಿಹತವಾದ ಪ್ರಭುಶಕ್ತಿಯಿಂದೊಡಗೂಡಿರುವಕಾರಣ ತ್ರಿಭುವನೇಶ್ವರರೆಂದು ಕರೆಯಿಸಿಕೊಳ್ಳುತ್ತಾರೆ ಇವರಿಗೆ ಏಕಾದಶರುದ್ರರೆಂದು ವ್ಯವಹಾರವು ॥೧೨೩॥೧೨೪॥ ಈ ಹಿಂದೆ ಹೇಳಿದ ಹನ್ನೊಂದುಮಂದಿ ರುದ್ರರಲ್ಲಿ ಪ್ರತಿಯೊಬ್ಬರೂ ನೂರುನೂರು ಬಗೆಯಿಂದಿರುವರು. ಇವರೆಲ್ಲರೂ ಈ ಹನ್ನೊಂದುಮಂದಿ ರುದ್ರರಿಗೂ ವಿರೂಪರೆನಿಸುವರು. ಇದೇ ಅರ್ಥವನ್ನೇ ,, ಸಹಸ್ರಾಣಿ ಸಹಸ್ರಶೋಯೇ ರುದ್ರಾ ಅಧಿಭೂವ್ಯಾಂ' ಎಂಬುದಾಗಿ ಶ್ರುತಿಯೂ ಕೂಡ ಹೇಳುತ್ತಿರುವುದು ॥ ೧೨೪ ॥ ಇಂತು ಧರ್ಮಪುರುಷನ ಹೆಂಡತಿಯರ ವಂಶಾವಳಿಯನ್ನು ಹೇಳಿದುದಾಯಿತು. ಇನ್ನು ಕಾಶ್ಯಪಮುನಿಯ ಹದಿಮೂರುಮಂದಿ ಹೆಂಡತಿಯರ ಹೆಸರುಗಳನ್ನೂ, ಅವರ ವಂಶಾವಳಿಯನ್ನೂ ಕೂಡ ನಿರೂಪಿಸುವೆನು. ಅದಿತಿ,

ದ್ವಾದಶಾಽಽ ಸ್ಯ ಸುರೋತ್ತಮಾಃ। ತುಷಿತಾ ನಾಮತೇನ್ಯೋನ್ಯ
ಮೂಚುರ್ವೈವಸ್ವತೇಂತರೇ ॥೧೫॥ ಉಪಸ್ಥಿತೇ ಽ ತಿ ಯಶಸ
ಶ್ಚಾಕ್ಷುಷಸ್ಯಾಂತರೇ ಮನೋಃ। ಸಮುವಾಯಿಾ ಕೃತಾ ಸ್ಸರ್ವೇ
ಸಮಾಗಮ್ಯ ಪರಸ್ಪರಂ ॥ ೨೭॥ ಅಗಚ್ಛತ ದ್ಭುತಂ ದೇವಾ! ಅದಿ
ತಿಂ ಸಂಪ್ರವಿಶ್ಯವೈ । ಮನ್ವಂತರೇ ಪ್ರಸೂಯಾಮ ಸ್ತನ್ನ ಶ್ರೇ
ಯೋ ಭವೇ ದಿತಿ ॥೧೪೪॥ ಏವ ಮುಕ್ತಾ ್ವ ತುತೇ ಸರ್ವೇ ಚಾ
ಕ್ಷುಷ ಸ್ಯಾಂತರೇ ಮನೋಃ । ಮೂರೀಚಾ ತ್ಕಶ್ಯಪಾಜ್ಜಾತಾ
ಸ್ತೇ ಽ ದಿತ್ಯಾ ದಕ್ಷ ಕನ್ಯಯಾ ॥೧೫೯॥ ತತ್ರ ವಿಷ್ಣ್ವಂಶ ಶಕ್ರ,

ದಿತಿ, ದನು, ಅರಿಷಾ, ಸುರಸಾ, ಕಷಾ, ಸುರಭಿ, ವಿನತಾ, ತಾಮ್ರಾ, ಕ್ರೋಧವತಾ, ಇಲಾ, ಕದ್ರೂ, ಮುನಿ, ಎಂಬದಾಗಿ ಹದಿಮೂರುಮಂದಿ ಯೂ ಕಾಶ್ಯಪಮುನಿಯ ಹೆಂಡತಿಯರು. ಇವರ ಮಕ್ಕಳ ಹೆಸರನ್ನು ವಿವರಿಸುವೆನು॥೧೫೫॥ಆಹದಿಮೂರು ಮಂದಿಯಲ್ಲಿ ಅದಿತಿಗೆ ತುಷಿತರೆಂಬ ದೇವಯೋನಿ ವಿಶೇಷಗಳೇ ಮಕ್ಕಳು. ಇವರು ಹಿಂದಿನ ಚಾಕ್ಷುಷ ಮನ್ವಂತರದಲ್ಲಿ ತುಷಿತರೆಂಬ ಹೆಸರಿನಿಂದ ಲೋಕದಲ್ಲಿ ಹೆಸರ್ಗೊಂಡು ಸರ್ವೋತ್ತಮರಾದ ದೇವತೆಗಳೆನಿಸಿದ್ದರು. ಇಂತು ಚಾಕ್ಷುಷ ಮನ್ವಂತರವು ಕಳೆದು ಈಗ ನಡೆಯುತ್ತಿರುವ ವೈವಸ್ವತ ಮನ್ವಂತರವು ಉಪಕ್ರಮವಾದಮೇಲೆ ಆ ದೇವತೆಗಳೆಲ್ಲರೂ ಒಬ್ಬೊರಿಗೊಬ್ಬರು ಈ ರೀತಿ ಮಾತನಾಡಿಕೊಂಡು ಮುಂದಿನದೀತಿ ನಡೆಯತೊಡಗಿದರು ॥೧೫೬॥ ಅತ್ಯಂತ ಪ್ರಸಿದ್ಧವಾದ ಕೀರ್ತಿಸಂಪನ್ನರೆನಿಸಿದ ಈ ಹನ್ನೆರಡುಮಂದಿ ಯೂ ಕೂಡ ಚಾಕ್ಷುಷ ಮನ್ವಂತರವು ನಡೆಯುತ್ತಿದ್ದ ಕಾಲದಲ್ಲಿ ಬಂದುಕಡೆ ಗುಂಪುಸೇರಿ ಓ ದೇವತೆಗಳಿರಾ, ಈ ಚಾಕ್ಷುಷ ಮನ್ವಂತರದಲ್ಲಿ ನಾವುಗಳೆಲ್ಲರೂ ಕಾಶ್ಯಪಮುನಿಯ ಧರ್ಮಪತ್ನಿ ಎನಿಸಿದ ಅದಿತಿ ದೇವಿ ಯನ್ನು ಪ್ರವೇಶಿಸಿ ಜನ್ಮವಂ ಪಡೆಯೋಣ. ಇಂತು ನಾವು ಕಾಶ್ಯಪ ನಿಂದ ಅದಿತಿ ದೇವಿಯಲ್ಲಿ ಜನಿಸಿದರೆ ಇದರಿಂದ ಬಹಳ ಮೇಲ್ಮೆಯುಂ ಟಾಗುವದು; ಎಂಬದಾಗಿ ಚಾಕ್ಷುಷ ಮನ್ವಂತರದಲ್ಲಿ ಯೋಚಿಸಿಕೊಂ ಡು ವೈವಸ್ವತ ಮನ್ವಂತರದಲ್ಲಿ ಅದಿತಿಯನ್ನು ನಿಮಿತ್ತಮಾಡಿಕೊಂಡು ಕಾಶ್ಯಪನಿಂದ ಜನಿಸಿದರು ॥೧೫೭-೧೫೮-೧೫೯॥ ತರುವಾಯ ಅದಿತಿಯಲ್ಲಿ

ಕ್ಷ ಜಜ್ಞಾತೇ ಪುನರೇವಹಿ॥ ಅರ್ಯಮಾ ಚೈವ ಧಾತಾಚ ತ್ವಷ್ಟಾ
ಪೂಷಾ ತಥೈವಚ ॥೧೫೦॥ ವಿವಸ್ವಾ೯ ಸವಿತಾ ಚೈವ ಮಿತ್ರೋ
ವರುಣ ಏವಚ । ಅಂಶು ರ್ಭಗಶ್ಚಾತಿ ತೇಜಾ ಆದಿತ್ಯಾ ದ್ವಾದಶ
ಸ್ಮೃತಾಃ ॥ ೧೫೧ ॥ ಚಾಕ್ಷು ಷಸ್ಯಾಂತರೇ ಪೂರ್ವ ಮಾಸ೯
ಯೇ ತುಷಿತಾಸ್ಸುರಾಃ।ವೈವಸ್ವತೇಂತರೇ ತೇವೈ ಆದಿತ್ಯಾ ದ್ವಾ
ದಶಸ್ಮೃತಾಃ ॥ ೧೫೨ ॥ ಯಾ ಸ್ಸಪ್ತವಿಂಶತಿಃ ಪ್ರೋಕ್ತಾ
ಸ್ಸೋಮಪತ್ನ್ಯೋಥ ಸುವ್ರತಾಃ । ತಾಸಾಮಪತ್ಯಾ ನ್ಯೃಭ
ವ೯ ದೀಪ್ತಿಮಂತ್ಯೆತಿ ತೇಜಸಾಂ ॥ ೧೫೩ ॥ ಅರಿಷ್ಟನೇಮಿ
ಪತ್ನೀನಾಮಪತ್ಯಾ ನೀಹಷೋಡಶ ॥ ೧೫೪ ॥ ಬಹುಪುತ್ರ

ವಿಷ್ಣು, ಇಂದ್ರ, ಇವರಿಬ್ಬರೂ ಮರಳಿ ಜನಿಸಿದರು, ಅರ್ಯಮ್ಯ, ಧಾತೃ, ತ್ವಷ್ಟೃ, ಪುಷ್ಣ, ವಿವಸ್ವತ್, ಸವಿತೃ, ಮಿತ್ರ, ವರುಣ, ಅಂಶು, ಭಗ ಅತಿತೇಜಸ್ಸುಗಳೆಂಬದಾಗಿ ಆದಿತ್ಯರಲ್ಲಿ ಹನ್ನೊಂದು ವಿಭಾಗಗಳುಂಟು, ಆದಿತ್ಯರನ್ನೂ ಸೇರಿಕೊಂಡು ಸೂರ್ಯನಿಗೆ ಹನ್ನೊಂದು ಹಸರುಳ್ಳ ಪ್ರಭೇದಗಳೆಂದು ಭಾವವು ॥೧೫೦॥೧೫೧॥ ಚಾಕ್ಷುಷ ಮನ್ವಂತರದಲ್ಲಿ ತುಷಿತರೆಂಬ ಹೆಸರಿನಿಂದ ಆದಿಯಲ್ಲಿ ಜನಿಸಿದ್ದ ದೇವತೆಗಳೇ ಈ ವೈವಸ್ವಂತ ಮನ್ವಂತರದಲ್ಲಿ ದ್ವಾದಶಾದಿತ್ಯರೆಂಬದಾಗಿ ಕಾಶ್ಯಪನಿಂದ ಅದಿತಿಯಲ್ಲಿ ಜನಿಸಿದರು ॥೧೫೨॥ ಇಂತು ಕಾಶ್ಯಪನ ಹಿರಿಯ ಹೆಂಡತಿಯಾದ ಅದಿತಿಯ ವಂಶಾವಳಿಯನ್ನು ಹೇಳಿದ್ದಾಯಿತು. ಇನ್ನುಮುಂದೆ ದಿತಿಯ ವಂಶವರ್ಣನವು ಪ್ರಕೃತವಾಗಿದ್ದರೂ ಪ್ರಹ್ಲಾದ ಚರಿತ್ರೆಯೇ ಮೊದಲಾದ ದಿತಿವಂಶವರ್ಣನವು ಬಹಳ ವಿಸ್ತಾರವಾಗಿರುವುದರಿಂದ ಅಲ್ಪವಾಗಿರುವ ಕಾಶ್ಯಪನ ಇತರ ಪತ್ನಿಯರ ವಂಶವನ್ನು ಮೊದಲು ಹೇಳತರುವಾಯ ದಿತಿವಂಶವನ್ನು ವಿವರಿಸುವೆನು. ಚಂದ್ರನ ಪತ್ನಿಯರೆನಿಸಿ ಪತಿವ್ರತಾಶಿರೋಮಣಿಗಳೆನಿಸಿದ ಇಪ್ಪತ್ತೇಳುಮಂದಿಗೂ ಮಹಾ ತೇಜಸ್ವಿಗಳೆನಿಸಿದ ದೀಪ್ತಿಮಂತರೆಂಬ ಮಕ್ಕಳು ಜನಿಸಿದರು ॥ ೧೫೩ ॥ ಅರಿಷ್ಟನೇಮಿಯ ಹೆಂಡತಿಯರಿಗೆ ಹದಿನಾರುಮಂದಿ ಮಕ್ಕಳು ಹುಟ್ಟಿದರು ॥ ೧೫೪ ॥ ಬಹುಪುತ್ರನ ಹೆಂಡತಿಯರಾದ ಇಬ್ಬರು ದಕ್ಷ ಕನ್ಯೆಯರಿಗೂ, ನಾಲ್ಕುಮಂದಿ ವಿದ್ಯುತ್ತುಗಳೆಂಬ ಮಕ್ಕಳು ಹುಟ್ಟಿ

ಸ್ಯ ವಿದುಷ ಶ್ಚತಸೋ್ರ ವಿದ್ಯುತ ಸ್ಕೃತಾಃ ॥ ೧೪೫ ॥ ಪ್ರತ್ಯಂಗಿರಸಜಾ ಶ್ರೇಷ್ಠಾ ಋಚೋಽಬ್ರಹ್ಮರ್ಷಿ ಸತ್ಕೃತಾಃ ॥ ೧೪೬ ॥ ಭೃಶಾಶ್ವಸ್ಯೃತು ದೇವರ್ಷೇ ರ್ದೇವಪ್ರಹರಣಾಸು್ಸತಾಃ ॥ ೧೪೭ ॥ ಏತೇಯುಗಸಹಸ್ರಾಂತೇ ಜಾಯುಂತೇ ಪುನರೇವಹಿ ; ಸರ್ವೇದೇವ ಗಣಾಸ್ತತ್ರ ತ್ರಯಸ್ತ್ರಿಂಶ ತ್ಸ್ವ ಛಂದಜಾಃ ॥ ತೇಷಾಮಪೀಹ ಸತತಂ ನಿರೋಧೋತ್ಪತ್ತಿ ರುಚ್ಯತೇ ॥ ೧೪೮ ॥ ಯಥಾಸೂರ್ಯ ಸ್ಯ ಮೈತ್ರೇಯ!

ದರು. ಈ ವಿಷಯದಲ್ಲಿ "ವಾತಾಯು ಕಪಿಲಾ ವಿದು ರ್ಯಾತಪಾಯಾತಿ ಲೋಹಿತಾ । ಪೀತಾವರ್ಷಾಯ ವಿಜ್ಞೇಯಾ ದುರ್ಭಿಕ್ಷಾಯ ಸಿತಾಭವೇತ್ ॥" ಎಂಬ ಜ್ಯೋತಿಶ್ಶಾಸ್ತ್ರವಚನವು ಪ್ರಮಾಣವಾಗಿರುವುದು. ಕಪಿಲೆ, ಅತಿಲೋಹಿತೆ, ಪೀತೆ, ಸಿತೆಗಳೆಂಬುದಾಗಿ ನಾಲ್ಕುಮಂದಿಯು ಹೆಸರುಗಳು. ಚಿತ್ರವರ್ಣವುಳ್ಳ ಕಪಿಲೆ ಎಂಬ ಮಿಂಚು ಗಾಳಿಯುನ್ನುಂಟುಮಾಡುವುದು. ಬಹಳ ಕೆಂಪಾದ ಅತಿಲೋಹಿತೆ ಎಂಬ ಮಿಂಚು ಬಿಸಿಲನ್ನುಂಟುಮಾಡುವುದು. ಹೊಂಬಣ್ಣವಾದ ಪೀತೆಯೆಂಬ ಮಿಂಚು ಮಳೆಯನ್ನುಂಟುಮಾಡುವುದು. ಸಿತೆ ಎಂಬ ಬಿಳಿಯ ಮಿಂಚು ದುರ್ಭಿಕ್ಷಸಂಪಾದಕವಾದುದು ॥ ೧೪೫ ॥ ಅಂಗಿರಸ್ಸಿನ ಹೆಂಡತಿಯರಾದ ಇಬ್ಬರು ದಕ್ಷಕನ್ಯೆಯರಿಗೂ ಕೂಡ ಬ್ರಹ್ಮರ್ಷಿಗಳಿಂದ ಸತ್ಕೃತಗಳೆನಿಸಿದ ಮುಂತಪ್ರಭಿಮಾನಿದೇವತೆಗಳೆಂಬ ಮುವ್ವತ್ತು ಮಂದಿ ಮಕ್ಕಳು ಹುಟ್ಟಿದರು ॥೧೪೬॥ ಭೃಶಾಶ್ವನೆಂಬ ದೇವರ್ಷಿಯ ಪತ್ನಿಯರೆನಿಸಿದ ಇಬ್ಬರು ದಕ್ಷಕನ್ಯೆಯರು, ಶಸಾತ್ರಭಿಮಾನಿದೇವತೆಗಳನ್ನು ಜನಿಸಿದರು; ಇವರಿಗೆ ದೇವಪ್ರಹರಣರೆಂಬುದಾಗಿ ಹೆಸರು ॥ ೧೪೭ ॥ ಈ ಹಿಂದೆ ಹೇಳಿದ ದೇವತೆಗಳೆಲ್ಲರೂ ಒಂದು ಸಾವಿರ ಯುಗಗಳು ಕಳೆದು ಹೋದ ಬಳಿಕ ಉಂಟಾಗುವ ಸೃಷ್ಟಿಯಲ್ಲಿ ಮರಳಿ ಜನಿಸುವರು. ಅವರಲ್ಲಿ ಎಂಟುಮಂದಿ ವಸುಗಳು, ಹನ್ನೊಂದು ಮಂದಿ ರುದ್ರರು, ಹನ್ನೆರಡು ಮಂದಿ ಆದಿತ್ಯರು, ಪ್ರಜಾಪತಿ, ವಷಟ್ಕಾರಗಳೆಂಬ ಮುವತ್ತುಮೂರುಮಂದಿ ಮಾತ್ರ ತಮ್ಮ ತಮ್ಮ ಇಷ್ಟಾನುಸಾರ ಜನಿಸುವರು. ಅವರಿಗೂ ಕೂಡ ಹುಟ್ಟು ಸಾವುಗಳು ತಪ್ಪಿದುವೇ ಅಲ್ಲ. ಸಾಮಾನ್ಯ ದೇ

ಉದಯಾಸ್ತಮಯಾ ವಿಹ । ನಿತಂ ದೇವ ನಿಕಾಯಾಸ್ತೇ
ಸಂಭವಂತಿ ಯುಗೇಯುಗೇ ॥೧೫೯॥ ದಿತ್ಯಾಃ ಪುತ್ರದ್ವಯಂ
ಜಜ್ಞೇ ಕಾಶ್ಯಪಾ ದಿತಿ ನಶ್ಯತಂ । ಹಿರಣ್ಯ ಕಶಿಪು ಶ್ಚೈವ
ಹಿರಣ್ಯಾಕ್ಷಶ್ಚ ದುರ್ಜಯಃ ॥ ೧೪೦ ॥ ಸಿಂಹಿಕಾ ಚಾಪಿ
ವತ್ಕನ್ಯಾ ವಿಪ್ರಚಿತ್ತೇಃ ಪರಿಗ್ರಹಃ ॥ ೧೪೧ ॥ ಹಿರಣ್ಯ ಕಶಿ
ಪೋಃ ಪುತ್ರಾಶ್ಚತ್ವಾರಃ ಪ್ರಥಿತೌಜಸಃ । ಅನುಹ್ಲಾದಶ್ಚ
ಹ್ಲಾದಶ್ಚ ಪ್ರಹ್ಲಾದಶ್ಚೈವ ಧರ್ಮಾತ್ಮಾ ॥ ಸಂಹ್ಲಾದಶ ಮ
ಹಾ ವೀರ್ಯಾ ದೈತ್ಯವಂಶ ವಿವರ್ಧನಾಃ ॥ ೧೪೨ ॥ ತೇಷಾಂ
ಮಧ್ಯೇ ಮಹಾಭಾಗ ! ಸರ್ವತ್ರ ಸಮದೃಗ್ಯಶೀ । ಪ್ರಹ್ಲಾದಃ

ವತೆಗಳಂತೆಇವರೂಕೂಡಹುಟ್ಟಸಾಯಬೇಕಾಗಿಯೇಇರುವುದು ॥೧೪೪॥
ಎಲೈ ಮೈತ್ರೇಯನೇ; ಲೋಕಕ್ಕೆ ಶಕ್ತಿಯನ್ನುಂಟುಮಾಡುವವನೂ,
ಪ್ರಾಣಪ್ರದನೂ ಎನಿಸಿದ ಸೂರ್ಯನಿಗೆ ಎಂತು ಉದಯಾಸ್ತಮಯಗಳು
ನಿತ್ಯಗಳೆನಿಸಿರುವುವೋ ಅಂತಯೇ ದೇವಯೋನಿ ಸಂಭೂತರೆನಿಸಿದ ಈ
ದೇವತೆಗಳಿಗೂ ಕೂಡ ಬಂದೊಂದು ಕಲ್ಪ, ಮನ್ವಂತರಗಳಲ್ಲಿಯೂ ಹು
ಟ್ಟು ಸಾವುಗಳು ತಪ್ಪಿದುವೇ ಅಲ್ಲ ॥ ೧೪೨ ॥ ಎಲೈ ಮೈತ್ರೇಯನೆ;
ಇನ್ನು ದಿತಿವಂಶವನ್ನು ನಿರೂಪಿಸುವೆನು, ಕಾಶ್ಯಪನ ಹೆಂಡತಿಯಾದ ದಿ
ತಿಗೆ ಯಾರಿಂದಲೂ ಗೆಲ್ಲಲಶಕ್ಯರೆನಿಸಿದ ಹಿರಣ್ಯಕಶಿಪು, ಹಿರಣ್ಯಾಕ್ಷರೆಂಬ
ದಾಗಿ ಇಬ್ಬರು ಮಕ್ಕಳು ಜನಿಸಿದರು ॥ ೧೪೦ ॥ ಸಿಂಹಿಕೆ ಎಂಬ ಒ
ಬ್ಬ ಹೆಣ್ಣು ಮಗಳೂ ಕೂಡ ದಿತಿಯಲ್ಲಿ ಕಾಶ್ಯಪನಿಂದ ಜನಿಸಿದಳು.
ಈಕೆಯನ್ನು ವಿಪ್ರಚಿತ್ತಿಯೆಂಬುವನು ಮದುವೆಯಾದನು ॥ ೧೪೧ ॥
ಆ ಇಬ್ಬರು ಗಂಡುಮಕ್ಕಳಲ್ಲಿ ಹಿರಿಯುವನೆನಿಸಿದ ಹಿರಣ್ಯಕಶಿಪುವಿಗೆ ಅ
ತ್ಯಂತ ಪರಾಕ್ರಮಶಾಲಿಗಳೆನಿಸಿದ ಅನುಹ್ಲಾದ, ಹ್ಲಾದ, ಧರ್ಮಾತ್ಮನೆನಿ
ಸಿದ ಪ್ರಹ್ಲಾದ, ಸಂಹ್ಲಾದನೆಂಬದಾಗಿ ನಾಲ್ವರು ಗಂಡುಮಕ್ಕಳು ಹುಟ್ಟ
ದರು; ಇವರೆಲ್ಲರೂ ಮಹಾಪರಾಕ್ರಮಶಾಲಿಗಳೂ, ದಿತಿವಂಶೋದ್ಧಾರಕ
ರೂ, ಎನಿಸಿದ್ದರು॥೧೪೨॥ಎಲೈ ಮಹದೈಶ್ವರ್ಯ ಸಂಪನ್ನನೆನಿಸಿದ ಮೈತ್ರೇ
ಯನೆ; ಈ ನಾಲ್ವರಲ್ಲಿಯೂ, ಪ್ರಹ್ಲಾದನೆಂಬ ಮೂರನೆಯ ಮಗನು ಸಕಲ
ಭೂತಗಳಲ್ಲಿಯೂ ಸಮದರ್ಶಿ ಎನಿಸಿದ್ದನು.(ಲಾಭಾಲಾಭ ಪ್ರಿಯಾಪ್ರಿಯ,

ಪರಮಾಂ ಭಕ್ತಿಂ ಯು ಉವಾಹ ಜನಾರ್ದನೇ ॥ ೧೪೩ ॥ ದೈ
ತ್ಯೇಂದ್ರದೀಪಿತೋ ವಹ್ನಿ ಸ್ಸರ್ವಾಂಗೋಪಚಿತೋ ದ್ವಿಜ ! ।
ನದದಾಹಜ ಯುಂ ಪ್ರೂರ್ವಂ ವಾಸುದೇವೇ ಹೃದಿಸ್ಥಿತೇ ॥ ೧೪೪ ॥
ಮಹಾರ್ಣ ವಾಂತ ಸ್ಸಲಿಲ ಸ್ಥಿತಸ್ಯ ಚಲತೋಮಹೀ । ಚ
ಚಾಲ ಸಕಲಾ ಯಸ್ಯ ಪಾಶ ಬದ್ಧಸ್ಯ ಧೀಮತಃ ॥ ೧೪೫ ॥
ನಭಿನ್ನಂ ವಿವಿಧೈ ಶ್ಶಸ್ತ್ರೈ ರ್ಯಸ್ಯ ದೈತ್ಯೇಂದ್ರ ಪಾತಿತೈಃ ।
ಕರೀರ ವಾದ್ರಿ ಕಠಿನೈ ಸ್ಸರ್ವತಶ್ಚ ಚ್ಯುತ ಚೇತಸಃ ॥೧೪೬॥

ಸುಖ ದುಃಖ ಮೊದಲಾದವುಗಳಲ್ಲಿಯೂ ಪ್ರೀತಿ ವಿಷಾದಗಳನ್ನುಳಿದು ಸಮದರ್ಶಿಎನಿಸಿದ್ದನೆಂದು ಭಾವವು) ಈತನು ನಿರತಿಶಯವಾದ ವಿಷ್ಣು ಭಕ್ತಿ ಸಂಪನ್ನ ನೆನಿಸಿದನು ॥ ೧೪೩ ॥ ಎಲೈ ಬ್ರಾಹ್ಮಣೋತ್ತ ಮನೆನಿಸಿದ ಮೈತ್ರೇಯನೆ, ಇಂತು ವಿಷ್ಣು ಭಕ್ತನೆನಿಸಿದ ಈ ಪ್ರಹ್ಲಾದನು ಅನವರತವೂ ಸರ್ವ ವ್ಯಾಪಕನೆನಿಸಿದ ಪರಮಾತ್ಮನನ್ನು ತನ್ನ ಹೃದಯಾರವಿಂದದಲ್ಲಿ ಸ್ಥಿರವಾಗಿ ನೆಲೆಗೊಳಿಸಿಕೊಂಡಿದ್ದ ಕಾರಣ ವಿಷ್ಣು ವಿಗೆ ದ್ವೇಷಿಯಾದ ಹಿರಣ್ಯಕಶಿಪುವು ಇದನ್ನು ಸಹಿಸಲಾರದೆ ಈತನನ್ನು ಸುಡಬೇಕೆಂದು ಚಿತೆಯನ್ನೊಡ್ಡಿಸಿ ಆ ಬೆಂಕಿಯಲ್ಲಿ ಈ ಪ್ರಹ್ಲಾದ ನಂತೆಳ್ಳಿಸಿದರೂ ಕೂಡ ಆ ಅಗ್ನಿಯು ಈತನನ್ನು ಸುಡದೇ ಹೋ ಯಿತು ॥ ೧೪೪ ॥ ಈ ಪ್ರಹ್ಲಾದನನ್ನು ಪಾಶಗಳಿಂದ ಕಟ್ಟಿಹಾಕಿ ಸಮುದ್ರಮಧ್ಯದಲ್ಲಿ ನೂಕಿದರು, ಆಗ ಈ ಪ್ರಹ್ಲಾದನು ಪಾಶಬ ದ್ಧನಾಗಿ ಆ ಸಮುದ್ರ ಮಧ್ಯದಲ್ಲಿ ನರಳಾಡುತ್ತಿರಲು ಭೂದೇ ವಿಯು ಭೀತಿಗೊಂಡು ಗಡಗಡನೆ ನಡುಗಲಾರಂಭಿಸಿದಳು ॥ ೧೪೫ ॥ ಎಂತಹ ಕಷ್ಟವು ಬಂದೊದಗಿದಾಗ್ಗೂ ಈ ಪ್ರಹ್ಲಾದನು ವಿಷ್ಣು ಭಕ್ತಿಯನ್ನು ಮಾತ್ರ ಪರಿತ್ಯಜಿಸದೆ ಅನವರತವೂ ತದೇಕಚಿತ್ತನಾಗಿ ದ್ದನು, ತರುವಾಯ ಕ್ರುದ್ಧನೆನಿಸಿದ ದೈತ್ಯರಾಜನಾದ ಹಿರಣ್ಯಕಶಿಪುವು, ಪರ್ವತಗಳಂತೆ ಮಹಾ ಕಠಿಣಗಳಾದ ನಾನಾ ಬಗೆಗಳೆನಿಸಿದ ಶಸ್ತ್ರಗ ಳನ್ನು ಅವನಮೇಲೆ ಪ್ರಯೋಗಿಸಿದನು ಇಂತು ಅತಿ ಕಠಿಣಗಳಾದ ಈ ಶಸ್ತ್ರಗಳೂ ಕೂಡ ವಿಷ್ಣು ಭಕ್ತಿಸಂಪನ್ನನಾದ ಈತನನ್ನು ಭೇದಿಸಲಾ ರದೆ ನಿಷ್ಫಲಗಳಾದುವು ॥೧೪೬॥ ತರುವಾಯ ವಿಷವೆಂಬ ಅಗ್ನಿಯು

ವಿಷಾನಲೋ ಜ್ವಲಮುಖಾ ಯಸ್ಯ ದೈತ್ಯ ಪ್ರಜೋದಿತಾಃ ।
ನಾಂತಾಯ ಸರ್ಪಪತಯೋ ಜಘೂವು ರುರುತೇಜಸಃ ॥ ೧೪೬ ॥
ಶೈಲೈ ರಾಕ್ರಾಂತ ದೇಹೋಪಿ ಯಸ್ಸ್ಮರ ನ್ಪುರುಷೋತ್ತಮಂ।
ತತ್ಯಾ ಜ ನಾತ್ಮನಃ ಪ್ರಾಣಾ ವಿಷ್ಣುಸ್ಮರಣ ದಂಶಿತಃ॥೧೪೮॥
ಪತಂತ ಮುಚ್ಚಾ ದವನಿ ರ್ಯ ಮುಪೇತ್ಯ ಮಹಾಮುನಿಂ ।
ದಧಾರ ದೈತ್ಯಪತಿನಾ ಹ್ಯಪ್ಪಂ ಸ್ವರ್ಗನಿವಾಸಿನಾ ॥೧೪೯॥
ಯಸ್ಯಸಂಶೋಷಕೋ ವಾಯು ರ್ದೇಹೇ ದೈತ್ಯೇಂದ್ರ ಯೋಜಿ

ನ್ನು ತಮ್ಮ ಬಾಯಿ ಯಿಂದ ಸುರಿಸುತ್ತಿರುವ ಕಾಲಸರ್ಪಗಳನ್ನು ಈ ಹಿರಣ್ಯ ಕಶಿಪುವಿನ ಅಪ್ಪಣೆಯಂತೆ ಹಾವಾಡಿಗರು ಪ್ರಹ್ಲಾದನನ್ನು ಸಂ ಹರಿಸಲು ಆತನ ಮೈಮೇಲೆ ಬಿಟ್ಟರು. ಇಂತು ಮಹಾಪ್ರಭಾವ ಯು ಕ್ತಗಳಾದ ಇಂತಹ ಸರ್ಪಗಳೂ ಕೂಡ ಈ ವಿಷ್ಣುಭಕ್ತಾಗ್ರೇಸರ ನನ್ನು ಏನೂ ಮಾಡಲಾರದೇ ಹೋದವು ॥ ೧೪೬ ॥ ಈ ಮೇಲೆ ಹೇಳಿದ ಯಾವ ಉಪಾಯದಿಂದಲೂ ಈಪ್ರಹ್ಲಾದನು ಸಾಯದಿರುವುದಂ ಕಂಡು ಈತನಮೇಲೆ ಆಗ್ರಹಗೊಂಡು ಈ ಪ್ರಹ್ಲಾದನ ಮೇಲೆ ದೊಡ್ಡ ದೊಡ್ಡ ಪರ್ವತಗಳನ್ನೇರಿದರು. ಅಂತಹ ಕಾಲದಲ್ಲೂ ಕೂಡ ಈತನು ವಿಷ್ಣುವನ್ನೇ ತನ್ನ ಹೃದಯಾರವಿಂದದಲ್ಲಿ ಧ್ಯಾನಮಾಡುತ್ತಿದ್ದನಾದಕಾ ರಣ, ಆ ವಿಷ್ಣುವಿನ ಸ್ಮರಣೆ ಯಮಹಿಮೆಯಿಂದ ಈತನು ತನ್ನ ಪ್ರಾಣ ಗಳನ್ನುಳಿಸಿಕೊಂಡನು. ಇಂ ತು ವಿಷ್ಣು ಭಕ್ತಿಸಂಪನ್ನನಾದ ಈ ಪ್ರಹ್ಲಾ ದನನ್ನು ಹಿರಣ್ಯಕಶಿಪುವಿನ ಉಪಾಯಗಳೆಲ್ಲವೂ ಏನೂ ಮಾಡಲಾರದೇ ಹೋದುವು ॥೧೪೭॥ ತರುವಾಯ ಈ ಪ್ರಹ್ಲಾದನನ್ನು ಎತ್ತಿಕೊಂಡು ದೈತ್ಯಾಧಿಪನೆನಿಸಿದ ಹಿರಣ್ಯಕಶಿಪುವು ಆಕಾಶಕ್ಕೆ ಹೋಗಿ ಅಲ್ಲಿಂದ ಇವ ನನ್ನು ಕೆಳಕ್ಕೆ ಬಿಟ್ಟನು. (ನೂಕಿದನು) ಈ ಪ್ರಹ್ಲಾದನು ನಿರಂತರವೂ ವಿಷ್ಣುವನ್ನೇ ತನ್ನ ಮನದಲ್ಲಿ ಮನನಮಾಡುತ್ತಿದ್ದನಾದಕಾರಣ ಇಂತಹ ವಿಷ್ಣುಭಕ್ತನಿಗೆ ಅದರಿಂದ ಬಾಧೆಯುಂಟಾಗದಂತೆ ಭೂದೇವಿಯು ಈತ ನನ್ನು ತನ್ನ ಕೈಗಳಿಂದ ಹಿಡಿದುಕೊಂಡಳು ॥ ೧೪೯ ॥ ತರುವಾಯ ಈತನ ಶರೀರವನ್ನೆಲ್ಲಾ ಶೋಷಿಸಿ, ಅದಗಿಂದ ಈತನ ಬಲವನ್ನೆಲ್ಲಾ ಹೀರಿ ಈತನನ್ನು ಕೊಲ್ಲಬೇಕೆಂದು ಈತನ ಮೇಲೆ ವಾಯುವನ್ನು

ತಃ ।ಅವಾಪ ಸಂಹ್ಲಾದಂ ಯಃ ಸದ್ಯಶ್ಚಿತ್ತಸ್ಥ ವೈಧುಸೂದನೇ॥೧೪೦॥
ವಿಷ್ಣಾ ಭಂಗ ಮುದ್ಯುಕ್ತಾ ಮದಹಾನಿಂಚ ದಿಗ್ಗಜಾಃ ।
ಯಸ್ಯೆ ವಹ್ಲಸ್ಥಲೇ ಪ್ರಾಪ್ತಾ ದೈತ್ಯೇಂದ್ರ ಪರಿಣಾಮಿತಾಃ॥೧೪೧॥
ಯಸ್ಯಾಚೋತ್ಪಾದಿತಾ ಕೃತ್ಯಾ ದೈತ್ಯರಾಜ ಪುರೋಹಿತೈಃ ।
ಬಭೂವ ನಾಂತಾಯ ಪುರಾ ಗೋವಿಂದಾ ಸಕ್ತ ಚೇತಸಃ॥೧೪೨॥

ಪ್ರೇರಿಸಿದರು. ಆಕಾಲದಲ್ಲಾ ಕೂಡ ಪ್ರಹ್ಲಾದನು ಧೈರ್ಯಗೆಡದೆ ಮನಸ್ಸಿನಲ್ಲಿ ವಿಷ್ಣುವನ್ನು ನೆಲೆಗೊಳಿಸಿದ್ದವನಾದಕಾರಣ ಆ ವಾಯುವು ಈತನನ್ನು ಏನೂ ಮಾಡಲಾರದೆ ತಾನೇ ಸಂಹ್ಲಯನನ್ನು ಹೊಂದಿತು. (ವಾಯುವು ಈತನನ್ನು ಏನೂ ಮಾಡಲಾರನೆ ತನ್ನ ಶಕ್ತಿಯು ವ್ಯರ್ಥವಾದುದರಿಂದ ನಾಚಿಕೆಗೊಂಡು ಹೊರಟುಹೋದನೆಂದು ಭಾವವು) ॥ ೧೪೦ ॥ ಅಲ್ಲಿಗೂ ಸಾಯದಿರುವ ಈ ಪ್ರಹ್ಲಾದನನ್ನು ಕಂಡು ಈತನನ್ನು ಕೊಲ್ಲಲೋಸುಗ ಮದಿಸಿದ ಆನೆಗಳನ್ನು ಈತನಮೇಲೆ ಕಳುಹಿಸಿ ಕೊಟ್ಟನು. ಮದಯುಕ್ತಗಳಾದ ದಿಗ್ಗಜಗಳೂ ಕೂಡ ಈ ಪ್ರಹ್ಲಾದನ ಎದೆಯಮೇಲೆ ಬಿದ್ದು, ತಮ್ಮ ಸಾಹಸವನೆಲ್ಲಾ ವೆಚ್ಚಮಾಡಿ ಈತನನ್ನು ಕೊಲ್ಲಲುಜ್ಜುಗಿಸಿದುವು. ಈತನು ಆಗಲೂ ಕೂಡ ತನ್ನ ಮನದಲ್ಲಿ ವಿಷ್ಣುವನ್ನು ಧ್ಯಾನಮಾಡುತ್ತಾ ಧೈರ್ಯಗುಂದದೆ ಇರುತ್ತಿದ್ದನು. ಈ ವಿಷ್ಣುಭಕ್ತಿಮಹಿಮೆಯಿಂದ ಆ ದಿಗ್ಗಜಗಳೆಲ್ಲವೂ ತಮ್ಮ ದಂತಗಳನ್ನು (ಕೊಂಬುಗಳನ್ನು)ಮುರಿದುಕೊಂಡು, ಅಂತೆಯೇ ತಮ್ಮ ಮದವನ್ನೂ ಕೂಡ ಹಾಳುಮಾಡಿ, ಬಲಹೀನಗಳಾಗಿ ಹಿಂದಕ್ಕೆ ಹೊರಟು ಹೋದುವು ॥ ೧೪೧ ॥ ಆನೆಗಳ ಹರಣ್ಯಕಶಿಪುವು ತನ್ನ ಉಪಾಯಗಳೆಲ್ಲವೂ ವ್ಯರ್ಥವಾದುದಂ ಕಂಡು, ಈತನು ಸಾಮಾನ್ಯವಾದ ಉಪಾಯದಿಂದ ಸಾಯುವುದಿಲ್ಲವೆಂಬದಾಗಿ ತಿಳಿದು ಅಲ್ಲಿಸುಮ್ಮನಿರದೆ ತನ್ನ ಪುರೋಹಿತರನ್ನು ,,ಈತನಮೇಲೆ ನಿಮ್ಮ ಮಂತ್ರಿಕ ಶಕ್ತಿಗಳನ್ನುಪಯೋಗಿಸಿ ಈತನನ್ನು ಕೊಲ್ಲಿರಿ'ಎಂಬದಾಗಿ ಆಜ್ಞಾಪಿಸಿದನು. ತರುವಾಯ ಆ ಪುರೋಹಿತರೆಲ್ಲರೂ ತಮ್ಮ ಮಂತ್ರಗಳನ್ನೆಲ್ಲಾ ಈತನಮೇಲೆ ಪ್ರಯೋಗಿಸಿದರು. ವಿಷ್ಣುಭಕ್ತಿಸಂಪನ್ನನಾದ ಈ ಪ್ರಹ್ಲಾದನನ್ನು ಆಪುರೋಹಿತರ ಮಂತ್ರಶಕ್ತಿಗಳೆಲ್ಲಾ ಏನೂ ಮಾಡಲಾರದೆ ನಿಷ್ಫ

ಶಂಬರಸ್ಯಾಪಿ ಮಾಯಾನಾಂ ಸಹಸ್ರಮತಿಮಾಯಿನಃ । ಯ
ಸ್ಮೈ ಪ್ರಯುಕ್ತಂ ಚಕ್ರೇಣ ಕೃಷ್ಣಸ್ಯಾವಿತಥೀ ಕೃತಂ ॥೧೫೪॥
ದೈತ್ಯೇಂದ್ರ ಸೂದೋಪಹೃತಂ ಯಚ್ಚ ಹಾಲಾಹಲಂ ವಿಷಂ।
ಜರಯಾ ಮಾಸ ಮತಿಮಾನವಿಕಾರ ಮವಾತ್ಸೀ ॥ ೧೫೫ ॥
ಸಮಚೇತಾ ಜಗತ್ಯಸ್ಮಿ ಯಸ್ಸರೇ ಷ್ವೇವ ಜಂತುಷು ।

ಲಗಳಾದುವು ॥ ೧೫೩ ॥ ತರುವಾಯ ಮಾಯೆಯನ್ನರಿತ ಶಂಬರಾಸು
ರನ ಸಾವಿರಾರು ಮಾಯಿಕಕೃತ್ಯಗಳನ್ನು ಈ ಪ್ರಹ್ಲಾದನ ಸಂಹಾರ
ಕ್ಕಾಗಿ ಪ್ರಯೋಗಿಸುವಂತೆ ಆಜ್ಞಾಪಿಸಿ ಆತನ ಮೇಲೆ ಪ್ರಯೋಗಿಸಿದನು.
ಇಂತಹ ಮಾಯೆಯನ್ನು ಬಲ್ಲವರೊಳಗೆಲ್ಲಾ ಅತ್ಯಂತಮಾಯಿಕನೆನಿಸಿ ಎಲ್ಲಾ
ಲೋಕಗಳನ್ನು ಮೋಹಗೊಳಿಸುವಂತಹ ಮೂಲಪ್ರಕೃತಿಯೆಂಬ
ಮಾಯೆಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಸರ್ವಾಂತರ್ಯಾಮಿ
ಯೂ, ಭಕ್ತಪರಾಧೀನನೂ, ಅನಾಥಸಂರಕ್ಷಕನೂ, ಆಪದ್ಬಂಧುವೂ
ಎನಿಸಿದ ಕೃಷ್ಣಪರಮಾತ್ಮನು, ತನ್ನ ಭಕ್ತನಾದ ಪ್ರಹ್ಲಾದನ ದುರವಸ್ಥೆ
ಗಳನ್ನು ನೋಡಿ ಸಹಿಸಲಾರದೆ ಮರುಕಗೊಂಡು ತನ್ನ ಚಕ್ರಾಯುಧವ
ನ್ನು ಪ್ರಯೋಗಿಸಿದನು ಈ ಚಕ್ರಾಯುಧದ ಮಹಿಮೆಯಿಂದ ಆ ಶಂ
ಬರನ ಮಾಯೆಗಳೆಲ್ಲವೂ ವ್ಯರ್ಥವಾಗಿಶಕ್ತಿಗುಂದಿ ಹಿಂದಿರುಗಿದುವು॥೧೫೪॥
ಆ ಬಳಿಕ ಹಿರಣ್ಯಕಶಿಪುವು ತನ್ನ ಅಡಿಗೆಯವರಿಗೆ ಪ್ರೇರಿಸಿ, ಆಹಾರಪ
ದಾರ್ಥಗಳಲ್ಲಿ ಹಾಲಾಹಲವೆಂಬ ಕ್ರೂರವಿಷವನ್ನು ಮಿಶ್ರಮಾಡಿಸಿ, ಈ
ಪ್ರಹ್ಲಾದನಿಗೆ ಊಟದಲ್ಲಿ ಬಡಿಸಿದನು. ಅಂತಹ ವಿಷಭಕ್ಷ್ಯಗಳನ್ನೂ
ಸಹ ಸವಿದು ಈ ವಿಷ್ಣುಭಕ್ತನಾದ ಪ್ರಹ್ಲಾದನು ರೋಮಾಂಚ, ಮೈ
ಜಿವರುವಿಕೆ, ಬಾಯಿ ಬಣಗುವಿಕೆ, ಮೊದಲಾದ ಯಾವ ವಿಕಾರವನ್ನೂ
ಹೊಂದದೆಯೂ, ತನಗೆ ಇಂತಹ ವಿಷವನ್ನು ಬಡಿಸಿದರೆಂದು ಅವರಲ್ಲಿ
ಮಾತ್ಸರ್ಯವನ್ನಿಡದೆಯೂ, ಎಂದಿನಂತೆಯೇ ಸುಖದಿಂದಿದ್ದನು ॥೧೫೫॥
ಈ ಪ್ರಪಂಚದಲ್ಲಿರುವ ಸಕಲ ಭೂತಗಳೂ, ಆ ಪರಮಾತ್ಮನಿಂದಲೇ ಹು
ಟ್ಟಿದುವಾದಕಾರಣ ಒಬ್ಬ ತಂದೆಯಮಕ್ಕಳು ಅನ್ಯೋನ್ಯವಾಗಿರುವಂತೆ
ಯೇ ತಾನೂ ಕೂಡ ಎಲ್ಲಾ ಭೂತಗಳಲ್ಲಿಯೂ ಪ್ರೀತಿಯನ್ನೇ ಇರಿಸಿ,
ಸಮಚಿತ್ತನಾಗಿರುತ್ತಿದ್ದನು. ಎಲ್ಲವೂ ಆ ಪರಮಾತ್ಮನಿಂದಲೇ ಉತ್ಪನ್ನ

ಯಥಾತ್ಮನಿ ಯಥಾऽಪತ್ಯೇಽಪರಂ ಮೈತ್ರಗುಣಾನ್ವಿತಃ ॥೧೪೫॥
ಧರ್ಮಾತ್ಮಾ ಸತ್ಯಶೌಚಾದಿ ಗುಣಾನಾಮಾಕರಃ ಪರಃ । ಉಪ
ಮಾನಮಶೇಷಾಣಾಂ ಸಾಧೂನಾಂ ಯಸ್ಸದಾऽಭವತ್ ॥
ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಪಂಚದಶೋಧ್ಯಾಯಃ

ವಾದುದರಿಂದ ತನಗೆ ಎಲ್ಲರೂ ಸೋದರಭಾವವನ್ನು ಉಂಟುಮಾಡುವ ವೇ ಹೊರತು ಈ ವಿಷಭಕ್ಷಣಾದಿಗಳಿಂದ ತನಗೆ ಯಾವವಿಕಾರವೂಉಂ ಟಾಗಲಾರದೆಂದೂ ತಿಳಿದಿದ್ದನು. ಮತ್ತು ತನಗೆ ಸರ್ವಲೋಕಾಧಿಪ ನೂ, ಸರ್ವಶಕ್ತಿಸಂಪನ್ನನೂ ಎನಿಸಿದ ವಿಷ್ಣುವೇ ತಂದೆಯೆಂತಲೂ, ಮಾಯಾರೂಪಿಣಿಎನಿಸಿದ ಲಕ್ಷ್ಮಿಯೇ ತನ್ನ ಜನನಿಯೆಂತಲೂ, ದೃಢವಾ ಗಿ ತಿಳಿದಿದ್ದವನಾದಕಾರಣ ಅಂತಹ ಲಕ್ಷ್ಮಿಯ ಒಡಹುಟ್ಟಿದಹಾಲಾಹಲ ವಿಷವು ತನಗೆ ಸೋದರಮಾವನಾದುದರಿಂದಲೂ, ಸೋದರಮಾವನು ತ ನ್ನ ಸೋದರಳಿಯನವಿಷಯದಲ್ಲಿ ಎಂದಿಗೂ ಕೆಡಕನ್ನುಂಟುಮಾಡುವು ದಿಲ್ಲವೆಂದು ತಿಳಿದಿದ್ದನು. ಮತ್ತು ಇಂತಹ ಸಮದರ್ಶಿತ್ವವೆಂಬ ಜ್ಞಾನ ಯುಕ್ತನಾಗಿದ್ದುದರಿಂದ ಈತನು ಮೈತ್ರಗುಣಯುಕ್ತನಾಗಿದ್ದ ನೇ ಹೊರತು, ಭೇದಗುಣಯುಕ್ತನಾಗಿರಲಿಲ್ಲವು. ಆದುದರಿಂದನೈ ರನಿಮಿತ್ತಕವಾದ ಭೇದಜ್ಞಾನವೂ ಈತನಿಗಿರಲಿಲ್ಲವು ॥ ೧೪೫ ॥ ಈ ಪ್ರಹ್ಲಾದನು ಸತ್ಯ, ಶೌಚ, ದಮ, ಕ್ಷಾಂತಿ, ಆರ್ಜವ, ಆತ್ಮವಿನಿಗ್ರಹ, ಅಹಂಕಾರವಿಲ್ಲದಿರುವಿಕೆ, ಡಂಭವಿಲ್ಲದಿರುವಿಕೆ, ಇವೇ ಮೊದಲಾದ ಸ ದ್ಗುಣಗಳಿಗೆ ಸರ್ವೋತ್ತಮನಾದ ಗಣಿ ಎನಿಸಿಕೊಂಡು, ಇತರಸಾಧುಗ ಳಿಗೆಲ್ಲಾ ನಿರಂತರವೂ ಉಪಮಾನಭೂತನೆನಿಸಿಕೊಂಡಿದ್ದನು. (ಸಾಧು ಗಳೂ, ಗುಣಶಾಲಿಗಳೂ ಕೂಡ ಇತನ ಸಚ್ಚರಿತೆಯನ್ನೂ, ಗುಣಗಳ ನ್ನೂ ಕಂಡು, ತಾವೂ ಈತನಂತೆಯೇ ಇರಬೇಕೆಂದು ಈತನ ಗುಣಗ ಳನ್ನು ಕಲಿಯುವಂತಹ ಗುಣಶಾಲಿಯೂ, ಸಚ್ಚರಿತ್ರ ಸಂಪನ್ನನೂ, ಈ ಪ್ರಹ್ಲಾದನೇ ಆಗಿದ್ದನು) ಎಂಬುದಾಗಿ ಪರಾಶರನು ಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ

ಶ್ರೀವಿಷ್ಣುಪುರಾಣದ ಒಂದನೆಯ ಅಂಶದಲ್ಲಿ
ಹದಿನೈದನೆಯ ಅಧ್ಯಾಯವು ಮುಗಿದುದು

ಶ್ರೀ

ಓನ್ನಮಃ ಪರಮಾತ್ಮನೇ

—ಷೋಡಶೋಧ್ಯಾಯಃ—

ಮೈತ್ರೇಯಃ॥ ಕಥಿತೋ ಭವತಾವಂಶೋ ಮಾನವಾನಾಂ ಮಹಾಮುನೇ ! ಕಾರಣಂ ಚಾಸ್ಯ ಜಗತೋ ವಿಷ್ಣುರೇವ ಸನಾತನಃ ॥ ೧ ॥ ಯತ್ತ್ವೀ ತದ್ಭಗವಾನಾಹ ಪ್ರಹ್ಲಾದಂ ದೈತ್ಯಸತ್ತಮಂ । ದದಾಹ ನಾಗ್ನಿ ರ್ನಾಸ್ತ್ರಾಣಿ ಶಸ್ತ್ರಾಣಿ ಚ ಪ್ರಭೋ ಸ್ತ್ಯಜಜೀವಿತಂ ॥ ೨ ॥ ಜಗಾಮ ವಸುಧಾ ಕ್ಷೋಭಂ ಯತ್ರಾಬ್ಧಿಸಲಿಲಸ್ಥಿತೇ । ಬಂಧ ಬದ್ಧೇ ವಿಚಲತಿ ವಿಕ್ಷಿಪ್ತಾಂಗೈ ಸ್ಸಮಾಹತಾ ॥ ೩ ॥ ಶೈಲೈ ರಾಕ್ರಾಂತ ದೇಹೋಪಿ ನಮುವಾರ ಚ ಇಂತು ಹಿಂದಿನ ಅಧ್ಯಾಯದ ಕೊನೆಯಲ್ಲಿ ಪರಾಶರನು ಹೇಳಿದ

ಪ್ರಹ್ಲಾದನ ಮಾಹಾತ್ಮ್ಯವನ್ನು ಕೇಳಿ, ತರುವಾಯ ವಿಷ್ಣುಭಕ್ತಶಿಖಾಮಣಿ ಎನಿಸಿದ ಆ ಪ್ರಹ್ಲಾದನ ಚರಿತ್ರೆಯನ್ನು ಆಮೂಲಾಗ್ರವಾಗಿ ತಿಳಿಯಬೇಕೆಂದು ತವಕಗೊಂಡು ಮೈತ್ರೇಯನು ಮರಳಿ ಪ್ರಶ್ನೆಮಾಡುತ್ತಾನೆ— ಎಲೈ ಮುನಿವರ್ಯನೆನಿಸಿದ ಪರಾಶರನೆ, ಉತ್ತಾನಪಾದ, ಧ್ರುವ ಮೊದಲಾದ ಮಾನವರ ವಂಶಾವಳಿಯನ್ನು ನೀನು ವಿಶದವಾಗಿ ತಿಳಿಯಪಡಿಸಿದೆ. ಈ ಎಲ್ಲ ಲೋಕಗಳಿಗೂ ಉತ್ಪತ್ತಿ ವಿನಾಶಶೂನ್ಯನೆನಿಸಿದ ವಿಷ್ಣುವೇ ಮುಖ್ಯಕಾರಣವೆಂತಲೂ ತಿಳಿಯಪಡಿಸಿರುವೆ ॥೧॥ಆದರೆ ದಿತಿವಂಶಲಲಾಮಭೂತನೆನಿಸಿದ ಪ್ರಹ್ಲಾದನನ್ನು ಬೆಂಕಿಯು ಸುಡದಿರುವುದಕ್ಕೆ ಕಾರಣವೇನು? ಅಸ್ತ್ರಶಸ್ತ್ರಗಳೂ ಕೂಡ ಪತಕ್ಕೆ ತಮ್ಮ ಪ್ರಭಾವವನ್ನು ಆತನ ಮೇಲೆ ತೋರಿಸಲು ಸಮರ್ಥಗಳಾಗಲಿಲ್ಲ? ॥೨॥ ಈ ಪ್ರಹ್ಲಾದನನ್ನು ಸಮುದ್ರಕ್ಕೆ ತಳ್ಳಿದಾಗ ಭೂಮಿಯು ಕ್ಷೋಭೆಗೊಳ್ಳಲು ಕಾರಣವೇನು? ಈತನನ್ನು ದೃಢವಾದ ಪಾಶದಿಂದ ಕಟ್ಟಿಹಾಕಿದಾಗ ಭೂಮಿಯು ತನ್ನ ಅವಯವಗಳೊಡನೆ (ಅವಯವಗಳೆನಿಸಿದ ಪರ್ವತ ಮೊದಲಾದವುಗಳೊಡನೆ) ನಡುಗಲು ಕಾರಣವೇನು? ॥೩॥ ಈತನಮೇಲೆ ದೊಡ್ಡದೊಡ್ಡ

ಯಃ ಪುರಾ । ತ್ವಯೈವಾತೀವ ಮಾಹಾತ್ಮ್ಯಂ ಕಥಿತಂ ಯಸ್ಯ ಧೀಮತಃ ॥ ೪ ॥ ತಸ್ಯ ಪ್ರಭಾವ ಮತುಲಂ ವಿಷ್ಣೋರ್ಭಕ್ತಿ ಮತೋ ಮುನೇ ! । ಶ್ರೋತು ಮಿಚ್ಛಾಮಿ ತಸ್ಯೈವ ಚರಿತಂ ತ್ವಮಿ ತೌಜಸಃ ॥ ೫ ॥ ಕಿಂ ನಿಮಿತ್ತ ಮಸೌ ಶಸ್ತ್ರೈರ್ವಿಷ್ಣುಭಕ್ತೋ ದಿತಿಜೈ ರ್ಮುನೇ ! । ಕಿಮರ್ಥಂ ಚಾಪಿ ಸಲಿಲೇ ವಿಷ್ಣುಭಕ್ತೋ ಧರ್ಮ ತತ್ಪರಃ ? ॥ ೬ ॥ ಆಕ್ರಾಂತಃ ಪರ್ವತೈಃ ಕಸ್ಮಾ ? ತ ಸ್ಮಾ ದಪಿ ಭೋ ಮುಹೋರಗೈಃ ? । ಕ್ಷಿಪ್ತಃ ಕಿ ಮುದ್ರಿ ಶಿಖರಾ? ತ್ಕಿಂ ವಾ ಪಾವಕ ಸಂಜಯೇ ? ॥ ೭ ॥ ದಿಗ್ದಂತಿನಾಂ ದಂತಭಾಗೈ ಸ್ಸ ಚ ಕಸ್ಮಾ ನ್ನಿಪೀಡಿತಃ ? ॥ ಸಾ

ಪರ್ವತಗಳನ್ನು ಹೇರಿದಾಗ್ಗೂ ಈತನು ಏಕೆ ಸಾಯಲಿಲ್ಲ? ಬುದ್ಧಿಶಾಲಿ ಎನಿಸಿದ ಈತನ ಮಾಹಾತ್ಮ್ಯವು ನಿರತಿಶಯವಾದುದೆಂದು ನೀನೇ ನಾನಾ ಪರಿಯಿಂದ ಬಣ್ಣಿಸುವೆಯಲ್ಲಾ, ಇದಕ್ಕೆ ಕಾರಣವೇನು?॥೪॥ ಎಲೈ ಮುನಿಶ್ರೇಷ್ಠನೆನಿಸಿದ ಪರಾಶರನೆ; ಇಂತು ವಿಷ್ಣುವಿನಲ್ಲಿ ನಿರತಿಶಯ ಭಕ್ತಿಸಂಪನ್ನನೆನಿಸಿದ ಆ ಪ್ರಹ್ಲಾದನ ಮಹಿಮೆಯುಂ ವಿಶದವಾಗಿ ತಿಳಯಬೇಕೆಂದು ನನ್ನ ಮನಸ್ಸು ಬಹಳವಾಗಿ ಕುತೂಹಲಯುಕ್ತವಾಗಿರುವುದು ಇಂತು ಮಹಾಪರಾಕ್ರಮಶಾಲಿಯೂ, ತೇಜಸ್ವಿಯೂ ಆದ ಆ ಪ್ರಹ್ಲಾದನ ಚರಿತೆಯನ್ನೂ ಕೂಡ ನಾನು ಸವಿಸ್ತಾರವಾಗಿ ತಿಳಯಲಪೇಕ್ಷಿಸುವೆನು. ॥೫॥ ಅಯ್ಯಾ ಮುನಿವರ್ಯನೆ; ದೈತ್ಯರು ಪ್ರಹ್ಲಾದನನ್ನು ನಾನಾವಿಧ ಶಸ್ತ್ರಗಳಿಂದ ಕೊಲ್ಲುವುದಕ್ಕೆ ಕಾರಣವೇನು? ಪರಮಧಾರ್ಮಿಕನೆನಿಸಿದ ಪ್ರಹ್ಲಾದನನ್ನು ಅಗಾಧವಾದ ಸಮುದ್ರದಲ್ಲಿ ತಳ್ಳುವುದಕ್ಕೆ ಕಾರಣವೇನು? ॥೬॥ ಆತನಮೇಲೆ ಪರ್ವತಗಳನ್ನು ಏತಕ್ಕೆ ಹೇರಿದರು? ಆತನನ್ನು ಕಚ್ಚುವುದ ಕ್ಕೋಸ್ಕರ ಕಾಲಸರ್ಪಗಳನ್ನು ಪ್ರೇರಿಸಲು ನಿಮಿತ್ತವೇನು? ಎತ್ತರವಾದ ಪರ್ವತದ ತುದಿಯಿಂದ ಆತನನ್ನು ಏತಕ್ಕೆ ನೂಕಿದರು? ಆತನನ್ನು ಉರಿಯುವ ಬೆಂಕಿಯಲ್ಲಿ ತಳ್ಳಿದುದೇಕೆ? ॥೭॥ ಮದಿಸಿದ ದಿಗ್ಗಜಗಳು ಆತನ ಮೇಲೆ ಕೈಮಾಡಿ ತಮ್ಮ ದಂತಗಳನ್ನೇಕೆ ಮುರಿದುಕೊಂಡವು ? ಭಯಾನಕರೆನಿಸಿದ (ಘೋರರೂಪಿಗಳಾದ) ರಕ್ಕಸರು ಕೂಡ, ದೇಹವನ್ನು ದುರ್ಬಲಪಡಿಸಿ, ಕೈಕಾಲುಗಳಲ್ಲಿನ ಸಾಮರ್ಥ್ಯವನ್ನು ನಾಶಗೊಳಿಸುವಂತಹ

ಕೋಷಕೋಽನಿಲಶ್ಚಾಸ್ಯ ಪ್ರಯುಕ್ತಃ ಕಿಂ ಮಹಾಸುರೈಃ? ॥ ೪ ॥ ಕೃತ್ಯಾಂ ಚ ದೈತ್ಯ ಗುರವೋ ಯುಯುಜುಸ್ತೇತು ಕಿಂವಮುನೇ ! ಶಂಬರಶ್ಚಾಪಿ ಮಾಯಾನಾಂ ಸಹಸ್ರಂ ಕಿಂ ಪ್ರಯುಕ್ತವಾ? ॥ ೯ ॥ ಹಾಲಾ ಹಲಂ ವಿಷಂ ಘೋರಂ ದೈತ್ಯ ಸೂದೈರ್ಮಹಾತ್ಮನಃ । ಕಸ್ಮಾದ್ದತ್ತಂ ವಿನಾಶಾಯ ಯಜ್ಜೀರ್ಣಂ ತೇನಧೀಮತಾ? ॥ ೧೦ ॥ ಏತತ್ಸರ್ವಂ ಮುಹಾ ಭಾಗ ! ಪ್ರಹ್ಲಾದಸ್ಯ ಮಹಾತ್ಮನಃ । ಚರಿತಂ ಕೋ ಽತೀತು ಮಿಚ್ಛಾಮಿ ಮಹಾರ್ಥಸ್ಯ ಚ ಸೂಚಕಂ ॥ ೧೧ ॥ ನಹಿ ತಾತೂಹಲಂ ತತ್ರ ಯದ್ದೈತ್ಯೈರ್ಹತೋ ಹಿಸಃ ! ಅನನ್ಯ ಮ

ವಾಯುವನ್ನೇಕೆ ಆ ಪ್ರಹ್ಲಾದನ ವಿಷಯವಾಗಿ ಪ್ರೇರಿಸಿದರು ? ॥ ೪ ॥ ಎಲೈ ಮುನಿಶ್ರೇಷ್ಠನೆನಿಸಿದ ಪರಾಶರನೆ; ದೈತ್ಯವಂಶಕ್ಕೆ ಗುರುಗಳೆನಿಸಿದ ಶಂಡಾಮರ್ಕರೇ ಮೊದಲಾದವರು ಕೂಡಿ ತಮ್ಮ ಮಂತ್ರಶಕ್ತಿಯಿಂದ ಪ್ರಹ್ಲಾದನನ್ನು ಕೊಲ್ಲಲುಜ್ಜುಗಿಸಿದುದೇಕೆ? ಮಾಯಾವಿ ಎನಿಸಿದ ಶಂಬರನೂ ಕೂಡ ತಾನು ಕಲಿತಿದ್ದ ಸಾವಿರಾರು ಮೋಸಕೃತ್ಯಗಳಿಂದ ಆತನನ್ನೇಕೆ ಕೊಲ್ಲಬೇಕೆಂದು ಪ್ರಯತ್ನಪಟ್ಟನು? ॥೯॥ ಅಂತೆಯೇ ಹಿರಣ್ಯಕಶಿಪುವಿನ ಪಾಚಕರೂ (ಅಡಿಗೆಯವರೂ)ಕೂಡ ಭಯಂಕರವೆನಿಸಿದ ಹಾಲಾಹಲವೆಂಬ ವಿಷವನ್ನು ಮಹಾನುಭಾವನೆನಿಸಿದ ಪ್ರಹ್ಲಾದನಿಗೆ ಏತಕ್ಕೋಸ್ಕರ ಆಹಾರ ಪದಾರ್ಥಗಳಲ್ಲಿ ಮಿಶ್ರಮಾಡಿ ತಿನ್ನಿಸಿದರು? ಅಂತಹ ವಿಷವನ್ನು ಈತನು ಜೀರ್ಣಿಸಿಕೊಂಡ ಬಗೆಯಾವುದು? ॥ ೧೦॥ಎಲೈ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಪರಾಶರನೆ; ಮಹಾಮಹಿಮಸಂಪನ್ನನೂ, ವಿಷ್ಣುಭಕ್ತಶಿಖಾಮಣಿಯೂ ಎನಿಸಿದ ಪ್ರಹ್ಲಾದನ ಈ ಚರಿತೆಯೆಲ್ಲವಂ ವಿಶದವಾಗಿ ತಿಳಿಯಬೇಕೆಂದು ತುಂಬಾ ಆಸೆಪಡುವೆನು. ಇಂತಹ ಚರಿತೆಯು ಸಾಮಾನ್ಯವಾದುದಲ್ಲ. ಇದರಿಂದ ಪರಮಪುರುಷಾರ್ಥವೆನಿಸಿದ ಮೋಕ್ಷಕ್ಕೆ ದಾರಿಯುಂಟು. ಇದನ್ನು ನನಗೆ ಸವಿಸ್ತಾರವಾಗಿ ತಿಳುಹು ॥೧೧॥ ಪ್ರಹ್ಲಾದನಿಗೆ ದೈತ್ಯರು ಎಷ್ಟೆಷ್ಟು ಬಗೆಯಿಂದ ಅಪಕಾರಮಾಡಿದರೂ (ಅತನನ್ನು ಕೊಲ್ಲಬೇಕೆಂದು ನಾನಾಬಗೆಯಿಂದ ಪ್ರಯತ್ನಿಸಿದರೂಕೂಡ) ಈ ಪ್ರಹ್ಲಾದನು ಮಾತ್ರ ಸಾಯಲಿಲ್ಲವೆಂಬುದು ವಿಶೇಷ ಕುತೂಹಲಾ

ನಸೋ ವಿಷ್ಣೂ ಕಸ್ಯಮಥೋ ನಿಭಾತನೇ ? ॥ ೧೨ ॥ ತ
ಸ್ಮಿ ಧರ್ಮಪರೇ ನಿತ್ಯಂ ಕೇಶವಾ ರಾಧನೋ ದ್ಯತೇ । ಸ್ವ
ವಂಶ ಪಭವೈ ರ್ದೈತ್ಯೈಃ ಕರ್ತುಂ ದ್ವೇಷೋ ಽತಿ ದುಷ್ಕ
ರಃ ॥ ೧೩ ॥ ಧರ್ಮಾತ್ಮನಿ ಮಹಾಭಾಗೇ ವಿಷ್ಣು ಭಕ್ತೇ ವಿ
ಮತ್ಸರೇ। ದೈತೇಯೈಃ ಪ್ರಹೃತಂ ಕಸ್ಮಾ? ತ್ತನ್ಮಮಾ ಖ್ಯಾತು
ಮರ್ಹಸಿ ॥ ೧೪ ॥ ಪ್ರಹರಂತಿ ಮಹಾತ್ಮಾನೋ ವಿಪಕ್ಷೇ
ಷಾಪಿ ನೇ ದೃಶೇ । ಗುಣೈ ಸ್ಸಮನ್ವಿತೇ ಸಾಧೌ ಕಿಂ ಪುನರ್ಯ
ಸ್ಯ ಪ ಹ್ಲಜಃ?॥ ೧೫ ॥ ತದೇ ತತ್ಕ ಥ್ಯತಾಂ ಸರ್ವಂ ವಿಸ್ತರಾ

ಸ್ಪದವಾಗಿ ಅತ್ಯಂತಾಶ್ಚರ್ಯಕರವಾದುದಲ್ಲವೆ ? ಸರ್ವವ್ಯಾಪಕನೆನಿಸಿದ ಶ್ರೀಮಹಾವಿಷ್ಣುವಿನಲ್ಲಿಯೇ ಅನವರತವೂ ತನ್ನ ಮನಸ್ಸನ್ನು ಲಯಗೊಳಿಸಿದ್ದ ಆ ಪ್ರಹ್ಲಾದನನ್ನು ಸಂಹರಿಸುವುದಕ್ಕೆ ಯಾರುತಾನೇ ಶಕ್ತರಾಪರು ? ॥ ೧೩ ॥ ಅನುದಿನವೂ ಧರ್ಮದಲ್ಲಿ ಆಸಕ್ತನೆನಿಸಿ ಆ ಪರಮಾತ್ಮನನ್ನು ಆರಾಧಿಸುವುದರಲ್ಲಿಯೇ ತನ್ನ ಕಾಲವಂ ಕಳೆಯುತ್ತಿದ್ದ ಆ ಪ್ರಹ್ಲಾದನು ದಿತಿವಂಶದಲ್ಲಿಯೇ ಹುಟ್ಟಿದನಾದರೂ ಕೂಡ ದೈತ್ಯರು ಆತನಮೇಲೆ ದ್ವೇಷವಂ ಸಾಧಿಸಲು ಕಾರಣವೇನು ? ಇದು ಸಾಮಾನ್ಯವಾದುದೇ ? ॥ ೧೪ ॥ ಧರ್ಮಾತ್ಮನೂ, ಮಹದೈಶ್ವರ್ಯಶಾಲಿಯೂ, ವಿಷ್ಣುಭಕ್ತನೂ, ದ್ವೇಷಶೂನ್ಯನೂ, ಎನಿಸಿದ ಪ್ರಹ್ಲಾದನನ್ನು ಕೊಲ್ಲುವುದಕ್ಕೆ ದೈತ್ಯರು ಪ್ರಯತ್ನಿಸಲು ಕಾರಣವೇನು ? ಈ ವಿಷಯಗಳನ್ನೆಲ್ಲಾ ನನಗೆ ವಿಶದವಾಗಿ ತಿಳಿಯಪಡಿಸುವನಾಗು ॥ ೧೪ ॥ ಇಂತು ಸಕಲ ಸದ್ಗುಣಾಲಂಕೃತನೂ, ಸಾಧುವರ್ಯನೂ, ಎನಿಸಿದ ಇಂತಹ ಭಾಗವತನು ತನ್ನ ಪಂಗಡಕ್ಕೆ ಸೇರಿದವನಾಗಿದ್ದರೂ ಕೂಡ, ಮಹಾತ್ಮರು ಇಂತಹವರಮೇಲೆ ಎಂದೆಂದಿಗೂ ಕೈಮಾಡರು. ಇಂತಿರಲು ಈಮೇಲೆ ಹೇಳಿದ ಸಕಲ ಗುಣಗಣಮಂಡಿತನೆನಿಸಿದ ಈ ಪ್ರಹ್ಲಾದನು ತನ್ನ, ಪಂಗಡಕ್ಕೆ ಸೇರಿದವನೇ ಆಗಿದ್ದರೂ ಕೂಡ, ದೈತ್ಯರುಮಾತ್ರ ಅವನಮೇಲೆ ಕೈಮಾಡಲುಕಾರಣವೇನು ? ॥ ೧೫ ॥ ಓ ಮುನಿವರ್ಯನೆ; ದಿತಿವಂಶಲಲಾಮಭೂತನೆನಿಸಿದ ಪ್ರಹ್ಲಾದನ ಚರಿತೆಯಂ ಆಮೂಲಾಗ್ರವಾಗಿ ತಿಳಿಯಲಪೇಕ್ಷಿಸುವೆನು. ಆದುದರಿಂದ ನನ್ನ ಮೇಲೆ ಅನುಗ್ರಹವನಿ

ನ್ಮುನಿ ಸತ್ತಮ ! । ದೈತ್ಯೇ ಶ್ವರಸ್ಯ ಚರಿತಂ ಶ್ರೋತುಮಿಚ್ಛಾ
ವ್ಯಾಶೇ ಷತಃ ॥ ೧೬ ॥

ಇತಿಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಷೋಡಶೋಧ್ಯಾಯಃ.

ರಿಸಿ ಪರಮಭಾಗವತನಾದ ಪ್ರಹ್ಲಾದನ ಚರಿತೆಯನ್ನು ಸವಿಸ್ತಾರವಾ
ಗಿತಿಳುಹಬೇಕೆಂಬದಾಗಿ ಮೈತ್ರೇಯನು ಪರಾಶರನಂ ಬೆಸಗೊಳ್ಳುತ್ತಿ
ದ್ದನೆಂಬಲ್ಲಿಗೆ

ಶ್ರೀವಿಷ್ಣುಪ್ರರಾಣದ ಒಂದನೆಯ ಅಂಶದೋಳ್
ಹದಿನಾರನೆಯ ಅಧ್ಯಾಯಂ
ಮುಗಿದ.ದು
ಷೋಡಶಾಧ್ಯಾಯಂಸಮಾಪ್ತಂ

ಶ್ರೀ.

ಓನ್ನಮಃ ಪರಮಾತ್ಮನೇ

—ಸಪ್ತದಶೋಧ್ಯಾಯಃ—

ಶ್ರೀ ಪರಾಶರಃ॥ ಮೈತ್ರೇಯ ! ಶ್ರೂಯತಾಂ ಸವ್ಯಕ್ಚರಿತಂ ತಸ್ಯ ಧೀಮತಃ । ಪ್ರಹ್ಲಾದಸ್ಯ ಸದೋ ದಾರ ಚರಿತಸ್ಯ ಮಹಾತ್ಮನಃ ॥ ೧ ॥ ದಿತೇಃ ಪುತ್ರೋ ಮಹಾವೀರ್ಯೋ ಹಿರಣ್ಯಕಶಿಪುಃ ಪುರಾ । ತ್ರೈಲೋಕ್ಯಂ ವಶ ಮಾನಿನ್ಯೇ ಬ್ರಹ್ಮಣೋ ವರ ದರ್ಪಿತಃ ॥ ೨ ॥ ಇಂದ್ರತ್ವ ಮಕರೋ ದ್ದೈತ್ಯ ಸ್ಸ

ಪರಾಶರನು ಹೇಳುತ್ತಾನೆ:—ಎಲೈ ಮೈತ್ರೇಯನೆ; ಯುಕ್ತಾ ಯುಕ್ತ ವಿವೇಕಶಾಲಿಯೂ, ಉದಾರಚರಿತನೂ, ಮಹಾನುಭಾವನೂ ಎನಿಸಿದ ಪ್ರಹ್ಲಾದನ ಚರಿತೆಯನ್ನು ಕೇಳಬೇಕೆಂದು ತವಕಗೊಂಡಿರುವ ನಿನಗೆ ನಾನು ಸವಿಸ್ತಾರವಾಗಿ ತಿಳುಹಿಸುವೆನು. ಅವಹಿತನಾಗಿ ಕೇಳು ॥ ೧ ॥ ದಿತಿಗೆ ದಕ್ಷನಿಂದ ಮಹಾ ವೀರ್ಯವುಳ್ಳ, ಹಿರಣ್ಯಕಶಿಪು ಎಂಬ ತನಯನೊಬ್ಬನು ಜನಿಸಿದನೆಂದು ಹಿಂದೆಯೇ ಹೇಳಿರುವೆನಷ್ಟೆ ? ಆ ಹಿರಣ್ಯಕಶಿಪುವು ಬ್ರಹ್ಮನನ್ನು ಕುರಿತು—ತಪಸ್ಸುಮಾಡಿ, "* ಎಲೈ ಸಕಲ ಜಗತ್ಸೃಷ್ಟಿಕರ್ತನೆನಿಸಿದ ಚತುರ್ಮುಖನೆ, ನೀನು ಉಂಟುಮಾಡಿರುವ ಪ್ರಾಣಿಗಳಲ್ಲಿ ಯಾವ ಪ್ರಾಣಿಯಿಂದಲೂ ನನಗೆ ಮೃತ್ಯುವು (ಸಾವು) ಇಲ್ಲದಿರಲಿ, ಎಂಬದಾಗಿ ವರವಂ ಬೇಡಿಕೊಂಡನು. ಅಂತೆಯೇ ಬ್ರಹ್ಮನೂ ಕೂಡ ಆತನಿಗೆ ವರವಂ ದಯಪಾಲಿಸಿದನು. ಇಂತು ಚತುರ್ಮುಖನವರ (ಪ್ರಸಾದ) ದಿಂದ ಅಹಂಕಾರಪಟ್ಟು, ಮೂರು ಲೋಕವನ್ನೂ ಹಿರಣ್ಯಕಶಿಪುವು ತನ್ನ ಅಧೀನದಲ್ಲಿಟ್ಟುಕೊಂಡು ಕೇವಲ ಮದಾಂಧನಾಗಿರುತ್ತಿದ್ದನು ॥ ೨ ॥ ಇಂತು ಮೂಲೋಕವನ್ನೂ ತನ್ನ

---

* ಶ್ಲೋ॥ ಭೂತೇಭ್ಯಸ್ತ್ವ ದ್ವಿಸೃಷ್ಟೇಭ್ಯೋ ಮೃತ್ಯುರ್ಮಾಭೂನ್ಮಮಪ್ರ ಭೋ॥ ಇತ್ಯಾದಿ ಪ್ರಮಾಣಾನುಸಾರ.

ಚಾಸೀತ್ಸವಿತಾ ಸ್ವಯಂ । ವಾಯುರಗ್ನಿ ರಪಾಂ ನಾಥ ಸ್ಸೋ
ಮಶ್ಚಾಸೀನ್ಮಹಾ ಸುರಃ ॥ ೫ ॥ ಧನಾನಾ ಮಧಿಪಸ್ಸೋ
ಭೂತ್ಸ ಏವಾಸೀತ್ಸ ತ್ವಯಂ ಯವಃ । ಯಜ್ಞ ಭಾಗಾನಶೇ
ಷಾಂಸ್ತು ಸ ಸ್ವಯಂ ಬು ಭುಜೇ ಽ ಸುರಃ॥ ೪ ॥ ದೇವಾಸ್ಸ
ರ್ಗಂ ಪರಿತ್ಯಜ್ಯ ತತಾ ತ್ರಸಾನ್ಮಾನಿ ಸತ್ತಮ ! । ವಿಚೇರುರುವನೌ
ಸರ್ವೇ ಬಿಭ್ರಾಣಾ ಮಾನುಷೀಂತನುಂ ॥೫॥ಜಿತ್ವಾ ತ್ರಿಭುವ ಂ
ಸರ್ವಂ ತ್ರೈಲೋಕ್ಯೈಶ್ವರ್ಯದರ್ಪಿತಃ। ಉದ್ಗೀಯ ಮಾನೋಗಂ

ಅಧೀನದಲ್ಲಿಟ್ಟುಕೊಂಡು, ಆ ತ್ರಿಲೋಕಾಧಿಪನೆನಿಸಿದ ಇಂದ್ರನ ಪದವಿ
ಯನ್ನೂ ಆಕ್ರಮಿಸಿಕೊಂಡನು. ಸಕಲ ಪ್ರಾಣಿಗಳಿಗೂ ಅಧಿಪನೆನಿಸಿದ
ಸವಿತೃವೂ (ಸೂರ್ಯನೂ) ತಾನೇ ಆಗಿದ್ದನು.(ಸೂರ್ಯನ ಅಧಿಪತ್ಯವಂ
ಕೂಡ ಆತನೇ ನಡೆಯಿಸುತ್ತಿದ್ದನು) ಈ ಭಯಂಕರನಾದ ಹಿರಣ್ಯಕಶಿ
ಪುವು ತರುವಾಯ, ವಾಯು, ಅಗ್ನಿ, ಚಂದ್ರ, ಇವರುಗಳ ಅಧಿಕಾರವ
ನ್ನೂ ಸಹ ಕಿತ್ತುಕೊಂಡು ತಾನೇ ಅವರವರ ಅಧಿಕಾರಗಳನ್ನು ನಡೆಯಿ
ಸಲಾರಂಭಿಸಿದನು ॥ ೩ ॥ ಪ್ರಪಂಚದಲ್ಲಿರುವ ಸಕಲೈಶ್ವರ್ಯಕ್ಕೂ
ಅಧಿಪತಿಯಾದ ಕುಬೇರನೇ ಅವನಾಗಿದ್ದನು ಪ್ರಾಣಿಗಳಿಗೆ ಅವರವರ
ಸುಕೃತ ದುಷ್ಕೃತಗಳಿಗನುಸಾರವಾಗಿ ಸುಖದುಃಖಗಳನ್ನುಂಟುಮಾಡಿ
ರಕ್ಷಣ, ಶಿಕ್ಷಣಗಳನ್ನು ಕಲ್ಪಿಸುವ ಯಮನೂ ಕೂಡ ಈ ಹಿರಣ್ಯಕಶಿ
ಪುವೇ ಆಗಿದ್ದನು. ಮತ್ತು ಲೋಕದಲ್ಲಿ ಯಾರಾದರೂ ಯಜ್ಞ ಯಾಗಾ
ದಿಗಳನ್ನಾಚರಿಸಿ, ದೇವತೆಗಳಿಗೆ ಚರು, ಪುರೋಡಾಶ, ಮೊದಲಾದ ಹವಿ
ಸ್ಸುಗಳನ್ನು ಸಮರ್ಪಿಸಿದರೆ, ಆ ಯಜ್ಞ ಭಾಗಗಳೆಲ್ಲವನ್ನು ತಾನೇ ಅಪಹ
ರಿಸಿ, ಅವುಗಳನ್ನೂ ಕೂಡ ತಾನೊಬ್ಬನೇ ಅನುಭವಿಸುತ್ತಿದ್ದನು ॥ ೪ ॥
ಎಲೈ ಮುನಿವರ್ಯನೆನಿಸಿದ ಮೈತ್ರೇಯನೇ; ಆ ಹಿರಣ್ಯಕಶಿಪುವಿನ ಹೆದ
ರಿಕೆಯಿಂದ ದೇವತೆಗಳೆಲ್ಲರೂ ಸ್ವರ್ಗಲೋಕವಂ ಬಿಟ್ಟು, ಮಾನುಷ ದೇ
ಹವಂ ಧರಿಸಿ ಭೂಲೋಕದಲ್ಲಿ ಸಂಚರಿಸ ತೊಡಗಿದರು ॥ ೫ ॥ ಇಂತು
ಆ ಹಿರಣ್ಯಕಶಿಪುವು, ಮೂರುಲೋಕಗಳನ್ನೂ ತನ್ನ ಪರಾಕ್ರಮದಿಂದ
ಲೂ, ಬ್ರಹ್ಮನಿಂದ ತನಗೆ ದೊರೆತ ವರಪ್ರಸಾದದಿಂದಲೂ ಗೆದ್ದು, ತಾನು
ತ್ರಿಲೋಕಾಧಿಪನಾದೆನೆಂಬ ಅಹಂಕಾರದಿಂದ ತಾನೇ ತಾನಾಗಿ ಮೆರೆ

ಧರ್ವೈ ರ್ಬುಭುಜೇ ವಿಷಯಾ ಪಿಯಾ ॥೬॥ ಪಾನಾಸಕ್ತಂ ಮಹಾತ್ಮಾನಂ ಹಿರಣ್ಯ ಕಶಿಪುಂ ತದಾ।ಉಪಾಸಾಂ ಚಕ್ರಿರೇ ಸರ್ವೇಸಿದ್ಧ ಗಂಧರ್ವ ಪನ್ನಗಾಃ ॥ ೭ ॥ ಅವಾದಯಂ ಜಗುಶ್ಚಾನ್ಯೇ ಜಯ ಶಬ್ದಾಂ ಸ್ತಥಾಪರೇ । ದೈತ್ಯೇ ಶ್ವರಸ್ಯ ಪುರತ ಶ್ಚಕ್ರು ಸ್ಸದ್ಧಾ ಮದಾನ್ವಿತಾಃ ॥ ೮ ॥ ತತ್ರ ಪ್ರಣ್ಮತ್ತಾ ಪ್ಸರಸಿ ಸ್ಫಟಿಕಾಭ್ರಮಯೇಽಸುರಃ । ಪಪೌಪಾನಂ ಮುದಾ ಯುಕ್ತಃ ಪ್ರಾಸಾದೇ ಸುಮನೋಹರೇ ॥ ೯ ॥ ತಸ್ಯೆ ಪುತ್ರೋ ಮಹಾ ಭಾಗಃ ಪ್ರಹ್ಲಾದೋ ನಾಮ ನಾಮತಃ । ಪಪಾಠ ಬಾಲ

ಯುತ್ತಿದ್ದನು ಗಂಧರ್ವರೆಲ್ಲರೂ ಈತನ ಯಶಸ್ಸನ್ನು ನಾನಾ ಬಗೆಯಿಂದ ಗಾನವಾಡತೊಡಗಿದರು. ಇಂತು ಗಂಧರ್ವರ ಸ್ತೋತ್ರಕ್ಕೆ ಪಾತ್ರನಾಗಿ ತನಗೆ ಇಷ್ಟವಾದ ಸಾಂಸಾರಿಕ ಸುಖಗಳನ್ನು ತನ್ನ ಮನಸ್ಸು ಬಂದಂತೆ ಅನುಭವಿಸತೊಡಗಿದನು ॥ ೬ ॥ ವಿಶೇಷವಾಗಿ ಪಾನದಲ್ಲಿ ಅಭಿರುಚಿಯುಳ್ಳವನೆನಿಸಿ, ತಿರಸ್ಕರಿಸಲಸಾಧ್ಯವಾದ ಮಹಿಮೆಯಿಂದೊಡಗೂಡಿ ಮದೋನ್ಮತ್ತನಾಗಿ ಮೆರೆಯುತ್ತಿದ್ದ, ಈ ಹಿರಣ್ಯಕಶಿಪುವನ್ನು, ಸಿದ್ಧರು, ಗಂಧರ್ವರು, ನಾಗರೆಂಬ ಪಾತಾಳಲೋಕ ನಿವಾಸಿಗಳೆಲ್ಲರೂ ಅನುಕ್ಷಣವೂ ನೆಳಲಿನಂತೆ ಹಿಂಬಾಲಿಸುತ್ತಾ ಆತನನ್ನು ಸೇವೆಮಾಡತೊಡಗಿದರು ॥ ೭ ॥ ಇಂತು ದೈತ್ಯಾಧಿಪನೆನಿಸಿದ ಆ ಹಿರಣ್ಯಕಶಿಪುವನ್ನು ಮದೋನ್ಮತ್ತರೆನಿಸಿದ ಕೆಲವು ಮಂದಿ ಸಿದ್ಧರು ಬದ್ಧಾಂಜಲಿಪುಟರಾಗಿ ವಿನಯದಿಂದ ಕಿಂಕರರಂತೆ ಸೇವೆಮಾಡುತ್ತಿದ್ದರು. ಮತ್ತೆ ಕೆಲವರು ಈತನ ಚರಿತೆಯನ್ನು ಗಾನರೂಪದಿಂದ ಹಾಡಲುಪಕ್ರಮಿಸಿದರು. ಮತ್ತೆ ಕೆಲವರು "ಜಯಜಯಾ" ಎಂಬದಾಗಿ ಹೊಗಳತೊಡಗಿದರು ॥ ೮ ॥ ಆ ಹಿರಣ್ಯಕಶಿಪುವಿನ ಪಾನಶಾಲೆಯು ನಿರ್ಮಲಗಳಾದ ಸ್ಫಟಿಕ ಮಣಿಗಳಿಂದಲೂ, ಅಭ್ರಕ ಶಿಲೆಗಳಿಂದಲೂ, ಕಟ್ಟಲ್ಪಟ್ಟು ಸ್ವಚ್ಛವಾಗಿ ಕಂಗೊಳಿಸುತ್ತಿದ್ದಿತು. ಇಂತಹ ಪಾನಗೃಹದಲ್ಲಿ ಈ ಹಿರಣ್ಯಕಶಿಪುವು ಸಿದ್ಧರೇ ಮೊದಲಾದವರಿಂದ ಸೇವೆಯಂ ಕೈಗೊಳ್ಳುತ್ತಾ, ಮನೋಹರಮಾದ ಆ ಉಪ್ಪರಿಗೆಯಲ್ಲಿ ಪರಮಾಹ್ಲಾದ ಯುಕ್ತನಾಗಿ, ಉತ್ತಮವಾದ ಮದ್ಯವಂ ಸೇವಿಸುತ್ತಿದ್ದನು ॥ ೯ ॥ ಆತನ ನಾಲ್ಕು ಮಂದಿ

ಪಾಠ್ಯಾದಿ ಗುರುಗೇಹ ಗತೋಽರ್ಭಕಃ ॥ ೧೦ ॥ ಏಕದಾ
ತು ಸಧರ್ಮಾತ್ಮಾ ಜಗಾಮ ಗುರುಣಾ ಸಹ । ಪಾನಾಸಕ್ತಸ್ಯ
ಪುರತಃ ಪಿತುರ್ದೈತ್ಯ ಪತೇಸ್ತದಾ ॥ ೧೧ ॥ ಪಾದ ಪ್ರಣಾ
ಮಾವ ನತಂ ತ ಮುತ್ಥಾಪ್ಯ ಪಿತಾ ಸುತಂ । ಹಿರಣ್ಯಕಶಿಪುಃ
ಪ್ರಾಹ ಪ್ರಹ್ಲಾದ ಮುಮಿ ತೌಜಸಂ ॥ ೧೨ ॥ ಪಠ್ಯತಾಂ
ಭವತಾ ವತ್ಸ ! ಸಾರಭೂತಂ ಸುಭಾಷಿತಂ । ಕಾಲೇನೈ
ತಾವತಾ ಯತ್ತ್ವೇ ಸದೋ ದ್ಯುಕ್ತ್ವೇನ ಶಿಷ್ಟಿತಂ ॥ ೧೩ ॥
ಪ್ರಹ್ಲಾದಃ॥ ಶ್ರೂಯತಾಂ ತಾತ ! ವಕ್ಷ್ಯಾಮಿ ಸಾರಭೂತಂ

ಮುಕ್ಕಳಲ್ಲಿ ಪ್ರಹ್ಲಾದನಂಬ ಮಹಾನುಭಾವನಾದ ಹುಡುಗನೊಬ್ಬನು ದೈತ್ಯಗುರುವೆನಿಸಿದ ಶುಕ್ರಾಚಾರ್ಯನ ಮನೆಯಲ್ಲಿದ್ದುಕೊಂಡು (ಗುರುಕುಲವಾಸವಂ ಮಾಡುತ್ತಾ) ಬಾಲಪಾಠವನ್ನು ಅಭ್ಯಾಸಮಾಡುತ್ತಿದ್ದನು ॥ ೧೦ ॥ ಇಂತಿರಲು ಒಂದಾನೊಂದು ದಿನ ಹಿರಣ್ಯಕಶಿಪುವು, ಮದ್ಯಪಾನವಂಗೈಯಲು ಅತ್ಯಾಸಕ್ತಿಯುಕ್ತನೆನಿಸಿ, ಆ ಪಾನಶಾಲೆಯಂ ಪೊಕ್ಕು ಮದ್ಯಪಾನಕ್ಕೆ ಸಿದ್ಧನಾಗಿರಲು, ಈ ಹುಡುಗನು ತನ್ನ ಗುರುವಿನೊಡನೆ ದೈತ್ಯಾಧಿಪನೆನಿಸಿದ ತನ್ನ ತಂದೆಯು ಪಾನಶಾಲೆಯುಂ ಪ್ರವೇಶಿಸಿ, ಆತನ ಮುಂದೆ ನಿಂತು ॥ ೧೧ ॥ ತನ್ನ ತಂದೆಯ ಅಡಿದಾವರೆಗಳಿಗೆ ಸಾಷ್ಟಾಂಗ ಪ್ರಣಾಮವಂಗೈದನು. ಇಂತು ನಮಸ್ಕರಮಾಡಿ ತನ್ನ ಪಾದಗಳ ಮೇಲೆ ಬಿದ್ದಿರುವ ಮಹಾ ಪರಾಕ್ರಮಶಾಲಿಯೂ, ದಿವ್ಯತೇಜಸ್ಸಂಪನ್ನನೂ ಎನಿಸಿದ, ಪ್ರಹ್ಲಾದನನ್ನು ಹಿರಣ್ಯಕಶಿಪುವು ಬಾಚಿ ತಬ್ಬಿ ಮುದ್ದಾಡಿ ಈರೀತಿ ಹೇಳತೊಡಗಿದನು ॥ ೧೨ ॥ ಎಲೈ ಮಗುವೆ; ಇದುವರೆಗೂ ನೀನು ಗುರುಗಳ ಬಳಿಯಲ್ಲಿದ್ದುಕೊಂಡು ಅನುದಿನವೂ ವಿದ್ಯೆಯಲ್ಲಿಯೇ ಆಸಕ್ತನೆನಿಸಿ ವಿದ್ಯಾಭ್ಯಾಸವಂ ಮಾಡಿರುವೆಯಲ್ಲವೆ ? ನೀನು ಕಲಿತಿರುವ ಪಾಠದಲ್ಲಿ ಮುಖ್ಯಸಾರಾಂಶಭೂತವಾದ ಒಂದು ಸುಭಾಷಿತವನ್ನು ಹೇಳು. (ಸುಭಾಷಿತ ಶಬ್ದಕ್ಕೆ ನೀತಿ ಅಥವಾ ಮಾತೆಂದರ್ಥವು) ॥ ೧೩ ॥ ಪ್ರಹ್ಲಾದನು ಹೇಳುತ್ತಾನೆ:—ಓ ತಂದೆಯೆ; ಇದುವರೆಗೂ ನಾನು ಕಲಿತಿರುವುದರಲ್ಲಿ ಮುಖ್ಯಸಾರಭೂತವಾದ ಒಂದು ಸುಭಾಷಿತವನ್ನು ನಿನ್ನ ಆಜ್ಞೆಯಂತೆಯೇ ಹೇಳಲುಪಕ್ರಮಿಸುವೆನು.

ತವಾಜ್ಞಯಾ । ಸಮಾಹಿತ ಮನಾ ಭೂತ್ವಾ ಯನ್ಮೇ ಚೇತಸ್ಯ
ವಸ್ಥಿತಂ ॥೧೪॥ ಅನಾದಿ ಮಧ್ಯಾಗತ ಮಜ ಮವ್ಯ ಧ್ಯಿ ಹ್ಷಯ
ಮಚ್ಯುತಂ। ಪ್ರಣತೋ ಸ್ಮ್ಯಂತ ಸಂತಾನಂ ಸರ್ವಕಾರಣ ಕಾ
ರಣಂ ॥ ೧೫ ॥ ಶ್ರೀಪರಾಶರಃ॥ ಏತಚ್ಛ್ರುತ್ವಾ ದೈತ್ಯೇಂದ್ರಃಕೋ
ಪಸಂರಕ್ತ ಲೋಚನಃ । ವಿಲೋಕ್ಯ ತದ್ಗುರುಂ ಪ್ರಾಹ ಸ್ಫುರಿತಾ

ನನ್ನ ಮನಸ್ಸಿನಲ್ಲಿರುವುದನ್ನು ನಾನು ಸಾರಭೂತವೆಂದರಿತು ಹೇಳತೊ
ಡಗುವೆನು. ಅದನ್ನು ನೀನು ಏಕಾಗ್ರಚಿತ್ತನಿನಿಸಿ (ಬೇರೊಂದು ಕಡೆ
ಗಮನವಿಡದೆ) ಕೇಳು ॥ ೧೪ ॥ (ಓ ತಂದೆಯೇ,) ದೇಶಕಾಲಾದಿ ಪ
ರಿಚ್ಛಿನ್ನವಿದ ಶೂನ್ಯನೂ (ದೇಶ, ಕಾಲ, ವೊದಲಾದ ಪರಿಮಾಣಶೂನ್ಯನೂ)
ಜನ್ಮರಹಿತನೂ, ಹೆಚ್ಚು ವಿಕೆ, ತಗ್ಗು ವಿಕೆಗಳೆಂಬ ವೃದ್ಧಿ ಹ್ಷಯವಿಮುಕ್ತ
ನೂ, ಬ್ರಹ್ಮನೇ ವೊದಲಾದ ಕಾರಣಭೂತರೆನಿಸಿದವರಿಗೆಲ್ಲಾ ಮೂಲ
ಕಾರಣನೆನಿಸಿರುವ ಕಾರಣ ನಾಶರಹಿತನೂ, ಈ ಪ್ರಪಂಚಗಳ ಸೃಷ್ಟಿ ಸ್ಥಿ
ಮತ್ತು ಲಯಗಳಿಗೆ ಮುಖ್ಯಕಾರಣನೆನಿಸಿದ ಪರಮಾತ್ಮನನ್ನು ನಾನು
ಅನುದಿನವೂ ನಮಿಸುವೆ ೧. (ನಿಖಿಲಪ್ರಪಂಚಗಳಿಗೂ ಸೃಷ್ಟಿ ಸ್ಥಿ ಮತ್ತು
ಲಯಕಾರ್ಯಗಳನ್ನುಂಟುಮಾಡುವಂತಹ ಒಬ್ಬ ಪರಮಾತ್ಮನಿರುವನು.
ಆತನ ಆದ್ಯಂತಗಳನ್ನು ಇದುವರಗೂ ಯಾರೂ ಕಂಡು ಕೇಳಿ ತಿಳಿದಿರು
ವರೇ ಇಲ್ಲ. ವೃದ್ಧಿಹ್ಷಯಗಳಿಗೆ ಆತನು ಒಳಪಟ್ಟವನಲ್ಲ. ನಾಶರಹಿತ
ನಾದವನು. ಚರಾಚರರೂಪವಾದ ಈ ಸೃಷ್ಟಿಗೆ ಕಾರಣಭೂತರೆನಿಸಿ
ದ ಚತುರ್ಮುಖ, ದಕ್ಷ ವೊದಲಾದವರಿಗೆಲ್ಲಾ ಆತನೇ ಮುಖ್ಯಕಾರಣವೆ
ನಿಸಿರುವನು. ಇಂತಹ ಪರಮಾತ್ಮನನ್ನು ಅನುದಿನವೂ ಶ್ರವಣ, ಮನ
ನ, ಧ್ಯಾನಗಳಿಂದ ಸೇವಿಸಿ, ಆತನ ಅನುಗ್ರಹವಂ ಪಡೆದು ನಾವೆಲ್ಲರೂ
ಮುಕ್ತರಾಗಬೇಕು. ಇದೇ ಮುಖ್ಯಸಾರಭೂತವಾದುದು. ಇದ
ಕ್ಕಿಂತಲೂ ಬೇರೆ ಸಾರಭೂತವಾದುದೇನಿರುವುದು ? ಆದುದರಿಂದ ನಾವೆ
ಲ್ಲರೂ ಆತನಿಗೆ ಅನಂತಾನಂತ ವಂದನೆಗಳಂ ಸಮರ್ಪಿಸಬೇಕಲ್ಲವೆ ?
ಎಂಬದಾಗಿ ಪ್ರಹ್ಲಾದನು ತಂದೆಗೆ ಹೇಳಿದನೆಂದು ಭಾವವು) ॥ ೧೫ ॥

ಪರಾಶರನು ಹೇಳುತ್ತಾನೆ:—ಇಂತು ಮಗನಾದ ಪ್ರಹ್ಲಾದನು
ಹೇಳಿದ ಮಾತಂ ಕೇಳಿ, ದೈತ್ಯೇಶ್ವರನೆನಿಸಿದ ಹಿರಣ್ಯಕಶಿಪುವು ತನ್ನ ಕ

ಧತಪಲ್ಲವಃ ॥ ೧೬ ॥ ಹಿರಣ್ಯಕಶಿಪುಃ॥ ಬ್ರಹ್ಮಬಂಧೋಃ!ಕಿ ಮೇ ತತ್ತ್ವೇ ವಿಪಕ್ಷ ಸ್ತುತಿ ಸಂಹಿತಂ । ಅಸಾರಂ ಗ್ರಾಹಿತೋ ಬಾಲೋ ಮಾ ಮನ ಜ್ಞಾಯು ದುರ್ಮತೇ ? ॥ ೧೭ ॥ ಗುರುಃ॥ ದೈತ್ಯೇಶ್ವರ ! ನ ಕೋಪಸ್ಯ ವಶನಾಗಂತು ಮರ್ಹಸಿ । ಮನೋಪದೇಶ ಜನಿತಂ ನಾಯಂ ವರ್ತತಿ ಬಾಲಕಃ ॥ ೧೮ ॥ ಹಿರಣ್ಯಕಶಿಪುಃ । ಅನುಶಿಷ್ಟೋಸಿ ಕೇನೇದೃಕ್? ವತ್ಸ ! ಪ್ರಹ್ಲಾದ ! ಕಥ್ಯತಾಂ । ಮಯೋಪದಿಷ್ಟಂ ನೇತ್ಯೇಷ ಪ್ರಬ್ರುವೀತಿಗುರು ಸ್ತವ ॥ ೧೯ ॥ ಪ್ರಹ್ಲಾದಃ!ಶಾಸ್ತಾ ವಿಷ್ಣು ರಶೇಷಸ್ಯ ಜಗತೊ

ಣ್ಣುಗಳಿಂದ ಕೋಪವೆಂಬ ಬೆಂಕಿಯು ಕೆಂಡಗಳನ್ನುಗುಳುತ್ತಾ, ಚಿಗುರಿನಂತೆ ಕೆಂಪಾದ ಕುಟಿಗಳನ್ನು ಕೋಪದಿಂದ ನಡುಗಿಸಿಕೊಂಡು, ಆ ಪ್ರಹ್ಲಾದನ ಗುರುವಂ ನೋಡಿ ಈ ರೀತಿ ಹೇಳತೊಡಗಿದನು ॥ ೧೬ ॥ ಹಿರಣ್ಯಕಶಿಪುವು ಹೇಳುತ್ತಾನೆ. —ಎಲೈ ನಿರ್ವೇಕಶೂನ್ಯನಾದ ಬ್ರಾಹ್ಮಣಾಧಮನೆ, ನನ್ನನ್ನು ತಿರಸ್ಕರಿಸಿ, ಏನೂ ತಿಳಿಯದ ಹುಡುಗನಾದ ನನ್ನ ಮಗನಿಗೆ ಇಂತಹ ತುಚ್ಛವಾದ ಮಾತನ್ನೇಕೆ ಹೇಳಿಕೊಟ್ಟೆ ? ಅವನು ಹೊಗಳಿದ ವಿಷ್ಣುವು ನನಗೆ ಶತ್ರುವೆಂದರಿಯೆಯಾ ? ಇಂತು ನನಿಗೆ ಶತ್ರುಭೂತನಾದ ವಿಷ್ಣುವಿನ ಸ್ತೋತ್ರವನ್ನು ಬಳಗೊಂಡಿರುವ ಕಾರಣ ಅತಿತುಚ್ಛವೂ, ಅಸಾರವೂ ಎನಿಸಿದ ಪಾಠವನ್ನು ಕಲಿಸಬಹುದೆ ॥ ೧೭ ॥ ಗುರುವು ಹೇಳುತ್ತಾನೆ —ಎಲೈ ದೈತ್ಯೇಶ್ವರನೆ; ಎಲ್ಲ ಸನ್ಮಾರ್ಗವನ್ನೂ ಸರಿಯಾಗಿ ವಿಚಾರಿಸದೆ ವ್ಯರ್ಥವಾಗಿ ನನ್ನಮೇಲೆ ಕೋಪಮಾಡಿಕೊಳ್ಳಬೇಡ. ಈ ನಿನ್ನಮಗನಾದ ಪ್ರಹ್ಲಾದನು ಹೇಳುವುದು ನಾನು ಹೇಳಿಕೊಟ್ಟದುದಲ್ಲಾ.ಇಂತು ನಾನುಹೇಳಿಕೊಟ್ಟುದನು ಹೇಳದೆ ಅವನಾಗಿಯೇ ಅಭ್ಯಾಸಮಾಡಿಹೇಳುತಿರುವಅವನಮಾತಂ ಕೇಳಿ ನನ್ನ ಮೇಲೆ ನೀನೀಪರಿಕೋಪಮಾಡಿಕೊಳ್ಳಬಾರದು ॥ ೧೮ ॥ ಹಿರಣ್ಯಕಶಿಪುವು ಹೇಳುತ್ತಾನೆ: —ಎಲೈ ಪಶುಳೆಯೆ; ಪ್ರಹ್ಲಾದನೆ, ಈರೀತಿ ನನ್ನನ್ನು ಅಲಕ್ಷ್ಯಮಾಡಿ, ನನ್ನ ಇದಿರಿನಲ್ಲಿಯೇ ನನ್ನ ಹಗೆಯ ಗುಣಗಳನ್ನು ಪ್ರಶಂಸೆ ಮಾಡುವಂತೆ ನಿನಗೆ ಕಲಿಸಿಕೊಟ್ಟವರಾರು ? ನಿನ್ನ ವಿದ್ಯಾಗುರುವನ್ನು ಕೇಳಿದೊಡೆ, ಆತನು ತಾನು ಹೇಳಿಕೊಡಲಿಲ್ಲವೆಂತ

ಯೋಽಹೃದಿಸ್ಥಿತಃ । ತಮೃತೇ ಪರಮಾತ್ಮಾನಂ ತಾತ! ಕಃ ಕೇನ ಶಾಸ್ಯತೇ ? ॥ ೨೦ ॥ ಹಿರಣಕಶಿಪುಃ॥ ಕೋಽಯಂ ವಿಷ್ಣು ಸ್ಸು ದುರ್ಬುದ್ಧೇ ! ಯಂಬ್ರವೀಷಿ ಪುನಃ ಪುನಃ । ಜಗತಾ ಮೀಶ್ವರೆ ಸ್ಯೇಹ ಪುರತಃ ಪ್ರಸಭಂ ಮಮ ॥ ೨೧ ॥ ಪ್ರಹ್ಲಾದಃ॥ ನ ಶಬ್ದ ಗೋಚರಂ ಯಸ್ಯ ಯೋಗಿ ಧ್ಯೇಯಂ ಪರಂ ಪದಂ । ಯ

ಹೇಳುವನು. ಹಾಗಾದರೆ ಇದನ್ನು ನಿನಗೆ ಕಲಿಸಿದವರಾರು ? ॥೧೯॥ ಪ್ರಹ್ಲಾದನು ಹೇಳುತ್ತಾನೆ:—ಓ ತಂದೆಯೆ; ಒಬ್ಬರು ಹೇಳಿಕೊಟ್ಟಂತೆ ವ.ತ್ತೊಬ್ಬರು ನಡೆಯುತ್ತಾರೆಂಬುದು ಸುತರಾಂ ಅಸಂಗತವಾದುದು. ಸಕಲ ಲೋಕಗಳಿಗೂ ಶಿಕ್ಷಕನೆನಿಸಿದ ವಿಷ್ಣುವು ಎಲ್ಲರ ಹೃದಯಾರವಿಂದಗಳಲ್ಲಿಯೂ ತಾನೇ ತಾನಾಗಿ ನೆಲೆಸಿ, ಎಲ್ಲರನ್ನೂ ಅವರವರ ಕರ್ಮಾನುಸಾರ ಸುಕೃತ ದುಷ್ಕೃತಗಳಲ್ಲಿ ಪ್ರೇರಿಸಿ, ಬಲಾತ್ಕಾರದಿಂದ ಆ ಆ ಕೆಲಸಗಳನ್ನು ಮಾಡಿಸುತ್ತಿರುವನು. ಇಂತಿರಲು ಆತನಿಗಿಂತಲೂ ಶಿಕ್ಷಕನೂ,ಶಿಕ್ಷಾರ್ಹನೂ,ಬೇರೊಬ್ಬರುಂಟೆ?(ಸಕಲ ಲೋಕಗಳಿಗೂ ಮುಖ್ಯಾಶ್ರಯ ಭೂತನಾದ ಶ್ರೀವಿಷ್ಣುವು ಪ್ರಾಣಿಗಳನ್ನು ಪ್ರೇರಿಸಿ, ಎಲ್ಲಾ ಕೆಲಸಗಳನ್ನೂ ನಡೆಯಿಸುತ್ತಿರುವನು. ಆತನ ಶಿಕ್ಷೆಯಿಲ್ಲದೊಡೆ ಯಾರೂ ಯಾವ ಕಾರ್ಯವನ್ನೂ ನಡೆಯಿಸಲಾರರು. ಆತನ ಶಾಸನಕ್ಕೆ (ಶಿಕ್ಷೆ ಅಥವಾ ಆಜ್ಞೆಗೆ) ನಾವೆಲ್ಲರೂ ಒಳಪಟ್ಟವರೇ ಆಗಿರುವೆವು. ಆದುದರಿಂದ "ನಾನು ಶಾಸಕನು, ಅನ್ಯ ಶಾಸನಕ್ಕೆ ಎಲ್ಲರೂ ಒಳಪಟ್ಟವರು" ಎಂಬ ದುರಭಿಮಾನವಂ ಪರಿತ್ಯಜಿಸಿ, ಆ ಪರಮಾತ್ಮನಲ್ಲಿ ಭಕ್ತಿಭಾವದಿಂದಿರುವುದು ಶ್ರೇಯಸ್ಕರವು) ॥ ೨೦ ॥ ಹಿರಣ್ಯಕಶಿಪುವು ಹೇಳುತ್ತಾನೆ:—ಎಲೈ ದುರ್ಬುದ್ಧಿಯೆ; ಮೂಲೋಕಗಳನ್ನೂ ನನ್ನ ಪರಾಕ್ರಮದಿಂದ ಜಯಿಸಿ, ಆ ಮೂರು ಲೋಕಗಳಿಗೂ ಒಡೆಯನೆನಿಸಿದ ನನ್ನ ಇದಿರಿನಲ್ಲಿ ,,ಎಲ್ಲಾ ಲೋಕಗಳಿಗೂ ವಿಷ್ಣುವೇ ಪ್ರಭುವೆಂದು ನಿರ್ಭೀಕನಾಗಿ ಹರಟುವೆಯಲ್ಲಾ ! ಅವನಾರು ವಿಷ್ಣುವೆಂಬುವನು ? ನನಗಿಂತಲೂ ಶೂರನೋ ? ಅಥವಾ ಪೌರುಷ್ಯವಿಯೋ ? ಬಾರಿಬಾರಿಗೂ ಅನ್ನುವೆಯೇಕೆ ಈ ರೀತಿ ನನ್ನ ಇದಿರಾಗಿ ಸ್ವಲ್ಪವೂ ಹಿಂದು ಮುಂದು ನೋಡದೆ, ತಾರತಮ್ಯವನ್ನರಿಯದೆ ಮಾತನಾಡಬೇಡ ॥ ೨೧ ॥ ಪ್ರಹ್ಲಾದನು ಹೇ

ತೋ ವಿಶ್ವಂ ಸ್ವಯಂ ವಿಶ್ವಂ ಸ ವಿಷ್ಣುಃ ಪರಮೇಶ್ವರಃ ॥ ೨೨॥
ಹಿರಣ್ಯ ಕಶಿಪುಃ ॥ ಪರಮೇಶ್ವರ ಸಂಜ್ಞೋಽಜ್ಞ ! ಕಿ ಮು
ನ್ಯೋ ಮುಖ್ಯು ವ ಸ್ಥಿತೇ? । ತಥಾಽದ್ಯ ಮರ್ತ್ಯಕಾಮುಸ್ತ್ಯಂ
ಪ್ರಬ್ರುವೀ ಷಿ ಪುನಃ ಪುನಃ ॥ ೨೩॥ ಪ್ರಹ್ಲಾದಃ ॥ ನ ಕೇವ
ಲಂ ತಾತ ! ಮಮ ಪ್ರಜಾನಾಂ ಸ ಬ್ರಹ್ಮ ಭೂತೋ ಭವತ
ಶ್ಚ ವಿಷ್ಣುಃ । ।ಧಾತಾ ವಿಧಾತಾ ಪರಮೇಶ್ವರಶ್ಚ ಪ್ರಸೀದ

ಳುತ್ತಾನೆ.-ಆ ಪರಮಾತ್ಮನ ದಿವ್ಯ ಪದವಿಯನ್ನು ನಾವು ಕೇವಲಮಾತುಗ
ಳಿಂದಲೇ ತಿಳಿಯಲಾಗದು. ವೇದಗಳಿಗೂ ಅಸಾಧ್ಯವಾಗಿರುವುದು.
ಅನುದಿನವೂ ಮುಕ್ತಿಯಂ ಬಯಸುವ ಯೋಗಿಗಳ ಜ್ಞಾನಚಕ್ಷುಸ್ಸಿಗೆ ಸ್ವ
ಲ್ಪಸ್ವಲ್ಪವಾಗಿ ಗೋಚರಿಸುವುದು. ಆತನಿಂದಲೇ ಎಲ್ಲಾಲೋಕಗಳೂ
ಜನಿಸಿದುವು. ಎಲ್ಲವೂ ಆತನ ಅಂಶಸಂಭೂತವೇ ಆಗಿರುವ ಕಾರಣ
ಆತನೇ ಎಲ್ಲರೂಪಗಳಿಂದಲೂ ಇರುವನು. ಇಂತು ಅಪ್ರತಿಹತವಾದ
ಶಕ್ತಿಸಂಪನ್ನನೆನಿಸಿ, ಸಕಲ ನಿಯಾಮಕನಾಗಿರುವ ಕಾರಣ ಆ ಪರಮಾ
ತ್ಮನೇ ಎಲ್ಲ ಲೋಕಗಳಿಗೂ ಒಡೆಯನಾಗಿರುವನು. ಆದುದರಿಂದ
"ನಾನು ತ್ರಿಲೋಕಾಧಿಪತಿ, ನನ್ನ ಆಳ್ವಿಕೆಗೆ ಇವರೆಲ್ಲರೂ ಒಳಪಟ್ಟವ
ರು" ಎಂಬ ಇದೇ ಮೊದಲಾದ ದುರಭಿಮಾನವಂ ಬಿಟ್ಟು ಆ ಪರಮೇ
ಶ್ವರನ ಪಾದಾರವಿಂದಗಳಲ್ಲಿ ಭಕ್ತಿಯನ್ನು ಇರಿಸು ॥ ೨೨ ॥ ಹಿರಣ್ಯ
ಕಶಿಪುವು ಹೇಳುತ್ತಾನೆ:—ಎಲೈ ಮೂಢನೆನಿಸಿದ ಪ್ರಹ್ಲಾದನೆ; ಎಲ್ಲ
ಲೋಕಗಳಿಗೂ ನಾನೇ ಒಡೆಯನಾಗಿರುವಾಗ್ಗೆ "ನೀನು ಪರಮೇಶ್ವರನಲ್ಲ,
ಆ ವಿಷ್ಣುವೇ ಪರಮೇಶ್ವರ ಶಬ್ದದಿಂದ ವ್ಯವಹರಿಸಲು ತಕ್ಕವನು" ಎಂಬ
ದಾಗಿ ಪರಮೇಶ್ವರನೆಂಬುವನು ನನಗಿಂತಲೂ ಬೇರೊಬ್ಬ ನಿರುವನೆಂದು
ಹೇಳುವಿಯಾ ? ಇದಂ ನೋಡಿದರೆ ನಿನಗೆ ಪ್ರಾಣಗಳಮೇಲೆ ಆದರವಿರು
ವಂತೆ ತೋರುವುದಿಲ್ಲ ನೀನು ಮೃತ್ಯುವನ್ನು ಎದುರು ನೋಡುವಂತಿದೆ.
ಆದುದರಿಂದಲೇ ಈಪರಿ ಬಾರಿಬಾರಿಗೂ ಬಗುಳುತ್ತಿರುವೆ ॥ ೨೩ ॥
ಪ್ರಹ್ಲಾದನು ಹೇಳುತ್ತಾನೆ:—ಎಲೈ ತಂದೆಯೆ; ಬ್ರಹ್ಮಶಬ್ದವಾಚ್ಯನಾದ
ಆ ವಿಷ್ಣುವು ನನಿಗೆಮಾತ್ರದೊಡ್ಡವನೆಂದರಿಯಬೇಡ. ನಿನ್ನ ಆಳ್ವಿಕೆಗೆ
ಒಳಪಟ್ಟ ಸಕಲ ಪ್ರಜೆಗಳಿಗೂ, ಈ ಪ್ರಜೆಗಳಿಗೆ ಅಧಿಪತಿಯೆನಿಸಿದ ನಿನ

ಕೋಪಂ ಕುರುಷೇ ಕಿಮರ್ಥಂ ? ॥೨೩॥ಹಿರಣ್ಯಕಶಿಪುಃ ॥ ಪ್ರ
ವಿಷ್ಟಃ ಕೋಸ್ಯೆ ಹೃದಯೇ ? ನುರ್ಬುದ್ಧೇ ರತಿಪಾಪಕೃತ್ ।
ಯೇನೇ ದೃಶಾ ನ್ಯ ಸಾಧೂನಿ ವದತಾ ವಿಷ್ಟ ಮೂನಸಃ
॥ ೨೪ ॥ ಪ್ರಹ್ಲಾದಃ ॥ ನಕೇವಲಂ ಮದ್ಧೃದಯಂ ಸ ವಿಷ್ಣು
ರಾಕ್ರಮ್ಯ ಲೋಕಾನಖಿಲಾ ನವಸ್ಥಿತಃ । ಸವಾಂ ತ್ವ ದಾದೀಂ
ಶ್ಚ ಪಿತ ! ಸ್ವಮಸ್ಮಾ ನ್ಸಮಸ್ತ ಜೇಷ್ಟಾಸು ಯುನಕ್ತಿ ಸರ್ವಗಃ

ಗೂ ಕೂಡ ಆತನೇ ದೊಡ್ಡವನು. ಎಲ್ಲವನ್ನೂ ಕಾಪಾಡಶಕವನೂ, ಉಂಟುಮಾಡತಕ್ಕವನೂ, ಪರಮೇಶ್ವರನೂ ಆತನೇ ಆಗಿರುವನು. ಇಂತಿರಲು ನೀನು ವ್ಯರ್ಥವಾಗಿ ನನ್ನ ಮೇಲೆ ಏಕೆ ಕೋಪಗೊಂಡು ಆಗ್ರಹ ಮಾಡುವೆ? ಆತನ ಆಜ್ಞಾಧಾರಕರಲ್ಲಿ ನೀನೂ ಒಬ್ಬನು. ಆತನ ಕಟ್ಟಲೆಗೆ ಸ್ವಲ್ಪವಾದರೂ ವಿರೋಧ ನಡೆಯುತಕ್ಕ ಸಾಮರ್ಥ್ಯವು ನಿನಗೆಲ್ಲಿಯದು? ಆದುದರಿಂದ ಸರ್ವಾನರ್ಥ ಹೇತುಭೂತವಾದ ಕೋಪವನ್ನುಡಗಿಸಿಕೊಂಡು ಆತನ ಚರಣಕಮಲವನ್ನು ಶರಣುಹೊಂದು. ಅದರಿಂದ ನಿನಗೆಮೇಲ್ಮೆಯುಂಟು ॥ ೨೩ ॥ ಹಿರಣ್ಯಕಶಿಪುವು ಹೇಳುತ್ತಾನೆ:—ಈದುರ್ಬುದ್ಧಿಗೆ ಬಹುಶಃ ಯಾವುದೋ ಒಂದು ಬಗೆಯಾದ ಕೆಟ್ಟಭೂತವು ಹಿಡಿದಿರುವಂತಿದೆ! ಇಲ್ಲದಿದ್ದರೆ ಇವನು ನನ್ನ ಎದುರಾಗಿ ಈಪರಿ ಕೆಟ್ಟವಾತುಗಳನ್ನೆಲ್ಲಾ ಆವೇಶ ಹಿಡಿದವನಂತೆ ಹುಚ್ಚು ಹುಚ್ಚಾಗಿ ಮಾತನಾಡುತ್ತಿರಲಿಲ್ಲ. ಆದುದರಿಂದ ಇವನನ್ನು ಯಾವುದೋ ಬಾದು ಗ್ರಹವು ಹಿಡಿದೇ ಇರಬೇಕು ॥ ೨೪ ॥ ಪ್ರಹ್ಲಾದನು ಹೇಳುತ್ತಾನೆ—ನನಗೆ ಹುಚ್ಚೂ ಹಿಡಿಯುಲಿಲ್ಲ. ಅಥವಾ ಯಾವದೊಂದು ಗ್ರಹವೂ ಹಿಡಿದಿಲ್ಲ; ಪರಮೇಶ್ವರನಾದ ಆ ವಿಷ್ಣುವೇ ನನ್ನ ಹೃದಯದಲ್ಲಿ ತಾನೇತಾನಾಗಿ ನೆಲೆಸಿ, ನನ್ನಿಂದ ಈಪರಿ ಮಾತುಗಳನ್ನಾಡಿಸುತ್ತಿರುವನು. ಆತನು ನನ್ನ ಹೃದಯದಲ್ಲಿ ಮಾತ್ರವೇ ನೆಲೆಸಿರುವನೆಂದರಿಯಬೇಡ ಎಲ್ಲ ಪ್ರಾಣಿವರ್ಗವನ್ನೂ ತನ್ನ ಶಕ್ತಿಯಿಂದ ತನ್ನ ಅಧೀನದಲ್ಲಿಟ್ಟುಕೊಂಡು ಎಲ್ಲರಲ್ಲಿಯೂ ವಾಸಿಸುತ್ತಿರುತನು. ಆದುದರಿಂದ ಆ ಪರಮೇಶ್ವರನ ಪ್ರೇರಣೆಯಿಲ್ಲದೊಡೆ ಬಾದು ಹುಲ್ಲುಕಡ್ಡಿಯೂ ಕೂಡ ಚಲಿಸಲಾರದು. ಓಜನಕನೆ, ಆತನು ನನ್ನನೂ, ನಿನ್ನನ್ನೂ, ಮತ್ತೆಲ್ಲರನ್ನೂ ಕೂಡ, ತನ್ನ ಅಧೀನದಲ್ಲಿ

॥ ೨೬ ॥ ಹಿರಣ್ಯಕಶಿಪುಃ ॥ ನಿಷ್ಕ್ರಾಮ್ಯತಾಂ ಮಯಂ ದುಷ್ಪ್ರಜಾಶ್ಯತಾಂ ಚ ಗುರೋರ್ಗೃಹೇ । ಯೋಜಿತೋ ದುರ್ಮತಿಃ ಕೇನ ವಿಪಕ್ಷೇ ಪತಿ ಸಂಸ್ತುತೌ ॥ ೨೭ ॥ ಶ್ರೀ ಪರಾಶರಃ ॥ ಇತ್ಯುಕ್ತ ಸ್ತದಾ ದೈತ್ಯೈ ರ್ನೀತೋ ಗುರು ಗೃಹಂ ಪುನಃ । ಜಗ್ರಾಹ ವಿದ್ಯಾ ಮನಿಶಂ ಗುರು ಶುಶ್ರೂಷಣೇ ರತಃ ॥ ೨೮ ॥ ಕಾಲೇನ ತೀರ್ತೇ ನ ತಿ ಮಹತಿ ಪ್ರಹ್ಲಾದ

ಟ್ಟುಕೊಂಡು ತನ್ನ ಇಷ್ಟದಂತೆಯೇ ನಮ್ಮೆಲ್ಲರಿಂದಲೂ ಆ ಆ ಕಾರ್ಯಗಳನ್ನು ಮಾಡಿಸುತ್ತಿರುವನು. ಆದುದರಿಂದ ನನಗೆ ಗ್ರಹವು ಹಿಡಿದಿರುವುದೆಂಬುದಾಗಿ ನಿನಗೆ ಉಂಟಾಗಿರುವ ಭ್ರಾಂತಿಯನ್ನು ಪರಿತ್ಯಜಿಸು॥೨೬॥ಹಿರಣ್ಯಕಶಿಪುವು ಹೇಳುತ್ತಾನೆ-ಈದುಷ್ಟನನ್ನು ಹೊರಗೆತ್ತಿರಿ; ಇವನನ್ನು ಗುರುವಿನಮನೆಗೆ ಕರೆದೊಯ್ದು ಚನ್ನಾಗಿಬುದ್ಧಿಕಲಸುವಂತೆ ಹೇಳಿರಿ. ಸ್ವಲ್ಪವೂ ನಯವಿಲ್ಲದೆ ನನ್ನ ಇದುರಾಗಿ ಈ ಪರಿಮಾತನಾಡಿದನಲ್ಲಾ. ಇವನ ದುರುಳತನವನ್ನು ಏನೆಂದು ಹೇಳೋಣ! ನನಗೆಶತ್ರುಭೂತರಾದ ದೇವತೆಗಳಿಗೆ ಯಜ್ಞಮಾನ (ಸ್ವಾಮಿ) ನಾದವಿಷ್ಣುವನ್ನು ಇವನುನನ್ನ ಇದುರಾಗಿ ಬಾಯಿಗೆ ಬಂದಂತೆ ಹೊಗಳಿದನಲ್ಲಾ ! ಇವನಿಗೆ ಇದನ್ನು ಯಾರು ಬೋಧಿಸಿದರೋ ಕಾಣೆನು. ಆದುದರಿಂದ ಇವನನ್ನು ಗುರುಕುಲಕ್ಕೆ ಕರೆದುಕೊಂಡು ಹೋಗಿರಿ ॥ ೨೭ ॥ ಪರಾಶರನುಹೇಳುತ್ತಾನೆ— ಇಂತು ಹಿರಣ್ಯಕಶಿಪುವಿನ ನುಡಿಯುಂ ಶಿರಸಾವಹಿಸಿ ದೈತ್ಯರೆಲ್ಲರೂ ಒಡನೆಯೇ ಆ ಪ್ರಹ್ಲಾದನನ್ನು ಮರಳಿ ಗುರುವಿನಮನೆಯಂಸೇರಿಸಿದರು. ತರುವಾಯ ಈ ಪ್ರಹ್ಲಾದನು ಗುರುವಿನಲ್ಲಿ ಭಕ್ತಿಯನ್ನಿರಿಸಿ, ವಿನಯದಿಂದ ಆ ಗುರುವನ್ನು ಪರಿಚರಿಸುತ್ತಾ ಹಿಂದಿನಂತೆಯೇ ವಿದ್ಯಾಭ್ಯಾಸವಂಮಾಡತೊಡಗಿದನು. (ಈತನು ಗುರುವಿನಮನೆಯಲ್ಲಿ ಆತನ ಅಪ್ಪಣೆಯಂತೆ ಇರುವುದು ಈತನಿಗೆ ಇಷ್ಟವಲ್ಲದಿದ್ದರೂ ತಾನು ಆತನವಾತಿನಂತೆ ನಡೆಯುದಿದ್ದರೆ ಆ ಗುರುವಿನ ಜೀವಸಕ್ಕೆ ತೊಂದರೆ ಯುಂಟಾಗುವುದೆಂದು ಗುರುವಿಗೆ ಉಪಕಾರವಾಡಲೋಸುಗ ಆತನ ವಾತಿನಂತೆ ನಡೆಯುತಿದ್ದನು ॥ ೨೮ ॥ ಇಂತು ಬಹಳಕಾಲವು ಕಳೆದಬಳಿಕ ಅಸುರಾಧಿಪನೆನಿಸಿದ ಹಿರಣ್ಯಕಶಿಪುವು ತನ್ನಮಗನು ಎಷ್ಟುಮಟ್ಟಿಗೆ ವಿದ್ಯಾ

ಪುಸುರೇಶ್ವರಃ । ಸಮೂಹೋಯಾ ಬ್ರವೀದ್ಧಾ ಕಾಚಿತ್ಪುತ್ರ
ಕ ! ಗೀಯತಾಂ ॥ ೬೯ ॥ ಪ್ರಹ್ಲಾದಃ॥ ಯತಃ ಪ್ರಧಾನ ಪು
ರುಷೌ ಯತಶ್ಚೈತ ಚ್ಚರಾ ಚರಂ । ಕಾರಣಂ ಸಕಲ ಸ್ಯಾಸ್ಯ
ಸ ನೋ ವಿಷ್ಣುಃ ಪ್ರಸೀದತು ॥ ೬೦ ॥ ಹಿರಣ್ಯ ಕಶಿಪುಃ ॥ ದು
ರಾತ್ಮ ವಧ್ಯತಾ ಮೇಷ ನಾನೇ ನಾರ್ಥೋ ಽಸ್ತಿಜೀವಿತಾ । ಸ್ವ
ಪಕ್ಷಹಾನಿ ಕರ್ತ್ಯತ್ವಾ ದ್ಯಃ ಕುಲಾಂ ಗಾರ ತಾಂ ಗತಃ ॥ ೬೧ ॥
ಶ್ರೀ ಪರಾಶರಃ ॥ ಇತ್ಯಾಜ್ಞಾಪ್ತಾ ಸ್ತತ ಸ್ತೇನ ಪ್ರಗೃಹೀತ
ಮಹಾಯುಧಾಃ । ಉದ್ಯತಾ ಸ್ತಸ್ಯ ನಾಶಾಯ ದೈತ್ಯಾ ಶ್ಚತ

ಭ್ಯಾಸವಂ ಮಾಡಿರುವನೆಂದು ತಿಳಿಯಲೋಸುಗ ತನ್ನಮಗನನ್ನು ಕರೆ
ತರಿಸಿ,, ಎಲೈಮಗುವೆ, ಯಾವುದಾದರೊಂದು ಮನೋಹರವಾದಗದ್ಯ
ವನ್ನಾಗಲಿ ಅಥವಾ ಪದ್ಯವನ್ನಾಗಲಿ ಹೇಳು" ಎಂಬದಾಗಿ ಮಗನನ್ನು
ಆಜ್ಞಾಪಿಸಿದನು. ಪ್ರಹ್ಲಾದನು ಹೇಳುತ್ತಾನೆ— ಯಾವಪರಮಾತ್ಮನ ದೆಸೆ
ಯಿಂದ ಮೂಲಪ್ರಕೃತಿ ಮತ್ತು ವಿರಾಟ್‌ಪುರುಷರಿಬ್ಬರೂ ಜನಿಸಿದರೋ
ಚರಾಚರ ರೂಪದಿಂದಿರುವ ಈ ಸಕಲಜಗತ್ತು ಯಾವನಿಂದಲೇ ಆವಿರ್ಭ
ವಿಸಿದುದೋ, ಎಲ್ಲಲೋಕಗಳಿಗೂ ಯಾವನುಪ್ರಧಾನ ಕಾರಣಭೂತ
ನೋ, ಅಂತಹಸರ್ವವ್ಯಾಪಕನೂ, ಸರ್ವಶಕ್ತಿ ಸಂಪನ್ನನೂ, ಸರ್ವಾಧಾರ
ನೂ, ನಾಶರಹಿತನೂ, ಅದ್ವಿತೀಯನೂ ಎನಿಸಿದ ವಿಷ್ಣುವು ನಮ್ಮ ವಿಷ
ಯದಲ್ಲಿ ಪ್ರಸನ್ನನಾಗಿ ನಮ್ಮನ್ನು ಸಲಹಲಿ ॥ ೬೦ ॥ ಹಿರಣ್ಯಕಶಿಪುವು
ಹೇಳುತ್ತಾನೆ— ಈ ದುಷ್ಟನು ಕುಲಕ್ಕೆ ಬೆಂಕಿಹಚ್ಚುವನಂತಿರುವನು.
ಕುಲಪಾಂಸಕನು. ಇವನನ್ನುಕೊಲ್ಲಿರಿ. ಇವನುಬದುಕಿದ್ದುತಾನೇಫಲ
ವೇನು? ತನ್ನವಂಶದವರಿಗೇ ಕೇಡನ್ನು ಹಾರೈಸುವನು. ಇಂತಹ ನೀಚ
ನಿಂದ ನಮ್ಮ ವಂಶಕ್ಕೆ ಕೇಡುಸಂಭವಿಸುವುದಲ್ಲದೆ, ಇವನಿಂದ ಬೇರೆ
ನಮಗೆ ಮೇಲ್ಮೆಯುಂಟಾಗುವಂತೆ ತೋರಲಿಲ್ಲ ॥ ೬೧ ॥ ಪರಾಶರ
ಮುನಿಯು ಹೇಳತೊಡಗಿದನು, ಇಂತು ದೈತ್ಯಾಧಿಪನ ಆಜ್ಞೆಯ
ಯಂ ಕೇಳಿ ಆ ರಕ್ಕಸರೆಲ್ಲರೂ ಸಾವಿರಾರು ಗಟ್ಟಲೆ ಗುಂಪುಸೇರಿ
ಭಯಂಕರಗಳೆನಿಸಿದ ತೀಕ್ಷ್ಣಗಳಾದ ಆಯುಧಗಳಂ ಪಿಡಿದು,ಆ ಪ್ರಹ್ಲಾ
ದನ ಬಳಿ ಸಾರ್ದು ಅವನನ್ನು ಕೊಲ್ಲುವುದಕ್ಕೆ ಸನ್ನದ್ಧರಾಗಿ ಅವನ

ಸಹಸ್ರಶಃ ॥ ೫೨ ॥ ಪ್ರಹಾದಃ ॥ ವಿಷ್ಣುಶಸ್ತ್ರೇಪಯುಷ್ಮಾಸು ಮಯಿ ಚಾಸೌ ಯಥಾಸ್ಥಿತಃ । ದೈತೇಯಾ ! ಸ್ತೇನ ಸತ್ಯೇನ ವಮಾಕ್ರಾಮುಂ ತ್ಯಾಯು ಧಾನಿನಃ ॥ ೫೩ ॥ ಶ್ರೀಪರಾಶರಃ॥ ತತಸ್ತೈ ಶಸ್ತ್ರತಶೋ ದೈತ್ಯೈ ಶಸ್ತ್ರಾಸ್ತ್ರೈ ರಾಹತೋಽಪಿಸರ್ವ। ನಾವಾಪ ವೇದನಾಮಲ್ಪಾ ಮುಭೂಚ್ಚೈವ ಪುನರ್ನವಃ ॥೫೪॥ ಹಿರಣ್ಯ ಕಶಿಪುಃ ॥ ದುರ್ಬುದ್ಧೇ ! ವಿನಿವರ್ತಸ್ವ ವೈರಿ ಪಕ್ಷ

ವೇಲೆ ಕೈವಮಾಡತೊಡಗಿದರು ॥ ೫೨ ॥ ಪ್ರಹ್ಲಾದನು ಹೇಳುತ್ತಾನೆ:— ಎಲೈದಿತಿವಂಶಸಂಭೂತ ರೆನಿಸಿದ ರಾಕ್ಷಸರಿರಾ; ಆ ಪರಮಾತ್ಮನು ಸರ್ವವ್ಯಾಪಕ ನಾದುದರಿಂದ ನನ್ನನ್ನು ಕೊಲ್ಲಲು ಉದ್ಯುಕ್ತರಾಗಿರುವನಿಮ್ಮಲ್ಲಿಯೂ, ನೀವುನಿಮ್ಮ ಕೈಗಳಲ್ಲಿಪಿಡಿದಿರುವ ಆಯುಧಗಳಲ್ಲಿಯೂ, ನಿಮ್ಮಿಂದ ಮರಣವಂ ಹೊಂದುವನೆಂದು ನೀವುತಿಳಿದಿರುವ ನನ್ನಲ್ಲಿಯೂ ಏಕರೂಪದಿಂದಿರುವನು ಇಂತು ಆಪರಮಾತ್ಮನು ಸರ್ವವ್ಯಾಪಕನಾಗಿದ್ದುದೇ ದಿಟವಾದರೆ ನಿಮ್ಮ ಕೈಲಿರುವಆಯುಧಗಳು ನನ್ನನ್ನೇಲೆ ಅವುಗಳಶಕ್ತಿಯುಂತೋರ್ಪಡಿಸದೆ ಕುಂಠಿತಗಳಾಗಲಿ ॥ ೫೩ ॥ ಪರಾಶರನು ಹೇಳುತ್ತಾನೆ:— ಇಂತು ಪರಮ ಭಾಗವತನೆನಿಸಿದ ಪ್ರಹ್ಲಾದನು ಹೇಳುತ್ತಿದ್ದರೂ ಆ ರಾಕ್ಷಸರು ಸ್ವಲ್ಪವೂ ಹಿಂಜರಿಯದೆ ಆತನನ್ನುಅನೇಕವಿಧಗಳಾದ ಅಸ್ತ್ರ ಶಸ್ತ್ರಸಮುದಾಯಗಳಿಂದ ನಾನಾಪರಿಯಾಗಿ ಹೊಡೆಯತೊಡಗಿದರು. ಈತನಾದರೋ ವಿಷ್ಣುವಿನಲ್ಲಿ ಅನನ್ಯಭಕ್ತಿಯಿಂದ ಸ್ಥಿರಚಿತ್ತನಾಗಿದ್ದುದರಿಂದ ಆ ಶಸ್ತ್ರಾಸ್ತ್ರಗಳೆಲ್ಲವೂ ಈತನನ್ನು ಏನೂ ಮಾಡಲಾರದೆ ನಿಷ್ಫಲಗಳಾದುವು. ಈತನನ್ನು ಅವರೆಷ್ಟು ಹೊಡೆದರೂ ಈತನು ಮಾತ್ರ ಮತ್ತಷ್ಟು ಹೆಚ್ಚಾದ ಶಕ್ತಿಸಂಪನ್ನನಾಗಿ ಹೊಸಬನಂತೆ ಇರುತ್ತಿದ್ದನು ॥ ೫೪ ॥ ಇಂತು ತನ್ನ ಮಗನು ತನ್ನ ಇದಿರಾಗಿಯೇ ತನ್ನ ಸೇವಕರಿಂದ ಹೊಡೆಯಲ್ಪಡುತ್ತಿದ್ದರೂ ಅವನ ಮಾರ್ಗವನ್ನೇ ಅನುಸರಿಸಿರುವುದಂ ಕಂಡು, ಹಿರಣ್ಯಕಶಿಪುವು ಓಹೋ ! ಇವನು ದಂಡೋಪಾಯಕ್ಕೆ ಸಾಧ್ಯನಲ್ಲನೆಂದು ತಿಳಿದು ಉಪಾಯದಿಂದ ಇವನನ್ನು ದಾರಿಗೆ ತರಬೇಕೆಂದು ಯೋಚಿಸಿ, ಹಿರಣ್ಯಕಶಿಪುವು ಈರೀತಿ ಮಾತನಾಡುತ್ತಾನೆ:—ಎಲೈ ಮಂದ ಬುದ್ಧಿಯೆ; ನನಗೆ ವೈರಿಗಳಾದ ದೇವತೆಗಳಿಗೆ ಒಡೆ

ಸ್ತವಾ ದತಃ । ಅಭಯಂ ತೇ ಪ್ರಯಚ್ಛಾಮಿ ಮಾತಿ ಮೂಢ ಮತಿ ಭರ್ಥವ ॥ ೫೫ ॥ ಪ್ರಹ್ಲಾದಃ ॥ ಭಯಂಭಯಾನಾ ಮುಪ ಹಾರಿಣಿಸ್ಥತೇ ಮನಸ್ಯನಂತೇ ಮವು ಕುತ್ರ ತಿಪ್ಠತಿ ?। ಯಸ್ಮಿನ್ ಸ್ಮೃತೇ ಜನ್ಮ ಜರಾಂತಕಾದಿ ಭಯಾನಿ ಸರ್ವಾಣ್ಯ ಪಯಾಂತಿ ತಾತ ! ॥ ೫೬ ॥ ಭೋ! ಭೋ! ಸ್ಸರ್ಪಾ ! ದುರಾಚಾರ ಮೋ ನ ಮತ್ಯಂತ ದುರ್ಮತಿಂ । ವಿಷಜ್ವಾಲಾ ಕುಲೈ ರ್ವಕ್ತ್ರೈ ಸ್ಸ ದ್ಯೋ ನಯತ ಸಂಕ್ಷಯಂ ॥ ೫೭ ॥ ಶ್ರೀ ಪರಾಶರಃ ॥ ಇತ್ಯು ಕ್ತಾ ಸ್ತೇನ ತೇ ಸರ್ಪಾಃ ಕುಹಕಾ ಸ್ತಕ್ಷಕಾದಯಃ । ಅದಶಂ

ಯನೆನಿಸಿದ ವಿಷ್ಣುವನ್ನು ಸ್ತೋತ್ರಮಾಡಿ ಸಾಕು. ಇಲ್ಲಿಗೆ ನಿಲ್ಲಿಸು. ನಿನ್ನನ್ನು ಕೊಲ್ಲದಂತೆ ಇವರಿಗೆ ಆಜ್ಞೆ ಮಾಡಿ ನಿನಗೂ ಅಭಯವಂ ಕೊಡುವೆನು. ನನ್ನ ಮಾತನ್ನು ವಿುರಿ ವ್ಯರ್ಥವಾಗಿ ಪ್ರಾಣವನ್ನು ಕಳೆದು ಕೊಳ್ಳಬೇಡ. ನಿನ್ನ ಮೂಢಬುದ್ಧಿಯಂ ತೊರೆದು ನನ್ನ ಮಾತಂ ಆಲಿಸು ॥ ೫೫ ॥ ಪ್ರಹ್ಲಾದನು ಹೇಳುತ್ತಾನೆ:—ಎಲೈ ತಾತನೆ; ಯಾವ ಮಹಾನುಭಾವನನ್ನು ಪ್ರಾಣೋತ್ಕ್ರಮಣಕಾಲದಲ್ಲಿ ಮುನುಷ್ಯ ವು ಒಂದು ಸಾರಿ ಭಕ್ತಿಪುರಸ್ಸರವಾಗಿ ಸ್ಮರಿಸಿದೊಡೆ ಹುಟ್ಟು, ಸಾವು, ಯಮಭಾಧೆಗಳೆಲ್ಲವೂ ತೊಲಗಿ ನಿರ್ಭಯನಾದ ಆತನ ಪಾದಾರವಿಂದಗ ಳನ್ನು ಸೇರುವನೋ, ಅಂತಹ ಸಕಲ ಭಯನಿವಾರಕನೂ, ಸರ್ವಶಕ್ತಿ ಸಂಪನ್ನನೂ, ದೀನರಕ್ಷಕನೂ, ಆಪದ್ಬಂಧುವೂ ಎನಿಸಿದ ಮುಕುಂದನು, ನನ್ನ ಹೃದಯಾರವಿಂದದಲ್ಲಿ ದೃಢವಾಗಿ ನೆಲೆಸಿರುವಾಗ್ಗೆ ನನಗೆ ಭಯವೆಲ್ಲಿ ಯದು ? ನಾನೇತಕ್ಕೆ ಇವರಿಗಾಗಿಯಾಗಲಿ, ಅಥವಾ ಇವರ ತೀಕ್ಷ್ಣ ತರಗಳಾದ ಶಸ್ತ್ರಗಳಿಗಾಗಲಿ ಹೆದರಲಿ. ॥ ೫೬ ॥ ಇಂತು ಹೇಳಿದ ಪ್ರಹ್ಲಾದನ ಮಾತನ್ನು ಕೇಳಿದ ಹಿರಣ್ಯಕಶಿಪುವು ಕ್ರೋಧಾಂಧನಾಗಿಸರ್ಪಗಳನ್ನು ಕುರಿತು ಈ ರೀತಿ ಹೇಳುತ್ತಾನೆ....ಎಲೈ ಸರ್ಪಗಳಿರಾ ! ದುರಾಚಾರ ಶೀಲನೂ, ದುಷ್ಟ ಬುದ್ಧಿಯೂ ಎನಿಸಿದ ಈ ಹುಡುಗನನ್ನು ವಿಷಜ್ವಾಲೆಗಳನ್ನುಗುಳುವ ಭಯಂಕರಗಳಾದ ನಿವ್ಮ ಬಾಯಿಗಳಿಂದ ಕಚ್ಚಿ ಶೀಘ್ರವಾಗಿ ಇವನ ಪ್ರಾಣವಾಯುಗಳನ್ನು ಸೆಳೆದು ಇವನನ್ನು ಕೊಲ್ಲಿರಿ ॥೫೭॥ ಪರಾಶರನು ಹೇಳುತ್ತಾನೆ—ಇಂತು ಹಿರಣ್ಯ ಕಶಿಪು

ತ ಸರ್ಪಾಸ್ತೇಷು ಗಾತ್ರೇಷ್ವತಿ ವಿಷೋಲ್ಬಣಾಃ ॥ ೫೪ ॥ ಸತ್ಯಾ ಸಕ್ತ ಮತಿಃ ಕೃಷ್ಣೇ ದಶ್ಯಮಾನೋ ಮಹೋರಗೈಃ । ನ ವಿವೇದಾತ್ಮನೋ ಗಾತ್ರಂ ತತ್ಸ್ಮೃತ್ಯಾ ಹ್ಲಾದ ಸಂಸ್ಥಿತಃ ॥೫೫॥ ಸರ್ಪಾ ಊಚುಃ ॥ ದಂಷ್ಟ್ರಾ ವಿಶೀರ್ಣಾ ಮಣಯಃ ಸ್ಫುಟಂತಿ ಫಣೇಷು ತಾಪೋ ಹೃದಯೇಷು ಕಂಪಃ।ನಾಸ್ಯ ಕ್ವಚಿತ್ ಸ್ವಲ್ಪ ಮಪೀಹ ಭಿನ್ನಂ ಪ್ರಶಾಧಿ ದೈತ್ಯೇಶ್ವರ ! ಕಾರ್ಯಮನ್ಯತ್ ॥ ೫೬ ॥ ಹಿರಣ್ಯ ಕಶಿಪುಃ ॥ ಹೇ ದಿಗ್ಗಜಾ ! ಸ್ಸಂಕಟ ದಂತ

ವಿನ ಆಜ್ಞಾನುಸಾರ ಕ್ರೂರಗಳೆನಿಸಿದ ತಕ್ಷಕ ಮೊದಲಾದ ಸರ್ಪಗಳೆಲ್ಲವೂ ತಮ್ಮ ಬಾಯಿಯಿಂದ ಕ್ರೂರವಾದ ವಿಷವನ್ನುಗುಳುತ್ತಾ, ಆ ಪ್ರಹ್ಲಾದನ ಬಳಸಾರ್ದು ಸರ್ವಾಂಗಗಳಲ್ಲಿಯೂ ಆತನನ್ನು ಕಚ್ಚಿದುವು ॥ ೫೪ ॥ ಆ ಪ್ರಹ್ಲಾದನು ಮಾತ್ರ ವಿಷ್ಣುವಿನಲ್ಲಿಯೇ ತನ್ನ ಮನಸ್ಸನ್ನಿರಿಸಿ ಧ್ಯಾನ ಮಗ್ನನಾಗಿದ್ದನು. ಈ ಸರ್ಪಗಳೆಲ್ಲವೂ ಆತನನ್ನು ಎಷ್ಟು ವಿಧವಾಗಿ ಕಚ್ಚಿ ತೊಂದರೆ ಪಡಿಸಿಬೇಕೆಂದು ಪ್ರಯತ್ನಪಟ್ಟಾಗ್ಯೂ, ಅತನು ವಿಷ್ಣು ಧ್ಯಾನದಲ್ಲಿ ತನ್ನ ಮನವಂ ಲಯಗೊಳಿಸಿ, ಆನಂದ ಸಾಗರದಲ್ಲಿ ಮುಳುಗಿದ್ದುದರಿಂದ ಆತನಿಗೆ ಸ್ವಲ್ಪವೂ ನೋಯಲೇ ಇಲ್ಲ. ಅತನಿಗೆ ಇವುಗಳು ಕಚ್ಚಿದುವೆಂದು ಗೋಚರವೂ ಕೂಡ ಆಗಲಿಲ್ಲವು ॥ ೫೫ ॥ ಸರ್ಪಗಳು ಹೇಳುತ್ತವೆ:—ಓ ದೈತ್ಯಾಧಿಪನೆನಿಸಿದ ಹಿರಣ್ಯಕಶಿಪುವೆ; ಇವನನ್ನು ಕಚ್ಚಿ ಕಚ್ಚಿ ನಮ್ಮ ಕೋರೆ ಹಲ್ಲುಗಳೆಲ್ಲಾ ವೊಂಡಾಗಿ ಉದುರಿಹೋದುವು. ನಮ್ಮ ಹೆಡೆಗಳ ಮೇಲಿರುವ ರತ್ನಗಳೆಲ್ಲವೂ ಒಡೆದು ಹೋಗುತ್ತಿವೆ. ನಮ್ಮ ಹೆಡೆಗಳೆಲ್ಲವೂ ಛಗ ಛಗನೆ ಉರಿಯುತ್ತಿವೆ. ನಮ್ಮ ಹೃದಯದಲ್ಲಿ ಕಂಪವು ಉಂಟಾಗಿರುವುದು. ನಾವು ಇಷ್ಟೊಂದು ಶ್ರಮವನ್ನೆಲ್ಲಿಯೂ ಹೊಂದಲಿಲ್ಲ. ಇಂತಿದ್ದರೂ ಇವನ ಶರೀರದಲ್ಲಿ ಸ್ವಲ್ಪವೂ ಗಾಯವೇ ಆಗಲಿಲ್ಲ. ಆದುದರಿಂದ ಕ್ಷಮಿಸು. ಇನ್ನು ಈತನ ಗೋಜಿಗೆ ನಾವು ಹೋಗಲಾರೆವು. ನಿನ್ನ ಆಜ್ಞೆಗೆ ಬದಲು ಹೇಳಿದೆನೆಂದು ಅಗ್ರಹಗೊಳ್ಳಬೇಡ. ಬೇರೆ ಕಾರ್ಯವನ್ನಾಜ್ಞಾಪಿಸು. ಅದನ್ನು ಶಿರಸಾವಹಿಸಿ ನಡೆಯಿಸುವೆವು. ಆದರೆ ಈತನನ್ನು ಮಾತ್ರ ಮುರಳಿ ಕಚ್ಚಬೇಕೆಂದರೆ ನಮ್ಮಿಂದ ಸಾಧ್ಯ

ಮಿಕಾಶಃ ! ಫ್ಲೈತೈನ ಮುಸ್ಮ ದ್ರಿಪು ಪಕ್ಷಭಿನ್ನಂ । ತಜಾ ಜ್ವಿನಾ
ಶಾಯ ಭವಂತಿ ತಸ್ಯ ಯಥಾರಣೇಃ ಪ್ರಜ್ವಲಿತೋ ಹುತಾಶಃ
॥ ೪೯ ॥ ಶ್ರೀ ಪರಾಶರಃ ॥ ತತಸ್ಸ ದಿಗ್ಗಜೈ ರ್ಭಾಲೋ ಭೂ
ಭೃಚ್ಛಿ ಖರ ಸನ್ನಿಭೈಃ । ಪಾತಿತೋ ಧರಣೀ ಪೃಷ್ಠೆ ವಿಷಾ
ಣೈ ರಸ್ಯ ಪೀಡ್ಯತ ॥ ೪೯ ॥ ಸ್ಮರತ ಸ್ತಸ್ಯ ಗೋವಿಂದ ಮಿಭ
ದಂತಾ ಸ್ಸಹಸ್ರಶಃ । ಕೀರ್ಣಾ ವಕ್ಷಸ್ಥಲಂ ಪ್ರಾಪ್ಯ ಸಪಾಶಾ

ವಲ್ಲ ॥ ೪೦ ॥ ಹಿರಣ್ಯಕಶಿಪುವು ಹೇಳುತ್ತಾನೆ:—ಎಲೈ ದಿಗ್ಗಜಗಳೇ; ನೀವುಗಳೆಲ್ಲರೂ ಒಟ್ಟಾಗಿ ಸುತ್ತಲೂ ಈ ಹುಡುಗನನ್ನು ಮುತ್ತಿಕೊಂಡು ನಿಮ್ಮ ದಂತಗಳನ್ನು ಬಂದು ಕಡೆ ಸೇರಿಸಿ ದಟ್ಟಗಳಾದ ನಿಮ್ಮ ದಂತಗಳಿಂದ ಇವನನ್ನು ತಿವಿದು ಕೊಲ್ಲಿರಿ. ನನಗೆ ಹಗೆಗಳಾದ ದೇವತೆಗಳು ನನ್ನ ಮೇಲೆ ಕೈಮಾಡಿ ತಮ್ಮ ದ್ವೇಷವನ್ನು ಸಾಧಿಸಿಕೊಳ್ಳಲು ಸಾಮರ್ಥ್ಯ ಸಾಲದೆ ನನಗೆ ಅಪಕಾರವನ್ನು ಹೇಗಾದರೂ ಮಾಡಲೇಬೇಕೆಂದು ತಿಳಿದು ಈರೀತಿ ನನ್ನ ಮಗನ ಮನಸ್ಸನ್ನು ಭೇದಿಸಿ, ನನ್ನ ಹೊಟ್ಟೆಯಲ್ಲಿ ಜನಿಸಿದ ಮಗನನ್ನೇ ನನಿಗೆ ಹಗೆಯನ್ನಾಗಿ ಮಾಡಿರುವರು. ಇಂತಹ ಮಗನಿಂದ ನನಗಾಗಬೇಕಾದುದೇನಿರುವುದು ? ಅಗ್ನಿಮಥನವಾಡುವ ಅರಣಿ ಎಂಬ ಮರದ ತುಂಡಿನಿಂದ ಹುಟ್ಟಿದ ಬೆಂಕಿಯು ಎಂತು ಪ್ರವೃದ್ಧವಾಗಿ ಆ ಮರದ ತುಂಡನ್ನೇ ಸುಟ್ಟು ಹಾಕುವುದೋ ಅಂತೆಯೇ ಇವನು ನನ್ನಿಂದಲೇ ಜನಿಸಿದವನಾದರೂ ನನಿಗೇ ಶತ್ರುವಾಗಿಪರ್ಪಟ್ಟನು ॥ ೪೧ ॥ ಪರಾಶರನು ಹೇಳುತ್ತಾನೆ:—ಬಳಿಕ ಆ ದಿಗ್ಗಜಗಳೆಲ್ಲವೂ ದೈತ್ಯಾಧಿಪನ ಆಜ್ಞೆಯಂತೆ ಆ ಹುಡುಗನನ್ನು ನೆಲಕ್ಕೆ ಕೆಡವಿ ಪರ್ವತ ಶಿಖರಗಳಂತೆ ದಪ್ಪನಾಗಿಯೂ, ಒರಟಾಗಿಯೂ, ದೃಢವಾಗಿಯೂ ಇರುವ ತಮ್ಮ ದಂತಗಳಿಂದ ತಿವಿದು ಕೊಲ್ಲಲು ನಾನಾಪರಿಯಿಂದ ಸಾಹಸವಮಾಡಿ ಬಹಳವಾಗಿ ಹಿಂಸಿಸಿದವು ॥ ೪೨ ॥ ಆ ಪ್ರಹ್ಲಾದನು ಮಾತ್ರ ಏಕಾಗ್ರಚಿತ್ತನೆನಿಸಿ ಭಗವನ್ನಾಮವು ಸ್ಮರಣೆಯಂ ಗೈಯ್ಯುತ್ತಿದ್ದನು. ಆಭಗವನ್ನಾಮಸ್ಮರಣ ಮಾಹಾತ್ಮ್ಯದಿಂದ ದಿಗ್ಗಜಗಳ ಕಠಿನಗಳೆನಿಸಿದ ದಂತಗಳೆಲ್ಲವೂ ಇವನ ಎದೆಯ ಬಳಿಗೆ ಬಂದ ತತ್ಕ್ಷಣವೇ ಸಾವಿರಾರು ಚೂರಾಗಿ ಒಡೆದುಹೋಗುತ್ತ ಬಂದುವು. ಇದನ್ನು ಕಂಡು ಪ್ರಹ್ಲಾ

ಪಿತರಂ ತತಃ ॥ ೪೫ ॥ ಪ್ರಹ್ಲಾದಃ ॥ ದಂತಾ ಗಜಾನಾಂ ಕುಲಿ
ಶಾಗ್ರ ನಿಷ್ಠುರಾ ಶ್ಚೀರ್ಣಾರ್ಯ ದೇತೇ ನ ಬಲಂ ಮಮೈತತ್ ।
ಮಹಾವಿಪ ತ್ಪಾವಿನಾಶನೋ ಽಯಂ ಜನಾರ್ದನಾನು ಸ್ಮರ
ಣಾನು ಭಾವಃ ॥ ೪೬ ॥ ಹಿರಣ್ಯ ಕಶಿಪುಃ॥ಜ್ವಾಲ್ಯತಾ ಮ
ಸುರಾ । ವಹ್ನಿ ರಪಸರ್ಪತ ದಿಗ್ಜಾಃ ! । ವಾಯೋ ! ಸಮೀ

ದನು ತನಗೆ ವಿಷ್ಣುವಿನಲ್ಲಿ ಭಕ್ತಿಯುಂಟಾಗಿರುವಂತೆಯೇ ತನ್ನ ತಂದೆಗೂ ಕೂಡ ಭಗವಂತನಲ್ಲಿ ಭಕ್ತಿಯನ್ನುಂಟುಮಾಡಲು ತನ್ನ ತಂದೆಗೆ ಭಗವನ್ನಾಮ ಸಂಕೀರ್ತನ ಮಾಹಾತ್ಮ್ಯವನ್ನು ವರ್ಣಿಸತೊಡಗಿದನು ॥ ೪೫ ॥ ಪ್ರಹ್ಲಾದನು ಹೇಳುತ್ತಾನೆ:—ಎಲೈ ಜನಕನೆ; ವಜ್ರಾಯುಧದ ತುದಿಯಂತೆ ಧೃಢಗಳಾಗಿಯೂ, ಹರಿತಗಳಾಗಿಯೂ ಇರುವ ಆನೆಗಳ ದಂತಗಳೆಲ್ಲವೂ ಚೂರುಚೂರಾಗಿ ಉದುರಿಹೋದವು. ಇದೆಲ್ಲವೂ ಕೇವಲ ತುಚ್ಛ ನೆನಿಸಿದ ನನ್ನ ಪ್ರಭಾವವೆಂದರಿಯಬೇಡ.ಮಹತ್ತರಗಳೆನಿಸಿದ ವಿಪತ್ತುಗಳನ್ನೂ, ಆ ವಿಪತ್ತುಗಳಿಂದುಂಟಾಗುವ ಸಕಲ ವಿಧಪಾಪಗಳನ್ನೂ ಪರಿಹರಿಸುವಂತಹ ಮಾಹಾತ್ಮ್ಯವುಳ್ಳ ಜನಾರ್ದನನ ನಾಮವನ್ನು ಉಚ್ಚರಿಸಿದುದರಿಂದುಂಟಾದ ಮಹಿಮೆಯು. ನೀನು ನನ್ನನ್ನು ಕೊಲ್ಲಿಸಬೇಕೆಂದು ಇದುವರೆಗೂ ನಾರಾಪರಿಯಿಂದ ಪ್ರಯತ್ನಮಾಡಿ ಬಹು ಸಾಹಸಪಟ್ಟೆ. ಆದರೂ ಆ ಪರಮಾತ್ಮನನ್ನು ನಾನು ಸ್ಮರಿಸಿದುದರಿಂದ ನಿನ್ನ ಸಾಹಸಗಳೆಲ್ಲವೂ ವ್ಯರ್ಥಗಳಾದುವು. ಆದುದರಿಂದ ನಾನು ನಿನಗೆ ಹಗೆಯೆಂಬ ಭ್ರಾಂತಿಯುಂ ದೂರವಾಡಿ ನನ್ನಂತೆಯೇ ನೀನೂ ಕೂಡ ಆತನನ್ನು ಭಕ್ತಿಯಿಂದ ಮೆಚ್ಚಿಸಿದೊಡೆ ನಿನಗೆ ಇದಕ್ಕಿಂತಲೂ ಅತಿಶಯವಾಗಿ ಮಂಗಳವುಂಟಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಆ ಪರಮಾತ್ಮನ ದಿವ್ಯ ಮಂಗಳನಾಮವನ್ನು ಉಚ್ಚರಿಸು ॥ ೪೬ ॥ ಹಿರಣ್ಯ ಕಶಿಪುವು ಹೇಳುತ್ತಾನೆ:—ಎಲೈ ಅಸುರರಿರಾ; ಇವನು ಇಂತಹವುಗಳಿಗೆಲ್ಲಾ ಸಾಧ್ಯನಾಗುವಂತೆ ತೋರಲಿಲ್ಲ. ಆದುದರಿಂದ ದೊಡ್ಡ ಚಿತೆಯನ್ನೊಡ್ಡಿ ಬೆಂಕಿಯಲ್ಲಿ ತಳ್ಳಿ ಇವನನ್ನು ಸುಟ್ಟು ಹಾಕಿರಿ, ಎಲೈ ದಿಗ್ಗಜಗಳಿರಾ; ನೀವು ಇತ ಲಾಗಿ ದೂರದಲ್ಲಿರಿ. ನಿಮ್ಮ ಕಾರ್ಯವು ನಿಷ್ಫಲವಾದುದು. ಎಲೈ ವಾಯುವೆ; ನೀನು ಅನುಕೂಲವಾಗಿ ಬೀಸಿ ಅಗ್ನಿ

ಧಯಾಗ್ನಿಂ ತ್ವಂ ದಹ್ಯತಾ ಮೇಷ ಪಾಪಕೃತ್ ॥ ೪೫ ॥ ಶ್ರೀ ಪರಾಶರಃ ॥ ಮಹಾ ಕಾಷ್ಠ ಚಯಮಚ್ಛಿನ್ನ ಮಸುರೇಂದ್ರ ಸು ತಂ ತತಃ ಪ್ರಜ್ವಾಲ್ಯ ದಾನವಾ ವಹ್ನಿಂ ದದಹು ಸ್ವಾಮಿಚೋದಿತಾಃ ॥ ೪೬ ॥ ಪ್ರಹ್ಲಾದಃ ॥ ತಾತೈಷ ವಹ್ನಿಃ ಪವನೇರಿತೋ ಽ ನಮಾಂ ದಹತ್ಯ ತ್ರ ಸಮಂತ ತೋಽಹಂ ॥ ಪಶ್ಯಾಮಿ ಪದ್ಮಾ ಸ್ತರಣಾ ಸ್ತೃತಾನಿ ಶೀತಾನಿ ಸರ್ವಾಣಿ ದಿಶಾಂ ಮುಖಾನಿ ॥೪೭॥ ಶ್ರೀ ಪರಾಶರಃ ॥ ಆಥ ದೈತ್ಯೇಶ್ವರಂ ಪ್ರೋಚುಃ ಭಾರ್ಗವ ಸ್ಯಾತ್ಮಜಾ ದ್ವಿಜಾಃ । ಪುರೋಹಿತಾ ಮಹಾತ್ಮಾನ ಸಾ ಸ್ಮಾ

ಯನ್ನು ವೃದ್ಧಿಗೊಳಿಸು. ಈ ಪಾಪಿಯನ್ನು ಸುಡಿಸುವೆನು ॥ ೪೫ ॥ ಪರಾಶರನು ಹೇಳುತ್ತಾನೆ:—ಇಂತು ಸ್ವಾಮಿಯಾದ ಹಿರಣ್ಯಕಶಿಪುವಿನ ಆಜ್ಞೆಯಂತೆ ದಾನವರೆಲ್ಲರೂ ಗುಂಪುಸೇರಿ ಪರ್ವತದಂತೆ ಎತ್ತರವಾಗಿ ಈ ಹುಡುಗನಮೇಲೆ ಕಾಷ್ಠಗಳನ್ನು ಹೊದ್ದಿಸಿ, ಬೆಂಕಿಯನ್ನು ಚೆನ್ನಾಗಿ ಹೊತ್ತಿಸಿ, ರಾಜಕುವರನೆನಿಸಿದ ಈ ಪ್ರಹ್ಲಾದನನ್ನು ಸುಡಲಾರಂಭಿಸಿದರು ॥ ೪೬ ॥ ಆಗ ಪ್ರಹ್ಲಾದನು ಹೇಳುತ್ತಾನೆ:—ಎಲೈ ತಂದೆಯೆ; ನಾನು ನಿನಗೆ ಎಷ್ಟುವಿಧದಿಂದ ಹೇಳಿದರೂ ನನ್ನ ಮಾತಂ ನಿರಾಕರಿಸಿ ಮರಳಿ ಈರೀತಿ ಮಾಡಿದೆ. ಆದರೂ ಚಿಂತೆಯಿಲ್ಲ. ಇದೋ ನೋಡು, ಗಾಳಿಯು ಎಷ್ಟು ಪ್ರಬಲವಾಗಿ ಬೀಸುತ್ತಿದ್ದರೂ ಈ ಬೆಂಕಿಯು ನನ್ನನ್ನು ಸ್ವಲ್ಪವೂ ಸುಡದೆ ಚಂದನದಂತೆ ತಣ್ಣಗಿರುವುದು. ಮತ್ತು ಎಲ್ಲ ದಿಕ್ಕುಗಳೂ, ಆಗತಾನೇ ಕೊಳದಿಂದ ಕಿತ್ತತಾವರೆಗಳಂ ಹರಡಿ, ಶೈತ್ಯ, ಸೌಗಂಧ್ಯ, ಮಾಂದ್ಯಗಳಿಂದ ಯುಕ್ತವಾದ ಮಂದಮಾರುತವಂ ಬೀಸುತಾ ನನ್ನ ಮನಸ್ಸಿಗೆ ವಿಶೇಷವಾಗಿ ಆಹ್ಲಾದವನ್ನುಂಟು ಮಾಡುತ್ತಿರುವುವು ॥ ೪೭ ॥

ಪರಾಶರನು ಹೇಳುತ್ತಾನೆ:—ಬಳಿಕ ಇದೆಲ್ಲವಂ ನೋಡುತ್ತಿದ್ದ ಮಹಾನು ಭಾವರೂ, ದಿವ್ಯಜ್ಞಾನಸಂಪನ್ನರೂ, ಸಮಯವನ್ನರಿತುಮಾತನಾಡುವುದರಲ್ಲಿ ನಿಪುಣರೂ ಎನಿಸಿದ ತನ್ನ ಪುರೋಹಿತರಾದ ಶಂಡಾಮರ್ಕವೊದಲಾದ ಶುಕ್ರಾಚಾರ್ಯನ ಮಕ್ಕಳು, ದೈತ್ಯಾಧಿಪನೆನಿಸಿದ ಆ ಹಿರಣ್ಯಕಶಿಪುವನ್ನು ಉಪಾಯದಿಂದ ಆತನಿಗೆ ಹಿತಕರಳಾದ ಮಾತುಗ

ಸಂಸ್ತುಯ ವಾಗ್ಮಿನಃ ॥ ೪೪ ॥ ರಾಜನ್ ! ನಿಯಮ್ಯತಾಂ
ಕೋಪೋ ಬಾಲೇಽತ್ರ ತನಯೇ ನಿಜೇ । ಕೋಪೋ ದೇವ ನಿ
ಕಾಯೇಷು ತತ್ರ ತೇ ಸಫಲೋ ಯತಃ ॥ ೪೫ ॥ ತಥಾ ತಥೈನಂ
ಬಾಲಂತೇ ಶಾಸಿತಾರೋ ವಯಂ ನೃಪ ! । ಯಥಾವಿಪಕ್ಷ ನಾ
ಕಾಯ ವಿನೀತಸ್ತೇ ಭವಿಷ್ಯತಿ ॥ ೪೬ ॥ ಬಾಲತ್ವಂ ಸರ್ವ
ದೋಷಾಣಾಂ ದೈತ್ಯಾರಾಜಾ ! ಸ್ಪದಂ ಯತಃ । ತತೋಽತ್ರ
ಕೋಪ ಮತ್ಯರ್ಥಂ ಯೋಕ್ತು ಮರ್ಹಸಿ ನಾರ್ಭಕೇ ॥ ೪೭ ॥
ನತ್ಕ ಹ್ಯೈತಿ ಹರೇಃ ಪಕ್ಷಮರ್ಭಕಂ ವಚನಾದ್ಯದಿ । ತತಃ

ಳಿಂದ ಶ್ಲಾಘಿಸಿ, ಈರೀತಿ ಹೇಳತೊಡಗಿದರು ॥ ೪೪ ॥ ಎಲೈ ರಾಜನೆ; ನಿನ್ನ ಕೋಪವನ್ನು ಅಡಗಿಸು. ನಿನ್ನ ಕೋಪವು ದೇವಸಮೂಹದಲ್ಲಿ ಸಫಲವಾದುದರಿಂದ ಅಲ್ಲಿ ನಿನ್ನ ಕೋಪವನ್ನಿಡು. ಶೂರನಾದನೀನುನಿನಗೆಸಮಶ್ರೇಷ್ಠರಾದ ದೇವತೆಗಳಲ್ಲಿ ಕೋಪವನ್ನಿಡದೆ, ಬಾಲನೂ, ಹೊಟ್ಟೆಯಲ್ಲಿ ಹುಟ್ಟಿದವನೂ ಎನಿಸಿದ ಅಲ್ಪವೀರ್ಯವುಳ್ಳ ಇವನಲ್ಲಿ ನಿನ್ನ ಕೋಪವಂ ತೋರಬಾರದು ॥ ೪೫ ॥ ಎಲೈ ನರಪಾಲಕನೆ; ಈ ನಿನ್ನ ಮಗನು ನಿನಗೆ ವಿನೀತನೆನಿಸಿ, ನೀನು ಹೇಳಿದಂತೆ ಕೇಳಿಕೊಂಡು, ನಿನ್ನ ವಶವರ್ತಿಯಾಗಿ, ನಿನ್ನ ಶತ್ರುಗಳು ಸಂಹರಿಸುವದಕ್ಕೆ ಪ್ರಯತ್ನ ಪಟ್ಟು ನಿನ್ನ ಮನಸ್ಸಿಗೆ ಅಪಾರವಾದ ಆನಂದವನ್ನುಂಟು ಮಾಡುವಂತೆ ನಾವು ಇವನಿಗೆ ತಕ್ಕ ಬುದ್ಧಿಯಂ ಕಲಿಸುವೆವು. ಇವನನ್ನು ನಿನ್ನ ವಶಂವದನನ್ನಾಗಿ ಮಾಡುವ ಭಾರವು ನಮ್ಮದಾಗಿರಲಿ. ಆದುದರಿಂದ ಇವನಲ್ಲಿರುವ ಕೋಪವಂ ಅಡಗಿಸಿ ಆ ಕೋಪವನ್ನು ದೇವತೆಗಳಲ್ಲಿರಿಸು. ॥ ೪೬ ॥ ಓ ದೈತ್ಯಾಧಿಪನೇ ! (ಬಾಲಭಾವವು) ಹುಡುಗತನವೆಂಬುದು ಎಲ್ಲವಿಧ ದೋಷಗಳಿಗೂ ಆಸ್ಪದವಾದುದಲ್ಲವೆ ? ಇಂತು ಎಲ್ಲವನ್ನೂ ಬಲ್ಲವನಾಗಿದ್ದರೂ ಈ ಹುಡುಗನ ವಿಷಯದಲ್ಲೇಕೆ ಇಷ್ಟೊಂದು ಆಗ್ರಹ ಮಾಡುವೆ ? ॥ ೪೭ ॥ ಹಾಗೊಂದುವೇಳೆ ನಿನ್ನ ಮಗನು ನಮ್ಮ ಮಾತಿನಂತೆ ನಿನಗೆ ಅನುಕೂಲನಾಗದೆ, ಈಗಿರುವಂತೆಯೇ ವಿಷ್ಣುಪಕ್ಷವಲಂಬಿಯೇ ಆಗಿದ್ದರೆ ಆಗ ನಾವೆಲ್ಲರೂ ಸೇರಿ ಈತನನ್ನು ಸಂಹರಿಸಲು ತಕ್ಕ ಉಪಾಯಗಳನ್ನು ಯೋಚಿಸಿ ಅದಕ್ಕೆ ತಕ್ಕಂತೆ ನಡೆಯಿಸುವ.

ಕೃತ್ಯಾಂ ವಧಾ ಯಾಸ್ಯ ಕರಿಷ್ಯಾವೋ ನಿವರ್ತಿನೀಂ ॥ ೫೨ ॥
ಶ್ರೀ ಪರಾಶರಃ ॥ ಏವ ಮುಕ್ತೋ ಥಿತ ಸ್ತೈಸ್ತು ದೈತ್ಯರಾಜಃ
ಪುರೋಹಿತೈಃ । ದೈತ್ಯೈ ರ್ನಿಷ್ಕ್ರಾಮಯಾವಾಸ ಪುತ್ರಂ
ಪಾವಕ ಸಂಚಯಾತ್ ॥ ೫೩ ॥ ತತೋ ಗುರು ಗೃಹೇ ಬಾಲ
ಸ್ಸ ವರ್ಷ ಬಾಲ ದಾನವಾ । ಅಧ್ಯಾಪಯಾ ಮಾಸ ಮುಹು ರು
ಪದೇಶಾಂತರೇ ಗುರೋಃ ॥ ೫೪ ॥ ಪ್ರಹ್ಲಾದಃ ॥ ಶೃಣುತಾಂ

ಈಗಲೇ ಇವನಮೇಲೆ ಇಷ್ಟೊಂದು ಆಗ್ರಹವಂ ತೋರಬಾರದು. ಹಿಂದೆ ಬಂದಾವರ್ತಿ ಬುದ್ಧಿಯುಂ ಹೇಳದುದಾಯಿತು. ಇದು ಎರಡೆನೆಯ ಬಾರಿ; ಈಗಲೂ ಇವನು ದಾರಿಗೆ ಬಾರದಿದ್ದರೆ ಮುಂದಿನ ಚಿಕಿತ್ಸೆಯು ತಿಳದೇ ಇರುವುದು. ॥ ೫೩ ॥ ಪರಾಶರನು ಹೇಳುತಾ ನೆ—ಇಂತು ಆ ಪುರೋಹಿತರೆಲ್ಲರೂ ದೈತ್ಯರಾಜನಾದ ಆ ಹಿರಣ್ಯ ಕಶಿಪುವನ್ನು ಬೇಡಿಕೊಳ್ಳಲು, ಆಗ ಹಿರಣ್ಯಕಶಿಪುವು ತನ್ನ ಸೇವಕರನ್ನು ಕುರಿತು ಚಿತೆಯಲ್ಲಿದ್ದ ತನ್ನಮಗನನ್ನು ಹೊರಕ್ಕೆ ತೆಗೆಯುವಂತೆ ಆಜ್ಞಾಪಿಸಿದನು. ತರುವಾಯ ಆ ದೈತ್ಯರು ಈ ಪ್ರಹ್ಲಾದನನ್ನು ಆ ಬೆಂಕಿಯಿಂದ ಹೊರಕ್ಕೆ ತೆಗೆದರು ॥ ೫೪ ॥ ಆಬಳಿಕ ಈ ಪ್ರಹ್ಲಾದನು ಗುರುಕುಲವಂ ಸೇರಿ ಅಲ್ಲಿ ನನ್ನ ತಂದೆಯಾದರೋ ಕೇವಲ ವಿಷಯಾಸಕ್ತನಾಗಿರುವನು. ಆದುದರಿಂದ ನಾನು ಅತನಿಗೆ ಎಷ್ಟುವಿನದಿಂದ ಉಪದೇಶಿಸಿದರೂ ಅತನು ಬೇರೆ ವಿಷ್ಣುವಿನಲ್ಲಿ ಭಕ್ತಿಯುನ್ನಿರಿಸುವಂತಿಲ್ಲ. ಇದಕ್ಕೆ ಅತನ ದೋಷವೇನೂ ಇಲ್ಲ ಸ್ರಕ್, ಚಂದನ, ವನಿತಾದಿ ವಿಷಯಗಳು ಅತನನ್ನು ಈರೀತಿ ಮಾಡಿನೆ. ಈಗ ನನ್ನ ಜತೆಯಲ್ಲಿ ವಿದ್ಯಾಭ್ಯಾಸ ಮಾಡುತಿರುವ ಇವರೆಲ್ಲರೂ ಇನ್ನೂ ಕೇವಲ ಚಿಕ್ಕ ವಯಸ್ಸಿನ ಹುಡುಗರು. ಇವರಿಗಿನ್ನೂ ವಿಷಯಾಭಿಲಾಷೆಯು ತಲೆದೋರಿಲ್ಲ ಈಗಲೇ ಇವರಿಗೆ ನಾನು ಉಪದೇಶಿಸಿದರೆ ಇವರೂ ನನ್ನಂತೆಯೇ ವಿಷ್ಣುಭಕ್ತರಾಗುವರು. ಆದುದರಿಂದ ಇವರಿಗೆ ಉಪದೇಶಿಸಿದರೆ ನನ್ನ ಉಪದೇಶವು ಸಾರ್ಥಕವಾಗುವುದು' ಎಂಬುದಾಗಿ ಯೋಚಿಸಿ ಗುರುವು ತಮಗೆ ಪಾಠವನ್ನು ಹೇಳಿಸಿಲ್ಲಿಸಿದ ಸಮಯದಲ್ಲಿಯೂ, ಮತ್ತು ಇನ್ನಾವಾಗ ಅವಕಾಶ ದೊರೆತರೂ ತನ್ನ ಜತೆ ಹುಡುಗರಿಗೆಲ್ಲಾ ಈರೀತಿ ಬೋಧಿಸುತ್ತಿದ್ದನು. ॥ ೫೪ ॥

ಪರಮಾರ್ಥೋಽಯಮೇ ದೈತೇಯಾ । ದಿತಿಜಾತ್ಮಜಾಃ ! ನಚಾ
ನ್ಯಥೈ ತನ್ಮಂತವ್ಯಂ ನಾತ್ರ ಲೋಭಾದಿ ಕಾರಣಂ ॥ ೫೫ ॥
ಜನ್ಮ ಬಾಲ್ಯಂ ತತಸ್ಸರ್ವೋ ಜಂತುಃ ಪ್ರಾಪ್ನೋತಿ ಯಾವ
ನಂ । ಅವ್ಯಾಹತೈವ ಭವತಿ ತತೋಽಸು ದಿವಸಂ ಜರಾ ॥ ೫೬ ॥
ತತ ಶ್ಚ ಮೃತ್ಯು ಮಭ್ಯೇತಿ ಜಂತು ರ್ದೈತ್ಯೇಶ್ವರಾತ್ಮಜಾಃ ! ।

ಪ್ರಹ್ಲಾದನು ಉಪದೇಶಿಸುತ್ತಾನೆ—ಓ ನನ್ನ ಸಹೋದರರಿರಾ, ಇನ್ನೂ ಇತರರಾದ ದಿತಿವಂಶ ಸಂಭೂತರಿರಾ; ನಾನು ನಿಮಗೊಂದು ತತ್ವವನ್ನು ತಿಳಿಸುವೆನು. ಆದರದಿಂದ ಗಮನಿಸಿರಿ. ಇದನ್ನು ಸುಳ್ಳೆಂದು ಎಂದಿಗೂ ಅಲಕ್ಷ್ಯ ಮಾಡಬೇಡಿರಿ, ನಮ್ಮ ಗುರುಗಳು ಉಪದೇಶಿಸುವಂತೆ ನಾನು ನಿಮಗೆ ಲೋಭ ನಿಮಿತ್ತವಾಗಿ ಅಪ್ರಕೃತವಾದ ಸಮಾಚಾರವನ್ನು ತಿಳಿಸುವುದಿಲ್ಲ. ಆದುದರಿಂದ ನನ್ನನ್ನಾತನನ್ನು ಲಾಶಿಸಿರಿ. ॥೫೫॥ ನಾವು ಈ ಲೋಕದಲ್ಲಿ ಜನ್ಮವೆತ್ತಿದುದು ಮೊದಲೊಂಡು ಮರಳಿ ಇಂತಹ ಜನ್ಮಗಳನ್ನು ಹೊಂದದಿರಲು, ಸಂಸಾರಸಾಗರದಿಂದ ಉದ್ಧರಿಸುವಂತಹ ಸಾಮರ್ಥ್ಯವುಳ್ಳ ವಿಷ್ಣುವಿನಲ್ಲಿ ಭಕ್ತಿಯನ್ನು ಶಾಶ್ವತವಾಗಿ ನೆಲೆಗೊಳಿಸಬೇಕು. ಹಾಗೆ ಮಾಡದೆ ಪ್ರವೃತ್ತಿಮಾರ್ಗವೆನಿಸಿದ ಈ ಸಂಸಾರವನ್ನೇ ಅವಲಂಬಿಸಿದೊಡೆ ಹುಟ್ಟಿದುದು ಮೊದಲೊಂಡು ಸಾಯುವವರೆಗೂ ಬಂದು ಕ್ಷಣವಾದರೂ ನಮಗೆ ದುಃಖವು ತಪ್ಪಿದುದೇ ಅಲ್ಲ. ಅದೆಂತೆಂದರೆ—ಮೊದಲು ಪ್ರಾಣಿಯು ತನ್ನ ಕರ್ಮಾನುಸಾರ ಈ ಲೋಕದಲ್ಲಿ ಜನ್ಮವನ್ನೆತ್ತುವನು. ಬಳಿಕ ಕೆಲವು ದಿವಸಗಳಲ್ಲಿಯೇ ಆಟಪಾಟಗಳನ್ನಾಡಲು ಯೋಗ್ಯವಾದ ಬಾಲ್ಯವು ಈ ಪ್ರಾಣಿಗೆ ಬಂದೊದಗುವದು. ಆಬಳಿಕ ವಿಷಯಸುಖವನ್ನನುಭವಿಸಲು, ತಕ್ಕ ಯೌವನವು ಪ್ರಾಪ್ತವಾಗುವುದು. ತರುವಾಯದಿನಗಳು ಕಳೆದ ಹಾಗೆಲ್ಲಾ ಇವನಿಗೆ ಮೃತ್ಯುವಂ ಸಂಪಾದಿಸುವಂತಹ ಮುಪ್ಪು ತಲೆದೋರುವುದು. ಇಂತಹ ಮುಪ್ಪಿನಿಂದ ತಪ್ಪಿಸಿಕೊಳ್ಳಬೇಕಾದರೆ ಆ ಪರಮಾತ್ಮನನ್ನು ಆಶ್ರಯಿಸುವುದಕ್ಕಿಂತಲೂ ಬೇರೊಂದು ಸಾಧನವೇ ಇಲ್ಲವು ॥ ೫೬ ॥ ಇಂತಹ ಮುಪ್ಪು ಬಂದೊದಗಿದ ಬಳಿಕ ಮತ್ಯೂ ಧರ್ಮವನ್ನನುಸರಿಸಿ ಮರಣವಂ ಹೊಂದುವನು; ಓ ನನ್ನ ಸಹೋದರರಿ

ಪ್ರತ್ಯಕ್ಷಂ ದೃಶ್ಯತೇ ಚೈತ ದಸ್ಮಾಕಂ ಭವತಾಂ ತಥಾ ॥೫೭॥
ವ್ಯತಸ್ಯ ಚ ಪುನರ್ಜನ್ಮ ಭವತ್ಯೇ ತಚ್ಚ ನಾನ್ಯಥಾ। ಆಗಮೋ
ಯಂ ತಥಾ ತಚ್ಚ ನೋಪಾದಾನಂ ವಿನೋದ್ಭವಃ ॥೫೮॥
ಗರ್ಭವಾಸಾದಿ ಯಾವತ್ತು ಪುನರ್ಜನ್ಮೋಪ ಪಾದನಂ। ಸಮು

ರಾ; ಇದೇನು ನಾನು ಹೇಳುವುದು ಸುಳ್ಳಲ್ಲಾ. ಇದು ನಾನೂ ನೀವೂ ಕೂಡ ಪ್ರತ್ಯಕ್ಷವಾಗಿಯೇ ನೋಡಿದ ವಿಷಯವಾಗಿರುವುದು. ಆದುದ ರಿಂದ ಯಾವಾಗಲೂ ದುಃಖವೇ ಅಲ್ಲದೆ ಸುಖಲೇಶವೂ ಇಲ್ಲ ॥೫೭॥ ಇಂತು ಬಂದಾವರ್ತಿ ಸತ್ತವನು ಮರಳಿ ಹುಟ್ಟುವುದಿಲ್ಲವೆಂಬುದಾಗಿ ತಿಳಿ ಯಬೇಡಿರಿ. ದಿಟವಾಗಿಯೂ ಅವನ ಕರ್ಮಾನುಸಾರ ಅವನು ಜನ್ಮವ ನ್ನು ಹೊಂದಲೇ ಬೇಕು. ಇದಕ್ಕನುಸಾರವಾಗಿಯೇ ಇದೇ ಅರ್ಥವ ನ್ನೇ ಬೋಧಿಸುವ *ಶ್ರುತಿ, ಸ್ಮೃತಿ, ಪ್ರಮಾಣಗಳನೇಕವಾಗಿರುವು ವು. ಇದಕ್ಕೆ ಅನುಕೂಲವಾದ ತರ್ಕವೂ ಉಂಟು. ಜೀವನಲ್ಲಿ ಅಧಿ ಷ್ಠಿತವಾದ ಶುಕ್ಲ, ಶೋಣಿತ ರೂಪವೆನಿಸಿದ ಉಪಾದಾನಕಾರಣವಿಲ್ಲ ದೊಡೆ ಉತ್ಪತ್ತಿಯೇ ಸುತರಾಂ ಅಸಂಗತವಾದುದು. ಇದೇ ಅರ್ಥವ ನ್ನೇ ಶ್ರುತಿಯೂ ಕೂಡ ಘಂಟಾಘೋಷವಾಗಿ †ಸಾರುತ್ತಿರುವುದು ॥೫೮॥ ಇಂತು ಬಂದು ಸಲ ಮರಣಹೊಂದಿ ಮರಳಿ ಜನಿಸಿದ ಬಳಿಕ, ಗರ್ಭವಾ ಸವೊದಲ್ಗೊಂಡು ಈ ದೇಹದಲ್ಲಿ ಪ್ರಾಣಗಳನ್ನು ಧರಿಸಿರುವ ವರೆಗೂ ದುಃಖವೇ ಅಲ್ಲದೆ ಸುಖವೆಂಬುದು ಯಾವ ಅವಸೆಯಲ್ಲಿಯೂ ದೊರೆಯು ವಾರದು. ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟು, ಆದಕ್ಕೆ

---

* ಶ್ರು॥ ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ। ಸ್ಥಾಣುಮ ನ್ಯೇನು ಸಂಯಂತಿ ಯಥಾಕರ್ಮ ಯಥಾಶ್ರುತಂ ॥ ಗೀತಾ ಶ್ರುತ್ತು ಸ್ಮೃತಿ॥ ಜಾತ ಸ್ಯಹಿನ್ರುವೋಮೃತ್ಯುರ್ಧ್ರುವಂ ಜನ್ಮಮೃತಸ್ಯಚ । ಎಂಬ ವಚನಗಳು ಪ್ರಾಣಿಯ ಪದೇಪದೇ ಜನ್ಮಗಳನ್ನೆತ್ತುವನೆಂಬುದಾಗಿ ಬೋಧಿಸುತ್ತವೆ.

† ಶ್ರು॥ ‘‘ಪಂಚಮ್ಯಾಮಾಹುತಾ ವಾಪಃ ಪುರುಷವಚಸೋ ಭವಂತಿ’’ ಎಂಬ ಶ್ರುತಿಯು, ಜೀವಾಧಿಷ್ಠಿತಗಳಾದ ಶುಕ್ಲಶೋಣಿತಸಂಬಂಧಗಳಿಲ್ಲದೊಡೆ ದೇಹದಉತ್ಪ ತ್ತಿ ಇಲ್ಲವೆಂದು ತಿಳಿಸುತ್ತದೆ.

ಸಾತ್ತವಸಕಂ ತಾವ ದ್ದುಃಖ ಮೇವಾನ ಗವ್ಯತಾಂ ॥ ೫೯ ॥
ಕ್ಷುತ್ಪೃಷ್ಣೋಪಶಮಂ ತ ತ್ಪ ಚ್ಚೀತಾ ದ್ಯುಪ ಕರಣಾ ಸುಖಂ ।
ಮನ್ಯತೇ ಬಾಲ ಬುದ್ಧಿತ್ವಾ ದ್ದುಃಖ ಮೇವಹಿ ತತ್ಪುನಃ ॥ ೬೦ ॥
ಆತ್ಯಂತ ಸ್ಮಿತಾಂ ಗಾನಾಂ ವ್ಯಾಯಾನೋನ ಸುಖೈ ಷಿಣಾಂ ।

ತಕ್ಕಂತೆ ಜಾಗರೂಕತೆಯಿಂದಿರಿ ॥ ೫೯ ॥ ಹಸಿವೆಯಾದಾಗ ಅನ್ನವಂ ತಿಂದರೆ ಸುಖವುಂಟಾಗುವುದು. ಬಿಸಿಲಿನಲ್ಲಿ ಅಲೆದುಕೊಂಡು ಬಳಲಿ ದಾಗ ಜಲಪಾನವಂಗೈದರೆ ಅತ್ಯಂತ ಹರ್ಷವುಂಟು ಆದುದರಿಂದ ಬಾ ಲ್ಯಾದಿ ಅವಸ್ಥೆಗಳಲ್ಲಿಯೂ ಕೂಡ ಅನ್ನಪಾನಾದಿಗಳಿಂದ ಸುಖವುಂಟು ಇಂತಿರಲು 'ಸಾಯುವ ವರೆಗೂ ದುಃಖನೇ ಹೊರತು ಸುಖವಿಲ್ಲ. ಆ ಮೇಲೆಯೂ ಹಿಂದಿನಂತೆಯೇ ದುಃಖವ್ತ ತಪ್ಪಿದುದಲ್ಲವೆಂದು' ಹೇಳುವೆ ಯಲ್ಲಾ! ಇದೇನು ಹೀಗೆಹೇಳುವೆ?ಎಂಬುದಾಗಿ ಅಕ್ಷೇಪಿಸಬೇಡಿರಿ.ಹಸಿವು ಬಾಯಾರಿಕೆಗಳನ್ನು ಅಡ್ಡಿಮಾಡುವಿಕೆ, ಶೀತಾದಿಗಳನ್ನು ಪರಿಹರಿಸುವಿಕೆ, ಇವುಗಳೆಲ್ಲವೂ ಕೇವಲ ಶ್ರಮಸಾಧ್ಯಗಳಾದುದರಿಂದ ದುಃಖಮಯಗಳಾ ಗಿರುವುವೇ ಅಲ್ಲದೆ ಸುಖಕರಗಳಲ್ಲ. ಇವುಗಳನ್ನು ಸುಖಕರಗಳೆಂದು ತಿಳಿಯುವವನೂ ಕೂಡ ಭ್ರಾಂತನೇ ಹೊರತು ವಿವೇಕಿಯಲ್ಲಾ. ಬಂದಾ ವರ್ತಿ ನೀರಡಿಕೆಯಾದಾಗ ನೀರು ಕುಡಿದರೆ ಮರಳ ನೀರಡಿಕೆಯುಂಟಾ ಗದೆಯೇ ಇದ್ದರೆ ಜಲಪಾನವೂ ಸುಖಕರವೆಂದು ಹೇಳಬಹದು. ಆದರೆ ಲೋಕದಲ್ಲಿ ಮಾತ್ರ ಹಾಗೆ ಅನುಭವದಲ್ಲಿಲ್ಲ. ಮೋಕ್ಷವಾದರೋ ಹಾ ಗಿಲ್ಲ. ಜೀವನು ಬಂದಾವರ್ತಿ ಕಷ್ಟಪಟ್ಟು ಅತನ ಸಾಯುಜ್ಯವಂ ಪಡೆದರೆ ಮರಳ ಎಂದೆಂದಿಗೂ ಮುಪ್ಪು ಸಾವುಗಳಿಗೊಳಗಾಗದೆ ಸುಖವ ನ್ನೇ ಅನುಭವಿಸುತ್ತಿರುವನು. ಆದುದರಿಂದ ಹಸಿವು, ನೀರಡಿಕೆಗಳ ನ್ನು ಹೋಗಲಾಡಿಸತಕ್ಕ ಅನ್ನ, ಪಾನಗಳು, ತತ್ಕಾಲದಲ್ಲಿ ಮಾತ್ರ ಆ ಪ್ಯಾಯನಕರಗಳೆಂದು ತಿಳದು ಅವುಗಳಲ್ಲಿರುವ ಸುಖಕರಗಳೆಂಬ ಭ್ರಾಂ ತಿಯನ್ನು ದೂರವಾಡಿರಿ ॥ ೬೦ ॥ ವಾತ, ಮೊದಲಾದ ದೋಷಗಳಿಂ ದ ಬಹಳ ಮಟ್ಟಿಗೆ ಜಡವಾದ ಅವಯವವುಳ್ಳ (ವಾತಶರೀರವುಳ್ಳವರಿಗೆ ಅಂಗಾಂಗಗಳನ್ನು ಚಲಿಸುವುದಕ್ಕೂ ಸಾಮರ್ಥ್ಯವಿರುವುದಿಲ್ಲವು. ಅಂತ ವರ ಮೈಮೇಲೆ ಒಂದು ಹೆಟ್ಟು ಅಕಸ್ಮಾತ್ತಾಗಿ ಬಿದ್ದರೆ ಅದರಿಂದ ಅವ

ಭ್ರಾಂತಿ ಜ್ಞಾನಾ ವೃತಾ ಹ್ಲಾಣಾಂ ಪ್ರಹಾರೋ ಽ ಪಿ ಸುಖಾ
ಯತೇ ॥ ೬೧ ॥ ಕ್ವ ಕರೀರ ಮಶೇಷಾಣಾಂ ಶ್ಲೇಷ್ಮಾದೀನಾಂ
ಮಹಾಚಯಃ ?।ಕ್ವ ಕಾಂತಿ ಶೋಭಾ ಸೌರಭ್ಯ ಕಮನೀಯಾ
ದಯೋಗುಣಾಃ ॥ ೬೨ ॥ ಮಾಂ ಸಾಸೃ ಕ್ಪೂಯ ವಿಣ್ಮೂತ್ರ
ಸ್ನಾಯು ಮಜ್ಜಾ ಸ್ಥಿ ಸಂಹತೌ । ದೇಹೇ ಚೇ ತ್ಪ್ರೀತಿಮಾ

ರಿಗೆ ಬಹು ಸುಖವಾಗಿರುವಂತೆ ತೋರುತ್ತದೆಂದು ಭಾವವು) ವರಿಗೆ ಪ್ರ
ಹಾರವೂ ಕೂಡ ಸುಖಕರವಾಗಿ ಕಂಡುಬರುವುದು. ಇದು ಭ್ರಾಂತಿ
ಜ್ಞಾನವು, ಮತ್ತು ವಿಶೇಷವಾಗಿ ಕಾಮಾತುರರೆನಿಸಿ, ಸ್ತ್ರೀವಿಷಯದಲ್ಲಿ
ಬಹಳವಾಗಿ ಅನುರಾಗವನ್ನಿಟ್ಟುಕೊಂಡಿರುವ ವರಿಗಾದರೋ ಅವರ ಇಂ
ದ್ರಿಯಗಳೆಲ್ಲವೂ ಅನುದಿನವೂ ಮೋಹದಿಂದ ಕಲಿತಗಳಾಗಿರುವ ಕಾರಣ
ಬಂದು ಮೇಳೆ ಅಂತಹವರನ್ನು ಪ್ರಣಯಕೋಪದಿಂದೊಡಗೂಡಿದ ಮಡ
ದಿಯರು ತಮ್ಮ ಕಾಲ್ಗಡಗಗಳ ಝಣತ್ಕಾರದಿಂದೊಡಗೂಡಿ ಪಾದತಾಡ
ನಮಾಡಿದರೂ ಕೂಡ ಆ ಪಾದತಾಡನವೂ ಅವರಿಗೆಸುಖಕರವಾಯೇ ಇ
ರುವುದು; ಇದನ್ನೇ ಮೋಹ್ಷರೂಪನೆನಿಸಿದ ಪರಮಸುಖವೆಂದು ಕಾ
ಮುಕರು ವ್ಯವಹರಿಸುವರು ॥ ೬೧ ॥ ಶ್ಲೇಷ್ಮ, ಮೊದಲಾದ ಸಕಲ
ವಿಧ ಕಶ್ಮಲ ಪದಾರ್ಥಗಳಿಗೂ ದೊಡ್ಡ ಸಮುದಾಯವೆನೆಸಿದ, ಅತಿಹೇ
ಯವಾದ ಈ ಕರೀರವೆಲ್ಲಿ? ದೇಹದ ಬೆಳಕು, ಅಲಂಕಾರದಿಂದುಂಟಾ
ದ ಬೆಡಗು, ಮುಖ ಮೊದಲಾದ ಅಂಗಗಳಲ್ಲಿನ ಸುವಾಸನೆ, ಸೌಂದರ್ಯ,
ಮೊದಲಾದ ದೇಹಾಲಂಕಾರ ಭೂತಗಳಾದ ಗುಣಗಳೆಲ್ಲಿ? (ನಮ್ಮ ದೇಹ
ದಂತೆಯೇ ಇತರರ ದೇಹವೂ ಕೂಡ ಶ್ಲೇಷ್ಮ ಮೊದಲಾದ ಕಶ್ಮಲಪ
ದಾರ್ಥಗಳಿಂದೊಡಗೂಡಿದ್ದರೂ, ಪರರ ಕರೀರದಲ್ಲಿನ ಕಾಂತಿ ಮೊದಲಾದ
ಗುಣಗಳಿಗೋಸ್ಕರ ಮೂಢರು ಅಲ್ಲಿ ವಿಶೇಷವಾಗಿ ಅನುರಾಗವನ್ನಿಟ್ಟು
ದುಃಖಕ್ಕೆ ಈಡಾಗುವರು) ॥೬೨॥

ಈ ದೇಹವು ಮಾಂಸ, ರಕ್ತ, ದುರ್ಗಂಧ ಯುಕ್ತವಾದ ಕೊ
ಬ್ಬು, ಮಲ, ಮೂತ್ರ, ಸ್ನಾಯುವೆಂಬ ಕರೀರದಲ್ಲಿನ ಕೆಟ್ಟ ಪದಾರ್ಥ
ಮಜ್ಜಾ ಎಂಬದಾಗಿ ವ್ಯವಹರಿಸುವ ಒಂದು ವಿಧವಾದ ದುರ್ಗಂಧ
ವುಳ್ಳ ನೀರು, ಇವೇ ಮೊದಲಾದ ಅಶುಚಿ ಪದಾರ್ಥಗಳಿಂದ ನಿಬಿಡವಾಗಿ

ಮೂಢೋ ಭವಿತಾ ನರಕೇ ೨ ಪಿ ಕಃ ॥ ೬೪ ॥ ಅಗ್ನೇ ಶೀತೇನ
ತೋಯಸ್ಯ ತೃಷಾ ಭಕ್ತಸ್ಯ ಚ ಕ್ಷುಧಾ । ಕ್ರಿಯತೇ ಸುಖ

ರುವುದು. ಇಂತಹ ದೇಹವನ್ನೇ 'ನಾನು' ಎಂಬದಾಗಿ ತಿಳಿದು ಅಥವಾ ನೀನು, ನಾನು ಎಂಬ ಭೇದವನ್ನು ಉಂಟುಮಾಡುವ ಈ ದೇಹದಲ್ಲಿ ಪ್ರೀತಿಯನ್ನು ಇರಿಸಿದುದಾದರೆ, ಅಂತಹ ಮೂಢನು ನರಕದಲ್ಲಿಯೂ ಕೂಡ ಪ್ರೀತಿಯನ್ನಿರಿಸ ಬೇಕಾಗುವುದು. (ನೀನು, ನಾನು,) ಎಂಬ ಇವೇ ಮೊದಲಾದ ಭೇದಗಳು ದೇಹವನ್ನು ಅವಲಂಬಿಸಿ ಬಂದುವು. ಇಂತು ನಶ್ವರವಾದ ದೇಹವನ್ನು ದೂರವೂಡಿ ನೀನು ಎಂಬದಾಗಿ ವ್ಯವಹರಿಸಲ್ಪಡುವ ದೇಹದಲ್ಲಿಯೂ, ನಾನು ಎಂಬದಾಗಿ ವ್ಯವಹರಿಸಲ್ಪಡುವ ದೇಹದಲ್ಲಿಯೂ, ಇರುವ ಪ್ರಾಣಪ್ರದ ಪದಾರ್ಥವಾವುದೆಂದು ನಿಶ್ಚಯಿಸಿದ ಬಳಿಕ ಈ ದೇಹದಲ್ಲಿನ ಮಮತೆಯು ತೊಲಗುವುದು ನೀನು, ನಾನು ಎಂಬ ಭೇದಕ್ಕೆ ಮೂಲಭೂತವಾದುದು ಈ ದೇಹವೇ ಅಲ್ಲದೆ ಬೇರೆ ಅಲ್ಲ. ಇಂತಹ ಜ್ಞಾನಿಯು ದೇಹದಲ್ಲಿ ವಿಶೇಷವಾಗಿ ಪ್ರೀತಿಯನ್ನಿರಿಸಲಾರನು. ಹಾಗೊಂದುವೇಳೆ ಪ್ರೀತಿಯನ್ನಿರಿಸಿದ ಪಕ್ಷದಲ್ಲಿ ನರಕದಲ್ಲಿಯೂ ಇವನು ಪ್ರೀತಿಯನ್ನಿರಿಸಬೇಕಾಗುವುದು. ಅದೆಂತೆಂದರೆ, ನರಕದಲ್ಲಿ ಮಲ ಮೂತ್ರಾದಿಗಳನ್ನು ತನಗಿಂತಲೂ ಬೇರೆಯಾಗಿ ತಿಳಿದು ಅಲ್ಲಿ ಅವುಗಳನ್ನು ಅನುಭವಿಸುವನು. ಇಲ್ಲಿ ಅಂತಹ ಮಲ, ಮೂತ್ರಗಳಿಗೆ ಆಕರವೆನಿಸಿದ ದೇಹವನ್ನು 'ನಾನು' ಎಂಬದಾಗಿ ಭಾವಿಸುವ ಮೂಢನು ಭೋಗ್ಯವಸ್ತುವೆಂದು ತಿಳಿದು ಆದೇಹದಲ್ಲಿ ಪ್ರೀತಿಯನ್ನಿರಿಸುವನು. ಆದುದರಿಂದ ಈ ದೇಹವನ್ನು ಪ್ರೀತಿಸುವುದಕ್ಕಿಂತಲೂ ನರಕವನ್ನು ಬಯಸುವುದು ಒಳ್ಳೆಯದಲ್ಲವೆ ? ದೇಹಾತ್ಮ ಜ್ಞಾನಿಯು ನರಕದಲ್ಲಿ ನರಳುವನೆಂದು ಭಾವವು ॥ ೬೪ ॥ ವಿಶೇಷವಾಗಿ ಚಳಿಯಾದ ಕಾಲದಲ್ಲಿ ಬೆಂಕಿಯನ್ನು ಕಾಯಿಸಿಕೊಂಡರೆ ಅದರಿಂದ ಸುಖವುಂಟಾಗುವುದು. ಚಳಿಯಿಲ್ಲದ ಬಿಸಿಲುಕಾಲದಲ್ಲಿ ಅದೇಬೆಂಕಿಯನ್ನು ಸೇವಿಸಿದರೆ ದುಃಖವು ಲಭಿಸುವದು. ಬಾಯಾರಿಕೆಯುಂಟಾದಾಗ ಜಲಪಾನದಿಂದ ಸುಖವು ತೋರುವುದು. ಅಂತೆಯೇ ಹಸಿವಾದಾಗ ಊಟಮಾಡಿದರೆ ಸುಖವುಂಟಾದಂತೆ ತೋರುವುದು. ಬಾಯಾರಿಕೆ ಇಲ್ಲದಕಾಲದಲ್ಲಿ ಎಂತಹ

ಕರ್ತೃತ್ವಂ ತದ್ವಿ ಲೋಮಸ್ಯ ಚೇತರ್ಯಃ ॥ ೬೪ ॥ ಕರೋತಿ
ಹೇ ದೈತ್ಯ ಪುತ್ರಾಃ ! ಯಾವನ್ಮಾತ್ರಾ ಪರಿಗ್ರಹಃ । ತ್ಮಾವನಾ
ತ್ರಂ ಸ ಏವಾಸ್ಯ ದುಃಖಂ ಚೇತಸಿ ಯಚ್ಛತಿ ॥ ೬೫ ॥ ಯಾ
ವತಃ ಕುರುತೇ ಜಂತು ಸ್ಸಂಬಂಧಾ ನ್ಮನಸಃ ಪ್ರಿಯಾ । ತಾವಂ

ಸುಗಂಧಯುಕ್ತವಾದ ಶೀತಜಲವಾದರೂ ಬೇಸರವನ್ನುಂಟುಮಾಡುವುದು. ಹಸಿವಿಲ್ಲದಕಾಲದಲ್ಲಿ ವೃಷ್ಟಾನ್ನವು ದೊರೆತರೂ ವಿಷದಂತೆ ಇರುವುದು. ಜಠರಾಗ್ನಿಯು ಸರಿಯಾಗಿದ್ದಕಾಲದಲ್ಲಿ ಎಂತಹ ಕದನ್ನವಾದರೂ ರುಚಿಸುವುದು. ಅಜೀರ್ಣವು ತಲೆದೋರಿದಾಗ ಎಲ್ಲವೂ ವಿಷವುಯವಾಗಿ ಪರಿಣಮಿಸುವುದು, ಇಂತು ಚಳಿ, ಬಾಯಾರಿಕೆ, ಹಸಿವು, ಮೊದಲಾದುವು ನಿಯತ ಧರ್ಮಗಳಲ್ಲವಾದುದರಿಂದ ಅಂತಹ ಅನಿಯತ ಧರ್ಮಗಳಿಗೋಸ್ಕರ ಪರಿಹಾರೋಪಾಯವಾಗಿರುವ ಬೆಂಕಿ ನೀರು ಭೋಜನ ಮೊದಲಾದುವುಗಳಿಂದುಂಟಾಗುವ ಸುಖವೂ ಕೂಡ ನಿತ್ಯ ಸುಖವಲ್ಲ. ಆದುದರಿಂದ ಲೋಕದಲ್ಲಿ ವಾಸ್ತವವೆನಿಸಿದ ಸುಖವನ್ನುಂಟುಮಾಡತಕ್ಕ ವಸ್ತುಗಳು ಯಾವುವೂ ಇಲ್ಲ, ಸಾಮಾನ್ಯವಾಗಿ ಸುಖಸಾಧನಗಳಂತೆ ಕಂಡುಬರುವ ವಸ್ತುಗಳೂ ಕೂಡ ಮೇಲೆ ಹೇಳಿದ ಪ್ರಕಾರ ಕೆಲವು ಸಮಯಗಳಲ್ಲಿ ದುಃಖಕರಗಳಾಗಿ ಪರ್ಯವಸಾನಹೊಂದುವವು, ॥೬೪॥

ಎಲೈ ದಿತಿಪುತ್ರರೇ! ಮನುಜನು ಈ ಲೋಕದಲ್ಲಿ ಎಷ್ಟೆಷ್ಟುಮಟ್ಟಿಗೆ ಧನ, ಕುದುರೆ, ಆನೆ, ಪರಿಚಾರಕರು ಮೊದಲಾದ ವಸ್ತುಗಳನ್ನು ಸಂಗ್ರಹಿಸುವನೋ, ಅಷ್ಟಷ್ಟೂ ಇವನಿಗೆ ವ್ಯಥೆಯೇ ಪ್ರಾಪ್ತವಾಗುವುದು. ಅದೆಂತೆಂದರೆ; ಮೊದಲು ಯಾವ ವಸ್ತುವನ್ನಾದರೂ ಸಂಪಾದಿಸುವುದು ಕಷ್ಟ. ಅಂತಹ ಪದಾರ್ಥಗಳನ್ನು ಬಂದು ಮೇಳೆ ಶ್ರಮವನ್ನು ಸಹಿಸಿಕೊಂಡು ಸಂಪಾದಿಸಿದಾಗ್ಗೂ ಅದನ್ನು ಪರಿಪಾಲನೆ ಮಾಡುವುದು ಬಹಳ ಕಷ್ಟವಾಗಿರುವುದು, ಆದುದರಿಂದ ಧನ, ಅಶ್ವ, ಗಜ, ಭೃತ್ಯರು ಮೊದಲಾದುವುಗಳೆಲ್ಲಾ ದುಃಖಸಂಪಾದಕಗಳೇ ಆಗಿರುವುವು ॥೬೫॥

ಅಂತೆಯೇ ಪುತ್ರ, ಮಿತ್ರ, ಕಳತ್ರ ಮೊದಲಾದ ಸಂಬಂಧಿಗಳಿಂದಲೂ ಸುಖವಿಲ್ಲ. ಅದೆಂತೆಂದರೆ--ಈ ಪ್ರಾಣಿಯು ತನ್ನ ಮನಸ್ಸಿಗೆ ಬೇಕಾದ (ಪ್ರೀತಿಪಾತ್ರಗಳಾದ) ಎಷ್ಟೆಷ್ಟು ವಿಧವಾದ ಸಂಬಂಧಗಳ

ತೋಽಸ್ಯ ನಿಖನ್ಯಂತೇ ಹೃದಯೇ ಶೋಕ ಶಂಕವಃ ॥ ೬೬ ॥
ಯುಜ್ಯ ದ್ಗೃಹೇ ತನ್ಮನಸಿ ಯತ್ರ ಕುತ್ರಾ ವತಿಷ್ಠತಃ । ನಾಶ

ನ್ನು ಹೆಚ್ಚಿಸುವನೋ ಇವನ ಮನಸ್ಸಿನಲ್ಲಿ ಅಪ್ಪಪೂಪ್ಪ ದುಃಖಮಯ ಗಳಾದ ಕೀಲುಗಳು ನೆಡಲ್ಪಡುತ್ತವೆ. (ಪುತ್ರ, ಮಿತ್ರ, ಕಳತ್ರಾದಿ ಸಂಬಂಧಿಗಳು ನಶ್ವರಗಳಾದ ಕಾರಣ ಕಾಲಾಂತರದಲ್ಲಿ ನಾಶ ಹೊಂದುವರು. ಅಂತಹ ಸಂಬಂಧಿಗಳು ನಾಶವನ್ನೈದಿದರೂ ಕೂಡ, ಅವರ ನಾಶನಿಮಿತ್ತವಾದದುಃಖವು ಮಾತ್ರ ತಾನು ಈ ದೇಹದಿಂದಿರುವ ವರೆಗೂ ತಪ್ಪಿದುದಲ್ಲ; ಸಂಬಂಧವು ಕ್ಷಣಿಕವಾದುದು. ಆ ಸಂಬಂಧ ದಿಂದುಂಟಾಗುವ ಶೋಕವು ಮಾತ್ರ ಪ್ರಾಣಾವಧಿಕವಾದುದು: ಆದುದ ರಿಂದ ಪುತ್ರಾದಿಗಳಿಂದಲೂ ಸುಖವಿಲ್ಲವೆಂದು ಭಾವವು) ॥೬೬॥ ಮೂಢ ರಿಗೆ ಧನ ಮೊದಲಾದ ಪದಾರ್ಥಗಳು ತನ್ನ ಹತ್ತಿರಲೇ ಇದ್ದರೂ, ಅಥ ವಾ ಇಲ್ಲದಿದ್ದರೂ ದುಃಖವು ಮಾತ್ರ ವಿಕರೂಪವಾಗಿಯೇ ಇರುವುದು; ಅದು ಹೇಗೆಂದರೆ—ಅದನ್ನೇ ವಿವರಿಸುವೆನು, ಕೇಳಿರಿ ಸಂಸಾರಿಯು ದೇಶಾಂತರದಲ್ಲಿರತಕ್ಕವನಾದರೂ ಕೂಡ ಅವನಿಗ ಧನ, ಕನಕ, ಪುತ್ರ, ಕಳತ್ರ ಮೊದಲಾದ ವಸ್ತುಗಳ ವಿಷಯದಲ್ಲಿ ಯೋಚನೆಯು ತಪ್ಪಿದುದ ಲ್ಲ. ಆ ಆ ಪದಾರ್ಥಗಳು ಮಾತ್ರ ಮನೆಯಲ್ಲಿಯೇ ಇರುವವು. ಇಂ ತು ವಿಷಯಗಳು ಸಮೀಪದಲ್ಲಿಲ್ಲದಿರುವಾಗಲೇ ಈ ಪರಿಯಿಂದಿರುವುದು. ಇಂತಿರಲು ಅನುದಿನವೂ ಮನೆಯಲ್ಲಿಯೇ ಇದ್ದುಕೊಂಡು ಅವುಗಳನ್ನೇ ಯೋಚಿಸತಕ್ಕವನಿಗೆ ಅವುಗಳು ಬಂದು ವೇಳೆ ಅಕಸ್ಮಾತ್ತಾಗಿ ನಾಶ ಹೊಂದಿದರೆ ಆ ಪದಾರ್ಥಗಳ ಮೇಲಿನಯೋಚನೆಯು ಅವುಗಳ ಯಜಮಾನನಿಗೆ ಇಲ್ಲದಿರುವುದುಂಟೆ ಇವನೆಲ್ಲಿದ್ದರೂ ಆ ಪದಾರ್ಥಗಳು ನಾಶ ಹೊಂದಿ ಎಷ್ಟು ಕಾಲವಾಗಿದ್ದರೂ, ಅವುಗಳ ವಾಸನೆಯು ಮಾತ್ರ ಇವ ನನ್ನು ಬಿಟ್ಟು ಹೋಗುವುದೇ ಇಲ್ಲವು. ಆದುದರಿಂದ ಇದು ಬಹಳ ವಿಚಿತ್ರಕರವಾಗಿರುವುದು. (ಧನ ಮೊದಲಾದ ವಸ್ತುಗಳು ಮನೆಯಲ್ಲಿ ದ್ದು, ಅಲ್ಲಿಯೇ ಕಳ್ಳಕಾಕರು ಮೊದಲಾದವರಿಂದ ನಷ್ಟವಾಗುವುದು, ಆ ಕಾಲದಲ್ಲಿ ಅವುಗಳ ಯಜಮಾನನು ಸನ್ನಿಧಾನದಲ್ಲಿರದೆ ದೇಶಾಂತರ ದಲ್ಲಿದ್ದರೂ ಕೂಡ ಅವನ ಮನಸ್ಸಿನಲ್ಲಿ, ಆ ಪದಾರ್ಥಗಳಲ್ಲಿರುವ ಮನ

ದಾಹೋಪ ಕರಣಂ ಕುತ ಸ್ತತ್ರೈವ ತಿಷ್ಠತಿ ?॥ ೬೩ ॥ಜನ್ಮ
ನ್ಯ ನ್ಯ ಮುಹದ್ದುಃಖಂ ಮ್ರಿಯಮಾಣಸ್ಯ ಚಾಪಿ ತತ್ । ಯಾತ
ನಾ ಸು ಯಮ ಸ್ಯೋದ್ಗ್ರಂ ಗರ್ಭ ಸಂಕ್ರಮಣೇಪಿ ಚ ॥೬೪॥
ಗರ್ಭೇಚ ಸುಖ ಲೇಶೋಽಪಿ ಭವದ್ಬ್ಭಿ ರನುಮಾಯತೇ । ಯದಿ

ತಾರೂಪವಾದ ಸಂಸ್ಕಾರವು ಉದ್ಬುದ್ಧವಾಗಿ ಇವನಿಗೆ ವಿಶೇಷವಾಗಿ ವ್ಯಥೆಯನ್ನುಂಟುಮಾಡುವುದು, ಆದುದರಿಂದ ಧನಕನಕಾದಿ ನಾಶಮಾತ್ರದಿಂದ ಇವನಿಗೆ ವ್ಯಥೆಯು ಪ್ರಾಪ್ತವಾಯಿತೆಂದು ಹೇಳಲಾಗದು. ಆ ಪದಾರ್ಥಗಳಲ್ಲಿನ ವಾಸನಾ ರೂಪವಾದ ಸಂಸ್ಕಾರವು ಇವನನ್ನು ವ್ಯಥೆಗೆ ಗುರಿಮಾಡಿದುದು. ವಿವೇಕಿಯಾದವನು ಇಂತಹ ಪದಾರ್ಥಗಳು ತನಗೆ ನೂರುಗಟ್ಟಲೆ ಇದ್ದರೂ ಅವುಗಳಲ್ಲಿ ಮಮತೆಯನ್ನಿಡುವುದಿಲ್ಲ. ಒಂದುವೇಳೆ ಆ ಪದಾರ್ಥಗಳು ನಾಶವಾದರೂ ಅವುಗಳಿಗೋಸ್ಕರ ವ್ಯಥೆಪಡುವುದಿಲ್ಲವೆಂದು ಭಾವವು) ॥ ೬೩ ॥ ಇಂತೆಯೇ ಜಾಗ್ರದಾದಿ ಅವಸ್ಥೆಗಳಲ್ಲಿಯೂ ಬಾಲ್ಯವೊದಲಾದ ವಯಸ್ಸುಗಳಲ್ಲಿಯೂ ಕೂಡ ದುಃಖವೇ ಸಂಪೂರ್ಣವಾಗಿರುವುದಲ್ಲದೆ ಸುಖ ಲೇಶವೂ ಇಲ್ಲ. ಹುಟ್ಟುವಾಗಲೂ ಕೂಡ ಅನೇಕ ವಿಧಗಳಾದ ಸಂಕಟಗಳನ್ನನುಭವಿಸಿಯೇ ಹುಟ್ಟುವನು. ಅಂತೆಯೇ ಸಾಯುವಾಗಲೂ ಕೂಡ ಲೆಕ್ಕವಿಲ್ಲದಷ್ಟು ಯಾತನೆಗಳನ್ನನುಭವಿಸುವನು. ಸತ್ತಮೇಲಂತೂ ತಾನು ಮಾಡಿದ ದುಷ್ಕೃತಗಳಿಗಾಗಿ ಯಮನಿಂದ ತರಗುಂಟಾಗುವ ಭಯಂಕರಗಳಾದ ಸಂಕಟಗಳಲ್ಲಿ ಇವನಿಗೆ ಉಂಟಾಗುವ ದುಃಖವು ಹೇಳಲಸಾಧ್ಯವಾಗಿರುವುದು. ಇಕ್ಕಟ್ಟಾದ ಚರ್ಮದ ಚೀಲದಂತಿರುವ ಗರ್ಭಕೋಶದಲ್ಲಿ ಮಲ, ಮೂತ್ರ ಮೊದಲಾದ ಅಶುಚಿ ಪದಾರ್ಥಗಳ ನಡುವೆ ಹೊರಳಾಡುವಾಗ ಇವನಿಗುಂಟಾಗುವ ದುಃಖವೆಂತೂ ಬಣ್ಣಿಸಲಸದಳವಾಗಿರುವುದು. ಇಂತಿರಲು ಈ ಪ್ರಾಣಿಯು ಯಾವಾಗ ಸುಖವನ್ನನುಭವಿಸುವನು? ॥ ೬೪ ॥ ಗರ್ಭದಲ್ಲಿ ವಾಸಮಾಡುವಾಗ ಸ್ವಲ್ಪವಾದರೂ ಸುಖವುಂಟೆಂದು ಹೇಳಿದರೆ ಅಂತಹ ಸುಖವಾವುದು ? ಅದನ್ನು ಸ್ವಲ್ಪ ವಿವರಿಸಿರಿ, ಕೇಳುವ, (ಗರ್ಭವಾಸ ಕಾಲದಲ್ಲಿಯೂ ಕೂಡ ಸುಖವಿಲ್ಲವೆಂದರ್ಥ. ಇದೇ ಅರ್ಥವನ್ನೇ ಶ್ರೀಕಂಕರ ಭಗವತ್ಪಾದಾಚಾರ್ಯರವರು ಆದೌಕರ್ಮ ಪ್ರಸಂ

ತತ್ಕೃತ್ಯತಾ ಮೇವಂ ಸರ್ವಂ ದುಃಖಮುಯಂ ಜಗತ್ ॥ ೬೯ ॥
ತಪೇವ ಮತಿ ದುಃಖಾನಾ ಮಾಶ್ವದೇ ತು ಭವಾರ್ಣವೇ । ಭ ೪
ತಾಂ ಕಥ್ಯತೇ ಸತ್ಯಂ ವಿಷ್ಣು ರೇಕಃ ಪರಾಯಣಂ ॥ ೭೦ ॥
ವಾ ಜಾನೀತ ವಯಂ ಬಾಲಾ ದೇಹೇ ದೇಹೇಷು ಶಾಶ್ವತಃ ।

ಗಾತ್' ಇತ್ಯಾದಿಯಾಗಿ ಆರಂಭಿಸಿ ಈ ಜೀವನಿಗೆ ಪರಮಾತ್ಮನ ಪಾದಾರವಿಂದಗಳಲ್ಲಿನ ನಿರತಿಶಯವಾದ ಭಕ್ತಿಗಿಂತಲೂ ಬೇರೇ ಸುಖನೇ ಇಲ್ಲವೆಂದು ಶಿವಾಪರಾಧಸ್ತೋತ್ರದಲ್ಲಿ ವಿಶದಪಡಿಸಿರುವರು. ಆದುದರಿಂದ ಈ ಜಗತ್ತೆಲ್ಲವೂ ದುಃಖಮಯವಾಗಿಯೇ ಇರುವುದು. ಇಂತಿರಲು ಮೂಢರು ಮಾತ್ರ ಈ ಜಗತ್ತಿನಲ್ಲಿ ಅನೇಕ ಸುಖಗಳುಂಟೆಂದು ವೇಹಿಸುವರಲ್ಲಾ ! ॥ ೬೯ ॥ ಎಲೈ ದೈತ್ಯ ಪುತ್ರರಿರಾ ! ಆದುದರಿಂದ ಪ್ರವೃತ್ತಿಮಾರ್ಗವೆನಿಸಿದ ಈ ಸಂಸಾರವು ಬಹಳ ದುಃಖಕರವಾದುದು. ಇಂತು ಸಂಕಟಗಳನ್ನೇ ಉಂಟುಮಾಡುವ ಅಪಾರವಾದ ಈ ಸಂಸಾರದಲ್ಲಿ ಸುಖವೆಲ್ಲಿಯದು ? ನಾನು ನಿಮಗೊಂದು ತತ್ವವನ್ನು ಹೇಳುವೆನು. ಇದು ಮಾತ್ರ ಸುಳ್ಳೆಂದು ನೀವು ನಿರಾಕರಿಸಬೇಡಿರಿ. ಇಂತು ಅತ್ಯಂತ ದುಃಖಾಸ್ಪದಭೂತವಾದ ಈ ಸಂಸಾರಸಾಗರದಲ್ಲಿರುವ ಆಕೆ, ಕಾನು, ಕಳತ್ರ, ಪುತ್ರ, ಸೋದರ, ಬಂಧು, ಮಿತ್ರರೆಂಬ ಇವರೆಲ್ಲರೂ ಕೆಲವು ಕಾಲಮಾತ್ರ ಸಮುದ್ರದಲ್ಲಿ ಅಲೆ, ಸುಳಿ, ಬುಡ್ಡಿಗಳಂತೆ ಕಂಡುಬಂದು ಬಡನೆಯೇ ನಾಶಹೊಂದುವರು. ಸತ್ಯಭೂತನಾದವನು ಶ್ರೀವಿಷ್ಣುವು ಒಬ್ಬನಲ್ಲದೆ ಮತ್ತೆ ಯಾರೂ ಇಲ್ಲವು. ಈ ಸಂಸಾರಸಮುದ್ರದಿಂದ ನೀವು ಕಡೆಹಾಯಬೇಕಾದರೆ ನಿಮಿಗೆ ಆತನೊಬ್ಬನೇ ಗತಿ ॥ ೭೦ ॥ "ನಾವು ಇನ್ನೂ ಹುಡುಗರು, ನಾವು ಆತ್ಮವಿಚಾರಕ್ಕೆ ಅಧಿಕಾರಿಗಳಲ್ಲಾ" ಎಂಬದಾಗಿ ಮೋಹಗೊಂಡು ವ್ಯರ್ಥವಾಗಿ ಕಾಲಹರಣಮಾಡಬೇಡಿರಿ. ಪರಿಣಾಮಭೇದದಿಂದ ಬೇರೆಬೇರೆಯಾಗಿರುವ ಹುಡುಗರು, ತರುಣರು, ಮುದುಕರು, ಎಲ್ಲ ಪ್ರಾಣಿಗಳ ದೇಹಗಳಲ್ಲಿಯೂ ಪರಮಾತ್ಮನು ಮಾತ್ರ ಯಾವ ಅವಸ್ಥೆಯನ್ನೂ ಹೊಂದದೆ ಏಕರೂಪನಾಗಿಯೇ ತಿರುವನು. ಆದುದರಿಂದ ಬಾಲ್ಯ, ಯೌವನ, ಮುಪ್ಪು, ಮೊದಲಾದ ಅವಸ್ಥೆಗಳೆಲ್ಲವೂ ನಶ್ವರವಾದ ಈ ದೇಹಕ್ಕೇ ಸಂಭವಿಸುವುವಲ್ಲದೆ ಆ ಪ

ಜರಾ ಯೌವನ ಜನ್ಮಾದ್ಯಾ ಧರ್ಮಾ ದೇಹಸ್ಯ ನಾತ್ಮನಃ ॥೭೧॥
ಬಾಲೋಽಹಂ ತಾವ ದಿಚ್ಛಾಮ್ಯತೋ ಯತಿಷ್ಯೇ ಶ್ರೇಯಸೇ
ಯುವಾ । ಯುವಾಹಂ ವಾರ್ಧಕೇ ಪ್ರಾಪ್ತೇ ಕರಿಷ್ಯಾವ್ಯಾತ್ಮ

ರಮಾತ್ಮನಿಗಲ್ಲಾ. ಆತನು ಜನ್ಮಾದಿಗಳಿಗೆ ಒಳಪಟ್ಟವನಲ್ಲ. ದೇಹಾತ್ಮವಿವೇಕಶೂನ್ಯರೆನಿಸಿ (ನಶ್ವರವಾದ ದೇಹವನ್ನೇ ಆತ್ಮವಸ್ತುವೆಂದು ತಿಳಿದಿರುವ) ವೈರಾಗ್ಯವನ್ನು ಪಡೆಯದಿರುವವರು ಎಷ್ಟು ಮುದುಕರಾದರೂ, ಅವರಿಗೆ ಪರಮಾತ್ಮವಿಚಾರದಲ್ಲಿ ಅಧಿಕಾರವಿಲ್ಲ. "ದೇಹವು ನಶ್ವರವಾದುದು; ಆತ್ಮನು ನಾಶರಹಿತನು; ಆದುದರಿಂದ ತುಚ್ಛವಾದ ಈ ದೇಹವು ಆತ್ಮವಸ್ತುವಲ್ಲ" ಎಂಬುದಾಗಿ ತಿಳಿದು ವೈರಾಗ್ಯವನ್ನು ಪಡೆದಿರುವವರು ಎಷ್ಟು ಚಿಕ್ಕವರಾದರೂ, ಅವರಿಗೆ ಈ ವಿಚಾರದಲ್ಲಿ ಅಧಿಕಾರವುಂಟು. ಇದೇ ಅರ್ಥವನ್ನೇ "ಯದಹರೇವ ವಿರಜೇತ್ತದಹರೇವ ಪ್ರವ್ರಜೇತ್" ಮನುಷ್ಯನು ಈ ಸಂಸಾರದಲ್ಲಿ ಜುಗುಪ್ಸೆಯಂ ಹೊಂದಿದ ಮರುಕ್ಷಣವೇ ವೈರಾಗ್ಯಧನಯುಕ್ತನೆನಿಸಿ ಪರಮಾತ್ಮವಸ್ತುವನ್ನು ಪಡೆಯಲು ಪ್ರಯತ್ನಿಸಬೇಕೆಂಬುದಾಗಿ ಶ್ರುತಿಯೂ ಕೂಡ ಹೇಳುತ್ತಿರುವುದು. ಆದುದರಿಂದ ನೀವು ಹುಡುಗರಾಗಿದ್ದರೂ ಕೂಡ ಈ ವಿಷಯದಲ್ಲಿ ಅನಧಿಕಾರಿಗಳೆಂದು ತಿಳಿದು, ನನ್ನ ಮಾತನ್ನು ಅಲಕ್ಷಿಸಬೇಡಿರಿ ॥ ೭೧ ॥ ಬಂದು ವೇಳೆ ಈ ಸಂಸಾರದಲ್ಲಿರುವ ದೋಷಗಳನ್ನು ತಿಳಿದು ಸ್ವಲ್ಪಮಟ್ಟಿಗೆ ವಿವೇಕವನ್ನು ಪಡೆದವರೂ ಕೂಡ ಶ್ರೇಯಸ್ಸಂಪಾದನೆಗಾಗಿ ತಕ್ಕ ಕಾಲವನ್ನು ನಿರೀಕ್ಷಿಸುತ್ತಲೇ ತಮ್ಮ ಕಾಲವನ್ನೆಲ್ಲಾ ವ್ಯರ್ಥವಾಗಿ ನೀಗಿಕೊಳ್ಳುವರು. ಅದೆಂತೆಂದರೆ—"ನಾನು ಇನ್ನೂ ಹುಡುಗನು, ಈಗ ಸ್ವೇಚ್ಛೆಯಾಗಿರುವೆನು. ಯೌವನವು ಬರುತ್ತಲೇ ಶ್ರೇಯಸ್ಸಂಪಾದನೆಗಾಗಿ ಯತ್ನಮಾಡುವೆನು" ಎಂಬುದಾಗಿ ಬಾಲ್ಯದಲ್ಲಿ ಆಟಪಾಟಗಳ ಮೇಲೆ ಅಭಿಲಾಷೆಯಿಂದಲೂ, ಬಳಿಕ ತಾರುಣ್ಯವಂ ಹೊಂದಿದಮೇಲೆ ಈಗೇನು ಇದಕ್ಕೆ ಅವಸರ? ಈಗ ನಾನಿನ್ನೂ ಪ್ರಾಯದವನು. ಮುದಿತನದಲ್ಲಿ ಮಾಡತಕ್ಕ ಕಾರ್ಯಗಳನ್ನು ಈಗಲೇ ಏಕೆ ಮಾಡಬೇಕು? ಸ್ವಚ್ಛಂದನವನಿತಾದಿ ವಿಷಯಗಳನ್ನು ಯಥೇಚ್ಛವಾಗಿ ಅನುಭವಿಸುವುದಕ್ಕೆ ಯೋಗ್ಯವಾದ ಈ ಕಾಲದಲ್ಲಿ ಶ್ರೇಯಸ್ಸಂಪಾದನೆಗಾಗಿ ಶ್ರಮಪಡ

ನೋ ಹಿತಂ ॥ ೭೨ ॥ ವೃದ್ಧೋಽಹಂ ಮಮ ಕಾರ್ಯಾಣಿ ಸಮ
ಸ್ಥಾನಿ ನಗೋಚರೇ । ಕಿಂ ಕರಿಷ್ಯಾಮಿ ಮಂದಾತ್ಮಾ ? ಸಮ
ರ್ಥೇನ ನ ಯುಕ್ತಕೃತಂ ॥ ೭೩ ॥ ಏವಂ ದುರಾಕಯಾ ಹ್ಲಿಷ್ಟ

ಬೇಕೆ ? ಮುಪ್ಪಿನಲ್ಲಿ ಮಾಡುವ ಕೆಲಸವೇನು? ಆಗ ಇಂದ್ರಿಯಗಳೆಲ್ಲವೂ ಸ್ತಿಮಿತಕ್ಕೆ ಬಂದಿರುವುವು. ಈಗಲೇ ಇದಕ್ಕೆ ನಾವು ಪ್ರಯತ್ನಿಸಿದರೂ ಬಹಳ ಶ್ರಮಪಡಬೇಕು. ಇರಲಿ ನೋಡುವ, ಎಂಬುದಾಗಿ ಯೌವನದಲ್ಲಿಯೂ, ಕಾಲನಿರೀಕ್ಷಣೆಯಿಂದಲೇ ವ್ಯರ್ಥವಾಗಿ ಕಾಲವನ್ನು ಕಳೆಯುವನು ॥೭೨॥ ಇಂತು ಬಾಲ್ಯ, ಯೌವನಗಳೆರಡೂ ಕಳೆದು ಇವನು ವಾರ್ಧಕವನ್ನು ಹೊಂದಿದ ಬಳಿಕಲಾದರೋ, ಅಯ್ಯೋ ! ನಾನು ಮುದುಕನಾಗಿ ಹೋದೆನಲ್ಲಾ ಈಗ ಯಾವ ಕಾರ್ಯವನ್ನು ಮಾಡುವುದಕ್ಕೂ ನನಿಗೆ ಶಕ್ತಿಯೇ ಇಲ್ಲ. ಇಂದ್ರಿಯಗಳೆಲ್ಲವೂ ಕುಂಠಿತಗಳಾದುವು. ಅವಯವಗಳೆಲ್ಲವೂ ಶೈಥಿಲ್ಯವಂ ಪಡೆದು ಹೋದವಲ್ಲಾ ! ಇಂತಹ ಅವಸ್ಥೆಯಲ್ಲಿ ಏನು ಮಾಡುವುದಕ್ಕೂ ಸಾಧ್ಯವಿಲ್ಲವಲ್ಲಾ. ಕಣ್ಣು ಕಾಣದು, ಕಿವಿಕೇಳದು, ಕೈಕಾಲುಗಳು ನಡುಗುವವು. ನಾನು ಎಲ್ಲಿಗೂ ಇಲ್ಲದೆ ವ್ಯರ್ಥವಾಗಿ ನನ್ನ ಕಾಲವನ್ನೆಲ್ಲಾ, ಈ ಸಂಸಾರದಲ್ಲಿಯೇ ಕಳೆದು ಬಿಟ್ಟೆ ! ಮುಂದೇನಾಗತಿ ? ಕೈಕಾಲುಗಳು ಗಟ್ಟಿಯಾಗಿದ್ದಕಾಲದಲ್ಲಿ ನಾನೊಂದು ಪುಣ್ಯಕಾರ್ಯವನ್ನೂ ಮಾಡದೆ ಶ್ರೇಯಸ್ಸಂಪಾದನೆಗಾಗಿಯೂ ಪ್ರಯತ್ನಿಸದೆ, ನನ್ನ ಆಯುಸ್ಸನ್ನೆಲ್ಲಾ ವ್ಯರ್ಥವಾಗಿ ಕಳೆದು ನಾನಾಗಿಯೇ ಆತ್ಮಹತ್ಯೆಮಾಡಿಕೊಂಡೆನಲ್ಲಾ, ಎಂಬುದಾಗಿ ಹಂಬಲಿಸುತ್ತಾ ಕೊನೆಗೆ ಕಾಲಧರ್ಮವನ್ನೈದಿ ನರಕಕ್ಕೆ ತೆರಳುವನು. ಇಂತಿರಲು ಇವನು ಆತ್ಮವಿಚಾರವನ್ನು ಮಾಡುವ ಕಾಲವಾವುದು? ಅದನ್ನು ನನಿಗೆ ತಿಳಿಸಿರಿ ಓ ದೈತ್ಯಕುಮಾರರಿರಾ, ಆದುದರಿಂದ ನಾಳೆ, ನಾಡಿದ್ದು, ಎಂಬದಾಗಿ ಕಾಲನಿರೀಕ್ಷಣೆಯಂ ಮಾಡಿ, ಆಯುಸ್ಸನ್ನು ಕಳೆಯಬೇಡಿರಿ. ನನ್ನ ಮಾತನ್ನು ಚೆನ್ನಾಗಿ ಲಾಲಿಸಿರಿ. ಎಂಬದಾಗಿ ಪ್ರಹ್ಲಾದನು ಬೋಧಿಸಿದನೆಂದು ಭಾವವು) ॥ ೭೩ ॥ಇತು ಮೂಢನಾದವನು ಅನುದಿನವೂ ವಿಷಯಾಸಕ್ತಿಯಿಂದೊಡಗೂಡಿ ಆ ವಿಷಯಾನುಭವದಿಂದಲೇ ತನ್ನ ಆಯುಸ್ಸನ್ನು ವ್ಯರ್ಥವಾಗಿ ಕಳೆಯುತ್ತಾ ಸರ್ವಕಾಲವೂ ಭೋಗಾನುಭವ

ಮಾನಸಃ ಪುರುಷ ಸ್ಸದಾ । ಶ್ರೇಯಸೋಽಭಿಮುಖಂ ಯಾತಿ ನ
ಕದಾಚಿ ತ್ಪಾಪಿತಃ ॥ ೭೪ ॥ ಬಾಲ್ಯೇ ಕ್ರೀಡನ ಕಾಸಕ್ತಾ
ಯೌವನೇ ವಿಷಯೋನ್ಮುಖಾಃ । ಅಜ್ಞಾ ನಯಂತ್ಯ ಶಕ್ತ್ಯಾ ಚ

ದಲ್ಲಿಯೇ ಆಸಕ್ತನೆನಿಸಿ ಬಂದೊಂದಾಗಿ ಎಲ್ಲ ಕೋರಿಕೆಗಳನೂ ಈಡೇರಿಸಿಕೊಂಡು ಅವುಗಳನ್ನು ಅನುಭವಿಸುವುದರಲ್ಲಿಬದ್ಧಾದರನೆನಿಸಿ ತನ್ನಕಾಲವನ್ನು ನೀಗಿಕೊಳ್ಳುವುದಲ್ಲದೆ ಶ್ರೇಯಸ್ಸಿಗಾಗಿ ಬಂದುಕ್ಷಣಕಾಲವೂ ಪ್ರಯತ್ನಪಡುವುದಿಲ್ಲ. ಈವಿಷಯದಲ್ಲಿ ನಿನಗೊಂದು ನಿದರ್ಶನವನ್ನು ತೋರುವೆನು ಕೇಳಿರಿ. ಒಬ್ಬ ಅಗಸನು ಬಟ್ಟೆಯನ್ನೊಗೆಯುವುದಕ್ಕಾಗಿ ಗಂಗಾನದಿಯನ್ನು ಹೊಂದಿ ತನಗೆ ಬಹಳವಾಗಿ ಬಾಯಾರಿಕೆಯಾದರೂ ಈ ಬಟ್ಟೆಯನ್ನೊಗೆದು ನೀರು ಕುಡಿಯುವೆನು. ಎಂಬದಾಗಿ ಯೋಚಿಸಿ, ಅದಾದ ಬಳಿಕ ಇನ್ನೊಂದು, ತರುವಾಯ ಮತ್ತೊಂದು, ಎಂಬದಾಗಿ ಎಲ್ಲ ಬಟ್ಟೆಗಳನೂ ಒಗೆಯುವವರೆಗೂ ನೀರನ್ನೇ ಕುಡಿಯದೆ ಕೊನೆಗೆ ಸಾಯುವನು. ಅಂತೆಯೇ ಒಬ್ಬ ಬೆಸ್ತನು ಮೀನು ಹಿಡಿಯುವುದಕ್ಕಾಗಿ ಅದೇ ಗಂಗಾನದಿಯಲ್ಲಿಯೇ ಗಾಳವನ್ನು ಬೀಸಿ, ಮೀನು ಹಿಡಿಯುತಿದ್ದು ಬಾಯಾರಿದಾಗ ನೀರು ಕುಡಿಯದೆ ಈ ಮೀನನ್ನು ಹಿಡಿದು ಬುಟ್ಟಿಗೆ ಹಾಕಿ, ತರುವಾಯ ನೀರುಕುಡಿಯುವೆನು., ಇದಾದ ಬಳಿಕ ಮತ್ತೊಂದು ಈ ಪರಿಯಾಗಿಯೇ ತನ್ನಬುಟ್ಟಿಯೆಲ್ಲಾ ತುಂಬಿದರೂ ತಾನು ನೀರುಕುಡಿಯದೆಯೇ ಪ್ರಾಣಬಿಡುವನು. ಅಂತೆಯೇ ಮೂಢನು ಈ ಲೋಕದಲ್ಲಿ ಸಕಲಪುರುಷಾರ್ಥ ಸಾಧನಭೂತವಾದ ಇಂತಹನರಜನ್ಮವಂ ಹೊಂದಿದ್ದರೂ ವಿಷಯಾನುಭವದಲ್ಲಿ ತನಗುಂಟಾಗಿರುವ ದುರಾಶೆಯೆಂಬ ವಿದಾಹದಿಂದೊಡಗೂಡಿ, ಯಾವದೊಂದುವಿಧದಲ್ಲಿಯೂ ತನಗೆ ಮೇಲ್ಮೆಯನ್ನುಂಟು ಮಾಡಿಕೊಳ್ಳದೆ ಹಿಂದೆಳೆದ ಅಗಸ ಮತ್ತು ಬೆಸ್ತರವನಂತೆಸತ್ತು ನರಕಕ್ಕೆಗುರಿಯಾಗುವನು. (ಅದುದರಿಂದ ಅಲಭ್ಯವಾದ ನರಜನ್ಮವಂ ವ್ಯರ್ಥಗೊಳಿಸಬೇಡಿರಿ ಎಂಬದಾಗಿ ಭಾವವು.) ॥೭೪॥

ಮೂಢರು ಪಶುವಂತೆ ತಮ್ಮ ಆಯುಸ್ಸನ್ನು ವ್ಯರ್ಥವಾಗಿ ಕಳೆಯುವರು. ಬಾಲ್ಯದಲ್ಲಿ ಬೊಂಬೆಯಾಟ, ಮೊದಲಾದ ವ್ಯಾಪಾರಗಳಿಂದ ಕಾಲ ಕಳೆಯುವರು. ತಾರುಣ್ಯದಲ್ಲಿ ಸ್ರಕ್, ಚಂದನ, ವನಿತಾದಿ

ವಾರ್ಧಕಂ ಸಮುಪಸ್ಥಿತಂ ॥ ೩೫ ॥ ತಸ್ಮಾ ದ್ಬಾಲ್ಯೇ ವಿವೇ
ಕಾತ್ಮಾ ಯತೇತ ಶ್ರೇಯಸೇ ಸದಾ । ಬಾಲ್ಯ ಯೌವನ ವೃದ್ಧಾ
ದ್ಯೈ ರ್ದೇಹಭಾವೈ ರಸಂಯತಃ ॥ ೩೬ ॥ ತದೇತ ದ್ವೋ
ಮಯಾಽಽಖ್ಯಾತಂ ಯದಿ ಜಾನೀತ ನಾನೃತಂ । ತದಸ್ಮ ತ್ಪ್ರೀ

(ಉತ್ತಮವಾದ ಪೂವಮಾಲೆ, ದಿವ್ಯಪರಿಮಳಯುಕ್ತವಾದ ಚಂದನ, ಸುಂ
ದರಿಯಾದ ಹೆಂಗಸು) ಗಳೆಂಬ ವಿಷಯಗಳಲ್ಲಿ ತಮ್ಮ ಮನಸ್ಸನ್ನು ನೆಲೆ
ಸಿ, ಆದರಿಂದ ಕಾಲಕಳೆಯುವರು. ಮುಪ್ಪುಬಂದೊದಗಿದಾಗ ದೇಹ
ಪಾಟವವಿಲ್ಲದಿರುವಿಕೆಯಿಂದಲೂ, ಇತರ ವಿಧಗಳಾದ ಯೋಚನೆಗಳಿಂದ
ಲೂ, ಕಾಲವನ್ನು ಕಳೆಯುವರು ಅಲ್ಲದೆ ಬಂದು ನಿಮಿಷವಾದರೂ
ಆತ್ಮವಿಚಾರಮಾಡುವುದಿಲ್ಲವೆಂದು ಭಾವವು ॥ ೩೫ ॥ ಆದುದರಿಂದ
ವಿವೇಕಿಯಾದವನು ಬಾಲ್ಯ,ಯೌವನ, ವಾರ್ಧಕಗಳೆಂಬ ಅವಸ್ಥೆಗಳನ್ನು
ಪರಿಗಣಿಸದೆ, ಬಾಲ್ಯದಲ್ಲಿಯೇ ಶ್ರೇಯಸ್ಸಂಪಾದನೆಗಾಗಿ ಬಲವತ್ತರವಾದ
ಪ್ರಯತ್ನವುಂ ಮಾಡಬೇಕು. ಶ್ರೇಯಸ್ಸಂಪಾದನಾ ವಿಷಯದಲ್ಲಿ ಕಾ
ಲವಿಳಂಬನವನ್ನು ಮಾಡಬಾರದು. 'ಶುಭಸ್ಯಶೀಘ್ರಂ, ಅಲಸ್ಯಮಮೃ
ತಂವಿಷಂ" ಎಂಬ ಲೋಕೋಕ್ತಿಯೂ ಕೂಡ,-ಯಾವುದೊಂದು ಒಳ್ಳೆ
ಯಕಾರ್ಯವನ್ನು ಮಾಡಬೇಕಾದರೂ ಬೇಗನೆಯೇ ಮಾಡಬೇಕು. ಸಾ
ವಕಾಶವಾಡಿದರೆ ಅಮೃತವೂ ಕೂಡ ವಿಷರೂಪವಾಗಿ ಪರಿಣಮಿಸುವು
ದು, ಎಂಬದಾಗಿ ಸಾರುತ್ತಿರುವುದು ಆದುದರಿಂದ ಇಂದು, ನಾಳೆ,
ನಾಡಿದ್ದು ಎಂಬದಾಗಿ ಕಾಲಹರಣ ಮಾಡದೆ ತತ್ ಕ್ಷಣವೇ ಒಳ್ಳೆ
ಯ ಕಾರ್ಯದಲ್ಲಿ ಪ್ರಯತ್ನಿಸಬೇಕು. ಇಂತಿರಲು ತನ್ನನ್ನು ತಾನು
ಉದ್ಧರಿಸಿಕೊಳ್ಳುವುದಕ್ಕಿಂತಲೂ ಒಳ್ಳೆಯಕಾರ್ಯವುಂಟೆ ? ಆದುದರಿಂದ
ನೀವೆಲ್ಲರೂ ನನ್ನ ಮಾತಿನಂತೆ ಈಗಲೇ ಜ್ಞಾನ ಸಂಪಾದನೆಗಾಗಿ ಪ್ರಯ
ತ್ನಿಸಿರೆಂದು ಭಾವವು ॥ ೩೬ ॥

ಎಲ್ಲೆ ದೈತ್ಯಪುತ್ರರಿರಾ; ನಾನು ಇದುವರೆಗೂ ನಿಮಗೆ ತಿಳುಹಿಸಿದ ವಿಷ
ಯವೆಲ್ಲವೂ ವಾಸ್ತವವಾದುದು. ಇದನ್ನು ಸುಳ್ಳೆಂದು ಎಂದಿಗೂ ತಿಳಿ
ಯಬೇಡಿರಿ, ನಾನುಹೇಳಬೇಕೆಂದು ಸಂಕಲ್ಪಿಸಿದ್ದ ವಿಷಯವನ್ನೆಲ್ಲಾ ನಿಮು
ಗೆ ಹೇಳಿಯಾಯಿತು, ನಿಮಗೆನೋಇದರಲ್ಲಿ ನಂಬುಗೆಯಿಲ್ಲವೆಂಬಸಂಗತಿ

ತಯೋ ವಿಷ್ಣು ಸ್ಮರ್ಯತಾಂ ಬಂಧಮುಕ್ತಿದಃ॥೭೬॥ ಆಯಾಸ
ಸ್ಮರಣೇ ಕೋಽಸ್ಯ ? ಸ್ಮೃತೋ ಯಚ್ಛತಿ ಶೋಭನಂ।ಪಾಪ
ಕ್ಷಯಂಚ್ಚ ಭವತಿ* ಸ್ಮರತಾಂ ತಮಹರ್ನಿಶಂ ॥೭೮॥ ಸರ್ವ

ಯಾಗ್ನ ನಾನುವೊದಲಿಂದಲೂ ಚನ್ನಾಗಿಬಲ್ಲೆನು. ಆದರೂ ನೀವೆಲ್ಲರೂ ಅನ್ಯಾಯವಾಗಿ ಶ್ರೇಯೋವಿನುಖರಾಗುವಿರೆಂಬ ಕನಿಕರದಿಂದ ಹೇಳಿದೆನು. ನಾನು ಹೇಳಿದುದೆಲ್ಲವೂ ದಿಟನೆಂತಲೂ, ನಂಬತಕ್ಕುದೆಂತಲೂ ನಿಮಗೆ ತೋರಿದಪಕ್ಷದಲ್ಲಿ ಸ್ವಾರಸಿಕವಾಗಿ ನಿಮಗೆ ಭಗವನ್ನಾಮವನ್ನು ಉಚ್ಚರಿಸಲು ಅಭಿಪ್ರಾಯವಿಲ್ಲದಿದ್ದರೂ ನನಗೋಸ್ಕರವಾದರೂ ಒಂದು ಬಾರಿ ಆ ಪರಮಾತ್ಮನ ದಿವ್ಯಮಂಗಳನಾಮವನ್ನು ಸ್ಮರಿಸಿರಿ. ॥ ೭೭ ॥ ನನ್ನಂತೆಯೇ ನೀವೂ ಕೂಡ ಅನುದಿನವೂ ಆ ಭಗವಂತನಲ್ಲಿ ಭಕ್ತಿಯನ್ನಿರಿಸುವುದು ನಿಮಗೆ ತುಂಬಾ ಶ್ರೇಯೋವಹವಾಗಿರುವುದು. ಆತನ ನಾಮೋಚ್ಚಾರಣೆಯಿಂದ ಅನೇಕ ಮಂಗಳಗಳೂ ಉಂಟಾಗುವುವು. ಆತನನ್ನು ಸ್ಮರಿಸುವುದರಿಂದ ನಿಮಗೇನೂ ಕಷ್ಟವಿಲ್ಲ; ಅದರಿಂದ ನಿಮಗೆ ಯಾವ ವಿಧವಾದ ತೊಂದರೆಯೂ ಸಂಭವಿಸಲಾರದು. ಆತನನ್ನು ಸ್ಮರಿಸಿದರೆ ನಮಗೆ ಆತನು ಅವಶ್ಯವಾಗಿಯೂ ಮಂಗಳವನ್ನುಂಟುಮಾಡುವನು ನಾವು ಇದುವರೆಗೂ ಮಾಡಿದ ಪಾಪಕಾರ್ಯಗಳೆಲ್ಲವೂ ತತ್ಕ್ಷಣವೇ ನಶಿಸಿ ಹೋಗುವುವು. ಆದುದರಿಂದ ಪದೇ ಪದೇ ಆತನ ನಾಮವನ್ನು ಉಚ್ಚರಿಸುತಿರಿ ॥ ೭೮ ॥ ನಿಮಗೆ ಪರಮಾತ್ಮನಲ್ಲಿ ಭಕ್ತಿ

---

* ಶ್ಲೋಕ॥ ನಾರಾಯಣೋನಾಮ ನರೋ ನರಾಣಾಂ ಪ್ರಸಿದ್ಧ ಚೋರಃ ಕಥಿತಃ ಪೃಥಿವ್ಯಾಂ। ಅನೇಕ ಜನ್ಮಾರ್ಜಿತ ಪಾಪ ಸಂಚಯಂ ಹರತ್ಯ ಶೇಷಂ ಸ್ಮೃತ ಮಾತ್ರ ಏವ ॥ ಲೋಕದಲ್ಲಿ ಕಳ್ಳರು ಅನೇಕ ವಿಧವಾಗಿ ಇತರರ ಸ್ವತ್ತನ್ನು ಅಪಹರಿಸುತ್ತಾರೆ ಅದರಲ್ಲಿಯೂ ವಿಶೇಷ ನೈಪುಣ್ಯಯುಕ್ತರನೇಕರಿರುವರು. ಆದರೆ ಯಾವ ಕಳ್ಳನೂ ನಾವು ಕಳ್ಳನೆಂದು ಬಾಯಿಂದ ಹೇಳಿದ ಮಾತ್ರದಿಂದಲೇ ನಮ್ಮ ಸರ್ವಸ್ವವನ್ನೂ ಅಪಹರಿಸಲಾರನು. ಆದರೆ ಇಂತಹ ಕಳ್ಳರೆಲ್ಲರಿಗಿಂತಲೂ ಮಿಗಿಲಾದ ಒಬ್ಬ ಕಳ್ಳನಿರುವನು ಆತನ ಹೆಸರು ನಾರಾಯಣನು. ಆತನ ಹೆಸರನ್ನು ನಾವೊಂದಾವರ್ತಿ ಬಾಯಿಂದ ಹೇಳಿದ ಕೂಡಲೇ ನಾವು ಎಷ್ಟೋ ಜನ್ಮಗಳಲ್ಲಿ

ಭೂತ ಸ್ಥತೇ ತಸ್ಮಿ ನ್ಮತಿ ರ್ಮೈತ್ರೀ ದಿವಾನಿಶಂ । ಭವತಾಂ
ಜಾಯತಾ ಮೇವಂ ಸರ್ವಕ್ಲೇಶಾ ಪ್ರಹಾಸ್ಯಥ ॥೬೯॥ ತಾಪ
ತ್ರಯೇಣಾ ಭಿಹತಂ ಯದೈತ ದಖಿಲಂ ಜಗತ್ । ತದಾ ಶೋ

ಯುಂಟಾಗಿ ಆ ಭಕ್ತಿಯು ದೃಢಪಡಬೇಕಾದರೆ ತಾನು ನೋಡುವಪದಾ ರ್ಥ ಸಮುದಾಯದಲ್ಲೆಲ್ಲಾ ವಿಷ್ಣುವೆಂಬ ತಿಳಿವಳಿಕೆಯೇ (ಎಲ್ಲವೂವಿಷ್ಣು ವಿನ ಅಂಶವೆಂಬದಾಗಿ ತಿಳಿಯುವಿಕೆಯೇ) ಮುಖ್ಯಕಾರಣವು. ಅಂತೆಯೇ ಸರ್ವಭೂತ ಗಳಲ್ಲಿಯೂ ದ್ವೇಷಾಸೂಯೆಗಳನ್ನು ತೊರೆದು ಮಿತ್ರಭಾವ ದಿಂದ ಇರುವಿಕೆಯು ಮತ್ತೊಂದು ಕಾರಣವು. ಇಂತು ಈ ಎರಡುವಿಧ ಗಳಲ್ಲಿಯೂ ನೀವು ಪರಮಾತ್ಮನಲ್ಲಿ ಭಕ್ತಿಯನ್ನಿರಿಸಿ ಅನುದಿನವೂ ಭಕ್ತಿ ಯನ್ನು ವೃದ್ಧಿಗೊಳಿಸುತ್ತಾ, ಭೂತದಯೆಯನ್ನು ನಿಮ್ಮಲ್ಲಿ ಸ್ಥಿರಪಡಿಸಿ ಕೊಂಡು ಅನುದಿನವೂ ಆನಂದವನ್ನನುಭವಿಸುತ್ತಾ, ತನ್ಮೂಲಕ ನಿಮ್ಮ ಕಷ್ಟಗಳೆಲ್ಲವಂ ಪರಿಹರಿಸಿಕೊಳ್ಳಿರಿ ॥ ೬೯ ॥ ಈ ಜಗತ್ತೆಲ್ಲವೂ ತಾ ಪತ್ರಯ ವಿಮುಕ್ತವೆನಿಸಿ, ಎಲ್ಲ ಭೂತಗಳೂ ಒಂದೇ ವಿಧವಾಗಿದ್ದರೆ, ಸಮದೃಷ್ಟಿಯಿಂದ ದಯಾರ್ಹಗಳಾದ ಭೂತಗಳಲ್ಲಿ ಯಾವವಿವೇಕಿ

ಸಂಪಾದಿಸಿದ್ದ ನಮ್ಮ ಪಾಪವೆಂಬ ಅಸ್ಮಿಯನ್ನೆಲ್ಲಾ ಒಂದೇಸಾರಿ ಅಪಹರಿಸುವನು. ಇಂತಹ ಚಾತುರ್ಯವು ಮಂತ್ರಾರಿಗೂ ಇಲ್ಲವಾದ ಕಾರಣ ಇವನೊಬ್ಬ ವಿಚಿತ್ರಕಳ್ಳನು. ಕ್ಲೋ॥ ನಾರಾಯಣೇತಿ ಮುಂತ್ರೋಸ್ತಿ ವಾಗಸ್ತಿ ವಕವರ್ತಿನೀ । ತಥಾಪಿ ನರಕೇ ಘೋರೇ ಪತಂತೀ ತ್ಯೇತ ದದ್ಭುತಂ ॥ಜರಾಮರಣ ರೂಪವಾದ ಸಂಸಾರ ಸಾಗರ ದಲ್ಲಿ ಮುಗ್ನರಾದ ಮನುಜರಿಗೆ ತಾರಕವೆನಿಸಿದ 'ನಾರಾಯಣ' ಎಂಬುವ ಮುಂತ್ರವು ಸುಪ್ರಸಿದ್ಧವಾಗಿಲ್ಲವೆ? ಇಂತಹ ಮುಂತ್ರವನ್ನು ಉಚ್ಚರಿಸಲು ದೇವರು ನಮಗೆ ನಾಲ ಗೆಯನ್ನು (ಮಾತನಾಡುವ ಕಕ್ತಿಯನ್ನು) ಕೊಟ್ಟಿಲ್ಲವೆ? ಇದಕ್ಕಾಗಿ ನಾವು ಮತ್ತೊಬ್ಬರ ಅನುಮತಿಯನ್ನೂ ಸಹ ಪಡೆಯಬೇಕೆ? ಲೋಕಪ್ರಸಿದ್ಧವಾದ 'ನಾರಾಯಣ' ಎಂಬುವ ನರಕ ತಾರಕ ಮುಂತ್ರವೂ, ಆ ಮುಂತ್ರವನ್ನು ಉಚ್ಚರಿಸಲು ನಾಲಗೆಯೂ ನಮ್ಮ ಸ್ವಾಧೀನದಲ್ಲಿಯೇ ಇದ್ದಾಗ್ಯೂ, ಜನಗಳು ಮಾತ್ರ ಆ ಮುಂತ್ರವನ್ನು ಬಾಯಿಯಿಂದ ಉಚ್ಚರಿಸದೆ ಅನ್ಯಾಯವಾಗಿ ನರಕಕ್ಕೆ ಹೋ ಗುವರಲ್ಲಾ! ಇದೊಂದು ಲೆಕ್ಕಾರ್ಯವೇ ಸರಿ.

ಜ್ಞೇಷು ಭೂತೇಷು ದ್ವೇಷಂ ಪ್ರಜಹ್ಯಾಃ ಕರೋತಿ ಕಃ ?
॥ ೮೦ ॥ ಅಥ ಭದ್ರಾಣಿ ಭೂತಾನಿ ಹೀನಶಕ್ತಿ ರಹಂ ಪರಂ ।

ಯು ತಾನೇ ದ್ವೇಷವನ್ನು ತೋರುವನು ? ರಾಗ, ದ್ವೇಷ, ಮದ, ಮಾ ತ್ಸರ್ಯಾದಿಗಳಿಂದೊಡಗೂಡಿ ಅನುದಿನವೂ ಸಂತಾಪಪಡುತ್ತಾ, ಧನ, ವಿದ್ಯೆ, ಸಂಪತ್ತು, ಆಭಿಜಾತ್ಯ, ಯೌವನ, ರೂಪ, ಮೊದಲಾದವುಗಳಿಂದ ವ್ಯರ್ಥವಾಗಿ ಮದವಂ ಹೊಂದಿ, ಇತರ ಪ್ರಾಣಿಗಳಂ ಕಂಡರೆ ದ್ವೇಷಿಸುತ್ತಿರುವ ಕೆಟ್ಟ ಸ್ವಭಾವವುಳ್ಳವರ ವಿಷಯದಲ್ಲಿ ನಾವು ವೈರವಂ ತೋರಿಸದಿರುವುದು ಸಾಧ್ಯವೇ ? ಎಂಬುದಾಗಿ ಸಂದೇಹಪಡಬೇಡಿರಿ. ಈ ಜಗತ್ತಿನಲ್ಲಿರುವ ಪ್ರಾಣಿವರ್ಗವೆಲ್ಲವೂ ದುಃಖದಿಂದ ವಿಮುಕ್ತವೆನಿಸಿ, ಎಲ್ಲವೂ ದಯಾಯುಕ್ತವಾಗಿಯೇ ಇದ್ದರೆ, ಆ ಕಾಲದಲ್ಲಿ ವಿವೇಕಿಯೂದವನು ವ್ಯರ್ಥವಾಗಿ ಇತರ ಭೂತಗಳಲ್ಲಿ ಏತಕ್ಕೆ ದ್ವೇಷವಾಡುವನು ? (ತನ್ನಂತೆಯೇ ಸಕಲ ಭೂತಗಳೂ ಆ ಪರಮಾತ್ಮನ ಕುಟುಂಬಕ್ಕೆ ಸೇರಿ ಆತನ ದಯೆಗೆ ಪಾತ್ರಗಳಾಗಿರುವ ಕಾರಣ ವಿವೇಕಿಯಾದವನು ಇತರ ಪ್ರಾಣಿಗಳನ್ನು ಎಂದೆಂದಿಗೂ ದ್ವೇಷಿಸಲಾರನೆಂದು ಭಾವವು. ತಾಪತ್ರಯಗಳೆಂದರೆ ದುಃಖತ್ರಯಗಳೆಂದರ್ಥ. ದುಃಖವು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬದಾಗಿ ಮೂರು ವಿಧ. ಮುಪ್ಪು, ಸಾವು, ಹಸಿವು, ಬಾಯಾರಿಕೆ, ಮೊದಲಾದವುಗಳಿಂದುಂಟಾಗುವ ವ್ಯಸನಗಳು ಆಧ್ಯಾತ್ಮಿಕಗಳೆನಿಸುವುವು. ಮನಸ್ಸಿನಿಂದಲೇ ಉಂಟಾಗುವ ದುಃಖಗಳಾದಕಾರಣ, ಇವುಗಳಿಗೆ ಆಧ್ಯಾತ್ಮಿಕಗಳೆಂದು ಹೆಸರು. ಮೇಲೆ ಹೇಳಿದ ಮುಪ್ಪು ಮೊದಲಾದುವುಗಳಿಗಾಗಿ ಹೆದರಿ ಮನಸ್ಸಿನಲ್ಲಿ ಸಂಕಟಪಡುವೆವು. ಆದುದರಿಂದ ಇವು ಮನಃಕಾರ್ಯಗಳು. ಕಳ್ಳಕಾಕರು, ಹುಲಿ, ಕರಡಿ, ಮೊದಲಾದ ಘಾತುಕ ಜಂತುಗಳು, ಹಾವು ಮೊದಲಾದ ವಿಷಜಂತುಗಳು, ಶತ್ರು, ಮೊದಲಾದವರಿಂದುಂಟಾಗುವ ಅಪಾಯಗಳು, ಆಧಿಭೌತಿಕಗಳೆನಿಸುವುವು. ಭೂತವಿಶೇಷಗಳಿಂದುಂಟಾಗುವ ಕಾರಣ ಈ ಹೆಸರು ಬಂದಿತು. ಶಿಡಿಲು, ಬೆಂಕಿ, ಮೊದಲಾದುವುಗಳಿಂದುಂಟಾಗುವ ವಿಪತ್ತುಗಳು ಆಧಿದೈವಿಕಗಳೆನಿಸುವವು. ಶಿಡಿಲು ಮೊದಲಾದುವು ದೈವಿಕಗಳಾದುದರಿಂದ ಈ ಹೆಸರು ಬಂದಿತು. ನ್ಯಾಯಶಾಸ್ತ್ರದಲ್ಲಿ

ಮುದಂ ತಥಾಽಪಿಕುರ್ವೀತ ಹಾನಿರ್ದ್ವೇಷ ಫಲಂಯತಃ ॥೮೧॥
ಬದ್ಧ ವೈರಾಣಿ ಭೂತಾನಿ ದ್ವೇಷಂ ಕುರ್ವಂತಿ ಚೇತ್ತದಾ ।

ದುಃಖವನ್ನು ಇಪ್ಪತೊಂದು ವಿಧವಾಗಿ ವಿಭಾಗಿಸಿರುತ್ತಾರೆ. ಈ ಮೇಲೆ ಹೇಳಿದ ದುಃಖತ್ರಯವೂ ಸಂಪೂರ್ಣವಾಗಿ ನಾಶವಾದರೆ ಆಗ್ಗೆ ಇವನು ಮೋಕ್ಷವನ್ನು ಹೊಂದಲು ಯೋಗ್ಯನಾಗುವನು. ಈ ದುಃಖತ್ರಯದ ನಾಶವೇ ಮೋಕ್ಷವೆನಿಸುವುದು. "ಅಥ ತ್ರಿವಿಧ ದುಃಖಾತ್ಯಂತ ನಿವೃತ್ತಿ ರತ್ಯಂತ ಪುರುಷಾರ್ಥಃ' ಎಂಬದಾಗಿ ಗದಾಧರಿಯಲ್ಲಿ ಮುಕ್ತಿವಾದ ಪ್ರಕರಣದಲ್ಲಿಯೂ ಸಹ ಹೇಳಲ್ಪಟ್ಟಿದೆ ॥ ೮೦ ॥ ಯಾವುದೊಂದು ಪ್ರಾಣಿಯಲ್ಲಿಯೂ ನಾವು ಎಂತಹ ಕಾಲದಲ್ಲಿಯೂ ಸ್ವಲ್ಪವೂ ದ್ವೇಷವನ್ನಿರಿಸಬಾರದು. ಏತಕ್ಕೆಂದರೆ; ನಾವು ಇತರ ಪ್ರಾಣಿಗಳನ್ನು ದ್ವೇಷಿಸಿದರೆ ಅದರಿಂದ ನಮಗೆ ಹಾನಿಯುಂಟಾಗುವುದು. 'ಎಲ್ಲ ಭೂತಗಳೂ ನನಗಿಂತಲೂ ಉತ್ತಮಸ್ಥಿತಿಯಲ್ಲಿವೆ. ನಾನೊಬ್ಬನು ಮಾತ್ರ ಧನಹೀನನಾಗಿರುವೆನು. ಅಂತೆಯೇ ಧಾನ್ಯ, ವಿದ್ಯೆ, ಮುಂತಾದುವುಗಳ ಶಕ್ತಿಯೂ ನನಗಿಲ್ಲವು' ಎಂಬದಾಗಿ ತಿಳಿದು ತಾನು ಕೇವಲ ಹೀನಸ್ಥಿತಿಯಲ್ಲಿದ್ದು ಎಲ್ಲ ಭೂತಗಳೂ (ಪ್ರಾಣಿಗಳೂ) ತನಗಿಂತ ಉತ್ತಮಸ್ಥಿಯಲ್ಲಿರುವುದನ್ನು ತಾನು ಕಣ್ಣಾರಕಂಡಿದ್ದರೂ ಕೂಡ ಆ ಭೂತಗಳಿಗೆ ತನ್ನ ಕೈಲಾದವುಟ್ಟಿಗೂ ಉಪಕಾರವನ್ನೇ ಮಾಡಬೇಕಲ್ಲದೆ, ಅಪಕಾರವನ್ನು ಮನಸ್ಸಿನಿಂದಲೂ ಕೂಡ ಯೋಚಿಸಬಾರದು. ಇಂತು ನ್ಯಾಯದಿಂದ ನಡೆಯುವನಿಗೆ ತಾನಾಗಿಯೇ ಎಲ್ಲ ಕಾರ್ಯಗಳೂ ಕೈಗೂಡುವುವು. ನಾವು ಮತ್ತೊಬ್ಬರಿಗೆ ಕೇಡನ್ನು ಹಾರೈಸಿದರೆ ಅದರಿಂದ ನಮಗೆ ಕೇಡುಂಟಾಗುವುದರಲ್ಲಿ ಸಂಶಯವೇ ಇಲ್ಲ, ಆದುದರಿಂದ ಹಾನಿಫಲಕವಾದ ದ್ವೇಷವನ್ನು ಸಂಪೂರ್ಣವಾಗಿ ಪರಿತ್ಯಜಿಸಬೇಕೆಂದು ಭಾವವು ॥ ೮೧ ॥ ಒಂದು ವೇಳೆ ಇತರ ಪ್ರಾಣಿಗಳು ನಿಷ್ಕಾರಣವಾಗಿ ತನ್ನ ಮೇಲೆ ಆಗ್ರಹಗೊಂಡು ವೈರವಂ ಬೆಳೆಸುತ್ತಿದ್ದರೆ, ಆಪ್ರಾಣಿಗಳು, ಕೇವಲ ಮೋಹವಿಶಿಷ್ಟಗಳೆಂಬದಾಗಿ ವಿವೇಕಿಯಾದವನು ತಿಳಿದು, ಅವುಗಳಂತೆಯೇ ತಾನು ಆ ಪ್ರಾಣಿಗಳಮೇಲೆ ವೈರವಂ ಬೆಳೆಸಬಾರದು. 'ನಿಷ್ಕಾರಣವಾಗಿ ನನ್ಮಮೇಲೆ ವೈರವಂ ಬೆಳೆಯಿಸುತಿ

ಕೋಽನ್ಯಾನ್ಯ ಹೋಽತಿ ವೋಹೇನ ವ್ಯಾಪ್ತಾ ನೀತಿ ಮನೀ
ಷಿಣಾ ॥ ೪೨ ॥ ಏತೇ ಭಿನ್ನದೃಶಾಂ ದೈತ್ಯಾ ! ವಿಕಲ್ಪಾಃ ಕ
ಥಿತಾ ಮಯಾ । ಕೃತ್ವಾ ಭ್ಯುಪಗಮಂ ತತ್ರ ಸಂಕ್ಷೇಪ ಶ್ರೂ ।
ಯತಾಂ ಮಮ ॥ ೪೩ ॥ ವಿಸ್ತಾರ ಸ್ಸರ್ವ ಭೂತಸ್ಯ ವಿಷ್ಣೋ
ಸ್ಸರ್ವ ಮಿದಂ ಜಗತ್ । ದ್ರಷ್ಟವ್ಯ ಮಾತ್ಮವತ್ತಸ್ಮಾ ದಭೇ

ರುವ ಪ್ರಾಣಿಗಳಿಗೆ ವಿವೇಕವಿಲ್ಲ. ಹಾಗೊಂದು ವೇಳೆ ಅವುಗಳಿಗೂ ವಿವೇಕವಿದ್ದಪಕ್ಷದಲ್ಲಿ ನಮ್ಮಂತೆಯೇ ಅವೂಕೂಡ ಸರ್ವಸಮವಾಗಿದ್ದು ಕೊಂಡು ಭೂತದಯೆಯನ್ನು ತೋರ್ಪಡಿಸುತಿದ್ದುವು. ವಿವೇಕವಿಲ್ಲದ ಕಾರಣ ಅವುಗಳು - ನ್ಮ ಮೇಲೆ ವೈರವಂಸಾಧಿಸುತ್ತವೆಂದು' ನಾವು ಅವುಗಳ ವಿಷಯದಲ್ಲಿ ಎಂದೆಂದಿಗೂ ವೈರವನ್ನಿಡಬಾರದೆಂದು ಭಾವವು. ॥೪೨॥ ಎಲೈ ದೈತ್ಯರಿರಾ ! ಮಧ್ಯಮಾಧಿಕಾರಿಗಳು ಇತರ ಭೂತಗಳ ವಿಷಯದಲ್ಲಿರಬೇಕಾದ ನಡವಳಿಯನ್ನೂ ದ್ವೇಷವನ್ನು ಪ್ರಕಮ ಮಾಡಿ ಕೊಳ್ಳತಕ್ಕ ಉಪಾಯಗಳನ್ನೂ, ನಾನು ಇದುವರೆಗೂ ನಿಮಿಗೆ ತಿಳಿಸಿದೆನು. ಇನ್ನು ಉತ್ತಮಾಧಿಕಾರಿಗಳ ಸ್ವರೂಪವಂ ತಿಳಿಯಪಡಿಸುವೆನು. ವಾಸ್ತವವಾಗಿ ಪರ್ಯಾಲೋಚಿಸಿದಲ್ಲಿ ಭೇದವೇ ಇಲ್ಲ. ಅಂತಹ ಭೇದವನ್ನೂ ಕೂಡ ಅಂಗೀಕರಿಸಿದ ಪಕ್ಷದಲ್ಲಿ ಈವೇಳೆ ಹೇಳಿದ ಉಪಾಯಗಳಿಂದ ಇತರ ಭೂತಗಳ ವಿಷಯದಲ್ಲಿ ನಮಗುಂಟಾಗುವ ವೈರವನ್ನು ಶಮನಮಾಡಿಕೊಂಡು ಆ ಪ್ರಾಣಿಗಳು ನಮ್ಮನ್ನು ದ್ವೇಷಿಸಿದಾಗ್ಲೂ ನಾವು ಅವರನ್ನು ದ್ವೇಷಿಸಲೇ ಬಾರದೆಂಬುದಕ್ಕೆ ತಕ್ಕ ಕಾರಣಗಳನ್ನು ಹೇಳಯಾಯಿತು ॥ ೪೩ ॥ ಚರಾಚರರೂಪದಿಂದ ಕಾಣುವ ಈ ಜಗವೆಲ್ಲವೂ ಸರ್ವಭೂತಾಧಿಪನೂ, ಸರ್ವಾತ್ಮಕನೂ ಎನಿಸಿದ, ವಿಷ್ಣು ವಿನ ಅಂಶಸಂಭೂತವೆನಿಸಿರುವುದು. ಆತನೇ ಈರೇಳು ಲೋಕಗಳನ್ನೂ ತನ್ನ ವಿವರ್ತಗಳಿಂದ ತುಂಬಿರುವನು. ಆದುದರಿಂದ ಎಲ್ಲವೂ ತನ್ಮಯವಾಗಿಯೇ ಇರುವುದು. ಇಂತಿರಲು ದ್ವೇಷವಾಡುವವನಾರು ? ಯಾರಮೇಲೆ ನಾವು ದ್ವೇಷವಂ ಮಾಡಬೇಕು ? ದ್ವೇಷವೆಂದರೇನು ? ಇವುಗಳನ್ನೆಲ್ಲಾ ಚೆನ್ನಾಗಿ ವಿವೇಚನ ಮಾಡಿದಂತಹ ವಿವೇಕಿಗಳು ಇತರ ಭೂತಗಳ ವಿಷದಲ್ಲಿ ಎಂದೆಂದಿಗೂ ದ್ವೇಷವನ್ನು ಮನಸ್ಸಿನಿಂದಲೂ ಕೂಡ ಬಗೆಯಲಾರರೆ

ದೇನ ವಿಚಕ್ಷಣೈಃ ॥ ೪೪ ॥ ಸಮು ತ್ಸೃಜ್ಯಾ ಸುರಂ ಭಾವಂ
ತಸ್ಮಾ ದ್ಧ್ಯೇಯಂ ಯುಥಾ ವಯುಂ। ತಥಾಯತ್ನಂ ಕರಿಷ್ಯಾವೋ
ಯಥಾ ಪಶ್ರಪ್ಸ್ಯಾವು ನಿರ್ವೃತಿಂ ॥ ೪೫ ॥ ನೈ ವಾ ಗ್ನಿನಾ
ನ ಚಾರ್ಕೇಣ ನೇಂದುನಾ ನಚ ವಾಯುನಾ । ಪರ್ಜನ್ಯೇ ವರು
ಣಾಭ್ಯಾಂವಾ ನಸಿದ್ಧೈ ರ್ನಚ ರಾಕ್ಷಸೈಃ ॥ ೪೬ ॥ ನ ಯ
ಕ್ಷೈ ರ್ನಚ ದೈತ್ಯೇಂದ್ರೈ ರ್ನೋರಗೈ ರ್ನಚ ಕಿನ್ನರೈಃ । ನ
ಮನುಷ್ಯೈ ರ್ನ ಪಶುಭಿ ರ್ದೋಷೈ ರ್ನೈವಾತ್ಮ ಸಂಭವೈಃ
॥ ೪೭ ॥ಜ್ವರಾಹ್ಲಿ ರೋಗಾತಿಸಾರ ಪ್ಲೀಹ ಗುಲ್ಮಾದಿ ಕೈಸ್ತಥಾ।

ಕ್ಷು ॥ ೪೪ ॥ ಎಲ್ಲೆ ದೈತ್ಯರಿರಾ;ನಾನು ನಿನುಗೆ ಹಿಂದೆ ಹೇಳಿದ ಈ ಉ
ಪಾಯಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿದರೆ, ನಾವೆಲ್ಲರೂ ಒಬ್ಬ
ಗೊಬ್ಬರು ಅನ್ಯೋನ್ಯವಾಗಿರಬೇಕಲ್ಲದೆ ದ್ವೇಷಿಸಬಾರದೆಂದು ಸಿದ್ಧಿ
ತಲ್ಲವೆ ? ಆದುದರಿಂದ ನೀವು, ನಾನು, ಎಲ್ಲರೂ ಸೇರಿ, ಮೋಕ್ಷವನ್ನು ಸಂ
ಪಾದಿಸಲು ತಕ್ಕ ಪ್ರಯತ್ನವಂ ಮಾಡುವ, ನೀವೆಲ್ಲರೂ ನಿಮ್ಮ ಸಹಜವಾ
ದ ರಾಕ್ಷಸರ ನಡವಳಿಯನ್ನು ದೂರವಾಡಿರಿ. ನಶ್ವರವೆನಿಸಿದ ಈ ಧನ,
ಧಾನ್ಯ, ಪ್ರಭುತ್ವ ಮೊದಲಾದುವನ್ನೇ ಸ್ಥಿರವೆಂದು ನಂಬಿ ವ್ಯರ್ಥವಾಗಿ
ಮೃತ್ಯುವಿನ ಬಾಯಿಗೆ ತುತ್ತಾಗಬೇಡಿರಿ.ಆಮೋಕ್ಷಸಂಪತ್ತನ್ನು ಯಾರೂ
ನಾಶಗೊಳಿಸಲಾರರು. ಅಗ್ನಿ, ಸೂರ್ಯ, ಚಂದ್ರ, ವಾಯು, ಪರ್ಜನ್ಯ
ವರುಣ, ಸಿದ್ಧರು, ರಾಕ್ಷಸರು, ಯಕ್ಷರು, ದೈತ್ಯ ಶ್ರೇಷ್ಠರೆನಿಸಿದ ನ
ಮ್ಮ ತಂದೆ ಮೊದಲಾದವರು, ಸರ್ಪಗಳು, ಕಿನ್ನರರು, ಮನುಷ್ಯರು, ಪ
ಶುಗಳು, ಮೊದಲಾದ ಪ್ರಾಣಿಗಳಾಗಲಿ, ಅಥವಾ ನಾವಾಗಿಯೇ ಮಾಡು
ವ ಕೆಟ್ಟಕೆಲಸಗಳು,ಜ್ವರ, ಕಣ್ಣುನೋವು,ಅತಿಸಾರ, ಪ್ಲೀಹವೆಂಬ ರೋ
ಗವಿಶೇಷ, ಕೆಮ್ಮು, ಉಬ್ಬಸ, ಮೊದಲಾದ ರೋಗಗಳೇ ಆಗಲಿ,ಅಥವಾ
ದ್ವೇಷ, ಹೊಟ್ಟೆಕಿಚ್ಚು, ಮಾತ್ಸರ್ಯ, ಕಾಮ, ಕ್ರೋಧ, ಲೋಭ, ಮೋ
ಹ, ಮೊದಲಾದುವುಗಳೇ ಆಗಲಿ, ನಾಶಗೊಳಿಸಲಾರವು. ಆಂದರೆ—ಮೋ
ಕ್ಷವೆಂಬುದು, ಹಿಂದೆ ಹೇಳಿದ ಅಗ್ನಿ, ಮೊದಲಾದ ಯಾವುದರಿಂದಲೂ
ನಾಶಹೊಂದತಕ್ಕುದಲ್ಲ. ಅದು ನಿತ್ಯವೆನಿಸುವುದು. ಬುದ್ಧಾವರ್ತಿ ಮೋ
ಕ್ಷವನ್ನು ಹೊಂದಿದವನು ಮುಂದೆ ಜನ್ಮಮರಣರೂಪವಾದ ಈ ಸಂಸಾ

ದ್ವೇಷೇಷ್ಯಾ ಮತ್ಸರಾದ್ಯೈ ರ್ವಾ ರಾಗ ಲೋಭಾ ದಿಭಿಃ
ಕ್ಷಯಂ ॥ ೪೪ ॥ ನಚಾನ್ಯೈ ರ್ನೀಯತೇ ಕೈಶ್ಚಿ ನ್ನಿತ್ಯಾ
ಯಾತ್ಯಂತ ನಿರ್ಮಲಾ । ತಾವಾನ್ಮೋಕ್ಷ ಇತ್ಯನುಶೇ ನ್ಯಶ್ಚ ಕೇಶ
ವೇ ಹೃದಯಂ ನರಃ ॥ ೪೫ ॥ ಅಸಾರ ಸಂಸಾರ ವಿನರ್ತನೇ
ಷು ಮಾ ಯಾತ ತೋಷಂ ಪ್ರಭಜಂ ಬ್ರವೀಮಿ । ಸರ್ವತ್ರ ದೈ

ರಕ್ಕೆ ಎಂದೆಂದಿಗೂ ಹಿಂದಿರುಗಲಾರನು, ಇಂತಹ ಮೋಕ್ಷವನ್ನು ಪಡೆಯಬೇಕಾದರೆ, ಮನುಷ್ಯನು ಅನುದಿನವೂ, ರಾಗದ್ವೇಷಾದಿ ವಿಮುಕ್ತನೂ ಜರಾಮರಣಾದಿ ದ್ವಂದ್ವಶೂನ್ಯನೂ, ನಿರ್ಗುಣನೂ ನಿರ್ಲಿಪ್ತನೂ ಎನಿಸಿದ ಪರಮಾತ್ಮನಲ್ಲಿ ತನ್ನ ಮನವನ್ನು ನೆಲೆಗೊಳಿಸಿ, ಆತನ ಅನುಗ್ರಹಕ್ಕೆ ಪಾತ್ರನಾಗಬೇಕು. ಆತನ ಅನುಗ್ರಹವು ಉಂಟಾದರೆ ಮೋಕ್ಷವು ದೊರಕಂತೆಯೇ ಆಯಿತು. (ಮೋಕ್ಷವೆಂಬುದು ಮೂರು ವಿಧದುಃಖನಿವೃತ್ತಿರೂಪವೆಂದು ಹಿಂದೆಯೇ ಹೇಳಿದೆನಷ್ಟೆ. ಅದಕ್ಕನುಸಾರವಾಗಿ, ಇಲ್ಲಿ ಅಗ್ನಿ ಮೊದಲಾದುವುಗಳಿಂದ ಮೋಕ್ಷವು ನಾಶಹೊಂದತಕ್ಕುದಲ್ಲ; ಎಂಬುದಾಗಿ ಹೇಳಿದ ದರಿಂದ ಆಧಿದೈವಿಕ ಕ್ಷಯವನ್ನು ವಾರಣಮಾಡಿದಂತಾಯಿತು. ಮನುಷ್ಯರು, ಪಶುಗಳು, ಎಂಬುದಾಗಿ ಹೇಳಿದುದರಿಂದ ಆಧಿಭೌತಿಕ ಕ್ಷಯವನ್ನು ನಿರಾಕರಿಸಿದಂತಾಯಿತು. ಜ್ವರಾದಿಗಳಿಂದ ಮೋಕ್ಷಕ್ಕೆ ಹಾನಿಇಲ್ಲವೆಂಬುದರಿಂದ ಶಾರೀರಗಳೆಂಬ ಆಧ್ಯಾತ್ಮಿಕದುಃಖವು ವಾರಿತವಾಯಿತು. ದ್ವೇಷಾಸೂಯಾದಿಗಳಿಂದ ಮೋಕ್ಷವು ನಾಶವಾಗುವುದಿಲ್ಲವೆಂದು ಹೇಳಿದುದರಿಂದ ಮಾನಸಿಕಾಧ್ಯಾತ್ಮದುಃಖಗಳಿಂದ ವಾರಣವಾಡಿದಂತಾಯಿತು. ಇನ್ನೂ ಇತರ ಕೆಲವು ದೋಷಗಳಿಂದ ಮೋಕ್ಷಕ್ಕೆ ಹಾನಿಇಲ್ಲವೆಂಬದಾಗಿ ಹೇಳುವುದರಿಂದ ರಾಗದ್ವೇಷಾಸೂಯಾದಿಗಳಿಗೆ ಮೂಲಭೂತವಾದ ಅವಿದ್ಯೆ ಎನಿಸುವ ಕರ್ಮಾದಿಗಳೂ ಕೂಡ ಹೇಳಲ್ಪಟ್ಟವು. ಅಂತೂ ಮೋಕ್ಷವು ನಿತ್ಯವೆಂತಲೂ, ಅಬಾಧಿತವೆಂತಲೂ, ಹೇಳಿದಂತಾಯಿತು ॥ ೪೩--೪೬--೪೭--೪೮ ॥

(ಪರಮಭಾಗವತನೆನಿಸಿದ ಪ್ರಹ್ಲಾದನು ಮುಖ್ಯಸಾರಾಂಶವನ್ನು ತನ್ನಜಾತಿಗಾರರಿಗೆ ಉಪದೇಶಿಸುತ್ತಾನೆ,) ಎಲೈ ದೈತ್ಯರಿರಾ, ಈ ಸಂಸಾರವು ನಿಸ್ಸಾರವಾದುದು. ಇದರಲ್ಲಿರುವ ದೇವತೆಗಳು, ಮನುಷ್ಯರು, ತಿ

ತ್ಯಾ ! ಸ್ವಮತಾ ಮುಪೈತ ಸಮತ್ವ ಮಾರಾಧನ ಮಚ್ಯುತಸ್ಯ
॥ ೯೦ ॥ ತಸ್ಮಿನ್ ಪ್ರಸನ್ನೇ ಕಿಮಿಹಾ ಸ್ತ್ಯಲಭ್ಯಂ ? ಧರ್ಮಾ
ರ್ಥ ಕಾಮೈ ರಲ ಮುಲ್ಬಣಾಸ್ತೇ ! ಸಮಾಶ್ರಿತಾ ದ ೨ಹ್ಮ ತ

ರಜ್ಜುಂತುಗಳು ಇವೇವೊದಲಾದ ಆ ಪರಮಾತ್ಮನ ವಿವರ್ತಗಳೆನಿಸಿದ ಜನ್ಮಗಳಲ್ಲಿ,ಆ ಆ ಜನ್ಮಾನುಗುಣವಾದ ಭೋಗದಲ್ಲಿಯೇ ನಿರಂತರವೂ ಆ ಸಕ್ತಿಯನ್ನಿರಿಸಿ ನಿಮ್ಮ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಾ ಸಂತೋಷಪಡಬೇಡಿರಿ. ಇವೆಲ್ಲವೂ ಮಾಯಾಕಲ್ಪಿತಗಳಾದುದರಿಂದ ಇವುಗಳಿಂದ ನಿಮ್ಮ ಶ್ರೇಯಸ್ಸು ನಷ್ಟವಾಗುವುದು; ನಾನು ನಿಮಗೆ ಹೇಳುತ್ತಿರುವ ಈ ನನ್ನ ಮಾತನ್ನು ಉಪೇಕ್ಷಿಸದೆ ದಿಟವೆಂದು ತಿಳಿಯಿರಿ; ಎಲ್ಲಭೂತಗಳಲ್ಲಿಯೂ ಸಮರಾಗಿದ್ದುಕೊಂಡು ಇತರಭೂತಗಳಿಗೆ ನಿಮ್ಮಿಂದ ಮನೋವ್ಯಥೆಯುಂಟಾಗದಂತೆ ಸಾಧ್ಯವಾದ ಮಟ್ಟಿಗೂ ಬಳಿಯ ಕೆಲಸಗಳನ್ನೇ ಮಾಡುವವರಾಗಿರಿ. ಇದೇ ಭಗವಂತನ ಆರಾಧನವು. ಇದರಿಂದ ಪರಮಾತ್ಮನು ಪ್ರಸನ್ನನಾಗಿ ನಿಮಗೆ ಬಂಧವನ್ನು ತಪ್ಪಿಸಿ, ಮೋಕ್ಷವನ್ನು ದಯಪಾಲಿಸಿ, ನಿಮ್ಮೆಲ್ಲರನ್ನೂ ತನ್ನ ಅಡಿದಾವರೆಗಳಲ್ಲಿ ಸೇರಿಸಿಕೊಳ್ಳುವನು. ಆದುದರಿಂದ ಅಸಾರಗಳೆನಿಸಿದ ಸಾಂಸಾರಿಕ ಸುಖಗಳಲ್ಲಿ ಮನಸ್ಸನ್ನಿರಿಸದೆ ಅನುದಿನವೂ ಆತನನ್ನೇ ಭಜನವಾಡಿ ಆತನ ಅನುಗ್ರಹವಂ ಸಂಪಾದಿಸಿರಿ ॥೯೦॥

ಅನಂತಕಲ್ಯಾಣಗುಣ ಪರಿಪೂರ್ಣನೆನಿಸಿದ ಪರಮಾತ್ಮನೊಬ್ಬನು ನಿಮ್ಮ ಸದ್ವರ್ತನದಿಂದ ಪ್ರಸನ್ನನಾದೊಡೆ ನಿಮಗೆಯಾವುದು ತಾನೇದುರ್ಲಭವಾಗುವುದು? ನೀವುಕೋರಿದ ಕೋರಿಕೆಗಳನ್ನೆಲ್ಲಾ ಆತನು ಈಡೇರಿಸಲು ಬದ್ಧ ಕಂಕಣನಾಗಿರುವನು. ಬಂದುನೇಳೆ ಆತನು ನಿಮಿಗೆ ಪ್ರಸನ್ನನಾದೊಡೆ ಆಕಾಲದಲ್ಲಿ ನೀವು ಮೋಹಗೊಂಡು ಧರ್ಮಾರ್ಥ ಕಾಮುಗಳೆಂಬ (ತ್ರಿವರ್ಗ) ಪುರುಷಾರ್ಥಗಳನ್ನು ದಿಟವಾಗಿಯೂ ಬಯಿಸಬೇಡಿರಿ. ಈ ಧರ್ಮಾರ್ಥ ಕಾಮುಗಳಿಂದುಂಟಾಗುವ ಸುಖವು ತುಚ್ಛವಾದುದು. ಶಾಶ್ವತವಲ್ಲವು; ಈ ಧರ್ಮಾರ್ಥಕಾಮುಗಳನ್ನು ಸೇವಿಸುವುದರಿಂದ ನಿಮಗೆ ಬಾರಿಬಾರಿಗೂ ಜನ್ಮಮರಣಗಳೇ ಮೊದಲಾದ ದ್ವಂದ್ವಗಳು ತಪ್ಪಿದುವಲ್ಲ. ಆದುದರಿಂದ ಅವುಗಳನ್ನು ದಿಟವಾಗಿಯೂ ಅಪೇಕ್ಷಿ

ರೋ ರನಂತಾ ನ್ನಿಸ್ಸಂಶಯೋ ಮುಕ್ತಿಫಲ ಪ್ರಪಾತಃ ॥ ೯೧ ॥
ಇತಿಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಸಪ್ತದಶೋಧ್ಯಾಯಃ.

ಸಬೇಡಿರಿ. ವೋಕ್ಷವನ್ನೂ ಕೂಡ ನೀವು ಕೋರಬೇಕಾಗಿಲ್ಲ. ಮಾಗಿದ ಹಂಣುಗಳಿಂದ ಭೂಮಿಗೆ ಬಗಿ್ರುವ ಮಾವಿನ ಗಿಡದ ಕೆಳಗಡೆ ಹೋಗಿ ಸ್ವಲ್ಪಕಾಲ ಕುಳಿತಿದ್ದರೆ, ನಾವು ಅಪೇಕ್ಷಿಸದಿದ್ದರೂ ಕೂಡ ತಾನಾಗಿಯೇ ಫಲವು ಗಿಡವಿಂದ ಎಂತು ಉದುರಿ ನಮ್ಮ ಹತ್ತಿರಲೇ ಬೀಳುವುದೋ ಅಂತೆಯೇ ನಾಶರಹಿತವಾದ ಬ್ರಹ್ಮವಸ್ತುವೆಂಬ ಮರವನ್ನು ನಾವು ಆಶ್ರಯಿಸಿ, ಅಲ್ಲಿಯೇ ಮೌನದಿಂದಿದ್ದರೆ ಮುಕ್ತಿಯೆಂಬ ಫಲವು ತಾನಾಗಿಯೇ ಅವಶ್ಯವಾಗಿಯೂ ದೊರೆಯುವುದು. ಇದಕ್ಕಾಗಿ ನಾವೇಕೆ ಕ್ರಮಪಡಬೇಕು?ಎಂಬದಾಗಿ ಪ್ರಹ್ಲಾದನು ಗುರುಕುಲದಲ್ಲಿ ದೈತ್ಯರಿಗೆ ಉಪದೇಶಿಸುತ್ತಿದ್ದನೆಂಬದಾಗಿ ಪರಾಶರನು ಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ

ಶ್ರೀವಿಷ್ಣುಪುರಾಣದ ಒಂದನೆಯ ಅಂಶದೊಳ್
ಹದಿನೇಳನೆಯ ಅಧ್ಯಾಯಂ ಸಮಾಪ್ತಂ
ಸಪ್ತದಶಾಧ್ಯಾಯಂ ಸಮಾಪ್ತಂ

ಶ್ರೀ.

ವಿಷ್ಣು ಪುರಾಣ

ಅಷ್ಟಾದಶೋಧ್ಯಾಯಃ.

ಶ್ರೀ ಪರಾಶರಃ ॥ ತಸ್ಯೈವಂ ದಾನವಾಶ್ಚೇಷ್ಟಾಂ ದೃಷ್ಟ್ವಾ ದೈತ್ಯಾಧಿಪೋ ಹರಿಃ । ತ್ರಾಸಮೇಕಾರ್ಣವಾತ್ । ಆಜಜಞ್ಞೇ ಸ್ವಹೋ ವಾಚ ಸೂದಾ ನಾ ಹೂಯ ಸರ್ವತಃ ॥ ೧ ॥ ಹಿರಣ್ಯಕಶಿಪುಃ॥ ಹೇ ಸೂದಾ! ಮ ಮಾಯಂ ಪುತ್ರೋಽಸಾ ವನ್ಯೇಷಾ ಮಪಿ ದುರ್ಮತಿಃ । ಕುಮಾರ್ಗ ದೇಶಿಕೋ ದುಷ್ಟೋ ಹನ್ಯತಾ ಮವಿಲಂಬಿತಂ॥ ೨ ॥ ಹಾಲಾ ಹಲಂ ವಿಷಂ ಚಾಸ್ಯ ಸರ್ವಭಕ್ಷ್ಯೇಷು ದೀಯತಾಂ । ಅವಿಜ್ಞಾತ

ಪರಾಶರನು ಹೇಳುತ್ತಾನೆ-ಇಂತು ಪ್ರಹ್ಲಾದನು ಉಪದೇಶಿಸಿದು ದನ್ನೆಲ್ಲಾ ಕೇಳಿ ಆ ದಾನವರೆಲ್ಲರೂ, ದೈತ್ಯಾಧಿಪನೆನಿಸಿದ ಹಿರಣ್ಯಕಶಿಪು ವಿನ ಭಯದಿಂದ ಆತನ ಬಳಿಸಾರ್ದು, ಪ್ರಹ್ಲಾದನ ಉಪದೇಶರೂಪವಾ ದ ಚೇಷ್ಟೆಯನ್ನೆಲ್ಲಾ ಆತನಿಗೆ ಬಿನ್ನವಿಸಿದರು. ತರುವಾಯ ಹಿರಣ್ಯಕ ಶಿಪುವು ಪಾಚಕರಂ ಕರೆಕಳುಹಿಸಿ ಅವರೊಂದಿಗೆ ಈ ರೀತಿ ಹೇಳತೊಡ ಗಿದನು ॥ ೧ ॥ ಹಿರಣ್ಯಕಶಿಪುವು ಹೇಳುತ್ತಾನೆ—ಎಲೈ ಪಾಚಕರಿರಾ; ನನ್ನ ಮಗನೆನಿಸಿದ ಈ ದುರ್ಬುದ್ಧಿಯು ತನ್ನ ಸಂಗಡ ಸೇರಿದವರಿಗೆಲ್ಲಾ ದುರ್ಬುದ್ಧಿಯಂ ಕಲಿಸುತ್ತಾ ತನ್ನಂತೆಯೇ ಅವರನ್ನೂ ದುರ್ಮಾರ್ಗಕ್ಕೆ ಸೆಳೆಯಲುಪಕ್ರಮಿಸಿ ದುಷ್ಟರಿಗೆಲ್ಲಾ ಅಗ್ರೇಸರನೆನಿಸಿರುವನು. ಆದು ದರಿಂದ ದುಷ್ಟನಾದ ಇವನನ್ನು ಕೊಲ್ಲಿರಿ. ಇವನನ್ನು ಕೊಲ್ಲುವುದರಿಂ ದ ನಿಮಗೆ ಯಾವ ಪಾತಕವೂ ಸಂಭವಿಸಲಾರದು. ಈ ಕಾರ್ಯದಲ್ಲಿ ಮಾತ್ರ ನೀವು ಸ್ವಲ್ಪವೂ ಸಾವಕಾಶವಮಾಡಲಾಗದು ॥ ೨ ॥ ಎಲೈ ಪಾಚಕರೆ; ಹಿಂದೆ ಈ ಪ್ರಹ್ಲಾದನನ್ನು ಕೊಲ್ಲುವುದಕ್ಕಾಗಿ ಕರ್ಪ್ಪ, ಸರ್ಪ, ಆನೆಗಳು, ಬೆಂಕಿ, ನೊದಲಾದ ಅನೇಕ ವಿಧದಲ್ಲಿ ಪ್ರಯತ್ನಿಸಿದೆನು. ಇದನ್ನೆಲ್ಲಾ ತಿಳಿದು ಈ ಪ್ರಹ್ಲಾದನು ಅವುಗಳಿಗೆ ಪ್ರತಿಕ್ರಿಯಾರೂಪ ವಾಗಿ ಯಾವುದೋ ಒಂದು ಮಂತ್ರವನ್ನುಚ್ಚರಿಸಿ, ಎಲ್ಲವನ್ನೂ ತಪ್ಪಿಸಿ ಕೊಂಡನು. ಆದುದರಿಂದ ಈ ಪಾಪಿಗೆ ನೀವು ಈಗ ಮಾಡುವ ಕೃತ್ರಿ

ಮುಸಲಾಪಾಪೋ ವಧ್ಯತಾಂ ಮಾ ವಿಚಾರ್ಯತಾಂ ॥ ೩ ॥ ಶ್ರೀ
ಪರಾಶರಃ॥ತೇ ತಥೈವ ದದುಸ್ತಸ್ಮೈ ಪ್ರಹ್ಲಾದಾಯಮಹಾತ್ಮನೆ।
ವಿಷದಾನಂ ಯಥಾಽಽಜ್ಞಾಪ್ತಂ ಪಿತ್ರಾ॥ತಸ್ಯ ಮಹಾತ್ಮನಃ ॥ ೪ ॥
ಹಾಲಾ ಹಲಂ ವಿಷಂ ಘೋರ ಮನಂತೋಽಚ್ಯಾರಣೇನಸಃ ।
ಅಭಿಮಂತ್ರ್ಯ ಸಹಾನ್ನೇನ ಮೈತ್ರೇಯ! ಬುಭುಜೇತದಾ ॥ ೫ ॥
ಅವಿಕಾರಂ ಸ ತಚ್ಛಕ್ತ್ಯಾ ಪ್ರಹ್ಲಾದ ಸ್ಸ್ವಸ್ಥ ಮಾನಸಃ ।
ಅನಂತಖ್ಯಾತಿ ನಿರ್ವೀರ್ಯಂ ಜರಯಾ ಮಾಸ ದುರ್ವಿಷಂ ॥ ೬ ॥

ಮುಪ್ಪು ತಿಳಿಯದಂತೆ ಎಲ್ಲಾ ತಿಂಡಿಯು ಸಾಮಾನುಗಳಲ್ಲಿಯೂ ಹಾಲಾ ಹಲವೆಂಬ ಕ್ರೂರ ವಿಷವನ್ನು ಬೆರೆಸಿಕೊಟ್ಟು ಈ ನೀಚನನ್ನು ಕೊಲ್ಲಿರಿ. ಈವಿಷಯದಲ್ಲಿ ನೀವು ಸ್ವಲ್ಪವೂ ಹಿಂಜರಿಯಕೂಡದು ಎಂಬ ದಾಗಿ ಆಜ್ಞಾಪಿಸಿದನು ॥ ೩ ॥ ಪರಾಶರನು ಹೇಳುತ್ತಾನೆ—ಇಂತು ಹಿರಣ್ಯಕಶಿಪುವಿನಿಂದ ಆಜ್ಞೆಯಂ ಹೊಂದಿ ಆ ಅಡಿಗೆಯವರೆಲ್ಲರೂ, ಮಹಾನುಭಾವನೆನಿಸಿದ ಪ್ರಹ್ಲಾದನಿಗೆ ವಿಷವನ್ನು ಕೊಟ್ಟರು. ॥ ೪ ॥ ಎಲಾ ಮೈತ್ರೇಯನೇ; ತರುವಾಯ ಪ್ರಹ್ಲಾದನು ತನಗೆ ಆಹಾರಾರ್ಥವಾಗಿ ಸಿದ್ಧಪಡಿಸಿದ್ದ ಆ ಭಕ್ಷಭೋಜ್ಯಾದಿಗಳನ್ನೆಲ್ಲಾ ಅಭಿಮಂತ್ರಿಸಿ ಅವುಗಳನ್ನು ಮೊದಲು ಪರಮಾತ್ಮನಿಗೆ ನಿವೇದನಮಾಡಿ, ಆಪರಮೇಶ್ವರನ ಪ್ರಸಾದವೆಂದು ಭಾವಿಸಿ ಪ್ರತಿದಿನವೂ ಊಟಮಾಡುತ್ತಿದ್ದನು. ಅಂತೆಯೇ ಆದಿನವೂ ಕೂಡ ಈತನು ತನಗೆ ಬಡಿಸಿದ್ದ ಆಹಾರ ಪದಾರ್ಥಗಳನ್ನೆಲ್ಲಾ ಅಭಿಮಂತ್ರಿಸಿ ಅಬಳಿಕ ಭಕ್ಷ್ಯಗಳಲ್ಲಿ ಮಿಶ್ರಿತವಾಗಿದ್ದ ಘೋರವೆನಿಸಿದ ಹಾಲಾಹಲ ವಿಷವನ್ನೂ ಭುಜಿಸಿದನು. ॥ ೫ ॥ ಆ ಭಕ್ಷ್ಯಗಳನ್ನು ತಿನ್ನುವಾಗಲೂ ಕೂಡ ಈತನಿಗೆ ಯಾವ್ವದೊಂದು ಬಗೆಯಾದ ವಿಕಾರವೂ ಉಂಟಾಗಲಿಲ್ಲ. ಇದನ್ನು ತಿಂದಮೇಲೆಯೂ ಸ್ವಸ್ಥಮನಸ್ಕನಾಗಿಯೇ ಇರುತಿದ್ದನು. ಪರಮಭಾಗವತನೆನಿಸಿದ ಈ ಪ್ರಹ್ಲಾದನು ಪರಮೇಶ್ವರನ ಕೀರ್ತಿಯಿಂದ ಆ ವಿಷವನ್ನು ಶಕ್ತಿರಹಿತವನ್ನಾಗಿ ಮಾಡಿ ಆ ಕೆಟ್ಟವಿಷವನ್ನು ಜೀರ್ಣಿಸಿಕೊಂಡನು. ಪ್ರಹ್ಲಾದನು ವಿಷವನ್ನು ತಿನ್ನುತಕ್ಕ ಕಾಲದಲ್ಲಿಯೂ ಕೂಡ ಇವನಿಗೆ ಕಹಿವೊದಲಾದ ಯಾವವಿಕಾರವೂ ಆಗಲಿಲ್ಲಾ. ತಿಂದಮೇಲೂ ಮೂರ್ಛೆ ನೊದಲಾದುವು

ತತ ಸ್ಸಾದಾ ಭಯ ತ್ರಸ್ತಾ ಜೀರ್ಣಂ ದೃಷ್ಟ್ವಾ ಮಹಾವಿಷಂ।
ದೈತ್ಯೇಶ್ವರ ಮುಪಾಗಮ್ಯ ಪ್ರಣಿಪತ್ಯೇದ ಮಬ್ರುವ ॥೬॥
ದೈತ್ಯರಾಜ! ವಿಷಂ ದತ್ತ ಮಸ್ಮಾ ಭಿ ರತಿ ಭೀಷಣಂ। ಜೀರ್ಣಂ
ತಚ್ಚ ಸ ಹಾ ನ್ಹೇನ ಪ್ರಹ್ಲಾದೇನ ಸುತೇನತೇ ॥೪॥ ಹಿರ
ಣ್ಯಕಶಿಪುಃ ॥ ತ್ವರ್ಯತಾಂ ತ್ವರ್ಯತಾಂ ಸದ್ಯೋ ಹೇ ಹೇ ದೈತ್ಯ
ಪುರೋಹಿತಾಃ ! । ಕೃತ್ಯಾಂ ತಸ್ಯ ವಿನಾಶಾಯ ಹ್ಯುತ್ಪಾದಯ
ತ ಮಾಚಿರಂ ॥೮॥ ಶ್ರೀ ಪರಾಶರಃ ॥ ಸಕಾಶ ಮಾಗಮ್ಯ

ಕೂಡ ಇಲ್ಲ. ಆಮೇಲೆ ಭಗವನ್ನಾಮ ಮಹಾತ್ಮ್ಯದಿಂದ ವಿಷವು ತಾ
ನಾಗಿಯೇ ಜೀರ್ಣವಾಯಿತು ॥ ೬ ॥ ಇದನ್ನೆಲ್ಲಾ ನೋಡಿ ಆ ಪರಿ
ಚಾರಕರು ,,ಓಹೋ! ನಮಗೆ ಅನರ್ಥವು ಸಂಭವಿಸಿತು. ಇವನು
ಮಂತ್ರಜ್ಞನೆಂದು ರಾಜನು ಹಿಂದೆಯೇ ಹೇಳಿದ್ದನು. ಇವನಿಗೆ ನಾವು
ವಿಷಕೊಟ್ಟುದುದರಿಂದ ನಮ್ಮನ್ನು ಇವನೇನು ಮಾಡುವನೋ ತಿಳಯು
ದು ಇವನಿಗೆ ನಾವು ವಿಷವನ್ನೇ ಕೊಡಲಿಲ್ಲವೆಂದು ರಾಜನು ನಮಗೆ
ಯಾವ ಶಿಕ್ಷೆಯನ್ನು ವಿಧಿಸುವನೋ ತಿಳಯುದು'' ಎಂಬದಾಗಿ ಭೀತಿ
ಗೊಂಡು, ಆ ವಿಷವನ್ನು ಇವನು ಜೀರ್ಣಿಸಿಕೊಂಡ ಸಮಾಚಾರವಂ ತಿಳ
ದು, ಕಂಗಟ್ಟು, ರಾಜನ ಬಳಿಗೆ ಓಡಿಬಂದು ಈ ರೀತಿ ಹೇಳತೊಡಗಿ
ದರು ॥ ೭ ॥ ,,ಎಲೈ ದೈತ್ಯೇಶ್ವರನೆ; ನಾವೇನೋ ನಿನ್ನ ಆಜ್ಞೆಯಂತೆ
ಕರಾಳವೆನಿಸಿದ ವಿಷವನ್ನು ಇವನಿಗೆ ಕೊಟ್ಟೆವು. ನಿನ್ನ ಕುವರನಾದ
ಪ್ರಹ್ಲಾದನು ಆ ವಿಷವನ್ನು ನಿರ್ಲಕ್ಷ್ಯವಾಗಿ ಜೀರ್ಣಿಸಿಕೊಂಡನು. ನಿ
ನ್ನ ಅಂಕೆಗೆ ವ್ಯತಿರಿಕ್ತವಾಗಿ ನಾವು ನಡೆದವರಲ್ಲ. ಇದ್ದ ಸಂಗತಿಯಂ
ಬಿನ್ನವಿಸಿರುವೆವು. ಮುಂದೆ ನಮಾ ಸ್ವಾಮಿಯವರು ತಮ್ಮ ಇಷ್ಟ
ದಂತೆ ನಡೆಯಿಸಬಹುದು'' ಎಂಬದಾಗಿ ಬಿನ್ನವಿಸಿದರು ॥ ೮ ॥ ತರು
ವಾಯ ಹಿರಣ್ಯಕಶಿಪುವು ಹೇಳತೊಡಗಿದನು.-ಓ ದೈತ್ಯಪುರೋಹಿತರಿರಾ;
ಹಿಂದೆಯೇ ನಾನು ಇವನನ್ನು ಕೊಲ್ಲಿಸಬೇಕೆಂದಿದ್ದಾಗ ನೀವೆಲ್ಲರೂ ನಾನಾ
ಪರಿಯಿಂದ ನಿಮ್ಮ ಪರಾಕ್ರಮಗಳನ್ನೆಲ್ಲಾ ನನ್ನ ಬಳಿ ಕೊಚ್ಚಿ ಕೊಂಡು
ಇವನನ್ನು ಬಿಡಿಸಿದಿರಲ್ಲಾ! ಇದೋ ನೋಡಿರಿ. ಇದೇ ಅಲ್ಲವೇ ಇವನಿಂ
ದ ನಸಗುಂಟಾದ ಮರ್ಯಾದೆಯು. ಆದರೂ ಚಿಂತೆಯಿಲ್ಲ. ಈಗಲಾ

ತತಃ ಪ್ರಹ್ಲಾದಸ್ಯ ಪುರೋಹಿತಾಃ । ಸಾವಮಗ್ರೂರ್ವ ಮಥೋ
ಚುಸ್ತೇ ಪ್ರಹ್ಲಾದಂ ವಿನಯಾನ್ವಿತಂ ॥೧೦॥ ಪುರೋಹಿತಾಃ॥
ಜಾತಸ್ತ್ರಿ ಲೋಕ್ಯ ವಿಖ್ಯಾತ ಆಮುಷ್ಮಕ್ಯ ! ಬ್ರಹ್ಮಣಃ
ಕುಲೇ । ದೈತ್ಯ ರಾಜಸ್ಯ ತನಯೋ ಹಿರಣ್ಯ ಕಶಿಪೋ ರ್ಭ
ವಾ ॥ ೧೧ ॥ ಕಿಂ ದೇವೈಃ ? ಕಿಮನಂತೇನ ? ಕಿಮನ್ಯೇ
ನ ತವಾಶ್ರಯಃ । ಪಿತಾ ಸಮಸ್ತ ಲೋಕಾನಾಂ ತ್ವಂ ತಥೈವ
ಭವಿಷ್ಯಸಿ ॥೧೩॥ ತಸ್ಮಾ ತ್ಪರಿತ್ಯ ಜೈತಾಂ ತ್ವಂ ವಿಪಕ್ಷ

ದರೂ ನೀವು ಜಾಗ್ರತೆಪಟ್ಟು, ಇವನನ್ನು ಸಂಹರಿಸಲು ಅನುಕೂಲವಾದ ಕಾರ್ಯವನ್ನು ನಡೆಯಿಸಿರಿ. ಸಾವಕಾಶವಮಾಡಬೇಡಿರಿ॥ ೯ ॥ ಪರಾಕರನು ಹೇಳುತ್ತಾನೆ:—ಈ ಮಾತನ್ನು ಕೇಳಿದೊಡನೆಯೇ ಆ ಪುರೋಹಿತರೆಲ್ಲರೂ ಗಾಬರಿಪಟ್ಟು ಪ್ರಹ್ಲಾದನ ಬಳಿಗೆ ಓಡಿಬಂದರು. ಇಂತು ತನ್ನ ಬಳಿಗೆ ಬಂದ ಪುರೋಹಿತರಂ ಭಕ್ತಿಯಿಂದ ಗೌರವಮಾಡಿ, ವಿನಯದಿಂದ ತಲೆಬಾಗಿನಿಂತಿರುವ ಪ್ರಹ್ಲಾದನನ್ನು ಕುರಿತು ಆ ಪುರೋಹಿತರೆಲ್ಲರೂ ಸವಿನುಡಿಗಳಂದ ಈ ರೀತಿ ನೋಳತೊಡಗಿದರು ॥೧೦॥ಪುರೋಹಿತರು ಹೇಳುತ್ತಾರೆ—'ಎಲೈ ಪ್ರಹ್ಲಾದನೆ;ನೀನು ಚಿರಂಜೀವಿ ಎನಿಸಿ ಸುಖವಾಗಿ ಬಾಳು. ಎಲೈ ಆಯುಷ್ಮಂತನೆ: ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ಬ್ರಹ್ಮನ ಕುಲದಲ್ಲಿ ಜನಿಸಿರುವೆ ಎಂಬುದನ್ನರಿಯೆಯಾ ? ದೈತ್ಯರಾಜನೆನಿಸಿದ ಹಿರಣ್ಯಕಶಿಪುವಿಗೆ ನೀನು ಮಗನಲ್ಲವೆ ? ॥ ೧೧ ॥ ಇಂತಹ ದೊಡ್ಡ ವಂಶದಲ್ಲಿ ಜನಿಸಿ, ತ್ರಿಲೋಕಾಧಿಪನ ಮಗನಾದ ನಿನಗೆ ದೇವತೆಗಳಿಂದಾಗಬೇಕಾದುದೇನು? ಅನಂತನೆನಿಸಿದ ವಿಷ್ಣುವಿನಿಂದ ತಾನೆ ನಿನಗೇನಾಗಬೇಕು ? ನಿನ್ನ ತಂದೆಯೇ ಮೂರು ಲೋಕಗಳಿಗೂ ಒಡೆಯನೆನಿಸಿ, ಎಲ್ಲರಿಗೂ ಆಶ್ರಭೂತನಾಗಿರುವಾಗ್ಗೆ ನಿನಗೆ ಯಾರಿಂದ ತಾನೆ ಏನಾಗಬೇಕು ? ನಿಮ್ಮ ತಂದೆಯನ್ನು ನೀನು ಆಶ್ರಯಿಸಿಕೊಂಡಿದ್ದರೆ ನೀನೂ ನಿಮ್ಮ ತಂದೆಯಂತೆಯೇ ಮೂಲೋಕಕ್ಕೂ ಒಡೆಯನೂ, ಆಶ್ರಯನೂ ಆಗುವೆ. ಆದುದರಿಂದ ಇತರರನ್ನಾಶ್ರಯಿಸಿ ನಿನಗೆ ಫಲವೇನು ? ॥ ೧೨ ॥ ನಿನ್ನ ತಂದೆಯು ಎಲ್ಲ ಗುರುಗಳಿಗೂ ಪರಮ ಗುರುವು, ಆದುದರಿಂದ ಎಲ್ಲರಿಂದಲೂ ಹೊಗಳಲ್ಪ ತಕ್ಕವನು ಎನಿಸಿರುವನು;

ಸ್ತವ ಸಂಹಿತಾಂ । ಶ್ಲಾಘ್ಯೈಃ ಪಿತಾ ಸವಮಸ್ತಾನಾಂ ಗುರೂಣಾಂ ಪರವೋ ಗುರುಃ ॥೧೫॥ ಪ್ರಹ್ಲಾದಃ॥ ಏವ ವೇತನ್ಮಹಾ ಭಾಗಾ! ಶ್ಲಾಘ್ಯೈ ವೇತನ್ಮಹಾ ಕುಲಂ । ಮುರೀಚೇ ಸ್ಸಕಲೇ ಪ್ಯಸ್ಮಿ ತ್ತ್ರೈಲೋಕ್ಯೇ ನಾನ್ಯಥಾ ವದೇತ್ ॥೧೬॥ ಪಿತಾ ಚ ಮಮ ಸರ್ವಸ್ಮಿ ಜಗತ್ಯು ತ್ಕೃಷ್ಟ ಚೇಷ್ಟಿತಃ । ಏತ ದ್ಯೇನ ಗಚಾ ಖ್ಯಮಿ ಸತ್ಯಮುತ್ತಾಪಿ ನಾನೃತಂ ॥೧೫॥ ಗುರೂ ಣಾ ಮಪಿ ಸರ್ವೇಷಾಂ ಪಿತಾ ಪರಮಕೋ ಗುರುಃ । ಯದು ಕ್ತಂ ಭ್ರಾಂತಿ ರತ್ರಾಪಿ ಸ್ವಲ್ಪಾ ಪಿಹಿ ನವಿದ್ಯತೇ ? ॥೧೬॥ ಪಿತಾ

ಆದುದರಿಂದ ಇಂತಹ ಸರ್ವೋತ್ತಮ ಗುರುವೆನಿಸಿದ ತಂದೆಯನ್ನು ತಿರಸ್ಕರಿಸಿ, ಆ ತಂದೆಗೇನೇ ಶತ್ರುಭೂತರಾದ ದೇವತೆಗಳನ್ನಾಗಲಿ, ಅಥವಾ ಅಂತಹ ದೇವತೆಗಳಿಗೆ ಅಧಿಪತಿಯೆನಿಸಿದ ವಿಷ್ಣುವನ್ನಾಗಲಿ, ನೀನು ಹೊಗಳಬಹುದೆ ? ಆದಕಾರಣ ನಿನ್ನ ತಂದೆಯ ಶತ್ರುವನ್ನು ಹೊಗಳಿಸಾಕು. ಇಲ್ಲಿಗೆ ನಿಲ್ಲಿಸು ॥ ೧೫ ॥ ಪ್ರಹ್ಲಾದನು ಹೇಳುತ್ತಾನೆ.—ಎಲೈ ಮಹಾಮಹಿಮ ಸಂಪನ್ನರೂ, ಮಹದೈಶ್ವರ್ಯಶಾಲಿಗಳೂ ಎನಿಸಿದ ಪುರೋಹಿತರೇ; ನೀವು ಇದುವರೆಗೂ ಹೇಳಿದುದೆಲ್ಲವೂ ದಿಟವೇ ಸರಿ. ಚರಾಚರರೂಪವಾದ ಈ ಮೂಲೋಕದಲ್ಲಿಯೂ ಮುರೀಚಿಯ ವಂಶವೇ ಶ್ರೇಷ್ಠವೆನಿಸುವುದು. ಇದರಲ್ಲಿ ಸಂದೇಹವೇ ಇಲ್ಲ. ಯಾರೊಬ್ಬರೂ ಇದಕ್ಕೆ ವ್ಯತಿರಿಕ್ತವಾಗಿ ನುಡಿಯುವುದಿಲ್ಲವಾರರು ॥ ೧೪ ॥ ನನ್ನ ತಂದೆಯು ಈ ಲೋಕದಲ್ಲೆಲ್ಲಾ ಉತ್ಕೃಷ್ಟವಾದ ನಡವಳಿಯುಳ್ಳವನೆಂದೂ ನಾನು ಸತ್ಯವಾಗಿ ಹೇಳಬಲ್ಲೆ. ನನ್ನ ತಂದೆಯೇ ಸರ್ವೋತ್ತಮನೆಂಬುದಾಗಿ ನೀವು ಹೇಳಿದುದು ದಿಟವೇ ಸರಿ. ನಾನು ಇದೇ ಮಾತನ್ನೇ ಸತ್ಯವಾಗಿ ತಿಳಿದು ಇರುವೆನು. ನೀವು ಹೇಳುವುದೇನೂ ಸುಳ್ಳಲ್ಲ ॥೧೫॥ ಲೋಕದಲ್ಲಿರುವ ಗುರುಗಳಿಗೆಲ್ಲರಿಗಿಂತಲೂ, ತಂದೆಯೇ ಸರ್ವೋತ್ತಮವಾದ ಗುರುವು. ಆತನಿಗಿಂತಲೂ ಉತ್ತಮನೆನಿಸಿದ ಬೇರೆ ಗುರುವೇ ಇಲ್ಲ ಎಂಬುದಾಗಿ ಹೇಳುವಿರಲ್ಲವೆ ? ಇದನ್ನೂ ನಾನು ಬಲ್ಲೆನು. ಈ ವಿಷಯದಲ್ಲಿಯೂ ಕೂಡ ನನಗೆ ಸ್ವಲ್ಪವಾದರೂ ಭ್ರಾಂತಿಯಿಲ್ಲವು ॥೧೬॥ ಅಹಾಗಾದರೆ ಇಂತಹ ಗುರುವನ್ನು ಉಪೇಕ್ಷೆಮಾಡಿ ನೀನು ಇತರರನ್ನು

ಗುರು ರ್ನ' ಸಂದೇಹಃ ಪ್ರೂಜನೀಯಃ ಪ್ರಯತ್ನತಃ । ತತಾ ್ರಪಿ ನಾಪ ರಾಧ್ಯಾವಿಾ ತ್ಯೇವಂ ಮೇವಮನಸಿಸ್ಥಿತಂ ॥ ೧೭ ॥ ಯು ತ್ತೈ ್ವೇ ತತ್ಕಿಮನಂತೇನೇ ತ್ಯುಕ್ತೋ ಯುಷ್ಮಾಭಿ ರೀದೃಶಃ।ಕೋ ಬ್ರವೀತಿ ಯಥಾಽಯುಕ್ತಂ ? ಕಿಂತು ನೈತದ್ವಚೋ ೨ ರ್ಥ ವತ್॥೧೮॥ ಇತ್ಯುಕ್ತ್ವಾ ಸೌ ಭವ ನ್ಮಿತೀ ತೇಷಾಂ ಗೌರವ ಯುಂ ತ್ರಿತಃ । ಪ್ರಹಸ್ಯ ಚ ಪುನಃ ಪ್ರಾಹ ಕಿಮುನಂ ತೇನ ಸಾ ಧ್ವಿತಿ ॥೧೯॥ ಸಾಧು ! ಭೋಃ ! ಕಿ ಮುನಂ ತೇನ ? ಸಾಧು

ಹೊಗಳಬಹುದೆ?" ಎಂಬುದಾಗಿ ಹೇಳುವಿರಲ್ಲಾ! ಇದೂ ದಿಟವೇ ಸರಿ. ತಂದೆಗಿಂತಲೂ ಬೇರೆ ಗುರುವಿಲ್ಲ ಆತನನ್ನು ಸಾಧ್ಯವಾದಮಟ್ಟಿಗೂ (ಪ್ರಯತ್ನ ಪೂರ್ವಕವಾಗಿ) ಪ್ರೂಜಿಸಬೇಕೆಂಬುದೂ ದಿಟ. ಆತನ ವಿಷಯದಲ್ಲಿಯೂ, ನಾನು ಇದುವರೆಗೂ ಯಾವದೊಂದು ಬಗೆಯಾದ ಅಪರಾಧವನ್ನೂ ಮಾಡಿದವನಲ್ಲಾ. ಆತನ ಮಾತನ್ನೂ ವಿಾರಿ ನಡೆದವನಲ್ಲಾ. ಈ ಮಾತನ್ನು ನಾನು ನನ್ನ ಮನಸ್ಸಾಕ್ಷಿಯಾಗಿ ಹೇಳಬಲ್ಲೆನು ॥೧೭॥ ಇದುವರೆಗೂ ನೀವು ಹೇಳುದುದೆಲ್ಲಾ ಯುಕ್ತವೇ ಸರಿ. "ಆದರೆ ಆನಂತನೆನಿಸಿದ ವಿಷ್ಣುವಿನಿಂದ ನಿನಗಾಗಬೇಕಾದುದೇನು?" ಎಂಬುದಾಗಿ ಹೇಳುವಿರಲ್ಲಾ. ಇದು ಯುಕ್ತವೆ? ಇಂತಹ ಮಾತನ್ನು ಯಾವನಾದರು ಒಪ್ಪಿಕೊಳ್ಳುವನೆ? ತಾವೇನೋ ಆರೀತಿ ಹೇಳಿದಿರಿ. ಆದರೆ ಈಮಾತುಮಾತ್ರ ಸಾರ್ಥಕವಾದುದಲ್ಲ. ತಮ್ಮಂತಹ ತಿಳಿದವರು ಇಂತಹ ನಿರರ್ಥಕವಾ ತನ್ನು ಸ್ವಲ್ಪವೂ ಪರ್ಯಾಲೋಚಿಸದೆ ಹೇಳಬಹುದೆ? ॥ ೧೮ ॥ ಪರಮ ಭಾಗವತನೆನಿಸಿದ ಪ್ರಹ್ಲಾದನು, ತನಗೆ ಬುದ್ಧಿವಾದವಂ ಹೇಳಲು ಬಂದ ತನ್ನ ಪುರೋಹಿತರೊಡನೆ ಈ ರೀತಿ ಮಾತನಾಡಿ, ತರುವಾಯ ತಾನಿನ್ನೇ ನಾದರೂ ಹೆಚ್ಚಾಗಿ ಅವರಸಂಗಡ ಮಾತನಾಡಿದರೆ ಅವರ ಗೌರವಕ್ಕೆಹಾನಿಯುಂಟಾದೀತೆಂದು ಅವರ ಗೌರವಕ್ಕೆ ಕಟ್ಟು ಬಿದ್ದು ಸುಮ್ಮನಾದನು. ಆಮೇಲೆಅವರು ಹೇಳಿದ ಮಾತನ್ನು ತನ್ನ ಮನಸ್ಸಿನಲ್ಲಿ ತಾನೇ ಪರ್ಯಾಲೋಚಿಸಿ, ಗಟ್ಟಿಯಾಗಿ ನಗುತ್ತಾ ಈ ರೀತಿ ಹೇಳತೊಡಗಿದನು. "ವಿಷ್ಣುವಿನಿಂದ ನಮಗಾಗಬೇಕಾದುದೇನಿರುವುದು?" ಛಲಾ; ಇಷ್ಟೇ ಅಲ್ಲವೆ? ಚನ್ನಾಯಿತು ॥೧೯॥ ಛಲಾ, ಪುರೋಹಿತರೇ; ಅನಂತನಿಂದಾಗಬೇಕಾ

ಭೋ ಗುರವೋ ! ಮನು । ಶ್ರೂಯತಾಂ ಯದನಂ ತೇನ ಯು
ದಿ ಖೇದಂ ನ ಯಾ ಸ್ಯಥ ॥೨೦॥ ಧರ್ಮಾರ್ಥ ಕಾಮು ಮೋ
ಕ್ಷಾಖ್ಯಃ ಪುರುಷಾರ್ಥ ಉದೀರಿತಃ । ಚತುಷ್ಟಯ ಮಿದಂ ಯ
ಸ್ಮಾ ತ್ತಸ್ಮಾ ಚ್ಚ ಕಿಮಿದಂ ವೃಥಾ ॥೨೧॥ ಮರೀಚಿ ಮಿ
ಶ್ರೈ ರ್ದ ಕ್ಷಾದ್ಯೈ ಸ್ತಥೈವಾನ್ಯೈ ರನಂ ತತಃ । ಧರ್ಮಃ
ಪ್ರಾಪ್ತಸ್ತಥಾ ಚಾನ್ಯೈ ರರ್ಥಃ ಕಾಮು ಸ್ತಥಾ ೨ ಪರೈಃ॥೨೨॥
ತತ್ತತ್ತ್ವ ವೇದಿನೋ ಭೂತಾ ಜ್ಞಾನ ಧ್ಯಾನ ಸಮಾಧಿಭಿಃ ।

ದುದೇನು? ಶಹಬಾಸ್! ನನ್ನ ಗುರುಗಳೆ; ನಾನು ತಮ್ಮೊಡನೆ ಸ್ವಲ್ಪ ಮಾತನಾಡಬೇಕೆಂದಿರುವೆನು. ತಾವು ನನ್ನ ಮಾತಿಗೆ ಮನಸ್ಸಿನಲ್ಲಿ ನೊಂದುಕೊಳ್ಳದಿದ್ದರೆ, ಹೇಳುವೆನು. ವಿಷ್ಣುವಿನಿಂದ ನಮಗಾಗುವ ಪ್ರಯೋಜನಗಳನ್ನು ತಿಳಿಸುವೆನು. ಕೇಳಿರಿ ॥ ೨೦ ॥ ಲೋಕದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳೆಂದು ಪಂಡಿತರು ವ್ಯವಹರಿಸುವರು. ಈ ಪುರುಷಾರ್ಥ ಚತುಷ್ಟಯವೂ ನಮಗೆ ಯಾವನಿಂದ ಲಭಿಸುವುದೋ, ಅಂತಹವನಿಂದ ನಮಗಾಗಬೇಕಾದುದೇನು? ಚನಾನ್ನಯಿತು. "ಅವನಿಂದ ನಮಗಾಗಬೇಕಾದುದೇನು? ಅವನನ್ನಾಶ್ರಯಿಸುವುದು ವ್ಯರ್ಥ!" ಈ ಮಾತನ್ನೆಲ್ಲಿ ಕಲಿತಿರಿ? ಸಾಕು. ಸಾಕು. ನಿಲ್ಲಿಸಿರಿ. ॥೨೦॥

ಲೋಕಪ್ರಭುವ್ಯನೂ ನಮ್ಮ ಕುಲಕ್ಕೆ ಮೂಲಪುರುಷನೂ ಎನಿಸಿದ ಮರೀಚಿಯೇ ಮೊದಲಾದವರೂ, ಅಂತೆಯೇ ದಕ್ಷಾದಿಗಳೂ, ಇನ್ನೂ ಅನೇಕ ಮಂದಿ ಮಹನೀಯರೆಲ್ಲರೂ ಆತನನ್ನಾರಾಧಿಸಿ ಧರ್ಮವನ್ನು ಸಂಪಾದಿಸಿಕೊಂಡರು. ಮತ್ತೆ ಕೆಲವರು ಆ ಪರಮೇಶ್ವರನನ್ನಾರಾಧಿಸಿ ಅರ್ಥವನ್ನು ಪಡೆದುಕೊಂಡರು; ಇನ್ನು ಹಲಬರು ಆತನ ಅನುಗ್ರಹದಿಂದ ಕಾಮವನ್ನು ಗಳಿಸಿಕೊಂಡರು. ॥೨೧॥ ಇನ್ನೂ ಕೆಲವು ಮಂದಿ ಪುರುಷರು ಜ್ಞಾನ (ಆತ್ಮ ನಾತ್ಮ ವಿವೇಕ)ಧ್ಯಾನ (ಆತನ ಮಹಿಮೆಯನ್ನು ಯೋಚಿಸುವಿಕೆ)ಸಮಾಧಿ (ಯಮಾದಿ ಎಂಟುಯೋಗಗಳಿಂದ ಆತನನ್ನು ಹೊಂದಲು ಪ್ರಯತ್ನಿಸಿ ಕೊನೆಗೆ ಆತನ ಪಾದಾರವಿಂದಗಳನ್ನು ಹೊಂದಿ ತಮ್ಮ ಮನಸ್ಸು ಮೊದಲಾದ ಇಂದ್ರಿಯಗಳನ್ನು ಆತನಲ್ಲಿ ಲಯಗೊಳ

ಅವಾಪು ರ್ಮಕ್ತಿ ಮುಪರೇ ಪುರುಷಾದ್ಯಕ್ತ ಬೂಧನಾಃ ॥೬೩॥
ಸಂಪದೈಶ್ವರ್ಯ ಮಾಹಾತ್ಮ್ಯ ಜ್ಞಾನ ಸಂತತಿ ಕರ್ಮಣಾಂ । ವಿ
ಮುಕ್ತಿ ಶ್ಚೈಕಕತೋ ಲಭ್ಯಾ ಮೂಲ ಮೂರಾಧನಂಹರೇಃ ॥೬೪॥
ಯತೋ ಧರ್ಮಾರ್ಥ ಕಾಮಾಖ್ಯಂ ವಿಮುಕ್ತಿಶ್ಚ ಫಲಂ ದ್ವಿ
ಜಾಃ ! । ತೇನಾ ಪಿ ಕಿಂ ಕಿಮಿತ್ಯೇವ ಮನಂತೇ ನ ಕಿಮುಚ್ಯ
ತೇ ? ॥೬೫॥ ಕಿಂ ಚಾತ್ರ ಬಹುನೋಕ್ತೇನ ? ಭವಂತೋ
ಗುರವೋ ಮಮ । ವದಂತು ಸಾಧುವಾ ಽ ಸಾಧು ವಿವೇಕೋ
ಽಸ್ಮಾಕ ಮುಚ್ಚಕಃ ॥ ೬೬ ॥ ಬಹುನಾತ್ರ ಕಿಮುಕ್ತೇನ ? ಸ

ಸುವಿಕೆ) ಇವುಗಳಿಂದ ಅವಿದ್ಯಾಮೂಲಕವೆನಿಸಿದ, ಸಂಸಾರ ಬಂಧದಿಂ
ದ ಬಿಡುಗಡೆಯಂ ಹೊಂದಿದರು ॥ ೬೩ ॥ ಈ ಲೋಕದಲ್ಲಿ ಮನುಜ
ರು, ಅತ್ಯುತ್ತಮವಾದ ಸಂಪತ್ತು, ಪ್ರಭುತ್ವ, ದೊಡ್ಡಸ್ತಿಕೆ ಅಥವಾ ಮಾ
ಹಾತ್ಮ್ಯ, ತಿಳಿವಳಿಕೆ, ಪುಕ್ಕಸಂಪತ್ತು, ಜ್ಯೋತಿಷ್ಟೋಮಾದಿ ಕ್ರತು
ರೂಪವಾದ ಕರ್ಮ, ಇವುಗಳನ್ನು ಪಡೆದು, ಇವುಗಳಿಂದುಂಟಾಗುವ ಫ
ಲವನ್ನನುಭವಿಸಬೇಕಾದರೂ, ಅಥವಾ ಸರ್ವೋತ್ತಮವೂ, ನಾಶರಹಿತ
ವೂ, ನಿತ್ಯಾನಂದವೂ, ಎನಿಸಿದ ಮುಕ್ತಿಯಂ ಹೊಂದಬೇಕಾದರೂ, ಭ
ಕ್ತದುರಿತಾಪಹಾರಕನೆನಿಸಿದ ಆ ಪರಮೇಶ್ವರನಅನುಗ್ರಹವೇ (ಆರಾ
ಧನವೇ) ಇವುಗಳಿಗೆಲ್ಲಾ ಮೂಲಭೂತವಾದುದಲ್ಲವೆ ? ॥೬೪॥

ಎಲೈ ಬ್ರಾಹ್ಮಣರೆ ; ಯಾವನನ್ನು ನಾವು ಆಶ್ರಯಿಸುವುದಕ್ಕೆ
ನಮ್ಮ ನಮ್ಮ ಇಷ್ಟಾನುಸಾರ ಧರ್ಮ ಅರ್ಥ. ಕಾಮಗಳೂ, ಮೋಕ್ಷ
ವೂಕೂಡ ಫಲರೂಪದಿಂದ ನಾವುಪಡೆಯುವೆವೋ, ಅಂತಹ ನಾಶರಹಿತ
ನೆನಿಸಿದ ಪರಮಾತ್ಮನಿಂದ ನಮಗೇನೂ ಫಲವಿಲ್ಲವೇ ? ಅವನಿಂದನಮ
ಗಾಗತಕ್ಕದ್ದೇನೆಂದು ನೀವುಹೇಳಬಹುದೆ ? ॥ ೬೫ ॥ ಸ್ವಾಮಿ! ಹೆ
ಚ್ಚಾಗಿ ಮಾತನಾಡಿ ಫಲವೇನು,ಹೇಗಾದರೂ ತಾವು ನನಗಿಂತಲೂ ದೊ
ಡ್ಡವರು,ಆದುದರಿಂದಲೇ ನೀವುನಮ್ಮ ವಂಶಕ್ಕೆ ಗುರುಗಳೆನಿಸಿರುವಿರಿ; ನ
ನಗಿಂತಲೂ ನೀವು ಎಷ್ಟೋ ತಿಳಿದವರು, ನಮ್ಮವಿವೇಕವು ಅತ್ಯಲ್ಪ
ವಾದುದು. ನಾನುಹೇಳುವುದು ಅಥವಾ ಆ ಪರಮಾತ್ಮನನ್ನು ನಾನುಆಶ್ರ
ಯಿಸುವುದು ಯುಕ್ತವೋ ಅಥವಾ ಅಯುಕ್ತವೋ ತಾವೇ ಅದನ್ನು

ವೈವ ಜಗತಃ ಪತಿಃ । ಸಕರ್ತಾ ಸ ವಿಕರ್ತಾಚ ಸಂಹರ್ತಾ ಚ ಹೃದಿಸ್ಥಿತಃ ॥ ೨೭ ॥ ಸ ಭೋಕ್ತಾ ಭೋಜ್ಯ ಮಪ್ಯೇವಂ ಸ ವೈವ ಜಗದೀಶ್ವರಃ । ಭವದ್ಭಿರೇತತ್ಕ್ಷಂತವ್ಯಂ ಬಾಲ್ಯಾ ದುಕ್ತಂತು ಯನ್ಮಯಾ ॥೨೮॥ ಪುರೋಹಿತಾಃ॥ ದಹ್ಯಮಾನ ಸ್ತ್ವಮಸ್ಮಾಭಿ ರಗ್ನಿನಾ ಬಾಲ ! ರಕ್ಷಿತಃ । ಭೂಯೋ ನ ವ ಕ್ಷ್ಯ ಸೀತ್ಯೇವಂ ನೈವಜ್ಞಾತೋ ಽ ಸ್ಯ ಬುದ್ಧಿ ಮಾ ॥೨೯॥

ಹೇಳಬೇಕಾ. ॥೨೬॥ ಎಲೈ ಗುರುಗಳೆ, ತಮ್ಮ ಸಂಗಡ ಹೆಚ್ಚಾಗಿ ಮಾತನಾಡಿ ತಮಗೆತಾನೇ ನಾನೇಕೆ ಮನಸ್ಸಿಗೆ ಇಲ್ಲದದುಃಖವನ್ನು ಹಚ್ಚಲಿ ? ತಾನೇನು ಹೇಳದರೂ ಸರಿಯೆ, ಅದುಬೇರೆನಿನಗೆ ರುಚಿಸುವಂತಿಲ್ಲ. ಯಾರೆಷ್ಟು ಹೇಳಿದರೂ, ಆ ವಿಷ್ಣುವೇ ಎಲ್ಲಲೋಕಗಳಿಗೂ ನಾಯಕನು ಆತನೇಕರ್ತೃವು (ಸೃಷ್ಟಿಕರ್ತೃವು) ಪರಿಣಾಮಕರ್ತೃವು ಆತನೇಆಗಿರುವನು, ಕೊನೆಗೆ ಲಯಕಾರ್ಯವನ್ನು ನಿರ್ವಹಿಸುವನೂ ಆತನೇಅಲ್ಲದೆಬೇರೆಯಲ್ಲ ಎಲ್ಲರಹೃದಯದಲ್ಲಿಯೂ ಅಬಾಧಿತನಾಗಿ ನೆಲೆಸಿ ಅವರವರಿಂದ ಆ ಆಕಾರ್ಯಗಳನ್ನು ಮಾಡಿಸುತ್ತಾ, ಅವರವರಸುಕೃತ, ದುಷ್ಕೃತಗಳಿಗೆ ಸಾಕ್ಷಿಭೂತನೆನಿಸಿರುವವನೂ ಆವಿಷ್ಣುವೇ ಅಲ್ಲವೆ? ಇದೇನನ್ನ ಅಂತರಂಗದ ಸ್ವಾರಸಿಕವಾದ ಅಭಿಪ್ರಾಯವು, ॥೨೭॥ ಭೋಕ್ತನೂಭೋಜ್ಯವೂ ಕೂಡ ಆ ವಿಷ್ಣುವೇ ಆಗಿರುವನು. (ಸುಕೃತ, ದುಷ್ಕೃತಗಳ ಫಲಗಳೆನಿಸಿದ ಸುಖ, ದುಃಖಗಳನ್ನನುಭವಿಸುವನೂ, ಆ ಸುಕೃತ ದುಷ್ಕೃತ ಫಲರೂಪನೂ, ಕೂಡ ಸರ್ವಾತ್ಮಕನೆನಿಸಿದ ಆ ವಿಷ್ಣುವೇ ಆಗಿರುವನು) ಜಗದೀಶ್ವರನೂ ಕೂಡ ಆತನೇ. ಸ್ವಾಮಿ! ನಾನು ಹುಡುಗ, ಹುಡುಗತನದಿಂದ ಏನೇನೋ ನನಗೆ ತಿಳಿದಂತೆ ಹರಟಿದೆನೆಂದು ಕೋಪ ಮಾಡಬೇಡಿರಿ; ನನ್ನ ಅಪರಾಧವನ್ನು ಮನ್ನಿಸಿರಿ ॥ ೨೮ ॥ ಪುರೋಹಿತರು ಹೇಳುತ್ತಾರೆ:—ಎಲೈ ಹುಡುಗನೆ; ನಿಮ್ಮ ತಂದೆಯು ನಿನ್ನನ್ನು ಬೆಂಕಿಯಲ್ಲಿ ತಳ್ಳಿ ಸುಡುತ್ತಿದ್ದಾಗ, ನೀನು ಮುಂದೆ ಇನ್ನೆಂದೆಂದಿಗೂ ಇಂತಹ ಮಾತನ್ನು ಹೇಳುವುದಿಲ್ಲವೆಂದು ನಿಮ್ಮ ತಂದೆಗೆ ಹೇಳಿ ನಾವು ನಿನ್ನನ್ನು ಕಾಪಾಡಿದೆವು. ನೀನು ಹೀಗೆ ಒರಟನೆಂದು ನಾವು ತಿಳಿದಿರಲಿಲ್ಲ. ನೀನು ಇಂತಹ ಮೂಢನೆಂದು ನಾವು ತಿಳಿದಿದ್ದರೆ, ಆಗಲೇ ನಿನ್ನಗೋಜೆ

ಯದ್ಯಸ್ಮ ದ್ವಚನಾ ನ್ಮೋಹ ಗ್ರಹಂ ನತ್ಯ ಹ್ಯೃತೇ ಭವಾ ।
ತತಃ ಕೃತ್ಯಾಂ ವಿನಾಶಾಯ ತವ ಸ್ರ ಹ್ಯಾವು ದುರ್ಮತೇ ।
॥ ೪೦ ॥ ಪ್ರಹ್ಲಾದಃ ॥ ಕಃ ಕೇನ ರಕ್ಷ್ಯತೇ ಜಂತು ? ಜ್ಞಂ
ತುಃ ಕಃಕೇನ ಹ ನ್ಯತೇ? ಹಂತಿ ರಕ್ಷತಿ ಜ್ಯೈವಾತ್ಮ ಹ್ಯೃತಸ್ಯಾಧು

ಗೆಬಾರದೇ ಇರುತ್ತಿದ್ದವು ॥ ೨ ॥ ಈಗಲಾದರೂ ಸಂಯೆ. ನಮ್ಮ ಮಾತಿನಂತೆ ನೀನು ವ್ಯರ್ಥವೂ, ಆತ್ಮಸಿಧನ ಸಂಪಾದಕವೂ ಎನಿನಿದ ಈ ಮೋಹಗ್ರಹವನ್ನು ದೂರಮಾಡು. (ವಿಷ್ಣುವೇ ಎಲ್ಲರಿಗಿಂತಲೂ ದೊಡ್ಡವನು, ಎಂಬ ಇದೇ ಮೊದಲಾದ ಭ್ರಾಂತಿಯನ್ನು ತೊಗೆ) ಇಲ್ಲವಾದರೆ, ನಿನ್ನನ್ನು ಸಂಹರಿಸಲು, ತಕ್ಕ ಕೆಲಸಗಳನ್ನು ಮಾಡುತ್ತೇವೆ. ಅಥವಾ ನಾವೊಂದು ವೇಳೆ ಹುಡುಗನೆಂದುಕ್ಷಸಿಕರಗೊಂಡು ನಮ್ಮನಿದ್ದಗೂ ನಿಮ್ಮ ತಂದೆಯು ಬೇರೆ ನಮ್ಮನ್ನು ಇರಗೊಳಿಸಲಾರನು. ನೀನೂ ಕೂಡ ಈ ಲೋಕದಲ್ಲಿ ಪ್ರಾಣಗಳೊಂದಿಗೆ ಬದುಕಿರಲಾರೆ. ಇದೇನೋ ದಿಟವೆಂದು ನಂಬು ॥ ೩ ॥ ಪ್ರಹ್ಲಾದನು ಹೇಳುತ್ತಾನೆ:— ಯಾವ ಪ್ರಾಣಿಯೂ ಬೇರೆ ಯಾವ ಪ್ರಾಣಿಯನ್ನು ಕೊಲ್ಲುವುದಿಲ್ಲ. ಯಾವ ಪ್ರಾಣಿಯೂ ಬೇರೆ ಯಾವುದೊಂದು ಪ್ರಾಣಿಯನ್ನು ಕಾಪಾಡುವುದೂ ಇಲ್ಲ. ಕೆಟ್ಟ ಕೆಲಸವನ್ನು ಮಾಡುವವನು ತನ್ನ ಕೆಟ್ಟ ಕೆಲಸಗಳಿಂದ ತನ್ನನ್ನು ಕೊಲ್ಲುತ್ತಾನೆ. ಅಂತೆಯೇ ತಾನು ಮಾಡುವ ಸತ್ಕಾರ್ಯಗಳಿಂದ ತನ್ನನ್ನು ಕಾಪಾಡುತ್ತಾನೆ. (ಬಬ್ಬರನ್ನೊಬ್ಬರು ಕಾಪಾಡುವರು, ಬಬ್ಬರು ಮತ್ತೊಬ್ಬರನ್ನು ಕೊಲ್ಲುವರು ಎಂಬ ಆವೇಶವನ್ನು ಬಿಡಿರಿ. ಕಾಪಾಡುವುದೂ, ಕೊಲ್ಲುವುದೂ, ಕೂಡ ಪ್ರಾಣಿಧರ್ಮವಲ್ಲ. ತಾನು ಮಾಡಿದ ಸುಕೃತಗಳೇ ತನ್ನನ್ನು ಕಾಪಾಡಬೇಕು. ತಾನು ಮಾಡಿದ ಕೆಟ್ಟಕೆಲಸಗಳೇ ತನ್ನನ್ನು ನಾಶಗೊಳಿಸುವುವು. ಇಂತಿರಲುನೀವು, ನನ್ನನ್ನು ಹಿಂದೆ ಬದುಕಿಸಿದಿರೆಂದು ಹೇಳುವುದೂ, ಈಗ ನನ್ನನ್ನು ಕೊಲ್ಲುತ್ತೇವೆಂದು ಹೇಳುವುದೂ ಕೂಡ ಭ್ರಾಂತಿಯು. ಆದುದರಿಂದ ಈದುರಾಗ್ರಹವನ್ನು ತೊರೆದು ಸುಮ್ಮನಿರಿ) ॥ ೪೧ ॥ ಎಲ್ಲವೂ ಕರ್ಮದಿಂದಲೇ ಉಂಟಾಗುವುದು. ಕರ್ಮವೇ ಗತಿಗೆ ಸಾಧನವು. ಆದುದರಿಂದ ಮನುಷ್ಯನು ಬಳ್ಳಿಯಮಾರ್ಗದಲ್ಲಿ ನಡೆಯುತ್ತಾ

ಸವಾಚರೇತ್ ॥ ೬೧ ॥ *ಕರ್ಮಣಾ ಜಾಯತೇ ಸರ್ವಂ ಕರ್ಮೈವ ಗತಿಸಾಧನಂ । ತಸ್ಮಾತ್ ತ್ವಾಧು ಪ್ರಯತ್ನೇನ ಸಾಧು ಕರ್ಮ ಸವಾಚರೇತ್ ॥ ೬೨ ॥ ಶ್ರೀ ಪರಾಶರಃ॥ ಇತ್ಯುಕ್ತಾ ಸ್ತೇನ ತೇ ಕ್ರುದ್ಧಾ ದೈತ್ಯರಾಜ ಪುರೋಹಿತಾಃ । ಕೃತ್ಯಾ ಮು ತ್ಪಾದಯಾ ಮಾಸು ರ್ಜ್ವಾಲಾವಾಲೋ ಜ್ವಲಾನನಾಂ ॥೬೩॥ ಅತಿಭೀಮಾ ಸವಾಸಾದ್ಯ ಪಾದನ್ಯಾಸ ಕ್ಷತಕ್ಷಿತಿಃ । ಕೂಲೇನ

ಸಕಲ ಪ್ರಯತ್ನಗಳಿಂದಲೂ, ಬಳ್ಳಿಯು ಕೆಲಸವನ್ನೇ ಮಾಡಬೇಕಲ್ಲದೆ ಕೆಟ್ಟ ದಾರಿಯಲ್ಲಿ ಹೋಗುವ ಯೋಚನೆಯನ್ನು ಮಾಡಬಾರದು ॥೬೦॥ ಪರಾಶರನು ಹೇಳುತ್ತಾನೆ:—ಇಂತು ಪ್ರಹ್ಲಾದನ ನುಡಿಯುಂ ಕೇಳಿ ಆ ಪು ರೋಹಿತರೆಲ್ಲರೂ ವಿಶೇಷವಾಗಿ ಕೋಪಗೊಂಡು, ಈ ಪ್ರಹ್ಲಾದನನ್ನು ಸಂಹರಿಸಬೇಕೆಂದು, ಮಹಾ ಭಯಂಕರವೆನಿಸಿದ, ಅತ್ಯುಗ್ರವಾದ ತೇಜಸ್ಸಿನಿಂದೊಡಗೂಡಿ, ಜ್ವಾಲಾಸಮೂಹಯುಕ್ತವಾದ, ಮುಖದಿಂದ ಭಯಂಕರಳೆನಿಸಿದ, ಬಬ್ಬಶಕ್ತಿಯಂ (ಮಾರಕ ದೇವತೆಯಂ) ತಮ್ಮ ಮಂತ್ರಶಕ್ತಿಯಿಂದ ನಿರ್ಮಿಸಿದರು. ॥೬೨॥ ಮಹಾಭಯಂಕರಳೆನಿಸಿದ ಈ ಕೆಯು, ಬಹಳಸಿಟ್ಟುಗೊಂಡು ಪ್ರಹ್ಲಾದನಬಳಿ ಓಡಿಬಂದುನಿಂತು, ತನ್ನ ಕಾಲುಗಳ ತುಳಿತದಿಂದ ಭೂಮಿಯನ್ನು ನಡುಗಿಸುತ್ತಾ, ಪ್ರಹ್ಲಾದನ ವಕ್ಷಸ್ಥಲದಲ್ಲಿ ತನ್ನಕೈಲಿದ್ದ ಕೂಲಾಯುಧದಿಂದ ತೀವ್ರವಾಗಿಹೊಡೆದಳು॥೬೩॥ಆಕೂಲವು ಈ ಹುಡುಗನ ಎದೆಯಬಳಿಗೆ ಬರುತ್ತಲೇ ಅವನ

* ಸುಖಸ್ಯ ದುಃಖಸ್ಯ ನಕೋಪಿ ದಾತಾ ಪರೋದ ದಾತೀತಿ ಕುಬುದ್ಧಿರೇಷಾ। ಅಹಂಕರೋ ವಿಾತಿ ವೃಥಾಭಿಮಾನಃ ಸ್ವಕರ್ಮಸೂತ್ರ ಗ್ರಥಿತೋಹಿ ಲೋಕಃ ॥ ಮನುಷ್ಯನಿಗೆ ಸುಖದುಃಖಗಳು ಬೇರೊಬ್ಬರಿಂದುಬರುತ್ತವೆಂಬ ತಿಳಿವಳಿಕೆಯು ಮೋಹಮೂಲಕವಾದುದು. "ನಾನು ಕರ್ತೃ, ನಾನು ಭೋಕ್ತೃ" ಎಂಬ ಇದೇ ಮೊದಲಾದ ಅಭಿಮಾನವೂ ಕೂಡ ವ್ಯರ್ಥವು. ಮನುಷ್ಯನು ತನ್ನ ಸುಕೃತ ದುಷ್ಕೃತಗಳಿಗನುರೂಪವಾದ ಫಲವನ್ನನುಭವಿಸುವನು. ಕರ್ಮವೆಂಬ ಸೂತ್ರವು ಇವನನ್ನು ಬಂಧಿಸಿ, ತನ್ನ ಅಧೀನದಲ್ಲಿರಿಸಿಕೊಂಡಿರುವುದು. ಇವನು ಯಾವುದಕ್ಕೂ ಸ್ವತಂತ್ರನಲ್ಲ. ಎಂಬುದಾಗಿ ಅಧ್ಯಾತ್ಮರಾಮಾಯಣದಲ್ಲಿ ಗುಹನೊಡನೆ ಲಕ್ಷ್ಮಣನು ಹೇಳಿರುವುದೂ ಇದಕ್ಕನುಸರವಾಗಿದೆ.

ಸಾಧು ಸಂಕ್ರುದ್ಧಾ ತಂ ಜಘಾನಾಥ ವಕ್ಷಸಿ ॥೪೪॥ ತತ್ಕಸ್ಯ ಹೃದಯಂ ಪಾಪ್ಯ ಶೂಲಂಬಾಲಸ್ಯ ದಿ ಪ್ತಮತ್ । ಜಗಾಮ ಖಂಡಿತಂ ಭೂಮೌ ತತ್ರಾಪಿ ಕತಧಾಽಭವತ್ ॥೪೫॥ ಯತ್ರಾನಪಾಯಿ ಭಗವಾ ಹೃದ್ಯಾಸ್ತೇ ಹರಿರೀಶ್ವರಃ । ಭಂಗೋ ಭವತಿ ವಜ್ರಸ್ಯ ತತ್ರ ಶೂಲಸ್ಯ ಕಾಕಥಾ ? ॥ ೪೬ ॥ ಅಪಾಪೇ ತತ್ರ ಪಾಪೈಶ್ಚ ಪಾತಿತಾ ದೈತ್ಯ ಯಾಜಕೈಃ । ತಾನೇವ ಸಾಜಘಾ ನಾಶು ಕೃತಾ ನಾಶಂ ಜಗಾಮಚ ॥ ೪೭ ॥ ಕೃತ್ಯಯಾ

ಹೃದಯವನ್ನು ಸೋಕುವುದಕ್ಕಿಂತಲೂ ಮುಂಚೆ ಕತ್ತರಿಸಿ ಕೆಳಗೆಬಿದ್ದು ನೂರಾರು ಚೂರಾಗಿ ಒಡೆದು ಹೋಯಿತು. ॥೪೫॥ ಎಲೈ ಮೈತ್ರೇಯನೆ, ಸಕಲವಿಧ ತೊಂದರೆಗಳಿಂದಲೂ ಕಾಪಾಡುವಂತಹ ಸಾಮರ್ಥ್ಯವುಳ್ಳ, ಷಡ್ಗುಣೈಶ್ವರ್ಯಸಂಪನ್ನನೂ, ಭಕ್ತದುರಿತಾಪಹಾರಕನೂ, ಸಕಲ ಜಗನ್ನಿಯಾಮಕನೂ ಎನಿಸಿದ ಪರಮಾತ್ಮನು ಈ ಪ್ರಹ್ಲಾದನ ಹೃದಯಾರವಿಂದದಲ್ಲಿ ನೆಲೆಸಿರುವಾಗ್ಗೆ, ವಜ್ರಾಯುಧವಾದರೂ ಆತನ ಎದೆಯು ಹತ್ತಿರಕ್ಕೆ ಬರುದೊಡನೆ ಭಗ್ನವಾಗುವುದು. ಇಂತಿರಲು ಸಾಮಾನ್ಯರೆನಿಸಿದ ಪುರೋಹಿತರಿಂದ ನಿರ್ಮಿತವಾದ ಆಭಿಚಾರಿಕ ದೇವತೆಯು ಕೈಲಿದ್ದ ಶೂಲವು ಮುರಿದು ಹೋಗುವುದೊಂದು ಆಶ್ಚರ್ಯವೇ ? ವಜ್ರವೇ ಭಗ್ನವಾಗುವಾಗ್ಗೆ ಶೂಲದಪಾಡು ಹೇಳಬೇಕಾದುದೇ ಇಲ್ಲವೆಂದು ಭಾವವು ॥ ೪೬ ॥ ಇಂತು ಪಾಪಶೀಲರೆನಿಸಿದ ದೈತ್ಯಪುರೋಹಿತರು ಮಂತ್ರದಿಂದ ನಿರ್ಮಿಸಿದ ಆ ದೇವತೆಯು, ಪಾಪಶೂನ್ಯನೂ, ಭಗವದ್ಭಕ್ತನೂ ಎನಿಸಿದ ಆ ಪ್ರಹ್ಲಾದನ ಬಳಿಸಾರದೆ, ತನ್ನ ಶಕ್ತಿಯು ಕುಗ್ಗಿಸಿಕೊಂಡು ತನಗೆ ಆಹಾರವು ದೊರೆಯದಿರುವ ಕಾರಣ ವಿಶೇಷವಾಗಿ ಕೋಪಗೊಂಡು, ತನ್ನನ್ನು ನಿರ್ಮಿಸಿದ ಆ ಪುರೋಹಿತರನ್ನೇ ಕೊಂದು ತನ್ನ ಹಸಿವೆಯುಂ ನೀಗಿಕೊಂಡು ಒಡನೆಯೇ ನಷ್ಟವಾದಳು. (ಅಥರ್ವಣ ಮಂತ್ರಗಳಿಂದುಂಟಾಗುವ ಶಕ್ತಿಯನ್ನು ನಾವು ಇತರರ ಕಡೆಗೆ ಉಪಯೋಗಿಸಿ, ಆ ಶಕ್ತಿಯು ಅಲ್ಲಿ ಕುಂಠಿತವಾದರೆ ನಮ್ಮನ್ನೇ ನಾಶಮಾಡುವುದು. ಆದುದರಿಂದ ಇಂತಹ ಕುಮಾರ್ಗದಲ್ಲಿ ಮನುಷ್ಯನು ಪ್ರಯತ್ನಿಸಬಾರದೆಂದು ಭಾವವು) ॥ ೪೭ ॥ ಹೀಂತು ಆ ನಾರಕದೇವತೆಯು

ದಹ್ಯ ಮಾನಾಂ ಸ್ತ್ವಾ ವಿಲೋಕ್ಯ ಸ ಮಹಾ ಮತಿಃ । ತ್ರಾಹಿ
ಕೃಷ್ಣೇ ತ್ಯನಂತೇತಿ ವದನ್ನಭ್ಯವ ಪದ್ಯತ ॥ ೫೪ ॥ ಸರ್ವ
ವ್ಯಾಪಿ! ಜಗದ್ರೂಪ! ಜಗತ್ಸ್ ೨ಷ್ಟ! ರ್ಜನಾರ್ದನ ! । ಪಾಹಿ
ವಿಪ್ರಾನಿಮಾ ನಸ್ಮಾ ದ್ದುಸ್ಸಹಾ ನ್ಮಂತ್ರ ಪಾವಕಾತ್ ॥ ೫೫ ॥
ಯಥಾ ಸರ್ವೇಷು ಭೂತೇಷು ಸರ್ವವ್ಯಾಪೀ ಜಗದ್ಗುರುಃ
ವಿಷ್ಣುರೇವ ತಥಾ ಸರ್ವೇ ಜೀವಂತ್ವೇತೇ ಪುರೋಹಿತಾಃ ॥೬೦॥
ಯಥಾ ಸರ್ವಗತಂ ವಿಷ್ಣುಂ ಮನ್ಯ ಮಾನೋನಪಾಯಿನಂ ।
ಚಿಂತಯನ್ಯುರಿಪಕ್ಷೇಽಪಿ ಜೀವಂ ತ್ವೇತೇ ತಥಾದ್ವಿಜಾಃ॥೬೧॥

ಆ ಪುರೋಹಿತರಂ ಸಂಹಾರಮಾಡುತಿರುವುದಂ ಕಂಡು ಕನಿಕರಗೊಂಡ, ಉದಾರ ಮನಸ್ಕನೆನಿಸಿದ ಪ್ರಹ್ಲಾದನು ((ಎಲೈ ಆಪತ್ಬಂಧುವೆ; ನಾಶರಹಿತನೆ, ಓ ಪರಮಾತ್ಮನೆ, ಇವರನ್ನು ಸಲಹು" ಎಂಬುದಾಗಿ ಗಟ್ಟಿಯಾಗಿ ಕೂಗಿಕೊಳ್ಳುತ್ತಾ,ಅವರ ಬಳಿಗೆ ಓಡಿಹೋದನು ॥ ೫೪ ॥ ಓ ಸರ್ವ ವ್ಯಾಪಿಎನಿಸಿದವನೆ, ಸರ್ವಾತ್ಮಕನೆ, ಜಗತ್ಸ್ರಷ್ಟೃವೆ, (ದುಷ್ಟಶಿಕ್ಷಕನೇ) ದುರಿತಾಪಹಾರಕನೆ, ಈ ಬ್ರಾಹ್ಮಣರು ಮಂತ್ರಾಗ್ನಿಯಿಂದ (ಮಂತ್ರೋಚ್ಚಾರಣೆಯಿಂದ.ಂಟಾದ ದೇವತೆಯಿಂದ) ಸುಟ್ಟುಹೋಗುತಿರುವರಲ್ಲಾ! ಇದನ್ನು ನೋಡಿ ಸಹಿಸುವುದೂ ಕೂಡ ಕಷ್ಟವಾಗಿರುವುದು. ಸಲಹು, ಸಲಹು, ಎಂಬುದಾಗಿ ಆ ಪರಮಾತ್ಮನನ್ನು ಹಲವು ಪರಿಯಿಂದ ವೊರೆಯಿಟ್ಟನು ॥ ೫೫ ॥ ಸರ್ವವ್ಯಾಪಕನೆನಿಸಿದ, ಪರನೇ ೀಶ್ವರಶಬ್ದವಾಚ್ಯನಾದ ವಿಷ್ಣುವು ಬಿಟ್ಟನೇ ಸಕಲ ಪ್ರಾಣಿಗಳಲ್ಲಿಯೂ, ನೆಲೆಸಿರುವುದು ದಿಟವಾಗಿದ್ದರೆ, ಆತನು ಸರ್ವಸ್ವರೂಪಿ ಎಂಬುದೂ ಕೂಡ ದಿಟವಾಗಿದ್ದರೆ ಪುರೋಹಿತರೆಲ್ಲರೂ ಬದುಕಲಿ ॥ ೬೦ ॥ ಸರ್ವಾಂತರ್ಯಾಮಿಎನಿಸಿ, ನಾಶರಹಿತನಾದ ವಿಷ್ಣುವು ನನ್ನಲ್ಲಿಯೂ ನನ್ನ ಮಿತ್ರವರ್ಗದಲ್ಲಿಯೂ, ನನ್ನ ಶತ್ರುಗಳೆನಿಸಿದ ಇವರಲ್ಲಿಯೂ, ಉದಾಸೀನವರ್ಗದಲ್ಲಿಯೂ ಏಕರೂಪದಿಂದಿರುವನೆಂದು ನಾನು ಇದುವರೆಗೂ ಏಕರೂಪವಾಗಿ ಆತನನ್ನು ಧ್ಯಾನವಮಾಡಿದ್ದುದೇ ಅದರೆ ಈ ಬ್ರಾಹ್ಮಣರೆಲ್ಲರೂ ಬದುಕಲಿ ॥೬೧॥

ನನ್ನನ್ನುಕೊಲ್ಲಲು ಬಂದಭಟರೂ, ನನಗೆಅನ್ನದಲ್ಲಿ ವಿಷವನ್ನಿಕ್ಕಿದ

ಯೇ ಹಂತು ಮಾಗತಾ ದತ್ತಂ ಯೈರ್ವಿಷಂ ಯೈ ರ್ಹುತಾ
ಕನಃ । ಯೈ ರ್ದಿಗ್ಧಜೈ ರಹಂ ಹ್ಯುಣ್ಣೋ ದಷ್ಟ ಸ್ಸರ್ಪೈ ರ್ಶ್ಚ
ಯೈರಹಂ ॥ ೪೨ ॥ ತೇಷ್ವಹಂ ಮಿತ್ರ ಪಕ್ಷೇಚ ಸಮಃ ಪಾ
ಪೇ ಽ ಸ್ಮಿ ನಕ್ಷಚಿತ್ । ತಥಾ ತೇನಾದ್ಯ ಸತ್ಯೇನ ಜೀವಂತ್ವ
ಸುರಯುಂಜಕಾಃ ॥ ೪೩ ॥ ಶ್ರೀ ಪರಾಶರಃ॥ ಇತ್ಯುಕ್ತಾ
ಸ್ತೇನ ತೇ ಸರ್ವೇ ಸಂಹೃಷ್ಟಾ ಶ್ಚ ನಿರಾಮಯಾಃ । ಸಮುತ್ತ
ಸ್ಥು ರ್ದ್ವಿಜಾಭೂಯ ಸ್ತಂ ಚೋಚುಃ ಪ್ರಶ್ರಯಾನ್ವಿತಂ ॥೪೪॥

ಪಾಜಕರೂ,ನನ್ನನ್ನು ಸುಡಶೋಸುಗ ಬೆಂಕಿಹಚ್ಚಿದವರೂ,ನನ್ನನ್ನುತು
ಳಿದು, ತಿವಿದುಕೊಲ್ಲಲೋಸುಗ ಬಂದ ದಿಗ್ಗಜಗಳೂ, ನನ್ನನ್ನು ಕಚ್ಚಿಕೊ
ಲ್ಲಲು ಬಂದಸರ್ಪಗಳೂ, ಇವುಗಳಲ್ಲೆಲ್ಲಾ, ಮಿತ್ರಪಕ್ಷದಂತೆಯೇ ಏಕ
ರೂಪವಾದ ಮನೋವೃತ್ತಿಯಿಂದಿರುವೆನು. ಯಾರಲ್ಲಿಯೂ ನಾನು ಕೇಡ
ನ್ನು ಬಗೆದವನೇಅಲ್ಲ, (ನನಗೆಅಪಕಾರವಮಾಡಿದ ವರಲ್ಲಿಯೂ ಕೂಡ ಕೇ
ಡುಬಗೆಯದೆ ಸ್ನೇಹಿತರಂತೆಯೇ ಪ್ರೀತಿಭಾವದಿಂದಿರುವೆನು) ನಾನುಮೇ
ಲೆಹೇಳಿದಂತೆ ಶತ್ರುಪಕ್ಷದಲ್ಲಿಯೂ ಕೂಡ ಮಿತ್ರಪಕ್ಷದವರಂತೆಯೇ
ಪ್ರೀತಿಯನ್ನೇ ಇರಿಸಿ, ಅವರಿಗೆ ಮನಸ್ಸಿನಿಂದಲೂ ಕೇಡನ್ನು ಬಗೆ
ಯದಿದ್ದುದೇ ದಿಟವಾಗಿದ್ದರೆ, ಈ ಅಸುರಪುರೋಹಿತರೆಲ್ಲರೂ ಬದುಕ
ಲಿ.(ನಾನುಎಲ್ಲರಲ್ಲಿಯೂ ಏಕರೂಪವಾದ ಮನೋವೃತ್ತಿಯನ್ನಿರಿಸಿ ಸ
ರ್ವಸಮನಾಗಿದ್ದುದೇ ದಿಟವಾದರೆ ನನ್ನ ಈ ಸಮದರ್ಶನದಿಂದ ಪ್ರಸನ್ನ
ನಾದ ಭಗವಂತನು ಇವರನ್ನು ಬದುಕಿಸಲೆಂದು ಭಾವವು) ॥ ೪೩ ॥
ಪರಾಶರನುಹೇಳುತ್ತಾನೆ—ಇಂತು ಪ್ರಹ್ಲಾದನು ನುಡಿಯುತಿರುವಾಗಲೇ
ಅಪುರೋಹಿತರೆಲ್ಲರೂ ಸ್ವಲ್ಪವೂ ವ್ಯಥೆಗೊಳ್ಳದೆ ತಮಗೆ ಒದಗಿದ್ದ ಆಪತ್ತಿ
ನಿಂದ ವಿಮುಕ್ತರೆನಿಸಿ, ಹರ್ಷದಿಂದೊಡಗೂಡಿ ಮೇಲಕ್ಕೆಎದ್ದರು. ಇದಾ
ದಮೇಲೂ ಕೂಡ ತನ್ನಿಂದ ಈ ಪುರೋಹಿತರೆಲ್ಲರೂ ಮರಳಬದುಕಿ
ದರೆಂದು ಉದ್ಧತನಾಗದೆ ವಿನಯದಿಂದೊಡಗೂಡಿ ತಲೆಬಾಗಿ ಕೈಕಟ್ಟಿ
ಕೊಂಡು ನಿಂತಿರುವ ಈ ಪ್ರಹ್ಲಾದನನ್ನು ಕಂಡು ಸಂತಸಗೊಂಡ ಆ
ಪುರೋಹಿತರೆಲ್ಲರೂ ಪ್ರಹ್ಲಾದನಬಳಿ ಸಾರ್ದುಅವನಿಗೆ ವಿಶೇಷವಾಗಿ ಮಂ
ಗಳಾಶಾಸನ ಮಾಡತೊಡಗಿದರು ॥ ೪೪ ॥ ಪುರೋಹಿತರು ಹೇಳು

ಪುರೋಹಿತಾಃ ॥ ದೀರ್ಘಾಯು ರಪ್ರತಿ ಹತೋ ಬಲವೀರ್ಯ ಸಮನ್ವಿತಃ । ಪುತ್ರ ಪೌತ್ರ ಧನೈಶ್ವರ್ಯೈ ರ್ಯುಕ್ತೋ ವತ್ಸ ! ಭವೋತ್ತ್ವಃ ॥ ೪೫ ॥ ಇತ್ಯುಕ್ತ್ವಾತಂ ತತೋ ಗತ್ವಾ ಯಥಾ ವೃತ್ತಂ ಪುರೋಹಿತಾಃ । ದೈತ್ಯರಾಜಾಯ ಸಕಲ ಮಾ ಚ ಚಕ್ಷು ರ್ಮಹಾಮುನೇ ॥೪೬॥

ಇತಿಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಅಷ್ಟಾದಶೋಧ್ಯಾಯಃ.

ತ್ತಾರೆ—"ಎಲೈ ಕರುಣಾಕಾಲಿಯೆನಿಸಿದ ಹುಡುಗನೆ, ನೀನು ಇಂತು ಮಹಾಮಹಿಮ ಸಂಪನ್ನನೆಂದು ನಾವು ಅರಿತವರಲ್ಲ. ಸರ್ವೋತ್ತಮವಾದ ಬಲವು ನಿನಗುಂಟಾಗಲಿ. ವಿಶೇಷವಾದ ವೀರ್ಯವಳ್ಳವನಾಗಿರು. ವಿಶೇಷವಾಗಿ ಮಕ್ಕಳು,ಮೊಮ್ಮಕ್ಕಳು ನಿನಗಾಗಲಿ ಪ್ರಭೂತವಾದ ಧನ, ಅಪ್ರತಿಹತವಾದ ಐಶ್ವರ್ಯಗಳನ್ನು ನೀನುಹೊಂದು. ನಿನಗೆಸಮನಾಗಿ ಎದುರುನಿಲ್ಲತಕ್ಕವನೇ ಇಲ್ಲದಿರಲಿ; ನೀನು ದೀರ್ಘಾಯುಷ್ಯವಂ ಪಡೆದು ಚಿರಕಾಲ ಬಾಳು, ಎಂಬದಾಗಿ ಆಪ್ರಹ್ಲಾದನಿಗೆ ಅನೇಕರತ್ನಕಾರ ಆಶೀರ್ವಚನಗಳಂ ನುಡಿದರು. ॥ ೪ ॥ ಎಲೈನುನಿವರ್ಯನೆನಿಸಿದ ಮೈತ್ರೇಯನೆ, ಇಂತು ಆಪುರೋಹಿತರೆಲ್ಲರೂ ಪ್ರಹ್ಲಾದನಿಗ ಮಂಗಳಾಶಾಸನಂಮಾಡಿ, ಅಲ್ಲಿಂದ ಹೊರಟು, ಅಲ್ಲಿನಡೆದ ಸಮಾಚಾರವನ್ನೆಲ್ಲಾ ದೈತ್ಯರಾಜನೆನಿಸಿದ ಹಿರಣ್ಯಕಶಿಪುವಿಗೆ ಬಿನ್ನವಿಸಿದರೆಂಬದಾಗಿ,
ಪರಾಶರನುಮೈತ್ರೇಯನಿಗೆ ಹೇಳುತ್ತಿದ್ದನೆಂಬಲ್ಲಿಗೆ

ಶ್ರೀವಿಷ್ಣುಪುರಾಣದ ಒಂದನೆಯ ಅಂಶದೊಳ್
ಹದಿನೆಂಟನೆಯ ಅಧ್ಯಾಯಂ ಮುಗಿದುದು.

ಅಷ್ಟಾದಶಾಧ್ಯಾಯಂ ಸಮಾಪ್ತಂ

ಶ್ರೀ.

ವಿಷ್ಣುಪುರಾಣ

ಪ್ರಥಮಾಂಶೇ ಷೋಡಶೋಧ್ಯಾಯಃ.

ಶ್ರೀ ಪರಾಶರಃ॥ ಹಿರಣ್ಯಕಶಿಪುಶ್ಚೈವಂ ತಾಂ ಕೃತ್ವಾಂ ವಿತಥೀಂ ಕೃತಾಂ। ಆಹೂಯ ಪುತ್ರಂ ಪಪ್ರಚ್ಛ ಪ್ರಭಾವಸ್ಯಾಸ್ಯ ಕಾರಣಂ ॥ ೧ ॥ ಹಿರಣ್ಯಕಶಿಪುಃ॥ ಪ್ರಹ್ಲಾದ! ಸುಪ್ರಭಾವೋಽಸಿ ಕಿಮೇತತ್ತೇ ವಿಚೇಷ್ಟಿತಂ ? । ವಿತನ್ಮಾಂತ್ರಾದಿ ಜನಿತಂ ಮುತಾಹೋ ಸಹಜಂ ತವ ? ॥ ೨ ॥ ಶ್ರೀ ಪರಾಶರಃ॥ ವಿನಾಪ್ಯಪೃಷ್ಟಸ್ತದಾ ಪಿತ್ರಾ ಪ್ರಹ್ಲಾದೋಽಸುರಬಾಲಕಃ। ಪ್ರಣಿಪತ್ಯ ಪಿತುಃ ಪಾದಾವಿದಂ ವಚನಮಬ್ರವೀತ್ ॥ ೩ ॥ ಪ್ರ

ಪರಾಶರನು ಹೇಳುತ್ತಾನೆ.—ಎಲೈ ಮೈತ್ರೇಯನೇ, ದೈತ್ಯಾಧಿಪನೆನಿಸಿದ ಹಿರಣ್ಯಕಶಿಪುವು ಇಂತು ಪುರೋಹಿತರ ನುಡಿಯಂ ಕೇಳಿ, ಆ ಪುರೋಹಿತರ ಮಂತ್ರಜನಿತಳಾದ ದೇವತೆಯು ಶಕ್ತಿಯೂ ಕೂಡ ಪ್ರಹ್ಲಾದನ ವಿಷಯದಲ್ಲಿ ಕಾಗ್ಗಿ ಹೋದ ಸಂಗತಿಯುಂ ತಿಳಿದು ತನ್ನ ಮಗನಾದ ಪ್ರಹ್ಲಾದನಂ ಕೂಗಿ ,ಅವನಿಗೆ ಇಷ್ಟೊಂದು ಮಹಿಮೆಯು ಎಲ್ಲಿಂದ ಬಂದಿತೆಂಬುದಾಗಿ ಕೇಳತೊಡಗಿದನು ॥ ೧ ॥ ಎಲೈ ಪ್ರಹ್ಲಾದನೆ, ನಿನ್ನ ಮಹಿಮೆಯು ಬಣ್ಣಿಸಲಸದಳವಾಗಿರುವುದು. ನಿನ್ನ ನಡತೆಯನ್ನು ಬಲ್ಲವರಾರು? ಈ ಮಹಿಮೆಯೆಲ್ಲವೂ ನಿನಗೆ ಎಲ್ಲಿಯದು ? ಮಂತ್ರೋಪಾಸನೆಯಿಂದುಂಟಾದುದೇ ? ಅಥವಾ ನಿನಗೆ ಜನ್ಮಸಿದ್ಧವಾದುದೇ ? ಎಂಬುದಾಗಿ ಹಿರಣ್ಯಕಶಿಪುವು ಪ್ರಹ್ಲಾದನನ್ನು ಪ್ರಶ್ನೆಮಾಡಿದನು ॥ ೨ ॥ ಪರಾಶರನು ಹೇಳುತ್ತಾನೆ—ಇಂತು ತಂದೆಯು ಮಾತನ್ನು ಲಾಲಿಸಿ, ಆತನ ಪ್ರಶ್ನೆಗೆ ಉತ್ತರ ಹೇಳಲೋಸುಗ ಅಸುರಬಾಲನೆನಿಸಿದ ಆ ಪ್ರಹ್ಲಾದನು ತನ್ನ ತಂದೆಯು ಒಳಸಾರ್ದ ಆತನ ಅಡಿದಾವರೆಗಳಿಗೆರಗಿ ಈ ರೀತಿ ಹೇಳತೊಡಗಿದನು ॥ ೩ ॥ ಪ್ರಹ್ಲಾದನು ಹೇಳಲುಪಕ್ರಮಿಸುತ್ತಾನೆ:—ಓ ತಂದೆಯೇ, ಈ ನನ್ನ ಮಹಿಮೆಯು ಮಂತ್ರಶಕ್ತಿಯಿಂದುಂಟೂ

ಹಾಲ್ಲದಃ॥ ನನುಂತಾ್ರದಿ ಕೃತಸ್ಯತ! ನ ಚ ನೈಶರ್ಗಿಕೋ ಮುಮು। ಪ್ರಭಾವ ವಿಷ ಸಾವಮಾನೋ್ಯೀ ಯಸ್ಯ ಯಸ್ಯಾಚ್ಯು ತೋ ಹೃದಿ ॥ ೪ ॥ ಅನ್ಯೇಷಾಂ ಯೋ ನ ಪಾಪಾನಿ ಚಿಂತ ಯತ್ಯಾತ್ಮನೋ ಯಥಾ । ತಸ್ಯ ಪಾಪಾ ಗಮುಸ್ತಾತ! ಹೇತ್ವಭಾ ವಾನ್ನ ವಿದ್ಯತೇ ॥ ೫ ॥ ಕರ್ಮಣಾ ಮನಸಾ ವಾಚಾ ಪರಪೀ ಡಾ ಕರೋತಿಯಃ । ತಚ್ಬೀಜಂ ಜನ್ಮಫಲಶಿ ಪ್ರ ನೂತಂ ತಸ್ಯ ಚಾತಶಭಂ ॥ ೬ ॥ ಸೊ ಽಶಂ ನ ಪಾಪ ಮಿಚ್ಛಾಮಿ ನ ಕರೋ

ದುದಲ್ಲ. ನನಿಗೆ ಇದು ಹಸ್ಮಸಿದ್ಧವೂ ಲ್ಲ. ಯಾರ ಯಾರ ಹೃದಯ ದಲ್ಲಿ ನಾಶರಹಿತನೆನಿಸಿದ ಪರಮಾತ್ಮನು ಸ್ಥಿರವಾಗಿ ವಾಸಿಸುವನೋ, ಅವ ರಿಗೆಲ್ಲಾ ಇಂತಹ ಮಹಿಮೆಯು ಸಾವಾನ್ಯವಾಮದು. (ಇದು ನನ್ನವು ಹಿಮೆಯಲ್ಲ ವಿಷ್ಣುವು ನನ್ನ ಹೃದಯದಲ್ಲಿದ್ದುಕೊಂಡು ಈ ರೀತಿ ತ ನ್ನ ಮಹಿಮೆಯನ್ನು ತೋರ್ಪಡಿಸುತಿರುವನು) ॥ ೪ ॥ ಯಾವನು ಇ ತರರಿಗೆ ಪಾಪಫಲಭೂತವಾದ ದುಃಖವನ್ನು ಹಾರೈಸುವುದಿಲ್ಲವೋ, ತನ್ನಂತೆಯೇ ಇತರರನ್ನೂ ಏಕರೂಪವಾಗಿ ಭಾವಿಸುವನೋ, ಅಥವಾ ತನ್ನ ವಿಷಯದಲ್ಲಿಯೇ ತಾನು ಎಂತು ಕೇಡನ್ನು ಬಗೆಯುವಾರನೋ, ಅದೇಪ್ರಕಾರ ತನ್ನಂತೆಯೇ ಇತರರೆಂದು ಭಾವಿಸಿ ಇತರರಿಗೆ ಮನಸ್ಸಿ ನಿಂದಲೂ ಕೂಡ ಯಾವನು ಕೇಡುಬಗೆಯುವುದಿಲ್ಲವೋ ಅಂತಹವನಿಗೆ, ಪಾಪಕಾರಣವೆನಿಸಿದ, ಇತರರಸೀಕ್ಷ್ಯೆಯನ್ನು ಸಹಿಸದಿರುವ, ದುಃಖವೇ ಇಲ್ಲದ ಕಾರಣ ಪಾಪ ಸಂಬಂಧವೂ ಇಲ್ಲಾ ॥ ೫ ॥ ಯಾವನಾದ ರೆ ಅನುದಿನವೂ ಮನೋವಾಕ್ಕಾಯಕರ್ಮಗಳಿಂದ ಇತರರಿಗೆ ಕೆಟ್ಟ ದನ್ನೇ ಹಾರೈಸುತ್ತ, ತನ್ನಕಾಲವನ್ನೆಲ್ಲಾ ವ್ಯರ್ಥವಾಗಿಕಳೆಯುವನೋ ಅಂತ ಹ, ಇತರರಿಗೆ ಕೇಡನ್ನು ಬಗೆಯುವುದೇ ಮುಖ್ಯವಾಗಿ ಉಳ್ಳನೀಚ ನಜನ್ಮವು ವಿಶೇಷವಾಗಿ ಅಶುಭಫಲಗಳನ್ನೇ ಅವನಿಗೆ ಉಂಟುಮಾಡುವು ದು. (ಹೆಚ್ಚಾದದುಃಖವನ್ನೇ ಫಲರೂಪವಾಗಿ ಕೊಡುತ್ತಾ ಅನುದಿನವೂ ವೃದ್ಧಿಯಾಗುವುದೆಂಬುಭಾವವು) ॥ ೬ ॥ ಸರ್ವಭೂತನಿವಾಸನೆನಿಸಿ ಸಾಕ್ಷಾತ್ಪರಾತ್ಪರ ವಸ್ತುವೆನಿಸಿದ ವಿಷ್ಣುವನ್ನು ನನ್ನಲ್ಲಿಯೂ ಭಾವಿಸು ತ್ತಾ, ಸರ್ವಸಮತ್ವ ಜ್ಞಾನದಿಂದೊಡಗೂಡಿದ ನಾನು ಯಾರವಿಷಯದಲ್ಲಿಯೂ

ಮಿ ವದಾಮಿಜ । ಚಿಂತಯಂತ್ಯ ಸರ್ವ ಭೂತಸ್ಥ ಮಾತ್ಮಾನ್ಯಪಿಚ
ಕೇಶವಂ ॥ ೭ ॥ ಶಾರೀರಂ ಮಾನಸಂ ದುಃಖಂ ದೈವಂ ಭೂತ
ಭವಂತಥಾ । ಸರ್ವತ್ರ ಸಮ ಚಿತ್ತಸ್ಯ ತಸ್ಯ ಮೇ ಜಾಯತೇ
ಕುತಃ ? ॥ ೮ ॥ಏವಂ ಸರ್ವೇಷು ಭೂತೇಷು ಭಕ್ತಿ ರ ವ್ಯಭಿ
ಚಾರಿಣೀ । ಕರ್ತವ್ಯಾ ಪಂಡಿತೈ ಜ್ಞಾತ್ವಾ ಸರ್ವ ಭೂತ ಮ
ಯಂ ಹರಿಂ ॥ ೯ ॥ಶ್ರೀಪರಾಶರಃ॥ ಇತಿಶ್ರುತ್ವಾ ಪದೈತ್ಯೇಂದ್ರಃ

ಕೆ ಡಸ್ನಬಗಯುವುದಿಲ್ಲ ನಂತೆ ಬ್ಬರುಕೆಟ್ಟವರಂದು ನಾಸುಬಾಯಿಂದ
ಲೂ ಹೇಳುವುದಿಲ್ಲ. ಆದುದರಿಂದ ನನಿಗೆ ಯಾರಿಂದ ತಾನೇ ಭಯವೇ
ನು? ನಾನು ಪಾಪಿಯಲ್ಲದಕಾರಣ ನನಗೆಯಾರೂ ಶತ್ರುಗಳಲ್ಲ ॥ ೬ ॥
ಓ ತಂದೆಯೇ , ನಾನು ಇಂತು ಎಲ್ಲೆಲ್ಲಿಯೂ ವಿಕರೂಪವಾದ ಮನೋ
ವೃತ್ತಿಯುಳ್ಳವನಾದುದರಿಂದ ಶಾರೀರಗಳಿನಿಸಿದ ಜ್ವರವೊದಲಾದ ದುಃ
ಖಗಳೂ, ಮಾನಸಗಳಿನಿಸಿದ ಜರಾಮರಣಾದಿಗಳೂ, ದೈವಿಕಗಳೆನಿಸಿದ
ಬೆಂಕಿ, ಸಿಡಿಲು ಬಡಿಯುವಿಕೆ, ಬಿರುಗಾಳಿ ಮೊದಲಾದುವುಗಳಿಂದುಂಟಾ
ಗುವ ಭಯಗಳೂ, ಭೌತಿಕಗಳೆನಿಸಿದ, ಹುಲಿ, ಕರಡಿ, ಹಾವು, ಕಳ್ಳಕಾ
ಕರು ಮೊದಲಾದ ಭೂತ ವಿಶೇಷಗಳಿಂದುಂಟಾಗುವ ದುಃಖವೂ, ಈ
ಯಾವುದೊಂದೂ ನನಗೆ ಇಲ್ಲವು. ನಾನು ಸಮಚಿತ್ತನಾಗಿರುವ ಕಾರಣ
ಪರಹಿಂಸಾ ಅಥವಾ ದುಃಖ ಚಿಂತನ ದಿಂದುಂಟಾಗುವ ಈ ದುಃಖ
ಗಳು ನನಗೆ ಸಂಭವಿಸಲು ಕಾರಣವೇ ಇಲ್ಲವೆಂದು ಭಾವವು ॥ ೮ ॥
ಇಂತು ಆತ್ಮನಾತ್ಮ ವಿವೇಕವನ್ನರಿತ ಜ್ಞಾನಿಯು ,,ಎಲ್ಲ ಭೂತಗಳೂ
ಆ ಪರಮಾತ್ಮನಿಂದಲೇ ಉಂಟಾದವು. ಆತನೇ ಎಲ್ಲ ಭೂತಗಳಲ್ಲಿಯೂ
ನೆಲೆಸಿರುವನು. ಈ ಜಗವೆಲ್ಲವೂ ಆತನ ಸ್ವರೂಪವೇ ಆಗಿರುವುದು''
ಎಂಬುದಾಗಿ ತಿಳಿದು ಸಕಲಭೂತಗಳಲ್ಲಿಯೂ ಪರಮಾತ್ಮನೆಂಬ ಭಾವನೆ
ಯನ್ನು ಸ್ಥಿರಗೊಳಿಸಿ ಅನನ್ಯವಾದ ಭಕ್ತಿಯನ್ನು ಆ ಪರಮಾತ್ಮನಲ್ಲಿರಿಸ
ಬೇಕು ॥ ೯ ॥ ಈ ರೀತಿ ಪ್ರಹ್ಲಾದನು ಹೇಳಿದ ಮಾತುಗಳಿಂದ ದೈ
ತ್ಯಾಧಿಪನಾದ ಹಿರಣ್ಯಕಶಿಪು ಸಿಟ್ಟಿನಿಂದ ತನ್ನವಿವೇಕವನ್ನು ಹಾಳುಮಾಡಿ
ಕೊಂಡು ಉನ್ಮತ್ತವಾದ ಆ ಉದ್ರೇಗದಿಂದಲೇ ತನ್ನಸೇವಕ
ರಿಗೆ ಹೀಗೆಂದು ಈ ರೀತಿಆಜ್ಞೆ ಮಾಡಿದನು ॥ಗದ್ಯ॥ ಹಿರಣ್ಯಕಶಿಪುವು ಹೇಳಿ

ಪ್ರಾಸಾದ ಶಿಖರೇ ಸ್ಥಿತಃ। ಕ್ರೋಧಾಂಧಕಾರಿತ ಮುಖಃ ಪ್ರಾಹ ದೈತೇಯ ಕಿಂಕರಾನ್ ॥ ೧೦ ॥ ಹಿರಣ್ಯ ಕಶಿಪುಃ॥ ದುರಾತ್ಮ ಕ್ಷಿಪ್ಯತಾ ಮುಸ್ಮಾತ್ ಪ್ರಾಸಾದಾ ಚ್ಛತಯೋಜನಾತ್ । ಗಿರಿ ಪೃಷ್ಠೇ ಪತತ್ವಸ್ಮಿನ್ ಶಿಲಾಭಿನ್ನಾಂಗ ಸಂಹತಿಃ ॥ ೧೧ ॥ ಶ್ರೀ ಪರಾಶರಃ॥ ತತಸ್ತಂ ಚ ಕ್ಷಿಪು ಸ್ಸರ್ವೇ ಬಾಲಂ ದೈತೇಯ ಕಿಂಕರಾಃ । ಪಪಾತ ಸೋ ೨ ಪ್ಯಧಃ ಹ್ಸಿಪ್ತೋ ಹೃದಯೇನೋದ್ವಹನ್ ಹರಿಂ ॥ ೧೨ ॥ ಪತಮಾನಂ ಜಗದ್ಧಾತ್ರೀ ಜಗದ್ಧಾತರಿ ಕೇಶವೇ । ಭಕ್ತಿಯುಕ್ತಂ ದಧಾರೈನ ಮುಪ ಸಂಗವ್ಯ ಮೋದಿನೀ ॥ ೧೩ ॥ ತತೋ ವಿಲೋಕ್ಯ ತಂ ಸ್ವಸ್ಥ ಮವಿ

ತ್ಮನೆ—(ಓದೈತ್ಯಕಿಂಕರರೆ) ದುರಾತ್ಮನೆನಿಸಿದ ಈ ಪ್ರಹ್ಲಾದನನ್ನು ನೂರಾರು ಯೋಜನದಷ್ಟು ಉನ್ನತವಾಗಿರುವ ಈ ಉಪ್ಪರಿಗೆಯಿಂದ ಕೆಳಕ್ಕೆತಳ್ಳಿರಿ. ಇಲ್ಲಿಂದ ಈಕೆಳಗೆ ಕಾಣುವ ಪರ್ವತದತುದಿಯಲ್ಲಿ ಬಿದ್ದು ತನ್ನಕೈಕಾಲುಗಳೆನ್ನೆಲ್ಲಾ ಚೂರುಚೂರಾಗಿ ಮುರಿದುಕೊಂಡು ಸಾಯಲಿ ॥ ೧೧ ॥ ಪರಾಶರನುಹೇಳುತ್ತಾನೆ— (ಎಲೈವೈತ್ರೇಯನೆ,) ಇಂತು ಹಿರಣ್ಯಕಶಿಪುವಿನ ಆಜ್ಞೆಯಾದಕೂಡಲೆ ಆ ದೈತ್ಯಕಿಂಕರರೆಲ್ಲರೂ ದಯನೀಯನೆನಿಸಿದ ಈ ಹುಡುಗನನ್ನು ಎತ್ತರವಾದ ಆ ಉಪ್ಪರಿಗೆಯಿಂದ ಕೆಳಕ್ಕೆನೂಕಿದರು. ಇಂತು ಅವರು ತಳ್ಳುತ್ತಿರುವಾಗಲೂಕೂಡ ಈ ಪ್ರಹ್ಲಾದನು ಭಕ್ತದುರಿತಾ ಪಹಾರಕನಾದ ಶ್ರೀಮಹಾವಿಷ್ಣುವನ್ನು ಚಿತ್ತದಲ್ಲಿ ಮನನಮಾಡುತ್ತಾ ಅತ್ಯುನ್ನತವಾದ ಆ ಉಪ್ಪರಿಗೆಯ ತುದಿಯಿಂದ ಕೆಳಗೆ ಬೀಳುತ್ತಿದ್ದನು. ॥ ೧೦ ॥ ಇಂತು ಕೆಳಗೆಬೀಳುತ್ತಿರುವ, ಜಗದ್ರಕ್ಷಕನೆನಿಸಿದ ಕೇಶವನಲ್ಲಿ ನಿರತಿಶಯ ಭಕ್ತಿಸಂಪನ್ನನೆನಿಸಿದ ಈಪ್ರಹ್ಲಾದನಂಕಂಡು ಜಗಜ್ಜನನಿಎನಿಸಿದ ಭೂದೇವಿಯು ಗಾಬರಿಯಿಂದ ಇವನಬಳಿಗೆ ಓಡಿಬಂದು ಇವನುಕೆಳಕ್ಕೆ ಬೀಳುವುದಕ್ಕಿಂತಲೂ ಮುಂಚೆಯೇ ತನ್ನಕೈಗಳೆನ್ನೊಡ್ಡಿ ಇವನನ್ನುಹಿಡಿದುಕೊಂಡು ಇವನಿಗೆಸ್ವಲ್ಪವೂ ನೋಯುವಾಗದಂತೆ ಇವನನ್ನುಕಾಪಾಡಿದಳು ॥ ೧೨ ॥ ಇಂತಾದರೂ ಕೂಡ ಯಾವುದೊಂದು ವಿಘವಾದಭಂಗವೈಕಲ್ಯವನ್ನೂ ಹೊಂದದೆ, ಸ್ವಲ್ಪವೂನೋವಿಲ್ಲದೆ ಸುಖವಾಗಿಯೇ ಇದ್ದಪ್ರಹ್ಲಾದನನ್ನು ಕಂಡಜ

ತೀಕ್ಷ್ಣಾರ್ಸ್ಥ ಬಾಧನಂ।ಹಿರಣ್ಯ ಕಶಿಪುಃ ಪ್ರಾಹ ಕಂಬರಂಮಾ
ಯಿನಾಂ ವರಂ॥೧೪॥ಹಿರಣ್ಯಕಶಿಪುಃ॥ನಾಸ್ಮಾಭಿ ಶ್ಚಕ್ಯತೇ ಹಂ
ತು ಮುಮುಂ ದುರ್ವೃತ್ತ ಬಾಲಕಃ । ಮಾಯಾಂ ವೇತ್ತಿ ಭ
ವಾಂ ಸ್ತತ್ಸ್ಮಾ ನ್ಮಾಯಾ ಯೈನಂ ನಿಷೂದಯ ॥೧೫॥ ಕಂಬರಃ॥
ಸೂದಯಾ ವ್ಯೇಷ ದೈತ್ಯೇಂದ್ರ ! ಪಶ್ಯ ಮಾಯಾ ಬಲಂ ಮಮ।
ಸಹಸ್ರ ಮತ್ರ ಮಾಯಾನಾಂ ಪಶ್ಯ ನೋ ದಶಕಂ ತಥಾ॥ ೧೬ ॥
ಶ್ರೀ ಪರಾಶರಃ ॥ ತತ ಸ್ಸ ಮಸೃಜನ್ಮಾಯಾಃ ಪ್ರಹ್ಲಾದೇ ಕಂಬ
ರೋಽಸುರಃ । ವಿನಾಶ ಮಿಚ್ಛ್ಕ ನ್ದುರ್ಬುದ್ಧಿ ಸರ್ವತ್ರ ಸಮ ದ

ಅತ್ಯಂತ ಕೋಪಾವೇಶದಿಂದೊಡಗೂಡಿದ ಹಿರಣ್ಯಕಶಿಪುವು ಮಾಯೆ
ಯನ್ನರಿತವರಲ್ಲಿ ಅಗ್ರಗಣ್ಯ (ನಿಪುಣ)ನೆನಿಸಿದ ಶಂಬರನೆಂಬ ರಕ್ಕಸನಂ
ಕುರಿತು ॥ ೧೪ ॥ ಎಲ್ಲೆ ಶಂಬರನೆ; ಈ ದುರ್ಮಾರ್ಗ ಹುಡುಗನನ್ನು
ಕೊಲ್ಲಿಸಲು ಕಸ್ತ್ರ, ವಿಷ, ಅಗ್ನಿವೊದಲಾದ ಅನೇಕಬಗೆಗಳಿಂದ ಪ್ರಯ
ತ್ನಿಸಿದೆನು. ಅವುಗಳನ್ನೆಲ್ಲಾ ಈ ನೀಚನು ಮಣಿ, ಮಂತ್ರ,ವೊದಲಾ
ದುವುಗಳಿಂದ ಸ್ತಂಭಿಸಿದನು. ಆವೇಲೂ ಕೂಡ ಮಣಿ ಮಂತ್ರಾದಿಗ
ಳಿಗೆ ಸಾಧ್ಯವಾಗ ಲಾರದೆಂದು ಭಾವಿಸಿ ಈ ಉಪ್ಪರಿಗೆಯ ತುದಿಯಿಂದ
ಇವನನ್ನು ಕೆಳಕ್ಕೆ ತಳ್ಳಿಸಿದೆನು. ಆದರೂಸಾಯಲಿಲ್ಲ. ವಾಸ್ತವಿಕಗ
ಳಾದ ಉಪಾಯಗಳಿಂದ ಇವನನ್ನು ಕೊಲ್ಲಲಸಾಧ್ಯ ವಾಗಿರುವುದು.
ಆದುದರಿಂದ ಈ ದುಷ್ಟನನ್ನು ಕೊಲ್ಲಲು ನವ್ಮಿಂದಸಾಧ್ಯವಲ್ಲ. ನೀನಾ
ದರೆ ಅನೇಕ ಮಾಯೆಗಳನ್ನರಿತವನು. ಆದಕಾರಣ ಈ ನೀಚನನ್ನು
ನಿನ್ನಮಾಶಕ್ತಿಯಿಂದ ಸಂಹರಿಸು, ಎಂಬದಾಗಿ ಆಜ್ಞಾಪಿಸಿದನು. ॥ ೧೫ ॥

ಇಂತು ಹಿರಣ್ಯ ಕಶಿಪುವಿನ ಆಜ್ಞೆಯನ್ನು ಶಿರಸಾವಹಿಸಿದ ಶಂಬ
ರನು ಹಿರಣ್ಯಕಶಿಪುವಂ ಕುರಿತು ,ಎಲ್ಲೆ ದೈತ್ಯೇಂದ್ರನೆ, ಇದೋ ನಾನೀ
ಗ ಇವನನ್ನು ಕೊಲ್ಲುವೆನು. ನನ್ನ ಮಾಯಾ ಬಲವನ್ನಾದರೂ ಸ್ವಲ್ಪ
ಪರೀಕ್ಷಿಸಿನೋಡು. ನಾನೇನೂ ಸಾಮಾನ್ಯನಾದ ಮಾಯಾವಿಯಲ್ಲವು;
ನನ್ನಲ್ಲಿ ಸಾವಿರಾರು ಮಾಯೆಗಳಿರುವುವು' ಎಂಬದಾಗಿ ಹೇಳಿದನು.॥೧೬॥
ಪರಾಶರನು ಹೇಳುತ್ತಾನೆ--- ತರುವಾಯ ಆತ್ಮ ವಿನಾಶವನ್ನೆದುರು
ನೋಡುತ್ತಿರುವ,ದುರ್ಬುದ್ಧಿ ಎನಿಸಿದ ಈಶಂಬರಾಸುರನು ಸಕಲ ಭೂತ

ರ್ಶನಿ ॥ ೧೬ ॥ ಸಮಾಹಿತ ಮನಾ ವಿಷ್ಣೂ ಕಂಬರೇಽಪಿ ವಿಮು
ತ್ಸರಃ । ಮೈತ್ರೇಯ ! ಸೋಽಪಿ ಪ್ರಹ್ಲಾದಸ್ತಸ್ಮಾರ ಮಧುಸೂ
ದನಂ ॥ ೧೪ ॥ ತತೋಽ ಭಗವತಾ ತಸ್ಯ ರಕ್ಷಾರ್ಥಂ ಚಕ್ರಮು
ತ್ತಮಂ । ಆ ಜಗಾಮ ಸಮಾಜ್ಞಪ್ತಂ ಜ್ವಾಲಾ ಮಾಲಿ ಸುದ
ರ್ಶನಂ ॥೧೫॥ ತೇನ ಮಾಯಾ ಸಹಸ್ರಂ ತಚ್ಛಂಬರಸ್ಯಾ
ಶು ಗಾಮಿನಾ । ಬಾಲಸ್ಯ ರಕ್ಷಣಾ ದೇಹ ಮೇ ಕೈಕಂ ಚ ನಿ
ಷೂದಿತಂ ॥೧೦॥ ಸಂ ಶೋಷಕಂ ತದಾವಾಯುಂ ದೈತ್ಯೇಂದ್ರ

ಗಳಲ್ಲಿಯೂ ಏಕರೂಪವಾದ ಮನೋವೃತ್ತಿಯುಳ್ಳವನಾದ ಕಾರಣ ಸ
ಮದರ್ಶಿ ಎನಿಸಿದ ಈ ಪ್ರಹ್ಲಾದನ ವಿಷಯದಲ್ಲಿ ತನ್ನ ಬುದ್ಧಿ ಚಾತುರ್ಯ
ವನ್ನೆಲ್ಲಾ ವಿನಿಯೋಗಪಡಿಸಿ ಅನೇಕ ಮಾಯೆಗಳನ್ನು ನಿರ್ಮಿಸಿದನು॥೧೩॥
ಎಲೈ ಮೈತ್ರೇಯನೆ; ಆ ಕಾಲದಲ್ಲೂ ಕೂಡ ಪ್ರಹ್ಲಾದನು ತನಗೆ ಅಪಕಾ
ರವಾಗುತಿರುವ ಶಂಬರನ ವಿಷಯದಲ್ಲಿಯೂ ಮಾತ್ಸರ್ಯವನ್ನಿಡದೆ ಏಕರೂ
ಪವಾದ ಮನೋವೃತ್ತಿಯಿಂದ, ಮಧುವೆಂಬ ರಾಕ್ಷಸನನ್ನು ಕೊಂದು
ಲೋಕವನ್ನುದ್ಧರಿಸಿದ ಶ್ರೀ ಮಹಾ ವಿಷ್ಣುವನ್ನೇ ಸ್ಮರಿಸುತ್ತಾ ನಿರ್ವಿಕಾ
ರನಾಗಿರುತ್ತಿದ್ದನು॥೧೪॥ಇಂತು ಶಂಬರಾಸುರನು ತನ್ನ ಬುದ್ಧಿ ಕೌಶಲ್ಯ
ವನ್ನೆಲ್ಲಾ ವೆಚ್ಚವಾಡಿ ಸಾವಿರಾರು ಮಾಯೆಗಳಂ ಆ ಪ್ರಹ್ಲಾದನಮೇಲೆ
ಪ್ರಯೋಗಿಸಿರುವುದಂ ಕಂಡು, ಭಕ್ತಾನು ಕಂಪಿಯೂ ಅಪದ್ಬಂಧು
ವೂ ಎನಿಸಿದ ಷಡ್ಗುಣೈ ಶ್ವರ್ಯ ಸಂಪನ್ನ ನೆನಿಸಿದಶ್ರೀ ಮಹಾವಿಷ್ಣುವು ತ
ನ್ನ ಭಕ್ತನ ದೇಹ ಸಂರಕ್ಷಣೆಗಾಗಿ ತನ್ನಚಕ್ರಾಯುಧಕ್ಕೆ ಆಜ್ಞೆಯನ್ನಿ
ತ್ತನು, ಇಂತು ವಿಷ್ಣುವಿನ ಆಜ್ಞೆಯಾದ ಕೂಡಲೇ ಸಾವಿರಾರು ಜ್ವಾ
ಲೆಗಳ ಮಾಲೆಗಳಿಂದ ಕೂಗೊಳಿಸುವ, ಶುದ್ಧಜ್ಞಾನಸ್ವರೂಪವೆನಿಸಿದ,ಸುದ
ರ್ಶನವೆಂಬ ಚಕ್ರವು ಈ ಪ್ರಹ್ಲಾದನಿದ್ದೆಡೆಗೆ ಬಂದು, ಬಾಲನಾದ ಈಪ್ರ
ಹ್ಲಾದನದೇಹಕ್ಕೆ ಸ್ವಲ್ಪವೂ ಅಪಾಯವುಂಟಾಗದಂತೆ ಜಾಗರೂಕತೆಯಿಂ
ದ ಕಾಪಾಡಿಕೊಳ್ಳುತ್ತಾ, ಇವನ ಸುತ್ತಲೂ, ಅತಿವೇಗವಾಗಿ ಸುತ್ತಾಡು
ತ್ತಾ, ಆ ಶಂಬರನ ಮಾಯೆಗಳೊಂದೂ ಇವನ ಬಳಿ ಸುಳಿದಾಡದಂತೆ
ಬಂದೊಂದು ಮಾಯೆಯನ್ನೂ ಬಾದೊಂದು ಸಾರಿ ನಾಶಗೊಳಿಸುತ್ತಾ,
ಕೊನೆಗೆ ಸಂಪೂರ್ಣವಾಗಿ ಅವನಲ್ಲಿರುವ ಮಾಯಾಶಕ್ತಿಗಳನ್ನೆಲ್ಲಾ ನಾಶ

ಇದಮಬ್ರುವೀತ್ । ಶೀಘ್ರಮೇವ ಮಮಾದೇಶಾದ್ದುರಾತ್ಮಾ
ನೀಯತಾಂ ಕ್ಷಯಂ ॥ ೨೧ ॥ ತಥೇತ್ಯುಕ್ತ್ವಾ ಚ ಸೋಽ
ಪ್ಯೇನಂ ವಿವೇಶ ಪವನೋ ಲಘುಃ । ಶೀತೋಽತಿ ರೂಕ್ಷಶ್ಚೋಷಾ
ಯ ತದ್ದೇಹಸ್ಯಾತಿ ದುಸ್ಸಹಃ ॥ ೨೨ ॥ ತೇನಾವಿಷ್ಟಂ ತಥಾ
ಽಽತ್ಮಾನಂ ಸಬುದ್ಧ್ವಾ ದೈತ್ಯಬಾಲಕಂಃ । ಹೃದಯೇನ ಮಹಾ
ತ್ಮಾನಂ ದಧಾರ ಧರಣೀಧರಂ ॥ ೨೩ ॥ ಹೃದಯಸ್ಥ ಸ್ತತಸ್ತ

ಮಾಡಿತು ॥ ೨೦ ॥ ಇಂತು ಮಾಯಾವಿಯಾದ ಶಂಬಸುರನ ಮಾಯೆ
ಗಳೆಲ್ಲವೂ ನಷ್ಟವಾದುದಂ ಕಂಡು ದೈತ್ಯಾಧಿಪನೆನಿಸಿದ ಹಿರಣ್ಯಕಶಿಪುವು
ವಿಶೇಷವಾಗಿ ಆಗ್ರಹಗೊಂಡು ಬಳಿಕ್ಕಿದು ಇರಲಿ: ಈ ನೀಚನನ್ನುಹೀ
ಗೆಲ್ಲಾ ಕೊಲ್ಲಲಾಗದು. ಕಣ್ಣಿಗೆ ಕಾಣತಕ್ಕ ಉಪಾಯಗಳನ್ನು ಮಾಡಿ
ದರಲ್ಲವೆ ಇವನೂ ಅದಕ್ಕೆತಕ್ಕ ಉಪಾಯಗಳನ್ನು ಕಲ್ಪಿಸಿಕೊಳ್ಳುವನು.
ಆದುದರಿಂದ ಅವನಕಂಣಿಗೆ ಗೋಚರವಾಗದಂತಹ ಉಪಾಯದಿಂದ ಇ
ವನನ್ನು ಕೊಲ್ಲಬೇಕೆಂದೆಣಿಸಿ, ಶರೀರವನ್ನು ಬಣಗಿಸಿ ರಕ್ತಮಾಂಸವನ್ನೆ
ಲ್ಲಂಹೀರಿ, ಬಲವನ್ನೆಲ್ಲಾ ಹಾಳುಮಾಡತಕ್ಕ ವಾಯುವನ್ನುಕ್ಕರಿಸು ಬಿ
ವಾಯುವೆ; ಇದೋನನ್ನ ಆಜ್ಞಾನುಸಾರ ಈಕ್ಷಣ ಇವನ ಬಡಲಂಹೊ
ಕ್ಕು, ಇವನಶರೀರವನ್ನೆಲ್ಲಾ ಹೀರಣಗೊಳಿಸಿ ಇವನನ್ನು ಕೊಲ್ಲುಎಂಬ
ದಾಗಿ ಆಜ್ಞಾಪಿಸಿದನು ॥ ೨೧ ॥ಇಂತುಹಿರಣ್ಯಕಶಿಪುವಿನಆಜ್ಞಾನುಸಾರ ವಾ
ಯುವೂಕೂಡ ಆಪ್ರಹ್ಲಾದನದೇಹವನ್ನು ಕೋಪಿಸಿಒವನನ್ನು ನಾಶಮಾ
ಡ ಲೋಸುಗ ವಿಶೇಷವಾಗಿ ತಂಣಗೂ, ಬಹಳವಾಗಿ ಕೊರೆಯುವಂತೆ
ಯೂ, ಸಹಿಸಲಾಗದಂತೆ ಶೀಘ್ರವಾಗಿ ತನ್ನ ರೂಪವಂಮಾರ್ಪಡಿಸಿ ಆ
ಪ್ರಹ್ಲಾದನ ಶರೀರವುಂಪೊಕ್ಕನು. ॥ ೨೨ ॥ ತರುವಾಯ ದೈತ್ಯಬಾ
ಲಕನೆನಿಸಿದ ಈ ಪ್ರಹ್ಲಾದನು ತನ್ನಹೃದಯವನ್ನು ವಾಯುವು ಪ್ರವೇಶಿ
ಸಿರುವನೆಂಬದಾಗಿ ತಿಳಿದು ಹಿಂದಿನಂತೆಯೇ ಈಗಲೂಕೂಡ ವಿಷ್ಣುವನ್ನು
ಳೆದು,ತನಗೆ ಬೇರೆಯಾರೂ ರಕ್ಷಕರಿಲ್ಲಂದು ನಿಶ್ಚಯಿಸಿ, ವರಾಹರೂಪ
ವಂತಾಳಿ ಭೂಮಿಯನ್ನುದ್ಧರಿಸಿದ ಆ ಮಹಾವಿಷ್ಣುವನ್ನೇ ತನ್ನಹೃದ
ಯಮಂದಿರವಿಂದದಲ್ಲಿ ಧ್ಯಾನಮಾಡತೊಡಗಿದನು. ॥ ೨೩ ॥ ಆಬಳಿಕ ಈ
ಪ್ರಹ್ಲಾದನ ಹೃದಯಾರವಿಂದ ನಿವಾಸಿಯಾಗಿದ್ದ ಶ್ರೀ ಮಹಾವಿಷ್ಣುವು

ಸ್ಯ ತಂ ವಾಯು ಮತಿಶೋಷಣಂ । ಪಪೌ ಜನಾರ್ದನಃ ಕ್ರುದ್ಧ
ಸ್ಸಖಯಾ ಪವನಃ ಹೃಯಂ ॥ ೨೪ ॥ ಹ್ಲೀಣಾಸು ಸರ್ವಮಾ
ಸು ಪವನೇ ಸಂಹೃಯಂಗತೇ। ಜಗಾವ ಸೋಪಿ ಭವನಂ ಗುರೋ
ರೇವಮಹಾಮತಿಃ ॥ ೨೫ ॥ ಅಹನ್ಯಹನ್ಯಥಾ ಚಾರ್ಯೋ
ನೀತಿಂ ರಾಜ್ಯಫಲಪ್ರದಾಂ । ಗ್ರಾಹಯಾಮಾಸ ತಂ ಬಾಲಂ ರಾ
ಜ್ಞಾಮುಶನಸಾಕೃತಾಂ ॥ ೨೬ ॥ ಗೃಹೀತ ನೀತಿ ಶಾಸ್ತ್ರಂ ತಂ
ವಿನೀತಂ ಸ ಯದಾ ಗುರುಃ।ಮೇನೇ ತದ್ಯೈನಂ ತತ್ಪಿತ್ರೇ ಕಥಯಾ
ಮಾಸ ಶಕ್ಷಿತಂ ॥ ೨೭ ॥ ಆಚಾರ್ಯಃ॥ ಗೃಹೀತ ನೀತಿಶಾಸ್ತ್ರಸ್ತೇ

ತನ್ನ ಭಕ್ತನನ್ನ ಈಪರಿ ಹಿಂಸಿಸಲುಪಕ್ರಮಿಸಿದ, ಅತ್ಯಂತ ಕೋ
ಪಕನಾದ ಈವಾಯುವಿನಮೇಲೆ ವಿಶೇಷವಾಗಿ ಸಿಟ್ಟುಗೊಂಡು ತಾನು
ಆ ವಾಯುವನ್ನು ಸಂಪೂರ್ಣವಾಗಿ ಪಾನಮಾಡಿದನು. ಇದರಿಂದ
ಕೋಪಗೊಂಡು ಪ್ರವರ್ತಿಸಿದ ವಾಯುವೂಕೂಡ ನಾಶವನ್ನೈದಿದನು.
(ಭೀಷಾಸ್ಮಾದ್ವಾತಃ ಪವತೇ, ಇತ್ಯಾದಿಶ್ರು ತಿಪ್ರಮಾಣಾನುಸಾರ ಆ ಪ
ರಮೇಶ್ವರನಆಜ್ಞೆಯಂತೆ ನಡೆಯುವವಾಯುವು ಪ್ರಹ್ಲಾದನ ಶರೀರ ಕೋ
ಪಗೊಂಡು ಪ್ರಯತ್ನಿಸಿ ಅವನ ಹೃದಯವಂ ಪ್ರವೇಶಿಸಿ ಅಲ್ಲಿದ್ದ ಮಹಾವಿ
ಷ್ಣುವಿನ ತೇಜಸ್ಸಿನಲ್ಲಿ ಐಕ್ಯವಂಪಡೆದು ತಾನು ಪವನಿಗೆ ಸಹಾಯಕನಾದ
ನೆಂದು ಭಾವವು.) ॥ ೨೩ ॥ ಇಂತು ಸಕಲವಾಯೆಗಳೂ ನಾಶವ
ನ್ನೈದಿ ವಾಯುವೂಕೂಡ ಹ್ಲೀಣವಾದುದಂಕಂಡು ಮಹಾಮತಿ ಸಂ
ದನ್ನನೆನಿಸಿದ ಈ ಪ್ರಹ್ಲಾದನೂ ಕೂಡ ಹಿಂದಿನಂತೆಯೇ ತನ್ನಗುರುಕಲ
ವನ್ನೇ ಸೇರಿದನು. ॥ ೨೫ ॥ ತರುವಾಯು ಇವನ ಗುರುವು ಅನುದಿನದ
ಲ್ಲಿಯೂ, ರಾಜರುಮಾಡತಕ್ಕ ಪ್ರಜಾಪಾಲನಾದಿ ರಾಜಕಾರ್ಯಗಳಿಗೆ ಉ
ಪಯೋಗಿಸುವಂತೆ ಶುಕ್ರಾಚಾರ್ಯರಿಂದ ಪ್ರಣೀತವಾದ ಶುಕ್ರನೀತಿಎಂಬ
ರಾಜನೀತಿಯನ್ನ ಈ ಪ್ರಹ್ಲಾದನಿಗೆ ಪಾಠ ಕೇಳಿಕೊಡಗಿದನು. ॥ ೨೬ ॥
ಇಂತುಸಂಪೂರ್ಣವಾಗಿ ನೀತಿವಿದ್ಯಾಭ್ಯಾಸವಂ ಪೂರೈಸಿದಬಳಿಕ ಇವ
ನುನೀತಿಶಾಸ್ತ್ರದಲ್ಲಿ ಪಾರ್ವೀಣ್ಯತಂ ಪಡೆದಿರುವನು' ಎಂಬದಾಗಿ ಗುರು
ವುತನ್ನಮನಸ್ಸಿನಲ್ಲಿ ಜನ್ಮಾಗಿ ನಂಬಿಗೆಯನ್ನುಂಟು ಮಾಡಿಕೊಂಡನು.
ತರುವಾಯತನ್ನಶಿಷ್ಯನು ಇಂತು ವಿನೀತನೆಂಬದಾಗಿ (ವಿಶೇಷವಾಗಿನೀತಿ

ಪುತ್ರೋ ದೈತ್ಯಪತೇ ! ಕೃತಃ । ಪ್ರಹ್ಲಾದ ಸ್ತತ್ವತೋ ವೇತ್ತಿ
ಭಾರ್ಗವೇಣ ಯದೀರಿತಂ ॥೪೪॥ ಹಿರಣ್ಯ ಕಶಿಪುಃ॥ ಮಿತ್ರೇ
ಷು ವರ್ತೇತ ಕಥಮರಿ ವರ್ಗೇಷು ಭೂಪತಿಃ ? । ಪ್ರಹ್ಲಾದ !
ತ್ರಿಷು ಕಾಲೇಷು ಮಧ್ಯ ಸ್ಥೇಷು ಕಥಂ ಚರೇತ್ ? ॥ ೪೫ ॥
ಕಥಂ ಮಂತ್ರಿಷ್ವ ಮಾತ್ಯೇಷು ಬಾಹ್ಯೇಷ್ವಾ ಭ್ಯಂತರೇ ಪುಚ।

ಯನ್ನು ತಿಳಿದವನೆಂಬದಾಗಿ) ಆಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪುವಿಗೂ ಕೂಡ ತಿಳಿಯುಪಡಿಸಿದನು. ॥ ೪೨ ॥ ಗುರುವು ರಾಜನೊಂದಿಗೆ ಹೇಳುತ್ತಾನೆ—ಓ ದೈತ್ಯಾಧಿಪನೆ, ನಿನ್ನ ಮಗನಿಗೆ ಎಲ್ಲ ನೀತಿಗಳನ್ನೂ ಚೆನ್ನಾಗಿ ಕಲಿಸಿರುವೆನು. ಎಲ್ಲ ನೀತಿಗಳಲ್ಲಿಯೂ ಇವನು ಪಾರಂಗತನೆನಿಸಿರುವನು. ಅದರಲ್ಲಿಯೂ ನಮ್ಮ ಕುಲಗುರುಗಳೆನಿಸಿದ ಶುಕ್ರಾಚಾರ್ಯರು ನಮ್ಮ ಉಪಯೋಗಕ್ಕೋಸ್ಕರ ನಿರ್ಮಿಸಿರುವ ಶುಕ್ರನೀತಿಯಲ್ಲಂತೂ ತುಂಬಾ ಪ್ರವೀಣನಾಗಿರುವನು. ಅದರ ರಹಸ್ಯವು ಇವನಿಗೆ ಆ ಮೂಲಾಗ್ರವಾಗಿ ತಿಳಿದಿರುವುದು. ಬೇಕಾದರೆ ಪರೀಕ್ಷಿಸಬಹುದು. ॥ ೪೩॥ ಇಂತು ಗುರುವಿನ ಮಾತಂ ಲಾಲಿಸಿ ಹಿರಣ್ಯಕಶಿಪುವು ತನ್ನ ಮಗನಂ ಕುರಿತು, ಓ ಪ್ರಹ್ಲಾದನೆ, ನೀನು ರಾಜನೀತಿಯನ್ನು ಚನ್ನಾಗಿ ಅಭ್ಯಾಸಮಾಡಿರುವೆಯಲ್ಲವೇ ? ಹಾಗಾದರೆ ನಾನು ಕೇಳುವ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡು. ರಾಜನು ಮಹತ್ತರವಾದ ಐಶ್ವರ್ಯವಂ ಪಡೆದಿರುವ ಕಾಲದಲ್ಲಿ ಮಿತ್ರರೊಂದಿಗೆ ಯಾವ ರೀತಿ ವ್ಯವಹರಿಸಬೇಕು ? ಅದೇ ಕಾಲದಲ್ಲಿಯೇ ತನ್ನ ಶತ್ರುಗಳನ್ನು ಯಾವ ರೀತಿಯಲ್ಲಿ ಕಾಣಬೇಕು ? ಉದಾಸೀನರಲ್ಲಿ ಯಾವರೀತಿಯಿಂದ ನಡೆದುಕೊಳ್ಳಬೇಕು ? ಹಾಗಿಲ್ಲದೆ ತನ್ನ ಐಶ್ವರ್ಯವು ನಷ್ಟವಾಗಿ ತಾನು ಕೇವಲ ಹೀನಸ್ಥಿತಿಯಲ್ಲಿರುವಾಗ ತನ್ನ ಮಿತ್ರ, ಶತ್ರು, ಉದಾಸೀನ ಪಕ್ಷದವರ ವಿಷಯದಲ್ಲಿ ನಡೆಯಬೇಕಾದ ರೀತಿಯಾವುದು ? ಅಥವಾ ವೃದ್ಧಿಕ್ಷಯಗಳಿಲ್ಲದೆ ಸಮನಾದ ಸ್ಥಿತಿಯಲ್ಲಿರುವಾಗ ಮೇಲ್ಕಂಡವರ ವಿಷಯದಲ್ಲಿ ನಡೆದುಕೊಳ್ಳತಕ್ಕದು ಹೇಗೆ? ॥ ೪೫ ॥ ರಾಜನಿಗೆ ಮಂತ್ರಿಲೋಚನೆ ಮುಂತಾದ ಬುದ್ಧಿಕಾರ್ಯಗಳಲ್ಲಿ ಸಹಾಯಭೂತರಾಗಿರುವ ಮಂತ್ರಿಗಳನ್ನು ರಾಜನು ಯಾವ ರೀತಿ ಗೌರವಿಸಬೇಕು ? ದುಷ್ಟಶಿಷ್ಟ

ಚಾರೇಷು ಪೌರ ವರ್ಗೇಷು ಶ ಕಿತೇ ಷ್ವಿತ ರೇಷುಚ ?॥೫೦॥
ಕೃತ್ಯಾಕೃತ್ಯವಿಧಾನಂ ಚ ದುರ್ಗಾ ಟವಿಕಸಾಧನಂ । ಪ್ರಹ್ಲಾದ
ಕಥ್ಯತಾಂ ಸವ್ಯಕ್ತಥಾ ऽऽ ಟವಿಕಶೋಧನಂ ॥ ೫೧ ॥ ಏತ
ಚ್ಛ್ರುತ್ವಾಽಽಽಖ್ಯಾಹಿ ಸಕಲ ಮಧೀತಂ ಭವತಾಯಥಾ । ತಥಾವೇಕಥ್ಯ
ತಾಂ ಜ್ಞಾತುಂ ತವೇಚ್ಛಾವಿ ವಾನೋಗತಂ ॥ ೫೨ ॥ ಶ್ರೀಪರಾ

ಣ, ಪ್ರಜಾಪಾಲನ ಮುಂತಾದ ಕಾರ್ಯಗಳಲ್ಲಿ ರಾಜನಿಗ ಸಹಾಯಕರಾ
ದ ಅಮಾತ್ಯರ ವಿಷಯ ಲ್ಲಿ ರಾಜನು ಯಾವರೀತಿ ನಡೆದುಕೊಳ್ಳಬೇಕು ?
ಕಪ್ಪ, ಕಾಣಿಕೆ, ಮೊದಲಾದುವನ್ನು ಸಂಪಾದಿಸುವುದಕ್ಕೋಸ್ಕರ ರಾಜ
ನ ಅನುಮತಿಯಂತೆ ಹೊರಗಿನಕಾರ್ಯಗಳಲ್ಲಿರುವವರನ್ನು ರಾಜನುಯಾ
ವರೀತಿಕಾಣಬೇಕು ? ರಾತ್ರಿವಾಸ, ಪಾಕಶಾಲೆ, ಮೊದಲಾದ ಒಳಗಣ
ಕಾರ್ಯದಲ್ಲಿನಿಯುಮಿತರಾಗಿರುವ ಜನರನ್ನು ಪ್ರೀತಿಸತಕ್ಕ ಬಗೆಯಾವು
ದು ? ಗೂಢಚಾರರು, ತನಗೆ ಸೋತು ತನ್ನ ಕೈಕೆಳಗೆ ಸೇವಕರಾಗಿರು
ವ ಶತ್ರುರಾಜರು, ತನ್ನ ಪರಿಚಾರಕರು, ಕಿಂಕರರು, ಮೊದಲಾದವರ
ನ್ನು ಯಾವ ಯಾವ ರೀತಿಯಿಂದ, ಕಾಣಬೇಕು ? ತನಗೆ ಸಂದೇಹಾಸ್ಪ
ದರಾದ ಗುರುಸಾನಿಜನಗಳನ್ನು ರಾಜನು ಕಾಣುವ ರೀತಿಯಾವುದು ?
॥ ೫೦ ॥ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ, ಆಶ್ರಯಗಳೆಂಬ
ಆರುಗುಣಗಳನ್ನು ಯಾವ ಯಾವ ಕಾಲದಲ್ಲಿಪ್ರಯೋಗಿಸಬೇಕು ?
ಯಾವುದನ್ನು ಯಾವ ಸಮಯದಲ್ಲಿ ಪ್ರಯೋಗಿಸಬಾರದು ? ನೀರು,
ಗೋಡೆ, ಮರುಭೂಮಿ, ಬೆಟ್ಟಗಳು, ವನಗಳೆಂಬ ಐದು ವಿಧವಾದ ದು
ರ್ಗ (ಕೋಟೆ) ವನ್ನು ಮುತ್ತಿ ವಶಮಾಡಿಕೊಳ್ಳತಕ್ಕ ಉಪಾ
ಯಗಳಾವುವು ? ಕಳ್ಳರನ್ನು ಕಂಡುಹಿಡಿಯತಕ್ಕ ಸಾಧನವೆಂತು ?
ಅಂತರಂಗ ದ್ವೇಷಿಗಳೆನಿಸಿದ ಗೂಢಶತ್ರುಗಳನ್ನು ಕಂಡುಹಿಡಿದು ಅ
ವರನ್ನು ಒಟ್ಟುವುದಕ್ಕೆ ಉಪಾಯವೇನು ? ಎಲೈ ಪ್ರಹ್ಲಾದ
ನೇ; ಇದನ್ನೆಲ್ಲಾ ಚೆನ್ನಾಗಿ ವಿವರಿಸು ॥ ೫೧ ॥ ಇದುವರೆಗೂ ನಾನು
ನಿನ್ನನ್ನು ಪ್ರಶ್ನೆಮಾಡಿದವುಗಳಲ್ಲದೆ ಸಾಮ, ದಾನ, ಭೇದ, ದಂಡಗಳೆಂ
ಬ ಉಪಾಯಚತುಷ್ಟಯವನ್ನು ಎಂತೆಂತಹ ಸಮಯದಲ್ಲಿ ಅನುಸರಿಸ
ಬೇಕು ? ಏಳು ರಾಜ್ಯಾಂಗಗಳಾವುವು ? ಅವುಗಳಲ್ಲಿ ಯಾವ ಯಾವ

ಕರಃ॥ ಪ್ರಣಿಪತ್ಯ ತತಃ ಪಾದೌ ಪಿತುಃ ಪ್ರಸ್ರಯ ಭೂಷಣಃ ।
ಪ್ರಹ್ಲಾದಃ ಪ್ರಾಹ ದೈತ್ಯೇಂದ್ರಂ ಕೃತಾಂಜಲಿಪುಟಸ್ಥಿತಂ ॥೬॥
ಪ್ರಹ್ಲಾದಃ॥ ಮಮೋಪದಿಷ್ಟಂ ಸಕಲಂ ಗುರುಣಾ ನಾತ್ರಸಂಶ
ಯಃ । ಗೃಹೀತಂ ಚ ಮಯಾ ಕಿಂತು ನಸದೇ ತನ್ಮತಂ ಮ
ಮ ॥ ೬೪ ॥ ಸಾಮಜೋಪಪ್ರದಾನಂಚ ಭೇದ ದಂಡೌ ತಥೈ
ವಚ । ಉಪಾಯಾಃ ಕಥಿತಾ ಹ್ಯೇತೇ ಮಿತ್ರಾದೀನಾಂ ಚ ಸಾಧ
ನೇ ।' ೬೫ ॥ ತಾನೇವಾಹಂ ನಪಶ್ಯಾಮಿ ಮಿತ್ರಾದೀಂ ಸ್ತ್ರತ!

ಅಂಗಗಳನ್ನು ಯಾವ ಯಾವ ರೀತಿ ವೃದ್ಧಿಗೊಳಿಸಬೇಕು ? ಯಾವ ಯಾವ ಅಂಗಗಳು ಅಧಿಕವಾಗಿರಬಾರದು ? ಅವುಗಳಿಂದುಂಟಾಗುವ ಗುಣದೋಷಗಳಾವುವು ? ಇದೇ ಮೊದಲಾಗಿ ನೀನು ಇದುವರೆಗೂ ಅಭ್ಯಾಸಮಾಡಿರುವ ನೀತಿಶಾಸ್ತ್ರಸಾರಾಂಶವನ್ನೆಲ್ಲಾ ವಿಶದವಾಗಿ ತಿಳಿಸು. ನಿನ್ನ ಮನೋಗತವಂ ನಾನು ತಿಳಿಯಲಪೇಕ್ಷಿಸುವೆನು, ಎಂಬುದಾಗಿ ಹಿರಣ್ಯಕಶಿಪುವು ಪ್ರಹ್ಲಾದನನ್ನು ಪ್ರಶ್ನೆಮಾಡಿದನು ॥೬೩॥

ಪರಾಶರನು ಹೇಳುತ್ತಾನೆ —ಇಂತು ತಂದೆಯು ಮಾತಂ ಆದರದಿಂದ ಕೇಳಿ, ಬಳಿಕ ವಿನಯಭೂಷಣನೆನಿಸಿದ ಪ್ರಹ್ಲಾದನು ತನ್ನ ತಂದೆಯು ಆಡಿದಾನವರಿಗಳಿಗೆ ಭಕ್ತಿ ಯಿಂದೆರಗಿ ತನ್ನತಂದೆಯು ಪಕ್ಕದಲ್ಲಿ ಕೈಕಟ್ಟಿ ಕೊಂಡು ನಿಂತು ತಂದೆಯೊಡನೆ ಈ ರೀತಿ ಮಾತನಾಡ ತೊಡಗಿದನು. ॥೬೪॥ ಓ ತಂದೆಯೇ, ನಮ್ಮಗುರುಗಳು, ನನಗೆ ಇದೆಲ್ಲವಂ ಸವಿಸ್ತರವಾಗಿ ಕಲಿಸಿರುವರು. ಅವರೇನು ಕಲಿಸದೆಯಾವುದೊಂದನ್ನೂ ನನಿಗೆ ಮರೆಮಾಚಿದವರಲ್ಲಾ; ಈ ಮಾತುಸಟೆಯುಲ್ಲ. ಅವರು ಹೇಳಿದಂತೆಯೇ ನಾನೂ ಕೂಡ ಎಲ್ಲವನ್ನೂ ಕಲಿತಿರುವೆನು. ಆದರೆ ಮಾತ್ರ ಇದುನನಗೆ ಇಷ್ಟವಾದ ವಿಷಯವಲ್ಲ ; ವಿತಕ್ಕೆಂದರೆಇವರು ಶತ್ರುಗಳು, ಇವರು ಮಿತ್ರರು, ಇವರುವುದಾಸೀನಕೋಟಿಗೆ ಸೇರಿದವರು' ಎಂಬಇದೇ ಮೊದಲಾದ ಭೇದಬುದ್ಧಿಯುಳ್ಳವರಿಗೆ ಈ ರೀತಿಯಿಂದ ಸ್ವಲ್ಪ ಪ್ರಯೋಜನವುಂಟು. ನಾನಾದರೋ ಸರ್ವತ್ರ ವಿಷ್ಣು ಭಾವನೆಯುಳ್ಳೇ ಇರಿಸಿ ಸಮದರ್ಶಿಯಾಗಿರುವೆನು. ಇಂತಿರಲು ಈರೀತಿಯಿಂದ ನನಗೆ ಆಗಬೇಕಾದುದೇನು? ಆದುದರಿಂದ ಇದುನನಗೆ ಸಮ್ಮತವಾದ ವಿಷಯವಲ್ಲವು. ಇದು

ಮಾಕ್ಷುಧಃ । ಸಾಧ್ಯಾಭಾವೇ ಮಹಾಬಾಹೋ ! ಸಾಧಕೈಃ
ಕಿಂ ಪ್ರಯೋಜನಂ ? ॥ ೬೬ ॥ ಸರ್ವಭೂತಾತ್ಮಕೇ ತಾತ!

ಬಳಿಕ್ಕಯದೆಂದು ನಾನು ಸರ್ವಾತ್ಮನಾ ಒಪ್ಪಿಕೊಳ್ಳತಕ್ಕವನಲ್ಲವು. ತಾವು ಮಾತ್ರ ರಾಜಕಾರ್ಯ ತತ್ಪರರೆನಿಸಿ, ಅನೇಕವುಂದಿ ಶತ್ರುಗಳನ್ನೂ ಮಿತ್ರರಸ್ನ್ನಿ, ಉದಾಸೀನ ಪಕ್ಷದವರನ್ನೂ ಪಡೆದಿರುವಿರಿ. ಅದುಕಾರಣ ಇಂತಹ ನೀತಿಯಿಂದ ತವುಗೆ ಮಹತ್ತರವಾದ ಪ್ರಯೋಜನವುಂಟು ॥ ೬೪ ॥ ಕೋಪಗೊಂಡವನನ್ನು ಹೊಗಳಿ, ಬಳಿಕ್ಕಯಮಾತುಗಳನ್ನಾಡಿ, ಸಮಾಧಾನ ಪಡಿಸುವಿಕೆಯು ಸಾಮವೆನಿಸುವುದು. ತನಗೆ ಪ್ರತಿಪಂಥಿಯಾಗಿರುವ ಹಗೆಯನ್ನು ಅನುಕೂಲಪಡಿಸಿಕೊಳ್ಳಲು ಅವನಿಗೆ ವಿಶೇಷವಾಗಿ ಭೂಮಿ, ಧನ, ಧಾನ್ಯ, ಮೊದಲಾದುವನ್ನು ಕೊಡುವುದು ದಾನವೆನಿಸುವುದು. ಹಗೆಗಳೆಲ್ಲರೂ ಒಗ್ಗಟ್ಟಿನಿಂದ ತನ್ನಮೇಲೆ ಕಾರ್ಯಭಾಗಮಾಡುವರೆಂಬ ಭೀತಿಯಿಂದ, ಆ ವೈರಿಗಳಿಗೆ ಭಯವನ್ನುಂಟುಮಾಡಿ ಅವರವರಿಗೇನೇ ಪರಸ್ಪರ ವೈರವನ್ನುಂಟುಮಾಡುವಿಕೆಯು ಭೇದವೆನಿಸುವುದು. ತನಗೆ ಸೋತ ಹಗೆಗಳಿಂದ ಕಪ್ಪವೊದಲಾದುವನ್ನು ಕೈಕೊಳ್ಳುವಿಕೆಯು ದಂಡವೆನಿಸುವುದು. ಇವುಗಳೆಲ್ಲವೂ ಶತ್ರುನಿಗ್ರಹ, ಮಿತ್ರಸಂಪಾದನೆಗಳಲ್ಲಿ ಮುಖ್ಯಕಾರಣಗಳಾಗಿರುವುವು ॥ ೬೫ ॥ ಎಲೈ ಜನಕನೆ; ನಾನು ಹೇಳುತ ಮಾತಿಗಾಗಿ ಸಿಟ್ಟುಗೊಳ್ಳಬೇಡ. ಈ ಮೇಲೆ ಹೇಳಿದ ಸಾಮಾದಿ ಉಪಾಯಚತುಷ್ಟಯದಿಂದ ನಿಗ್ರಹಾನುಗ್ರಹವಂ ಪಡೆಯಲು ಯೋಗ್ಯರಾದ ಶತ್ರುಮಿತ್ರರನ್ನೇ ನಾನು ಕಾಣೆನು. ಎಲೈ ದೀರ್ಘಬಾಹುವೆನಿಸಿದವನೆ; ಹೊಂದಲು ಯೋಗ್ಯವಾದ ಫಲರೂಪವಾದ ಸಾಧ್ಯನೇ ಇಲ್ಲದಿರುವಲ್ಲಿ ಸಾಧಕಗಳೆನಿಸಿದ, ಪ್ರಯತ್ನ ಅಥವಾ ಉಪಾಯಗಳಿದ್ದುತಾನೇ ಫಲವೇನು ? (ನಾನು ಸರ್ವಸಮನು. ಎಲ್ಲವೂ ನನ್ನ ಕಣ್ಣಿಗೆ ವಿಷ್ಣು ಸ್ವರೂಪವಾಗಿಯೇ ಕಾಣುವುದು. ಭೇದವೇ ಇಲ್ಲದಿರುವಾಗ 'ಇವರು ಶತ್ರುಗಳು ಇವರು ಮಿತ್ರರು' ಎಂಬದಾಗಿ ನಾನೆಂತು ಕಂಡುಹಿಡಿಯಬಲ್ಲೆನು ? ಈವೇಳೆ ಹೇಳಿದ ಸಾಮಾದಿ ಉಪಾಯಗಳಿಗೆ ವಿಷಯಭೂತರಾದ ಶತ್ರುಮಿತ್ರರೇ ನನಗಿಲ್ಲದಿರುವರಲ್ಲಿ ಈ ಉಪಾಯಗಳನ್ನು ಮಾತ್ರ ತಿಳಿದಿದ್ದು ತಾನೇ

ಜಗನ್ನಾಥೇ ಜಗನ್ಮಯೇ । ಪರಮಾತ್ಮನಿ ಗೌಃವಿಂದೇ ಮಿತ್ರಾ
ಮಿತ್ರ ಕಥಾ ಕುತಃ?॥ ೫೩ ॥ ತ್ವಯ್ಯಸ್ತಿ ಭಗವಾಂ ವಿಷ್ಣು
ರ್ಮಯಿಚಾನ್ಯತ್ರಚಾಸ್ತಿಸಃ । ಯತಸ್ತತೋ ಽಯಂ ಮಿತ್ರಂ
ಮೇ ಕಸ್ಮಾಚ್ಛೇತಿ ಪೃಥಕ್ಕೃತಃ ? ॥ ೫೪ ॥ ತದೇಭಿ ರಲಮಾತ್ಮ
ರ್ಥಂ ದುಷ್ಪಾರಂಭೋಕ್ತಿ ವಿಸ್ತರೈಃ । ಅವಿದ್ಯಾಂತರ್ಗತೈ ರ್ಯ

ಫಲವೇನು ?) ॥ ೫೩ ॥ ಎಲ್ಲಾ ತಂದೆಯೇ; ಸರ್ವಸ್ವರೂಪಿಯೂ, ಜಗನ್ನಾಥನೂ ಜಗದಾತ್ಮಿಯೂ, ಸರ್ವೋತ್ತಮನೂ ಎನಿಸಿದ ವಿಷ್ಣುವೇ ಎಲ್ಲರೂಪಗಳಿಂದಲೂ ಕಾಣಿಸುತ್ತಿರುವಾಗ್ಗೆ ಅಂತಹ ಪರಮಾತ್ಮನಲ್ಲಿ ಮಿತ್ರರು, ಶತ್ರುಗಳೆಂಬ ವ್ಯವಹಾರವೆಲ್ಲಿಯದು ? ॥ ೫೪ ॥ ಷಡ್ಗುಣೈಶ್ವರ್ಯಸಂಪನ್ನನೂ, ಸರ್ವವ್ಯಾಪಕನೂ ಎನಿಸಿದ, ಆ ಪರಮಾತ್ಮನು ನಿನ್ನಲ್ಲಿಯೂ ಇರುವನು. ಅಂತೆಯೇ ನನ್ನಲ್ಲಿಯೂ ಇರುವನು. ನೀನು, ನಾನು, ಎಂಬ ಅಭಿಮಾನಕ್ಕೆ ಪಾತ್ರಗಳಿನಿಸಿ ಪರಮಪ್ರೇಮಾಸ್ಪದಗಳಾದ ನಿನ್ನ ಮತ್ತು ನನ್ನ ದೇಹಕ್ಕಿಂತಲೂ ಬೇರೆಯಾಗಿರುವ ಉದಾಸೀನ ಕೋಟಿಗೆ ಸೇರಿದ ಮತ್ತೊಂದು ದೇಹದಲ್ಲಿಯೂ ನೆಲೆಸಿರುವನು, ಇಂತು ಆತನೇ ಎಲ್ಲೆಲ್ಲಿಯೂ ನೆಲೆಸಿರುವ ಕಾರಣ ‘ಇವನು ನಗೆ ಹಗೆಯು, ಇವನು ನನ್ನ ಗೆಳೆಯನು, ಎಂಬ ಭೇದಬುದ್ಧಿ ವಿಷಯಕವಾದ ಪ್ರಸ್ತಾಪಕ್ಕೇ ಅವಕಾಶವಿಲ್ಲವು. ಇಂತಿರಲು ಭೇದವು ತಾನೇ ಎಲ್ಲಿಂದ ಬಂದೀತು ? ॥ ೫೪ ॥ ಓ ತಾತನೆ; ನನ್ನ ಮಾತನ್ನು ಕಿವಿಗೊಟ್ಟುಲಾಲಿಸು. ಉದಾಸೀನನಾಗಿರಬೇಡ. ಇದರಿಂದ ಮೇಲ್ಮೆಯುಂಟು! ರಾಗ, ದ್ವೇಷ, ಮೊದಲಾದ ದುಷ್ಪ್ರಗಳೆನಿಸಿದ ಪ್ರಯತ್ನಗಳಿಂದೊಡಗೂಡಿರುವ, ಅನಾತ್ಮ ವಿದ್ಯೆಎನಿಸಿದ ಹೇಯವಾದ ಲೌಕಿಕೋಪಯುಕ್ತವಾದ ಶಿಲ್ಪಾದಿ ವಿದ್ಯೆಗಳಲ್ಲಿ ಅಂತರ್ಗತವಾದ, ಕೇವಲಮಾತ್ರುಗಳೆಂಬ ಈ ನೀತಿಶಾಸ್ತ್ರದಿಂದ ಫಲವೇನು ? ಇದರಿಂದ ಲೇಶಮಾತ್ರವೂ ನಿನಗೆ ಪರಲೋಕಸಾಧನೆಯುಂಟಾಗಲಾರದು. ಅದುಕಾರಣ ಓ ತಂದೆಯೆ; ಪರಮುಮಂಗಳವೆನಿಸಿದ ಅಧ್ಯಾತ್ಮವಿಷಯಕವಾದವೇದಾಂತಶಾಸ್ತ್ರದಲ್ಲಿಯೂ, ನಿಷ್ಕಾಮಕರ್ಮಗಳನ್ನಾಚರಿಸುವುದರಲ್ಲಿಯೂ ನಿನ್ನ ಬುದ್ಧಿಯನ್ನು ಸ್ಥಿರಗೊಳಿಸು (ಈ ನೀತಿಶಾಸ್ತ್ರಗಳೆಲ್ಲವೂ ಹೇಯವಾದವು. ಇತರರಿಗೆ ಮಾ

ತ್ಸಃ ಕರ್ತವ್ಯ ಸ್ತಾತ ! ಕೋಭನೆ ॥ ೪೯ ॥ ವಿದ್ಯಾಬುದ್ಧಿ ಕವಿ
ದ್ಯಾಯಾ ಮುಜ್ಞಾನಾತ್ಮಾತ! ಜಾಯತೇ । ಬಾಲೋಗ್ನಿಂ ಕಿಂ ನ

ಖವನ್ನುಂಡುಮಾಡುವುದೆ? ಇವುಗಳಿಗೆಲ್ಲಾ ಮುಖ್ಯಫಲವಲ್ಲದೆ ಬೇರೆಯಿ
ಲ್ಲ. ಆದುದರಿಂದ ಇದು ಅತಿ ತುಚ್ಛವಾದುದು. ಇದನ್ನು ದೂರಮಾಡಿ
ನಿನ್ನನ್ನು ನೀನು ಕಡೆಹಾಯಿಸಿಕೊಳ್ಳಲು ತಕ್ಕುದಾದ ಪರಮಮುಂಗಳ
ಭೂತವಾದ ವೇದಾಂತ ಶಾಸ್ತ್ರದಲ್ಲಿ ನಿನ್ನ ಬುದ್ಧಿಯನ್ನಿರಿಸಿ, ಅದರಿಂದ
ಮುಕ್ತನಾಗುವ ಉಪಾಯವಂ ಕಂಡುಹಿಡಿದು ಸುಖಿಸು, ಎಂಬದಾಗಿ
ತಂದೆಗೆ ವಿವೇಕವನ್ನು ಹೇಳಿದನೆಂದು ಭಾವವು) ॥ ೪೯ ॥ ವಿದ್ಯೆಯು
ಲ್ಲಿ ಆತ್ಮವಿದ್ಯಾ, ಅನಾತ್ಮವಿದ್ಯಾ, ಎಂಬದಾಗಿ ಎರಡು ವಿಧವು. ಶಿಕ್ಷಾ
ವ್ಯಾಕರಣ, ಛಂದಸ್ಸು ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರು ವೇ
ದಾಂಗಗಳು, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ
ಗಳೆಂಬದಾಗಿ ನಾಲ್ಕು ವೇದಗಳು. ಕರ್ಮಕಾಂಡಗಳೆನಿಸಿದ ಪೂರ್ವ
ಮೀಮಾಂಸೆ, ನ್ಯಾಯಶಾಸ್ತ್ರ, ಪುರಾಣಗಳು, ಧರ್ಮಶಾಸ್ತ್ರಗಳೆಂಬ ! ಈ
ಹದಿನಾಲ್ಕೂ ಅನಾತ್ಮವಿದ್ಯೆಗಳೆನಿಸುವುವು. ಅನಾತ್ಮವಿದ್ಯೆಗಳು ಹದಿನೆಂ
ಟೆಂಬದಾಗಿ ಮತ್ತೊಂದು ಪಕ್ಷವಿರುವುದು. ಈ ಪಕ್ಷದಲ್ಲಿ, ಋಗ್ವೇದ
ಮೊದಲಾಗಿ ನಾಲ್ಕು ವೇದಗಳಿಗೂ ನಾಲ್ಕು ಉಪವೇದಗಳುಂಟು. ಅವು
ಗಳನ್ನೂ ಸೇರಿಸಿ ಹದಿನೆಂಟಾಗುವುವು. ಆಯುರ್ವೇದ, ಧನುರ್ವೇದ,
ಗಾಂಧರ್ವವೇದ, ಅರ್ಥಶಾಸ್ತ್ರಗಳೆಂಬ ಈ ನಾಲ್ಕು ಕ್ರಮವಾಗಿ ಋಕ್,
ಯಜುಸ್ಸು, ಸಾಮ, ಅಥರ್ವಣವೇದಗಳಿಗೆ ಉಪವೇದಗಳೆನಿಸುವುವು.
ಅರ್ಥಶಾಸ್ತ್ರವು, ಅನುದಿನವೂ ರಾಜನು ತನ್ನ ಆಡಳಿತವನ್ನು ನಿರಾತಂಕ
ವಾಗಿ ನಡೆಯಿಸಬೇಕಾದುದಕ್ಕೆ ಅತ್ಯವಶ್ಯಕವಾದ ಉಪಾಯಾದಿಗಳನ್ನು
ತಿಳಿಸುತ್ತದೆ. ಕುಕ್ಕುನೀತಿ ಮೊದಲಾದುವುಗಳೂ ಕೂಡ, ಈ ಅರ್ಥಶಾ
ಸ್ತ್ರಕ್ಕೆ ಸೇರಿದುವೇ ಆಗಿರುವುವು. ಇವುಗಳಿಗೆಲ್ಲಾ 'ವಿದ್ಯೆ' ಎಂಬದಾಗಿ
ತೋರ್ಕವ್ಯವಹಾರವಿರುವುದು. ಇಂತಿದ್ದರೂ ಇವುಗಳಿಂದುಂಟಾಗುವ
ಪ್ರಯೋಜನವು ಮಾತ್ರ ತುಚ್ಛವೂ, ಅಲ್ಪಕಾಲದಲ್ಲಿಯೇ ನಾಶವನ್ನೈ
ದುವುದೂ, ಎನಿಸಿರುವ ಕಾರಣ, ಇವುಗಳೆನ್ನೆಲ್ಲಾ ಬಿಟ್ಟು 'ಅವಿದ್ಯೆ' ಅ
ಥವಾ 'ಅನಾತ್ಮವಿದ್ಯೆ' ಎಂದು ಹೇಳುವರು. ಈ ವಿಷಯವೇ ಮುಂಡ

ಕೋಪನಿಷತ್ತಿನಲ್ಲಿ ವಿಶದವಾಗಿ ಹೇಳಿದೆ ,ದ್ವೇ ವಿದ್ಯೇ ವೇದಿತವ್ಯೇ ಇತಿ ಹಸ್ಮ ಯದ್ಬ್ರಹ್ಮ ವಿದೋ ವದಂತಿ, ಪರಾಚೈವಾಪರಾಚ । ತತ್ರಾಪರಾ ಋಗ್ವೇದೋ ಯಜುರ್ವೇದ ಸ್ಸಾಮವೇದೋ ಥರ್ವವೇದ ಶಿಕ್ಷಾಕ ಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ, ಅಥ ಪರಾ ಯಯಾ ತದಕ್ಷರ ವಧಿಗಮ್ಯತೇ ॥ ಶೌನಕರು ಆತ್ಮ ವಿಚಾರಕ್ಕಾಗಿ ಅಂಗಿರಸ್ಸುಗಳೆಂಬ ಋಷಿಗಳಂ ಹೊಂದಿ ವಿಚಾರಮಾಡತಕ್ಕ ಕಾಲದಲ್ಲಿ ಮನುಷ್ಯನು ಪರವಿದ್ಯೆ, ಅಪರವಿದ್ಯೆ ಎಂಬ ಎರಡು ವಿದ್ಯೆಗಳನ್ನೂ ಚ ನ್ನಾಗಿ ಅಭ್ಯಾಸ ಮಾಡಬೇಕು. ಅವುಗಳಲ್ಲಿ ಹಿಂದೆ ಹೇಳಿದ ಅನಾತ್ಮ ವಿದ್ಯೆಯೇ ಪರವಿದ್ಯೆ ಎನಿಸುವುದು. ಪರಮಾತ್ಮ ತತ್ವವನ್ನರಿಯಲು ಯೋಗ್ಯವಾದ ವಿದ್ಯೆಯೇ ಆತ್ಮವಿದ್ಯೆ ಅಥವಾ ಅಪರವಿದ್ಯೆ ಎನಿಸುವುದು. ಓ ತಂದೆಯೆ ! ಮನುಷ್ಯನು ಅವಿದ್ಯೆ ಎನಿಸಿದ ಈ ಮೇಲೆ ಹೇಳಿದ ವೇದ ಮತ್ತು ಶಾಸ್ತ್ರಕದಂಬನನ್ನೇ ಭ್ರಾಂತಿಯಿಂದ ಆತ್ಮ ವಿದ್ಯೆ ಎಂ ಬದಾಗಿ ತಿಳಿದು ಅದನ್ನೇ ಮುಖ್ಯವಾಗಿ ಅಭ್ಯಾಸವಮಾಡಿ, ಅದರಿಂದುಂ ಟಾಗುವ ಫಲವು ಅಲ್ಪವೆಂತಲೂ, ಅಸಾರವೆಂತಲೂ ಅರಿಯದೆ, ವ್ಯರ್ಥ ವಾಗಿ ಕಾಲಕಳೆದು ಕೊನೆಗೆ ಜರಾ ಮರಣಗಳನ್ನುಂಟುಮಾಡುವಂತಹ ಲೋಕವನ್ನೇ ಹೊಂದಿ, ಆಫಲವು ಸಪ್ಪೆವಾದಕೂಡಲೇ ಮರಳಿ ಜನಿಸು ವನು. ಇಂತು ಇವನ ದುಃಖಕ್ಕೆ ಪಾರನೇ ಇಲ್ಲದಿರುವುದು. ಹುಡು ಗನು ಬಂದು ಖದ್ಯೋತವನ್ನು (ರಾತ್ರಿಕಾಲದಲ್ಲಿ ಮಿನುಗುಟ್ಟುವ ಮಿಂ ಚಿನ ಹುಳುವನ್ನು) ಕಂಡರೂ ಕೂಡ ಅಗ್ನಿಎಂದೇ ಭಾವಿಸುವನೇ ಹೊರತು ಬೇರೆ ರೂಪದಿಂದ ತಿಳಿಯುವಾರನು. ಅಂತೆಯೇ ಮೂಢರೂ ಕೂಡ (ಹುಡುಗನು ಪ್ರಕಾಶ ಸಾಮ್ಯದಿಂದ ಮಿಂಚಿನ ಹುಳವನ್ನು ಬೆಂಕಿ ಎಂಬದಾಗಿ ತಿಳಿದಂತೆಯೇ) ಸುಖಲೇಶವಿರುವ ಈ ಅನಾತ್ಮ ವಿದ್ಯೆಯನ್ನೇ ಆತ್ಮವಿದ್ಯೆ ಎಂಬದಾಗಿ ಭಾವಿಸಿ ಅದರಿಂದ ಅನೇಕ ದುಃ ಖಗಳನ್ನನುಭವಿಸುವರು. ಆದಕಾರಣ ಅಲ್ಪವೂ ಅಸ್ಥಿರವೂ ಎನಿಸಿದ ಫಲವನ್ನುಂಟುಮಾಡುವಂತಹ ಈ ಅನಾತ್ಮ ವಿದ್ಯೆಯೂ ಕೂಡ ವಿದ್ಯೆ ಎಂಬದಾಗಿ ವ್ಯವಹಾರವನ್ನು ಹೊಂದಲಾರದು. ಹಾಗಾದರೆ ಈ ವಿದ್ಯೆ ಯಿಂದ ಶಾಶ್ವತ ಫಲವಿಲ್ಲದ ಬಳಿಕ ಇದನ್ನೆ ಅಭ್ಯಾಸಮಾಡಿ ಫಲವೇನೆಂ

ಖದ್ಯೋ ತ ಮಸುರೇಶ್ವರ ! ಮನ್ಯತೇ ॥೪೦॥ ತತ್ಕರ್ಮ
ಯನ್ನಬಂಧಾಯ ಸಾವಿದ್ಯಾಯಾ ವಿಮುಕ್ತಯೆ । ಆಯಾಸಾಯಾ

ಬದಾಗಿ ಇದನ್ನು ಆತ್ಯಂತಿಕವಾಗಿ ಪರಿತ್ಯಜಿಸಬಾರದು. ಈ ಅನಾತ್ಮ ವಿದ್ಯೆ ಎನಿಸಿದ ಶಾಸ್ತ್ರಾದಿಗಳಲ್ಲದೊಡೆ ಈ ವೇದಾಂತ ಶಾಸ್ತ್ರವಿಚಾರಕ್ಕೆ ಅಧಿಕಾರವೇ ಉಂಟಾಗಲಾರದು. ಆದಕಾರಣ ವೇದಾಂತ ಶಾಸ್ತ್ರ ವಿಚಾರಕ್ಕೆ ಉಪಕಾರಕಮಾಗಿರುವಂತೆ ಇತರ ಶಾಸ್ತ್ರಾದಿಗಳನ್ನೂ ಅಭ್ಯಾಸಮಾಡಲೇಬೇಕು. ಕರ್ಮಾಚರಣಾದಿಗಳಿಲ್ಲದೊಡೆ ಚಿತ್ತಶುದ್ಧಿ ಮೊದಲಾದ ಆತ್ಮವಿಚಾರಕ್ಕೆ ಸಹಕಾರಿಗಳೆನಿಸಿದ ಸಾಧಕಗಳು ಎಂತು ಉಂಟಾಗಲಾರವೋ ಅಂತೆಯೇ ಅನಾತ್ಮವಿದ್ಯೆ ಅಥವಾ ಪರವಿದ್ಯೆ ಎನಿಸಿದ ಶಾಸ್ತ್ರಾಭ್ಯಾಸಾದಿಗಳೂ ಕೂಡ ಮುಮುಕ್ಷುವಿಗೆ ಉಪಕಾರಕಗಳೇ ಆಗಿರುವುವು. ಈ ಕಾರಣದಿಂದ ಮಾತ್ರ ಇವು ಉಪಾದೇಯಗಳಾಗಿರುವುವು ॥ ೪೦ ॥ ಮನುಷ್ಯನು ಮಾಡತಕ್ಕ ಕರ್ಮವು ನಿಷ್ಕಾಮವಾಗಿರಬೇಕು. ಇಂತಹಫಲಾಪೇಕ್ಷೆಇಲ್ಲದೆ ಆಚರಿಸತಕ್ಕ ಕರ್ಮವು ಇವನಿಗೆ ಬಂಧರೂಪವಾದ ಸಂಸಾರವನ್ನು ಮರಳಿಉಂಟುಮಾಡಲಾರದು. ಅದು ಕಾರಣ ಫಲಾಭಿಸಂಧಿಯಿಲ್ಲದೆ ಕೇವಲ ಪರಮೇಶ್ವರಪ್ರೀತಿಗಾಗಿ ಮಾಡತಕ್ಕ ಕರ್ಮನೇ ಮುಖ್ಯವಾದುದು. ಮುಕ್ತಿಯನ್ನುಂಟುಮಾಡುವ ವಿದ್ಯೆಯೇ (ಆತ್ಮವಿದ್ಯೆಯೇ) ವಿದ್ಯೆಯೆನಿಸುವುದಲ್ಲದೆ ಶಾಸ್ತ್ರಾಭ್ಯಾಸಾದಿಗಳಲ್ಲವು. ಅರ್ಥ ಮತ್ತು ಕಾಮಗಳನ್ನು ಸಂಪಾದಿಸುವುದಕ್ಕೋಸ್ಕರ ಮಾಡತಕ್ಕ ಕರ್ಮವು ಕೇವಲ ತುಚ್ಛವೂ, ಅಸ್ಥಿರವೂ ಎನಿಸಿದ ಫಲವನ್ನೇ ಉಂಟುಮಾಡುವ ಕಾರಣ ಇಂತಹ ಕರ್ಮಾಚರಣೆಯೂ ಕೂಡ ಇವನಿಗೆ ವಿಶೇಷವಾಗಿ ಆಯಾಸವನ್ನುಂಟುಮಾಡುವುದು. ಆದಕಾರಣ ಫಲಾಭಿಸಂಧಿಯಿಂದ ಯಾವದೊಂದು ಕರ್ಮವನ್ನೂ ಮಾಡಬಾರದು ಫಲಾಭಿಸಂಧಿಯಿಂದ ಆಚರಿಸತಕ್ಕ ಕರ್ಮಗಳೆಲ್ಲವೂ ಪ್ರವೃತ್ತಿಮಾರ್ಗಕ್ಕೆ ಸೇರಿದುವು. ಇದರಿಂದ ಇವನಿಗೆ ಮರಳಿ ಜರಾಮರಣಾದಿಗಳು, ಬಂಧಕವೆನಿಸಿದ ಈ ಸಂಸಾರವೂ ಕೂಡ ಎಂದಿಗೂ ತಪ್ಪಿದುದೇ ಅಲ್ಲ. ಅಂತೆಯೇ ರಾಜ ನೀತಿ, ಇಂದ್ರಜಾಲ, ಚಿತ್ರಬರವಣಿಗೆ ಮೊದಲಾದುವೂ ಕೂಡ ತುಚ್ಛಗಳಾದ ಕಾರಣ ಚಮತ್ಕಾರ ಸೂಚಕಗಳೇ

ಪರಂ ಕರ್ಮ ವಿದ್ಯಾನ್ಯಾ ಶಿಲ್ಪನೈಪುಣಂ ॥ ೪೧ ॥ ತದೇತ
ದವ ಗಮ್ಯಾಹ ಮುಸಾರಂ ಸಾಧ್ಯಮುತ್ತಮಂ । ನಿಶಾಮಯ ಮು
ಹಾಭಾಗ ! ಪ್ರಣಮ್ಯ ಪ್ರಬ್ರವೀಮಿಯತ್ ॥ ೪೨ ॥ ಸ –
ಚಿಂತ ಯತಿ ಕೋರಾಜ್ಯಂ ? ಕೋಧನಂ ನಾಭಿವಾಂಛತಿ ? ।
ತಥಾಪಿ ಭಾವ್ಯ ಮೇವೈ ತದುಭಯಂ ಪ್ರಾಪ್ಯತೇ ನರೈಃ॥೪೩॥

ಹೊರತು ಮುಕ್ತಿಗೆ ಉಪಯೋಗಿಸತಕ್ಕವುಗಳಲ್ಲ. ಇಂತಿರಲು ಹೇಯವಾದ ಈ ರಾಜನೀತಿಯಿಂದ ನಿನಗೆ ತಾನೇ ಏನಾಗಬೇಕು ? ಆದುದರಿಂದ ಮನುಜನು ಈ ಲೋಕದಲ್ಲಿ ಹುಟ್ಟಿದಮೇಲೆ ಈ ಮೇಲೆ ಹೇಳಿದ ಪ್ರವೃತ್ತಿಮಾರ್ಗವನ್ನನುಸರಿಸಿದವರಿಗೆ ಉಪಯುಕ್ತವಾದ ಫಲಾಭಿಸಂಧಿಯುಳ್ಳ ಕರ್ಮವನ್ನೂ ಮಾಡಬಾರದು: ಆತ್ಮಜ್ಞಾನಕ್ಕೆ ಉಪಯೋಗಿಸದಂತಹ ಇಂದ್ರಜಾಲ ಮೊದಲಾದ ವಿದ್ಯೆಗಳನ್ನೂ ಕೂಡ ಅಭ್ಯಾಸಮಾಡಬಾರದು ॥ ೪೧ ॥ ಓ ತಂದೆಯೆ; 'ನಾನು ರಾಜನು, ನನಿಗೆ ಮುಂದೆ ಪರಲೋಕದಲ್ಲಿ ಅಥವಾ ಜನ್ಮಾಂತರದಲ್ಲಿ ಫಲವನ್ನು ಉಂಟುಮಾಡುವಂತಹ ಧರ್ಮ ಮೊದಲಾದವುಗಳಿಗಿಂತಲೂ, ಪ್ರತ್ಯಕ್ಷವಾಗಿ ಈ ಜನ್ಮದಲ್ಲಿಯೇ ಫಲವನ್ನು ಕೊಡುವ ಕಾರಣ ಸದ್ಯಃಫಲದಾಯಕವಾದ ರಾಜನೀತಿ ಮೊದಲಾದವುಗಳಲ್ಲಿಯೇ ಅಭಿರುಚಿಯುಂಟು' ಎಂಬದಾಗಿ ತಿಳಿದು ಕೇವಲ ರಾಜನೀತಿಯಿಂದಲೇ ಕಾರ್ಯಗಳನ್ನ ಸಾಧಿಸುವೆನೆಂದು ಹೇಳಬಾರದು. ನೀನು ಇದುವರೆಗೂ, ಪ್ರತ್ಯಕ್ಷಫಲವನ್ನುಂಟುಮಾಡುವ ರಾಜನೀತಿಯಲ್ಲಿಯೇ ಆಸಕ್ತನಾಗಿದ್ದರೂ ಕೂಡ ಇನ್ನು ಮೇಲಾದರೂ ಇಂತಹ ದುರಭಿಸಂಧಿಯುಂ ದೂರವಾಡಿ, ಆತ್ಮವಿಚಾರದಲ್ಲಿ ಪ್ರಯತ್ನಿಸು. ನಾನು ಈ ಹಿಂದೆ ಹೇಳಿದ ಅನಾತ್ಮವಿದ್ಯೆಗಳನ್ನೆಲ್ಲಾ ಸಾರರಹಿತಗಳೆಂದು ನಿಶ್ಚಯಿಸಿ, ಸಾಧಿಸಲು ಅರ್ಹವಾದ ಉತ್ತಮಕಾರ್ಯವನ್ನು ನಿನಗೆವಿಶದವಾಗಿ ವಿವರಿಸುವೆನು. ಅದನ್ನು ಜನ್ಮಾಗಿ ಗಮನವಿಟ್ಟುಲಾಲಿಸು ॥ ೪೨ ॥

ಈಲೋಕದಲ್ಲಿ ಯಾರಿಗೆತಾನೇ ಹಣದಮೇಲೆ ಆಸೆಇಲ್ಲ ? ಯಾರುತಾನೆ ರಾಜಪದವಿಯನ್ನು ಬಿಲ್ಲೆನೆನ್ನುವರು ? ಆದರೆ ಈ ರಾಜ್ಯಧನಗಳಿರಡೂ ಪೂರ್ವಜನ್ಮದಲ್ಲಿ ಗಳಿಸಿದ ಪುಣ್ಯವಿಲ್ಲದೊಡೆ ದೊರೆಯುಲಾರವು.

ಸರ್ವ ಏವ ಮಹಾ ಭಾಗ ! ಮಹತ್ತ್ವಂ ಪ್ರತಿಸೋದ್ಯಮಃ ।
ತಥಾಽಪಿ ಪುಂಸಾಂ ಭಾಗ್ಯಾನಿ ನೋದ್ಯಮೋಃ ಭೂತಿ ಹೇತವಃ ॥
ಜಡಾನಾಮವಿವೇಕಾನಾಂ ಮಖೂರಾಣ ಮಪಿ ಪ್ರಭೋ ! ।

ರಾಜ್ಯ ಮತ್ತು ಧನ ಇವುಗಳಿಗೆ ತಕ್ಕ ಪ್ರಯತ್ನ ಮಾಡಿದರೆ ಬಂದುವೇಳೆ ಕೈಗೂಡಿದರೂ ಕೈಗೂಡಬಹುದು. ಆದರೆ ಇದು ನಿರಾಯಾಸವಾಗಿ ದೊರೆಯತಕ್ಕದಲ್ಲ. ಅವುಗಳನ್ನು ಪಡೆಯಬೇಕಾದರೆ ಎಷ್ಟೋ ಶ್ರಮ ಪಡಬೇಕಾಗಿರುವುದು. ಬುದ್ಧಿ ಕಾರ್ಯವೂ ಕೂಡ ವಿಶೇಷವಾಗಿರುವುದು. ಸಾಮ, ದಾನವೊದಲಾದ ಉಪಾಯಗಳನ್ನು ಸಮಯವರಿತು ರಹಸ್ಯವಾಗಿ ಪ್ರಯೋಗಿಸಬೇಕು. ಕೆಲವುವೇಳೆ ವಿಪ್ರರೇಕತ್ರುಗಳಾಗುವರು. ಇಷ್ಟು ಶ್ರಮಪಟ್ಟು ಪ್ರಯತ್ನಿಸಿದರೂ ನಿಶ್ಚಯವಾಗಿ ಕೈಗೂಡುವುದೆಂದು ಹೇಳಲಸಾಧ್ಯವಾಗಿರುವುದು. ಆದಕಾರಣ ಇಂತಹ ಶ್ರಮಸಾಧ್ಯವೆನಿಸಿದ ನಶ್ವರಫಲವನ್ನು ಹೊಂದಿ ತಾನೇ ಸುಖವೇನು? ಇದೇ ಪ್ರಯತ್ನವನ್ನೇ ಆತ್ಮವಿಚಾರದಲ್ಲಿ ಮಾಡಿದರೆ ಫಲವು ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಫಲವೂ ಕೂಡ ಶಾಶ್ವತವಾದುದು ॥೪೭॥ ಮಹದೈಶ್ವರ್ಯ ಸಂಪನ್ನನೆನಿಸಿದ ಒತಂದೆಯೇ; ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ದೊಡ್ಡ ಪದವಿಯನ್ನು ಹೊಂದಿ, ರಾಜ್ಯ, ಧನ, ಕನಕಾದಿಗಳನ್ನು ಸಂಪಾದಿಸಿ ತಾನೂ ಸುಖಪಡಬೇಕೆಂತಲೇ ವಿಶೇಷವಾಗಿ ಪ್ರಯತ್ನಿಸುವನು. ದೊಡ್ಡ ಪದವಿಯುಂದರೆಯಾರಿಗೆತಾನೇಬೇಕಾಗಿಲ್ಲ? ಇಂತುಎಲ್ಲರೂ ತಮ್ಮತಮ್ಮ ಶಕ್ತ್ಯಾನುಸಾರವಾಗಿ ಪ್ರಯತ್ನ ಮಾಡುತ್ತಿದ್ದರೂ, ಪ್ರಯತ್ನ ಮಾಡಿದವರೆಲ್ಲರೂ ಐಶ್ವರ್ಯವನ್ನು ಹೊಂದುವರೆಂಬ ನಿಯಮವಿಲ್ಲ, ಅವರವರ ಪೂರ್ವಾರ್ಜಿತಪುಣ್ಯಗಳು ಅವರವರ ಪುಣ್ಯಾನುಸಾರ ಅವರಿಗೆ ಫಲವನ್ನು ಒದಗಿಸುವುವಲ್ಲದೆ ಕೇವಲ ಪ್ರಯತ್ನಗಳಿಂದೇನುಫಲ ? ಪ್ರಯತ್ನ ಮಾಡಿದಮಾತ್ರಕ್ಕೇ ಫಲವು ಎಲ್ಲಿಂದ ಸಿದ್ಧಿಸುವುದುದು ? ಭೂಮಿಯಲ್ಲಿ ನೆಟ್ಟಬೀಜಗಳೆಲ್ಲವೂ ಮೊಳೆಕು, ಚಿಗುರಿ,ಫಲಗಳನ್ನು ಕೊಡುವುದೆಲ್ಲಿಯಾದರೂ ಉಂಟೆ ? ॥೪೪॥ ಎಲೈರಾಜನೆ, ಲೋಕದಲ್ಲಿ ಪ್ರಯತ್ನದಿಂದಲೇ ಮನುಷ್ಯನು ಐಶ್ವರ್ಯವನ್ನು ಹೊಂದುತ್ತಾನೆಂತಲೂ ಹೇಳಲಾಗದು. ಪ್ರಯತ್ನವಿಲ್ಲದೆಯೇ ಅನೇಕರು ರಾಜಾದಿಗಳನ್ನು ಮುಖವಿಸುವರು

ಭಾಗ್ಯ ಭೋಜ್ಯಾನಿ ರಾಜ್ಯಾನಿ ಸತ್ಯಂ ನೀತಿ ಮತಾ ಮಪಿ ॥೪೫॥
ತಸ್ಮಾ ದ್ಯತೇತ ಪುಣ್ಯೇಷು ಯ ಇಚ್ಛೇ ನ್ಮಹತೀಂ ಶ್ರಿಯಂ ।
ಯತಿತವ್ಯಂ ಸಮುತ್ಪೇಚ ನಿರ್ವಾಣ ಮುಪಿ ಚೇಚ್ಛತಾ ॥೪೬॥
ದೇವಾ ಮನುಷ್ಯಾಃ ಪಶವಃ ಪಕ್ಷಿ ವೃಕ್ಷ ಸರೀಸೃಪಾಃ । ರೂಪ
ಮೇತ ದನಂತಸ್ಯ ವಿಷ್ಣೋರ್ಭಿನ್ನ ಮಿವಸ್ಥಿತಂ ॥ ೪೭ ॥ ಏತ

ಯಾನವಿಧವಾದ ಪ್ರಯತ್ನವನ್ನೂವಾಡದೆ, 'ಇದುನನಗೆ ಹಿತವನ್ನುಂಟು ಮಾಡತಕ್ಕುದು, ಇದರಿಂದನನಿಗೆ ಕೆಡಕುಂಟುಗುವುದು' ಎಂಬ ಇಷ್ಟಾ ನಿಷ್ಟವಿವೇಕವೇ ಇಲ್ಲದಿರುವವರನೇಕರು ರಾಜರಾಗಿಲ್ಲವೇ, ಸ್ವಲ್ಪ ವೂಧೈರ್ಯವಿಲ್ಲದೆ ಇರುವಹೇಡಿಗಳನೇಕರು ನಿರಾತಂಕವಾಗಿ ರಾಜ್ಯಭಾರ ಮಾಡುತಿಲ್ಲವೆ, ನೀತಿಯನ್ನು ಬಲ್ಲವರು ಮಾತ್ರ ಇವರಿಗಿಂತಲೂಹೆಚ್ಚಾಗಿ ಸುಖಪಡುವುದೇನು? ಆದಕಾರಣ ರಾಜ್ಯವೊದಲಾದ ಸಂಪತ್ತು ಗಳೆಲ್ಲ ವೂ ಪೂರ್ವಜನ್ಮದಲ್ಲಿ ತಾನು ಮಾಡಿದ ಪುಣ್ಯಫಲಗಳೇ ಹೊರತು ನೀತಿ ಪ್ರಯತ್ನಗಳಾದೇನಾದೀತು? ॥ ೪೫ ॥ ಆದಕಾರಣ ವಿಶೇಷ ವಾಗಿ ಸಂಪತ್ತನ್ನು ಬಯಸುವವನು ಹೆಚ್ಚಾಗಿ ಪುಣ್ಯಕಾರ್ಯಗಳನ್ನು ಮಾಡಿ ಆ ಪುಣ್ಯ ಫಲಗಳಾದ ಐಶ್ವರ್ಯ ವೊದಲಾದುವನ್ನನುಭವಿಸ ಬೇಕು, ಇಂತಹ ಐಶ್ವರ್ಯಾದಿಗಳಲ್ಲಿಯೂ ಅಭಿಲಾಷೆ ಇಲ್ಲದೆನಾತರಹಿ ತವಾದ ಸರ್ವೋತ್ತಮ ಸುಖವೆನಿಸಿದ ಮೋಕ್ಷವನ್ನು ಬಯಸುವವನು ಎಲ್ಲಭೂತಗಳನ್ನೂ ತನ್ನಂತೆಯೇ ಭಾವಿಸುತ್ತಾ ಸರ್ವರಲ್ಲಿಯೂ ಸಮ ಭಾವನೆಯನ್ನಿರಿಸಿ ಭೇದಜ್ಞಾನವಂ ದೂರವಾಡಿ ಪರಮಾತ್ಮನು ಸರ್ವಾ ತ್ಮಕನೆಂಬ ಭಾವನೆಯನ್ನು ಸ್ಥಿರಗೊಳಿಸಲು ಪ್ರಯತ್ನಮಾಡಬೇಕು. (ಪುಣ್ಯಕಾರ್ಯಗಳಿಂದ ಸಂಪತ್ತು ಲಭಿಸುವುದು. ಅಭೇದಜ್ಞಾನದಿಂದ ಮೋಕ್ಷಕ್ಕೆ ಈಡಾಗುವನೆಂದು ಭಾವವು) ॥ ೪೬ ॥ ದೇವತೆಗಳು, ಮನುಷ್ಯರು ಪಶುಗಳು ಹಕ್ಕಿಗಳು ಮರಗಳು ಹಾವುಗಳು ಮೊದಲಾದ ಪ್ರಾಣಿವರ್ಗವೆಲ್ಲವೂ ನೋಡುವುದಕ್ಕೆ ಸಾಮಾನ್ಯವಾಗಿ ಆ ಪರಮಾತ್ಮನಿಗಿಂತಲೂ ಬೇರೆ ಕಂಡುಬರುವ ಕಾರಣ ಭಿನ್ನಭಿನ್ನಗಳಾಗಿ ತೋರಿದರೂ ಸರ್ವಾಂತರ್ಯಾಮಿಯೆನಿಸಿದ ಪರಮಾತ್ಮನೇ ಎಲ್ಲ ಭೂತಗಳಲ್ಲಿಯೂ ನೆಲೆಸಿರುವನು. ಈ ಕಾರಣದಿಂದ ಆಪರಮಾತ್ಮನೇ ಈ ಮೇಲೆ

ದ್ವಿಜಾನತಾ ಸರ್ವಂ ಜಗತ್ಸ್ಥಾವರ ಜಂಗಮಂ । ದ್ರಷ್ಟವ್ಯ
ಮಾತ್ಮವದ್ವಿಷ್ಣು ರ್ಯತೋಽ ಯಂ ವಿಶ್ವರೂಪಧೃತ್ ॥ ೪೪ ॥
ಏವಂ ಜ್ಞಾತ್ವೇ ಶ ಭಗವಾ ನನಾದಿಃ ಪರಮೇಶ್ವರಃ । ಪ್ರಸೀದತ್ಯ
ಚ್ಯುತ ಸ್ತಸ್ಮಿ ನ್ಪ್ರಸನ್ನೇ ಕ್ಲೇಶ ಸಂಕ್ಷಯಃ ॥ ೪೯ ॥ ಶ್ರೀ
ಪರಾಶರಃ॥ ಏತಚ್ಛ್ರುತ್ವಾ ಽತಿಕೋಪೇನ ಸಮುತ್ಥಾಯ ತದಾ

ಹೇಳಿದ ರೂಪದಿಂದಿರುವನೆಂದು ತಿಳಿಯಬೇಕು ॥ ೪೭ ॥ ಇಂತು ಪರ
ಮಾತ್ಮನು ನಾನಾರೂಪದಿಂದಿರುವನೆಂದು ತಿಳಿದಬಳಿಕ ಚರಾಚರರೂಪ
ದಿಂದಿರುವ ಈ ಪ್ರಪಂಚವೆಲ್ಲವೂ ಆತ್ಮಮಯವಾಗಿಯೇ ಇರುವುದು.
ಇತರಭೂತಗಳಲ್ಲಿ ವಿಷ್ಣುವು ನಲೆಸಿರುವಂತೆಯೇ ತನ್ನಲ್ಲಿಯೂ ವಾಸಮಾ
ಡುವನು. ಇದರಿಂದ ತನಗೂ ಆ ಭೂತಗಳಿಗೂ ತಾರತಮ್ಯವೇನು?
ಎಂಬದಾಗಿ ವಿಚಾರಮಾಡಿ ಯಾವಪ್ರಾಣಿಯನ್ನೂ ಹಿಂಸಿಸದೆ, ಯಾವ
ಪ್ರಾಣಿಗೂ ಮನಸ್ಸಿನಿಂದ ಕೂಡಕೇಡನ್ನು ಬಗೆಯದೆ ಸಮದರ್ಶಿಯಾಗಿರ
ಬೇಕು ॥೪೮॥ ಇಂತು ಸಕಲಪ್ರಾಣಿಗಳಲ್ಲಿಯೂ ಏಕರೂಪವಾದ
ಪ್ರೀತಿಯನ್ನಿರಿಸಿ, ಪರಮಾತ್ಮನನ್ನೇ ಅನುದಿನವೂ ಮನನಮಾಡುತ್ತಿದ್ದರೆ,
ಷಡ್ಗುಣೈಶ್ವರ್ಯ ಸಂಪನ್ನನೂ, ಉತ್ಪತ್ತಿರಹಿತನೂ, ಸರ್ವೋತ್ತಮವಾದ
ಅಪ್ರತಿಹತ (ತಡೆಯಿಲ್ಲದ) ಪ್ರಭುಶಕ್ತಿಸಂಪನ್ನನೂ, ನಾಶರಹಿತನೂ ಎನಿ
ಸಿದ ಪರಮಾತ್ಮನು ಇವನವಿಷಯದಲ್ಲಿ ತನ್ನ ಅನುಗ್ರಹವನ್ನಿರಿಸುವನು.
ಆತನು ಪ್ರಸನ್ನನಾದೊಡೆ ಚಳಿ, ಸೆಕೆ, ಹಸಿವು, ಬಾಯಾರಿಕೆ, ಹಿಗ್ಗು
ವಿಕೆ, ಮರುಗುವಿಕೆ, ಮುಪ್ಪು, ಸಾವು, ಇವೇ ಮೊದಲಾದ ದ್ವಂದ್ವಗ
ಳೆನಿಸುವ, ಎಲ್ಲ ಕಷ್ಟಗಳೂ ನಿವಾರಣೆಯಾಗಿ ಎಂದಿಗೂ ನಾಶವಿಲ್ಲದ ಆ
ಪಾರವಾದ ಸುಖಕ್ಕೆ ಈಡಾಗುವನು. ಆಮೇಲೂ ಕೂಡ ಇದೇ ಭಾವ
ನೆಯಿಂದಲೇ ಆತನನ್ನು ಧ್ಯಾನಮಾಡುತಿದ್ದಲ್ಲಿ ಇವನು ಪೂರ್ವಜನ್ಮದಲ್ಲಿ
ಮಾಡಿದ ಕರ್ಮವು ಮುಗಿದಬಳಿಕ ಆತನ ಪಾದಾರವಿಂದಗಳಲ್ಲಿ ಸೇರಿ
ಹೋಗುವನು. ಇದೇ ಮೋಕ್ಷವೆನಿಸುವುದು॥ ೪೯ ॥ ಪರಾಶರನು ಹೇಳು
ತ್ತಾನೆ-ಇಂತು ಪರಮಭಾಗವತನೆನಿಸಿದ ಪ್ರಹ್ಲಾದನ ನುಡಿಯಂ ಕೇಳಿ,
ಹಿರಣ್ಯಕಶಿಪುವು ಬಹಳವಾಗಿ ಸಿಟ್ಟುಗೊಂಡು ತಾನುಕುಳಿತಿದ್ದ ಪೀಠದಿಂ
ದ ಥಟ್ಟನೆಮೇಲೆದ್ದನಿಂತು ತನ್ನಮಗನ ಎದೆಗೆಸರಿಯಾಗಿ ಗುರಿಯಿಟ್ಟು

ಸನಾತ್ । ಹಿರಣ್ಯಕಶಿಪುಃ ಪುತ್ರಂ ಪದಾ ಪಹ್ಲಸ್ಯ ತಾಡಯತ್ ॥೫೦॥ ಉಷಾಚ ಚಸ ಕೋಪೇನ ಸಾವಮರ್ಷಃ ಪ್ರಜ್ವಲನ್ನಿವ । ನಿಷ್ಪಿಷ್ಯ ಪಾಣಿನಾ ಪಾಣಿಂ ಹಂತುಕಾವೋ ಜಗದ್ವ್ಯಥಾ ॥೫೫॥ ಕೋ ವಿಪ್ರಚಿತ್ತೇ ! ಹೇರಾಹೋ ! ಹೇಽಸುರೈಷ ಮುಪಾರ್ಜಿತೋ । ನಾಗಪಾಶೈರ್ದೃಢಂ ಬದ್ಧ್ವಾ ಹ್ಯಸ್ಯತಾಂ ಮಾವಿಲಂಬಥ ॥೫೬॥ ಅನ್ಯಥಾ ಸಕಲಾ ಲೋಕಾ ಸ್ತಥಾ ದೈತೇಯ ದಾನವಾಃ । ಅನುಯಾಸ್ಯಂತಿ ಮೂಢಸ್ಯ ಮತ ಮಸ್ಯ ದುರಾತ್ಮನಃ ॥೫೭॥ ಬಹುಶೋ ವಾರಿತೋ ಽ ಸ್ಮಾಭಿ

ಬಲವಾಗಿಕಾಲಿನಿಂದ ಒದ್ದನು ॥೫೦॥ ತರುವಾಯ ಹಿರಣ್ಯಕಶಿಪುವು ಆಲ್ಲಿಗೂಸುಮ್ಮನಿರದೆತನ್ನಕೈಗಳನ್ನು ಹಿಸುಕಿಕೊಳ್ಳುತ್ತಾ, ಅವನಮಾತುಗಳನ್ನು ಸಹಿಸಲಾರದೆ, ಜಗತ್ತೆಲ್ಲವಂ ಕೊಲ್ಲಬೇಕೆಂಬುಬಯಿಸಿದ ಪ್ರಳಯಕಾಲದ ರುದ್ರನೋ ಎಂಬಂತೆ ವಿಶೇಷವಾಗಿಆಗ್ರಹದಿಂದೊಡಗೂಡಿ ಈ ರೀತಿ ಹೇಳತೊಡಗಿದನು ॥೫೦॥ ಓ ವಿಪ್ರಚಿತ್ತಿಯೇ; ಎಲ್ಲಿರಾಹುವೆ; ಅಯ್ಯೋಬಲಾಸುರನೆ, ನಾವು ಇವನನ್ನು ಕೊಲ್ಲಬೇಕೆಂದು ಹಲವು ಬಗೆಯಿಂದ ಪ್ರಯತ್ನಪಟ್ಟೆವು ಆದರೆ ಸಾಧ್ಯವಾಗಲಿಲ್ಲ ಹೀಗೆಯೇ ಉಪೇಕ್ಷೆಮಾಡಿದರೆ, ವಿಷ್ಣುಭಕ್ತಿಯುನ್ನತದೇಶಿಸಿ ಲೋಕವನ್ನೆಲ್ಲಾ ಹಾಳುಮಾಡುವನು. ಅದುಕಾರಣ ಈ ನೀಚನನ್ನು ನಾಗಪಾಶಗಳಿಂದ ಗಟ್ಟಿಯಾಗಿ ಬಿಗಿದು ಸಮುದ್ರದಲ್ಲಿನೂಕಿ, ಮೇಲೆ ದೊಡ್ಡ ದೊಡ್ಡ ಪರ್ವತಗಳನ್ನೇರಿದೊಡೆ ಮರಳಿ ಉಸುರಾಡದೆಸಾಯುವನು. ಸಾವಕಾಶಮಾಡಬೇಡಿರಿ (ಪ್ರಾಪ್ತಿಕ್ಕೆಹಾಕಿಕೊಂಡರೆ ಎಂತು ಬಿಡಿಸಲು ಸಾಧ್ಯವೊ ಅಂತೆಯೇ ಹಗ್ಗಗಳಿಂದ ತಕ್ಕೆಹಾಕಿ ಬಲವಾಗಿಬಿಗಿದರೆ ಬಿಡಿಸಿಕೊಳ್ಳಲಾಗದು) ॥೫೫॥ ಹಾಗಿಲ್ಲದೆ ಇವನವಿಷಯದಲ್ಲಿ ನಾವುಸ್ವಲ್ಪ ಉದಾಸೀನರಾಗಿದ್ದರೆ ಈ ಮೂಢನು ತನ್ನದುಷ್ಟತನವನ್ನೇ ಎಲ್ಲರಿಗೂಉಪದೇಶಿಸುವನು. ಆದರಿಂದ ಈ ಲೋಕದಲ್ಲಿರುವ ದೈತ್ಯರು, ದಾನವರು, ಇತರಜನಗಳೆಲ್ಲರೂ ಇವನಮಾರ್ಗವನ್ನೇ ಅನುಸರಿಸುವರು. ಇದರಿಂದ ಅನರ್ಥವು ಎಂದಿಗೂ ತಪ್ಪಲಾರದು. ॥೫೭॥ ನಾನೂ ಇವನ ದುರ್ಬುದ್ಧಿತನವನ್ನು ಬಹಳಮಟ್ಟಿಗೂ ಸಹಿಸಿದೆನು, ಮುಂದೆಯಾದರೂ ನನ್ನತಪ್ಪುಗ

ರಯಂ ಪಾಪ ಸ್ತಥಾಪ್ಯೇತೇ । ಸ್ತುತಿಂಕರೋತಿ ದುಷ್ಟಾತ್ಮಾನಂ
ಪಹ್ಲಪಿವೋಪಕಾರಕಃ ॥ ೪೨ ॥ ಶ್ರೀಪರಾಶರಃ॥ ತತಸ್ತೇ ಸ
ತ್ವರಾ ದೈತ್ಯಾ ಬಧ್ವಾ ತಂ ನಾಗ ಬಂಧನೈಃ । ಭರ್ತುರಾಜ್ಞಾಂ
ಪುರಸ್ಕೃತ್ಯ ಚಿಕ್ಷಿಪುಸ್ಸಲಿಲಾರ್ಣವೇ ॥ ೪೩ ॥ ತತಶ್ಚ ಬಾ
ಲ ಚಲತಾ ಪ್ರಹ್ಲಾದೇನ ಮಹಾರ್ಣವಃ । ಉದ್ವೇಲೋ ಽ ಭೂ
ತ್ಪರಂ ಕ್ಷೋಭ ಮುಪೇತ್ಯಾಚ ಸಮುಂತತಃ. ॥ ೪೪ ॥ ಭೂ
ಲೋಕ ಮಖಿಲಂ ದೃಷ್ಟ್ವಾ ಪ್ಲಾವ್ಯಮಾನಂ ಮಹಾಂ ಭಸಮಾ
ಹಿರಣ್ಯಕಶಿಪುರ್ದೈತ್ಯಾ ನಿದಮಾಹ ಮಹಾಮುನೆ! ॥ ೪೫ ॥
ದೈತೇಯಾ ಸ್ಸಕಲೈಶ್ಚೈಲೈ ರತ್ರೈವ ವರುಣಾಲಯೇ । ನಿಶ್ಚಿ

ನ್ನು ಹೊಗಳಬೇಡವೆಂದು ಅನೇಕಬಾರಿ ಬುದ್ಧಿ ಹೇಳುದುದಾಯಿತು, ಆದರೂ ಈ ಪಾಪಿಯು ಮಾತ್ರ ನನ್ನಶತ್ರುವನ್ನೇ ಹೊಗಳುತಿರುವೆನು, ಇವನು ದುಷ್ಟರಿಗೇ ಉಪಕಾರಿಯಾಗಿರುವನು, ಅದು ಕಾರಣ ಇವನನ್ನು ಕೊಲ್ಲತಕ್ಕುದೇ ಧರ್ಮವು. ಈ ವಿಷಯದಲ್ಲಿ ನೀವುಸ್ವಲ್ಪವೂ ಕಾಲವಿಳಂಬವಂ ಮಾಡಬೇಡಿರಿ ॥೪೪॥ ಪರಾಶರಮುನಿಯು ಹೇಳುತ್ತಾನೆ—ಇಂತು ಹಿರಣ್ಯಕಶಿಪುವಿನ ನುಡಿಯಂಕೇಳಿ ಆದೈತ್ಯರೆಲ್ಲರೂ ಒಡನೆಯೇ ಆ ಪ್ರಹ್ಲಾದನನ್ನು ನಾಗಪಾಶಗಳಿಂದ ಬಲವಾಗಿಬಿಗಿದು ಕಡಲಿನಲ್ಲಿ ಎಸೆದರು ॥೪೫॥ ಬಳಿಕಪ್ರಹ್ಲಾದನು ಅಕಡಲೊಳ್ ತೇಲಾಡುತಿದ್ದನೇ ಹೊರತು ಮುಳುಗಲಿಲ್ಲಾ. ಇಂತು ಸಮುದ್ರದಲ್ಲಿ ಅಲ್ಲಿಂದಿಲ್ಲಿಗೆಮೆದೆಲುತ್ತಿರುವಾಗ ಸಮುದ್ರವೂಕೂಡ ಚಲಿಸಲಾರಂಭಿಸಿತು. ಸ್ವಲ್ಪಕಾಲವಾದಬಳಿಕ ಸಮುದ್ರವು ಉಕ್ಕಿ, ಸುತ್ತಲೂ ದಡವನ್ನುಮೀರಿಭೂಲೋಕವೆಲ್ಲವೂ ಕೊಚ್ಚಿಕೊಂಡುಹೋಗುವಂತೆ ಹರಿಯಲಾರಂಭಿಸಿತು ॥ ೪೬॥ ಮನಸಶೀಲರೆನಿಸಿದ ಮುನಿಗಳಲ್ಲಿ ಉತ್ತಮನೆನಿಸಿದ ಮೈತ್ರೇಯನೆ, ಇಂತು ಉಕ್ಕಿದಸಮುದ್ರವು ಈ ಭೂಮಂಡಲವನ್ನೆಲ್ಲಾ ಹರಡಿಕೊಂಡು ತೇಲಿಸುತ್ತಿರುವುದಂನೋಡಿ ಹಿರಣ್ಯಕಶಿಪುವು ದೈತ್ಯರೊಂದಿಗೆ ಈ ರೀತಿಯೇಳತೊಡಗಿದನು ॥೪೭॥ ಎಲ್ಲೆದಿತಿವಂಶದಲ್ಲಿ ಜನಿಸಿದ ದೈತೇಯರೆ, ಈನೀಚಸು ಸಮುದ್ರದಲ್ಲಿ ಅಲ್ಲಾಡುತ್ತಿರುವಕಾರಣ ಸಮುದ್ರವೂ ಉಕ್ಕಿಹರಿಯುತ್ತಿರುವುದು, ಇವನನುಕಲಿಸದಿದ್ದೊಡೆ ಸಮುದ್ರವೂಉಲುಗುವುದಿಲ್ಲ

ದೈತ್ಯಸ್ಸರ್ವತಸ್ಸರ್ವೈಶ್ಚೀಯತಾಮೇಷ ದುರ್ಮತಿಃ ॥೪೪॥
ನಾಗ್ನಿರ್ದಹತಿ ನೈವಾಯಂ ಶಸ್ತ್ರೈಶ್ಚಿನ್ನೋ ನ ಚೋರಗೈಃ ।
ಹ್ಲಯಂ ನೀತೋ ನ ವಾತೇನ ನ ವಿಷೇಣ ನ ಕೃತ್ಯಯಾ ॥೪೫॥
ನ ಮಾಯಾಭಿರ್ನಜೈರ್ವೋಚ್ಚಾ ತ್ಪಾತಿತೋ ನ ಚ ದಿಗ್ಗಜೈಃ ।
ಬಾಲೋತಿ ದುಷ್ಟ ಚೇತ್ತೋಽಯಂ ನಾನೇನಾರ್ಥೋಽಸ್ತಿ ಜೀವ

ಅದುಕಾರಣ ವರುಣನಿಗೆ ಆವಾಸಭೂತನಾದ ಈ ಸಮುದ್ರದಲ್ಲಿ ಈ ನೀಚನ ಸುತ್ತಲೂ ಪರ್ವತಗಳನ್ನು ಸ್ವಲ್ಪವೂ ಸಂದು ಇಲ್ಲದಂತೆ ಒಂದರಮೇಲೊಂದನ್ನು ಹೇರಿರಿ. ಇಂತಾದರೆ ಇವನು ಚಲಿಸದೆ ಸ್ವಲ್ಪಹೊತ್ತಿನಲ್ಲಿಯೇ ಸಾಯುವನು. ಕಡಲೂ ಕೂಡ ಈಗಿನಂತೆ ದಡವಂ ಮೀರಿ ಪ್ರವಹಿಸಲಾರದು ॥ ೪೪ ॥ ಈ ನೀಚಕನ್ನು ಬೆಂಕಿಯು ಸುಡಲಾರದೆ ಹೋದನು, ಇವನನ್ನು ಸೀಳುವುದಕ್ಕಾಗಿ ನಮ್ಮ ಕೂರರು ಪ್ರಯೋಗಿಸಿದ ಆಯುಧಗಳೆಲ್ಲವೂ ತುಕ್ಕು ಹಿಡಿದಂತೆ ಪುಡಿಪುಡಿಯಾಗಿಬಿದ್ದು ಹೋದುವು. ಕ್ರೂರವಾದ ವಿಷವುಳ್ಳ ತಕ್ಷಕನೇ ಮೊದಲಾದ ಹಾವುಗಳೂ ಕೂಡ ಇವನನ್ನು ಕಚ್ಚುವುದಕ್ಕೋಸ್ಕರ ಪ್ರಯತ್ನಪಟ್ಟು ತಮ್ಮ ಕೋರೆಹಲ್ಲುಗಳನ್ನೆಲ್ಲಾ ಮುರಿದುಕೊಂಡು ಹೇಳಲಸಾಧ್ಯವಾದ ಸಂಕಟವನ್ನನುಭವಿಸಿ ಹಿಂದಿರುಗಿದುವು. ಎಲ್ಲವನ್ನೂ ಒಣಗಿಸುವಂತಹ ಸಾಮರ್ಥ್ಯವುಳ್ಳ ಗಾಳಿಯೂ ಕೂಡ ಇವನ ಮೈಯಲಿರುವ ರಕ್ತ, ಮಾಂಸಗಳನ್ನು ಹೀರಲಾರದೇ ಹೋದನು. ಮಹಾಭಯಂಕರವಾದ ಹಾಲಾಹಲವೆಂಬ ವಿಷವನ್ನೂ ತಿಂದು, ಅರಗಿಸಿಕೊಂಡನು. ಪುರೋಹಿತರ ಮಂತ್ರಶಕ್ತಿಗಳೆಲ್ಲಾ ಅವರಿಗೇ ಕೇಡಾಗಿ ಪರ್ಯವಸಿತ್ತು. ॥೪೫॥ಮೋಸ ಅಥವಾ ಇಂದ್ರಜಾಲ ವಿದ್ಯೆಯಲ್ಲಿ ನಿಪುಣನೆನಿಸಿದ ಶಂಬರನು ಮಾಡಿದ ಮಾಯೆಗಳೆಲ್ಲವೂ ನಿಷ್ಫಲಗಳಾದುವು. ನೂರಾರು ಯೋಜನ ಎತ್ತರವಾದ ಈ ಉಪ್ಪರಿಗೆಯಿಂದ ತಳ್ಳಿದರೂ ಸಾಯಲಿಲ್ಲ. ಮದಿಸಿದ ದಿಗ್ಗಜಗಳೆಷ್ಟು ತಮ್ಮ ಕೊಂಬುಗಳನ್ನು ಮುರಿದುಕೊಂಡುಬಹಳವಾಗಿ ಮರುಗಿದುವು. ಇವನು ಹುಟ್ಟುಗನಾದರೂ ಇವನ ದುರುಳತನವು ಮಾತ್ರ ಬಣ್ಣಿಸಲಸಾಧ್ಯ. ಇವನು ಬಹಳ ಕೆಡಕನು. ಇಂತಹವನು ಬದುಕಿರುವುದಕ್ಕಿಂತಲೂ ಸಾಯುವುದೇ ಲೇಸು. ಇವನಿಂದ ತುಸವೂ

ತಾ ॥ ೬೦ ॥ ತದೇಷತೋಯರಾಣ್ಮಧ್ಯೇ ಸಮಾಕ್ರಾಂತೋ ಮಹೀಧರೈಃ । ತಿಷ್ಠತ್ಯ ಬ್ದ ಸಹಸ್ರಾಂತಂ ಪ್ರಾಣಾ ಹಾಸ್ಯ ತಿ ದುರ್ಮತಿಃ ॥ ೬೧ ॥ ತತೋ ದೈತ್ಯಾ ದಾನವಾಶ್ಚ ಪರ್ವ ತೈ ಸ್ತಂಮಹೋದಧೌ । ಆಕ್ರಮ್ಯ ಜಯನಂ ಚಕ್ರು ರ್ಯೋಜ ನಾನಿ ಸಹಸ್ರಶಃ ॥ ೬೨ ॥ ಸ ಚೈತಃ ಪರ್ವತೈ ರಂತ ಸ್ಸಮು ದ್ರಸ್ಯ ಮಹಾಮತಿಃ । ತುಷ್ಟಾವಾಹ್ನಿಕ ವೇಳಾಯಾ ಮೇಕಾಗ್ರ ಮತಿ ರಚ್ಯುತಂ ॥೬೩॥ ಪ್ರಹ್ಲಾದಃ॥ ನಮಸ್ತೇ ಪುಂಡರೀಕಾ ಹ್ಯ! ನಮಸ್ತೇ ಪುರುಷೋತ್ತಮ ! ನಮಸ್ತೇ ಸರ್ವಲೋಕಾ ತ್ಮ್ಮ ! ನಮಸ್ತೇ ತಿಗ್ಮಚಕ್ರಿಣೇ ॥ ೬೪ ॥ (ನಮಸ್ತೇ ವಾ

ಹೆರರಿಗೆ ಉಪಕಾರವಿಲ್ಲ ॥ ೬೦ ॥ ಆದಕಾರಣ ಇವನನ್ನು ಜಲರಾ ಜನಾದ ಸಮುದ್ರ ಮಧ್ಯದಲ್ಲಿ ಎಸೆದು ಸುತ್ತಲೂ ಪರ್ವತಗಳಿಂದ ಮುಚ್ಚಿರಿ. ಹೀಗೆ ಪರ್ವತಗಳಿಂದ ಸುತ್ತುಗಟ್ಟಲ್ಪಟ್ಟು ಎಷ್ಟು ಕಾಲ ಬದುಕಿರುವನು ? ಈ ದುರುಳನು ಬಂದು ಸಾವಿರ ವರ್ಷಗಳ ಮೇಲಾದರೂ ಸಾಯದೇ ಇದ್ದಾನೆ ? ನೋಡುವ ॥ ೬೧ ॥ ಇಂತು ಹಿರಣ್ಯಕಶಿಪುವಿನ ಅಪ್ಪಣೆಯಂತೆ ದೈತ್ಯರೂ, ದಾನವರೂ ಕೂಡ, ಆ ಕಡಲಿನಲ್ಲಿ ಆ ಪ್ರಹ್ಲಾದನ ಸುತ್ತಲೂ ಬೆಟ್ಟಗಳನ್ನೊಡ್ಡಿ ಸಾವಿರಾರು ಗಾವುದಗಳಷ್ಟು ಎತ್ತರವಾಗಿ ಕೋಟೆ ಕಟ್ಟಿದರು ॥ ೬೨ ॥ ಮಹಾಬುದ್ಧಿಶಾಲಿಯೆನಿಸಿದ ಈ ಪ್ರಹ್ಲಾದನು ಆ ಸಾಗರದ ನಡುವೆ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟವನಾಗಿರುವಾಗ ಇವನು ಪ್ರತಿದಿನವೂ ಪರಮಾತ್ಮನನ್ನು ಭಜನವಮಾಡುವುದಕ್ಕೆ ಕ್ಲುಪ್ತಮಾಡಿಕೊಂಡಿದ್ದ ಆಹ್ನಿಕಸಮಯವು ಒದಗಿತು. ಕೂಡಲೇ ಪ್ರಹ್ಲಾದನು ಬಾಹ್ಯೇಂದ್ರಿಯ ವ್ಯಾಪಾರಗಳನ್ನುಳಿದು, ತನ್ನ ಮನಸ್ಸನ್ನು ಆ ಪರಮಾತ್ಮನಲ್ಲಿ ಲಯಗೊಳಿಸಿ ನಿಶ್ಚಲವಾದ ಬುದ್ಧಿಯಿಂದೊಡಗೂಡಿ ನಾಶರಹಿತನೆನಿಸಿದ ಆ ಪರಮಾತ್ಮನನ್ನು ಹೊಗಳತೊಡಗಿದನು ॥ ೬೩ ॥ ಪ್ರಹ್ಲಾದನು ಸ್ತೋತ್ರಮಾಡುತ್ತಾನೆ:-ಎಲೈ ಪುಂಡರೀಕಾಕ್ಷನೆ; ಪುರುಷೋತ್ತಮನೆ; ಸರ್ವಲೋಕಸ್ವರೂಪಿಯೆ; ಹರಿತವಾದ ಚಕ್ರಾಯುಧವನ್ನು ಕೈಲಿಪಿಡಿದವನೆ, ನಿನಗೆ ನಮಸ್ಕಾರವು ॥ ೬೪ ॥ ಎಲ್ಲ ಭೂತಗಳನ್ನೂ ಉಂಟುಮಾಡಿ, ಬಳಿಕ ಅವುಗಳಲ್ಲಿಯೂ ನೀನೇ

ಸುದೇವಾಯ ನಮಸ್ತೇ ಕರುಣಾಕರ ! । ನಮಸ್ತೇ ವಿಶ್ವಭೂ
ತಾಯ ನಮಸ್ತೇ ಸರ್ವ ಮೂರ್ತಯೇ ॥) ನಮೋ ಬ್ರಹ್ಮಣ್ಯ
ದೇವಾಯ ಗೋಬ್ರಾಹ್ಮಣ ಹಿತಾಯಚ । ಜಗದ್ಧಿತಾಯ ಕೃ
ಷ್ಣಾಯ ಗೋವಿಂದಾಯ ನಮೋನಮಃ ॥ ೬೫ ॥ ಬ್ರಹ್ಮತ್ವೇ
ಸೃಜತೇ ಸರ್ವಂ ಸ್ಥಿತೌ ಪಾಲಯತೇ ಪುನಃ । ರುದ್ರರೂಪಾ
ಯಕಲ್ಪಾಂತೇ ನಮಸ್ತುಭ್ಯಂ ತ್ರಿಮೂರ್ತಯೇ ॥ ೬೬ ॥ ದೇ
ವಾ ಯಕ್ಷಾ ಸ್ಸುರಾ ಸ್ಸಿದ್ಧಾ ನಾಗ ಗಂಧರ್ವ ಕಿನ್ನರಾಃ । ಪಿ
ಶಾಚಾ ರಾಕ್ಷಸಾಶ್ಚೈವ ಮಾನುಷಾಃ ಪಶವ ಸ್ತಥಾ ॥ ೬೭ ॥

ವಾಸುಮಯಂದ ಕಂರಿಂ ವ ಸುದೇವನೆಂಬದಾಗಿಕರೆಯಿಸಿಕೊಳ್ಳುವನೆ, ಕೃಪಾಸಮುದ್ರನೆ, ಜಗದ್ರಕ್ಷಕನೆ, ಸರ್ವಸ್ವರೂಪಿಯೇ, ನಿನ್ನನ್ನು ನಾನು ಭಕ್ತಿಯಿಂದ ವಂದಿಸುವೆನು.) ತಪಸ್ಸು, ವೇದ, ಇವುಗಳಲ್ಲಿಯೂ, ಈ ತಪಸ್ಸು ಮತ್ತು ವೇದಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವವರಲ್ಲಿಯೂ ಪ್ರೀತಿಯುಳ್ಳವನೆ, ಗೋವುಗಳು, ಬ್ರಾಹ್ಮಣರು, ಇವರನ್ನು ವಿಶೇಷವಾಗಿ ವಿಶ್ವಾಧಿಕದಿಂದ ಸಂರಕ್ಷಿಸುವವನೆ; ಯಜ್ಞಸಂರಕ್ಷಕನೆ: ನಿನಗೆ ನನ್ನ ನಮಸ್ಕಾರವಿರಲಿ ॥ ೬೫ ॥ ಸೃಷ್ಟಿಕಾಲದಲ್ಲಿ ರಜೋಗುಣವನ್ನುಪಾಶ್ರಯಿಸಿ, ಬ್ರಹ್ಮರೂಪವಂ ತಾಳಿ, ಈ ಲೋಕವನ್ನು ನಿರ್ಮಿಸುವೆ. ಬಳಿಕ ಸತ್ವಾಂಶವಂ ಸ್ವೀಕರಿಸಿ ವಿಷ್ಣುರೂಪದಿಂದ ಲೋಕವನ್ನು ಸಲಹುವೆ. ಪ್ರಳಯಕಾಲದ ಕೊನೆಯಲ್ಲಿ ತಮೋಗುಣವನ್ನವಲಂಬಿಸಿ ರುದ್ರರೂಪವಂ ತಳೆದು ಎಲ್ಲವನ್ನೂ ಅಳಿಸುವೆ. ಇಂತು ನೀನೊಬ್ಬನೇ ಈ ಮೂರು ಗುಣಗಳನ್ನೂ ಆಶ್ರಯಿಸಿ, ಬೇರೆ ಬೇರೆ ಕಾಲಗಳಲ್ಲಿ ಮೇಲಿಹೇಳಿದ ಸೃಷ್ಟಿ, ಸ್ಥಿತಿಲಯಗಳನ್ನು ನಿರವೇರಿಸುತಿರುವೆ. ಇಂತಹ ತ್ರಿಮೂರ್ತಿಸ್ವರೂಪನೆನಿಸಿದ ನಿನ್ನನ್ನು ನಾನು ವಂದಿಸುವೆನು॥ ೬೬॥

ದೇವತೆಗಳು, ಯಕ್ಷರು, ಸುರರು, ಸಿದ್ಧರು, ನಾಗರು, ಗಂಧರ್ವರು, ಕಿನ್ನರರು, ಪಿಶಾಚಗಳು, ರಾಕ್ಷಸರು, ಮಾನುಷ್ಯರು, ಪಶುಗಳು, ಪಕ್ಷಿಗಳು, ಜಲಿಸದಂತಹ ಗಿಡ, ಬಳ್ಳಿ ಬೆಟ್ಟ ಮೊದಲಾದ ಸ್ಥಾವರಪದಾರ್ಥಗಳು, ಇರುವೆಗಳು, ಹಾವುಗಳು, ಭೂಮಿ, ಉದಕ, ಅಗ್ನಿ, ಆಕಾಶ, ವಾಯು, ಶಬ್ದ, ಸ್ಪರ್ಶ, ರಸ, ರೂಪ, ಗಂಧ, ಮನಸ್ಸು, ಬುದ್ಧಿ, ಅಹಂಕಾರ

ಪಕ್ಷಿಣ ಸ್ಥಾವರಾ ಶ್ಚೈವ ಪಿಪೀಲಿಕ ಸರೀಸೃಪಾಃ । ಭೂಮ್ಯಂ
ಬ್ವಗ್ನಿ ನಭೋ ವಾಯು ಶಬ್ದಸ್ಪರ್ಶ ಸ್ತಥಾರಸಃ ॥ ೬೪ ॥
ರೂಪಂ ಗಂಧೋ ಮನೋ ಬುದ್ಧಿ ರಾತ್ಮಕಾಲ ಸ್ತಥಾ ಗು
ಣಾಃ । ಏತೇಷಾಂ ಪರಮಾರ್ಥಶ್ಚ ಸರ್ವಮೇತತ್ತ್ವ ಮಚ್ಯು
ತ ! ॥ ೬೫ ॥ ವಿದ್ಯಾವಿದ್ಯೇ ಭವಾ ಸತ್ಯ ಮಸತ್ಯಂ ತ್ವಂ ವಿ
ಷಾಮೃತೇ । ಪ್ರವೃತ್ತಂ ಚ ನಿವೃತ್ತಂಚ ಕರ್ಮ ವೇದೋ
ದಿತಂ ಭವಾ ॥ ೬೦ ॥ ಸಮಸ್ತ ಕರ್ಮ ಭೋಕ್ತಾಚ ಕ
ರ್ಮೋಪ ಕರಣಾನಿಚ । ತ್ವಮೇವ ವಿಷ್ಣೋ ! ಸರ್ವಾಣಿ ಸರ್ವ
ಕರ್ಮ ಫಲಂ ಚ ಯತ್ ॥ ೬೧ ॥ ಮಯ್ಯನ್ಯತ್ರ ತಥಾಽಶೇ
ಷ ಭೂತೇಷು ಭುವನೇಷುಚ । ತನ್ಮೈವಮ್ಮಿ ಪ್ರಿರೈಶ್ವರ್ಯ ಗು

ರ, ಕಾಲ, ಸತ್ವಾದಿಗುಣಗಳು. ಇವುಗಳಲ್ಲಿರುವ ತತ್ತ್ವಾಂಶ, ಇವೆಲ್ಲವೂ ನೀನೇಆಗಿರುವೆ, ಎಲೈಅಚ್ಯುತನೆ; ಸರ್ವವ್ಯಾಪಕನಾದ ನಿನ್ನಐಶ್ವರ್ಯವಂ ಬಣ್ಣಿಸಲು ಯಾರಿಂದಾದೀತು ? ಸರ್ವ ಸ್ವರೂಪನಾದ ನೀನೇ ಈ ಮೇ ಲೆ ಹೇಳಿದ ರೂಪಗಳಂ ತಳೆದು ಆ ಆ ರೂಪದಿಂದ ಕಂಗೊಳಿಸು ತಿರುವೆ ॥೬೨-೬೪॥ ಜ್ಞಾನಸಂಪಾದಕವಾದ ವಿದ್ಯೆ, ಬಂಧಜನಕ, ವೆನಿಸಿದ ಅವಿದ್ಯೆ, ಸುಳ್ಳು, ದಿಟ, ವಿಷ, ಅಮೃತ, ಪ್ರವೃತ್ತಿಮಾರ್ಗ, ನಿವೃತ್ತಿಮಾರ್ಗ, ಜ್ಯೋತಿಷ್ಟೋಮಾದಿಕ್ರತುಗಳು, ಬ್ರಹ್ಮಯಜ್ಞ ವೊ ದಲಾದ ಮಹಾಯಜ್ಞಗಳು, ದರ್ಶ, ಪೌರ್ಣಮಾಸ ವೊದಲಾದ ಇಷ್ಟಿ ಗಳು, ಇನ್ನೂವೇದಗಳಲ್ಲಿ ಹೇಳಿರುವ ಸಕಲವಿಧವಾದ ಕರ್ಮ, ಇವೆಲ್ಲವೂ ನೀನೇಆಗಿರುವೆ. ॥೬೫॥ ಎಲ್ಲಕರ್ಮಗಳ ಫಲಗಳನ್ನೂ ನೀನೇ ಅನುಭವಿ ಸುತೀಯೆ, ಸಕಲಕಾರ್ಯಗಳಿಗೂ ಸಂಧಕಗಳೆನಿಸಿದ ಉಪಕರಣ ಸಾಮಗ್ರಿ ಯೂ ನೀನೇಆಗಿರುವೆ, ಎಲೈವಿಷ್ಣುವೆ, ಎಲ್ಲವೂನೀನೇ ಆಕರ್ಮ ಗಳ ಗೆ ಫಲವಂಕೊಡುವನೂ, ಕರ್ಮಫಲವೂಕೊಡ ನೀನೇಆಗಿರುವೆ ॥೬೧॥ ನನ್ನಲ್ಲಿಯೂ, ಬೇರೊಂದು ಕಡೆಯೂ, ಇನ್ನೂ ಲೋಕದಲ್ಲಿರುವ ಎಲ್ಲಭೂ ತಗಳಲ್ಲಿಯೂ, ರಾತ್ರಿಹಗಲೂ ಅವಿಚ್ಛಿನ್ನವಾಗಿ ನೀನೇ ವಾಸವಾಗಿ ಕೊಂಡುಅವುಗಳನ್ನೆಲ್ಲಾ ಆವರಿಸಿಕೊಂಡಿರುವೆ. ಇದರಿಂದಲೇ ಅಚಿಂ ತ್ಯಮಹಿಮೆಯೂ, ಅಪ್ರತಿಹತವಾದ ಪ್ರಭುತಕ್ತಿಯೂ, ಉತ್ತಮೋತ್ತ

ಣ ಸಂಸೂಚಕೇ ಪ್ರಭೋ! ॥ ೭೨ ॥ ತ್ವಾಂ ಯೋಗಿನ ಶ್ಚಿಂ
ತಯಂತಿ ತ್ವಾಂ ಯಜಂತಿ ಚ ಯಾಜಕಾಃ । ಹವ್ಯ ಕವ್ಯ ಭು
ಗೇಕ ಸ್ತ್ವಂ ಪಿತೃ ದೇವ ಸ್ವರೂಪ ಧೃತ್ ॥ ೭೩ ॥ ರೂಪಂ
ಮಹತ್ತೇ ऽ ಜ್ಯುತ! ಯತ್ರವಿಶ್ವಂ ತತಶ್ಚ ಸೂಕ್ಷ್ಮಂ ಜಗದೇತ
ದೀಕ । ರೂಪಾಣಿ ಸೂಕ್ಷ್ಮಾಣಿಚ ಭೂತಭೇದಾ ಸ್ತೇಷ್ವಂತ
ರಾತ್ಮಾಖ್ಯ ಮತೀವಸೂಕ್ಷ್ಮಂ ॥೭೪॥ ತಸ್ಮಾಚ್ಚ ಸೂಕ್ಷ್ಮಾದಿ ವಿ
ಕೇಷಣಾನಾ ಮಗೋಚರೇ ಯತ್ಪರವೂರ್ಧ ರೂಪಂ । ಕಿಮುಪ್ಯ

ಮಗುಣಗಳೂ, ನಿರತಿಶಯವಾದ ಸಂಪತ್ತೂ ನಿನ್ನಲ್ಲಿರುವಂತೆ ಬೇರೊಂದು ಕಡೆ ಇಲ್ಲವೆಂದು ಸೂಚಿಸುತ್ತದೆ. ॥೭೨॥ ಇಂತಹ ಕಾರಣದಿಂದಲೇ ಯೋಗಿಗಳೆಲ್ಲರೂ ನಿನ್ನನ್ನೇ ಸ್ಥಿರವಾದ ಮನಸ್ಸಿನಿಂದ ಭಜಿಸುವರು. ಯಜ್ಞಾದಿಕರ್ಮವನ್ನಾಚರಿಸತಕ್ಕವರೂ ಕೂಡ ನಿನ್ನ ಪ್ರೀತಿಗಾಗಿಯೇ ಯಜನಮಾಡುವರು. ಕವ್ಯಗಳೆನಿಸಿದ ಶ್ರಾದ್ಧಾದಿಗಳಲ್ಲಿ ಪಿತೃಗಳಿಗೆ ಕೊಡತಕ್ಕ ಭಾಗವನ್ನು ಪಿತೃರೂಪದಿಂದಲೂ, ಹವ್ಯಗಳೆನಿಸಿದ ಯಜ್ಞಾದಿಗಳಲ್ಲಿ ದೇವತೆಗಳಿಗೆಕೊಡುವಭಾಗವನ್ನು ದೇವರೂಪದಿಂದಲೂ ನೀನೊಬ್ಬನೇ ಪರಿಗ್ರಹಿಸುವೆ. ಆದಕಾರಣ ಪಿತೃರೂಪಿಯೂ, ದೇವರೂಪಿಯೂ, ನೀನೇಆಗಿರುವೆ॥೭೩॥

(ಭಗವದ್ಭಕ್ತರಲ್ಲಿ ಉತ್ತಮನೆನಿಸಿದ ಪ್ರಹ್ಲಾದನು ಇದುವರೆಗೂ ಪರಮಾತ್ಮನ ಪ್ರಾಪಂಚಿಕರೂಪವನ್ನು ವರ್ಣಿಸಿ, ಇನ್ನು ಮುಂದೆ ಮುಕ್ತಿಸಾಧನವೆನಿಸಿದ ಆ ಪರಮಾತ್ಮನ ಶುದ್ಧಸ್ವರೂಪವಂ ವರ್ಣಿಸುತ್ತಾನೆ) ಓ ಅಚ್ಯುತನೆ, ಆವರಣಯುಕ್ತವಾದ ಬ್ರಹ್ಮಾಂಡವನ್ನು ಧರಿಸಿರುವ ನಿನ್ನ ರೂಪವು ಬಹಳ ದೊಡ್ಡದು. ಎಲೈ ಒಡೆಯನೆ, ಇಂತಹ ಬ್ರಹ್ಮಾಂಡ ಮಧ್ಯವರ್ತಿಯಾದ ವಿರಾಡ್ರೂಪಿಯಉದರಮಧ್ಯದಲ್ಲಿರುವ ಈ ಜಗತ್ತು ನಿನ್ನ ಸೂಕ್ಷ್ಮರೂಪವಾಗಿರುವುದು ಈಜಗತ್ತಿನಲ್ಲಿರುವ ಜರಾಯುಜ (ಗರ್ಭಕೋಶದಿಂದ ಜನಿಸುವ ಮನುಷ್ಯರು ಮೊದಲಾದ ಪ್ರಾಣಿಗಳು) ಅಂಡಜ ಮೊಟ್ಟೆಯ ರೂಪವಾಗಿ ಮೊದಲು ಜನಿಸಿ ಆ ಮೇಲೆ ಬೇರೆ ರೂಪವನ್ನು ಹೊಂದತಕ್ಕ ಪಕ್ಷಿ ಮೊದಲಾದುವು) ಸ್ವೇದಜ (ಬೆವರಿನಿಂದ ಹುಟ್ಟುವ ಕೂರೆ ಮೊದಲಾದುವು) ಉದ್ಭಿಜ್ಜ (ಭೂ

ಚಿಂತ್ಯಂ ತವ ರೂಪಮುಪ್ತ ತಸ್ಮೈ ನಮಸ್ತೇ ಪುರುಷೋತ್ತ
ಮಾಯ ॥೩೫॥ ಸರ್ವಭೂತೇಷು ಸರ್ವಾತ್ಮಕ ! ಯಾ ಶಕ್ತಿ
ರ ಪರಾ ತವ । ಗುಣಾಶ್ರಯಾ ನಮಸ್ತಸ್ಯೈ ಕಾಶ್ಯತಾಯೈ
ಪರೇಶ್ವರ! ॥೩೬॥ ಯಾಽತೀತ ಗೋ ಚರಾ ವಾಚಾಂ ಮನಸಾಂ

ಮಿಯನ್ನು ಭೇದಿಸಿ ಹುಟ್ಟುವ ಗಿಡ, ಒಳ್ಳಿ ಮೊದಲಾದುವು) ಗಳೆಂಬ ನಾಲ್ಕು ವಿಧವಾದ ಭೂತ ಸಮುದಾಯವೂ ಕೂಡ ನಿನ್ನ ಸೂಕ್ಷ್ಮ ದೇಹವೆನಿಸಿದ ಜಗತ್ತಿಗೆ ಸೂಕ್ಷ್ಮರೂಪವೆನಿಸುವುದು. ಮೇಲೆ ಹೇಳಿದ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ಭೂತಗಳಲ್ಲಿ ಅಂತರಾತ್ಮವು ಎಲ್ಲಕ್ಕಿಂತಲೂ ಬಹಳ ಸೂಕ್ಷ್ಮವಾದುದು ॥೩೪॥ ಇಂತಹ ಸೂಕ್ಷ್ಮವೆನಿಸಿದ ಅಂತರಾತ್ಮನಿಗಿಂತಲೂ ಶ್ರೇಷ್ಠವೆನಿಸಿ ಸ್ಥೂಲ, ಸೂಕ್ಷ್ಮ ವೊದಲಾದ ವಿಶೇಷಣಗಳಿಗೆ ಅಗೋಚರವೆನಿಸಿದ, ಯಾವುದೋ ಒಂದು ಬಗೆಯಾದ ನಿರ್ವಿಕಲ್ಪ ರೂಪವಿರುವುದು. ಈ ರೂಪಕ್ಕೆ * ಪುರುಷೋತ್ತಮನೆಂದು ವ್ಯವಹಾರವು. ಇಂತಹ ಅಚಿಂತ್ಯಾದ್ಭುತ ರೂಪಯುಕ್ತನಾದ ನಿನಗೆ ನಾನು ಅನಂತಾನಂತ ವಂದನೆಗಳಂ ಸಮರ್ಪಿಸುವೆನು ॥೩೫॥ ಓ ಪರಮೇಶ್ವರನೆ! ನಿನಗೆ ದಿಟವಾಗಿ ಯಾವ ಬಗೆಯಾದ ರೂಪವೂ ಇಲ್ಲ ಇಂತಹ ಸ್ಥೂಲ, ಸೂಕ್ಷ್ಮ ವೊದಲಾದ ರೂಪಗಳನ್ನು ಉಂಟುಮಾಡುವ ಶಕ್ತಿಗಳು ಎರಡು ವಿಧವಾಗಿರುವುವು. ಸಕಲ ಭೂತಗಳನ್ನು ಆವರಿಸಿ, ಸತ್ವಾದಿ ಮೂರುಗುಣಗಳಿಗೆ ಆಶ್ರಯ ಭೂತವಾಗಿ, ಶಾಶ್ವತವೆನಿಸಿದ, ಪ್ರಕೃತಿ ಎಂಬ ವೊದಲನೆಯದಾದ ಜಡ ಶಕ್ತಿಯು ನಿನ್ನ ಅಧೀನದಲ್ಲಿರುವುದು. ಇಂತಹ ನಾಶರಹಿತವಾದ ನಿನ್ನ ಶಕ್ತಿಯಂ ನಾನು ವಂದಿಸುವೆನು ॥೩೬॥ ಎಲೈ ಸರ್ವಾತ್ಮಕನೆ; ಉತ್ತಮಗಳೆನಿಸಿದ ವೇದವಾಕ್ಯಗಳಿಗಾಗಲಿ, ಮನಸ್ಸಿಗೂ ಕೂಡ ಅಗೋಚರವೆನಿಸಿ, ಜಾತಿ, ಗುಣ ವೊದಲಾದ ವಿಶೇಷ ಶೂನ್ಯವೂ, ಜ್ಞಾನಿಗಳಿ

* ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ ॥ ಅತೋಽಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ॥ ಓ ಅಜ್ಞಾನಾ ಕ್ಷರಗಳೆನಿಸಿದ ಭೂತ ಸಮುದಾಯಗಳನ್ನೂ, ಅಕ್ಷರನೆನಿಸಿದ ಕೂಟಸ್ಥನನ್ನೂ ನಾನು ಮೀರಿರುವೆನು. ಅದು ಕಾರಣ ಲೋಕದ ಜನರೂ, ವೇದಗಳೂ ಕೂಡ ನನ್ನನ್ನು ಪುರುಷೋತ್ತಮನೆಂದು ವ್ಯವಹರಿಸಿರುವವು॥ ಗೀತಾ ॥

ಚಾ ವಿಶೇಷಣಾ । ಜ್ಞಾನಿ ಜ್ಞಾನ ಪರಿಚ್ಛೇದ್ಯಾ ತಾಂ ವಂದೇ
ಚೇಶ್ವರೀಂ ಪರಾಂ ॥೬॥ ಓ * ನ್ನಮೋ ವಾಸುದೇವಾಯ § ತ
ಸ್ಮೈ ಭಗವತೇ ಸದಾ । ವ್ಯತಿರಿಕ್ತಂ ನಯಸ್ಯಾ ಸ್ತಿ ವ್ಯತಿರಿಕ್ತೋ
ಽ ಖಿಲಸ್ಯ ಯಃ ॥೬೮॥ ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ

(ಆತ್ಮತತ್ವವನ್ನರಿತವರ) ದಿವ್ಯಜ್ಞಾನದಿಂದ ತಿಳಿಯಲು ಯೋಗ್ಯವೆನಿಸಿ, ಈಶ್ವರತತ್ವಭೂತವೆನಿಸಿದ ಚಿಚ್ಛಕ್ತಿಯನ್ನು ನಾನು ವಂದಿಸುವೆನು. ಪರಮಾತ್ಮನ ಚಿಚ್ಛಕ್ತಿಯನ್ನು ವೇದಗಳಿಂದಲೂ ತಿಳಿಯಲಾಗದು ಮನಸ್ಸಿನಿಂದ ಊಹಿಸುವುದೂ ಅಸಾಧ್ಯ. ಬಿಳುಪು, ಕೆಂಪು ಮೊದಲಾದ ರೂಪಗಳು ಆಶಕ್ತಿಗಿಲ್ಲ. ಬ್ರಾಹ್ಮಣ್ಯ ಮೊದಲಾದ ಜಾತಿಗಳಿಲ್ಲ. ಅಂತೆಯೇ ಸುಖ ದುಃಖ ಮೊದಲಾದ ಗುಣಗಳೂ ಇಲ್ಲ. ದೊಡ್ಡ ಸರೋವರದಿಂದ ನಾನಾ ದಿಕ್ಕುಗಳಿಗೂ ನೀರು ಹರಿಯುವಂತೆ ಆತನು ಸರ್ವವ್ಯಾಪಕನಾಗಿ ತೋರುವನು. ಇದೇ ಅರ್ಥವನ್ನೇ " ಪರಾಸ್ಯ ಶಕ್ತಿರ್ವಿ ವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾಚ " ಎಂಬುದಾಗಿ ಶ್ರುತಿಯೂ ಘಂಟಾಘೋಷವಾಗಿ ಸಾರುತ್ತಿರುವುದು ॥೬೬॥ (ಇಂತು ಮೇಲೆ ಹೇಳಿದ ಶಕ್ತಿದ್ವಯ ಯುಕ್ತನಾದುದರಿಂದ ಆ ಪರಮಾತ್ಮನ ಮಹಿಮೆಯು ಅಚಿಂತ್ಯವಾಗಿರುವುದು, ಆತನ ಐಶ್ವರ್ಯಕ್ಕೆ (ಪ್ರಭಾಶಕ್ತಿಗೆ) ಪಾರವೇ ಇಲ್ಲ. ಆತನು ಶುದ್ಧನು. ಮೇಲೆ ಹೇಳಿದ ಶಕ್ತಿದ್ವಯ ಕಲ್ಪಿತಗಳಾದ ಸ್ಥೂಲ, ಸೂಕ್ಷ್ಮಾದಿ ನಾನಾ ರೂಪಗಳು ಆತನಿಗೆ ಉಂಟೆಂದು ಹೇಳುವುದೂ ಕೂಡ ಸಂಗತವಾಗಿಯೇ ಇರುವುದು) ಇಂತು ಹಿಂದೆ ಹೇಳಿದ ಮಹಾಮಹಿಮೆಯಿಂದೊಡಗೂಡಿ, ಪಡ್ಗುಣೈಶ್ವರ್ಯ ಸಂಪನ್ನನೂ ವಾಸುದೇವನೂ ಎನಿಸಿದ ಶ್ರೀ ಮಹಾವಿಷ್ಣುವಿಗೆ ನಾನು ನನ್ನ ಭಕ್ತಿಪೂರ್ವಕಗಳಾದ ವಂದನೆಗಳಂ ಸಮರ್ಪಿಸುವೆನು, ಆತನಿಗಿಂತಲೂ ಬೇರೆ ವಸ್ತುವೇ ಇಲ್ಲ, ಆತನು ಮಾತ್ರ (ನಿರ್ಲಿಪ್ತನಾದುದರಿಂದ) ಎಲ್ಲಕ್ಕೂ ಬೇರೆಯಾಗಿರುವನು ॥೬೮॥ ಆ ಪರಮಾತ್ಮನನ್ನು ನಾನು

* ಈ ಶ್ಲೋಕದಲ್ಲಿ ದ್ವಾದಶಾಕ್ಷರ ಮಂತ್ರವು ಗೂಢವಾಗಿರುವುದು,

§ ಒಂದನೆಯ ಅಂಕದ ೧೪ ನೆಯ ಶ್ಲೋಕ ಮತ್ತು ಅರ್ಥಗಳನ್ನೂ ಇದೇ ಅಂಕದ ೪೮ ನೆಯ ಪುಟದ ೨ ನೆಯ ಟಿಪ್ಪಣಿಯನ್ನೂ ಓದಿರಿ,

ಮಹಾತ್ಮನೇ । ನಾಮ ರೂಪಂ ನ ಯಸ್ಯಾಸ್ತಿ * ಯೋ ಽ ಸ್ತಿ
ತ್ವೇನೋ ಪಲಭ್ಯತೇ ॥೬೯॥ ಯಸ್ಯಾ ವತಾರ ರೂಪಾಣಿ ಸಮು
ರ್ಚಂತಿ ದಿವಾ ಕಸಃ । ಅಪಶ್ಯಂತಃ ಪರಂ ರೂಪಂ ನಮಸ್ತಸ್ಮೈ ಪ
ರಾತ್ಮನೇ ॥೭೦॥ ಯೋಂತ ಸ್ತಿಷ್ಠ ನ್ನಶೇಷಸ್ಯ ಪಶ್ಯತೀಶ ಶ್ಯ
ಭಾಶುಭಂ । ತಂ ಸರ್ವ ಸಾಕ್ಷಿಣಂ ವಿಷ್ಣುಂ ನಮಸ್ಯೇ ಪರಮೇ
ಶ್ವರಂ ॥೭೧॥ ನಮೋ ಸ್ತು ವಿಷ್ಣವೇ ತಸ್ಮೈ ಯಸ್ಯಾಭಿ ನ್ನಮಿ
ದಂ ಜಗತ್ । ಧ್ಯೇಯಃ ಸ ಜಗತಾ ವಾದ್ಯ ಸ್ಸ ಪ್ರಸೀದತು

ಬಾರಿಬಾರಿಗೂ ವಂದಿಸುವೆನು (ಓ ಪರಮಾತ್ಮನೆ ; ನಿನ್ನ ನಿರಾಡಂಬ
ರವನ್ನು ನಾನು ಆದರದಿಂದ ನಮಿಸುವೆನು, ನಿನ್ನ ಜಗತ್ಸ್ವರೂಪವನ್ನು
ನಾನು ಅನುದಿನವೂ ವಂದಿಸುವೆನು. ಅಂಡಜ ಮೊದಲಾದ ನಿನ್ನ ಭೂತ
ರೂಪಗಳಿಗೂ ನನ್ನ ಅನಂತಾನಂತ ವಂದನೆಗಳಂ ಸಮರ್ಪಿಸುವೆನು)
ನಿನಗೆ ಹೆಸರು, ರೂಪ, ಕುಲ ಮೊದಲಾದುವು ಇಲ್ಲ. ಜೀವರು ಮಾ
ತ್ರ ತಮ್ಮ ಕರ್ಮಾನುಸಾರ ನಾನಾರೂಪಗಳನ್ನು ಹೊಂದುವರು. ಆ
ತನನ್ನು ''ಅಸ್ತಿ'' ಎಂಬ ಸತ್ತಾರೂಪದಿಂದರಿಯಬೇಕು ॥೬೯॥ ಸರ್ವೋ
ತ್ತಮರಾದ ಇಂದ್ರನೇ ಮೊದಲಾದ ದೇವತೆಗಳೂ ಕೂಡ ಪರನೆನಿಸಿದ,
ಆ ಪರಮಾತ್ಮನ ನಿಜಸ್ವರೂಪವನ್ನರಿಯದೆ, ಆತನು ಆ ಆ ಕಾಲದಲ್ಲಿ
ತಳೆದಿದ್ದ ರಾಮ, ಕೃಷ್ಣ, ಮೊದಲಾದ ಅವತಾರ ರೂಪಗಳನ್ನು ಪೂಜಿ
ಸುವರು ॥೭೦॥ ಎಲ್ಲ ಭೂತಗಳ ಹೃದಯದಲ್ಲಿಯೂ ಆತನು ಅನುಹ್ಞ
ಣವೂ ವಾಸವಾಡುತ್ತಾ, ಆ ಆ ಪ್ರಾಣಿಗಳು ಆಚರಿಸುವ ಶುಭಾಶುಭ
(ಪುಣ್ಯ ಪಾಪ) ರೂಪವಾದ ಕರ್ಮಕ್ಕೆ ಸಾಕ್ಷಿ ಎನಿಸುವನು. ಇಂತಹ
ಸರ್ವ ಸಾಕ್ಷಿಯೂ, ಸರ್ವ ವ್ಯಾಪಕನೂ, ಪರಮೇಶ್ವರನೂ ಎನಿಸಿದ
ಆ ಪರಮಾತ್ಮನನ್ನು ನಾನು ನಮಿಸುವೆನು ॥೭೧॥ ಎಲ್ಲ ರೂಪಗಳ
ಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಆತನು ಯಾವದೊಂದು ವಿಕಾರವನೂ
ಹೊಂದದೆ ಏಕರೂಪದಿಂದಿರುವನು ಆದಕಾರಣ ಆತನಿಗೆ ಭೇದವಿಲ್ಲವು
ಎಲ್ಲರೂ ಆತನನ್ನೇ ಧ್ಯಾನಮಾಡುವರು. ಆತನು ಬ್ರಹ್ಮ ಮೊದಲಾದವರಿ

---

* ಮೇಲೆ ಹೇಳಿದ ಹದಿನಾಲ್ಕನೆಯ ಪುಟದ ೩ನೆಯ ಟಿಪ್ಪಣಿಯನ್ನೂ, ೩
ನೆಯ ಅಧ್ಯಾಯದ ೧೧ನೆಯ ಶ್ಲೋಕ, ಮತ್ತು ಆರ್ಷಗಳನ್ನೂ ಜ್ಞಾಪಕದಲ್ಲಿಡಬೇಕು

ಮೇ ಽ ವ್ಯಯಃ ॥೮॥ ಯತೋ ೀ ತ ಮೇ ತತೋ ೀತಂ ಚ
ವಿಶ್ವ ಮಕ್ಷರ ಸಂಜ್ಞಾಕೇ । ಆಧಾರಭೂತ ಸ್ಸರ್ವಸ್ಯ ಸಪ್ರಸೀ ದ
ತುಮೇಹರಿಃ ॥೯॥ ಓನ್ನಮೋ ವಿಷ್ಣವೇ ತಸ್ಮೈ ನಮಸ್ತಸ್ಮೈ
ಪುನಃ ಪುನಃ । ಯತ್ರ ಸರ್ವಂ ಯತಸ್ಸರ್ವಂ ಯಸ್ಸರ್ವಂ ಸಂಶ್ರ
ಯಚ್ಚ ಯಃ ॥೧೪॥ ಸರ್ವಗತ್ವಾ ದನಂತಸ್ಯ ಸ ಏವಾ ಹ ಮವ
ಸ್ಥಿತಃ । ಮತ್ತಸ್ಸರ್ವ ಮಹಂ ಸರ್ವಂ ಮಯಿ ಸರ್ವಂ ಸನಾತನೇ ॥

ಗಿಂತಲೂ ಮೊದಲನೆಯವನು. ಆತನ ಹುಟ್ಟನ್ನು ತಿಳಿದವರಿಲ್ಲ, ಆ ತನು ನಾಶರಹಿತನು. ಇಂತಹ ನಾಶರಹಿತನಾವ ಪರಮಾತ್ಮನು ನಮ್ಮ ವಿಷಯದಲ್ಲಿ ಅನುಗ್ರಹವನ್ನಿರಿಸಲಿ ॥೮॥ ಈ ಪ್ರಪಂಚವು ಪ್ರಕೃತಿ ಮಹತ್ತತ್ವ ಮೊದಲಾದುವುಗಳಿಂದುಂಟಾದುದು (ಬಟ್ಟೆಯನ್ನು ನೇಯಬೇಕಾದರೆ ಉದ್ದವಾಗಿ ಮೊದಲು ದಾರದ ಎಳೆಗಳನ್ನು ಹೊಸೆದು ವಿಂಗಡಿಸಿ, ಬಳಿಕ ಅಡ್ಡಲಾಗಿ ಅವುಗಳ ಸಂಗಡ ಮುರಳಿ ಬೀರೆ ದಾರಗಳನ್ನು ಸೇರಿಸಿ ನೇಯುವ ವಾಡಿಕೆಯು ಲೋಕಾನುಭವಸಿದ್ಧವಾಗಿರುವುದು. ಉದ್ದವಾಗಿ ಎಳೆಗಳನ್ನು ಸೇರಿಸುವುದಕ್ಕೆ ಪ್ರೋತವೆಂದು ಹೆಸರು, ಅಡ್ಡಲಾಗಿರುವ ಎಳೆಗಳನ್ನು ಸೇರಿಸುವುದಕ್ಕೆ ಓತ ಅಥವಾ ಅನುಸ್ಯೂತವೆಂದು ಹೆಸರು. ಅಂತೆಯೇ ಪ್ರಕೃತಿ ಮಹತ್ತತ್ವ ಇವುಗಳು ಈ ಪ್ರಪಂಚವನ್ನುಂಟುಮಾಡುವುವೆಂದು ಭಾವವು) ಈ ಪ್ರಕೃತಿ, ಮಹತ್ತತ್ವ ಮೊದಲಾದ ಸೃಷ್ಟಿಸಾಮಗ್ರಿಗಳಿಗೆಲ್ಲ ಮುಖ್ಯಾಧಾರಭೂತನಾದ ವಿಷ್ಣುವು ನನ್ನ ವಿಷಯದಲ್ಲಿ ಅನುಗ್ರಹವನ್ನಿರಿಸಲಿ ॥೯॥ ಎಲೈ ಸರ್ವ ವ್ಯಾಪಕನೆ; ನಿನಗೆ ಅನಂತ ವಂದನೆಗಳಿರಲಿ, ನಿನ್ನನ್ನೇ ಬಾರಿಬಾರಿಗೂ ವಂದಿಸುವೆನು. ಎಲ್ಲವೂ ನಿನ್ನಲ್ಲಿಯೇ ಲಯವನ್ನೈದುವುದು, ನಿನ್ನಿಂದಲೇ ಎಲ್ಲವೂ ಜನಿಸಿದುದು, ಎಲ್ಲವೂ ನೀನೇ ಆಗಿರುವೆ, ಎಲ್ಲಕ್ಕೂ ನೀನೇ ಆಧಾರವೆನಿಸಿರುವೆ, ನಿನಗಿಂತಲೂ ಬೇರೆ ಈಲೋಕಕ್ಕೆ ಗತಿಯಾರು? ॥೧೪॥ ಇಂತು ಪ್ರಹ್ಲಾದನು ಪರಮಾತ್ಮನನ್ನು ಸರ್ವಾತ್ಮಕನೆಂಬುದಾಗಿ ಭಾವಿಸಿ, ಬಾರಿಬಾರಿಗೂ ಅವನನ್ನೇ ಮನನ ಮಾಡುತಿದ್ದನು. ಇಂತು ಭಾವನೆಯಿಂದ ಎಲ್ಲವೂ ವಿಷ್ಣುಮಯವಾಗಿ ಕಂಡುಬಂದಿತು. ಅಭೇದವು ಆತನ ಹೃದಯದಲ್ಲಿ ಚನ್ನಾಗಿ ಸ್ಥಿರಪಟ್ಟಿತು, ಆ ಬಳಿಕ ಈ ರೀತಿ

* ಅಹಮೇವಾವ್ಯಯೋ ನಿತ್ಯಃ ಪರಮಾತ್ಮೈಕ ಆತ್ಮ ಸಂಶ್ರಯಃ ।
ಬ್ರಹ್ಮ ಸಂಜ್ಞೋಽಹಮೇವಾಗ್ರೇ ತಥಾಂತೇಚ ಪರಃ ಪುಮಾನ್ ॥೯॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
—ಏಕೋನವಿಂಶೋಧ್ಯಾಯಃ.—


ಹೇಳುತ್ತಾನೆ :—ಆ ಪರಮಾತ್ಮನು ಸರ್ವಾಂತರ್ಯಾಮಿಯಾದುದರಿಂದ ನನ್ನಲ್ಲಿಯೂ ಆತನು ಇದ್ದೇಇರುವನು, ಆದಕಾರಣ ಆ ಪರಮಾತ್ಮನೇ ನಾನಾದೆನು. ಎಲ್ಲವೂ ನನ್ನಿಂದಲೇ ಮೊದಲು ಉಂಟಾದುದು. ಎಲ್ಲವೂ ನನ್ನ ಸ್ವರೂಪವೇ ಆಗಿರುವುದು, ನಾಶರಹಿತನೂ, ಅನಾದಿಯೂ ಎನಿಸಿದ ನನ್ನಲ್ಲಿಯೇ ಎಲ್ಲವೂ ಕೊನೆಗೆ ಸೇರಿಹೋಗುವುದು, ತ್ರಿಮೂರ್ತಿ ಸ್ವರೂಪನೆನಿಸಿದ ಪರಬ್ರಹ್ಮನೇ ನಾನಾಗಿರುವೆನು ॥೯॥ ನಾಶರಹಿತನೂ, ನಿತ್ಯನೂ, ಪರಮಾತ್ಮನೂ, ಸ್ವತಂತ್ರನೂ ನಾನಾಗಿರುವೆನು ಸೃಷ್ಟಿಗಿಂತಲೂ ಮುಂಚೆ ಪರಬ್ರಹ್ಮನೆಂಬ ಹೆಸರುಳ್ಳವನೂ, ಪ್ರಳಯಕಾಲದಲ್ಲಿ ಪರಮಪುರುಷನೆನಿಸಿದವನೂ ನಾನೇ ಆಗಿರುವೆನು ॥೮॥ ಎಂಬುದಾಗಿ ಪ್ರಹ್ಲಾದನು ಬ್ರಹ್ಮಾತ್ಮಭಾವನೆಯಿಂದ ಹೆಂದಿ, ಅಭೇದ ಜ್ಞಾನದಿಂದ ಪರಮಾತ್ಮನುಸಂಧಾನದಲ್ಲಿ ನಿರತನಾಗಿದ್ದನೆಂಬುದಾಗಿ ಪರಾಶರ ಮುನಿಯು ಮೈತ್ರೇಯನಿಗೆ ಹೇಳುತಿದ್ದನೆಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಬಾಂದನೆಯ ಅಂಶದೊಳ್ ಹತೆತ್ತೊಂಬತ್ತನೆಯ ಅಧ್ಯಾಯಂ ಮುಗಿದುದು

ಏಕೋನವಿಂಶಾಧ್ಯಾಯಂ ಸಮಾಪ್ತಂ.

* ಅಹಂಕರಿ ಸರ್ವಮಿದಂ ಜನಾರ್ದನೋ ನಾನ್ಯತ್ತತಃ ಕಾರಣ ಕಾರ್ಯಜಾತಂ । ಈ ದೃಬ್ಮನೋ ಯಸ್ಯ ನತಸ್ಯ ಭೂಯೋ ಭವೋದ್ಭವಾ ದ್ವಂದ್ವಗದಾ ಭವಂತಿ॥ ಹರಿಯೇ ನಾನುಇವೆಲ್ಲವೂ ಆ ಜನಾರ್ದನನಸ್ವರೂಪವು. ಅತನಿಗಿಂತಲೂ ಬೇರೆ ಕಾರಣವೂ ಕಾರ್ಯವೂ ಇಲ್ಲ ಎಲ್ಲವೂ ತನ್ಮಯವಾಗಿಯೇ ಇರುವುದು ಎಂಬುದಾಗಿ ದೃಢವಾದ ಅಭೇದ ಜ್ಞಾನಸಂಪನ್ನರು ಮರಳಿ ಸಂಸಾರ ಸಂಬಂಧವಾದ ಹಸಿವು ನೀರಡಿಕೆ, ಸುಖ ದುಃಖ, ಮುಪ್ಪು ಸಾವು, ಮೊದಲಾದ ದ್ವಂದ್ವ ರೋಗಗಳನ್ನನುಭವಿಸುವುದೇ ಇಲ್ಲ ಎಂಬ ಅರ್ಥವುಳ್ಳ ಈ ಶ್ಲೋಕವನ್ನುವ್ಯಾಖ್ಯಾನಕರ್ತರಾದ ಶ್ರೀಧರಾಚಾರ್ಯರವರು ಸ್ವಂತವಾಗಿ ಕಲ್ಪಿಸಿ ಉದಹರಿಸಿರುತ್ತಾರೆ.

ಶ್ರೀ

ಓಂ ನಮಃ ಪರಮಾತ್ಮನೇ



—ವಿಂಶೋಧ್ಯಾಯಃ—

ಶ್ರೀ ಪರಾಶರಃ॥ ಏವಂ ಸಂಚಿಂತ ಯನ್ವಿಪ್ಣು ಮಭೇದೇನಾತ್ಮ
ನೋದ್ವಿಜ ! । ತನ್ಮಯ ತ್ವ ಮವಾಪ್ಯಾಗ್ರ್ಯ ಮೈಮೈನೇ ಚಾ
ತ್ಮಾನ ಮಚ್ಯುತಂ ॥೧॥ ವಿಸಸರ್ಜಾತ್ಮ ತದಾತ್ಮನಂ ನ ನ್ಯತ್ಕಿಂಚಿ
ದಜಾನತ । ಅಹಮೇವಾ ಯೈ ೀ ನಿತ್ಯಃ ಪರಮಾತ್ಮೇ ತ್ಯ ಚಿಂ
ತಯತ್ ॥೨॥ ತಸ್ಯ ತದ್ಭಾವನಾ ಯೋಗಾತ್ಕ್ಷೀಣ ಪಾಪಸ್ಯ ವೈ
ಕ್ರಮಾತ್। ಶುದ್ಧೇಂತಃಕರಣೇ ವಿಷ್ಣ ಸ್ಪಷ್ಟ ಜ್ಞಾನಮಯೋಚ್ಯು

ಪರಾಶರನು ಹೇಳುತ್ತಾನೆ—ಎಲೈ ಬ್ರಾಹ್ಮಣೋತ್ತಮನಾದ ಮೈತ್ರೇಯನೆ, ಇಂತು ಆ ಪ್ರಹ್ಲಾದನು ಎಲ್ಲ ಭೂತಗಳಲ್ಲಿಯೂ ಸಮಭಾವನೆಯನ್ನಿರಿಸಿ ಅವುಗಳನ್ನೆಲ್ಲಾ ಸಚ್ಚಿದಾನಂದ ಸ್ವರೂಪನೆನಿಸಿದ ವಿಷ್ಣುವೆಂದು ಭಾವಿಸಿ, ತಾನೇ ಸಾಕ್ಷಾತ್ಪರಾತ್ಪರ ವಸ್ತುವೆಂದರಿತು, ಸರ್ವೋತ್ತಮನಾದ ವಿಷ್ಣುವೇ ತಾನೆಂದು ನಿಶ್ಚಯಿಸಿದನು ॥೧॥ "ತಾನು ಪ್ರಹ್ಲಾದನೆಂಬುದಾಗಿ ತಿಳಿಯದೆ, ತನ್ನನ್ನು ತಾನೇ ಮರೆತು ಹೋದನು. ಆ ವಿಷ್ಣುವಲ್ಲದೆ ಅವನ ಮನಸ್ಸಿಗೆ ಬೇರೊಂದೂ ಗೋಚರವಾಗುತಲೇ ಇರಲಿಲ್ಲ. ನಿತ್ಯನೂ, ನಾಶರಹಿತನೂ, ಎನಿಸಿದ ಪರಮಾತ್ಮನೇ ತಾನೆಂಬುದಾಗಿ ಅನುದಿನವೂ ಜೀವಾತ್ಮರ ಐಕ್ಯವನ್ನೇ ನೆನಪಿನಲ್ಲಿಟ್ಟದ್ದನು ॥೨॥ ಇಂತು ಪ್ರಹ್ಲಾದನು ತನ್ನ ಮನಸ್ಸಿನಲ್ಲಿ ಅನುದಿನವೂ "ಸಾಕ್ಷಾತ್ಪರಮಾತ್ಮನೇ ತಾನೆಂದು" ಭಾವಿಸುತ್ತಿದ್ದ ಕಾರಣ ದಿನಕ್ರಮೇಣ ಆ ನಾನಾ ಪಗಳೆಲ್ಲವೂ ನಶಿಸಿ ಹೋದುವು. ಇಂತು ಕ್ಷೀಣ ಪಾಪನೆನಿಸಿದ ಆ ಪ್ರಹ್ಲಾದನು ಕ್ರಮಕ್ರಮವಾಗಿ ತನ್ನ ಮನಸ್ಸಂ ನಿಗ್ರಹಿಸಿ ಚಿತ್ತಶುದ್ಧಿಯಂ ಪಡೆದನು. ಈ ರೀತಿ ಪರಿಶುದ್ಧವಾದ ಆತನಹೃ

ತಃ ॥೪॥ ಯೋಗ ಪ್ರಭಾವಾತ್ಪ್ರಹ್ಲಾದೋಪಾತೇ ನಿಷ್ಣುಮಯೇಽ
ಸುರೇ । ಚಲತ್ಪ್ರಕಾ ಬ ಧೈ ಸ್ತೈ ವೈರ್ಯತ್ರೇಯ। ತ್ಪ್ರಟಿತಂಹ್ಸೆ
ನಾತ್ ॥೪॥ ಭ್ರಾಂತ ಗ್ರಾಹ ಗಣ ಸ್ಫೋರ್ಮಿ ರ್ಯಾಯಾ ಹ್ಸೋ
ಭಂ ಮಹಾರ್ಣವಃ । ಚಚಾಲಚ ಮಹೀ ಸರ್ವಾ ಸ ಶೈಲ ವನ
ಕಾನನಾ ॥೫॥ ಸಚತಂ ಶೈಲ ಸಂಘಾತಂ ದೈತ್ಯೈರ್ಯಸ್ತಮ
ಥೋ ಪರಿ । ಉತ್ ಹ್ಸಿಪ್ಯ ತಸ್ಮಾ ತ್ಸಲಿಲಾ ನ್ನಿಶ್ಚಕ್ರಾಮ ಮ
ಹಾಮತಿಃ ॥೬॥ ದೃಷ್ಟ್ವಚ ಸಜಗದ್ಭ್ಯೋ ಗನಾ ದ್ಯುಪಲ
ಹ್ಸಿತಂ । ಪ್ರಹ್ಲಾದೋ ಸ್ಮೀತಿ ಸಸ್ಮಾ ಪುನ ರಾತ್ಮಾನ ಮಾತ್ಮ
ನಾ ॥೭॥ ತುಷ್ಟಾವ ಚ ಪುನ ಧೀಮಾ ನನಾದಿಂ ಪುರುಷೋತ್ತ

ದಯದಲ್ಲಿ ಜ್ಞಾನಸ್ವರೂಪನೂ, ನಾಶರಹಿತನೂ ಎನಿಸಿದ ವಿಷ್ಣುವುಚ್ಚರವಾ
ಗಿ ನೆಲೆಸಿದನು ॥೪॥ ಓ ವೈತ್ರೇಯನೆ ; ಅಸುರ ಬಾಲಕನೆನಿಸಿದ ಆ
ಪ್ರಹ್ಲಾದನು ಯೋಗಸಿದ್ಧಿಯಂ ಪಡೆದು ಸಮುದ್ರಮಧ್ಯದಲ್ಲಿತೇಲಾಡುತಿ
ರಲು,ಈತನನ್ನು ಬಿಗಿಸಿದ್ದ ನಾಗಪಾಶಗಳೆಲ್ಲವೂ ಆತನ ಯೋಗದ ಮಹಿ
ಮೆಯಿಂದ ಆ ಕ್ಷಣವೇ ಚೂರುಚೂರಾಗಿ ಕಿತ್ತುಹೋದುವು ॥೪॥ಇಂತು
ನಾಗಪಾಶಗಳೆಲ್ಲವೂ ಕಿತ್ತುಹೋದ ಒಳಕ ಸಮುದ್ರವೂ ಕೂಡ ಮಿನು,
ಮೊಸಳೆ ಮೊದಲಾದ ಜಲಚರಪ್ರಾಣಿಗಳೊಂದಿಗೆ ದೊಡ್ಡದೊಡ್ಡ ಆಲೆ
ಗಳನ್ನು ದಡಮಿರಿ ಹಾಯಿಸುತ್ತಾ ಪ್ರಳಯಕಾಲದ ಸಮುದ್ರದಂತೆ ಉ
ಕ್ಕಿ ಬಂದಿತು. ಈ ಭೂಮಂಡಲವೆಲ್ಲವೂ ಬೆಟ್ಟ, ಗುಟ್ಟ, ಆಡವಿ, ತೋ
ಟಗಳೊಂದಿಗೆ ಗಡಗಡನೆ ನಡುಗಲಾರಂಭಿಸಿತು ॥೫॥ ಬಳಿಕ ಈ ಪ್ರಹ್ಲಾ
ದನು ತನ್ನ ಯೋಗವನ್ನು ನಿಲ್ಲಿಸಿ ಎಚ್ಚತ್ತು [ಬಹಿರ್ಮುಖನಾಗಿ] ತನ್ನ
ಮೇಲೆ ದೈತ್ಯರು ಹೇರಿದ್ದ ಕಲ್ಲುಬಂಡಿಗಳನ್ನೆಲ್ಲಾ ದೂರತಳ್ಳಿ ಆ ಸಮು
ದ್ರದ ಮಧ್ಯದಿಂದ ಹೊರಗೆ ಬಂದು ದಡವಂ ಸೇರಿದನು ॥೬॥ ತರುವಾ
ಯ ಈ ಪ್ರಹ್ಲಾದನು, ಆಕಾಶ, ಸುತ್ತಮುತ್ತಲೂ ಇರುವ ವನ, ದುರ್ಗ
ಮೊದಲಾದ ಗುರುತುಗಳಿಂದ ತಾನು ಭೂಮಿಯುಮೇಲಿರುವಂತೆ ತಿಳಿದು
ತಾನು ಪ್ರಹ್ಲಾದನೆಂಬುದಾಗಿ ತನ್ನಹಿಂದಿನ ಸ್ವರೂಪವನ್ನು ನೆನಪಿಗೆ ತಂದು
ಕೊಂಡನು ॥೭॥ ಇಂತು ಸನ್ನಿವೇಶದಿಂದ ಈ ಪ್ರಹ್ಲಾದನಿಗೆ ವ್ಯಾವಹಾ
ರಿಕ ವಿಷಯಗಳೆಲ್ಲವೂ ನೆನಪಿಗೆ ಬಂದಕೂಡಲೇ ಬುದ್ಧಿಶಾಲಿ ಎನಿಸಿದ

ವಮಂ । ಏಕಾಗ್ರ ಮತಿ ರವ್ಯಗ್ರೋ ಯತ ವಾಕ್ಕಾಯ ಮಾನ
ಸಃ ॥೪॥ ಪ್ರಹ್ಲಾದಃ ॥ ಓನ್ನಮಃ * ಪ್ರ ಮಾರ್ಥಾರ್ಥ! ಸ್ಥೂಲ
ಸೂಕ್ಷ್ಮ! ಕ್ಷರಾ ಕ್ಷರ! । ವ್ಯಕ್ತಾ ವ್ಯಕ್ತ ಕಲಾತೀತ ಸಕಲೇಕ
ನಿರಂಜನ ॥೯॥ ಗುಣಾಂಜನ ! ಗುಣಾಧಾರ ! ನಿರ್ಗುಣಾತ್ಮಕ
ಗುಣಾತೀತ ! । ವಿಶ್ವರ್ಭ ವಿಶ್ವರ್ತ! ವಿಶ್ವಾನುಭವೈಕ! ಸೂಕ್ಷ್ಮ
ಮೂರ್ತೇ ! ಸ್ಫುಟಾ ! ಸ್ಫುಟ ! ॥೧೦॥ ಕರಾಳ ರೂಪ !

ಈ ಪ್ರಹ್ಲಾದನು ನಾಕರಹಿತನೂ, ಉತ್ಪತ್ತಿಶೂನ್ಯನೂ, ಪುರುಷೋತ್ತ
ಮನೂ, ಎನಿಸಿದ ಪರಮಾತ್ಮನನ್ನು ತನ್ನ ಮನಸ್ಸಿನಲ್ಲಿ ಅನವರತವೂ
ಮನನಮಾಡುತ್ತಾ ತನ್ನ ಬುದ್ಧಿಯನ್ನೆಲ್ಲಾ ಆತನಲ್ಲಿಯೇ ನೆಲೆಗೊಳಿಸಿ ಬೇ
ರೊಂದುಕಡೆ ಗಮನವಿಡದೆ ತನ್ನ ಮನಸ್ಸನ್ನು ಆತನಲ್ಲಿಯೇ ದೃಢವಾಗಿ
ನಿಲ್ಲಿಸಿ, ಬಾಯಿಯಿಂದ ಆತನ ದಿವ್ಯನಾಮ, ಮಹಿಮೆ ಮೊದಲಾದುದ
ನ್ನೇ ವರ್ಣನೆಮಾಡುತ್ತಾ ಮೈಮೇಲೆ ಜ್ಞಾನವಿಲ್ಲದೆ ತನ್ನ ಶರೀರವನ್ನೇ ಆ
ತನಿಗರ್ಪಿಸಿ ಆತನನ್ನು ಹೊಗಳತೆ ಹೊಗಿದನು ॥೪॥ ಪ್ರಹ್ಲಾದನು ಹೇಳು
ತ್ತಾನೆ—ಓ ಜ್ಞಾನಸ್ವರೂಪನೆ; ದೃಶ್ಯರೂಪನೆ; ಜಾಗ್ರದ್ದೃಶ್ಯರೂಪನೆ.
ಸ್ವಪ್ನದೃಶ್ಯ ರೂಪನೆ ; ಕಾರ್ಯಸ್ವರೂಪನೆ; ಕಾರಣರೂಪಿಯು ; ದೃಶ್ಯಾ
ದೃಶ್ಯನೆ ; ಅವಯವಶೂನ್ಯನೆ, ಅವಯವಗಳಿಂದೊಡಗೂಡಿದವನೆ, ನಿಯಾ
ಮಕನೆ, ನಿರ್ಲೇಪನೆ, ನಿನಗೆ ನನ್ನ ಭಕ್ತಿಪೂರ್ವಕವಾದ ನಮಸ್ಕಾರವಿರ
ಲಿ ॥೯॥ ಎಲ್ಲ ಗುಣಗಳನ್ನು ಹೊರಪಡಿಸುವವನೆ, ಗುಣಗಳಿಗೆ ಆಶ್ರಯ
ಭೂತನೆ, ಗುಣಶೂನ್ಯನೆ, ಸಕಲಕಲ್ಯಾಣಗುಣ ವಿಶಿಷ್ಟನೆ, ಸ್ಥೂಲಸೂ
ಕ್ಷ್ಮಪ್ರಪಂಚರೂಪನೆ, ಬ್ರಹ್ಮಾಂಡವನ್ನೂ ಕೂಡ ಹೊಟ್ಟೆಯಲ್ಲಿ ಧರಿ
ಸುವಂತಹ ದೊಡ್ಡ ಶರೀರಯುಕ್ತನೆ, ಪರಮಾಣುರೂಪಿಯೆ, ಭಜಕರಿಗೆ
ಸ್ಪಷ್ಟವಾಗಿ ದರ್ಶನವನ್ನೀಯುವವನೆ, ಇತರರಕಂಣಿಗೆ ಸ್ವಲ್ಪವೂ ಗೋ
ಚರಿಸದವನೆ; ನಿನಗೆ ನನ್ನ ನಮಸ್ಕಾರವಿರಲಿ ॥೧೦॥ ಎಲ್ಲ ಪರಮಾತ್ಮನೆ,
ನೀನು ಪ್ರಳಯಕಾಲದಲ್ಲಿ ಮಹಾಭಯಂಕರವಾದ ರೂಪವನ್ನು ಧರಿಸುವ
ಕಾರಣ ಕರಾಳರೂಪಿ ಎನಿಸಿರುವೆ. ಸ್ವಭಾವದಿಂದ ನೀನು ಸೌಮ್ಯ
ನಾಗಿಯೇ ಇರುವೆ, ವಿದ್ಯೆ ಎನಿಸಿದ ಜ್ಞಾನವೂ, ಅವಿದ್ಯೆ ಎನಿಸಿದ
ಅಜ್ಞಾನವು ಅಥವಾ ಭ್ರಾಂತಿಜ್ಞಾನವೂ ಕೂಡ ನಿನ್ನ ರೂಪಗಳಾಗಿಯೇ

ಸಾತ್ಮ್ಯಾತ್ಮಕ! ವಿದ್ಯಾ ವಿದ್ಯಾ ತು ಸಾ ! ಚ್ಯುತ ! ಸದ ಸದ್ರೂ
ಪ ! ಸದ್ಭಾವ ಸದ ಸದ್ಭಾವ ಭಾವನ ॥೨೧॥ ನಿತ್ಯ ನಿತ್ಯ ಪ್ರಪಂ
ಚಾತ್ಮಕ ! ನಿಷ್ಪ್ರಪಂಚಾ ! ಮೂಲಾಶ್ರಿತ ! । ಏಕಾ ನೇಕನ
ಮಸ್ತುಭ್ಯಂ ವಾಸುದೇವಾ ! ದಿಕಾರಣ ॥೨೨॥ ಯಃ ಸ್ಥೂಲ ಸೂ

ಇರುವುವು. ನೀನು ನಾಶರಹಿತನು ಎಂದಿಗೂ ನಾಶವಿಲ್ಲದಕಾರಣ ಸತ್ ಎಂಬದಾಗಿ ಕರೆಯಿಸಿಕೊಳ್ಳುವ ನಿಖಿಲಕಾರಣರೂಪಿಯೂ ನಾಶರಹಿತ ನಾದುದರಿಂದ ಅಸತ್ ಎಂಬದಾಗಿ ಕರೆಯಿಸಿಕೊಳ್ಳುವ ಕಾರ್ಯರೂ ಪಿಯೂ ನೀನೇ ಆಗಿರುವೆ. (ಭಾವಾಭಾವ ಸ್ವರೂಪನಾಗಿರುವೆ) ಅಥ ವಾ ಸತ್ ಎಂಬುವ ನಾಶರಹಿತಗಳೆನಿಸಿದ ಪ್ರಕೃತಿಯೇ ಮೊದಲಾದ ಕಾರಣವಸ್ತುಗಳಿಗೂ ಸತ್ ಎಂಬುವ ಚಕ್ಷುರಾದಿಗಳೇ ಮೊದಲಾದ ಕಾರ್ಯ ವಸ್ತುಗಳಿಗೂ ಕೂಡ ನೀನೇ ಮುಖ್ಯ ಕಾರಣ ನೆನಿಸಿರುವೆ (ಈ ಅರ್ಥದಲ್ಲಿ ಸದ ಸದ್ರೂಪ ಸದ್ಭಾವ ಎಂಬದಾಗಿ ಬಂದೇ ಪದವನ್ನಾಗಿ ಇಟ್ಟುಕೊಳ್ಳಬೇಕು.) ಕಾರ್ಯ ಕಾರಣಗಳೆರಡನ್ನೂ ನೀನೇ ಪರಿಪಾಲನೆಮಾಡುವವನಾದ ಕಾರಣ ನಿನ್ನನ್ನು ಸದಸದ್ಭಾವನೆಂಬದಾಗಿ ಯೋಗಿಗಳು ವ್ಯವಹರಿಸುವರು ॥೨೧॥ ಕಾರಣರೂಪಿಯಾದ ನಿನ್ನನ್ನು ನಿತ್ಯನೆಂತಲೂ, ಕಾರ್ಯರೂಪದಿಂದಿರುವಾಗ ಅನಿತ್ಯನೆಂತಲೂ ವ್ಯವಹರಿಸುವರು. ವ್ಯಾವಹಾರಿಕ ನಿತ್ಯತ್ವವು ಪಡೆದಿರುವ ಆಕಾಶಾದಿಗಳು, ಯಾವಾಗಲೂ ನಾಶವನ್ನೈದುವ ಪ್ರಾಣಿಗಳು. ಈ ರೂಪದಿಂದಿರುವ ಪ್ರಪಂಚವೇ ನಿನಗೆ ಶರೀರವಾಗಿರುವುದು. ನೀನು ಲೋಕಧರ್ಮಗಳಿಗೆ ಒಳಪಟ್ಟವನಲ್ಲವಾದುದರಿಂದ ನಿನ್ನನ್ನು ನಿಷ್ಪ್ರಪಂಚನೆನ್ನುವರು. ಪಾಪ ಶೂನ್ಯರಾದ ಜ್ಞಾನಿಗಳಿಗೆ ನೀನು ಮುಖ್ಯಾಶ್ರಯಭೂತನಾದುದರಿಂದ ಆ ಮೂಲಾಶ್ರಿತನೆಂದು ನಿನ್ನನ್ನು ವ್ಯವಹರಿಸುವರು. ನೀನು ಅದ್ವಿತೀಯನೆನಿಸಿರುವೆ. ಸರ್ವವ್ಯಾಪಕನಾದುದರಿಂದ ನಿನ್ನನ್ನು ಅನೇಕರೂಪನೆಂದು ಹೇಳುವರು. ಇಂತಹ ಗುಣಸಮುದಾಯದಿಂದೊಡಗೂಡಿ ಮುಖ್ಯಕಾರಣನೆನಿಸಿದ ಸರ್ವವ್ಯಾಪಕನೂ, ಸರ್ವಶಕ್ತಿಸಂಪನ್ನನೂ, ಸರ್ವಪ್ರಕಾಶಕನೂ, ಜ್ಞಾನಸ್ವರೂಪಿಯೂ, ಜ್ಞಾನಪ್ರದನೂ ಎನಿಸಿದ ನಿನ್ನನ್ನು ನಾನು ಭಕ್ತಿಯಿಂದ ವಂದಿಸುವೆನು ॥೨೨॥ ಓ ಪರಮಾತ್ಮನೆ; ನೀನು ಚಿದಾತ್ಮ

ಹ್ಮ ಪ್ರಕಟ ಪ್ರಕಾಶೋ ಯ-ಸ್ಸರ್ವ ಭೂತೇಷು ನಚ ಸರ್ವ ಭೂತಃ । ವಿಶ್ವಂ ಯತಶ್ಚೈತದವಿಶ್ವ ಹೇತೋ ! ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥೧೪॥ ಶ್ರೀ ಪರಾಶರಃ ॥ ತಸ್ಯೈತ ಚ್ಚೇತಸೋ ದೇವ ಸ್ತುತಿ ಮಿತ್ಥಂ ಪ್ರಕುರ್ವತಃ । ಆವಿರ್ಬ

ಕನಾದುದರಿಂದ ಸ್ಥೂಲಸೂಕ್ಷ್ಮರೂಪದಿಂದಿರುವ ಸಕಲ ಭೂತಗಳಿಗೂ ಸರ್ವೋತ್ತಮವಾದ ಪ್ರಕಾಶವೆನಿಸಿದ ಜ್ಞಾನವೇ ನಿನಗೆ ರೂಪವಾಗಿರುವುದು. ಅಥವಾ ಸ್ಥೂಲರೂಪಗಳಿಂದ ಎಲ್ಲರಿಗೂ ಸ್ಪಷ್ಟವಾಗಿ ಕಾಣುತಿರುವೆ. ಸೂಕ್ಷ್ಮರೂಪದಿಂದ ಮನಸ್ಸಿಗೆ ಮಾತ್ರ ಗೋಚರಿಸುವೆ. ಎಲ್ಲವೂ ನಿನ್ನಅಂಶದಿಂದುಂಟಾದುವೇ ಆಗಿರುವ ಕಾರಣ ಸರ್ವಸ್ವರೂಪನೆನಿಸುವೆ ಎಲ್ಲವೂ ನೀನೇ ಆಗಿದ್ದರೂ ಕೂಡ ನಿನಗಿಂತಲೂ ಬೇರೆಯಾದ ಸಕಲ ಪದಾರ್ಥಗಳಿಗಿಂತಲೂ ವಿಲಕ್ಷಣವಾದ ಸ್ವಭಾವದಿಂದಿರುವೆ. ಆದು ಕಾರಣ ನಿನ್ನನ್ನು ಜಗದ್ವಿಲಕ್ಷಣನೆನ್ನುವರು. ಈ ಸಕಲ ಪ್ರಪಂಚವು ನಿನ್ನ ದೆಸೆಯಿಂದಲೇ ಜನಿಸಿದುದು, ನೀನು ಮಾತ್ರ ಎಲ್ಲ ಕಾರಣಗಳಿಗಿಂತಲೂ ಬೇರೆಯಾಗಿರುವೆ. (ನಿನಗೆ ಮಾತ್ರ ಯಾವ ಕಾರಣವೂ ಇಲ್ಲವು) ಇಂತು ಹಿಂದೆ ಹೇಳಿದ ಅಪಾರಮಹಿಮೆಯಿಂದೊಡಗೂಡಿರುವ ಕಾರಣ ನೀನು ಪುರುಷೋತ್ತಮನೆನಿಸಿರುವೆ ಎಲೈ ಪರಮೇಶ್ವರನೆ ನಿನ್ನ ಅಡಿದಾವರಗಳಿಗೆ ನಾನು ಅನಂತಾನಂತ ವಂದನೆಗಳಂ ಸಮರ್ಪಿಸುವೆನು ॥೧೪॥ ಪರಾಶರಮುನಿಯು ಹೇಳತೊಡಗಿದನು—ಇಂತು ಪ್ರಹ್ಲಾದನು ಪರಮಭಕ್ತಿ ಸಂಪನ್ನನೆನಿಸಿ ಅನನ್ಯಮನಸ್ಕನಾಗಿ ಪರಮಾತ್ಮನ ಮಹಿಮೆಯುಂ ಹೊಗಳುತಿರಲು ಈತನು ಮಾಡಿದ ಸ್ತೋತ್ರಕ್ಕೆ ಮೆಚ್ಚಿ, ಪದ್ಮನೈಶ್ವರ್ಯ ಸಂಪನ್ನನೂ, ಪೀತಾಂಬರಧಾರಿಯೂ, (ಹೊಂಬಣ್ಣವಾದ ರೇಷ್ಮೆಯ ಬಟ್ಟೆಯನ್ನುಟ್ಟಿರುವವನೂ) ಭಕ್ತರ ಪಾಪಗಳನ್ನು ನಾಶಗೊಳಿಸುವವನೂ ಎನಿಸಿದ ವಿಷ್ಣುವು ಆತನ ಹೃದಯದಿಂದ ಹೊರಗೆ ಬಂದುನಿಂನು (ವಿಷ್ಣುವು ಪ್ರಹ್ಲಾದನ ಹೃದಯದಿಂದ ಹೊರಗೆ ಬಂದುನಿಂತನು; ವಿಷ್ಣುವು ಪ್ರಹ್ಲಾದನ ಹೃದಯದಿಂದ ಹೊರಗೆ ಬಂದನೆಂದರೆ ಆತನನ್ನು ಭೇದಿಸಿ ಬಂದನೆಂದರ್ಥವೆಲ್ಲ. ಪ್ರಹ್ಲಾದನು ತನ್ನನ್ನು ಹೊಗಳುವ ಕಾಲದಲ್ಲಿ ಆತನ ಮನಸ್ಸಿನಲ್ಲಿ ತಾನುನೆಲೆಸಿದ್ದು ಆತನ ಸ್ತೋತ್ರವನೆ

ಭೂವ ಭಗವಾ೯ ನೀತಾಂಬರ ಧರೋ ಹರಃ ॥೧೪॥ ಸ ಸಂಭ್ರಮ ಸ್ತಮಾಲೋಕ್ಯ ಸಮುತ್ಥಾಯಾ ಕುಲಾಕ್ಷರಂ । ನಮೋ ಸ್ತು ವಿಷ್ಣವೇ ತ್ಯೇತದ್ವ್ಯಾಜಹಾರ ಸಕೃದ್ದ್ವಿಜ ! ॥೧೫॥ ಪ್ರಹ್ಲಾದಃ ॥ ದೇವ ಪ್ರಸನ್ನಾರ್ತಿಹರ ! ಪ್ರಸಾದಂ ಕುರು * ಕೇಶವ । ಅವಲೋಕನ ದಾನೇನ ಭೂಯೋವಾಂ ಪಾಲಯಾವ್ಯಯ ॥೧೬॥ ಶ್ರೀ ಭಗವಾನುವಾಚ ॥ ಕುರ್ವತಸ್ತೇ ಪ್ರಸನ್ನೋಹಂ ಭಕ್ತಿ ಮವ್ಯಭಿಚಾರಿಣೀಂ । ಯಥಾಽ ಭಿ ಲಷಿತೋ ಮತ್ತಃ ಪ್ರಹ್ಲಾದ ವ್ರಿಯತಾಂ ವರಃ ॥೧೭॥ಪ್ರಹ್ಲಾದಃ॥ ನಾಥ! ಯೋನಿ ಸ

ಲ್ಲಾ ಕೇಳಿ ಸಂತೋಷಪಟ್ಟು ಹೃದಯದಲ್ಲಿ ತನ್ನ ರೂಪವು ಆತನ ದಿವ್ಯ ಚಕ್ಷುಸ್ಸಿಗೆ ಗೋಚರವಾಗದಂತೆ ಮಾಡಿ ಕಂಗಳಿಗೆ ಕಾಣುವಂತೆ ಮುಂದೆ ನಿಂತನೆಂದರ್ಥ) ॥೧೪॥ ಎಲೈ ಬ್ರಾಹ್ಮಣೋತ್ತಮನೆ ; ಇಂತು ವಿಷ್ಣುವು ತನ್ನ ಎದುರಿನಲ್ಲಿ ನಿಂತಿರುವುದನ್ನು ಕಂಡು, ಆ ಪ್ರಹ್ಲಾದನು ಗಾಬರಿಯಿಂದ ಥಟ್ಟನೆ ಎದ್ದುನಿಂತುಕೊಂಡು ಏನು ಹೇಳಬೇಕೆಂಬುದಾಗಿಯೂ ತೋರದೆ ತೊದಲುವ ಮಾತುಗಳಿಂದ ,,ಸರ್ವವ್ಯಾಪಕನೆನಿಸಿದ ವಿಷ್ಣುವಿಗೆ ನನ್ನ ನಮಸ್ಕಾರವಿರಲಿ' ಎಂಬ ಇಷ್ಟುಮಾತನ್ನು ಮಾತ್ರ ಬಂದಾನರ್ತಿ ತನ್ನ ಬಾಯಿಯಿಂದ ಹೇಳಿದನು ॥೧೫॥ ಬಳಿಕ ಪ್ರಹ್ಲಾದನು ಹೇಳುತ್ತಾನೆ—ಎಲೈ ಸರ್ವ ಪ್ರಕಾಶಕನೆ ; ಮೊರೆಹೊಕ್ಕವನ ಸಂಕಟಗಳಂ ಪರಿಹರಿಸುವವನೆ, ಕೇಶವನೆ, ನಾಶರಹಿತನೆ, ಮರಳಿ ಇಂತೆಯೇ ಪ್ರತ್ಯಕ್ಷವಾಗಿ ದರ್ಶನವನ್ನಿತ್ತು ನನ್ನನ್ನು ಕಾಪಾಡು.॥೧೬॥ ಬಳಿಕ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ವಿಷ್ಣುವು ಹೇಳತೊಡಗಿದನು—ಓ ಪ್ರಹ್ಲಾದನೆ, ನೀನು ನನ್ನಲ್ಲಿ ಭಕ್ತಿಯನ್ನಿರಿಸಿದುದು ಮೊದಲುಗೊಂಡು ಇದುವರೆಗೂ ನಿನ್ನ ವಿಷಯದಲ್ಲಿ ನಾನು ಅನುಗ್ರಹ ಮಾಡುತಲೇ ಇರುವೆನು. ಆದುಕಾರಣ ನಿನಗೆ ಇಷ್ಟವಾದ ವರವನ್ನುಬೇಡು, ನಾನು ಅದನ್ನು ನೆರವೇರಿಸಿಕೊಡುವೆನು ॥ ೧೭ ॥ ,, ಎಲೈ ನಾಶರಹಿತನೆನಿಸಿದ

---

* ಕೇಶವ—೧೯೯೫ನು ಅಂಕದ ನಾಲ್ಕನೇಯ ಅಧ್ಯಾಯದ ಮೂವತ್ತೊಂದನೆಯ ಶ್ಲೋಕದ ತರ್ಪಣೆಯನ್ನು ಜ್ಞಾಪಕದಲ್ಲಿಡಿ) ಪುಟ ೫೩

ಹಸ್ಯೇಷು ಯೇಷು ಯೇಷು ವ್ರಜಾವ್ಯಹಂ । ತೇಷು ತೇಷ್ವ
ಚ್ಯುತಾ ಭಕ್ತಿ ರಚ್ಯುತಾಽಸ್ತು ಸದಾತ್ವಯಿ। ೪॥ ಯಾ ಪ್ರೀ
ತಿ ರವಿವೇಕಾನಾಂ ವಿಷಯೇ ಷ್ವನಪಾಯಿನೀ । ತ್ವಾ ಮನು ಸ್ಮ
ರತ ಸ್ಸಾನೇ ಹೃದಯಾ ನ್ಮಾಪ ಸರ್ಪತು॥೧೯॥ ಶ್ರೀಭಗವಾನು
ವಾಚ॥ ಮಯಿ ಭಕ್ತಿ ಸ್ತವಾಸ್ತ್ಯೇವ ಭೂಯೋಽಪ್ಯೇವಂ ಭ
ವಿಷ್ಯತಿ । ವರಶ್ಚಾವತ್ತಃ ಪ್ರಹ್ಲಾದ ! ವ್ರಿಯತಾಂ ಯಸ್ತವೇಪ್ಸಿ
ತಃ ॥೨೦॥ ಪ್ರಹ್ಲಾದಃ॥ ಮಯಿ ದ್ವೇಷಾನು ಬಂಧೋಽ ಭೂತ್ಸಂ
ಸ್ತುತಾ ವುದ್ಯತೇ ತವ ।ಮತ್ಪಿತುಸ್ತತ್ಕೃತು ಪಾಪಂ ಪಾಪಂದೇನ!
ಪ್ರಣಶ್ಯತು ॥೨೧॥ ಶಸ್ತ್ರಾಣಿ ಪಾತಿತಾನ್ಯಂಗೇ ಕ್ಷಿಪ್ತೋಯ

ಪ್ರಭುವೆ,ನಾನು ಮುಂದೆ ನನ್ನ ಕರ್ಮವಿಶೇಷದಿಂದ ಅದಕ್ಕನುಗುಣ
ವಾಗಿ, ನಾನಾರೂಪನಾಗಿರುವ ಈ ಪ್ರಪಂಚದಲ್ಲಿ ಯಾವ ಜನ್ಮವನ್ನೆ
ತ್ತಿದರೂ ಆ ಎಲ್ಲ ಜನ್ಮಗಳಲ್ಲಿಯೂ, ನಿನ್ನ ಪಾದಾರವಿಂದಗಳಲ್ಲಿ ನನಗೆ
ನಿರತಿಶಯವೆನಿಸಿದ ಭಕ್ತಿಯಾಂ ದಯಪಾಲಿಸು ಸಲಸು. ನಾನುನಿನ್ನನ್ನೇ
ಅನವರತವೂ ಸ್ಮರಿಸುತಿರುವಂತೆ ಅ ನುಗ್ರಹಿಸು, ನಿನ್ನ ಅನುಗ್ರಹದಿಂದ
ನನ್ನ ಮನಸ್ಸು ಶಬ್ದಾದಿವಿಷಯಗಳಿಗೆ ಹೋಗದೆ ಸ್ಥಿರವಾಗಿ ಅನುದಿನವೂ
ನಿನ್ನಲ್ಲಿಯೇ ಇರುವಂತೆ ಭದ್ರಪಡಿಸು. ಓ ಲಕ್ಷ್ಮೀಪತಿಯೇ ನೀನು
ಕೂಡ ನನ್ನ ಮನಸ್ಸನ್ನು ಬಿಟ್ಟುಹೋಗದೆ ನನ್ನಲ್ಲಿಯೇ ಶಾಶ್ವತವಾಗಿ ನೆ
ಲೆಸಿರು, ಎಂಬುದಾಗಿ ಪ್ರಹ್ಲಾದನು ಬೇಡಿಕೊಂಡನು ॥೧೪-೧೯॥
ಓ ಪ್ರಹ್ಲಾದನೆ ನನ್ನ ವಿಷಯದಲ್ಲಿ ನಿನಗೆ ಶಾಶ್ವತವಾದ ಭಕ್ತಿಯು
ಇದ್ದೇಇರುವುದು. ಮುಂದೆಯೂ ಇಂತೆಯೇ ಇನ್ನೂ ಅತಿಶಯವಾಗು
ವುದು. ನಿನಗೆ ಬೇಕಾದ ಮತ್ತೊಂದು ವರವಂ ಬೇಡು,, ಎಂಬದಾಗಿ ಪ
ರಮಾತ್ಮನು ಹೇಳಿದನು ॥೨೦॥ ಬಳಿಕ ಪ್ರಹ್ಲಾದನು, ಎಲೈ ಸರ್ವಪ್ರ
ಕಾಶಕನೆನಿಸಿದ ಸ್ವಾಮಿಯೇ ನಾನು ನಿನ್ನನ್ನು ಹೊಗಳುವುದಕ್ಕೊಸ್ಕ
ರ ಮೊದಲು ಮಾಡಿದಾಗೆಲ್ಲಾ ನನ್ನ ತಂದೆಯು ನನ್ನನ್ನು ವಿಶೇಷವಾಗಿ
ದ್ವೇಷಿಸುತ್ತಾ ನನ್ನನ್ನು ದೊಡ್ಡ ಹಗೆಯಂತೆ ಕಾಣುತ್ತಿದ್ದನು. ಈ ರೀತಿ
ವಿಷ್ಣುಭಕ್ತನಾದ ನನ್ನನ್ನು ದ್ವೇಷಿಸುವುದಕ್ಕಾಗಿ ಆತನಿಗೆ ಒದಗಿದ
ಪಾಪಗಳೆಲ್ಲವೂ ಅಳಿದುಹೋಗಲಿ ॥೨೧॥ ನನ್ನ ಮೈಮೇಲೆ ನಾನಾಬಗೆಗ

ಚ್ಛಾಗ್ನಿ ಸಂಹತೌ । ದಂಶಿತ ಶ್ಚೈವಗೌ ದಾತ್ಮಂ ಯದ್ವಿಷಂ ಮಮ ಭೋಜನೇ ॥೨೨॥ ಬದ್ಧಾ ಸಮುದ್ರೇ ಯತ್ ಕ್ಷಿಪ್ತೋ ಯಚ್ಚಾತೋ ಽಸ್ಮಿಶಿಲೋಚ್ಚಯೈಃ । ಅನ್ಯಾನಿ ಚಾಪ್ಯಸಾಧೂ ನಿ ಯಾನಿ ಪಿತ್ರಾ ಕೃತಾನಿಮೇ ॥೨೩॥ ತಯಿ ಭಕ್ತಿಮತೋ ದ್ವೇಷಾ ದಘಂ ತತ್ಸಂಭವಂ ಚ ಯತ್ । ತತ್ಪ್ರಸಾದಾ ತ್ಪ್ರಭೋ ! ಸದ್ಯ ಸ್ತೇನ ಮುಚ್ಯೇತ ಮೇಪಿತಾ ॥೨೪॥ ಶ್ರೀ ಭಗವಾನುವಾಚ ॥ ಪಹ್ಲಾದ ! ಸರ್ವಮೇತತ್ಕೃ ತಮತ್ಪ್ರಸಾದಾ ದ್ಭವಿಷ್ಯತಿ । ಅನ್ಯಂಚ ತೇ ವರಂ ದದ್ಮಿ ಪ್ರೀಯತಾಮಸುರಾ ತ್ಮಜ ! ॥೨೫॥ ಪ್ರಹ್ಲಾದಃ ॥ ಕೃತ ಕೃತ್ಯೋ ಽಸ್ಮಿ ಭಗವ!

ಳಾವ ಆನೆಯಿಂದ ಳೆಸ್ಸಲ್ಪಟ್ಟನು, ಬೆಂಕಿಯಲ್ಲಿ ತಳ್ಳಿಸಿದನು ಹಾವುಗಳಿಂದ ಕಚ್ಚಿಸಿದನು, ಆಹಾರಪದಾರ್ಥಗಳಲ್ಲಿ ವಿಷವಂ ಸೇರಿಸಿ ನನಗೆ ತಿನ್ನಿಸಿದನು, ಬಲವಾದ ನಾಗಪಾಶಗಳಿಂದ ನನ್ನನ್ನು ಬಿಗಿದು ಸಮುದ್ರಕ್ಕೆ ತಳ್ಳಿಸಿದನು, ಆ ಮೇಲೂ ಕೂಡ ಸುಮ್ಮನಿರದೆ ನನ್ನ ಮೇಲೆ ದೊಡ್ಡದೊಡ್ಡ ಬಂಡೆಗಳನ್ನೆಲ್ಲಾ ಹೇರಿಸಿದನು ಇನ್ನೂ ಅನೇಕವಿಧಗಳಾದ ಕೆಡುಕುಗಳನ್ನೆಲ್ಲಾ ಮಾಡಿದನು, ಓ ಪ್ರಭುವರ್ಯನೆ, ನಿನ್ನ ಭಕ್ತನಾದ ನನ್ನನ್ನು ಈ ಪರಿ ಹಿಂಸಿಪಡಿಸಿ, ನನ್ನಲ್ಲಿ ಪ್ರಬಂಧವಾಗಿ ವೈಗವಂ ಬೆಳೆಸಿದನು, ಇದರಿಂದ ಆತನಿಗೆ ಮಹತ್ತರವಾದ ಪಾಪವು ಸಂಭವಿಸಿರುವುದು ; ಈ ಪಾತಕವೆಲ್ಲವೂ ನಿನ್ನ ಅನುಗ್ರಹದಿಂದ ಒಡನೆಯೇ ನಾಶವಾಗಲಿ ಎಂಬುದಾಗಿ ಪ್ರಹ್ಲಾದನು ಭಕ್ತಿಯಿಂದ ತಲಬಾಗಿ ಕೈಮುಗಿದು ಕೊಂಡು ಆ ಪರಬ್ರಹ್ಮನನ್ನು ಬೇಡಿಕೊಂಡನು ॥೨೨-೨೬-೨೪॥ ಓ ಪ್ರಹ್ಲಾದನೆ; ಅಸುರನಂದನನೆ; ಇದುವರೆಗೂ ನೀನು ಬೇಡಿದ ವರಗಳೆಲ್ಲವೂ ನಿನ್ನ ಕೋರಿಕೆಯಂತೆಯೇ ಈಡೇರುವುವು ಈ ವಿಷಯದಲ್ಲಿ ಮನಸ್ಸಿಗೆ ತೊಂದರೆಯಂ ಹಚ್ಚಿಕೊಳ್ಳಬೇಡ. ನಿನಗೆ ಬೇರೊಂದು ವರವಂ ಕೊಡಬೇಕೆಂದು ಇರುವೆನು, ನಿನಗೆ ಬೇಕಾದ ಮತ್ತೊಂದು ವರವಂ ಕೋರು ಎಂಬುದಾಗಿ ಮಹಾಮಹಿಮ ಸಂಪನ್ನನೆನಿಸಿದ ವಿಷ್ಣುವು ಪ್ರಹ್ಲಾದನಿಗೆ ಆಜ್ಞಾಪಿಸಿದನು ॥೨೫॥ ಬಳಿಕ ಪ್ರಹ್ಲಾದನು ಎಲೈ ಭಗವಂತನೆ ನಿನ್ನ ಪಾದಾರವಿಂದಗಳಲ್ಲಿ ನನಗೆ ಶಾಶ್ವತವಾದ ಭಕ್ತಿಯಂ ದಯಪಾಲಿ

ವರೇಣಾನೇನ ಯತ್ತ್ವಯಿ । ಭವಿತ್ರೀ ತ್ವತ್ಪ್ರಸಾದೇನ ಭಕ್ತಿ
ರವ್ಯಭಿಚಾರಿಣೀ ॥೬೬॥ ಧರ್ಮಾರ್ಥಕಾಮೈಃ ಕಿಂತಸ್ಯ ಮು
ಕ್ತಿ ಸ್ತಸ್ಯ ಕರೇ ಸ್ಥಿತಾ । ಸಮಸ್ತ ಜಗತಾಂ ಮೂಲೇ ಯಸ್ಯ
ಭಕ್ತಿಸ್ಸ್ಥಿರಾ ತ್ವಯಿ ॥೬೭॥ ಶ್ರೀ ಭಗವಾನುವಾಚ ॥ ಯಥಾ
ತೇ ನಿಶ್ಚಲಂ ಚೇತೋ ಮಯಿ ಭಕ್ತಿ ಸಮನ್ವಿತಂ । ತಥಾತ್ವಂ
ಮತ್ಪ್ರಸಾದೇನ ನಿರ್ವಾಣಂ ಪರಮಾಪ್ಸ್ಯಸಿ ॥೬೮॥ ಶ್ರೀ ಪ
ರಾಶರಃ ॥ ಇತ್ಯು ಕ್ತ್ವಾಂತರ್ದಧೇ ವಿಷ್ಣು ಸ್ತಸ್ಯೈವೈತ್ರೇ
ಯ । ಪಶ್ಯತಃ । ಸಚಾಪಿ ಪುನರಾಗಮ್ಯ ವವಂದೇ ಚರಣಾ

ಸಿರುವುದೇ ಸಾಕು; ಇದರಿಂದಲೇ ನಾನು ಕೃತಾರ್ಥನಾದೆನು. ನನಗೆ ಬೇರೆ
ಯಾವ ವರವು ತಾನೇ ಬೇಕಾಗಿರುವುದು ? ಎಲ್ಲ ಲೋಕಗಳಿಗೂ ಮೃ
ಷ್ಟಾನ್ನಭೋಜನವನ್ನಿಸಿರುವ ನಿನ್ನ ಪಾದಾರವಿಂದಗಳಲ್ಲಿ ಶಾಶ್ವತವಾದ
ಭಕ್ತಿಯೊಂದು ಲಭಿಸಿದೊಡೆ ಅಲ್ಪಸುಖವನ್ನುಂಟುಮಾಡುವ ಕಾರಣ
ತುಚ್ಛಗಳೆನಿಸಿದ, ಧರ್ಮ, ಅರ್ಥ, ಕಾಮ, ಇವುಗಳಿಂದ ನನಗಾಗಬೇ
ಕಾದುದು ತಾನೇ ಏನಿರುವುದು ? ॥ ಎಂದುದಾಗಿ ಯಾವ ಬೇರೊಂದು
ವರವನ್ನೂ ಬೇಡದೆ ಆತನ ಪಾದಗಳಲ್ಲಿ ಭಕ್ತಿಯೊಂದನ್ನು ಮಾತ್ರ ಬೇಡಿ
ಕೊಂಡನು ॥೬೬, ೬೭॥ ತರುವಾಯ ಷಡ್ಗುಣೈಶ್ವರ್ಯ ಸಂಪನ್ನನೆನಿಸಿದ
ವಿಷ್ಣು ವು ಆ ಪ್ರಹ್ಲಾದನಂ ಕಂಡು ಆತನು ಸ್ಥಿರಚಿತ್ತನಾಗಿರುವುದಕ್ಕೆ
ಬಹಳವಾಗಿ ಮೆಚ್ಚಿ, "ಆಯುಷ್ಮಾನ್ ! ನಾನು ನಿನ್ನ ಸ್ಥೈರ್ಯಕ್ಕೆ ವೆಚ್ಚಿದೆ,
ನು ; ನಿನ್ನ ಮನಸ್ಸು ಬೇರೊಂದುಕಡೆ ಸ್ವಲ್ಪವೂ ಗಮನಿಸದೆ
ನನ್ನಲ್ಲಿಯೇ ಶಾಶ್ವತವಾಗಿ ಭಕ್ತಿಭಾವದಿಂದಿರುವುದು, ಇಂತಹ ನಿನ್ನ
ದೃಢವಾದ ಭಕ್ತಿಯಿಂದಲೇ ನೀನೂ ಕೂಡ ಎಂದಿಗೂ ನಾಶವಿಲ್ಲದ ಸ
ರ್ವೋತ್ತಮವೆನಿಸಿದ ಮೋಕ್ಷಸಾಮ್ರಾಜ್ಯವನ್ನು ಅನುಭವಿಸುವೆ, ಲೋಕ
ದಲ್ಲಿ ನಿನ್ನಂತೆ ಚಿತ್ತೈಕಾಗ್ರತೆಯುಳ್ಳವರು ಬಹಳ ಅಪುರೂಪ, ಅದರಲ್ಲಿಯೂ
ನಿನ್ನಂತಹವರಂತೂ ನೆಲ್ಲಿಯೂ ನೋಡಿಲ್ಲ ಎಂಬುದಾಗಿ ಪ್ರಹ್ಲಾ
ದನನ್ನು ಸ್ವಲ್ಪಮಟ್ಟಿಗೆ ಹೊಗಳಿದನು ॥೬೮॥ ಪರಾಶರನು ಹೇಳುತ್ತಾನೆ-
ಎಲೈ ಮೈತ್ರೇಯನೆ; ಸರ್ವವ್ಯಾಪಕನೆನಿಸಿದ ಪರಮಾತ್ಮನು ತನ್ನ ಭಕ್ತ
ನ ಸಂಗಡ ಈಪರಿ ಮಾತನಾಡಿ, ಬಳಿಕ ಆತನು ನೋಡುತ್ತಿರುವಾಗಲೇ

ಪಿತುಃ ॥೬೯॥ ತಂ ಪಿತಾ ಮೂರ್ಧ್ನ್ಯುಪಾಘ್ರಾಯ ಪರಿಷ್ವಜ್ಯ
ಚ ಪೀಡಿತಂ । ಜೀವ ಸೀತ್ಯಾಹ ವತ್ಸೇತಿ ! ಬಾಷ್ಪಾರ್ದ್ರನಯ
ನೋ ದ್ವಿಜ!॥೭೦॥ ಪ್ರೀತಿಮಾಂ ಶ್ಚ ಭವತ್ಪುತ್ರೇ ಅನುರಾ
ಪೀ ಮಹಾಸುರಃ । ಗುರು ಪಿತೃಶ್ಚ ಕಾರ್ಯೈವಂ ಶುಶ್ರೂಷಾಂ
ಸೋಪಿ ಧರ್ಮವಿತ್ ॥೭೧॥ ಪಿತ್ರ್ಯುಪರತಿಂ ನೀತೇ ನರಸಿಂಹ
ಸ್ವರೂಪಿಣಾ । ವಿಷ್ಣುನಾ ಸೋಪಿ ದೈತ್ಯಾನಾಂ ಮೈತ್ರೇ

ಕ್ಕಾಗಿ ಕಳುಹಿಸಿದನು. ಅನಂತರದಲ್ಲಿ ಈ ಪ್ರಹ್ಲಾದನೂ ಕೂಡ ವಿಶೇಷವಾಗಿ ಸಂತಸಗೊಂಡು ಅಲ್ಲಿಂದ ತನ್ನ ತಂದೆಯ ಮನೆಯಿಂದ ಹೊಕ್ಕು ಆತನ ಅಪಿದಾವರೆಗಳಿಗೆ ಎರಗಿದನು ॥೬೯॥ ಬಳಿಕ ಹಿರಣ್ಯಕಶಿಪು, ಇಂತು ಬಹುದುಃಖಿ ಬಂದು ತನ್ನ ಕಾಲುಗಳಿಗೆರಗಿದ ಪಸುಳೆಯಂ ಕೊಂಡು ಕನಿಕರದಿಂದ ಕಂಬನಿಗರೆಯುತ್ತಾ ಆ ಹುಡುಗನಂ ಬಾಚ ತಬ್ಬಿ ಮುದ್ದಾಡಿ ಆತನ ತಲೆಯುಂ ಮೂಸುನೋಡಿ "ಅಯ್ಯೋ ಮಗುವೆ ! ಬದುಕಿರುವೆಯಾ !! ಬಹಳವಾಗಿ ಆಯಾಸಪಟ್ಟೆ !!" ಎಂಬುದಾಗಿ ಹಲವು ಪರಿಯಿಂದ ಮಾತನಾಡಿ ಆ ಪ್ರಹ್ಲಾದನಿಗೆ ತಾನು ಮಾಡಿದ ಕೆಡಕುಗಳಿಗೋಸುಗ ಆತನ ವಿಷಯದಲ್ಲಿ ವಿಶೇಷವಾಗಿ ಮರುಕಗೊಂಡು ರಾಕ್ಷಸಶ್ರೇಷ್ಠನಾದ ಹಿರಣ್ಯಕಶಿಪುವು ಅವನಲ್ಲಿ ತನ್ನ ಬೇರೆ ಮೂರುಮಕ್ಕಳಿಗಿಂತಲೂ ಹೆಚ್ಚಾಗಿ ಪ್ರೀತಿಯುನ್ನಿರಿಸಿದನು. ಎಲ್ಲ ಧರ್ಮಗಳನ್ನೂ ಒಲ್ಲವನಾದ ಈ ಹುಡುಗನೂ ಕೂಡ ಎಂದಿನಂತೆಯೇ ತನ್ನ ವಿದ್ಯಾಗುರುವಿನಲ್ಲಿಯೂ, ತನ್ನ ಜನಕನಲ್ಲಿಯೂ ಭಕ್ತಿಯನ್ನಿರಿಸಿ ಕಾಲಕಾಲಗಳಲ್ಲಿ ಅವರವರಿಗೆ ತಕ್ಕಂತೆ ಶುಶ್ರೂಷೆಗೈಯುತ್ತಾ ಅವರ ವಿಷಯದಲ್ಲಿ ಅನನ್ಯವಾದ ಭಕ್ತಿಭಾವದಿಂದಿರುತಿದ್ದನು ॥೭೦॥ ಎಲೈ ಮೈತ್ರೇಯನೆ, ಇಂತೆಯೇ ಬಹುಕಾಲ ಕಳೆದು ಹೋಯಿತು. ಮರಳಿ ಬಂದುದಿನ ಸಾಯಂಕಾಲ ಸಮಯದಲ್ಲಿ ಹಿರಣ್ಯಕಶಿಪುವು ತನ್ನ ಮಗನಮೇಲೆ ಮಿತಿಮೀರಿ ಕೋಪಗೊಂಡು ತನ್ನಮಗನಂ ಕೊಲ್ಲಲೋಸುಗಖಡ್ಗವಂ ಸೆಳೆದು ಸಂಹರಿಸಲುದ್ಯುಕ್ತನಾದನು ಆಗ ಪ್ರಹ್ಲಾದನು ಎಂದಿನಂತೆಯೇ ಭಗವಂತನನ್ನು ಧ್ಯಾನಮಾಡತೊಡಗಿದನು. ಆ ಕಾಲದಲ್ಲಿ ಆಪದ್ಬಂಧುವೂ, ಭಕ್ತರಕ್ಷಣಧುರೀಣನೂ ಎನಿಸಿದ ವಿಷ್ಣುವು ನರಸಿಂಹಾವತಾರವಂತಾಳಿ ಆ ಆಸ್ಥಾನ ಮಂಟಪದ ಖಂ

ದು ಕಂಭದಿಂದ ಉದ್ಭವಿಸಿ ಈ ಹಿರಣ್ಯಕಶಿಪುವನ್ನು ಸೆಳೆದುಕೊಂಡು ತನ್ನ ತೊಡೆಗಳಮೇಲೆ ಮಲಗಿಸಿ ಅವನ ಎದೆಯನ್ನು ತನ್ನ ಹರಿತಗಳಾದ ಉಗುರುಗಳಿಂದ ಸೀಳಿ ಅವನನ್ನು ಕೊಂದನು. ಇಂತು ತಂದೆಯು ಮಡಿದ ಬಳಿಕ ಈ ಪ್ರಹ್ಲಾದನೇ ದೈತ್ಯರಿಗೆಲ್ಲಾ ದೊರೆಯಾಗಿ ತನ್ನ ತಂದೆಯ ಸಿಂಹಾಸನವನ್ನು ಆರೋಹಣವನ್ನು ಗೈದನು (ಇಲ್ಲಿ ನರಸಿಂಹಾವತಾರವನ್ನು ವಿಶದವಾಗಿ ವರ್ಣಿಸದಿದ್ದರೂ ಅದನ್ನು ಸ್ವಲ್ಪಮಟ್ಟಿಗಾದರೂ ತಿಳಿಸಬೇಕಾದುದು ಅವಶ್ಯಕವೆಂದರಿತು ಸಂಗ್ರಹವಾಗಿ ಕೆಲವು ವಿಷಯಗಳನ್ನು ಮಾತ್ರ ಸೂಚಿಸಿದೆನು ;ಚತುರ್ಮುಖ ಬ್ರಹ್ಮನ ಮಾನಸ ಕುಮಾರರೆನಿಸಿದ ಸನಕಾದಿಮುನಿಗಳ ಶಾಪದಿಂದ ಭೂಲೋಕದಲ್ಲಿ ರಾಕ್ಷಸನಾಗಿ ಹುಟ್ಟಿದ ಈ ಹಿರಣ್ಯಕಶಿಪುವು, ವಿಷ್ಣುವಿನ ಅಗಲುವಿಕೆಯನ್ನು ಸಹಿಸಲಾರದೆ ಆತನ ಅಡಿದಾವರೆಗಳಿಂದ ಸೇವಿಸಲು ಶೀಘ್ರವಾಗಿಯೇ ಆತನ ಸಾನ್ನಿಧ್ಯವನ್ನು ಸೇರಬೇಕೆಂದು ಬಗೆದು ಆತುರದಿಂದ ವಿಷ್ಣುವಿನಲ್ಲಿ ಅಪಾರವಾದ ದ್ವೇಷವನ್ನು ಬೆಳೆಯಿಸಿದನು. ಇಂತು ವಿಷ್ಣುವಿನಲ್ಲಿ ವೈರವನ್ನು ಸಾಧಿಸಲು ಬ್ರಹ್ಮನಿಂದ ಕಾರಿತು ತಪವನ್ನಾಚರಿಸಲು, ಬ್ರಹ್ಮನು ಪ್ರತ್ಯಕ್ಷನಾದನು; ಆಗ ಹಿರಣ್ಯಕಶಿಪುವು ಆತನಿಂದ ಅನೇಕ ಒಗೆಗಳಾದ ವರಗಳನ್ನೆಲ್ಲಾ ಪಡೆದು ಕೊನೆಗೆ ''ಎಲೈ ಪಿತಾಮಹನೆ;ನೀನು ಉಂಟುಮಾಡಿರುವ ಯಾವಪ್ರಾಣಿಗಳಿಂದಲೂ ನನಗೆ ಭಯವು ಇಲ್ಲದಿರ ; ಯಾವ ಆಯುಧಗಳಿಂದಲೂ ನನಿಗೆ ಸಾವು ಉಂಟಾಗದಿರಲಿ ; ಭೂಮಿಯಮೇಲಾಗಲಿ ಅಥವಾ ಅಂತರಿಕ್ಷದಲ್ಲಾಗಲಿ ನನಿಗೆ ಸಾವುಬೇಡ, ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ನನಿಗೆ ಮೃತ್ಯುವಿಲ್ಲದಂತೆ ಅನುಗ್ರಹಿಸು,, ಎಂಬುದಾಗಿ ಬೇಡಿಕೊಂಡನು ಬ್ರಹ್ಮನೂ ಕೂಡ ಅಂತೆಯೇ ವರವನ್ನು ದಯಪಾಲಿಸಿದನು. ಪ್ರಕೃತದಲ್ಲಿ ಅವಕ್ಕನುಸಾರವಾಗಿಯೇ ವಿಷ್ಣುವೂ ಕೂಡ ಬ್ರಹ್ಮನಮಾತಂ ಸಾರ್ಥಕಗೊಳಿಸಲು,, ಬ್ರಹ್ಮಸೃಷ್ಟಿಗೆ ವಿಲಕ್ಷಣವಾದ ಅರ್ಧ ಮಾನುಷದೇಹ, ವಿಕ್ಷಿಪ್ತ ಅಧರಸಂಸಕ್ತರಮುಖ

ಮಾದ ನರಸಿಂಹಾವತಾರವಂ ಧರಿಸಿ, ಲೋಕಪ್ರಸಿದ್ಧಗಳಾದ ಖಡ್ಗ, ಬಾಣ, ಬಿಲ್ಲು ಮೊದಲಾದ ಆಯುಧಗಳನ್ನುಳಿದು ತನ್ನ ಉಗುರುಗಳಿಂದಲೇ, ಹಿರಣ್ಯಕಶಿಪುವನ್ನು ಕೊಂದನು. ಅಂತೆಯೇ ಭೂಮಿಯು ಮೇಲೂ ಅವನನ್ನು ಕೊಲ್ಲದೆ ಅಂತರಿಕ್ಷದಲ್ಲಿಯೂ ಸಂಹರಿಸದೆ ತನ್ನ ತೊಡೆಗಳ ಮೇಲೆಯೇ ಅವನನ್ನು ಮಲಗಿಸಿಕೊಂಡು ಅವನ ಎದೆಯಂ ಬೀಳಿದನು. ಕಾಲವೂ ಕೂಡ ಅಹೋರಾತ್ರಿಗಳ ಸಂಧಿಕಾಲವಾದು ದರಿಂದ ಅಂತಹ ಸಂಧ್ಯಾಕಾಲವು ಹಗಲೂ ಅಲ್ಲ, ರಾತ್ರಿಯೂ ಅಲ್ಲ, ಇದ ರಿಂದ ಬ್ರಹ್ಮನವರವು ಸಾರ್ಥಕವಾಯಿತು. ಹಿರಣ್ಯಕಶಿಪುವಿನ ಕೋ ರಿಕೆಯೂ ವ್ಯರ್ಥವಾಗಲಿಲ್ಲ. ಮತ್ತು ಹಿರಣ್ಯಕಶಿಪುವು ಪ್ರಹ್ಲಾದನಿಗೆ ತಂದೆಯಾದಕಾರಣ "ಯೇ ಚಾಸ್ಯ ಪಿತರೋಯಾತಾಃ ಯೇನಯಾತಾಃ ಪಿತಾಮಹಾಃ" ಪ್ರಾಣಿಗಳು ಲೋಕದಲ್ಲಿ ತನ್ನ ತಂದೆ ತಾತಂದಿರಿಂದ ಆಚರಿಸಲ್ಪಟ್ಟ ನಡವಳಿಯನ್ನೇ ಆಚರಿಸಬೇಕು,, ಎಂಬುದಾಗಿ ಸಾರು ತ್ತಿರುವ ಸ್ಮೃತಿವಚನಾನುಸಾರ ಪ್ರಹ್ಲಾದನೂಕೂಡ ತನ್ನ ತಂದೆಯಂ ತೆಯೇ ವಿಷ್ಣುವಿನಲ್ಲಿ ವೈರವಂ ಸಾಧಿಸಬೇಕಲ್ಲದೆ, ತನ್ನತಂದೆಯ ನಡ ವಳಿಕೆಗೆ ವಿರೋಧವಾಗಿ ನಡೆಯಬಹುದೆ? ಹಾಗೊಂದು ವೇಳೆ ವಿಷ್ಣು ವಿನಲ್ಲಿ ಭಕ್ತಿಯನ್ನಿರಿಸಿದಾಗ್ಗೂ ಆತನಿಂದ ತಂದೆಯನ್ನು ಕೊಲ್ಲಿಸಬ ಹುದೆ? ಇಂತು ಪ್ರಹ್ಲಾದನು ವಿಷ್ಣುವಿನಲ್ಲಿ ನಿರತಿಶಯವಾದ ಭಕ್ತಿಯ ನ್ನಿರಿಸಿದುದಕ್ಕೆ ಫಲವೇನು? ಎಂಬದಾಗಿ ಅನೇಕ ಸಂಶಯಗಳುಂಟು; ಆದರೆ ಲೋಕದಲ್ಲಿ ಸತ್ಪುತ್ರನು ಯಾವ ವಿಧದಿಂದಾದರೂ ತನ್ನ ತಂದೆಗೆ ಸದ್ಗತಿಯನ್ನುಂಟುಮಾಡುವುದೇ ಅವನಿಗೆ ಮುಖ್ಯ ಕರ್ತವ್ಯವಲ್ಲದೆ ಅದ ಕ್ಕಿಂತಲೂ ಬೇರೆ ಕಾರ್ಯಮುಂಟೆ? ಅದು ಕಾರಣ ಧರ್ಮಸೂಕ್ಷ್ಮಗ ಳನ್ನು ಚನ್ನಾಗಿ ಬಲ್ಲ ಈ ಪ್ರಹ್ಲಾದನು ಇದನ್ನೆಲ್ಲಾ ಚೆನ್ನಾಗಿ ಪರ್ಯಾ ಲೋಚಿಸಿ ಇದಕ್ಕನುಸಾರವಾಗಿ ತನ್ನ ತಂದೆಗೆ ಸದ್ಗತಿಯನ್ನುಂಟುಮಾ ಡಲು ಈ ರೀತಿ ಮಾಡಿದನು. ಸಾಮಾನ್ಯವಾಗಿ ಎಷ್ಟು ಶ್ರಮಪಟ್ಟರೂ ಪರಮಾತ್ಮನ ಅನುಗ್ರಹವು ದೊರೆಯುವುದೇ ಕಷ್ಟ; ಅಥವಾ ಹಾ ಗೊಂದುವೇಳೆ ತನ್ನ ಸುಕೃತವಿಶೇಷದಿಂದ ಆತನ ಅನುಗ್ರಹವು ಲಭಿಸಿ ದರೂ ಪ್ರತ್ಯಕ್ಷವಾಗಿ ಆತನ ದರ್ಶನವು ಬಹುಕಷ್ಟ ಸಾಧ್ಯವಾದುದು.

ಇಂತಿರಲು ಪ್ರಹ್ಲಾದನು ತನ್ನ ತಂದೆಗೆ ಪ್ರತ್ಯಕ್ಷವಾಗಿ ಆ ಪರಮಾತ್ಮನನ್ನೇ ತೋರಿಸಿ, ಆತನಿಗೆ ಸರ್ವೋತ್ತಮವಾದ ಪದವಿಯನ್ನು ಬದಗಿಸಿಕೊಟ್ಟನು. ಪ್ರಹ್ಲಾದನು ತಂದೆಗೆ ಇದಕ್ಕಿಂತಲೂ ಬೇರೆ ಯಾವ ಸದ್ಗತಿಯನ್ನು ತಾನೇ ಬದಗಿಸಲಾದೀತು ? ಇಂತಹ ಮಗನಂ ಪಡೆಯುವ ಭಾಗ್ಯವು ಮತ್ತಾರಿಗೆ ಲಭಿಸುವುದು ? ಆದಕಾರಣ ಪ್ರಹ್ಲಾದನು ತನ್ನ ಕೈಲಾದಷ್ಟು ಮಟ್ಟಿಗೂ ಸಾಹಸಪಟ್ಟು ವಿಷ್ಣುವಿನ ಅಡಿದಾವರೆಗಳಲ್ಲಿ ನಿಶ್ಚಲವಾದ ಭಕ್ತಿಯನ್ನಿರಿಸಿ, ಆ ಭಕ್ತಿಯಿಂದ ಪರಮಾತ್ಮನಂ ಸಂತೋಷಗೊಳಿಸಿ ತನ್ನ ತಂದೆಗೆ ಶಾಶ್ವತವಾದ ದಿವ್ಯ ಪದವಿಯನ್ನೊದಗಿಸಿ ಕೊಟ್ಟನಲ್ಲದೆ ಆತನಿಗೆ ಸ್ವಲ್ಪವೂ ವಿರೋಧವಾಗಿ ನಡೆಯಲೇ ಇಲ್ಲ. ಇಂತು ಪ್ರಹ್ಲಾದನಮೇಲಿದ್ದ ಸಂಶಯಗಳಿಗೆ ಉತ್ತರ ಹೇಳಿದುದಾಯಿತು. ಮತ್ತು ಹಿರಣ್ಯಕಶಿಪುವೂ ಕೂಡ ಸರ್ವೋತ್ತಮವಾದ ವಂಶದಲ್ಲಿ, ಮಹಾತಪಸ್ಸಂಪನ್ನನೆನಿಸಿದ ಕಾಶ್ಯಪಮುನಿಗೆ ತನಯನಾಗಿ ಜನಿಸಿ, ತಾನೂ ಕೂಡ ಮಹಾತಪಸ್ವಿಯಾಗಿದ್ದರೂ ವಿಷ್ಣುವಿನಲ್ಲಿ ದ್ವೇಷವಂಸಾಧಿಸಬಹುದೆ ? ಎಂದರೆ, ಈ ಹಿರಣ್ಯಕಶಿಪುವು ತಾನು ಹೇಗಾದರೂ ಶೀಘ್ರವಾಗಿ ವಿಷ್ಣುವಿನ ಸಾನ್ನಿಧ್ಯವಂ ಪಡೆಯಬೇಕೆಂದು ಸರ್ವಭಾವಗಳಲ್ಲಿಯೂ ವಿಷ್ಣುವು ತನಗೆ ಹಗೆ ಎಂಬದಾಗಿ ಭಾವಿಸಿ ಆತನಲ್ಲಿ ಅಪಾರವಾದ ವೈರವಂ ಸಾಧಿಸುತಿದ್ದನಲ್ಲದೆ ಮೂಢಬುದ್ಧಿಯಿಂದ ಆತನಲ್ಲಿ ವೈರವಂ ಬೆಳೆಯಿಸಲಿಲ್ಲ. ಸಾಮಾನ್ಯವಾಗಿ ಲೋಕದಲ್ಲಿ ನಾವು ಒಬ್ಬನನ್ನು ಕೆಟ್ಟವನೆಂದು ಹೇಳಿದರೆ ಎಷ್ಟು ಬೇಗ ಅವನಿಗೆ ನಮ್ಮಮೇಲೆ ಕೋಪವುಂಟಾಗುವುದೋ ಅಂತೆಯೇ ಅದೇ ಮನುಷ್ಯನನ್ನೇ ನಾವು ಒಳ್ಳೆಯವನೆಂದು ಶ್ಲಾಘಿಸಿದರೆ ಆತನು ನಮ್ಮಮೇಲೆ ಅಷ್ಟು ಬೇಗನೆ ಪ್ರೀತಿಯಂ ತೋರಲಾರನು. ಅಂತೆಯೇ ವಿಷ್ಣುವಂ ಹೊಂದ ಬೇಕಾದರೂ ಆತನಲ್ಲಿ ದ್ವೇಷವಂ ಸಾಧಿಸಿದಲ್ಲದೆ ಪ್ರೀತಿಇದ್ದರೆ ಈತನಿಗೆ ವಿಷ್ಣುವು ಅಷ್ಟು ಬೇಗಪ್ರಸನ್ನನಾಗಲಾರನೆಂದು ಭಾವಿಸಿ ಈ ಹಿರಣ್ಯಕಶಿಪುವು ವಿಷ್ಣುವಿಗೆ ಹಗೆಯಾಗಿದ್ದನು. ಈ ವಿಷಯದಲ್ಲಿ ಇನ್ನೂ ಅನೇಕ ಅಂಕಗಳು ಮುಖ್ಯವಾಗಿ ತಿಳಿಸತಕ್ಕವುಗಳಾಳಾಗಿದ್ದರೂ ಗ್ರಂಥದಲ್ಲಿಲ್ಲದಸಂಗತಿಯಂ ಬೆಳೆಸಬಾರದೆಂಬದಂಗೆ ಸಂಗ್ರಹಿಸಿರುತ್ತೇನೆ.॥೬೫॥

ಯಾ ಭೂತ್ಪತಿ ಸ್ತತಃ ॥೫॥ ತದಾಜ್ಞ್ಯ ಭೂತಿಂ ಸಂಪ್ರಾಪ್ಯ * ಕರ್ಮ ಶುದ್ಧಿಕರೀಂ ದ್ವಿಜ ! । ಪುತ್ರಪೌತ್ರಾಂಶ್ಚ ಸುಬಹೂನ ವಾಪ್ಯೈಶ್ವರ್ಯ ಮೇವಚ ॥೬॥ † ಹ್ಲೇಣಾಧಿಕಾರ ಸ್ಸಯದಾ ಪುಣ್ಯಪಾಪವಿವರ್ಜಿತಃ। ತದಾ ಸೌ ಭಗವದ್ಧ್ಯಾನಾ ತ್ಪರಂ ನಿರ್ವಾಣಮಾಪ್ತವಾ ॥೭॥ ಏನಂ ಪ್ರಭಾವೇ ದೈತ್ಯೋಽಸೌ ಮೈ

ಎಲೈ ಬ್ರಾಹ್ಮಣೋತ್ತಮನೇ ; ಇಂತು ಪ್ರಹ್ಲಾದನು, ಹಿಂದಿನ ಕರ್ಮಗಳನ್ನು ನಾಶಮಾಡುವಂತಹ, ತನ್ನ ತಂದೆಯು ರಾಜ್ಯಭಾರವನ್ನೂ, ಅಪಾರವಾದ ಐಶ್ವರ್ಯವನ್ನೂ ಹೊಂದಿಅನೇಕಮುಂದಿ ಮುಕ್ಕಳು, ಮುಮ್ಮಕ್ಕಳೊಂದಿಗೆ ಸುಖದಿಂದ ರಾಜ್ಯಪಾಲನೆಯಂಮಾಡುತಿದ್ದನು. ॥೬॥ ತಾನು ವಿಷ್ಣುವಿನಲ್ಲಿ ಭಕ್ತಿಯನ್ನು ಶಾಶ್ವತಪಡಿಸಿ ಜ್ಞಾನವಂಸಂಪಾದಿಸುವುದಕ್ಕಿಂತಲೂ ಮುಂಚೆ ತಾನು ಮಾಡಿದ್ದ ಪುಣ್ಯಪಾಪಗಳೆಲ್ಲವನ್ನೂ ದೂರಮಾಡಿ, ಅನುಕ್ಷಣವೂ ಆ ಭಗವಂತನಲ್ಲಿಯೇ ಮನವಂ ಲಯಗೊಳಿಸಿ ಆತನನ್ನೇ ಧ್ಯಾನಮಾಡುತ್ತಾ ಸರ್ವೋತ್ತಮವಾದ ಮೋಕ್ಷವನ್ನು ಹೊಂದಿದನು. ॥೭॥ ಎಲೈ ಮೈ

---

* ಪ್ರಾರಬ್ಧಕರ್ಮಣಾಂ ಭೋಗಾದೇವಕ್ಷಯಃ ಎಂಬ ಪ್ರಮಾಣವು ಸಾರ ತಾನು ಮಾಡಿದಕರ್ಮವು ಅನುಭವಿಸದೆ ನಾಶಗೊಳಿಸಲುಬಾರದು. ಅದು ಕಾರಣ ಪ್ರಹ್ಲಾದನು ಪರಮಾತ್ಮಸಾಕ್ಷಾತ್ಕಾರವಂ ಹೊಂದಿ ಮುಕ್ತಿಗೆ ಈಡಾಗಿದ್ದರೂ ಅತನು ಪ್ರಾರಬ್ಧವೆಷ್ಟು ಮುಗಿಯುವವರೆಗೂ ಅತನು ಅನುಭವಿಸಿ ನಾಶಗೊಳಿಸಲು ಪ್ರಾರಬ್ಧ ಫಲನಾಶವಾದ, ತನ್ನ ತಂದೆಯು ರಾಜ್ಯಭಂದವನಂಹೊಂದಿ ಅವುಗಳನ್ನು ಅನುಭವಿಸಿ ತನ್ನ ಹಿಂದಿನ ಕರ್ಮವೆ ನಾಶವಾಗಲು ಕಾಯುತಿರದಲ್ಲಿ ಮುಕ್ತಿಯನ್ನೈದಿದನೆಂದು ಭಾವವು.

† ಶ್ರು॥ ಪೂರ್ವಕರ್ಮಣಾಂ ವಿನಾಶಾ ದ್ದ್ವೇಷಾ ಚ್ಚೈತ್ತರೇಷಾಂ ತತ್ಸಂಕೃತ ದುಷ್ಕೃತೇ ವಿಭೂನತೇ,, ಜ್ಞಾನೋ ತ್ಪತ್ತ್ಯನಂತರದಲ್ಲಿ ಹಿಂದಿನ ಕರ್ಮಗಳೆಲ್ಲವೂ ನಾಶಿಸಿಹೋಗುವವು, ಮುಂದೆಸೂ ತಾನು ಬರುಕಿದ್ದು ಕರ್ಮಗಳಂ ಮಾಡುತಲೇ ಇದ್ದಾಗ್ಯೂ ಆ ಕರ್ಮಗೆಳಲ್ಲಿ ಇವನಿಗೆ ಫಲಾಭಿಸಂಧಿ ಇಲ್ಲವಕಾರಣ, ನಿಷ್ಕಾಮನೆಯಿಂದ ಮಾಡಿದ ಆ ಕರ್ಮಗಳು ಇವನಿಗೆ ಬಂಧಕವಲ್ಲ. ಆದುದರಿಂದ ಜ್ಞಾನಿಗೆ ಪುಣ್ಯಪಾಪಗಳ ಸಂದರ್ಕವಿಲ್ಲ

ತ್ರೇಯಾ ಭೂನ್ಮಹಾ ಮತಿಃ । ಪ್ರಹ್ಲಾದೋ ಭಗವದ್ಭಕ್ತೋ
ಯಂ ತ್ವಂ ಮಾಮನುಪೃಚ್ಛಸಿ ॥೫೫॥ ಯಸ್ತ್ವೇತಚ್ಚರಿತಂ ತ
ಸ್ಯ ಪ್ರಹ್ಲಾದಸ್ಯ ಮಹಾತ್ಮನಃ । ಶೃಣೋತಿ ತಸ್ಯ ಪಾಪಾನಿ ನ
ದ್ಯೋಗಚ್ಛಂತಿ ಸಂಕ್ಷಯಂ ॥೫೬॥ ಅಹೋರಾತ್ರ ಕೃತಂ ಪಾ
ಪಂ ಪ್ರಹ್ಲಾದಚರಿತಂ ನರಃ । ಶೃಣ್ವ ಪಠಂಶ್ಚ ವೈತ್ರೇ
ಯ! ವ್ಯಪೋಹತಿ ನ ಸಂಶಯಃ ॥೫೭॥ ಪೌರ್ಣಮಾಸ್ಯಾ ಮಮಾ
ವಾಸ್ಯಾ ಮಷ್ಟಮ್ಯಾ ಮಥವಾ ಪರ್ವ । ದ್ವಾದಶ್ಯಾಂ ವಾ ತದಾ

ತ್ರೇಯನೆ ; ಇಂತು ಭಗವದ್ಭಕ್ತ ನೆನಿಸಿದ ಆ ಪ್ರಹ್ಲಾದನು ದಿತಿವಂಶ
ಸಂಭೂತನಾದರೂ ಕೂಡ ಆತನ ಮಹಿಮೆಯು ಮಾತ್ರ ಅಪಾರವಾ
ಗಿದ್ದಿತು. ಆತನು ಮಹಾ ಬುದ್ಧಿಶಾಲಿಯು, ಭಗವದ್ಭಕ್ತರಲ್ಲಿ ಮೊದಲೆ
ನಿಸುವ ನೆನಿಸಿದ್ದನು. ನೀನು ಆ ಪ್ರಹ್ಲಾದನಮಹಿಮೆಯುಂ ಸಂಪೂರ್ಣ
ವಾಗಿ ಕೇಳಬೇಕೆಂದು ನನ್ನನ್ನು ಬಿಸಗೊಂಡಕಾರಣ ಆತನ ಚರಿತೆಯೆ
ಲ್ಲವಂ ವಿಶದವಾಗಿ ತಿಳಿಸಿದೆನು. ॥೫೫॥ ಇಂತಹ ಸರ್ವೋತ್ತಮವಾದ
ಮಹಿಮೆಯುಳ್ಳ ಪ್ರಹ್ಲಾದನ ಚರಿತೆಯಂ ಶ್ರವಣಮಾಡತಕ್ಕವರು ತ
ಮ್ಮ ಪಾಪಗಳೆಲ್ಲವಂ ನೀಗಿಕೊಂಡು, ಭಗವಂತನಲ್ಲಿ ಭಕ್ತಿಯನ್ನಿಡು
ವವರಾಗುವರು. ॥ ೫೬ ॥ ಅನುದಿನವೂ ಈಪ್ರಹ್ಲಾದ ಚರಿತೆಯ
ನ್ನು ಭಕ್ತಿಯಿಂದ ಬಂದು ಸಾರಿ ಕೇಳತಕ್ಕವರೂ, ಅಥವಾ ಓದ
ತಕ್ಕವರು ತಾವು ನಿರಂತರವೂ ಮಾಡಿದ ಪಾಪಗಳನ್ನೆಲ್ಲಾ ನೀಗಿಕೊಂಡು
ಸುಖಿಸುವರು. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವೇ ಇಲ್ಲ. ॥೫೭॥
ಅಮಾವಾಸ್ಯೆ, ಹುಣ್ಣಿಮೆ, ಅಷ್ಟಮಿ, ದ್ವಾದಶಿ ಈ ಶುಭದಿವಸಗಳಲ್ಲಿ
ಪರಮಭಾಗವತನೆನಿಸಿದ ಪ್ರಹ್ಲಾದ ಚರಿತೆಯಂ ಪಠನಮಾಡುವವರು
ಕುರುಕ್ಷೇತ್ರ ಮೊದಲಾವ ದಿವ್ಯಕ್ಷೇತ್ರಗಳಲ್ಲಿ, ಸೂರ್ಯಗ್ರಹಣಕಾಲದಲ್ಲಿ
ಗೋವನ್ನು ಚೆನ್ನದ ಕೊಂಬುಗಳು, ಗೊರಸುಗಳು ಮೊದಲಾದವುಗಳಿಂ
ದಲಂಕರಿಸಿ ವಿಶೇಷವಾದ ದ್ರವ್ಯದಕ್ಷಿಣೆಯೊಡನೆ ವ್ಯಾಸ ಮಹಾಮುನಿಗ
ಳಿಗೆ ದಾನಮಾಡಿದುದರಿಂದುಂಟಾಗುವ ಉತ್ತಮಗತಿಯುಂ ಹೊಂದುವನು.
॥೫೮॥ ವಿಷ್ಣುವು ತನ್ನ ಭಕ್ತನಾದ ಪ್ರಹ್ಲಾದನನ್ನು ಎಲ್ಲ ಆಪತ್ತುಗಳ
ಲ್ಲಿಯೂ ಸಲಹಿದಂತೆಯೇ ತನ್ನ ಭಕ್ತನಾದ ಪ್ರಹ್ಲಾದನ ಚರಿತೆಯಂ

ಶ್ನೋತಿ ಗೋ ಪ್ರದಾನ ಫಲಂ ನರಃ ॥೪೯॥ ಪ್ರಹ್ಲಾದಂ ಸಕ
ಲಾಪತ್ಸು ಯಥಾರಕ್ಷಿತವಾ೯ ಹರಿಃ । ತಥಾ ರಕ್ಷತಿ ಯಸ್ತಸ್ಯ ಕೃ
ಷ್ಣೋತಿ ಚರಿತಂ ಸದಾ ॥೪೯॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ವಿಂಶೋಧ್ಯಾಯಃ.

ಕೇಳುವವರನ್ನು ಕೂಡ ಎಲ್ಲ ಆಪತ್ತುಗಳಿಂದಲೂ ನಿರ್ಭಯವಾಗಿ ಕಾಪಾಡುವನು. ॥೪೯॥ ಎಂಬದಾಗಿ ಪರಾಶರನು ಮೈತ್ರೇಯನಿಗೆ ಹೇಳುತಿದ್ದನೆಂಬಲ್ಲಿಗೆ ಶ್ರೀವಿಷ್ಣುಪುರಾಣದ ಒಂದನೆಯ ಅಂಶದೊಳ್ ಇಪ್ಪತ್ತನೆಯ ಅಧ್ಯಾಯಂ ಮುಗಿದುದು.

ವಿಂಶಾಧ್ಯಾಯಂ ಸಮಾಪ್ತಂ.

ಶ್ರೀಃ.

ಓನ್ನಮಃ ಪರಮಾತ್ಮನೇ

ವಿಕಪಿಂಶೋಧ್ಯಾಯಃ.



ಶ್ರೀ ಪರಾಶರಃ ॥ ಪ್ರಹ್ಲಾದಪುತ್ರ ಆಯುಷ್ಮಾ೯ ಶಿಬಿ ಭಾ೯ಷ್ಕ
ಲವಿವಚ । ವಿರೋಚನಸ್ತು ಪ್ರಹ್ಲಾದಿ ಬ೯ಲಿರ್ಜಜ್ಞೇ ವಿರೋ
ಚನಾತ್ ॥೧॥ ಬಲೇಃ ಪುತ್ರಶತಂ ತ್ವಾಸೀ ದ್ಬಾಣಜ್ಯೇಷ್ಠಂ
ಮಹಾಮುನೇ! । ಹಿರಣ್ಯಾಕ್ಷ ಸುತಾ ಬ್ರಹ್ಮ೯ ! ಸರ್ವ ಏವ
ಮಹಾಬಲಾಃ ॥೨॥ ಋುರ್ಋುರ ಶ್ಚಕುನಿಶ್ಚೈವ ಭೂತ ಸಂತಾ
ಪನ ಸ್ತಥಾ । ಮಹಾನಾಭೋ ಮಹಾಬಾಹುಃ ಕಾಲನಾಭ
ಸ್ತಥಾ ಽ ಪರಃ ॥೩॥ ಅಭವ೯ ದನುಪುತ್ರಾಶ್ಚ ದ್ವಿಮೂರ್ಧಾ

ಪರಾಶರನು ತಾನು ಹಿಂದಿನ ಅಧ್ಯಾಯದಲ್ಲಿ ಮೊದಲುಮಾಡಿದ
ದಿತಿವಂಶವನ್ನೇ ಸಂಪೂರ್ಣವಾಗಿ ನಿವರಿಸಿ ಬಳಿಕ ವಿಕ್ಷವರ ವಂಶಾವಳಿ
ಯನ್ನೂ ತಿಳಿಸಲು ಹಿಂದಿನ ಅಧ್ಯಾಯದ ಕಥೆಯನ್ನು ಪ್ರಾರಂಭಿಸುತ್ತಾ
ನೆ:— ಎಲೈ ಮೈತ್ರೇಯನೆ, ಇಂತಹ ಪರಮ ಭಾಗವತನೆನಿಸಿದ ಪ್ರ
ಹ್ಲಾದನಿಗೆ ಆಯುಷ್ಮಂತನೆನಿಸಿದ ಶಿಬಿ, ಭಾಷ್ಕಲ, ವಿರೋಚನರೆಂಬ
ಮೂವರು ಮಕ್ಕಳಾದರು. ಲೋಕಪ್ರಖ್ಯಾತನಾದ ಬಲಿಚಕ್ರವರ್ತಿ
ಯು ವಿರೋಚನನ ಮಗನು. ॥೧॥ ಅಯ್ಯಾ ಮುನಿವರ್ಯನೆ; ಈ ಬಲಿ
ಚಕ್ರವರ್ತಿಗೆ ನೂರಿರವುಂದಿ ಗಂಡುಮಕ್ಕಳಿದ್ದರು. ಅವರಲ್ಲಿ ಬಾಣಾ
ಸುರನೆಂಬುವನೇ ಹಿರಿಯವನು. ಎಲೈ ಬ್ರಾಹ್ಮಣೋತ್ತಮನೆ; ಇನ್ನು
ಹಿರಣ್ಯಾಕ್ಷನ ವಂಶವನ್ನು ವಿವರಿಸುವೆನು. ಹಿರಣ್ಯಾಕ್ಷನಿಗೆ ಮಹಾಪ
ರಾಕ್ರಮಶಾಲಿಗಳೆನಿಸಿದ ಋುರ್ಋುರ, ಶಕುನಿ, ಭೂತಸಂತಾಪನ, ಮಹಾ
ನಾಭ, ಮಹಾಬಾಹು, ಕಾಲನಾಭನೆಂಬ, ಆರು ಮಂದಿ ಪುತ್ರರಿ
ದ್ದರು ॥೨॥ ೩॥ ಇಂತು ಅದಿತಿ, ದಿತಿಗಳ ವಂಶಾವಳಿಯನ್ನು ಹೇಳಿ
ಯಾಯಿತು. ಇನ್ನು ಕಾಶ್ಯಪನ ಮೂರನೆಯ ಹೆಂಡತಿಯಾದ "ದನು"
ಎಂಬುವಳ ವಂಶಾವಳಿಯನ್ನು ಹೇಳುವೆನು. ದಕ್ಷಪುತ್ರಿಯಾದ ದನು,

ಕಂಬರಸ್ತಥಾ । ಅಯೋಮುಖ ಶ್ಚಂಕುಶಿರಾಃ ಕಪಿಲ ಶ್ಚಂಕರ
ಸ್ತಥಾ ॥೪॥ ಏಕವಕ್ತ್ರೋ ಮಹಾಬಾಹು ಸ್ತಾರಕಶ್ಚ ಮಹಾ
ಬಲಃ । ಸ್ವಭಾನು ರ್ವೃಷಪರ್ವಾಚ ಪುಲೋಮಾಚ ಮಹಾ
ಸ್ವನಃ ॥೫॥ ಏತೇದನುಸುತಾಃ ಖ್ಯಾತಾ ವಿಪ್ರಚಿತ್ತೇಶ್ಚ ವೀರ್ಯ
ವಾನ್ ॥೬॥ ಸ್ವಭಾನೋಸ್ತು ಪ್ರಭಾ ಕನ್ಯಾ ಶರ್ಮಿಷ್ಠಾ ವೃ
ಷಪರ್ವಣೋ । ಉಪದಾನವೀ ಹಯಶಿರಾಃ ಪ್ರಖ್ಯಾತಾವರ
ಕನ್ಯಕಾಃ ॥೭॥ ವೈಶ್ವಾನರ ಸುತೇ ಚೋಭೇ ಪುಲೋಮಾ
ಕಾಲಕಾ ತಥಾ । ಉಭೇ ತತ್ರ ಮಹಾಭಾಗೇ ಮಾರೀಚೇಸ್ತು
ಪರಿಗ್ರಹಃ ॥೮॥ ತಾಭ್ಯಾಂ ಪುತ್ರಸಹಸ್ರಾಣಿ ಷಷ್ಟಿರ್ದಾನವ
ಸತ್ತಮಾಃ । ಪೌಲೋಮಾಃ ಕಾಲಕೇಯಾಶ್ಚ ಮಾರೀಚೆ ತನ
ಯಾ ಸ್ಮೃತಾಃ ॥೯॥ ತತೋಽಪರೇ ಮಹಾವೀರ್ಯಾ ದಾರು
ಣಾಸ್ತ್ವತಿ ನಿಷ್ಠುರಾಃ । ಸಿಂಹಿಕಾಯಾ ಮಥೋತ್ಪನ್ನಾ ವಿ
ಪ್ರಚಿತ್ತೇ ಸ್ಸುತಾ ಸ್ತಥಾ ॥೧೦॥ ತ್ವಷ್ಟ್ರಂಶ ಶ್ಚಲ್ಯಶ ಬಲವಾ ನ

ಎಂಬವಳಿಗೆ ದ್ವಿಮೂರ್ಧ, ಶಂಬರ, ಅಯೋಮುಖ, ಶಂಕುಶಿರಸ್ಸು
ಕಪಿಲ, ಶಂಕರ, ಏಕವಕ್ತ್ರ, ಮಹಾಬಾಹು, ತಾರಕ, ಸ್ವಭಾನು, ವೃ
ಷಪರ್ವ, ಪುಲೋಮ, ಮಹಾಸ್ವನ, ಪರಾಕ್ರಮಶಾಲಿಎನಿಸಿದ ವಿಪ್ರ
ಚಿತ್ತಿಗಳೆಂಬ ಅನೇಕಮಂದಿ ಪುತ್ರರಿದ್ದರು ॥೪॥ ೫॥ ೬॥ ಸ್ವಭಾ
ನುವಿಗೆ ಪ್ರಭೆ, ಎಂಬೊಬ್ಬ ಹೆಣ್ಣುಮಗಳು ಜನಿಸಿದಳು. ವೃಷಪ
ರ್ವನಿಗೆ ಶರ್ಮಿಷ್ಠೆ, ಉಪದಾನವೀ, ಹಯಶಿರಸ್ಸುಗಳೆಂಬ ಮೂವರು
ಕನ್ಯಾ ರತ್ನಗಳಿದ್ದರು. ॥೭॥ ವೈಶ್ವಾನರನೆಂಬುವನಿಗೆ ಪುಲೋಮೆ, ಕಾ
ಲಕೆಗಳೆಂಬ ಇಬ್ಬರು ಹೆಣ್ಣುಮಕ್ಕಳಾದರು. ಇವರಿಬ್ಬರನ್ನೂ, ಮಾ
ರೀಚಿಯು ಮದುವೆಯಾದನು ॥೮॥ ಇವರೀರ್ವರೂ, ಪೌಲೋಮರೆಂತ
ಲೂ, ಕಾಲಕೇಯರೆಂತಲೂ, ಪ್ರಸಿದ್ಧರಾದ ಅರವತ್ತುಸಾವಿರಮಂದಿ
ಮಕ್ಕಳಂ ಪೆತ್ತರು ಈ ಅರವತ್ತು ಸಾವಿರಮಂದಿ ದಾನವಶ್ರೇಷ್ಠರೂ
ಮಾರೀಚಿಯ ಮಕ್ಕಳು ॥೯॥ ಆ ಬಳಿಕ ವಿಪ್ರಚಿತ್ತಿಯ ಹೆಂಡಿರಾದ
ಸಿಂಹಿಕೆಯು ಮಹಾಬಲಶಾಲಿಗಳೂ, ಹಿಂಸಕರೂ, ದಯಾಶೂನ್ಯರೂ
ಎನಿಸಿದ ತ್ವಷ್ಟ್ರಂಶ, ಶಲ್ಯ, ನಭ, ವಾತಾಪಿ, ನಮುಚಿ, ಇಲ್ವಲ

ಭಶ್ಚೈವ ಮಹಾಬಲಃ । ವಾತಾಪಿ ರ್ನಮುಚಿಶ್ಚೈವ ಇಲ್ವಲಃ
ಖಸೃಮಸ್ತಥಾ ॥೧೧॥ ಅಂಧಕೋನರಕಶ್ಚೈವ ಕಾಲನಾಭ
ಸ್ತಥೈವಚ। ಸ್ವರ್ಭಾನುಶ್ಚ ಮಹಾವೀರ್ಯೋ ವಕ್ತ್ರಯೋಧೀ ಮ
ಹಾಸುರಃ ॥೧೩॥ ಏತೇ ವೈ ದಾನವಶ್ರೇಷ್ಠಾ ದನು-ವಂಶ ವಿವ
ರ್ಧನಾಃ । ಏತೇಷಾಂ ಪುತ್ರ ಪೌತ್ರಾಶ್ಚ ಶತಕೋಥ ಸಹಸ್ರಶಃ ॥
ಪ್ರಹ್ಲಾದಸ್ಯತು ದೈತ್ಯಸ್ಯ ನಿವಾತ ಕವಚಾಃ ಕುಲೇ । ಸಮು
ತ್ಪನ್ನಾ ಸ್ಸುಮಹತಾ ತಪಸಾ ಭಾವಿತಾತ್ಮನಃ ॥ ೧೪ ॥ ಷಟ್ಸು
ತಾ ಸ್ಸುಮಹಾ ಸತ್ವಾ ಸ್ತ್ರಯಾಣಾಂ ಪರಿಕೀರ್ತಿತಾಃ । ಶು
ಕೀ ಶ್ಯೇನೀಚ ಭಾಸೀಚ ಸುಗ್ರೀವೀ ಶುಚಿಗೃಧ್ರಕಾಃ ॥೧೫॥
ಶುಕೀತು ಜನಯಾಮಾಸ ಉಲೂಕ ಪ್ರತ್ಯುಲೂಕಕಾ । ।
ಶ್ಯೇನಾಂ ಸ್ತಥಾ ಭಾಸಾಶ್ಚ ಭಾಸೀ ಗೃಧ್ರಾಂಶ್ಚ ಗೃಧ್ರಕೀ ॥

ಖಸೃಮ, ಆಂಧಕ, ನರಕಾಸುರ, ಕಾಲನಾಭ, ಸ್ವರ್ಭಾನು, (ರಾಹು) ವಕ್ತ್ರಯೋಧಿಗಳೆಂಬ ಬಹುವಂದಿ ಗಂಡುಮಕ್ಕಳನ್ನ ಹೆತ್ತಳು. ಇ ವರೆಲ್ಲರೂ, ದನುವಂಶದಲ್ಲಿ ಉತ್ತಮರೆನಿಸಿ ಅನುದಿನವೂ, ತಮ್ಮ ವಂಶ ವನ್ನು ಅಭಿವೃದ್ಧಿಗೊಳಿಸುತ್ತಿದ್ದರು ; ಇವರೆಲ್ಲರಿಗೂ ಸಾವಿರಾರುಮಂದಿ ಮಕ್ಕಳೂ, ಮೊಮ್ಮಕ್ಕಳೂ ಹುಟ್ಟಿದರು, ॥೧೦॥ ೧೧॥೧೩॥ ೧೪॥ ದಿತಿ ವಂಶ ಸಂಭೂತನೂ, ಮಹಾತಪಸ್ಸಂಪನ್ನನೂ, ಆತ್ಮಜ್ಞಾನಿಯೂ ಎ ನಿಸಿದ, ಪ್ರಹ್ಲಾದನ ವಂಶದಲ್ಲಿ ನಿವಾತಕವಚರೆಂಬ ರಾಕ್ಷಸರುಜ ನಿಸಿದರು ॥೧೪॥ ಬಳಿಕ ಕಾಶ್ಯಪನಿಯ ನಾಲ್ಕನೆಯಹೆಂಡತಿಯಾ ದ "ತಾಮ್ರಾ" ಎಂಬಾಕೆಯು ಮಹಾಬಲಶಾಲಿಗಳೆನಿಸಿದ ಶುಕೀ, ಶ್ಯೇನಿ, ಭಾಸೀ, ಸುಗ್ರೀವೀ, ಶುಚಿ, ಗೃಧ್ರಕೆ ಎಂಬಆರುಮಂದಿ ಹೆಣ್ಣು ಮಕ್ಕಳಂಪಡೆದಳು ॥೧೫॥ ಆ ಆರುಮಂದಿಯಲ್ಲಿ ಶುಕಿಯು ಗೂಗೆಗ ಳನ್ನೂ, ಆ ಗೂಗೆಗಳಿಗೆ ಶತ್ರುಗಳೆನಿಸಿದ ಇತರ ಪಕ್ಷಿಗಳನ್ನೂ ಜನಿ ಸಿದಳು. ಶ್ಯೇನೀ ಎಂಬುವಳು ಗಿಡಗಗಳನ್ನೂ, ಭಾಸೀ ಎಂಬುವಳು ಭಾ ಸರನ್ನೂ, ಗೃಧ್ರಕೀ ಎಂಬುವಳು ಹದ್ದುಗಳನ್ನೂ, ಮಕ್ಕಳಾಗಿಪ ಡೆದರು ॥೧೬॥ ಶುಚಿ ಎಂಬುವಳು ನಾನಾಜಗೆಗಳಾದ ಜಲಚರ ಪ ಕ್ಷಿಗಳನ್ನು ಹೆತ್ತಳು. ಸುಗ್ರೀವಿಯು ಕೆದರೆ, ಒಂಟೆ, ಕತ್ತೆಗಳನ್ನು

ಶುಚ್ಯಾದಿಕಾಶ್ಚ ಪಕ್ಷಿಗಣಾಶ್ಚ ಸುಗ್ರೀವೀತು ವ್ಯಜಾಯತ ।
ಅಶ್ವಾನುಷ್ಟ್ರಖರ್ಗದಭಾಂಶ್ಚ ತಾಮ್ರಾವಂಶಃ ಪ್ರಕೀರ್ತಿತಃ ॥
ವಿನತಾಯಾಶ್ಚ ಪುತ್ರೌ ದ್ವೌ ವಿಖ್ಯಾತೌ ಗರುಡಾರುಣೌ ।
ಸುಪರ್ಣಃ ಪತತಾಂ ಶ್ರೇಷ್ಠೋ ದಾರುಣಃ ಪನ್ನಗಾಶನಃ ॥೧೪॥
ಸುರಸಾಯಾಂ ಸಹಸ್ರಂತು ಸರ್ಪಾಣಾಮಮಿತೌಜಸಾಂ । ಅ
ನೇಕಶಿರಸಾಂ ಬ್ರಹ್ಮನ್ ! ಶ್ರೇಷ್ಠರಾಣಾಂ ಮಹಾತ್ಮನಾಂ ॥೧೫॥
ಕಾದ್ರವೇಯಾಸ್ತು ಬಲಿನ ಸ್ಸಪರ್ಪ ಮಮಿತೌಜಸಃ । ಸುಪ
ರ್ಣವಶಗಾಬ್ರಹ್ಮನ್ ಜಜ್ಞಿರೇನೈಕಮುಷ್ಣಕಂ ॥ ೧೦ ॥

ಉಂಟುಮಾಡಿದಳು. ಇಂತು ಕಾಶ್ಯಪನ ನಾಲ್ಕನೆಯ ಹೆಂಡಿರಾದ ತಾಮ್ರಾ ಎಂಬದಾಗಿ ಪೆಸರ್ಗೊಂಡ, ದಕ್ಷಪುತ್ರಿಯ ವಂಶವನ್ನು ವಿವರಿಸಿದುದಾಯಿತು. ॥೧೩॥ ಇನ್ನು ಮುಂದೆ ವಿನತೆ, ಸುರಸೆಯೊದಲಾದವರ ವಂಶಾವಳಿಯಂ ಬಣ್ಣಿಸುವೆನು ಕೇಳು:— ತರುವಾಯ ದಕ್ಷಪುತ್ರಿಯಾದ ವಿನತೆಯು ಲೋಕಪ್ರಸಿದ್ಧರಾದ ಗರುಡ, ಅರುಣರೆಂಬ ಈರ್ವರು ತನಯರಂ ಪೆತ್ತಳು. ಆ ಈರ್ವರಲ್ಲಿ ಗರುಡನು ಪಕ್ಷಿರಾಜನೆನಿಸಿ, ಮಹಾವೇಗಸಂಪನ್ನನಾಗಿ ಅನುದಿನವೂ ಸರ್ಪಗಳನ್ನೇ ಭುಜಿಸುತ್ತಾ ಸರ್ಪಗಳಿಗೆಲ್ಲಾ ಶತ್ರುವಾಗಿದ್ದನು ॥೧೪॥ ಆ ಬಳಿಕ ಸುರಸೆ ಎಂಬ ಮತ್ತೊಬ್ಬ ದಕ್ಷಕನ್ಯೆಯಲ್ಲಿ ಮಹಾತೇಜಸ್ಸಂಪನ್ನಗಳೆನಿಸಿ, ನೂರಾರುಕಲೆಗಳಿಂದೊಡಗೂಡಿ, ಆಕಾಶದಲ್ಲಿಯೂ ಕೂಡ ಸಂಚರಿಸುವಂತಹ ಶಕ್ತಿಯುಳ್ಳ ಸಾವಿರಾರು ಸರ್ಪಗಳು ಜನಿಸಿದುವು. ॥೧೫॥ ಅಂತೆಯೇ ಮತ್ತೋರ್ವಳಾದ ಕದ್ರೂ ಎಂಬ ದಕ್ಷಪುತ್ರಿಯು ಮಹಾಬಲಶಾಲಿಗಳೂ ವಿಶೇಷ ಪರಾಕ್ರಮಸಂಪನ್ನರೂ, ಅನೇಕ ಹೆಡೆಗಳುಳ್ಳವೂ, ಎನಿಸಿದ ಸಾವಿರಾರು ಮಂದಿ ಮಕ್ಕಳಂಪಡೆದಳು ಇವರಿಗೆಲ್ಲಾ ಕಾದ್ರವೇಯರೆಂದು ಹೆಸರು. (ಸರ್ಪವಿಶೇಷಗಳೆಂದರ್ಥ) ಈ ಕದ್ರುವಿನ ಮಕ್ಕಳೆಲ್ಲರೂ ಗರುಡನಿಗೆ ತುಂಬಾವಿಧೇಯರೆನಿಸಿದ್ದರು ॥೧೦॥ ಎಲೈ ವೈತ್ರೇಯನೆ; ಸುರಸೆಯ ಮಕ್ಕಳಿಂದಲೂ, ಕದ್ರುವಿನ ಮಕ್ಕಳಿಂದಲೂ ನಿನಗೆಂದಿಗೂ ಭಯವಿಲ್ಲದಿರಲಿ; ಈ ಕಾದ್ರವೇಯರಲ್ಲಿ ಶೇಷ, ವಾಸುಕಿ, ತಕ್ಷಕ, ಶಂಖ, ಶ್ವೇತ, ಮಹಾಪದ್ಮ, ಕಂಬಳ, ಅಶ್ವತರ, ಏಲಾಪುತ್ರ,

ತೇಷಾಂ ಪ್ರಧಾನಾ ಭವ್ಯಾತೇ ಶೇಷ ವಾಸುಕಿ ತಕ್ಷಕಾಃ । ಶಂಖ
ಶ್ವೇತೌ ಮಹಾಪದ್ಮಃ ಕಂಬಲಾಶ್ವತರಾವುಭೌ ॥೨೧॥ ಏಲಾಪು
ತ್ರಸ್ತಥಾ ಕರ್ಣಃ ಕಾರ್ಕೋಟಕ ಧನಂಜಯೌ । ಏತೇ ಚಾನ್ಯೇ
ಚ ಬಹವೋದಂದಶೂಕಾ ವಿಷೋಲ್ಬಣಾಃ ॥೨೨॥ ಗಣಂ ಕ್ರೋ
ಧವಶಂ ವಿದ್ಧಿ ತೇಚ ಸರ್ವೇ ವಿದಂ ಷ್ಟ್ರಿಣಃ । ಜಲಜಾಃ ಪಕ್ಷಿ
ಣೋ ೨ ಬ್ಜಾಶ್ಚ ದಾರುಣಾಃ ಪಿಶಿತಾಶನಾಃ ॥೨೩॥ ಗಾಸ್ತು ವೈ
ಜನಯಾಮಾಸ ಸುರಭಿ ರ್ಮಹಿಷೀ ಸ್ತಥಾ । ಇಲಾ ವೃಕ್ಷಲತಾ
ವಲ್ಲೀ ತೃಣ ಜಾತೀಶ್ಚ ಸರ್ವಶಃ ॥೨೪॥ ಕಪಾತು ಯಕ್ಷ ರ
ಕ್ಷಾಂಸಿ ಮುನಿರಪ್ಸರಸಸ್ತಥಾ । ಅರಿಷ್ಟಾತು ಮಹಾಸತ್ವಾ ಗಂ
ಧರ್ವಾ ವೈ ವ್ಯಜೀಜನಂ ॥೨೫॥ ಏತೇ ಕಾಶ್ಯಪದಾಯಾ

ಕರ್ಣ, ಕಾರ್ಕೋಟಕ, ಧನಂಜಯ, ಇವರೆಲ್ಲರೂ ಬಹಳಪ್ರಮುಖರೆನಿಸಿದವರು. ಇನ್ನು ಮಿಕ್ಕವರೆಲ್ಲರೂ ಭಯಂಕರವಾದ ವಿಷಯುಕ್ತರೆನಿಸಿ, ಕ್ರೂರಗಳೆನಿಸಿದ ಕೋರೆಹಲ್ಲುಗಳಿಂದೊಡಗೂಡಿ ಮಹಾಭಯಂಕರರಾಗಿದ್ದರು. ॥೨೦॥೨೨॥ ಇಂತು ಕದ್ರುವಿನ ವಂಶಾವಳಿಯನ್ನೂ ಸುರಸೆಯ ವಂಶಾವಳಿಯನ್ನೂ ಹೇಳಿಯಾಯಿತು. ಇನ್ನು ಕ್ರೋಧವಶೆ ಮೊದಲಾದವರ ವಂಶಾವಳಿಯನ್ನು ಹೇಳತೊಡಗುವೆನು ಜಲದಲ್ಲಿ ಸಂಚರಿಸುತ್ತಾ ಉದಕದಲ್ಲಿಯೇ ಹುಟ್ಟಿ, ಅಲ್ಲಿಯೇ ವಾಸಮಾಡತಕ್ಕ ಮೀನು ಮೊದಲಾದ ಪ್ರಾಣಿಗಳೂ, ಕೊಕ್ಕರೆ ಮೊದಲಾದ ಜಲಪಕ್ಷಿಗಳೂ, ಭಯಂಕರಗಳೂ ಮಾಂಸಾಹಾರಿಪಕ್ಷಿಗಳೂ ಕೂಡ ಕ್ರೋಧವಶೆ ಎಂಬ ದಕ್ಷಕನ್ಯೆಯ ವಂಶಕ್ಕೆ ಸೇರಿದುವು ॥೨೩॥ ಗೋವುಗಳೂ, ಎಮ್ಮೆಗಳೂ ಕೂಡ ಸುರಭಿಎನಿಸುವ ದಕ್ಷಪುತ್ರಿಯಿಂದ ಜನಿಸಿದುವು. ಇಲಾ ಎಂಬ ದಕ್ಷಪುತ್ರಿಯಲ್ಲಿ ಮರಗಳು, ಗಿಡಗಳು, ಬಳ್ಳಿಗಳು, ಲತೆಗಳು ಇನ್ನೂ ಇತರ ಬಗೆಗಳಾದ ಹುಲ್ಲು ಜಾತಿಗಳೆಲ್ಲವೂ ಜನಿಸಿದುವು. ॥೨೪॥ ತೆರುವಾಯ ಕಪೆಯೆಂಬೋರ್ವ ದಕ್ಷಪುತ್ರಿಯು ಯಕ್ಷರನ್ನೂ, ರಾಕ್ಷಸರನ್ನೂ ಹೆತ್ತಳು. ಮುನಿ ಎಂಬ ಹೆಸರುಳ್ಳ ದಕ್ಷಕನ್ಯೆಯು ಅಪ್ಸರಸ್ತ್ರೀಯರನ್ನು ಹಡೆದಳು. ಅರಿಷ್ಟೆ ಎಂಬವಳಲ್ಲಿ ಮಹಾ ಬಲಶಾಲಿಗಳೆನಿಸಿದ ಗಂಧರ್ವರೆಂಬ ದೈವಯೋನಿವಿಶೇಷಕ್ಕೆ ಸೇರಿದವರು ಹುಟ್ಟಿ

ದಾಃ ಕೀರ್ತಿತಾ ಸಾಧ್ಯಾಣು ಜಂಗಮಾಃ । ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಥಸಹಸ್ರಶಃ ॥೨೬॥ ಏಷ ಮನ್ವಂತರೇ ಸ ರ್ಗೋ ಬ್ರಹ್ಮಣ! ಸ್ವಾ ರೋಚಿಷೇ ಸ್ಮೃತಃ॥೨೭॥ವೈವಸ್ವತೇ ಚ ಮಹತಿ ವಾರುಣೇ ವಿತತೇ ಕ್ರತೌ । ಜುಹ್ವಾನಸ್ಯ ಬ್ರ ಹ್ಮಣೋ ವೈ ಪ್ರಜಾಸರ್ಗ ಇಹೋಚ್ಯತೇ ॥೨೮॥ ಪೂರ್ವಂ ಯತ್ರತು ಸಪ್ತರ್ಷೀ ನುತ್ಪನ್ನಾ ನೇವ ಮಾನವಾ । ಪುತ್ರ ತ್ವೇ ಕಲ್ಪಯಾ ಮಾಸ ಸ್ವಯಮೇವ ಪಿತಾಮಹಃ ಗಂಧರ್ವ

ದರು ॥೨೫॥ ಇಂತು ಅದಿತಿ, ದಿತಿ, ದನು, ತಾಮ್ರಾ, ವಿನತಾ, ಸುರಸಾ, ಕದ್ರು, ಕ್ರೋಧವಶಾ, ಸುರಭಿ, ಇಲಾ, ಕಷಾ, ಮುನಿ ಅರಿಷ್ಟಾ, ಎಂಬ ಹದಿಮೂರುಮಂದಿ ಕಾಶ್ಯಪನ ಹೆಂಡತಿಯರ ವಂ ಶಾವಳಿಯನ್ನು ವಿವರಿಸಿದೆನು. ಇಂತ ಚರಾಚರ ರೂಪದಿಂದಿರುವ ಈ ಹಿಂದೆ ಹೇಳಿದುವೆಲ್ಲವೂ ಕಾಶ್ಯಪನ ವಂಶಕ್ಕೆ ಸೇರಿದುವು ಇವ ರೆಲ್ಲರಿಗೂ ಸಂವಿಧಾರುಮಂದಿ ಮಕ್ಕಳು, ಮುಮ್ಮಕ್ಕಳಿರುವರು. ಈ ಗಲೂ ಲೋಕದಲ್ಲಿರುವ ಪ್ರಾಣಿ ಳೆಲ್ಲವೂ ಇವರ ವಂಶಕ್ಕೆ ಸೇರಿದ ವುಗಳೇ ಆಗಿರುವುವು ॥೨೬॥ ಎಲೈ ದ್ವಿಜವರ್ಯನೆನಿಸಿದ ಮೈತ್ರೇಯ ನೆ; ಇದುವರೆಗೂ ನಾನುಹೇಳಿದ ಸೃಷ್ಟಿಯೆಲ್ಲವೂ ಹಿಂದೆಕಳೆದುಹೋ ದ ಸ್ವಾರೋಚಿಷವೆಂಬ ಮನ್ವಂತರಕ್ಕೆ ಸೇರಿದುದು. ॥೨೭॥ ಈಗ ನಡೆಯುತಿರುವ ವೈವಸ್ವತಮನ್ವಂತರವು ಆರಂಭವಾದಕೂಡಲೇ ವರು ಣನು ಬಂದು ದೊಡ್ಡಯಜ್ಞವನ್ನಾರಂಭಿಸಿದನು. ಆ ಯಾಗದಲ್ಲಿ ಚತು ರ್ಮುಖನು ಹೋತೃಮಾಡತಕ್ಕ ಅಧಿಕಾರದಲ್ಲಿ ನಿಯಮಿತನಾಗಿದ್ದನು ಆ ಕಾಲದಲ್ಲಿ ಬ್ರಹ್ಮನು ಸೃಷ್ಟಿಮಾಡಿದ ರೀತಿಯು ಬೇರೆ ವಿಧವಾಗಿರುವುದು. ಅದನ್ನೂ ಕೂಡ ನಿನಗೆ ತಿಳಿಯುವೆನು ಕೇಳು ॥೨೮॥ ಸರ್ವಲೋಕಗ ಳಿಗೂ ಪಿತಾಮಹ (ತಾತ) ನೆನಿಸಿದ ಚತುರ್ಮುಖನು ವೈವಸ್ವತಮನ್ವಂ ತರದಲ್ಲಿ ತಾನು ವರುಣನ ಯಜ್ಞದ ತೊಂದರೆಯಲ್ಲಿದ್ದುದರಿಂದ ಹಿಂದೆ ಕಳೆದ ಸ್ವಾರೋಚಿಷ ಮನ್ವಂತರದಲ್ಲಿ ಪ್ರಜಾಸೃಷ್ಟ್ಯರ್ಥವಾಗಿ ನಿಯಮಿಸಿ ದ್ದ ಸಪ್ತರ್ಷಿಗಳು, ಗಂಧರ್ವರು, ಮನುಷ್ಯರು ಮೊದಲಾದವರನ್ನೆಲ್ಲಾ ತನ್ನಮಕ್ಕಳಂತೆ ಭಾವಿಸಿ, ಲೋಕದಲ್ಲಿ ತಾನುಮಾಡತಕ್ಕ ಪ್ರಜಾಸೃಷ್ಟಿ

ಭೋಗಿ ದೇವತಾನಾಂ ದಾನವಾನಾಂಚ ಸಕ್ತನು ॥೬೯॥ ದಿತಿರ್ವಿ
ನಷ್ಟಪುತ್ರಾನ್ವೈ ತೋಷಯಾಮಾಸ ಕಾಶ್ಯಪಂ । ತಯಾ ಚಾರಾ
ಧಿತ ಸ್ತಾಮ್ಯ ಕಾಶ್ಯಪಸ್ತಪತಾಂ ವರಃ ॥೭೦॥ ವರೇಣ ಛಂದ
ಯಾಮಾಸ ಸಾಚ ವವ್ರೇ ತತೋವರಂ। ಪುತ್ರಮಿಂದ್ರ ವಧಾರ್ಥಾ
ಯ ಸನುರ್ಥ ಮಮಿತೌಜಸಂ ॥೭೧॥ ಸಚ ತಸ್ಯೈವ

ರೂಪವಾದ ಕಾರ್ಯವನ್ನೆಲ್ಲಾ ಅವರೇ ನೆರವೇರಿಸುವಂತೆ ಗೊತ್ತುಮಾಡಿ
ದನು. ಇಂತು ಬ್ರಹ್ಮನ ನಿಯಮಾನುಕೂಲಂತೆ ಸಪ್ತರ್ಷಿಗಳೇ ಮೊದಲಾದ
ವರೆಲ್ಲರೂ ಸಪ್ತ[illegible]ಗಳು, ದೇವತೆಗಳು, ದಾನವರು, ಮೊದಲಾದವರನ್ನೆಲ್ಲಾ
ಉಂಟು ಮಾಡಿದರು. (ಸ್ವಾರೋಚಿಷ ಮನ್ವಂತರದಲ್ಲಿ ಕಾಶ್ಯಪನೇ
ಮೊದಲಾದವನು ಪ್ರಜಾಸರ್ಗಾಧಿಕಾರವಂ ಬ್ರಹ್ಮನ ಅನುಮತಿಯಂತೆ
ನೆರವೇರಿಸುತ್ತಾ ದೇವತೆಗಳ, ದೈತ್ಯರು, ದಾನವರು, ಮೊದಲಾದವರ
ನ್ನು ಉಂಟುಮಾಡಿದರು ಈ ಮನ್ವಂತರದಲ್ಲಿ ಎಲ್ಲರೂ ಸಪ್ತರ್ಷಿಗ
ಳಿಂದ ಜನಿಸಿದರೆಂದು ಮುಖ್ಯಾರ್ಥವು) ॥ ೬೯ ॥ (ಇಂತು ಪ
ರಾಶರಮಹರ್ಷಿಯು, ಸ್ವಾರೋಚಿಷ ಮನ್ವಂತರದಲ್ಲಿ ನಡೆದ ಸಮಾಚಾರ
ವನ್ನೆಲ್ಲಾ ಮೈತ್ರೇಯಮುನಿಗೆ ತಿಳುಹಿದ ಬಳಿಕ ಈ ವೈವಸ್ವತಮನ್ವಂತರದ
ಲ್ಲಿ ದೇವತೆಗಳೂ ಕೂಡ, ದಿತಿಯಿಂದಲೇ ಜನಿಸಿದರೆಂದು ಹೇಳುವುದಕ್ಕೆ
ಪ್ರಾರಂಭಿಸಿ ಅದಕ್ಕೆ ಮೊದಲು ಬಂದು ಕಥೆಯನ್ನುಹೇಳುತ್ತಾನೆ—)ಅದಿ
ತಿಯಲ್ಲಿ ಜನಿಸಿದ, ತ್ರಿಲೋಕಾಧಿಪನಾದ ಇಂದ್ರನು ದಿತಿಯಮಕ್ಕಳನ್ನು
ಕೊಂದುಹಾಕಿದನು. ಇಂತು ಮಕ್ಕಳನ್ನು ಕಳೆದುಕೊಂಡ ದಿತಿಯು ವಿಶೇ
ಷವಾಗಿ ಭಕ್ತಿಮೊದಲಾದವುಗಳಿಂದ ತನ್ನ ಪತಿಯಾದ ಕಾಶ್ಯಪಮುನಿಯ
ನ್ನಾರಾಧಿಸಿ ಆತನಿಗೆ ಸಂತೋಷವನ್ನುಂಟುಮಾಡಿದಳು. ಇಂತು ದಿತಿದೇ
ವಿಯು ಶುಶ್ರೂಷಾದಿಗಳಿಗೆ ವಿಶೇಷವಾಗಿ ವೆಚ್ಚಿ ಆ ಬಳಿಕ ತಪಸ್ಸ್ವಾರ್ಯ
ನೆನಿಸಿದ ಕಾಶ್ಯಪಮುನಿಯು ತನ್ನ ಪತಿವ್ರತೆಯಾಂ ಕುರಿತು ‘ಎಲೈ ಪ್ರಿಯ
ಳೆ; ನಿನ್ನ ಪರಿಚರ್ಯೆಯಿಂದ ನಾನು ವಿಶೇಷವಾಗಿ ಸಂತೋಷಗೊಂಡಿರು
ವೆನು. ನಿನಗೆ ಬೇಕಾದ ವರವಂ ಕೇಳು ; ಕೊಡುವೆನು’ ಎಂಬುದಾಗಿ
ಹೇಳಿದನು. ಈ ಮಾತನ್ನು ಕೇಳಿದೊಡನೆಯೇ ಆ ದಿತಿಯು ಪರಮಾ
ನಂದ ಭರಿತಳಾಗಿ ‘ಓ ಪತಿಯೇ; ಮಹಾಪರಾಕ್ರಮಿಯೂ, ಧೀರನೂ,

ರಂಪಶ್ಯದಾ ದ್ಭುತಾರ್ಥಾಯೈ ವಸಿಸತ್ತಮಃ । ದತ್ವಾಚ ವರ
ಮವ್ಯಗ್ರಃ ಕಾಶ್ಯಪಸ್ತಾ ಮುವಾಚಹ ॥ ೬೨ ॥ ಶಕ್ರಂ ಪು

ಇಂದ್ರನನ್ನು ಕೊಲ್ಲುವಂತಹ ಶಕ್ತಿಸಾಮರ್ಥ್ಯವನ್ನೂ ಎನಿಸಿದ ಒಬ್ಬ ಮಗನು ನನಿಗೆ ಜನಿಸುವಂತೆ ಅನುಗ್ರಹಿಸು, ಎಂಬದಾಗಿ ಬೇಡಿಕೊಂಡಳು ॥ ೬೦-೬೧ ॥ ಇಂತು ಮುನಿವರ್ಯನೆನಿಸಿದ ಆಕಾಶ್ಯಪನು ದಿತಿದೇವಿಯು ಇಷ್ಟಾನುಸಾರ ಆಕೆಗೆ ವರವನು ದಯಪಾಲಿಸಿ, ತರುವಾಯು ತನ್ನ ಪ್ರೇಯಸಿಯಂ ಕುರಿತು ಎಲೈ ದಿತಿಯೇ, ನೀನು ಅನವರತವೂ ವಿಕಚೆತ್ತತೆಯಿಂದವಿಷ್ಣುವನ್ನೇ ಧ್ಯಾನಮಾಡುತಾ, ಜಾಗರೂಕತೆಯಿಂದ ಶೌಚಾಚಾರಗಳನ್ನು ಸರಿಯಾಗಿಟ್ಟುಕೊಂಡು ಈ ಗರ್ಭವಂ ನೂರು ವರ್ಷಕಾಲ ಪರ್ಯಂತರ ಧರಿಸಿಕೊಂಡಿರುವೆಯಾದೊಡೆ ನೂರುಸಂವತ್ಸರಗಳು ಮುಗಿಯುವ ವೇಳೆಗೆ ನಿನಗೊಬ್ಬ ಮಗನು ಹುಟ್ಟುವನು. ಆತನು ದಿಟವಾಗಿಯೂ ಇಂದ್ರನನ್ನು ಕೊಲ್ಲಲು ತಕ್ಕ ಸಾಮರ್ಥ್ಯವುಳ್ಳವನಾಗುವನು. ಆದಕಾರಣ ಈ ಗರ್ಭವನ್ನು ತುಂಬಾ ಜಾಗರೂಕತೆಯಿಂದ ಕಾಪಾಡಿಕೊಂಡಿರು, ಎಂಬುದಾಗಿ ಹೇಳಿ ಆ ಕಾಶ್ಯಪಮುನಿಯು ಅಲ್ಲಿಂದ ತೆರಳಿದನು. ಆ ಬಳಿಕ ಈಕೆಯೂ ಕೂಡ ಆತನ ಮಾತಿನಂತೆಯೇ ಗರ್ಭವನ್ನು ಬಹಳ ಜಾಗರೂಕತೆಯಿಂದ ಸಂರಕ್ಷಿಸುತ್ತಾ ಶೌಚಾಚಾರಗಳಿಂದೊಡಗೂಡಿದ್ದಳು. [ಕಾಶ್ಯಪಮುನಿಯು ದಿತಿಗೆ ಬೋಧಿಸಿದ ನಡವಳಿಗಳಾವುವೆಂದರೆ—ಎಲೈದಿತಿಯೆ, ನೀನುಗರ್ಭಧಾರಣ ಮಾಡಿರುವ ಪರ್ಯಂತವು ಸಂಧ್ಯಾಕಾಲಗಳಲ್ಲಿ ಭೋಜನಮಾಡಬಾರದು, ಯಾವಾಗಲೂ ನಿಂತಿರಬಾರದು, ಗಿಡಬಳ್ಳಿಗಳ ಸವಿಾಪಕ್ಕೆ ಹೋಗಬಾರದು. ಲೋಕದಲ್ಲಿ ಯಾರೊಡನೆಯೂ ಜಗಳವಾಡಬಾರದು, ವಿಶೇಷವಾಗಿ ಮೈಯನ್ನು ಕುಲುಕಬಾರದು, ಎಲೈ ಮುಗ್ಧಳಾಗಿಯೆ, ನೀನು ಎಂದೆಂದಿಗೂ ನಿನ್ನ ತಲೆಗೂದಲನ್ನು ಬಿರಿಯುಯಿದು ಕೊಂಡಿರಬೇಡ, ಆ ಆ ಕಾಲಗಳಲ್ಲಿ ಶಾಸ್ತ್ರೋಕ್ತವಾಗಿ ಶೌಚಗಳನ್ನು ನೆರವೇರಿಸುತ್ತಿರು, ನಿನ್ನ ನಡವಳಿಯು ಸರಿಯಾಗಿರಲಿ ಯಾವುದೆಂದು ಪ್ರಾಣಿಗೂ ಸ್ವಲ್ಪವಾದರೂ ಮನಸ್ಸಿಗೆ ಹಿಂಸೆಯನ್ನುಂಟುಮಾಡಬೇಡ, ಯಾರೊಬ್ಬರನ್ನೂ ಬಾಯಿಗೆ ಬಂದಂತೆ ಕೆಟ್ಟ ಮಾತುಗಳನ್ನಾಡಿ ಶಪಿಸಬೇಡ, ನೀತಿಗೆಮುಂಚೆ ಎಲ್ಲಕ್ಕೂ

ತ್ರೋ ನಿಹಂತಾ ತೇ ಯದಿ ಗರ್ಭಂ ಶರಚ್ಛತಂ । ಸಮೂಹತಾ
ಽತಿ ಪ್ರಯತಾ ಶೌಚಿನೀ ಧಾರಯಿಷ್ಯಸಿ ॥ ೫೫ ॥ ಇತ್ಯೇವ
ಮುಕ್ತ್ವಾ ತಾಂ ದೇವೀಂ ಸಗತಃ ಕಾಶ್ಯಪೋ ಮುನಿಃ । ದಧಾ
ರ ಸಾಪಿ ತಂಗರ್ಭಂ ಸಂಮ್ಯಕ್ಶೌಚ ಸಮನ್ವಿತಾ ॥ ೫೪ ॥
ಗರ್ಭಮಾತ್ಮ ವಧಾರ್ಥಾಯ ಜ್ಞಾತ್ವಾ ಸಮಸ್ತವಾನಪಿ । ಕು
ಶೂಲಸು ಸಾ ಮಥಾ ಗಚ್ಛದ್ವಿನಯಾ ದವಮರಾಧಿಪಃ ॥ ೫೫ ॥

ದೇವರೇನೊದಲಾದವರ ಮೇಲೆ ಆಣೆಯನ್ನಿಡಬೇಡ, ಸ್ವಲ್ಪವಾದರೂ ಪುಟಿಯಂ ನುಡಿಯಲಾಗದು, ಇಂತಿದ್ದರೆ ನಿನ್ನಮಗನು ಇಂದ್ರನನ್ನು ಕೊಲ್ಲಲು ತಕ್ಕಶಕ್ತಿವಂತನಾಗುವನು ; ಈ ಮೇಲೆ ಹೇಳಿದ ಧರ್ಮಗಳೆಲ್ಲವೂ ಮತ್ಸ್ಯಪುರಾಣ, ಶ್ರೀಭಾಗವತಗಳಲ್ಲಿ ಹೇಳಿವೆ, ಸಾಮಾನ್ಯವಾಗಿ ಗರ್ಭಿಣಿಯರೆಲ್ಲರೂ ಇದೇ ರೀತಿಯಿಂದಿರಬೇಕೆಂದು ಭಾವವು, ಹಾಗಿಲ್ಲದೊಡೆ ಇವರಹೊಟ್ಟೆಯಲ್ಲಿರುವಶಿಶುವಿಗೂ ಇವರಕೆಟ್ಟ ಗುಣಗಳೆಲ್ಲವೂ ಅಭ್ಯಾಸದಲ್ಲಿ ಬರುವುವು, ((ದಿತಿಯು ಅನವರತವೂ ತನ್ನಮನದಲ್ಲಿ ವಿಷ್ಣುವನ್ನೇ ಧ್ಯಾನಮಾಡುತಾ ಮೇಲೆಹೇಳಿದಂತೆ ಸರಿಯಾದನಡತೆಯುಳ್ಳಿದ್ದ ಪಕ್ಷಕ್ಕೆ ಹುಟ್ಟುವಮಗನೂ ಕೂಡ ದೇವತೆಗಳಿಗೇ ಸಹಾಯಕನಾಗುವನು. ಇವರಿಂದ ಇಂದ್ರನಿಗೆ ತುಂಬಾ ಮೇಲ್ಮೆ ಯುಂಟಾಗುವುದು, ಎಂಬುದಾಗಿ ಕಾಶ್ಯಪಮುನಿಯು ದಿತಿಗಹೇಳಿದ ಮಾತುಗಳ ಗೂಢಾಭಿ ಪ್ರಾಯವು))॥೫೨-೫೫-೫೪॥

ತರುವಾಯ ದೇವತೆಗಳಿಗೆಲ್ಲಾ ಅಧಿಪತಿಯಾದ ಇಂದ್ರನೂ ಕೂಡ ಇಂತು ತನ್ನನ್ನು ಸಂಹರಿಸಲು ತಕ್ಕಮಗನಂಪಡೆಯುಲು ದಿತಿಯು ಗರ್ಭವಂ ಧರಿಸಿರುವಳೆಂಬ ಸಮಾಚಾರವಂ ಕೇಳಿ, ನಿಯಮದಲ್ಲಿರುವ ದಿತಿದೇವಿಗೆ ಉಪಚಾರವಮಾಡಲು ಆಕೆಯು ಸವಿಾಪವನ್ನೈದಿ ಆಕೆಗೆ ಕಾಲಕಾಲಕ್ಕೆ ಸರಿಯಾಗಿ ತಕ್ಕಂತೆ ಶುಶ್ರೂಷೆ ಮಾಡುತ್ತಾ ॥ ೫೫ ॥ ಆಕೆಯು ಅಶುಚಿಯಾಗಿರುವ ಕಾಲವನ್ನೇ ನಿರೀಕ್ಷಿಸಿಕೊಂಡಿದ್ದನು. ಇಂತು ಇಂದ್ರನು ರಂಧ್ರಾನ್ವೇಷಿಯಾಗಿರುವ ಸಮಾಚಾರವು ದಿತಿದೇವಿಗೆ ತಿಳಿಯುಲಿಲ್ಲಾ, ಹೀಗೆಯೇ ಕಾಲವೆಲ್ಲಾ ಕಳೆಯುತ್ತಾಬಂದಿತು. ಇಂತಿರಲು ನೂರುವರ್ಷಗಳು ತುಂಬುವುವಕ್ಕೆ ಸ್ವಲ್ಪಕಾಲಮಾತ್ರ ಮಿಕ್ಕಿರಲು ಬಂದಾ

ತಸ್ಯಾಶ್ಚೈವಾಂತರಂ ಪ್ರೇಪ್ಸು ರತಿಪ್ರಾಪ್ತಾಕಾಸನಃ ।
ಊನೇ ವರ್ಷಶತೇಚಾಸ್ಯಾ ದದರ್ಶಾಂತರ ಮಾತ್ಮವಾ ॥೫೬॥
ಅಕೃತ್ವಾ ಪಾದಶೌಚಂತು ದಿತಿಶ್ಚಯನ ಮಾವಿಶತ್ । ನಿ
ದ್ರಾಮೋಹಾರಯಾಮಾಸ ತಳಾಭ್ಯಾಂ ಕುಕ್ಷಿಂ ಪ್ರವಿಶ್ಯಸಃ ॥
ವಜ್ರಪಾಣಿ ರ್ಮಹಾ ಗರ್ಭಂ ತಂ ಚಿಚ್ಛೇದಾಥ ಸಪ್ತಧಾ ॥೫೭॥
ಸಪಾಟ್ಯಮಾನೋ ವಜ್ರೇಣ ಪ್ರರುರೋದಾತಿ ದಾರುಣಂ ।
ಮಾರೋದೀ ರಿತಿ ತಂ ಶಕ್ರಃ ಪುನಃ ಪುನ ರಭಾಷತ ॥ ೫೮ ॥
ಸೋಽಭವತ್ಸಪ್ತಧಾ ಗರ್ಭ ಸ್ತಮಿಂದ್ರಃ ಕುಪಿತಃ ಪುನಃ । ಏಕೈ
ಕಂ ಸಪ್ತಧಾ ಚಕ್ರೇ ವಜ್ರೇಣಾದಿ ವಿದಾರಿಣಾ ॥೫೯॥ ಮರು
ತೋ ನಾಮ ದೇವಾಸ್ತೇ ಬಭೂವು ರತಿವೇಗಿನಃ । ಯದುಕ್ತಂ

ನೊಂದುದಿನ ಕಾಲುತೊಳೆದುಕೊಳ್ಳದೆ ದಿತಿದೇವಿಯು ಹಾಸಿಗೆಯಂಸೇರಿ ನಿದ್ರೆಯುಂಗೈದಳು ಆ ಕಾಲದಲ್ಲಿ ಇಂದ್ರನು ಇದೇಸಮಯವೆಂದರಿತು ಆಕೆಯ ಉದರವಂ ಹೊಕ್ಕು ತನ್ನ ವಜ್ರಾಯುಧವಂ ಕೈಲಿಪಿಡಿದು ಮಹಾರೋಷಯುಕ್ತನೆನಿಸಿ ಆ ಗರ್ಭವಂ ಏಳುತುಂಡಾಗಿ ಕತ್ತರಿಸಿದನು, ॥ ೫೬-೫೯ ॥ ಇಂತು ಇಂದ್ರನು ಕತ್ತರಿಸುವಾಗ್ಗೆ ಆಗರ್ಭವು ವಜ್ರಾಯುಧದಪೆಟ್ಟಂ ಸಹಿಸಲಾರದೆ ವಿಕಾರವಾದ ಧ್ವನಿಯಿಂದ ಗಟ್ಟಿಯಾಗಿ ರೋದನ ಮಾಡತೊಡಗಿತು ಇಂತು ಅಳುತ್ತಿರುವ ಆ ಶಿಶುವಂಕುರಿತು ಇಂದ್ರನು ,,ಮಾರೋದೀಃ, ಮಾರೋದೀಃ, (ಅಳಬೇಡ, ಅಳಬೇಡ) ಎಂಬುದಾಗಿ ಬಾರಿಬಾರಿಗೂ ಹೇಳುತ್ತಿದ್ದನು ॥ ೫೮ ॥

ಇಂತು ಆಗರ್ಭವು ಏಳುತುಂಡಾಯಿತು; ಇಂದ್ರನು ಹೇಳಿದಾಗ್ಗೂ ಆ ಗರ್ಭವು ಅಳುತಲೇ ಇತ್ತು. ಇದಂಕಂಡು ಇಂದ್ರನು ವಿಶೇಷವಾಗಿಕೋಪಗೊಂಡು ಪರ್ವತಗಳನ್ನು ಕತ್ತರಿಸಿದಂತಹ ತನ್ನವಜ್ರಾಯುಧದಿಂದ ಮರಳಿ ಬಂದೊಂದನ್ನೂ ಏಳೇಳು ಭಾಗವಾಗಿ ಕತ್ತರಿಸಿದನು ॥೫೯॥ ಇಂತು ಇಂದ್ರನು ಕತ್ತರಿಸುವಾಗ್ಗೆ ಅಳುತ್ತಿದ್ದ ಆ ಗರ್ಭವಂಕುರಿತು ಇಂದ್ರನು ,,ಮಾರೋದೀಃ,, ಎಂಬುದಾಗಿ ಹೇಳಿದಕಾರಣ ಆ ನಲವತ್ತೊಂಬತ್ತು ತು ಡುಗಳಿಗೂ ಮರುತ್ತುಗಳೆಂದು ಹೆಸರುಬಂದಿತು, ಈ ನಲವತ್ತೊಂಬತ್ತು ಮಂದಿಯೂ ದೇವತೆಗಳ ಪಂಗಡಕ್ಕೇಸೇ

ವೈವುಥವತಾ ತೇನೈವ ಮರುತೋಽಭವ॑ ॥೪೦॥
ಇತಿಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
—ಏಕವಿಂಶೋಧ್ಯಾಯಃ—

ರಿ, ಮಹಾ ವೇಗವುಳ್ಳವರೆನಿಸಿದ್ದರು ॥೪೦॥ ಎಂಬದಾಗಿ ಪರಾಶರನುಮೈತೆ ೀಯನಿಗೆ ಹೇಳುತಿ ್ತದ್ದನೆಂಬಲ್ಲಿಗೆ

ಶ್ರೀ ವಿಷ್ಣುಪುರಾಣದ ಒಂದನೆಯ ಅಂಶದೊಳ್
ಇಪತ್ತೊಂದನೆಯಽಧ್ಯಾಯಂ ಮುಗಿದುದು
—ಏಕವಿಂಶಾಧ್ಯಾಯಂಸಮಾಪ್ತ॥—

ಶ್ರೀಃ.

ಓನ್ನಮಃ ಪರವಾತ್ಮನೆ

ದ್ವಾವಿಂಶೋಧ್ಯಾಯಃ.

ಶ್ರೀಪರಾಶರಃ ॥ ಯದಾಭಿಷಿಕ್ತ ಸ್ಸಪೃಥುಃ ಪೂರ್ವಂ ರಾಜ್ಯೇವು ಹರ್ಷಿಭಿಃ । ತತಃ ಕ್ರಮೇಣ ರಾಜ್ಯಾನಿ ದದೌ ಲೋಕ ಪಿತಾ ವುಹಃ ॥೧॥ ನಕ್ಷತ್ರ ಗ್ರಹ ವಿಪ್ರಾಣಾಂ ವೀರುಧಾಂ ಚಾಪ್ಯಶೇ ಷತಃ । ಸೋವುಂ ರಾಜ್ಯೇ ನ್ಯದಾ ದ್ಬ್ರಹ್ಮ ಯಜ್ಞಾನಾಂ ತಪ ಸಾವುಪಿ ॥ ೨ ॥ ರಾಜ್ಞಾಂ ವೈಶ್ರವಣಂ ರಾಜ್ಯೇ ತಿಲಾನಾಂ ವರುಣಂ ತಥಾ । ಆದಿತ್ಯಾನಾಂ ಪತಿಂ ವಿಷ್ಣುಂ ವಸೂನಾ ವುಥ ಪಾವಕಂ ॥ ೩ ॥ ಪ್ರಜಾಪ್ರತೀನಾಂ ದಕ್ಷಂತು ವಾಸವಂ ವು ರುತಾವುಪಿ । ದೈತ್ಯಾನಾಂ ದಾನವಾನಾಂ ಚ ಪ್ರಹ್ಲಾದ ವುಧಿಪಂ

ಇಂತು ಪರಾಶರ ವುನಿಯು ಇದುವರೆಗೂ ದೇವತೆಗಳೇ ವೊದ ಲಾಗವರ ಉತ್ಪತ್ತಿಯನ್ನು ಹೇಳಿ, ಈಗ ಆ ಆ ಪ್ರಾಣಿಗಳ ಅಧಿಪತಿಗಳ ನ್ನೂ, ವಿಷ್ಣುವಿನ ಲೀಲಾ ವಿಭೂತಿಯನ್ನೂ ವರ್ಣಿಸಲುಪಕ್ರವಿಸುತ್ತಾ ನೆ—ವೇನರಾಯನ ಕುವರನೆನಿಸಿದ ಪೃಥುವಿಗೆ ಋಷಿಗಳೆಲ್ಲರೂ ಸೇರಿ ರಾಜ್ಯದಲ್ಲಿ ಪಟ್ಟಗಟ್ಟಿದವೇಲೆ ಸರ್ವಲೋಕ ಪಿತಾವುಹನೆನಿಸಿದ ಚತು ರ್ವುಖನು ಬಂದೊಂದು ಪಂಗಡಕ್ಕೂ ಬಬ್ಬೊಬ್ಬ ರಾಜನನ್ನು ನೇವು ಕವಾಡಿದನು ॥ ೧ ॥ ನಕ್ಷತ್ರಗಳು, ಗ್ರಹಗಳು, ಬ್ರಾಹ್ಮಣರು, ಲತೆ ಗಳು, ಯಜ್ಞಗಳು, ತಪಸ್ಸು ಇವುಗಳ ವಿಷಯವಾದ ಅಧಿಕಾರ ವನ್ನೆಲ್ಲಾ ಚಂದ್ರನಿಗೆ (ಸೋವುನಿಗೆ) ಕೊಟ್ಟು ಅವನನ್ನು ಈ ವೇಲೆ ಹೇಳಿವವುಗಳಿಗೆಲ್ಲಾ ರಾಜನನ್ನಾಗಿ ವಾಡಿದನು ॥ ೨ ॥ ಎಲ್ಲ ದೊರೆಗ ಳಿಗೂ ಕುಬೇರನನ್ನು ಪ್ರವುಖನನ್ನು ವಾಡಿದನು. ವರುಣನನ್ನು ಎಳ್ಳು ಧಾನ್ಯಕ್ಕೆ ಅಧಿಪತಿಯನ್ನು ವಾಡಿದನು. ಹನ್ನೆರಡು ವುಂದಿ ಸೂ ರ್ಯರಿಗೂ ಇಂದ್ರನತವ್ಮನಾದ ವಿಷ್ಣುವೇ ಅಧಿಪನನಿಸಿದನು. ಎಂಟು ವುಂದಿ ವಸುಗಳಿಗೂ ಅಗ್ನಿಯೇ ಪ್ರವುಖನಾದನು ॥ ೩ ॥ ಪ್ರಜಾ

ದದೌ ॥ ೪ ॥ ಪಿತೃಣಾಂ ಧರ್ಮರಾಜಾನಂ ಯಮಂ ರಾ
ಜ್ಯೇ ಽ ಭ್ಯಷೇಚಯತ್। ಐರಾವತಂ ಗಜೇಂದ್ರಾಣಾ ಮಶೇಷಾ
ಣಾಂ ಪತಿಂ ದದೌ ॥ ೫ ॥ ಪತತ್ರಿಣಾಂಚ ಗರುಡಂ ನಾಗಾನಾ
ಮಪಿ ವಾಸುಕಿಂ । ಉಚ್ಚೈಃಶ್ರವಸ ಮಶ್ವಾನಾಂ ವೃಷಭಂ ತು
ಗವಾಮಪಿ ॥ ೬ ॥ ಮೃಗಾಣಾಂ ಚೈವ ಸರ್ವೇಷಾಂ ರಾಜ್ಯೇ
ಸಿಂಹಂ ದದೌ ಪ್ರಭುಃ । ಶೇಷಂತು ದಂದಶೂಕಾನಾ ಮುಕರೋ
ತ್ಪತಿ ಮವ್ಯಯಃ ॥ ೭ ॥ ಹಿಮವಾಲಯಂ ಸ್ಥಾವರಾಣಾಂ ಮುನೀ
ನಾಂ ಕಪಿಲಂ ಮುನಿಂ । ನಖಿನಾಂ ದಂಷ್ಟ್ರಿಣಾಂ ಚೈವ ಮೃಗಾ
ಣಾಂ ವ್ಯಾಘ್ರಂ ವಿಭಾಶ್ವರಂ ॥ ೮ ॥ ವನಸ್ಪತೀನಾಂ ರಾಜಾನಂ
ಪ್ಲಕ್ಷಮೇವಾ ಭ್ಯಷೇಚಯತ್ । ವಿವಸ್ವೀನಾ ನೃಜಾತೀನಾಂ

ಸೃಷ್ಟ್ಯಯಂಗೈವವರಿಗೆಲ್ಲಾ ದಕ್ಷನೇ ಮೊದಲನೆಯವನಾದನು. ಮರು
ತ್ತುಗಳಿಗೆ (ವಾಯುಗಳಿಗೆ) ಇಂದ್ರನು ದೊಡ್ಡವನಾದನು. ದಿತಿವಂಶ
ಸಂಭೂತರಿಗೂ ದನು ವಂತಸಂಭೂತರಿಗೂ ಕೂಡ ಪ್ರಹ್ಲಾದನು ದೊರೆ
ಯಾದನು ॥೪॥ಆಬಳಿಕ ಸರ್ವಲೋಕ ಪೂಜ್ಯನೂ, ಸರ್ವಲೋಕ ಪಿತಾ
ಮಹನೂ, ಪ್ರಭುಶಕ್ತಿ ಸಂಪನ್ನನೂ, ಸೃಷ್ಟಿಕರ್ತೃಗಳೆನಿಸಿದ ದಕ್ಷನೇ
ಮೊದಲಾದವರಿಗಿಂತಲೂ ದೊಡ್ಡವನೂ ಎನಿಸಿದ ಚತುರ್ಮುಖನು, ತನ್ನ
ಕಟ್ಟಲೆಯನ್ನು ತಾನುಎಂದಿಗೂ ಮೀರದಿರುವಕಾರಣ ಯಮನೆಂದು ಪೆಸ
ರ್ಗೊಂಡ ಧರ್ಮರಾಜನನ್ನು ಪಿತೃಗಳಿಗೂ, ಐರಾವತವೆಂಬ ಇಂದ್ರನಪ
ಟ್ಟದಾನೆಯನ್ನು ಎಲ್ಲಾ ಆನೆಗಳಿಗೂ, ಗರುಡನನ್ನು ಎಲ್ಲಾ ಹಕ್ಕಿಗಳಿಗೂ
ವಾಸುಕಿಯನ್ನು ಸಮಸ್ತ ವಿಧ ಸರ್ಪಗಳಿಗೂ, ಉಚ್ಚೈಃಶ್ರವಸ್ಸೆಂಬ
ಇಂದ್ರನಪಟ್ಟದ ಕುದುರೆಯನ್ನು ಎಲ್ಲಾಅಶ್ವಗಳಿಗೂ, ಮಹೇಶ್ವರನ ವಾಹ
ನವೆನಿಸಿದ ವೃಷಭವನ್ನು ಸಕಲ ಗೋವುಗಳಿಗೂ, ಸಿಂಹವನ್ನು ಎಲ್ಲಮೃಗ
ಗಳಿಗೂ, ಆದಿಶೇಷನನ್ನು ಕೋರೆಹಲ್ಲಿನಿಂದ ಕಚ್ಚುತಕ್ಕ ಶಕ್ತಿಯುಳ್ಳ ಹಾ
ವುಗಳಿಗೂ, ಅಧಿಪತಿಗಳೆಂಬದಾಗಿ ನಿಯಮಿಸಿ ವಾಡಿದನು ॥೫-೬-೭॥
ಅನಂತರದಲ್ಲಿ ಪರ್ವತಗಳಿಗೆ ಹಿಮವಂತನನ್ನೂ, ಮುನಿಗಳಿಗೆ ಕಪಿಲಮು
ನಿಯನ್ನೂ, ಉಗುರು ಮತ್ತು ಕೋರೆದಾಡೆಗಳೇ ಮುಖ್ಯವಾಗಿ ಆಯು
ಧಗಳಾಗಿಉಳ್ಳ ದುಷ್ಟಮೃಗಗಳಿಗೆ ಮಾತ್ರ ಹುಲಿಯನ್ನೂ, ಮರಗಳಿಗೆ

ಪೌಲ್ಕಧಾನ್ಯೇನಾ ಕರೋತ್ಪ್ರಭೂತ ॥ ೯ ॥ ಏವಂ ವಿಭಜ್ಯ ರಾಜ್ಯಾನಿ ದಿಶಾಪಾಲಾ ನನಂತರಂ । ಪ್ರಜಾಪತಿ ಪತಿ ರ್ಬ್ರಹ್ಮಾ ಸಾ೦ಪಯೂವಾಸ ಸರ್ವತಃ ॥ ೧೦ ॥ ಪೂರ್ವಸ್ಯಾಂ ದಿಶಿ ರಾಜಾನಂ ನೈರಾಜಸ್ಯ ಪ್ರಜಾಪತೇಃ । ದಿಶಾಪಾಲಂ ಸುಧನ್ವಾ ನ ಮಾತ್ಮಜಂ ಸೋ ೨ ಭ್ಯಷೇಚಯತ್ ॥ ೧೧ ॥ ದಕ್ಷಿಣಸ್ಯಾಂ ದಿಶಿ ತಥಾ ಕರ್ದಮಸ್ಯ ಪ್ರಜಾಪತೇಃ । ಪುತ್ರಂ ಶಂಖಪದಂ ನಾಮ ರಾಜಾನಂ ಸೋ ೨ ಭ್ಯಷೇಚಯತ್ ॥ ೧೨ ॥ ಪಶ್ಚಿಮಾಯಾಂ ದಿಶಿ ತಥಾ ರಜಸಃ ಪುತ್ರ ಮಚ್ಯುತಂ । ಕೇತುಮಂತಂ ಮಹಾತ್ಮಾನಂ ರಾಜಾನ ಮಭಿಷಿಕ್ತವಾ ॥೧೩॥ ತಥಾ ಹಿರಣ್ಯರೋಮಾಣಂ ಪರ್ಜನ್ಯಸ್ಯ ಪ್ರಜಾಪತೇಃ । ಉದೀಚ್ಯಾಂ ದಿಶಿ ದುರ್ಧರ್ಷಂ ರಾಜಾನಮಭಿಷೇಚಯತ್ ॥

ಲ್ಲಾ ಆಲದ ಮರವನ್ನೂ ರಾಜರನ್ನಾಗಿ ಗೊತ್ತುಮಾಡಿ ಆ ಆ ಅಧಿಪತ್ಯವನ್ನು ಅವರವರು ನಡೆಯಿಸುವಂತೆ ಏರ್ಪಡಿಸಿದನು. ಇಂತೆಯೇ ಚರಾಚರವಸ್ತುಗಳಿಗೆಲ್ಲಾ ಮುಖ್ಯಮುಖ್ಯರಾದವರನ್ನೇ ಆರಿಸಿ ಅಧಿಪತಿಗಳಾಗಿರುವಂತೆ ನೇಮಿಸಿದನು ॥ ೮-೯ ॥ ಇಂತು ಏರ್ಪಡಿಸಿದ ಬಳಿಕ ಎಲ್ಲ ದಿಕ್ಕುಗಳಿಗೂ ಕೂಡ ಅಧಿಕಾರಗಳನ್ನು ಸರಿಯಾಗಿ ಏರ್ಪಡಿಸಿ ಅವರವರಿಗೆ ತಕ್ಕಂತೆ ಅಧಿಕಾರವನ್ನು ವಿಭಾಗಮಾಡಿಕೊಟ್ಟನು ॥ ೧೦ ॥ ವೈರಾಜನೆಂಬ ಬ್ರಹ್ಮನ ಮಗನೆನಿಸಿದ ಸುಧನ್ವನೆಂಬುವನನ್ನು ಪೂರ್ವದಿಕ್ಕಿನ ರಾಜ್ಯಾಧಿಕಾರದಲ್ಲಿ ಅಭಿಷೇಕಮಾಡಿದನು ॥ ೧೧ ॥ ದಕ್ಷಿಣದಿಕ್ಕಿಗೆ ಕರ್ದಮನೆಂಬ ಬ್ರಹ್ಮನ ಮಗನಾದ ಶಂಖಪದನೆಂಬುವನನ್ನು ರಾಜನೆಂದು ಏರ್ಪಡಿಸಿ ಅವನಿಗೆ ಪಟ್ಟಗಟ್ಟಿದನು ॥ ೧೨ ॥ ಆ ಬಳಿಕ ರಜಸ್ಸು ಎಂಬುವನ ಮಗನೆನಿಸಿದ ನಾಶರಹಿತನಾದಕೇತುಮಂತನೆಂಬವನನ್ನು ರಾಜನೆಂದು ಗೊತ್ತು ಮಾಡಿ ಅವನಿಗೆ ಆ ಅಧಿಕಾರವಂ ಕೊಟ್ಟನು ॥೧೩॥ ಅಂತೆಯೇ ಪರ್ಜನ್ಯನೆಂಬ ಬ್ರಹ್ಮನ ಕುವರನೆನಿಸಿದ ಹಿರಣ್ಯರೋಮನೆಂಬುವನಿಗೆ ಉತ್ತರದಿಕ್ಕಿನ ರಾಜ್ಯಾಧಿಕಾರವಾ ಕೊಟ್ಟು ಅವನಿಗೆ ಆ ಪೀಠದಲ್ಲಿ ಪಟ್ಟಾಭಿಷೇಕವಂ ಮಾಡಿದನು ॥ ೧೪ ॥ ಎಲೈ ಮೈತ್ರೇಯನೆ; ಇಂತು ಬ್ರಹ್ಮನಿಂದ ರಾಜ್ಯಾಧಿಕಾರವಂ ಹೊಂದಿದ ಸುಧನ್ವಾ,

ತೈರಿಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಕಾನನಾ । ಯ
ಥಾ ಪ್ರದೇಶ ಮದ್ಯಾಪಿ ಧರ್ಮತಃ ಪರಿಪಾಲ್ಯತೇ ॥ ೧೫ ॥
ಏತೇ ಸರ್ವೇ ಪ್ರವೃತ್ತಸ್ಯ ಸ್ಥಿತೌ ವಿಷ್ಣೋರ್ಮಹಾತ್ಮನಃ ।
ವಿಭೂತಿಭೂತಾ ರಾಜಾನೋ ಯೇಽಚಾನ್ಯೇ ಮುನಿಸತ್ತಮ ॥ ೧೬ ॥
ಯೇ ಭವಿಷ್ಯಂತಿ ಯೇಽತೀತಾ ಸರ್ವಭೂತೇಶ್ವರಾ ದ್ವಿಜ ।
ತೇ ಸರ್ವೇ ಸರ್ವಭೂತಸ್ಯ ವಿಷ್ಣೋರಂಶ ಸಮುದ್ಭವಾಃ ॥ ೧೭ ॥
ಯೇತು ದೇವಾಧಿಪತಯೋ ಯೇಚ ದೈತ್ಯಾಧಿಪಾಸ್ತಥಾ ।
ದಾನವಾನಾಂಚ ಯೇನಾಥಾ ಯೇನಾಥಾಃ ಪಿಶಿತಾಶಿನಾಂ ॥ ೧೮ ॥
ಪಶೂನಾಂ ಯೇಚ ಪತಯಃ ಪತಯೋ ಪಕ್ಷಿಣಾಂ ಚ ಯೇ ।
ಮನುಷ್ಯಾಣಾಂಚ ಪತಯೋ ನಾಗಾನಾಂ ಚಾಧಿಪಾಶ್ಚ ಯೇ ॥

ಶಂಖಪದ, ಕೇತುಮಂತ, ಹರಣ್ಯರೋ ೀವ.ರೆಂಬ ಈ ನಾಲ್ವರೂ ಪೂರ್ವ ಮೊದಲಾದ ನಾಲ್ಕು ದಿಕ್ಕುಗಳಲ್ಲಿಯೂ ನೆಲೆಸಿ. ತಂತಮ್ಮ ಅಧಿಕಾರಕ್ಕೆ ಒಳಪಟ್ಟಿರುವ ಭೂಪ್ರದೇಶ, ಕಾಡು, ಸಮುದ್ರ, ನದಿ, ದ್ವೀಪಗಳನ್ನು ಸ್ವಲ್ಪವೂ ಅಸಡ್ಡೆಮಾಡದೆಯೂ, ಒಬ್ಬರು ಮತ್ತೊಬ್ಬರ ಪ್ರದೇಶವನ್ನು ಆಕ್ರಮಿಸದೆಯೂ, ಧರ್ಮದಿಂದ ಪರಿಪಾಲನೆಮಾಡುತ್ತಿರುವರು ॥ ೧೫ ॥ ಎಲೈ ಮುನಿವರ್ಯನೆ; ಈ ಹಿಂದೆ ಹೇಳಿದ ರಾಜರೂ, ಲೋಕಪಾಲಕರೂ, ಕಶ್ಯಪನೇ ಮೊದಲಾದವರೂ ಕೂಡ, ಸ್ಥಿತಿಕಾರ್ಯಕರ್ತೃವೆನಿಸಿದ, ಮಹಾ ಮಹಿಮಸಂಪನ್ನನಾದ ವಿಷ್ಣುವಿನ ಅಂಶದಿಂದಲೇ ಜನಿಸಿದವರಾದುದರಿಂದ ಇವರನ್ನೂ ವಿಷ್ಣುವಿನ ಅವತಾರಗಳೆಂಬದಾಗಿಯೇ ಭಾವಿಸು ॥ ೧೬ ॥ ಓ ಬ್ರಾಹ್ಮಣನೆ, ಹಿಂದೆ ರಾಜ್ಯಭಾರಮಾಡುತ್ತಿದ್ದ, ಈಗ ರಾಜ್ಯವನ್ನಾಳುತಿರುವ, ಮುಂದೆ ರಾಜರಾಗತಕ್ಕವರೆಲ್ಲರೂ ಆತನ ಅಂಶದಿಂದಲೇ ಜನಿಸಿದರು ॥ ೧೭ ॥ ದೇವ, ದೈತ್ಯ, ದಾನವ, ರಾಕ್ಷಸ, ಪಶು, ಪಕ್ಷಿ, ಮಾನುಷ, ಸರ್ಪ, ವೃಕ್ಷ, ಗ್ರಹಗಳೇ ಮೊದಲಾದ ಎಲ್ಲ ಭೂತಗಳಿಗೂ, ಕಾಲತ್ರಯದಲ್ಲಿಯೂ ಅಧಿಪತಿಗಳೆನಿಸಿದವರೆಲ್ಲರೂ ಆ ಪರಮಾತ್ಮನ ಅವತಾರ ಭೂತರಲ್ಲದೆ ಬೇರೆಯಲ್ಲ. ಅಂತೆಯೇ ಹಿಂದೆ ಹುಟ್ಟಿ ಮಡಿದು ಹೋದವರು, ಈಗ ಬದುಕಿರುವ ಪ್ರಾಣಿಗಳು, ಮುಂದೆ ಜನಿಸತಕ್ಕ ಪ್ರಾಣಿಗಳೂ ಕೂಡ ಸರ್ವಸ್ವರೂಪಿ ಎನಿಸಿದ

ವೃಕ್ಷಾಣಾಂ ಪರ್ವತಾನಾಂಚ ಗ್ರಹಾಣಾಂ ಚಾಧಿಪಾಶ್ಚಯೇ ।
ಅತೀತಾ ವರ್ತಮಾನಾಶ್ಚ ಯೇ ಭವಿಷ್ಯಂತಿ ಚಾಪರೇ ।
ತೇ ಸರ್ವೇ ಸರ್ವಭೂತಸ್ಯ ವಿಷ್ಣೋರಂಶ ಸಮುದ್ಭವಾಃ ॥೭೦॥
ನಹಿ ಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂ ಹರಿಂ ।
ಸ್ಥಿತೌ ಸ್ಥಿತಂ ಮಹಾಪ್ರಜ್ಞ । ಭವತ್ಯನ್ಯಸ್ಯ ಕಸ್ಯಚಿತ್॥೭೧॥
ಸೃಜತ್ಯೇಷ ಜಗತ್ಸರ್ವಮ್ ಪಾತಿ ಸರ್ವಾತನಃ । ಹಂ
ತಿ ಚೈವಾಂತಕತ್ವೇನ ರಜಸ್ಸತ್ವಾದಿ ಸಂಶ್ರಯಃ ॥ ೭೨ ॥
ಚತುರ್ವಿಭಾಗ ಸ್ಸಂಸೃಷ್ಟೌ ಚತುರ್ಧಾ ಸಂಸ್ಥಿತ ಸ್ಸ್ಥಿತೌ ।
ಪ್ರಳಯಂ ಚ ಕರೋತ್ಯಂತೇ ಚತುರ್ಭೇದೋ ಜನಾರ್ದನಃ॥
ಏಕೇನಾಂಶೇನ ಬ್ರಹ್ಮಾ ಸೌ ಭವತ್ಯವ್ಯಕ್ತ ಮೂರ್ತಿರ್ಮಾ।

ವಿಷ್ಣುವಿನ ಅಂಶದಿಂದಲೇ ಉಂಟಾದವರೆಂದು ತಿಳಿವವನಾಗು॥೧೪-೧೯-೭೦॥ ಮಹಾಬುದ್ಧಿಶಾಲಿ ಎನಿಸಿದ ಎಲೈ ಮೈತ್ರೇಯನೆ, ಸಕಲಭೂತಗಳಿಗೂ ಅಧಿಷ್ಠಿತಿಯೂ, ಸೃಷ್ಟಿಕರ್ತನೂ ಎನಿಸಿದ ಆ ವಿಷ್ಣುವಲ್ಲದೆ ಈ ಪ್ರಪಂಚದ ರಕ್ಷಣೆಯನ್ನು ಮತ್ತಾರು ತಾನೇವಾಡಲು ಶಕ್ತರಾಪರು ? ಅಂತಹ ಪಾಲನಶಕ್ತಿಯು ಬೇರೆಯಾರಿಗೆ ತಾನೇ ಇರುವುದು? ॥೭೧॥ ಅನಾದಿ ಎನಿಸಿದ ಈ ವಿಷ್ಣುವೇ ಪ್ರಪಂಚ ಸೃಷ್ಟಿಯ ಆದಿ ಭಾಗದಲ್ಲಿ ರಜೋಗುಣವನ್ನವಲಂಬಿಸಿ ಎಲ್ಲ ಲೋಕಗಳನ್ನೂ ಉಂಟುಮಾಡುವನು. ಆತೆಯೇ ಸ್ಥಿತಿಕಾಲದಲ್ಲಿ ಸತ್ವಗುಣವನ್ನಾಶ್ರಯಿಸಿ ಈ ಲೋಕಗಳನ್ನು ಸಲಹುವನು. ಪ್ರಳಯಕಾಲದಲ್ಲಿ ತಮೋಗುಣವನ್ನು ಅವಲಂಬಿಸಿ ನಾಶಕನಾಗಿ ಎಲ್ಲ ಲೋಕಗಳನ್ನು ಸಂಹರಿಸುವನು ॥೭೨॥ ಜನಾರ್ದನನೆನಿಸಿದ ಈವಿಷ್ಣುವು ಸೃಷ್ಟಿಕಾರ್ಯದಲ್ಲಿ ನಾಲ್ಕುರೂಪದಿಂದಸೃಷ್ಟಿಯಂನೆರವೇರಿಸುತಿರುವನು. ಸ್ಥಿತಿಕಾರ್ಯವೆನಿಸಿದ ಪಾಲನ ಕ್ರಿಯೆಯಲ್ಲಿಯೂ ಈತನಿಗೆ ನಾಲ್ಕು ರೂಪಗಳುಂಟು. ಅಂತೆಯೇ ಪ್ರಳಯ ಕಾಲದಲ್ಲಿಯೂ ನಾಲ್ಕುರೂಪಗಳಿಂದ ಎಲ್ಲ ಜಗತ್ತನ್ನೂ ಸಂಹರಿಸುವನು ॥ ಸೃಷ್ಟಿಕಾರ್ಯದಲ್ಲಿ ಈತನ ನಾಲ್ಕು ರೂಪಗಳನ್ನು ತಿಳಿಸುವೆನು ಕೇಳು. ಅವ್ಯಕ್ತ ಸ್ವರೂಪನೆನಿಸಿದ ಚತುರ್ಮುಖನ ರೂಪವು ಈತನ ಮೊದಲನೆಯ ರೂಪವು. ಮರೀಚಿ, ದಕ್ಷನೊದಲಾದ ರೂಪಗಳೇ ಈತನಎರಡನೆ

ಮೂರ್ತಿಚತುಷ್ಕಾಃ ಪತಯಃ ಪ್ರಜಾನಾ ಮನ್ಯಭಾಗತಃ ॥ ೨೪ ॥
ಕಾಲಶ್ಚತುರ್ತೀಯ ಸ್ತಸ್ಯಾಂಶ ಸ್ಸರ್ವಭೂತಾನಿ ಚಾಪರಃ ।
ಇತ್ಥಂ ಚತುರ್ಧಾ ಸಂಸೃಷ್ಟ್ಯಾವರ್ತತೆ ಽಸೌ ರಜೋಗುಣಃ॥೨೫॥
ಏಕಾಂಶೇನ ಸ್ಥಿತೋ ವಿಷ್ಣುಃ ಕರೋತಿ ಪರಿಪಾಲನಂ । ಮ
ನ್ವಾದಿರೂಪೀ ಚಾನ್ಯೇನ ಕಾಲರೂಪೋ ಽ ಪರೇಣಚ ॥ ೨೬ ॥
ಸರ್ವಭೂತೇಷು ಚಾನ್ಯೇನ ಸಂಸ್ಥಿತಃ ಕುರುತೇ ಸ್ಥಿತಿಂ ।
ಸ ಸತ್ವಗುಣ ಮಾವಿಶ್ಯ ಜಗತಃ ಪುರುಷೋತ್ತಮಃ ॥ ೨೭ ॥
ಆಶ್ರಿತ್ಯ ತಮಸೋ ವೃತ್ತಿ ಮಂತಕಾಲೇ ತಥಾ ಪ್ರಭುಃ ।
ರುದ್ರಸ್ವರೂಪೋ ಭಗವಾ ನೇಕಾಂಶೇನ ಭವತ್ಯಜಃ ॥ ೨೮ ॥

ಯುರೂಪವು ॥೨೪॥ ಅನಾದಿ ಎನಿಸಿದ ಕಾಲವೇ ಮೂರನೆಯರೂಪವು. ದೇವ, ಮಾನುಷ, ಪಶು, ಪಕ್ಷಿ ಮೊದಲಾದ ಭೂತಸಮುದಾಯವೇ ಈ ತನ ನಾಲ್ಕನೆಯ ರೂಪವು. ಇಂತು ಈ ವಿಷ್ಣುವು ಸೃಷ್ಟಿಕಾರ್ಯದಲ್ಲಿ ರ ಜೋ ಗುಣವನ್ನು ಅವಲಂಬಿಸಿ ನಾಲ್ಕು ರೂಪಗಳಿಂದಿರುವನು ॥೨೫॥ ಅಂತೆಯೇ ಸ್ಥಿತಿಕಾರ್ಯದಲ್ಲಿಯೂ ನಾಶರಹಿತನೆನಿಸಿದ ಈ ವಿಷ್ಣುವೇ ತನ್ನ ಒಂದು ಅಂಶದಿಂದ ಈ ಏಳು ಲೋಕಗಳನ್ನೂ ಸಲಹುವನು ಮನು ಮೊದಲಾದವರೇ ಈತನ ಎರಡನೆಯ ರೂಪವೆನಿಸುವರು. ನಾಶರಹಿತವೆನಿಸಿದ ಕಾಲವನ್ನು ಪರಮಾತ್ಮನ ಮೂರನೆಯ ರೂಪವೆಂಬುದಾಗಿ ತಿಳಿ. ರಕ್ಷಣೆಯಂ ಹೊಂದುವ ಪ್ರಾಣಿವರ್ಗವನ್ನೇ ಈತನ ನಾಲ್ಕನೆಯ ರೂಪವೆಂಬುದಾಗಿ ವ್ಯವಹರಿಸುವರು. ಇಂತು ಎಲ್ಲ ಭೂತಗಳಿಗಿಂತಲೂ ಉತ್ತಮನೆನಿಸಿ, ಪುರುಷೋತ್ತಮ ಶಬ್ದದಿಂದ ಕರೆಯಿಸಿಕೊಳ್ಳುವ ಈ ವಿಷ್ಣುವು ಸತ್ವಗುಣಾಶ್ರಯದಿಂದ ನಾಲ್ಕುರೂಪವಾಗಿ ಈಲೋಕದಲ್ಲಿ ಸ್ಥಿತಿಕಾರ್ಯವಂ ನಿರ್ವಹಿಸುವನು ॥೨೬-೨೭॥ ಪ್ರಳಯಕಾಲದಲ್ಲಿ ತಮೋವೃತ್ತಿಯನ್ನವಲಂಬಿಸಿದ ಈ ಮಹಾಮಹಿಮನು ತನ್ನ ಒಂದು ಅಂಶದಿಂದ ಮಹಾ ಭಯಂಕರ ರೂಪವಂ ತಾಳಿ ಲೋಕಸಂಹಾರಕನೆನಿಸುವನು. ಇದೇ ಈತನ ರುದ್ರಾಂಶವು. ಭೂತಕ್ಷೋಭೆಗೆ ಕಾರಣರೆನಿಸಿದ ಅಗ್ನಿ, ಯಮ ಮೊದಲಾದವರೇ ಈತನ ಎರಡನೆಯ ರೂಪವು. ಆಯುಸ್ಸನ್ನು ನಾಶಗೊಳಿಸುವಂತಹ ಮಾಸ, ಋತು, ಸಂವತ್ಸರ ಪರಿಮಿತ

ಅಗ್ನ್ಯಂತಕಾದಿ ರೂಪೇಣ ಭಾಗೇ ನಾನ್ಯೇನ ವರ್ತತೇ ।
ಕಾಲಸ್ವರೂಪೋ ಭಗವಾನ್ ನ್ಯ ಸ್ಸರ್ವಭೂತಾನಿ ಚಾಪರಃ ॥
ವಿನಾಶಂ ಕುರ್ವತ ಸ್ತಸ್ಯ ಚತುರ್ಧೈವಂ ಮಹಾತ್ಮನಃ ।
ವಿಭಾಗಕಲ್ಪನಾ ಬ್ರಹ್ಮನ್ ! ಕಥ್ಯತೇ ಸರ್ವಕಾಲಿಕೀ॥೫೦॥
ಬ್ರಹ್ಮಾದಕ್ಷಾದಯಃ ಕಾಲ ಸ್ತಥೈ ವಾಖಿಲ ಜಂತವಃ ।
ವಿಭೂತಯೋ ಹರೇ ರೇತಾ ಜಗತ ಸ್ಸೃಷ್ಟಿ ಹೇತವಃ ॥೫೧॥
ವಿಷ್ಣು ರ್ಮನ್ವಾದಯಃ ಕಾಲ ಸ್ಸರ್ವಭೂತಾನಿ ಚ ದ್ವಿಜ ।
ಸ್ಥಿತೇ ರ್ನಿಮಿತ್ತ ಭೂತಸ್ಯ ವಿಷ್ಣೋ ರೇತಾ ವಿಭೂತಯಃ ॥೫೨॥
ರುದ್ರಃ ಕಾಲಾಂತಕಾದ್ಯಾಶ್ಚ ಸಮುಸ್ತಾ ಶ್ಚೈವ ಜಂತವಃ ।
ಚತುರ್ಧಾ ಪ್ರಳಯಾ ಯೈತಾ ಜನಾರ್ದನ ವಿಭೂತಯಃ ॥೫೩॥
ಜಗದಾದೌ ತಥಾ ಮಧ್ಯೇ ಸೃಷ್ಟಿ ರಾಪ್ರಳಯಾ ದ್ದ್ವಿಜ ।
ಧಾತಾಮರೀಚಿ ಮಿಶ್ರಾ ಶ್ಚ ಕ್ರಿಯತೇ ಜಂತುಭಿಸ್ತಥಾ ॥೫೪॥

ವಾದ ಕಾಲವೇ ಈ ಪರಮಾತ್ಮನ ಮೂರನೆಯ ರೂಪವು. ನಾಶಹೊಂದತಕ್ಕ ಪ್ರಾಣಿವರ್ಗವನ್ನು ಈತನ ನಾಲ್ಕನೆಯ ರೂಪವೆನ್ನುವರು. ಈ ನಾಲ್ಕು ರೂಪಗಳೂ ಶಾಶ್ವತಗಳಲ್ಲದೆ ಅವುಗಳಿಗೆ ನಾಶವಿಲ್ಲ (ದೇಹಿಯು ನಿತ್ಯವಾದುದರಿಂದ ಈ ರೀತಿ ವ್ಯವಹಾರವು.) ॥೪೮-೪೯॥ ಬ್ರಹ್ಮ, ದಕ್ಷ ಮೊದಲಾದವರು, ಕಾಲ, ಮತ್ತು ಈ ಪ್ರಪಂಚದಲ್ಲಿರುವ ಪ್ರಾಣಿಗಳು,ಇವೆಲ್ಲವೂ ಈ ಪ್ರಪಂಚದಲ್ಲಿ ನಡೆಯುವ ಸೃಷ್ಟಿಕಾರ್ಯಕ್ಕೆ ಮುಖ್ಯ ಕಾರಣನೆನಿಸಿದ ವಿಷ್ಣುವಿನ ರೂಪಗಳೆಂಬುದಾಗಿ ಕರೆಯಿಸಿಕೊಳ್ಳುತ್ತವೆ ॥೫೦॥ ಸ್ಥಿತಿಕರ್ತೃವೆನಿಸಿದ ವಿಷ್ಣು, ಮನು, ಮೊದಲಾದವರು, ಕಾಲ, ಸಕಲಭೂತಗಳು ಇವೆಲ್ಲವೂ ಸ್ಥಿತಿಕಾರ್ಯದಲ್ಲಿ ನಿಮಿತ್ತ ಮಾತ್ರ ನೆನಿಸಿದ ವಿಷ್ಣುವಿನ ಅವತಾರಗಳೆನಿಸುವುವು ॥೫೨॥ ನಾಶಕರ್ತೃ ವೆನಿಸಿದ ರುದ್ರ, ಯಮ, ಕಾಲ, ನಾಶ ಹೊಂದುವ ಪ್ರಾಣಿಗಳು,ಇವುಗಳೆಲ್ಲವೂ ಪ್ರಳಯ ಕಾರ್ಯದಲ್ಲಿ ಕಾರಣಭೂತನೆನಿಸಿದ ಜನಾರ್ದನ ರೂಪಗಳಾಗಿಯೇ ಇರುವುವು ॥೫೩॥ ಎಲೈ ದ್ವಿಜವರ್ಯನೆ, ಜಗತ್ತಿನ ಆದಿಭಾಗದಲ್ಲಿಯೂ, ಮಧ್ಯಭಾಗದಲ್ಲಿಯೂ, ಪ್ರಳಯವಾಗುವವರೆಗೂ ಚತುರ್ಮುಖ, ದಕ್ಷ, ಮೊದಲಾದವರೂ, ಇವರಿಂದ ಸೃಷ್ಟಿಯಾಂ, ಹೊಂದಿದ ಇತರ ಪ್ರಾಣಿಗಳೂ

ಬ್ರಹ್ಮಾ ಸೃಜತ್ಯಾದಿಕಾಲೇ ಮರೀಚಿ ಪ್ರಮುಖಾಸ್ತಥಾ ।
ಉತ್ಪಾದಯಂ ತ್ಯಪತ್ಯಾನಿ ಜಂತವಶ್ಚ ಪ್ರತಿಕ್ಷಣಂ ॥ ೫೫ ॥
ಕಾಲೇನ ನ ವಿನಾ ಬ್ರಹ್ಮಾಸೃಷ್ಟಿ ನಿಷ್ಪಾದಕೋ ದ್ವಿಜ ! ।
ನ ಪ್ರಜಾಪತಯ ಸ್ಸರ್ವೇ ನ ಚೈವಾಖಿಲ ಜಂತವಃ ॥ ೫೬ ॥
ಏವ ಮೇವ ವಿಭಾಗೋ ಽ ಯಂ ಸ್ಥಿತಾ ವಪ್ಯುಪದಿಶ್ಯತೇ ।
ಚತುರ್ಧಾ ದೇವ ದೇವಸ್ಯ ಮೈತ್ರೇಯ! ಪ್ರಳಯೇ ತಥಾ॥೫೭॥
ಯತಿಕ್ಕಂಚಿತ್ಸ್ಥಿತ್ಯಾ ಜ್ಯತೇ ಯೇನ ಸತ್ವಜಾತೇನ ವೈದ್ವಿಜ ।
ತಸ್ಯ ಸೃಜ್ಯಸ್ಯ ಸಂಭೂತಾ ತಸ್ಸರ್ವಂ ವೈ ಹರೇ ಸ್ತನುಃ ॥೫೮॥

ಅನುದಿನವೂ ಸೃಷ್ಟಿಕಾರ್ಯವಂ ನಿರವೇರಿಸುವರು. ಮೊದಲು ಚತುರ್ಮುಖನು ದಕ್ಷ ಮೊದಲಾದವರನ್ನುಂಟು ಮಾಡಿದನು, ಬಳಿಕ ಆ ದಕ್ಷಾದಿಗಳು ಪ್ರಾಣಿಗಳನ್ನು ಸೃಜಿಸಿದರು; ಆ ಪ್ರಾಣಿಗಳು ಪುತ್ರ, ಪೌತ್ರರೂಪದಿಂದ ಈ ಲೋಕವನ್ನು ತುಂಬುವರು. ಅಂತು ಸೃಷ್ಟಿಯು ಯಾವ ಕ್ಷಣವೂ ನಿಲ್ಲದೆ ಪ್ರತಿಯೊಂದು ನಿಮಿಷದಲ್ಲಿಯೂ ನಡೆಯುತಲೇ ಇರುವುದೆಂದು ಭಾವವು ಈ ಕಾರಣದಿಂದಲೇ ಈ ಸೃಷ್ಟಿಯನ್ನು ನಿತ್ಯವೆಂದು ವ್ಯವಹರಿಸುವರು ॥೫೪-೫ ॥ ಎಲೈ ದ್ವಿಜವರ್ಯನೆ, ಇಂತು ಅನಾದಿಯೆನಿಸಿದ ಈ ಕಾಲವನ್ನುಳಿದು ಚತುರ್ಮುಖನಾಗಲಿ, ದಕ್ಷನೇ ಮೊದಲಾದ ಪ್ರಜಾಸೃಷ್ಟಿಕರ್ತೃಗಳಾಗಲಿ, ಅಥವಾ ಇತರ ಪಕ್ಷು, ಪಕ್ಷಿ ಮೊದಲಾದ ಪ್ರಾಣಿಗಳಾಗಲಿ ಯಾರೊಬ್ಬರೂ ಸೃಷ್ಟಿಕಾರ್ಯವಂ ನಿರ್ವಹಿಸಲಾರದು ॥೫೬॥ ಸೃಷ್ಟಿಯಲ್ಲಿ ನಾಲ್ಕು ಭಾಗಗಳಿರುವಂತೆಯೇ ಸ್ಥಿತಿಕಾರ್ಯದಲ್ಲಿಯೂ ನಾಲ್ಕು ಬಗೆಗಳುಂಟು. ದೇವದೇವನೆನಿಸಿದ ಆ ವಿಷ್ಣುವೇ ಪ್ರಳಯಕಾಲದಲ್ಲಿಯೂ ಕೂಡ ತನ್ನರೂಪವಂ ನಾಲ್ಕು ಭಾಗವಾಡಿ ಪ್ರಳಯಕಾರ್ಯವನ್ನು ಸಹ ನೆರವೇರಿಸುತಿರುವನು ॥೫೭॥ ಓ ಮೈತ್ರೇಯನೆ ; ಈ ಲೋಕದಲ್ಲಿ ಮಾನುಷರು, ಪಕ್ಷುಗಳು, ಪಕ್ಷಿಗಳು, ಇವೇ ಮೊದಲಾದ ನಾನಾವರಿಯಿಂದಿರುವ ಪ್ರಾಣಿವರ್ಗಗಳಲ್ಲಿ ಹುಟ್ಟುವಜಂತು ಜಾಲವೂ, ಆಆಪ್ರಾಣಿಸಮುದಾಯಕ್ಕೆ ಸೃಷ್ಟಿ ಕಾರಣ ಭೂತಗಳೆನಿಸಿದ ಇತರಪ್ರಾಣಿಗಳೂ ಕೂಡ ಭಕ್ತದುರಿತನಾಶಕನೆನಿಸಿದ ವಿಷ್ಣು ವಿನಅಂಶದಿಂದೊಡಗೂಡಿರುವ ಕಾರಣ

ಹಂತಿ ಯಾವತ್ಕ್ಷ್ವ ಚೆಂತ್ಕಿಂಚಿ ದ್ಭೂತಂ ಸಾ೦ಧ್ವವಜಂಗಮಂ ।
ಜನಾರ್ದನಸ್ಯ ತದ್ಭಾದ್ರಂ ವೈಮೈತ್ರೇಯಾಂತಕರಂ ವಪುಃ ॥೫೯॥
ಏವಮೇವ ಜಗತ್ಸ್ರಷ್ಟಾ ಜಗತಾ ತಾ ತಥಾಜಗತ್ ।
ಜಗನ್ಮ ಹ್ಮೆಯಿತಾ ದೇವ ಸ್ಸವಸ್ತಸ್ಯೆ ಜನಾರ್ದನಃ ॥ ೪೦ ॥
ಸೃಷ್ಟಿಸ್ಥಿತ್ಯಂತ ಕಾಲೇಷು ತ್ರಿಧೈವಂ ಸಂಪ್ರವರ್ತತೇ ।
ಗುಣಪ್ರವೃತ್ತಾತ್ಯಾ ಪರಮಂ ಪದಂ ತಸ್ಯಾಗುಣಂ ಮಹತ್ ॥೪೧॥
ತಚ್ಚ ಜ್ಞಾನಮಯಂ ವ್ಯಾಪಿ ಸ್ವ ಸಂವೇದ್ಯ ವ ನೂಪಮಂ ।

ಇವುಗಳೆಲ್ಲವೂ ಆತನ ಶರೀರಗಳೆಂಬುದಾಗಿ ತಿಳಿ ॥ ೫೮ ॥ ಎಲೌ ಮೈತ್ರೇಯನೇ, ಅಂತೆಯೇ ಮರಣವನ್ನು ಹೊಂದುವ ಪ್ರಾಣಿವರ್ಗವೂ, ಮರಣವನ್ನಂಟುಮಾಡುವ ಪ್ರಾಣಿವರ್ಗವೂ ಕೂಡ್ಮ ಪ್ರಳಯಕಾಲದಲ್ಲಿ ಭಯಂಕರವೆನಿಸಿದ ರೂಪದಿಂದೊಡಗೂಡಿದವನಾದು ದರಿಂದ ರುದ್ರ, ನೆಂಬದಾಗಿ ಕರೆಯಿಸಿಕೊಳ್ಳುವ ಆ ವಿಷ್ಣುವಿನ ಸ್ವರೂಪವೆಂತಲೇ ದೃಢವಾಗಿ ತಿಳಿ ॥ ೫೯ ॥ ಇಂತು ಜನಾರ್ದನನೆನಿಸಿದ ಆ ಪರಮಾತ್ಮನೇ ಲೋಕನಿರ್ಮಾಣಕರ್ತೃವೂ, ಜಗತ್ಪಾಲಕನೂ, ಲೋಕನಾಶಕನೂ ಎನಿಸಿ ಆ ಆ ರೂಪಗಳಿಂದ, ಸೃಷ್ಟಿ, ಸ್ಥಿತಿ, ಲಯಗಳೆಂಬ ಮೂರು ಕಾರ್ಯಗಳನ್ನೂ, ಅನವರತವೂ ನೆರವೇರಿಸುತಿರುವನು ಆತನನ್ನುಳಿದು ಬೇರೊಬ್ಬನೂ ಇಲ್ಲ ಬೇರೆಕಾರ್ಯವೂ ಇಲ್ಲ. ಎಲ್ಲ ಕಾರ್ಯಗಳನ್ನೂ ಆತನೇ ನಡೆಸುವನೆಂದು ಭಾವವು ॥ ೬೦ ॥ ಇಂತು ಪರಮಾತ್ಮನು ಸತ್ವ ಮೊದಲಾದ ಮೂರು ಗುಣಗಳ ಕ್ಷೋಭೆಯಿಂದ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ, ಮೂರುರೂಪಗಳಂ ತಾಳಿ, ಮೇಲೆ ಹೇಳಿದ ಗುಣತ್ರಯ ಕಾರ್ಯಭೂತಗಳೆನಿಸಿದ ಸೃಷ್ಟಿ, ಸ್ಥಿತಿ, ಲಯಗಳಲ್ಲಿ ಪ್ರವರ್ತಿಸುವನು ಆತನು ಪಿಟವಾಗಿಯೂ ಈ ಸತ್ವಾದಿಗುಣಗಳಿಗಾಗಲಿ, ಅಥವಾ ಇವುಗಳ ಕಾರ್ಯವೆನಿಸಿದ ಸೃಷ್ಟಿ, ಸ್ಥಿತಿಲಯಗಳಿಗಾಗಲಿ, ಬಳಪಟ್ಟವನಲ್ಲಾ ಆದುದರಿಂದಲೇ ಆ ಪರಮಾತ್ಮನು ನಿರ್ಗುಣನೆನಿಸುವನು ಇಂತು ನಿರ್ಗುಣನೆನಿಸಿದ ಪರಮ ಪದದಲ್ಲಿರುವವನಾದುದರಿಂದ ಇವನನ್ನು ಪರಿಪೂರ್ಣನೆಂದು ಕರೆವರು ॥ ೬೧ ॥ ಇಂತು ನಿರ್ಗುಣವೂ, ಸರ್ವೋತ್ತಮವೂ, ಪರಿಪೂರ್ಣವೂ ಎನಿಸಿದ ಆ ಪರಮಾ

ಚತುಷ್ಪ್ರಕಾರಂ ತದಪಿ ಸ್ವರೂಪಂ ಪರಮಾತ್ಮನಃ ॥ ೪೨ ॥
ಮೈತ್ರೇಯಃ॥ ಚತುಷ್ಪ್ರಕಾರತಾಂ ತಸ್ಯಜ್ಞಾನಭೂತಸ್ಯ
ವೈನುನೆ ! । ತ್ವಮಾಚಕ್ಷ್ವ ಯಥಾನ್ಯಾಯಂ ಯದುಕ್ತಂ
ಪರಮಂ ಪದಂ ॥ ೪೩ ॥ ಶ್ರೀಪರಾಶರಃ ॥ ಮೈತ್ರೇಯ !
ಕಾರಣಂ ಪ್ರೋಕ್ತಂ ಸಾಧನಂ ಸರ್ವ ವಸ್ತು ಷು । ಸಾ
ಧ್ಯಂ ಚ ವಸ್ವಭಿಮತಂ ಯತ್ಸಾಧಯಿತು ಮಾತ್ಮನಃ ॥೪೪॥
ಯೋಗಿನೋ ಮುಕ್ತಿ ಕಾಮುಸ್ಯ ಪ್ರಾಣಾಯಾಮಾದಿ ಸಾಧನಂ।

ತ್ಮನ ರೂಪವು ನಾಲ್ಕು ಬಗೆಯಾಗಿರುವುದು. ಆ ಪರಮಾತ್ಮನು ಜ್ಞಾನ ಸ್ವರೂಪನೂ, ಸರ್ವವ್ಯಾಪಕನೂ, ಸ್ವತಃ ಪ್ರಕಾಶನೂ, ಅದ್ವಿತೀಯನೂ,ಎನಿಸುವನು; ಇಂತು ಈ ನಾಲ್ಕೂ ಆ ಪರಮಾತ್ಮನ ರೂಪಗಳೆಂದು ವಿವೇಕಿಗಳು ವ್ಯವಹರಿಸುವರು ॥ ೪೨ ॥ ಇಂತು ಪರಾಶರಮುನಿಯು ಹೇಳಿದ ಪರಮಾತ್ಮನ ಸ್ವರೂಪವನ್ನು ವಿಶದವಾಗಿ ತಿಳಿಯಬೇಕೆಂದೆಣಿಸಿ, ಮೈತ್ರೇಯನು ,ಎಲೈ ಮುನಿ ಶ್ರೇಷ್ಠನೆನಿಸಿದ ಪರಾಶರನೆ ಜ್ಞಾನಸ್ವರೂಪನೆನಿಸಿದ ಆ ಪರಮಾತ್ಮನ ನಾಲ್ಕು ಬಗೆಯಾದ ಸ್ವರೂಪವನ್ನು ನನಗೆ ವಿಶದವಾಗಿ ಮರೆಮಾಚದೆ ತಿಳುಹಬೇಕೆಂಬದಾಗಿ, ಬೆಸಗೊಂಡನು ॥ ೪೩ ॥ ಇಂತು ಪರಮೋತ್ಸಾಹದಿಂದ ಬೆಸಗೊಂಡ ಮೈತ್ರೇಯನಂ ಕುರಿತು ಪರಾಶರಮುನಿಯು ಹೇಳತೊಡಗಿದನು—ಎಲೌ ಮೈತ್ರೇಯನೆ; ಗುಣಶೂನ್ಯನೆನಿಸಿದ ಪರಮಾತ್ಮನ ನಾಲ್ಕು ಬಗೆಗಳಾದ ರೂಪಗಳನ್ನೂ ಅಂತಹ ಪರಮಾತ್ಮನನ್ನು ಹೊಂದಲು ಉಪಾಯಗಳನ್ನೂ ತಿಳಿಸುವೆನು ಕಿವಿಗೊಟ್ಟು ಕೇಳು, ಎಲ್ಲಾ ವಸ್ತುಗಳಲ್ಲಿಯೂ, ಯಾವುದು ಕಾರಣವೆನಿಸುವುದೋ ಅದನ್ನು ಸಾಧನವೆಂದು ವ್ಯವಹರಿಸುವರು. (ಸಾಧಿಸುವದಕ್ಕೆ ತಕ್ಕ ಉಪಾಯವೆಂದರ್ಥ) ಯಾವ ವಸ್ತುವನ್ನು ಹೊಂದಬೇಕೆಂದು ಬಯಿಸಿ ಪ್ರಯತ್ನಿಸುವರೋ ಆ ವಸ್ತುವು ಸಾಧ್ಯವೆನಿಸುವುದು. (ಹೊಂದುವುದಕ್ಕೆ ಯೋಗ್ಯವಾದ ಪದಾರ್ಥವೆಂದರ್ಥ) ॥೪೪॥ ಈ ಮೇಲೆ ಹೇಳಿದಂತೆ ಪ್ರಕೃತದಲ್ಲಿ ಮುಕ್ತಿಯಂ ಬಯಸುವ ಯೋಗಿಗೆ ಆ ಮುಕ್ತಿಯಂ ಹೊಂದಲು ಪ್ರಾಣಾಯಾಮ, ಚಿತ್ತೈಕಾಗ್ರತೆ, (ಮನಸ್ಸನ್ನು ಸ್ಥಿರವಾಗಿ ಒಂದು ಕಡೆ ನಿಲ್ಲಿಸುವಿ

ಸಾಧ್ಯಂಚ ಪರಮಂಬ್ರಹ್ಮ ಪುನರ್ನಾ ವರ್ತತೇ ಯತಃ ॥೪೫॥
ಸಾಧನಾಲಂಬನಂ ಜ್ಞಾನಂಮುಕ್ತ್ಯೇ ಯೋಗಿನಾಂ ಹಿಯತ್ ।
ಸಭೇದಃ ಪ್ರಥಮಸ್ತ್ಯಸ್ಯ ಜ್ಞಾನಭೂತಸ್ಯ ವೈ ದ್ವಿಜ ! ॥ ೪೬ ॥
ಯುಂಜತಃ ಕ್ಲೇಶಮತ್ಯರ್ಥಂ ಸಾಧ್ಯಂಯದ್ಬ್ರಹ್ಮಯೋಗಿನಾಂ।
ತದಾಲಂಬನ ವಿಜ್ಞಾನಂ ದ್ವಿತೀಯೋಂಶೋ ಮಹಾಮುನೆ! ॥೪೭॥
ಉಭಯೋ ಸ್ತ್ಯವಿಭಾಗೇನ ಸಾಧ್ಯಸಾಧನಯೋ ರ್ಹಿಯತ್ ।

ಕೆ) ಇವುಗಳು ಸಾಧನಗಳೆನಿಸುವುವು. ತತ್ಪದ ಗೋಚರವೆನಿಸಿದ, ಪರ ಬ್ರಹ್ಮನೇ ಸಾಧ್ಯವೆನಿಸುವುದು. ಇಂತಹ ಬ್ರಹ್ಮವಸ್ತುವು ಸತ್ಯಸುಖ ಸ್ವರೂಪವಾದುದು. ಇಂತು ಎಂದಿಗೂ ನಾಶವಿಲ್ಲದ ಸುಖಸ್ವರೂಪನೆನಿಸಿದ ಆ ಪರಮಾತ್ಮನನ್ನು ಬಂದು ಸಾರಿ ಸೇರಿದವನು ಮರಳಿ ಹಿಂದಿರುಗುವುದಿಲ್ಲವು. ಆದುದರಿಂದಲೇ ಆ ಪರಮಾತ್ಮನೂ, ಆತನನ್ನು ಅರಿಯುವುದರಿಂದ ಉಂಟಾಗುವ ಸುಖವೂ ಕೂಡ ಶಾಶ್ವತಗಳೆನಿಸುವುವು ॥ ೪೫ ॥ ಎಲೈ ದ್ವಿಜವರ್ಯನೆನಿಸಿದ ಮೈತ್ರೇಯನೆ!"ನಾನು ಪರಮಾತ್ಮನ ಅಂಶಭೂತನು. ಆದುದರಿಂದ ನನಿಗೆ ನಾಶವಿಲ್ಲ ಶರೀರವು ನಶ್ವರಮಾದುದು, ಈಶರೀರಕ್ಕೂ ನನಗೂ ಸಂಬಂಧವುಇಲ್ಲ" ಎಂಬ ದೇಹಾತ್ಮ ವಿವೇಕದಲ್ಲಿ ಸಾಧನವೆನಿಸಿದ ಪದಾರ್ಥಶುದ್ಧಿಯೂ, ಜೀವನು ಶುದ್ಧನು ಶರೀರವು ಮಲಿನವಾದುದು. ಎಂಬ ಪದಾರ್ಥ ವಿಷಯಕವಾದಶುದ್ಧಿಜ್ಞಾನವೂ ಕೂಡ ಜ್ಞಾನಸ್ವರೂಪನೆನಿಸಿದಪರಮಾತ್ಮನರೂಪಗಳಲ್ಲಿ ಮೊದಲನೆಯದಾಗಿರುವುದು॥೪೬॥ಲೋಕದಲ್ಲಿ ತಾನು ಅನುಭವಿಸುವ ನಾನಾಸಂಕಟಗಳನ್ನು ನಿವಾರಣೆಮಾಡಿಕೊಳ್ಳಲೋಸುಗ ಯೋಗವನ್ನು ಅಭ್ಯಸಿಸುವ ಮುಮುಕ್ಷುವು, ಹೊಂದಲು ಯೋಗ್ಯವಾದ, ಸತ್ಯಜ್ಞಾನಾನಂದಸ್ವರೂಪವೆನಿಸಿದ ಪರಬ್ರಹ್ಮವಸ್ತುವು ಸಾಧ್ಯವೆನಿಸುವುದು. ಇಂತಹ ಪರಾತ್ಪರವಸ್ತುವನ್ನುಹೊಂದುವುದಕ್ಕೆ ಉಪಾಯಭೂತವಾದ ವಿಶೇಷಜ್ಞಾನವೇ ಸಾಧನವೆನಿಸುವುದು. ಇಂತು ಸಾಧನ ಭೂತವಾದ ವಿಜ್ಞಾನವನ್ನು ಆ ಪರಮಾತ್ಮನ ಎರಡನೆಯ ರೂಪವೆಂಬದಾಗಿ ವ್ಯವಹರಿಸುವರು॥೪೭॥ ಹೊಂದಲು ಯೋಗ್ಯವಾದ ಪರವಸ್ತುವಿಗೂ, ಅಂತಹ ಪರವಸ್ತುವನ್ನು ಪಡೆಯಲು ಸಾಧನಭೂತವೆನಿಸಿದ ತಿಳಿವಳಿಕೆಗೂ ಅಭೇದವಂ ನಿರ್ಧರಿಸಿ ಕೊಂಡು, ಜೀವಾತ್ಮರಿಗೆ ಪರ

ವಿಜ್ಞಾನಮದ್ವೈತಮಯಂ ತದಭ್ಯಗೋನ್ಯೋ ಮಯೋದಿತಃ ॥
ಜ್ಞಾನತ್ರಯಸ್ಯ ವೈತಸ್ಯ ವಿಶೇಷೋ ಯೋಮಹಾಮುನೆ ! ।
ತನ್ನಿರಾಕರಣದ್ವಾರ ದರ್ಶಿತಾತ್ಮ ಸ್ವರೂಪವತ್ ॥ ೪೯ ॥
ನಿರ್ವ್ಯಾಪಾರ ಮನಾಖ್ಯೇಯಂ ವ್ಯಾಪ್ತಿಮಾತ್ರ ಮನೂಪಮಂ ।

ಸ್ವರ ಐಕ್ಯಜ್ಞಾನವಂ ಬಾರಿಬಾರಿಗೂ ಅನುಸಂಧಾನದಿಂದ ದೃಢಪಡಿಸಿ "ನಾನು(ಜೀವನು) ಸಚ್ಚಿದಾನಂದ ಸ್ವರೂಪವೆನಿಸಿದ ಪರವಸ್ತುವೇ ಆಗಿರುವೆನು.ನಾನೇ ಪರಬ್ರಹ್ಮವಸ್ತುವಲ್ಲದೆ ನನಗಿಂತಲೂ ಬೇರೊಂದು ಪದಾರ್ಥವೇ ಇಲ್ಲ" ಎಂಬ ವಿಶೇಷಜ್ಞಾನವು ಆ ಪರಮಾತ್ಮನ ಸ್ವರೂಪವೆನಿಸಿದ ಜ್ಞಾನದ ಮೂರನೆಯ ಅಂಶವೆಂಬುದಾಗಿ ತಿಳಿ ॥೪೮॥ "ನಶ್ವರವಾದ ಈ ದೇಹಕ್ಕಿಂತಲೂ ನಾನು ಬೇರೆಯಾದವನು ಈ ದೇಹಕ್ಕೂ ನನಗೂ ಸಂಬಂಧವಿಲ್ಲ ದೇಹವು ಕ್ಷಣಿಕವಾದುದು ಜೀವನು ನಿತ್ಯನು. "ನಾಽರಹಿತನು"ಎಂಬ ಜ್ಞಾನಾಂಶವುಮೊದಲನೆಯ ರೂಪವು."ಆ ಪರಮಾತ್ಮವಸ್ತು ವುಸಚ್ಚಿದಾನಂದ ಸ್ವರೂಪವಾದುದು " ಎಂಬ ಭಾವನೆಯು ಎರಡನೆಯ ಅಂಶವು ,,ನಾನು ಬ್ರಹ್ಮನಲ್ಲದೆ ಬೇರೆಯಲ್ಲ. ನಾನೇ ಪರಾತ್ಪರವಸ್ತುವಾಗಿರುವಲ್ಲಿ ನನಗಿಂತಲೂ ಬೇರೊಂದು ಪರವಸ್ತುವೆಲ್ಲಿಯದು' ಎಂಬ ತಿಳಿವಳಿಕೆಯು ಮೂರನೆಯ ಭಾಗವೆನಿಸಿರುವುದು. ಇಂತು ಮೂರುಬಗೆಯಾದ ಜ್ಞಾನದ ವಿಶೇಷಾಂಶವನ್ನು ದೂರವಾಡಿ ,,ಆ ಪರಮಾತ್ಮನಿಗೆ ಧ್ಯಾನವೊದಲಾದ ಯಾವ ವ್ಯಾಪಾರಗಳೂ ಇಲ್ಲವು. ಆದಕಾರಣ ಆ ಪರತತ್ವವನ್ನು ಇಂತಹುದೆಂದು ತೋರಿಸಲಾಗದು. ಮನಸ್ಸಿಗೆ ಮಾತ್ರ ಯಾವುದೋ ಒಂದು ಬಗೆಯಾದ ರೂಪದಿಂದ ತೋರಿಬರುವುದಾದುದರಿಂದ ಆ ವಸ್ತುವು ಎಲ್ಲೆಲ್ಲಿಯೂ ವ್ಯಾಪಿಸಿರುವುದು. ಅದಕ್ಕೆ ಸರಿವಾದ ಬೇರೊಂದು ವಸ್ತುವೇ ಇಲ್ಲದಿರುವ ಕಾರಣ ಅಸದೃಶವೆನಿಸಿರುವುದು. ಈ ಕಾರಣದಿಂದಲೇ ಆ ಪರವಸ್ತುವನ್ನು ಅದ್ವಿತೀಯವೆನ್ನುವರು. ಎಲ್ಲ ವಿಧವಾದ ತಿಳಿವಳಿಕೆಗೂ ವಿಲಕ್ಷಣವಾದುದು. ಅದು ಮತ್ತೊಂದು ವಸ್ತುವಿನ ಸಹಾಯದಿಂದ ಬೆಳಗತಕ್ಕುದಲ್ಲ ಯಾವ ವಿಧವಾದ ಮನೋವೃತ್ತಿಗೂ ಗೋಚರಿಸತಕ್ಕುದಲ್ಲವು. ಇಂತು ಮನೋವೃತ್ತಿಶೂನ್ಯವಾದುದರಿಂದ ರಾಗದ್ವೇಷವಿಮುಕ್ತವೆನಿಸುವುದು. ಇಂತು ರಾಗದ್ವೇಷ ಶೂನ್ಯವಾದು

ಆತ್ಮಸಂಬಂಧವಿಷಯಂ ಸತ್ತಾಮಾತ್ರ ಮಲಕ್ಷಣಂ ॥ ೫೦ ॥
ಪ್ರಶಾಂತಮಭಯಂ ಶುದ್ಧಂ ದುರ್ವಿಭಾವ್ಯ ಮಸಂಶ್ರಯಂ ।
ವಿಷ್ಣೋರ್ಜ್ಞಾನ ಮಯಮ್ಯೋಕ್ತಂ ತದ್ಬ್ರಹ್ಮ ಸಂಜ್ಞಂ ಪರಂ ಬ್ರಹ್ಮ ಸಂಜ್ಞಂ
ತಂ॥೫೧॥ತತ್ರಾನ್ಯಜ್ಞಾನ ರೋಧೇನಯೋಗಿನೋ ಯಾಂತಿಯೋಲ
ಯಂ।ಸಂಸಾರ ಕರ್ಷಣೋಪ್ತಿ ತೇಯಾಂತಿನಿರ್ಬೀಜತಾಂದ್ವಿಜ॥
॥೫೨॥ ಏವಂಪ್ರಕಾರ ಮಮಲಂ ನಿತ್ಯಂ ವ್ಯಾಪಕಮಕ್ಷಯಂ।

ದರಿಂದ ಅಸವರತವೂ ಶಾಂತಸ್ವಭಾವವೂಗಿರುವುದು. ಈ ಕಾರಣದಿಂ ದಲೇ ಅಂತಹ ಪರವಸ್ತುವನ್ನು ಭಯರಹಿತವೆನ್ನುವರು, (ತನಗಿಂತಲೂ ಬೇರೆಯಾದ ಮತ್ತೊಂದು ವಸ್ತುವಿದ್ದಲ್ಲಿ ಭಯಾದಿಗಳು ತೋರುವವು. ಎಲ್ಲವೂ ತನ್ಮಯ ವಾಗಿರುವಲ್ಲಿ ರಾಗದ್ವೇಷಾದಿಗಳೆಲ್ಲಿಯವು ? ಇಂತು ರಾಗದ್ವೇಷಗಳಲ್ಲದಿರುವಾಗ್ಗೆ ರಾಗದ್ವೇಷಾದಿಗಳಿಂದುಂಟಾಗುವ ಭಯಾದಿಗಳು ತಾನೇ ಎಲ್ಲಿಯವು ?) ಆ ಪರತತ್ವವು ನಿರ್ವಿಷಯವಾದುದರಿಂದ ಶುದ್ಧವೆನಿಸುವುದು, ಅದು ಕಾರಣ ಮನಸ್ಸಿನಿಂದಲೂ ಕೂಡ ಊಹಿಸಿ ತಿಳಿಯಲಸಾಧ್ಯವಾಗಿರುವುದು ಈ ಕಾರಣದಿಂದಲೇ ಆ ಪರತತ್ವವು ಆಶ್ರಯಾಂತರಶೂನ್ಯವೆನಿಸುವುದು, ಈ ರೀತಿಯಿಂದ ಜ್ಞಾನಸ್ವರೂಪನೆನಿ ಸಿದ ಪರಮಾತ್ಮನ ಏಕಾಕಾರ ಸಮಾಧಿಭೂತವಾದ ಪರಮಪದದ ತಿಳಿ ವಳಿಕೆಯೇ ಆ ಪರಮಾತ್ಮನ ನಾಲ್ಕನೆಯ ರೂಪವೆಂದು ಹೇಳುವರು ॥ ೪೯-೫೦-೫೧ ॥ (ಇಂತಹ ಜ್ಞಾನಸ್ವರೂಪದಲ್ಲಿ ಲಯವಂ ಹೊಂದಿದವರು ಮರಳಿ ಜರಾಮರಣಾದಿಗಳಿಗೆ ಈಡಾಗದೆ ಕೃತಕೃತ್ಯರಾಗುವರು, ಅದೆಂತೆಂದರೆ—) ಅಕ್ಕಿಯ ಕಾಳನ್ನು ಭೂಮಿಯಲ್ಲಿ ಬಿತ್ತಿದರೆ ಹೇಗೆ ಪೈರಾಗುವುದಿಲ್ಲವೋ ಅಂತೆಯೇ ಅವಿದ್ಯೆಯೆನಿಸಿದ ಅಜ್ಞಾನವಂದೂರಮಾ ಡಿ ನಾಲ್ಕನೆಯ ಜ್ಞಾನಸ್ವರೂಪನೆನಿಸಿದ ಪರಮಾತ್ಮನಲ್ಲಿ ಲೀನರಾದವರು, ಮೊದಲಿನ ಮೂರುಜ್ಞಾನಗಳ ವಿಶೇಷಾಂಶವನ್ನೂ ದೂರಮಾಡಿಅಹಂಕಾರ ಶೂನ್ಯರಾ, ಜ್ಞಾನಿಗಳೂ ಎನಿಸಿದ ಜ್ಞಾನಾಂಕುಶದಿಂದ ಕರ್ಮಪಾಶಗಳಂ ಕತ್ತರಿಸಿ ಜರಾಮರಣರೂಪವಾದ ಈ ಸಂಸಾರವಂ ನೀಗಿಕೊಳ್ಳುವರು ॥೫೨॥ ಈ ರೀತಿಯಿಂದ ಮುಕ್ತಿಗೋಸುಗ ಪ್ರಯತ್ನಿಸುವ ಯೋಗಶೀಲ ನು, ಶುದ್ಧನೂ, ನಾಶರಹಿತನೂ, ಸರ್ವವ್ಯಾಪಕನೂ, ಹ್ರಸ್ವವಿಮುಕ್ತನೂ

ಸಮಸ್ತಭೇದರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ ॥ ೫೩ ॥
ತದ್ಬ್ರಹ್ಮ ಪರಮಂ ಯೋಗೀ ಪುನರ್ನಾವರ್ತತೇ ಯತಃ ।
ಅಪುಣ್ಯಪುಣ್ಯೋ ಪರಮಃ ಕ್ಷೀಣ ಕ್ಲೇಶೋ ಽತಿನಿರ್ಮಲಃ ॥೫೪॥
ದ್ವೇರೂಪೇ ಬ್ರಹ್ಮಣಸ್ತಸ್ಯ ಮೂರ್ತಂಚಾ ಮೂರ್ತಮೇವಚ।
* ಕ್ಷರಾಕ್ಷರ ಸ್ವರೂಪೇತೇ ಸರ್ವಭೂತೇಷ್ವವಸ್ಥಿತೇ ॥ ೫೫ ॥

ಭೇದಶೂನ್ಯನೂ, ಎನಿಸಿ ವಿಷ್ಣುವೆಂಬ ಹೆಸರಿನಿಂದ ಕರೆಯಿಸಿಕೊಳ್ಳುವ ಪರಮಪದವಂ ಹೊಂದಿ ಶಾಶ್ವತ ಸುಖವನ್ನನುಭವಿಸುವನು ॥೫೩॥ ಇಂತು ಪರಮಪದವಂ ಹೊಂದಿದ ಯೋಗಿಯು ಮರಳಿ ಈ ಸಂಸಾರ ಪಾಶಕ್ಕೆ ಸಿಲುಕಿ ನರಳುವುದಿಲ್ಲಾ, ಆತನಿಗೆ ಪುಣ್ಯಪಾಪಗಳಿರಡೂ ಇಲ್ಲವು. ಆತನಿಗಿಂತಲೂ ಬೇರೊಂದು ವಸ್ತುವೇ ಇಲ್ಲ. ಆತನಸಂಕಟಗಳೆಲ್ಲವೂ ಕೂಡಲೇ ನಾಶವನ್ನೈದುವುವು. ಆತನು ಪರಮ ಪವಿತ್ರನೆನಿಸುವನು. (ಭಿದ್ಯತೇ ಹೃದಯಗ್ರಂಥಿ ಶ್ಛಿದ್ಯಂತೇ ಸರ್ವಸಂಶಯಾಃ। ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ದೃಷ್ಟೇಪರಾವರೇ,, ಎಂಬಶ್ರುತಿಯೂ ಕೂಡ ಇದೇಅರ್ಥವನ್ನೇ ಬೋಧಿಸುತ್ತದೆ) ॥೫೪॥ ಹಾಗಾದರೆ ಇಂತಹ ವ್ಯಕ್ತಿಯಂ ಹೊಂದಲು ಯಾವರೀತಿಯಿಂದ ಉಪಾಸನೆ ಮಾಡಬೇಕೆಂದರೆ ಹೇಳುವೆನು ಕೇಳು. ಇಂತು ಮೇಲೆ ಹೇಳಿದ ಗುಣಯುಕ್ತನಾದ ಪರಮಾತ್ಮನಿಗೆ ಮೂರ್ತ ಅಮೂರ್ತಗಳೆಂಬುದಾಗಿ ಎರಡುರೂಪಗಳುಂಟು. ಇವುಗಳನ್ನೇ ಕ್ಷರ ಮತ್ತು ಅಕ್ಷರಗಳೆಂಬುದಾಗಿ ವ್ಯವಹರಿಸುವರು. ಈ ರೂಪಗಳು ಸಕಲಪ್ರಾಣಿಗಳಲ್ಲಿಯೂ ನೆಲೆಸಿರುವವು॥೫೫॥ಪರಮಾತ್ಮನೇ ಅಕ್ಷರ ನೆನಿಸುವನು, ಈ ಸಕಲ ಪ್ರಪಂಚವೂ ಕ್ಷರವೆನಿಸುವುದು. ,,ಹಾಗಾದರೆ ಅಕ್ಷರವೆನಿಸಿದ ಪರಬ್ರಹ್ಮನಿಗೆ ವಿಲಕ್ಷಣವಾದ ಕ್ಷರರೂಪವುಹೇಗೆ,, ಎಂಬ ಶಂಕೆ

---

* ಮೂರ್ತ, ರೂಪವುಳ್ಳದ್ದು - ಚತುರ್ಮುಖನೊದಲಾದ ಜೀವರಾಶಿಗಳು, ಅಮೂರ್ತ, ರೂಪ ಶೂನ್ಯವಾದುದು,ಸರ್ವವ್ಯಾಪಿಯಾದುದು ಈವಿಷಯದಲ್ಲಿ: ದ್ವಾವಿಮೌ ಪುರುಷೌ ಲೋಕೇಕ್ಷರ ಶ್ಚಾಕ್ಷರ ಏವಚ । ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋ ಽಕ್ಷರ ಉಚ್ಯತೇ, ಎಂಬ ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನ ವಚನವನ್ನು ಉದಾಹರಣೆಯಾಗಿ ಭಾವಿಸಬೇಕು

ಅಕ್ಷರಂ ತತ್ಪರಂ ಬ್ರಹ್ಮ ಕ್ಷರಂ ಸರ್ವಮಿದಂ ಜಗತ್ ।
ಏಕದೇಶಸ್ಥತಸ್ಯಾಗ್ನೇ ಜ್ಯೋತ್ಸ್ನಾ ವಿಸ್ತಾರಿಣೀ ಯಥಾ ।
ಪರಸ್ಯಬ್ರಹ್ಮಣ ಶಕ್ತಿಸ್ತಥೇದ ಮಖಿಲಂ ಜಗತ್ ॥ ೫೬ ॥
ತತಾಪ್ಯಾ ಸನ್ನದೂರತ್ವಾ ದ್ಬ್ರಹ್ಮಸ್ವ ಸ್ವಲ್ಪತಾ ಮಯಃ ।
ಜ್ಯೋತ್ಸ್ನಾ ಳಭೇದೋಽಸ್ತಿತಚ್ಛಕ್ತೇ ಸ್ತದ್ವನ್ಮೈತ್ರೇಯ! ವಿದ್ಯತೇ

ಯನ್ನು ಪರಿಹರಿಸಲು ದೃಷ್ಟಾಂತದಿಂದ ಮೇಲೆ ಹೇಳಿದ ಅರ್ಥವನ್ನು ಸ್ಥಿರಪಡಿಸುತ್ತಾನೆ—ಅರಣ್ಯದಲ್ಲಿ ಯಾವುದೋ ಒಂದು ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಉರಿಯುತ್ತಿರುವ ಬೆಂಕಿಯು ಅತ್ಯಲ್ಪವಾಗಿದ್ದರೂ ಆ ಬೆಂಕಿಯೇ ಎಂತು ಸಂಪೂರ್ಣವಾಗಿ ಆ ವನವನ್ನೆಲ್ಲಾ ಸುಡತಕ್ಕ ಸಾಮರ್ಥ್ಯದಿಂದ ಕೂಡಿರುವುದೋ ಮತ್ತು ತನ್ನ ಪ್ರಕಾಶದಿಂದ ಆ ಅರಣ್ಯವನ್ನೆಲ್ಲಾ ಬೆಳಗುವುದೋ, ಅಂತೆಯೇ ಅಕ್ಷರ ನೆನಿಸಿದ ಪರಮಾತ್ಮನು ಸೂಕ್ಷ್ಮರೂಪದಿಂದ ಸಕಲಪ್ರಾಣಿಗಳಲ್ಲಿಯೂ ನೆಲಸಿ ಈ ಜಗವೆಲ್ಲವಂ ವ್ಯಾಪಿಸಿರುವನು ॥೫೬॥ ಹಿಂದೆ ಹೇಳಿದ ಅಗ್ನಿಯನ್ನೇ ದೃಷ್ಟಾಂತ ವಾಗಿಟ್ಟುಕೊಂಡು ಬ್ರಹ್ಮಜೀವರುಗಳಿಗೆ ತಾರತಮ್ಯವನ್ನು ತೋರಿಸುತ್ತಾನೆ—ಹಿಂದೆಹೇಳಿದ ಅಗ್ನಿಯು ಅಲ್ಪವಾಗಿದ್ದರೂ ಸಮೀಪದಲ್ಲಿ ಮಾತ್ರ ವಿಶೇಷವಾಗಿ ಪ್ರಕಾಶವನ್ನುಂಟು ಮಾಡುವುದು. ದೂರಕ್ಕೆ ಅಪ್ಪುಪ್ರಕಾಶವು ಕಾಣದಿದ್ದರೂ ಸ್ವಲ್ಪ ಮಟ್ಟಿಗಾದರೂ ಪ್ರಕಾಶವು ಕಾಣುವುದಲ್ಲದೆ ಸಂಪೂರ್ಣವಾಗಿ ಬೆಳಕೇ ಕಾಣದಿರಲಾರದು. ಅಂತೆಯೇ ಬ್ರಹ್ಮನೇ ಮೊದಲಾಗಿ ತೃಣದವರೆಗಿನ ಸಕಲ ಶರೀರಗಳಲ್ಲಿಯೂ ಅಜ್ಞಾನಾವರಣವು ಒಂದೇವಿಧವಾಗಿಲ್ಲದೆ ಹೆಚ್ಚು ಕಡಿಮೆಯಾಗಿರುವುದರಿಂದ ಕ್ಷೇತ್ರಜ್ಞರೂಪವಾದ ಬ್ರಹ್ಮಶಕ್ತಿಯೂ ಕೂಡ ಒಂದೇ ವಿಧವಾಗಿಲ್ಲದೆ ಹೆಚ್ಚು ಕಡಿಮೆಯಾಗಿದ್ದುಕೊಂಡು ತಾರತಮ್ಯವನ್ನುಂಟು ಮಾಡಿರುವುದು. ಈ ಅರ್ಥವೆಲ್ಲವೂ ಒಂದೆಸ್ಪಷ್ಟವಾಗಿರುವುದು. (ಪ್ರಕಾಶಾದಿವತ್ತ್ವೈವಂಪರಃ ಎಂಬ ಬ್ರಹ್ಮಸೂತ್ರವನ್ನು ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ಶ್ರೀರಾಮಾನುಜಾಚಾರ್ಯರವರು ಈ ಅರ್ಥವನ್ನು ವಿಶದಪಡಿಸಿರುವರು, ಎಂಬುದಾಗಿ ವಿಷ್ಣುಚಿತ್ತೀಯದ ಅಭಿಪ್ರಾಯವು) ॥೫೬॥ ಎಲೈ ಬ್ರಾಹ್ಮಣೋತ್ತಮನೆನಿಸಿದ ಮೈತ್ರೇಯನೆ, ಈಜಗತ್ತಿನ ಸೃಷ್ಟಿ ಸ್ಥಿತಿಲಯಗಳಂ ನೆರವೇರಿಸುವಂ

॥೫೭॥ ಬ್ರಹ್ಮ ವಿಷ್ಣು ಶಿವಾ ಬ್ರಹ್ಮಕ್ಷ ! ಪ್ರಧಾನಾ ಬ್ರಹ್ಮಕಕ್ಷ್ಯಾ
ಯಃ।ತತಶ್ಚ ದೇವಾ ಮೈತ್ರೇಯ! ನ್ಯೂನಾ ದಕ್ಷಾದಯಸ್ತಥಾ ॥೫೮॥
ತತೋ ಮನುಷ್ಯಾಃ ಪಶವೋ ಮೃಗಪಕ್ಷಿ ಸರೀಸೃಪಾಃ ।
ನ್ಯೂನಾ ನ್ಯೂನಕರಶ್ಚೈವ ವೃಕ್ಷಗುಲ್ಮಾದಯಸ್ತಥಾ ॥ ೫೯ ॥
ತದೇತ ದಕ್ಷರಂ ನಿತ್ಯಂ ಜಗನ್ಮೂನಿ ವರಾಖಿಲ । ಆವಿರ್ಭಾವ

ತಹ ಬ್ರಹ್ಮವಿಷ್ಣು ಶಿವರೆಂಬ ಮೂವರು ಪರಬ್ರಹ್ಮಕಕ್ಷ್ಯೆಯಲ್ಲಿ ಪ್ರಧಾನರೆನಿಸುವರು. ಇತರ ಪ್ರಾಣಿಗಳಿಗಿಂತಲೂ ಜ್ಞಾನ, ಬಲ ಮೊದಲಾದುವು ಈ ಮೂವರಿಗೆ ವಿಶೇಷವಾಗಿರುವುದರಿಂದ ಈ ರೀತಿನ್ಯಾಯವಿರುವುದು. ಆ ಬಳಿಕ ಇಂದ್ರಾದಿಗಳು ತ್ರಿಮೂರ್ತಿಗಳಿಗಿಂತಲೂ ಜ್ಞಾನಶಕ್ತಿಗಳಲ್ಲಿ ಸ್ವಲ್ಪಕಡಿಮೆಯಾಗಿರುವ ಇಂದ್ರಾದಿ ದೇವತೆಗಳಲ್ಲಿ ಆ ಪರಮಾತ್ಮನ ಅಂಶವು ತ್ರಿಮೂರ್ತಿಗಳಲ್ಲಿರುವುದಕ್ಕಿಂತಲೂ ಸ್ವಲ್ಪಕಡಿಮೆಯಾಗಿರುವುದು ಓ ಮೈತ್ರೇಯನೆ, ಇಂತಹ ಇಂದ್ರಾದಿ ದೇವತೆಗಳಿಗಿಂತಲೂ ದಕ್ಷನೇ ಮೊದಲಾದ ಪ್ರಜಾಪಾಲಕರು ಅಲ್ಪವಾದ ಜ್ಞಾನಶಕ್ತಿ ಯುಕ್ತರೆನಿಸುವರು. ಅದು ಕಾರಣ ಇಂದ್ರಾದಿಗಳಿಗಿಂತಲೂ ಇವರಲ್ಲಿ ಪರಮಾತ್ಮ ತತ್ವವು ಅಲ್ಪವಾಗಿರುವುದು. ॥೫೮॥ ಆ ಬಳಿಕ ಮನುಷ್ಯರು ಇಂತಹ ದಕ್ಷ ಮೊದಲಾದ ವರಿಗಿಂತಲೂ ಜ್ಞಾನಶಕ್ತಿ ಹೀನರನಿಸುವರು. ಇಂತಹ ಮನುಷ್ಯರಿಗಿಂತಲೂ ಪಶುಗಳು ಪಕ್ಷಿಗಳು ಹಾವುಗಳು ಮೊದಲಾದ ತಿರ್ಯಗ್ಜಾತುಗಳು ಜ್ಞಾನಾಂಶದಲ್ಲಿ ಕೀಳಾದುವು. ಗಿಡ, ಬಳ್ಳಿ, ಪೆಟ್ಟ ಮೊದಲಾದ ಸ್ಥಾವರ ವರ್ಗವು ಈ ಮೇಲೆ ಹೇಳಿದ ಪಶು, ಪಕ್ಷಿಮೊದಲಾದ ತಿರ್ಯಕ್ಪ್ರಾಣಿಗಳಿಗಿಂತಲೂ ಕಡಿಮೆಯಾದ ಜ್ಞಾನಶಕ್ತಿಗಳಿಂದೊಡಗೂಡಿದುವು ॥೫೯॥ ಈ ಮೇಲೆ ಹೇಳಿದ ತಾರತಮ್ಯಗಳೆಲ್ಲವೂ ಆ ಆ ಶರೀರವನ್ನು ನಿಮಿತ್ತಮಾಡಿಕೊಂಡು ಬಂದಿರುವುವಲ್ಲದೆ ಸಹಜಗಳಲ್ಲ. ಅದು ಕಾರಣ ಇಂತಹ ತರತಮ ಭಾವವು ಜೀವನಿಗಿಲ್ಲ. ಜ್ಞಾನಾಧಿಕ್ಯ ಜ್ಞಾನನಾಶ ಆವಿರ್ಭಾವ ತಿರೋಭಾವಗಳು, ಜನ್ಮ ನಾಶಗಳು ಇವೆಲ್ಲವೂ ಉಪಾಧಿಭೇದದಿಂದ ನಾನಾಪರಿ ವಿಕಲ್ಪವಂ ಪಡೆದಿರುವುವಲ್ಲದೆ ವಾಸ್ತವವಾಗಿಯೂ ಇವು ಆತ್ಮ ಧರ್ಮಗಳಲ್ಲಾ. ಅಕ್ಷರನೂ, ನ್ಯೂನಾಧಿಕ್ಯ ವಿಶೇಷ ಶೂನ್ಯನೂ, ನಿತ್ಯನೂ ಎನಿಸಿದ ಪರಮಾತ್ಮನು ಮೂರ್ತಿ ತ್ರಯ ಶರೀರಗಳ

ತಿರೋ ಭಾವ ಜನ್ಮನಾಽವಿಕಲ್ಪವತ್ ॥ ೬೦ ॥ ಸರ್ವಶಕ್ತಿ
ಮಯೋ ವಿಷ್ಣು ಸ್ಸ್ಯ ರೂಪಂ ಬ ಹ್ಮಣೋಽಪರಂ। ಮೂರ್ತಿಂ
ಯ ದೆ ಶ್ಯೈಗಿಭಿಃ ಪೂರ್ವಂ ಯೋಗಾರಂಭೇಷು ಚಿಂತ್ಯತೇ ॥೬೧॥
ಸಾಲಂಬನೋ ಮಹಾಯೋಗ ಸ್ಬೀಜೋ ಯತ್ರಾಽವಸ್ಥಿತಃ ।

ಲ್ಲಿರುವಂತೆಯೇ ಗಿಡ ಬಳ್ಳಿ ಗಳಲ್ಲಿಯೂ ಇರುವಕಾರಣ ಸರ್ವವೂ ಆ ಪರಮಾತ್ಮನ ಅಂಶವೆಂಬದಾಗಿ ಮುಕ್ತಿಕಾಮು ನೆನಿಸಿದ ಯೋಗಿಯು ಆನ ಸಂಧಾನದಲ್ಲಿಟ್ಟು ಉಪಾಸನೆಮಾಡಬೇಕು ॥೬೦॥ ಯೋಗವನ್ನು ಅಭ್ಯಾಸಿಸುವ ಪುರುಷನು ಸ್ಥೂಲವೆನಿಸಿದ ಪರಮಾತ್ಮನ ಸರ್ವಾತ್ಮಕ ರೂಪವನ್ನು ಮೊದಲು ಉಪಾಸನೆ ಮಾಡಿ ತದ್ದ್ವಾರಾ ಅಭೇದಜ್ಞಾನವಂ ಪಡೆದು ಆ ಬಳಿಕ ಆ ಪರಮಾತ್ಮನನ್ನು ಉಪಾಸಿಸಶಕ್ಯನು. ಸರ್ವಶ ಕ್ತಿಸಂಪನ್ನನೂ, ಸೃಷ್ಟ್ಯಾದಿ ಸಕಲ ಕಾರ್ಯಸಾಧಕನೂ ಎನಿಸಿದ ವಿಷ್ಣುವೇ ಮೂರ್ತಿತ್ರಯದಲ್ಲಿ ಉತ್ತಮನೆನಿಸುವನು. ಹೇಗೆಂದರೆ— ವಿಷ್ಣುವು, ಪರಿಶುದ್ಧವೂ, ಶುದ್ಧಸತ್ವಯುಕ್ತವೂ ಎನಿಸಿದ ಶರೀರದಿಂದೊ ಪ್ಪುವನು. ಆದುಕಾರಣ ಮೂರ್ತಿತ್ರಯದಲ್ಲಿ, ಈತನಿಗಿಂತಲೂ ಬೇರೆ ಉತ್ತಮನಿಲ್ಲ. ಇದರಿಂದಲೇ ಸರ್ವೋತ್ತಮವಾದ ವಿಷ್ಣುರೂಪವು ಅಪರವೆನಿಸುವುದು, ಇಂತಹ ಕಾರಣದಿಂದಲೇ ಮುಕ್ತಿಕಾಮರೆನಿಸಿದ ಯೋಗಿಗಳು ಕೇವಲ ಸತ್ವಪ್ರಧಾನವೆನಿಸಿದ ವಿಷ್ಣುವಿನ ವಿಭೂತಿಯನ್ನೇ ಶ್ರವಣ ಮನನಾದಿಗಳಿಂದುಪಾಸಿಸಿ ಚಿತ್ತಶುದ್ಧಿಯಂ ಪಡೆಯುವರು. ಇಂತಹ ಉಪಾಸನೆಗೆ ಸ್ಥೂಲರೂಪೋಪಾಸನೆ ಎಂದು ಹೆಸರು ॥ ೬೧ ॥ ಇಂತು ಮೇಲೆ ಹೇಳಿದ ಪ್ರಕಾರ ಉಪಾಸನೆ ಮಾಡುತ್ತಿದ್ದರೆ ಮನಸ್ಸು ಸರ್ವಭೂತಗಳಿಂದಲೂ ನಿವೃತ್ತವೆನಿಸಿ, ಸ್ಥೈರ್ಯವಂ ಪಡೆದು ಆ ಪರ ಮಾತ್ಮನಲ್ಲಿಯೇ ದೃಢವಾಗಿ ನಿಲ್ಲುವುದು. ಇಂತು ಏಕಚಿತ್ತತೆಯುಂ ಟಾದ ಬಳಿಕ ಬೀಜನ್ಯಾಯಾದಿಗಳಿಂದೊಡಗೂಡಿ, ವಿಷ್ಣುಪ್ರಾಪ್ತಿಪ್ರತಿ ಪಾದಕಗಳೆನಿಸಿದ ಮಂತ್ರಗಳನ್ನು ಪಠನಮಾಡಿ ತನ್ಮೂಲಕ ಆ ಪರಮಾ ತ್ಮನಲ್ಲಿ ನಿರತಿಶಯ ಭಕ್ತಿಯಂ ಪಡೆದು ಸಮಾಧಿಯು ವರೆಗಿನ ಸಕಲ ಯೋಗಗಳನ್ನೂ ಅಭ್ಯಾಸಮಾಡಿ ಕೊನೆಗೆ ಮುಕ್ತಿಗೆ ಅರ್ಹನಾಗುವನು. ಇದನ್ನೇ ,,ಸಾಲಂಬನಮಹಾಯೋಗ'' ವೆಂದು ವ್ಯವಹರಿಸುವರು. ಇದೇ

ಮನಸ್ಯೇವ್ಯಾಹತೇ ಸಮ್ಯ ಗ್ಯುಂಜತಾಂ ಜಾಯತೇವಮುನೆ! ॥೬೨॥
ಸರ್ವರ ಸ್ಯವ್ಯ ಶಕ್ತೀನಾಂ ಬ್ರಹ್ಮಣ ಸ್ಸವಸಂತರಂ । ಮೂ
ರ್ತಂ ಬ್ರಹ್ಮ ಮಹಾಭಾಗ! ಸರ್ವ ಬ್ರಹ್ಮ ಮಯೋಹರಿಃ ॥೬೩॥
ಯತ್ರ ಸರ್ವ ಮಿದಂ ಪ್ರೋತ ಮೋತಂ ಚೈವಾಖಿಲಂ ಜಗತ್।
ತತೋಜಾತಂ ಜಗತ್ಪ್ಯೇ ಸಜಗಚ್ಚಾ ಽ ಖಿಲಂ ಮುನೆ ! ॥೬೪॥
ಹ್ಯರಾಹ್ಷರ ಮಯೋ ವಿಷ್ಣು ರ್ಬಿಭರ್ತ್ಯಖಿಲವಿಶ್ವರೂಃ । ಪುರು
ಷಾ ವ್ಯಕ್ತಮಯಂ ಭೂಷಣಾಸ್ತ್ರ ಸ್ವರೂಪವತ್ ॥ ೬೫ ॥
ಮೈತ್ರೇಯಿಃ॥ ಭೂಷಣಾಸ್ತ್ರ ಸ್ವರೂಪಸ್ಥಂ ಯದೇತ ದಖಿಲಂ
ಜಗತ್ । ಬಿಭರ್ತಿ ಭಗವಾ೯ ವಿಷ್ಣು ಸ್ತನ್ಮಮಾ ಖ್ಯಾತು ಮರ್ಹ
ಸಿ ॥ ೬೬ ॥ ಶ್ರೀ ಪರಾಶರಃ ॥ ನಮಸ್ಕೃತ್ಯಾ ಽ ಪ್ಯವ್ಯೇಯಾ

ವಿಷ್ಣುವಿನ ಸ್ಥೂಲರೂಪೋಪಾಸನೆಯಿಂದುಂಟಾಗುವ ಮಹಾ ಫಲವು॥ ಮಹದೈಶ್ವರ್ಯಶಾಲಿಯೆನಿಸಿದ ಮೈತ್ರೇಯನೆ; ಇಂತು ವಿಷ್ಣುವೇ ಪರನೆನಿಸುವನು. ಅದುಕಾರಣ ಆತನನ್ನು ಸರ್ವೋತ್ತಮನೆನ್ನುವರು; ಈತನು ಸಾಕ್ಷಾತ್ಪರಬ್ರಹ್ಮನಲ್ಲದೆ ಆ ಪರಮಾತ್ಮನ ಅಂಶವಲ್ಲವು. ಬ್ರಹ್ಮ ಶಿವ, ಮೊದಲಾದವರು ಆ ಪರಬ್ರಹ್ಮನ ಅಂಶಭೂತರು, ವಿಷ್ಣುವು ಮಾತ್ರ ಆತನ ಅಂಶವಲ್ಲ. ಪರಮಾತ್ಮನೇ ವಿಷ್ಣುಸ್ವರೂಪದಿಂದಿರುವನೆಂದು ಭಾವವು. ॥೬೫॥ ಈ ಸಕಲಪ್ರಪಂಚವೂ ಆ ಪರಮಾತ್ಮನಿಂದಲೇ ಉದಯಿಸಿದುದು. ಎಲ್ಲವೂ ಆತನ ರೂಪವೇ ಆಗಿರುವುದು. ಪ್ರಳಯಕಾಲದಲ್ಲಿ ಎಲ್ಲವೂ ಆತನಲ್ಲಿಯೇ ಅಡಗಿ ಹೋಗುವುದು. ಆತನೇ ಈ ರೂಪದಿಂದ ಕಾಣುವನು ॥ ೬೪ ॥ ಇಂತು ಕಾರ್ಯ ಕಾರಣ ರೂಪಗಳಿಂದ, ಎಲ್ಲ ಲೋಕವನ್ನೂ ತುಂಬಿರುವ ಆ ಪರಮಾತ್ಮನು ಪ್ರಕೃತಿ ಪುರುಷ ಸಂಯೋಗಾತ್ಮಕವೆನಿಸಿದ ಈ ಎಲ್ಲಲೋಕವನ್ನು, ಆಲಂಕಾರಗಳು, ಆಯುಧಗಳು, ಇವುಗಳ ರೂಪದಿಂದ ಧರಿಸಿ ಕಾಪಾಡುತಲಿರುವನು ॥ ೬೫ ॥ ಮೈತ್ರೇಯನು ಕೇಳುತ್ತಾನೆ—ಓ ಪರಾಶರನೇ; ಷಡ್ಗುಣೈಶ್ವರ್ಯಸಂಪನ್ನನೂ, ಸರ್ವವ್ಯಾಪಕನೂ ಎನಿಸಿದ ವಿಷ್ಣುವು ಈ ಲೋಕಗಳೆಲ್ಲವನ್ನೂ ತನ್ನ ಆಭರಣಗಳಂತೆಯೂ, ಆಯುಧಗಳಂತೆಯೂ, ಧರಿಸುವನೆಂದು ಹೇಳುವಿಯಲ್ಲವೆ? ಇದುಹೇಗೆ? ಅವೆಲ್ಲವೂ

ಯ ವಿಷ್ಣವೇ ಪ್ರಭವಿಷ್ಣವೇ । ಕಥಯಾಮಿ ಯದಾಖ್ಯಾತಂ
ವಸಿಷ್ಠೇನ ಮಮಾಗ್ರತಃ ॥ ೬೩ ॥ ಆತ್ಮಾನ ಮಸ್ಯ ಜಗತೋ
ನಿರ್ಲೇಪ ಮಗುಣಾಲಯಂ । ಬಿಭರ್ತಿ ಕಾಸ್ತುಭ ಮಣಿ ಸ್ವರೂ
ಪಂ ಭಗವಾ೯ ಹರಿಃ ॥ ೬೪ ॥ ಶ್ರೀವತ್ಸ ಸಂಸ್ಥಾನ ಪರ ಮ
ನಂತೇನ ಸವಾ೯ಶ್ರಿತಂ । ಪ್ರಧಾನಂ ಬುದ್ಧಿ ರಧ್ಯಾಸ್ಯೇ ಗದಾರೂ
ಪೇಣ ಮಾಧವೇ ॥ ೬೫ ॥ ಭೂತಾದಿ ಮಿಂದ್ರಿಯಾದಿಂಚ ದ್ವಿ
ಧಾಽಹಂಕಾರ ಮೀಶ್ವರಃ । ಬಿಭರ್ತಿ ಶಂಖ ರೂಪೇಣ ಶಾರ್ಙ್ಗ

ನನಿಗೆ ಸವಿಸ್ತಾರವಾಗಿ ತಿಳುಹುವವನಾಗು ॥೬೨॥ ಪರಾಶರನು ಹೇಳು
ತ್ತಾನೆ—ದಿಕ್ಕು, ಕಾಲ, ನಾಮ, ರೂಪ ಮೊದಲಾದುವುಗಳಿಂದ ಗೋಚ
ರಿಸಲಶಕ್ಯ ನೆನಿಸಿದ ಪರಮಾತ್ಮನ ಪಾದಾರವಿಂದಗಳಿಗೆ ಭಕ್ತಿಯಿಂದೆ
ರಗಿ, ಹಿಂದೆನಾನು ವಸಿಷ್ಠ ಮಹರ್ಷಿಗಳಿಂದ ತಿಳಿದುಕೊಂಡಿರುವ ಪ್ರ
ಕಾರ, ಈಲೋಕವನ್ನು ಪರಮಾತ್ಮನು ಯಾವಯಾವ ರೀತಿಯಿಂದ
ತನ್ನಶರೀರದಲ್ಲಿ ಧರಿಸಿರುವನೆಂಬ ಅಂಶವನ್ನು ವಿಶದವಾಗಿ ತಿಳುಹಿಸೆನು
ಕೇಳು॥೬೩॥ ಷಡ್ಗುಣೈಶ್ವರ್ಯಸಂಪನ್ನನೆನಿಸಿದ ಪರಮಾತ್ಮನು ಈ ಜಗತ್ತಿ
ಗೆ ಮುಖ್ಯ ಕಾರಣಭೂತನೆನಿಸಿ, ಪುರುಷಶಬ್ದದಿಂದ ಕರೆಯಿಸಿಕೊಳ್ಳುವ
ನಿರ್ಲೇಪನೂ, ಗುಣಶೂನ್ಯನೂ ಎನಿಸಿದ ವಿರಾಟ್ ಪುರುಷನನ್ನು ಕಾಸ್ತು
ಭಮಣಿಯ ರೂಪದಿಂದ ತನ್ನ ಎದೆಯಲ್ಲಿ ಧರಿಸಿರುವನು. ॥೬೪॥ ಎಲ್ಲ
ಲೋಕಗಳನ್ನೂ ಮೋಹಗೊಳಿಸುವಂತಹ ಪ್ರಕೃತಿಯು, ವಿಷ್ಣುವಿನ
ಎದೆಯವೀಲಿರುವ, *ಶ್ರೀವತ್ಸವೆಂಬ ಹೆಸರುಳ್ಳ, ಅವ್ಯಕ್ತವಾಗಿರುವಾದ,
ಸುಳಿಯಂತೆ ಬೆಳದಿರುವ ಕೂದಲುಗಳ ಸಮೂಹರೂಪದಿಂದ ಆ ಪರಮಾ
ತ್ಮನಿಗೆ ಒಂದು ಅಲಂಕಾರವಾಗಿರುವುದು. ಮಹತ್ತತ್ವವು ಗದಾಯುಧ
ರೂಪದಿಂದ ಅನುಕ್ಷಣವೂ ಆ ವಿಷ್ಣುವಿನ ಕೈಯಲ್ಲಿಯೇ ಇರುವುದು ॥
ಸಕಲಭೂತಗಳಿಗೂ ಮುಖ್ಯವೆನಿಸಿದ ತಾಮಸಾಹಂಕಾರವನ್ನು ಶಂಖ
ರೂಪದಿಂದಲೂ, ಇಂದ್ರಿಯಗಳಿಗೆ ಮುಖ್ಯ ಕಾರಣವೆನಿಸಿದ ರಾಜಸಾ

---

* ಕೃಷ್ಣೇ॥ ಪ್ರದಕ್ಷಿಣಾವರ್ತ ಮಚಿಂತ್ಯರೂಪ ಮಂ ತ್ಸ ಸ್ಯಚಿಹ್ನಂ ಪರಮಾತ್ಮ
ತಾಂಗಂ॥ಇತ್ಯಾದಿ ಗಾರುಡ ಪುರಾಣ ವಚನಗಳು ಈ ವಿಷಯದಲ್ಲಿ ಉದಹರ್ತೃಗಳಾಗಿರುವುವು

ರೂಪೇಣ ಚ ಸ್ಥಿತಂ ॥ ೭೦ ॥ ಚಂಚಸ್ಪರೂಪ ಮತ್ಯಂತಂ ಜವೇ
ನಾಂತರಿತಾನಲಂ । ಚಕ್ರಸ್ವರೂಪಂಚ ಮನೋಧತ್ತೇ ವಿಷ್ಣುಃ
ಕರೇಸ್ಥಿತಂ ॥೭೧॥ ಪಂಚ ರೂಪಾತು ಯಾಮಾಲಾ ವೈಜ
ಯಂತೀ ಗದಾಭೃತಃ । ಸಾಭೂತ ಹೇತು ಸಂಘಾತೋ ಭೂತ
ಮಾಲಾ ಚ ವೈ ದ್ವಿಜ ! ॥ ೭೨ ॥ ಯಾನೀಂದ್ರಿಯಾಣ್ಯ
ಶೇಷಾಣಿ ಬುದ್ಧಿಕರ್ಮಾತ್ಮಕಾನಿವೈ । ಶರರೂಪಾಣ್ಯ ಶೇಷಾ
ಣಿತಾನಿ ಧತ್ತೇ ಜನಾರ್ದನಃ ॥ ೭೩ ॥ ಬಿಭರ್ತಿ ಯಚ್ಚಾಸಿ
ವರ ಮಚ್ಯುತೋ ಽ ತ್ಯಂತ ನಿರ್ಮಲಂ । ವಿದ್ಯಾಮಯಂತು

ಹಂಕಾರವನ್ನು ಶಾರ್ಙ್ಗವೆಂಬ ಧನುಸ್ಸಿನರೂಪದಿಂದಲೂ ಎರಡು ಕೈಗ
ಳಲ್ಲಿಯೂ ಧರಿಸಿರುವನು. ॥೭೦॥ ಸ್ಥಿರವಾಗಿ ಒಂದು ಕ್ಷಣವಾದರೂ
ಒಂದೆಡೆಯಲ್ಲಿ ನಿಲ್ಲದೆ, ಮಹಾಚಂಚಲ ಸ್ವಭಾವಯುಕ್ತವೆನಿಸಿ, ವಾಯು
ವಿಗಿಂತಲೂ ಅತಿಶಯವಾದ ವೇಗವುಳ್ಳ ಮನಸ್ಸು ಆಪರಮಾತ್ಮನ ಹಸ್ತದ
ಲ್ಲಿರುವ ಚಕ್ರರೂಪದಿಂದಿರುವುದು ॥೭೧॥ ವಿಷ್ಣುವು ತನ್ನ ಎದೆಯಲ್ಲಿ ಐದು
ವಿಧವಾದ (ಮುತ್ತು, ಮಾಣಿಕ್ಯ, ಪಚ್ಚೆ, ನೀಲ, ವಜ್ರ ಗಳೆಂಬ ಐದುರ
ತ್ನಗಳ) ಬಣ್ಣವುಳ್ಳ ವೈಜಯಂತೀ ಎಂಬಹಾರವಂ ಧರಿಸಿರುವನು, ಈ
ಮಾಲಿಕೆಯೇ ಸ್ಥೂಲ ಸೂಕ್ಷ್ಮ ರೂಪದಿಂದಿರುವ ಭೂತ ಸಮುದಾ
ಯವು. ॥೭೨॥ ಇಂದ್ರಿಯಗಳಲ್ಲಿ ಕರ್ಮೇಂದ್ರಿಯ ಪಂಚಕ ವೆಂತಲೂ,
ಜ್ಞಾನೇಂದ್ರಿಯ ಪಂಚಕವೆಂತಲೂ ಎರಡು ಬಗೆ, ಅವುಗಳಲ್ಲಿ ಬಾಯಿ,
ಕೈ, ಕಾಲು, ಶಿಶ್ನ, ಉಪಸ್ಥ ಗಳೆಂಬ ಐದೂ ಕರ್ಮೇಂದ್ರಿಯಗಳೆನಿಸುವು
ವು.ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ಐದೂ ಜ್ಞಾನೇಂ
ದ್ರಿಯಗಳು. ಹನ್ನೊಂದನೆಯದಾದ ಮನಸ್ಸು ಸುಖದುಃಖಗಳನ್ನು
ತಿಳಿಯುವುದು. ವಿಷ್ಣುವು ಈ ಇಂದ್ರಿಯಗಳನ್ನೆಲ್ಲಾ ತನ್ನಬಾಣಗಳಾಗಿ
ಮಾಡಿಕೊಂಡು ತನ್ನಲ್ಲಟ್ಟಿಕೊಂಡಿರುವನು ॥೭೩॥ ಓ ವೈತ್ರೇಯನೆ;
ಅತಿನಿರ್ಮಲವೂ, ಮಹಾ ತೀಕ್ಷ್ಣವೂ ಎನಿಸಿದ, ನಂದಕವೆಂಬ ಕತ್ತಿ
ಯು ವಿಷ್ಣುವಿನ ಹಸ್ತದಲ್ಲಿ ಝಳಪಿಸುತಿರುವುದು. ಈ ಕತ್ತಿಯೇ ಶು
ದ್ಧವೂ, ಶಾಶ್ವತವೂ ಎನಿಸಿದ, ಜ್ಞಾನ ಅಥವಾ ವಿದ್ಯೆ ಎಂಬದಾಗಿ ಕರೆ
ಯಿಸಿಕೊಳ್ಳುತ್ತದೆ. ಈಖಡ್ಗಕ್ಕೆ ಕೋಶಭೂತವಾದುದೇ ಅವಿದ್ಯೆ

ಯದಾಜ್ಞಾನ ಮಥವಿದ್ಯಾ ಚರ್ಮಸಂಪ್ರತಂ ॥ ೨೪ ॥ ಇ
ತ್ಪಂ ಪುರುಷಃ ಪ್ರಧಾನಂ ಚ ಬುದ್ಧ್ಯಹಂಕಾರ ಮೇವಚ ।
ಭೂತಾನಿಚ ಹೃಷೀ ಕೇಶೇ ಮನಸ್ಸರ್ವೇಂದ್ರಿಯಾಣಿಚ ॥
ವಿದ್ಯಾಽವಿದ್ಯೇಚ ವೈತ್ರೇಯ! ಸರ್ವಮೇತ ತ್ಸಮಾಶ್ರಿತಂ ॥೨೫॥
ಅಸ್ಯಭೂಷಣ ಸಂಸ್ಥಾನ ಸ್ವರೂಪಂ ರೂಪವರ್ಜಿತಃ । ಬಿಭರ್ತಿ
ಮಾಯಾರೂಪೋಽಸೌಶ್ರೇಯಸೇ ಪ್ರಾಣಿನಾಂ ಸದಾ ॥ ೨೬ ॥
ಸವಿಕಾರಂ ಪ್ರಧಾನಂಚ ಪುರುಷಂಚಾಖಿಲಂ ಜಗತ್ ।
ಬಿಭರ್ತಿ ಪುಂಡರೀಕಾಕ್ಷ ಸ್ತದೇವಂ ಪರಮೇಶ್ವರಃ ॥ ೨೭ ॥
ಯಾವಿದ್ಯಾಯಾತಥಾ ವಿದ್ಯಾಯಸ್ತದ್ಬ್ರಹ್ಮ ಸದವ್ಯಯೋ ।

ಅಥವಾ ಅಜ್ಞಾನವೆನಿಸುವುದು (ವಿದ್ಯೆ ಎಂಬ ಜ್ಞಾನವನ್ನು ಖಡ್ಗಸ್ವರೂಪದಿಂದಲೂ, ಅವಿದ್ಯೆ ಎನಿಸಿದ ಅಜ್ಞಾನವನ್ನು ಆ ಖಡ್ಗಕ್ಕೆ ಒರೆಯಾಗಿಯೂ ಮಾಡಿಕೊಂಡಿರುವನು. ವಿದ್ಯೆಯು ಖಡ್ಗದಂತೆ ಸ್ಪಷ್ಟವಾಗಿದೆಯೆಂತಲೂ, ಅವಿದ್ಯೆಯು ಆ ಖಡ್ಗಕ್ಕೆ ಕೋಶದಂತೆ ಇತಿ ಮಿತಿ ವಾದುದೆ ತಲೂ ಭಾವವು) ॥ ೨೪ ॥ ಓ ವೈತ್ರೇಯನೆ; ಇಂತಪ್ರರೂಪ ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಭೂತಗಳು, ಇಂದ್ರಿಯಗಳು, ಮನಸ್ಸು, ಜ್ಞಾನಾಜ್ಞಾನಗಳು, ಇವೆಲ್ಲವೂ ಆ ಪರಮಾತ್ಮನನ್ನು ಆಶ್ರಯಿಸಿ, ಆತನ ಇಷ್ಟದಂತೆ ನಡೆಯುವುವೆಂದು ತಿಳಿ ॥೨೫॥ ಆ ಪರಮಾತ್ಮನು ದಿಟವಾಗಿಯೂ ಯಾವುದೊಂದು ಒಗೆಯಾದ ರೂಪವಿಲ್ಲದವನಾಗಿದ್ದರೂ, ಉಪಾಸಕರ ಶ್ರೇಯಸ್ಸಿಗೆ ಮಾಯೆಯಿಂದ ಇಂತಪ್ರರೂಪವಂ ಧರಿಸಿ ಈ ಲೋಕವೆಲ್ಲವು ತನ್ನ ಆಯುಧಗಳನ್ನಾಗಿಯೂ, ಆಭರಣಗಳನ್ನಾಗಿಯೂ ಮಾಡಿಕೊಂಡಿರುವನು. (ಪರಮಾತ್ಮನು ರೂಪರಹಿತನು, ಹೀಗಿದ್ದರೂ ಉಪಾಸಕರು ಯಾವುದಾದರೂ ಒಂದು ರೂಪದಿಂದ ತನ್ನನ್ನು ಭಜಿಸಿ, ಮುಕ್ತಿ ಹೊಂದಲೆಂಬುದಾಗಿ ಭಾವಿಸಿ, ಈ ರೀತಿ ಜಗದ್ವಿಲಕ್ಷಣವಾದ ದಿವ್ಯ ರೂಪವಂ ಧರಿಸಿರುವನೆಂದು ಭಾವವು) ॥೨೬॥ ವಿಷ್ಣುವು ಇಂತು, ಪ್ರಕೃತಿ ಪುರುಷಸಂಯೋಗದಿಂದುದಯಿಸಿ, ನಾಶಯುಕ್ತವಾದ ಈ ಪ್ರಪಂಚವನ್ನು, ನಾಶರಹಿತವೂ, ಶಾಶ್ವತವೂ ಎನಿಸಿದ ವಿದ್ಯೆ ಎಂಬುದಾಗಿ ಕರೆಯಿಸಿಕೊಳ್ಳುವ ಜ್ಞಾನವನ್ನೂ, ನಾಶಯುಕ್ತವೂ ಅಶಾಶ್ವತವೂ ಎನಿಸಿದ ಅವಿದ್ಯೆ

ತತ್ಸರ್ವಂ ಸರ್ವಭೂತೇಶೇ ಮೈತ್ರೇಯ! ಮಧುಸೂದನೆ ॥೭೪॥
ಕಲಾ ಕಾಷ್ಠಾ ನಿಮೇಷಾದಿ ದಿನತ್ವಾಯನ ಹಾಯನೈಃ ।
ಕಾಲಸ್ವರೂಪೋ ಭಗವಾ ನಪರೋ ಹರಿರವ್ಯಯಃ ॥ ೭೫ ॥
ಭೂಲೋಕೋಽಥ ಭುವರ್ಲೋಕಃ ಸ್ವರ್ಲೋಕೋ ಮುನಿಸತ್ತಮ!॥ಮಹರ್ಜನ ಸ್ತಪಸ್ಸತ್ಯಂ ಸಪ್ತಲೋಕಾ ಇಮೇ ಪ್ರಭುಃ ॥೭೦॥ ಲೋಕಾತ್ಮ ಮೂರ್ತಿಸ್ಸರ್ವೇಷಾಂ ಪೂರ್ವೇಷಾಮಪಿಪೂರ್ವಜಃ । ಆಧಾರಸ್ಸರ್ವಭೂತಾನಾಂ ಸ್ವಯಮೇವ ಹರಿಸ್ಥಿತಃ ॥ ೭೧ ॥ ದೇವಮಾನುಷ ಪಶ್ವಾದಿ ಸ್ವರೂಪೈ ರ್ಬಹುಭಿರ್ವಿಭುಃ । ಸ್ಥಿತಸ್ಸರ್ವೇಶ್ವರೋಽನಂತೋ ಭೂತಮೂರ್ತಿರಮೂರ್ತಿರ್ಮಾ ॥ ೭೨ ॥ ಋಚೋ ಯಜೂಂಷಿ ಸಾಮಾನಿ

ಅಥವಾ ಅಜ್ಞಾನವನ್ನೂ ಕೂಡ ತನ್ನಲ್ಲಿ ನೆಲೆಸಿಕೊಂಡಿರುವನು ॥೭೩-೭೪॥ ಕಲಾ, ಕಾಷ್ಠಾ, ನಿಮೇಷ, ಮೊದಲಾದ ಸೂಕ್ಷ್ಮಕಾಲ, ದಿನ, ಪಕ್ಷ, ಮಾಸ, ಋತು, ಅಯನ ವರ್ಷ ಮೊದಲಾದ ಸ್ಥೂಲಕಾಲ ಈ ರೂಪಗಳನ್ನುಧರಿಸಿ, ಷಡ್ಗುಣೈಶ್ವರ್ಯ ಸಂಪನ್ನನೆನಿಸಿದ ವಿಷ್ಣುವು ಬೇರೊಂದುರೂಪದಿಂದ ಈ ಲೋಕವನ್ನು ವ್ಯಾಪಿಸಿರುವನು. ॥೭೫॥ ಭೂರ್ಲೋಕ, ಭುವರ್ಲೋಕ, ಸ್ವರ್ಲೋಕ, ಮಹೋಲೋಕ, ಜನಲೋಕ, ತಪೋಲೋಕ, ಸತ್ಯಲೋಕಗಳೆಂಬ ಏಳುಲೋಕಗಳೂ ಆ ಪರಮಾತ್ಮನೇ ಆಗಿರುವನು ॥೭೦॥ ಎಲ್ಲಲೋಕಗಳಿಗಿಂತಲೂ ಮೊದಲು ಜನಿಸಿದ ಚತುರ್ಮುಖನೇ ಮೊದಲಾದವರಿಗೂ ಮೊದಲನೆಯವನೆನಿಸಿದ ಕಾರಣ ಅನಾದಿ ಎಂದು ಕರೆಯಿಸಿಕೊಳ್ಳುವ ಈ ಪರಮಾತ್ಮನು ಎಲ್ಲಕ್ಕೂ ತಾನೇ ಮುಖ್ಯಾಧಾರ ಭೂತನಾಗಿ ಕಂಗೊಳಿಸುತ್ತಿರುವನು ॥ ೭೧ ॥ ದೇವತೆಗಳು, ಮನುಷ್ಯರು, ಪಶುಗಳು ಮೊದಲಾದ ಅನೇಕ ರೂಪುಗಳನ್ನು ಧರಿಸಿ, ಸರ್ವನಿಯಾಮಕನೂ, ನಾಶರಹಿತನೂ, ನಿಖಿಲರೂಪಿಯೂಎನಿಸಿದ ಪರಮಾತ್ಮನು ತಾನು ವಾಸ್ತವವಾಗಿ ಯಾವುದೊ ದು ರೂಪವಿಲ್ಲದವನಾಗಿದ್ದರೂ, ತನ್ನ ಮಾಯೆಯಿಂದ ಎಲ್ಲವನ್ನೂ ವ್ಯಾಪಿಸಿ, ಎಲ್ಲೆಲ್ಲಿಯೂ ತಾನೇ ತಾನಾಗಿ ಮೆರೆಯುತ್ತಾ ವಿಭು ಎಂಬುದಾಗಿ ಕರೆಯಿಸಿಕೊಳ್ಳುವನು॥ ಋಕ್, ಯಜುಸ್ಸು, ಸಾಮ ಅಥರ್ವಣಗಳೆಂಬ ನಾಲ್ಕುವೇದಗಳೂ

ತಥೈವಾ ಥರ್ವಣಾನಿಚ । ಇತಿಹಾಸೋಪವೇದಾಶ್ಚ ವೇದಾಂ
ತೇಷು ಯಥೋಕ್ತಯಃ ॥ ೪೫ ॥ ವೇದಾಂಗಾನಿ ಸಮಸ್ತಾನಿ
ಮನ್ವಾದಿ ಗದಿತಾನಿಚ । ಶಾಸ್ತ್ರಾಣ್ಯ ಶೇಷಾಣ್ಯಾಖ್ಯಾ ನಾ ನ್ಯನು
ವಾಕಾಶ ಯೇಕ್ಷ್ವ ಚಿತ್ ॥ ೪೬ ॥ ಕಾವ್ಯಾಲಾಪಾಶ್ಚ ಯೇ
ಕೇಚಿ ದ್ಗೀತಕಾನ್ಯ ಖಿಲಾನಿಚ । ಶಬ್ದ ಮೂರ್ತಿ ಧರಸ್ಯೈ ತದ್ವ
ಪು ರ್ವಿಷ್ಣೋರ್ಮಹಾತ್ಮನಃ ॥ ೪೭ ॥ ಯಾನಿ ಮೂರ್ತಾನ್ಯ
ಮೂರ್ತಾನಿ ಯಾನ್ಯ ತ್ರಾನ್ಯತ್ರವಾ ಕ್ವಚಿ ೯ । ಸಂತಿವೈ ವಸ್ತು
ಜಾತಾನಿ ತಾನಿ ಸರ್ವಾಣಿ ತದ್ವಪುಃ ॥ ೪೮ ॥ ಅಹಂ ಹರಿಸ್ಸ
ರ್ವಮಿದಂ ಜನಾರ್ದನೋ ನಾನ್ಯತ್ತತಃ ಕಾರಣ ಕಾರ್ಯ ಜಾತಂ ।

ರಾಮಾಯಣ ಮೊದಲಾದ ಇತಿಹಾಸಗಳೂ, ಆಯುರ್ವೇದ, ಧನುರ್ವೇದ ಗಾಂಧರ್ವವೇದ ಅರ್ಥಶಾಸ್ತ್ರಗಳೆಂಬ ನಾಲ್ಕು ಉಪವೇದಗಳೂ, ವೇದಾಂತ ಶಾಸ್ತ್ರ ಗ್ರಂಥಗಳೂ, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರುವೇದಾಂಗಗಳೂ, ಮನು, ಪರಾಶರ, ಯಾಜ್ಞವಲ್ಕ್ಯ ಮೊದಲಾದವರಿಂದ ನಿರ್ಮಿತಗಳಾದ ಹದಿನೆಂಟು ಸ್ಮೃತಿ (ಧರ್ಮಶಾಸ್ತ್ರ) ಗಳೂ, ನ್ಯಾಯ, ವಿಮಾಂಸಾ, ಮೊದಲಾದ ಶಾಸ್ತ್ರಗಳೂ, ಇತರ ಕಥೆಗಳು, (ಪುರಾಣಗಳೂ) ಕಲ್ಪ ಸೂತ್ರಗಳೂ, ಕಾವ್ಯಗಳು, ಇತರ ಎಲ್ಲಾವಿಧವಾದ ಗೀತಗಳು, ಇವುಗಳಿಲ್ಲವೂ, ಶಬ್ದ ಬ್ರಹ್ಮ ಸ್ವರೂಪವೆನಿಸಿದ ಮಹಾತ್ಮನಾದ ವಿಷ್ಣುವಿನ ರೂಪಾಂತರಗಳಾಗಿಯೇ ಇರುವವು ॥೪೫-೪೯-೫೦॥ ಎಲೈ ಮೈತ್ರೇಯನೆ, ಹೆಚ್ಚಾಗಿವರ್ಣಿಸಿದುದರಿಂದೇನು ? ಈ ಪ್ರಪಂಚವೆಲ್ಲೆರುವ ಚರಾಚರ ಪ್ರಾಣಿವರ್ಗವೂ, ನಾನು ಇದುವರೆಗೂ ಹೇಳಿದುವೂ, ಹೇಳದಿರುವುವೂ ಎಲ್ಲವೂ ಆ ಪರಮಾತ್ಮನೇ ಅಲ್ಲದೆ ಅತನಿಗಿಂತಲೂ ವ್ಯತಿರಿಕ್ತವಾದ ಬೇರೊಂದು ವಸ್ತುವಾವುದೂ ಇಲ್ಲ. ತನ್ಮಯವೆಂತಲೇ ಸಿದ್ಧಿಯವಾಗಿ ನಂಬು ॥ ೪೬ ॥ ಓ ಮೈತ್ರೇಯನೆ, ಇದುವರೆಗೂ ನಾನುಹೇಳಿದುದರ ಮುಖ್ಯ ಸಾರಾಂಶವನ್ನು ಸಂಗ್ರಹಿಸಿವೆನು ಕೇಳು. ಸಚ್ಚಿದಾನಂದ ಸ್ವರೂಪನೆನಿಸಿದಆ ಪರಮಾತ್ಮನೇ ನಾನು. ಚರಾಚರ ರೂಪವಾದ ಈ ಪ್ರಪಂಚವೆಲ್ಲವೂ ಆ ಪರಮಾತ್ಮ ಸ್ವರೂಪವೇ ಆಗಿರುವುದು. ಈಜಗ

ಈ ದೃಜ್ಜನೋ ಯಸ್ಮ ನಸ್ಯ ಭೂಯೇ ಭನ್ಮೋಗ್ಗವಾ ದ್ಯಂ
ದ್ವಗಮಾಭವಂ ॥ ೩॥ ಕೈ ಷತು ಃ ಪ್ರಥಮಃ ಪುರಾಣಸ್ಯಾ
ಸ್ಯ ವೈ ದ್ವಿಜ! । ಯಥಾ ಽಧ್ಯಗೀ ಯುರ್ಮ ಧೃತೇ ಪಾಪೈಃ
ಪ್ರಮುಚ್ಯತೇ ॥೪॥ ಕಾರ್ತಿ ಕ್ಯಾಂ ಪುಷ್ಕ ರಸಂ ಜ್ಞೇ ದ್ವಾದ
ಶಾಬ್ದೇತು ಯಃ ಫಲಂ । ತದಸ್ಯ ಶ್ರವಣೇ ಸರ್ವಂ ಮೈತ್ರೇಯಾ !
ಪ್ನೋತಿ ಮಾನವಃ ॥೫॥ ದೇವರ್ಷಿ ಪಿತೃಗಂಧರ್ವ ಯಕ್ಷಾದೀ
ನಾಂಚ ಸಂಭವಂ । ಭವಂತಿ ಶ್ರುತ್ವಾತಃ ಪುಂಸೋ ದೈವಾದ್ಯಾ
ವರದಾವಮುನೇ! ॥ ೬ ॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮಾಂಶೇ

—ದ್ವಾವಿಂಶೋಧ್ಯಾಯಃ—

ತ್ತಿಗೆ ಆತನಿಗಿಂತಲೂ ಬೇರೆಯಾಗಿರುವ ಕಾರಣವಸ್ತುವಿಲ್ಲವು. ಸರ್ವವೂ ಆತನ ಸ್ವರೂಪವೇ ಆಗಿರುವ ಕಾರಣ ಬ್ರಹ್ಮನೊದಲಾದ ಪದಾರ್ಥಗಳೂ ಆತನೇ ಆಗಿರುವುದು. ಈರೀತಿಯಾದ ನಿಶ್ಚಯಬುದ್ಧಿಯಿಂದೊಡಗೂಡಿ ಅನುದಿನವೂ ಆತನ ಮಹಿಮೆಯನ್ನೇ ಮನನಮಾಡುವನು ಮರಳಿ ಸುಖದುಃಖ ವೆ ದಲಾದ ದ್ವಂದ್ವಗಳಿಗೊಳಗಾಗದೆ ನಿತ್ಯಾನಂದವೆನಿಸಿದ ಮೋಕ್ಷವನ್ನನುಭವಿಸುವನು ॥ ೭॥ ಓ ಬ್ರಾಹ್ಮಣನೆ, ಇಂತು ಈ ಪುರಾಣದ ಬಂದನೆಯ ಭಾಗವನ್ನು ನಿನಗೆ ತಿಳುಹಿದೆನು. ಇದನ್ನು ಅನುದಿನವೂ ಜ್ಞಾಪಕದಲ್ಲಿಟ್ಟರೆ ಎಲ್ಲ ಪಾಪಗಳೂ ತೊಲಗಿಹೋಗುವವು ॥ ೪॥ ಓ ಮೈತ್ರೇಯನೆ; ಹನ್ನೆರಡುವರ್ಷಗಳವರೆಗೂ ಕಾರ್ತಿಕಮಾಸದಲ್ಲಿ ಪುಷ್ಕರಕ್ಷೇತ್ರದಲ್ಲಿ ಸತ್ಕರ್ಮವನ್ನಾಚರಿಸುತ್ತಿದ್ದವನು ಯಾವಫಲವನ್ನು ಹೊಂದುವನೋ ಅಂತಹಫಲವನ್ನು, ಈ ಪುರಾಣಶ್ರವಣ ಮಾತ್ರದಿ ದಲೇ ಹೊಂದುವನು॥೫॥ ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಯಕ್ಷರು, ಮೊದಲಾದವರ ಉತ್ಪತ್ತಿಯನ್ನು ಳಗೊಂಡಿರುವ ಇಂತಹ ದಿವ್ಯ ಚರಿತೆಯ ಂ ಭಕ್ತಿಯಿಂದ ಶ್ರವಣವನು ಮೇಲೆ ಹೇಳಿದ ದೇವತೆಗಳೇ ಮೊದಲಾದವರ ಅನುಗ್ರಹಪಾತ್ರನಾಗುವನು ॥ ೬ ॥

ಎಂಬುದಾಗಿ ಪರಾಶರನು ಮೈತ್ರೇಯನಿಗೆ ಹೇಳುತ್ತಿದನೆಂಬಲ್ಲಿಗೆ

ಶ್ರೀವಿಷ್ಣುಪುರಾಣದಲ್ಲಿ ಬಂದನೆಯ ಅಂಶವು ಮುಗಿದುದು